

ಭಾರತ ಮಿತ್ರ



ಕು. ಶಿ. ಅಭಿನಂದನ ಗ್ರಂಥ

US $ 10

ಬೆಲೆ : ರೂಪಾಯಿ ನೂರೈವತ್ತು
ವರ್ಣಚಿತ್ರ : ಡಾ। ಕೆ. ಕೆ. ಹೆಬ್ಬಾರ
ಪುಟ ವಿನ್ಯಾಸ : ಡಿ'ಗಾರ್
ಮುದ್ರಕರು : ಮಣಿಪಾಲ ಪವರ್ ಪ್ರೆಸ್, ಮಣಿಪಾಲ





V. Tyagarajan, M.A., L.T.
and
K. S. Haridasa Bhat, M.A.
SUJATHA
PUBLICATIONS
ಕಾವ್ಯಾಲಯ : : ಪ್ರಕಾಶಕರು
ಮೈಸೂರು
ಅಭಿನಂದನ
ಜಾನ್ ಡ್ಯೂಯಿ ಬರೆದ
ಸ್ವಾತಂತ್ರ್ಯ ಮತ್ತು ಸಂಸ್ಕೃತಿ
ANJALI
THE MAHATMA GANDHI MEMORIAL
ಎರಡನೆ ಸಂಪುಟ
ಕು. ಶಿ. ಹರಿದಾಸ ಭಟ್ಟ
ಕರ್ನಾಟಕ ಸರಕಾರ
ಇತಾಲಿಯಾ ನಾನು ಕಂಡಂತೆ
CASE FOR AUTONOMY
Presented by the
MAHATMA GANDHI MEMORIAL COLLEGE
UDIPI - 2 Mysore (India)
ಕಲ್ಲರಳಿ ಹೂವಾಯಿತು
ಅಭಿನಂದನ

ಲೋಕಮಿತ್ರ

(ಪ್ರೊ। ಕು. ಶಿ. ಹರಿದಾಸ ಭಟ್ಟ ಅಭಿನಂದನ ಗ್ರಂಥ)

ಸಂಪಾದಕರು:

ದೇ. ಜವರೇ ಗೌಡ

ಕು. ಶಿ. ಹರಿದಾಸ ಭಟ್ಟ ಸನ್ಮಾನ ಸಮಿತಿ
ಎಂ. ಜಿ. ಎಂ. ಕಾಲೇಜು ಇವರಿಂದ ಪ್ರಕಟಿತ
1989

"LOKAMITHRA" — A felicitation volume presented to Prof. K. S. Haridasa Bhat - edited by Prof. D. Javare Gowda. PP 335+x. Plates: 45

ಬೆಲೆ: 150 ರೂ.

ಮುದ್ರಕರು

ಮಣಿಪಾಲ ಪವರ್ ಪ್ರೆಸ್, ಮಣಿಪಾಲ

ಸಂಪಾದಕ ಸಮಿತಿ

ಪ್ರಕಾಶಕರ ಮಾತು

ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಮೊದಲು ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ, 1964-79ರ ಅವಧಿಯಲ್ಲಿ ಪ್ರಾಂಶುಪಾಲರಾಗಿ ನಿವೃತ್ತರಾದ ಪ್ರೊ। ಕು.ಶಿ. ಹರಿದಾಸ ಭಟ್ಟರಿಗೆ ಉಡುಪಿಯ ನಾಗರಿಕ ವೃಂದ ಅನುಪಮವಾದ ರೀತಿಯಲ್ಲಿ ಬೀಳ್ಕೊಡುಗೆಯ ಸಮಾರಂಭವನ್ನು ನೆರವೇರಿಸಿತ್ತು. "ಪ್ರವೃತ್ತ"ವೆಂಬ ಅರ್ಥಗರ್ಭಿತವಾದ ಶೀರ್ಷಿಕೆಯ ಪುಟ್ಟ ಸನ್ಮಾನ ಗ್ರಂಥವನ್ನೂ ಅವರ ಪ್ರಾಕ್ತನ ವಿದ್ಯಾರ್ಥಿ ಶ್ರೀ ಯು. ವಿಜಯನಾಥ ಶೆಣೈ ಅವರು ಸಂಪಾದಿಸಿ ಅವರಿಗೆ ಅರ್ಪಿಸಿದ್ದರು. ಒಬ್ಬ ಸಾಮಾನ್ಯ ವ್ಯಕ್ತಿಯ ಕುರಿತಾಗಿ ಇಂತಹ ಸನ್ಮಾನ ಒಂದೇ ಸಂದರ್ಭದಲ್ಲಿ ನಡೆದರೂ ನಾಡು ತೃಪ್ತಿ ಪಟ್ಟುಕೊಳ್ಳಬಹುದು. ಆದರೆ ಜೀವನದುದ್ದಕ್ಕೂ ನವನವೋನ್ಮೇಷಶಾಲಿನಿಯಾದ ಚಿಂತನದಿಂದ, ಕರ್ತೃತ್ವ ಶಕ್ತಿಯಿಂದ ಸಾಧನೆಗಳ ಸರಮಾಲೆಯನ್ನೇ ಪೋಣಿಸುತ್ತ ಹೋಗುವ ಡಾ. ಶಿವರಾಮ ಕಾರಂತರಂಥವರಿಗೆ, ಪ್ರೊ। ಕು.ಶಿ. ಹರಿದಾಸ ಭಟ್ಟರಂಥವರಿಗೆ ಒಮ್ಮೆ ಸನ್ಮಾನ ಸಲ್ಲಿಸಿದೆವೆಂದು ನಾವು ತೃಪ್ತಿ ಪಟ್ಟುಕೊಳ್ಳಲಾಗುವುದಿಲ್ಲ. ಡಾ. ಶಿವರಾಮ ಕಾರಂತರ ಬಗ್ಗೆ ಕು.ಶಿ.ಯವರು ಇದನ್ನು ಕಾರ್ಯತಃ ಮಾಡಿ ತೋರಿಸಿದರು. ಕಾರಂತ ಅರುವತ್ತು, ಆಮೇಲೆ ಕಾರಂತ ಪ್ರಪಂಚ ಎರಡೂ ಅಭಿನಂದನ ಗ್ರಂಥಗಳನ್ನು ಕು.ಶಿ. ಅವರೇ ಸಂಪಾದಿಸಿ ಕಾರಂತರಿಗೆ ಅರ್ಪಿಸಿದರು. ಇದೀಗ "ಪ್ರವೃತ್ತ"ದ ಬಳಿಕ ಮತ್ತೊಮ್ಮೆ "ಲೋಕಮಿತ್ರ" ಎಂಬ ಹೆಸರಿನ ಈ ಅಭಿನಂದನ ಗ್ರಂಥವನ್ನು ಕು.ಶಿ. ಅವರಿಗೆ ಸಮರ್ಪಿಸಲು ನಮಗೆ ಅತೀವ ಹರ್ಷವೆನಿಸುತ್ತದೆ.

"ಪ್ರವೃತ್ತ"ರೆಂದು ನಿವೃತ್ತಿಗೊಳ್ಳುತ್ತಿರುವ ಕು.ಶಿ.ಯವರನ್ನು ಕುರಿತು ವಿಜಯನಾಥ ಶೆಣೈಯವರು ಆಡಿದುದು ಅನ್ವರ್ಥವಾಯಿತು. ಅನೇಕ ಸಂದರ್ಭಗಳಲ್ಲಿ ಕು.ಶಿ.ಯವರು ತನ್ನ ಸಂಗಡಿಗರ, ವಿದ್ಯಾರ್ಥಿಗಳ ಬಗ್ಗೆ ಇರಿಸಿದ ಆಶಯವನ್ನು ಅವರು ಈಡೇರಿಸಿದ್ದುಂಟು. ಆದರೆ ಇಲ್ಲಿ ಅಪೂರ್ವವಾದದ್ದೇ ಸಾಧಿತವಾಯಿತು. ಉಡುಪಿಯ ಅಭಿಮಾನಿಗಳು ನಿವೃತ್ತಿಯ ಬಳಿಕವೂ ಸಾರ್ವಜನಿಕ-ಸಾಂಸ್ಕೃತಿಕ ಚಟುವಟಿಕೆಗಳ ಸಂಘಟನ ಕಾರ್ಯಗಳಿಂದ ಪರಾಙ್ಮುಖರಾಗದೆ ನಾಡಿನ ಆತ್ಮ ಸಂವೃದ್ಧಿಗೆ ಮತ್ತೂ ದುಡಿಯುವ ಚೈತನ್ಯ ಅವರಿಗೆ ಬರಲೆಂದು ನಾಡು ಹಾರೈಸಿದುದು ಕು.ಶಿ.ಯವರ ಮಟ್ಟಿಗೆ ಹುಸಿಯಾಗಲಿಲ್ಲ. ಬದಲಾಗಿ ಅವರು ನಿವೃತ್ತಿಯ ಬಳಿಕ ಈ ಹತ್ತು-ಹನ್ನೆರಡು ವರುಷಗಳಲ್ಲಿ ಸಾಧಿಸಿದ ಮಹತ್ಕಾರ್ಯಗಳು ಅಖಂಡ, ಅಸಾಮಾನ್ಯ. ಯಕ್ಷಗಾನದ ರಾಷ್ಟ್ರೀಯ ಉತ್ಸವ, ತುಳು ನಿಘಂಟು ಯೋಜನೆ, ಕರ್ಣಾಟಕ ಜಾನಪದ ರಂಗಕಲೆಗಳ ಅಧ್ಯಯನಕೇಂದ್ರ ಇವು ಮೂರು ಅವರು ನಿವೃತ್ತಿ ಕಾಲದಲ್ಲಿ ಸಾಧಿಸಿದ ವಿಜಯಗಳು. ಇದರೊಂದಿಗೆ ಮೊದಲಿನಿಂದಲೂ ಹಮ್ಮಿಕೊಂಡಿದ್ದ ಬರವಣಿಗೆಯನ್ನು ಮತ್ತೂ ಮುಂದುವರಿಸಿ ಹಲವಾರು ಲೋಕಾಭಿರಾಮದ ವಿಚಾರ ಧಾರೆ, ಪ್ರವಾಸಕಥನಗಳು ಹಾಗೂ "ವಿಶ್ವಮಾನವ" ಪ್ರಶಸ್ತಿ ಪಡೆದ "ಕಟ್ಟಿಂಗೇರಿ ಕೃಷ್ಣ ಹೆಬ್ಬಾರ - ಕಲೆ ಮತ್ತು ಬದುಕು" ಎಂಬ ಸಾಹಿತ್ಯ ಗಂಧ ಸೂಸುತ್ತಿರುವ ಜೀವನ ಚರಿತ್ರೆಯನ್ನು ಬರೆದ ಹರಿದಾಸ ಭಟ್ಟರ ಧೀಶಕ್ತಿ ಇನ್ನೂ ಪ್ರವೃತ್ತವಾಗಿಯೇ ಇದ್ದು ಹರಿವ ತೊರೆಯಂತೆ ಸದಾ ಲವಲವಿಕೆಯಿಂದ ಅವರಿಂದ ಎಳೆಯರಾದ ಅನೇಕರನ್ನು ನಾಚಿಸುವಂತಿದೆ. ಅವರೇರಿದೆತ್ತರಕ್ಕೆ ಉಳಿದವರೂ ಏರಬೇಕೆಂದು ಅವರು ಅಪೇಕ್ಷೆ ಪಡುವುದು ಸಹಜವಾದರೂ ನಮ್ಮ ಇತಿ ಮಿತಿಗಳನ್ನರಿತ ನಾವು ಈ ಅಭಿನಂದನ ಗ್ರಂಥದ ಮೂಲಕವಾದರೂ ಅವರ ಬಹುಮುಖ ಪ್ರತಿಭೆಗೆ, ಬಹುಮುಖ ಸಿದ್ಧಿಗೆ ನಮ್ಮ ಅಂತರಂಗದ ಅಭಿಮಾನವನ್ನು ಪ್ರಕಟಗೊಳಿಸಬೇಕೆಂದು ನಾವು ಈ ಗ್ರಂಥದ ಯೋಜನೆಯನ್ನು ಹಾಕಿ ಕಾರ್ಯಕ್ಕೆಳಸಿ ಇದೀಗ ಎರಡು ವರ್ಷಗಳೇ ಸಂದುವು. ಯೋಜನೆಯು ಕಾರ್ಯಗತವಾಗುವುದಕ್ಕೆ ಆದ ವಿಳಂಬಕ್ಕೆ ನಮ್ಮ ನಿಧಾನಗತಿ ಮುಖ್ಯ ಕಾರಣವಾಯಿತು. ಜೊತೆಗೆ ಕಾಲ ಕಳೆದಂತೆಲ್ಲ ಹರಿದಾಸಭಟ್ಟರ ಸಿದ್ಧಿಗಳು ಹೆಚ್ಚುತ್ತ ಹೋಗಿ ಅವುಗಳ ಕುರಿತೆಲ್ಲ ಪ್ರತಿಕ್ರಿಯೆಗಳು ಇದರಲ್ಲಿ ಅಡಕಗೊಳ್ಳಬೇಕೆಂದು ನಾವು ಈ ಗ್ರಂಥದ ಹರವನ್ನು ವಿಸ್ತರಿಸುತ್ತ ಹೋದದ್ದರ ಪರಿಣಾಮ ಗ್ರಂಥದಲ್ಲಿರುವ ಎಲ್ಲ ಲೇಖನಗಳ ದೃಷ್ಟಿಗಳು ಒಂದೇ ಕಾಲಮಾನಕ್ಕೆ ಸೀಮಿತವಾದುವುಗಳಲ್ಲ. ಗ್ರಂಥದ ಮುಖ್ಯ ಭಾಗ ಮೊದಲೇ ಮುದ್ರಣವಾಗಿರುತ್ತ ಕೊನೆಯ ಲೇಖನಗಳನ್ನು ಕೆಲವನ್ನು ಸೇರಿಸಿದಾಗ ನಮ್ಮ ಹಿಂದಣ ರಚನಾ ಬಂಧದಲ್ಲಿ ಶೈಥಿಲ್ಯವುಂಟಾದುದರ ಬಗ್ಗೆ ನಮಗೆ ಖೇದವಿದೆ. ಆದರೂ ನಮ್ಮ ಆಶಯದಲ್ಲಿರುವ ಸದ್ಭಾವವನ್ನು ಗಮನಿಸಿ ಓದುಗರು ನಮ್ಮನ್ನು ಮನ್ನಿಸುವರೆಂದು ನಮ್ಮ ಭಾವನೆ.

"ಲೋಕಮಿತ್ರ"ವೆಂದು ಎರಡು ವರ್ಷಗಳ ಕೆಳಗೇ ನಾವು ರೂಪುಗೊಳಿಸಿದ ಅಭಿನಂದನ ಗ್ರಂಥ ಸಾರ್ಥಕವಾದುದು ಇತ್ತೀಚೆಗೆ ಹರಿದಾಸ ಭಟ್ಟರಿಗೆ "ವಿಶ್ವಮಾನವ" ಎಂಬ ಅಭಿಧಾನದ ಪ್ರಶಸ್ತಿ ಪ್ರಕಟವಾದುದರ ಮೂಲಕ. "ವಿಶ್ವಮಾನವ" ಎಂಬುದು ಪ್ರಶಸ್ತಿಯ ಹೆಸರು, ತನಗೆ ಸಂಬಂಧಿಸಿದ್ದಲ್ಲವೆಂದು ಹರಿದಾಸ ಭಟ್ಟರು ಇದೀಗ ಅನೇಕ ವೇಳೆ ವಿನಯದಿಂದ ಹೇಳಿಕೊಂಡರೂ "ವಿಶ್ವಮಾನವ", "ಲೋಕಮಿತ್ರ" ಗಳೆಂಬ ಭೌಮದ ವಿವಿಧ ಅಂತಸ್ತುಗಳಲ್ಲಿ ಒಂದರಲ್ಲಾದರೂ ಕು.ಶಿ.ಯವರಿಗೆ ಸ್ಥಾನ ಕಾದಿರಿಸಬೇಕಾದ್ದು ಖಂಡಿತ. "ಲೋಕಗುರುಗಳೆಲ್ಲ ಬನ್ನಿ ನಮ್ಮ ಮನೋಮಂದಿರಕೆ" ಎಂಬ ಕುವೆಂಪು ಅವರ ಹಾರೈಕೆಯನ್ನು ತನ್ನ ಕಾರ್ಯಕ್ಷೇತ್ರದಲ್ಲಿ ನಿಜಗೊಳಿಸಿದವರು ಜಗದಗಲದಿಂದ ವಿಚಾರಗಳನ್ನು, ವಿದ್ವಾಂಸರನ್ನು ಉಡುಪಿಗೆ ಬರಮಾಡಿಸಿಕೊಂಡವರು ಅವರು. ಜಗದಗಲ ಸಂಚರಿಸಿದವರು ಅವರು. "ಲೋಕಾಭಿರಾಮ"ವಾಗಿ ಸಮಸ್ತ ಮಾನವ ಕುಲದ ಸಂತೋಷ, ಏಳ್ಗೆ, ಸುಖದ ಬಗ್ಗೆ ಚಿಂತಿಸಿದವರು ಅವರು. ಅವರ ಟೀಕೆ ಸಕ್ಕರೆ ಮೆತ್ತಿದ ಕಹಿಗುಳಿಗೆಯಂತಲ್ಲ - ಕರ್ಪೂರ ಮಿಶ್ರಣ ಮಾಡಿದ ಆಸವಾರಿಷ್ಟಗಳಂತೆ. ಸೇವಿಸಿದೊಡನೆಯೆ ರೋಗ ಹಿಂಜರಿಯಿತೆಂಬ ಅನುಭವ. ತನ್ನ ಒಲವುಗಳನ್ನು ಯಾವುದೇ ಒಂದೆರಡು ಕ್ಷೇತ್ರಗಳಿಗೆ ಸೀಮಿತಗೊಳಿಸದೆ - ಅರ್ಥಶಾಸ್ತ್ರ, ಶಿಕ್ಷಣ, ರಾಜಕೀಯ, ಸಾಹಿತ್ಯ, ಕಲೆ, ಸಂಗೀತ, ರಂಗಕಲೆ, ಜಾನಪದ, ನಿಘಂಟು, ಭಾಷಾಧ್ಯಯನ, ಇತಿಹಾಸ, ಸಂಗ್ರಹಾಲಯ – ಒಂದೇ ಎರಡೇ ಎಲ್ಲ ಮೌಲ್ಯಗಳನ್ನೂ ಸುಮನಸ್ಸಿನಿಂದ ಮುಕ್ತವಾಗಿ ಸ್ವಾಗತಿಸುವ ಕು.ಶಿ.ಯವರಿಗೆ ಲೋಕಮಿತ್ರನೆಂಬ ಹೆಸರು ಸೂಕ್ತವೇ ಸರಿ. ಅದನ್ನು "ವಿಶ್ವಮಾನವ" ಪ್ರಶಸ್ತಿ ಮತ್ತೆ ಸ್ಥಿರೀಕರಿಸಿದೆ. ವಿಶ್ವಮಾನವ ಪ್ರಶಸ್ತಿ ಪ್ರದಾನ ಹಾಗೂ "ಲೋಕಮಿತ್ರ" ಎಂಬ ಈ ಅಭಿನಂದನ ಗ್ರಂಥದ ಸಮರ್ಪಣೆ ಎರಡನ್ನೂ ಜೊತೆಯಾಗಿ ಇದೇ ನವಂಬರ 5 ರಂದು ಆಗಗೊಳಿಸಲು ಸಾಧ್ಯವಾದುದಕ್ಕಾಗಿ ನಾವು ಅತೀವ ಸಂತೋಷ ಪಡುತ್ತೇವೆ.

ಇದೀಗ ಈ ಗ್ರಂಥ ಪ್ರಕಟಣೆಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದು ನಮ್ಮ ಕರ್ತವ್ಯ. ಮೊದಲಾಗಿ ಈ ಗ್ರಂಥದ, ರೂಪ ನಿರ್ಣಯಮಾಡಿ ಇದನ್ನು ಸಂಪಾದಿಸಿಕೊಟ್ಟ ಪ್ರೊ। ದೇ. ಜವರೇಗೌಡರಿಗೆ ನಾವು ಆಭಾರ ಸಲ್ಲಿಸುತ್ತೇವೆ. ಅವರ ಕೇಳಿಕೆಯನ್ನು ಮನ್ನಿಸಿ ಅನೇಕ ವೇಳಿ ಅಲ್ಪ ವೇಳೆಯಲ್ಲೇ ಲೇಖನಗಳನ್ನು ಕಳುಹಿಸಿಕೊಟ್ಟ ಲೇಖಕರಿಗೆ ನಾವು ಕೃತಜ್ಞರು. ಈ ಗ್ರಂಥದ ಮುಖಚಿತ್ರ ಹಾಗೂ ಇತರೆಡೆ ಅಳವಡಿಸಿಕೊಂಡ ರೇಖಾ ಚಿತ್ರಗಳನ್ನೂ ಸೃಜಿಸಿದ ಕಲಾವಿದ ಕೆ. ಕೆ. ಹೆಬ್ಬಾರರಿಗೆ ನಮ್ಮ ವಿಶೇಷ ಆಭಾರ ಸಲ್ಲುತ್ತದೆ. ಈ ಗ್ರಂಥದ ನಿರ್ಮಾಣಕ್ಕಾಗಿ ಬೇಕಾದ ಕಾಗದದಲ್ಲಿ ಒಂದಂಶವನ್ನು ಉಚಿತವಾಗಿ ನಮಗೆ ನೀಡಿದ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ಹಾಗೂ ಮೈಸೂರ್ ಪೇಪರ್ ಮಿಲ್ಸ್, ಭದ್ರಾವತಿ ಇವುಗಳ ಮಾಲಿಕರಿಗೆ ನಾವು ಋಣಿಗಳು. ಈ ಗ್ರಂಥದ ಮುದ್ರಣದ ಜವಾಬುದಾರಿಯನ್ನು ಹೊತ್ತ ಮಣಿಪಾಲ ಪವರ್ ಪ್ರೆಸ್ಸಿನ ಶ್ರೀ ಟಿ. ಮೋಹನದಾಸ ಪೈ ಅವರಿಗೆ ನಾವು ಹಾರ್ದಿಕವಾಗಿ ಕೃತಜ್ಞತೆ ಸಲ್ಲಿಸುತ್ತೇವೆ. ಕು. ಶಿ. ಹರಿದಾಸ ಭಟ್ಟರ ಹೆಸರಿನಲ್ಲಿ ಸ್ವರ್ಣ ಪದಕ ಹಾಗೂ ಸಾಹಿತ್ಯ ವಿಮರ್ಶಾ ಪ್ರಶಸ್ತಿಗಳನ್ನು ನೀಡಲು ದತ್ತಿ ನೀಡಿದ ಶ್ರೀಮತಿ ಪಿ. ಸರಸ್ವತೀ ತಂತ್ರಿ ಹಾಗೂ ಶ್ರೀಮತಿ ನಿರ್ಮಲಾ ಇನಾಂದಾರ್ ಹಾಗೂ ಶ್ರೀಮತಿ ಮೀನಾ ವಾಂಗೀಕಾರ್ ಅವರಿಗೆ ನಮ್ಮ ಆಭಾರ ಸಲ್ಲುತ್ತದೆ. ಈ ಗ್ರಂಥದ ಯೋಜನೆಗಷ್ಟೇ ಅಲ್ಲದೆ - ಸನ್ಮಾನ ಸಮಾರಂಭದ ಸಮಸ್ತ ಕಾರ್ಯಭಾರಗಳಲ್ಲಿ ನಮ್ಮ ಕೇಳಿಕೆಯನ್ನು ಮನ್ನಿಸಿದ, ನಮ್ಮೊಂದಿಗೆ ದುಡಿದ ಎಲ್ಲರ ಉಪಕಾರವನ್ನೂ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ಇತಿ

ಪ್ರಕಾಶಕರು

ಮುನ್ನುಡಿ

1984ರ ಮಧ್ಯಭಾಗ. ಆಗ ನಾನು ಅಮೆರಿಕೆಯಲ್ಲಿದ್ದೆ. ಪ್ರೊ। ಎಚ್. ಕೃಷ್ಣ ಭಟ್ಟರಿಂದ ಕಾಗದವೊಂದು ಬಂದಾಗ ನಾನು ಬೆಚ್ಚಿದೆ. ಅದನ್ನು ಬಿಡಿಸಿ ನೋಡಿದಾಗ ಸಂತೋಷವಾಯಿತು. ಪ್ರೊ। ಹರಿದಾಸ ಭಟ್ಟರನ್ನು ಕುರಿತು ನಾನೊಂದು ಲೇಖನ ಬರೆಯಬೇಕೆಂಬುದೇ ಆ ಪತ್ರದ ಒಕ್ಕಣೆಯಾಗಿತ್ತು. ವಿದೇಶದಲ್ಲಿ ಸಾಕಷ್ಟು ಸಾಮಗ್ರಿಯಾಗಲಿ, ಆಧಾರ ಗ್ರಂಥಗಳಾಗಲಿ ದೊರೆಯುವುದಿಲ್ಲವಾದ್ದರಿಂದ ಊರಿಗೆ ಹಿಂದಿರುಗಿದ ಕೂಡಲೇ ಬರೆದುಕೊಡುವುದಾಗಿ ಅವರಿಗೆ ಉತ್ತರ ಬರೆದೆ.

ಊರಿಗೆ ಹಿಂದಿರುಗಿದ ಕೆಲವು ತಿಂಗಳ ನಂತರ ನಾನೇ ಲೇಖನದ ಪ್ರಸ್ತಾಪವನ್ನೆತ್ತಿ, ಕೆಲವು ಆಧಾರ ಗ್ರಂಥಗಳನ್ನು ಕಳಿಸಿಕೊಡುವಂತೆ ನಾನವರಿಗೊಂದು ಪತ್ರ ಬರೆದೆ. ನಾನು ಉಡುಪಿಗೆ ಹೋಗುವ ಸಂಭವ ವಿದ್ದುದರಿಂದ, ಬಂದಾಗ ಪ್ರಸಕ್ತ ವಿಷಯವನ್ನು ಕುರಿತು ಚರ್ಚೆ ಮಾಡಬಹುದೆಂದು ಅವರು ಉತ್ತರ ಬರೆದು ಕೆಲವು ಸೂಚನೆಗಳನ್ನು ಸಹ ಎಸೆದಿದ್ದರು.

ನಾನು ಉಡುಪಿಗೆ ಹೋದಾಗ ಕೃಷ್ಣ ಭಟ್ಟರು ತಮ್ಮ ಬಯಕೆಯನ್ನು ಕಾತರತೆಯಿಂದ ವ್ಯಕ್ತಪಡಿಸಿದರು. "ನೀವೇನೋ ದೊಡ್ಡದೊಂದು ಗಂಟನ್ನು ಸಂಗ್ರಹಿಸಿ ಪ್ರೊ। ಕು. ಶಿ. ಹರಿದಾಸ ಭಟ್ಟರ ಹೆಸರಿನಲ್ಲಿ ಭಾರತೀಯ ಸ್ಥಳನಾಮ ಸಂಘದ ಲೆಕ್ಕದಲ್ಲಿ ಪ್ರದುವಟ್ಟಾಗಿಟ್ಟು ಪ್ರತಿವರ್ಷ ವಿಶೇಷೋಪನ್ಯಾಸವನ್ನು ನಡೆಸುತ್ತಿದ್ದೀರಿ. ಉಡುಪಿಗೆ ಅವರು ಸಲ್ಲಿಸಿರುವ ಸೇವೆ ಗಣನೀಯವಾದದ್ದು, ಅಮೋಘವಾದದ್ದು. ನಮ್ಮ ಹಾಗೂ ಮುಂದಿನ ಪೀಳಿಗೆಯ ನೆನಪಿನಲ್ಲಿ ಅವರು ಉಳಿಯುತ್ತಾರೆ, ನಿಜ; ಆದರೂ ತೂಕವಾದ, ಯಾವಾಗಲೂ ಉಳಿಯುವಂತಹ ನೆನಪಿನ ಕಾಣಿಕೆಗಳನ್ನವರಿಗೆ ಸಲ್ಲಿಸಲಿಲ್ಲವಲ್ಲ ಎಂಬ ಕೊರಗು ನಮ್ಮ ಗೆಳೆಯರ ಮನಸ್ಸಿನಲ್ಲುಳಿದುಬಿಟ್ಟಿದೆ. ಈ ದಿಶೆಯಲ್ಲಿ ಈಗೇನಾದರು ಒಂದಿಷ್ಟು ಕೆಲಸ ಮಾಡಬೇಕಾಗಿದೆ, ಎಂದವರು ನುಡಿದರು. ಸುಮಾರು ಹೊತ್ತು ಚರ್ಚಿಸಿದ ನಂತರ ನಾವೊಂದು ಇತ್ಯರ್ಥಕ್ಕೆ ಬಂದೆವು. ಕು.ಶಿ.ಯವರ ಹೆಸರಿನಲ್ಲಿ ಕೆಲವು ದತ್ತಿಗಳನ್ನು ವ್ಯವಸ್ಥೆ ಗೊಳಿಸಬಹುದೆಂದೂ, ಅಭಿನಂದನ ಗ್ರಂಥವೊಂದನ್ನು ತಯಾರಿಸಿ. ಅವರಿಗರ್ಪಿಸಬಹುದೆಂದೂ ನಾವು ತೀರ್ಮಾ ನಿಸಿದೆವು. ಹಣ ಸಂಗ್ರಹದ ಭಾರವನ್ನು ತಮ್ಮ ಗೆಳೆಯರ ಪರವಾಗಿ ಕೃಷ್ಣ ಭಟ್ಟರು ಹೊತ್ತುಕೊಂಡರು. ಅಭಿನಂದನ ಗ್ರಂಥದ ಹೊಣೆಗಾರಿಕೆಯನ್ನು ನಾನು ಹೊತ್ತುಕೊಂಡೆ. ಈ ಎಲ್ಲ ನಮ್ಮ ಪ್ರಯತ್ನಗಳಿಗೆ ಮಣಿಪಾಲದ ಪೈ ಬಂಧುಗಳ ಆಶೀರ್ವಾದವಿರುತ್ತದೆಂದು ನಂಬಿ, ನಾವು ನಮ್ಮ ಕೆಲಸಗಳನ್ನು ಮುಂದುವರಿಸಿದೆವು.

ಪ್ರೊ। ಕು.ಶಿ. ಹರಿದಾಸ ಭಟ್ಟರು ಕನ್ನಡ ನಾಡಿನ ಸರ್ವಶ್ರೇಷ್ಠ ಪುಣ್ಯಪುರುಷರಲ್ಲೊಬ್ಬರು. ಪ್ರತಿಭೆಯಲ್ಲಿ, ಪಾಂಡಿತ್ಯದಲ್ಲಿ, ಬೋಧನಾ ಕಲೆಯಲ್ಲಿ, ಸಂಘಟನಾ ಚಾತುರ್ಯದಲ್ಲಿ, ಆಡಳಿತ ಕೌಶಲದಲ್ಲಿ, ಲೋಕಾನುಭವ ಸಂಪತ್ತಿನಲ್ಲಿ, ಪ್ರಗತಿಪರ ಮನೋಧರ್ಮದಲ್ಲಿ, ಸ್ನೇಹಗಾರಿಕೆಯಲ್ಲಿ, ವಿನಯದಲ್ಲಿ, ಬುದ್ಧಿವಂತಿಕೆಯಲ್ಲಿ, ವಿವೇಕದಲ್ಲಿ, ಪರೋಪಕಾರ ಬುದ್ಧಿಯಲ್ಲಿ, ವಾಗ್ಮಿತೆಯಲ್ಲಿ, ನಿರಸೂಯತೆಯಲ್ಲಿ, ಕರ್ತವ್ಯನಿಷ್ಠೆಯಲ್ಲಿ, ಆತಿಥ್ಯದಲ್ಲಿ ಅವರನ್ನು ಹೋಲುವ ಜನ ನಾಡಿನಲ್ಲಿ ವಿರಳ. ಅವರು ತುಳು ನಿಷ್ಠರಾಗಿಯೂ ಕನ್ನಡಾಭಿಮಾನಿ ಗಳು, ಕನ್ನಡಾಭಿಮಾನಿಗಳಾಗಿಯೂ ರಾಷ್ಟ್ರಾರಾಧಕರು, ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಾಧಿಸಿರುವ ಸಿದ್ಧಿ ಯಾರಾದರೂ ಹೆಮ್ಮೆಪಡುವಂಥದ್ದು; ಅದರಲ್ಲಿ ತೂಕವಿದೆ, ಗಾಂಭೀರ್ಯವಿದೆ. ಲೋಕಾನುಭವ ಸಂಪತ್ತಿದೆ. ಕಲೆಗಾರಿಕೆಯಿದೆ. ಅವರ ಅಂಕಣ ಸಾಹಿತ್ಯದಲ್ಲಿ ಪೂರ್ವಾಗ್ರಹ ದೂರವಾದ, ದಾಕ್ಷಿಣ್ಯಕ್ಕೊಳಗಾಗದ, ಮಾತ್ಸರ್ಯ ಕ್ಕೆಡೆಯಿಲ್ಲದ, ಸ್ವಾರ್ಥವನ್ನು ಮರೆತ, ನಿಷ್ಪಕ್ಷಪಾತ ದೃಷ್ಟಿಯ ದ್ವೇಷರಹಿತ ಸೂಕ್ಷ್ಮ ವಿಡಂಬನೆಯುಳ್ಳ, ತಾಯಿನೆಲದ ಬನಿಪಾಕಗಳ ಸಮೃದ್ಧ ಶೈಲಿಯ ಹೆಗ್ಗಳಿಕೆಯಿದೆ. ಅವರಿಂದ ಉಪಕಾರ ಪಡೆದ ಹಲವು ಮಿತ್ರರಲ್ಲಿ ನಾನೂ ಒಬ್ಬನೆಂಬುದು ಹೆಮ್ಮೆಯ ಸಂಗತಿ.

ಅಭಿನಂದನ ಗ್ರಂಥ ಸಮರ್ಪಣೆಯ ಮೂಲಕ ಮಹಾ ವ್ಯಕ್ತಿಗಳಿಗೆ ಗೌರವ ಸಲ್ಲಿಸುವ ಪರಂಪರೆ ಕರ್ನಾಟಕ ಸಂಸ್ಕೃತಿಯ ಪ್ರಮುಖ ಲಕ್ಷಣವಾಗಿದೆ. ಈ ಅಭಿನಂದನ ಗ್ರಂಥ ಪರಂಪರೆಯೇ ಒಂದು ಸಾಹಿತ್ಯ ಪ್ರಕಾರವಾಗಿ, ಬೃಹದಾಕಾರವಾಗಿ ಬೆಳೆದಿದೆ. ಪ್ರಾಯಶಃ ಇಂಥಾದ್ದೊಂದು ಪರಂಪರೆಯ ಪ್ರಜ್ಞೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಇತರ ಭಾಷೆಗಳ ಪಾಲಿಗಿಲ್ಲವೆಂದೇ ತೋರುತ್ತದೆ. 'ಲೋಕಮಿತ್ರ' ಎಂಬ ಅಭಿಧಾನದಿಂದ ರೂಪವೆತ್ತಿರುವ ಈ ಅಭಿನಂದನ ಗ್ರಂಥ ಕು.ಶಿ.ಯವರ ಘನತೆಗೆ ಒಪ್ಪುವಂತಿದೆಯೆನ್ನುವುದಾದರೆ ಸಂಪಾದಕನ ಶ್ರಮ ಸಾರ್ಥಕ ವಾಗುತ್ತದೆ. ಇದು ಇನ್ನೂ ಉತ್ತಮವಾಗಬಹುದಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ಅದಕ್ಕಾಗಿ ಬಹುಕಾಲ

ಕಾದಿದ್ದರೆ ಕಾರ್ಯಕರ್ತರ ಹಾಗೂ ಗೆಳೆಯರ ಬಳಗದ ಸಹನೆ ಪರೀಕ್ಷೆಗೊಳಗಾಗುತ್ತಿತ್ತೆಂಬುದರಲ್ಲಿ ಅನುಮಾನವಿಲ್ಲ. ಕು.ಶಿ.ಯವರ ಸಾಧನೆ ಸಿದ್ಧಿಗಳನ್ನು ಅವರ ಸಾಹಿತ್ಯದ ಸಮಗ್ರಾವಲೋಕನವನ್ನು ಈ ಅಭಿನಂದನ ಗ್ರಂಥದಲ್ಲಿ ಪ್ರತಿಬಿಂಬಿಸಬೇಕೆಂಬುದು ಸಂಪಾದಕನ ಅಭಿಲಾಷೆ. ಈ ಅಭಿಲಾಷೆ ತಕ್ಕಮಟ್ಟಿಗೆ ಪೂರೈಸಿದರೆ ತೃಪ್ತಿಯಾದೀತು.

ಈ ಗ್ರಂಥದ ಸಂಪಾದನಾ ಕಾರ್ಯದಲ್ಲಿ ನೆರವಾದವರು ಹಲವರು. ಅವರ ಪೈಕಿ ಇಬ್ಬರು ಮೂವರ ಹೆಸರುಗಳನ್ನಾದರೂ ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳದಿದ್ದರೆ ಕರ್ತವ್ಯಲೋಪವಾಗುತ್ತದೆ. ಅವರಲ್ಲಿ ಶ್ರೀ ಜಿ. ಟಿ. ನಾರಾಯಣರಾಯರೊಬ್ಬರು; ಅವರ ನಿರ್ದುಷ್ಟ ವಿದ್ವತ್ತು, ಅದಮ್ಯ ಉತ್ಸಾಹ, ನೈಷ್ಠಿಕ ಕರ್ಮ ಯೋಗ, ಪಾದರಸ ಸದೃಶವಾದ ಕಾರ್ಯತತ್ಪರತೆ ವಿದ್ವತ್ ಪ್ರಪಂಚದಲ್ಲಿ ಮನೆಮಾತಾಗಿದೆ; ಕು.ಶಿ.ಯವರ ಮೇಲಣ ಅವರ ಅಭಿಮಾನ ನಿಷ್ಕಳಂಕವಾದುದು. ಕೊಂಕದೆ, ಕೋಡದೆ, ಬೇಸರಿಸದೆ, ಮುನಿಮುರಿಯದೆ ನಾನು ಹೇಳಿದ ಕೆಲಸಗಳನ್ನೆಲ್ಲ ಪೂರೈಸಿ, ನನ್ನ ಗೌರವಕ್ಕೆ ಪಾತ್ರರಾಗಿದ್ದಾರೆ. ಪ್ರೊ। ತಿರುಮಲೇಶ್ವರ ಭಟ್ಟರು ಇಲ್ಲಿಯ ಲೇಖನಗಳ ಮೇಲೆ ಕಣ್ಣಾಡಿಸಿದ್ದಲ್ಲದೆ, ಅಚ್ಚಿನ ಪೂರ್ಣ ಭಾರವನ್ನು ಹೊತ್ತುಕೊಂಡು, ಅದನ್ನು ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟಿದ್ದಾರೆ. ಈ ಸಮಗ್ರ ಯೋಜನೆಯ ಪ್ರಾಣಸ್ವರೂಪದಂತಿರುವ ಪ್ರೊ। ಎಚ್. ಕೃಷ್ಣ ಭಟ್ಟರ ಸಾಹಸ ಸಹಾಯ ಸಹಕಾರಗಳು ಮಾತಿಗೆ ನಿಲುಕುವಂಥವಲ್ಲ. ಅವರ ದೃಢ ಹಠ, ನಿಷ್ಠಾ ಶ್ರದ್ಧೆಗಳು ಈ ಯೋಜನೆಗೆ ಲಭಿಸದಿದ್ದರೆ ಪ್ರಾಯಶಃ ಇದು ಮಧ್ಯಂತರದಲ್ಲಿ ನಿಂತುಹೋಗುತ್ತಿತ್ತೇನೋ ಎನಿಸುತ್ತದೆ. ಈ ಗ್ರಂಥದ ಪೂರ್ಣ ಯಶಸ್ಸಿಗೆ ಲೇಖನದಾರರ ಪ್ರೋತ್ಸಾಹವೇ ಕಾರಣವೆಂಬುದನ್ನು ನಾನು ಮರೆಯಲಾರೆ. ಮಣಿಪಾಲದ ಪೈ ಬಂಧುಗಳಲ್ಲಿ ಮುಖ್ಯವಾಗಿ ಶ್ರೀಗಳಾದ ಕೆ. ಕೆ. ಪೈಗಳು, ಹಾಗೂ ರಮೇಶ ಪೈಗಳು, ಮೋಹನದಾಸಪೈಗಳು ಹಾಗೂ ಸತೀಶ ಪೈಗಳು – ಇಂಥಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮುಕ್ತ ಹೃದಯ ದಿಂದ ನೀಡುತ್ತಿರುವ ಬೆಂಬಲ ಅನ್ಯಾದೃಶವಾದುದು. ಹರಿದಾಸ ಭಟ್ಟರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ, ಅಭಿನಂದನ ಗ್ರಂಥದ ಘನತೆಯನ್ನು ಹೆಚ್ಚಿಸುವ ರೇಖಾಚಿತ್ರಗಳನ್ನು ಹಾಗೂ ಮುಖಚಿತ್ರವನ್ನು ಬರೆದು ಕೊಟ್ಟವರು ಡಾ। ಕೆ. ಕೆ. ಹೆಬ್ಬಾರರು. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳು ಸಲ್ಲಬೇಕಾಗಿದೆ.

ಕಾಕತಾಳೀಯ ನ್ಯಾಯದಂತೆ, ಧರ್ಮ ಕರ್ಮ ಸಂಯೋಗವೆಂಬಂತೆ, ಇದೇ 1989ನೆಯ ವರ್ಷದ ಶುಭಸಂದರ್ಭದಲ್ಲಿ ದೇಜಗೌಟ್ರಸ್ಟ್ ಪ್ರೊ। ಕು.ಶಿ. ಹರಿದಾಸ ಭಟ್ಟರಿಗೆ ವಿಶ್ವಮಾನವ ಪ್ರಶಸ್ತಿಯನ್ನು ('ಕಟ್ಟಿಂಗೇರಿ ಕೃಷ್ಣ ಹೆಬ್ಬಾರ' ಎಂಬ ಅವರ ಶ್ರೇಷ್ಠ ಜೀವನಚರಿತ್ರೆಗೆ) ನೀಡುತ್ತಿರುವುದು ಹರ್ಷದ ಸಂಗತಿ ಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಶೈಕ್ಷಣಿಕ ಕ್ಷೇತ್ರಕ್ಕೆ ಪೈ ಬಂಧುಗಳು, ಹೆಗ್ಗಡೆಯವರು, ಸೂರ್ಯನಾರಾಯಣ ಅಡಿಗರು, ಹರಿದಾಸ ಭಟ್ಟರು ಸಲ್ಲಿಸಿರುವ ಸೇವೆ ಅಪೂರ್ವವಾದದ್ದು, ಅಗಾಧವಾದದ್ದು. ಮಂಗಳೂರಿನಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಬೇಕಾದರೆ ಕೊನೆಯ ಇಬ್ಬರು ಮಹನೀಯರು ನಡೆಸಿದ ಹೋರಾಟ ಅಸಾಮಾನ್ಯವಾದದ್ದು. ಅದನ್ನು ನೆನೆಯಬೇಕಾದ್ದು ಸಜ್ಜನರ, ಸುಸಂಸ್ಕೃತರ ಲಕ್ಷಣವೆಂದಿಷ್ಟೇ ಹೇಳಿ ಮುಗಿಸು ತ್ತೇನೆ.

ಈ ಯೋಜನೆಗೆ ಸಹಾಯ ಮಾಡಿದವರ ಹಾಗೂ ನನ್ನೊಡನೆ ಸಹಕರಿಸಿದವರ ಹೆಸರು ಬಿಟ್ಟುಹೋಗಿ ದ್ದರೆ, ಆ ಲೋಪ ಮರೆಹದಿಂದಾದದ್ದೇ ಹೊರತು, ಅವಜ್ಞೆಯಿಂದಾದ್ದಲ್ಲವೆಂದು ನಿವೇದಿಸಿಕೊಂಡು ಅವರ ಕ್ಷಮೆಯಾಚಿಸುತ್ತೇನೆ.

'ನಡೆವರೆಡಹದೆ ಕುಳಿತರೆಡಹುವರೆ'

ಇಂಥ ಒಸಗೆಗಳು ಮೇಲಿಂದ ಮೇಲೆ ಬರಲಿ; ಪ್ರೊ। ಕು.ಶಿ. ಹರಿದಾಸ ಭಟ್ಟರಿಗೂ ಅವರ ಕುಟುಂಬಕ್ಕೂ ಸಕಲ ಸನ್ಮಂಗಳವಾಗಲಿ ಎಂದು ಹಾರೈಸುತ್ತೇನೆ.

ಮೈಸೂರು – 12
8 – 8 – 1989

ದೇಜಗೌ
ಸಂಪಾದಕ

ಪರಿವಿಡಿ

ರಶ್ಮಿ 1

ನಿವೇದನೆ – ಕು. ಶಿ. ಹರಿದಾಸ ಭಟ್ಟ

ರಶ್ಮಿ 2

ಅವರಿವರು ಕಂಡಂತೆ

1. ಸ್ನೇಹಸೇತು – ದೇಜಗೌ 117
2. ಕು. ಶಿ. ಶೈಕ್ಷಣಿಕ ಆಯಾಮದಲ್ಲಿ – ಶ್ರೀಪತಿ ತಂತ್ರಿ 138
3. ಕು. ಶಿ.ಯವರ ಬಗೆಗೆ – ವಕ್ವಾಡಿ ಶ್ರೀನಿವಾಸ ಭಟ್ 141
4. ಸಾಂಸ್ಕೃತಿಕ ರಾಯಭಾರಿ – ಕೆ. ವಿ. ಸುಬ್ಬಣ್ಣ 143
5. ಕು. ಶಿ. – ಪಾ. ವೆಂ. 145
6. ಕು. ಶಿ. ಹರಿದಾಸ ಭಟ್ – ನಾನು ಕಂಡಂತೆ – ಕೆ. ಹರಿದಾಸ ಭಟ್ 147

ರಶ್ಮಿ 3

ಕು. ಶಿ. ಸಾಹಿತ್ಯದ ನೆಲೆ-ಬೆಲೆ

1. ಕು. ಶಿ.ಯವರ ಸಾಹಿತ್ಯ ಪ್ರವಾಸ – ಡಾ. ತಾಳ್ತಜೆ ವಸಂತಕುಮಾರ 151
2. ಕು. ಶಿ.ಯವರ ಶೈಲಿ – ಪ್ರೊ. ಎಂ. ರಾಜಗೋಪಾಲಾಚಾರ್ಯ 156
3. ಪ್ರೊ. ಕು. ಶಿ. ಹರಿದಾಸ ಭಟ್ಟರ ಸಾಹಿತ್ಯದಲ್ಲಿ ಹಾಸ್ಯ – ಡಾ. ಸೀ. ಹೊಸಬೆಟ್ಟು 162
4. ಯುಗವಾಣಿ – ಟಿ. ಕೆ. ಇಂದುಬಾಯಿ 165
5. ವರ್ತಮಾನಕಾಲದ ನಾಲ್ವರು ಮಹಾನುಭಾವರು – ಅಕ್ಕಮಹಾದೇವಿ 169
6. ಕನ್ನಡ ಕಟ್ಟಿದವರು – ಎಂ. ಎನ್. ಸುಮಿತ್ರ 172
7. ಕು. ಶಿ. ಹರಿದಾಸ ಭಟ್ಟರ ಎರಡು ಸಂಗ್ರಹಣೀಯ ಕೃತಿಗಳು – ವೆಂಕಟರಾಜ ಪುಣಂಚಿತ್ತಾಯ 175
8. ಯಕ್ಷಗಾನದಲ್ಲಿ ಔಚಿತ್ರಪ್ರಜ್ಞೆ – ಅಮೃತ ಸೋಮೇಶ್ವರ 179
9. ನಡುಹಗಲಲ್ಲೇ ಕಗ್ಗತ್ತಲೆ – ಎಂ. ಎನ್. ಸುಮಿತ್ರಾ 181
10. ಕನ್ನಡ ಘಂಟಮಾರಾ – ಜಿ. ರಾಜಶೇಖರ್ 183
11. ಘಂಟಮಾರಾ – ಕೃಷ್ಣವೇಣಿ 188
12. ಸ್ವಾತಂತ್ರ್ಯ ಮತ್ತು ಸಂಸ್ಕೃತಿ – ಎಚ್. ಎಂ. ನಾಗರಾಜ ರಾವ್ 190
13. ಅಮೇರಿಕದ ಆರು ಕಥೆಗಳು – ಕೃಷ್ಣವೇಣಿ 194
14. ನಿ-ವೇದನೆಯನ್ನು ಕುರಿತು – ಬಿ. ಶಾಮಸುಂದರ 200
15. ಭಾಗ್ಯದ ಬಾಗಿಲು – ಒಂದು ಬೆಳ್ಳಿಹಬ್ಬದ ಕಥೆ – ಡಾ. ರಾಮಕೃಷ್ಣ ಜೋಶಿ 203
16. ಮಾರ್ಗದರ್ಶಿ ಕಾರಂತ ಅರುವತ್ತು – ಚಂದ್ರಮತಿ ಸೋಂದಾ 205
17. ಕಾರಂತ ಅರುವತ್ತು – ಸವಿನೆನಪು – ಡಾ. ಉಪ್ಪಂಗಳ ರಾಮ ಭಟ್ಟ 208
18. ಅಭಿನಂದನ – ಜಿ. ಎಸ್. ಭಟ್ಟ 211

19. ಸಗರಿ – ಸೀತಾರಾಮ ಜಾಗೀರ್‌ದಾರ್ 213
20. ಶಿಕ್ಷಣ ಮತ್ತು ಜೀವನ – ಎನ್. ಎಸ್. ಶಾರದಾ ಪ್ರಸಾದ್ 219
21. ಅಂಜಲಿ – ಟಿ. ಎಸ್. ನಾಗರತ್ನ 223
22. ಗೋವಿಂದ ಪೈ ಬರೆದ ಪತ್ರಗಳು – ಸೀತಾರಾಮ ಜಾಗೀರ್‌ದಾರ್ 228
23. ಸ್ವಾತಂತ್ರ್ಯಪೂರ್ವ ತುಳು ಸಾಹಿತ್ಯ – ಆರ್. ರಾಮಕೃಷ್ಣ 230
24. ಕಲ್ಲರಳಿ ಹೂವಾಯಿತು – ಆರ್. ರಾಮಕೃಷ್ಣ 234
25. ಒಂದಿಷ್ಟು ಲೋಕಾಭಿರಾಮ – ಬನ್ನಂಜೆ ಗೋವಿಂದಾಚಾರ್ಯ 236
26. ಕು. ಶಿ. ಹರಿದಾಸ ಭಟ್ಟರ ಅರ್ಥಶಾಸ್ತ್ರ ಮತ್ತು ಏರಿಯದ ಸಂಪತ್ತು – ನಿ. ಶ್ರೀಶ ಬಲ್ಲಾಳ 240
27. ಕಟ್ಟಿಂಗೇರಿ ಕೃಷ್ಣ ಹೆಬ್ಬಾರ – ಕಲೆ ಮತ್ತು ಬದುಕು – ಪಾದೇಕಲ್ಲು ವಿಷ್ಣು ಭಟ್ಟ 245

ರಶ್ಮಿ 4

ಸಾಧನೆ – ಸಿದ್ಧಿ

1. ಪ್ರೊ. ಕು. ಶಿ. ಹರಿದಾಸ ಭಟ್ಟ – ಪ್ರೊ. ಎಸ್. ಕೆ. ಶ್ರೀಪತಿ ಆಚಾರ್ಯ 253
2. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಮತ್ತು
ತುಳು ನಿಘಂಟು ಯೋಜನೆ – ಡಾ. ಯು. ಪಿ. ಉಪಾಧ್ಯಾಯ 259
3. ಸಿರಿವಂತಿಕೆಯ ಬದುಕಿನ ಹರಿಕಾರ – ಎನ್. ತಿರುಮಲೇಶ್ವರ ಭಟ್ಟ 269

ರಶ್ಮಿ 5

ಪಾಣಾರಾಟ – ಒಂದು ಧಾರ್ಮಿಕ ಆಚರಣೆ 273
– ಎ. ವಿ. ನಾವಡ

ಬಂಧುಗಳೊಡನೆ ಸಂದರ್ಶನ – ಎನ್. ಟಿ. ಭಟ್, ಎಚ್. ಕೆ. ಭಟ್ 285

ರಶ್ಮಿ 6

ವಿಶ್ವಮಾನವ

ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ – ಡಾ. ತೀ. ನಂ. ಶಂಕರನಾರಾಯಣ 297
ಕುಶಿಯಂಥವರು ಕುಶಿಯೊಬ್ಬರೆ – ಡಾ. ನಿ. ಮುರಾರಿ ಬಲ್ಲಾಳ 317
ವಿಶ್ವಮಾನವ – ಬಿ. ಆರ್. ನಾಗೇಶ್ 319
A Few Sidelights: Prof. Therese Joseph 323
Maximisation of Human Welfare: Prof. K. Ramadasa 326

ಅನುಬಂಧ – 1

ಪ್ರೊ. ಕು. ಶಿ. ಹರಿದಾಸ ಭಟ್ಟರ ಬರಹಗಳು 329

ಅನುಬಂಧ – 2

ಬರಹಗಾರರ ಬಳಗ 333



ಪತ್ರ ೧



ನಿವೇದನೆ

— ಕು.ಶಿ. ಹರಿದಾಸ ಭಟ್ಟ

೧ ಒಂದಾನೊಂದು ಕಾಲದಲ್ಲಿ

ಇದೊಂದು ನಿವೇದನೆ, ಆತ್ಮಚರಿತ್ರೆ ಅಲ್ಲ. ಹೇಳಿಕೊಳ್ಳುವಂಥ ಚರಿತ್ರೆ ನನಗೇನೂ ಇರುವುದಿಲ್ಲ. ಅನುಭವ – ನಾನು ಒಡಿಯಾಡುವ ಕ್ಷೇತ್ರಗಳಲ್ಲಿ – ಎಲ್ಲರಿಗೂ ಇರುವಷ್ಟೆ. ಸ್ಮರಣೆಯಲ್ಲಿಳಿದ ಅನುಭವ ಸಂಗ್ರಹವೇ ನನ್ನ ಕಥನದ ಮೂಲ ಬಂಡವಾಳ. ಬಹುಶಃ ಎಲ್ಲರಿಗೂ ಕರಗತವಾಗದ ಬರವಣಿಗೆ ನನಗೆ ಒಲಿದಿರುವುದರಿಂದ ನನ್ನ ಅನುಭವಗಳು ಲೆಕ್ಕಣಿಕೆಯ ಬಾಯಿಂದ ಹರಿದು ಬರುವುದು ಸುಲಭವಾಗಿದೆ. ನನ್ನ ಬಗ್ಗೆ ಹೇಳಿಕೊಳ್ಳುವುದು ನನಗೆ ಇಷ್ಟವಾದ ಕೆಲಸ ಅಲ್ಲ. ಮಿತ್ರರ ಒತ್ತಾಯ ರಿಜಿಸ್ಟ್ರಿಗೆ ಕಟ್ಟುಬಿದ್ದು ನಾನು ತೆರೆದು ಕೊಳ್ಳುತ್ತಿದ್ದೇನೆ – ಯಾರಿಗೆ ಉಪಕಾರವೋ ನಾನರಿಯೆ. ಇಂಥ ನಿವೇದನೆಗಳನ್ನು ನನಗಿಂತ ಮೊದಲು ಒಪ್ಪಿಸಿದವರಿರುವುದರಿಂದ ಈ ಸಂಪ್ರದಾಯ ಹೊಸತೇನೂ ಆಗಿಲ್ಲ. ಹುಟ್ಟಿದವನು ಬದುಕುತ್ತಾನೆ, ಉಸಿರಾಡುತ್ತಾನೆ. ಅದಕ್ಕೆ ನಿಲುಗಡೆಯಾಗುವ ವರೆಗೂ ಹೊರಗಿಂದ ಒಳಗಿಂದ ಅನುಭವಗಳಿಗೆ ಈಡಾಗುತ್ತಾನೆ. ಕೆಲವನ್ನು ತಾನೇ ಸಹಿಸಿಕೊಳ್ಳುತ್ತಾನೆ, ಕೆಲವನ್ನು ತನ್ನ ಸಂಸಾರ, ಹಿತೈಷಿಗಳು, ಸುತ್ತಲಿನ ಪರಿಸರ ಮತ್ತೆ ಸಮಾಜದೊಡನೆ ಹಂಚಿ ಉಣುತ್ತಾನೆ. ದೈನಂದಿನ ಜೀವನದಲ್ಲಿ, ಜೀವನೋಪಾಯದ ಹತ್ತು ಹಲವು ಹಾದಿಗಳಲ್ಲಿ, ಸಂದರ್ಭದಲ್ಲಿ ಏನೇನನ್ನೋ ಅಪೇಕ್ಷಿಸುತ್ತಾನೆ. ಸಿಕ್ಕಾಗ ಸಂತುಷ್ಟನಾಗಿ ಸಿಗದಿರುವಾಗ ನಿರಾಶನಾಗಿ ಬದುಕು ಮುಂದುವರಿಸುತ್ತಾನೆ.

'ಬದುಕು' ಎಂಬ ಮಾತನ್ನು ಕೆಲವರು ಜೀವನೋಪಾಯ, ಜೀವನಸಂಗ್ರಾಮ ಮುಂತಾದ ಐಹಿಕ ವಸ್ತು ವಿಷಯಕ್ಕೆ ಸಂಬಂಧಿಸಿದ್ದು ಎಂತಲೂ, 'ಬಾಳು' ಬದುಕಿನ ಒಟ್ಟರ್ಥ, ಪುರುಷಾರ್ಥ ಅಥವಾ ಮೌಲ್ಯಗಳಿಗೆ ಸಂಬಂಧಿಸಿದ್ದೆಂತಲೂ ವಿಂಗಡಿಸುವುದುಂಟು. ಬದುಕನ್ನು ಬಾಳು ಮಾಡುವುದು ಹೇಗೆಂಬುದೇ ನಮ್ಮ ಮೂಲಭೂತ ಸಮಸ್ಯೆ ಎನಿಸೀತು ಇಂಥ ವಿಂಗಡಣೆಯಿಂದ. ಅಲ್ಲಿಂದಲ್ಲಿಗೆ, ಆಗಿಂದಾಗ ಸಾಗಿಸುವುದು ಬದುಕು, ಆ ಬಳಿಕ ಸ್ಥಿರವಾಗಿ ನಿಲ್ಲುವುದು ಬಾಳು. ಶಬ್ದದ ಅರ್ಥವೇ ಬಾಳಿಕೆಗೆ ಸಂಬಂಧಿಸಿದ್ದು. ತನ್ನ ಹಿಂದಿನವರ ಬಾಳಿನ ಬೆಳಕಿನಲ್ಲಿ ದಾರಿಯನ್ನು ಸ್ಪಷ್ಟಪಡಿಸಿಕೊಳ್ಳುವುದೊಂದು, ತನ್ನ ಬಾಳಿನಲ್ಲಿ ಇತರ ದಾರಿಹೋಕರಿಗೆ ಬೆಳಕು ಕಾಣುವಂತೆ ಪ್ರಯತ್ನಿಸುವುದೊಂದು – ಪ್ರತಿಯೊಬ್ಬರಿಗೂ ಇದ್ದದ್ದೇ. ಸುತ್ತಣ ಸಮಾಜದ ನೆಮ್ಮದಿಯನ್ನು ಕಲಕದೆ ತಾವೂ ನೆಮ್ಮದಿಯಾಗಿ ಬಾಳಿ ನಾಲ್ಕು ಜನರಿಗುಪಕಾರ ಮಾಡಿ ಸಾರ್ಥಕವಾಗಿ ಬದುಕುತ್ತಿರುವ ಸಾವಿರಾರು ಎಲೆಮರೆಯ ಕಾಯಿಗಳು ಯಾವ ಆತ್ಮಕಥನವನ್ನೂ ಮಾಡದೆ ಮಾಯವಾಗುತ್ತಾರೆ. ಆದರೂ ನೆನಪಿನಲ್ಲುಳಿಯುತ್ತಾರೆ. ತಮ್ಮ ಸಂತೋಷಗಳನ್ನು ವೇದನೆಗಳನ್ನು ನಿವೇದಿಸಿಕೊಳ್ಳುವವರಾದರೋ ಅಕ್ಷರಸ್ಥ ಸಮಾಜದಲ್ಲಿ ತಮ್ಮ ಬಿತ್ತರಣೆಯನ್ನು ಓದಿಸಿಕೊಳ್ಳುತ್ತಾರೆ. ಪ್ರತ್ಯಕ್ಷ ಅನುಭವ ಸೀಮಿತ ಜನ ಸಮುದಾಯಕ್ಕೆ, ಪರೋಕ್ಷವಾದ್ದು ಹೆಚ್ಚು ವಿಸ್ತಾರವನ್ನು ಪಡೆಯಬಹುದು. ನನ್ನೀ ನಿವೇದನೆ ಪ್ರಕಟವಾಗದೆ ಹೋದಾಗಲೂ ಹಂಡರು ಪಿಕ್ಕಳ ನೆನಪಲ್ಲಿ, ನೆರೆಹೊರೆಯವರ ಸ್ಮರಣೆಯಲ್ಲಿ ಕೆಲಗಾಲ ಇದ್ದೇ ಇರುವಷ್ಟು ಪುಣ್ಯಕಾರ್ಯಗಳನ್ನು ನಾನು ಮಾಡಿದ್ದೇನೆ. ಇಷ್ಟೇ ಸಾಕಿತ್ತು, ಆದರೆ ಮಿತ್ರರು ಬಿಡುವುದಿಲ್ಲ. ಎಂತಲೇ ನಾನು ಸಾರ್ವಜನಿಕ ಸೊತ್ತಾಗುತ್ತಿದ್ದೇನೆ, ನನ್ನ ಅನುಭವಕ್ಕೆ ಬಹಿರಂಗದ ಒಂದು ಆಯಾಮ ಬರುತ್ತಿದೆ. ಇನ್ನು ನೆನಪಿನ ಕೋಶವನ್ನು ಅಗೆದು ತೆಗೆಯಬೇಕು, ಸ್ವಂತಕ್ಕೆ ಮಾತ್ರ ಉಪಯೋಗವೆಂದು ನಾನು ತಿಳಿದುಕೊಂಡ ಅಂಶಗಳನ್ನು ಬಯಲು ಮಾಡಬೇಕು. ಇದು ಅಹಂಕಾರದ ಪ್ರದರ್ಶನ ಆಗಬಾರದು, ಅತಿವಿನಯದ ಸೋಗೂ ಆಗಬಾರದು. ಎಷ್ಟು ವಸ್ತುನಿಷ್ಠವೋ ಅಷ್ಟು ಚರಿತ್ರೆಯ ನೋಟ ಇಲ್ಲಿರಬೇಕು. ಅದೆಷ್ಟೋ ಕಾಲಬಾಧಿತ ವಿಷಯಗಳು ಬರುತ್ತವೆ – ಈಗ ಇದನ್ನು ಅರಿಕೆ ಮಾಡಿದರೆ ಯಾರಿಗೆ ಬೇಕಾದೀತು ಎಂಬ ಸಂಶಯ. ನನ್ನ ಬದುಕಿಗೆ ಪೋಷಣೆ ನೀಡಿದ ಮಹನೀಯರು, ಆಸರೆಕೊಟ್ಟ ಸಮಾಜ, ಇವನ್ನ ಸ್ಮರಿಸಿ ಆಯಾ ಸಂದರ್ಭದಲ್ಲಿ ನನ್ನ ಕೃತಜ್ಞತೆ ಅರ್ಪಿಸಲು ಇದೊಂದು ಸುವರ್ಣ ಸಂದರ್ಭವೆಂದು ಭಾವಿಸಿ ನಾಲ್ಕು ಮಾತನ್ನ ವಿನೀತನಾಗಿ ನಿವೇದಿಸಿಕೊಳ್ಳುತ್ತೇನೆ; ಎಂದರೂ ಇದೂ ಏನೂ ಹೊಸದಲ್ಲ. ಈ ಹಿಂದೆ 1969ರಲ್ಲೊಮ್ಮೆ, 1974ರಲ್ಲೊಮ್ಮೆ ಎರಡು ಮಹೋತ್ಸವಗಳು ಜರಗಿದಾಗ ಅದರೊಳಗಿನ ಅನುಭವಾಮೃತವನ್ನು ನನ್ನ ಬದುಕಿನ ಬರಹವೆಂದೇ ನಾನು ತಿಳಿದು ಅದಕ್ಕೆ ಮೂರ್ತರೂಪ

ಕೊಟ್ಟೆ. ಚಿಕ್ಕ ದೊಡ್ಡ ಉತ್ಸವಗಳಲ್ಲಿಯೇ ಒಂದು ರೀತಿಯಲ್ಲಿ ನನ್ನ ಬದುಕನ್ನು ಅಳೆಯಲಾಗುತ್ತದೋ ಏನೋ: ಕಾಫೀ ಚಮ್ಚದಲ್ಲಿ ಟಿ. ಎಸ್. ಇಲಿಯಟನ ಕಾವ್ಯನಾಯಕನೊಬ್ಬ ಬದುಕನ್ನ ಅಳೆದುಕೊಂಡಂತೆ. ಉಡುಪಿಯ ದೇವರಾದ ಬಾಲಕೃಷ್ಣ, ಉತ್ಸವಪ್ರಿಯ. ದಿನಕ್ಕೊಂಭತ್ತು ಸಲ ಪೂಜೆ, ಕಾಲಾವಧಿ ಜಾತ್ರೆಗಳು. ಹರಕೆ ಉತ್ಸವಗಳು ಬೇರೆ. ವರ್ಷವಿಡೀ ಸದ್ದುಗದ್ದಲ ಆತನಿಗೆ ಬೇಕು; ನನಗೂ ಹಾಗೆಯೇ.

ಹುಟ್ಟಿದೆ

1924ನೆಯ ಇಸವಿಯ ಒಂದು ಏಕಾದಶೀ ದಿವಸ ನಾನು ಹುಟ್ಟಿದ್ದಂತೆ. ಅದೇನೂ ಅಂಥ ದೊಡ್ಡ ಉತ್ಸವ ಆಗಿರಲಾರದು. ಕಾರಣ, ನನಗಿಂತ ಎರಡು ವರ್ಷ ಮೊದಲು ನನ್ನ ಅಕ್ಕ, ಅದಕ್ಕೂ ನಾಲ್ಕಾರು ವರ್ಷ ಮೊದಲು ನನ್ನ ಅಣ್ಣ ಹುಟ್ಟಿದ್ದ. ನಾನು ಹುಟ್ಟುವುದಕ್ಕೆ ಹತ್ತು ವರ್ಷ ಹಿಂದೆಯೇ ನನ್ನ ತಂದೆ ಗದುಗಿನಲ್ಲಿ ತನ್ನ ತಮ್ಮನೊಡಗೂಡಿ ಒಂದು ಚಹದಂಗಡಿ ಪ್ರಾರಂಭ ಮಾಡಿದ್ದರು. ಹೋಟಲುದ್ಯಮದ ಮೂಲ ಪುರುಷರಲ್ಲಿ ನಮ್ಮ ತಂದೆ ಕೂಡ ಒಬ್ಬರು. ಗದುಗಿನ ಸ್ಟೇಶನ್ ರೋಡಿನ ಬಳಿ ಅವರು ಪ್ರಥಮ ಮಹಾಯುದ್ಧದ ಕಾಲದಲ್ಲಿ ಸ್ಥಾಪಿಸಿದ ಅಂಗಡಿ ಸ್ಥಳಾಂತರ ಮಾಡಿ ಮಹಡಿ ಅಂಗಡಿ ಎನಿಸಿ ಪ್ರಸಿದ್ಧವಾಯಿತು. ಮತ್ತೊಮ್ಮೆ ಸ್ಥಳಾಂತರಿಸಿಕೊಂಡು ಗದಗ ರೆಸ್ಟೋರೆಂಟ್ ಆಗಿ ಇನ್ನೂ ಗದುಗಿನ ನಾಗರಿಕರ ಸೇವೆಯಲ್ಲಿ ನಿರತವಾಗಿದೆ. ಎರಡು ಚಹದ ಪೆಟ್ಟಿಗೆಗಳ ಮೇಲೆ ಇರಿಸಿದ ಹಲಗೆಯೇ ಸೀಟು. ಚಹ ಮಾಡುವವರೂ ಕೊಡುವವರೂ ಒಬ್ಬರೇ ಇರುತ್ತಿದ್ದ ಆ ಕಾಲದಲ್ಲಿ ಈ ಉದ್ಯಮ ಬರೇ ಜೀವನೋಪಾಯವಾಗಿತ್ತು. ಆದರೆ ಯುದ್ಧ ಮುಗಿದ ಮೇಲೆ ಮಂದೀಯ ಯುಗದಲ್ಲಿಯೂ ಸಾಹಸಿಗಳಾದ ನಮ್ಮ ಹಿರಿಯರಿಬ್ಬರು ಧೈರ್ಯದಿಂದ ಮುನ್ನಡೆದು ಮಹಡಿಯುಳ್ಳ ಒಂದು ಕಟ್ಟಡದಲ್ಲಿ ವ್ಯಾಪಾರ ತೊಡಗಿದರು. ಅಲ್ಲಿಂದ ಮುಂದಿನ ಕೆಲವೇ ವರ್ಷಗಳಲ್ಲಿ ಹುಬ್ಬಳ್ಳಿಯ ದುರ್ಗದಬೈಲಿನಲ್ಲಿ ಇನ್ನೊಂದು ಅಂಗಡಿಯನ್ನು ತೆರೆದುದರಿಂದ ನಮ್ಮ ಕುಟುಂಬದ ದಟ್ಟದಾರಿದ್ರ್ಯ ಕೊಂಚ ಮರೆಯಾಯಿತು. ಹುಲ್ಲು ಹೊದಿಸಿದ ಮನೆಗೆ ಹಂಚಿನ ಚಾವಣಿ ಏರಿತು. ಉಡುಪಿಯ ಕುಂಜಿಬೆಟ್ಟಿನಲ್ಲಿ ಶಿವಗೋಪಾಲಭಟ್ಟರೂ, ಶಿವ ಅನಂತ ಭಟ್ಟರೂ ತಕ್ಕ ಮಟ್ಟಿನ ಗಟ್ಟಿ ಕುಳಗಳೆಂದು ಪರಿಗಣಿತರಾದರು. ನನ್ನ ತಂದೆ ಶಿವಗೋಪಾಲ ಭಟ್ಟರು ಊರು ಬಿಟ್ಟು ಭವಿಷ್ಯ ನಿರ್ಮಾಣಕ್ಕಾಗಿ ಗದುಗಿಗೆ ಹೋಗುವ ಮೊದಲು ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಎರಡು ರೂಪಾಯಿ ಸಂಬಳದಲ್ಲಿ ಪಾಕಶಾಲೆಯ ಕೆಲಸದಲ್ಲಿದ್ದರು. ಅವರು ಬೇರೆ ಯಾವ ಶಾಲೆಯ ಮುಖ ಕಂಡವರೂ ಅಲ್ಲವಾದರೂ ದುಡಿಮೆಯಲ್ಲಿ ನಿಷ್ಣಾತರು, ಪ್ರಾಮಾಣಿಕರು. ಬಡಜನರ ಮೇಲೆ ತುಂಬಾ ಕರುಣೆಯುಳ್ಳವರು ಎಂದು ಹೋದಲ್ಲೆಲ್ಲ ಹೆಸರು ಮಾಡಿದರು. ಉಡುಪಿಯ ಕೃಷ್ಣ ಮಠದಲ್ಲಿ ಕೆಲಸಕ್ಕೆ ಸೇರಿದಾಗಲೆ ಅವರು ಸುಬ್ರಹ್ಮಣ್ಯ ಸ್ವಾಮಿಗಳೊಡನೆ ಅಖಿಲ ಭಾರತ ಪ್ರವಾಸ – ನಡಿಗೆ ಮತ್ತೆ ರೈಲು ಮೂಲಕ – ಮಾಡಿದ್ದರಿಂದ ಅವಿದ್ಯಾವಂತರಾದರೂ ಅವರ ಲೋಕಜ್ಞಾನ ಪರ್ಯಾಪ್ತವಾಗಿತ್ತು. ಉಡುಪಿಯ ಸ್ವಾಮಿಗಳಂತೆ ತುಳುವಿನಲ್ಲಿ ತಮ್ಮ ದಸ್ಕತ್ತು ಹಾಕುವಷ್ಟು ಅವರು ಅಕ್ಷರಸ್ಥರಾಗಿದ್ದರು. ತಮ್ಮನಾದ ಅನಂತ ಭಟ್ಟರು (ನನ್ನ ಚಿಕ್ಕಪ್ಪ) ಅವರಿಗಿಂತ ಹೆಚ್ಚು ಅಕ್ಷರಬಲ್ಲವರು; ಎರಡು ಮೂರು ಕ್ಲಾಸು ಮಾಡಿರಬೇಕು. ಕನ್ನಡದಲ್ಲಿ ಪತ್ರ ಬರೆಯುವಷ್ಟು ಮುಂದೆ ಸಾಗಿದ್ದರು. ಸಂಯುಕ್ತ ಕರ್ನಾಟಕದ ಶಿರೋನಾಮೆ ಓದಿ ತೃಪ್ತರಾಗುವಷ್ಟು ಕುತೂಹಲಿಗಳಾಗಿದ್ದರು. ಸಾಲದ್ದಕ್ಕೆ ತುಂಬಾ ರಸಿಕರು ಕೂಡ – ಪಿಟೀಲು ವಾದನದ ಕೆಲವು ಪಾಠ ಮಾಡಿಸಿ ಕೊಂಡು ಬೇಸರ ಕಳೆಯಲು ರಾತ್ರಿ ಹೊತ್ತು ಅವರು ಪಿಟೀಲು ಹಿಡಿಯುತ್ತಿದ್ದರು. ಪಾಠದ ಮೊದಲ ಎರಡು ಹಾಡಿನ ಹೊರತು ಮೂರನೇಯದು ಅಲ್ಲಿ ಹೊರಡದಿದ್ದರೂ ತನ್ಮಯರಾಗಿ ಬಾರಿಸುತ್ತಿದ್ದರು. ನಮ್ಮ ತಂದೆಗೋ ನಾಟಕದ ಹುಚ್ಚು. 20ನೇ ದಶಕದಲ್ಲಿ ಗದುಗು ಗರೂಡ ಸದಾಶಿವರಾಯರು, ವಾಮನರಾವ್ ಮಾಸ್ತರರು ಮುಂತಾದವರ, ನಾಟಕಗಳ ಪ್ರದರ್ಶನಕ್ಕೆ ಹೆಸರಾಂತ ತಾಣವಾಗಿತ್ತಷ್ಟೆ. ನಮ್ಮ ತಂದೆ ತನ್ನ ವೃದ್ಧಾಪ್ಯದಲ್ಲೂ ತನ್ನ ನಾಟಕಪ್ರಿಯತೆ ಕಳೆದುಕೊಳ್ಳಲಿಲ್ಲ. ಅವರ ಜತೆಗೆ ಉಡುಪಿಯಲ್ಲಿ ವಾಮನ್ ರಾವ್ ಮಾಸ್ತರರ ನಾಟಕವೇ ನಾನು ನೋಡಿದ ಮೊದಲ ನಾಟಕ. ಪರದೆ ಮಡಿಸಿಕೊಂಡು ಹೋಗುವುದನ್ನು ಇಳಿಯುವುದನ್ನು ನೋಡಿ ಬೆಕ್ಕಸ ಬೆರಗಾದ್ದು ಈಗಲೂ ಅಚ್ಚಳಿಯದೆ ನನ್ನಲ್ಲಿ ಉಳಿದಿದೆ.

ನಾನು ಹುಟ್ಟಿದ್ದು ಒಂದು ಅಗ್ರಹಾರದಲ್ಲಿ ಎಂದು ಹೇಳಿದರೂ ಹೇಳಬಹುದು. ವಠಾರದ ಹತ್ತೆಂಟು ಮನೆಗಳು ಬ್ರಾಹ್ಮಣರದ್ದು ಮಾತ್ರವಲ್ಲ, ನಮ್ಮ ಸಮೀಪ ಬಂಧುಗಳದ್ದೇ ಆಗಿತ್ತು. ಬಾಲ್ಯದ ಮಂಜು ಮುಸುಕಿದ ನೆನಪಿನಲ್ಲಿ ಈ ಎಲ್ಲ ಮನೆಗಳಿಗೂ ಮುಳಿಹುಲ್ಲಿನ ಅಥವಾ ಭತ್ತದ ಹುಲ್ಲಿನ ಮಾಡೇ ಗತಿ. ನಾನು ಹುಟ್ಟಿದ ಮನೆಯೂ ಒಂದು ಅಂಥಾದ್ದೇ, ಆದರೂ ಅದರ ಭೌಗೋಲಿಕ ಉನ್ನತಿಯಿಂದ ಅದು ಮೇಲ್ಮನೆ (ಮಿತ್ತ ಇಲ್ಲ್) ಎಂದು ಬಿರುದು ಪಡೆದಿತು. ಅಣ್ಣ ತಮ್ಮ ಇಬ್ಬರೂ ಬಹುಕಾಲ ಜತೆಗಿದ್ದು ಹುಬ್ಬಳ್ಳಿಯ ವ್ಯಾಪಾರ ಕುದುರಿದ ಮೇಲೆ ಇನ್ನೊಂದು ಮನೆ ಕಟ್ಟಿದರು. ಹೊಸ ಮನೆಗೆ ನಾವು ಅಂದರೆ ಅಣ್ಣನ ಕುಟುಂಬ

ನಾಲ್ಕು ಹೆಜ್ಜೆ ವಲಸೆ ಹೋದರೆ ಚಿಕ್ಕಪ್ಪ ಮುಳಿಮನೆಯಲ್ಲೇ ಕೆಲವರ್ಷ ಇದ್ದೇ ತರುವಾಯ ಅದನ್ನು ಹಂಚಿನ ಮನೆ, ಉಪ್ಪರಿಗೆ ಮನೆಯಾಗಿ ಪರಿವರ್ತಿಸಿಕೊಂಡು ತಮಗೆ ಮಕ್ಕಳಿಲ್ಲದಿದ್ದುದರಿಂದ ಅಣ್ಣನಮಕ್ಕಳನ್ನೇ ತನ್ನವರೆಂದು ಹಾರ್ದಿಕವಾಗಿ ತಿಳಿದು ದಿನಗಳೆದರು. ನಮ್ಮೆರಡು ಮನೆಗಳ ಕೆಳಗಡೆ ಇದ್ದ ನಮ್ಮದಾಯವಾದಿಗಳ ಮನೆಗಳಿಗೆ ಕೆಳಗಿನ ಮನೆ (ಸಿತ್ತ ಇಲ್ಲ್) ಎಂದೇ ಹೆಸರು. ಅವರ ಆರ್ಥಿಕ ಸ್ಥಿತಿ ನಮ್ಮ ಬಡತನಕ್ಕಿಂತಲೂ ದಾರುಣ ಎಂದುದಾಗಿತ್ತು. ಮೂಲದಲ್ಲಿ ನಾವಿಬ್ಬರೂ ಒಂದೇ ಕುಟುಂಬಕ್ಕೆ ಸೇರಿದರೂ ಅವರು ಉಪಾಧ್ಯರೆಂದೂ ನಾವು ಭಟ್ಟರೆಂದೂ ಆಗಲು ಕಾರಣವಿದೆ.

ನಮ್ಮ ಕುಟುಂಬದ ಮೂಲಪುರುಷ ಶಿವಯ್ಯ ಮೂಲತಃ ಉಡುಪಿಯವರಲ್ಲ; ಅವರು ಕೋಟದವರು. ನೀಲಾವರದಲ್ಲಿ ನಮ್ಮ ಕುಲದೇವರು. ಶಿವಯ್ಯನಂಥ ಕೋಟಸ್ಥರನ್ನು ಉಡುಪಿ ಆಕರ್ಷಿಸಲು ಪ್ರಬಲ ಕಾರಣ ಉಡುಪಿಯ ಕೃಷ್ಣ ಮಠದಲ್ಲಿ ಸಿಗುತ್ತಿದ್ದ ಧರ್ಮಾರ್ಥ ಊಟ. ಅದಕ್ಕೆ ಹಕ್ಕು ಪಡೆಯಲು ಸುಲಭದ ಉಪಾಯವನ್ನು ನಮ್ಮ ಮುತ್ತಾತ ಹುಡುಕಿ ತೆಗೆದರು – ಶಿವಭಕ್ತಿಗೆ ತಿಲಾಂಜಲಿ ಕೊಟ್ಟು ವಿಷ್ಣು ಭಕ್ತರಾದರು. ಮುದ್ರಾಧಾರಣ ಮಾಡಿಸಿಕೊಂಡು ಉಡುಪಿಯ ಮಾಧ್ವಬ್ರಾಹ್ಮಣರಾಗಿ ಊಟಕ್ಕೆ ಅರ್ಹತೆ ಸಂಪಾದಿಸಿದ್ದರಿಂದ ನಾವೆಲ್ಲ ಬದುಕುವಂತಾಯಿತು. ಒಂದು ಸಲದ ಊಟಕ್ಕೆ ತತ್ವಾರ ಎನಿಸಿರುತ್ತಿದ್ದ ಕೋಟದ ಯಾವುದೋ ಮೂಲೆಯಿಂದ ಉಡುಪಿ ಸೇರಿ ಊಟದ ಗ್ಯಾರಂಟೀ ಮಾಡಿಸಿಕೊಂಡ ನಮ್ಮ ಮುತ್ತಾತನ ಹೆಸರನ್ನು ನಾವು ಮರೆಯದೆ ನಮ್ಮ ನಿಜನಾಮದ ಹಿಂದೆ ಸೇರಿಕೊಂಡಿದ್ದೇವೆ. ನನ್ನಪ್ಪ ಶಿವನಾರಾಯಣ, ನನ್ನಪ್ಪ ಶಿವಗೋಪಾಲ, ನಾನು ಶಿವ ಹರಿದಾಸ, ಹರಿ ಹರಭೇದವನ್ನು ಅಳಿಸಿ ನಮ್ಮನ್ನುಳಿಸಿದ ಆ ಹಿರಿಯರಿಗೆ ನಮೋನಮಃ. ಶಿವಯ್ಯನಿಂದ ಹುಟ್ಟಿದ ಎರಡನೇ ಕವಲು ಮಾತ್ರ ವೇದಾಧ್ಯಯನಕ್ಕೆ ಮನಸೋತು 'ಉಪಾಧ್ಯ' ಗಿರಿಗೇರಿದರೂ ಬಡತನ ಅವರ ಬೆನ್ನುಬಿಡಲೇ ಇಲ್ಲ. ಅವರೂ ಮಾಧ್ವರಾದ್ದರಿಂದ ಊಟದ ಅರ್ಹತೆ ಅವರಿಗೂ ಬಂತು. ನಮ್ಮ ತಂದೆಯ ಓರಗೆಯವರಾದ ಈ ಮೂವರು ಸಹೋದರರು – ಒಂದು ದೃಷ್ಟಿಯಿಂದ ಅಪೂರ್ವ ಸಹೋದರರು – ಒಬ್ಬರು ಮಠದಲ್ಲಿ ಕೊಟ್ಟಾರಿಗಳೆನಿಸಿದರು, ಎರಡನೆಯವರು ಚಿಟ್ಟೆ ಅಡಿಗೆಗೆ ಖ್ಯಾತರಾದರು. ಮೂರನೆಯವರು ಬಣ್ಣದ ರಾಮಣ್ಣ ನೆನಿಸಿಕೊಂಡರು, ದಾರಿದ್ರ್ಯದ ಚಿತ್ರ ನನ್ನ ಕಣ್ಣ ಮುಂದೆ ಇರುವಷ್ಟೇ ನಿಚ್ಚಳವಾಗಿ ಆವಂದಿನ ತಲೆಮಾರಿನ ಜನರ ಸಹನಾಗುಣ, ಔದಾರ್ಯ ಹಾಗೂ ಅಸಾಧ್ಯ ಅಲ್ಪತೃಪ್ತಿ ಇಂದು ಸಿಗಲಾರದ ಅನರ್ಘ ವಡವೆಯಾಗಿದೆ. ಕೆಳಗಿನ ಮನೆಯ ಬಾವಿಯನ್ನು ತೋಡಿದವರು ಯಾರೂ ಕೆಲಸಗಾರರಲ್ಲ, ಈ ಸಹೋದರರೇ ಅಂತೆ. ಬಾವಿಗೆ ಬೇಕಾದ ಹುರಿ ಹಗ್ಗವನ್ನು ಕೊರಳಿಗೆ ಹಾಕುವ ಜನಿವಾರ ನೇಯುವಂತೆಯೇ ನೇಯಬಲ್ಲರು. ತೆಂಗಿನ ಮರಗಳಿಗೆ ನೀರು ಬಿಡುವವರು, ಕಾಯಿ ಕೊಯ್ಯುವವರು ಅವರೇ. ಒಂದೂಟ ಮಠದಲ್ಲಿ ಮಾಡಿದರೆ ಎರಡನೆಯ ರಾತ್ರಿಯ ಊಟ ಇಲ್ಲವೆಂದರೂ ಸರಿಯೇ. ಎಲ್ಲದರಲ್ಲೂ ಸ್ವಾವಲಂಬಿಗಳು. ಯಾರ ಮೇಲೂ ಕರುಬಿದವರಲ್ಲ; ಯಾಚನೆ ಮಾಡಿದವರಲ್ಲ, ಯಾವುದಕ್ಕೂ ಆಸೆಪಟ್ಟವರಲ್ಲ – ಜೀವನಪರ್ಯಂತ.

ಅಪೂರ್ವ ಸಹೋದರರಲ್ಲಿ ಅತ್ಯಂತ ಕಿರಿಯ ರಾಮಣ್ಣ ಉಪಾಧ್ಯಾಯರು ತಿರುವಾಂಕೂರಿಗೆ ಹೋಗಿ ಚಿತ್ರ ಬಿಡಿಸುವ ಕಲೆ ಕಲಿತುಕೊಂಡು ಬಂದರು. ರವಿವರ್ಮನ ಚಿತ್ರಗಳ ತದ್‌ಪ್ರತಿ ಉಡುಪಿಯ ಕೃಷ್ಣಮಠದ ಹೆಬ್ಬಾಗಿಲಲ್ಲಿ ಮೊದಲಿಗೆ ಬಿಡಿಸಿದವರು ಅವರೇ. ಫೋಟೋಗ್ರಾಫಿಯೂ ಬರುತ್ತಿತ್ತು ಅವರಿಗೆ. ಅವರ ಬಗ್ಗೆ ಅನೇಕ ಕಥೆಗಳ ಪೈಕಿ ಒಂದು ಸ್ವಾರಸ್ಯವಾಗಿದೆ. ಸ್ಫುರದ್ರೂಪಿಯಾದ ಅವರಿಗೆ ನನ್ನ ಸೋದರತ್ತೆಯ ಮಗಳನ್ನು ಕೊಟ್ಟು ಮದುವೆ ಆಯಿತಂತೆ. ಕರಿ ಹುಡುಗಿಯನ್ನು ಮಾಲೆ ಹಾಕಿ ಮದುವೆಯಾದರೂ ಪ್ರಸ್ತದ ದಿನ ವರನನ್ನು ಹುಡುಕಲು ಹೊರಟರಂತೆ. ವರಮಹಾಶಯ ನಡುಗತ್ತಲಲ್ಲೆ ಮನೆಯ ಮುಂದಿನ ಅಡಿಕೆ ಮರದಲ್ಲಿ ತಲೆತಪ್ಪಿಸಿಕೊಂಡು ಕೂತಿದ್ದನಂತೆ. ಹಗ್ಗ ಹಾಕಿ ಆತನನ್ನು ಹಿಡಿದೆಳೆದು ತಂದದ್ದರ ಫಲವಾಗಿ ಒಬ್ಬ ಸತ್ಪುತ್ರನುದಿಸಿದ ಮೇಲೆ ರಾಮಣ್ಣ ಮರಳಿ ಬ್ರಹ್ಮಚಾರಿಯಾಗಿ ಬಿಟ್ಟರಂತೆ. ಅವರು ತುಂಬಾ ಕರಕುಶಲಿಗಳು, ಕಟ್ಟಡದ ಕೆಲಸ, ವಾಸ್ತು ಇತ್ಯಾದಿ ಮಾಹಿತಿ ಉಳ್ಳವರು.

ಸೋದರಿಕೆಯ ಸಂಬಂಧವುಳ್ಳ ಇನ್ನೊಂದು ಪರಿವಾರದ ಕಥೆಯನ್ನು ಇಲ್ಲಿ ಹೇಳಲೇಬೇಕು. ಇವರು ನಮ್ಮ ಕೆಳಗಿನ ಮನೆಗೆ ಹಿಂದುಗಡೆ ಬಯಲುಸಾಲಿಗೆ ಒತ್ತಿಕೊಂಡಿರುವ ಗುಡಿಸಲಲ್ಲಿ ವಾಸಮಾಡುತ್ತಿದ್ದ ಒಂದು ಭಟ್ಟ ಕುಟುಂಬ. ಅಲ್ಲಿ ನಾನು ಹುಟ್ಟುವ ವೇಳೆಗೆ ರಾಮಕೃಷ್ಣ ಭಟ್ಟ ಮತ್ತು ದಾಸಭಟ್ಟ ಎಂಬಿಬ್ಬರು ಸೋದರರು. ಇವರಲ್ಲಿ ಹಿರಿಯನಿಗೆ ನಮ್ಮ ತಂದೆ ಹೋಟೆಲು ಚಾಕರಿಯ ದೀಕ್ಷೆ ಕೊಡಿಸಿದರು. ಹುಬ್ಬಳ್ಳಿಗೆ ಕರೆದುಕೊಂಡು ಹೋದರು. ಎರಡನೆಯವನು ರಾಮಣ್ಣನಂತೆ ಕಲೆಯನ್ನರಸಿಕೊಂಡು ತಿರುವಾಂಕೂರಿಗೆ ಹೋಗಿ ಸಿನೆಮಾ ಯಂತ್ರವನ್ನು ನಿರ್ವಹಿಸಲು ಕಲಿತುಕೊಂಡು ಬಂದು ಸ್ವಲ್ಪ ಸಮಯ ಉಡುಪಿಯ ಪ್ರಥಮ ಮೂಕಿ ಹಾಗೂ ಟಾಕಿಯಲ್ಲೂ ಆಪರೇಟರ್ ಆದರು. ಸಿನಿಮಾ ಥೇಟರು ದಿವಾಳಿ ಎದ್ದಮೇಲೆ ಹಾರ್ಮೋನಿಯಂ ಮಾಸ್ಟರ್ ಆದರು, ಅಂಬಾಪ್ರಸಾದಿತ ಕಂಪೆನಿ ಸೇರಿ ಕಾಮೆಡಿಯನ್ ಆದರು, ಮತ್ತೆ ಹಾರ್ಮೋನಿಯಂ ಹಿಡಿದರು, ಉಡುಪಿಯಲ್ಲೇ ಒಂದು ಶ್ರೀಕೃಷ್ಣ ಪ್ರಸಾದಿತ ಎಂಬ ನಾಟಕ ಕಂಪೆನಿ ತೆಗೆದಾಗ ಅದರಲ್ಲಿ ಮುಖ್ಯ ಕಾಮೆಡಿಯನ್ ಪಾತ್ರನಿರ್ವಹಿಸಿದರು.

ಆ ಕಂಪೆನಿ ದಿವಾಳಿ ತೆಗೆಯುವವರೆಗೂ ಸೇವೆ ಸಲ್ಲಿಸಿ ಮನೆಗೆ ಮರಳಿದರು. ರಂಗದ ಮೇಲೂ ಹಾಸ್ಯದ ಬದುಕಿನಲ್ಲೂ ಹಾಸ್ಯ ನಟನಂತೆಯೆ ವರ್ತಿಸುತ್ತಿದ್ದ 'ದಾಸ'ನ ಮೇಲೆ ನನ್ನ ತೀರ್ಥರೂಪರಿಗೆ ಅಪಾರ ಪ್ರೇಮ. ನನಗಿನ್ನೂ ನೆನಪಿದೆ – ಸೊಳ್ಳೇಬೈಲಿನಲ್ಲಿ ದಾಸನಿಗೆ ಮಲೆಜ್ವರವೆಂಬ ಸುದ್ದಿ ಕೇಳಿದ ತಕ್ಷಣ ತನ್ನ ದಮ್ಮಸ್ಸು ಲೆಕ್ಕಿಸದೆ ಸೊಳ್ಳೇಬೈಲಿನ ವರೆಗೆ ಬಸ್ ಪ್ರಯಾಣ ಮಾಡಿ ಪ್ರೀತಿಯಿಂದ ಆತನನ್ನು ಕರೆತಂದು ಉಪಚರಿಸಿದ್ದು. ಇಬ್ಬರೂ ಕೂತು ಎಲೆಅಡಿಕೆ ಮೆಲುವಾಗ ಅದೇ ಅದೇ ಹಳೇ ನಾಟಕದ ಸುದ್ದಿಗಳನ್ನು ಮೆಲುಕು ಹಾಕುವರು. ದಾಸನ ಅಣ್ಣ ಇನ್ನೊಂದು ಥರದ ಮನುಷ್ಯ. ಈತನಿಗೆ ಅನೇಕ ಖಯಾಲಿಗಳು. ಹುಬ್ಬಳ್ಳಿಯಲ್ಲಿ ಕಲಿತಂಥ ಚಾಳಿಗಳೂ ಕೆಲವು (ಉದಾ : ಗಾಂಜಾ). ಅವನ್ನು ಈತ ಕೊನೆತನಕ ವಿಸರ್ಜನೆ ಮಾಡಲಿಲ್ಲ. ಈತನಿಗೂ ಕಲೆಯ ಸೋಂಕು ತಗಲಿತ್ತು. ಉಡುಪಿಯ ಜಾತ್ರೆಯ ಸಂದರ್ಭದಲ್ಲಿ ಒಂದು ಸಾರಿ ಈತನ ಸಾರ್ವಜನಿಕ ಮ್ಯಾಜಿಕ್ ಶೋ – ಭೀಮನಕಟ್ಟೆ ಮಠದ ಒಳಸುತ್ತಿನಲ್ಲಿ. ಪ್ರೇಕ್ಷಕರು ನಾವೇ ಕೆಲವು ಮಕ್ಕಳು. ಬ್ಯಾಂಡುವಾಲಗ ಬಾರಿಸಿದರೂ ಯಾರೂ ಟಿಕೇಟು ಕೊಂಡು ಒಳಗೆ ಬಂದಿರಲಿಲ್ಲ. ಈ ನಡುವೆ ಶೋ ಪ್ರಾರಂಭವಾಯಿತು. ಸೀಮೆಎಣ್ಣೆ ಡಬ್ಬಿಯಿಂದ ಬಣ್ಣಬಣ್ಣದ ಕರವಸ್ತ್ರಗಳನ್ನು ತೆಗೆದದ್ದಾಯಿತು, ಚೆಂಡು ಮಾಯ ಮಾಡಿದ್ದಾಯಿತು. ಅಷ್ಟಕ್ಕೆ ರಾಮಕೃಷ್ಣನಿಗೆ ಬೆವರು ಹರಿಯ ತೊಡಗಿತು. ಹಿಂದುಸ್ತಾನಿ ಮಾತು ತೊದಲತೊಡಗಿತು. ಕಾರಣ ನನ್ನ ತೀರ್ಥರೂಪರು ಹಿಂದಿನಿಂದ ಒಂದು ಪ್ರೇಕ್ಷಕ ಸ್ಥಳದಲ್ಲಿ ನಿಂತು ಬಿಟ್ಟಿದ್ದರು. ಅವರ ಮೇಲೆ ರಾಮಕೃಷ್ಣನಿಗೆ ನಾನಾತರದ ಭಕ್ತಿ, ಗುರುಭಕ್ತಿ, ಪಿತೃಭಕ್ತಿ. ಅಲ್ಲದೆ ಹೆದರಿಕೆ ಬೇರೆ. ನಮ್ಮ ಹುಬ್ಬಳ್ಳಿಯ ಅಂಗಡಿ ಮುಚ್ಚುವುದರಲ್ಲಿ ಈತನದು ಸಿಂಹಪಾಲಿದೆ ಎಂದು ನಮ್ಮ ಹಿರಿಯರು ಹೇಳಿದರೂ ಆತನ ಮೇಲೆ ಕನಿಕರವೇ ವಿನಾ ಕೋಪವಿರಲಿಲ್ಲ. 'ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ದೇವಾ?' ಈ ಪ್ರಶ್ನೆಯನ್ನು ನನ್ನ ತಂದೆ ಯಾವಾಗಲೂ ಮರೆಯಲಿಲ್ಲ. ನಮ್ಮ ಕುಟುಂಬದ ಇಳಿತದ ಕಾಲದಲ್ಲಿ ಸಂಜೆಯಾಗುತ್ತಲೇ ಈ ಸಾಲನ್ನು ಗಟ್ಟಿಯಾಗಿ ಹೇಳಿ ಮನಸ್ಸನ್ನು ಹದಗೊಳಿಸುತ್ತಿದ್ದರು.

ರಾಮಕೃಷ್ಣ ಹೋಟಲುದ್ಯಮಕ್ಕೆ ಸೇರಿಕೊಂಡ ಮೇಲೂ ಅವರ ಮನೆಯ ಬಡತನ ತೊಲಗಲಿಲ್ಲ. ಮರಳಿಮಣ್ಣಿಗೆಯ ಮೊದಲ ಭಾಗದಲ್ಲಿ ರಾಮೈತಾಳರ ಮನೆಯು ಬಡತನ ಯಾನೆ ಚುನಾಯಿಸಿಕೆಯಿಂದ ಜೀವನ ನಡೆಸಬೇಕಾದ ಕಡ್ಡಾಯವಿರುವ ಈ ಮನೆಯನ್ನ ನಮ್ಮ ಅಗ್ರಹಾರದ ಪ್ರಾತಿನಿಧಿಕ ಮನೆಯೆಂದು ಗ್ರಹಿಸಬಹುದು. ತಾಯಿ, ಅಕ್ಕ ವಿಧವೆಯರು – ಯಾವಾಗಲೂ ಮಠದ ಭೋಜನ ಶಾಲೆಗೆ ಹೋಗಿ ಉಂಡು ಬರಬೇಕು. ಬಂದ ಮೇಲೆ 2½ ಮೈಲು ದೂರ ಬಿಸಿಲಲ್ಲಿ ಮಳೆಯಲ್ಲಿ ನಡೆದುಕೊಂಡು ಹೋಗಿ ಅಡುಗೆಗೆ ಬೇಕಾದ ಕಟ್ಟಿಗೆಯನ್ನು ಕುಂಡಲಕಾಡಿಂದ ಹೊತ್ತು ತರಬೇಕು. ಒಮ್ಮೊಮ್ಮೆ ಕಟ್ಟಿಗೆಯ ಜತೆಗೆ ತಲೆಗೆ ಹಾಕುವ 'ಕುಳಾವು' ಪುಡಿ ಮಾಡಲು ಕುಳಾವು ಎಲೆಗಳನ್ನು ತರಬೇಕು. ಆ ಎಲೆಯನ್ನು ಒಣಗಿಸಿ ತಿಂಗಳಿಗೊಮ್ಮೆ ಒನಕೆಪೆಟ್ಟಿನಿಂದ ನಯ ವಾಗಿ ಪುಡಿ ಮಾಡಿ ಮಾರಿದರೆ ಕೈಗೆ ಎರಡು ಪುಡಿಕಾಸು ಸಿಗುತ್ತದೆ. ಒಂದು ಸೇರು ಕುಳಾವಿಗೆ ಎರಡಾಣೆ ದರ. ಅಕ್ಕಿ ಮುಡಿಗೆ 3 ರೂಪಾಯಿಯಾದರೂ ರೂಪಾಯಿ ನಾಣ್ಯ ದುರ್ಲಭವಾದ್ದರಿಂದ ಬಾಯಿ ಕಟ್ಟಿಕೊಂಡೇ ಬದುಕು ವುದನ್ನು ಕಲಿತಿದ್ದ ಈ ಮಹಿಳೆಯರನ್ನು ಎಣಿಸುವಾಗ ಮನಸ್ಸೋಯುತ್ತದೆ.

ದಾಸಭಟ್ಟರು ನನ್ನ ತಂದೆಗೆ ಸೋದರತ್ತೆಯ ಮಗ. ಅವರ ಮನೆ ನಮ್ಮ ನಿತ್ಯದ ಅಡುಂಬೊಲ. ಮಳೆಗಾಲದಲ್ಲಿ ಮಡ್ಕಳಸಾರು (ಒಂದು ಸಣ್ಣ ತೊರೆ) ಉಕ್ಕಿ ಹರಿಯುವಾಗ ಅವರ ಮನೆ ಬಾಗಿಲವರೆಗೂ ನೆರೆನೀರು ನಿಂತು ನೀರಾ ಟಕ್ಕೆ ಪ್ರಶಸ್ತವಾದ ಸ್ಥಳವಾಗುತ್ತಿತ್ತು. ಉಳಿದ ಕಾಲದಲ್ಲಿ ದಾಸಭಟ್ಟರ ಚಟಾಕಿಗಳನ್ನು – ಪಟಾಕಿಗಳನ್ನು ಕೇಳುವ ಸಂತೋಷಕ್ಕಾಗಿ ಮೇಲ್ಮನೆ ನೆರೆಮನೆಗಳಿಂದ ಎಲ್ಲರೂ ಅಲ್ಲಿಗೆ ಒಂದಲ್ಲ ಒಂದು ಸಮಯ ಹೋಗುತ್ತಾರೆ. ನಾನಂತೂ ಬುದ್ಧಿ ತಿಳಿದು ಓಡಾಟ ತೊಡಗಿದಂದಿನಿಂದ ಅಲ್ಲಿನ ಖಾಯಂ ಸದಸ್ಯ. ಓದುಬರಹ ಗಟ್ಟಿಯಾಗಿ ಕೂತ ಮೇಲಂತೂ ದಾಸಭಟ್ಟರ ಮನೆಯಲ್ಲಿ ನನಗೊಂದು ವಿಶೇಷ ಆಕರ್ಷಣೆ ಇತ್ತು. ಅದೇನೆಂದರೆ ಅಲ್ಲಿ ಕಾಲಕಾಲಕ್ಕೆ ಹುಬ್ಬಳ್ಳಿಯಿಂದ ರಾಮಕೃಷ್ಣ ತರುತ್ತಿದ್ದ ಕಥೆ ಕಾದಂಬರಿಗಳು – ಹೆಚ್ಚಾಗಿ ಶೇಷಾಚಲಗ್ರಂಥಮಾಲೆಯ 'ಮಾಯಾವಿ' 'ಆನಂದಮಠ' 'ಮಾಧವಕರುಣಾವಿಲಾಸ' ಮುಂತಾದ ಬಿ.ಪ.ಕಾಳೆ ಹಾಗೂ ಬಿ.ವೆಂಕಟೇಶಾಚಾರ್ಯರ ಕಾದಂಬರಿಗಳು. ಉಕ್ಕಿನ ಟ್ರಂಕಿನೊಳಗಿಂದ ಈ ಪುಸ್ತಕಗಳನ್ನು ತೆಗೆದುಕೊಡುವಾಗ ಘಮಾಯಿಸುವ ನಾಫ್ತಾಲಿನ ಗುಳಿಗೆಗಳ ವಾಸನೆ ಪುಸ್ತಕಗಳ ಜತೆಗೆ ನೆನಪಿಗೆ ಬರುತ್ತಿದೆ. ನನಗಿಂತ ಸ್ವಲ್ಪ ಹಿರಿಯರಾದ ಇಬ್ಬರು ಹುಡುಗರಿಗೆ ದಾಸಭಟ್ಟರು 'ಪುಳ್ಕೋಟೆಮಾಮ' ಮತ್ತು 'ಪದೆಂಜಿ' (ಹೆಸರುಕಾಳು) ಮಾಮ' ಎಂದು ಲೇವಡಿ ನಾಮಕರಣ ಮಾಡಿದ್ದರು. 'ಪುಳ್ಕೋಟೆ' ಎಂದರೆ ಹುಣಸೇಬೀಜ; ಆ ಮಾಮ ಈಗ ಪ್ರಸಿದ್ಧ ಪತ್ರಕರ್ತ – ಲೇಖಕರೆನಿಸಿರುವ ಪಾ.ವೆಂ. ಆಚಾರ್ಯರು. ಅವರೂ ಪುಸ್ತಕ ಪ್ರಿಯರಾದ್ದರಿಂದ ದಾಸಭಟ್ಟರ ಮನೆಯ ಖಾಯಂ ಸದಸ್ಯರೇ.

ದಾಸಭಟ್ಟರ ಮನೆಗೆ ಒತ್ತಿಕೊಂಡ ಮನೆ ಕಟ್ಟೆ ಶ್ರೀನಿವಾಸ ಆಚಾರ್ಯರದು–ಹೋಟೆಲ್ ಉದ್ಯಮದ ಸಂಸ್ಪರ್ಶ ವಿಲ್ಲದ ಒಂದೇ ಒಂದು ಮನೆ ಎಂದರೆ ಇದು ನಮ್ಮ ಅಗ್ರಹಾರದಲ್ಲಿ. ಆಚಾರ್ಯರು ಸಂಸ್ಕೃತ ಪಂಡಿತರು. ಉತ್ತರಾದಿ ಮಠದ ಸ್ವಾಮಿಗಳಿಂದ ಸುಧಾಪಾಠ ಹೇಳಿಸಿಕೊಂಡು ಉಡುಪಿಯಲ್ಲಿ ನಿರಂತರ ಸುಧಾಪಾಠ ಮಾಡಿಸುತ್ತಿದ್ದ ವಿದ್ವಾಂಸರು. ಅವರಿಗೆ ಉತ್ತರಾದಿ ಮಠದ ಸ್ಥಳೀಯ ಪಾರುಪತ್ಯದ ಅಧಿಕಾರವೂ ಒದಗಿತ್ತು. ಈಗ ಕನಕದಾಸರ

ಶಿಲಾಮೂರ್ತಿ ಇಟ್ಟಿರುವ ಸ್ಥಳದಲ್ಲಿ ಆಗ ಒಂದು ಪುಟ್ಟ ಹಂಚಿನ ಮಾಡಿನ ಕೊಠಡಿ ಇತ್ತು. ಅಲ್ಲಿ ಆಚಾರ್ಯರು ಕಂದೀಲಿನ ಬೆಳಕಿನಲ್ಲಿ ಒಬ್ಬಿಬ್ಬರಿಗೆ ಪಾಠ ಹೇಳುತ್ತಿದ್ದರು. ಅವರ ಮೂರು ಗಂಡುಮಕ್ಕಳಲ್ಲಿ ಇಬ್ಬರು ತಂದೆಯ ಸಂಸ್ಕೃತ ಶ್ರೀ ಪರಂಪರೆಯನ್ನು ಮುಂದುವರಿಸಿದರೆ ಮೂರನೆಯವರು ಡಾಕ್ಟರರಾಗಿ ರಾಜಕೀಯ ಸಾಮಾಜಿಕ ರಂಗದಲ್ಲಿ ಸೇವೆ ಸಲ್ಲಿಸುವ ವಿ.ಎಸ್. ಆಚಾರ್ಯರೆಂದು ಹೆಸರು ಮಾಡಿದ್ದಾರೆ. ಅಂತೂ ಮಾಧ್ವವೇದಾಂತ ಕಲಿಸಿ ಕೊಡುವವರಿಗಿಂತ ಹೆಚ್ಚಿನ ಸಂಭ್ರಮ ಪಾಕಶಾಸ್ತ್ರಪ್ರವೀಣರನ್ನು ತಯಾರಿಸಿಕೊಡುವ ಒಂದು ಕೇಂದ್ರದಂತಿತ್ತು ನಮ್ಮ ಅಗ್ರಹಾರ. ನಾನು ಬೆಳೆಯುತ್ತಿರುವ ಕಾಲಕ್ಕೆ ಪ್ರತಿ ಮನೆಯಿಂದಲೂ ಒಬ್ಬರಿಬ್ಬರು ಪರವೂರಿನ ಹೋಟೆಲ ಉದ್ಯೋಗಿಗಳಾಗಿರುತ್ತಿದ್ದರು, ಅವರಲ್ಲಿ ಕೆಲವರು ತದನಂತರ ಮಾಲಿಕರಾಗಿ ಬಿಟ್ಟದ್ದೂ ಇದೆ. ಅಗ್ರಹಾರದ ಹೊರಸುತ್ತಿನಲ್ಲಿ ಮಡಿವಾಳರ ಒಂದೆರಡು ಕುಟುಂಬ ಮತ್ತು ಮಾಪಿಳ್ಳೆಯವರ ಮೂರು ನಾಲ್ಕು ಮನೆ ಬ್ರಾಹ್ಮಣ ಕುಟುಂಬಗಳಿಗೆ ಬಡತನಕ್ಕೆ ಸವಾಲೆಸೆಯುವಂತೆ ಅಷ್ಟೇ ಕಷ್ಟದಲ್ಲಿ ದಿನಗಳೆಯುತ್ತಿದ್ದರು.

ಕುಂಜಿಬೆಟ್ಟಿನ (ನಮ್ಮ) ಮನೆ ಹೆಸರಿಗನ್ವರ್ಥವಾಗಿ ಬೆಟ್ಟಿನಲ್ಲೆ (ಎತ್ತರದ ಜಾಗದಲ್ಲಿ) ಇತ್ತು. ಹಿಂದೆ ಹೋದರೆ ಬಯಲುಗದ್ದೆ. ತೋಟಗಳು. ಮುಂದೆ ಒಂದು ಓಣಿ. ಅದು ಉಡುಪಿ ಕಾರ್ಕಳ ಭಾಟಾ ಮಾರ್ಗಕ್ಕೆ ಸೇರಿ ಕೊಳ್ಳುತ್ತದೆ. ಓಣಿಯ ಅಕ್ಕಪಕ್ಕದಲ್ಲಿದ್ದ ಕೊಂಕಣಸ್ಥರ ಎರಡು ಮನೆಗಳ ದೆಸೆಯಿಂದ ಅದಕ್ಕೆ 'ಭಕ್ತ'ರ ಓಣಿ ಎಂದು ಹೆಸರು. ಅಣ್ಣಪ್ಪ ಭಕ್ತ, ಅಪಿಣಿ ಭಕ್ತ, ಗೋವಿಂದ ಭಕ್ತ ಎಂಬ ವ್ಯಾಪಾರಸ್ಥರು ಅಲ್ಲಿ ಮನೆ ಮಾಡಿ ಕೊಂಡಿದ್ದರು. ಓಣಿಯ ಒಂದು ಪಕ್ಕದಲ್ಲಿ ಒಂದು ವಿಶ್ವಕರ್ಮ ಕುಟುಂಬ ಕನ್ನಡ ಮಾತನಾಡುವ ಗುಂಡ್ಮಿ ಪ್ರದೇಶ ದವರು. ನಮ್ಮ ಕಾಂಪೌಂಡಿನ ಒಂದು ಭಾಗದಲ್ಲಿ ಕಲ್ಸಂಕ ವೆಂಕಟ್ರಾಯ ಪೈ ಅವರ ಮನೆ. ಭಾಟಾ ಮಾರ್ಗದಲ್ಲಿ ಬಲಕ್ಕೆ ತಿರುಗಿದರೆ ಕಲ್ಸಂಕದ ಸೇತುವೆ ದಾಟಿ ಉಡುಪಿ ಕೃಷ್ಣನನ್ನು ನೋಡಲು ಹೋಗಬಹುದು. ಎಡಕ್ಕೆ ತಿರುಗಿದಲ್ಲಿ ಕಡಿಯಾಳಿ ದೇವಸ್ಥಾನ, ಶಾಲೆ. ಮುಂದಕ್ಕೆ ಸಗರಿಯ ಗುಡ್ಡ ಇಂದ್ರಾಳಿ ಮಣಿಪಾಲಗಳಿಗೆ ಹೋಗುವ ಹೆದ್ದಾರಿ. ಈ ಹೆದ್ದಾರಿ ಧೂಳಿಧೂಸರಿತವಾದರೂ ಎರಡೂ ಪಕ್ಕದಲ್ಲಿ ದೆವ್ವದಂಥ ಧೂಪದ ಮರಗಳಿಂದ ಯಾವಾಗಲೂ ನೆರಳು. ವನಮಹೋತ್ಸವ ಎಂಬ ಹೆಸರಿಗೆ ಮೊದಲೇ ಯಾರೋ ಒಬ್ಬ ಬಿಳಿಯ ಕಲೆಕ್ಟರ್ ದಕ್ಷಿಣ ಕನ್ನಡದ ಹೆದ್ದಾರಿಗಳಲ್ಲಿ ದಾರಿಹೋಕರ ಸೇವಾರ್ಥ ಅಂಥ ಮರಗಳನ್ನು ನೆಡಿಸಿದ್ದ. ಅದರ ಒಂದು ಪಾಲು ಕುಂಜಿ ಬೆಟ್ಟಿಗೂ ಸಿಕ್ಕಿತ್ತು. ಕುಂಜಿಬೆಟ್ಟು – ಈ ಸ್ಥಳನಾಮದ ಬಗ್ಗೆ ಇನ್ನೂ ಪೂರ್ತಿ ಸಂಶೋಧನೆಯಾಗಿಲ್ಲ. ಕುಂಜಿ ತ್ತಾಯ ಕುಟುಂಬದಿಂದಲೇ ಹೆಸರು ಬಂದಿರಬಹುದೇ? ಹಾಗೆ ಗುಮಾನಿ ಬರಲು ಇಲ್ಲಿ ಕುಂಜಿತ್ತಾಯರ ಕುಟುಂಬ ಗಳು ನೆಲಸಿವೆ. ನನ್ನ ಮನೆಯ ಮುಂದೆ ಒಂದು ಕುಂಜಿತ್ತಾಯ ದೈವದ ನಿವಾಸವೂ ಆಗಿದೆ; ಹಿಂದಿನ ಮನೆಯಲ್ಲಿ ಉಪಾಧ್ಯರೂ ಅವರ ಕುಟುಂಬಕ್ಕೆ ಸೇರಿದವರು. ಹಿಂದಿನ ಉಪಾಧ್ಯರಲ್ಲಿ ಹಿರಿಯರು ತಿರುವಾಂಕೂರಿನಲ್ಲಿ ಶಾಂತಿ ಕಾರ್ಯಕ್ಕೆ ಹೋಗಿ ಬಂದವರು. ಅವರಲ್ಲಿ ಒಬ್ಬರು ಅಖಿಲಭಾರತದ ತೀರ್ಥ ಸ್ಥಾನಗಳ ಬಗ್ಗೆ ಬರೆದ ಒಂದು ಪ್ರವಾಸಕಥನ 'ಭಾರತಯಾತ್ರೆ' ಸುಮಾರು 1920ರ ದಶಕದ ರಚನೆ ಕನ್ನಡದ ಆರಂಭದ ಪ್ರವಾಸಕಥನ ಎನಿಸ ಬಹುದು. ಕುಂಜಿತ್ತಾಯ ದೈವ ರಾತ್ರಿಯ ಕಾಲ ವಾಕಿಂಗ್ ಹೊರಡುವುದುಂಟೆಂದೂ ಸರಿರಾತ್ರಿ ಕತ್ತಲಲ್ಲಿ ಕುಂಜಿ ಬೆಟ್ಟಿನಲ್ಲಿ ಓಡಾಡುವುದು ನಿಷಿದ್ಧವೆಂದೂ ಮಕ್ಕಳಾದ ನಮಗೆ ಬೋಧಿಸಲಾಗುತ್ತಿತ್ತು. ಈ ದೈವ ಮುನಿದರೆ ನಿಮ್ಮನ್ನು ಮಲಗಿದಲ್ಲಿಂದಲೇ ಎತ್ತಿಕೊಂಡು ಹೋಗಿ ಬಟ್ಟ ಬಯಲಿಗೆ ಎಸೆದೀತು, ಜೋಕೆ.

ಕುಂಜಿ (ಕುಂಞ) ದ್ರಾವಿಡ ಭಾಷೆಯ ಪದ. ತುಳುವಿನ 'ಕಿಂಞ್ಞ' ಕನ್ನಡದ 'ಕಿರಿ' ಸಣ್ಣದು ಎಂದರ್ಥ. ಕಿರಿದಾದ ಬೆಟ್ಟು ಕುಂಜಿಬೆಟ್ಟು. ಈಗ್ಗ ನಿಮಗೆ ಅಲ್ಲಿ ಬೆಟ್ಟು ಕಾಣಿಸದು. ಬಯಲು ಸಾಲಿಗಿಂತ ಸ್ವಲ್ಪ ಎತ್ತರದಲ್ಲಿದ್ದು ಮಳೆಗಾಲದಲ್ಲಿ ಮಾತ್ರ ಬೆಳೆ ತೆಗೆಯುವಂಥ ಗದ್ದೆಗಳಿಗೆ ಬೆಟ್ಟು ಗದ್ದೆ ಎನ್ನುತ್ತಾರಷ್ಟೆ. ಅಂಥ ಬೆಟ್ಟು ನಮ್ಮದು. ಕಡಿಯಾಳಿ ದೇವಸ್ಥಾನ ಮತ್ತು ಶಾಲೆಗಳಿರುವುದು ಕುಂಜಿಬೆಟ್ಟಿನಲ್ಲೇ. ಅಕ್ಕಪಕ್ಕದಲ್ಲೇ. ಕಡಿಯಾಳಿಯಲ್ಲಿರುವ ಅಮ್ಮನವರ ದೇವಸ್ಥಾನಕ್ಕೆ ವರ್ಷಕ್ಕೊಮ್ಮೆ ವಿಜಯದಶಮಿಯ ದಿನ ಕೃಷ್ಣದೇವರು ಸೀಮೋಲ್ಲಂಘನೆಗಾಗಿ ಫೌಜ್ (ತುಳುವಿನ ಪೌಂಜಿ) ಹಿಡಿದುಕೊಂಡು ಬರಬೇಕಾಗಿದ್ದ ರಿವಾಜು. ಈ ದೇವಸ್ಥಾನವನ್ನು ಮಧ್ವಾಚಾರ್ಯರೇ ಪ್ರತಿಷ್ಠಿ ಸಿದ್ದು ಎಂತಲೂ ಐತಿಹ್ಯ. ಹಳೆಗಾಲದಲ್ಲಿ ಇದೇ ಉಡುಪಿಯ ಕಡೇಹಳ್ಳಿ ಆಗಿದ್ದು ಕಡಿಯಾಳಿ ಎಂಬ ರೂಪ ಪಡೆದ್ದಿರಬೇಕು ಎನ್ನುತ್ತಾರೆ ಸ್ಥಳನಾಮ ಪ್ರವೀಣರು. ಕಡಿಯಾಳಿ ಎಂಬುದು ನನ್ನ ಜೀವನ ಪಥದಲ್ಲಿ ವಿಶಿಷ್ಟಸ್ಥಾನ ಪಡೆದಿರುವುದರಿಂದ ಅದರ ಭೌಗೋಲಿಕ ಪರಿಸರ ನನಗೆ ಮಹತ್ವದ್ದೆಂಬುದರಿಂದ ಸದ್ಯ ಇಷ್ಟನ್ನು ಹೇಳಿರುತ್ತೇನೆ.

ಅಕ್ಕಿ ಮುಡಿಗೆ ಮೂರು ರೂಪಾಯಿ, ರಂಗೂನಕ್ಕಿ ಚೀಲಕ್ಕೆ 5 ರೂಪಾಯಿ, ಎಣ್ಣೆ ಕಾಳು ಬೇಳೆ ತೆಂಗಿನ ಕಾಯಿ ಮುಂತಾದ ಜೀವನಾವಶ್ಯಕ ವಸ್ತುಗಳಿಗೆ ಇಂದಿನ ಅತಿಪ್ರಸರಣದ ಯುಗದ ನೆಲೆಯಿಂದ ಹೇಳುವುದಾದರೆ 'ಸಿಲ್ಲೀ' ಕ್ರಯಗಳು. ಆಗ ಒಂದಾಣೆಗೆ ಸಿಗುವ ಪದಾರ್ಥಗಳಿಗೆ ಈಗ ಒಂದು ರೂಪಾಯಿ ತೆರಬೇಕು. ದ್ವಿತೀಯ ಮಹಾಯುದ್ಧ ಆರಂಭವಾಗುವವರೆಗೂ ಕೃಷಿವಸ್ತುಗಳಿಗೆ ಬೆಲೆ ಇರಲಿಲ್ಲ, ಭೂಮಿಗೂ ಬೆಲೆ ಇರಲಿಲ್ಲ. ದೇಶದಲ್ಲಿ ದುಡ್ಡೇ ಇರಲಿಲ್ಲ. ಬ್ಯಾಂಕ್ ಸೇವೆಯನ್ನು ಇನ್ಶೂರೆನ್ಸ್‌ನ ಹಾಗೆಯೇ ಒತ್ತಾಯ ಮಾರಾಟ ಮಾಡಬೇಕಾಗಿತ್ತು. ಉಡುಪಿಯಲ್ಲಿ ಎಸ್. ಎಸ್. ಎಲ್. ಸಿ. ಮಾಡಿದವನೇ ಮಹಾವಿದ್ಯಾವಂತ; ಅವನಿಗೂ

ಕೆಲಸ ಸಿಗುತ್ತಿರಲಿಲ್ಲ. ಬಡತನಕ್ಕೆ ಜಾತಿಯ ಗಡಿ ಇಲ್ಲವೆಂಬುದಕ್ಕೆ ಇಷ್ಟು ವರ್ಣನೆ ಮಾಡಿದ್ದೇನೆ. ಆದರೂ
ನೆರೆಮನೆಯ ಚಿನ್ನದ ಕೆಲಸದ ನಾರಾಯಣಾಚಾರ್ರದ್ದು ಒಂದು ದಾರುಣವಾದ ಪರಿಸ್ಥಿತಿ. ಗಂಡು ಹೆಣ್ಣು ನಾಲ್ಕು
ಮಕ್ಕಳನ್ನು ಬೆಳೆಸಿದ್ದು ಮನೆಯಲ್ಲಿನ ದೊಡ್ಡವರು ಹೊಟ್ಟೆ ಕಟ್ಟಿಕೊಂಡೇ. ಹೆಜ್ಜೆ ಹೆಜ್ಜೆಗೆ ಜ್ಯುವೆಲ್ಲರಿ ಶಾಪ್‌ಗಳು
ಈಗಿನಂತೆ ಇಲ್ಲದಿದ್ದ ಕಾಲ ಅದು. ನಗನಾಣ್ಯ ಮಾಡಿಸುವವರು ಆಚಾರಿಯ ಮನೆಗೆ ಹೋಗಿ ಚಿನ್ನ ಕೊಡಬೇಕು.
ಶ್ರೀಮಂತರು ಬೆರಳೆಣಿಕೆಯ ಮಂದಿ ಇದ್ದ ಊರಿನಲ್ಲಿ ಎಂಥ ಚಿನ್ನದ ವ್ಯಾಪಾರ? ಓಗಿದ್ದೂ ಕೋಟಕ್ಕಿಂತ
ಉಡುಪಿ ವಾಸಿಯೆಂದು ನಾರಾಯಣಚಾರ್ಯರು ನಮ್ಮ ಮನೆಯ ತೀರ ಸಮೀಪ ವಾಸ ಮಾಡಿಕೊಂಡಿದ್ದರು.
ಅವರ ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬ ಸುಂದರ ನನ್ನ ಕಡಿಯಾಳಿ ಸ್ನೇಹಿತ. ಸಂಬಳದ ಆರಾಣೆ ಕೊಡಲು
ದುಡ್ಡಿಲ್ಲದೆ ನಾಲ್ಕನೆ ಕ್ಲಾಸಿಗೇ ಶರಣು ಹೊಡೆದ. ಅವನನ್ನ ದಾಸಭಟ್ಟರು ಬಾಲ ನಟನಾಗಿ ಮಾಡಿದರು,
ಸಂಗೀತದ ಮೂಲ ಪಾಠ ಕಲಿಸಿದರು. ಸುಂದರ ಒಳ್ಳೆ ಪ್ರತಿಭಾವಂತ ನಟನಾಗಿ ಉಡುಪಿಯ ಕಂಪೆನಿಯಲ್ಲಿ ಅದು
ಮುಚ್ಚಿ ಹೋಗುವವರೆಗೂ ಕೆಲಸ ಮಾಡಿದ. ಆಮೇಲೆ ಸಂಗೀತ ಮೇಷ್ಟ್ರಾಗಿ ದುಡಿಯಲು ಉಡುಪಿಗಿಂತ
ಮಂಗಳೂರು ಲೇಸೆಂದು ತೆರಳಿ ಇದೀಗ ಕೆಲವರ್ಷಗಳಿಂದ ಅಲ್ಲೇ ನಿವೃತ್ತನಾಗಿದ್ದಾನೆ. ಸರ್ಕಾರದ ಪ್ರೋತ್ಸಹ
ಶಿಷ್ಯವೃತ್ತಿ ಮುಂತಾದ ಇವತ್ತಿನ ಅನುಕೂಲತೆಗಳ ಹೆಸರು ಕೇಳದಂಥ ಆ ಕಾಲದಲ್ಲಿ ಇಂಥ ಎಷ್ಟು ಪ್ರತಿಭಾವಂತ
ರತ್ನಗಳು ತಮ್ಮ ಶಕ್ತಿಯ ಪೂರ್ಣ ಅಭಿವ್ಯಕ್ತಿ ಮಾಡದೆ ಹೋದರೋ? ಕನಿಷ್ಠಾವಧಿ ಅರ್ಥಿಕಶಕ್ತಿ ಎಲ್ಲ ಕುಟುಂಬ
ಗಳಿಗೂ ಇರಬೇಕು, ಇಲ್ಲವಾದರೆ ಬರಬೇಕು.

ಉಡುಪಿಯಲ್ಲಿರುವವರೇ 'ಉಡುಪಿಗೆ ಹೋಗಿ ಬರುತ್ತೇನೆ' ಎಂದು ಹೇಳಿದರೆ ಅವರು ಉಡುಪಿಯ
ಶ್ರೀ ಕೃಷ್ಣ ದೇವಸ್ಥಾನಕ್ಕೆ ಹೋಗುತ್ತಾರೆ ಎಂದರ್ಥ. ಕೃಷ್ಣನ ಗುಡಿ ಉಡುಪಿಯ ಹೃದಯಸ್ಥಾನ. ನಿತ್ಯವೂ
ಗುಡಿಗೆ ಹೋಗಿ ಬರುವುದೊಂದು ಪದ್ಧತಿ. ಗುಡಿಗೆ ಸುತ್ತಲೂ ಅಷ್ಟಮಠಗಳು. ಸೋದೇ ಮಠದ ತೋಟ
ದಲ್ಲಿಯೇ ನನ್ನ ಅಜ್ಜನ ಮನೆ – ತಾಯಿಯ ಕಡೆಯದು. ವಾರದ ಕೊನೆಯ ರಜಾದಿನಗಳನ್ನು ಕಳೆಯಲು
ಅಜ್ಜನ ಮನೆಗೆ ಓಡುತ್ತಿದ್ದೆ. ಅಲ್ಲಿ ಓರಗೆಯ ಹುಡುಗರಿದ್ದರು. ಅಲ್ಲದೆ ತುಂಬಾ ಅಕ್ಕರೆ ತೋರಿಸುವ ಪದ್ಮಾವತಿ
ಅತ್ತೆ ಇದ್ದರು. ಅವರು ನನ್ನ ಸೋದರ ಮಾವಂದಿರಲ್ಲಿ ಒಬ್ಬರಾದ ವಾಸುದೇವಣ್ಣನವರ ಮಡದಿ, ಹಿರಿಯ
ಸೋದರಮಾವನ ಹೆಂಡತಿ ಮಡಿದದ್ದರಿಂದ ಇಡಿ ಮನೆಯನ್ನು ಸಂಭಾಳಿಸುವವರು. ಗಂಡನಿಗೆ ಉಡುಪಿಯ
ಹೋಟೆಲಿನಲ್ಲಿ ಕೆಲಸ, ಹಿರಿಯ ಮಾವನಿಗೆ ಸೋದೇ ಮಠದ ಅಡಿಗೆ ಚಾಕರಿ. ಹೆಸರಿಗೊಂದು ಸಂಬಳ. ಆದರೆ ಅಷ್ಟು
ಕಮ್ಮಿ ವರಮಾನದಲ್ಲಿ ನಮ್ಮ ಅತ್ತೆ ತಮ್ಮ ನಾಲ್ಕೈದು ಮಕ್ಕಳನ್ನು ಬೆಳೆಸಿದರು. ಜತೆಗೆ ಮಡದಿ ಕಳೆದುಕೊಂಡ
ಭಾವಯ್ಯನ ಎರಡು ಮಕ್ಕಳನ್ನು ಪೋಷಿಸಿದರು, ಮನೆಗೆ ಬರುವ ಬಂಧುಬಳಗವನ್ನೆಲ್ಲ ಉಪಚರಿಸಿದರು
ಎನ್ನುವಾಗ ಪರಮಾಶ್ಚರ್ಯವಾಗುತ್ತದೆ. ತಾಯಿ ಇಲ್ಲದೆ ತಬ್ಬಲಿಯಾದ ಭಾವನ ಮಕ್ಕಳನ್ನು ಸಾಕಿ ಸಲಹಿದರು.
ಈ ಮಕ್ಕಳು ಬೆಳೆದು ದೊಡ್ಡವರಾಗಿ ಹೊಸ ಮನೆ ಕೊಂಡಾಗ ಚಿಕ್ಕಮ್ಮ ಬಾರದೆ ತಾವು ಹೋಗುವುದಿಲ್ಲವೆಂದು
ಚಂಡಿ ಹಿಡಿದಿದ್ದರಿಂದ ಹೊಸ ಮನೆಗೆ ಎರಡು ಮಾಲಕರಾದರು. ಇದು ತದನಂತರ ಪಾಲುಪಟ್ಟಿ ಸಮಸ್ಯೆ
ತಂದೊಡ್ಡಿದರೂ ಮಕ್ಕಳ ಕೃತಜ್ಞತಾಭಾವ ಮೆಚ್ಚತಕ್ಕದ್ದಲ್ಲವೆ?

ನನ್ನ ಸುತ್ತಲಿನ ಜನ ಉಡುಪಿಯ ಕೃಷ್ಣನಿಗೆ ಸೇವೆ ಸಲ್ಲಿಸುವವರಾದರೂ ದೇವರ ಜತೆ ದೈವಗಳನ್ನು ಮರೆ
ಯಲಿಲ್ಲ. ದೈವಗಳು ಎಂದರೆ ಬಹುಶಃ ಬ್ರಾಹ್ಮಣರು ಅಹಿಚ್ಛತ್ರಪುರದಿಂದ ಬರುವ ಮುನ್ನವೇ ಇಲ್ಲಿ ಸ್ಥಳ
ಹಿಡಿದುಕೊಂಡಿದ್ದ ಭೂತಗಳು, ಹೆಚ್ಚಾಗಿ ಬ್ರಾಹ್ಮಣರಲ್ಲದವರು ಪೂಜಿಸುತ್ತಿದ್ದ ದೈವಗಳಿಗೆ ಬ್ರಾಹ್ಮಣರೂ
ವರ್ಷಕ್ಕೊಮ್ಮೆ 'ಪನಿವಾರ' ಹಾಕುವುದಿತ್ತು. ನಮ್ಮ ಮಾವನ ಮನೆಯಲ್ಲಿ ಇದೊಂದು ವಾರ್ಷಿಕ ಆಚರಣೆ
ಪ್ರತಿ ಮಳೆಗಾಲ ನಡೆಯುವುದು ವಾಡಿಕೆ. ನಡುರಾತ್ರಿ ಹೊತ್ತಿಗೆ ಪಡಸಾಲೆಯಲ್ಲಿ ಹರವಿದ ಅಕ್ಕಿಯ ಶೇಮಿಗೆಯ
ದಂಡೆಗಳನ್ನು ದೈವಕ್ಕೆ ಸಮರ್ಪಿಸಿದ ಮೇಲೆ ಶೇಮಿಗೆ ಭಕ್ಷಣದ ಕಾರ್ಯಕ್ರಮ, ಬೆಳಗ್ಗಾದರೆ ಆಗಲೂ ಅದೇ ತಿಂಡಿ.
ನಮ್ಮ ಮನೆಯಲ್ಲಿ ಕೀಳು ದೈವಕ್ಕೆ ದೈವ ಎಂದೂ ನಾವು ಕರೆಯುತ್ತಿರಲಿಲ್ಲ. ಈ 'ಕೀಳಿ'ಗೆ ಕಾಲಕಾಲಕ್ಕೆ ತೆಂಗಿನ
ಕಾಯಿ ಒಡೆದು ಕೇಪಳ ಹೂ ಚೆಲ್ಲಿದರೆ ತೃಪ್ತಿ. ದನಕ್ಕೆ ಆಗಿಂದಾಗ ಕಾಯಿಲೆ ಕೊಟ್ಟು ಕೀಳು ತನ್ನ ಇರವನ್ನ ನಮಗೆ
ಜ್ಞಾಪಿಸುತ್ತಿತ್ತು. ಆರ್ಷೇಯವಾದ, ಆರ್ಯ ಧರ್ಮಪ್ರಣೀತವಾದ ಪೂಜೆ ಪುನಸ್ಕಾರಗಳ ದೇವರುಗಳಿಗೂ,
ಅದಕ್ಕೂ ಮುನ್ನವೇ ಜನರ ನಂಬಿಕೆಯಲ್ಲಿ ರೂಢವಾದ ದೈವಗಳಿಗೂ ಸಮನಾಗಿ ಸಲ್ಲುತ್ತಿತ್ತು ಆರಾಧನೆ.

ಸೋದೆಮಠದ ಪರ್ಯಾಯ ಕಾಲದಲ್ಲಿ ನಮಗೆ ಚೌಕಿಯಲ್ಲಿ ಊಟವೂ ಸಿಗುತ್ತಿತ್ತು. ಏನಿಲ್ಲವೆಂದರೂ
ಮಠದೊಳಗಿನ 'ಚಿಟ್ಟೆ'ಗೆ ಹೋದರೆ ಅಲ್ಲಿ ನಮ್ಮ ಮಾವ ಅರಳಿನ ಉಂಡೆ ಕೊಡುತ್ತಿದ್ದರು. ಉಡುಪಿಯ ಸುತ್ತ
ಲಿನ ಬ್ರಾಹ್ಮಣ ವರ್ಗಕ್ಕೆ ಕೃಷ್ಣ ಮಠದಲ್ಲಿಯೇ ಏನಾದರೊಂದು ಊಳಿಗ ದೊರೆಯುವ ಕಾಲ ಒಂದಿದ್ದಿರಬೇಕು.
ಜನಸಂಖ್ಯೆ ಹೆಚ್ಚಾದಾಗ ಇವರ ಮಕ್ಕಳೇ ಕರ್ನಾಟಕದಲ್ಲೆಲ್ಲ ವ್ಯಾಪಕವಾದ ಹೋಟೆಲು ಉದ್ಯೋಗಕ್ಕೆ ಹೊರಟಿದ್ದಿರ
ಬೇಕು. ವಿದ್ಯೆಯ ಬಲವಾಗಲಿ, ಪ್ರಸಾರವಾಗಲೀ ಇಲ್ಲದಿದ್ದ ಕಾಲದಲ್ಲಿ ಗೊತ್ತಿರುವ ಪಾಕವಿದ್ಯೆಯನ್ನೇ ವಾಣಿಜ್ಯ
ಸೇವೆಯ ರೂಪದಲ್ಲಿ ಸಂಘಟಿಸಿ ರೆಸ್ಟೋರೆಂಟ್‌ಗಳನ್ನು ಸ್ಥಾಪಿಸಿದ ಶಿವಳ್ಳಿ ಬ್ರಾಹ್ಮಣ ಸಮುದಾಯಕ್ಕೆ ಶ್ರೀ

ಕೃಷ್ಣಮಠದ ಕೈಂಕರ್ಯವೇ ಮುಖ್ಯ ತರಬೇತಿ. ಪಾಕಶಾಸ್ತ್ರದ ವೈವಿಧ್ಯವನ್ನೂ ಅದನ್ನು ವಿತರಿಸುವ ಸಂಘಟನೆಯನ್ನೂ ಈ ಕೇಂದ್ರದಿಂದಲೇ ಕಲಿತು ಪರಿಸ್ಥಿತಿಗೆ ಹೊಂದಿಸಿಕೊಂಡು ಶಿವಳ್ಳಿ ಬ್ರಾಹ್ಮಣರು ಶ್ರೇಯಸ್ಸಾಧನೆ ಮಾಡಿಕೊಂಡರು. ಮಕ್ಕಳಿಗೆ ಕೂಡ ಮಠದಲ್ಲಿ ಊಟ ಸಿಗಬೇಕಾದರೆ ಒಂದು ಉಪಾಯ – ಅವರನ್ನು ಸಂಸ್ಕೃತ ಶಾಲೆಗೆ ಸೇರಿಸುವುದು. ಹೀಗಾಗಿ ಮೊದಲ ತಲೆಮಾರಿನ ಹೋಟೆಲಿಗರಲ್ಲಿ ಸಂಸ್ಕೃತ ಶಿರೋಮಣಿಗಳಾದವರೂ ಇದ್ದರು. ನನ್ನ ತಂದೆಯೇ ನಾನು 5ನೇ ಕ್ಲಾಸು ಪಾಸಾವಾಗ ಒಮ್ಮೆ, ಎಂಟನೇ ಕ್ಲಾಸ್ ಆದಾಗ ಒಮ್ಮೆ 'ಮಗನೇ, ನೀನಿನ್ನು ಸಂಸ್ಕೃತ ಶಾಲೆಗೆ ಹೋಗು' ಎಂದು ಗದರಿಸಿದ್ದುಂಟು. ಕಾರಣ ನನಗೆ ಸಂಪ್ರದಾಯಿಕವಾದ ಆಚಾರಗಳಲ್ಲಿ ಮನಸ್ಸು ಕೂಡದು; ನನ್ನನ್ನ ಉಡುಪಿಗೆ ಒಗ್ಗಿಸಿ ಉಡುಪಿಯಲ್ಲಿ ನೆಲಸುವಂತೆ ಮಾಡಲು ತಂದೆ 'ಸಂಸ್ಕೃತ ಶಾಲೆ'ಯ ಅಂಜಿಕೆ ಹುಟ್ಟಿಸುತ್ತಿದ್ದರೆಂದು ತೋರುತ್ತದೆ.

ಸಂಪ್ರದಾಯದ ಕೋಟೆ ಎನಿಸಿದ ಅಷ್ಟಮಠಗಳ ಸಂದಿನ ರಥಬೀದಿಯಲ್ಲಿ ಉಡುಪಿಯ ಮಠಗಳನ್ನು ವಾಚಾಮಗೋಚರವಾಗಿ ಬಯ್ದು ಸುದೀರ್ಘ ಭಾಷಣ ಮಾಡುತ್ತಿದ್ದುದನ್ನು ನಾನು ಕೇಳಿದ್ದೇನೆ. ಉತ್ತರ ಭಾರತದ ಯಾವನೋ ಶರ್ಮನಂತೆ ತನ್ನ ಇಂಗ್ಲೀಷಿನ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡಿಸುವ ಏರ್ಪಾಡು ಮಾಡಿ ಮಠಗಳಲ್ಲಿ ನಡೆಯುವ ಅನಾಚಾರವನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆಯುವುದನ್ನು ನಿತ್ಯದ ಕಾರ್ಯಕ್ರಮವಾಗಿ ಮಾಡಿಕೊಂಡಿದ್ದ. ಗಾಂಧೀ ಯುಗದ ಸಾಮಾಜಿಕ ಸುಧಾರಣೆಯ ಅಂಗವಾಗಿ ಇಂಥ ಭಾಷಣಗಳು ನಡೆಯಬೇಕಾಗಿತ್ತು. ಪರಿಷಯವರ ಬಗ್ಗೆ, ಸ್ವಾಮಿಗಳ ಬಗ್ಗೆ ನಾಟಕ, ಲೇಖನ ಬರೆಯುವ ಸಾಹಸಿಗಳು ಆ ಯುಗದಲ್ಲಿದ್ದರು. (ಕೆ. ಕೆ. ಶೆಟ್ಟಿ, ಕೊರಡ್ಕಲ್ ಶ್ರೀನಿವಾಸ ರಾವ್). ಕ್ರಾಂತಿಯುಗದ ಉಡುಪಿಯ ನಾಯಕನೆಂದರೆ ಗಂಡೆದೆಯ ಶ್ರೀನಿವಾಸ ಉಪಾಧ್ಯ ಪಣಿಯಾಡಿಯವರು. ಕೆಂಪು ಅಂಗಿಯ ಗಾಂಧೀ ಭಕ್ತ ಪಣಿಯಾಡಿಯವರು ಮಠಗಳಿಗೊಂದು ಸಿಂಹಸ್ವಪ್ನ. ತುಳುಭಾಷೆಯ ಸಲುವಾಗಿ ಪಣಿಯಾಡಿ ತುಂಬಾ ದುಡಿದರು. ಬರಹಗಾರರ ಬಳಗವನ್ನು ಕಟ್ಟಿದರು. ಮುದ್ರಣಾಲಯ, ವಾಣಿಜ್ಯೋದ್ಯಮ, ಬ್ಯಾಂಕು ಎಲ್ಲವನ್ನೂ ತುಳು ಮತ್ತು ಸ್ವದೇಶೀ ಧ್ವಜದಡಿಯಲ್ಲಿ ಸಂಘಟಿಸಲು ಯತ್ನಿಸಿದರು. ಅವರ ತುಳು ಅಭಿಮಾನ ಎಲ್ಲಿಯವರೆಗೆ ಇತ್ತು ಎಂದರೆ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಒಂದು ನಿಯೋಗವನ್ನೊಯ್ದು ಚಂದ್ರಗಿರಿಯಿಂದ ಗಂಗೊಳ್ಳಿ ಹೊಳೆಯವರೆಗಿನ ದಕ್ಷಿಣಕನ್ನಡ ಜಿಲ್ಲೆಯನ್ನು ತುಳು ರಾಜ್ಯವೆಂದು ಘೋಷಿಸಬೇಕೆಂದು ಒತ್ತಾಯಿಸಿದರು. ಎಂ. ವಿ. ಹೆಗ್ಡೆ, ಪ್ರೊ. ಹೈದರ್ (ಇವರು ಪಾಕಿಸ್ತಾನಕ್ಕೆ ಹೋದರು) ಮತ್ತು ಎಸ್ ಎಸ್ ಕಾರಂತ ಮುಂತಾದ ಪತ್ರಿಕೋದ್ಯಮಿಗಳಿಗೆ ಪ್ರಥಮ ಅವಕಾಶ ನೀಡಿದ್ದು ಪಣಿಯಾಡಿಯವರೇ. 1939ರಲ್ಲಿ ಅವರ ವಹಿವಾಟು ಡೋಲಾಯಮಾನವಾಗಿ ಛಲವಾದಿಯೂ ಸ್ವಾಭಿಮಾನಿಯೂ ಆದ ಈ ಕ್ರಾಂತಿಕಾರಿ ಉಡುಪಿಯನ್ನ ತೊಲಗಿ ಹೋಗಬೇಕಾಗಿ ಬಂದದ್ದೆ ಅವರ ದುರ್ವಿಧಿ. ಅವರ ಹಿಂದೆಯೇ ಉಡುಪಿಯ ಒಂದು ಹೋರಾಟ ಸತ್ವ, ತುಳು ಚಳವಳಿಯೂ ಹೊರಟು ಹೋದುವೇನೋ. ಸ್ಥಾನಾಪನ್ನವಾದದ್ದು ಸಂಧಾನ, ರಾಜಿ, ಹೇಗಾದರೂ ಬುದ್ಧಿವಂತಿಕೆಯಿಂದ ಬಚಾವಾಗುವ ಜೀವನೋಪಾಯ ತತ್ವ. ಪೌರುಷಕ್ಕಿಂತ ರಾಜಿ, ಶರಣಾಗತಿ ಬದುಕುವದಾರಿ ಎಂದು ಉಡುಪಿ ಕಂಡುಕೊಂಡಿತು. ನೋಡಿ, ತತ್ವ ತತ್ವ ಎಂದು ಬಡಿದುಕೊಂಡು ಪಣಿಯಾಡಿಗೇನಾಯಿತು?

೨ ಕಡಿಯಾಳಿ ಶಾಲೆ

ನಾನು ಹುಟ್ಟಿದ ಬಳಿಕ ಏಳೆಂಟು ವರ್ಷಗಳಲ್ಲಿ ನಮ್ಮ ಸಂಸಾರದ ಆರ್ಥಿಕ ಬಲ ಸಂವರ್ಧನೆ ಆಗತೊಡಗಿತು. ನನ್ನ ತಂದೆಯವರೂ, ಚಿಕ್ಕ ತಂದೆಯವರೂ ಒಂದಿಷ್ಟು ಆಸ್ತಿಪಾಸ್ತಿ ಕೂಡ ಮಾಡಿದರು. ಮನೆಗೆ ಉಪ್ಪರಿಗೆ, ಹಂಚುಬಿತ್ತು. ಹುಬ್ಬಳ್ಳಿಯಿಂದ ಬರುವಾಗ ನನ್ನ ತಂದೆ ಒಮ್ಮೆ ನನಗೊಂದು 3 ಚಕ್ರದ ಬೈಸಿಕಲ್ ತಂದರು. ಆಟದಲ್ಲಿ ಮುಂದು, ಊಟದಲ್ಲಿ ಹಿಂದು ನಾನು. ದಿನವಿಡೀ ಆಟ ಆಡಿದರೂ ತೃಪ್ತಿ ಇಲ್ಲ. ಆಚೆ ಮನೆ ಈಚೆ ಮನೆ ಎರಡರಲ್ಲೂ ಸ್ವಾತಂತ್ರ್ಯ. ಶಾಲೆಗೆ ಹೋಗುವ ವಯಸ್ಸಾಯಿತು. ಕಡಿಯಾಳಿ ಶಾಲೆಗೆ ಸೇರಿಸಿದರು. ಆದರೆ ನಾನು ಸುಲಭದಲ್ಲಿ ಬಲೆಗೆ ಬೀಳಲಿಲ್ಲ. ಗಂಜಿ ಊಟ ಮಾಡಿ ಹೊರಡು ಎಂದು ಹೇಳಿದರೆ ನಾನು ಹಿತ್ತಲಿಗೆ ಹೋಗಿ ಬಿಡುತ್ತಿದ್ದೆ; ಮನೆ ಮುಂದಿನ ದೊಡ್ಡ ಹುಣಸೆ ಮರದ ಮರೆಯಲ್ಲಿ ಅಡಗಿ ಪಾರಾಗಲು ಯತ್ನಿಸುತ್ತಿದ್ದೆ. ನನ್ನ ಅಣ್ಣನಿಗೆ ಹುಣಸೇ ಅಡರಿನಿಂದ ಸ್ವಲ್ಪ ಸೇವೆ ಮಾಡಿ ನನ್ನನ್ನು ದರದರನೆ ಎಳೆದುಕೊಂಡು ಕ್ಲಾಸಿಗೆ ಕೂಡಿಸುವ ಕೆಲಸ. ಎಷ್ಟೋ ದಿನಗಳ ಮೇಲೆ ಶಾಲೆ ನನಗೆ ಒಗ್ಗಿತು. ಆದರೆ ಓದಿನಲ್ಲಿ ಮನಸ್ಸು ಕೂರದು. ಒಂದನೇ ಕ್ಲಾಸಿನಲ್ಲಿ ತೇರ್ಗಡೆ ಪ್ರಕಟಣೆಯ ದಿನ ನನ್ನ ಹೆಸರನ್ನು ಕರೆಯಲೇ ಇಲ್ಲ. ಶಾಲೆಯ ಮೆನೇಜರ್ ನಾರ್ಣಪ್ಪಯ್ಯನವರು ಶಾಲಾರಂಭದ ದಿವಸ ತೇರ್ಗಡೆಯಾದ ಹುಡುಗರ ಹೆಸರು ಹೇಳಿದ ಕೂಡಲೇ ಸ್ಲೇಟು – ಚೀಲ ಹಿಡಿದುಕೊಂಡು ಮುಂದಿನ ಕ್ಲಾಸಿಗೆ ಓಡುವುದು ವಾಡಿಕೆ. ಉಳಿದ ಹುಡುಗರೆಲ್ಲ ಓಡಿದರೂ ನನಗೆ ಕರೆ ಬರಲಿಲ್ಲ ಎಂದು ಗೋಳೋ

ಎಂದು ಅಷ್ಟದಿಕ್ಪಾಲಕರಿಗೂ ಕೇಳುವಂತೆ ದನಿ ಎತ್ತಿ ಅಳತೊಡಗಿದೆ. ಮನೇಜರ್ ನಾರ್ಣಪ್ಪಯ್ಯ ಶಿರಾಳಿ ಒಂದು ನನ್ನನ್ನು ಮುಂದಿನ ಕ್ಲಾಸಿಗೆ ನೂಕಿದರು. ಫೇಲೆಂಬುದರ ಪೂರ್ತ ಅರ್ಥ ತಿಳಿಯದಿದ್ದರೂ ನನ್ನ ಸಂಗಡಿಗರನ್ನು ಬಿಟ್ಟಿರಲಾರೆನೆಂದು ನಾನು ಅತ್ತೆ. ನನ್ನ ಅಳುವಿನಿಂದಲೇ ನನಗೆ ತೇರ್ಗಡೆ ದೊರೆಯಿತು. ಇಂಥ ಅವಕಾಶ ಆಮೇಲೆ ನನಗೆಂದೂ ದೊರೆಯಲಿಲ್ಲ. ಫೇಲ್‌ನ ಪ್ರಥಮ ಮತ್ತು ಕೊನೇ ಅನುಭವ ಇದು.

1929 ರಿಂದ 1937 – ಈ ಎಂಟು ವರ್ಷಗಳಲ್ಲಿ ಕಡಿಯಾಳಿಯಲ್ಲಿ ನನ್ನ ಪ್ರಾಥಮಿಕ ಶಿಕ್ಷಣ. ಈ ನಡುವೆ ನನ್ನ ಅಣ್ಣ ಉದರ ಬೇನೆಯಿಂದ 1932ರಲ್ಲಿ ತೀರಿಕೊಂಡ. ಮಂಗಳೂರಿನಲ್ಲಿ ನಡೆಸಿದ ಶಸ್ತ್ರಕ್ರಿಯೆ ಯಶಸ್ವಿಯಾಗದೆ ಮೃತನಾದ ಆತನನ್ನು ಅಂಗಳದಲ್ಲಿ ತಂದಿಟ್ಟಿದ್ದರು. ನನ್ನನ್ನು ನೋಡಲು ಶಾಲೆಯಿಂದ ಕರೆ ಕರೆಸಿದ್ದು, ಇವರೆಲ್ಲ ಯಾಕಾಗಿ ಅಳುತ್ತಾರೆಂದು ತಿಳಿಯದೆಯೂ ನಾನು ದನಿಗರೆದದ್ದು ಮಸಕಾಗಿ ನೆನಪಾಗುತ್ತಿದೆ. 1932ನೇ ಇಸವಿ ಇರಬಹುದು. ಅಲ್ಲಿಂದ ನಮ್ಮ ಸಂಸಾರದ ಆರ್ಥಿಕ ಸ್ಥಿತಿ ಹದಗೆಟ್ಟಿತು. ತಂದೆಯವರಿಗೆ ಪುತ್ರಶೋಕ ದಿಂದಾಗಿ ಆರೋಗ್ಯ ಕೆಟ್ಟು ದಮ್ಮು ಆರಂಭವಾಯಿತು. ಹುಬ್ಬಳ್ಳಿಯ ಅಂಗಡಿಯನ್ನು ನೋಡಿಕೊಳ್ಳಲಾಗದೆ ಅಲ್ಲಿನ ಅವ್ಯವಸ್ಥೆಯಿಂದಾಗಿ ಅದನ್ನ ಮುಚ್ಚಿ ಬಿಟ್ಟು ಊರಿಗೆ ವಾಪಸಾಗ ಬೇಕಾಯಿತು. ಆಸ್ತಿಕೊಳ್ಳುವಾಗ ಮಾಡಿದ ಅಲ್ಪಸಾಲದ ಬಡ್ಡಿಗೆ ಗದ್ದೆಗಳನ್ನು ಬಹುಪಾಲು ಪರಭಾರೆ ಮಾಡಬೇಕಾಯಿತು. ಉಳಿದ 20 ಮುಡಿ ಗೇಣಿ ಬರುವ ಗದ್ದೆಯಿಂದ ನಮ್ಮ ಸಂಸಾರದ ವೆಚ್ಚ ತೂಗಿಸುವುದು ಕಷ್ಟವೇ. ಈ ಸಂದರ್ಭದಲ್ಲಿ ಚಿಕ್ಕ ತಂದೆಯವರು ನಡೆಸುತ್ತಿದ್ದ ಗದುಗಿನ ಅಂಗಡಿ ನಿರಾತಂಕವಾಗಿ ಸಾಗಿ, ಅದರ ಕಿರಿಯುತ್ಪನ್ನದಿಂದಲೇ ಅಣ್ಣ ತಮ್ಮ ಇಬ್ಬರ ಸಂಸಾರವೂ ನಡೆಯುತ್ತಿದ್ದುದು ವಿಶೇಷವೆ. ನನ್ನ ಚಿಕ್ಕಪ್ಪ ಭಾರೀ ಕರುಣಾಳು. ಅಣ್ಣನ ಸಂಸಾರವನ್ನು ತನ್ನದೆಂದೇ ಸಾಕಿ ಸಲಹಿದರು. ಸ್ವತಂತ್ರ ಜೀವನ ನಡೆಸಿದ್ದ ನನ್ನ ತೀರ್ಥರೂಪರಿಗೆ ಬೇಕೆಂಬಷ್ಟು ಸಿಟ್ಟು ಸೆಡೆ ತಮ್ಮನ ಮೇಲೆ ಇರುತ್ತಿದ್ದರೂ ನಿರುಪಾಯರಾಗಿದ್ದರು. ಜೀವನ ನಿರ್ವಹಣೆಗೆ ತಮ್ಮನ ಸಂಪಾದನೆಯನ್ನೇ ಅವಲಂಬಿಸಿದರೂ ಗದುಗಿನ ಅಂಗಡಿಯ ಒಂದು ಕಾಲದ ಪಾಲುದಾರರೆಂಬ ಘನಸ್ತಿಕೆ ಬಿಡಲಿಲ್ಲ. ಚಿಕ್ಕಪ್ಪ ಗದುಗಿಂದ ಬಂದ ಮರುದಿನ ನಾನು ಅವರ ಮನೆಗೆ ಹೋಗಿಉಯ್ಯಾಲೆಯಲ್ಲಿ ಕೂತಿದ್ದರೆ ಸ್ವಲ್ಪ ಹೊತ್ತು ಕಳೆದು ನೂರೋ ಇನ್ನೂರೋ 'ಅಪ್ಪಯ್ಯನಿಗೆ ಕೊಡು' ಎಂದು ಕೈಯಲ್ಲಿ ಹಾಕುತ್ತಿದ್ದರು. ನಾನು ಓಡಿ ಹೋಗಿ ಅದನ್ನ ಈಚೆ ಮನೆ (ಅಂದರೆ ನಮ್ಮ ಮನೆಯಲ್ಲಿ) ತಂದೆಗೆ ಒಪ್ಪಿಸಿಬಿಡುವೆ. ಇನ್ನೊಮ್ಮೆ ಇಂಥ ದೇಣಿಗೆ ಸಿಗುವುದು ಮತ್ತೆ ನಾಲ್ಕಾರು ತಿಂಗಳ ತರುವಾಯ. ಆ ತನಕ ಭಕ್ತರ ದಿನಸಿ ಅಂಗಡಿಯಲ್ಲಿ ಸಾಲ. ಶಾಲೆಯ ಸಂಬಳಕ್ಕೆ ಹೊರತು ಬೇರೆ ದುಡ್ಡು ತಂದೆಯವರಿಂದ ಪಡೆಯುವುದು ಕಷ್ಟ. ಅದಕ್ಕಾಗಿ ಚಿಕ್ಕಪ್ಪನ ಮನೆಯಲ್ಲಿ ಉಯ್ಯಾಲೆ ತೂಗಿ ನಾನು ಉಡುಪಿಯ ಉತ್ಸವಗಳಿಗೆ ಹೋಗಲು, ನಾಲ್ಕಾಣೆ, ಎಂಟಾಣೆ ಚಿಕ್ಕಪ್ಪನಿಂದಲೇ ವಸೂಲು ಮಾಡುತ್ತಿದ್ದೆ.

ಚಿಕ್ಕಂದಿನಲ್ಲಿ ನಾನು ಭಾರೀ ಹಠಮಾರಿಯಾಗಿದ್ದೆನೆಂದು ನನ್ನ ಹತ್ತಿರದವರ ಅನುಭವ. ಕಂಡದ್ದು ಕೊಂಡು ಕೊಳ್ಳಲೇಬೇಕು – ಹೀಗೆ ಮಾಡದೇ ಹೋದಲ್ಲಿ ರಸ್ತೆಯಲ್ಲೇ ಸತ್ಯಾಗ್ರಹ, ರೋದನ, ಸಾಮಾಜಿಕ ಆರೋಗ್ಯದ ದೃಷ್ಟಿಯಿಂದಲಾದರೂ ನನಗೆ ಬೇಕಾದ್ದನ್ನ ನನ್ನ ಸಂಗಾತ ಬಂದವರು ತೆಗೆಸಿಕೊಡಲೇಬೇಕು. ಒಮ್ಮೆ ನನ್ನ ತಂದೆ ಯವರು ನನ್ನನ್ನು ಗದುಗಿಗೆ ಕರೆದೊಯ್ದರು. ಮಹಡಿ ಅಂಗಡಿಯ ಉಪ್ಪರಿಗೆಯಲ್ಲಿ ನಮ್ಮ ಮನೆ. ಹಿಂದಿನ ಹೈಸ್ಕೂಲ ಬಯಲಲ್ಲಿ ನಾನೊಂದು ಜಿಂಕೆ ಮರಿಯಂತೆ ಕಾಣುವ ಕತ್ತೆ ಮರಿಯನ್ನು ಕಂಡೆ. ಕೂಡಲೆ ಸೀತೆರಾಮನಿಗೆ ಹೇಳಿದಂತೆ ನನ್ನಮ್ಮನಿಗೆ ಆ ಮರಿ ಬೇಕು ಎಂದು ಕೂಗಾಡಿದೆ. ಅಮ್ಮ ನಮ್ಮ ಆಳು ಚಂದಯ್ಯನ ಹತ್ತಿರ ಅದನ್ನು ಹಿಡಿದುಕೊಂಡ ಬಾ ಎಂದಳು. ಚಂದಯ್ಯ ನಮ್ಮ ಊರಿನವ : ಗದುಗಿಗೂ, ಕತ್ತೆಗಳಿಗೂ ಹೊಸಬ. ಅವನು ಅದು ದನದ ಎಳೆಗರುವೆಂದು ಭಾವಿಸಿ ಆ ಮರಿಯನ್ನು ತೆಕ್ಕೆಯಲ್ಲಿ ಹಿಡಿಯಲು ಹೋದರೆ ಅದು ಅವನ ಮುಸುಡಿಗೆ ಹಿಂಗಾಲಿನ ರುಚಿ ತೋರಿಸಿಯೇ ಬಿಟ್ಟಿತು. ಕತ್ತೆ ಮರಿಯನ್ನಲ್ಲ ಎರಡು ಹಲ್ಲುಗಳನ್ನು ಹಿಡಿದುಕೊಂಡು ಬಂದ ಚಂದಯ್ಯ.

ಮೂರನೇ ನಾಲ್ಕನೇ ಕ್ಲಾಸಿನಲ್ಲಿ ನನಗೆ ಒಬ್ಬರು ಒಳ್ಳೆ ಸಮರ್ಥ ಉಪಾಧ್ಯಾಯರು ಸಿಕ್ಕಿದರು ಶ್ರೀ ಲಿಂಗಪ್ಪ ಶೆಟ್ಟರು. ಅವರು ಪ್ರೀತಿಯಿಂದ ಕಲಿಸಿಕೊಡುವುದರಲ್ಲಿ ಜಾಣರಾದ್ದರಿಂದ ಹಠಮಾರಿಯಾಗಿದ್ದ ನನ್ನನ್ನ ಪಳಗಿಸಿ ನನ್ನ ವಿದ್ಯಾಸಕ್ತಿಯನ್ನ ಅರಳಿಸುವುದರಲ್ಲಿ ಯಶಸ್ವಿಯಾದರು. ಅವರು 2 ವರ್ಷ ನಮ್ಮ ವರ್ಗದ ಅಧ್ಯಾಪಕರಾಗಿದ್ದು 3ನೇ ವರ್ಷ ನಮ್ಮನ್ನ ಬಿಟ್ಟಾಗ ನಾವೆಲ್ಲರೂ ನಿಜಕ್ಕೂ ಅತ್ತದ್ದುಂಟು. ನನಗಂತೂ ಅವರ ಪ್ರೀತಿಯ ವರ್ಷಧಾರೆ ನನ್ನ ಹಠಮಾರಿತನವನ್ನ ತೊಳೆದು ವಿದ್ಯೆಯಲ್ಲಿ ನನ್ನ ಮನಸ್ಸು ಕೇಂದ್ರೀಕರಿಸುವಂತೆ ಮಾಡಿತು. ಆ ಮೇಲೆ ನಾನು ಗಣಿತ ಬಿಟ್ಟು ಉಳಿದೆಲ್ಲ ವಿಷಯಗಳಲ್ಲಿ ಕ್ಲಾಸಿನ ಅಗ್ರಸ್ಥಾನವನ್ನು ಬಿಟ್ಟುಕೊಡಲಿಲ್ಲ.

ಕಡಿಯಾಳಿಯ ಪ್ರಾಥಮಿಕ ಹಂತದ ಕೆಲ ತರಗತಿಗಳಿಗೆ ಒಂದು ಕಠೋರ ಶಾಸನವಿತ್ತು. ಸಂಜೆಯ ಕೊನೇ ಕ್ಲಾಸಿಗೆ ಮೆನೇಜರರು ಬೆತ್ತ ಹಿಡಿದುಕೊಂಡು ಮಗ್ಗಿ ಪರೀಕ್ಷೆಗೆ ಬರುತ್ತಿದ್ದರು. ಅವರು ಎಲ್ಲರ ಪರೀಕ್ಷೆಗಾಗಿ ಬಂದರೂ ನನಗೇಕೋ ಅವರು ನನ್ನ ಪರೀಕ್ಷೆಗಾಗಿಯೇ ಬರುತ್ತಿರುವಂತೆ ಭಯ. ಅದನ್ನ ಬಿಟ್ಟರೆ ಉಳಿದ ನಾಲ್ಕು ವರ್ಷಗಳನ್ನ ನಾನು ಕಡಿಯಾಳಿಯಲ್ಲಿ ಸಂತೋಷದಿಂದ ಕಳೆದೆ. ಐದನೇ ಕ್ಲಾಸಿನಲ್ಲಿ ಆವಾಗಲೇ ನನಗೆ ಇನ್ನೊಬ್ಬರು

ಉಪಾಧ್ಯಾಯರು ಪೂರ್ವಪುಣ್ಯದಿಂದ ಒದಗಿ ಬಂದರು. ನನ್ನ ಸಾಹಿತ್ಯ ಜೀವನಕ್ಕೆ ಪ್ರಥಮ ಪ್ರೇರಣೆಯನ್ನೂ, ಪೋಷಣೆಯನ್ನೂ ಒದಗಿಸಿದ ಈ ಮಹನೀಯರಿಗೆ ನಾನು ಋಣಿ. ಅವರ ಹೆಸರು ಕಡಿಯಾಳಿ ರಾಮಚಂದ್ರ ಉಪಾಧ್ಯರು – ಕಡಿಯಾಳಿಯ ಅರ್ಚಕ ಕುಟುಂಬಕ್ಕೆ ಸೇರಿದ ಅವರು ಸಂಸ್ಕೃತ ಎಂಟ್ರೆನ್ಸ್ ಮುಗಿಸಿ ಕಡಿಯಾಳಿಯಲ್ಲಿ ಪಂಡಿತರಾಗಿ ಸೇರಿದ್ದರು. ಅವರು ಮದ್ರಾಸಿನ ಕನ್ನಡ ವಿದ್ವಾನ್ ಪರೀಕ್ಷೆಗೆ ಕಟ್ಟುತ್ತಿದ್ದುದು ನನಗೂ, ನನ್ನ ಓರಗೆಯ ಮಿತ್ರರಿಗೂ ವರದಾನವಾಯಿತು. ಅವರು ಓದುತ್ತಿದ್ದ ಕುಮಾರವ್ಯಾಸ, ಜೈಮಿನಿ ಭಾರತ, ರಾಮಾಶ್ವಮೇಧದ ಪಾಠಗಳು ನಮಗೆ ಶಿಕ್ಷಣದ ಪ್ರಾಥಮಿಕ ಹಂತದಲ್ಲೇ ದೊರೆಯುವಂತಾಯಿತು. ಪ್ರತಿ ಶನಿವಾರ, ಭಾನುವಾರ ಹಾಗೂ ರಜಾದಿನಗಳಲ್ಲಿ ನಾಲ್ಕು ತಾಸು ಪಾಠ ಕೇಳುವುದರಿಂದ ನನ್ನ ಮನಸ್ಸು ಸಾಹಿತ್ಯದ ಕಡೆಗೆ ಒಲಿಯಿತು. ಹಾಗೆಯೇ ನನ್ನಲ್ಲಿ ನಾಟಕ ಪ್ರೇಮವನ್ನು ಶ್ರೀ ಉಪಾಧ್ಯರೇ ಕುದುರಿಸಿದ್ದು. ಶಾಲಾವಾರ್ಷಿಕೋತ್ಸವದ ನಾಟಕಗಳಲ್ಲದೆ ನವರಾತ್ರಿಯ ವೇಳೆ 2–3 ನಾಟಕ ಪ್ರಯೋಗಗಳು ಇರುತ್ತಿದ್ದವು. ಸನ್ನ ಹನ್ನೊಂದನೇ ವರ್ಷದಲ್ಲೇ ನಾನು ಓದಿನಲ್ಲೂ, ಬಾಯಿಪಾಠ ವಿದ್ಯೆಯಲ್ಲೂ| ಪ್ರವೀಣನೆನಿಸಿದ್ದರಿಂದ ಉದ್ದ ಮಾತಿನ ನಾಯಕನ ಪಾತ್ರ ಪ್ರತೀ ನಾಟಕದಲ್ಲೂ ನನಗೇ ಕಟ್ಟಿಟ್ಟದ್ದು. ಪೌರಾಣಿಕವಾಗಲಿ, ಐತಿಹಾಸಿಕವಾಗಲಿ ಕೊಟ್ಟ ಪಾಠವನ್ನು 3 ದಿನದೊಳಗೆ ಕಲಿತು ಒಪ್ಪಿಸಿ, ಹೇಳಿದಷ್ಟು ಅಭಿನಯವನ್ನು ಮಾಡಿ; ಸಾಲದ್ದಕ್ಕೆ ಕಂಪ್ನಿ ನಾಟಕದ ಹಾಡುಗಳನ್ನು ಹೇಳುವುದರಲ್ಲಿ ನನ್ನನ್ನು ಮೀರಿಸುವವರಿರಲಿಲ್ಲ. ವಿಧಿವಿಲಾಸ ಎಂಬ ನಾಲ್ಕು ತಾಸಿನ ನಾಟಕದ ರಿಹರ್ಸಲ್ ದಿನ ಧ್ವನಿ ಕುಸಿದು ಬಿದ್ದ ನಾನು ಆ ಕುಸಿದ ಧ್ವನಿಯ ಅಪಸ್ವರದಲ್ಲೇ ಮರುದಿನ ನಾಯಕನ ಪಾತ್ರವನ್ನೂ ಹಾಡುಗಳನ್ನೂ ನಿರ್ವಹಿಸಿದ್ದು ನೆನಪಾಗುತ್ತದೆ.

ಕಡಿಯಾಳಿಯ ಮಕ್ಕಳಿಗೆ ನಾಟಕಾಭಿನಯ ತರಬೇತಿಯ ಸತ್ಸಂಪ್ರದಾಯ ನಲ್ವತ್ತೈದು ವರ್ಷಗಳಿಂದಲೂ ನಡೆದು ಬರುತ್ತಿದೆ. ನಾನು ಈ ಪರಂಪರೆಯಲ್ಲಿ 3 ವರ್ಷ ಕಲಿಯುತ್ತಿದ್ದಾಗ, ಪಾತ್ರ ವಹಿಸಿರುವೆನಷ್ಟೆ. ಇದು ತೊಡಗಿದ್ದು 1933ರಲ್ಲಿ ಸೀತಾಸ್ವಯಂವರವೆಂಬ ನಾಟಕದಿಂದ. ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಕೂಡಿ ಆಡಿದ ಈ ನಾಟಕ ಅಂದು ಅಖಿಲ ಉಡುಪಿಯಲ್ಲಿ ಮನೆ ಮಾತಾಗಿತ್ತು. ನಾನು ಆ ನಾಟಕ ನೋಡಿದ್ದೆ. ನಾಟಕವೆಂಬ ಒಂದು ವಿಷಯ ಇರುತ್ತದೆ ಎಂದು 8 ವರ್ಷದ ಬಾಲಕನಾದ ನನಗೆ ಪ್ರಥಮ ಬಾರಿಗೆ ಅನುಭವವಾದಂದು ಸೀತಾಸ್ವಯಂವರದಲ್ಲಿ ಆ ದಶರಥನ ಸುವರ್ಣಲೇಪಿತ ಸಿಂಹಾಸನ (ನಮ್ಮ ಹೆಡ್ಮಾಸ್ಟರರ ಕುರ್ಚಿ) ತಾಟಕಿಯಾಗಿ ಎಸ್.ಎಸ್. ಕಾರಂತ (ಆ ಮೇಲೆ ಉಡುಪಿ ಅಂತರಂಗದಲ್ಲೂ ಹುಬ್ಬಳ್ಳಿಯಲ್ಲಿ ಹರ್ಡೀಕರರ ಪತ್ರಿಕೆಯಲ್ಲೂ ಕೆಲಸ ಮಾಡಿದವರು) ಸುಬಾಹು ಮಾರೀಚರಾಗಿ ಲಿಂಗಪ್ಪ ಮಾಸ್ತರರು, ಸೋಮನಾಥ ಮಾಸ್ತರರು, ರಾಮಲಕ್ಷ್ಮಣರಾಗಿ ಗುರುರಾಜ ಮತ್ತು ಕೆ.ಕೆ.ಪೈ (ತರುವಾಯ ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರಾದರು), ಸೀತೆಯಾಗಿ ಕಾಳು ಯಾನೆ ಲಕ್ಷ್ಮೀನಾರಾಯಣ ಭಟ್ (ಫಿಲ್ಮ್ ಡಿವಿಜನ್ ನಿರ್ದೇಶಕ ಎಲ್.ಆರ್. ಭಟ್ ಇವರೇ) ನಿರ್ದೇಶಕರಾಗಿ ಅಡ್ಕ ನರಸಿಂಹಾಚಾರ್ – ಭಾರೀ ಅದ್ದೂರಿಯ ನಾಟಕ. ಶಾಲೆಯ ವಾರ್ಷಿಕೋತ್ಸವ ಪ್ರಯೋಗಗಳ ಬಳಿಕ ಊರಲ್ಲಿ ಕೆಲವೆಡೆ ಮತ್ತೆ ಪ್ರದರ್ಶನ. ಉಡುಪಿಯ ಇತಿಹಾಸದಲ್ಲೇ ದಾಖಲೆ ಮಾಡಿದ ನಾಟಕ ಇದು ಒಂದು ಪ್ರಾಥಮಿಕ ಶಾಲೆಯ ಕೊಡುಗೆ ಎಂದರೆ ಈಗಲೂ ಅಚ್ಚರಿಯೇ. ಎಲ್ಲ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಐಕಮತ್ಯದಿಂದ ದುಡಿದರೆ ಏನು ಸಾಧ್ಯವಿಲ್ಲ ಎಂಬುದನ್ನ ಕಡಿಯಾಳಿ ಶಾಲೆ ಹೆಜ್ಜೆಹೆಜ್ಜೆಗೂ ತೋರಿಸಿಕೊಟ್ಟಿತು. ಪಾಠಕ್ಕೂ ಪಾಠೇತರ ಚಟುವಟಿಕೆಗಳಿಗೂ ಸಮಾನ ಲಕ್ಷ್ಯ. ವಿದ್ಯಾರ್ಥಿಗಳ ಒಟ್ಟು ವ್ಯಕ್ತಿತ್ವ ರೂಪಿಸಲು ಕಡಿಯಾಳಿಯ ಗುರುಗಳು ಅಹರ್ನಿಶಿ ದುಡಿಯಬಲ್ಲರು.

ಶಾಲೆಗೂ ಮನೆಗೂ ಭೇದವಿಲ್ಲದೆ ಶಾಲೆಯನ್ನೇ ತಮ್ಮ ಮನೆಯೆಂದು ಭಾವಿಸುತ್ತಿದ್ದ ಅಂದಿನ ಕಡಿಯಾಳಿ ಉಪಾಧ್ಯಾಯರಲ್ಲಿ ಕೆಲವರು ಇನ್ನೂ ನಮ್ಮ ಮುಂದೆ ಬದುಕಿದ್ದಾರೆ. ನಿರ್ವ್ಯಾಜ ಪ್ರೇಮಕ್ಕೆ ಹೆಸರಾದ ಲಿಂಗಪ್ಪ ಮಾಸ್ತರರನ್ನು ಯಾವನೂ ಮರೆಯಲಾರ. ಪ್ರತೀ ವಿದ್ಯಾರ್ಥಿಯ ವಿಷಯದಲ್ಲಿ ಅವರ ಆಸಕ್ತಿ ಸಮಗ್ರ, ಅವನ ಮನೆಯ ಸ್ಥಿತಿಗತಿಗನುಗುಣವಾದ ಹಿತಚಿಂತನೆ, ಮಾರ್ಗದರ್ಶನ, ಪ್ರವಾಸ, ಸ್ಕೌಟ್ ಶಿಬಿರ ಇತ್ಯಾದಿಗಳಿಗೆ ನನ್ನ ನ್ನೊಯ್ಯುವಾಗ ಸ್ವತಃ ಮನೆಗೆ ಬಂದು ತಂದೆತಾಯಿಗಳಿಗೆ ಭರವಸೆ ಕೊಟ್ಟು ಹೋಗುವುದು ಅವರ ರೂಢಿ. ವಿಶ್ವಾಸ, ಪ್ರೇಮಗಳ ಸುರಿಮಳೆಯಲ್ಲಿ ಮಕ್ಕಳ ಆತ್ಮವಿಶ್ವಾಸ ದೃಢವಾಗುತ್ತದೆ, ಅವರ ಕರ್ತೃತ್ವ ಶಕ್ತಿ ವಿಕಾಸಗೊಳ್ಳುತ್ತದೆ ಎಂಬುದಕ್ಕೆ ಕಡಿಯಾಳಿಯ ಪ್ರತಿಭಾವಂತ ವಿದ್ಯಾರ್ಥಿಗಳು ಸಾಕ್ಷಿ ಹೇಳಬಲ್ಲರು. ಬಹಳ ವರ್ಷಗಳ ಮೇಲೆ ದಾರ್ಶನಿಕ ಜಿದ್ದು ಕೃಷ್ಣಮೂರ್ತಿಯವರ ಶಿಕ್ಷಣ ತತ್ತ್ವ ದರ್ಶನವೆಂಬ ಗ್ರಂಥದ ಅನುವಾದ ಮಾಡುವಾಗ ಅವರು ಲಿಂಗಪ್ಪ ಮಾಸ್ತರರ ವ್ಯಕ್ತಿತ್ವವನ್ನು ಬಿಡಿಸಿ ಹೇಳುತ್ತಾರೇನೋ ಎಂದು ತೋರಿತು. ಶಿಕ್ಷಣದ ಮುಖ್ಯ ಉಪಕರಣ ಪುಸ್ತಕವೂ ಅಲ್ಲ, ಕರಿ ಹಲಗೆಯೂ ಅಲ್ಲ, ಆಟದ ಬಯಲೂ ಅಲ್ಲ – ಗುರುಶಿಷ್ಯರ ನಡುವಣ ನಿರ್ಮಲ ಪ್ರೇಮ, ಅದರ ಹೊಂಬೆಳಕಲ್ಲಿ ಎಲ್ಲ ಜ್ಞಾನವೂ ಚಕ್ಷುಗೋಚರ, ಅನುಭವಗಮ್ಯ ಆದಂತೆಯೇ.

ಆಗಿನ ಕಾಲದ ಅಗ್ಗ ಬೆಲೆಯ ಶಿಕ್ಷಣವು ಕೂಡ ಅಂದಿನ ಆರ್ಥಿಕ ದುರವಸ್ಥೆಯ ಕಾಲದಲ್ಲಿ ಎಂತೆಂಥ ಪ್ರತಿಭಾವಂತರ ಕುಡಿ ಚಿವುಟಿತ್ತೆಂಬುದಕ್ಕೆ ನಮ್ಮ ನೆರೆಮನೆಯ ಸತ್ಯಮ್ಮನ ಮನೆಯ ಗುರುರಾಜ ಮತ್ತು ಕಡಿಯಾಳಿ ರಾಜಕ್ಕನ ಮಗ ಲಕ್ಷ್ಮೀನಾರಾಯಣ, ನಾರಾಯಣಾಚಾರ್ಯರ ಮಗ ಸುಂದರ ಉತ್ತಮ ಉದಾಹರಣೆ. ಮೊದಲ

ಎರಡು ಮನೆಯವರು ಮಠದ ಊಟವನ್ನೇ ಅವಲಂಬಿಸುತ್ತಿದ್ದು ಮಕ್ಕಳಿಗೆ ಶಾಲೆಯ ಫೀಸಿಗೆ ನಗದು ಹಣಕ್ಕು ಬನ್ನ ಪಡುವ ಜನರು. ಮಕ್ಕಳು ನಿಜಕ್ಕೂ ಪ್ರತಿಭಾವಂತರು – ಪಾಠದಲ್ಲಿ, ಆಟದಲ್ಲಿ, ನಾಟಕದಲ್ಲಿ. ಗುರುರಾಜ ಎಂಟನೇ ಕ್ಲಾಸಿಗೆ ಮೊದಲೇ ಶಾಲೆಬಿಟ್ಟು ಹೊಟ್ಟೆಪಾಡಿಗಾಗಿ ಹೋಟೆಲ್ ಚಾಕರಿ ಸೇರಿ ದೂರದ ಮಸಲಿಪಟ್ನಕ್ಕೆ ಹೋದರೆ ಲಕ್ಷ್ಮೀನಾರಾಯಣ ಕಲೆಗೆ ಬಲಿಬಿದ್ದು ಬಿಟ್ಟ. ಗುರುರಾಜನ ಮಾತುಗಾರಿಕೆ ಹೋಟೆಲ್ ಸೇವೆಗೆ ಸರಿಯಾದ್ದೇ ಆದರೂ ಆ ವೃತ್ತಿಯಲ್ಲಿ ಪುರೋಗಮನ ಆತನಿಗೆ ಸಾಧ್ಯವಾಗಲಿಲ್ಲ. ಎಂಟನೇ ಕ್ಲಾಸ್ ತೇರ್ಗಡೆ ಮಾಡಿಕೊಂಡು ಹೋಗಿದ್ದರೆ ಹೀಗಾಗುತ್ತಿರಲಿಲ್ಲ. ಹೈಸ್ಕೂಲು ಮುಗಿಸಿದರೂ ಸರಿ ಆಗುತ್ತಿತ್ತು. ಗುರುರಾಜನ ಶಾಲಾ ಜೀವನದಲ್ಲಿ ಒಮ್ಮೆ ಒಂದು ರಾದ್ಧಾಂತವಾಯಿತು. ಆಗಿನ ಕಾಲದ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷೆಗೆ ಮಹತ್ವದ ಸ್ಥಾನವಷ್ಟೆ. ಕೋದಂಡ ಹಾಕುವುದು – ತಪ್ಪು ಮಾಡಿದ ವಿದ್ಯಾರ್ಥಿಯನ್ನು ಹಗ್ಗದಲ್ಲಿ ನೇತಾಡಿಸಿ ಥಡಿ ಬಿಡುವುದು, ಬಸ್ಕಿ ತೆಗೆಸುವುದು, ಬೆತ್ತ ಪ್ರಯೋಗ ಇತ್ಯಾದಿ ಸಾಮಾನ್ಯ ಸಂಗತಿ. ತಂದೆ ತಾಯಿ ಇದನ್ನು ಅನುಮೋದಿಸುವ ಕಾಲ ಅದು. ಆದರೆ ಗುರುರಾಜ ತಂದೆ ಕಿಟ್ಟಣ್ಣನಿಗೆ ಏಕಮಾತ್ರ ಪುತ್ರ; ತಡವಾಗಿ ಹುಟ್ಟಿದ ಮೋಹದ ಕಂದ. ಕಡಿಯಾಳಿಯ ಶೇಷ ಮಾಸ್ತರರು ಒಮ್ಮೆ ಗುರುರಾಜನಿಗೆ ಬೆತ್ತದಲ್ಲಿ ಹೊಡೆದು ಬೆನ್ನು ಬಾಸುಂಡೆ ಮಾಡಿ ಮನೆಗೆ ಕಳುಹಿಸಿದರು. ಇದನ್ನು ನೋಡಿದವರೇ ಕಿಟ್ಟಣ್ಣ ಒಂದು ಸೋಟೆ ಹಿಡಿದುಕೊಂಡು 'ಎಲ್ಲಿರುವನಾ ಸೇಸ ಮಾಸ್ತರ್, ಒಂದು ಕೈ ನೋಡಿಯೇ ಬಿಡುತ್ತೇನೆ' ಎಂದು ಕಂಬದೊಳಗಿಂದ ಬಂದ ನರಸಿಂಹನಂತೆ ಶಾಲೆಯವರೆಗೆ ಆರ್ಭಟಿಸಿ ಬಂದರು. ಲಕ್ಷ್ಮೀನಾರಾಯಣ ಹೈಸ್ಕೂಲ್ ಮೊದಲ ವರ್ಷ ಸೇರಿದ್ದ. ಆದರೆ ದಾಸಭಟ್ಟರು ಅವನನ್ನು ನಾಟಕ ಕಂಪೆನಿಗೆ ಎಳೆದುಕೊಂಡು ಬಿಟ್ಟರು. ಒಳ್ಳೆ ಸೂಟಿಯಾಗಿ ಪ್ರಹ್ಲಾದ, ಕೃಷ್ಣಲೀಲೆಯ ಕೃಷ್ಣ ಮುಂತಾದ ಬಾಲಪಾತ್ರಗಳನ್ನು ನಿರ್ವಹಿಸುತ್ತಿದ್ದ ಲಕ್ಷ್ಮೀನಾರಾಯಣ ದಾಸಭಟ್ಟರು ಆಗತಾನೇ ಕಟ್ಟುತ್ತಿದ್ದ ಕಂಪೆನಿಗೆ ಅಗತ್ಯನಾಗಿದ್ದ. ತಾಯಿ ರಾಜಕ್ಕ ಏನು ಹೇಳಿದರೂ ಹುಡುಗ ನಾಟಕದ ಆಕರ್ಷಣೆ ಬಿಡಲೊಲ್ಲ. ಶಾಲೆ ಬಿಟ್ಟೇ ಬಿಟ್ಟ. ರಾಜಕ್ಕ ದಾಸಭಟ್ಟರಿಗೆ ಶಾಪ ಹಾಕಿದರು. ಕೊನೆಗೆ ಅವರಿಗೂ ಒಬ್ಬನೇ ಮಗನಾದ್ದರಿಂದ ರಾಜಿ ಮಾಡಿಕೊಂಡರು. ಔಪಚಾರಿಕ ಶಿಕ್ಷಣವನ್ನು ಪಡೆಯದಿದ್ದರೂ ಕಲಾಮಾರ್ಗವನ್ನೇ ಸುತ್ತಿ ಬಳಸಿ ಲಕ್ಷ್ಮೀನಾರಾಯಣ ಮುಂಬಯಿಗೆ ಹೋಗಿ ಗುರಿ ತಲಪಿದ. ಸಂಗೀತ ಮೇಷ್ಟ್ರಾಗಿ ಮುಂಬಯಿ ಜೀವನ ಆರಂಭಿಸಿ 20 ವರುಷಗಳಲ್ಲಿ ವಿಷ್ಣುದಾಸ ಶಿರಾಲಿಯವರಿಗೆ ಸಹಾಯಕನಾಗಿ ಫಿಲ್ಮ್ ಡಿವಿಜನ್ ಸೇರಿ ತಕ್ಕಮಟ್ಟಿನ ಆರ್ಥಿಕ ಅಭ್ಯುದಯವನ್ನು ಸಾಧಿಸಿಕೊಂಡ ಎನ್ನಬಹುದು. ಲಕ್ಷ್ಮೀನಾರಾಯಣ ಊರಲ್ಲಿ ಸಂಗೀತ ಪಾಠ ಹೇಳುತ್ತಿದ್ದಾಗ ನನ್ನ ತಂದೆ ನನಗೆ ಸಂಗೀತ ಕಲಿಸುವುದಕ್ಕಾಗಿ ಅವನನ್ನ ನೇಮಿಸಿದರು. ಹಾರ್ಮೋನಿಯಂ ಹಿಡಿದುಕೊಂಡು ಸಾ – ಪಾ – ಸಾ ಎಬ್ಬಿಸಿದರೂ ನನ್ನ ಮನಸ್ಸು ಸಂಗೀತಕ್ಕೆ ಒಗ್ಗದಾಯಿತು. ಸಂಗೀತ ಕೇಳುತ್ತೇನೆ, ಹೇಳುವುದಿಲ್ಲ ಎಂದು ತಂದೆಯವರಿಗೆ ಕರಾರುವಾಕ್ಕಾಗಿ ಹೇಳಿದೆ. ಪಾಠ ಒಂದು ತಿಂಗಳಲ್ಲಿಯೇ ಖತಮ್ಮಾಯಿತು. ಮೂರು ರೂಪಾಯಿ ಮತ್ತು ದಿನಾ ಕಾಫಿ-ಹಪ್ಪಳ ಕೊಟ್ಟಿದ್ದೀಯಾ ನೀನು ನನಗೆ ಎಂದು ಲಕ್ಷ್ಮೀನಾರಾಯಣ ಭಟ್ಟರು ಆ ಮೇಲೆ ನನ್ನ ಲೇವಡಿ ಮಾಡುವುದಿತ್ತು.

ನನ್ನ ಸಮಕಾಲೀನರಾಗಿ ಕಡಿಯಾಳಿಯ ಗರಡಿಯಲ್ಲಿ ಪಳಗಿದ ಇನ್ನಿಬ್ಬರು ನನ್ನ ಜೀವನ ಸಾಥಿಗಳಾಗಿ, ಸ್ನೇಹಿತರಾಗಿ, ಹಿತವಂದಿಗರಾಗಿ ಉಳಿದು ಬಂದಿದ್ದಾರೆ. ಅವರೇ ಕಲ್ಸಂಕದ ಪೈಗಳು – ಕಮಲಾಕ್ಷ ಪೈ (ಕೆ.ಕೆ.ಪೈ) ಮತ್ತು ಪ್ರಭಾಕರ ಪೈ ಎಂಬಿಬ್ಬರು ಅಣ್ಣ ತಮ್ಮಂದಿರು. ಇವರ ಮನೆಗೂ ನಮ್ಮ ಮನೆಗೂ ಒಂದೇ ಗೋಡೆ ಅಡ್ಡ. ಭಾನುವಾರ ರಜಾದಿನಗಳಲ್ಲಿ ನಮಗೆ ಅವರ ಮನೆಯಲ್ಲೇ ವಾಸ್ತವ್ಯ. ಅಲ್ಲಿ ಅವರ ತಾಯಿ ದುರ್ಗಮ್ಮ ಕೊಡುತ್ತಿದ್ದ ತಿಂಡಿ ತಿನಸು, ಅಲ್ಲಿನ ಮುಕ್ತ ವಾತಾವರಣದಲ್ಲಿ ಗೆಳೆಯರ ಗುಂಪಿನ ಆಟ – ಪಾಠ. ಈ ಪೈಕಿ ಪ್ರಭಾಕರನ ಸಖ್ಯ ನನಗೆ ಬಹಳ ಇಷ್ಟವಾಗಿದ್ದು. ಆಟದ ಬಯಲು, ನಾಟಕ ಶಾಲೆ ಎಲ್ಲೆಲ್ಲೂ ಆತ ಜತೆಗಿದ್ದರೆ ಸಂತೋಷ, ಜತೆಗೆ ಕ್ರಿಕೆಟ್‌ನಲ್ಲಿ ಗಟ್ಟಿಗರಾದ ಕೆ. ಪಿ. ಕುಮಾರನ್, ಗೋಪಾಲನ್ ಸೋದರರು. ಕಡಿಯಾಳಿ, ಸಗ್ರಿ, ದೊಡ್ಡಣಗುಡ್ಡೆ, ಬೀಡಿನಗುಡ್ಡೆಯಲ್ಲಿ ನಮ್ಮ ಮ್ಯಾಚ್‌ಗಳು. ಈಗ ಯೋಚಿಸಿದರೆ ಆಶ್ಚರ್ಯವಾಗುತ್ತದೆ – ದಿನವಿಡೀ ಆಟವಾಡಿ ಮನೆಗೆ ವಾಪಸಾಗಿ ಅದು ಹೇಗೆ ಓದಿ ಪಾಸಾದೆ ಎಂಬುದೇ. ನಾನೆಂದೂ ಪುಸ್ತಕದ ಕೀಟವಾಗದಿರಲು ಈ ಪೈ ಮಿತ್ರರು ಕಾರಣ. ಆ ಮೇಲೆ ನನ್ನ ಬದುಕಿನಲ್ಲಿ ಇವರು ಆಳವಾದ ಪ್ರಭಾವ ಬೀರಿದರು, ನೆರವು ನೀಡಿದರು, ಆಪದ್ಬಾಂಧವರೆನಿಸಿದರು. ನನ್ನ ನಿರುದ್ಯೋಗ ಪರ್ವದಲ್ಲಿ, ಉದ್ಯೋಗ ಪರ್ವದಲ್ಲಿ, ತದನಂತರ ನಿವೃತ್ತಿಯಲ್ಲಿ ಪ್ರವೃತ್ತಿಯಲ್ಲಿ ಇವರದು ಒಂದು ರೀತಿಯ ಸಹಯೋಗ, ಸಹಚಿಂತನ, ಸಹಮತ. ಪರಸ್ಪರ ಸಂಸಾರದ ಸುಖದುಃಖದಲ್ಲಿ ಸಮಭಾಗಿಗಳು ನಾವು. ಇನ್ನು ಬರೆಯುವುದುಂಟು ಅವರ ಬಗ್ಗೆ.

೩ ಮರುಧರೆಯ ಯಾತ್ರಿಕ

ಕಡಿಯಾಳಿಯ ಪ್ರೇಮಮಯ ವಾತಾವರಣದಿಂದ ಉಡುಪಿ ಬೋರ್ಡ್ ಹೈಸ್ಕೂಲಿಗೆ ಮುಂದಡಿ ಇಟ್ಟದ್ದು ಒಂದು ಮರುಳುಗಾಡಿನಲ್ಲಿ ಕಾಲಿಟ್ಟ ಹಾಗೆಯೇ ಆಯಿತು. ತಾಲೂಕು ಬೋರ್ಡಿನ ಆಡಳಿತವುಳ್ಳ ಉಡುಪಿ ಬೋರ್ಡ್ ಹೈಸ್ಕೂಲನ್ನು ನಾನು 1937ರಲ್ಲಿ ಸೇರಿಕೊಂಡೆ. ಪ್ರಾಥಮಿಕ ಶಾಲೆಯಿಂದ ಬರುವ ಹುಡುಗರನ್ನು ಪ್ರವೇಶ ಪರೀಕ್ಷೆಗೊಳಪಡಿಸಿ ಮುಂದಿನ ವರ್ಗ (9ನೇ ಕ್ಲಾಸು – 4ನೇ ಫಾರ್ಮ್)ಕ್ಕೆ ಸೇರಿಸಿಕೊಳ್ಳುವುದು ಪದ್ಧತಿ. ಇಂಗ್ಲಿಷ್, ಗಣಿತಗಳಲ್ಲಿ ನಡೆದ ಈ ಪರೀಕ್ಷೆಗೆ ಬೋರ್ಡ್ ಶಾಲೆಯ ಅಧ್ಯಾಪಕ ಸಾಹಿತಿ ಕೊರಡ್ಕಲ್ ಶ್ರೀನಿವಾಸರಾಯರು ಮೇಲ್ವಿಚಾರಕರಾಗಿ ಬಂದಿದ್ದರು. ಕಡಿಯಾಳಿಯಿಂದ ಪರೀಕ್ಷೆಗೆ ಕೂತ ಎಲ್ಲರಿಗೂ ಹೈಸ್ಕೂಲಲ್ಲಿ ಸ್ಥಳ ಸಿಕ್ಕಿತೆನ್ನಿ. ಬೋರ್ಡ್ ಶಾಲೆಯ ಪಾಠ ಪ್ರವಚನ ಚೆನ್ನಾಗಿಯೇ ನಡೆದರೂ ವಿದ್ಯಾರ್ಥಿ ಶಿಕ್ಷಕರ ಮಧ್ಯೆ ಹೇಳಿಕೊಳ್ಳುವಂಥ ಮಧುರ ಬಾಂಧವ್ಯ ಇರಲಿಲ್ಲ. ಪ್ರಾಯಃ ಕಡಿಯಾಳಿಯ ಸನ್ನಿವೇಶದಿಂದ ಬಂದ ನಮಗೆ ಮಾತ್ರ ಹಾಗನಿಸುತ್ತಿತ್ತೋ ಉಳಿದವರಿಗೆ ವ್ಯತ್ಯಾಸ ತಿಳಿಯದೋ? ಒಳ್ಳೆಯ ಅಧ್ಯಾಪಕರು ಇಲ್ಲಿಯೂ ಇದ್ದರು. ಗಣಿತದ ಅಧ್ಯಾಪಕ ಮಂಜುನಾಥ ಮಧ್ಯಸ್ಥರು ಕಲಿಸುವುದರಲ್ಲಿ ಜಾಣರು – ಆದರೆ ಹುಡುಗರಿಗೆ ಅನಾವಶ್ಯಕವಾಗಿ ಭೀತಿ ಹುಟ್ಟಿಸುತ್ತಿದ್ದರು. ನನಗೆ ಮೊದಲ ಪರೀಕ್ಷೆಯಲ್ಲಿ 35 ಅಂಕಗಳನ್ನು ಮಾತ್ರ ಕೊಟ್ಟು ನೆಲೆ ತಪ್ಪುವಂತೆ ಮಾಡಿದರು. ಹೆಚ್ಚು ಕೊಟ್ಟರೆ ನಿಮಗೆ ತಲೆ ತಿರುಗೀತು ಎಂಬುದು ಅವರ ವಾದ. ಇತಿಹಾಸ ಅಧ್ಯಾಪಕ ನರಸಿಂಗರಾಯರು ತುಂಬಾ ಸಾಧು ಸ್ವಭಾವದ ಮನುಷ್ಯ. ತುಂಟ ಹುಡುಗರಿಗೆ 'ನೋಡಿ, ಒಂದು ದಿನ ನೀವೂ ನನ್ನ ಹಾಗೆ ಮಾಸ್ತರರಾಗಬೇಕು' ಎಂದು ಆಶೀರ್ವಾದ ಮಾಡುವುದರ ಹೊರತು ಗಟ್ಟಿಯಾಗಿ ಗದರಿಸಲೂ ತಿಳಿಯದವರು. ಉದ್ಯಾವರ ವೆಂಕಟರಾಯರು ಇಂಗ್ಲಿಷ್ ಕಲಿಸುತ್ತಿದ್ದರು. ಇವರು ಕುಳ್ಳಗಿನ ಆಳು, ಖಾದೀವಾದಿ, ಗಾಂಧೀ ಚಳವಳಿ ಯುಗದಲ್ಲಿ ಹರಿಜನರೊಡನೆ ಊಟ ಮಾಡುವಷ್ಟು ಪ್ರಗತಿಶೀಲರು. ವ್ಯಾಕರಣ ಎಂದೂ ತಪ್ಪಲಾರದ ನನ್ನ ಇಂಗ್ಲಿಷ್ ಪ್ರಬಂಧವನ್ನು ತಿದ್ದಿ ಮೆಚ್ಚಿಗೆ ಸೂಚಿಸುವುದಿತ್ತು. ವೆಂಕಟರಾಯರ ಮಕ್ಕಳಲ್ಲಿ ಕೆಲವರು ಮುಂಬಯಿ ಪತ್ರಿಕೋದ್ಯಮದಲ್ಲಿ ಆ ಮೇಲೆ ಕೀರ್ತಿ ಗಳಿಸಿದರು. ಯು.ಜಿ. ರಾವ್, ಯು. ಎಸ್. ರಾವ್, ಲಕ್ಷ್ಮೀಪತಿ ರಾವ್ – ಮುಂಬಯಿಯ ಟೈಮ್ಸ್, ಫಿಲ್ಮ್‌ಫೇರ್ ಮುಂತಾದ ಪತ್ರಿಕೆಗಳಲ್ಲಿ ಕೆಳಗಿನಿಂದ ದುಡಿಯುತ್ತ ಬಂದು ಸಂಪಾದಕಸ್ಥಾನವರೆಗೋ ಅದಕ್ಕೆ ಸಮೀಪವೋ ಉತ್ತೀರ್ಣಗೊಂಡವರು. ಕನ್ನಡ ಪಂಡಿತರಾದ ರಾಘವೇಂದ್ರ ಬಲ್ಲಾಳರು ಸಮರ್ಥರು. ಕಡಿಯಾಳಿಯಿಂದ ಬರುವ ಹುಡುಗರ ಕನ್ನಡ ಪ್ರಾವೀಣ್ಯದ ಬಗ್ಗೆ ಖಚಿತ ಅರಿವುಳ್ಳವರಾದ್ದರಿಂದ ವರ್ಗದಲ್ಲಿ ನಮ್ಮ ಬಗ್ಗೆ ಜಾಗರೂಕರಾಗಿರುತ್ತಿದ್ದರು. ಕ್ಲಾಸಿನಲ್ಲಿ ಯಾವತ್ತೂ ಮಿಣ್ಣಗೆ ಎಲೆಮರೆಯ ಕಾಯಂತೆ ಕೂತಿರುತ್ತಿದ್ದ ನನಗೊಂದು ದಿನ ಗಾಳಿ ಹೊಕ್ಕಂತಾಗಿ ಬಲ್ಲಾಳರಿಗೆ ಪ್ರಶ್ನೆ ಕೇಳಿ ಬಿಟ್ಟೆ. ಯಾವುದೋ ಕಾವ್ಯ ಪಾಠದಲ್ಲಿ ರಾಹುವೋ ಕೇತುವೋ ಭೂಮಿಗೆ ಬಿದ್ದ ಹಾಗೆ ಯಾವನೋ ಬಿದ್ದನೆಂದು ಅತಿಶಯೋಕ್ತಿಯ ವರ್ಣನೆ ಬಂದಿತ್ತು. ಅದನ್ನ ಅವರು ವಿವರಿಸುತ್ತಿದ್ದರು. ಸಟಕ್ಕನೆ ಎದ್ದು ನಿಂತು 'ಅದು ಹೇಗೆ ಬೀಳೋದು? ಈ ಕವಿ ಏನು ನೋಡಿದ್ದಾನಾ?' ಎಂದು ಕೇಳಿ ಬಿಟ್ಟೆ. ಹುಡುಗರು ಮುಸಿ ಮುಸಿ ನಕ್ಕರು. ಬಲ್ಲಾಳರು ಸಿಟ್ಟಿಂದ 'ಕೂತುಕೋ ಮಂಗಾ, ಕವಿ ಕಲ್ಪನೆಯಿಂದ ಏನೂ ಹೇಳಬಹುದು, ನೋಡಿಯೇ ಬರೆಯಬೇಕೆಂತ ಇಲ್ಲ' ಎಂದರು. ಮನಸ್ಸಿಗೆ ಬಂದದ್ದು ಹೇಳಿ ದಕ್ಕಿಸಿಕೊಳ್ಳಬೇಕಾದರೆ ಕವಿ ಆಗಬೇಕೆಂಬುದು ಅಂದಿನಿಂದ ನನ್ನ ಮನಸ್ಸಿನಲ್ಲಿ ಬೇರೂರಿತು! ಬಲ್ಲಾಳರು ಹೈಸ್ಕೂಲಿಗೆ ದಿನಾ ಬರುತ್ತಿದ್ದುದು ಹೆಡ್ಮಾಸ್ತರ್ ರಾಕೀ ಫೆರ್ನಾಂಡಿಸ್ ಜತೆಗೆ. ಇಬ್ಬರ ದಾರಿಯೂ ಒಂದೇ. ಅಂಬಲ್ಪಾಡಿಯಿಂದ ಸಂತೆಕಟ್ಟೆವರೆಗೆ ಇವರಿಬ್ಬರೂ ನಡೆದುಕೊಂಡು ಬರುವಾಗ ಒಂದು ದೃಶ್ಯ ಜೋಡಣೆ ಆಗುತ್ತಿತ್ತು. ರಾಕೀ ಫೆರ್ನಾಂಡಿಸರು ಅರಡಿ ಎತ್ತರದ ಆಳು; ಬಲ್ಲಾಳರು 5 ಅಡಿಗೆ ಮೇಲೆ ಹೋಗರು. 'ದಿಲಾಂಗ್ ಎಂಡ್ ದಶಾರ್ಟ್ ಆಫ್ ಇಟ್' ಎಂಬುದಕ್ಕೆ ಅವರೇ ಉದಾಹರಣೆ ಎಂದು ಹುಡುಗರೊಳಗೆ ಗುಸುಗುಸು. ಹೆಡ್ಮಾಸ್ತರರು ಒಳ್ಳೇ ಶಿಸ್ತುಗಾರ. ಹುಡುಗರ ಹತ್ತಿರ ಯಾವುದೋ ವರ್ಷ ತಕರಾರು ಮಾಡಿಕೊಂಡು ವಿದಾಯ ಕೂಟದ ಸಭೆ, ಹಾರ, ಫೋಟೋ ಮುಂತಾದ ಸಂಪ್ರದಾಯವನ್ನು ಬಂದ್ ಮಾಡಿಸಿಟ್ಟಿದ್ದರು. ಪಾಠ ಕಲಿತು ಹೊರಗೆ ಹೋಗುವುದು – ಇಷ್ಟು ಬೋರ್ಡ್ ಶಾಲೆಯ ಪರಮಗುರಿ. ಫೆರ್ನಾಂಡಿಸರ ಇಂಗ್ಲಿಷ್ ವಾಗ್ಮಿತೆ ಚೆನ್ನಾಗಿತ್ತು; ಪಾಠವೂ ಅಹ್ಲಾದಕರವಾಗಿರುತ್ತಿತ್ತು. ಮೊದಲ ಬಾರಿಗೆ ಇಂಗ್ಲಿಷಿನಂಥ ಇಂಗ್ಲಿಷ್ ನಾನು ಕೇಳಿದ್ದು ಫೆರ್ನಾಂಡೀಸರ ಬಾಯಿಂದ. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನಾಲ್ಕು ದಿನ ಇರುವಾಗ ಎಲ್ಲಾ ಪಾಠಗಳೂ ಮೌನವಾಗಿ ಓದುವ ಅಧಿವೇಶನಗಳಾಗುತ್ತಿದ್ದುವು. ಫೆರ್ನಾಂಡೀಸರು ಕ್ಲಾಸಿಗೆ ಬಂದು ಹುಡುಗರಿಗೆ ಓದಲು ಹೇಳಿದರು. ಆ ದಿನ ನಾನು ತಡವಾಗಿ ಬಂದಿದ್ದೆ. ನೋಡಿದರೆ ಫೆರ್ನಾಂಡೀಸರು ಬೋರ್ಡಿಗೆ ಮುಖ ಮಾಡಿ ಧ್ಯಾನದಲ್ಲಿದ್ದಾರೆ. ಇದೇ ಒಳ್ಳೆ ಸಮಯವೆಂದು ಸದ್ದು ಮಾಡದೆ ನುಸುಳಿ ನನ್ನ ಸ್ಥಾನ ಸೇರಿ ಇನ್ನೇನು ಕೂತುಕೊಳ್ಳಬೇಕೆನ್ನುವಷ್ಟರಲ್ಲಿ ಮೂರನೇ ಕಣ್ಣಿನಿಂದ ನೋಡಿಯೇ ಇದ್ದ ಫೆರ್ನಾಂಡೀಸರು 'ಯಾರೋ ಅದು, ಅಪ್ಪಣೆ ಇಲ್ಲದೆ ಒಳಗೆ ಬಂದವನು – ನಡೆ ಹೊರಗೆ' ಎಂದರು.

ನಾನು ಹೊರಟಾಗ 'ಸಾಕು ಕೂತುಕೋ' ಎಂದರು. ಹಾಗೆಯೇ ಪರೀಕ್ಷೆಯಲ್ಲಿ ಹೈಸ್ಕೂಲಿಗೆ ಸರ್ವ ಪ್ರಥಮನಾಗಿ ಪಾಸಾಗಿ ಪ್ರಮಾಣಪತ್ರ ತೆಗೆದುಕೊಳ್ಳಲು ಹೋದಾಗಲೂ ಬೈದರು (ನ್ಯಾಯವಾಗಿ) ನಾನು ನನ್ನ ದಸ್ಕತಿನ ಕೆಳಗಡೆ ತಾರೀಕು ಹಾಕಿರಲಿಲ್ಲ. 'ತಾರೀಕೆಲ್ಲಿ?' ಎಂದು ಅವರ ಕಂಚಿನ ಕಂಠ ಗದರಿದ್ದೇ ತಡ ಓಡಿನ ದಿನದ ತಾರೀಕು ಹಾಕಿಬಿಟ್ಟೆ. 'ಯಾಕೋ ಸರಿಯಾಗಿ ತಾರೀಕು ಬರೆಯಲಿಕ್ಕೂ ನೆನಪಿಡಲಿಕ್ಕೂ ಬಾರದವನು ನೀನೇನು ಮಾಡುತ್ತೀಯ ಜೀವನದಲ್ಲಿ?' ಎಂದು ಮತ್ತೊಮ್ಮೆ ದನಿ ಎತ್ತಿದ್ದರು. (ನಿಮ್ಮ ಮಕ್ಕಳಿಗೆ ಹಾಗೆ ಮಾಡಬೇಡಿ ಎಂದು ಪಾಠ ಮಾಡುತ್ತೇನೆ ಎಂದು ಹೇಳಬಹುದಾಗಿತ್ತು ನನಗೆ ನನ್ನ ಮತ್ತು ಭವಿಷ್ಯದ ಹೊಳಹು ಇದ್ದಿದ್ದರೆ. ಏಕೆಂದರೆ ಅವರ ನಾಲ್ಕು ಮಕ್ಕಳು ಕಾಲೇಜಿನಲ್ಲಿ ತದನಂತರ ನನ್ನ ಶಿಷ್ಯರಾದರು) ಮೋರೆ ಕೆಳಗಿಟ್ಟೆ. 'ಅದು ಸರಿ, ಯಾವ ಕಾಲೇಜಿಗೆ ಹೋಗುತ್ತೀ?'; 'ಇಲ್ಲ ಸಾರ್ ನಾನು ಕಾಲೇಜಿಗೆ ಹೋಗುವುದಿಲ್ಲ, ಉಪಾಧ್ಯಾಯರ ಟ್ರೈನಿಂಗ್‌ಗೆ ಹೋಗುತ್ತೇನೆ' ಎಂದೆ. ಕೊಠಡಿಯಲ್ಲಿದ್ದ ಜಲ್ಲಾಳರು 'ಛೆ ಛೇ ನೀನು ಕಾಲೇಜಿಗೆ ಹೋಗುವ ಯೋಗ್ಯತೆ ಉಳ್ಳವನು, ನಾನು ಬೇಕಿದ್ದರೆ ಹೇಳುತ್ತೇನೆ ನಿನ್ನ ಮನೆಯವರಿಗೆ' ಎಂದು ದನಿಕೂಡಿಸಿದರು. ರಾಕೀ ಫೆರ್ನಾಂಡಿಸರು ಬೋರ್ಡ್ ಶಾಲೆಗೆ ಒಂದು ಜನತಾಹಾಲ್ ಕಟ್ಟಿಸಿ ತಮ್ಮ ಸ್ಮಾರಕ ನಿಲ್ಲಿಸಿ ಹೋಗಿದ್ದಾರೆ. ಬೋರ್ಡ್ ಹೈಸ್ಕೂಲ್ ಒಂದು ಪುರಾತನ ಜೈಲಾಗಿತ್ತಂತೆ. ಅಂದರೆ ಕಟ್ಟಡಗಳು ಶತಮಾನೋತ್ಸವಕ್ಕೆ ಹತ್ತಿರ ಬರುವ ಸೂಚನೆಗಳನ್ನು ಕೊಡುತ್ತಿವೆ. ಆದರೆ ಜಿಲ್ಲಾ ಬೋರ್ಡಾಗಲಿ, ಈಗ ಆಡಳಿತ ನಡೆಸುವ ಸರ್ಕಾರವಾಗಲಿ ಅದರ ರಿಪೇರಿ ಕೂಡ ಮಾಡುತ್ತಿಲ್ಲ. ಹಳೇ ವಿದ್ಯಾರ್ಥಿಗಳು ಕೆಲವು ವರ್ಷ ಪ್ರಯತ್ನಿಸಿದರೂ ಏನೂ ಆಗಿಲ್ಲ. ಒಂದೆರಡು ಹೊಸ ಕಟ್ಟಡಗಳು ಬಂದಿದ್ದರೂ ಸರ್ಕಾರಿ ಕೆಂಪು ಪಟ್ಟಿಯ ಆಡಳಿತದ ಜತೆ ಸಹಕರಿಸಲು ಯಾರೂ ಸಿದ್ಧರಿಲ್ಲ. ಸಾಲದ್ದಕ್ಕೆ ಅದರೊಳಗೆ ಜೂನಿಯರ್ ಕಾಲೇಜನ್ನು ತುರುಕಲಾಗಿದೆ. ಪ್ರಜಾಪ್ರಭುತ್ವದ ಒತ್ತಡ ಅಥವಾ ಪೀಡೆಗೆ ಜನ್ಮವೆತ್ತುವ ವಿದ್ಯಾಸಂಸ್ಥೆಗಳಿಗೆ ಪೋಷಣೆಯ ಮಾತು ಬಂದಾಗ ಪ್ರಜಾಪ್ರಭುತ್ವ ದಿವ್ಯ ನಿರ್ಲಕ್ಷ್ಯದಿಂದಿರುತ್ತದೆ. ಈಗ ಬೋರ್ಡ್ ಹೈಸ್ಕೂಲಿನ ಪರಿಸರ ಖಾಸಗೀ ಹೈಸ್ಕೂಲುಗಳಿಗೆ ಹೋಲಿಸಿದರೆ ಏನೂ ಅಲ್ಲ. ಹೆಡ್ಮಾಸ್ತರ ಕೊಠಡಿಯ ಮೇಲ್ಮಾಡು ಪೂರ್ತಿ ಕುಸಿದಿದೆ. ಒಂದಲ್ಲ ಒಂದು ದಿನ ಈ ಶಾಲೆ ತನ್ನ ಸದ್ದು ಮಾಡಿ ಸುದ್ದಿ ಮಾಡುತ್ತದೆ;

ಸ್ಪಷ್ಟವಾಗಿ ನೆನಪಿಡುವ ಒಂದು ವಿಷಯ ಎಂದರೆ ನನ್ನ ಶಾಲಾ ದಿನಗಳಲ್ಲಿ ಅಜ್ಜರಕಾಡು ಮೈದಾನಿನಲ್ಲಿ ನಡೆಯುತ್ತಿದ್ದ ಕ್ರಿಕೆಟ್ ಮ್ಯಾಚ್. ಆಕ್ಸ್‌ಫರ್ಡ್ ಕೆಂಬ್ರಿಜ್ ನಡುವಣ ಬೋರ್ಡ್ ರೇಸಿನಷ್ಟೇ ಪ್ರಾಮುಖ್ಯ ಇದು. ನಮ್ಮ ಶಾಲೆಗೂ ಕ್ರಿಶ್ಚನ್ ಹೈಸ್ಕೂಲಿಗೂ ನಡುವೆ ಮ್ಯಾಚ್ ನಡೆದಾಗ ಕ್ಲಾಸು ತಪ್ಪಿಸುವ ವಿದ್ಯಾರ್ಥಿಗಳಷ್ಟೇ ಮಂದಿ ಇದ್ದರು. ನನ್ನ ಜತೆ ಕಡಿಯಾಳಿಯಿಂದ ಬಂದ ಕೆ. ಪಿ. ಕುಮಾರನ್ ಮತ್ತು ಗೋಪಾಲನ್ ಬೋರ್ಡ್ ಶಾಲೆಯ ಓಪನಿಂಗ್ ಬ್ಯಾಟ್ಸ್‌ಮನ್ ಆದರು. ನಾನು ಓದುವ ಗೀಳಿನ ದೆಸೆಯಿಂದ ಆಟದ ಬಯಲಿಂದ ದೂರ ನಿಂತೆ. ಇಲ್ಲವಾದರೆ ಫೀಲ್ಡಿಂಗ್ ಮತ್ತು ಬೌಲಿಂಗ್‌ನಲ್ಲಿ ನನಗೆ ಸ್ಥಾನ ದೊರಕಿಸಿಕೊಳ್ಳಬಹುದಿತ್ತು. ಬೋರ್ಡ್ ಕ್ರಿಶ್ಚನ್ ಕ್ರಿಕೆಟ್ ಪಂದ್ಯ ಎಂದರ ಅಂದಿನ ಉಡುಪಿಯ ಒಂದು ಹಬ್ಬವೇ ಆಗಿತ್ತು. ನಾಲ್ಕು ದಿನ ಜನರು ಮಾತಾಡಿಕೊಳ್ಳುವ ಪ್ರಸಂಗ ಅದು (ನಾನು ಕ್ರಿಶ್ಚನ್ ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿದ್ದ ವರ್ಷ ಒಂದೇ ಕ್ರಿಶ್ಚನ್ ಹೈಸ್ಕೂಲ್ ಎಲ್ಲ ಮ್ಯಾಚ್‌ಗಳಲ್ಲೂ ಗೆದ್ದುಕೊಂಡು ಕಪ್ಪನ್ನು ಇಡಿ ಉಡುಪಿಗೆ ತೋರಿಸಲು ಜಟ್ಕಾ ಬಂಡಿಯಲ್ಲಿ ಮೆರವಣಿಗೆ ಹೊರಟದ್ದುಂಟು).

೪ ಉಪಾಧ್ಯಾಯ ತರಬೇತಿ

ನಮ್ಮ ಮನೆಗೆ ಕೆಲ ವರ್ಷಗಳಿಂದ ಗುಂಡ್ಮಿ ಕಡೆಯಿಂದ ಒಬ್ಬರು ಜೋಯಿಸರು ಬರುತ್ತಿದ್ದರು. ಮನೆಯ ಪಕ್ಕದಲ್ಲಿದ್ದ ಚಿನ್ನದ ಕೆಲಸದ ನಾರಾಯಣ ಆಚಾರಿಯವರ ಮೂಲಕ ನಮಗೆ ಅವರ ಪರಿಚಯವಾದದ್ದು. ಅವರಿಗೆ ನಮ್ಮಲ್ಲೆ ಊಟ. ಹಗಲು ಹೊತ್ತಿಗೆ ಅವರು ಕಾರ್ಯಾರ್ಥ ಎಲ್ಲೆಲ್ಲಿಗೋ ಹೋದರೂ ಸಂಜೆ ಮನೆಗೆ ಬರುತ್ತಿದ್ದರು. ತಂದೆಯವರು ತನಗೆ ಚಡಾವು ಹೊಲಿಸುವಾಗ ಅವರಿಗೂ ಒಂದು ಹೊಲಿಸಿ ಕೊಡುವುದಿತ್ತು. ಲೋಕಾಭಿರಾಮವಾಗಿ ಮಾತಾಡಲು ಐತಾಳ ಜೋಯಿಸರು ಎತ್ತಿದ ಕೈ. ಒಂದು ದಿನ ತಂದೆಯವರು ಇವರಿಗೆ ಕೈ ತೋರಿಸು ಎಂದು ಬಿಟ್ಟರು. ನಾನು ತೋರಿಸಿದೆ: ಐತಾಳರು ಇವನಿಗೆ ವಿದ್ಯೆಯಲ್ಲಿ ವಿಘ್ನಕಾರಕನಿದ್ದಾನೆ. ಆದರೆ ಅದನ್ನು ಮೀರಿ ಇವನು ಮುಂದೆ ಹೋಗುವುದೇ ಸೈ ಎಂದರು. ಜೋಯಿಸರ ಮಾತು ಹುಸಿ ಮಾಡಬಾರದೆಂದೋ ಏನೋ ನನ್ನ ತಂದೆಯವರ ವತಿಯಿಂದಲೇ ನನ್ನ ವಿದ್ಯೆಗೆ ಮೊದಲ ವಿಘ್ನ ಬಂತು. ತಂದೆಯವರ ಜ್ಞಾನಪರಿಧಿಯಲ್ಲಿ ಕಾಲೇಜೆಂದರೆ ಭಾರೀ ಖರ್ಚಿನ ಬಾಬು – ಇದಕ್ಕೆ ತಮ್ಮನ ಹತ್ತಿರ ಬೇಡಿದರೆ ತರುವಾಯ ಆತ ನಿತ್ಯ ಖರ್ಚಿಗೆ ಕೊಡುವುದನ್ನು ನಿಲ್ಲಿಸಿ ಬಿಟ್ಟರೆ ಸಂಸಾರ ರಥ ಸಾಗುವುದೆಂತು? ಇದು ಪರಿಗಣಿಸಬೇಕಾದ

ಅಂಶವೇ ಆಗಿತ್ತು. ಏಕೆಂದರೆ ಅಷ್ಟು ಹೊತ್ತಿಗೆ ನನ್ನ ಅಕ್ಕ ತಂಗಿ ಇಬ್ಬರಿಗೂ ಮದುವೆ ಆಗಿದ್ದರೂ ಪ್ರಸಂಗತ್ವೇನ ಅವರಿಬ್ಬರೂ ನಮ್ಮ ಮನೆಯೊಳಗೇ ಬೀಡು ಬಿಟ್ಟಿದ್ದರು. ಕಾರಣ: ಮೊದಲನೆಯವಳಿಗೆ ಅವಳ ಮಾವನಮನೆ ಹಿತವಾಗಿರಲಿಲ್ಲ, ಗಂಡನದು ಸಂಚಾರಿ ಜೀವನ, ಸ್ಥಿರ ವರಮಾನವಿಲ್ಲದ ಗಂಡುಗಲಿ ಆತ. ತಂಗಿಯ ಗಂಡ ಮನೆಯಳಿಯನೇ – ನನ್ನ ಸೋದರತ್ತೆಯ ಮಗ. ಸೋದರತ್ತೆ ಬಾಲ ವಿಧವೆ – ನನ್ನ ಭಾವ ಹುಟ್ಟುವ ಮೊದಲೇ ಅವರ ಗಂಡ ತೀರಿಕೊಂಡಿದ್ದರಂತೆ. ಹಾಗಾಗಿ ತಾಯಿ ಮತ್ತು ಮಗನನ್ನು (ಏಕಮಾತ್ರ) ಸಾಕಿಸಲಹಿ ಉದ್ಯೋಗಕ್ಕೆ ಕರೆದೊಯ್ದ ಮೇಲೂ ಮುನ್ನವೂ ಸಕಲ ಪೋಷಣೆ ನಮ್ಮಲ್ಲೇ ನಡೆಯಬೇಕಾದ್ದು. ನಾನು ಎಸ್‌ಎಸ್‌ಎಲ್‌ಸಿ ಪಾಸಾಗುವಾಗ ನಮ್ಮ ಸಂಸಾರದ ಆರ್ಥಿಕಸ್ಥಿತಿ ಏನೇನೂ ಚೆನ್ನಾಗಿರಲಿಲ್ಲ. ಸಂಪೂರ್ಣ ಚಿಕ್ಕಪ್ಪನ ಮೇಲೆಯೇ ಅವಲಂಬನೆ. ಒಟ್ಟು ಪರಾಧೀನಸ್ಥಿತಿ. ಅಣ್ಣನಿಗೆ ಹೆಣ್ಮಕ್ಕಳ ಮೋಹ ಜಾಸ್ತಿ ಆಯಿತೆಂದು ಚಿಕ್ಕಪ್ಪನೂ ಸಿಟ್ಟುಗೊಳ್ಳುವುದಿತ್ತು. ಆದರೆ ಸಂಸಾರಕ್ಕೆ ಉಳಿದ ಒಬ್ಬನೇ ಗಂಡು ಮಗನಾದ ನನ್ನ ಮೇಲೆ ಉಭಯ ಪಿತೃಗಳಿಗೂ ಸಾಕಷ್ಟು ಪ್ರೀತಿ ಇತ್ತು. 'ಒಳ್ಳೆಯ ಅಂಕದಲ್ಲಿ ಎಸ್. ಎಸ್. ಎಲ್. ಸಿ. ಪಾಸಾದ್ದರಿಂದ ಕಾಲೇಜಿಗೆ ಹೋದರೂ ಸಂತೋಷ. ನನಗೆ ದೇವರು ಕೊಟ್ಟಷ್ಟು ದಿನ ನಿನಗೆ ನಾನು ಕೊಡುತ್ತೇನೆ – ಆದರೆ ನಿನ್ನಪ್ಪಯ್ಯನ ಹತ್ತಿರ ಕೇಳಿ ಅವರು ಹೇಳಿದಂತೆ ಮಾಡು' ಎಂದು ಚಿಕ್ಕಪ್ಪ ಗದುಗಿನಿಂದ ಬರೆದರು. ಅಪ್ಪಯ್ಯ ಸಂಸಾರ ಪೋಷಣೆಯ ಭೀತಿಗ್ರಸ್ತರಾಗಿ ಎರಡು ವರ್ಷದಲ್ಲಿ ಮುಗಿಯುವ ಶಿಕ್ಷಕ ತರಬೇತಿಯೇ ನನಗೆ ಸರಿಯಾದ್ದೆಂದು ತೀರ್ಮಾನಿಸಿ, ಒತ್ತಾಯಿಸಿ ಮಂಗಳೂರಿಗೆ ಕರೆದುಕೊಂಡು ಹೋಗಿ ಸರ್ಕಾರಿ ಕಾಲೇಜಿನೊಳಗೆ ಅಂತರ್ಗತವಾಗಿರುತ್ತಿದ್ದ ಸೆಕೆಂಡರಿ ತರಬೇತಿ ಶಾಲೆಗೆ ನನ್ನನ್ನು ಸೇರಿಸಿದರು. ಹೆಡ್ಮಾಸ್ತರ ಮೊಂತೇರೋ ಕೇಳಿದರು. "ಏನು ಸ್ವಾಮಿ ಇಷ್ಟು ಮಾರ್ಕಿನ ಹುಡುಗನನ್ನು ಇಲ್ಲಿಗೆ ತಂದಿದ್ದೀರಿ? ನಾನು ಸೀಟು ಕೊಡುತ್ತೇನೆ. ಆದರೆ ಇವನಿಗೆ ಕಾಲೇಜು ಸರಿಯಾದ ಸ್ಥಳ" ಎಂದರು. ಅಂತೂ ಜೂನ್ 1940 ರಲ್ಲಿ ಮಂಗಳೂರಿನಲ್ಲಿ ನಾನು ಶಿಕ್ಷಕ ವೃತ್ತಿಯ ತರಬೇತಿ ಆರಂಭ ಮಾಡಿದೆ.

ಕಾರ್ನಾಡ್ ಸದಾಶಿವರಾವ್ ರಸ್ತೆಯಲ್ಲಿರುವ ಮಾಡರ್ನ್ ಹೋಟೆಲ್‌ನಲ್ಲಿ 6 ರೂಪಾಯಿಗೆ ಒಂದು ಡಬ್ಬಲ್ ರೂಮಿನಲ್ಲಿ ನಾನೂ ಆಮೇಲೆ ಕಮ್ಯೂನಿಷ್ಟರಾಗಿ, ಸಂಸತ್ ಸದಸ್ಯರಾಗಿ ಹೆಸರು ಮಾಡಿದ ಬಿ.ವಿ. ಕಕ್ಕಿಲ್ಲಾಯರೂ ವಸತಿ ಹೂಡಿದೆವು. ಕಕ್ಕಿಲ್ಲಾಯರು ಎಲೋಶಿಯಸ್ ಕಾಲೇಜಿನ ಬಿ.ಎ. ವಿದ್ಯಾರ್ಥಿ. ಕ್ಷೌರದ ರೇಜರ್ ಹಿಡಿಯಲು ಕಲಿಸಿದ್ದೇ ಅವರು ನನಗೆ. ಅವರ ಕ್ರಾಂತಿಕಾರಿ ಮನೋವೃತ್ತಿಯ ಪ್ರಥಮ ಪರಿಚಯವೂ ನನಗಾಯಿತು. 6 ತಿಂಗಳಾಗುವಷ್ಟರಲ್ಲೆ ಹೋಟೆಲಿನಲ್ಲಿ ಯಾವುದೋ ಒಂದು ಸಂಶಯಾಸ್ಪದ ಸ್ತ್ರೀಜನ ಬೀಡುಬಿಟ್ಟಿತ್ತು. ವಿದ್ಯಾರ್ಥಿಗಳೇ ತುಂಬಿರುವ ಹೋಟೆಲಲ್ಲಿ ಹೀಗೆ ಮಾಡಬಾರದೆಂದು ಕಕ್ಕಿಲ್ಲಾಯರು ಪ್ರತಿಭಟಿಸಿದರು. ಹೋಟೆಲ್ ಮಾಲಿಕರು ಜಗ್ಗಲಿಲ್ಲ ಎನ್ನುವಾಗ ಕಕ್ಕಿಲ್ಲಾಯರು ಬೇರೆ ಬಿಡಾರ ಮಾಡಿದರು. ನಾನು ದ್ರಾವಿಡ ಬ್ರಾಹ್ಮಣರ ವಿದ್ಯಾರ್ಥಿ ನಿಲಯದ ಸದಸ್ಯನಾದೆ.

ಮಾಡರ್ನ್ ಹೋಟೆಲಲ್ಲಿ ಕಳೆದ 6 ತಿಂಗಳು ನಾನು ದುಃಖಪೀಡಿತನಾಗಿದ್ದೆ, ಕಾಲೇಜಿಗೆ ಹೋಗಲಿಲ್ಲವಲ್ಲ ಎಂದು ಮಮ್ಮಲ ಮರುಗುತ್ತಿದ್ದೆ. ಎಲ್ಲರೂ ಕಾಲೇಜಿಗೆ ಹೋಗುತ್ತಿರುವುದನ್ನೇ ಆಸೆಯ ಕಣ್ಣುಗಳಿಂದ ನೋಡಿ ಅಧೀರನಾಗುತ್ತಿದ್ದ. ಆದರೂ ತರಬೇತಿ ಶಾಲೆಯ ಕಲಿಕೆಗೆ ಕೊರೆ ಮಾಡಲಿಲ್ಲ. ಅಲ್ಲಿ ವಿಜ್ಞಾನಕ್ಕೂ, ಮನಃಶಾಸ್ತ್ರಕ್ಕೂ, ಕನ್ನಡಕ್ಕೂ ಕಾಲೇಜು ವಿಭಾಗದ ಅಧ್ಯಾಪಕರೇ ಬಂದು ಪಾಠ ಹೇಳುತ್ತಿದ್ದರು. ಎಲ್ಲ ಪಾಠಗಳೂ ಇಂಗ್ಲೀಷಿನಲ್ಲೇ. ಟಿಪ್ಪಣಿ ಮಾಡುವುದು, ಪಾಠಪಟ್ಟಿಯಲ್ಲಿರುವ ಸರ್ವ ವಿಷಯಗಳನ್ನು ಯಥಾವತ್ತಾಗಿ ಗ್ರಹಿಸುವುದು. ನೆಟ್ಟಮನಸ್ಸಿನಿಂದ ಪಾಠ ಕೇಳುವುದು, ಪುಸ್ತಕಗಳನ್ನೋದುವುದು ನನಗೆ ಪ್ರಿಯವಾದ ವಿಷಯಗಳೇ ಆಗಿದ್ದುವು. ಮನಃಶಾಸ್ತ್ರದ ಪ್ರಾಧ್ಯಾಪಕರು ಯಾವಾಗಲೂ ನನಗೆ ನೂರಕ್ಕೆ 90ರ ಮೇಲೆ ಅಂಕಗಳನ್ನು ಕೊಟ್ಟು ಉತ್ತರ ಪತ್ರಿಕೆಗೆ ಶಿಫಾರಸು ಕೊಡುವುದಿತ್ತು. 'ಇರುವೆ, ಇರುವೆ, ನೀನೆಲ್ಲಿರುವೆ' ಎಂಬ ಕವಿತೆ ಬರೆದ ಕಾವೇರಿಕಾನ ಕೃಷ್ಣಭಟ್ಟರು. ಬಳ್ಳಾರಿ ಕನ್ನಡದ ಸೊಗ ಉಣಿಸಿದ ನಂಜುಂಡಸ್ವಾಮಿಯವರು. ಸಸ್ಯ ಶಾಸ್ತ್ರದ ಶಿಕ್ಷಣ ವಿಧಾನ ಕಲಿಸಿಕೊಟ್ಟ ಸಾಲಿನ್ಸ್ ಮಾಸ್ತರರು ಇಷ್ಟು ಮಂದಿ ನೆನಪಿಗೆ ಬರುತ್ತಾರೆ.

ಸೆಕೆಂಡರಿ ಶಿಕ್ಷಕರ ತರಬೇತಿಯ ಅವಧಿ ಎರಡು ವರ್ಷ. ಇಂಟರ್ ಮಾಡಿದವರಿಗೆ ಒಂದು ವರ್ಷ ಎಂದಿತ್ತು; ಆದರೆ ನಾನು ಸೇರಿದ ವರ್ಷ ಈ ರಿಯಾಯಿತಿ ಮನ್ನ ಮಾಡಿದ್ದರಿಂದ ನನಗೆ ಇಂಟರ್ ಮಾಡಿಯೂ 2ವರ್ಷ ತರಬೇತಿ ಸಜೆ ಅನುಭವಿಸಿದ ಗೆಳೆಯರೊಬ್ಬರ ಪರಿಚಯವಾಯಿತು. ಮಣೂರಿನ ಪರಮೇಶ್ವರ ಮಯ್ಯ ಒಳ್ಳೆಯ ವಿದ್ಯಾರ್ಥಿ, ವಾಗ್ಮಿ ಕೂಡ. ಸಭೆ ಸಮಾರಂಭದ ಕೊನೆಗೆ ಅವರು ಮಾಡುತ್ತಿದ್ದ ಇಂಗ್ಲೀಷ್ ವಂದನಾರ್ಪಣೆಯ ಸೊಗಸು ಪಿ ವಿ ಮಟ್ಟದಲ್ಲೂ ನಾನು ಆಮೇಲೆ ಕಾಣಲಿಲ್ಲ. ಇಂಟರ್ ಮುಗಿಸಿದ ಅವರೊಡನೆ ನನ್ನ ಪಾಠದ ಅಂಕಗಳ ಜಿದ್ದು ನಡೆದಿತ್ತು. ಎರಡು ವರ್ಷಗಳ ಕೊನೆಗೆ ಪಬ್ಲಿಕ್ ಪರೀಕ್ಷೆಯಲ್ಲಿ ನಾನು ಧಾರಾಳ ಅಂಕಸಹಿತವಾಗಿ ಪಾಸಾದೆ. ಮಾತ್ರವೇ ಅಲ್ಲ ಅಖಂಡ ಮದರಾಸು ರಾಜ್ಯದ – ಅರ್ಥಾತ್ ಈಗಿನ ಆಂಧ್ರ ಕರಾವಳಿ. ಮಲಬಾರ್ ಮತ್ತು ತಮಿಳ್ನಾಡನ್ನೊಳಗೊಂಡ ಸಕಲ ಪ್ರದೇಶದ – ಎಲ್ಲ ತರಬೇತಿ ಶಾಲೆಗಳಿಂದ

ಪರೀಕ್ಷೆಗೆ ಕೂತವರಲ್ಲಿ ನನ್ನದೇ ಸರ್ವಪ್ರಥಮ ರ್‍ಯಾಂಕ್ ಎಂದು 3ವರ್ಷ ಕಳೆದು ಗೆಝೆಟ್ ನೋಡಿದಾಗ ತಿಳಿಯಿತು. (ಕಾರಣ: ಆಗಿನ ಕಾಲದಲ್ಲಿ ಶಾಲೆ ಕಾಲೇಜಿನ ರ್‍ಯಾಂಕ್‌ಗಳಿಗೆ ಸಚಿತ್ರ ಪತ್ರಿಕಾಪ್ರಕಟಣೆಯ ಸೌಭಾಗ್ಯ ಇರಲಿಲ್ಲ).

ಶಿಕ್ಷಣ ಕಲೆಯ ಮರ್ಮವನ್ನರಿಯಲು ಸೈದ್ಧಾಂತಿಕವಾಗಿ ಎಷ್ಟುಬೇಕೋ ಅಷ್ಟು ಶಾಸ್ತ್ರಜ್ಞಾನವನ್ನು ನೀರು ಕುಡಿದಷ್ಟು ಸುಲಭವಾಗಿ ವಶಮಾಡಿಕೊಂಡಿದ್ದಕ್ಕಿಂತಲೂ, ರ್‍ಯಾಂಕ್ ಸಮೇತ ಪಾಸಾದ್ದಕ್ಕಿಂತಲೂ ಮುಖ್ಯ ವಿಷಯ ನನ್ನ ವ್ಯಕ್ತಿತ್ವದಲ್ಲಿ ಬೇರು ಬಿಟ್ಟ ಆತ್ಮ ವಿಶ್ವಾಸ. ಗೃಹಪಂಜರದಿಂದ ಹೊರಬಿದ್ದು ಮಂಗಳೂರಿನ ಸನ್ನಿವೇಶದಲ್ಲಿ ಹೊಸ ಗೆಳೆಯರ ಸಹವಾಸದಲ್ಲಿ ಹೊಸ ಸ್ಥಳದಲ್ಲಿ ಹೊಸ ಅಭ್ಯಾಸದಲ್ಲಿ ಆಸಕ್ತನಾದ ನನ್ನಲ್ಲಿ ಅಂಜುಬುರುಕತನ ಮಾಯವಾಗಿ ಬಿಟ್ಟಿತ್ತು. ಅಧ್ಯಯನ ಭಾಗದಲ್ಲಿ ಅಧ್ಯಾಪನದಲ್ಲಿ ನಾನು ಜಯಗಳಿಸೇ ತೀರುವೆನೆಂಬ ವಿಶ್ವಾಸ ಮೂಡಿತು. ಜತೆಗೆ ಒಂದು ವಿಶಿಷ್ಟ ಸಾಹಿತ್ಯಾಭ್ಯಾಸದ ಅವಕಾಶವನ್ನೂ ಅಲ್ಲಿ ನಾನೇ ಸಮಾನಾಂತರವಾಗಿ ಮಾಡಿಕೊಂಡೆ. ಇದು ನನ್ನ ಮಾನಸಿಕ ದಿಗಂತವನ್ನು ವಿಸ್ತರಿಸಿ ಕಾಲೇಜಿಗೆ ಹೋಗದಿರುವ ಕೊರತೆಯನ್ನು ಬಹಳಷ್ಟು ತುಂಬಿಸಿಕೊಟ್ಟಿತು. 1940ರ ಜೂನ್ ತಿಂಗಳಿನಿಂದ ಗಣಪತಿ ಹೈಸ್ಕೂಲಿನಲ್ಲಿ ಸಾಹಿತ್ಯ ಪರಿಷತ್ತಿನ 'ಕನ್ನಡ ಜಾಣ' ತರಗತಿ ನಡೆಯುತ್ತಿತ್ತಂತೆ. ನನಗಿದು ತಿಳಿದದ್ದು ದಶಂಬರ ತಿಂಗಳಲ್ಲಿ – ಪರೀಕ್ಷೆಗೆ ಐದು ತಿಂಗಳಿರುವಾಗ. ಆದರೂ ನಾನು ಜಾಣದ ಸಂಜೆವರ್ಗಗಳಿಗೆ ದಾಖಲಿಸಿಕೊಂಡೆ. ಕಾದಂಬರೀ ಸಂಗ್ರಹ, ಹರಿಶ್ಚಂದ್ರ ಕಾವ್ಯ ಪಾಠ ಹೇಳಲು ದಿ.ಕಡಂಗೋಡ್ಲು ಶಂಕರಭಟ್ಟರು, ಕನ್ನಡ ಕೈಪಿಡಿ ವ್ಯಾಕರಣಕ್ಕೆ ಶ್ರೀ ಸೇಡಿಯಾಪು ಕೃಷ್ಣ ಭಟ್ಟರು. ಡಿ.ವಿ.ಜಿ. ಅವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಪಾಠ ಹೇಳಲು 3 ದಿನ ಶಿವರಾಮ ಕಾರಂತರೇ ಬಂದರು. ಜಾಣ ಪರೀಕ್ಷೆಗೆ ಮೇಲ್ವಿಚಾರಕರಾಗಿ ಬಂದದ್ದು ಕಾರಂತರೇ.ನಮಗೆ ಪ್ರಶ್ನೆ ಪತ್ರಿಕೆ ಕೊಟ್ಟು ತಾವು ಯಾವುದೋ ಪ್ರಾಯಃ 'ಮರಳಿ ಮಣ್ಣಿಗೆ'ಯ – ಪ್ರೂಫ್ ತಿದ್ದಿಕೊಂಡು ಕೂತಿರುತ್ತಿದ್ದರು. ನಾನು ಜಾಣ ತರಗತಿ ಸೇರುವ ಮೊದಲು ಮುಳಿಯ ತಿಮ್ಮಪ್ಪಯ್ಯನವರು ಕೂಡ ಅಲ್ಲಿ ಪಾಠ ಮಾಡುತ್ತಿದ್ದರಂತೆ. ಆದರೆ ಮುಳ್ಳು ತಗಲಿ ಕಾಲುಬೇನೆಗೆ ತುತ್ತಾಗಿ ಮನೆ ಸೇರಿದ್ದರಿಂದ ನಮ್ಮ ತರಗತಿಯ ವಿದಾಯ ಕೂಟ ಅವರ ಮನೆಯಲ್ಲೇ ನಡೆಯಿತು. ಫೋಟೋ ಕಾರ್ಯಕ್ರಮವಿತ್ತು. ತರಗತಿಗೆ ಬಂದು'ಜಾಣ'ರಾದ 14 ಮಂದಿಯಲ್ಲಿ ಹೆಚ್ಚಿನವರು ಮೊದಲೇ ಅಧ್ಯಾಪಕರು, ಅಥವಾ ಆಮೇಲಾದವರು ನನ್ನಂತೆ. ನನಗಂತೂ ಕನ್ನಡ ಸಾಹಿತ್ಯದ ಹರವನ್ನೂ, ಆಳವನ್ನೂ ಅರಿಯುವ ಒಂದು ಅವಕಾಶ ಒದಗಿ ಇನ್ನಷ್ಟು ಅಭ್ಯಾಸ ಮಾಡಬೇಕೆಂಬ ಕುತೂಹಲ ಕೆರಳಿತು. ಈ ಪರೀಕ್ಷೆ ಹೈದರಾಬಾದ್ ಕರ್ನಾಟಕದಲ್ಲಿ ಸರ್ಕಾರದ ಮನ್ನಣೆ ಪಡೆದದ್ದರಿಂದ ಗುಲ್ಬರ್ಗ ಬೀದರ್ ಕಡೆಯಲ್ಲಿ ಜನಪ್ರಿಯವಾಯಿತು. ಹತ್ತು ಹದಿನೈದು ವರ್ಷ ಕಳೆದು ನಾನೊಮ್ಮೆ 'ಜಾಣ'ದ ಪರೀಕ್ಷಕನಾದಾಗ ಚಿಂಚೋಳಿ, ಲಿಂಗಸುಗೂರು ಮುಂತಾದ ವಿಲಕ್ಷಣ ಹೆಸರಿನ ಕೇಂದ್ರಗಳ ಪರೀಕ್ಷಾರ್ಥಿಗಳ ಕನ್ನಡದ ವೈಲಕ್ಷಣ್ಯವನ್ನು ಅರಿಯುವಂತಾಯಿತು. ಪ್ರಮಾಣ ಪತ್ರ, ಪರೀಕ್ಷೆಗಳ ದೃಷ್ಟಿಯಿಂದಲ್ಲವಾದರೂ ಬರೇ ಸಾಹಿತ್ಯಾಭ್ಯಾಸದ ದೃಷ್ಟಿಯಿಂದ ಪರಿಷತ್ತಿನ 'ಜಾಣ' 'ಕಾವ' ಗಳನ್ನು ಸಾಹಿತ್ಯಾಸಕ್ತರು ಗಮನಿಸಬೇಕು ಎಂದು ನನಗನಿಸುತ್ತದೆ.

ನನ್ನ ಶಿಕ್ಷಕ ವೃತ್ತಿಯ ಮೊದಲ ಪಾಠ ಮಂಗಳೂರಿನ ಗಣಪತಿ ಹೈಸ್ಕೂಲ್ ಪಕ್ಕದ ಒಂದು ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಪಾಠಪಟ್ಟಿಯ ಕಡ್ಡಾಯಕ್ಕೆ ಎಲ್ಲರೂ ಮಾದರಿ ಪಾಠ ಮಾಡಬೇಕಾಗಿತ್ತು. ಪಂಜೆ ಮಂಗೇಶರಾಯರ 'ಮೂಡುವನು ರವಿ ಮೂಡುವನು' ಎಂಬ ಪದ್ಯವನ್ನು ಸರಾಗವಾಗಿ ಸಲೀಸಾಗಿ ಅರ್ಥ ವಿವರಿಸಿ, ಮಕ್ಕಳಿಂದ ಓದಿಸಿ ಮುಗಿಸುವಾಗ ಗಂಟೆ ಬಾರಿಸಿತು. ಕೊಳುಗುಳದಲ್ಲಿ ಗೆದ್ದ ವೀರನ ಸಂತೋಷದಿಂದ ಕ್ಲಾಸಿಂದ ಹೊರಬಿದ್ದೆ. ಈ ನಡುವೆ ಹಿಂದಿ ಭಾಷೆಯ 'ಮಧ್ಯಮಾ' ಪರೀಕ್ಷೆಗೆ ಕೂತಿದ್ದೆ. ಹಿಂದೂ ಪತ್ರಿಕೆಯಲ್ಲಿ ಅದರ ನಂಬರು ಮುದ್ರಣ ದೋಷದಿಂದ ಕಾಣಿಸದೆ ಹೋದರೂ 'ಎಕ್ಸ್‌ಪ್ರೆಸ್' ಕರುಣೆಯಿಂದ ನನ್ನ ನಂಬರು ಛಾಪಿಸಿತ್ತು. ಅಂತೂ ಪಾಸಾದೆ. ವಿಶ್ವವಿದ್ಯಾನಿಲಯದ ಗೇಟಿನೊಳಗಡೆ ಪ್ರವೇಶಾರ್ಹತೆಗೆ ಬಾಧಕಗಳಿದ್ದುದರಿಂದ ಕನ್ನಡ ಸಾಹಿತ್ಯ ಮತ್ತು ಹಿಂದೀ ಸಾಹಿತ್ಯಗಳನ್ನು ಗಟ್ಟಿಯಾಗಿ ಬಿಗಿ ಹಿಡಿದೆ.

1941 – 42 ದ್ರಾವಿಡ ಬ್ರಾಹ್ಮಣ ಹಾಸ್ಟೆಲಿನಲ್ಲಿ ಊಟದ ಖರ್ಚು ಬರೇ 6 ರೂಪಾಯಿ. ರೂಮು ಬಾಡಿಗೆ ನಾಲ್ಕು ರೂಪಾಯಿ. 6 ರೂಪಾಯಿಗೆ ಎರಡು ಭರ್ಜರಿ ಊಟ;ತಿಂಡಿ ಕಾಫಿ, ಹೊಟ್ಟೆ ಹಿಡಿಸುವಷ್ಟು. ಆಹಾರವಸ್ತುಗಳ ಮಟ್ಟಿಗೆ ಯುದ್ಧದ ಝಳ ಇನ್ನೂ ಬಡಿದಿರಲಿಲ್ಲ. ತಿಂಗಳಿಗೆ 20-30 ಮನಿ ಆರ್ಡರು ಬರುತ್ತಿತ್ತು. ಅದರಲ್ಲಿ ಊಟ – ವಸತಿ ಬಿಟ್ಟರೆ ಉಳಿದದ್ದು ನನ್ನ ಪುಸ್ತಕಕೊಳ್ಳುವ ಗೀಳಿಗೆ ಸಮರ್ಪಿತ. ಯು. ಆರ್. ಶೆಣೈ ಅವರಲ್ಲಿ ಪ್ರಬುದ್ಧ ಕರ್ನಾಟಕದ ಹಳೆ ಸಂಚಿಕೆಗಳು 2 ಆಣೆಗೊಂದರಂತೆ ಸಿಗುತ್ತಿದ್ದವು. – ಹತ್ತಿಪ್ಪತ್ತನ್ನು ಕೊಂಡು ಬೈಂಡು ಹಾಕಿಸಿದೆ – ಕಥೆ, ಕವಿತೆ, ವಸ್ತುಕೋಶ ಇತ್ಯಾದಿ ವಿಂಗಡಿಸಿ. ಹಿಂದೀ ಭಾಷೆಯಲ್ಲಿ ಇಂಗ್ಲೇಂಡಿನ ಪೆಂಗ್ವಿನ್ ನಂಥ ಒಂದು ಗ್ರಂಥಮಾಲೆ 'ಸರಸ್ವತೀ ಸಿರೀಜ' ಅಂತ ಪ್ರಕಟವಾಗುತ್ತಿತ್ತು. ಪ್ರತಿಗೆ 8ಆಣೆ. ಘಂಟಮಾರಾ, ಯಾಮಾ, ಮುಂತಾದ ವಿದೇಶೀ ಕಾದಂಬರಿಗಳನ್ನು ನಾನು ಮೊದಲು ಓದಿದ್ದೇ ಈ ಮಾಲೆಯಲ್ಲಿ. ನಿರ್ದಾಕ್ಷಿಣ್ಯ

ಅನುವಾದಗಳಿವು. ವಿದೇಶೀ ಪ್ರಕಾಶಕರ ಪರವಾನಿಗೆ ಇಲ್ಲದೆಯೇ ಮುದ್ರಿತವಾದುವು ಎಂದು ನನಗೆ ನಾನು 'ಘಂಟಮಾರಾ' ಅನುವಾದಿಸಿದಾಗ ತಿಳಿಯಿತು. ಲೇಖಕ ಸಿಲೋನೆಗೆ ಅದು ಪ್ರಕಟವಾದದ್ದು ತಿಳಿದೇ ಇರಲಿಲ್ಲವಂತೆ. ಅವರ ದೃಷ್ಟಿಯಲ್ಲಿ ನನ್ನ ಕನ್ನಡ ಅನುವಾದವೇ ಪ್ರಥಮ ಭಾರತೀಯ ಅನುವಾದವಾಗಿಬಿಟ್ಟಿತ್ತು.

೫ ಶಿಕ್ಷಕವೃತ್ತಿ – ಕಡಿಯಾಳಿ, ಕ್ರಿಶ್ಚನ್

1942ನೆಯ ಜೂನ್ ತಿಂಗಳ 1ನೇ ತಾರೀಕು ನಾನು ಕಡಿಯಾಳಿ ಪ್ರಾಥಮಿಕ ಶಾಲೆಯಲ್ಲಿ ತಿಂಗಳ 18 ರೂಪಾಯಿಯ ಸಂಬಳದ ಶಿಕ್ಷಕನಾಗಿ ಸೇರಿದೆ. ಎರಡು ವರ್ಷ ನನ್ನ ಹಳೇ ಗುರುಗಳು ಮತ್ತು ಹೊಸ ಶಿಷ್ಯರೊಡನೆ ಸಂತೋಷದಲ್ಲಿ ದಿನಕಳೆದೆ. ನನ್ನ ತೀರ್ಥರೂಪರ ಮಾತಿನಂತೆ ನಡೆದ ಸಂತೋಷ ಇನ್ನೊಂದು ಕಡೆ. ಅವರ ಮಹತ್ವಾಕಾಂಕ್ಷೆಯ ಪರಮಾವಧಿಯನ್ನು ನಾನು ನೆರವೇರಿಸಿದ್ದೇನಲ್ಲವೆ? ನನ್ನ ಅಧ್ಯಾಪನ ಹಾಗೂ ನನ್ನ ಸ್ವಾಧ್ಯಾಯಕ್ಕೆ ಯಾವುದೇ ಆತಂಕ ಬರಲಿಲ್ಲ. ತರಬೇತಿ ಶಾಲೆಯಲ್ಲಿ ಕಲಿಸಿದ 'ಡೈರೆಕ್ಟ್ ಮೆಥಡನ್ನು, ನಾನು ಮೊದಲ ಪಾಠದಲ್ಲೇ ಹುಡುಗರ ಮೇಲೆ ಬಿಟ್ಟೆ (ಇಂಗ್ಲೀಷ್ ಪಾಠವನ್ನು ಕನ್ನಡ ತತ್ಸಮಗಳ ನೆರವಿಲ್ಲದೆ ಇಂಗ್ಲೀಷಿನಲ್ಲೇ ಮಾಡಿದರೆ ಅದಕ್ಕೆ ಡೈರೆಕ್ಟ್ ಮೆಥಡ್ ಎಂದು ಹೆಸರು) ಹುಡುಗರಿಂದ ಹೆಡ್ಮಾಸ್ತರರಿಗೆ ದೂರು ಹೋಯಿತು – ಹೊಸ ಮಾಸ್ತರರು ಹೇಳಿದ್ದು ಅರ್ಥವಾಗುವುದಿಲ್ಲ, ಏಕೆಂದರೆ ಕನ್ನಡದಲ್ಲಿ ಅರ್ಥ ಹೇಳುವುದಿಲ್ಲ. ತಿದ್ದಿಕೊಂಡು ಆಂಗ್ಲ-ಕನ್ನಡ ಕ್ರಮದ ಪಾಠ ತೊಡಗಿದೆ. ನನ್ನ ಹಿಂದಿನ ಗುರುಗಳಾದ ರಾಮಚಂದ್ರ ಉಪಾಧ್ಯರ ಜತೆ ಸೇರಿ ಹುಡುಗರಿಗೆ ನಾಟಕ ತರಬೇತಿ ಕೊಟ್ಟೆ. ಅಧ್ಯಾಪಕರು ಆಡುವ ವರ್ಧಂತಿ ನಾಟಕಕ್ಕೂ ಕಳೆಕಟ್ಟಿತು. ಯಾವ ಪಾಠಕ್ಕೂ ಧಾರಾಳ ತಯಾರಿ ಮಾಡಿ ಕೊಳ್ಳುತ್ತಿದ್ದೆ. ಪ್ರಾಮಾಣಿಕವಾದ ನನ್ನ ಪ್ರಯತ್ನಕ್ಕೆ ವಿದ್ಯಾರ್ಥಿಗಳು ಮನಸೋತರು. ಸುದ್ದಿ ಮೇನೇಜರ್ ಕಿವಿಗೆ ಹೋಗಿ ನನಗೆ ಮರುವರ್ಷ ಒಂದು ರೂಪಾಯಿಯ ಹೆಚ್ಚು ಇಂಕ್ರಿಮೆಂಟ್ ಸಿಕ್ಕಿತು. ಪ್ರಥಮ ವರ್ಷದ 18 19 ಆಗುವುದರ ಬದಲು 20 ರೂಪಾಯಿ ಆಯಿತು. ಒಂದೇ ಒಂದು ವರ್ಷಕ್ಕೆ ಡಬ್ಬಲ್ ಇಂಕ್ರಿಮೆಂಟ್ ಸಿಕ್ಕಿತೆಂದರೆ ಸಾಮಾನ್ಯವೇ? ಮಲಗುವ ಹೊತ್ತು ಬಿಟ್ಟರೆ ಉಳಿದ ಸಮಯವನ್ನೆಲ್ಲ ಶಾಲೆಯಲ್ಲೇ ಕಳೆಯುತ್ತಿದ್ದೆ. ವರ್ಧಂತಿ ಪೂರ್ವದ ಒಂದು ತಿಂಗಳು ರಾತ್ರಿಯ ನಿದ್ದೆಯೂ ಶಾಲೆಯ ಆವರಣದ ವ[illegible]ರಾಶಿಯಲ್ಲಿ. ಮುಂಜಾನೆದ್ದು ಮನೆ, ಗಂಜಿ ಮುಗಿಸಿ ಮತ್ತೆ ಶಾಲೆಗೆ. ಆ ಕಾಲದಲ್ಲಿ ನನ್ನ ಪಾಠವನ್ನು ಕಂಡ ಒಬ್ಬ ಅಧ್ಯಾಪಕರು ತಮ್ಮ ಅನಿಸಿಕೆಯನ್ನು ಈ ರೀತಿ ತೋಡಿಕೊಂಡದ್ದುಂಟು. 'ನಾನು ಹೈಸ್ಕೂಲಲ್ಲಿ ಓದುತ್ತಿರುವಾಗಲೇ ಹರಿದಾಸ ಭಟ್ಟರು ಕಡಿಯಾಳಿಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸ ತೊಡಗಿದ್ದರು. ಒಂದು ದಿನ ಆಕಸ್ಮಾತ್ ಶಾಲೆಯ ಪೋರ್ಟಿಕೋದಲ್ಲಿ ನಡೆಯುತ್ತಿದ್ದ ಸ್ಪೆಶಲ್ ಕ್ಲಾಸಿನಲ್ಲಿ 'ಎಟ್ ಹೋಮ್', ಮತ್ತು 'ಎಬ್ರಾಡ್' ಎಂಬ ಇಂಗ್ಲಿಷ್ ಪಡೆನುಡಿಗಳ ಪ್ರಯೋಗವನ್ನು ಅತ್ಯಾಧುನಿಕ ರೀತಿಯಲ್ಲಿ, ನಾನು ಹಿಂದೆಂದೂ ಕಂಡರಿಯದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಮಂಥಟ್ಟು ಮಾಡುತ್ತಿದ್ದ ಹರಿದಾಸ ಭಟ್ಟರ ಬೋಧನ ವೈಖರಿಯನ್ನು ಕೇಳಿ ನಾನು ಸ್ತಂಭಿತನಾದೆ. ಮುಂದೆ ತನ್ನ ಸಹೋದ್ಯೋಗಿಗಳ ಜತೆಯಲ್ಲಿ ಒಂದಾಗಿ ಬೆರೆತು ಶಾಲೆಯ ಎಲ್ಲ ಚಟುವಟಿಕೆಗಳ ಕೇಂದ್ರ ಶಕ್ತಿಯಾಗಿ ಅವರು ಅಹರ್ನಿಶಿ ದುಡಿಯುತ್ತಿದ್ದ ಪರಿ, ಅಧ್ಯಯನ ಶೀಲರಾಗಿ ವಿಶಾರದಾ, ವಿದ್ವಾನ್, ಇಂಟರ್ ಪರೀಕ್ಷೆಗಳನ್ನು ಲೀಲಾಜಾಲವಾಗಿ ಪಾಸುಮಾಡುತ್ತ ತನ್ನ ಬೌದ್ಧಿಕ ಸೀಮೆಯನ್ನು ಅವರು ವಿಸ್ತರಿಸಿ ಕೊಳ್ಳುವ ಜಾಣ್ಮೆ, ಶಾಲೆಯ ವಾರ್ಷಿಕೋತ್ಸವಗಳಲ್ಲಿ ಯಾವ ಕಾಲೇಜಿನ ಪ್ರತಿಭಾ ಪ್ರದರ್ಶನಕ್ಕೂ ಕಡಿಮೆ ಇರದಂತೆ ಅವರು ಸಂಘಟಿಸುತ್ತಿದ್ದ ನಾಟಕ ಪ್ರಹಸನಾದಿಗಳು – ಇವನ್ನೆಲ್ಲ ಕಂಡುಂಡ ಮೇಲೆ ಅವರನ್ನು ನಾನು ನನ್ನ ಆರಾಧ್ಯ ದೇವತೆ ಎಂದೇ ಭಾವಿಸಿದೆ, (ವಕ್ವಾಡಿ ಶ್ರೀನಿವಾಸ ಭಟ್ಟ, ಮೆನೇಜರ್ ನಾರ್ಣಪ್ಪಯ್ಯನವರ ಮಗನ ಹೇಳಿಕೆ ಇದು). ಈ ಅತಿಶಯೋಕ್ತಿಯ ಸತ್ಯಾಂಶವನ್ನು ನಾನು ಅಲ್ಲಗಳೆಯಲಾರೆ.

ಕಡಿಯಾಳಿ ಶಾಲೆ ಶಿಕ್ಷಣದ ತತ್ವಗಳಿಗೊಂದು ಒರೆಗಲ್ಲು, ನನ್ನ ಬದುಕಿನ ಒಂದು ಮೈಲಿಗಲ್ಲೂ ಆಯಿತು. ಅದು 1978ರಲ್ಲಿ ತನ್ನ ಶತಮಾನೋತ್ಸವ ಆಚರಿಸುವಷ್ಟು ಹಳೆಯದು. ನಾರ್ಣಪ್ಪನಯ್ಯನವರ ತಂದೆ ವಿಠಲಯ್ಯನವರ ಐಗಳ ಮಠವೇ ಸರ್ಕಾರದ ಅನುದಾನದ ಯುಗದಲ್ಲಿ ಕಡಿಯಾಳಿಯ ಪ್ರಾಥಮಿಕ ಶಾಲೆಯಾಗಿತ್ತು. ಅದರ ಹಂದರವನ್ನು ಇನ್ನಿಲ್ಲ ಮುನ್ನಿಲ್ಲವೆಂಬಂತೆ ಕಟ್ಟಿದ ಕೀರ್ತಿ ವಕ್ವಾಡಿ ನಾರ್ಣಪ್ಪಯ್ಯನವರಿಗೆ ಸಲ್ಲುತ್ತದೆ. ಈ ಜಿಲ್ಲೆಯಲ್ಲಿ ವಿದ್ಯಾರಂಗದಲ್ಲಿ ಖಾಸಗೀ ಸಾಹಸದ ವಿಜಯ ಪತಾಕೆಯೇ ನಾರ್ಣಪ್ಪಯ್ಯನೆಂಬ ಸಾಫ್‌ಸೀದಾ ಮನುಷ್ಯ. ಸ್ವಾವಲಂಬನೆಗೆ ಎರಡನೇ ಹೆಸರು ನಾರ್ಣಪ್ಪಯ್ಯ. ಅಂಗೈಯಗಲ ಭೂಮಿಯ ಹುಟ್ಟುವಳಿಯನ್ನು ಶಾಲೆಯ ನಿರ್ಮಾಣಕಾರ್ಯದಲ್ಲಿ ವಿನಿಯೋಗಿಸಿ ದೇಹಿ ಎನ್ನದೆ ತ್ರಾಹಿ ಎನ್ನದೆ ಶಾಲೆಯನ್ನು ತಾವೇ ಕಟ್ಟಿದರು ಅಕ್ಷರಶಃ ಕಟ್ಟಿದರು. ಮರಳಿನ ಗೋಡೆ ಇರಲಿ, ಇಟ್ಟಿಗೆ ಕಂಭವಿರಲಿ, ಹಂಚಿನ ಮಾಡಿರಲಿ ಎಲ್ಲವನ್ನು ಹಚ್ಚುವ,

ಹೊದೆಯುವ ಶ್ರಮಪೂರ್ವಕ ಕಾಯಕ ಅವರದು. ಪ್ರತ್ಯಕ್ಷ ದುಡಿಮೆ, ತನ್ನ ಎಲ್ಲ ಗಂಡುಮಕ್ಕಳನ್ನು ಹೆಣ್ಣು ಮಕ್ಕಳನ್ನು ಶಿಕ್ಷಕರನ್ನಾಗಿ ಮಾಡಿದರೇ ವಿನಾ ಬೇರೆ ರಂಗದ ಕಡೆ ಕಣ್ಣೆತ್ತಿ ನೋಡಲಿಲ್ಲ.

ಕಡಿಯಾಳಿ ಶಾಲೆಯ ಸಂಬಂಧ ಇನ್ನೂ ಉಳಿದು ಬಂದಿದೆ. ಅಲ್ಲಿನ ಹಳೇ ವಿದ್ಯಾರ್ಥಿ ಸಂಘದ ಸದಸ್ಯನೋ ಅಧ್ಯಕ್ಷನೋ ಆಗಿ ಬಗೆಬಗೆಯ ವಿಧಾಯಕ ಕಾರ್ಯಕ್ರಮಗಳನ್ನು ಯೋಚಿಸುವ ಸಂದರ್ಭ ನನಗೊದಗಿದೆ. ಶತಮಾನೋತ್ಸವದ ಉತ್ಸವವನ್ನು ಗಡದ್ದಾಗಿ ಆಚರಿಸಿ ಮತ್ತೆ 3 – 4 ವರ್ಷಗಳಲ್ಲಿ ಅಷ್ಟು ಹೊತ್ತಿಗೆ ತೀರಿಹೋಗಿದ್ದ ವಕ್ವಾಡಿ ನಾರ್ಣಪ್ಪಯ್ಯನ ಹೆಸರಿನಲ್ಲಿ ಒಂದು ಭವನವನ್ನು ನವೀಕರಿಸಿದೆವು. ಈಗ ತರುಣ ಸದಸ್ಯರ ಉತ್ಸಾಹದ ಫಲವಾಗಿ ರಂಗಮಂಟಪ ನಿರ್ಮಾಣವಾಗುತ್ತಿದೆ. ಬಿ. ವಿ. ಕಾರಂತರು ಇಲ್ಲಿಯೇ ಹದಿನೈದು ವರ್ಷ ಕೆಳಗೆ 'ಏಕಲವ್ಯ' ಮತ್ತು 'ಪೆದ್ದ ದೂಮ' ಎಂಬೆರಡು ಮಕ್ಕಳ ನಾಟಕವನ್ನು ಹೃದಯಂಗಮವಾಗಿ ನಿರ್ದೇಶಿಸಿದರು. ನಾಟಕ ಎಷ್ಟು ಪ್ರಭಾವಶಾಲಿ ಮಾಧ್ಯಮವೆಂಬ ಅರಿವು ನನಗೆ ಮೂಡಿದ್ದು ಆಗ. ಬರೇ ಕಲಾವಿದ ಮಕ್ಕಳು ಮಾತ್ರವೇ ಅಲ್ಲ ರಿಹರ್ಸಲ್‌ಗೆ ಇಡಿ ಶಾಲೆಯೇ ಕಿಟಿಕಿಯ ಹೊರಗಡೆ ಜಮಾಯಿಸುತ್ತಿತ್ತು. ಎಲ್ಲ ಮಕ್ಕಳ ನಾಲಗೆಯಲ್ಲೂ ಕಾರಂತರ ಹಾಡುಗಳು, ನಾಟಕ ಮುಗಿದರೂ ಅದರ ಅನುಕರಣ ಮುಗಿಯಲಿಲ್ಲ.

ಉಡುಪಿಯ ಕ್ರಿಶ್ಚನ್ ಹೈಸ್ಕೂಲ್ ನನ್ನ ಸ್ಮೃತಿ ಸಂಪುಟದಲ್ಲಿ ಒಂದು ಪ್ರವಾಸಿ ತಾಳೆಯ (ಟ್ರಾವೆಲ್ಲರ್ಸ್ ಪಾಮ್) ಪ್ರತಿಬಿಂಬವನ್ನು ಮೂಡಿಸಿಕೊಂಡಿದೆ. ಕಾಂಡದಲ್ಲಿ ಕಲ್ಪವೃಕ್ಷವನ್ನೂ, ಶಿರೋಭಾಗದಲ್ಲಿ ಕದಳಿಯನ್ನೂ ಹೋಲುವ ಪ್ರವಾಸಿತಾಳೆ ಬಾಸೆಲ್ ಮಿಶನಿನ ಪ್ರಯತ್ನದ ಸಂಕೇತವೂ ಆಗಿದೆ. ಜನತಾ ಸೇವೆಯ ಸಂಕಲ್ಪವೇ ಗಟ್ಟಿಯಾದ ಕಾಂಡ, ಮಧುರವಾದ ಶಿಕ್ಷಣ ಮತ್ತು ಆರೋಗ್ಯ ಸಂವರ್ಧನೆ ಸಿದ್ಧಫಲ. ಚಿಕ್ಕಂದಿನಲ್ಲಿ ಕೆಂಪು ಕಾವಿ ಬಳಿದ ಕ್ರಿಶ್ಚನ್ ಹೈಸ್ಕೂಲಿನ ಮುಂಗಡೆ ನಿರಾಳವಾಗಿ ನಿಂತ ಈ ವಿಚಿತ್ರ ತಾಳೆಮರವನ್ನು ನೋಡಿದಾಗ ಇಂಥ ಯಾವ ತತ್ವವೂ ಮನಸ್ಸಿಗೆ ಗೋಚರಿಸದೆ ಹೋದರೂ ಇಲ್ಲೇನೋ ಮಹತ್ತು ಅಡಗಿ ಕೂತಿದೆ ಎಂಬ ಸೂಚನೆ ನನ್ನ ಮನಸ್ಸಿನಲ್ಲೆ ಮಿಡಿಯುತ್ತಿತ್ತು, 'ತಿರುಗುತ್ತಿತ್ತು ನನ್ನ ಸುತ್ತು ಪುಳಕಭಾವ ಯಂತ್ರ.'

ಶಿಕ್ಷಕವೃತ್ತಿ ಪ್ರಾರಂಭ ಮಾಡಿದ್ದು ಕಡಿಯಾಳಿ ಪ್ರಾಥಮಿಕ ಶಾಲೆಯಲ್ಲಾದರೂ ಈ ವೃತ್ತಿಗನುಗುಣವಾದ ಮನೋಧರ್ಮ, ವ್ಯವಸಾಯ ಬುದ್ಧಿ ಮತ್ತು ಶ್ರದ್ಧೆಯ ಬೀಜ ಮೊಳೆದು ಭದ್ರವಾಗಿ ಬೇರುಬಿಟ್ಟದ್ದು ಕ್ರಿಶ್ಚನ್ ಹೈಸ್ಕೂಲಿನ ಸಪ್ತವರ್ಣದ, ಅನೇಕ ವರ್ಣದ ವಾತಾವರಣದಲ್ಲಿ, ಅಲ್ಲಿನ ಹಿರಿಯ ಅಧ್ಯಾಪಕರ ಸ್ನೇಹರಸಭರಿತ ಶೀತಲ ತಮಾಲಛಾಯೆಯಲ್ಲಿ.

ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಕಡಿಯಾಳಿಯಲ್ಲಿ ಪಡೆದದ್ದನ್ನು ಮಳಲಷ್ಟು ಮರಳಿಸಿದೆನೆಂಬ ಹೆಮ್ಮೆಯಿಂದ, ನನ್ನ ಅಲ್ಲಿನ ಗುರುಗಳ ಆಶೀರ್ವಾದವನ್ನು ಹೊತ್ತು ನಾನು ಕ್ರಿಶ್ಚನ್ ಹೈಸ್ಕೂಲಿನ ಅಂಗಳಕ್ಕೆ ಕಾಲಿಟ್ಟೆ. ಅದು ನನ್ನ ಜೀವನದ ಎರಡನೆ ಸೋಪಾನವಾಯಿತು; ಉನ್ಮುಖವಾಗಿ ದುಡಿಯುತ್ತಿದ್ದ ನನ್ನ ವ್ಯವಸಾಯ ಜೀವನದ ಮಂಗಲಕರ ಘಟ್ಟವಾಯಿತು. ಅಖಿಲ ಉಡುಪಿಗೆ ನನ್ನನ್ನು ಪರಿಚಯಿಸಿಕೊಟ್ಟ ವೇದಿಕೆ ಆಯಿತು.

1944ರ ಜೂನ್ ತಿಂಗಳಲ್ಲಿ ನಾನು ಹೈಸ್ಕೂಲಿನ ಕೆಳತರಗತಿಗಳಿಗೆ ಅಧ್ಯಾಪಕನಾಗಿ ನೇಮಿತನಾದೆ. 24 ರೂಪಾಯಿ ಮಾಸಿಕ ವೇತನಕ್ಕೆ 6 ರೂಪಾಯಿ ತುಟ್ಟಿಭತ್ತೆ ಸೇರಿ 30 ರೂಪಾಯಿ ಕೈಗೆ ಬರುತ್ತಿತ್ತು. ಒಂದೂವರೆ ಆಣೆ ಬೆಳಗಿನ ತಿಂಡಿ, ಶಾಲೆ ಇದ್ದ ದಿನಗಳಲ್ಲಿ ಮೂರಾಣೆ ಊಟಕ್ಕೆ ವಿನಿಯೋಗವಾದ ಮೇಲೆ ಉಳಿದದ್ದು ಮನೆ ಖರ್ಚಿಗೆ. 1946ರ ಜನವರಿಯಲ್ಲೆ ನಾನು ಹೈಸ್ಕೂಲ್ ಬಿಟ್ಟ ನೆನಪಾಗುತ್ತದೆ. ಒಟ್ಟು ಹದಿನೆಂಟು ತಿಂಗಳ ಸೇವಾವಧಿಯಲ್ಲಿ ನಾನು ಕೊಟ್ಟದ್ದಕ್ಕಿಂತ ಪಡೆದದ್ದು ಹೆಚ್ಚೆಂದೇ ನನಗನಿಸಿತ್ತು – ಆರ್ಥಿಕವಾಗಿಯೂ ಮತ್ತು ಅಧ್ಯಾತ್ಮಿಕವಾಗಿಯೂ. ಹೌದು, ಕ್ರಿಶ್ಚನ್ ಹೈಸ್ಕೂಲಿನ ನನ್ನ ಅನುಭವದ ಗಹನತೆಯನ್ನು ಅಳೆಯಬೇಕಾದರೆ ಮನುಷ್ಯ ಜೀವಿಯ ಅಧ್ಯಾತ್ಮಿಕ ಸ್ತರವನ್ನು ಪ್ರವೇಶಿಸಬೇಕಾಗುತ್ತದೆ. ಯಾವ ಭೌತ ಮಾನದಂಡದಿಂದಲೂ ಈ ರಸಾನುಭವ ಅಪ್ರಮೇಯವೇ ಸರಿ. ಇದು ನನ್ನ ಬದುಕಿಗೆ ಒಂದು ಹೊಸ ತಿರುವುಕೊಟ್ಟ ಪುಣ್ಯಸ್ಥಳ; ಇಲ್ಲಿ ಕಿರಿಯನಾದ ನನ್ನನ್ನು ಅಧ್ಯಾಪಕ ಮಂಡಳಿ ನಡೆಸಿಕೊಟ್ಟ ಮಾನವ್ಯ, ಕರುಣೆ, ಸಹಕಾರ ನನ್ನ ಬದುಕು ಬಂಗಾರವಾಗುವಂತೆ ಮಾಡಿದೆ.

ಇನ್ನಿಲ್ಲ, ಮುನ್ನಿಲ್ಲವೆಂಬಂಥ ಹಿರಿಜೀವಿಗಳ ನಡುವೆ ದುಡಿಯುವ ಭಾಗ್ಯ ನನ್ನದಾಗಿತ್ತು: ಹಲಗಾಲ ತರುವಾಯ ಮತ್ತೊಮ್ಮೆ ಯಾವುದೋ ಕಾರಣಕ್ಕಾಗಿ ಭೇಟಿ ನೀಡಿದಾಗ ನನ್ನ ದೃಷ್ಟಿ ಪಥದಲ್ಲಿ ಕಾವಿಗೋಡೆ, ಕೆಂಪುಮಾಡು, ತಾಬಾಳೆ ಗಿಡ ಯಾವುದೂ ಬೀಳಲೊಲ್ಲವು. ಬದಲು ಶಾಲೆಯ ಆತ್ಮವಾಗಿದ್ದು ನನ್ನ ಚೇತನಕ್ಕೆ ಪ್ರೇಮಧಾರೆಯೆನ್ನೆರೆದ ಪುಣ್ಯಶ್ಲೋಕರಚಿತ್ರ ಒಂದೊಂದಾಗಿ ಕಣ್ಣಿಗೆ ಕಟ್ಟಿತು. ಮನಸ್ಸು, ಬುದ್ಧಿ ಇಪ್ಪತ್ತು ವರ್ಷ ಹಿಂಜರಿದು ನನಗೆ ಕಾಯಕಲ್ಪ ಸಿದ್ಧಿಯಾಯಿತು. ನೆನಪಿನ ಭೃಂಗದ ಬೆನ್ನು ಕಲ್ಪನಾವಿಲಾಸಕ್ಕೆ ಅನುವು ಮಾಡಿಕೊಟ್ಟಿತು. ಅಂದಿನ ವಸ್ತುಸ್ಥಿತಿ, ಅದ್ಯತನ ಜಂಜಾಟದ ನಡುವೆ ಕಲ್ಪನೆ ಅಲ್ಲದೆ ಬೇರೇನು?

ಪಂಡಿತ ವೆಂಕಟರಾಮಾಚಾರ್ಯರು ಕನ್ನಡದ ಕಲಿಕೆಗೆ ಉಡುಪಿಯ ಮಟ್ಟಿಗೆ ನಾಡೋಜರು. ಕನ್ನಡದಲ್ಲಿ ಸಾಂಪ್ರದಾಯಿಕವಾದ ಯಾವ ಪರೀಕ್ಷೆಯನ್ನೂ ಮಾಡಿಸಿಕೊಳ್ಳದೆಯೂ ಕಲಿಸಲು ಮುಂದಾದ ಈ ಸಂಸ್ಕೃತ

ತಜ್ಞರ ಸಂಸ್ಕೃತ ಪಾಂಡಿತ್ಯವೆಷ್ಟೋ ಕನ್ನಡದ ಅಭ್ಯಾಸವೂ ಅಷ್ಟೇ ಗಹನವಾದದ್ದು, ಬಲು ಸೂಕ್ಷ್ಮವಾದ ವಿನೋದ ಪ್ರವೃತ್ತಿ, ರಸಿಕ ಮನೋವೃತ್ತಿ ನಿಷ್ಠುರ ವಿಮರ್ಶನ ಶಕ್ತಿ ಎಲ್ಲಕ್ಕೂ ಮೇಲಾಗಿ ಮೇಲು ಮಟ್ಟದ ಬೌದ್ಧಿಕ ಸಂಪನ್ನತೆಯನ್ನು ಪಡೆದೇ ಬಂದಿದ್ದ ವೆಂಕಟರಾಮಾಚಾರ್ಯರು ನನ್ನ ಕನ್ನಡ ಸಾಹಿತ್ಯಾಭ್ಯಾಸಕ್ಕೆ ಚಾಲನೆ ನೀಡಿದರು. ಪಾಠ ಹೇಳಿದರು. 'ರಸರತ್ನಾಕರ' ಮತ್ತು 'ಪಂಪ' ನಾನು ಅವರಿಂದ ಪಾಠ ಮಾಡಿಸಿಕೊಂಡ ಗ್ರಂಥಗಳು. ಗುರುಮುಖದಿಂದ ಪಾಠ ಕೇಳಬೇಕೆಂಬ ನನ್ನ ಲವಲವಿಕೆಯನ್ನು ಮನಸಾ ಈಡೇರಿಸಿದ ಶ್ರೀ ಆಚಾರ್ಯರ ಪ್ರತಿಭೆಗೆ ಸಮವಾದ್ದು ಪ್ರಾಯಃ ಡಿ. ಎಲ್. ಎನ್. ಅವರ ಪಾಠಗಳು ಇರಬೇಕು (ಡಿ. ಎಲ್. ಎನ್. ಪಂಪಭಾರತ ದೀಪಿಕೆಯಲ್ಲಿ ಕಾಣುವಂಥ ಕೋಲ್ಮಿಂಚಿನ ಸೆಳಕು ಆಚಾರ್ಯರ ಪಾಠದಲ್ಲಿ ನಿತ್ಯರೂಢಿ). ಯಾವ ಜಿಡುಕೂ ಆಚಾರ್ಯರ ಕುಶಲವಂತಿಕೆಗೆ ಜಿಡುಕಲ್ಲ. ಅವರು ಕನ್ನಡ ಶಿಕ್ಷಕರಾದ ಕಥೆ ಹೀಗೆ ಹೇಳುತ್ತಾರೆ; ತಾತಾಚಾರ್ ಎಂಬವರು ಶಾಲೆಗೆ ಪರೀಕ್ಷಕರಾಗಿ ಬಂದಾಗ ಆಗತಾನೇ ನೇಮಿತರಾದ ಈ ಸಂಸ್ಕೃತ ಪಂಡಿತನಿಗೆ ಕನ್ನಡ ಕಲಿಸಲು ಪರವಾನಿಗೆ ದೊರೆತೀತೆ ಎಂಬ ಸಂದೇಹ ಸಂಸ್ಥೆಯ ಅಧಿಕಾರಿಗಳಿಗೆ ಇದ್ದಿತ್ತು. ಕನ್ನಡದಲ್ಲಿ ಯಾವ ಅರ್ಹತೆಯೂ ಇಲ್ಲದವನು ಕನ್ನಡ ಕಲಿಸಬಹುದೆ? ಅವರ ಪಾಠವನ್ನು ಆಮೂಲಾಗ್ರ ಶ್ರವಣ ಮಾಡಿದ ಮೇಲೆ ಪರೀಕ್ಷಕರು ಪ್ರಶಂಸಕರಾಗಿ ಇವರು ಇರುವಷ್ಟು ದಿನ ಬೇರೆ ಯಾರೂ ಕನ್ನಡ ಕಲಿಸಲೇಕೂಡದು ಎಂದರಂತೆ.

ಹೈಸ್ಕೂಲುಗಳಲ್ಲಿ ಎಲ್ಲಾ ಪಾಠಗಳೂ ಇಂಗ್ಲೀಷ್ ಮಾಧ್ಯಮ ಜಾರಿಯಲ್ಲಿದ್ದು ಕನ್ನಡ ಮಾತ್ರ ಕನ್ನಡದಲ್ಲಿ ಕಲಿಯಬೇಕಾಗಿದ್ದ ಆ ಕಾಲದಲ್ಲಿ ಕನ್ನಡದ ಸ್ಥಾನಮಾನ ಎರಡೂ ಅವಮಾನದ ಅಂಚಿನಲ್ಲಿ ತೊಳಲಬೇಕಾಗಿತ್ತಷ್ಟೆ. ಅಂಥಲ್ಲಿ ಕನ್ನಡದ ಮರ್ಯಾದೆ ಕಾಪಾಡಿದವರು ಆಚಾರ್ಯರು. ಕ್ರಿಶ್ಚನ್ ಹೈಸ್ಕೂಲ್ ಹುಡುಗರಿಗೆ ಕನ್ನಡ ವರ್ಗಗಳಲ್ಲಿ– ಉಳಿದೆಡೆಗಳಂತೆ – ತಾತ್ಸಾರ ಇರಲಿಲ್ಲ. ಕಾರಣ, ಪಾಠ ವೆಂಕಟರಾಮಾಚಾರ್ಯರದ್ದು; ಯಾವಾಗ ಕನ್ನಡ ತೊಡಗೀತು ಎಂಬ ಲವಲವಿಕೆ ಸರ್ವ ವಿದ್ಯಾರ್ಥಿಗಳಲ್ಲೂ. ಕ್ಲಾಸಿನ ಅಪಾಪೋಲಿಗಳು, ಹುಡುಗರು ಆಚಾರ್ಯರ ಮೃದು ಪದಾಘಾತವನ್ನು ಆಲಿಸಿದರೋ 'ಬೆಲ್ಲವ ತಿಂದ ಕೋಡಗನಂತೆ' ಬಾಲ ಮಡಚಿ ಒಂದು ಗಂಟೆ ಕಾಲ ಪ್ರಾಣಾಯಾಮ ಮಾಡಬೇಕಾಗುತ್ತಿತ್ತು. ಸ್ವಲ್ಪ ಬಾಲ ಆಡಿಸಿದರೂ ಸಾಕು ಆಚಾರ್ಯರ ಘನ ಗಂಭೀರ ಶೈಲಿಯ ಮಾತಿನ ತಿವಿತಕ್ಕೆ ಒಂದು ತಿಂಗಳು ಆತ ಮೋರೆ ಎತ್ತಲಾರ. ಉಪಾಧ್ಯಾಯರ ಕೊಠಡಿಯಲ್ಲಿ ಎಲ್ಲರೂ ಗಟ್ಟಿ ಚರ್ಚೆಗೆ ಇಳಿದಾಗ ಆಚಾರ್ಯರು ತುಸು ಹೊತ್ತು ಸುಮ್ಮನಿದ್ದು ಒಂದು ಒಗ್ಗರಣೆ ಹೊಯ್ದು ಬಿಟ್ಟರೆ ಸಾಕು ಚರ್ಚೆಗೆ ರುಚಿ ಬಂದು ಬಿಡುತ್ತಿತ್ತು. ಉಡುಪಿಯ ಮಠಗಳ ಲೌಕಿಕ ಸಭೆಗಳಿಗೆ ಅವರು ಆಸ್ಥಾನ ಪಂಡಿತರಾಗಿದ್ದರು. ಒಬ್ಬ ಬಾಲವಟುವಿಗೆ ಸನ್ಯಾಸದೀಕ್ಷೆ ಕೊಟ್ಟಾಗ ಒಂದು ಅಭಿನಂದನ ಸಭೆಯಲ್ಲಿ ಅವರು ಭಾಷಣ ಮಾಡಿದರಂತೆ. "ಸ್ವಾಮಿ, ಕೆಲವರು ಸೇರಿ ಈಗ ನಿಮ್ಮ ತಲೆಯ ಓಡನ್ನು ಮಾತ್ರ ಬೋಳಿಸಿದ್ದಾರೆ. ಆದರೆ ಇನ್ನು ಮುಂದೆ ಎಲ್ಲರೂ ಸೇರಿ ಅದರೊಳಗಿರುವುದನ್ನೂ ಬಳಿಯಲು ಯತ್ನ ಮಾಡುತ್ತಾರೆ. ಹೊರಗಿನದು ಬೋಳಾದರೂ ಒಳಗೆ ಬೋಳಾಗದಿರುವಂತೆ ನೋಡಿಕೊಳ್ಳುವುದು ನಿಮ್ಮ ಸಾಹಸಕ್ಕೆ ಸಂದ ಕೆಲಸ. ಇದರಲ್ಲಿ ನಿಮಗೆ ಭಗವಂತ ನೆರವು ನೀಡಬೇಕು;" ಪಂಡಿತ ವೆಂಕಟರಾಮಾಚಾರ್ಯರ ಹತ್ತಿರ ಕನ್ನಡ ಕಲಿತ ಎಷ್ಟೋ ಮಂದಿ ಕನ್ನಡ ಮರೆತರೂ ಆಚಾರ್ಯರ ವ್ಯಕ್ತಿತ್ವವನ್ನು ಮರೆಯಲಾರರು. ನನಗಂತೂ ಅವರು ಪಾಂಡಿತ್ಯದ ಒಂದು ಮೈಲಿಗಲ್ಲು. ನಮ್ಮ ವಿಶ್ವವಿದ್ಯಾಲಯಗಳು ನೀಡುವ ಅರಗನ್ನಡ ವಿದ್ವತ್ತಿಗೊಂದು ಶಾಶ್ವತ ಸವಾಲು, ಸಂಪ್ರದಾಯದ, ಪರಂಪರೆಯ ಶಿಕ್ಷಣ ಪಾಂಡಿತ್ಯದ ಇಂಥ ಖನಿಗಳನ್ನು ನಿರ್ಮಿಸಬಲ್ಲುದೇ ಹೊರತು ನಮ್ಮ ಚೌ ಚೌ ಮಸಾಲೆ ಶಿಕ್ಷಣದಿಂದ ಹರವು ಹೆಚ್ಚೀತೇ ವಿನಾ ಆಳ ಒದಗಲಾರದು ಎಂದೇ ನನಗನಿಸುತ್ತದೆ. ಮೊದಲು ಪಂಡಿತನಾಗಿ ಆ ಮೇಲೆ ವಾರ್ಸಿಟಿ ಪದವೀಧರನಾದ ನನ್ನ ಪೂರ್ವಗ್ರಹಬಾಧೆ ಎಂದು ಇದನ್ನು ಸುಲಭದಲ್ಲಿ ಯಾರೂ ತಳ್ಳಿ ಬಿಡುವಂತಿಲ್ಲ. ವಾರ್ಸಿಟಿ ಶಿಕ್ಷಣ ಇಂಥ ಘನಪಾಠಿಗಳನ್ನು ನನ್ನ ಕಣ್ಮುಂದೆ ನಿಲ್ಲಿಸುವ ತನಕ.

ಕ್ರಿಶ್ಚನ್ ಹೈಸ್ಕೂಲ್ ಮುದ್ದಣ ಕಲಿಸಿದ ಶಾಲೆ. ಅಲ್ಲಿ ಕನ್ನಡದ ಕಾಯಕವನ್ನು ಒಂದು ತಲೆಮಾರು ಪೂರ್ತಿ ನಡೆಸಿಕೊಟ್ಟವರು ಪಂಡಿತ ವೆಂಕಟರಾಮಾಚಾರ್ಯರು. ಉಡುಪಿಯ ನೂರಾರು ವಿದ್ಯಾರ್ಥಿಗಳ ಹೃದಯ ಸಂಪುಟದಲ್ಲಿ ಅವರ ಸುವರ್ಣ ಸ್ಮಾರಕ ನಿರ್ಮಿತವಾಗಿದೆ. ಅವರ ಕರುಣೆಯಿಂದ ನಾನು ಹೈಸ್ಕೂಲಲ್ಲಿರುವಾಗಲೆ ವಿದ್ವಾನ್ ಪರೀಕ್ಷೆ ಪಾಸಾಗಿ ಒರ್ಮಾದರಿ ವಿದ್ವಾಂಸನಾಗಿ ಹೊರಬಿದ್ದೆ.

ನಾನು ಹಾಗೆ ಹೊರಬೀಳುವುದು ಹೈಸ್ಕೂಲಿನ ಮುಖ್ಯ ಉಪಾಧ್ಯಾಯರಾದ ಶ್ರೀ ಕಾರಟ್ ಅವರಿಗೆ ಹಿಡಿಸಲಿಲ್ಲ. ಕಾರಟ್ ಅವರಲ್ಲಿ ಮಿಶನರಿಗಳಲ್ಲಿ ಸಾಮಾನ್ಯವಾದ ಸೌಜನ್ಯ, ಮಧುರವಾಕ್ಯ ಪ್ರೀತಿ ಅಲ್ಲದೆ ಗಂಭೀರವಾದ ಒಂದು ವರ್ಚಸ್ಸು ಮನೆ ಮಾಡಿತ್ತು. ಯಾವತ್ತು ಅವರು ವಿಚಲಿತರಾದದ್ದನ್ನೇ ನಾನು ಕಂಡಿಲ್ಲ. ಆಡಳಿತದ ಯಾವ ಸಮಸ್ಯೆಯ ಕರಿನೆಳಲೂ ಅವರ ಮೋರೆಯ ಮೇಲೆ ಹಾಯ್ದುದ್ದಿಲ್ಲ. ನಿಜವಾಗಿ ಹಾಯಲಿಲ್ಲವೋ ಅಥವಾ ಅದನ್ನು ತೋರಿಸುವುದು ಸಜ್ಜನರ ಕುರುಹಲ್ಲವೆಂದು ಸಂಯಮಿಸಿದ್ದರೋ ನಾನರಿಯೆ. ನೂರಕ್ಕೆ ನೂರು ಜಂಟ್ಲ್‌ಮ್ಯಾನ್, ನ್ಯೂಮಾನ್ ಪರಿಭಾಷೆಯ ಸಕಲಗುಣ ಸಂಪನ್ನವಾದ ಸಜ್ಜನಿಕೆ ಅವರದು. ಎಂದೂ ಅವರು ಪರುಷವಾಗಿ ಮಾತಾಡಿದ್ದು ನಾನು ಕೇಳಿಲ್ಲ. ಅಧ್ಯಾಪಕರನ್ನು ಒಂದು

ಕುಟುಂಬದ ಸದಸ್ಯರಂತ ಭಾವಿಸಿ ಅವರ ಕಷ್ಟಸುಖಗಳಲ್ಲಿ ಭಾಗಿಯಾಗುವ ಶ್ರೀ ಕಾರಟ್ ಅವರು ನನ್ನ ಬಗ್ಗೆ ಅಪಾರ ವಿಶ್ವಾಸ ತೋರಿಸಿದರು. ಗುಣೈಕ ಪಕ್ಷಪಾತಿಯಾದ ಅವರು ಮೊದಲ ವರ್ಷ ನನ್ನನ್ನು ಅಳೆದು, ತೂಗಿ, ಒರೆಗೆ ಹಚ್ಚಿ ಕೇವಲ ಕನ್ನಡಕ್ಕೆ ಮಾತ್ರ ನಿಯೋಜಿಸಿದ್ದರೆ ಮರುವರ್ಷದಿಂದ 6, 7.8ನೇ ವರ್ಗಗಳ ಎಲ್ಲ ಇಂಗ್ಲೀಷ್ ಪಾಠವನ್ನೂ ನೀನೇ ಮಾಡತಕ್ಕದ್ದು ಎಂದು ತಾಕೀತು ಮಾಡಿದರು. ಆಗಿನ ಕಾಲದಲ್ಲಿ ಇಂಗ್ಲಿಷ್ ಪಾಠ ಹೇಳುವುದು ಅತ್ಯಂತ ಗೌರವದ ಕೆಲಸ. ನನಗಿಂತ ಹಿರಿಯರಾದ ಅಧ್ಯಾಪಕರನ್ನು ಬೇರೆ ಕಡೆ ಕಳಿಸಿ ನನಗೆ ನನ್ನ ಮಟ್ಟದ ಅತ್ಯುಚ್ಚ ವರ್ಗವನ್ನು ಕೊಟ್ಟಾಗ ನಾನು ಧನ್ಯನಾದೆ. ಆದರೆ ಇನ್‌ಸ್ಪೆಕ್ಷನ್ ಕಾಲದಲ್ಲಿ ಒಂದು ಅಚಾತುರ್ಯವಾಯಿತು. ನನಗೆ ಪಾಠದ ವೇಳೆ ನಾನು ಮತ್ತು ನನ್ನ ವಿದ್ಯಾರ್ಥಿಗಳ ಹೊರತು ಬೇರಾರೂ ಸುಳಿಯ ಬಾರದು; ಆತ ಪರೀಕ್ಷಕನಾಗಲಿ, ತಕ್ಷಕನೇ ಆಗಲಿ, ಇನ್‌ಸ್ಪೆಕ್ಟರ್ ಎದುರು ನನ್ನ ನಾಲಗೆ ತಡವರಿಸುತ್ತಿದ್ದುದು ಮಾತ್ರವಲ್ಲ, ನನ್ನ ಇಂಗ್ಲೀಷು ಸುಯೇಜ್ ಕಾಲುವೆ ದಾಟ ಬಿಡುತ್ತಿತ್ತು. ವ್ಯಾಕರಣ ಗೋಕರ್ಣ ಯಾತ್ರೆ ಮಾಡುತ್ತಿತ್ತು. ಇಂಥ ದುರ್ಘಟನೆ ಒಂದು ದಿನ ಮಾತ್ರ ನಡೆದದ್ದರಿಂದ ನನ್ನ ವಿದ್ಯಾರ್ಥಿಗಳಿಗೆ ಏನೂ ಅಪಘಾತ ವಾಗಲಿಲ್ಲನ್ನಿ. ಆದರೆ ಬಡಪಾಯಿ ಇನ್‌ಸ್ಪೆಕ್ಟರ್‌ಗೆ ಮುಖ್ಯೋಪಾಧ್ಯಾಯರ ಮೇಲೆ ಸಂಶಯ ಬಂದಿತು. ಇದೇನು ಇಂಗ್ಲೀಷಿನಲ್ಲಿ ಪ್ರಾವೀಣ್ಯ ಇಲ್ಲದ ಒಬ್ಬನಿಗೆ ಎಲ್ಲ ಜವಾಬ್ದಾರಿ ಕೊಟ್ಟಿದ್ದೀರಲ್ಲಾ ಎಂದು. ಆದರೆ ಮಹಾಮನರಾದ ಕಾರಟ್ ಸ್ಪಷ್ಟವಾಗಿ ನುಡಿದರಂತೆ. "ಹಿ ಈಸ್ ಮೈ ಬೆಸ್ಟ್ ಟೀಚರ್ ಆಫ್ ಇಂಗ್ಲೀಷ್. ಹಿ ಡಸ್ ನಾಟ್ ಲೈಕ್ ಯುವರ್ ಪ್ರೆಸೆನ್ಸ್ ದ್ಯಾಟ್ ಈಸ್ ಆಲ್." ನನ್ನ ನಗೆಪಾಟಲು ಪಾಠವನ್ನು ನಗುವಿನಲ್ಲಿ ತೇಲಿಸಿ ನನ್ನನ್ನು ಇನ್ಸ್‌ಪೆಕ್ಟರ್ ದವಡೆಯಿಂದ ಕಾರಟ್ ಅವರು ಪಾರು ಮಾಡಿದರು.

ನಾನು ವಿದ್ವಾಂಸನಾದ ವರ್ಷವೇ ಪಂಡಿತ ವೆಂಕಟರಾಮಾಚಾರ್ಯರು ವಿಶ್ರಾಂತರಾದರು. ಶ್ರೀ ಕಾರಟ್ ಅವರು ನನಗೆ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಶಾಶ್ವತ ದೀಕ್ಷೆ ಕೊಡಿಸುವ ಉದ್ದೇಶದಿಂದ ನನ್ನನ್ನು ಆಪ್ತವಾಗಿ ಕರೆದು 'ಭಟ್ಟರೇ, ನಿಮಗೊಂದು ಮಾತು ಹೇಳುತ್ತೇನೆ; ನಡೆಸಿ ಕೊಡಬೇಕು; ವೆಂಕಟರಾಮಾಚಾರ್ಯರ ಸ್ಥಳದಲ್ಲಿ ನೀವು ಮುಂದಿನ ವರ್ಷದಿಂದ ಕನ್ನಡ ಪಂಡಿತರಾಗಿ ಕೆಲಸ ಮಾಡಬೇಕು' ಎಂದರು. ಇದೇನು ನಾನು ಕನಸಿನಲ್ಲಿದ್ದೇನೋ ಎಂಬ ಭ್ರಮೆ ನನಗೆ. ಮನಸ್ಸಿನಲ್ಲಿ ಅಳುಕು, ಸಂಕೋಚ ಮೂಡಿದರೂ ಮೊದಲು ಮುದ್ದಣ, ಮತ್ತೆ ಪಂಡಿತ ವೆಂಕಟರಾಮಾಚಾರ್ಯರು ಆಮೇಲೆ ಯಾರು? ಯಾರು? ಎನಿಸಿದರೂ ಬಾಯಿ ಬೇರೊಂದು ನುಡಿಯಿತು 'ಥ್ಯಾಂಕ್ಸ್. ಇಲ್ಲ ಸಾರ್; ನಾನು ಮತ್ತೆ ಕಾಲೇಜಿಗೆ ಹೋಗಲು ನನ್ನ ಚಿಕ್ಕಪ್ಪ ಅನುಕೂಲ ಮಾಡಿಕೊಟ್ಟಿದ್ದಾರೆ. ನಾನು ಊರು ಬಿಡುತ್ತೇನೆ' 'ಹಾಗೋ, ಸರಿ ಸರಿ, ಆ ಯೋಚನೆ ಇದ್ದರೆ ಇದನ್ನು ಬಿಡಿ, ನನ್ನ ಸೂಚನೆ ಮರೆತು ಬಿಡಿ' ಎಂದರು. ಸಂಸ್ಥೆಯ ಏಳಿಗೆಯ ಏಕೈಕ ದೃಷ್ಟಿಯಿಂದ ಅವರು ನೀಡಿದ ಆಹ್ವಾನವನ್ನು ಮನ್ನಿಸಲಾರದೆ ಹೋದೆನಲ್ಲಾ ಎಂಬ ಕೊರಗು ನನಗಿನ್ನೂ ಇದೆ.

ಇಂಗ್ಲೀಷಿನ ಜತೆಗೆ ನಾನು ಮೂರು ತರಗತಿಗಳಿಗೆ ವಿಜ್ಞಾನವನ್ನೂ ಪಾಠ ಹೇಳುತ್ತಿದ್ದೆ. ಆಗ ಕ್ರಿಶ್ಚನ್ ಹೈಸ್ಕೂಲಿನಲ್ಲಿ ವಿಜ್ಞಾನ ಪ್ರಾಧ್ಯಾಪಕರಾಗಿದ್ದ ಶ್ರೀ ಪದ್ಮನಾಭರಾಯರು ನನ್ನ ಹಿರಿಯಣ್ಣನಂತೆ ನನಗೆ ಆಗಿಂದಾಗ ಸಲಹೆ ಕೊಡುತ್ತಿದ್ದರು. ಇಂಟರ್ಮೀಡಿಯೇಟ್ ಪರೀಕ್ಷೆ ಖಾಸಗಿಯಾಗಿ ಕಟ್ಟಿದರೆ ನೀವು ಖಂಡಿತ ಪಾಸಾಗುತ್ತೀರಿ, ಸಂಶಯಬೇಡ ಎಂದು ನನ್ನನ್ನು ಹುರಿದುಂಬಿಸಿದವರು. ಅವರು ನಾನು ಇಂಟರ್ಮೀಡಿಯೇಟ್‌ನಲ್ಲಿ ಪ್ರಥಮ ವರ್ಗ, ದ್ವಿತೀಯ ರ್‍ಯಾಂಕ್‌ನಲ್ಲಿ ಪಾಸಾದಾಗ ಆನಂದತುಂದಿಲರಾಗಿ "ಇನ್ನು ನೀವು ಖಾಸಗಿಯನ್ನು ಬಿಟ್ಟು ಸಾಚಾ ಕಾಲೇಜಿಗೆ ಹೋಗಬೇಕು, ಮದರಾಸಿಗೆ ಹೋಗಿ, ಎಲ್ಲಿಗೂ ಹೋಗಿ, ಮುಂದೆ ಎಂ. ಎ. ಮಾಡಿ ನೀವು ವಿಶ್ವವಿದ್ಯಾನಿಲಯಕ್ಕೆ ಸೇರಬೇಕಾದವರು, ನಮ್ಮ ಸಹವಾಸ ಇಲ್ಲಿಗೆ ಸಾಕು" ಎಂದು ಮಾರ್ಗದರ್ಶನ ಮಾಡಿದರು. ಇದು ಯಾವ ಜನ್ಮದ ಮೈತ್ರಿ, ಇವರೆಲ್ಲ ನನ್ನನ್ನು ಹೀಗೇಕೆ ನೆಚ್ಚಿಕೊಂಡಿದ್ದಾರೆ, ಹಚ್ಚಿಕೊಂಡಿದ್ದಾರೆ – ಎಂದು ಆಗ ಎಳೆಗರುವಾಗಿದ್ದ ನನಗೆ ಅನಿಸುತ್ತಿತ್ತು. ಶ್ರೀ ಪದ್ಮನಾಭರಾಯರಲ್ಲಿ ಇನ್ನೂ ಒಂದು ವಿಶೇಷ ಗುಣ ಎಲ್ಲರಿಗೂ ಸಹಾಯ ಮಾಡುವುದು. ದಿನವೆಲ್ಲ ಪ್ರಯೋಗಶಾಲೆಯಲ್ಲಿ ದುಡಿದರೂ ಅವರಿಗೆ ದಣಿವಿಲ್ಲ; ಒಳ್ಳೆ ವಿದ್ಯಾರ್ಥಿಗಳ ಮೇಲೆ ಅವರಿಗಿದ್ದ ಮಮತೆಯ ಸ್ವಲ್ಪಾಂಶ ನನಗೂ ಅವರು ಹಂಚಿಕೊಟ್ಟಿದ್ದರೆಂದು ತೋರುತ್ತದೆ. ವಿಜ್ಞಾನದ ಸೂತ್ರಗಳನ್ನು ಕಲಿಸುವಲ್ಲಿ, ಪ್ರಯೋಗಗಳನ್ನು ಶಬ್ದಪೂರ್ವಕ ಬಿತ್ತರಿಸುವುದರಲ್ಲಿ ನಾನೇನು ಹಿಂದಲ್ಲ; ಆದರೆ ಉಪಕರಣಗಳ ಜೋಡಣೆಯ ತಂತ್ರಜ್ಞಾನ ಕರಕುಶಲತೆಯಲ್ಲಿ ನಾನೊಬ್ಬ ದಡ್ಡ, ದಡ್ಡನಲ್ಲವಾದರೂ ಅಂಥ ಚಿಲ್ಲರೆ ಕೆಲಸಗಳಿಗೆ ವ್ಯವಧಾನವಿಲ್ಲದ ತರಾತುರಿ ಮನುಷ್ಯ. ಆದ್ದರಿಂದ ಎಟ್ನಬರ್ನರ್ ಹಚ್ಚಿ ಕೊಡುವುದರಿಂದ, ಆಮ್ಲಜನಕ ಪ್ರಯೋಗಗಳ ವಿನ್ಯಾಸಗಳನ್ನೆಲ್ಲ ಪದ್ಮನಾಭರಾಯರೇ ನನಗೆ ಮಾಡಿಕೊಡಬೇಕು; ಹೇದೆ ಅದನ್ನೆತ್ತಿ ಕೊಂಡು ನನ್ನ ಕ್ಲಾಸಿನೊಳಗೆ ಬರಬೇಕು; ಆಮೇಲೆ ನನ್ನ ಶಬ್ದಪ್ರಯೋಗ ಆರಂಭವಾಗಬೇಕು. ಹದಿನೆಂಟು ತಿಂಗಳೂ ಪಿಟಕ್ಕೆನ್ನದೆ ನನಗೆ ಪ್ರಯೋಗದ ನೆರವು ನೀಡಿದ ಪದ್ಮನಾಭರಾಯರು ಅಕಾಲದಲ್ಲಿ ನಿಧನರಾದ್ದು ಶಾಲೆಗೆ ಅಪಾರ ನಷ್ಟ. ಪ್ರಾಮಾಣಿಕ ಸೇವೆ ಸಲ್ಲಿಸಿದ ಇಂಥ ಉಪಾಧ್ಯಾಯರೇ ಒಂದು ಸಂಸ್ಥೆಯ ಆತ್ಮ.

ನನ್ನ ಜತೆ ದುಡಿಯುತ್ತಿದ್ದ ನನಗಿಂತಲೂ ಹಿರಿಯರೂ, ಉಪಾಧ್ಯಾಯ ವೃತ್ತಿಯಲ್ಲಿ ಪ್ರಖ್ಯಾತರೂ ಆದ

ಇನ್ನಿಬ್ಬರು ಮಹನೀಯರನ್ನು ನಾನು ಉಲ್ಲೇಖಿಸಲೇಬೇಕು. ಗಣಿತ ಅಧ್ಯಾಪಕ ಶ್ರೀ ಪುಂಡಲೀಕ ಶೆಣೈ ಅವರು ಮತ್ತು ಅಂಬಲಪಾಡಿ ಸುಬ್ರಾಯಾಚಾರ್ಯರು, ಸುದೈವದಿಂದ ವಿಶ್ರಾಂತರಾದ ಮೇಲೆ 20 ವರ್ಷಗಳು ಬದುಕಿ ವಿದ್ಯಾರ್ಥಿಗಳಿಗೆ ಮನಸೇಚ್ಛೆ ಪಾಠಹೇಳುವುದರಲ್ಲೇ ದಿನವಿಡೀ ದಣಿಯುವ ಶ್ರೀ ಪುಂಡಲೀಕ ಶೆಣೈ ಅವರು ಉಡುಪಿಯ ವಿಶಿಷ್ಟ ಪ್ರಜೆ. ಇವರು ಬ್ರಹ್ಮಚಾರಿಗಳು; ಆದರೆ ಮಕ್ಕಳ ಹಿತದ ಬಗ್ಗೆ ಅಪೂರ್ವ ಕಾಳಜಿ, ಪ್ರೀತಿ. ಉಡುಪಿಯಲ್ಲಿ ಬಾಳಿ ಬದುಕಿದ ಉಪಾಧ್ಯಾಯರಲ್ಲಿ ಇವರು ಅತ್ಯಂತ ಪ್ರಾಜ್ಞರು, ಮಾತ್ರವಲ್ಲ ವಿಶ್ರಾಂತರಾಗಿ ಇಪ್ಪತ್ತು ವರ್ಷ ಸಂದರೂ ವೃತ್ತಿ ನಿರತರಾಗಿದ್ದವರು. ಪುಂಡಲೀಕ ಶೆಣೈ ಅವರಿಗೆ ಕ್ರಿಶ್ಚನ್ ಹೈಸ್ಕೂಲ್ ಎಂದರೆ ಜೀವಾತ್ಮ, ಪರಮಾತ್ಮ ಎರಡೂ. ಅವರ ಸೇವೆಗೆ ಗಂಟೆಗಳ ನಿಗದಿ ಮಾಡುವ ಹಕ್ಕನ್ನು ಅವರು ಸರಕಾರದ ಯಾವ ಕೋಡಿಗೂ ಬಿಟ್ಟುಕೊಡಲಾರರು. ಶಾಲೆಯಿಂದ ಬಂದ ಮೇಲೆ ಮನೆಯಲ್ಲಿ ವಿದ್ಯಾದಾನ. ಒಂದೂ ಕಾಸೂ ಶಿಷ್ಯರಿಂದ ಪಡೆಯಬಾರದು – ತನ್ನ ಶಾಲೆಯ ಸಂಬಳದ ಹೊರತು – ಇದು ಶೆಣೈಯವರ ವ್ರತ. ಕಠೋರ ಶಿಸ್ತು. ಅವರು ಪ್ರಬಂಧ ಪುಸ್ತಕಗಳನ್ನು ತಿದ್ದುತಿದ್ದರೋ. ಕೆಂಪು ಶಾಯಿಯಲ್ಲಿ ಪ್ರತಿ ಒಬ್ಬನಿಗೂ ಹೊಸ ಪ್ರಬಂಧ ಬರೆದು ಕೊಡುತ್ತಿದ್ದರೋ ಹೇಳುವುದು ಕಷ್ಟ. ಹುಡುಗರ ಪ್ರಬಂಧ ಹಾಗ, ಇವರ ತಿದ್ದಿಕೆಗಳು ಮುಪ್ಪಾಗ. ಗಣಿತದಲ್ಲಿ ಇವರ ನಿಖರತೆ, ಪಾಂಡಿತ್ಯ ಅಸಾಧಾರಣ, ಇವರ ಪಾಠ ಕೇಳಿದವ, ಇವರ ಲೆಕ್ಕದ ಟಿಪ್ಪಣಿ ತಿರುವಿದವ ನಪಾಸಾಗಲು ಶಕ್ಯವೇ ಇರಲಿಲ್ಲ. ಇವರೊಬ್ಬ ವೈಯಾಕರಣಿ. ಇಂಗ್ಲೀಷಿನ ಶಿಸ್ತು ನಿಯಮಗಳು ಕನ್ನಡದಲ್ಲೇಕಿರಬಾರದೆಂದು ಸವಾಲು ಹಾಕುವ ಸದ್ವಾದಿ. ಶಬ್ದಕ್ಕೆ ಒಂದು ನಿಶ್ಚಿತಾರ್ಥ ಬೇಡವೇ? ನುಡಿಗಟ್ಟುಗಳನ್ನು ಸೆರೆಹಿಡಿದಿಡಬೇಡವೆ? ಕನ್ನಡ ಭಾಷೆಯ ಪ್ರಮಾಣ ಗ್ರಂಥಗಳೆಲ್ಲಿವೆ? ಹಳೆಯವಲ್ಲ, ಅದ್ಯತನ ಭಾಷಾಭಿವೃದ್ಧಿಗೆ ಪೂರಕವಾಗಬಲ್ಲ ಕೈಪಿಡಿಗಳಿಲ್ಲವೆ? ಎಂದು ಚಡಪಡಿಸುವ ಶ್ರೀ ಶೆಣೈ ಅವರ ಅಭೀಪ್ಸವನ್ನು ಅವರ ಶಿಷ್ಯರೊಬ್ಬರು (ಎಂ. ರಾಜಗೋಪಾಲಾಚಾರ್ಯರು) 'ಕನ್ನಡದ ವಾಗ್ರೂಢಿಗಳು' ಎಂಬ ಗ್ರಂಥದ ಮೂಲಕ ನೆರವೇರಿಸಿದಾಗ ಶ್ರೀ ಶೆಣೈ ಅವರಿಗೆ ಗುಡು ಮಗು ಹುಟ್ಟಿದಷ್ಟು ಆನಂದವಾಗಿರಬೇಕು. ಶ್ರೀ ಶೆಣೈ ಅವರಿಗೆ ನಾಟಕದ ಹುಚ್ಚು ಬಹಳ, ಶಾಲೆಯ ನಾಟಕಗಳಲ್ಲಿ ಅವರು ನಿರ್ದೇಶಕರಿಗೆ ಸಹಾಯಕ ರಾಗಿ ಹಗಲಿರುಳು ದುಡಿಯಬೇಕು. ನಾಟಕದ ದಿನ ಪಂಕ್ತಿಗಳನ್ನ ಮರೆಯುವ ನನ್ನಂಥವರಿಗೆ ಶೆಣೈ ಅವರು ಅಪದ್ಬಾಂಧವರೇ ಸರಿ; (ಆದರೆ ನಾನು ಅವರ ಕಾಲು ಜಾರಿಸಿದ್ದ ಒಂದು ಸಲ, ನಡೆದದ್ದು ಹೀಗೆ, ಮಾತು ಬಾರದಿದ್ದರೆ ಪ್ರಾಮ್ಟರ್ ಹೇಳಿಕೊಟ್ಟಾನು, ನೀವು ಹಾಡಿನ ಸೊಲ್ಲು ಮರೆತರೆ ಅವನೇನು ಮಾಡಬಲ್ಲ? ನಾನು ಮರೆತದ್ದು ಹಾಡಿನ ಸೊಲ್ಲು). ಇನ್ನೊಂದು ನಾಟಕದ ರಾತ್ರಿ ಶೆಣೈಯವರು ಕೋಳದ ಪೇಟೆಯಲ್ಲಿ ಓಡಿಬರುವುದನ್ನು ಯಾರೋ ನೋಡಿ ಗಾಬರಿ ಆಗಿ ಅವರ ಬೆನ್ನ ಹಿಂದೆ ಓಡಿ ಶಾಲೆಯವರೆಗೂ ಬಂದರು. ಶೆಣೈ ಅವರು ನಾಟಕದ ಒಂದು ಪುಟ್ಟ ಸಾಮಗ್ರಿಯನ್ನು ಮನೆಯಲ್ಲೇ ಮರೆತಿದ್ದರು; ಅದನ್ನು ತರಲು ಪೇದೆಯಿಂದಾಗದು ಎಂದು ಶೆಣೈಯವರ ಹಠ. ಸ್ವಯಂಕೃತ ಅಪರಾಧಕ್ಕೆ, ಸ್ವಯಂ ಪ್ರಾಯಶ್ಚಿತ್ತ. ಆದರೆ 55 ವರ್ಷದ ಈ ಹಿರಿಯರು ಓಡುವುದನ್ನು ಕಂಡವರಿಗೇನನಿಸಬೇಕು? ಅನಿಸಲಿ. ಅದು ಗೌಣ, ಶಾಲೆಯ ಕೆಲಸ ದೇವರ ಕೆಲಸ, ನಿತ್ಯ ಜೀವನದಲ್ಲಿ ವ್ಯವಹಾರದಲ್ಲಿ ಶ್ರೀ ಶೆಣೈ ಅವರೊಂದು ಮಗು. ಅವರ ಹೃದಯ ಸುಲಭದಲ್ಲಿ ಕರಗುತ್ತದೆ. ಎಷ್ಟು ಬಡವಿದ್ಯಾರ್ಥಿಗಳಿಗಾಗಿ ಅವರು ಕೈಯಿಂದ ಖರ್ಚು ಮಾಡಿದ್ದಾರೋ ಅವರೇ ಲೆಕ್ಕ ಇಟ್ಟಿಲ್ಲ. ನೂರಾರು ಜನ ಅವರ ಕೃಪೆಯಿಂದ ಶಿಕ್ಷಿತರಾಗಿದ್ದಾರೆ. ಯಾರಿಗೂ ತಾನು ಹೊರೆಯಾಗ ಬಾರದು ಎನ್ನುವ ಸಂಕಲ್ಪವನ್ನೂ, ಉಸಿರಾಟ ಇರುವ ತನಕ ಉಪಾಧ್ಯಾಯ ವೃತ್ತಿ ನಡೆಸಬೇಕೆಂಬ ಇಷ್ಟಾರ್ಥ ವನ್ನೂ ಶೆಣೈ ಅವರು ಅಹರ್ನಿಶಿ ಪಾಲಿಸಿದರು. ಇದೊಂದು ದಿವ್ಯಜೀವನ, ಹೆಸರು ಬೇಡ, ಪ್ರಸಿದ್ಧಿ ಬೇಡ, ಪ್ರಚಾರ ಬೇಡ.

ಇವರ ಅನುಚರನಾಗಿ, ಸಹಾಧ್ಯಾಯಿಯಾಗಿ, ಇವರ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ನಡೆದವರೆಂದರೆ ಕನ್ನಡ ಪಂಡಿತ ಶ್ರೀ ಸುಬ್ರಾಯಾಚಾರ್ಯರು. ಮಧ್ಯಾಹ್ನ ಕೂಳು ತಿನ್ನದೆ ಕನ್ನಡ ಕಲಿಸುವುದು ಸಾಧ್ಯ ಎಂಬುದನ್ನು ಸುಬ್ರಾಯಾಚಾರ್ಯರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಸಂಪ್ರದಾಯನಿಷ್ಠರಾದ ಇವರು ಹೋಟಲಿನ ನೀರು ಮುಟ್ಟರು. ಬೆಳಗಿನ ಫಲಾಹಾರದಿಂದಲೇ ರಾತ್ರಿಯ ತನಕವೂ ಕಾಲಹರಣ ಮಾಡಿ ಅಧ್ಯಾಪನದ ರಸಕವಳ ದಿಂದಲೇ ತೃಪ್ತರಾಗುತ್ತಿದ್ದ ಇವರ ಅಸಿಧಾರಾವ್ರತ ನನಗೆ ವಿಶ್ವದ ಅದ್ಭುತಗಳಲ್ಲೊಂದೆನಿಸಿದೆ. ವಿನಮ್ರ ಸ್ವಭಾವದ, ಮೆಲು ಮಾತಿನ ಸುಬ್ರಾಯಾಚಾರ್ಯರು ಶೆಣೈ ಅವರಂತೆ ನಿಷ್ಠುರ ವೈಯಾಕರಣಿ. ಕನ್ನಡ ಪದಕ್ಕೆ ಸ್ವಲ್ಪ ಅಪಚಾರವಾದರೂ ಆರ್ಭಟಮಾಡುವಂಥವರು. ಯಾರ ಮನಸ್ಸನ್ನಾಗಲೀ ನೋಯಿಸಲಾರದ ಈ ಜೀವ ಶಾಲೆಯ ಸೇವೆಯಲ್ಲಿ ಸೋತು ಚಿಣ್ಣವಾಗಿದೆ.

ಇಷ್ಟೆಲ್ಲಾ ಮಹಾನುಭಾವರನ್ನು ಏಕಕಾಲದಲ್ಲಿ ಏಕಸ್ಥಳದಲ್ಲಿ ನಾನು ಸಂಧಿಸಿದ್ದು ಬದುಕಿನ ಒಂದು ಯೋಗಾಯೋಗ. ಇವರೆಲ್ಲ ಕ್ರೈಸ್ತ ಶಾಲೆಯಲ್ಲೇ ಏಕೆ ಜಮೆಯಾದರು? ದುಡಿಯುವುದು ತ್ಯಾಗ ಮಾಡುವುದು ಇದು ಸಕಲ ಧರ್ಮಗಳಂತೆ ಕ್ರಿಸ್ತಧರ್ಮವೂ ಕಲಿಸುವ ಒಂದು ಪಾಠವಷ್ಟೆ. ಹಿ ದ್ಯಾಟ್ ಲೂಸಸ್ ಹಿಸ್ ಲೈಫ್

ಫಲ್ ಫ್ರೆಂಡ್ ಇಟ್. ನನ್ನ ಜೀವನ ಯಾತ್ರೆಯಲ್ಲಿ ಈ ಮಹನೀಯರಂತೆ ತಮ್ಮ ಸುತ್ತಣ ಒಂದು ಮಹತ್ತಿಗಾಗಿ, 'ಸತ್'ಗಾಗಿ, ಜೀವ ತೇದವರನ್ನು ನಾ ಕಾಣೆ. ಕ್ರೈಸ್ತ ವಾಕ್ಯ ಇವರುಗಳ ಜೀವನದಲ್ಲಿ ಮೂರ್ತೀಭವಿಸಿತ್ತು ಎನ್ನ ಬಹುದೆ? ಇಂಥ, ಇವರೆಲ್ಲ ಇದ್ದಂಥ ಕಾಲದಲ್ಲಿ ಕ್ರೈಸ್ತಶಾಲೆಯಲ್ಲಿ ನಾನು ಕೆಲಸ ಮಾಡಿದ್ದೇನೆ. ಇದು ನನಗೊಂದು ಹೆಮ್ಮೆ.

ಕ್ರಿಶ್ಚನ್ ಹೈಸ್ಕೂಲಲ್ಲಿ ಕಲಿಸುತ್ತಿದ್ದಾಗ ನಾನು ನನ್ನ ಕನ್ನಡ ಜಾಣದ ಭಂಡವಾಳ ಓಡಿದುಕೊಂಡೇ ಸಾಹಿತ್ಯ ಪಾಠಗಳನ್ನು ಕೊಡಬೇಕಾಯಿತು. ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯದಲ್ಲಿ ಆಸಕ್ತ ರಾಗಿ 'ಕಲಾವೃಂದ' ಎಂಬೊಂದು ಚಿಕ್ಕ ಸಂಸ್ಥೆ ಕಟ್ಟಿಕೊಂಡಿದ್ದರು. ರಥಬೀದಿಯ ಚಂದ್ರೇಶ್ವರದೇಗುಲದ ಮಾಳಿಗೆಯಲ್ಲಿ 'ಜಾಣ' ತರಗತಿಗಳನ್ನೂ 'ಕಾವ' ತರಗತಿಗಳನ್ನು ನಾನು ನಡೆಸಿಕೊಟ್ಟದ್ದು ಜ್ಞಾಪಕಕ್ಕೆ ಬರುತ್ತದೆ. 'ಕಾವ'ಕ್ಕೆ ಮಧ್ಯಮ ವ್ಯಾಕರಣ, 'ಜಾಣ'ಕ್ಕೆ ಸಂಬಿಯಣ್ಣನ ರಗಳೆ, ಹರಿಶ್ಚಂದ್ರ ಕಾವ್ಯ ಪಾಠ ಮಾಡಿದೆ. ನನ್ನ ಪಾಠ ಕೇಳಲು ಬಂದ ವಿದ್ಯಾರ್ಥಿಗಳಲ್ಲಿ ಯುಗಪುರುಷ ಸಂಪಾದಕ ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರು, ಸತ್ಯಕಾಮರೆಂದು ಹೆಸರು ಮಾಡಿದ ಪದ್ಮನಾಭಾಚಾರ್ಯರು ಇದ್ದರೆಂದು ನೆನಪು. ಪ್ರತಿದಿನವೂ ಶಾಲೆ ಬಿಟ್ಟ ಮೇಲೆ ಒಂದೆರಡು ತಾಸು ಚಂದ್ರೇಶ್ವರದಲ್ಲಿ ಜಾಣ ವರ್ಗ ಮುಗಿಸಿ ಮನೆಗೆ ಮರುಪಯಣ. ಜತೆಗೆ ಅಧ್ಯಾಪಕರಾಗಿ ಪಂಡಿತ ವೆಂಕಟರಾಮಾಚಾರ್ಯರು 'ಉಮರನ ಒಸಗೆ' ಕಲಿಸುತ್ತಿದ್ದರು. ಅದರ ಒಂದೊಂದು ಚರಣಕ್ಕೂ ಭಗವದ್ಗೀತೆಯ ಶ್ಲೋಕಗಳನ್ನ ಅದು ಹೇಗೆ ಎಳೆದು ತಂದು ಸಮೀಕರಿಸುತ್ತಿದ್ದರೋ ನಾನರಿಯೆ. ಅಂತೂ ಉಮರನ ಒಸಗೆಯ ಮೇಲೆ ಹೊಸದೊಂದು ವೇದಾಂತಿಕ ಬೆಳಕು ಬೀರುವ ಕೆಲಸ ಅವರದು. ಅಂಬಲ್ಪಾಡಿ ಸುಬ್ರಾಯಾಚಾರ್ಯರು ಇನ್ನೊಬ್ಬ ಅಧ್ಯಾಪಕ.

ಮಂಗಳೂರಿಗೆ ಹೋಗುವವರೆಗೆ ಅಂದರೆ ಎಸ್ ಎಸ್ ಎಲ್ ಸಿ ಪಾಸಾಗುವ ತನಕ ನಾನು ಯಾವ ದಿನ ಪತ್ರಿಕೆಯನ್ನೂ ಓದಿದವನಲ್ಲ – ಕನ್ನಡದ ವಾರಪತ್ರಿಕೆ, ಮಾಸಪತ್ರಿಕೆಗಳನ್ನಷ್ಟೇ ಓದಿ ಆನಂದಿಸುವವನು. ಉಡುಪಿ ಪತ್ರಿಕೋದ್ಯಮಕ್ಕೆ ಒಂದು ವಿಶಿಷ್ಟ ಮೂಲಸ್ಥಾನವಾದ್ದರಿಂದ ಇಲ್ಲಿ 40ನೆಯ ದಶಕದಲ್ಲೂ ಪಣಿಯಾಡಿ ಯವರ 'ಅಂತರಂಗ', ಆರ್ ಎಸ್ ಶೆಣೈ ಅವರ 'ವರ್ತಕಧುರೀಣ', ಬನ್ನಂಜೆಯವರ 'ನವಶಕ್ತಿ', 'ಸುದರ್ಶನ', 'ಯುಗಪುರುಷ' ನಡೆಯುತ್ತಿದ್ದವು. ಬನ್ನಂಜೆಯವರದು ಒಳ್ಳೆಯ ಗುಣಮಟ್ಟದ ಪತ್ರಿಕೆಗಳು. ಆದರೆ ಆಯುರ್ಬಲ ಕಡಿಮೆ. ನಾಲ್ಕಾರು ಸಂಚಿಕೆಗೇ ಖತಮ್. ಒಂದಾಣೆಯ ಅಂತರಂಗ ಎಂಟು ಹತ್ತು ವರ್ಷ ವಾರಪತ್ರಿಕೆಯಾಗಿ ಇಡೀ ಕರ್ನಾಟಕದಲ್ಲಿ ಪ್ರಸಾರಗಳಿಸಿತ್ತು. 'ವರ್ತಕಧುರೀಣ' ಸ್ಥಾನೀಯ ಜಾಹೀರಾತುಗಳ ಮೂಲಕ ಬದುಕ ಬೇಕಾಗಿತ್ತು. 'ನವಯುಗ' ಸಾಪ್ತಾಹಿಕ ಹೆಚ್ಚು ಬಾಳಿಕೆ ಬಂತು.

೬ ಗಾಂಧೀಜಿಗೆ – ಹತ್ತೀಮೂರು

ಅಧ್ಯಾಪಕ ವೃತ್ತಿಯ ಮೂರೂವರೆ ವರ್ಷಗಳಲ್ಲಿ (1942 - 46) ನಾನು ಹಿಂದಿಯ ರಾಷ್ಟ್ರಭಾಷಾ ವಿಶಾರದ ಪರೀಕ್ಷೆ ಪಾಸು ಮಾಡಿದೆ, ಸಂಸ್ಕೃತ ಮತ್ತು ಕನ್ನಡ 'ವಿದ್ವಾನ್' ಮುಗಿಸಿದೆ. ಅಲ್ಲದೆ ಇತಿಹಾಸ ವಿಷಯ ದಲ್ಲಿ ಇಂಟರ್ ಪಾಸ್ ಮಾಡಿ ಕಾಲೇಜು ಕಟ್ಟೆ ಹತ್ತಲು ಅರ್ಹತೆ ಗಳಿಸಿದೆ. ವಿಶಾರದ, ವಿದ್ವಾನ್‌ಗಳಿಗೆ ಕಷ್ಟವಿರಲಿಲ್ಲ, ಬೇಕೆಂದಾಗ ಪರೀಕ್ಷೆ ಕಟ್ಟಬಹುದಾಗಿತ್ತು; ಇಂಟರ್‌ಗೆ ಕಟ್ಟಲು 3 ವರ್ಷ ಅಧ್ಯಾಪಕನಾದ ಬಳಿಕವೇ ಅರ್ಹತೆ. ಹಾಗಾಗಿ ಜೂನಿಗೆ 3 ವರ್ಷ ಕಾಲಾವಧಿ ಕಳೆದ ತಕ್ಷಣ ಬರುವಂಥ ಸೆಪ್ಟೆಂಬರ್ (1945) ಪರೀಕ್ಷೆಗೆ ಕಟ್ಟಿದೆ. ಪ್ರಥಮ ವರ್ಗದಲ್ಲಿ ಮಾತ್ರವೇ ಅಲ್ಲ, ವಿಶ್ವವಿದ್ಯಾನಿಲಯಕ್ಕೆ ಎರಡನೇ ರ್ಯಾಂಕನ್ನೂ ಪಡೆದು ನನ್ನ ಪರಾಕ್ರಮವನ್ನ ಮೆರೆದೆ. ವಾರ್ಸಿಟಿಗೆ ಕೋಟೆಯ ದುರ್ಭೇದ್ಯ ಗೋಡೆ ಕಟ್ಟಿರುತ್ತಿದ್ದ ಆ ದಿವಸಗಳೆಲ್ಲಿ? ಈಗಿನ ಬಟ್ಟಬಯಲಿನ (ಓಪನ್) ವಾರ್ಸಿಟಿಗಳ ಬದಲಾದ ಪರಿಸ್ಥಿತಿ ಎಲ್ಲಿ? ಈಗ ಯಾರೂ ಇಷ್ಟ ಬಂದಾಗ ಬಾಗಿಲಿಂದ ಮಾತ್ರವೇ ಅಲ್ಲ ಹಂಚಿನ ಇರುಕಿಂದ ಬೇಕಾದರೂ ವಾರ್ಸಿಟಿಯನ್ನ ಪ್ರವೇಶಿಸಬಹುದು. ಆಗ ಇದು 3 ವರ್ಷ ವೃತ್ತಿಯಲ್ಲಿ ನಡೆದ ಅಧ್ಯಾಪಕ ವರ್ಗಕ್ಕೆ ಮಾತ್ರ ಮೀಸಲಾಗಿತ್ತು. ಅಂಥಲ್ಲಿ ಸ್ವಂತ ಅಧ್ಯಯನದಲ್ಲಿಯೇ ಸಾಧನೆ ಮಾಡಿದೆನೆಂಬ ಸಂತೋಷ ನನಗಿರುವುದಕ್ಕಿಂತ ಹೆಚ್ಚಾಗಿ ನನ್ನ ಮಾತಾಪಿತರಿಗೆ ಬಂಧು ಮಿತ್ರರಿಗೆ ಆಯಿತು. ಇನ್ನೊಮ್ಮೆ 'ಕಾಲೇಜಿಗೆ ಹೋಗುತ್ತೇನೆ' ಎಂದು ನಾನು ಬಹಿರಂಗ ಘೋಷಣೆ ಮಾಡಿದಾಗ ತಂದೆ ಕೂಡಲೆ ಸಮ್ಮತಿಸಿದರು. ಚಿಕ್ಕಪ್ಪ ಎಂದಿನಂತೆ 'ದೇವರು ಕೊಡುವವರೆಗೆ' ಎಂಬ ಶರ್ತು ಹಾಕಿ ಆರ್ಥಿಕ ಬೆಂಬಲ ಕೊಡುವ ಭರವಸೆ ಕೊಟ್ಟರು. ಮದ್ರಾಸಿಗೆ ಹೋಗಿ ಕ್ರಿಶ್ಚನ್ ಕಾಲೇಜನ್ನು ನೋಡಿ ಅರ್ಜಿ ಸಲ್ಲಿಸುವ ಇರಾದೆಯಿಂದ 1946ರ ಜನವರಿ ತಿಂಗಳಲ್ಲಿ ತಾಂಬರಮ್‌ಗೆ ಪಯಣ ಬೆಳೆಸಿದೆ. ಅಂದರೆ ನನ್ನ ಮಿತ್ರ ಪ್ರಭಾಕರ ಕ್ರಿಶ್ಚನ್‌ನಲ್ಲಿ ಬಿ. ಎಸ್ಸಿ ಮಾಡುವಾಗ ಅದರ ಬಣ್ಣನೆ ಮಾಡುತ್ತಿದ್ದ. ನನಗೂ ಅದೇ ಕಾಲೇಜು ಎಂದು ಎಂದೋ ನಿರ್ಧರಿಸಿದ ಪ್ರಕಾರ

ಒಂದು ಸಲನೋಡಿ ಬರೋಣ ಎಂದುಕೊಂಡು ಹೊರಟೆ. ಅದಕ್ಕನುಕೂಲವಾದ ಸಂದರ್ಭವೂ ಒದಗಿ ಬಂತು – ಗಾಂಧೀಜಿಯ ನೆಪದಲ್ಲಿ.

1946 ಜನವರಿಯಲ್ಲಿ ಗಾಂಧೀಜಿ ಮದರಾಸಿಗೆ ಬರುವವರಿದ್ದರು. ಹಿಂದೀ ಪ್ರಚಾರ ಸಭೆಯಲ್ಲಿ ಆ ವರ್ಷದ ಘಟಿಕೋತ್ಸವ, ಹಾಗೂ ಭಾರತೀಯ ಭಾಷೆಗಳ ಸಮನ್ವಯ ಮುಂತಾದ ಸಭೆಗಳಲ್ಲಿ ಮಾತನಾಡುವವರಿದ್ದರು. ಹಿಂದೀ ಪ್ರಚಾರಕರಿಗೆಂದೇ ಒಂದು ಪ್ರತ್ಯೇಕ ಸಭಾವಕಾಶ ನೀಡಲಾಗಿತ್ತು. ನಾನು ಹಿಂದೀ ಪ್ರಚಾರಕನಾದ – ಸಭೆಯ ಮೆಟ್ಟಿಗೆ. ಅದರ ಕಥೆ ಹೀಗೆ. ಗಾಂಧೀಜಿಯವರ ಸಲುವಾಗಿ ಹಿಂದೀ ಪ್ರಚಾರ ಸಭೆ ಒಂದು ಚಿಕ್ಕ ಹಿಂದೀ ಚಳವಳಿ ತೊಡಗಿತು 'ಸಹಜ ಹಿಂದೀ' ಎಂಬ ಒಂದು 32 ಪುಟದ ಪತ್ರವನ್ನು ಹೊರಡಿಸಿತು. ಇದು ಆಯಾ ಭಾಷೆಯ ಲಿಪಿಯಲ್ಲೇ ಹಿಂದಿಯನ್ನು ಬರೆದು, ಪ್ರಶ್ನೋತ್ತರಗಳ ಮೂಲಕ ಹಿಂದೀ ಸಂಭಾಷಣೆ ಕಲಿಸುವ ಒಂದು ಪ್ರಯೋಗ. ಯಾರು 'ಸಹಜ ಹಿಂದೀ'ಗೆ 20 ವಿದ್ಯಾರ್ಥಿಗಳನ್ನ ಸಿದ್ಧಗೊಳಿಸುತ್ತಾನೋ ಆತ ಹಿಂದೀ ಪ್ರಚಾರಕನಾಗಿ ಗಾಂಧೀಜಿಯನ್ನ ನೋಡಲು ಬರಬಹುದು ಎಂಬ ಉದ್ದೇಶ. ಸರಿ ನಾನು ಕ್ರಿಶ್ಚನ್ ಶಾಲೆಯ ಮಕ್ಕಳನ್ನ ಕೂಡಿಸಿದೆ. ಒಂದು ತಿಂಗಳ ಕಾಲ ರಜಾದಿನಗಳಲ್ಲೂ ಪಾಠ ಮಾಡಿ ಪುಸ್ತಕ ಮುಗಿಸಿ ಶರತ್ತನ್ನು ಪಾಲಿಸಿ ಮದರಾಸಿಗೆ ಹೋಗುವ ಅರ್ಹತೆ ಪಡೆದುಕೊಂಡೆ. ಮದರಾಸಿನಲ್ಲಿ ಅರಿವವರೇ ಆಗಿ ಲೊಯೊಲಾ ಕಾಲೇಜಿನಲ್ಲಿ ಗಣಿತ ಆನರ್ಸ್ ಮಾಡುತ್ತಿದ್ದ ಅಂಬಲ್ಪಾಡಿ ಕೃಷ್ಣರಾಯರ (ಆಮೇಲೆ ಸಿಂಡಿಕೇಟ್ ಬ್ಯಾಂಕ್ ಅಧ್ಯಕ್ಷರಾದವರು) ಕೊಠಡಿಯಲ್ಲಿ ವಾಸ ಮಾಡಿ 2 - 3 ದಿನ ಗಾಂಧೀಜಿ ಇರುವಲ್ಲೆಲ್ಲ ಹಾಜರಿ ಹಾಕಿದೆ. ಘಟಿಕೋತ್ಸವದಲ್ಲಿ ತೀರ ಹಿಂದುಗಡೆ ಕೂತಿದ್ದೆ. ಪ್ರಚಾರಕ ಸಭೆಯಲ್ಲಿ ಮಾತ್ರ ಮುಂದಿನ ಸ್ಥಾನಗಳಿಸಿಕೊಂಡೆ. ಗಾಂಧೀಜಿಗೆ ಹತ್ತೆಮಾರು. ಕವಿ ಸುಮಿತ್ರಾನಂದನ ಪಂತರು ಒಂದು ಹಿಂದಿಯಲ್ಲಿ ಸುಶ್ರಾವ್ಯ ಪ್ರಾರ್ಥನೆ ಹಾಡಿದ ಮೇಲೆ ಗಾಂಧೀಜಿ ಆಗಮನ ವಾಯಿತು – ಕ್ಲಪ್ತಕಾಲಕ್ಕೆ. ಪ್ರಚಾರಕರು ತಮ್ಮ ಶೀಲನಡತೆಗಳ ಬಗ್ಗೆ ಎಚ್ಚರಿರಬೇಕು ಎಂದು ಹತ್ತು ಮಿನಿಟು ಉಪದೇಶ ಮಾಡಿದರು. ಇನ್ನೊಂದು ದಿನ ದಕ್ಷಿಣ ಭಾಷೆಗಳ ಗೋಷ್ಠಿಗೆ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕನ್ನಡ ಪರವಾಗಿ ಮಾತಾಡಲು ಬಂದಿದ್ದರು. ಪ್ರತಿ ಸಂಜೆ ಮೈದಾನಿನಲ್ಲಿ ನಡೆಯುತ್ತಿದ್ದ ಕಿಕ್ಕಿರಿದ ರಾಮನಾಮ್ ಸಾರ್ವಜನಿಕ ಸಭೆಗೂ ಹೊಕ್ಕು ಬಂದೆ. ಸಾಮೂಹಿಕ ರಾಮನಾಮ್‌ನಿಂದ ಸಭೆಗಳು ಆರಂಭವಾಗುತ್ತಿದ್ದವು. ಮದ್ರಾಸ್ ತುಂಬಾ ಖಾದೀಧಾರಿ ಕಾಂಗ್ರೆಸಿಗರ ಮೆರವಣಿಗೆ. ಹೋಟಲೂ ಬಸ್ಸು ಟ್ರಾವೆಲ್ ಎಲ್ಲ ನೋಡಿದರೂ ಅವರೇ. ಕ್ರಿಪ್ಸಮಿಶನ್ ಗಾಂಧೀಜಿಯನ್ನ ನೋಡಿದ್ದು ಮದ್ರಾಸಿನಲ್ಲಿ. ಒಟ್ಟಿನಲ್ಲಿ ಭಾರೀ ಸಂಭ್ರಮದ ದಿನಗಳವು. ಸಭೆ ಸಮಾರಂಭಗಳ ನಡುವೆ ಕ್ರಿಶ್ಚನ್ ಕಾಲೇಜಿಗೆ ಹೋಗುವ ಕೆಲಸವನ್ನು ಕೃಷ್ಣರಾಯರ ಜತೆಗೆ ಮಾಡಿದೆ. ಮಾಂಬಳಮಿನಿಂದ ತಾಂಬರಮ್‌ಗೆ ಪಯಣಿಸಿ ಕಾಲೇಜು ಗೇಟಿನ ಬಳಿ ಹೋಗುವಾಗ ಅಲ್ಲಿ ನಮ್ಮನ್ನು ಹುಡು ಗರು ತಡೆ ಹಿಡಿದರು. ಐ.ಎನ್.ಎ. ದಂಗೆ ಸಂಬಂಧ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು. ನಮ್ಮ ಕೆಲಸ ಪ್ರಿನ್ಸಿಪಾಲರ ಖಾಸಗೀ ಭೇಟಿ ಎಂದು ತಿಳಿದ ಮೇಲೆ ಒಳಗೆ ಬಿಟ್ಟರು. ತಪೋವನದಂತೆ ಕಾಣುತ್ತಿದ್ದ ಮರಗಳ ಸಾಲುಗಳ ನಡುವೆ ಪ್ರಿನ್ಸಿಪಾಲರ ಕೊಠಡಿಯ ಮೆಟ್ಟಿಲೇರುವಾಗ ನನಗೆ ರೋಮಾಂಚನ. 6 ವರ್ಷ ತಡವಾದರೂ ಕಾಲೇಜು ಮೆಟ್ಟಲು ಹತ್ತುತ್ತಿದ್ದೆನಲ್ಲಾ ಎಂದು. ಹಂಗಾಮಿ ಪ್ರಿನ್ಸಿಪಲ್ ಪ್ಲಾಟನ್ ನನ್ನ ಪರೀಕ್ಷಾಂಕಗಳನ್ನ ಪರೀಕ್ಷಿಸಿ 'ಅಡ್ಡಿ ಇಲ್ಲ ಆಂಗ್ಲ ಸಾಹಿತ್ಯದ ಆನರ್ಸ್‌ನಲ್ಲಿ ಸೀಟು ಕೊಡಲು ಅಡ್ಡಿ ಇಲ್ಲ' ಎಂದು ಆಶ್ವಾಸನೆ ಕೊಟ್ಟರು.

ನನ್ನ ಸಾಹಿತ್ಯ ಜೀವನಕ್ಕೆ ನೆರವು ನಿಂತ 'ವಿದ್ವಾನ್' ಪರೀಕ್ಷೆಯ ಬಗ್ಗೆ ಎರಡು ಮಾತು. ಇಂಥ ಪರೀಕ್ಷೆಗಳನ್ನು ಮದ್ರಾಸ್ ವಿಶ್ವವಿದ್ಯಾನಿಲಯವೇ ನಡೆಸುತ್ತಿತ್ತು. ಓರಿಯಂಟಲ್ ಟೈಟ್ಲ್ಸ್ ಎಂದು ಕರೆದು ಅವುಗಳಿಗೆ ಒಂದು ವಿಶಿಷ್ಟ ಸ್ಥಾನಮಾನ ಕಲ್ಪಿಸಿಕೊಟ್ಟಿತ್ತು. ಸರ್ಕಾರವು ಕೂಡ ವಿದ್ವಾನ್ ಉಪಾಧಿಯುಳ್ಳವರು ಹೈಸ್ಕೂಲಿನಲ್ಲಿ ಪಾಠ ಹೇಳಲು ಅರ್ಹರು ಎಂದು ನಿಯಮಿಸಿತ್ತು. ಪರೀಕ್ಷೆ ಎರಡು ಹಂತದಲ್ಲಿ ಎರಡು ವರ್ಷ ನಡೆಯುತ್ತಿತ್ತು. ವಿದ್ವಾನ್ ಅಂತಿಮ ಪರೀಕ್ಷೆಯನ್ನ ನಾನು 1946ರ ಏಪ್ರಿಲ್‌ನಲ್ಲಿ ಕೊಟ್ಟು ಪ್ರಥಮ ರ್‍ಯಾಂಕ್ ಪಡೆದು ಪಾಸಾಗಿ ವಾರ್ಸಿಟಿ ಸ್ವರ್ಣ ಪದಕಕ್ಕೆ ಅರ್ಹತೆಗಳಿಸಿಕೊಂಡೆ. 'ವಿದ್ವಾನ್' ಹಳೆ ಮಾದರಿಯ ಪರೀಕ್ಷೆಯಾದರೂ ಕೂಡ ಪ್ರಾಚ್ಯ ಪದ್ಧತಿಯ ಅಧ್ಯಯನ ಮಾರ್ಗವನ್ನವಲಂಬಿಸಿದ್ದರಿಂದ ಪರೀಕ್ಷೆಗಾಗಿ ಇಡಿ ಇಡಿಯಾಗಿ ಪ್ರತಿ ಕಾವ್ಯ, ನಾಟಕ, ಲಕ್ಷಣಮುಂತಾದ ಗ್ರಂಥಗಳನ್ನೋದಿ ಅರಗಿಸಿಕೊಂಡವನು ಪಂಡಿತನಾಗದಿರಲು ಶಕ್ಯವಿರಲಿಲ್ಲ. ಇಂಥ ಪಂಡಿತರು ಅರೆಬೆಂದ ಪದವೀಧರಗಿಂತ ಕಮ್ಮಿ ಸಂಬಳ ಪಡೆಯುತ್ತಿದ್ದ ದಿನಗಳಲ್ಲಿ ಅವರ ಕೆಲಸವನ್ನು ಅಪಮೌಲ್ಯ ಮಾಡುವ ಸಂದರ್ಭವಿತ್ತು. ನಿಜಕ್ಕೂ ಒಂದು ಭಾಷೆಯಲ್ಲಿ ಪ್ರಭುತ್ವ ಪಡೆಯಬೇಕಾದರೆ ಪ್ರಾಚೀನ ಸಾಹಿತ್ಯದ ಅಧ್ಯಯನವನ್ನು ಪರಂಪರೆಯ ಹಾದಿಯಲ್ಲಿ ಕಲಿಯುವುದು ಇಂದಿಗೂ ಶ್ರೇಯಸ್ಕರವೆಂದು ನಾನು ತಿಳಿಯು ತ್ತೇನೆ. ನನ್ನ ಸ್ವಾನುಭವವನ್ನು ಇದಕ್ಕೋಸ್ಕರ ಪಣ ಹಚ್ಚಿ ಹೇಳಬಲ್ಲೆ.

ವಿದ್ವಾನ್ ಪರೀಕ್ಷೆಯಲ್ಲಿ ವಾರ್ಸಿಟಿ ಇತಿಹಾಸದಲ್ಲೇ ದಾಖಲೆ ಅಂಕಗಳನ್ನು ಪಡೆದಿದ್ದೆನಂತೆ. ವ್ಯಾಕರಣ ಪತ್ರಿಕೆಯಲ್ಲಿ ನೂರಕ್ಕೆ ತೊಂಭತ್ತಮೂರು. ಆ ಪತ್ರಿಕೆ ತಿದ್ದಿದವರು ಶ್ರೀ ಮುಳಿಯ ತಿಮ್ಮಪ್ಪಯ್ಯನವರೆಂದು

ಆಮೇಲೆ ತಿಳಿಯಿತು. ಮದ್ರಾಸಿನಲ್ಲಿ ಮೂರು ವರ್ಷ ಪೂ., ಮರಿಯಪ್ಪ ಭಟ್ಟರ ಸರಿಯಾದ ಪರಿಚಯವಾದ ಬಳಿಕ ಅವರು ನನ್ನ ಬಗ್ಗೆ ಪರೀಕ್ಷಕರು ಹೇಳಿದ ಒಳ್ಳೆಯ ಮಾತುಗಳನ್ನು ಉದ್ಧರಿಸಿದರು. 1946ರಲ್ಲಿ ರೋಗಶಯ್ಯೆಯಲ್ಲಿ ತಿಮ್ಮಪ್ಪಯ್ಯನವರು ಮಲಗಿದ್ದಾಗ ಮಂಗಳೂರಿನ ಅವರ ಮನೆಗೆ ಹೋಗಿದ್ದೆ. ಅವರು ಹೊರಡುವಾಗ ನನ್ನ ಕೈಸೆಳೆದು 'ಹರಿದಾಸ ಭಟ್ಟರೇ ಕನ್ನಡವನ್ನು ಕೈಬಿಡಬೇಡಿ. ಅದು ನಿಮಗೆ ಒಲಿದಿದೆ' ಎಂದು ಒಲವಿನ ಮಾತನಾಡಿ ಕಳಿಸಿಕೊಟ್ಟದ್ದೇಕೆಂದು ಆಗ ತಿಳಿಯಿತು. ಅವರ ಆಶೀರ್ವಾದದಂತೆಯೆ ಆಯಿತು. ಕನ್ನಡವನ್ನು ನಾನು'ಬಿಡಲಿಲ್ಲ' ಏಕೆಂದರೆ ಅದು ನನ್ನನ್ನು ಬಿಡಲಿಲ್ಲವೆಂದು ಅಭಿಮಾನದಿಂದ ಹೇಳಬಲ್ಲೆ. ಪರೀಕ್ಷೆಗಳ ಸಂದರ್ಭದಲ್ಲಿ ನನ್ನ ಸ್ಮರಣಶಕ್ತಿಯ ಬಗ್ಗೆ, ನನ್ನದೇ ಆದ ಈ ವಿಶಿಷ್ಟ ಶಕ್ತಿಯ ಬಗ್ಗೆ ಎರಡು ಮಾತು ಹೇಳಬಹುದು. ಬೇಗನೆ ಉಕ್ಕಿ ಅದಕ್ಕಿಂತ ಬೇಗನೆ ಇಂಗುವ ಸ್ವಭಾವದ ಸ್ಮರಣ ಶಕ್ತಿ ನನ್ನದು. ಪರೀಕ್ಷೆ ಎಂಬುದು ಅದಕ್ಕೊಂದು ನಿಶ್ಚಿತ ಗಡುವು. ಅಲ್ಲಿಯವರೆಗೆ ಓದಿದ್ದು ಒಂದಕ್ಷರ ಮಾಸದೆ ಸ್ಮೃತಿಪಟಲದಲ್ಲಿ ಉಳಿಯುತ್ತದೆ. ಉದಾ: ಶಬ್ದಮಣಿ ದರ್ಪಣವೋ. ಶಬ್ದಾನುಶಾಸನವೋ ತೆಗೆದುಕೊಳ್ಳಿ ಅದೆಷ್ಟೇ ಪುಟ ಇರಲಿ ಪ್ರತಿ ಪುಟವೂ ಉತ್ತರ ಬರೆಯುವ ವೇಳೆ ಕಂಪ್ಯೂಟರ್ ಸ್ಕ್ರೀನಿನಲ್ಲಿ ನಿಂತಂತೆ ಕಣ್ಮುಂದೆ ನಿಲ್ಲುತ್ತದೆ – ಶ್ಲೋಕ, ವೃತ್ತಿ, ಅನುವೃತ್ತಿ, ಟೀಕೆ ಸಹಿತವಾಗಿ. ಕಾಳಿದಾಸನ ನಾಟಕ ತೆಗೆದುಕೊಳ್ಳಿ ಪದ್ಯಮಾತ್ರವೇ ಅಲ್ಲ ಪುಟದಲ್ಲಿರುವ ಸಂವಾದ ಕೂಡ ದೃಶ್ಯರೂಪದಲ್ಲಿ ಬರುತ್ತದೆ. ಪರೀಕ್ಷೆ ಬರೆದ ಮರುಕ್ಷಣ ಯಾರೋ ಶಾಪಕೊಟ್ಟಂತೆ ಮಾಯವಾಗಿ ಬಿಡುತ್ತದೆ. ಹೋಗಲಿ ಬಿಡಿ. ಇಲ್ಲವಾದರೆ ಇದೇ ಒಂದು ಹೆಣ ಭಾರವಾಗಿ ಬಿಡುತ್ತಿತ್ತಲ್ಲವೆ?

೭ ಅರ್ಥಶಾಸ್ತ್ರಕ್ಕೆ ನೆಗೆದೆ

1946 ಜೂನ್ – ನಾನು ತಾಂಬರಮ್‌ನಲ್ಲಿ ಮದರಾಸು ಕ್ರಿಶ್ಚನ್ ಕಾಲೇಜಿಗೆ ಸೇರಿದ ವರ್ಷ. ಅದಕ್ಕೆ ಹಿಂದಿನ ಆರೂವರ್ಷ ಸಂತತವಾಗಿ ಸಾಹಿತ್ಯದಲ್ಲಿ ಹಿಂದೀ ಕನ್ನಡ ಸಂಸ್ಕೃತವೆಂಬ ಭೇದವಿಲ್ಲದೆ ನನ್ನ ಪರೀಕ್ಷಾ ಕಾಯಕವನ್ನು ನಡೆಸಿಕೊಂಡು ಬಂದಿದ್ದೆನಷ್ಟೆ. ಆದ್ದರಿಂದ ಇಂಗ್ಲಿಷ್ ಸಾಹಿತ್ಯದ ಆನರ್ಸ್ ನನ್ನ ಪ್ರಥಮ ಆಯ್ಕೆಯಾಗಿತ್ತು. ಅದೇಕೋ ಆಂಧ್ರ ವಿಶ್ವವಿದ್ಯಾನಿಲಯದ ಬಿ. ಕಾಮ್. ಆನರ್ಸ್‌ಗೂ ಅರ್ಜಿ ಸಲ್ಲಿಸಿದ್ದೆ. ತಾಂಬರಂನಲ್ಲಿ ಸೀಟು ದೊರೆತ ಮೇಲೆ ವಾಲ್ಟೇರಿನಿಂದಲೂ ಪ್ರವೇಶದ ಅಪ್ಪಣೆ ಬಂತು. ಅಷ್ಟರಲ್ಲಿ ನಾನು ಕ್ರಿಶ್ಚನ್ ಕಾಲೇಜಿನ ಸುಖಸೌಕರ್ಯಗಳಿಗೆ ಮನಸೋತವನಾಗಿ ಮದ್ರಾಸಿಗಿಂತಲೂ ಮನೆಗೆ ದೂರವಿರುವ ವಾಲ್ಟೇರಿನ ಯೋಜನೆ ಬಿಟ್ಟುಬಿಟ್ಟೆ. ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಶೇಕಡಾ 60 ಅಂಕಕ್ಕಿಂತ ಹೆಚ್ಚು ಅಂಕಗಳಿಸಿದವರಿಗೆ ಆನರ್ಸ್ ಪದವಿ ಕೊಡುತ್ತಾರೆ. ಮದ್ರಾಸು ಹಾಗಲ್ಲ. ಅದು ಇಂಗ್ಲಿಷ್ ವಿಶ್ವವಿದ್ಯಾನಿಲಯದ ಒಂದು ನಕಲು – 3 ವರ್ಷದ ಈ ಆನರ್ಸ್‌ನಲ್ಲಿ ಒಂದೇ ಸಲಕ್ಕೆ ಪಾಸಾಗಬೇಕೆಂಬ ಕಡ್ಡಾಯ. ಪ್ರಗತಿ ಅತೃಪ್ತಿಕರವಾದರೆ ಆನರ್ಸ್‌ಗೆ ಬದಲು ಬೋಳು ಬಿ.ಎ., ಬಿ.ಎಸ್.ಸಿ. ಡಿಗ್ರಿ – ಅಂದರೆ ಸಾಮಾನ್ಯವಾಗಿ ಎರಡು ವರ್ಷದಲ್ಲಿ ಮುಗಿಸುವಂಥದ್ದನ್ನು ಪರೀಕ್ಷಕರು ಕೃಪೆಯಿಂದ ದಾನ ಮಾಡಬಹುದು. ಆದ್ದರಿಂದ ಪ್ರತಿಭಾವಂತರು ಮಾತ್ರ ಆನರ್ಸ್ ಡಿಗ್ರಿಗೆ ಸೇರುತ್ತಾರೆ. ಕಾಲಕ್ರಮದಲ್ಲಿ ಆನರ್ಸ್ ಡಿಗ್ರಿ ಪಡೆದವನಿಗೆ ಎಂ.ಎ. ಪದವಿಯನ್ನು ತನ್ನಂತೆ ಕೊಡುವುದು ಪದ್ಧತಿ. ರಿಸ್ಕ್ ಬೇಡವೆನ್ನುವವರು ಪ್ರಥಮ ಪದವಿಯ ಅನಂತರ ಆನರ್ಸ್ ಎರಡನೇ ವರ್ಷಕ್ಕೆ ನೋಂದಾಯಿಸಬಹುದು. ಇಬ್ಬರೂ ಒಂದೇ ಪರೀಕ್ಷೆಗೆ ಕೂತರೂ ಅವರಿಗೆ ಆನರ್ಸ್‌ನ ಕಠಿಣ ನಿಯಮ ಅನ್ವಯವಾಗುವುದಿಲ್ಲ.

ತಾಂಬರಮ್ ಮದ್ರಾಸ್ ನಗರದಿಂದ 17 ಮೈಲು ದಕ್ಷಿಣಕ್ಕೆ ಇರುವ ಒಂದು ಹಳ್ಳಿ. ಅಲ್ಲಿಯವರೆಗೆ ವಿದ್ಯುತ್ ಟ್ರೇನು ಓಡಾಡುತ್ತಿತ್ತು. ಮದ್ರಾಸಿನಲ್ಲಿ ಸೆಂಟ್ರಲ್ ಸ್ಟೇಶನಿನಲ್ಲಿ ಮಂಗಳೂರು ಬಂಡಿಯಿಂದ ಇಳಿದು ಸಬರ್ಬನ್ ಟ್ರೈನ್ ಹತ್ತಿ ತಾಂಬರಮ್‌ಗೆ ಬಂದರೆ ನಿಲ್ದಾಣದ ಇದಿರುಗಡೆಗೇ ಕಾಲೇಜಿನ ಗೇಟು. ನಾಲ್ಕು ನೂರು ಐನೂರೆಕರೆ ಪ್ರದೇಶದಲ್ಲಿ ಕಾಲೇಜಿನ ಕಟ್ಟಡಗಳು ಸುವ್ಯವಸ್ಥಿತವಾಗಿ ಬಿಡಿಸಿಕೊಂಡಿವೆ. ಜಾರ್ಜ್ ಟೌನಿನಲ್ಲಿದ್ದ ಹಳೇ ಕಾಲೇಜಿನ ಕಟ್ಟಡವನ್ನು ಮಾರಿ 1937ಕ್ಕೆ ಕಾಲೇಜು ತಾಂಬರಮ್‌ಗೆ ಸ್ಥಳಾಂತರವಾಗಿತ್ತು. ಕಾಲೇಜಿನ ಬೃಹತ್ ಮುಖ್ಯ ಕಟ್ಟಡದಲ್ಲಿ ನಡುವೆ ಆಡಳಿತ ಕಚೇರಿ ಅಕ್ಕಪಕ್ಕದಲ್ಲಿ ಲೈಬ್ರರಿ, ಲೆಕ್ಚರ್ ಕೊಠಡಿಗಳು, ವಿಜ್ಞಾನ ವಿಭಾಗಗಳ ಎರಡು ಮಹಡಿ. ಅನತಿ ದೂರದಲ್ಲಿ ಬಲಭಾಗದಲ್ಲಿ ಎಡಭಾಗದಲ್ಲಿ ವಿದ್ಯಾರ್ಥಿ ವಸತಿಗೃಹಗಳು – ಸೈಂಟ್‌ಥಾಮಸ್ ಹಾಲ್ ಮತ್ತು ಸೆಲಯೂರ್ ಹಾಲ್, ಹಿಂದುಗಡೆ ಬಿಶಪ್ ಹೀಟರ್ ಹಾಲ್. ಹಾಲುಗಳಿಗೆ ಜೋಡಿಸಿ ಎನೆಕ್ಸ್‌ಗಳು (ಕುಸರಿ ಹಾಸ್ಟೆಲು) ಕಾಲೇಜಿನ ಮುಖ್ಯ ಕಟ್ಟಡಕ್ಕೂ ಈ ಹಾಲುಗಳಿಗೂ ನಡುವೆ ಇಕ್ಕೆಲದಲ್ಲಿ ಬೇವಿನ ಮರದ ಸಾಲು ಸಾಲು. ಅಲ್ಲದೆ ನಡುವೆ ನಾನಾತರದ ವೃಕ್ಷಜಾತಿಗಳು. ಕೊಠಡಿಗಳನ್ನು ಜೋಡಿಸಲು ತುಂಬಾ ಅಗಲದ ಕಾರಿಡಾರುಗಳು, ಮುಖ್ಯ ಕಟ್ಟಡದ ಕಾರಿಡಾರು ಎರಡು ಫರ್ಲಾಂಗಿನಷ್ಟು ಆಗುವುದು – ಅಷ್ಟು ದೂರಕ್ಕೂ ಕಟ್ಟಡದ ಹರವು. ಕಾಲೇಜು ಆರಂಭವಾಗುವ ಜೂನ್ ತಿಂಗಳ ಕೊನೇವಾರದಲ್ಲಿ

ತಾಂಬರಂನ ಹವೆ ಬಿಸಿಬಿಸಿಯಾಗಿದ್ದರೂ ಹೊಸವರುಷದ ಹೊಸ ಹರುಷದಲ್ಲಿ ಎಲ್ಲವೂ ಮರವೆ. ಪ್ರಥಮ ಸಲಕ್ಕೆ ಸೇರುವ ವಿದ್ಯಾರ್ಥಿಗೆ ಎಲ್ಲವೂ ಮರವೆ. ಪ್ರಥಮ ಸಲಕ್ಕೆ ಸೇರುವ ವಿದ್ಯಾರ್ಥಿಗೆ ಎಲ್ಲವೂ ಬೆಕ್ಕಸಬೆರಗು – ಮುಖ್ಯವಾಗಿ ಅಲ್ಲಿನ ಸಂಘಟನೆ, ಶಿಸ್ತು, ನಿಸರ್ಗಧ್ಯಾನ, ಒಟ್ಟು ಆವರಣ.

ಕ್ರಿಶ್ಚನ್ ಕಾಲೇಜಿನಲ್ಲಿ ವಿದ್ಯಾರ್ಥಿ ಜೀವನದ ಸುಖದುಃಖಗಳಿಗೆ ಆಶ್ರಯ ಸ್ಥಾನವೆಂದರೆ ಅಲ್ಲಿನ 'ಹಾಲು'ಗಳು (ವಿದ್ಯಾರ್ಥಿ ವಸತಿಗೃಹ). ಒಬ್ಬನಿಗೆ ಒಂದು ಕೊಠಡಿ. 16 ಕೊಠಡಿಗಳಿಗೆ ಸೇರಬೇಕೆಂಬಷ್ಟು ಶೌಚಗೃಹಗಳು. 150 ವಿದ್ಯಾರ್ಥಿಗಳಿಗೆ ಒಂದು ಹಾಲ್. ಹಾಲಿನ ನಡುವೆ ವಿಶಾಲವಾದ ಸ್ಥಳಾವಕಾಶ. ಒಂದು ಪಕ್ಕದಲ್ಲಿ ಭೋಜನಗೃಹಗಳು. ನಾನು ಸೇರಿದಾಗ ಅಲ್ಲಿ ನಾಲ್ಕು ತರದ ವ್ಯವಸ್ಥೆ – ಶಾಕಾಹಾರಿ, ಮಾಂಸಹಾರಿ ಸಾಮಾನ್ಯ, ಮಾಂಸಾಹಾರಿ ವಿಶೇಷ ಮತ್ತು ಯುರೋಪಿಯನ್. ತರಹೇವಾರ್ ಧಾರಣೆ. ನಾನು ಸದಸ್ಯನಾಗಿದ್ದ ಶಾಕಾಹಾರಿ ವಿಭಾಗದಲ್ಲಿ ತಿಂಗಳಿಗೆ 23 - 50 ರೂಪಾಯಿ ಕೊಟ್ಟರೆ ಎರಡೂಟ ಮತ್ತು ಕಾಫಿತಿಂಡಿ ಸಿಗುತ್ತಿತ್ತು. ಹೀಬರ್ ಹಾಲ್‌ಗೆ ಒಂದು ಫರ್ಲಾಂಗು ನಡೆದರೆ ಆಟದ ಬಯಲು. ಪ್ರತಿ ಹಾಲಿಗೂ ಅದರದೇ ಟೆನಿಸ್ ಕೋರ್ಟು, ಟೇಬಲ್ ಟೆನಿಸ್, ಇತ್ಯಾದಿ ಆಟದ ವ್ಯವಸ್ಥೆ, ಪಾಠ ಮತ್ತು ಆಟದಲ್ಲಿ ಸಮನ್ವಯ ಸಾಧಿಸಿದ ಸಂಸ್ಥೆ ಕ್ರಿಶ್ಚನ್. ಆಗ ಮದ್ರಾಸಿನಲ್ಲಿ 3 - 4 ಪ್ರಖ್ಯಾತ ಕಾಲೇಜುಗಳಿದ್ದವು. ಆ ಪೈಕಿ ಪ್ರೆಸಿಡೆನ್ಸಿ ಕಾಲೇಜಿನವರನ್ನ ಪ್ರಿನ್ಸಸ್ ಎಂತಲೂ, ಲೊಯಾಲಾ ಕಾಲೇಜಿನವರನ್ನು ಸ್ಲೇವ್ಸ್ (ಗುಲಾಮರು) ಎಂತಲೂ ಕ್ರಿಶ್ಚನ್‌ನವರನ್ನು 'ಜಂಟ್ಲ್‌ಮನ್' ಎಂತಲೂ ಕರೆಯುವುದು ರೂಢಿ. ಜಂಟ್ಲ್‌ಮನ್ ಅಂದರೆ ಇಂಗ್ಲಿಷ್ ಮಾದರಿಯ ಸಭ್ಯಗೃಹಸ್ಥ ಎಂದರ್ಥ. ಯಾವುದೂ ಅತಿಯಾಗಿರಬಾರದು – ಪಾಠದಷ್ಟೇ ಆಟವೂ ಮಹತ್ವದ ವಿಷಯ. ಅದಕ್ಕೆ ಸರ್ವಸೌಕರ್ಯಗಳಿವೆ – ಪ್ರತಿ ಹಾಲಿನಲ್ಲಿ ಪ್ರತ್ಯೇಕವಾಗಿ; ಒಟ್ಟು ಕಾಲೇಜು ಸಮುದಾಯಕ್ಕೆ ವಿಶಾಲವಾದ ಬೇರೊಂದು ಆಟದ ಬಯಲಿದೆ. ಹಾಲಿನಲ್ಲಿ ವಸತಿ ಹೂಡಲಿ ಬಿಡಲಿ ಪ್ರತಿ ವಿದ್ಯಾರ್ಥಿಯನ್ನು ಮೂರರಲ್ಲಿ ಒಂದು ಹಾಲಿಗೆ ಜೋಡಿಸುವ ಪದ್ಧತಿ ಜಾರಿಯಲ್ಲಿತ್ತು. ಕಾಲೇಜಿನ ಆಟದ ಪಂದ್ಯವೆಂದರೆ ಮೂರು ಹಾಲುಗಳ ನಡುವೆ ತೀವ್ರ ಪೈಪೋಟಿ. ಇಂಥ ಆಟಪಾಠದ ಸಮತೋಲ ವಾತಾವರಣದಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಸರ್ವತೋಮುಖವಾಗಿ ಅರಳಲು ಧಾರಾಳ ಅವಕಾಶವಿತ್ತು. ಅದರ ಲಾಭ ಪಡೆಯಲು ದಕ್ಷಿಣದ ಎಲ್ಲ ರಾಜ್ಯಗಳಿಂದಲೂ ಅಲ್ಲದೆ ತಿರುವಾಂಕೂರಿನಿಂದಲೂ ವಿದ್ಯಾರ್ಥಿಗಳು ಮುತ್ತಿಗೆ ಹಾಕುತ್ತಿದ್ದರು. ನನಗಿಂತ ಸೀನಿಯರ್ ಒಬ್ಬ ವಿದ್ಯಾರ್ಥಿ ಎರಿಕ್ ಫಿಲಿಫ್‌ನನ್ನ ಪ್ರಾತಿನಿಧಿಕ ಕ್ರಿಶ್ಚನ್ ವಿದ್ಯಾರ್ಥಿ ಎಂದು ಪರಿಗಣಿಸಬಹುದೇನೋ. ಈತ ನೂರು ಮೀಟರ್ ಓಟದಲ್ಲಿ ಕಾಲೇಜಿಗೂ ವಿಶ್ವವಿದ್ಯಾಲಯಕ್ಕೆ ಮಾತ್ರವೇ ಅಲ್ಲ ಭಾರತದಲ್ಲೂ ಸರ್ವಪ್ರಥಮ: ಈತ ತೇರ್ಗಡೆಯಾದದ್ದು ಪ್ರಥಮ ವರ್ಗದಲ್ಲಿ; ಐ ಎ ಎಸ್ ಪರೀಕ್ಷೆಯಲ್ಲಿಯೂ ಜಯಗಳಿಸಿ ಅದನ್ನೊದ್ದು ಬರ್ಮಾಶಲ್ ಕಂಪೆನಿ ಸೇರಿದ್ದ.

ಪಾಠಕ್ರಮವೂ ವಿದ್ಯಾರ್ಥಿಗಳ ಸ್ವಾಧ್ಯಾಯಕ್ಕೆ ಅನುಗುಣವಾಗಿ ರೂಪಿತವಾದದ್ದೆ. ಮೊದಲ ವರ್ಷ 5 ದಿನವೂ ಕ್ಲಾಸಿನ ಪಾಠ; ಎರಡನೆಯ ವರ್ಷದಿಂದ 3 ದಿನ ಪೂರ್ತ ಎರಡು ದಿನ ಅರ್ಧ, ಅಂತಿಮ ವರ್ಷದಲ್ಲಿ ವಾರಕ್ಕೆ ಎರಡೇ ದಿನ ಪಾಠ. ಉಳಿದ ದಿನ ಹೊತ್ತು ಗ್ರಂಥಾಲಯದಲ್ಲಿ ನೀವೇ ಅಧ್ಯಯನ ಮಾಡಬೇಕು. ನಿಮ್ಮ ಓರಗೆಯವರರೊಂದಿಗೆ ಚರ್ಚಿಸಬೇಕು. ಲೊಯಾಲಾದಂತೆ ವಾರದಲ್ಲಿ 20 ತಾಸು ಉಪನ್ಯಾಸ, ನೋಟ್ಸ್‌ಗಳ ಹಾವಳಿ ಕ್ರಿಶ್ಚನ್‌ನ ಜಾಯಮಾನವಲ್ಲ. ಪುಣ್ಯವಂತರು ಕ್ರಿಶ್ಚನರು. ಇಂಥ ಕ್ರಿಶ್ಚನ್ ಪೈಕಿ ನಾನೂ ಒಬ್ಬನಾದೆ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ.

ಅದಾವ ಮಾಂತ್ರಿಕ ಶಕ್ತಿಯೋ ತಾಂಬರಂನ ವಾತಾವರಣದಲ್ಲಿ? ಕ್ರಿಶ್ಚನ್‌ನ ವಿದ್ಯಾರ್ಥಿಗಳು ಸ್ವಾತಂತ್ರ್ಯೋತ್ತರ ವರ್ಷಗಳಲ್ಲಿ ಭಾರತದ ಕೇಂದ್ರೀಯ ಆಡಳಿತವನ್ನೂ, ವ್ಯಾಪಾರವಹಿವಾಟಿನ ಅಗ್ರಸ್ಥಾನಗಳನ್ನೂ ಸುಲಭದಲ್ಲಿ ಜಯಿಸಿಕೊಂಡರು. ಸ್ವಾತಂತ್ರ್ಯ ದೊರತು ಹತ್ತು ಹದಿನೈದು ವರ್ಷ ಕಾಲ ಎಲ್ಲವರಲ್ಲೂ ಕ್ರಿಶ್ಚನ್ ಪದವೀಧರರ ಪ್ರಾಬಲ್ಯ ಎದ್ದು ತೋರುತ್ತಿತ್ತು. ವಿದ್ಯಾರ್ಥಿಗಳ ಆತ್ಮವಿಶ್ವಾಸಕ್ಕೂ, ಸ್ವಾಧ್ಯಾಯಕ್ಕೂ ಸ್ವಂತ ವಿಕಾಸಕ್ಕೂ ತಕ್ಕುದಾದ ನೈಸರ್ಗಿಕ ಮತ್ತು ಮಾನುಷ ಸನ್ನಿವೇಶವನ್ನು ಸೃಷ್ಟಿಸಿದ್ದು ಈ ಕಾಲೇಜಿನ ವೈಶಿಷ್ಟ್ಯ. ಇದನ್ನ ಅರಸಿಕೊಂಡು ಬರುತ್ತಿದ್ದ ದಕ್ಷಿಣ ಭಾರತದ ತರುಣರ ಸಹವಾಸದಲ್ಲಿ ನನ್ನ ಅಹಂಕಾರವೆಲ್ಲ ಅಳಿದು ಹೋಯಿತು. ಅದೇಕೋ ಎರಡು ವರ್ಷ ಕಾಲೇಜಿನಲ್ಲಿ ಹೆಣಗಾಡುವ ಅಗತ್ಯವಿಲ್ಲದೆ ನಾಲ್ಕಾರು ತಿಂಗಳಲ್ಲೇ ಇಂಟರ್ ಮಾಡಿದನೆಂಬ ಬಿಮ್ಮು ನನ್ನನ್ನ ಬೀಗಿಸಿತ್ತು: ಅದು ನನ್ನ ಸಹಪಾಠಿಗಳ ಅಸಾಧಾರಣ ಪ್ರತಿಭೆ ನೋಡಿ ಅವಿಯಾಗಿ ಹೋಯಿತು. ತಮಿಳು (ಬ್ರಾಹ್ಮಣರು - ಅಬ್ರಾಹ್ಮಣರು ಎಂಬ ಭೇದವಿಲ್ಲದೆ) ಸೀರಿಯನ್ ಕ್ರಿಶ್ಚನರು, ತೆಲುಗರು ಕಾಲೇಜಿನಲ್ಲಿರುವವರೆಲ್ಲ ನನಗಿಂತ ಬುದ್ಧಿವಂತರಾಗಿ ಕಂಡದ್ದರಿಂದ ನನ್ನ ಕಾಲು ಭೂಮಿಯಲ್ಲೇ ಉಳಿಯಿತು.

ಜೂನ್ ತಿಂಗಳಲ್ಲಿ ಸಾಹಿತ್ಯದ ಪಾಠಪ್ರವಚನವನ್ನ ಒಂದು ವಾರ ಮಾತ್ರ ಕೇಳಿ ಜುಲೈಗೆ ನಾನು ಅರ್ಥಶಾಸ್ತ್ರಕ್ಕೆ ವರ್ಗಾಯಿಸಿಕೊಂಡೆ. ಇದು ನನ್ನ ಸ್ವಂತ ನಿರ್ಣಯವಾಗಿರಲಿಲ್ಲ. ಬಿ. ಕೆ. ಸರ್ವೋತ್ತಮರಾಯರೆಂಬ ಹಿರಿಯ ಹಿತೈಷಿಯೊಬ್ಬರು ತಾವೂ ಸ್ವತಃ ಇಂಗ್ಲಿಷ್ ಪ್ರಾಧ್ಯಾಪಕರಾದರೂ ಭವಿಷ್ಯದ ಸಂಕೇತಗಳನ್ನು ಆಲಿಸಿ ಮಾರಾಯ್ರೇ, ಸಾಹಿತ್ಯ ಓದಿದರೆ ನನ್ನ ಹಾಗೆ ಬರೇ ಮಾಸ್ತ್ರಾಗಬೇಕು. ಇನ್ನು ನೋಡಿ ಇಕಾನಾಮಿಕ್ಸ್‌ಗೆ ಛಾನ್ಸ್

ಬರುತ್ತದೆ. ದೇಶಸ್ವತಂತ್ರವಾಗುತ್ತದೆ-ಕೂಡಲೇ ಅಭಿವೃದ್ಧಿ ಕಾರ್ಯ ಆರಂಭ. ನೂರಾರು ಅರ್ಥಶಾಸ್ತ್ರಜ್ಞರು ಸರ್ಕಾರಕ್ಕೆ ಬೇಕು. ನೀವು ಒಂದ್ಕೆಲಸ ಮಾಡಿ – ಕ್ರಿಶ್ಚನ್‌ನಲ್ಲೇ ಅರ್ಥ ಶಾಸ್ತ್ರಕ್ಕೆ ವರ್ಗಾಯಿಸಿಕೊಳ್ಳಿ ಎಂದು ಸಲಹೆ ಮಾಡಿದರು. ನನ್ನ ಮಹತ್ವಾಕಾಂಕ್ಷೆಗೆ ಗರಿ ಮೂಡಿತು. ಕ್ರಿಶ್ಚನ್‌ನಲ್ಲಿ ಕೊಡುವುದಿಲ್ಲ ಎಂದರು. ಲೊಯೊಲಾಕ್ಕೆ ಹೋಗಿ ರೆ. ಫ. ಬಾಸ್ಟೆನಾಕ್ ಅವರನ್ನು ನೋಡಿದೆ. ನನ್ನ ಅಂಕಪಟ್ಟಿ ನೋಡಿ ಅಯ್ಯೋ ನಿಮಗೆ ಬೇಕಾದಷ್ಟು ಮಾರ್ಕ್ಸೇನೋ ಇದೆ, ಆದರೆ 3ನೆ ಭಾಗದಲ್ಲಿ ನೀನು ಲಾಜಿಕ್ ಮಾಡಲಿಲ್ಲ ಹಿಂದೀ ಮಾಡಿದ್ದಿ. ಅದು ಆಗದು? ಎಂದು ಹೇಳಿ 'ಹಾಂ. ಹಿಂದಿ ನಿನಗೆ ಗೊತ್ತಿದೆಯಲ್ಲವೇ ಎಂದು ತಾನೂ ಮೇಜಿಂದ ಒಂದು ಪುಸ್ತಕ ತೆಗೆದು ಪ್ಯೆ ಹೂಂ. ಪಹಷ್ಮೆ ಓದಲು ತೊಡಗಿದರು. ನಿರಾಶೆಯಿಂದ ಮರಳಿ ಕ್ರಿಶ್ಚನ್‌ಗೆ ಬಂದೆ. ಸೋಮವಾರ ಸಾಹಿತ್ಯದ ವರ್ಗಕ್ಕೆ ಹೋಗಿ ಇನ್ನೇನು ಅಲ್ಲೇ ಬೇರು ಬಿಡುತ್ತೇನೆ ಎಂದುಕೊಂಡರೆ, ನನ್ನ ಹಾಜರಿ ಕರೆಯಲಿಲ್ಲ. ಸಂಶಯ ಬಂದಿತು. ಗಂಟೆ ಆದ ಮೇಲೆ ಆಫೀಸಿಗೆ ಹೋಗಿ ವಿಚಾರಿಸಿದರೆ ನನ್ನ ವರ್ಗಾವಣೆ ಬೇಡಿಕೆಯನ್ನು ಕಾಲೇಜು ಮನ್ನಿಸಿ ನನಗೆ ಅರ್ಥಶಾಸ್ತ್ರವನ್ನ ಕೊಟ್ಟಿತ್ತು.

ಅರ್ಥಶಾಸ್ತ್ರಕ್ಕೆ ಭಾರೀ ಹೆಸರು ಮಾಡಿದ ಮಾಲ್ಕೊಮ್ ಆದಿಶೇಷಯ್ಯ (ಆಮೇಲೆ ಯುನೆಸ್ಕೋ ಉಪಾಧ್ಯಾಯರಾದ ಭಾರತೀಯ ಅರ್ಥಶಾಸ್ತ್ರ) ನಾನು ಸೇರಿದ ವರ್ಷವೇ ತಾಂಬರಂ ಬಿಟ್ಟು ಹೋಗಿದ್ದರು. ಲಂಡನ್ ಸ್ಕೂಲಿಂದ ಬಂದು 3 - 4 ವರ್ಷ ಮಾಲ್ಕೊಮ್ ಅವರು ಲಂಡನ್ ಸ್ಕೂಲ್ ಅರ್ಥಶಾಸ್ತ್ರದ ವಿನೂತನ ಗಾಳಿಯನ್ನು ಕ್ರಿಶ್ಚನ್ ಮೇಲೆ ಹಾಸಿ ಬೀಸಿಬಿಟ್ಟಿದ್ದರು. ಅದು ಪ್ರತ್ಯಕ್ಷವಾಗಿ ನನಗೆ ತಪ್ಪಿದರೂ ಅವರ ಪಟ್ಟ ಶಿಷ್ಯ ಆಂಧ್ರದ ಜಗತ್ಪತಿ ನನಗೆ ಮೇಷ್ಟ್ರರಾಗಿ ಸಿಕ್ಕಿದ್ದರಿಂದ ಅಷ್ಟೋ ಇಷ್ಟೋ ಲಂಡನ್ ಸ್ಕೂಲ್ ಪ್ರಭಾವ ಪಾಠ ಕ್ರಮದಲ್ಲಿ ಮೈಗೂಡಿತು. ಮಾರ್ಶಲ್‌ನ್ನು ಸಂಪೂರ್ಣವಾಗಿ ಪಾರಾಯಣ ಮಾಡಿ ಎಂಬುದು ಲಂಡನ್ ಸ್ಕೂಲಿನ ಒಂದು ಪ್ರಭಾವ. ಮಾರ್ಶಲನ 'ಅರ್ಥಶಾಸ್ತ್ರದ ಸೂತ್ರಗಳು' ಎಂಬ ಗ್ರಂಥ ಕ್ಲಾಸಿಕಲ್ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ್ದಾದರೂ ಅದರ ವೈಚಾರಿಕ ಸಂಘಟನೆ, ಮತ್ತು ಶೈಲಿಯ ಸುಸಂಬದ್ಧತೆಗಾಗಿ ಅದನ್ನು ಓದುವುದು ಕಡ್ಡಾಯವಾಗಿತ್ತು. 46 – 49ರ ಸಂದಿನಲ್ಲಿ ಕೇನ್ಸ್ ಪ್ರಣೀತ ಅರ್ಥಶಾಸ್ತ್ರಕ್ಕೆ ಅಧ್ಯಸ್ಥಾನ ಕಲ್ಪಿತವಾದರೂ ಆಚಾರ್ಯ ಪುರುಷ ಮಾರ್ಶಲನ್ನು ಮರೆಯಬಾರದೆಂಬುದು ಒಂದು ಶೈಕ್ಷಣಿಕ ತತ್ವ. ಎರಡು ವರ್ಷ ಜಗತ್ಪತಿ ನನಗೆ ಅರ್ಥಶಾಸ್ತ್ರದ ಸಿದ್ಧಾಂತ ಮತ್ತು ಹಣಕಾಸಿನ ಸಿದ್ಧಾಂತಗಳನ್ನು ಪಾಠ ಮಾಡಿದರು. ಆ ಮೇಲೆ 48ರ ಪ್ರಥಮ ಐ. ಎ. ಎಸ್. ಪರೀಕ್ಷೆಗೆ ಕೂತು ಪಾಸು ಮಾಡಿ ಕಾಲೇಜು ಬಿಟ್ಟು ಹೋದರು. ಹಳಬರಾದ ಪ್ರೊ. ಸುಬ್ಬರಾಮಯ್ಯರ್ ಅವರು ಹೆಸರಿಗೆ ವಿಭಾಗದ ಅಧ್ಯಕ್ಷರಾದರೂ ನಮಗೆ ಅರ್ಥಶಾಸ್ತ್ರದ ಹೊಳವಾದದ್ದು ಜಗತ್ಪತಿಯಿಂದಲೇ. ಸುಬ್ಬರಾಮ ಐಯ್ಯರ್ ಪಾಲ್ಘಾಟಿನವರು, ಅವರ ಕ್ಲಾಸಿನಲ್ಲಿ ನನಗೆ ಘನಘೋರ ನಿದ್ರೆ ಆವರಿಸುತ್ತಿತ್ತು. ಅಂಥ ಏಕತಾನತೆಯಲ್ಲಿ ಅವರ ಇಂಗ್ಲಿಷ್ ವಾಕ್ಪ್ರವಾಹ ಹರಿದು ಬರುತ್ತಿತ್ತು. ಅಲ್ಲದೆ ಹೀಬರ್ ಹಾಲಿನ ಮಳಿ ಮಜ್ಜಿಗೆ (ಬೆಳಿಗ್ಗೆ ಊಟ) ತನ್ನ ಅಮಲು ಪ್ರಭಾವ ಬೀರಿ ತಲೆಯನ್ನು ಅಮುಕಿ ಹಿಡಿಯುತ್ತಿತ್ತು. ಸುಬ್ಬರಾಮ ಐಯ್ಯರ್‌ರು 30 ವರ್ಷ ಹಿಂದಿನ ನೋಟ್ಸ್‌ನಿಂದಲೇ ಪಾಠ ಮಾಡುತ್ತಿದ್ದರೆಂದು ನನ್ನ ನಂಬಿಕೆ. ಹೊಸ ಪುಸ್ತಕಗಳ ಬಗ್ಗೆ ಅವರಿಗೆ ಅಭಿಮಾನವೂ ಇಲ್ಲ, ತಿಳಿವೂ ಇರಲಿಲ್ಲ. ತಾಂಬರಂ ಹೊರಗಡೆ ಎಲ್ಲೋ ಅವರ ಮನೆ. ಅಲ್ಲಿಂದ ಒಂದು ಮುದಿ ಸೈಕಲಿನಲ್ಲಿ ಬರುತ್ತಿದ್ದರು. ಕಚ್ಚೆ ಕೋಟು ಮುಂಡಾಸಿನ ಇಂಥ ಪ್ರೊಫೆಸರ ಒಬ್ಬರು ನನಗೆ ಇಲ್ಲಿ ಸಿಕ್ಕಾರೆಂದು ನಾನೆಂದೂ ಎಣಿಸಿರಲಿಲ್ಲ. ಆದರೆ ಮನುಷ್ಯ ತುಂಬಾ ಕರುಣಾಳು.

ಉಪಾಧ್ಯಾಯಗಿರಿಯಿಂದ ತಾಂಬರಮ್ಮಿನಲ್ಲಿ ವಿದ್ಯಾರ್ಥಿ ಪಾತಳಿಗಿಳಿಯುವುದು ನನಗೆ ತುಸು ಕಷ್ಟವಾಯಿತು. ಮೊದಲಲ್ಲಿ; ಏನು ಮಾಡಿದರೂ ಪ್ರಾಧ್ಯಾಪಕರ ಪ್ರವಚನದಲ್ಲಿ ಮನಸ್ಸು ಕೇಂದ್ರೀಕೃತವಾಗದು. ಆಲಿಸುವುದು. ನಿಷ್ಕರ್ಮಿಯಾಗಿ ಕೂತಿರುವುದು ನನಗೆ ರೂಢಿಯಾಗಬೇಕಾದರೆ ಮೂರು ತಿಂಗಳು ಹಿಡಿಯಿತು. ಎಷ್ಟು ಸಂಯಮಿಸಿದರೂ ಮನಸ್ಸು ವರ್ಗದ ಕಟಾಂಜನದ ಹೊರಗಿನ ಸಸ್ಯಸಂಪತ್ತು, ಹಾರಾಡುವ ಹಕ್ಕಿ, ಅಳ್ಳಾಡುವ ಎಲೆಗಳ ಜತೆ ಕಚಕುಳಿ ಇಡುವ ಗಾಳಿಯಲ್ಲೇ ವಿಹಾರ ಮಾಡಲೆಳಸುತ್ತಿತ್ತು. ಪ್ರಥಮ ವರ್ಷದ ಅಂತ್ಯದಲ್ಲಿ ಎಲ್ಲವೂ ಸರಿ ಹೋಯಿತು. ಎಲ್ಲರಂತೆ ನನ್ನ ಮನಸ್ಸು ಪಾಠದ ಕಡೆ ಆಕರ್ಷಿತವಾಯಿತು. ಆನರ್ಸ್ ತರಗತಿಯಲ್ಲಿ ಪ್ರಥಮ ವರ್ಷದ ಪ್ರಿಲಿಮ್ ಪರೀಕ್ಷೆಗೆ ಇಂಗ್ಲಿಷ್ ಸಾಹಿತ್ಯದಲ್ಲಿ ಒಂದು ಪತ್ರಿಕೆ ಕಡ್ಡಾಯವಾಗಿ ಬರೆಯಬೇಕಾಗಿತ್ತು. ಇಂಗ್ಲಿಷ್ ಗದ್ಯದ ಸಂಗ್ರಹ ಒಂದನ್ನು ಪಾಠ ಮಾಡಲು ರೆ. ಮಾರ್ಟಿನ್ ಎಂಬುವರು ಬರುತ್ತಿದ್ದರು. ಅಚ್ಚುಕಟ್ಟಾದ ಇಂಗ್ಲಿಷನ್ನು ಮತ್ತೊಮ್ಮೆ ಕೇಳುವಂತಾದ್ದು ಅವರ ಬಾಯಿಂದ. ನೋಡಿದರೆ ಮುಖವಿನ್ಯಾಸದಿಂದ ಮುಂಗೋಪಿಯಂತೆ ತೋರುತ್ತಿದ್ದ ರೆ. ಮಾರ್ಟಿನ್ ಭಾರೀ ಸಜ್ಜನ. ಪ್ರಥಮ ಟರ್ಮಿನ ಉತ್ತರ ಪತ್ರಿಕೆಗಳನ್ನೆಲ್ಲ ತಂದು ಮಾರ್ಕನ್ನು ಓದಿ ಹೇಳಿ ಪತ್ರ ವಾಪಸು ಮಾಡುವುದು ರೂಢಿ. 'ಜಂಟ್ಲ್‌ಮನ್ ನಾನು ನಿಮಗೆ ಒಂದು ಉತ್ತರ ಓದಿ ಹೇಳುತ್ತೇನೆ. ಇದು ಈ ಪ್ರಶ್ನೆಗೆ ಮಾದರಿ ಉತ್ತರವೆಂದು ಹೇಳಬಹುದು. ವಸ್ತು ಮತ್ತು ಶೈಲಿ ಎರಡಕ್ಕೂ ಈ ವಿದ್ಯಾರ್ಥಿ ಗಮನ ಕೊಟ್ಟಿದ್ದಾನೆ.' ಎಂದು ಓದತೊಡಗಿದರು. ನನಗೆ ಅದು ನನ್ನ ಉತ್ತರವೆಂದು ಭಾಸವಾಗತೊಡಗಿತು. ಹೌದು ನನ್ನ ಹೆಸರನ್ನೇ ಕರೆದು ಪತ್ರವನ್ನು ಹಿಂದೆ ಕೊಟ್ಟರು.

ಲೆನಿನ್ ಬಗ್ಗೆ ಚರ್ಚಿಲ್ ಬರೆದ ಒಂದು ಲೇಖನದ ಕುರಿತು ಕೇಳಿದ ಪ್ರಶ್ನೆಗೆ ನಾನು ಅಷ್ಟು ಸಮರ್ಪಕ ಉತ್ತರ ಬರೆದಿದ್ದೆನೆಂದು ನನಗೇ ತಿಳಿದಿರಲಿಲ್ಲ. ಆದರೆ ಚರ್ಚಿಲನ ಖಾರವಾದ, ಕಟುವಾದ ವಿಮರ್ಶೆಯ ಶೈಲಿ ನನ್ನ ಮೇಲೆ ಪರಿಣಾಮ ಬೀರಿದ್ದು ನಿಜ.

ರೆವರೆಂಡ್ ಮೆಕಫಯಿಲ್ ಶೇಕ್ಸಪಿಯರ್ ವಿಷಯದಲ್ಲಿ ಘನ ವಿದ್ವಾಂಸರೆಂದು ಪ್ರಸಿದ್ಧಿ. ರೆ. ಕಿಟಲ್ ಗಣಿತ ಪ್ರಾಧ್ಯಾಪಕ; ರೆ. ಮೆಕ್ನಿಕೊಲ್ ಇಂಗ್ಲಿಷ್ ಭಾಷಾ ಪ್ರಾಧ್ಯಾಪಕ. ರೆ. ಡಾ. ಬಾಯ್ಡ್ ಕಾಲೇಜಿನ ಪ್ರಿನ್ಸಿಪಾಲ್ ಇವರಿಗೆಲ್ಲ ಕ್ಯಾಂಪಸಿನೊಳಗೆಯೆ ಬಂಗಲೆಗಳಿದ್ದವು. ಶನಿವಾರ ರಾತ್ರಿ ಯಾವ ವಿದ್ಯಾರ್ಥಿ ಬೇಕಾದರೂ ಅವರ ಮನೆಗಳಿಗೆ ಮಾತಾಡಲು ಹೋಗಬಹುದು. ಅವರು ಸಂಸಾರ ಸಹಿತವಾಗಿ ನಿಮ್ಮನ್ನ ಸ್ವಾಗತ ಮಾಡುತ್ತಾರೆ, ಕಾಫಿ ಚಹ ತಂಪು ಪಾನೀಯಗಳ ಸತ್ಕಾರ ಮಾಡುತ್ತಾರೆ. ನಿಮ್ಮ ಜತೆ ಆಟವಾಡುತ್ತಾರೆ. ನಿಮ್ಮ ಸುಖ ದುಃಖ ಆಲಿಸುತ್ತಾರೆ. ಪ್ರತಿ ಹಾಲಿಗೆ ಪ್ರತ್ಯೇಕವಾಗಿ ನೇಮಿತನಾದ ವಾರ್ಡನ್ ಆಯಾ ಹಾಲ್ ಸದಸ್ಯರ ಮುಖ್ಯ ಸಂರಕ್ಷಕ. ವಾರ್ಡನ್‌ಗೆ ಒಬ್ಬ ಸಹಾಯಕನಿರುತ್ತಾನೆ. ಅವನಿಗೆ ಹಾಲ್‌ನಲ್ಲೇ ನಿವಾಸ ಅಲ್ಲದೆ ಹಾಲಿನಲ್ಲಿ ನಾಲ್ಕಾರು ಟ್ಯೂಟರುಗಳಿಗೆ ಬಿಡಾರ ಕೊಡುತ್ತಾರೆ. ಶೈಕ್ಷಣಿಕ ಅಗತ್ಯಗಳನ್ನೂ, ವ್ಯಕ್ತಿಗತ ಬೆಳವಣಿಗೆಯ ಅಗತ್ಯಗಳನ್ನು ಪೂರೈಸಲು ಎಂಥ ಪರಿಸರ ನಿರ್ಮಿಸಬೇಕೋ ಅಂಥಾದ್ದನ್ನು ಕ್ರಿಶ್ಚನ್ ಕಾಲೇಜ್ ಯೋಜನಾತ್ಮಕವಾಗಿಯೂ ಮಾನವೀಯವಾಗಿಯೂ ಸಂಘಟಿಸಿ ಕೃತಾರ್ಥವಾಗಿತ್ತು.

1946ನೆಯ ಜೂನ್ 23 ರಿಂದ 1949ನೆಯ ಏಪ್ರಿಲ್‌ವರೆಗೆ ತಾಂಬರಂನಲ್ಲಿ ಕಳೆದ ಕಾಲೇಜ್ ದಿನಗಳು ನನ್ನ ಜನ್ಮ ವೃತ್ತಾಂತದ ಸ್ವರ್ಣ ಪುಟಗಳಾಗಿದ್ದವು. ಪಾಠಪ್ರವಚನದ ಮೂಲಕ ಕಲಿತುದಕ್ಕಿಂತ ಹೆಚ್ಚಾಗಿ ಓರಗೆಯ ಗೆಳೆಯರಿಂದ, ಕಾಲೇಜಿನ ವಿಶಿಷ್ಟ ಸನ್ನಿವೇಶದಿಂದ. ಸಮಕಾಲೀನ ವಿದ್ಯಮಾನಗಳ ಪ್ರಭಾವದಿಂದ ಅನುಭವಗಳಿಸಿದೆ. ಎಲ್ಲ ಅನುಭವಗಳಿಗೂ ಮನಸ್ಸು ತೆರೆದಿಟ್ಟೆ. 1946 – 47 ಸ್ವಾತಂತ್ರ್ಯ ಪೂರ್ವದ ಒಂದು ವರ್ಷ ಭಾರತದ ರಾಜಕೀಯ ರಂಗ ಪ್ರಕುಬ್ಧವಾಗಿತ್ತಲ್ಲವೇ? ಆದರೆ ಕ್ರಿಶ್ಚನ್ ಕಾಲೇಜಿನ ಪರಿಸರ ಶಾಂತವಾಗಿತ್ತು. ಕಾಲೇಜಿನ ವರಿಷ್ಠರಾದ ಸ್ಕಾಟಿಶ್ ಮಿಶನಿನ ಗುರುಗಳೂ ಪ್ರೊಫೆಸರುಗಳೂ ಬ್ರಿಟಿಷ್ ಸಾಮ್ರಾಜ್ಯದ ಅವಸಾನ ಸಮೀಪಿಸಿದ್ದನ್ನು ನಿಚ್ಚಳವಾಗಿ ಅರಿತು ಹೊಸ ಪರಿಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಿದ್ಧರಾಗುತ್ತಿದ್ದರು. 'ಎಷ್ಟು ಬೇಕಾದರೂ ಮೆರವಣಿಗೆ ತೆಗೆಯಿರಿ. ಕಾಲೇಜಿನ ಒಳಗಡೆಯೇ ಸುತ್ತಿ ಬನ್ನಿ' ಹೊರಗೆ ಹೋಗಿ ಪೋಲಿಸರ ಕಣ್ಣಿಗೆ ಬೀಳಬೇಡಿ. ಎಂದು ಉಪಾಯವಾಗಿ ಸೂಚಿಸುತ್ತಿದ್ದರು. ಆದ್ದರಿಂದ ಸ್ವಾತಂತ್ರ್ಯ ಸಮರಕ್ಕೆ ಬೆಂಬಲ ನೀಡುವ ನಮ್ಮ ಮೆರವಣಿಗೆಗಳು ಕ್ಯಾಂಪಸ್ಸಿನಲ್ಲೇ ಅರ್ಧ ತಾಸು, ಒಂದು ತಾಸು, ಸುತ್ತಾಡಿ ನೀರಿನ ಟ್ಯಾಂಕಿನ ಅಡಿಯಲ್ಲಿಗುಂಪು ಗೂಡಿ ಉದ್ಬೋಧಕ ಭಾಷಣ ಮಾಡಿ ತೃಪ್ತಿ ಪಡುತ್ತಿತ್ತು. ಇಂಕಿಲಾಬ್, ಜಿಂದಬಾದ್. ಜೈಹಿಂದ್ ಘೋಷಣೆಗಳನ್ನು ನಾನೂ ಸಾಕಷ್ಟು ಕೂಗಿದ್ದೇನೆ: ಹಿಂಬಾಲಕನಾಗಿ. ಸಹಪಾಠಿ ನೇಮಿನಮಿರಾಜ ಮಲ್ಲರಾದರೋ ವಿದ್ಯಾರ್ಥಿ ಕಾಂಗ್ರೆಸಿನ ಸಕ್ರಿಯ ಸದಸ್ಯರಾಗಿ ಮುಂದಾಳು ಸ್ಥಾನದಲ್ಲಿದ್ದರು. ನಾವು ಅವರ ಬೆನ್ – ಬಲ ಅಷ್ಟೇ. ಕಾಲೇಜಿಗೆ ಬಂದದ್ದು ಅಧ್ಯಯನಕ್ಕೆ ಮಾತ್ರ ಎಂದು ನಾನು ಕಣ್ಬಟ್ಟೆ ಹಚ್ಚಿಕೊಂಡಿದ್ದೆ. ನನ್ನ ಎಷ್ಟೋ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದೆ – ಉದಾ: ನಾಟಕ ರಂಗದ ಸಮೀಪ, ಆಟದ ಬಯಲಿನ ಸಮೀಪ ಹೋಗಲಿಲ್ಲ. ಆಟವಾಡುವ ಸಮಯವೇ ಅಂದರೆ ಸಾಯಂ 4ರಿಂದ 7 ನನ್ನ ಮುಖ್ಯ ಅಧ್ಯಯನ ವೇಳೆ ಆಗಿತ್ತು. ಆ ಅವಧಿಯ ತಪೋಭಂಗಕ್ಕೆ ವಿಘ್ನ ತರಲು ಸಾಧ್ಯವಾದ್ದು ಬಾಗಲೋಡಿ ದೇವರಾಯರಿಂದ ಮಾತ್ರ. ನನಗಿಂತ ಎರಡು ವರ್ಷ ಮೊದಲೇ ಕ್ರಿಶ್ಚನನಲ್ಲಿ ಸಾಹಿತ್ಯದ ಆನರ್ಸ್‌ಗೆ ಸೇರಿದ ದೇವರಾಯರಂಥ ಪ್ರತಿಭಾವಂತರ ಸ್ನೇಹ ದೊರೆತದ್ದು ನಾನು ಕ್ರಿಶ್ಚನ್ ಕಾಲೇಜು ಆರಿಸಿದ್ದರ ದೊಡ್ಡ ಲಾಭ. ದೇವರಾಯರು, ನಮಿರಾಜ ಮಲ್ಲರು, ರಂಗನಾಥ ಶೆಣೈ. ಎಂ.ಜನಾರ್ಧನರು. ಜಿ.ಟಿ.ನಾರಾಯಣ ರಾಯರು. ಮಂಗಳೂರಿಂದ ಬಂದವರಾದರೆ ಬೆಂಗಳೂರಿನ ಪ್ರೇಮಾನಂದ, ಕೊಡಗಿನ ಎಂ.ಗೋಪಾಲಕೃಷ್ಣ, ಮುಂತಾದವರು ಸೇರಿ ಒಂದು ಕನ್ನಡದ ಮಿತ್ರರ ಬಳಗವೇ ಅಲ್ಲಿ ರೂಪುಗೊಂಡಿತು.

ಸ್ನಾತಕೋತ್ತರ ಹಂತದಲ್ಲಿ ಅರ್ಥಶಾಸ್ತ್ರ ಅಭ್ಯಾಸ ಮಾಡುವ ವಿದ್ಯಾರ್ಥಿಗೆ 'ನೀನು ಸ್ವಲ್ಪ ಸಾಹಿತ್ಯವನ್ನು ಓದಿಕೊ, ಅರ್ಥಶಾಸ್ತ್ರ ತನ್ನಷ್ಟಕ್ಕೆ ಬರುತ್ತದೆ' ಎಂಬ ಉಪದೇಶವನ್ನು ಯಾರಾದರೂ ಮಾಡಿಯಾರೆ? ಮಾಡಿದರೆ ಕೇಳಿಯಾರೇ? ಕೇಳಿದವನು ನಾನು. ಉಪದೇಶಿಸಿದವರು ಇತ್ತೀಚೆಗಷ್ಟೇ ನಮ್ಮನ್ನಗಲಿದ ಬಾಗಲೋಡಿ ದೇವರಾಯರು. ಡಾಸ್ಟೋವಸ್ಕಿ, ಕಾಸ್ಲರ್, ಬಾಲ್ಝಾಕ, ಅನಾತೋಲ್ ಫ್ರಾನ್ಸ್ ಕಾದಂಬರಿಗಳನ್ನು ಓದಿದ್ದರಿಂದ ನನ್ನ ಅರ್ಥಶಾಸ್ತ್ರದ ಚಿಂತನಕ್ಕೆ, ಅಭ್ಯಾಸಕ್ಕೆ ಯಾವುದೇ ಅಡೆ ತಡೆ ಆಗಲಿಲ್ಲ. ಬರವಣಿಗೆಯಂತೂ ಇನ್ನಷ್ಟು ಪುಷ್ಟವಾಯಿತು ಎಂತಲೇ ಬಹುಶಃ ಪರೀಕ್ಷಕರು ಎಣಿಕೆಗೆ ಮೀರಿದ ಅಗ್ರಸ್ಥಾನವನ್ನು ನನಗೆ ಕಲ್ಪಿಸಿಕೊಟ್ಟರು.

ದೇವರಾಯರಿಗೂ ನನಗೂ ಮೂರು ನಾಲ್ಕು ವರ್ಷ ಅಂತರ – ವಯಸ್ಸಿನ ಲೆಕ್ಕದಲ್ಲಿ. ಭಗವಂತ ದಯಪಾಲಿಸಿದ ಪ್ರತಿಭೆಯ ಲೆಕ್ಕದಲ್ಲಿ ಅಗಾಧ ಅಂತರವೆಂದರೆ ಅದು ಅತಿಶಯೋಕ್ತಿಯೂ ಅಲ್ಲ, ಕೀಳರಿಮೆಯೂ ಅಲ್ಲ. ಇದು ದೇವರಾಯರನ್ನ ಸಮೀಪದಿಂದ ಬಲ್ಲ ಇಷ್ಟಮಿತ್ರರು – ನನ್ನಂಥವರು – ಬಂಧುಬಳಗ ಇಷ್ಟೇ

ಸೀಮಿತವಲಯದ ಜನಗಳ ಅರಿವಿನಲ್ಲಿರುತ್ತಿತ್ತು – ದೇವರಾಯರು ಅದೊಂದು ಶುಭಮುಹೂರ್ತದಲ್ಲಿ ಸಣ್ಣ ಕತೆಯ ಕ್ಷೇತ್ರವನ್ನು ಪ್ರವೇಶಿಸದಿದ್ದರೆ. ಭಾರತೀಯ ವಿದೇಶಾಂಗ ವ್ಯವಹಾರದಲ್ಲಿ ತನ್ನನ್ನು ತೊಡಗಿಸಿಕೊಂಡ ಕನ್ನಡದ ಈ ಒಂದು ವಿಶಿಷ್ಟ ಪ್ರತಿಭೆ ಅಂತರಂಗದ ಸಂಪುಟದಲ್ಲಿ ಕನ್ನಡ ಸಾಹಿತ್ಯ ರಚನೆಯ ಒಲವನ್ನು ಬಹುಕಾಲ ಸುಪ್ತವಾಗಿಸಿಕೊಂಡು ಇನ್ನೇನು ನಿವೃತ್ತಿಯ ಪರ್ವದಲ್ಲಿ ಅದಕ್ಕೆ ಪೂರ್ಣ ಅವಕಾಶ ಒದಗಿಸುವೆನೆಂದು ಪಣತೊಟ್ಟು ಕಾರ್ಯರಂಗಕ್ಕೆ ಇಳಿಯುತ್ತಿದ್ದಂತೆಯೇ ತೊಟ್ಟು ಕಳಚಿ ಬಿದ್ದ ಹೂವಿನಂತಾದ್ದು ಕನ್ನಡಿಗರ ದುರ್ದೈವ.

ದೇವರಾಯರ ಸಾಹಿತ್ಯ ಪಕ್ಷಪಾತಕ್ಕೆ ನಾನಾ ಮುಖಗಳು. ಅವರ ವ್ಯಕ್ತಿತ್ವದ ಒಳತಿರುಳು ಸಾಹಿತ್ಯ. ಮಾತನಾಡಿದ್ದೆಲ್ಲ ಸಾಹಿತ್ಯ. ಇದನ್ನು ವರ್ಷಗಟ್ಟಲೆ ಕೇಳಿ ಆನಂದಿಸಿದವರಲ್ಲಿ ನಾನೊಬ್ಬ. 1946ರಿಂದ 1950ರ ವರೆಗಿನ ಕಾಲ ಸಂಧಿಯಲ್ಲಿ ದೇವರಾಯರಿಗೂ ನನಗೂ ಭೆಟ್ಟಿಯಾದದ್ದು. ಸ್ಕಾಟಿಸ್ ಮಿಶನಿಗೆ ಸೇರಿದ ಆಂಗ್ಲ ಪಾದ್ರಿಗಳು ಇಲ್ಲಿ ದೇವರಾಯರ ಸಾಹಿತ್ಯ ಶಕ್ತಿಗೆ ನೀರೆರೆದು ಪೋಷಿಸಿದರು. ಸಾಹಿತ್ಯ ವಿಷಯದ ಆನರ್ಸ್ ತರಗತಿಗೆ ಸೇರುವ ಮೊದಲೇ ಮಂಗಳೂರಿನ ಎಲೋಶಿಯಸ್ ಕಾಲೇಜಿನ ಗ್ರಂಥಾಲಯದ ಆಂಗ್ಲ ಕನ್ನಡ ಸಾಹಿತ್ಯ ಕೃತಿಗಳನ್ನು ಇಡಿಯಾಗಿ ನುಂಗಿ ಜೀರ್ಣಿಸಿಕೊಂಡ ದೇವರಾಯರ ಭಾಷಾ ಕೌಶಲ್ಯವನ್ನು ಕ್ರಿಶ್ಚನ್ ಕಾಲೇಜಿನ ಬಿಳಿಯ ಪ್ರೊಫೇಸರುಗಳು ಹಾಡಿ ಹೊಗಳುತ್ತಿದ್ದರು. ಕಾಲಾವಧಿ ಪರೀಕ್ಷೆಗಳ ಉತ್ತರ ಪತ್ರಿಕೆಗೆ ದೇವರಾಯರು ಬರೆಯುತ್ತಿದ್ದ ಉತ್ತರಗಳನ್ನು ಪೋಣಿಸಿದರೆ ಒಂದು ವಿಮರ್ಶನ ಗ್ರಂಥ ಸಂಕಲಿಸಬಹುದಾಗಿತ್ತು. 'ಪದವಿಟ್ಟಳುಪವಗ್ಗಳಿಕೆ' ಪುಟಪುಟದಲ್ಲೂ 'ಮಿಸ್ಟರ್ ರಾವು. ಇಷ್ಟು ಭಾರೀ ಇಂಗ್ಲೀಷ್ ಬರೆಯಬೇಡ, ನಮಗೆ ಭಯವಾಗುತ್ತದೆ' ಎಂದು ಅವರ ಆಂಗ್ಲ ದೇಶ ಸಂಜಾತ ಪ್ರಾಧ್ಯಾಪಕರು ನಗೆಯಾಡುತ್ತಿದ್ದರಂತೆ. ದೇವರಾಯರು ಕಲಿತು ಮುಗಿಸಿ, ಉದ್ಯೋಗವಶರಾದ ಮೇಲೆ ನಮ್ಮನ್ನು ಕಂಡಾಗ ಈ ಪ್ರಾಧ್ಯಾಪಕರ ಪ್ರಶ್ನೆ 'ರಾಯರೆಲ್ಲಿ?' ಎಂಬುದೇ. ಅಂದರೆ ರಾಯರ ಬಿಂಬ ಅವರ ಮನಸ್ಸಿನಲ್ಲಿ ಅಚ್ಚಳಿಯದೆ ಇತ್ತು ಎಂದಲ್ಲವೇ ಅರ್ಥ?

ದೇವರಾಯರ ಬರವಣಿಗೆಯಷ್ಟೇ ಮಾತೂ ಸೃಜನಶೀಲ. ಉಲ್ಲಾಸದಾಯಕ. ಸಾಹಿತ್ಯದ ರಸಘಟ್ಟ ಅವರ ಜೀವನದೊಳಗಿನ ಸಾರ ಸರ್ವಸ್ವ. ಅದರ ಬಹಿರಂಗ ಪ್ರಕಟನೆ – ಮಾತು, ಬರಹ. ಸಂಜೆಯಾಗುತ್ತಲೇ ದೇವರಾಯರು ಹಾಸ್ಟೆಲಿನ ಕೊಠಡಿಗಳಿಗೆ ಪ್ರದಕ್ಷಿಣೆ ಹಾಕಿ ನಾಲ್ಕಾರು ಜನ ಗೆಳೆಯರ ಗುಂಪನ್ನು ಒಡಗೂಡಿ ವಿಹಾರಕ್ಕಾಗಿ ಹೋಗುವುದು ರೂಢಿ: ನನ್ನ ಕೊಠಡಿಗೆ ಬಂದು ಅಶಿಸ್ತು ಪೂರ್ವಕ ಹಗ್ಗದಲ್ಲಿ ನೇತು ಹಾಕಿದ ಅಂಗಿಯನ್ನು ಓದುವುದರಲ್ಲಿ ಆಸಕ್ತನಾಗಿದ್ದ ನನ್ನ ಕೈಗಿತ್ತು ಎಬ್ಬಿಸಿ ನಾಲ್ಕು ಮೈಲು ದೂರ ನಡೆಸಿಕೊಂಡು ಹೋದರೆಯೇ ಅವರಿಗೆ ಮನಶ್ಶಾಂತಿ–ಅಂದಿನ ಮಟ್ಟಿಗೆ. ಒಟ್ಟು ಎಂಟು ಮೈಲು ಸಾಹಿತ್ಯ ಚರ್ಚೆ–ಹೆಚ್ಚಿನ ಕಾಲ ಅವರದೇ ಮಾತು. ನನ್ನದು ವಿಷ್ಕಂಭಕಗಳು ಮಾತ್ರ. ಆ ಮಾತು ಕೇಳಿ ಮರುಳಾಗದವರಾರು? ವಿಶ್ವಸಾಹಿತ್ಯ ವೆಂಬುದು ಅಲ್ಲಿನ ನಿತ್ಯ ಮಸಾಲೆ.

ಇಂಟರ್ ಮುಗಿಸಿ ಆನರ್ಸ್ ಕಳೆಯಲು 3 ವರ್ಷ ಹಿಡಿಯುತ್ತದೆ, ಪರೀಕ್ಷೆಗಳ ರಾಜ ಆನರ್ಸ್ – ಇದರಲ್ಲಿ ಒಂದೇ ಸಲಕ್ಕೆ ಪಾಸಾಗಬೇಕೆಂಬ ಶರ್ತ. ಏಟಿಕೇಟಿ, ಕ್ಯಾರಿ ಓವರ್‌ಗಳಿಲ್ಲದೇ ಒಂದೇ ಮೆಟ್ಟಿನಲ್ಲಿ ಲಂಘಿಸಬೇಕು. ಎಂಬುದನ್ನು ಮೊದಲೇ ಹೇಳಿದ್ದೇನೆ. ಅಂಥದರಲ್ಲಿಯೂ ಇಂಗ್ಲೀಷ್ ಸಾಹಿತ್ಯದ ಆಮೂಲಾಗ್ರಮಥನ ಮಾಡಿ ಆ ಪರೀಕ್ಷೆಯಲ್ಲಿ ಯಶಗಳಿಸುತ್ತಿರುವಾಗಲೇ ದೇವರಾಯರು 17 ಮೈಲು ದೂರದಲ್ಲಿರುವ ವಾರ್ಸಿಟಿ ಕೇಂದ್ರಕ್ಕೆ ಹೋಗಿ ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನು ಅಧ್ಯಯನ ಮಾಡಿದರು. ಶಬ್ದಲೋಲರಾದ ದೇವರಾಯರಿಗೆ ಭಾಷೆಗಳು ನೀರು ಕುಡಿದಷ್ಟು ಸುಲಭ. ಉದ್ಯೋಗಗಳು ತೀರ ವಿರಳವಾಗಿದ್ದ 1950ರ ಪೂರ್ವಭಾಗದಲ್ಲಿ ದೇವರಾಯರು 3 ವರ್ಷ ಪ್ರಾಧ್ಯಾಪಕರಾಗಿದ್ದರು. ಅವರ ಉಪನ್ಯಾಸಗಳ ಸೊಗಸನ್ನು ಅವರ ವಿದ್ಯಾರ್ಥಿಗಳು ಇಂದಿಗೂ ಮೆಲುಕು ಹಾಕುತ್ತಿದ್ದಾರೆ. ಮದರಾಸ್ ಕ್ರಿಶ್ಚನ್, ಕಾರೈಕುಡಿಯ ಆಲಗಪ್ಪ ಹಾಗೂ ಮಂಗಳೂರಿನ ಸರ್ಕಾರಿ ಕಾಲೇಜು ಈ ಮೂರರಲ್ಲಿ ದೇವರಾಯರು ತಮ್ಮ ಶಿಕ್ಷಕ ವೃತ್ತಿಯನ್ನು ಮೆರೆಸಿದರು. ಆಳಾಗಿ ದೇವರಾಯರು ದೀರ್ಘಕಾಯರಲ್ಲ; ಅದರ ಬಗ್ಗೆ ಅವರಿಗೇ ತುಸು ಮುಜುಗರ. ಅದೇ ವೈಲಕ್ಷಣ್ಯವನ್ನು ನಗು ಮಾತಿನಲ್ಲಿ ತೇಲಿಸುತ್ತಿದ್ದರು. ಕೆಲವೊಮ್ಮೆ ಉಗುರುಗಳನ್ನು ಉದ್ದವಾಗಿ ಬೆಳೆಯಗೊಡುವರು. ಇನ್ನು ಕೆಲ ಬಾರಿ ಹೋತನ ಗಡ್ಡವನ್ನು ಇಳಿಸುವರು. ಇನ್ನೊಮ್ಮೆ ಮೀಸೆಯನ್ನು ಕನ್‌ಫ್ಯೂಷಿಯಸ್ ಚೀನೀ ಶೈಲಿಯಲ್ಲಿ ತೀಡುವರು.

ದೇವರಾಯರ ಸಾಹಿತ್ಯೋಲ್ಲಾಸ ಅವರ ಜೀವನ ಧರ್ಮವಾಯಿತು. ಜೀವನೋಲ್ಲಾಸವೂ ಆಯಿತು. ಕೂತು ವಿಚಾರಗೋಷ್ಠಿ ನಡೆಸುವುದು ಅವರಿಗೆ ಸ್ವಲ್ಪ ದೂರ. ದೂರ ನಡೆಯುವುದು. ಹತ್ತಿರದ ಗುಡ್ಡ ಬೆಟ್ಟಗಳನ್ನೇರುವುದು ಕಾಲೇಜು ದಿನಗಳಲ್ಲಿ ಅವರ ದೈನಂದಿನ ಕಾರ್ಯಕ್ರಮವೇ. ಇಲ್ಲೂ ದೇಹಕ್ಕೂ ಮನಸ್ಸಿಗೂ ಉಲ್ಲಾಸ ನೀಡುವ ಮಾತುಗಳ ಭರಾಟೆ. ವಿದ್ಯಾರ್ಥಿ ದೆಶೆಯಲ್ಲಿ ಉಡುಗೆ ತೊಡುಗೆ. ರೂಮಿನ ಅಂದ ಓರಣಗಳ ಬಗ್ಗೆ ಅವರ ದಿವ್ಯ ನಿರ್ಲಕ್ಷ್ಯ ಕಾಲೇಜಿಗೆ ಸ್ವಾರಸ್ಯದ ವಿಷಯ. ಕುದಿಯುವ ಕಾಫಿಯನ್ನು ಕುಡಿದು 'ನೋಡುವ ಬನ್ನಿ ಪಂಥಕ್ಕೆ' ಎಂದು ಪಂಥಾಹ್ವಾನ. ನೀಳವಾದ ಉಗುರು ತೋರಿಸಿ 'ನಾನು ನರಸಿಂಹ' ಎನ್ನುವರು.

ತಾಂಬರಮ್ಮಿನ ಎರಡು ಚಿಕ್ಕ ಗುಡ್ಡಗಳನ್ನು ವಾರಕ್ಕೆರಡು ಬಾರಿ ಏರಿ ಇಳಿಯುವಾಗ 'ಆಂಜನೇಯ'. ಮೊತ್ತಮೊದಲ ನನ್ನ ತಿರುಪತಿ ಯಾತ್ರೆ ದೇವರಾಯರ ಜತೆಗೆ ಬೆಟ್ಟ ಏರುವಾಗ ನಾವೆಲ್ಲ ದಾರಿಯಲ್ಲಿ ನಡೆದರೆ ದೇವರಾಯರು ಕಣಿವೆಗೆ ಅಡ್ಡವಾಗಿ ಕಟ್ಟಿದ ಗೋಡೆಯ ಮೇಲೆ, ಕೆಳಗಿನ ಪ್ರಪಾತದ ದೃಶ್ಯವನ್ನುದ್ದಕ್ಕೂ ಸವಿಯುವಂತ ಸರ್ಕಸ್ ಮಾಡುತ್ತ ಹೋಗುತ್ತಾರೆ. 'ಸ್ವಲ್ಪ ಇಳಿಯಿರಿ ಮಾರಾಯ್ರೇ. ಅಥವಾ ಮಾತಾದರೂ ನಿಲ್ಲಿಸಿ' ಎಂಬ ನಮ್ಮ ವಿನಂತಿಗೆ ಆಂಜನೇಯನ ಕಿವಿ ಕಿವುಡು.

ದೇವರಾಯರು ಆನರ್ಸ್ ಕೊನೇ ವರ್ಷದಲ್ಲಿದ್ದಾಗ ನಾನು ಕ್ರಿಶ್ಚನ್ ಕಾಲೇಜು ಸೇರಿದ್ದು, ನಾವು ಸಹವರ್ತಿಗಳಾಗಿದ್ದುದು ಅಲ್ಲಿ ಕೆಲ ವರ್ಷಗಳು ಮಾತ್ರ. ಆ ಮೇಲೆ ಈ ನಂಟು ಉದ್ದಕ್ಕೂ ಬೆಳೆಯುತ್ತಲೇ ಹೋಗಿ ಕೊನೆಗೊಮ್ಮೆ ನಾವು ನಿಜಕ್ಕೂ ನೆಂಟರಾಗುವ ಸಂದರ್ಭವೂ ಒದಗಿತು. ಅಂದಿನಿಂದ ಸುಮಾರು 40 ವರ್ಷಗಳ ಸುದೀರ್ಘ ಅವಧಿಯಲ್ಲಿ ನಮ್ಮ ಸ್ನೇಹ ದೃಶ್ಯವಾಗಿ ಅದೃಶ್ಯವಾಗಿ, ಪತ್ರವ್ಯವಹಾರ ಇದ್ದೋ ಇಲ್ಲದೆಯೋ, ಹೇಳಿಕೆ ಕೇಳಿಕೆಗಳ ಮೇಲಿಂದಲೂ ಕೂಡ ಅವರು ಎಲ್ಲೇ ಇರಲಿ, ಅಲ್ಲಿಂದಲೇ ಪ್ರವರ್ಧಮಾನವಾಗುತ್ತಲೇ ಹೋಯಿತು. ಹೀಗಾದ್ದರಿಂದ ಅವರ ವ್ಯಕ್ತಿತ್ವದ ಸಾಹಿತ್ಯಾಂಶದ ತುಡಿತ – ಮಿಡಿತಗಳನ್ನು ಊಹಿಸಿಕೊಳ್ಳುವ ಅರ್ಹತೆ ನನಗೆ ಪ್ರಾಪ್ತವಾಯಿತು. ಅವರು 'ಭಟ್ಟರೇ, ಈಗ 30 ವರ್ಷಗಳ ಬಳಿಕ ಮತ್ತೆ ಕಥೆ ಬರೆಯುತ್ತಿದ್ದೇನೆ, ಮಯೂರ ನೋಡಿ, ಸುಧಾ ನೋಡಿ, ಎಂದು ಬಲ್ಗೇರಿಯಾದಿಂದ ಪತ್ರ ಬರೆದದ್ದು ಉಂಟು. 'ಅಭಿಪ್ರಾಯ ಕೊಡಿ' ಎಂದಾಗ, ಹಿಂದಿನ ಹಾಗೆಯೇ ಬರೆಯುತ್ತಿದ್ದೀರಿ' ಎಂಬುದನ್ನು ಅವರು ವಸ್ತುಸ್ಥಿತಿ ವರ್ಣನೆ ಎಂದು ತಿಳಿದರೋ, ವಿಮರ್ಶೆಯ ಸಾಲೆಂದು ಭಾವಿಸಿದರೋ ಗೊತ್ತಾಗಲಿಲ್ಲ. ಮೂವತ್ತು ವರ್ಷಗಳು ತಾನು ಹೊರದೇಶಗಳಲ್ಲಿದ್ದುದರಿಂದ ಉಂಟಾದ ನಷ್ಟಭಾಗವನ್ನು ತುಂಬಿಸಿಕೊಳ್ಳಲು ಅತ್ಯಂತ ಕಾತರರಾಗಿ ಕನ್ನಡದ ಆಧುನಿಕ ಸಾಹಿತ್ಯ ಕೃತಿಗಳನ್ನು ಓದಲು ತೊಡಗಿದ್ದರು – ಮರಣಪೂರ್ವದ ನಾಲ್ಕು ತಿಂಗಳು ತಾನು ಉಳಿದ ಸಾಹಿತ್ಯ ಕೃಷಿಕರ ಜತೆಗೆ ಸಮಾಂತರಗೊಳ್ಳುವುದು ಹೇಗೆಂಬುದಕ್ಕಾಗಿ ನಿರಂತರ ವಾಚನ ನಡೆಸಿದ್ದರು. ತನ್ನನ್ನು ತಾನೇ ಅಪ್‌ಡೇಟ್ ಮಾಡಿಕೊಳ್ಳಲು ಹೆಣಗಿದರು. ಹಾಗೆ ನೋಡಿದರೆ ಬಹುಶಃ ಈ ಉತಾವಳಿ ಅವರ ಮಟ್ಟಿಗೆ ಅನಾವಶ್ಯಕ. ಅವರ ಕಥನ ಶೈಲಿಯನ್ನು ಪರಿಶೀಲಿಸಿದರೆ ಅದು ಎಂದಿಗೂ ಹಳೆಯದೆನಿಸದ – ನವ್ಯಾತಿನವ್ಯಗಳೂ, ನವ್ಯಾಪನವ್ಯಗಳೂ ಕಂಗೆಡಿಸದ ನೇರವಾದ ಕಥನ ಶೈಲಿ; ಸುಪ್ತ ಚೇತನದ ಹಾಗೂ ಪ್ರಜ್ಞಾ ಪ್ರವಾಹದ ಒಳ – ಒಳ – ಒಳ ಸ್ತರಗಳ ಬಣ್ಣನೆಯನ್ನು ಮಾಡಿ ದಣಿದ ಮೇಲೆ ಅರ್ವಾಚೀನ ಕಥನ ತಂತ್ರ ಮತ್ತೆ ಹಿಂದಿರುಗಬೇಕಾದ 'ಸನಾತನ' ವೆನಿಸುವಂಥ ಕಥೆ ಹೇಳುವ ಶೈಲಿ; ಮಾತಿನ ಧಾಟಿಗೂ, ಸಾಹಿತ್ಯದ ಧಾಟಿಗೂ ಹೊಂದಾಣಿಕೆ ಮಾಡಿ ರಸಸೃಷ್ಟಿ ಮಾಡಬಲ್ಲ ಶಕ್ತಿಶಾಲಿ ಶೈಲಿ. ಮೂಲದಲ್ಲಿ ಮಾಸ್ತಿಯವರಿಂದಲೂ, ಕಾರಂತರಿಂದಲೂ ಸ್ಫೂರ್ತಿ ಪಡೆದ ಬರವಣಿಗೆಯ ರೀತಿ – ದ್ರಾಕ್ಷಾಪಾಕ ಅದು.

ದೇವರಾಯರನ್ನು ಸಾಹಿತ್ಯ ರಚನೆಗೆ ಪ್ರಚೋದಿಸಿದ್ದು ಪೂಜ್ಯ ಮಾಸ್ತಿಯವರ ಆದೇಶ ಹಾಗೂ ಕ್ರಿಶ್ಚನ್ ಕಾಲೇಜಿನ ಕನ್ನಡಿಗ ಗೆಳೆಯರ ಗುಂಪು. ಅದರೊಳಗೂ ದೇವರಾಯರಿಗೆ ಸಮಕಾಲೀನವಾಗಿ, ನನಗೆ ಓರಗೆಯ ಸಹಪಾಠಿಗಳಾಗಿ ದೊರೆತು ಈಗ ಕಥೆಗಾರ – ಕಾದಂಬರಿಕಾರರೆಂದು ಪ್ರಸಿದ್ಧರಾದ ಸೇವನಮಿರಾಜಮಲ್ಲರ ಅಹರ್ನಿಶಿ ಕಥಾರಚನಾಕಾಯಕ. ಮಲ್ಲರದ್ದು ಸಮೃದ್ಧ ಬರವಣಿಗೆ, ದಣಿಯದ ಲೆಕ್ಕಣಿಕೆ. ದೇವರಾಯರ ಆಸೆ ಚಿಗುರಿದ್ದು ಬಹುಶಃ ಮಲ್ಲರ ಉದಾಹರಣೆಯಿಂದ. ಅವರು ಸಣ್ಣ ಕಥೆಯನ್ನೇ ತನ್ನ ಸಾಹಿತ್ಯಾಭಿವ್ಯಕ್ತಿಯ ಮಾಧ್ಯಮವಾಗಿ ಸ್ವೀಕರಿಸಿದ್ದಕ್ಕೂ ಇದೇ ಕಾರಣ. ಕಥೆಗಳಾದರೂ ಎಂಥವು – ಮೊತ್ತಮೊದಲ ರಚನೆಯಾದ 'ಶುದ್ಧ ಘಟಿಂಗ' ಹುಟ್ಟು ಕಥೆಗಾರ ಮಾಸ್ತಿಯವರ ಮನ ಸೆಳೆಯಿತು. 'ಜೀವನ'ದಲ್ಲಿ ಪ್ರಕಟವೂ ಆಯಿತು; 'ಹುಚ್ಚು ಮುನಸೀಫ ಮತ್ತು ಇತರ ಕಥೆಗಳು' ಎಂಬ ಪ್ರಥಮ ಕಥಾ ಸಂಗ್ರಹ ಪ್ರಕಟನೆಯೂ ಮಾಸ್ತಿಯವರಿಂದಲೇ ಆಯಿತು. 'ಪ್ರಥಮ ದೃಷ್ಟಿಯ ಪ್ರೇಮ'ದಂತೆ ಉಭಯ ಕಥೆಗಾರರು ಕೈಕುಲುಕಿದರು. ದೇವರಾಯರು ಇದು ಮಹಾ ಪ್ರಸಾದವೆಂದುಕೊಂಡರು. ತನಗೆ 'ಕಥೆಗಳನ್ನು ಬರೆಯುವುದರಲ್ಲಿ ಆತ್ಮವಿಶ್ವಾಸ ಮೂಡಿಸಿದವರು ಕರ್ನಾಟಕ ಸಾಹಿತ್ಯಕ್ಕೆ ತಿಲಕಪ್ರಾಯರಾದ ಪೂಜ್ಯ ಮಾಸ್ತಿಯವರು, ತಮ್ಮ ಹಿರಿತನದ ಕೃಪಾಛತ್ರದ ನೆರಳಿನಲ್ಲಿ ಕಿರಿಯರನ್ನು ಬರಮಾಡಿಸಿ ಸಾಹಿತ್ಯ ದೀಕ್ಷೆ ಕೊಡುತ್ತಿರುವುದು ಶ್ರೀನಿವಾಸರ ಅನುಗ್ರಹ' ಎಂದು ಅವರು ತಮ್ಮ ಎರಡನೇ ಕಥಾಸಂಗ್ರಹದ ಮುನ್ನುಡಿಯಲ್ಲಿ ವಿನೀತರಾಗಿ ಬರೆದಿದ್ದಾರೆ. ದೇವರಾಯರ ಕಥೆಗಳು ಸೂಚಿಸುವ ಅನುಭವದ ಸಂಕೀರ್ಣತೆ, ಗಾಢತೆ, ಹೃದಯವಂತಿಕೆ; ನಿರೂಪಣೆಯಲ್ಲಿ ಅಡಗಿರುವ ಕನ್ನಡ ಶೈಲಿಯ ಸುಕುಮಾರತೆ; ಕಥಾ ನಿರ್ವಹಣೆಯಲ್ಲಿ ತೋರುವ ಕೌಶಲ ಬರಿಯ ಸಾಹಿತ್ಯಜ್ಞನ ಸೊತ್ತಲ್ಲ, ಎಳವೆಯಲ್ಲಿ ಮೂಡುವ ಹೀಚು ಭಾವಗಳೂ ಅಲ್ಲ. ಕಥೆಗಳ ಸ್ಥಾಯಿಯಲ್ಲಿ ಕೂಗಿ ಕರೆಯುವ ಪ್ರಬುದ್ಧತೆ ಅಸಾಧಾರಣವಾದ ಪ್ರತಿಭೆಯ ದ್ಯೋತಕ. ಮಾಸ್ತಿಯವರು ಮೆಚ್ಚಿಕೊಂಡದ್ದು – ಲೇಖಕನು ಯಾರೆಂದರಿಯದೆ ಆತನ ಬರಹದಿಂದಲೇ ಮೌಲ್ಯಾಂಕನ ಮಾಡಿದ್ದು – ಅನಾಮಧೇಯ ತರುಣ ಲೇಖಕನೊಬ್ಬನ ಪ್ರತಿಭಾ ಪ್ರಬುದ್ಧತೆಯನ್ನು ತೀರ ಸಾಮಾನ್ಯ ಪಾತ್ರಗಳ ವ್ಯಕ್ತಿತ್ವವನ್ನು ಬಿಡಿಸಿ ತೋರಿಸುವಾಗಲೂ, ಉತ್ತಮರ

ಜೀವನದ ಕಷ್ಟಕಾರ್ಪಣ್ಯ, ಕಟುವಟುಗಳನ್ನು ಬಣ್ಣಿಸುವಾಗಲೂ ಲೇಖಕರಲ್ಲಿ ಎದ್ದು ತೋರುವ ಮಾನವ ಸಹಜವಾದ ಮರುಕವನ್ನು. ಪರಿಸರಕ್ಕೆ ಸ್ಪಂದಿಸುವ ಮನುಷ್ಯ ಅಂತರಂಗದ ಎಷ್ಟು ಕೋಟಲೆಗಳಿಗೆ ಒಡ್ಡಿಯೂ ಪರಂಪರೆಯ ಸಂಗತಿಗಳಿಂದ ಬಂಧಿತನೂ ಆಗಿರುವನೋ ಅಷ್ಟೇ ಬಾಹ್ಯ ಒತ್ತಡಗಳಿಗೂ ಮಣಿಯುವ ಸ್ವಭಾವದವನಾಗಿರುತ್ತಾನೆ. ಪರಿಸರ ಮನುಷ್ಯ – ಈರ್ವರ ಸಂಘರ್ಷ ಯಾವುದೋ ಒಂದು ಕಾಲಘಟ್ಟದಲ್ಲಿ – ಬಹುಶಃ ದಕ್ಷಿಣ ಕನ್ನಡ ಜಿಲ್ಲೆಯ 20ನೇ ಶತಮಾನದ ಆದಿ ಭಾಗದಲ್ಲಿ ನಡೆದದ್ದಾದರೆ ಅದನ್ನು ವರ್ಣಿಸುವಲ್ಲಿ ದೇವರಾಯರದು ಎತ್ತಿದ ಕೈ. ಇಲ್ಲಿನ ಅನುಭವ ಸಾಚಾ ಹಾಗೂ ದಟ್ಟ ಮಾತ್ರವಲ್ಲ – ತೀರ 'ಅಥೆಂಟಿಕ್', ಕಾರಂತರ ಕಾದಂಬರಿಗಳ ಮುದುಕ ಮುದುಕಿಯರಂತೆ. ಅಳಿದುಹೋದ ಸಂಸ್ಕೃತಿಯ ಸಂಜಾತರೆನಿಸಿದ ಈ ವ್ಯಕ್ತಿಗಳೇ ಸಂಪೂರ್ಣ ವ್ಯಕ್ತಿತ್ವವುಳ್ಳವರು – ಅವರು ಶುದ್ಧ ಘಟಿಂಗರೇ ಆಗಿರಲಿ. ಹುಚ್ಚಮುನಸೀಫರೇ ಆಗಿರಲಿ. ನೋಡಿದ ಕಥೆಯಲ್ಲವಾದರೂ ಮನಸ್ಸಿನಲ್ಲಿ ಪಾಕಗೊಂಡು ನೆನಪಿನಂಗಳದಲ್ಲಿ ನಲಿದು ಲೇಖನಿಯಲ್ಲಿ ಥಾಳವಾಗಿ ಅಚ್ಚೊತ್ತಬಲ್ಲ ಹೃಷ್ಟ ಪುಷ್ಟ ಪಾತ್ರಗಳು.

ಪ್ರಥಮ ಸಂಕಲನ ಪ್ರಕಟವಾದ್ದು 1949ರಲ್ಲಿ; ಎರಡನೆಯ 'ಆರಾಧನಾ' 1954ರಲ್ಲಿ. ಈ ಐದು ವರ್ಷಗಳ ನಡುವೆ ದೇವರಾಯರ ಜೀವನದಲ್ಲಿ ಒಂದು ದೊಡ್ಡ ಕರಿನೆಳಲು ಹಾದುಹೋಯಿತು. ಅಖಿಲ ಭಾರತೀಯ ವಿದೇಶಾಂಗ ಸೇವಾ ಪರೀಕ್ಷೆಯಲ್ಲಿ 8ನೇ ರ್‍ಯಾಂಕ್‌ನಲ್ಲಿ ತೇರ್ಗಡೆ ಹೊಂದಿ ಕೇಂಬ್ರಿಜ್‌ನಲ್ಲಿ ತರಬೇತಿ ಶಿಕ್ಷಣ ಮುಗಿಸಿ ಮಾಸ್ಕೋದಲ್ಲಿ ಪ್ರಥಮತಃ ಸೇವಾ ಸಚಿವನಾಗಿ ನೇಮಕಗೊಂಡ ಹೊತ್ತಿನಲ್ಲೇ ಅವರಿಗೆ ಅಸ್ಥಿ ಮೂಲವಾದ ಒಂದು ಗಂಭೀರ ಕಾಯಿಲೆ ತಲೆದೋರಿತು. ಇದರಿಂದ ಐದು ವರ್ಷಗಳ ಕಾಲ ಬಳಲಿ ಬೆಂಡಾಗಿ ಅಪಾರ ವೇದನೆಯನ್ನನುಭವಿಸಿದ ಬಳಿಕವೂ ಅವರು ಮರಳಿ ವಿದೇಶಾಂಗ ಸೇವೆಯ ಅರ್ಹತೆ ಗಳಿಸಿದ್ದು ನಿಜಕ್ಕೂ ಒಂದು ಪವಾಡ. ಈ ಕಾಯಿಲೆಯಿಂದ ತನಗೆ ಮುಕ್ತಿ ಹೇಗೆ, ತಾನು ಮರಳಿ ದೇಶ ಸೇವೆಗೆ ಅಣಿಯಾಗುವುದು ಹೇಗೆಂಬುದನ್ನು ಮುಂಬಯಿಯ ಎರಡು ಮೂರು ಶುಶ್ರೂಷಾಲಯಗಳಲ್ಲಿ, ಕೊನೇ ವರ್ಷ ಊರಿಗೆ ಮರಳಿದ ಮೇಲೂ ಕೂಡ. ಚಿಂತೆ. ಚಿಂತನ. ಹೃದಯ ಮಂಥನ. ಆಸ್ಪತ್ರೆಯ ಹಾಸುಗೆಯಲ್ಲೇ ನಾಲ್ಕು ವರ್ಷ ಪೂರ್ತಿ ಕಳೆದಾಗಲೂ ದೇವರಾಯರು ಧೃತಿಗೆಡದೆ. ಅನೇಕ ಮಾನಸಿಕ ತುಮುಲಗಳಲ್ಲೂ ಸೋತು, ಗೆದ್ದು, ಗೆದ್ದು ಸೋತು ಕೊನೆಗಂತೂ. ವಿಮೋಚನೆ ಪಡೆದು. ಆರೋಗ್ಯವನ್ನು ಮರಳಿ ಸಂಪಾದಿಸಿ ಪೂರ್ವದ ಸೇವಾರಂಗವನ್ನು ಸೇರಿ. ದೇಹದ ದೌರ್ಬಲ್ಯವನ್ನೂ ಗಮನಿಸದೆ 30 ವರ್ಷಗಳ ವಿದೇಶ ಸೇವೆಯನ್ನು ನಾಡಿಗೆ ಒಪ್ಪಿಸಿ ವಿಶ್ರಾಂತರಾದಮು ಅವರಿಗೇನೇ ಹಿನ್ನೋಟ ಬೀರಿದಾಗ ಅಚ್ಚರಿ ಎನಿಸೀತು. ದಾರುಣವಾದ ಕಾಯಿಲೆ, ಮತ್ತು ಆರ್ಥಿಕ ತಾಪತ್ರಯಗಳು, ನಡುವೆ ಬಂಧು ಮಿತ್ರರ ಕೈಗೂಸಾಗಿ ಬದುಕುಳಿದ ತಾವು ಇನ್ನು ತನ್ನ ಶೇಷ ಜೀವನವನ್ನು ದೇಶಕ್ಕೆ ಮುಡಿಪಿಡಬೇಕೆಂಬ ಸರ್ವಾರ್ಪಣ ಬುದ್ಧಿಯಿಂದ ಅವರು ಕೆಲಸ ಮಾಡಿದರು. ಹೀಗೆ ಅಚೆ ಹೋಗಿ ಈಚೆ ಬಂದ ತನ್ನ ಮೇಲೆ ಭಗವಂತನ ಕರುಣೆ ಇಲ್ಲದೆ ಹೋಗಿದ್ದರೆ ತನ್ನ ಉದ್ಧಾರ ಸಾಧ್ಯವೇ ಇಲ್ಲವೆಂದು ಸುಪ್ರೋತ್ಥಿತರಾದ ದೇವರಾಯರಲ್ಲಿ ಒಂದು ವಿಚಿತ್ರ ಮನಃಪರಿವರ್ತನೆ ಸಂಭವಿಸಿತು. ವಿಚಾರವಾದಿಗಳೂ ನಿರೀಶ್ವರವಾದಿಗಳೂ ಆಗಿದ್ದ ಅವರು ಕಟೀಲಿನ ದುರ್ಗಾಪರಮೇಶ್ವರಿಯ ಅಖಂಡ ಭಕ್ತರಾದರು, ಪರಮ ಭಾಗವತರಾದರು. ಆಸ್ತಿಕ್ಯವನ್ನು ಜೀವನದ ಒಂದು ಪ್ರಮುಖ ಅಂಗವಾಗಿ ಮಾಡಿಕೊಂಡರು. ಹಿಂದೆ ಬರೆದ ಕಥೆಗಳಲ್ಲಿ ನಿರೀಶ್ವರವಾದದ ಛಾಯೆ ಕಂಡರೆ ಅದನ್ನು ತಿದ್ದಿ ಮರು ಪ್ರಕಟನೆಗೆ ಅಳವಡಿಸಿದರು.' ಆರಾಧನಾ' ಸಂಗ್ರಹದ ಮುನ್ನುಡಿಯಲ್ಲಿ ಅವರ ಅಂತರಂಗದ ಆತ್ಮಕಥನವಿದೆ. 'ನಾನು ಹಿಂದಕ್ಕೆ ಬರೆದಾಗ ಅನಾತೋಲ್ ಫ್ರಾನ್ಸ್‌ನಂತೆಯೇ ಧರ್ಮ, ಭಕ್ತಿ. ಭಾವಗಳ ಮೃದುವಾದ ಭರ್ತ್ಸನೆ ಮಾಡಿದ್ದೆ. ಆ ಕಾಲದಲ್ಲಿ ನಾನೂ ನಿರೀಶ್ವರ ವಾದಿ ಎಂದು ಒಣಜಂಭ ನಟಿಸುತ್ತಿದ್ದೆ. ಆದರೆ ಈಗ ಭಗವಂತನ ಮುನಿಸಿನ ಪೆಟ್ಟು ತಿಂದು ಹಣ್ಣಾಗಿ, ದೇವರ ಭಯವುಂಟಾಗಿದೆ – ಜ್ಞಾನದ ಆರಂಭವೂ ಆಗಿದೆಯೋ ಏನೋ. ಆದುದರಿಂದ ಈ ಕಥೆಯ ತತ್ವವೇ ಬದಲಾಗಿದೆ' ಎಂದು ಬರೆದರು. 'ಅನ್ಯಥಾ ಶರಣಂ ನಾಸ್ತಿ' ಎಂಬ ಪ್ರಾಮಾಣಿಕ ಭಾವುಕತನವನ್ನು ಬಾಳಿನ ಮಂತ್ರವಾಗಿ ಅಂಗೀಕರಿಸಿದ್ದರಿಂದ ಅವರ ಬಾಳಿಗೊಂದು ಹೊಸ ತಿರುವು ಮೂಡಿತು. ಎಲ್ಲಿಯವರೆಗೆಂದರೆ ವಾಚಕರನ್ನು ಕರೆದು ತನ್ನ ರಚನೆಯ ಆಧಾರವನ್ನು ಮನಗಾಣಲು ಒತ್ತಾಯಿಸುವ ತನಕವೂ; 'ಈ ಸಂಗ್ರಹದ ಕಥೆಗಳನ್ನು ಓದುಗರು ಆಳವಾದ ಭಾವದಿಂದ, ದಾರ್ಶನಿಕ ದೃಷ್ಟಿಯಿಂದ ವಿಚಾರದಿಂದ ಓದಿದರೆ ಕೃತಜ್ಞನಾಗುವೆನು. ನನ್ನ ಕಥೆಗಳೆಲ್ಲವೂ 'ದೇವರು, ಧರ್ಮ, ಮನುಷ್ಯ, ಜೀವನ ಮತ್ತು ಮರಣ' ಎಂಬ ಐದು ಪರಮ ತತ್ವಗಳ ಮೇಲೆ ನಿಂತಿರುವುವು ಎಂಬುದನ್ನು ದಯವಿಟ್ಟು ಓದುಗರು ಮನಗಾಣಬೇಕು" ಎಂದು ಅನುನಯ ಮಾಡುವ ನಿಲುವೆಯ ತಳದಲ್ಲಿ ಐದು ವರ್ಷಗಳ ಕಾಲ ಸಂತತವಾಗಿ ತಾನುಂಡ ನೋವಿನ ಆಕ್ರಂದನವಿರುವುದನ್ನು ನಾವು ಗಮನಿಸಬೇಕಾಗುತ್ತದೆ.

ಇಂಥ ಭಾವುಕಪರ್ವದಲ್ಲಿ ರಚಿತವಾದ, ತಿದ್ದುಪಡಿಗೊಳಗಾದ ಕಥೆಗಳುಳ್ಳ 'ಆರಾಧನಾ' 'ಹುಚ್ಚಮುನಸೀಫ'ದಂತೆಯೇ ಕನ್ನಡ ಸಾಹಿತ್ಯದ ಒಂದು ಆಚಂದ್ರಾರ್ಕ ಕೃತಿಯೇ ಆಗಿದೆ. ಪ್ರತಿಯೊಂದು ಕಥೆಯಲ್ಲಿ ಕೊನೆಗೆ ಬರುವ ಹಠಾತ್ ತಿರುವು ಬದುಕಿನ ಅನಿಶ್ಚಿತತೆಯನ್ನೂ ಪರಾಧೀನತೆಯನ್ನೂ ಒಂದು ದರ್ಶನದ ನೆಳಕಿನಂತೆ

ಮಿಂಚಿಸಿ ಮಾಯವಾಗಿಸುತ್ತದೆ. ಉದಾ: ಭಾರತೀಯ ಸಂಸ್ಕೃತಿಯೂ ಬೇಡ, ಸಂಸ್ಕಾರವೂ ಬೇಡವೆಂದಿರುವ ಜರ್ಮನ್ ತಾಯಿಗೆ ವಿಮಾನಾಘಾತದಲ್ಲಿ ಸಿಕ್ಕ ಶವ ಅದಲು ಬದಲಾಗಿ ಆಕೆಯ ಮಗನು ಭಾರತೀಯ ಮಾದರಿಯಲ್ಲೇ ಭಾರತದಲ್ಲಿ ಅಂತ್ಯ ಸಂಸ್ಕಾರ ವಶನಾದ್ದು; ಜೀವನಪರ್ಯಂತ ಹೇಳಿದ್ದೆಲ್ಲ ಕರಾರುವಾಕ್ಕಾಗಿ ನಡೆಸಿದ ಹುಲಿ ಜೋಯಿಸರು ತನ್ನ ಕೊನೆಗಾಲಕ್ಕೆ ಸುಳ್ಳು ಭವಿಷ್ಯ ನುಡಿದು ಒಂದು ಹೆಣ್ಣು ಜೀವವನ್ನುಳಿಸಲು ಮನ ಕರಗಿದ್ದು; ಯುದ್ಧ ಭೂಮಿಯಲ್ಲಿ ಸಾವನ್ನಿದಿರಿಸಿ ವೀರಾಗ್ರಣಿಯಾಗಿ ಮೆರೆದ ಯೋಧ ಹಳ್ಳಿಗೆ ಮರಳಿದ ದಿನವೇ ಅಪಮೃತ್ಯುವಿಗೊಳಗಾದದ್ದು; ಕಲ್ಲು ಮನಸ್ಸಿನ ರಾಜಮ್ಮ ತನ್ನ ನಾಲಿಗೆ ತಪ್ಪನ್ನು ತಿದ್ದಿಕೊಳ್ಳಲು ಕ್ಷೇತ್ರದವರೆಗೆ ಯಾತ್ರೆ ಮಾಡಿದ್ದು; ಅಹಿಂಸಾವಾದಿ ಭಿಕ್ಷು ಸರ್ವಾರ್ಥಸಿದ್ಧಿ ಖಳ.

ಪರೀಕ್ಷೆಗಳನ್ನು ಜೈಸುವ ಕಲೆ ಏನೋ ನನಗೆ ವಶವಾಗಿತ್ತು; ಆದರೆ ನಿಗದಿತ ಪುಸ್ತಕಗಳ ಪಠನ ಮಾತ್ರವೇ ಅದಕ್ಕೆ ಬೇಕಾದುದರಿಂದ ಓದುಗಾರಿಕೆ ಬೆಳೆಯಲಿಲ್ಲವಲ್ಲಾ ಎಂಬ ಚಿಂತೆಯನ್ನು ಕ್ರಿಶ್ಚನ್ ಕಾಲೇಜಿನ ಅವಧಿ ದೂರ ಮಾಡಿತು. ದೇವರಾಯರ ಹಿತೋಪದೇಶದಂತೆ ಪ್ರಥಮ ವರ್ಷದಲ್ಲಿ ಅರ್ಥಶಾಸ್ತ್ರಕ್ಕಿಂತ ಹೆಚ್ಚು ಅಧ್ಯಯನ ವೇಳೆ ಕಾದಂಬರಿಗಳಿಗೇ ಮೀಸಲಿಟ್ಟೆ. ಪ್ರತಿ ತಿಂಗಳು ಗದುಗಿಂದ ಬರುತ್ತಿದ್ದ 75 ರೂಪಾಯಿ ಅಶನಾರ್ಥದಲ್ಲಿ ಹತ್ತಿಪ್ಪತ್ತು ರೂಪಾಯಿ ಪುಸ್ತಕ, ಜರ್ನಲ್ ಕೊಳ್ಳಲು ವಿನಿಯೋಗಿಸಿದೆ. ವಾರಕ್ಕೆರಡುಬಾರಿ ಮದ್ರಾಸಿನ 'ಹಿಗ್ಗಿನಬಾಥಾಮ್' ಮತ್ತು ಮೂರ್ ಮಾರ್ಕೆಟ್ ಸಂದರ್ಶನ ಮಾಡದೆ ಇದ್ದೆ ಇಲ್ಲದು, ಕೊಂಡದ್ದಕ್ಕಿಂತ ನೋಡುವುದು ಹೆಚ್ಚು. 1946ರಲ್ಲಿ ಪೆಂಗ್ವಿನ್ ಪ್ರಕಾಶಕರು ಬರ್ನಾರ್ಡ್‌ಶಾನ ಹತ್ತು ನಾಟಕಗಳನ್ನು ಒಂದೇ ಸಲ ಪ್ರಕಟಿಸಿದರು. ಹತ್ತು ರೂಪಾಯಿಗೆ ಆ ಹತ್ತನ್ನೂ ಕೊಂಡೆ. ಮೂರ್ ಮಾರ್ಕೆಟಿನಲ್ಲಿ ಹೇರಳ ಸೆಕೆಂಡ್‌ಹ್ಯಾಂಡ್ ಪುಸ್ತಕಗಳು ಬಿದ್ದಿರುತ್ತಿದ್ದವು. ನಾಲ್ಕಾಣೆಗೊಂದು ಸಿಗುತ್ತಿದ್ದವು. ಪ್ರತಿ ಸಲ ಮದ್ರಾಸ್ ನಗರಕ್ಕೆ ಹೋದಾಗಲೂ ಅಲ್ಲಿ ಒಂದು ತಾಸು ಕಳೆಯುವುದು ವಾಡಿಕೆ. ಅಲ್ಡಸ್ ಹಕ್ಸ್ಲಿಯ 'ಪೆರೆನಿಯಲ್ ಫಿಲಾಸಫಿ' ಎರಡು ರೂಪಾಯಿಗೆ ಸಿಕ್ಕಿದಾಗ ಸ್ವರ್ಗಕ್ಕೆ ಮೂರೇ ಗೇಣು. 'ಮದಾಂಕ್ಯುರಿ' 'ಲೇಡಿ ಹ್ಯಾಮಿಲ್ಟನ್'ನಿಂದ ಹಿಡಿದು 'ಗಾನ್ ವಿದ್ ದ ವಿಂಡ್'ನಿಂದ ವರೆಗೆ ವಾರಕ್ಕೊಂದಾದರೂ ಇಂಗ್ಲಿಷ್ ಸಿನಿಮಾ ನೋಡುತ್ತಿದ್ದೆ. ಸಿನಿಮಾ ನೋಡಿ ರಾಯಪೇಟೆದಲ್ಲಿರುವ ಹಳೇ ಉಡ್‌ಲ್ಯಾಂಡ್ಸ್ ಹೋಟೆಲಿಗೆ ಹೋಗಿ ಮಲಗಿ ಮರುದಿನ ತಾಂಬರಮಿಗೆ ಹೊರುತ್ತಿದ್ದೆ. ಉಡ್‌ಲ್ಯಾಂಡ್ಸ್‌ನಲ್ಲಿ ನನ್ನ ಮಿತ್ರ ಗೋಪಾಲಕೃಷ್ಣ ಉಡುಪರು ಬಟ್ಟೆ, ಊಟ, ವಸತಿ ಕೊಡುತ್ತಿದ್ದರು. ನನ್ನ ಅಶನಾರ್ಥದ ಡ್ರಾಫ್ಟನ್ನು ವಟಾಯಿಸಿ ನಗದು ಕೊಡುತ್ತಿದ್ದರು. ಆದ್ದರಿಂದ ನಿಸ್ಸಂಕೋಚವಾಗಿ ಅವರ ಗೆಳೆತನದ ಲಾಭ ಪಡೆದೆ. ತಾಂಬರಮಿನಿಂದ ನಗರಕ್ಕೆ ಹೋಗುವುದು ನಮ್ಮ ಗೆಳೆಯರ ಗುಂಪಿಗೆ ಇನ್ನೂ ಒಂದು ಕಾರಣಕ್ಕಾಗಿ ಅಗತ್ಯವಾಗಿತ್ತು. ಬಹುಶಃ ಆಗಿನ ಕಾಲಕ್ಕೆ ರಾಜಕೀಯ ಜಾಗೃತಿಯನ್ನು ಅರಳಿಸಿಕೊಂಡ ವಿದ್ಯಾರ್ಥಿ ಗುಂಪಿನಲ್ಲಿ ನಾವೆಲ್ಲ ಸೇರಿದ್ದೆವಷ್ಟೆ. 1946 - 47 ಮದ್ರಾಸಿನಲ್ಲಿ ರಾಜಕೀಯ ಸಭೆಗಳ ಕೋಲಾಹಲ. ಕಾಂಗ್ರೆಸ್ ಇರಲಿ, ಸೋಶಲಿಸ್ಟ್ ಇರಲಿ, ಕಮ್ಯೂನಿಸ್ಟರಾಗಲಿ ದೇವರಾಯರ ನೇತೃತ್ವದ ಗುಂಪು ಅಲ್ಲಿ ಹಾಜರು. ಒಮ್ಮೊಮ್ಮೆ ಪತ್ರಿಕಾ ವರದಿಯಂತೆ ರಾಷ್ಟ್ರನಾಯಕರು ಬರುತ್ತಾರೆ. ಒಮ್ಮೊಮ್ಮೆ ಬರುವುದಿಲ್ಲ. ಆದರೂ ನಾವು ಹಾಜರು. ಒಮ್ಮೆ ಪೆರಂಬೂರಿನಲ್ಲಿ ಡಾಂಗೆ ಬರುತ್ತಾರೆಂದು ಸುದ್ದಿ. ಓದಿ ಸಕಾಲಕ್ಕೆ ಹೋದರೆ 3 ತಾಸು ಕಾದರೂ ಆತ ಬರಲಿಲ್ಲ. ಕೈ ಎತ್ತಿ ಕೊರಳೆತ್ತಿ ಭಾಷಣಗಳೇನೋ ತಮಿಳಿನಲ್ಲಿ ನಡೆದೇ ನಡೆದರೂ ಡಾಂಗೆ ಕಾಣೆ – ನಾವು ಕಂಡದ್ದು ಡಾಂಗೆ ಅಲ್ಲ ಡೋಂಗಿ ಎಂದುಕೊಂಡು ಮರಳಿದೆವು. ಅರುಣಾ ಅಸಫ್ ಅಲಿ, ಅಚ್ಯುತ ಪಟವರ್ಧನ್ ಅವರ ಉಪನ್ಯಾಸ ಕೇಳಿದ್ದು ಮಾಂಬಳಮ್ಮಿನ ಪ್ರಚಾರ ಸಭೆಯ ಮುಂದುಗಡೆ, ಡಾ. ರಾಧಾಕೃಷ್ಣನ್ ಅವರನ್ನು ಮೊದಲ ಬಾರಿಗೆ ಕೇಳಿದ್ದು ಬ್ರಾಡ್‌ವೇಯ ಸೆಂಟ್‌ಮೇರಿಸ್ ಹಾಲಿನಲ್ಲಿ. ಪಂಡಿತ ನೆಹರೂ ಭಾಷಣ ಮಾಡಿದ ಐದು ಲಕ್ಷ ಜನರ ಸಭೆಯಲ್ಲಿ ನಮ್ಮ ತಂಡವೂ ಸೇರಿಕೊಂಡಿತ್ತು. ಸ್ವಾತಂತ್ರ್ಯ ಸಿಗುವ ಮೊದಲಲ್ಲಿ ನಡೆದ ಇನ್ನೊಂದು ಸಭೆಯಲ್ಲಿ ನೆಹರೂ ಸಿಟ್ಟಿಗೆದ್ದು ಹಾರಿ ಬಂದು ಗದ್ದಲ ಮಾಡುತ್ತಿದ್ದ ಜನರ ನಡುವೆ ನುಗ್ಗಿದಾಗ ನನ್ನ ಬಾಕ್ಸ್ ಕೆಮರಾದಿಂದ ತೆಗೆದ ಫೋಟೋ ಮೊನ್ನೆನವರೆಗೂ ನನ್ನ ಅಲ್ಬಮಿನಲ್ಲಿತ್ತು.

ಕನ್ನಡ ವಿದ್ಯಾರ್ಥಿಗಳಾದ ನಾವು ಗುಂಪಾಗಿ ಬಾಳಿದರೂ ಕಾಲೇಜಿನ ಇತರ ಭಾಷೆಯ ವಿದ್ಯಾರ್ಥಿಗಳ ಹತ್ತಿರ ಪ್ರೀತಿಯ ಸಂಬಂಧವನ್ನೇ ಇರಿಸಿಕೊಂಡಿದ್ದೆವು. ಹಾಗಾಗಿ ಕೆಲವು ಮಂದಿ ತೆಲುಗರೂ, ತಮಿಳರೂ ನಮ್ಮ ಕನ್ನಡ ಗುಂಪಿನ ಸದಸ್ಯರಾದದ್ದುಂಟು. ಎಲ್ಲರಿಗೂ ಸಹಾಯ ಮಾಡಿ ತಾವು ಹಿಂದುಳಿಯುವ ದ. ಕ. ಸಹಜವಾದ ಸಂಕೋಚ ಪ್ರವೃತ್ತಿ ಕ್ರಿಶ್ಚನ್ ಕಾಲೇಜಿನ ವಾತಾವರಣದಲ್ಲಿ ನಮ್ಮಲ್ಲಿ ಬೆಳೆದ ಒಂದು ಸಾಮಾನ್ಯ ಸದ್ಗುಣವೇ ಆಯಿತು ಎಂದೆನ್ನಬಹುದು. ಬೆಂಗಳೂರಿನ ಪ್ರೇಮಾನಂದ ವಯಸ್ಸಿನಲ್ಲಿ 4 ವರ್ಷ ನನಗಿಂತ ಕಿರಿಯನಾದರೂ, ಭೌತಶಾಸ್ತ್ರ ಓದುತ್ತಿರುವವನಾದರೂ, ನನ್ನ 'ಗಳಸ್ಯಕಂಠಸ್ಯ' ಆಗಿ ಬಿಟ್ಟ. ನಮ್ಮ ಕನ್ನಡ ಗುಂಪಿನ ಸಕ್ರಿಯ ಸದಸ್ಯನೂ ಆದ. ರ್‍ಯಾಗಿಂಗ್‌ನಿಂದ ರಕ್ಷಣೆ ಮಾಡುವುದರಿಂದ ಹಿಡಿದು ಟ್ರೈನಿನ ಪಾಸ್‌ದಾನ ಮಾಡುವುದರ

ವರೆಗೂ ನಮ್ಮ ಸ್ನೇಹ. ಕಿರಿಯನಾದರೂ ಪ್ರಬುದ್ಧ ಚೇತನವುಳ್ಳ ಪ್ರೇಮಾನಂದ ಈಗ ಅಮೇರಿಕದ ಮಿನೆಸ್ಸೊಟ ವಲ್ಲಿ ಪ್ರೊಫೆಸರ್. ಸಿಟ್ಟೂರ ಶ್ರೀನಿವಾಸರಾಯರ ಅಳಿಯನಾಗಿದ್ದಾನೆ. ಈತನ ಮೂಲಕವೇ ನನಗೆ ಅವನ ಸೋದರಮಾವ ಸಂಗೀತಗಾರ ಎಂ. ಆರ್. ಗೌತಮ್ ಪರಿಚಯ.

ಸೇವ ನಮಿರಾಜಮಲ್ಲರು ನನ್ನಂತೆ ನಾಲ್ಕು ವರ್ಷ ಓದು ನಿಲ್ಲಿಸಿ ಆಮೇಲೆ ಇತಿಹಾಸದ ಆನರ್ಸ್ ಮಾಡಲು ಕಿಶ್ಚನ್ ಸೇರಿಕೊಂಡಿದ್ದರು. ಬಿಳಿ ಖಾದಿಯ ಬಟ್ಟೆಯ ಹೊರತು ಬೇರೇನನ್ನೂ ಧರಿಸದ ಮಲ್ಲರು ತೋರಿಕೆಗೆ ಭಾರಿ ಮೌನಿ, ಆದರೆ ಕಟ್ಟೆ ಯೊಡೆದರೆ ಭಾರೀ ಬಾಯಾಳಿ. ಹಳ್ಳಿಯ ಕಥೆ, ದಿಲ್ಲಿಯ ಕಥೆ ಏನನ್ನೂ ಹೇಳುತ್ತಾರೆ. ಅವರು ಹುಟ್ಟು ಕಥೆಗಾರರು ತಾನೇ. ರಾಜಕೀಯ ಪ್ರಜ್ಞೆ ಅವರಲ್ಲಿ ತುಂಬಿತುಳುಕುತ್ತಿತ್ತು; ಆಗಿನ ಕಾಲದಲ್ಲಿ ರಾಷ್ಟ್ರೀಯ ಮನೋಭಾವದ ವಿದ್ಯಾರ್ಥಿಗಳಿಗೆ ಅ.ಭಾ. ವಿದ್ಯಾರ್ಥಿ ಕಾಂಗ್ರೆಸ್ ನೆಲೆವೀಡಾಗಿತ್ತು. ಮಲ್ಲರು ಅದರ ಸದಸ್ಯರು. ಅವರ ಸಂಪರ್ಕದಿಂದಾಗಿ ನಾನೂ ಸ್ವಲ್ಪ ಪ್ರಜ್ಞಾವಂತನಾದ್ದು. ಜನತಾ ಸರ್ಕಾರದಲ್ಲಿ ಸಚಿವ ನಾಗಿದ್ದ ರವೀಂದ್ರ ವರ್ಮ ನಮ್ಮ ಕಾಲೇಜಿನ ಕುಳ. ಅವನು ಹೇಬರ್ ಹಾಲಿಗೆ ಬಂದಾಗ ಮಲ್ಲರೇ ಬಹುಶಃ ಆತನಿಗೆ ಅತಿಥೇಯರು. ಸ್ವಾತಂತ್ರ್ಯ ದಿನ ಆಚರಣೆ (1947 ಆಗಸ್ಟ್ 15)ಯ ಸಂದರ್ಭದಲ್ಲಿ ನಾನು ಫೋಟೋ ಹಿಡಿಯಲು ನೇಮಿತನಾದರೆ ಮಲ್ಲರು ಭಾಷಣಕಾರರೂ ಆಗಿದ್ದರೆಂತ ನೆನಪು. ಇಬ್ಬರು ದೇವರಾಯರ ಜತೆ ಕಾಣಿಸಿಕೊಳುತ್ತಿದ್ದುದರಿಂದ ನಮ್ಮನ್ನ ನೋಡಿದ ಮಿತ್ರರಿಗೆ ಹೆಸರು ತಿರುವು ಮುರುವು. ನಾನು ಕೆಲವೊಮ್ಮೆ ಮಲ್ಲನಾಗಿಯೂ, ಅವರು ಭಟ್ಟರಾಗಿಯೂ ಬಿಡುತ್ತಿದ್ದರು. ಈಗಲೂ ನಮ್ಮ ಮಿತ್ರರಿಗೆ ನಮ್ಮ ಬಿಂಬ ಗೊಂದಲದ್ದೇ. 25 ವರ್ಷಗಳ ಮೇಲೆ ತ್ರಿಚನಾಪಳ್ಳಿಯಲ್ಲಿ ನನ್ನನ್ನ ನೋಡಿದ ಒಬ್ಬ ಸಹಪಾಠಿ 'ಎನ್ನ ಮಲ್ಲಾ?' ಎಂದು ಕುಶಲ ಪ್ರಶ್ನೆ ಕೇಳಿದ್ದುಂಟು. ನಾವಿಬ್ಬರೂ ಇದ್ದದ್ದು ಹೀಬರ್ ಹಾಲಿನಲ್ಲಿ – ಆದ್ದರಿಂದ ಗೊಂದಲಕ್ಕೆ ಇನ್ನಷ್ಟು ಅವಕಾಶ. ನಮ್ಮ ಅಭಿರುಚಿಗಳು ಸಮಾನ; ಅದೇಕೆ ಬಿಡಿ ನಮ್ಮ ಜನ್ಮಜಾತಕವೂ ಒಂದೇ; ರಾಶಿ ಕರ್ಕಾಟಕ. ಮಲ್ಲರು ಬೆಂಗಳೂರಿನ ಪತ್ರಿಕಾಕರ್ತರ ನಿಕಟ ಪರಿಚಯ ಮಾಡಿಕೊಂಡರೆ ನಾನು ಬೆಂಗಳೂರು ಮೈಸೂರಿನ ಸಾಹಿತಿಗಳ ಸ್ನೇಹದಲ್ಲಿ ತಜ್ಞತೆ ಗಳಿಸಿದೆ. ಸ್ಪೆಶಲೈಸ್ ಮಾಡಿದೆ ಎನ್ನಬಹುದು. ನಾನು ಪೇಟೆಯ ಪುಟಾಣಿ ಆದರೆ ಮಲ್ಲರು ಕಾರಂಜ ಎಂಬ ಕುಗ್ರಾಮದಿಂದ ಬಂದ ಒಬ್ಬ ಸಾಚಾಮನುಷ್ಯ. ತುಂಬಾ ಸಾಧು ಸ್ವಭಾವ. ಸಂಕೋಚ ಪ್ರವೃತ್ತಿ. ಸಿವಿಲ್ ಜಡ್ಜರಾದ ಮೇಲೂ ಯಾವುದೇ ವೈಭವವನ್ನು ಒಲ್ಲದ ಗಾಂಧೀವಾದ ಅವರದು. ಜಡ್ಜನಾದ ಅಳಿಯನಿಗೆ ಒಂದು ಕಾರ್ ಇರಲಿ ಎಂದು ಮಾವ ಕಾರ್ ಕೊಟ್ಟರೆ ಮಲ್ಲರು ಗಾಬರಿಯಾಗಿ ಬಂದ ನನ್ನನ್ನ 'ಸ್ವಾಮಿ ಇದನ್ನ ನೀವು ಪುತ್ತೂರು ವರೆಗೆ ಹೇಗಾದರೂ ಮುಟ್ಟಿಸಿ ಎಂದು ನನ್ನ ವಶ ಕಳಿಸಿ ಕೊಟ್ಟರು. ನಮ್ಮಿಬ್ಬರನ್ನ ನಿಜಕ್ಕೆ ಬೆಸದದ್ದು ನಮ್ಮ ಸಾಹಿತ್ಯಪ್ರೇಮ ಅಥವಾ ಬರವಣಿಗೆಯ ಗೀಳು. ಕ್ರಿಶ್ಚನ್ ಕಾಲೇಜಿನಲ್ಲಿರುವಾಗಲೇ ಅವರು 'ಪ್ರಜಾಮತ' 'ಚಿತ್ರಗುಪ್ತ'ಗಳಿಗೆ ಖಾಯಂ ಕಥೆಗಾರರಾಗಿದ್ದರು. ರಾತ್ರಿ ಎಲ್ಲ ಬರೆದರೂ ದಣಿಯರು. ಅವರ ಹಳ್ಳಿಯ ಜೀವನದ ಚಿತ್ರಗಳನ್ನು ಅನೇಕ ಕಥೆಗಳಲ್ಲಿ ಚೆನ್ನಾಗಿ ಮೂಡಿಸಿದ್ದಾರೆ. ತನ್ನ ಅನುಭವಕ್ಕೆ ಬಂದ ಸಾಮಾಜಿಕ ಸ್ತರಗಳ ಮನುಷ್ಯ ಸಂಬಂಧವನ್ನು ವಸ್ತುನಿಷ್ಠವಾಗಿ ಚಿತ್ರಿಸಿದ್ದಾರೆ. ತಿಂಗಳಿಗೆ 2 - 3 ಪತ್ರಿಕೆಗಳಲ್ಲಿ ಅವರ ಕಥೆಗಳು ಬಂದೇ ತೀರಬೇಕು – ಅಷ್ಟು ವಿಪುಲ ಕೃಷಿಯನ್ನ ಅವರು ಕಾಲೇಜು ದಿನ ಗಳಲ್ಲಿ ಸಾಧಿಸಿದರು. ಅವರ ಕಾಯಕವನ್ನ ನೋಡಿ ಸ್ಫೂರ್ತಿ ಪಡೆದವರು ದೇವರಾಯರು ಮತ್ತು ನಾನು. ನಾನು ಕಾಲೇಜಿಗೆ ಬರುವಾಗಲೇ ಹಿಂದೀ ಅನುವಾದ ಒಂದನ್ನು ಪ್ರಕಟಿಸಿದ್ದೆ; ಕಾಲೇಜು ಸೇರಿದ ಮೇಲೆ 1948ರಲ್ಲಿ ನನ್ನ ಸಣ್ಣ ಕಥೆಗಳ ಸಂಗ್ರಹ ಪ್ರಕಟವಾಯಿತು. ಅದಕ್ಕೆ ಮಲ್ಲರಿಂದ ಒದಗಿದ ಪ್ರೇರಣೆಯೇ ಕಾರಣ. ಮಲ್ಲರ ಸಹವಾಸದಲ್ಲಿ ನನಗೂ ಬರವಣಿಗೆಯ ಹಠ ಉಂಟಾಯಿತು.

ಮಲ್ಲರನ್ನೂ ನನ್ನನ್ನೂ ಒಂದು ಸಲ ಪ್ರಿನ್ಸಿಪಾಲ ಬಾಯ್ಡ್ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದು ನೆನಪಾಗುತ್ತದೆ. ಆ ವರ್ಷ ನಮ್ಮ ಹಾಲ್‌ನಲ್ಲಿ ಅಪರೂಪಕ್ಕೆ ಒಂದು ಕಾರ್ಮಿಕ ಮುಷ್ಕರ ನಡೆಯಿತು. ಒಂದೆರಡು ದಿನ ನಾವೇ ಶೌಚಾಲಯ ತೊಳೆದೆವು. ಆದರೂ ಮುಷ್ಕರದ ಧುರೀಣರು ನಾವೇನೋ ಎಂಬ ಸಂದೇಹದಿಂದ ಪ್ರಿನ್ಸಿಪಾಲರು ನಮ್ಮನ್ನ ಕರೆಕಳಿಸಿ ಪೋಲೀಸರು ನಿಮ್ಮ ಬಗ್ಗೆ ತಿಳಿಸಿದ್ದಾರೆ ಎಂದರು. ನಾವು ಇದು ಸಾಧ್ಯವಿಲ್ಲ ಎಂದು ಸಾಕ್ಷಿ ಕೊಟ್ಟು ಹೇಳಿದೆವು. ನಮ್ಮ ಭವಿಷ್ಯ ನಿರ್ಣಾಯಕವಾದ ಅಂತಿಮ ವರ್ಷದಲ್ಲಿ ಇಂಥ ಪೋಲಿತನ ಮಾಡುವಷ್ಟು ದಡ್ಡರಲ್ಲ ಎಂದು ಏನೇನೋ ಹೇಳಿ ತಪ್ಪಿಸಿಕೊಂಡೆವು. ಸ್ವಾತಂತ್ರ್ಯ ಹೋರಾಟದ ಮೆರವಣಿಗೆಯ ಮುಂಚೂಣಿ ಯಲ್ಲಿ ನಿಂತವರಿಗೆ ಇಷ್ಟಾದರೂ ಆಗಬೇಡವೆ? ನಮ್ಮ ಕನ್ನಡದ ಚಟುವಟಿಕೆಗೆ ಹೇಳಿಕೊಳ್ಳುವಂಥ ಸಾಂಘಿಕ ರೂಪವೇನೂ ಇರಲಿಲ್ಲವಾದರೂ ಒಂದು ಸಲ ಮಾಸ್ತಿ ವೆಂಕಟೇಶ ಅಯ್ಯಂಗಾರರನ್ನ ಕರೆಸಿದ್ದು ನೆನಪಾಗುತ್ತದೆ. ಭಾಷಣ ಮಾಡುತ್ತಿರುವಾಗಲೇ ಐಸ್‌ಕ್ರೀಮನ್ನು ಸಮಕಾಲೀನರಾಗಿ ತಿಂದು ಬಿಡುತ್ತೇವೆಂದುಕೊಂಡ ನಮ್ಮ ಬಾಲಿಶ ಬುದ್ಧಿಗೆ ಕಡಿವಾಣ ಹಾಕಿ ನಯವಾಗಿ ಮಾಸ್ತಿ ಹೇಳಿದರು 'ಅದನ್ನ ಮುಗಿಸಿ, ಆ ಮೇಲೆ ಮಾತಾಡೋಣ.



ಕು. ಶಿ. ಹರಿದಾಸ ಭಟ್ಟರ ಮಾತಾಪಿತರು
ದಿ. ಶಿವಗೋಪಾಲ ಭಟ್ಟರು ಮತ್ತು ದಿ. ಕಮಲಮ್ಮ ಅವರು



ಶಿವ ಅನಂತ ಭಟ್ಟ



ಚಿಕ್ಕಮ್ಮ ಕಾವೇರಮ್ಮ ಅವರೊಂದಿಗೆ ಸುಮತಿ ಅಮ್ಮ ಮತ್ತು ಹರಿದಾಸ ಭಟ್ಟರು



ಕಡಿಯಾಳಿ ಶಾಲೆಯಲ್ಲಿ ಶಿಕ್ಷಕರಾಗಿ ಕು. ಶಿ.ಯವರು ಶಾಲಾಬಳಗದೊಂದಿಗೆ (1943)



ಸ್ನಾತಕ ಕು. ಶಿ.ಯವರು (1950)



ಮದುವೆ 1953ರಲ್ಲಿ



ಬೆಳೆಯುತ್ತಿರುವ ಸಂಸಾರ–ಸುಜಾತಾ, ಜಯದೇವ, ಅನಂತರೊಂದಿಗೆ
ಕು. ಶಿ. ದಂಪತಿಗಳು



ದಿ. ಕೆ. ಎಲ್. ವಿ. ಶಾಸ್ತ್ರಿ–ಶ್ರೀಮತಿ ಕಮಲಮ್ಮ–ಕು. ಶಿ. ಅವರ ಮಾವ-ಅತ್ತೆ



1984ರಲ್ಲಿ ಕು. ಶಿ.ಯವರು ಕುಟುಂಬದ ಸದಸ್ಯರೊಂದಿಗೆ



ಕಾರಂತ ಸನ್ಮಾನ 1969ರಲ್ಲಿ ಸಾಹಿತಿ ಮಿತ್ರರೊಂಟಗೆ



ಸಾಹಿತ್ಯಲೋಕದ ನಿಕಟವರ್ತಿ ಕು. ಶಿ.ಯವರು



ದಿ. ಡಾ। ಟಿ.ಎಂ.ಎ. ಪೈಗಳ 80ನೇ ಜನ್ಮೋತ್ಸವದಲ್ಲಿ ಅಧ್ವರ್ಯುಗಳಾಗಿ
ಕು. ಶಿ. ಅವರು



ಕಾಲೇಜಿನ ಬೆಳ್ಳಿಹಬ್ಬದ ಸಂದರ್ಭದಲ್ಲಿ
ಡಾ। ಟಿ. ಎಂ. ಎ. ಪೈ. ಪ್ರೊ। ಎಚ್. ಸುಂದರ ರಾವ್ ಅವರೊಂದಿಗೆ



ಬೆಳ್ಳಿಹಬ್ಬದ ಉದ್ಘಾಟನಾ ಸಮಾರಂಭ



ಬೆಳ್ಳಿಹಬ್ಬದ ಮೆರವಣಿಗೆ



ಬೆಳ್ಳಿಹಬ್ಬದ ಸಂದರ್ಭದಲ್ಲಿ ಹಳೆವಿದ್ಯಾರ್ಥಿಗಳಿಂದ ಗುರುವಂದನ ಸ್ವೀಕರಿಸುತ್ತಿರುವ
ಕು. ಶಿ. ಸಮೀಪದಲ್ಲಿ ಪ್ರೊ। ಸುಂದರರಾಯರು



ಪ್ರಿನ್ಸಿಪಾಲರಾಗಿ ಕರ್ತವ್ಯ ನಿರ್ವಹಣೆ



ದಿಲ್ಲಿಯಲ್ಲಿ ರಾಯಭಾರ



ಸಂಸ್ಥಾಪಕ ಡಾ। ಪೈ. ಆಡಳಿತ ವರ್ಗದವರೊಂದಿಗೆ ಸಮಾಲೋಚನೆ



ಸಹೋದ್ಯೋಗಿಗಳಿಗೆ ಮಾರ್ಗದರ್ಶನ



ಕು. ಶಿ.ಯವರು ಸಂಸ್ಥಾಪಕ ಡಾ। ಪೈ. ಆಡಳಿತ ವರ್ಗದವರೊಂದಿಗೆ



ಅಕಾಡೆಮಿ ಅಧ್ಯಕ್ಷರ ಸಂದರ್ಶನ



ಪ್ರಯೋಗಶಾಲೆಗಳ ಸಂದರ್ಶನ



ಶಾರದಾ ನಿಲಯದ ಉದ್ಘಾಟನೆ



1969ರಲ್ಲಿ ಹೋಲೆಂಡಿನ ಡಾ. ಹೆಂಗಾರ್ಟನರ್ ಅವರ ಭೇಟಿ



ಮಾಲ್ಕಮ್ ಆದಿಶೇಷಯ್ಯನವರಿಂದ ಗುರುಕುಲದ ಸಂದರ್ಶನ



ಕಾಲೇಜಿನ ಕರೆಸ್ಪಾಂಡೆಂಟ್ ದಿ. ಟಿ. ಎ. ಪೈಗಳಿಂದ ಅಧ್ಯಾಪಕರನ್ನುದ್ದೇಶಿಸಿ ಭಾಷಣ



ನಲಂದಾ—ರಾಷ್ಟ್ರಕವಿ ಗೋವಿಂದ ಪೈ ಸಂಗ್ರಹಾಲಯದ ಉದ್ಘಾಟನೆ (1979)



ಗೋವಿಂದ ಪೈಯವರ ಕಂಚಿನ ಪ್ರತಿಮೆಯ ಅನಾವರಣ 1989ರಲ್ಲಿ



ಅರ್ಥಶಾಸ್ತ್ರದ ಉನ್ನತ ಅಧ್ಯಯನಕ್ಕೆ ಇತಾಲಿಯಾ ಭೇಟಿ
ಕು. ಶಿ.ಯವರಿಂದ ಐಎಸ್‌ಇಸಿ ಪ್ರಾರಂಭೋತ್ಸವ (1962)



ಇಸ್ಟೇ ನಿರ್ದೇಶಕ ಎನ್ರಿಕೊ ಡಿ ಜೆನ್ನಾರೋ ಮತ್ತಿತರರೊಂದಿಗೆ ಇಟಲಿಯಲ್ಲಿ (1963)

ನಾನು ಮಾತಾಡದೆ ಹೋಗೋದಿಲ್ಲ! ಗಬಗಬನೆ ಐಸ್‌ಕ್ರೀಮ್ ಮುಗಿಸಿ ಕೇಳುಗರಾಗಿ ಬಿಟ್ಟೆವು. ಆಗಲೇ ದೇವರಾಯರು ಒಂದು ಕಥೆಯನ್ನು (ಹುಚ್ಚ ಮುನಸೀಫ) 'ಜೀವನ' ಮಾಸ ಪತ್ರಿಕೆಗೆ ಕಳಿಸಿದ್ದು. ಮಾಸ್ತಿಯವರನ್ನು ಕಂಡದ್ದು.

ಕ್ರಿಶ್ಚನ್ ಕಾಲೇಜಿನ ಇನ್ನೋರ್ವ ಸಹಪಾಠಿ ಗಣಿತ ಆನರ್ಸಿನ ಪರ್ಕಳ ರಂಗನಾಥ ಶೆಣೈ ಉಡುಪಿಯವರೇ. ತದನಂತರ ಉಡುಪಿಯ ಸಂಸತ್ ಪ್ರತಿನಿಧಿಯೂ ಆದರು. ಇಂಜಿನಿಯರಿಂಗ್ ಕಲಿಯಲೆಂದು ಬಂದ ಶೆಣೈ ಕ್ರಿಶ್ಚನ್‌ಗೆ ಎರಡನೇ ಆಯ್ಕೆ ಎಂದು ಬಂದು ಸೇರಿದ್ದರು. ತುಂಬಾ ಬುದ್ಧಿವಂತರಾದರೂ, ಮಾನವೀಯ ಹೃದಯ ಉಳ್ಳವರೂ ಆದ ಶೆಣೈ ಅವರದು ಚಂಚಲ ಸ್ವಭಾವ. ಗೆಳೆಯರ ಒಡನಾಟ – ತಿರುಗಾಟ ಇವರಿಗೆ ಬಲು ಇಷ್ಟ. ಸುದ್ದಿ ಸಂಗತಿಗಳಿಗೆ ಪ್ರಖರವಾದ ವಿಮರ್ಶೆ ಪ್ರತಿಕ್ರಿಯೆ. ಭಾವುಕ ಮನುಷ್ಯ. ಕೋಪತಾಪಗಳ ಸುಳಿಯಲ್ಲಿ ಯಾವಾಗಲೂ ಸಿಲುಕಿರುವವರು. ಮಿತ್ರರಿಗಾಗಿ ಯಾವ ತ್ಯಾಗಕ್ಕೂ ಸಿದ್ಧ. ಗಣಿತದಲ್ಲಿ ಅತೃಪ್ತರಾಗಿ ಆ ಮೇಲೆ ವಕೀಲವೃತ್ತಿಯ ಮೂಲಕ ಉಡುಪಿ ನಗರಸಭಾಧ್ಯಕ್ಷರೂ ಕಾಂಗ್ರೆಸ್ ಸಂಸತ್ಸದಸ್ಯರೂ ಆದರು. ಛಲ, ಹೋರಾಟ, ಸಂಘರ್ಷ ಇವರ ಹುಟ್ಟುಗುಣ. ಅವರಿಗೂ ನಮ್ಮೆಲ್ಲರ ಸಹವಾಸದಿಂದ ಸಾಹಿತ್ಯದ ಗಂಧ ಹೊಡೆಯಿತು. 'ಶುದ್ಧಕಳ್ಳ' ಎಂಬೊಂದು ಕಥೆಯನ್ನು 'ಜೀವನ' ಪತ್ರಿಕೆಗೇ ಕಳಿಸಿ ಪ್ರಕಟಿಸಿದರು – ಬಹಳ ಸ್ವಾರಸ್ಯವಾದ ಕಥೆ – ಶೆಣೈಯವರ ಏಕಮಾತ್ರ ಕೃತಿ. ಸಂಸತ್ಸದಸ್ಯತ್ವೇನ ಅವರಿಗೆ ದೊರೆತ ದಿಲ್ಲಿಯ ನಿವಾಸ ಐದು ವರ್ಷ ಕಾಲ ಊರಿನ ಯಾತ್ರಿಕರ ಛತ್ರವೇ ಆಗಿತ್ತು. ನಟ್ಟಿರುಳು ಬಂದು ಬಾಗಿಲು ಬಡಿಯುವ ಪರಿಚಯಸ್ಥರಿಗೂ ಶೆಣೈ ದಂಪತಿ ಹಾರ್ದಿಕ ಸ್ವಾಗತ ಬಯಸಿ ದಿಲ್ಲಿ ದೇಖೋ ಮಾಡಿಸಿ ಊರಿಗೆ ಕಳಿಸುತ್ತಿದ್ದರು. ಇನ್ನೂ ವಯಸ್ಸಿರುವಾಗಲೇ ಒಬ್ಬರ ಬೆನ್ನ ಹಿಂದೆ ಒಬ್ಬರು ಹೊರಟು ಹೋದದ್ದು ತುಂಬಾ ಶೋಚನೀಯ ಘಟನೆಯಾಯಿತು.

ನನ್ನ ಕೋರ್ಸಿನ ಪ್ರಥಮ ವರ್ಷ ಸಾಹಿತ್ಯ ವಾಚನಕ್ಕೆ ಕಾಲ ಮೀಸಲಿಟ್ಟರೂ ಮುಂದಿನೆರಡು ವರ್ಷಗಳಲ್ಲಿ ನಾನು ಕಲಿಯಲಾಶಿಸಿದ ಅರ್ಥಶಾಸ್ತ್ರದ ಅಧ್ಯಯನವನ್ನು ಏಕಾಗ್ರವಾಗಿ ಮಾಡಿದೆ. ಲೈಬ್ರರಿಯಲ್ಲಿ ದಿನಾ ಹಾಜರಿ ಹಾಕಿ ಟಿಪ್ಪಣಿ ಮಾಡಿ ಕೊಳ್ಳುತ್ತಿದ್ದೆ. 1950ಕ್ಕೆ ಮೊದಲು ಅರ್ಥಶಾಸ್ತ್ರ ಪ್ರಪಂಚದಲ್ಲಿ ಈಗಿನಂತೆ ಸಮಗ್ರ ದೃಷ್ಟಿಯ ಪಠ್ಯಪುಸ್ತಕಗಳು ಕೆಲವೇ ಕೆಲವು ಇದ್ದವು. ಒಂದೊಂದು ವಿಷಯಕ್ಕೂ ಮೂಲಗ್ರಂಥಗಳಿಗೇ ಹೋಗಬೇಕು. ಕೇನ್ಸ್ ಅವರ ಜನರಲ್ ಥಿಯರಿ ಮತ್ತು ಹಣದ ಕುರಿತ ಎರಡು ಸಂಪುಟ, ಹಯಕ, ಹಾಟ್ರೇ ಮುಂತಾದವರ ಸಿದ್ಧಾಂತಗಳನ್ನು ನನ್ನದೇ ರೀತಿಯಲ್ಲಿ ಸಂಗ್ರಹಿಸಿಟ್ಟುಕೊಳ್ಳುವುದು, ತಪ್ಪದೆ ಅವುಗಳನ್ನ ಮನನ ಮಾಡುವುದು, ಸಿಕ್ಕಿದ ಅರ್ಥಶಾಸ್ತ್ರದ ಪತ್ರಿಕೆಗಳನ್ನು ಓದಿ ಗಮನಿಸುವುದು, ನಿತ್ಯರೂಢಿಯ ಕೆಲಸಗಳಾದುವು. ಕ್ರಮಪ್ರಾಪ್ತ ಅಧ್ಯಯನದ ದೆಸೆಯಿಂದ ಪರೀಕ್ಷೆಯ ಅಂಜಿಕೆ ಏನೂ ಇರಲಿಲ್ಲ. ಅಂತಿಮ ಆನರ್ಸ್‌ನಲ್ಲಿ ವಾರ್ಸಿಟಿಯಲ್ಲಿ ಮೂರನೇ ಸ್ಥಾನಗಳಿಸಿ ಪಾಸಾದೆ. ಇಂಥ ಪರಿಣಾಮ ನನ್ನ ಲಕ್ಷ್ಯವಾದದ್ದರಿಂದ ಅದನ್ನ ಅಡ್ಡೈಸುವ ಯಾವುದೇ ಉಪದ್ವ್ಯಾಪಕ್ಕೆ ನಾನು ಸಮೀಪ ಹೋಗಲಿಲ್ಲ. ಫ್ರೆಂಚ್ ಕಲಿಯಲು ವಿಶ್ವವಿದ್ಯಾನಿಲಯಕ್ಕೆ ಹೋಗಿ ಮೂರು ತಿಂಗಳಲ್ಲೇ ಇದು ಅರ್ಥಶಾಸ್ತ್ರಕ್ಕೆ ಆತಂಕ ಮಾಡೀತೆಂದು ಬಗೆದು ಬಿಟ್ಟುಬಿಟ್ಟೆ. ವಾರದಲ್ಲಿ ಐದು ದಿನ ಶ್ರಮಪೂರ್ವ ಅಧ್ಯಯನ ಮಾಡಿ ಗುರಿತಲುಪಿದೆ.

ಕ್ರಿಶ್ಚನ್ ಕಾಲೇಜಿನಲ್ಲಿ ನನ್ನ ಮೆಚ್ಚಿನ ಪ್ರಾಧ್ಯಾಪಕರೆಂದರೆ ರಾಜನೀತಿ ಪಾಠ ಮಾಡಲು ಬರುತ್ತಿದ್ದ ಪ್ರೊ. ಚಂದ್ರನ್ ದೇವನೇಶನ್. ಮೂಲತಃ ಸಿಂಹಳೀಯ ಸಂಜಾತರಾದ ಇವರು ಕೇಂಬ್ರಿಜ್‌ನಿಂದ ನೇರವಾಗಿ ನಮ್ಮ ಕಾಲೇಜಿಗೆ ನಾನು ಸೇರಿದ ವರ್ಷವೇ ಬಂದಿದ್ದರು. ಸುಮಾರು 30 ವರ್ಷ ಅಲ್ಲಿ ಸೇವೆ ಸಲ್ಲಿಸಿ, ಹತ್ತು ವರ್ಷ ಪ್ರಿನ್ಸಿಪಾಲರೂ ಆಗಿದ್ದು ತದನಂತರ ಮೇಘಾಲಯದಲ್ಲಿ ಕುಲಪತಿಯಾದರು. ಅವರ ಪ್ರವಚನದ ಶೈಲಿ, ವಿದ್ಯಾರ್ಥಿಗಳ ಜತೆ ಅವರು ಇರಿಸಿಕೊಂಡ ಸ್ನೇಹ ಸಂಪರ್ಕ ಅವರ ಮನೆಯ ಲೈಬ್ರರಿಯ ಓರಣ, ಮಿಗಿಲಾಗಿ ಅವರ ಜೀವನೋಲ್ಲಾಸ ತಾರುಣ್ಯದ ಹುರುಪಿನ ನಮಗೆಲ್ಲ ತುಂಬಾ ಆದರ್ಶಮಯವಾಗಿತ್ತು. ಆ ಮೇಲೆ ಹಾರ್ವರ್ಡಿಗೆ ಹೋಗಿ ಗಾಂಧೀಜಿಯ ಮೇಲೆ ಸಂಶೋಧನೆಯ. ಡಾಕ್ಟರೇಟ್ ಪಡೆದರಂತೆ. ಕ್ರಿಶ್ಚನ್ ಕಾಲೇಜಿಗೆ ಒಂದು ಸಾಂಸ್ಕೃತಿಕ ಆಯಾಮ ಕೂಡಲು ಪ್ರಯತ್ನಿಸಿದರು. ನನ್ನ ಆನರ್ಸ್ ಕೋರ್ಸ್ ಮುಗಿದ ಹತ್ತು ವರ್ಷಗಳ ಬಳಿಕ ಹೋದಾಗ 'ಏನು ಹರಿದಾಸ ನೀನಿನ್ನೂ ವಿದೇಶಕ್ಕೆ ಹೋಗಿಲ್ಲವೆ? ಹೋಗಬೇಕು, 40ರ ಮೇಲೆ ಹೋಗಿ ಪ್ರಯೋಜನವಿಲ್ಲ' ಎಂದರು. ನಾನು ಗುರುವಾಕ್ಯಮಲಂಘನೀಯಂ ಎಂದು 39ಕ್ಕೆ ಇಟಲಿಗೆ ಹೋದೆ. 1976ರಲ್ಲಿ ಯಕ್ಷಗಾನ ತಿರುಗಾಟದ ಸಂದರ್ಭದಲ್ಲಿ ಅಸ್ಸಾಮಿಗೆ ಹೋಗಿದ್ದ ವೇಳೆ 'ಸರ್, ನಿಮಗೆ ಗೌರವ ಸಲ್ಲಿಸಲು ಶಿಲಾಂಗ್‌ಗೆ ಬರುತ್ತೇನೆ – ನಾನೊಬ್ಬನೇ' ಎಂದೆ. 'ಅದೇಕೆ ನಿನ್ನ ತಂಡವನ್ನು ಕರೆದುಕೊಂಡು ಬಾ' ಎಂದು ತಾಕೀತು ಮಾಡಿದರು. ಮದ್ರಾಸಿನಲ್ಲಿಯೂ ಯಕ್ಷಗಾನದ ಒಂದು ಪ್ರದರ್ಶನ ಏರ್ಪಡಿಸಿ (1980) ಎಲ್ಲರಿಗೂ 'ನೋಡಿ ನನಗೆ ಆಗದೆ ಇದ್ದುದನ್ನು ಇವರ ಕಾಲೇಜು ಮಾಡಿ ತೋರಿಸಿದೆ. ಇವರು ಒಂದು ಜಾನಪದ ನಾಟಕವನ್ನು ಉದ್ಧಾರ ಮಾಡಿದ್ದಾರೆ' ಎಂದು ನಿರ್ಮತ್ಸರದಿಂದ ಹೇಳುವ ಅಭಿಮಾನವನ್ನು ಕಂಡು ಧನ್ಯನಾದೆ. ಈಗೆರಡು ವರ್ಷಗಳ ಹಿಂದೆ ಪ್ರೊ. ದೇವನೇಶನ್ ತೀರಿ ಹೋದಾಗ ನನ್ನೊಳಗಿಂದಲೆ ಏನೋ ಹೋದಂತೆ ಅನಿಸಿತ್ತು –

ಅಷ್ಟು ದಟ್ಟ ಪ್ರಭಾವ ಬೀರಿದ್ದರು ನನ್ನ ಗುರು. 'ನೀವು ಗುರುಶಿಷ್ಯರು ಇಬ್ಬರು ಮಾತಾಡುವ ಧಾಟಿ ಏಕರೀತಿಯಾಗಿದೆ' ಎಂದು ಶ್ರೀಮತಿ ದೇವನೇಶನ್ ನಗೆಯಾಡಿದ್ದಿದೆ.

ಈಗ ಕನ್ನಡದ ಖ್ಯಾತ ವಿಜ್ಞಾನ ಬರಹಗಾರರೆನಿಸಿದ ಜಿ. ಟಿ. ನಾರಾಯಣ ರಾಯರು ಕ್ರಿಶ್ಚನ್ ಕಾಲೇಜಿಗೆ ಒಂದು ವರ್ಷ ಮಣ್ಣು ಹೊತ್ತ ಒಬ್ಬ ಹಳೆ ವಿದ್ಯಾರ್ಥಿಯೇ. ಕೊಡಗಿನ ಜಿ. ಟಿ. ನಾರಾಯಣ ರಾಯರು ತಾಂಬರಮಿನಲ್ಲಿ ಶುರುಮಾಡಿದ ಆನರ್ಸ್ ಕೋರ್ಸನ್ನು ಲೊಯಾಲಾದಲ್ಲಿ ಮುಗಿಸಿ ಮತ್ತೆ ಕ್ರಿಶ್ಚನ್‌ನಲ್ಲಿ ಅಧ್ಯಾಪನ ಮಾಡಿದವರು. ನಮ್ಮ ಕನ್ನಡ ಗುಂಪಿನ ಸದಸ್ಯರು, ಸಂಗೀತದೂರನಾದ ನನಗೆ ಕರ್ನಾಟಕಿ ಸಂಗೀತದ ಪರಿಚಯ ಮಾಡಿಸಲು ಹೋಗಿ ಸೋತವರು. ಒಂದು ಸಲ ನನ್ನನ್ನು ಜಿ. ಎನ್. ಬಿ. ಕಚೇರಿಗೆ ಕರೆದುಕೊಂಡು ಹೋದರು. ನನ್ನ ಜನ್ಮದಲ್ಲೇ ಮೊದಲ ಕಚೇರಿ ಅದು. ಜಿ. ಟಿ. ಅವರು ಶಿಸ್ತಿನಲ್ಲಿ ಸಂಗೀತ ಮುಗಿದ ಮೇಲೆ ತಿನಲೆಂದು ಬನ್ ಮತ್ತು ಜಾಮ್ ಹಿಡಿದುಕೊಂಡಿದ್ದರು. ಸಂಗೀತ ಕೇಳಿ ನನಗೆ ಹಸಿವೆ ಹತ್ತಿಕೊಂಡದ್ದರಿಂದ ಆಸನದ ಬಳಿಯೇ ಚೀಲದಲ್ಲಿ ಇಳಿಯಗೊಟ್ಟ ಬನ್‌ಗೆ ಕೈಹಾಕಿ ಮೆಲ್ಲನೆ ಮೆಲ್ಲುವ ಯೋಚನೆ ಮಾಡಿದೆ. ರಾಯರು ಬಿಡಲಿಲ್ಲ. ಹಾಗೆ ತಿನ್ನುವುದು ಸಂಗೀತಕ್ಕೆ ಅವಮಾನವೆಂದು ಅವರೂ ಗೌರವವೆಂದು ನಾನೂ ಪಿಸು ಮಾತಿನಲ್ಲಿ ಜಗಳವಾಡಿದೆವು. ಶ್ರೋತೃವಿನ ಜೀರ್ಣಶಕ್ತಿಯನ್ನು ಹೊಡೆದೆಬ್ಬಿಸುವ ಸಂಗೀತ ಸಾಮಾನ್ಯವಾದ್ದಲ್ಲವೆಂದು ನನ್ನ ವಾದವಾಗಿತ್ತು. ಅಂದೂ ಇಂದೂ ಜಿ. ಟಿ. ನಾ. ಅವರೂ ನಾನೂ 40 ವರ್ಷಗಳಿಂದ ಮಿತ್ರರಾದರೂ ಸಂಗೀತ ಶಕ್ತಿಯ ಬಗ್ಗೆ ನಮ್ಮಲ್ಲಿ ಒಮ್ಮತ ಮೂಡಿದ್ದಿಲ್ಲ. ಅಂಥಲ್ಲಿ ನಾನು ಉಡುಪಿಯಲ್ಲಿ ಕನಕದಾಸರ ಹೆಸರಿನಲ್ಲಿ ಸಂಗೀತೋತ್ಸವ ಏರ್ಪಡಿಸಿದ್ದು ಜಿ.ಟಿ. ಅವರಿಗೆ ಮೋಜೆನಿಸಿರಬೇಕಲ್ಲವೆ?

೮ ನನ್ನ ಸಾಹಿತ್ಯ ಜೀವನ

ಸಾಹಿತ್ಯದ ಅಭ್ಯಾಸದಿಂದಾಗಿ ಕನ್ನಡದಲ್ಲಿ ಬರೆಯಬೇಕೆಂಬ ಹಂಬಲ ಹುಟ್ಟಿತು. ಪ್ರಾಥಮಿಕ ಶಾಲೆಯ ಹಂತದಲ್ಲಿ ವಿದ್ಯಾರ್ಥಿಗಳು ತಯಾರಿಸುವ ಹಸ್ತಪತ್ರಿಕೆಗೆ ಬರೆಯುವುದರಿಂದ ಲೆಕ್ಕಣಿ ವ್ಯವಸಾಯ ತೊಡಗಿದೆನೆಂದು ತೋರುತ್ತದೆ. ಕುಂಜಿಬೆಟ್ಟಿನಲ್ಲಿರುವ ನಮ್ಮ ಗೆಳೆಯರ ಗುಂಪು ನಾಗಪ್ಪಯ್ಯನ ಅಂಗಡಿಯ ಅಟ್ಟದಲ್ಲಿ ಗ್ರಂಥಾಲಯ ಸ್ಥಾಪನೆ ಮಾಡಿದಾಗಲೂ ಒಂದು ಹಸ್ತಬರಹದ ಪತ್ರಿಕೆ ಹೊರಡುತ್ತಿತ್ತು. ಅದರಲ್ಲೂ ಬರೆದೆ. ಬರವಣಿಗೆಯ ದೃಶ್ಯ ತುಂಬಿಸಿಕೊಳ್ಳಲು ಹಿಂದಿಯಿಂದ ಅನುವಾದ ಮಾಡುತ್ತಿದ್ದೆ. ಮೈಥಿಲೀ ಶರಣಗುಪ್ತರ 'ಸಾಕೇತ'ದಿಂದ ಅನುವಾದಿಸಿದ ಹತ್ತಾರು ಕವಿತೆಗಳನ್ನು 'ಜೀವನ' ಪತ್ರಿಕೆಯ ಮಾದರಿ ಪುಟದಲ್ಲಿ ಮಾಸ್ತಿಯವರು ಪ್ರಕಟಿಸಿದಾಗ ತುಂಬ ಸಂತಸಗೊಂಡೆ. ಸೃಜನಾತೀತ ಕಥೆ ಕವಿತೆಗಳ ಹಿಡಿತದಿಂದಲೂ, ಅನುವಾದಗಳ ಆಕರ್ಷಣೆಯಿಂದಲೂ ಬಿಡಿಸಿಕೊಂಡು ನನ್ನತನವನ್ನು ನಾನು ಕಂಡುಕೊಳ್ಳಬೇಕಾದರೆ ಬಹಳ ಕಾಲ ಹಿಡಿಯಿತು. ಕೊನೆಗೆ ಪ್ರಬಂಧಗಳು, ಶಾಸ್ತ್ರಗ್ರಂಥಗಳು, ಪ್ರವಾಸ ಕಥನಗಳು ಮುಂತಾದುವನ್ನು ಗದ್ಯದಲ್ಲಿ ಬರೆಯುವುದನ್ನೇ ವಿಶೇಷವಾಗಿ ಬೆಳೆಸಿಕೊಂಡೆ. ಪದ್ಯಂ ವಧ್ಯಂ ಗದ್ಯ ಹೃದ್ಯಂ ಎಂದು ಹೇಳಿದ ಮುದ್ದಣನ ಊರಲ್ಲವೇ ನನ್ನದು ? 1945ರಲ್ಲಿ ಪ್ರಕಟವಾದ ನನ್ನ 'ಅವರು ಯುದ್ಧಕ್ಕೆ ಹೋಗಲಿಲ್ಲ' ಎಂಬ ಕಥೆಗೆ ಉಡುಪಿಯ ಒಂದು ಪತ್ರಿಕೆ ಬಹುಮಾನವನ್ನು ಪ್ರಕಟಿಸಿತ್ತಾದರೂ ಅದನ್ನು ಕೊಡಲಿಲ್ಲ. ಆದರೆ ಆ ಶೀರ್ಷಿಕೆಯಲ್ಲಿ ನಾನು ಒಂದು ಕಥಾ ಸಂಗ್ರಹವನ್ನು ಹೊರತಂದೆ. ಹುಬ್ಬಳ್ಳಿಯ ಸರ್ವೋದಯ ಸಾಹಿತ್ಯಮಾಲೆಯ ಮಾರ್ಪಳ್ಳಿ ಹರಿದಾಸರು ಅದನ್ನು ಪ್ರಕಟಿಸಿದರು.

ನನ್ನ ಪ್ರಥಮ ಪುಸ್ತಕ ಒಂದು ಅನುವಾದ — ಪ್ರೇಮಚಂದರ ಗಬನ್ ಕಾದಂಬರಿಗೆ 'ರಮಾನಾಥ' ಎಂಬ ಹೆಸರು ಕೊಟ್ಟು ಧಾರವಾಡದ ಪ್ರತಿಭಾ ಗ್ರಂಥಮಾಲೆಯ ಮೂಲಕ ಪ್ರಕಟಿಸಿದ್ದು 1943ರಲ್ಲಿ. ಅನುವಾದಕ್ಕೆ ಅಪ್ಪಣೆಯನ್ನು ಪ್ರೇಮಚಂದರ ಪುತ್ರ ಶ್ರೀಪತರಾಯ್ ಅವರಿಂದ ತೆಗೆಸಿಕೊಟ್ಟವರು ಧಾರವಾಡದ ಗುರುನಾಥ ಜೋಶಿಯವರು. ಅಪ್ಪಣೆ ಸಿಕ್ಕಿದೆ, ಅನುವಾದವೂ ಆಗಿದೆ, ಕಾಗದದ ಅಭಾವವುಳ್ಳ ಈ ಯುದ್ಧ ಕಾಲದಲ್ಲಿ ಪ್ರಕಾಶಕರು ಯಾರು ಸಿಗುತ್ತಾರೆಂದು ಪರದಾಡುತ್ತಿದ್ದಾಗ ಘಾರ್ಣೇಕರ ಅವರು ಧಾರವಾಡದಲ್ಲಿ ಇದಿರಾದರು. ಓದಿ ಬರೆಯುತ್ತೇನೆ ಎಂದವರು ಕೆಲವೇ ದಿನಗಳಲ್ಲಿ ನನಗೆ 25 ರೂಪಾಯಿ ಮತ್ತು 25 ಪ್ರತಿಗಳನ್ನು ಕೊಡುವ ವಾಗ್ದಾನದ ಮೇಲೆ ಪ್ರಕಟಿಸುವ ಹೊಣೆ ಹೊತ್ತರು. ನನ್ನ ಚೊಚ್ಚಲ ಕೃತಿಯಾದ್ದರಿಂದ ಅದು ಪ್ರಕಟವಾಗುವ ದಿನವನ್ನು ಇದಿರುನೋಡುತ್ತಿದ್ದೆ. ಮುಂಗಾಣ್ಕೆಯ ಒಂದು ಪ್ರತಿ ಬಂದಾಗ ಅದರಲ್ಲಿ ಸ್ವನಾಮದ ಮುಂದುಗಡೆ 'ಜಾಣ' 'ವಿಶಾರದ' ಉಪಾಧಿಗಳನ್ನು ಸೇರಿಸಿಕೊಂಡು ಬಿಟ್ಟಿದ್ದೆ. ಇದರಿಂದ ಪೂರ್ತಿ ಸಮಾಧಾನವಾಗಲಿಲ್ಲ. ನನ್ನ ಸಾಹಿತ್ಯ ಕೃಷಿಗೆ ಸ್ಫೂರ್ತಿ ದೊರೆತದ್ದು ಯಾತರಿಂದ ಎಂಬುದನ್ನು ನಿವೇದಿಸಿದರೆ ಈಗ ನನಗೇ ನಗು ಬರುತ್ತದೆ. ಕುವೆಂಪು ಅವರ 'ಸ್ವಾಮಿ ವಿವೇಕಾನಂದ' ಗ್ರಂಥದಲ್ಲಿ ಅವರು ಕೆ. ವಿ. ಪುಟ್ಟಪ್ಪ, ಎಂ.ಎ. ಅಂತ

ಹೆಸರು ಹಾಕಿದ್ದರು ತಾನೇ — ಅಂಥ ಒಂದು ಎಂ.ಎ. ಎಂದಾದರೂ ನನ್ನ ಹೆಸರಿಗೆ ಜೋಡಿಸಿಕೊಳ್ಳಬೇಕು ಎಂಬುದೊಂದು ಬಾಲಿಶ ಆಸೆ. ಜತೆಗೇ ಅಂಥ ಒಳ್ಳೆಯ ಗದ್ಯವನ್ನು ಬರೆಯಬೇಕು ಎಂಬುದೂ ಇತ್ತೆನ್ನಿ. ಅದಕ್ಕೋಸ್ಕರ ಹೆಣಗಲು ಸಿದ್ಧನಾಗಿದ್ದೆ. ಅನುವಾದ ಕಾರ್ಯ ಸುಲಭ. ಗುರುನಾಥ ಜೋಶಿಯವರು ಅದೆಷ್ಟೋ ಹಿಂದೀ ಬಂಗಾಳೀ ಕೃತಿಗಳನ್ನು ಅನುವಾದಿಸಿದ್ದರು. ಆದ್ದರಿಂದ ಅವರು ಹಾಕಿದ ಸುಲಭದ ದಾರಿ ಹಿಡಿದೆ. 'ರಮಾನಾಥ'ವೇ 'ಚಂದ್ರಹಾರ' ವೆಂಬ ಹೆಸರಲ್ಲಿ ಎರಡನೇ ಮುದ್ರಣವನ್ನೂ ಕಂಡಿತು. ಆದರೆ ಪ್ರಕಾಶಕರು ನನಗೆ ತಿಳಿಸಲೂ ಇಲ್ಲ, ಆ ಬಗ್ಗೆ ನನಗೇನನ್ನಾದರೂ ಸಲ್ಲಿಸುವುದು ಧರ್ಮವೆಂದು ಬಗೆಯಲೂ ಇಲ್ಲ. ನಾನೇ ಧಾರವಾಡದಲ್ಲಿ ಅವರ ಅಂಗಡಿಗೆ ಹೋದಾಗ 'ಏನು ಸ್ವಾಮಿ ನನ್ನ ಕಾದಂಬರಿಗೆ ಬೇರೆ ಹೆಸರಿಟ್ಟಿದ್ದೀರಿ? ನನಗೊಂದು ಪ್ರತಿ ನೋಡಲಿಕ್ಕಾದರೂ ಕೊಡುತ್ತೀರಾ ? ಎಂದು ಕೇಳಿದೆ. ಪಿಟ್ಟೆನ್ನದೆ ದೇಶಾವರಿ ನಗೆ ನಕ್ಕೋ ಒಂದು ಪ್ರತಿ ದಯಪಾಲಿಸಿದರು.

'ಜೀವನ'ದಲ್ಲಿ ಮಾಸ್ತಿಯವರೇ ನನ್ನ ಕವಿತೆ (ಅನುವಾದ) ಪ್ರಕಟಿಸಿದರೆಂದ ಮೇಲೆ ಧೈರ್ಯ ಹೆಚ್ಚಿತು. ಧಾರವಾಡದಲ್ಲಿ ಪ್ರಕಟವಾಗುತ್ತಿದ್ದ 'ಜಯಂತಿ' ಮಾಸ ಪತ್ರಿಕೆಗೂ ಒಂದೆರಡು ಲೇಖನ ಕಳಿಸಿದೆ. ಸಂಪಾದಕರು ವಾಪಸು ಮಾಡಿದರು. ಬರಿದೇ ವಾಪಸು ಮಾಡಲಿಲ್ಲ. ಒಂದು ಸಂಚಿಕೆಯಲ್ಲಿ ಈ ಕಥೆಯನ್ನು ಯಾಕೆ ವಾಪಸು ಮಾಡಿದೆ ಎಂದು 'ಕಿವಿಮಾತು' ಅಂಕಣದಲ್ಲಿ ಬರೆದೇ ಬಿಟ್ಟರು, ಸಿಟ್ಟಾದೆ. ಅದೇ ಕಥೆಗೆ ಆ ಮೇಲೆ ಉಡುಪಿಯಲ್ಲಿ ಬಹುಮಾನ ಬಂದದ್ದು. ಹೀಚಿನಲ್ಲಿರುವ ಬರಹಗಾರರು ನಿರಾಶರಾಗಬಾರದು ತಾನೇ ? ಯಾರೋ ಕೊಳ್ಳುತ್ತಾರೆ ಯಾರೋ ಬಿಡುತ್ತಾರೆ, ಹೀಗೆ ಸ್ಥಿತಪ್ರಜ್ಞರಾಗಬೇಕು. 'ಜಯಕರ್ನಾಟಕ' ಪ್ರಕಟನೆ ನಿಲ್ಲಿಸಿದ ಮೇಲೆ ಧಾರವಾಡದಲ್ಲಿ ಶ್ರೀರಂಗ ಮುಂತಾದವರ ಸಾಹಿತ್ಯಿಕ ಸಹಕಾರದಿಂದ ಬೆಟಗೇರಿಯವರು ಪ್ರಕಟಿಸಿದ ಜಯಂತಿಯೇ ಅಲ್ಲಿನ ಸಾಹಿತ್ಯ ಪತ್ರಿಕೆ — ಕೆಲವರ್ಷ ಒಳ್ಳೇ ಹೆಸರು ಗಳಿಸಿತು. ಗಳಿಸಿದ್ದು ಹೆಸರು ಮಾತ್ರವಾದ್ದರಿಂದ ಮೂರು ವರ್ಷದಲ್ಲಿ ನಿಂತೂ ಹೋಯಿತು. ನಿಜಕ್ಕೂ ಬರವಣಿಗೆಯಲ್ಲಿ ಅಂಬೆಗಾಲಿಕ್ಕುವ ನಾನು ಇಂಥ ಪ್ರತಿಷ್ಠಿತ ಸಾಹಿತ್ಯ ಪತ್ರಿಕೆಗಳಲ್ಲಿ ಸ್ಥಳಪಡೆಯಲು ಯತ್ನಿಸಿದ್ದು ಒಂದು ಬಗೆಯ ಧಾರ್ಷ್ಟ್ಯವೇ. ನಮ್ಮ ಜಿಲ್ಲೆಯಲ್ಲಿ ಉಡುಪಿಯಲ್ಲೇ ಬೇಕಾದಷ್ಟು ಜಿಲ್ಲಾ ಪರಿಮಿತಿಯ ಪತ್ರಿಕೆಗಳು ಇದ್ದವು. ಅವುಗಳಲ್ಲಿ ಧಾರಾಳವಾಗಿ ಎಡೆ ಇತ್ತು. ಇಂಥ ಪತ್ರಿಕೆಗಳೇ ಆ ಮೇಲೆ ನನ್ನ ಬರವಣಿಗೆಯ ತರಬೇತಿ ಶಾಲೆಗಳಾದುವು. ಉಡುಪಿಯಲ್ಲಿ ದಿ। ಹೊನ್ನಯ ಶೆಟ್ಟರು ಹೊರಡಿಸುತ್ತಿದ್ದ (ಶೈಕ್ಷಣಿಕ ಮಾಸಿಕ)ಗಳಲ್ಲಿ ಕೆಲವು ಪುಟಗಳ ಏಕಸ್ವಾಮ್ಯವೇ ನನ್ನದಾಗಿತ್ತು. ಕಾಂಗ್ರೆಸ್ ಚಳವಳಿಯ ಕಾಲದಲ್ಲಿ – 1930ರ ದಶಕದಲ್ಲಿ – ಹುಟ್ಟಿದ 'ನವಯುಗ' ಸಾಪ್ತಾಹಿಕಕ್ಕೆ ಆಗ ಲೇಖಕರೂ ಆಗಿದ್ದ ಶ್ರೀ ಕೆ. ಕೆ. ಶೆಟ್ಟರು ಪ್ರಥಮ ಸಂಪಾದಕರು; ಕೆಲವರ್ಷ ಮಾತ್ರ ನಡೆಸಿ ಅದನ್ನು ಹೊನ್ನಯ್ಯ ಶೆಟ್ಟರಿಗೇ ವರ್ಗಾಯಿಸಿದರು. ಅದನ್ನು ವ್ಯವಹಾರ ಚತುರರಾದ ಹೊನ್ನಯ ಶೆಟ್ಟರು ಎರಡು ದಶಕಗಳಷ್ಟು ಕಾಲ ನಡೆಸಿಯೇ ನಡೆಸಿದರು. ಅವರದ್ದೇ ನವಯುಗ ಪ್ರೆಸ್, ನವಯುಗ ಎಂಟರ್‌ಪ್ರೈಸಸ್, ನವಭಾರತ ಪುಸ್ತಕ ಭಂಡಾರ ಇಂದಿಗೂ ಉಡುಪಿಯಲ್ಲಿ ಜೀವಂತ ಇರುತ್ತದೆ. ಆದರೆ 'ನವಯುಗ' ಮಾತ್ರ ಇಲ್ಲ.

ಹೊನ್ನಯ ಶೆಟ್ಟರು ಅತ್ಯಂತ ಸ್ನೇಹಶೀಲರು, ನನ್ನ ಅಪ್ರಸಿದ್ಧಿಯ ಕಾಲದಲ್ಲಿ ನನಗೆ ಪೋಷಣೆ ಕೊಟ್ಟವರು, ಉತ್ಸಾಹ ತುಂಬಿಸಿದವರು. ಅವರೂ ಪ್ರಾಥಮಿಕ ಶಾಲೆಯ ಉಪಾಧ್ಯಾಯರಾಗಿದ್ದುದರಿಂದಲೆ ಏನೋ ನಮ್ಮ ಗೃಹಮಿತ್ರತ್ವ ಚೆನ್ನಾಗಿ ಕೂಡಿಬಂತು. ಹೊನ್ನಯ ಶೆಟ್ಟರು ಸ್ವತಃ ಮಕ್ಕಳ ಸಾಹಿತ್ಯ ರಚಿಸಿದ್ದಾರೆ. ಒಂದೇ ಒಂದು ಕೃತಿಯಾದರೂ ಅವರ 'ಮುಗುಳು' ಮಕ್ಕಳ ಮನಸ್ಸನ್ನು ತಿಳಿದುಕೊಂಡು ಬರೆದಂಥ ಕೃತಿ. ನಾನು ಏನು ಬರೆದರೂ ಪ್ರಕಟಿಸಿದ ಮಹನೀಯರಾದ ಇವರ ಮೇಲೆ ನನಗೂ ಪ್ರೇಮ ಎಲ್ಲಿಯ ವರೆಗೆಂದರೆ ಅವರ ಪ್ರಥಮ ಪುತ್ರಿಯ ವಿವಾಹದ ನಿಶ್ಚಿತಾರ್ಥಕ್ಕೆ ನನ್ನನ್ನೂ ಪುತ್ತೂರಿಗೆ ಕರೆದುಕೊಂಡು ಹೋಗಿದ್ದರು. ಅವರ ಸಂಸಾರದ ಸುಖ-ದುಃಖಗಳನ್ನು ನನ್ನ ಹತ್ತಿರ ತೋಡಿಕೊಂಡು ಪರಾಮರ್ಶೆ ಮಾಡುತ್ತಿದ್ದರು. ಒಮ್ಮೆ 'ನವಯುಗ' ಆಪತ್ತಿನಲ್ಲಿ ಸಿಲುಕಿತು. ಬರಹಗಾರ ಸಂಪಾದಕರಾಗಿದ್ದ ಶ್ರೀ ಎಂ. ವಿ. ಹೆಗ್ಡೆಯವರು ಮತಭೇದದಿಂದ ನವಯುಗ ಬಿಟ್ಟು ಮಂಗಳೂರಿಗೆ ತೆರಳಿದರು. ಹೊನ್ನಯ ಶೆಟ್ಟರು ತಬ್ಬಿಬ್ಬಾದರು. ಏಕೆಂದರೆ ಅವರು ಆಡಳಿತ ಸಂಪಾದಕರೇ ಹೊರತು ಪತ್ರಿಕೆಯ ಪುಟ ತುಂಬಿಸುವ ಸಂಪಾದಕರಾಗಿರಲಿಲ್ಲ. ನಾನು ಅವರ ಆಣತಿಯಂತೆ ನಾಲ್ಕು ವಾರ ನವಯುಗದ ಅನಾಮಿಕ ಸಂಪಾದಕನಾಗಿ ಆ ಪತ್ರಿಕೆಯ ಜಾಹೀರಾತುಗಳ ನಡುವಿನ ಎಲ್ಲ ಪುಟಗಳನ್ನು ಬೇರೆ ಬೇರೆ ಗುಪ್ತನಾಮಗಳಲ್ಲಿ ತುಂಬಿಸಿಕೊಟ್ಟೆ. ಆ ಮೇಲೆ ನನ್ನ ಹಳೇ ವಿದ್ಯಾರ್ಥಿಯಾದ ಎಸ್. ಎಲ್. ನಾರಾಯಣ ಭಟ್ಟರು ಅದರ ಸಂಪಾದಕರಾದರು ಕೆಲವರ್ಷ. ಉಡುಪಿಯ ರಾಜಕೀಯದ 'ಚದುರಂಗ'ದಲ್ಲಿ ಪತ್ರಿಕೆಗಳೂ ಒಂದು ದಾಳವಾಗಿದ್ದ 1950ರ ದಶಕದಲ್ಲಿ ಎಸ್ಸೆಲ್ 'ರಾಯಭಾರಿ' ಎಂಬ ಪ್ರತಿಪಕ್ಷ ಪತ್ರಿಕೆಯ ಸಂಪಾದಕರಾಗಿ ರಾಯಭಾರಿ ಎಸ್ಸೆಲ್‌ರೆಂದೇ ಖ್ಯಾತರಾದರು. ಅವರಿಗೂ ಹೊನ್ನಯ ಶೆಟ್ಟರದೇ ಗರಡಿ. 'ಅಂತರಂಗ' ಹೊನ್ನಯ ಶೆಟ್ಟರ ಎರಡನೇ ಪತ್ರಿಕೆ – 1930ರ ದಶಕದಲ್ಲಿ ಅಖಿಲ ಕರ್ನಾಟಕ ವ್ಯಾಪ್ತಿಗಳಿಸಿಕೊಂಡಿದ್ದು ಈ ಒಂದಾಣೆ ಸಾಪ್ತಾಹಿಕವನ್ನು ಒಂದು ಸಾಹಿತ್ಯಿಕ ಪತ್ರಿಕೆಯಂತೆ ನಡೆಸಲು ಹೊನ್ನಯ

ಶೆಟ್ಟರು ಮುಂದಾದರು. ಅದಕ್ಕೂ ಗಿರಾಕಿಗಳು ಸಿಗದಿರುವ ಸಂದರ್ಭದಲ್ಲಿ ಅವರೊಂದು ಪುಸ್ತಕ ಪತ್ರಿಕೆಯಾಗಿ ಮಾಡಿದರು. ಅರ್ಥಾತ್ ವಾರಕ್ಕೊಂದು 48 ಪುಟಗಳ ಪುಸ್ತಕವನ್ನೇ ಪತ್ರಿಕೆಯಂತೆ ಹೊರಡಿಸುವುದು. ನನ್ನ ಅನೇಕ ಕಥೆ–ಕವಿತೆಗಳು ಪುಸ್ತಕ ರೂಪದಲ್ಲಿ ಹೊರಬರಲು ಈ ಯೋಜನೆ ಅನುಕೂಲವಾಯಿತು. 'ವರ್ತಮಾನ ಕಾಲದ ನಾಲ್ವರು ಮಹಾನುಭಾವರು'. (ಜೀವನಚರಿತ್ರೆ), 'ಯುಗವಾಣಿ' (ಕವಿತೆ). 'ಕಾಲವೇ ಬದಲಾಗಿದೆ' (ಕಥೆ), 'ಫಂಟಮಾರಾ' (ಕಾದಂಬರೀ ಅನುವಾದ) ಎಲ್ಲವೂ ಅಂತರಂಗದ ಸಾಪ್ತಾಹಿಕ ಗ್ರಂಥರೂಪದಲ್ಲಿ ಬೆಳಕು ಕಂಡವು. 1950ರಲ್ಲಿ ಇಟಾಲಿಯನ್ ಕಾದಂಬರಿ 'ಫಂಟಮಾರಾ'ದ ಸಾಪ್ತಾಹಿಕ ಅನುವಾದ ಹೊನ್ನಯ ಶೆಟ್ಟರಿಂದಲೇ ಪ್ರಕಟಗೊಂಡಿತು. ಇದೊಂದು ಅನುವಾದ ನನ್ನ ಸಾಹಿತ್ಯ ಜೀವನದ ಆಯಾಮವನ್ನು ವರ್ಣ ಮಯವಾಗಿ ಮಾಡಿದ ಸಂಗತಿ ಉಲ್ಲೇಖನೀಯವಾದದ್ದೆಂದು ಭಾವಿಸಿ ಇಲ್ಲಿಯೇ ಹೇಳಿಮುಗಿಸುತ್ತೇನೆ.

'ಫಂಟಮಾರಾ' (ಸಿಜಕ್ಕೆ ಫೊಂತಮಾರಾ) ಇಟಲಿಯಲ್ಲಿ ಫಾಸಿಸ್ಟ್ ಕಾಲಘಟ್ಟದಲ್ಲಿ ನಡೆದ ರೈತ ಬಂಡಾಯದ ಕಾದಂಬರಿ. ಇದನ್ನು ಬರೆದ ಇನ್ಯಾತ್ಸಿಯೋ ಸಿಲೋನೆ ಮೊದಲು ಕಮ್ಯೂನಿಸ್ಟನಾಗಿದ್ದು, ಆ ಮೇಲೆ ನಿರಸನಗೊಂಡು ಅಲ್ಲಿಂದ ಹೊರಬಿದ್ದವರು. ಮುಸೋಲಿನಿಯ ಫಾಸಿಸ್ಟ್ ರಾಜಕೀಯಕ್ಕೆ ಹೊರಗಾಗಿ ದೇಶಬಿಟ್ಟು ಹೋದವರು. ಕಾದಂಬರಿ ಮೊದಲು ಪ್ರಕಟವಾದುದು ಜರ್ಮನ್ ಭಾಷೆಯಲ್ಲಿ, ಆ ಮೇಲೆ ಇಂಗ್ಲಿಷ್, ಇಟಾಲಿಯನ್‌ನಲ್ಲಿ, ಸಿಲೋನೆಗೆ ವಿಶ್ವಸಾಹಿತ್ಯದಲ್ಲಿ ಸ್ಥಾನ ತಂದುಕೊಟ್ಟ ಈ ಕಾದಂಬರಿ ಕಾಲ್ಪನಿಕವಾದ ಯಾವುದೋ ಗ್ರಾಮದಲ್ಲಿನ ರೈತರ ಮನೋಧರ್ಮವನ್ನು ಬಲು ಸ್ವಾರಸ್ಯವಾಗಿ ಸಾಹಿತ್ಯದ ಧಾಟಿಯಲ್ಲಿ ಬಿಂಬಿಸುವಂಥದಾಗಿ ಭಾರೀ ಹೆಸರು ಮಾಡಿತು. ನಾಲ್ಕು ವರ್ಷ ಕೆಳಗೆ ನರಗುಂದದ ರೈತ ಬಂಡಾಯದ ಬಳಿಕ ನನ್ನ ಅನುವಾದಕ್ಕೂ ಒಂದು ಬೆಲೆ ಬಂತು, ಅದನ್ನು ನಾಟಕ ಮಾಡುತ್ತೇವೆ ಅಂದವರಿದ್ದಾರೆ. ಇನ್ನೊಮ್ಮೆ ಮುದ್ರಿಸುತ್ತೀರಾ? ಪ್ರತಿಗಳಿಲ್ಲವೆ? ಎಂದು ಕೇಳಿದವರೂ ಇದ್ದಾರೆ.

ಅನುವಾದಿತ ಕಾದಂಬರಿಯ ಒಂದು ಪ್ರತಿಯನ್ನು ಸಿಲೋನೆಗೆ ಕಳಿಸಿಕೊಟ್ಟೆ. ಮುಸೋಲಿನಿಯ ಅವಸಾನದ ಬಳಿಕ ಇಟಲಿಯ ಗಣರಾಜ್ಯದಲ್ಲಿ ಅಷ್ಟು ಹೊತ್ತಿಗೆ ಸಿಲೋನೆ ಸನ್ಮಾನ್ಯ ನಾಗರಿಕರೆನಿಸಿದ್ದರು. ಅವರ ವಿಳಾಸವನ್ನು ಪೆಂಗ್ವಿನ್ ಪ್ರಕಾಶಕರ ಮೂಲಕ ಪಡೆದು (ಅಂದರೆ ನನ್ನ ಅನುವಾದ ಇಂಗ್ಲಿಷ್ ಅನುವಾದದಿಂದ ಹುಟ್ಟಿದ್ದು) ಸಿಲೋನೆಗೆ ಪ್ರತಿ ಕಳಿಸಿದಾಗ ಆತನ ಐರಿಷ್ ಮಡದಿ ಇಂಗ್ಲಿಷಿನಲ್ಲಿ ನನಗೆ ಪತ್ರಬರೆದು ತಮ್ಮ ಸಂತೋಷ ವ್ಯಕ್ತಗೊಳಿಸಿದ್ದಳು. ನಾನು ಇಟಾಲಿಯದಲ್ಲಿ ಅಧ್ಯಯನ ಮಾಡಲು 1962ರಲ್ಲಿ ಹೋಗಿದ್ದಾಗ ನಮ್ಮ ರೋಂ ನಗರದ ರಾಯಭಾರಿ ಕಚೇರಿಯ ಕಾರ್ಯದರ್ಶಿಯಾಗಿದ್ದ ದೇವರಾಯರ ಮನೆಯಲ್ಲಿ ಸಿಲೋನೆಯ ಪತ್ನಿ ಭೆಟ್ಟಿಯಾಗಿ ಕನ್ನಡದ ಬಗ್ಗೆ ನನ್ನ ಅನುವಾದದ ಬಗ್ಗೆ ಕುಶಲ ಪ್ರಶ್ನೆ ಕೇಳಿದರು. ಸಿಲೋನೆಯವರದು ದೇವರಾಯರ ಹತ್ತಿರವೇ ಮಾತು — ಅದೂ ಸ್ವಲ್ಪ ಸ್ವಲ್ಪ. ದರೀನಾ ಮಾತಾಳಿ, ಇಂಗ್ಲಿಷ್ ಬಲ್ಲವಳಾದ್ದರಿಂದ ನಾನೂ ಸಲುಗೆಯಿಂದಲೇ ಮಾತಾಡಿದೆ. ಎಷ್ಟು ಪ್ರತಿ ಮಾಡಿಸಿದಿ? ನಿನಗೇನು ಸಿಕ್ಕಿತು? ವಿಮರ್ಶೆ ಹೇಗೆ ಬಂತು? ಹೀಗೆ ಪ್ರಶ್ನೆ ಕೇಳಿದರು. ಕನ್ನಡದ ಶೋಚನೀಯ ಪರಿಸ್ಥಿತಿ ವಿವರಿಸಿದೆ. ಏಕೆಂದರೆ ಪ್ರಕಾಶಕರಿಂದ ಏನನ್ನೂ ಅಪೇಕ್ಷಿಸದೇನೇ ನನ್ನ ಅನೇಕ ಕೃತಿಗಳು ಪ್ರಕಟವಾಗಬೇಕಿತ್ತು. ಪ್ರತಿಫಲ ಕೇಳಿದರೆ ಪ್ರಕಟನೆಯೇ ಇಲ್ಲವಾಗುತ್ತಿತ್ತು. 30 ವರ್ಷ ಕಳೆದ ಮೇಲೂ ಫಂಟಮಾರಾದ ಪ್ರತಿಗಳು ಉಳಿಯುವ ಸಂದರ್ಭ ಇದ್ದುದರಿಂದ ಮಾರಾಟದ ಪ್ರಶ್ನೆ ಎಲ್ಲಿ ಬಂತು? ಹೊನ್ನಯ ಶೆಟ್ಟರದೂ ನನ್ನದೂ ಒಂದು ಅನಾರ್ಥಿಕ ಸಂಬಂಧ; ನನ್ನ ಬರೆಯುವ ಗೀಳನ್ನು ಸಂಪೂರ್ಣವಾಗಿ ತೃಪ್ತಿಪಡಿಸಿದ ಅವರ ಪ್ರಕಾಶನ ಉದ್ಯಮದಲ್ಲಿ ನಾನು ಯಾವ ಆರ್ಥಿಕ ಫಲವನ್ನೂ ಬೇಡಿದವನಲ್ಲ. ಅವರಾಗಿ ಕೊಟ್ಟಿದ್ದಿದೆ. ಮದರಾಸಿನ ಅಮೇರಿಕನ್ ವಾರ್ತಾ ಸಂಸ್ಥೆ (ಯು.ಎಸ್.ಐ.ಎಸ್.) ಕೆಲವರ್ಷ ದೇಶಭಾಷೆಯಲ್ಲಿನ ಮುಖ್ಯ ಗ್ರಂಥಗಳನ್ನು ಅನುವಾದಿಸಲು ಪ್ರಕಾಶಕರಿಗಿಷ್ಟು, ಲೇಖಕನಿಗಿಷ್ಟು ಎಂದು ಸಂಭಾವನೆ ಕೊಡುವ ಯೋಜನೆ ಹೂಡಿದಾಗ ಹೊನ್ನಯ ಶೆಟ್ಟರನ್ನು ಪುಸಲಾಯಿಸಿ ಕನ್ನಡಕ್ಕೆ ಕೆಲ ಅನುವಾದಗಳನ್ನು ಒದಗಿಸಿದೆ. ಡ್ಯೂಯಿಯ 'ಶಿಕ್ಷಣ ಮತ್ತು ಸಂಸ್ಕೃತಿ', 'ಅಮೇರಿಕದ ಆರು ಕತೆಗಳು', ಕೊಸ್ಲರನ 'ನಡುಹಗಲಲ್ಲಿ ಕಗ್ಗತ್ತಲೆ' – ಈ ಮೂರನ್ನು ಅನುವಾದ ಮಾಡಿದಾಗ ಪ್ರಥಮ ಬಾರಿಗೆ ನನ್ನ ಮಾಹೆಯಾನ ಲೆಕ್ಚರ್‌ಗಿರಿ ಸಂಬಳದ (100 ರೂಪಾಯಿ) ಐದು ಪಟ್ಟು ಗ್ರಂಥಸಂಭಾವನೆ ದೊರೆತದ್ದು ಅತ್ಯಂತ ಸಂತೋಷವನ್ನುಂಟುಮಾಡಿತು.

ಶ್ರೀಮತಿ ದರೀನಾ ಸಿಲೋನೆಯನ್ನು ಸಿಲೋನೆ ಮೃತನಾದ ಮೇಲೂ ಎರಡೆರಡು ಬಾರಿ ಕಾಣುವ ಸಂದರ್ಭ ಒದಗಿಬಂತು. ಒಮ್ಮೆ ಇಂಡಿಯಾದಲ್ಲೇ ಉಡುಪಿಯಲ್ಲೇ 1978ರ ಸುಮಾರಿಗೆ ಒಂದು ದಿನ ಮಣಿಪಾಲದ ವ್ಯಾಲಿವ್ಯೂನಿಂದ ಫೋನ್ ಕರೆ — ಪ್ರೊಫೆಸರ್ ಭಟ್ಟರೇ, ನಾನು ದರೀನಾ ಪರಿಚಯ ಆಯಿತೇ? ನನಗೆ ಪರಮಾಶ್ಚರ್ಯ! ಇದೇನು ಹೀಗೆ? ಎಂದು ಬಂದಿರಿ? ಹೇಗೆ ಬಂದಿರಿ? ಎಂದು ಕೇಳಿದ ಕೂಡಲೇ ಗಡಿಬಿಡಿಯಲ್ಲಿ ಅಯ್ಯೋ ಅದೊಂದು ಕಥೆ, ನಿಮಗೆ ಹೇಳಲೇಬೇಕೇನು ಬರುತ್ತೇನೆ ಎಂದಳು. ರೋಮನ್ನೇ ಕಂಡು 16 ವರ್ಷಗಳ ತರುವಾಯ ಮತ್ತೊಮ್ಮೆ ಭೆಟ್ಟಿ. ಆಗ ಸ್ಫುರದ್ರೂಪಿ ಎನಿಸಿದ್ದ ದರೀನಾ ಈಗ ಮುದುಕಿ

ಯಾಗಿದ್ದಾಳೆ. ಮುಖ ಸುಕ್ಕುಗಟ್ಟಿದೆ. ಮಾತು ಇತಾಲಿಯನ್ ಸಂಪರ್ಕದಿಂದ ದ್ರುತಗತಿಯನ್ನು ಸಾಧಿಸಿದೆ. ಐದು ಹತ್ತು ಮಿನಿಟಿನಲ್ಲಿ ತನ್ನ ಗೋಳ್ಗತೆ ಹೇಳಿ ಮುಗಿಸಿದಳು. ಆಕೆಯ ಮನಸ್ಸು ಯಾವುದೋ ಗುಪ್ತ ಭೀತಿಯಿಂದ ಆವೃತವಾದಂತೆ ಕಂಡಿತು. ತಾನು ಸಿಲೋನೆಯ ಕೃತಿ – ಪ್ರಬಂಧ – ಪತ್ರಗಳಿಗೆ ಆರ್ಕೈವ್ಸ್‌ಗಳಿಗೆ ಉತ್ತರಾಧಿಕಾರಿಯೆನಿಸಿದರೂ ಕೂಡ ಅವನ್ನೆಲ್ಲ ಯಾರೋ ಸರ್ಕಾರದ ನೆರವು ಬೇಡಿ ಲಪಟಾಯಿಸಲು ಪ್ರಯತ್ನ ಮಾಡುತ್ತಿದ್ದಾರೆ; ತನ್ನನ್ನು ಸತಾಯಿಸುತ್ತಿದ್ದಾರೆ ಎಂಬ ದಿಗಿಲಿಂದ ತಪ್ಪಿಸಿಕೊಳ್ಳಲು ಭಾರತ ಯಾತ್ರೆ ಕೈಗೊಂಡಂತೆ ಇತ್ತು. ಇಲ್ಲೂ ಕೇರಳದ ಯಾರೋ ಒಬ್ಬರು ರೋಮ್‌ನಲ್ಲಿ ತನ್ನಿಂದ ಪಡೆದ ಮಿಲಿಯಾಂತರ ಲೀರೆಗಳ ಬಾಬತ್ತಿನ ಋಣವನ್ನು ತೀರಿಸದೆ ಸತಾಯಿಸುತ್ತಿದ್ದಾರೆ. ನನಗಿನ್ನು ಪತ್ರ ಬರೆಯುವುದಾದರೆ ನೀನು ಮುಂಬಯಿಯ ಇಂಥ ಇತಾಲಿಯನ್ ಪಾದ್ರಿಗೆ ಕಳಿಸಿಕೊಡು. ಅವರು ಹೇಗಾದರೂ ನನಗೆ ಮುಟ್ಟಿಸುತ್ತಾರೆ. ಇತಾಲಿಯನ್ ಅಂಚೆ ಖಾತೆ ನನಗೆ ಮೋಸಮಾಡುತ್ತದೆ. ಅದೇ ಸಂದರ್ಭದಲ್ಲಿ ಭೂತಗಳ ಚಿತ್ರೀಕರಣಕ್ಕೆ ಬಂದ ಪ್ರೊ। ಮರೊತ್ತಿಯನ್ನು ಕಂಡು 'ನನಗೆ ಅವರನ್ನು ಭೆಟ್ಟಿ ಮಾಡಿಸಬೇಡಿ. ನಾನು ದೂರದಲ್ಲೇ ಇದ್ದು ನೋಡುತ್ತೇನೆ' ಅಂದಳು. ಇತಲಿ. ಇತಾಲಿಯನರು ಅಂದರೆ ಆಕೆಗೆ ಜುಗುಪ್ಸೆ ಬರುವ ಏನೋ ಸಂಗತಿ ನಡೆದಿರಬೇಕು. ಅದೇನೆಂದು ನನಗರಿಯದು. ಆ ಮೇಲೆ ನಾನು 1982ರಲ್ಲಿ ಇತಾಲಿಯಕ್ಕೆ ಹೋದಾಗ ಫೋನ್ ಮಾಡಿದೆ. ಪಾಪ! ನಾನಿರುವಲ್ಲಿಗೆ ಬಂದು ಮತ್ತೆ ಸಿಲೋನೆ ಆರ್ಕೈವ್ಸ್ (ಪತ್ರಾಗಾರ)ದ ಕುರಿತು ನನಗೆ ಒಂದು ರೆಸ್ಟೋರೆಂಟಿನಲ್ಲಿ ಭೋಜನ ಕೊಡುವ ವೇಳೆ ಕಥೆ ಬಿಡಿಸಿದಳು. ಎನ್‌ಕೌಂಟರ್ ಎಂಬ ಇಂಗ್ಲಿಷ್ ಪ್ರಗತಿಶೀಲ ಪತ್ರಿಕೆಯಲ್ಲಿ ಸಿಲೋನೆಗೆ ಕೊನೆಗಾಲದಲ್ಲಿ ತಾಪತ್ರಯಗಳು ಇದಿರಾದ್ದನ್ನು ಬರೆದಿದ್ದಾರಲ್ಲ ಎಂದೆ. ಆಕೆ ಕ್ರುದ್ಧಳಾಗಿ ಎಲ್ಲಿದೆ ಆ ಸಂಚಿಕೆ ನಾನು ನೋಡಬೇಕು. ಬೇಕಾದಷ್ಟು ಆರೈಕೆ ಮಾಡಿದ್ದೇವೆ; ಎಲ್ಲಾ ಸುಳ್ಳು ಸುಳ್ಳೇ ಬರೆದು ನನ್ನ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಬೇಸರಿಸಿದಳು. 'ಫೊಂತಮಾರಾ' ಇನ್ನೊಮ್ಮೆ ಅನುವಾದಿಸಬೇಕೆಂದು ಮನಸ್ಸಾಗುತ್ತಿದೆ. ಎಂದು ಹೇಳಿದೆ. ಅದರ ಒಂದು ತಿದ್ದಿದ ಹೊಸ ಆವೃತ್ತಿಯೂ ಇರುವುದೆಂಬ ಸೂಚನೆ ಕೊಟ್ಟು ದರೀನಾ ನನ್ನನ್ನ ನನ್ನ ವಸತಿಸ್ಥಾನದಲ್ಲಿ ಬಿಟ್ಟು, ರೋಮ್‌ನ ಕತ್ತಲೊಳಗೆ ಮಾಯವಾದಳು. 1962ರಲ್ಲಿ ನನ್ನ ಪ್ರಥಮ ಇತಾಲಿಯಾ ಪ್ರವಾಸ ಸಂದರ್ಭದಲ್ಲಿ ಇತಾಲಿಯಾದ ತೆಂಕಣ ಹಳ್ಳಿಗಳ ಗ್ರಾಮೀಣ ಅರ್ಥ ಪರಿಸ್ಥಿತಿಯನ್ನು ಸಾಕಷ್ಟು ಅಧ್ಯಯನ ಮಾಡಿದ್ದೇನಾದರೂ 'ಫೊಂತಮಾರಾ'ದಲ್ಲಿ ನಮೂದಿಸಿದ ಬಗೆಯ ಹಳ್ಳಿಗಳನ್ನು – ಪೊತೆನ್ಸಾ. ಅವಿಲ್ಯಾನೊ. ರಯೋನೆರೋ ಮುಂತಾದ ಬೆಟ್ಟಕೊಳ್ಳಗಳ ನಡುವಣ ಕುಗ್ರಾಮಗಳನ್ನು ಪ್ರತ್ಯಕ್ಷ ಸಂದರ್ಶಿಸಿದ್ದು 1982ರ ಎರಡನೆ ಸಂದರ್ಶನದಲ್ಲಿ. ಇತಾಲಿಯದ ಬಡಗಣ ಭಾಗ ಶ್ರೀಮಂತಿಕೆಯಲ್ಲಿ ಯುರೋಪಿನ ಮುಂಬರಿದ ದೇಶಗಳಿಗೆ ಸರಿಸಾಟಿಯಾದರೂ ತೆಂಕಣ ಇತಾಲಿಯಾ ಇನ್ನೂ ಸಾಕಷ್ಟು ದುಃಸ್ಥಿತಿಯಲ್ಲೇ ಇದೆ. ಸಾಲದ್ದಕ್ಕೆ ಆಗಿಂದಾಗ ಭೂಕಂಪಗಳು. ಜ್ವಾಲಾಮುಖಿಗಳು ಬೇರೆ ಈ ಭಾಗಕ್ಕೆ ಶಾಪ ಬಡಿದಂತೆ ಬಂದೆರಗುತ್ತವೆ. ಸಾಮಾಜಿಕರು ಇನ್ನೂ ಹಳೆಯ ಶ್ರದ್ಧಾವಂತಿಕೆಯ ಜಗತ್ತಿಗೇ ಜೋತುಬಿದ್ದಿರುವುದರಿಂದ ಪ್ರಗತಿ ಕುಂಠಿತವಾಗಿದೆ. ಅಂಥ ಭಾಗದ ಗ್ರಾಮ ಜೀವನದ ಮಣ್ಣಿನ ಮೂರ್ತಿ ಹೊಡೆಯುವ ಯಥಾವತ್ ಚಿತ್ರ – ಇತಾಲಿಯನ್ 'ಗ್ರಾಮಾಯಣ' – ಸಿಲೋನೆಯ ಬರಹಗಳಲ್ಲಿ ಮೂಡಿ ಬಂದು ವಿಶ್ವವಿಖ್ಯಾತವಾಗಿದೆ.

1950ರಲ್ಲಿ ಅರ್ಥಶಾಸ್ತ್ರದ ಕುರಿತು ಒಂದು ಪಠ್ಯಪುಸ್ತಕ ಬರೆದು ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದಾಗ ಅದಕ್ಕೆ ಐನೂರು ರೂಪಾಯಿಗಳ ಬಹುಮಾನ ದೊರೆಯಿತು. ಸುಮಾರು 250 ಪುಟಗಳ ಈ ಗ್ರಂಥವನ್ನು ಪ್ರಕಟಿಸುವವರು ಯಾರೂ ಕಾಣಸದೆ ನಾನೇ ಮಣಿಪಾಲ ಪ್ರೆಸ್ಸಿನಲ್ಲಿ ಮುದ್ರಣಕ್ಕೆ ಹೊರಟೆ. ಆಗ ನಮ್ಮಲ್ಲಿಗೆ ಬಂದಿದ್ದ ಎ. ಎನ್. ಮೂರ್ತಿರಾಯರಿಗೆ ಮುದ್ರಿತ ಹಾಳೆಗಳನ್ನು ತೋರಿಸಿ ಅವರು ಇದಕ್ಕೆ ಕಾವ್ಯಾಲಯದ ಚಿದಂಬರಂ ಅವರ ಹತ್ತಿರ ಹೇಳಿದರು. ಹೀಗಾಗಿ ನನ್ನ ಮೊದಲ ಗ್ರಂಥ ಧಾರವಾಡದಲ್ಲಿ, ಎರಡನೆಯದು ಹುಬ್ಬಳ್ಳಿಯಿಂದ. ಮೂರನೆಯ 'ಅರ್ಥಶಾಸ್ತ್ರ' ಮೈಸೂರಿನಿಂದ ಪ್ರಕಟವಾದವು. ಉಡುಪಿಯಿಂದ ಪ್ರಕಟವಾಗುವುದರ ಜತೆಗೇನೇ ನನ್ನ ಬರವಣಿಗೆಗಳಿಗೆ ಕರ್ನಾಟಕದ ಮುಖ್ಯ ಕೇಂದ್ರಗಳಲ್ಲೂ ಪ್ರಕಾಶಕರು ದೊರೆತದ್ದರಿಂದ ನನ್ನ ಬರವಣಿಗೆ ಬೇಗನೆ ದ. ಕ. ಜಿಲ್ಲೆಯ ಗಡಿ ದಾಟಲು ಅನುಕೂಲವಾಯಿತು. ಕನ್ನಡ ನವೋದಯದ ಕಾಲದಲ್ಲಿ ನಮ್ಮ ಜಿಲ್ಲೆಯಲ್ಲಿ ಹಲವಾರು ಉತ್ತಮ ಲೇಖಕರು ಉದಯಿಸಿದರೂ, ಅವರಲ್ಲಿ ಪ್ರತಿಭೆ ಬೇಕಾದಷ್ಟಿದ್ದರೂ. ಅಖಿಲ ಕರ್ನಾಟಕ ಮಟ್ಟದಲ್ಲಿ ಪ್ರಚಾರ ಸರಿಯಾಗಿ ಸಿಗದಂತಾಗಿತ್ತು. ಮುದ್ರಣ ಯುಗದ ಅಸಹಾಯಕತೆ – ಹೆಸರು ಮರೆಸಿ ಬರೆಯಬೇಕಾದ ಅನಿವಾರ್ಯತೆ ಇರಲಿಲ್ಲವಾದರೂ – ಒಂದು ತೆರನಾದ ಮಿತಿ ಪ್ರಾದೇಶಿಕತೆಯ ಅಪವಾದದ ರೂಪದಲ್ಲಿ, ಶೈಲಿಯ ಅಪರಿಚಿತ ವೈಲಕ್ಷಣ್ಯಗಳ ರೂಪದಲ್ಲಿ ಇಲ್ಲಿನ ಲೇಖಕರಿಗೆ ಕಾಲ್ತೊಡಕಾಗಿ ನಿಂತುಬಿಟ್ಟಿತು. ಇಂಥ ತೊಡಕುಗಳನ್ನು ಭೇದಿಸಿದ ಸೂಚನೆ ಸಿಕ್ಕಿದ್ದು ಶಿವರಾಮ ಕಾರಂತರು ಮತ್ತು ಕಡಂಗೋಡ್ಲು ಅವರ ಬರಹಗಳ ಮೂಲಕವಾಗಿ, ಸ್ವಲ್ಪ ಮಟ್ಟಿಗೆ ಇಲ್ಲಿನ ಸಾಮಾನ್ಯ ಲೇಖಕರು ಇದಕ್ಕೆ ಪೋಣೆಗಾರರಾಗಿದ್ದರು. ತಾವು ಸಂಚಾರ ಮಾಡದೇ ಇದ್ದಲ್ಲೇ ಕೀರ್ತಿ ತಮ್ಮನ್ನು

ಅರಸಿಕೊಂಡು ಬರಬೇಕೆಂದು ನಿರೀಕ್ಷಿಸಿದರು. 'ಮರಳಿ ಮಣ್ಣಿಗೆ'ಯನ್ನೇ ಪ್ರಾದೇಶಿಕವೆಂದು ಕರೆದು ಇತರ ಭಾಗದ ಕರ್ನಾಟಕಸ್ಥರು ಕಾರಂತರ ಮುಂದಿನ ಹತ್ತು ವರ್ಷಗಳ ಅಗಾಧ ಕಾದಂಬರೀ ಕೃಷಿಯಿಂದ ಚಕಿತರಾಗಿ ಸ್ತಂಭಿತರಾಗಿ ದಕ್ಷಿಣ ಕನ್ನಡವನ್ನು ಕಣ್ಣೆತ್ತಿ ನೋಡುವಂತಾಯಿತು. ಹಾಗೆಯೇ ಕಡಂಗೋಡ್ಲು ಅವರ 'ಸತ್ಯ', ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ' – ಅವು ಕರಾವಳಿಯ ಸಾಹಿತ್ಯ ಶಕ್ತಿಯನ್ನು ಕರ್ನಾಟಕಸ್ಥರಿಗೆ ಪ್ರಭಾವಶಾಲಿಯಾಗಿ ಬಿಂಬಿಸಿಕೊಟ್ಟ ಕೃತಿಗಳಾದುವು. ಇಂಥ ಒಂದು ಹಿನ್ನೆಲೆಯಲ್ಲಿ 'ಕಾವ್ಯಾಲಯ'ದಂಥ ಶ್ರೇಷ್ಠ ಪ್ರಕಾಶನ ಸಂಸ್ಥೆ ನನ್ನ ಒಂದು ಪುಸ್ತಕಕ್ಕೆ ತನ್ನ ಮುದ್ರೆಕೊಟ್ಟದ್ದು ನನಗೆ ಹಿತವಾಯಿತು. ಮೂರ್ತಿ ರಾಯರ ಮಾತಿನ ಬೆಲೆ ಎಂಥಾದ್ದೆಂದು ತಿಳಿಯಿತು. ಮುಂದಿನ 3 ವರ್ಷಗಳಲ್ಲಿ ಆಯಾ ವರ್ಷ ಮಾರಾಟ ಗೊಂಡ ಪ್ರತಿಗಳ ಲೆಕ್ಕಾಚಾರವನ್ನು ಚಿದಂಬರಂ ಒಪ್ಪಿಸುವ ಕರಾರುವಾಕ್ಕಾದ ರೀತಿ ಸ್ಪೃಹಣೀಯವೇ ಸರಿ. ಖರ್ಚಾದ ಪ್ರತಿಗೂ ಅವುಗಳ ಮುಖಬೆಲೆ, ಸೋಡಿಬಿಟ್ಟ ಹಣ, ಲೇಖಕನ ಸಂಭಾವನೆ ಇದನ್ನೆಲ್ಲ ಅಚ್ಚು ಗಟ್ಟಾಗಿ ಸ್ವತಃ ಕೈಯಲ್ಲಿ ಬರೆದು ಐವೇಜಿನ ಚೆಕ್ ಸಮೇತ ಮೇ 31ರೊಳಗೆ ಕಳಿಸಿಕೊಡುವ ಚಿದಂಬರಂ ಪ್ರಕಾಶನೋದ್ಯಮದ ಒಂದು ಹಿರಿಯ ಚೇತನ. ಅವರ ಅಂಕಿತದಲ್ಲಿ ಸೇರಿಕೊಳ್ಳುವುದೇ ಒಂದು ನಿರ್ದಿಷ್ಟ ಮಟ್ಟದ ಸೂಚನೆ.

ಮದ್ರಾಸು ವಿಶ್ವವಿದ್ಯಾನಿಲಯಕ್ಕೆ ನಾನೂ ಲಕ್ಷ್ಮೀನಾರಾಯಣ ಆಚಾರ್ಯರೂ ಕೂಡಿ ಅಲೆಕ್ಸಿಸ್ ಕೆರೆಲ್ ಅವರ 'ಮ್ಯಾನ್ ದ ಅನ್‌ನೋನ್' ಗ್ರಂಥವನ್ನು 'ಅವ್ಯಕ್ತ ಮಾನವ' ಎಂಬ ಹೆಸರಲ್ಲಿ ಅನುವಾದಿಸಿಕೊಟ್ಟೆವು. ವಿಶ್ವವಿದ್ಯಾನಿಲಯ ನಮಗೆ ಸಂಭಾವನೆ ಕೊಟ್ಟು ತಾನೇ ಮುದ್ರಿಸಿತು. ನೋಬೆಲ್ ವಿಜೇತರಾದ ಕೆರೆಲ್ ಬರೆದ ಈ ವೈಜ್ಞಾನಿಕ ಗ್ರಂಥದ ಅನುವಾದ ಸುಲಭವಾಗಿರಲಿಲ್ಲ. ಆದರೆ ಭೌತಶಾಸ್ತ್ರದಲ್ಲಿ ಪಾರಂಗತರಾದ ನನ್ನ ಸಹೋದ್ಯೋಗಿ ಯು. ಲಕ್ಷ್ಮೀನಾರಾಯಣ ಆಚಾರ್ಯರು ಗ್ರಂಥದ ಶಾಸ್ತ್ರಭಾಗ ಕೆಡದಂತೆ ನೋಡಿಕೊಂಡರು, ನಾನು ಅದರ ಭಾಷೆಯ ಸೊಗಸು ಅಚ್ಚುಕಟ್ಟು ಮತ್ತು ಸಂವಹನದ ಕಡೆಗೆ ಗಮನಕೊಟ್ಟೆ. ಗ್ರಂಥವನ್ನೋದಿದವರೆಲ್ಲ ಅದರೊಳಗಿನ ವೈಚಾರಿಕ, ವೈಜ್ಞಾನಿಕ ಅಂಶವನ್ನು ಮನಸಾರೆ ಗ್ರಹಿಸಬಲ್ಲರು. ಆದರೆ ಇದೇನೂ ಸುಲಿದ ಬಾಳೆಯ ಹಣ್ಣಲ್ಲ – ನಮ್ಮ ತಪ್ಪೇನಲ್ಲ, ಕೆರೆಲರ ವಿಚಾರಧಾರೆ ಅಂಥಾದ್ದು, ಅನುವಾದಗಳ ನಡುವೆ ಸ್ವತಂತ್ರ ವಾಗಿ 'ಪ್ರಜಾತಂತ್ರದ ಹೆದ್ದಾರಿ' ಮತ್ತು 'ಏಶಿಯಾದ ಸಂಪತ್ತು' ಎಂಬ ಎರಡು ಶಾಸ್ತ್ರಗ್ರಂಥಗಳನ್ನು ರಚಿಸಿ ಪ್ರಕಟಿಸಿದೆ. ಅಮೇರಿಕ ಟೆನಿಸ್ಸಿವ್ಯಾಲಿ ಅಥಾರಿಟಿ ಬಗ್ಗೆ 120 ಪುಟಗಳ ಪ್ರಬಂಧವೇ 'ಪ್ರಜಾತಂತ್ರದ ಹೆದ್ದಾರಿ'. ಅದರ ಮುಖ್ಯಸ್ಥ ಡೇವಿಡ್ ಲಿಲಿಯೆಂಥಾಲ್ ಅವರಿಗೆ ಒಂದು ಪತ್ರ ಬರೆದೆ. ಭಾರತ ಆಗತಾನೇ ಸ್ವತಂತ್ರ ವಾಗಿತ್ತು. ಲಿಲಿಯೆಂಥಾಲ್ ಜವಾಹರಲಾಲ್ ನೆಹರೂ ಮತ್ತು ಭಾರತದ ಬಗ್ಗೆ ಎರಡು ವಾಕ್ಯ ಬರೆದು ನೆಹರೂರಂಥ ಮಹಾನುಭಾವರಿರುವಾಗ ನಾವು ಬದುಕಿರುವುದೇ ಒಂದು ಸೌಭಾಗ್ಯವೆಂಬಂತೆ ಮಾರೋಲೆ ಬರೆದರು. 'ಪ್ರಜಾತಂತ್ರದ ಹೆದ್ದಾರಿ'ಯ 500 ಪ್ರತಿಗೆ 500 ರೂಪಾಯಿ ಹೊಂದಿಸಿಕೊಳ್ಳಬೇಕಾದರೆ ಕಷ್ಟ ವಾಯಿತು. ಮಾರಲು ಇನ್ನಷ್ಟು ಕಷ್ಟವಾಯಿತು. ಮದ್ರಾಸ್ ವಿ. ವಿ. ನಿಲಯ ಇದನ್ನು ಪಠ್ಯವಾಗಿ ಮಾಡಿದರೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಒಳ್ಳೆಯ ವಿಮರ್ಶೆಯಿಂದಲೇ ತೃಪ್ತಿಪಟ್ಟುಕೊಂಡೆ. 'ಏಶಿಯಾದ ಸಂಪತ್ತು' ಇದನ್ನು ಹೊನ್ನಯ ಶೆಟ್ಟರು ಮುದ್ದಾಗಿ ಮುದ್ರಿಸಿಕೊಟ್ಟಿದ್ದರು. ಅದಕ್ಕೆ ಅದೃಷ್ಟ ಒದಲಾಯಿಸಿತು. 120 ರೂಪಾಯಿನ ಬಹುಮಾನ ಸಿಕ್ಕಿತು. ಅದರಿಂದ ಆಗತಾನೇ ಹುಟ್ಟಿ ಬೆಳೆಯುತ್ತಿದ್ದ ನನ್ನ ಮಗು ಸುಜಾತಳಿಗೆ ಒಂದು ಹವಳದ ಹಾರಕ್ಕೆ ವೆಚ್ಚಮಾಡಿದೆ. ನನ್ನ ಸ್ವಂತ ಸಂಪಾದನೆಯಿಂದ ಮಾಡಿದ ಚಿನ್ನವೆಂದು ಅದಕ್ಕೆ ಸುವಾಸನೆ ಕೂಡಿಸಿದ ಹಾಗಾಯಿತು. ಇತ್ತೀಚೆಗೆ ಬಹುಮಾನ ಹಿಡಿದು ಹಿಡಿದು ಕೈ ಜಡ್ಡಾಗಿದ್ದರೂ ಆವತ್ತಿನ ಆ 120 ರೂಪಾಯಿ ಮತ್ತು ಅದರ ಸುಯೋಗ್ಯ ಬಳಕೆ ಮರೆಯಲಾಗದ ಅನುಭವವೇ ಸರಿ.

ಎಂ. ಜಿ. ಎಂ. ಕಾಲೇಜಿನಲ್ಲಿ ಉದ್ಯೋಗಕ್ಕೆ ಸೇರಿದ ಬಳಿಕ ನನ್ನ ಸಾಹಿತ್ಯಕಾರ್ಯ ಇನ್ನಷ್ಟು ಘಟಗೊಂಡಿತು. ಸ್ವಂತ ರಚನೆಗಿಂತ ಹೆಚ್ಚು ಸಾಹಿತ್ಯದ ಸಂಘಟನೆಗೆ ಮನ ಒಲಿಯಿತು. ಉಡುಪಿ ಕರ್ನಾಟಕ ಸಂಘದ ಕಾರ್ಯ ದರ್ಶಿತ್ವದ ಆರಂಭದಲ್ಲಿ 3 ವರ್ಷ (1950 – 53) ನಾಡಹಬ್ಬಕ್ಕೆ ಬರುವ ಅನೇಕ ಸಾಹಿತಿವರೇಣ್ಯರ ಪರಿಚಯ ವಾಯಿತು. ಕಾಲೇಜಿನ ಉತ್ಸವಗಳಿಗೂ ಸಾಹಿತಿಗಳನ್ನು ಕರೆದು, ಅವರನ್ನು ನನ್ನ ಮನೆಯಲ್ಲಿ ಇಳಿಸಿಕೊಂಡು ಉಪಚರಿಸುವುದರಿಂದಲೂ ನನ್ನ ಸಾಹಿತ್ಯಾಸಕ್ತಿಗೆ ಪುಷ್ಟಿ ದೊರೆಯಿತು. ಕಾಲೇಜಿನ ಕೆಲಸಕಾರ್ಯಗಳು ಮತ್ತು ಸಂಚಾರಗಳ ನಡುವೆ ನನ್ನ ಬರವಣಿಗೆ ನಡೆದರೂ ಏಕಾಗ್ರವಾದ ಕೃತಿರಚನೆ ನನ್ನಿಂದ ಆಗಿಲ್ಲವೆಂದೇ ನನಗನಿಸುತ್ತಿದೆ. ಸಾಂದರ್ಭಿಕವಾಗಿ ಏನೇನೋ ಮಾಡಿದ್ದೇನೆ – ಅದೇ ಕಾಲಕ್ರಮೇಣ ಒಂದು ಗಾತ್ರಕ್ಕೆ ಹಿಗ್ಗಿದುದರಿಂದ. 'ಸಾಹಿತಿ'ಯೂ ಎಂಬ ಬಾವಲಿ ಬಿರುದು ನನಗೆ ಬಂದಿರಬೇಕು. ಕನಕದಾಸರಿಗೆ, ಪುರಂದರದಾಸರಿಗೆ ಶತಮಾನೋ ತ್ಸವಗಳು ನಡೆದ ಕಾಲದಲ್ಲಿ ದೇಣಿಗೆ ಸಂಗ್ರಹದ ಅಕ್ಷಯಪಾತ್ರೆ ಎಂದು ಸ್ಮರಣಸಂಚಿಕೆಗಳನ್ನು ಹೊರಡಿಸುವುದು. ಕಾರಂತರಿಗೆ 60 ಆದಾಗ, 67 ಆದಾಗ ಎರಡು ಅಭಿನಂದನ ಗ್ರಂಥಗಳನ್ನು ಪ್ರಕಟಿಸುವುದು, ಅಡಿಗರಿಗೆ 50 ಆಗು ವಾಗಲೇ ಸನ್ಮಾನ ಗ್ರಂಥ ಹೊರಡಿಸುವುದು, ಉತ್ಸವಗಳ ಚರಿತ್ರೆ ದಾಖಲಿಸುವ ನೆಪದಲ್ಲಿ ವರದಿಗಳನ್ನು

ಬರೆದಿಡುವುದು – ಇಷ್ಟಕ್ಕೇ ನನ್ನ ಸಾಹಿತ್ಯಶಕ್ತಿ ನಿಂತುಬಿಡುತ್ತಿತ್ತು – 'ಉದಯವಾಣಿ' ದಿನಪತ್ರಿಕೆ 1971ರಲ್ಲಿ ಪ್ರಕಟವಾಗದಿರುತ್ತಿದ್ದರೆ; ಪ್ರಕಟವಾದ ಸಂದರ್ಭದಲ್ಲಿ ನನ್ನ ಲೇಖನಿ ಮರುಹುಟ್ಟು ಪಡೆದಂತೆ ಅನಿಸಲೂ ನಿಯತಕಾಲಿಕ ಶಿಸ್ತಿನಿಂದ ವಾರದ ಅಂಕಣ ಬರೆಯಲೂ 'ಉದಯವಾಣಿ'ಯೇ ಕಾರಣ. 'ಲೋಕಾಭಿರಾಮ'ವೆಂಬ ಶೀರ್ಷಿಕೆಯಲ್ಲಿ ಜಗತ್ತಿನಲ್ಲಿ ನಡೆಯುವ ಆಗುಹೋಗುಗಳ ಬಗ್ಗೆ ನನ್ನದೇ ರೀತಿಯಲ್ಲಿ ಚಿಂತನ ಮಾಡಲು ಇದು ಸಂದರ್ಭವೆಂದು ವಿಶೇಷ ಆಸ್ಥೆಯಿಂದ ಈ ಅಂಕಣವನ್ನು ಇದುವರೆಗೂ ನಡೆಸಿಕೊಂಡು ಬಂದಿದ್ದೇನೆ. ನನ್ನ ತಿರುಕುಳಿ ಜೀವನದಿಂದಾಗಿ ತಿಂಗಳುಗಟ್ಟಲೆ ಬರೆಯದೆ ಇರುವುದುಂಟು. ಆ ಮೇಲೆ ವಾರಕ್ಕೆ ನಾಲ್ಕು ಬರೆದಿಟ್ಟದ್ದೂ ಉಂಟು. ಏನಿದ್ದರೂ ಸಂಪಾದಕರು ನನ್ನ ನಿಧಾನ ದ್ರೋಹಕ್ಕಾಗಲೀ, ಲೋಪಕ್ಕಾಗಲಿ ಬೇಸರಿಸದೆ ನನಗೆ ಸ್ಥಳ ಮೀಸಲಿಟ್ಟಿದ್ದಾರೆ. ಜನಪ್ರಿಯವಾಗುವ ಗುಣಗಳನ್ನು ಈ ಅಂಕಣದಲ್ಲಿ ನಾನು ಯಾವತ್ತಿನಿಂದಲೂ ಕಾಪಾಡಿಕೊಂಡು ಬಂದೆ. ಇದರಲ್ಲಿರುವುದು ನನ್ನದೇ ಸ್ವಗತಶೈಲಿ – ಸಂಗತಿ ಅತ್ಯಾಧುನಿಕವಾದರೂ, ಕ್ಷುಲ್ಲಕವೇ ಆದರೂ ಅದನ್ನು ವರ್ಣಿಸುವ ರೀತಿ ಸಾಹಿತ್ಯದ್ದು. ವಿಷಯದ ಹರವು ಇಂಥಾದ್ದೇ ಎಂಬುದಿಲ್ಲ – ಇಡೀ ಜಗತ್ತು. ಭಾರತದ ರಾಜಕೀಯ, ಸಾಮಾಜಿಕ, ಸಾಹಿತ್ಯ, ಸಾಂಸ್ಕೃತಿಕ, ಜಗತ್ತಿನ ರಾಜಕೀಯ, ಸಾಹಿತ್ಯಕ ಸ್ಥಾನೀಯ ಸಮಸ್ಯೆಗಳು–ಯಾವುದೇ ವಿಷಯ ಆರಿಸಿಕೊಂಡು ಬರೆಯುತ್ತೇನೆ. ಲೆಕ್ಕಣಿ ತೊಡಗಿದ ನೂರು ಮಿನಿಟಿನಲ್ಲಿ ಲೇಖನ ಸ್ವಯಂಚಾಲಿತ ಯಂತ್ರದಂತೆ ಮುಕ್ತಾಯಗೊಳ್ಳುತ್ತದೆ. ಫೂಲ್ಸ್‌ಕೇಪ್ ಐದು ಹಾಳೆಗಳಿಗೆ ಶಾಯಿ ತುಂಬಿಸು ವಾಗ ಮೊದಲನೇ ಒಳಗಂಟೆ ಬಾರಿಸುತ್ತದೆ. ಆರನೇ ಪುಟಕ್ಕೆ ಎರಡನೇ ಗಂಟೆ, ಮೂರನೇ ಗಂಟೆಗೆ ಆವರಣವೇ ಇಲ್ಲ – ಅಷ್ಟು ಹೊತ್ತಿಗೆ ಪೂರ್ಣವಿರಾಮ ಬಿದ್ದುಬಿಟ್ಟಿರುತ್ತದೆ. ರೂಢಿಯ ಹಿಡಿತ ಎಷ್ಟೆಂದರೆ ಈಗೀಗ ಬೇರೇನಾದರೂ ಬರೆಯುವಾಗ 7ನೇ ಪುಟಕ್ಕೆ ಮುಂದುವರಿಯಲು ವಿಶೇಷ ಪ್ರಯತ್ನ ಅಗತ್ಯ. ನಾನು ಕಲಿತಂಥ ಸಾಹಿತ್ಯ ಮತ್ತು ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳು, ಅನವರತ ಪರಿಶೀಲಿಸುವಂಥ ವಿದೇಶೀ ಪುಸ್ತಕಗಳು, ಪತ್ರಿಕೆಗಳು ಹಾಗೂ ನನ್ನ ಕಣ್ಮನಗಳು – ಇವುಗಳ ಬೆಂಬಲವೇ 'ಲೋಕಾಭಿರಾಮ'ದ ಬಂಡವಾಳ. ರಾಜ ಕೀಯವಾಗಿ ತಟಸ್ಥನೀತಿ ನನ್ನದು. ಈ ಅಂಕಣದ ಮಟ್ಟಿಗೆ ಇತ್ತೀಚೆಗಿನ ವರ್ಷಗಳಲ್ಲಿ ಸ್ಪಷ್ಟವಾದ ರಾಜಕೀಯದ ಸಂಗತಿಗಳನ್ನು ಕಡಿಮೆ ಮಾಡಿದ್ದೇನೆ. ಈ ದೇಶದಲ್ಲಿ ರಾಜಕೀಯ ಇದೇ ರೀತಿ ಮುಂದುವರಿದರೆ ಭಾರತ ದೇಶವೆಂಬುದು ಉಳಿಯುವುದಿಲ್ಲ; ಇದನ್ನುದ್ಧರಿಸಲು ಹತ್ತನೇ ಅವತಾರದಿಂದಲೂ ಅಸಾಧ್ಯವೆಂಬುದು ನನ್ನ ಬಲವತ್ತರ ನಂಬಿಕೆಯಾದ್ದರಿಂದ ಅದರ ಚಿಂತೆ ಮಾಡದೇ ಇರುವುದೇ ಲೇಸು ಎಂಬ ತೀರ್ಮಾನಕ್ಕೆ ಬಂದಿರುತ್ತೇನೆ. ಹಾಗಾಗಿ ಜನಜೀವನದ ಚಿಲ್ಲರೆ ಆದರೂ ಸ್ವಾರಸ್ಯಕರ ವಿಷಯಗಳನ್ನೇ ಎತ್ತಿಕೊಂಡು ಬರೆಯು ತ್ತೇನೆ.

ಮುಂದಿನ ವಾರ ಈ ವಿಷಯ ಬರೆಯಿರಿ; ಇಂಥವರ ವಿಷಯ ಬರೆಯಿರಿ ಎಂದು ನನಗೆ ವಕಾಲತ್ತು ವಹಿಸಿಕೊಡುವ ನನ್ನ ಓದುಗರಿದ್ದಾರೆ. ಅಪರೂಪಕ್ಕೆ ನನಗೆ ನೇರವಾಗಿ ಪತ್ರಬರೆದು ನಿಮ್ಮ ಅಭಿಪ್ರಾಯ ತಪ್ಪು ಎನ್ನುವವರಿದ್ದಾರೆ. ಇಂಥವರು ಸತ್ತಾಗ ಬರೆದಿದ್ದೀರಿ, ನಾನು ಸಾಯುವ ವರೆಗೆ ಕಾಯದೆ ಬದುಕಿರು ವಾಗಲೇ ನೀವೇಕೆ ಬರೆಯಬಾರದು? ಎನ್ನುವವರಿದ್ದಾರೆ. ಇದನ್ನೆಲ್ಲ ಅವರು ಪತ್ರಿಕೆಗೆ ಬರೆಯುವಂತಿಲ್ಲ. ಏಕೆಂದರೆ ಅಂಕಣ ತೊಡಗಿದಾಗ ನಾನು ಪ್ರಿನ್ಸಿಪಾಲನಾಗಿದ್ದು ಬರುವ ಪ್ರತಿಕ್ರಿಯೆಗಳಿಗೆ ಉತ್ತರ ಕೊಡುವುದು ಆಗ ಅಸಾಧ್ಯವಾದ್ದರಿಂದ ನನಗೆ ಈ ಕೆಲಸ ಹಚ್ಚಬೇಡಿರೆಂದು ಪತ್ರಿಕೆಗೆ ಹೇಳಿಕೊಂಡೆ. ನನಗೂ ನನ್ನ ಓದುಗರಿಗೂ ಈ ದೆಸೆಯಿಂದ ಒಮ್ಮುಖಿ ಸಂವಾದ ಮಾತ್ರ ಸಾಧ್ಯ. ನನ್ನೂರಿನೊಳಗಂತೂ ಮನಸ್ಸಿನೊಳಗೆ ಅದುಮಿ ಹಿಡಿಯಲಾರದೆ ಅಂದಿನ ಲೋಕಾಭಿರಾಮಕ್ಕಾಗಿ ನನ್ನನ್ನು ದಾರಿಯಲ್ಲಿ ನಿಲ್ಲಿಸಿ ವಂದನಾರ್ಪಣೆ ಮಾಡುವ ಉತ್ಸಾಹಿಗಳಿದ್ದಾರೆ. ಅಂತೂ ಅಂಕಣವನ್ನು ಕಣ್ಣಲ್ಲಿ ಎಣ್ಣೆಯಿಟ್ಟು ಓದುವ, ಅದರ ವಸ್ತುವನ್ನು ಕೂಲಂಕಷ ವಾಗಿ ವಿಮರ್ಶಿಸುವ ವಾಚಕ ಮಹನೀಯರು ನನ್ನ ಸಾಹಿತ್ಯದ ಬೇಸಾಯಕ್ಕೆ ಪ್ರೇರಣೆ, ಪೋಷಣೆ ಎರಡೂ ಒದಗಿಸುತ್ತಿದ್ದಾರೆ. ಕೆಲವೊಮ್ಮೆ ದಾರಿಗುಂಟ ಯಾವುದೋ ರೈಲ್ವೇ ನಿಲ್ದಾಣದ ಪ್ರತೀಕ್ಷಾಲಯದಲ್ಲಿ ಬರೆಯು ತ್ತೇನೆ; ಬೆಂಗಳೂರು ದಿಲ್ಲಿ ವಿಮಾನದಲ್ಲಿ ದಿಲ್ಲಿಗೆ ಮುಟ್ಟುವ ಮುನ್ನವೇ ಬರೆದು ಅಂಚೆಗೆ ಹಾಕಿದ್ದುಂಟು. ಈ ಅಂಕಣಗಳನ್ನೇ ಸಂಕಲನ ಮಾಡಿದರೆ ಸ್ವರಚಿತ ಗ್ರಂಥಗಳ ಸಂಖ್ಯೆ ಹೆಚ್ಚುವುದೆಂದು ಇವನ್ನು ಆರಿಸಿ ಮೂರು ಸಂಪುಟಗಳಲ್ಲಿ ಹೊರತಂದಿದ್ದೇನೆ. ನಾಲ್ಕನೆಯದು, ಐದನೆಯದು ಸಿದ್ಧವಾಗಿದೆ. ಸಾಮಯಿಕ ವಿಷಯ ಗಳಾದರೂ, ಸಾಹಿತ್ಯ ದೃಷ್ಟಿಯಿಂದ ರಚನೆ ಮತ್ತು ಆಯ್ಕೆ ಮಾಡಿರುವುದರಿಂದ ಕೆಲಗಾಲ ಬದುಕುವ ಸಾಧ್ಯತೆ ಇದ್ದೀತೆಂದು ಭಾವಿಸಿದ್ದೇನೆ.

ನನ್ನ ಮೊತ್ತಮೊದಲ ಪ್ರವಾಸಕಥನ 'ಇತಾಲಿಯಾ ನಾನು ಕಂಡಂತೆ' 'ಉದಯವಾಣಿ'ಗಿಂತಲೂ ಪೂರ್ವಕಾಲದ ಪ್ರಕಟನೆ. ಮಣಿಪಾಲ ಪವರ್ ಪ್ರೆಸ್ಸಿನ ಮಾಲಕರ ಕೃಪೆಯಿಂದ ಅತಿ ಸುಂದರವಾಗಿ ಮುದ್ರಿತ ವಾಯಿತು. ನನ್ನ ಯಾವ ಬೇರೆ ಪ್ರಕಟನೆಗೂ ಇಂಥ ಮುದ್ರಣದ ಚೆಲುವು ಆಮೇಲೆ ಬರಲಿಲ್ಲ. ದೂರದಲ್ಲಿ ನೋಡಿದರೆ ವಿದೇಶೀ ಮುದ್ರಣದಂತೆ ಅನಿಸಬೇಕು. – ಅಂಥ ಉತ್ಕೃಷ್ಟ ಮುದ್ರಣ. ಇದಕ್ಕಾಗಿ ಮಾಲಕರಾದ

ಸತೀಶ ಪೈ ಅವರೂ ನಾನೂ ಜತೆಯಾಗಿ ಆಸಕ್ತಿ ತೋರಿಸಿ ದುಡಿದೆವು. ಇಟಲಿಯಿಂದ ಹಿಂದಿರುಗಿ ಒಂದು ಸಲ ಶ್ರೀ ವಿ.ಸೀತಾರಾಮಯ್ಯನವರನ್ನು ಬೆಂಗಳೂರಲ್ಲಿ ಕಂಡಾಗ 'ಬರೆಯಿರಿ ಭಟ್ಟರೇ, ವಿವರವಾಗಿ ಬರೆಯಿರಿ. ನಮ್ಮಲ್ಲಿ ಎಷ್ಟು ಮಂದಿ ಹೋಗಿರುತ್ತಾರೆ ಹೇಳಿ. ಹೋದವರು ಬರೆಯುತ್ತಾರೋ, ಅದೂ ಇಲ್ಲ' ಎಂದು ಹುರಿದುಂಬಿಸಿದರೂ ನನ್ನ ಬರವಣಿಗೆ ಎರಡು ವರ್ಷ ತಡವಾಗಿ ಪ್ರಕಟವಾಯಿತು. ಇಟಲಿಯ ಆರ್ಥಿಕ ಅಧ್ಯಯನ ಸಂಸ್ಥೆಯ ಅಭಿವೃದ್ಧಿಯ ಮೂಲ ಸೂತ್ರಗಳ ಚಿಂತನೆ–ಚರ್ಚೆ, ಪ್ರತ್ಯಕ್ಷ ದರ್ಶನ, ಕ್ಷೇತ್ರ ಪರ್ಯಟನೆ, ದೇಶಾಟನೆ ಇಷ್ಟನ್ನೊಳಗೊಂಡ ಒಂದು ಅವಿಸ್ಮರಣೀಯವಾಸ ಮತ್ತು ಪ್ರವಾಸದ ಈ ಕಥೆ ವಿಶ್ವಕನ್ನಡ ಸಮ್ಮೇಳನದ ಸಂಧರ್ಭದಲ್ಲಿ ಐದು ಸಾವಿರ ಪ್ರತಿಗಳ ಮಾರಾಟಕ್ಕೆ ಅರ್ಹವೆಂದು ಪರಿಗಣಿತವಾಯಿತು.

ಮುಂದಿನ ಮೂರು ಪ್ರವಾಸಕಥನಗಳಿಗೆ 'ಉದಯವಾಣಿ'ಯೇ ಕಾರಣ. ಯಕ್ಷಗಾನ ಸಹಿತವಾದ ನನ್ನ ಎರಡು ವಿದೇಶ ಸಂಚಾರ 'ಜಗದಗಲ' ಮತ್ತು 'ಒಮ್ಮೆ ರಶಿಯಾ ಇನ್ನೊಮ್ಮೆ ಇತಾಲಿಯಾ' ಎಂಬ ಹೆಸರಿನಲ್ಲಿ ಪ್ರಕಟವಾದದ್ದನ್ನು ಕನ್ನಡ ವಿಮರ್ಶಕರು ಗಮನಿಸಿದ್ದಾರೆ. ಆಮೇಲೆ ಪ್ರಕಟವಾದ್ದು ಯಕ್ಷಗಾನವಿಲ್ಲದ ನನ್ನ ಸ್ವಂತ ಯಾತ್ರೆ. ಶಿವರಾಮ ಕಾರಂತರ ನಿರ್ದೇಶನವುಳ್ಳ ಕಾಲೇಜಿನ ವ್ಯವಸಾಯೀ ಮೇಳವನ್ನು ಜಗದಗಲ ಹತ್ತು ದೇಶಗಳಿಗೆ ಕೊಂಡೊಯ್ದು ಪ್ರಚಾರಿಸುವ ಕೆಲಸವನ್ನು ಉದಯವಾಣಿಯಲ್ಲಿ ದಿನಾಲೂ ಪಾಂಕ್ತವಾಗಿ ಪ್ರಕಟಿಸಿ ಆ ಬಳಿಕ ಅದನ್ನೇ ಪುಸ್ತಕರೂಪವಾಗಿ ಪರಿವರ್ತಿಸಿದ್ದೆ. ನಾನು ಬಯಸದೇನೆ 'ಜಗದಗಲ' ಕರ್ನಾಟಕದ 3 ವಿಶ್ವವಿದ್ಯಾಲಯಗಳಲ್ಲೂ ಕೇರಳ ವಿಶ್ವವಿದ್ಯಾಲಯದಲ್ಲೂ ವಿದ್ಯಾರ್ಥಿಗಳಿಗೆ ಕಡ್ಡಾಯವಾದ್ದರಿಂದ ಗ್ರಂಥ ವರಮಾನವು ನನಗೊಂದಿಷ್ಟು ಬರುವಂತಾಯಿತು. ನನ್ನ ಪ್ರವಾಸ ಕಥನಗಳಲ್ಲಿ ನಾಲ್ಕನೆಯದೆನಿಸುವ 'ರಂಗಾಯನ' ಇತಾಲಿಯಾದ ಮೂರನೇ ಯಾತ್ರೆಯನ್ನೂ, ಫಿನ್ಲೆಂಡ್ ಹಾಲೆಂಡ್‌ಗಳ ಪ್ರಥಮ ಸಂದರ್ಶನವನ್ನು ಒಳಗೊಂಡಿದೆ.

ಇತ್ತೀಚೆಗೆ ಕನ್ನಡದಲ್ಲಿ ಅನೇಕ ಉತ್ತಮ ಪ್ರವಾಸಕಥನಗಳು ಬಂದಿವೆ. ಕನ್ನಡದ ಖ್ಯಾತ ನಾಮ ಸಾಹಿತಿ ಗೊರೂರು, ಮೂರ್ತಿರಾವ್, ನಾಗೇಗೌಡ ಮುಂತಾದವರು ತಾವು ಕಂಡ ನೋಟಗಳನ್ನು ಕುರಿತು ಬರೆದಿದ್ದಾರೆ. ಅಂಥ ಉತ್ಕೃಷ್ಟ ರಚನೆಗಳ ಜತೆಗೆ ನನ್ನದನ್ನ ತೂಗಿ ನೋಡುತ್ತೇನೆ. ಯಾವು ದಾದರೂ ದೇಶದಲ್ಲಿ ಪೂರ್ತಿ ಕೆಲ ತಿಂಗಳು ನೆಲೆನಿಂತು ಜನಜೀವನವನ್ನು ಅವಲೋಕಿಸಿ ಬರೆಯುವುದು ನನಗೆ ಸಾಧ್ಯವಾಗಬೇಕು. ಬರಿದೆ ಪ್ರವಾಸ ಎಂದರೆ ಚಲಿಸುವ ಬಸ್ಸಿನಲ್ಲಿ ಕೂತು ಹಾದು ಹೋಗುವ ಮರಗಿಡಗಳನ್ನು ಬಣ್ಣಿಸಿದ ಹಾಗಲ್ಲವೇ? ಬೇರು, ಕಾಂಡ, ಎಲೆ, ಹೂ, ಹಣ್ಣುಗಳನ್ನು ಸಮೀಪದಿಂದ ನೋಡಿ ಚಿತ್ರಿಸಬೇಕಾದರೆ ಒಂದೊಂದು ಮರದ ಕೆಳಗೂ ವಾಸಮಾಡಬೇಡವೇ? ಇಂಥ 'ವಾಸ' ಕಥನಗಳು ಇಂಗ್ಲಿಷಿನಲ್ಲಿ ಹೇರಳವಾಗಿ ದೊರಕುತ್ತವೆ. ಮಿಚೆಲ್ ಬರೆದಂತೆ 'ಹವಾಈ' 'ಐಬೀರಿಯಾ'ಗಳ ಗಾತ್ರ ಮತ್ತು ಹರವುಳ್ಳ ಕಥನಗಳನ್ನು ಯಾರಾದರೂ ಬರೆಯಬೇಡವೇ? ನಾನು ಬರೆಯಬಲ್ಲೆನೆ? ಎಂದು? ಸಂದರ್ಭ ಸಿಕ್ಕರೆ ಯುರೋಪಿನ ಯಾವುದಾದರೂ ಸಣ್ಣ ದೇಶವನ್ನು – ಫಿನ್ಲೆಂಡ್, ಆಸ್ಟ್ರೀಯಾ, ಸ್ವಿಝರ್ಲೆಂಡ್? – ಆರಿಸಿ ತಿಂಗಳಾರು ತಿಂಗಳು ಅಲ್ಲಿನ ಭಾಷೆ ಕಲಿತು ವಾಸಮಾಡಿ ಬರೆದದ್ದೇ ಅಪ್ಪಟ ಪ್ರವಾಸ ಕಥನವಾಗಬಹುದಲ್ಲವೇ? ಎಂಬ ಅನಿಸಿಕೆ. ಖಾಣೇಕರ್, ಹೊನ್ನಯ ಶೆಟ್ಟರು, ಮತ್ತು ಚಿದಂಬರಂ ಇವರ ಕಾಲ ಕಳೆದ ಮೇಲೆ ನಾನು ಗಟ್ಟಿಯಾಗಿ ಅವಚಿಕೊಂಡ ಒಬ್ಬ ಪ್ರಕಾಶಕ ಮಿತ್ರರ ಬಗ್ಗೆ ಎರಡು ಮಾತು ಬರೆಯದಿದ್ದರೆ ಆಗದು. ಮೈಸೂರಿನ ಗೀತಾ ಬುಕ್ ಹೌಸಿನ ಪ್ರೊ. ಎಂ. ಸತ್ಯನಾರಾಯಣರಾಯರು ನನ್ನ ಆಪ್ತ ಮಿತ್ರರೂ ಹೌದು, ನನ್ನ ದೊಡ್ಡ ಪ್ರಕಾಶಕರೂ ಹೌದು. ನನ್ನ ಇತ್ತೀಚಿನ ಎಲ್ಲ ಬರಹಗಳಿಗೆ, ನನ್ನ ಸಂಸ್ಥೆಯ ಪ್ರಕಟನೆಗಳಿಗೆ ಅವರನ್ನು ಒಂದೋ ಪ್ರಕಾಶಕರು, ಇಲ್ಲವೇ ಮಾರಾಟಗಾರರು ಎಂದು ನಾನು ನೇಮಿಸಿಕೊಂಡಿದ್ದೇನೆ. ಅವರು ನನಗಿಂತ ಹೆಚ್ಚು ವ್ಯವಹಾರಜ್ಞರಾದ್ದರಿಂದ, ಸಾಹಸಿಗಳಾದ್ದರಿಂದ, ನನ್ನ ಹುಚ್ಚು ಹವ್ಯಾಸಗಳ ಬಗ್ಗೆ, 'ರಿಸ್ಕ್' ತೆಗೆದುಕೊಳ್ಳುತ್ತಿದ್ದಾರೋ ಅಥವಾ ನಾನವರ ಸ್ನೇಹದ ಲಾಭ ಪಡೆದು ಅವರನ್ನು ಒತ್ತಾಯಿಸುತ್ತಿರುವೆನೋ ನಾನರಿಯೆ. ಸತ್ಯನಾರಾಯಣ ರಾಯರು (ಮತ್ತು ಅವರ ಸೋದರರು) ವೃತ್ತಿಯಲ್ಲಿ ಇಂಗ್ಲಿಷ್ ಸಾಹಿತ್ಯದ ಶಿಕ್ಷಕ. ಮೈಸೂರಿನ ಇಂಜಿನಿಯರಿಂಗ್ ಕಾಲೇಜಿನಲ್ಲಿ; ಪ್ರವೃತ್ತಿಯಲ್ಲಿ ಸಾಹಿತ್ಯ ವಿಮರ್ಶಕ; ದಂಧೆಯಲ್ಲಿ ಪುಸ್ತಕ ಮಾರಾಟಗಾರನೂ ಅಲ್ಲದೆ ಚಟದಲ್ಲಿ ರಾಜಕೀಯಸ್ಥನೂ ಆಗಿದ್ದಾರೆ. ಮೊನ್ನೆ ತಾನೇ ಜನತಾ ವತಿಯಿಂದ ವಿಧಾನಪರಿಷತ್ತಿಗೆ ಆಯ್ಕೆಗೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಮಗೆ ಕೆಲಸ ಕಾರ್ಯಗಳು ಇದ್ದಾಗ ದಕ್ಷಿಣ ಕನ್ನಡ ಜಿಲ್ಲೆಯ ಮೈಸೂರು ಬಾತ್ಮೀದಾರರಂತೆ, ಪ್ರತಿನಿಧಿಗಳಂತೆ ಉತ್ಸಾಹದಿಂದ ಸಹಕಾರ ಕೊಡುತ್ತಿದ್ದ ಸತ್ಯನಾರಾಯಣ ರಾವ್ ದ.ಕ. ಜಿಲ್ಲೆಯ ತಥಾಕಥಿತ ಸಾಹಸಕ್ಕೂ ಒಂದು ಸವಾಲೆಸೆಯುವಷ್ಟು ಪರಾಕ್ರಮಿಗಳು. ಸ್ವಂತ ಪರಾಕ್ರಮದಿಂದಲೆ ತನ್ನ ಮತ್ತು ಸಂಸಾರದ ಬದುಕನ್ನು ನಿರ್ಮಿಸಿಕೊಂಡವರು. ಸ್ನೇಹಗುಣವನ್ನು ಪ್ರಾಯಃ ಅಗತ್ಯಕ್ಕಿಂತ ಒಂದಿಷ್ಟು ಹೆಚ್ಚಾಗಿಯೇ ಪಡೆದು ಬಂದವರೆಂದು ಅದರ ಪ್ರಯೋಜನವನ್ನು ನನ್ನ ಪುಸ್ತಕಗಳ ಪ್ರಕಾಶನದ ಬಗ್ಗೆ ಮಾಡಿಸಿಕೊಂಡೆನೆಂದು ತೋರುತ್ತದೆ. 30 ವರ್ಷಗಳಿಂದ ನಮ್ಮ ಸ್ನೇಹಾಚಾರ ಹಾಗೂ ಲೇಖಕ-ಪ್ರಕಾಶಕ ಬಾಂಧವ್ಯ ನಿರಾತಂಕವಾಗಿ ಸಾಗಿ ಬಂದಿದೆ. ಮೈಸೂರು ನನ್ನ ಎರಡನೆಯ ಮನೆ ಎಂಬಷ್ಟು ಆತ್ಮೀಯತೆಯನ್ನು ನನ್ನಲ್ಲಿ ಮೂಡಿಸಿದ ಕೆಲವೇ ಕೆಲವು ಮಿತ್ರರಲ್ಲಿ ಸತ್ಯ ಒಬ್ಬರು.

ನನ್ನ ಸಾಹಿತ್ಯಾಸಕ್ತಿ ಪುಸ್ತಕದ ಗೀಳಿಗೆ ಮಾತ್ರವೇ ಸೀಮಿತವಾದುದಲ್ಲ, ರಚಕರಾದ ಸಾಹಿತಿಗಳೂ ನನ್ನ ಒಂದು ಮುಖ್ಯ ಆಕರ್ಷಣೆ. ಅವರ ಸಾಮಿಪ್ಯಕ್ಕಾಗಿ, ಅವರ ಮನೆ ಜಗಲಿಯಲ್ಲಿ ಕಾದದ್ದೆಷ್ಟೋ, ಅವರ ಒಂದು ಕಡೆಗಣ್ಣ ನೋಟಕ್ಕೆ ಕಾತರಿಸಿದ್ದೆಷ್ಟೋ. ಅವರಿಂದ ಒಂದು ವಾರೋಲೆ ಬಂತೆಂದರೆ ಹಿಡಿಸಲಾರದ ಸಂತಸ. ಅವರ ಕೈಂಕರ್ಯಗಳು ಆಪ್ಯಾಯಮಾನ. ಜೀವನವೇ ಸಾಹಿತಿಗಳ ಸಾನ್ನಿಧ್ಯದಲ್ಲಿ ಧನ್ಯವೆಂದು ಭಾವಿಸಿಕೊಂಡಿದ್ದ ಎಳವೆಯಲ್ಲಿ ನನಗೆ ಕನ್ನಡದ ಮಹಾಮಹಿಮ ಲೇಖಕರ ಪರಿಚಯವಾಯಿತು. ಹಿರಿಯರಲ್ಲಿ ಗೌರವಾನ್ವಿತ ಭಕ್ತಿ, ಓರಗೆಯವರಲ್ಲಿ ಸ್ನೇಹ ಅನುಸ್ಯೂತವಾಗಿ ಬೆಳವಣಿಗೆ ಪಡೆಯಿತು. ಪತ್ರವ್ಯವಹಾರ, ಪ್ರತ್ಯಕ್ಷಭೇಟಿ, ಗ್ರಂಥವಾಚನ ಮುಂತಾದ ಚಟುವಟಿಕೆಗಳನ್ನು ವೈಯಕ್ತಿಕ ನೆಲೆಯಲ್ಲಿ ಮಾಡುತ್ತಿರುವಾಗ, ಉಡುಪಿಯ ಕರ್ನಾಟಕ ಸಂಘ ಮತ್ತು ಕಾಲೇಜಿನ ಸಾಹಿತ್ಯೋತ್ಸವಗಳಲ್ಲಿ, ಅಭೂತಪೂರ್ವವೆನಿಸಿದ ಮಣಿಪಾಲ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನನ್ನ ಪಾಲಿಗೆ ಸಮುದ್ರಮಥನ ಆದಂತೆ ಅಮೃತವೂ ದೊರೆತಿದೆ. ವಿಷವೂ ತುಟಿಗೆ ಒರಸಿದೆ. ಮಾಡಿದ್ದಕ್ಕೆಲ್ಲ ಶಿಸ್ತು ಓರಣ ಇರಬೇಕು ಎಂಬ ನನ್ನ ಛಲವಾದಿತನದಲ್ಲಿ ಎಷ್ಟೋ ಬಾರಿ ಹಿರಿಯರಿಗೆ ನೋವು ಉಂಟು ಮಾಡಿದ ಸಂದರ್ಭಗಳಿವೆ. ಅವರಲ್ಲಿ ಹೆಚ್ಚಿನವರು ಇಂಥದನ್ನೆಲ್ಲ ಸಣ್ಣಪುಟ್ಟ ವಿಷಯವೆಂದು ಮರೆತು ಮತ್ತೆ ಪ್ರೇಮಮಯ ಆಶೀರ್ವಾದ ಕರುಣಿಸಿದ್ದಾರೆ. ಕುವೆಂಪು ಅವರ ಗೀತದ ಮೊದಲ ಸಾಲು ನನ್ನ ಜೀವನದಲ್ಲಿ ಅನುಷ್ಠಾನಕ್ಕೆ ತರುವಂತೆ 'ಲೋಕ ಗುರುಗಳೆಲ್ಲ ಬನ್ನಿ ಮನ್ಮನೋ ಮಂದಿರಕೆ' ಮಾತ್ರವಲ್ಲ, ವಾಸ್ತವವಾಗಿ ಮನೆಗೂ ಬನ್ನಿ ಎಂದು ಕರೆದು ಉಪಚರಿಸಿದ್ದು ಅಹೋಭಾಗ್ಯವೆಂದು ಇಂದಿಗೂ ತಿಳಿಯುತ್ತಿದ್ದೇನೆ. ಶಿವರಾಮ ಕಾರಂತರು, ಬೇಂದ್ರೆ, ಅನಕೃ, ದ.ಬಾ., ಮೂರ್ತಿರಾವ್, ಕಡಂಗೋಡ್ಲು, ನೆಗಳೂರು, ಗೋಕಾಕ, ವೀಸೀ, ಗೊರೂರು, ಪುತಿನ, ಜೋಶಿ, ಶಂಬಾ, ಕಾರ್ನಾಡ್, ಬಿ.ವಿ. ಕಾರಂತ್ ಇವರುಗಳಿಗೆ ನಮ್ಮ ಮನೆ ಎಂದರೆ ಉಡುಪಿಯ ಸ್ವಾಗತದ ಹೆಬ್ಬಾಗಿಲಾಯಿತು. ಎಷ್ಟೋ ವರ್ಷಕಾಲ ನಮ್ಮ ಮನೆಯೇ ಸಾಹಿತಿಗಳ ಛತ್ರವೆನಿಸಿತ್ತು. ಉಡುಪಿಗೆ, ನಮ್ಮ ಮನೆಗೆ ಬಾರದವರಾರು? ಅವರಿಗೆ ನಿರಂತರ ಉಪಚಾರ ಮಾಡಿದ್ದರಿಂದ ನನ್ನ ಸಾಹಿತ್ಯ ಸೇವೆಯ ನಿಜವಾದ ಭಾರವನ್ನು ಹೊತ್ತವಳು ನನ್ನ ಅರ್ಧಾಂಗಿ ಸುಮತಿ. ಸಿಟ್ಟು ಸೆಡಕು, ಕೋಪತಾಪದ ಅಧಿವೇಶನಗಳನ್ನೆಲ್ಲ ಮುಗಿಸಿದ ಬೇಂದ್ರೆಯವರು ಒಮ್ಮೆ ಉಡುಪಿಯಿಂದ ಹೊರಡುವ ವೇಳೆ 'ಭಟ್ಟರೆ ಮುಂದಿನ ಸಲ ನೀವು ಧಾರವಾಡಕ್ಕೆ ಬಂದಾಗ ಇವರನ್ನೂ ಕರೆದುಕೊಂಡು ಬನ್ನಿ – ಅದೇಕೋ ನಿಮಗೆ ದಂಪತಿ ಪೂಜೆ ಮಾಡಬೇಕು ಅಂತ ಅನಿಸಲಿಕ್ಕ ಹತ್ಯದ, ಎಂದರು. ಅಷ್ಟು ಹೇಳಿದ್ದೇ ನನಗೆ ತೃಪ್ತಿ. ಪೂಜೆಗೆ ನಾನು ಹೋಗಲಿಲ್ಲ. ತೀರಿಕೊಳ್ಳುವ ಎರಡು ವಾರ ಮೊದಲು ಏಕಾಂಗಿಯಾಗಿ ಧಾರವಾಡದಲ್ಲಿ ಪಾವೆಂ ಅವರೊಡನೆ ಅವರನ್ನು ನೋಡಿದೆ. ಅನಾರೋಗ್ಯದಲ್ಲೂ ಅದೇ ಮಾತು, ಅದೇ ಆವೇಗ, ಅದೇ ಪ್ರೀತಿ.

ಬೇಂದ್ರೆಯವರ ಕಾವ್ಯಗಳನ್ನು ಮನಸಾ ಶಿರಸಾ ಒಪ್ಪಿಕೊಂಡ ಹಲವಾರು ಭಾವುಕರಲ್ಲಿ ಉಡುಪಿಯ ಬನ್ನಂಜೆ ಗೋವಿಂದಾಚಾರ್ಯರು, ನಿಡಂಬೂರು ಶ್ರೀಶ ಬಲ್ಲಾಳರು ಮತ್ತು ನಾನೆಂಬುದು ಬೇಂದ್ರೆಯವರಿಗೆ ಅವರ ಜೀವಿತ ಕಾಲದಲ್ಲಿ ಹೃದ್ಗತವಾಗಿತ್ತು. 'ನಾಕುತಂತಿ'ಯ ಸಂಸ್ಕೃತಿ ಮೂಲ ಹಾಗೂ ಸ್ಫೂರ್ತಿಮೂಲ ಯಾವುದೆಂದು ವೇದೋಪನಿಷತ್ತುಗಳ ಆಧಾರದಿಂದ ಗಂಟೆಗಟ್ಟಲೆ ವಿಮರ್ಶಿಸಬಲ್ಲ ಬನ್ನಂಜೆ ಗೋವಿಂದ ಆಚಾರ್ಯರ ಅಪ್ರತಿಮ ಪಾಂಡಿತ್ಯಕ್ಕೆ ಬೇಂದ್ರೆ ತಲೆದೂಗಿದ್ದರು. ಕಾಲೇಜಿನಲ್ಲಿ ಕಲಿಸುವುದು ಅರ್ಥಶಾಸ್ತ್ರವಾದರೂ ಹೃದಯ ಸಂಪುಟದಲ್ಲಿ ಶ್ರದ್ಧೆ ಮತ್ತು ಸಾಹಿತ್ಯದ ರಸಗ್ರಂಥಗಳನ್ನು ಜತನದಿಂದ ಶೇಖರಿಸಿಟ್ಟುಕೊಂಡ ಇನ್ನೊಬ್ಬ ಶಿಷ್ಯ. ಇವರಿಬ್ಬರು ಆಧ್ಯಾತ್ಮಿಕವಾಗಿಯೂ ಬೇಂದ್ರೆಯವರಿಗೆ ಸಮೀಪಸ್ಥರು. ನಾನು ಬೇಂದ್ರೆ ಕಾವ್ಯಗಳನ್ನು ತೊಟ್ಟಿಲು ತೂಗುವ ಕೆಲಸಕ್ಕಾಗಿ ಬಳಸುವವನು ಮಾತ್ರ – ನಿಜಕ್ಕೂ ನನ್ನ ಮಕ್ಕಳಿಗೆ 'ಮೂಡಣ ಮನೆಯ ಮುತ್ತಿನ ನೀರಿನ' ಹಾಡು ಹೇಳಿ ಮಲಗಿಸಿದ್ದೇನೆ. ಕೆಲವು ನನ್ನ ಅಚ್ಚುಮೆಚ್ಚಿನ ಕವಿತೆಗಳನ್ನು ನನಗೆ ನಾನೇ ಈಗಲೂ ಗುಣುಗುಣಿಸಬಲ್ಲೆ. ಅವರ ಕಾವ್ಯದ ಓಘ ನನ್ನ ಮಾತಿನಲ್ಲಿ ಏನೋ ಸ್ವಲ್ಪ ಬೆರೆತುಕೊಳ್ಳುತ್ತದೆ – ಇಷ್ಟು ಹೊರತು ಉಳಿದೆಲ್ಲ ವಿಷಯದಲ್ಲಿ ನಾನು ಗುಡಿಯ ಹೊರಸುತ್ತಿನ ಪರಿಚಾರಕ ಮಾತ್ರ. ಅವರ ಕೋಪಕ್ಕೆ ಆಗಿಂದಾಗ ತುತ್ತಾದರೂ 'ಹರ-ಕೋಪಾನಲಭಸ್ಮ ಕೇವಲಂ' ಆಗದೆ ಅವರ ಪ್ರೀತಿಪಾತ್ರನಾಗಿಯೇ ಕೊನೆತನಕ ಉಳಿದು ಬಂದೆ. 1971ರಲ್ಲಿ ಅವರಿಗೆ ದಕ್ಷಿಣ ಕನ್ನಡದ ಹತ್ತು ಕಡೆ ಉಪನ್ಯಾಸಕ್ಕೆ ಕರೆದು ಯಾವುದೇ ಕಟಿಪಿಟಿ ಇಲ್ಲದಂಥ ಒಂದು ಜ್ಞಾನಸತ್ರ ಏರ್ಪಡಿಸಿದಾಗ ಅವರು ನಮ್ಮ ಮನೆಯಲ್ಲಿ ಬೆಳದಿಂಗಳೂಟದ ನಡುವೆ ಆಡಿದ ಮಾತುಗಳನ್ನು 'ಮಾತೆಲ್ಲ ಜ್ಯೋತಿ' ಎಂಬ ಹೆಸರಲ್ಲಿ ನಾನೇ ಪ್ರಕಟಿಸಿದ ಅವರ ಗ್ರಂಥದಿಂದ ಉದ್ಧರಿಸುತ್ತೇನೆ. 'ಒಲವೇ ನಮ್ಮ ಬದುಕು' ಎಂಬ ಶೀರ್ಷಿಕೆಯಲ್ಲಿ ಬೇಂದ್ರೆಯವರ ಒಲುಮೆಯ ಗೀತಗಳನ್ನು ವರ್ಗೀಕರಿಸಿ ಪ್ರಕಟ ಮಾಡಿದೆ. ಇದರ ಮುದ್ರಣವೂ ಬಲ್ಲೊಗಸಾಗಿ ಮಣಿಪಾಲ ಪ್ರೆಸ್ಸಿನಲ್ಲಿ ಆಯಿತು. ಕೆ.ಕೆ. ಹೆಬ್ಬಾರರು ಸಂತೋಷದಿಂದ ಇದಕ್ಕೆ ತಮ್ಮ ಅನುಪಮ ರೇಖಾಚಿತ್ರಗಳನ್ನ ಬರೆದು ಕೊಟ್ಟಿದ್ದರು. ಕಾಗದ, ಕವಚ, ಒಳಗಿನ ಹೂರಣ, ರೇಖಾಚಿತ್ರಗಳ ದೆಸೆಯಿಂದ ಇದು ಬೇಂದ್ರೆಗೆ ಹರ್ಷ ತಂದ ಪ್ರಕಟನೆಯಾಯಿತು. ವೀಸೀ ಅವರ 'ಗೀತಗಳು', ನೆಳಲುಬೆಳಕು, ಡಿವಿಜಿ

'ಅಂತಃಪುರಗೀತೆ' ಬಹಳ ಹಿಂದೆ ಆರ್ಟ್‌ಪೇಪರಿನ ಭರತೇಶ ವೈಭವ ಈ ರೀತಿ ಸುಂದರವಾಗಿ ಮುದ್ರಣಗೊಂಡಿದ್ದವೆಂದು ನೆನಪು.)

'ಹರಿದಾಸ ಭಟ್ಟರನ್ನು ಇದಕ್ಕೂ ಬಹಳ ತರುಣ ಇದ್ದಾಗ ನಾನು ನೋಡಿದೆ. ಅಂದಿನಿಂದ ವಯಸ್ಸಾಗಿದೆ, ಆದರೆ ಹುಮ್ಮಸ್ಸು ಕಡಿಮೆ ಆಗಲಿಲ್ಲ: ಅವರಿಗೆ ಹೆಚ್ಚುತ್ತಲೇ ಇದೆ. ಇಷ್ಟು ಜನ ಗೆಳೆಯರೊಡನೆ ಈ ಊಟದ ಏರ್ಪಾಡು ಮಾಡಿದ್ದಾರೆ; ಒಬ್ಬ ಕವಿಯ ಸನ್ಮಾನಕ್ಕೆ ಇಷ್ಟು ವೆಚ್ಚವಾಗಬೇಕೇ ಎಂತ ಅನಿಸುತ್ತದೆ. ಯಾಕೆಂದರೆ ಇದು ಸುಲಭದ ಕೆಲಸವಲ್ಲ. ಕವಿಗೇನು ಬೇಕು? ಒಂದಿಷ್ಟು ಒಳ್ಳೆಯ ಮಾತು, ಒಂದು ಹೂ, ಒಂದು ಮಾಲೆ ಹಾಕಿದರೆ, ಸ್ವರ್ಗದಲ್ಲಿದ್ದೇನೆ ಎಂದು ತಿಳಿಯುತ್ತಾನೆ. ಒಳಗೆ ಅಂತಃಕರಣದಲ್ಲಿ ಚೆನ್ನಾಗಿರಬೇಕು. ಅದಕ್ಕಿರುವ ಸುಗಂಧ ಮತ್ತೆ ಈ ಯಾವ ವಸ್ತುಗಳಿಗೂ ಬರಲಾರದು.

ಹರಿದಾಸ ಭಟ್ಟರು ಕಳೆದ 10 ದಿವಸಗಳಲ್ಲಿ ನನ್ನನ್ನು ಈ ಪ್ರದೇಶದ ಯಾವ ಯಾವುದೋ ಊರಿಗೆ ಅಡ್ಡಾಡಿಸಿದರು. ಹೀಗೆ 1930ರಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರ ಜತೆಗೆ, ಅವರು 'ಎಕ್ಸೈಸ್' ಅಧಿಕಾರಿಗಳಾಗಿರುವಾಗ, ನಾನು ಅಡ್ಡಾಡಿದ್ದುಂಟು. ಆ ಕಾಲದಲ್ಲಿ ನಾನು ಬೆಂಗಳೂರು ಒಂದನ್ನು ಬಿಟ್ಟು, ಮೈಸೂರಿನ ಉಳಿದ ಎಲ್ಲ ಸ್ಥಳಗಳಿಗೆ ಅಡ್ಡಾಡಿ ಬಂದೆ. ದಿನಾಲೂ ಒಂದು ಊರಿಗೆ ಹೋಗಿ, ಮುಂಜಾನೆ ಅವರ ಸೆನ್ಸಸ್ ಕೆಲಸ ನಡೆಯುತ್ತಿತ್ತು. ಸಭೆಗೆ ಸಂಜೆ ಸಭೆ, ಅವರು ಅಧ್ಯಕ್ಷರು; ನಾನು ಅದರಲ್ಲಿ ಪದ್ಯ ಹೇಳತಕ್ಕವನು. ಹೀಗೆ ಕಾರ್ಯಕ್ರಮ ನಡೆಯುತ್ತಿತ್ತು. ಕನ್ನಡ ನಾಡಿನ ಜನರಿಗೆ 'ಒಬ್ಬರಿಗೊಬ್ಬರು ಸಮೀಪ ಬನ್ನಿ. ಒಬ್ಬೊಬ್ಬರಲ್ಲಿ ಬಳಕೆ ಬೆಳೆಯಲಿ, ನಿಮ್ಮ ಮಾತಿನಿಂದ ನಿಮ್ಮ ಮನಸ್ಸು ಹೇಗಿದೆ ಎಂದು ತಿಳಿಯಲಿ' ಎಂದು ಹೇಳುತ್ತ ಅಡ್ಡಾಡಿಸಿದ ಆ ದಿವಸಗಳ ಅನಂತರ, ಹಾಗೆ ಹರಿದಾಸ ಭಟ್ಟರೂ ಇಲ್ಲಿ ತಕ್ಕಮಟ್ಟಿಗೆ ಎಲ್ಲ ಕಡೆಗೂ ನನ್ನನ್ನು ಅಡ್ಡಾಡಿಸಿದರು.

ಯಾತ್ರಾಸ್ಥಾನಗಳಿಗೆ ಹೋಗಿ ಬಂದೆನು. ಸುಬ್ರಹ್ಮಣ್ಯಕ್ಕೆ ಹೋದದ್ದು ಇದೇ ಮೊದಲ ಬಾರಿ. ಕೊಲ್ಲೂರ ಮೂಕಾಂಬಿಕೆಯ ಬಳಿ ಹೋಗಿಬಂದೆ. ಹೀಗೆ ಹೋಗುವಾಗ ದಾರಿಯಲ್ಲಿ ಸೇತುವೆಗಳಿರುವುದರಿಂದ, ಅನೇಕ ತೀರ್ಥಗಳನ್ನು ಅನಾಯಾಸವಾಗಿ ದಾಟಿದೆ. ಕೊಲ್ಲೂರಿನಲ್ಲಿ 'ಮೂಕಂ ಕರೋತಿ ವಾಚಾಲಂ' ಎಂಬ ತಾಯಿಯ ಬಳಿ, ಮೊದಲೇ ವಾಚಾಳಿಯಾಗಿದ್ದ ಕವಿ ಕ್ಷಣಹೊತ್ತು ಮೂಕನಾಗಬೇಕಾಯಿತು; ದೇವರು ಮೂಕರನ್ನು ವಾಚಾಳರನ್ನಾಗಿ ಮಾಡಬಹುದು. ಆದರೆ ವಾಚಾಳರನ್ನೂ ಮೂಕರಾಗಿ ಮಾಡುತ್ತಾಳೆ ಆ ತಾಯಿ, ಒಮ್ಮೊಮ್ಮೆ.

ಇಲ್ಲಿ ಏನು ಹರಿದಾಸ ಭಟ್ಟರು ಪುಣ್ಯ ಮಾಡಿದ್ದಾರೋ, ನಾನು ಮಾಡಿದ್ದೇನೋ ಅಥವಾ ನೀವು ಮಾಡಿದ್ದೀರೋ – ಮೂರೂ ಮಂದಿ ಪುಣ್ಯ ಮಾಡಿರಬೇಕು. ಯಾಕೆಂದರೆ ಇಂಥ ಮೂರು ಮಾತು ಕೂಡದೆ ಒಳ್ಳೆಯ ಮಾತಾಗುವುದಿಲ್ಲ. ಕೆಟ್ಟು ಹೋಗಲಿಕ್ಕೆ ಮೂರಾಬಟ್ಟೆ ಸಾಕು. ಆದರೆ ಮೂರಾಬಟ್ಟೆಯಿಂದ ಒಳ್ಳೆಯದಾಗಬೇಕಾದರೆ, ಒಳ್ಳೆಯದೇ ಇರಬೇಕು.

ಇವರ ಮನೆಯಲ್ಲಿ ಬಂದಾಗ, ನನ್ನ ತಂದೆ–ಚಿಂತೆ ಉಳ್ಳವನಾಗಿ ಎಂದೋ ತೀರಿಕೊಂಡವನು – ಕನಸಿನಲ್ಲಿ ಬಂದು 'ನಿನ್ನ ಬಗ್ಗೆ ನಾನು ಏನೂ ಚಿಂತೆ ವಹಿಸಲಿಲ್ಲವಲ್ಲಾ' ಎಂದು ಹೇಳಿದರೆ, ನಾನು 'ಇಲ್ಲ, ನನಗೆ ಎಲ್ಲ ಸುಖವಾಗಿದೆ' 'ಡೋಂಟ್ ವರೀ', ಐ ಯಾಮ್ ವೆಲ್ ಟೇಕನ್ ಕ್ಯಾರ್ ಆಫ್' ಎಂದು ಈ ಮನೆಯಲ್ಲಿ ಹೇಳಿದ್ದೇನೆ. ಇಷ್ಟು ವರ್ಷದ ಮೇಲೆ ಬಂದರೂ, ನಾನು ಬಂದಹಾಗೆ ಈ ಮನೆ ವರ್ಷ ವರ್ಷ ಒಳ್ಳೆಯದಾಗುತ್ತಾ ಇರುವುದನ್ನು ಕಂಡಿದ್ದೇನೆ. ಎಲ್ಲಕ್ಕಿಂತ ಹೆಚ್ಚಿನ ಒಳ್ಳೆಯದೆಂದರೆ ಹರಿದಾಸ ಭಟ್ಟರು ತನ್ನ ಎಲ್ಲ ಕೆಲಸಗಳ ವ್ಯವಧಾನದಲ್ಲಿ ಎಲ್ಲರೊಡನೆ ಸಹಕರಿಸುವುದು, ಮೈತ್ರಿಯಿಂದ ಇರುವುದು, ಯಾವ ಕಾಲೇಜಿನ ಪ್ರಿನ್ಸಿಪಾಲ್‌ಶಿಪ್ ಇದಕ್ಕಿಂತ ದೊಡ್ಡದು? ಇದು ಪುಣ್ಯವಂತಿಕೆಯಿಂದ ಬರತಕ್ಕ ಸಂಸ್ಕಾರ. ಅವರ ಕರೆಯೋಣಕ್ಕೆ ತಾವು ಎಲ್ಲ ಇಲ್ಲಿ ಬಂದಿದೀರಿ.

ಈ 8–10 ದಿವಸಗಳಲ್ಲಿ ಎಂಥೆಂಥ ವಿವಿಧ ಜನರ ಕಡೆಗೆ ನನ್ನನ್ನು ಕಳುಹಿಸಿ, ಬೇಂದ್ರೆಯವರಿಗೆ ಹೆಚ್ಚು ತೊಂದರೆ ಕೊಡಬಾರದು, ಅವರನ್ನು ಸರಿಯಾಗಿ ಕರಕೊಂಡು ಬರಬೇಕು ಎಂದು ಮುಂಚೆಯೇ ಎಲ್ಲರಿಗೂ ತಿಳಿಸಿ, ಇದನ್ನೆಲ್ಲ ಮಾಡಿದ ಹರಿದಾಸ ಭಟ್ಟರಿಗೆ ಇಷ್ಟೂ ಮಂದಿಯ ಬೆಂಬಲ ಇದೆ. ಒಂದು ರೀತಿಯಿಂದ – ಸೂರ್ಯನ ಬೆಳಕಿನಿಂದ ಕಾಂತಿ ಪಡೆದ ಚಂದ್ರನಂತೆ, ಸೂರ್ಯನಿಂದಲೂ ಆಗದ್ದನ್ನು ಆ ಬೆಳಕಿನಿಂದ ಚಂದ್ರ ಮಾಡುತ್ತಾನೆ – ಅಂದರೆ, ರಾತ್ರಿಯ ಕತ್ತಲೆಯಲ್ಲಿ ಬೆಳಕು ಕೊಡುತ್ತಾನೆ; ಹೀಗೆ ರಾತ್ರಿಯಲ್ಲಿ ಇಂಥ ಈ ಬೆಳದಿಂಗಳೂಟ, ಹಗಲು ಹತ್ತು ಕಡೆ ಹೋಗಿ ಬಂದದ್ದು – ಇದು ಮನಸ್ಸಿನಲ್ಲಿ ಒಂದು ಅಸಾಮಾನ್ಯವಾದ ಪರಿಮಳವಾಗಿ ಕೂತಿದೆ. ಅದು ಎಷ್ಟು ಅಸಾಮಾನ್ಯ ಎಂಬುದು ಹರಿದಾಸ ಭಟ್ಟರಿಗೂ ಸ್ವಲ್ಪ ಸ್ವಲ್ಪ ತಿಳಿಯುತ್ತದೆ.

ಇನ್ನು ಮೇಲೆ ಉಣ್ಣುವ ಕಾರ್ಯಕ್ರಮವಿದೆ. ಬರೇ ಉಣ್ಣುವುದು 'ಕಂಪೆನಿಯನ್‌ಶಿಪ್' ಅಲ್ಲ, ಕೂಡಿ ಉಣ್ಣುವುದು 'ಕಂಪೆನಿಯನ್‌ಶಿಪ್'.

ಸಹನಾವವತು । ಸಹನೌ ಭುನಕ್ತು ।
ಸಹವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು ।
ಮಾ ವಿದ್ವಿಷಾವಹೈ'

1978ರಲ್ಲಿ ಡಾ. ಮಾಧವ ಪೈ ಅವರ 80ನೆಯ ಹುಟ್ಟುಹಬ್ಬ ವೈಭವೋಪೇತವಾಗಿ ಆಚರಿಸಿದಾಗ ಬೇಂದ್ರೆಯವರನ್ನ ಉತ್ಸವದಲ್ಲಿ ಸೇರಿಸಿ ಪೈ ಕೈಯಿಂದ ಕರ್ನಾಟಕದ ಸೃಷ್ಟಿ ಶಕ್ತಿಯ ಪ್ರತಿನಿಧಿ ಎಂದು ಒಂದು ಸುವರ್ಣಪದಕ ಕೊಡಿಸಿದೆ. 80 ಸ್ವರ್ಣ ಪದಕಗಳ ಕವಚವನ್ನೇ ತೊಟ್ಟು ಜನರ ಸಮ್ಮುಖ ನಿಂತ ಪೈ ತಾನೂ ಕವಿವಂದನೆ ಮಾಡಿ ಧನ್ಯರಾದರು. ಆದರೆ ಬೇಂದ್ರೆಯವರ ಭಾಷಣ ಎತ್ತೆತ್ತಲೊ ಹಾರಾಡಿತು. ಪೈ ಅವರನ್ನು ನೈಋತ್ಯದ ಕುಬೇರ ಎಂದು ಕರೆದರು, ನಿಮ್ಮ ಬ್ಯಾಂಕಿನ ಕೋಟಿಯಲ್ಲಿ ನನ್ನದೂ ಒಂದರ್ಧ ಲಕ್ಷ ಇದೆ ಎಂದರು. ದಂಪತಿಗಳಾಗಿ ವಿರಾಜಮಾನರಾಗುವ ನಿಮ್ಮ ಭಾಗ್ಯ ನನಗಿಲ್ಲ, ನನಗೀಗ ಹೆಂಡತಿ ಇಲ್ಲ ಎಂದು ಕೂಗಾಡಿದರು. ಡಾ. ಪೈ ಅವರ ಸ್ನೇಹ ಹಾಗೂ ಆತ ಮಾಡಿದ ಮಹತ್ಕಾರ್ಯಗಳನ್ನು ಸಾಕಷ್ಟು ಕೊಂಡಾಡಿದರೂ ಅಂದಿನ ಉಪನ್ಯಾಸಕ್ಕೆ ಶ್ರುತಿ ಕೂಡಲಿಲ್ಲ. ಸಭಾನಂತರ ಊಟದ ಹೊತ್ತಿನಲ್ಲಂತೂ ಕರ್ನಾಟಕ ವಿ.ವಿ. ನಿಲಯದ ದಾ.ಚಿಂ. ಪಾವಟೆಯವರ ಮೇಲೆ ಹೆಬ್ಬುಲಿಯಂತೆ ಎರಗಿಬಿಟ್ಟರು. ಪಾಪ ಅವರು 'ಏನು ಮಹಾಕವಿಗಳೇ' ಎಂದು ವಿನಯದಿಂದ ಸಂಬೋಧನೆ ಮಾಡಿದ್ದೇ ತಡ, ಇವರಿಗೇನು ಅಣಕದಂತೆನಿಸಿತೋ ಅಥವಾ ಯಾವ ಪೂರ್ವಗ್ರಹ ಬಾಧಿಸಿತೋ ತಿಳಿಯದು, 'ಏನ್ರೀ, ನಾನು ಮಹಾಕವಿ ಅಂತ ತಿಳೀಬೇಕಾದರೆ ಇಷ್ಟು ದೂರ ನೀವು ಬರಬೇಕಾಗಿತ್ತಾ? ಧಾರವಾಡದಲ್ಲಿ ಇದು ತಿಳೀಲಿಲ್ಲಾ'? ಎಂತಂದು ಕೆಂಡ ಕಾರಿದರು. ಅವರಿಬ್ಬರನ್ನು ಬೇರ್ಪಡಿಸುವುದೇ ಒಂದು ಪ್ರಯಾಸವಾಯಿತು. ಇಂಥ ವಿಕ್ಷಿಪ್ತ ಪ್ರಸಂಗಗಳನ್ನು ಸಹಿಸಿಕೊಳ್ಳದೆ ಬೇಂದ್ರೆ ಪ್ರವಾಸ ಪೂರ್ಣವಾಗದೆಂದು ನನಗೆ ಮೊದಲೇ ತಿಳಿದಿತ್ತು.

ಆದರೆ ಈ ಉಗ್ರರೂಪದ ತಳದಲ್ಲಿ ಎಷ್ಟು ಮಾಧುರ್ಯ ಹುದುಗಿರುತ್ತದೆಂಬುದರ ಪರಿಚಯಕ್ಕಾಗಿ ನನಗೆ ತಿಳಿದ ಎರಡು ರಸನಿಮಿಷಗಳನ್ನು ನೆನಪಿಗೆ ತರುತ್ತೇನೆ. ಒಂದನೆಯದು ನನ್ನ ಕಿರಿಮಿತ್ರನೂ, ಶಿಷ್ಯನೂ ಆದ ಶ್ರೀಶ ಬಲ್ಲಾಳರ ಸಂಬಂಧವಲ್ಲಿ, ಬಲ್ಲಾಳರ ಮೊದಲನೇ ಮಡದಿ ಅವರಿಗೆ ಒಂದು ಗಂಡುಗೂಸು ಕೊಟ್ಟು ತೀರಿಕೊಂಡಾಗ ಅದೇ ತಾನೇ ಅದನ್ನರಿತ ಬೇಂದ್ರೆ ಬಲ್ಲಾಳರನ್ನು ತನ್ನ ಸಮೀಪ ಕೂಡಿಸಿಕೊಂಡು 'ಬಲ್ಲಾಳರೇ, ನಿಮಗೊಂದು ಮಾತು ಹೇಳ್ತೇನೆ. ನೀವಿನ್ನೂ ತರುಣದಲ್ಲಿದ್ದೀರಾ, ಮದುವೆ ಮಾಡಿಕೊಳ್ಳಿ ಇನ್ನೊಮ್ಮೆ, ನಾನು ಹೇಳಿದೆ ಅಂತಲಾದರೂ ಮಾಡಿಕೊಳ್ಳಿ' ಎಂದು ಪ್ರೀತಿಯಿಂದ ಅವರ ತಲೆಯಮೇಲೆ ಕೈಯಿಟ್ಟರು. ಎರಡನೆಯ ಸಂದರ್ಭ ಡಾ. ಪೈ ಉತ್ಸವದ ಕೊನೇದಿನ. ನಮ್ಮ ಮನೆಯಲ್ಲೇ, ಅದು ಉಡುಪಿಗೆ ಅವರ ಕೊನೆಯ ಭೆಟ್ಟಿ. ಧಾರವಾಡಕ್ಕೆ ಮರುಪಯಣದ ವೇಳೆ ಸನ್ನಿಹಿತವಾಗಿದೆ. ಕಾರು ಸಿದ್ಧವಾಗಿದೆ ಎಂದು ಕರೆದು ಹೇಳಿದೆ. ಮಂಚದ ಮೇಲೆ ಸುಖಾಸೀನರಾಗಿದ್ದ ಬೇಂದ್ರೆ ಇಲ್ಲಿ ಬನ್ನಿ. ನಿಮಗೊಂದು ಮಾತು ಹೇಳಲಿಕ್ಕಿದೆ ಎಂದರು. ಸಮೀಪ ಹೋಗಿ ನಿಂತೆ' 'ನಾನು ಈ ಸಾರಿ ನಿಮಗೆ ತುಂಬ ತೊಂದರೆ ಕೊಟ್ಟೆ ಅಲ್ಲವೇ? ನೋಡಿ, ಈಗ ನಾನಿರೋದೇ ಹೀಗೆ' ಎಂದು ಪಶ್ಚಾತ್ತಾಪ ಪಡುವ ದನಿಯಲ್ಲಿ ಹೇಳಿದಾಗ ನನಗೆ ಅಳುವಂತಾಯಿತು. 'ಸಖಿ ನಮ್ಮ ಸಖ್ಯದ ಆಹ್ವಾನ ಕಟುಮಧುರ' ಎಂದ ಕವಿಯ ಸಮೀಪಕ್ಕೆ ಹೋದವರಿಗೆ ಅವರ ಸ್ವಭಾವದ ಕಟುಮಧುರ ಪರಿಚಯ ಆಗಿಯೇ ಆಗುತ್ತದೆ. ಆದರೆ ಅವರ ಪ್ರಸನ್ನ ರೂಪವನ್ನು ಒಮ್ಮೆ ಕಂಡರೂ ಕಟುತ್ವಗಳೆಲ್ಲ ಹಿಂಜರಿಯುತ್ತವೆಂಬುವಕ್ಕೆ ನನ್ನ ಅನುಭವವೇ ಸಾಕ್ಷಿ.

ವರ್ಷಕ್ಕೊಂದು ಸಲವಾದರೂ ನಾನು ನೋಡಿಯೇ ನೋಡುತ್ತಿದ್ದ ಸಾಹಿತಿಗಳೆಂದರೆ ವೀಸೀ ಮತ್ತು ಡಿ.ವಿ.ಜಿ. ವೀಸೀ ಅವರಂತೂ ನಮ್ಮ ಬಳಗದಂತೆ ಆಗಿದ್ದರು. ನಮ್ಮೊಳಗೆ ಸಮಾನ ವ್ಯಸನದ ಎರಡು ವಿಷಯಗಳಿದ್ದವು – ಸಾಹಿತ್ಯ ಮತ್ತು ಅರ್ಥಶಾಸ್ತ್ರ. ಪ್ರಾಪಂಚಿಕ ವಿಷಯದಲ್ಲಿ ವೀಸೀಯವರು ನನ್ನಂತೆಯೇ ಆದರ್ಶವಾದಿ, ವ್ಯವಹಾರ ಜಾಣರಲ್ಲ. ಮಾತಿನಮಲ್ಲರು. ವರ್ಷಕ್ಕೊಮ್ಮೆ ಎರಡು ಬಾರಿ ಉಡುಪಿಗೆ ಬರುತ್ತಿದ್ದರು. ಇಲ್ಲವಾದರೆ ನಾನೇ ಬೆಂಗಳೂರು ಯಾತ್ರೆಯ ಸಂದರ್ಭದಲ್ಲಿ ಚಾಮರಾಜಪೇಟೆಯ ಅವರ ಮನೆಗೆ ಭೆಟ್ಟಿಕೊಟ್ಟು ಒಂದು ತಾಸು ಕಳೆಯುವೆ. ಚಿಕ್ಕ ಕೊಠಡಿಯಲ್ಲಿ ಅವರಿಟ್ಟ ಸ್ವಂತ ಲೈಬ್ರರಿಯನ್ನ ನೋಡುತ್ತಲೂ ಅವರ ಚರ್ಚೆಗೆ ಕಿವಿಗೊಡುತ್ತಲೂ ಸಂತೋಷಪಡುತ್ತಿದ್ದೆ. ವೀಸೀ ಬಂಗಾಳೀ ಕಲಿತು ರವೀಂದ್ರನಾಥ ಠಾಕೂರರನ್ನು ಮೂಲದಲ್ಲೇ ಓದಿಕೊಂಡವರು. ನೋಡಿ, ಇಂಗ್ಲಿಷ್ ಕವನದಲ್ಲಿ ಈ ಸಾಲು ಇಲ್ಲ ಎಂದು 'ವೇರ್ ದ ಮೈಂಡ್ ಈಸ್ ವಿದೌಟ್ ಫಿಯರ್' ಎಂಬ ಕವನದ ಲೋಪವನ್ನೆತ್ತಿ ತೋರಿಸುವರು.

'ಚಿತ್ತ ಜೇಥಾಭಯಶೂನ್ಯ

ಉಚ್ಚ ಜೇಥಾಶಿರ್' ಎಂಬುದನ್ನು ಘಂಟಾಘೋಷವಾಗಿ ಓದಿ ಎಲ್ಲಿದೆ ಈ ಶಕ್ತಿ ನಿಮ್ಮ ಇಂಗ್ಲಿಷ್ ಅನುವಾದ ದಲ್ಲಿ, ಕೇಳಿ 'ಹುದ ಶತ ಖಂಡ ಕರಿ' ಎಂಬ ಸಾಲೇ ಬಿಟ್ಟು ಹೋಗಿದೆ ಎನ್ನುವರು. ಬಂಗಾಳಿಗೆ ಶರಣು ಹೋಗದೆ ರವೀಂದ್ರರ ಪ್ರತಿಭೆ ಯಾರಿಗೂ ಗೋಚರಿಸದು ಎಂದು ಟಾಠಡಾಘಣವೆಂದು ಹೇಳಿ ಬಿಡುವರು. 'ಏನಪ್ಪಾ, ನೀವು ದಕ್ಷಿಣ ಕನ್ನಡದವರು, ಧೀರರು ವೀರರು–ಏನು ಮಾಡಿದರೂ ಅಚ್ಚುಕಟ್ಟಾಗಿಯೇ ಮಾಡುತ್ತೀರಿ ಎಂದು ಶಿಫಾರಸು ಹೇಳಿಯೇ ಹೋಗುವರು ಉಡುಪಿಯಿಂದ. ಕಾಳಿದಾಸ, ಪುರಂದರದಾಸ, ಶೇಕ್ಸ್‌ಪಿಯರ್, ಶಾ. ಕೀನ್ಸ್–ಸಿಡ್ನ್‌ವೆಬ್, ಪಂಪ, ಕುಮಾರವ್ಯಾಸ ಹೀಗೆ ಧೀಮಂತ ಬರಹಗಾರರ ರಸಗ್ರಹಣ ಮತ್ತು ವಿಮರ್ಶೆಗಳನ್ನು ತನ್ನ ಜೀವನ ಸರ್ವಸ್ವವೆಂದು ಅಪ್ಪಿ ಅಳವಡಿಸಿಕೊಂಡ ವಿ.ಸೀ. ಅವರ ಜ್ಞಾನಭಂಡಾರವೂ, ಪರಿಧಿಯೂ ವೈಶಿಷ್ಟ್ಯಪೂರ್ಣ ವಾಗಿದ್ದವು. ಅದೆಂಥ ಕಡಮೆ ಸಂಬಳದ ಕೆಲಸದಲ್ಲೇ ಇರಲಿ ಲಂಡನ್ ಇಕಾನಾಮಿಸ್ಟ್ ಪತ್ರಿಕೆ ತರಿಸಿ (ಸ್ವತಃ ಚಂದಾದಾರನಾಗಿ ತರಿಸಿ) ಓದದೆ ಅವರಿಗೆ ತೃಪ್ತಿ ಇರದು. ಇಂಗ್ಲಿಷ್ ಬರವಣಿಗೆಗಳ ಮೇಲಿನ ಪ್ರೇಮ-ಶ್ರದ್ಧೆ ಅಂಥದು.

ಡಿವಿಜಿ ಅವರ ಪರಿಚಯ ನನಗೆ ಆದದ್ದು ಅವರ 'ಜೀವನ ಸೌಂದರ್ಯ ಮತ್ತು ಸಾಹಿತ್ಯ' ಎಂಬ ಗ್ರಂಥದಿಂದ. ಅದನ್ನ ಮೊದಲ ಸಲ ಓದುವಾಗ ನನ್ನ ವಯಸ್ಸು ಬರೇ 17. ಆಗ ಪೂರ್ತಿ ವಿಷಯಗಳು ಅರ್ಥವಾಗದೆ ಹೋದಾಗಲೂ ಕನ್ನಡ ಗದ್ಯದಲ್ಲಿ ಅಂತಿಂಥ ಘನ ಸಂಗತಿಗಳನ್ನು ಇಷ್ಟು ಸುಂದರವಾಗಿ ವಿಶ್ಲೇಷಿಸಲು ಬರುತ್ತದೆ ಎನ್ನುವುದೇ ಅಚ್ಚರಿಯ ವಿಷಯವಾಗಿತ್ತು. ಹೀಗೆ ಬರೆಯ ಬಲ್ಲವರ ಮೇಲೆ ಉತ್ಕಟವಾದ ಶ್ರದ್ಧಾಭಕ್ತಿ. 1951ರ ಸಂದಿನಲ್ಲಿ ಮೊದಲ ಬಾರಿಗೆ ಅವರನ್ನ ಕಂಡೆನೆಂಬ ನೆನಪು – ಅಷ್ಟು ಹೊತ್ತಿಗೆ ನಾನು ಡಾ. ಅಲ್ಬರ್ಟ್ ಶ್ವಯಿಟ್ಸ್‌ರ ಅವರ ಒಂದು ಪುಸ್ತಕದ ವಿಚಾರಗಳನ್ನು 'ಬದುಕುವ ದಾರಿ' ಎಂದು ಸಂಗ್ರಹಿಸಿ ಬರೆದಿದ್ದೆ. ಕಂಡ ಕೂಡಲೇ 'ನೀವೆಯೋ ಹರಿದಾಸ ಭಟ್ಟರು? ನನ್ನ ದೃಷ್ಟಿಯಲ್ಲಿ ನಿಮಗೆ ಇನ್ನೂ ಮೂವತ್ತು ವರ್ಷ ಹೆಚ್ಚಾಗಬೇಕಿತ್ತು' ಎಂದರು ಡಿವಿಜಿ. ಶ್ವಯಿಟ್ಸ್‌ರ ಬರೆದು ನಾನು ಅನುವಾದಿಸಿದ ನಾಗರಿಕತೆಯ ಅಳಿವು-ಉಳಿವುಗಳ ವಿಮರ್ಶೆ ಸಾಮಾನ್ಯ ಜನರಿಗೆ ಹೇಗೆ ಆಕರ್ಷಣೆಯಾದೀತೆಂಬ ಡಿವಿಜಿ ಊಹನೆಯಲ್ಲಿ ನನ್ನ ವಯೋಮಿತಿ ಮುಂದೆ ಸಾಗಿದ್ದಿರಬೇಕು. ಬರೆದದ್ದೆಲ್ಲವೂ ಬಂಗಾರವೆಂಬ ಮಾತು ಡಿವಿಜಿಗೆ ಅನ್ವಯಿಸುತ್ತದೆ. ಅವರ ಗ್ರಂಥಗಳು, ಅಲ್ಲಿನ ವಿಚಾರಗಳು ನನ್ನ ತಾರುಣ್ಯದಲ್ಲಿ ನನ್ನನ್ನ ಆವೇಗ – ಉದ್ವೇಗದ ವಿಚಾರ ಮಾತುಗಳಿಂದ, ಪಂಥಗಳಿಂದ ರಕ್ಷಣೆ ಮಾಡಿದವು. ಮನುಷ್ಯ ಜಾತಿಗೆ ಕಲಹ ಬುದ್ಧಿ ಸ್ವಭಾವವೆನಿಸಿದರೂ ಅದನ್ನ ಮೀರಿ ಸಮಾಧಾನದಿಂದ ತಾಳುವ, ತಾಳಿಕೊಳ್ಳುವ ವಿಚಾರ ಪ್ರಕಾರಗಳೇ ಪ್ರಜಾಪ್ರಭುತ್ವಕ್ಕೆ ಭದ್ರಬುನಾದಿ. ಉದ್ವೇಗ ಆಕ್ರೋಶಗಳು ಸಂಚಾರೀ ಭಾವಗಳು, ಶಾಂತಿ, ಸಮಾಧಾನ, ಸ್ಥಾಯಿ, ಹಾಗಿರುವುದೇ ನಾಗರಿಕತೆ ಹಾಗೂ ರಾಜಕೀಯ ಸಮತೋಲ. 'ರಾಜ್ಯಶಾಸ್ತ್ರ', 'ರಾಜಕೀಯ ತತ್ವಗಳು' – ಈ ಎರಡು ಗ್ರಂಥಗಳಲ್ಲಿ ಅದೆಷ್ಟು ಮನಂಬುಗುವಂತೆ ಪ್ರಜಾತಂತ್ರದ ರಹಸ್ಯವನ್ನ ಸುಲಭ ಕನ್ನಡ ಶೈಲಿಯಲ್ಲಿ ತಿಳಿ ಹೇಳಿದ್ದಾರೆ? ಮಂಕುತಿಮ್ಮನಾಗಿ, ಮರುಳಮುನಿಯನಾಗಿ ಸರ್ವಜ್ಞ ಪೀಠವನ್ನೇರಿ ಕೂತಂಥ ಈ ಮಹಾತಿಮ್ಮ ಕನ್ನಡ ಭಾಷೆ ಇರುವನಕ, ಆಚಂದ್ರಾರ್ಕ ಉಳಿಯುವ ಕವಿ, ದಾರ್ಶನಿಕ. ಬ್ರಹ್ಮಜ್ಞಾನವನ್ನ ಜನಸಾಮಾನ್ಯರಿಗೆ ತಮ್ಮ ಸುಭಾಷಿತಗಳ ಮೂಲಕ ಮುಟ್ಟಿಸಿ ಧನ್ಯರಾಗಿದ್ದಾರೆ. ನಾನು 'ಕಳೆದ ವರ್ಷ ನೋಡಲು ಬರಲಾಗಲಿಲ್ಲ' ಎಂದು ಶೋಕಿಸಿದರೆ ಬಂದೇನಾಗಬೇಕು, ಬರಲೇ ಬೇಕೆಂದೇನು? ಬರಬೇಕು ಎಂದು ಮನಸ್ಸಿನಲ್ಲಿತ್ತಲ್ಲಾ ಅದು ಮುಖ್ಯ ಎನ್ನುವರು. ಅವರನ್ನು ಉಡುಪಿಗೆ ಕರೆಸಬೇಕೆಂದು ಬಹಳ ಪ್ರಯತ್ನಿಸಿದೆ, ಆಗಲಿಲ್ಲ. ಜಿ.ಪಿ. ರಾಜರತ್ನಂ ಅವರನ್ನು ಅವರ ಬಗ್ಗೆ ಮಾತನಾಡಲು ಕರೆಸಿ ಅವರ ಬಗ್ಗೆ ಒಂದು ಪುಸ್ತಿಕೆ ತರ ಬೇಕೆಂಬ ಆಸೆಯೂ ಫಲಿಸಲಿಲ್ಲ. ಮುಂದಿನ ಅಷ್ಟಮಿಗೆ ಬರೆದು ಕೊಡುತ್ತೇನೆಂದು ರಾಜರತ್ನಂ ತಡ ಮಾಡುತ್ತಲೇ ಹೋದರು. ಕೊನೆಗೆ ನಾನೇ 'ಕನ್ನಡ ಕಟ್ಟಿದವರು' ಎಂಬ ಲೇಖನ ಮಾಲೆಯಲ್ಲಿ ನಾಲ್ಕು ಪುಟ ಬರೆದು ನನ್ನ ಗೌರವ ಸಲ್ಲಿಸಿದೆ.

ಧಾರವಾಡದ ಶಂ.ಬಾ. ಜೋಶಿ ಡಿವಿಜಿಯವರ ಅಂತೆಯೇ ನನಗೆ ಆರಾಧ್ಯರು. ಪ್ರಾಥಮಿಕ ಶಾಲಾ ಉಪಾಧ್ಯಾಯನೊಬ್ಬ ಸಂಶೋಧನಕಾರ್ಯದಲ್ಲಿ ಇಂಥ ಪರಿಣತಿ ಸಾಧಿಸುವುದು ಭಾರತೀಯ ಸಾಹಿತ್ಯದ ಇತಿಹಾಸ ದಲ್ಲೇ ವಿರಳವೆನಿಸೀತು. ಶಂಬಾ ಅವರ ಇಳಿವಯಸ್ಸಿನಲ್ಲೇ ನಾನವರನ್ನು ಕಂಡವನು–ಅವರ ಭಾಷಾ ಸಂಶೋಧನೆ ಯನ್ನು ಅವರ ಮೇರುಕೃತಿಗಳನ್ನು ಅರ್ಥೈಸಲು ಪ್ರಯತ್ನಿಸಿದವನು. ಅವರನ್ನು ಕುರಿತೂ 'ಕನ್ನಡ ಕಟ್ಟಿದವರು' ಗ್ರಂಥದಲ್ಲಿ ಪ್ರಸ್ತಾಪಿಸಿದ್ದೇನೆ.

ಎಳವೆಯಿಂದಲೂ ನಾನೇ ನಾನಾಗಿ ಅಥವಾ ಪರವೂರಿನಿಂದ ಬಂದ ಮಿತ್ರರೊಡಗೂಡಿ ತಪ್ಪದೆ ಹೋಗು ತ್ತಿದ್ದ ಒಂದು ಸ್ಥಳವೆಂದರೆ ಮಂಜೇಶ್ವರವೆಂಬ ಗೋವಿಂದ ಪೈ ತೀರ್ಥಕ್ಷೇತ್ರ. ನಾನು ಅವರನ್ನು ತಿಳಿಯುವಾಗ ಅವರು ಸಾಹಿತ್ಯ ದಿಗ್ಗಜ ಸ್ಥಾನಕ್ಕೇರಿ ಕೆಲವು ವರ್ಷಗಳು ಸಂದಿದ್ದವು. ಅವರ ಮುಖ್ಯ ಸಾಹಿತ್ಯಿಕ ಸೃಷ್ಟಿಕಾರ್ಯಗಳೂ ಮುಗಿದು ಅವರ ಸ್ಥಾನ ಸುಭದ್ರವಾಗಿತ್ತು. ಹತ್ತು ಹದಿನೈದು ವರ್ಷಗಳ ಕಾಲ ಅವರ ಸ್ನೇಹಾಚಾರ ಬೆಳೆದು ಬಂತು. ಇಲಿಯಟ್ ಬಗ್ಗೆ ಚೌರಾ ಬರೆದ ವಿಮರ್ಶೆಯ ಗ್ರಂಥವನ್ನೋದಲು ಕೊಟ್ಟಿದ್ದೆ. ಹಾಗೇ ಮರಳಿಸಿ

ಬಿಟ್ಟಿದ್ದರು. ಇದು ನಮಗಲ್ಲ ಸ್ವಾಮಿ ಎಂದು ಬಿಟ್ಟರು. 'ನೋಡಿ ನನ್ನನ್ನ ನಿಮ್ಮ ಸಭೆಗಳಿಗೆ ಕರೆಯಬೇಡಿ, ನಾನು ಓದುವುದು ನನ್ನ ಹಳೇ ಪ್ರಬಂಧ. ನಿಮ್ಮ ಹುಡುಗರಿಗೆ ಆಗದು 'ಎನ್ನುವರು. ಆದರೂ ನಾನು ಬಿಡಲಿಲ್ಲ. ಒಂದು ಸಭೆಯಲ್ಲಿ ಯಾವುದೋ ಕಾಲ ನಿರ್ಣಾಯವನ್ನು 50 ಮಿನಿಟುಗಳ ಕಾಲ ಓದಿಯೇ ಬಿಟ್ಟರು. ಕಾಲೇಜಿನ ಆ ಸ್ವರ್ಣಯುಗದಲ್ಲಿ ಕಿಕ್ಕಿರಿದು ನೆರೆದ ವಿದ್ಯಾರ್ಥಿ ಸಭೆ ಬೆವರಿಳಿಸುತ್ತಾ ಭಾಷಣವನ್ನು ಆಲಿಸಿತು. ಲಂಡನಿನಿಂದ ಬಂದ ಒಬ್ಬ ವಿದ್ವಾಂಸನನ್ನ ಅವರಲ್ಲಿ ಕರೆದುಕೊಂಡು ಹೋಗಿದ್ದೆ. ಆತನಿಗೆ ಕುರಿಂಜಿ ಹೂವಿನ ಬಗ್ಗೆ ತಿಳಿಯಬೇಕಾಗಿತ್ತು. ಗೋವಿಂದ ಪೈ ಅವರು ಅದನ್ನ ಬಳಸಿದ್ದಾರೆಂದು ಕೇಳಿದ ತಕ್ಷಣ ಅವರ ಹತ್ತಿರ ಹೋಗೋಣ ಎಂದ. ಈ ಪದ ಎಲ್ಲಿಂದ ಬಂತು, ಹೂ ಯಾವುದು ಎಂಬ ಪ್ರಶ್ನೆ ಅವನದು. ಪೈ ಅವರು ನೇರವಾಗಿ ಆ ಬಗ್ಗೆ ನನಗೆ ಗೊತ್ತಿರುವುದಿಷ್ಟೆ-ಅದೊಂದು ಅಪೂರ್ವ ಹೂ ಎಂದು, ಬೇರೆ ಗೊತ್ತಿಲ್ಲ ಎಂದು ಬಿಟ್ಟರು. ವಿದೇಶೀ ಪಂಡಿತನನ್ನು 'ಇಂಪ್ರೆಸ್' ಮಾಡಲು ಅಬದ್ಧಗಳನ್ನು ಹೇಳುವುದು ಅವರ ಜಾಯಮಾನವಾಗಿರಲಿಲ್ಲ. ಗೋವಿಂದ ಪೈ ನಿಧನಾನಂತರ ಅವರ ಸಮೃದ್ಧ ಗ್ರಂಥಾಲಯಕ್ಕೆ ಎಂ.ಜಿ.ಎಂ. ಕಾಲೇಜು ಉತ್ತರಾಧಿಕಾರಿಯಾಯಿತು. ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿಯಲ್ಲಿ ಅವರ ಸ್ಮಾರಕವಾಗಿ ಎದ್ದು ನಿಂತಿದೆ. ಮಂಜೇಶ್ವರದ ಕವಿಗೃಹ ಸಂರಕ್ಷಣೆಯ ಸಮಿತಿಯಲ್ಲಿಯೂ ನಾನು ಕೆಲಸ ಮಾಡುವ ಪ್ರಸಂಗ ಬಂದಿದೆ.

ಶಿವರಾಮ ಕಾರಂತರ ವ್ಯಕ್ತಿತ್ವ ಪರಿಚಯ ಆಗುವುದಕ್ಕೆ ಮೊದಲೇ, ನಿಕಟತೆಗೆ ಮೊದಲೇ ಅವರ ಸಾಹಿತ್ಯದ ಮೂಲಕ ಅವರ ಅಪ್ರತಿಮ ಪ್ರತಿಭೆಗೆ ಮಾರುಹೋದ ನಾನು ಆಮೇಲೆ ಅವರ ನಿಕಟವರ್ತಿಯೂ ಆದೆ. ಚೋಮನ ದುಡಿ ಬರೆದು ಹತ್ತು ವರ್ಷಗಳ ಮೇಲೆ ಬಂದ ಮರಳಿಮಣ್ಣಿಗೆ ಮೊದಲು ಮನೋಹರ ಗ್ರಂಥಮಾಲೆಯಿಂದ ಪ್ರಕಟವಾದದ್ದಷ್ಟೆ. ಅದರ ಮೂರು ಸಂಪುಟಗಳನ್ನು ನುಂಗಿ ಮುಂದೇನು ಬರೆಯುತ್ತಾರೆಂದು ಕಾಯುತ್ತಿದ್ದೆ. ಮರಳಿ ಮಣ್ಣಿಗೆಯ ಬಗ್ಗೆ ವಿಮರ್ಶೆ ಒಂದನ್ನ ಮಾಸ್ತಿಯವರ ಜೀವನಕ್ಕೆ ಕಳಿಸಿದ್ದೆ. 1943ರಲ್ಲಿ ಅದು ಪ್ರಕಟವಾಯಿತೆಂದು ನೆನಪು. ಅದಕ್ಕಿಂತಲೂ ಮೋಜಿನ ಪ್ರಸಂಗ ನಾನು ಇಂಟರ್ ಪರೀಕ್ಷೆಯಲ್ಲಿ ಮರಳಿ ಮಣ್ಣಿಗೆಯ ಮೇಲಿನ ಪ್ರಶ್ನೆಗೆ ಉತ್ತರಿಸಿದ್ದು. 'ಮರಳಿ ಮಣ್ಣಿಗೆ'ಯ ಸ್ತ್ರೀಪಾತ್ರಗಳ ಕುರಿತಂಥ ಪ್ರಶ್ನೆಗೆ ನನ್ನ ಉಪೋದ್ಘಾತವೇ ಎಂಟು ಪುಟಗಳಷ್ಟಾಯಿತು. ಜಾಸ್ತಿ ಕಾಗದ ಕೇಳಿದೆ. ಅದು ಉಪಪಠ್ಯ ಪರೀಕ್ಷೆ. ಮೊದಲು ಕೊಟ್ಟಿರುವ ಉತ್ತರ ಪತ್ರಿಕೆಯ ಹನ್ನೆರಡು ಹಾಳೆಗಳು 3 ಪ್ರಶ್ನೆಗಳ ಉತ್ತರಕ್ಕೆ ಯಥೇಷ್ಟವಾಗಿದ್ದರೂ, ಈತ ಇನ್ನೊಂದನ್ನು ಏಕೆ ಕೇಳುತ್ತಿದ್ದಾನೆಂದು ನಿರೀಕ್ಷಕರು ಪ್ರಶ್ನೆ ಪತ್ರಿಕೆ ತೋರಿಸಿ '3 ಪುಟಗಳಿಗೆ ಮೀರದಂತೆ' ಎಂಬ ಒಕ್ಕಣೆ ತೋರಿಸಿದರು. ನನ್ನ ವಿಷಯ ವಿಸ್ತಾರವನ್ನು ಹಠಾತ್ ನಿಲ್ಲಿಸಿ 3 ಪುಟದಲ್ಲಿ ಸರಸೋತಿ ಪಾರ್ವತಿಯವರನ್ನು ಬಣ್ಣಿಸಿದೆ. ಸರಿ ಪರೀಕ್ಷಕ ನನ್ನ ಸುದೀರ್ಘ ಉಪೋದ್ಘಾತದ ಮೇಲೆ ಅಸಹನೆ ತೋರಿಸಿ ಅಡ್ಡ ಗೀಟೆಳೆದರೆ ಗತಿ ಆಯಿತು ಎಂದುಕೊಂಡೆ. ಹಾಗೇನೂ ಆಗಲಿಲ್ಲ. ಅಂಥ ಓದಿಸಿಕೊಳ್ಳುವ ಗುಣ ಸರಸೋತಿ ಪಾರೋತಿಯರ ವ್ಯಕ್ತಿತ್ವದಲ್ಲಿದ್ದಿರಬೇಕು. ಮರಳಿ ಮಣ್ಣಿಗೆಯ ಅನಂತರ, ಸರಸಮ್ಮನ ಸಮಾಧಿ, ಬೆಟ್ಟದ ಜೀವ, ಮುಗಿದ ಯುದ್ಧ, ಔದಾರ್ಯದ ಉರುಳಲ್ಲಿ, ಕುಡಿಯರ ಕೂಸು, ಒಡ ಹುಟ್ಟಿದವರು, ನಂಬಿದವರ ನಾಕ–ನರಕ, ಸಮೀಕ್ಷೆ – ಈ ಕಾದಂಬರಿಗಳನ್ನು ಕಾರಂತರು ಪುಂಖಾನುಪುಂಖವಾಗಿ ಬರೆದೆಸೆದ ದಶಕ ಕಾರಂತ ಸಾಹಿತ್ಯ ಸೃಷ್ಟಿಯ ಶಿಖರವೇ ಎಂದೆನ್ನಬೇಕು. ಅವರ ಸೃಜನಶಕ್ತಿ ಒಂದು ತಡಸಲಿನಂತೆ ಕನ್ನಡ ಮಾತಿನಲ್ಲಿ ಭೋರ್ಗರೆದ ತೇಜೋವಂತ ಕಾಲಘಟ್ಟ. ಆ ಮೇಲೆ ಗತಿ ನಿಧಾನವಾದರೂ ಐದಾರು ವರ್ಷಕ್ಕೊಮ್ಮೆ ಭುಗಿಲೇಳುವ ಒಂದು ಕೃತಿರತ್ನ – ಅಳಿದ ಮೇಲೆ, ಧರ್ಮರಾಯನ ಸಂಸಾರ – ಅಂಥವು ಕಾರಂತರ ಚಿರನೂತನ ಶಕ್ತಿಯ ದ್ಯೋತಕ. 1962ರಲ್ಲಿ ಕರ್ನಾಟಕ ಸಂಘದ ವತಿಯಿಂದ ಒಂದು ಚಿಕ್ಕ ಸನ್ಮಾನ ಗ್ರಂಥ (ಕಾರಂತ ಅರುವತ್ತು), 1969ರಲ್ಲಿ ಇನ್ನೊಂದು (ಕಾರಂತ ಪ್ರಪಂಚ) ವಿಸ್ತೃತ ಅಭಿನಂದನ ಗ್ರಂಥಗಳಿಗೆ ಸಂಪಾದಕನಾದೆ.

ಕಾರಂತ ಸಾಹಿತ್ಯದ ಅಭ್ಯಾಸದ ಜತೆಗೆ ಅವರ ಪರಿಚಯ ಮತ್ತು ಬಾಂಧವ್ಯಗಳು ಈ ಮೂವತ್ತು ವರ್ಷದಿಂದ ಬೆಳೆದು ಬಂದವು. ಕಳೆದ 15 ವರ್ಷಗಳಿಂದ 'ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲಿ' ಒಂದಾದ ಯಕ್ಷಗಾನಕ್ಕೆ ಒಂದು ಶಾಲೆಯನ್ನು ನಮ್ಮ ಕಾಲೇಜಿನಂಗಳದಲ್ಲಿಯೇ ನಿರ್ಮಿಸಿದಾಗ ಇನ್ನಷ್ಟು ಸಾಮೀಪ್ಯ ಒದಗಿ ಬಂತು. ಯಕ್ಷಗಾನ ಕೈಂಕರ್ಯದ ದೆಸೆಯಿಂದಾಗಿ ನನ್ನ ನಿವೃತ್ತ ಜೀವನವು ಪ್ರವೃತ್ತಿಗಿಂತಲೂ ಕಾರ್ಯನಿಬಿಡವಾಯಿತು. ಕರಾವಳಿ ಯಕ್ಷಗಾನವನ್ನು ಗಡಿದಾಟಿಸಿ (1975–78 ಈ ಮೂರು ವರ್ಷಗಳಲ್ಲಿ) ಅಖಿಲ ಭಾರತಕ್ಕೂ, ವಿಶ್ವಕ್ಕೂ (1979ರಿಂದ 1982) ಪರಿಚಯಿಸಿಕೊಡುವಲ್ಲಿ ನಾನು ಮಾಡಿದ ಸಂಘಟನಾ ಕಾರ್ಯಗಳನ್ನು ನನ್ನ ಪ್ರವಾಸ ಕಥನದಲ್ಲಿ ವಿಶದೀಕರಿಸಿದ್ದೇನೆ. ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ 'ವೀಕ್ಲಿ'ಗೆ ಅವರನ್ನ ಸಂದರ್ಶಿಸಿ ಬರೆಯಬೇಕಾಯಿತು. ಆಮೇಲೆ ಒಂದು ವರ್ಷಕಾಲ ಅವರ ಜ್ಞಾನಪೀಠ ಉಪರಾಂತ ಭಾಷಣಗಳು ಕರ್ನಾಟಕದ ಒಳಗೂ, ಮುಂಬಯಿ ಸೌರಾಷ್ಟ್ರಗಳಲ್ಲೂ ನಡೆದಾಗ ನಾನೋ ನನ್ನ ಸಿಬ್ಬಂದಿಯೋ ಅವರ ಜೊತೆ ಹೋಗಿ ಸುಮಾರು 25 ಭಾಷಣಗಳನ್ನು ಸಂಗ್ರಹಿಸಿಟ್ಟು ಕೊಂಡಿದ್ದೇವೆ. ಧ್ವನಿಸುರುಳಿಯಲ್ಲಿರುವ ಈ ಭಾಷಣಗಳಲ್ಲಿ ಹಲವನ್ನು ಇನ್ನೂ ಲಿಪೀಕರಿಸಲು ನಮ್ಮಿಂದ ಆಗಿಲ್ಲ; ಪೂರ್ತಿ ಆದರೆ ಒಂದು ಒಳ್ಳೆ ಉಪನ್ಯಾಸ ಮಾಲಿಕೆ ಕನ್ನಡಕ್ಕೆ ದೊರೆತೀತು.

ಯಕ್ಷಗಾನ ಎಂಬ ನಾಲ್ಕಕ್ಷರ ಯಾವತ್ತಿನಿಂದಲೂ ಒಂದು ಚರ್ಚಾಸ್ಪದ ವಿಷಯ. ಯಕ್ಷಗಾನ ಬಡಗು, ತೆಂಕು, ಮೂಡು, ಪಡು ಎಂದು ನಾಲ್ಕು ವಿಧ ಎಂದಾಗ ಕೋರೆ ಅಥವಾ ಓರೆಯನ್ನ ಐದನೆಯದಾಗಿ ಸೇರಿಸಿ ಎನ್ನುತ್ತಾರೆ. ಮಾತು ಹೆಚ್ಚು, ಮಾತು ಕಡಮೆ, ಮಾತೇ ಇಲ್ಲ, ಕಲಿತ ಮಾತು, ಕಲಿಯದ ಆಶುಭಾಷಣ – ಅದು ಹೇಗೇ ಇರಲಿ, ಏನೇ ಇರಲಿ ಇಂಥಾದ್ದೂ ಒಂದು ವರ್ಗೀಕರಣ. ಈಗಂತೂ ಹೆಣ್ಮಕ್ಕಳು, ಮಕ್ಕಳು ಕೂಡ ಪ್ರತ್ಯೇಕ ಮೇಳ ಕಟ್ಟಿಕೊಂಡು ನಾವೇನು ಕಮ್ಮಿ, ನಾವೂ ವಿಶ್ವಸಂಚಾರ ಮಾಡಿದ್ದೇವೆಂದು ಹಮ್ಮು ಬಿಮ್ಮು ಗಳಿಂದ ಬೀಗುವ ಕಾಲ. ದಕ್ಷಿಣ ಕನ್ನಡ ಜಿಲ್ಲೆಯ ಯಕ್ಷಗಾನ ಒಂದೇ ಅಲ್ಲ ಸ್ವಾಮಿ, ನಮ್ಮಲ್ಲೂ ಇದೆ ಎಂದು ತೋರಿಸುತ್ತಾರೆ – ಮೂಡಲಪಾಯವನ್ನು. ನಮ್ಮದು ಜಾನಪದ, ನಿಮ್ಮದು ಕ್ಲಾಸಿಕಲ್ ಮಟ್ಟವನ್ನೇರಿದ್ದರಿಂದ ಕೆಟ್ಟು ಹೋಗಿದೆ : ನಿಮ್ಮ ಜಾನಪದ ಪೀಠವನ್ನು ಬಿಟ್ಟೇಳಿ ಎನ್ನುವವರೂ ಇದ್ದಾರೆ. ಕಾರಂತರ ಯಕ್ಷಗಾನ ಇಂಥ ಅನೇಕ ವಿಡ್ಡೂರಗಳನ್ನೆದಿರಿಸಬೇಕಾಗಿತ್ತು. ಸ್ಥಾನೀಯ ಟೀಕಾಕಾರರಿಗೆ ಕಾರಂತರ ಯಕ್ಷರಂಗದ ಬ್ಯಾಲೇ ಮೂಕ ಯಕ್ಷಗಾನವೆನಿಸಿತ್ತು. ಇದು ಕಾರಂತರ ವರ್ಚಸ್ಸಿನಿಂದಾಗಿ ಗೆದ್ದು ಬಿಟ್ಟರೆ ಸಾಂಪ್ರದಾಯದ ಯಕ್ಷಗಾನಕ್ಕೆ ತೊಂದರೆ ಆದೀತೆಂಬ ಭೀತಿಯಿಂದಲೋ, ಈರ್ಷೆಯಿಂದಲೋ ಕೆಲವರು ದಿಲ್ಲಿಯವರೆಗೂ ಮೊರೆ ಇಟ್ಟರು. ಕಾರಂತರು ಮಹಾ ಸಾಹಿತಿ ಎಂಬುದನ್ನು ಶಿರಸಾ ವಹಿಸುತ್ತೇವೆ – ಆದರೆ ಅವರು ಯಕ್ಷಗಾನಕ್ಕೆ ಬರಬಾರದು, ಅವರ ಕೈ ಯಿಂದ ಯಕ್ಷಗಾನವನ್ನು ಸಂರಕ್ಷಿಸಿ ಅಯ್ಯೋ ಅಯ್ಯೋ ಎಂದು ಹುಯಿಲಿಟ್ಟರು. ಸಂಪ್ರದಾಯದ ಬಡಿಗೋಲಿಂದ ಯಕ್ಷರಂಗವನ್ನು ಹೊಡೆಯಲು ಯತ್ನಿಸಿದರು. ಹಿಂದೆ ನಮ್ಮ ಕಾಲೇಜು ಯಕ್ಷಗಾನಕ್ಕೊಂದು ತರಬೇತಿ ಕೇಂದ್ರ ತೆರೆದು ಪ್ರಸಿದ್ಧ ಕಲಾವಿದ ವೀರಭದ್ರ ನಾಯಕರ ಕೈಯಿಂದ ವರ್ಷಕ್ಕೆ ಹತ್ತು ಮಕ್ಕಳಿಗೆ ಶಿಕ್ಷಣ ಕೊಡಿಸಲು ಯತ್ನಿಸಿ ದಾಗಲೂ ಒಬ್ಬರು 'ಉಡುಪಿಯಲ್ಲಿ ಅದು ಹೇಗೆ ನೀವು ಶಾಲೆ ಮಾಡಿದಿರಿ, ಏಕೆ ಮಾಡಿದಿರಿ? ನಮ್ಮ ಊರಿಗೆ ಬನ್ನಿ ಇಲ್ಲಿ ಪ್ರತಿಯೊಬ್ಬನ ಧಮನಿಯಲ್ಲಿ ಯಕ್ಷಗಾನ ರಕ್ತ ಹರಿಯುತ್ತಿದೆ' ಎಂದು ಒಂದು ಹೊಸಬಗೆಯ ರಕ್ತದ ಶೋಧ ಮಾಡಿದ್ದಲ್ಲದೆ 'ಬನ್ನಿ ನಮ್ಮ ಹುಡುಗರಿಂದ ಒಂದು ಆಟ ಮಾಡಿಸುತ್ತೇವೆ, ನಿಮ್ಮ ಕೇಂದ್ರದ ಹುಡುಗರು ಅವರೊಡನೆ ಸ್ಪರ್ಧಿಸಲಿ' ಎಂದು ಪಂಥಾಹ್ವಾನ ಕೊಟ್ಟರು; ಕಾರಂತರ ಕೇಂದ್ರ ಯಾರೊಡನೆಯು ಜೋಡಾಟ ಕ್ಕೆಂದು ಏರ್ಪಾಟಾದ್ದಲ್ಲ, ನಮ್ಮದು ಬರೇ ತರಬೇತಿ ಕಾರ್ಯಕ್ರಮವೆಂದು ಅವರಿಗೆ ಬರೆದೆ. ಯಕ್ಷರಂಗವಾಗಲಿ, ಕಾಲೇಜಿನ ಯಕ್ಷಗಾನ ಕೇಂದ್ರವಾಗಲಿ ಇದಾವುದಕ್ಕೂ ಸಡ್ಡು ಹೊಡೆಯದೆ ನಿರಾತಂಕವಾಗಿ ವಿಶ್ವದ ಅನೇಕ ದೇಶಗಳಲ್ಲಿ ಜಯಭೇರಿ ಬಾರಿಸಿದವು. ಹಾಂಕಾಂಗ್, ಜಪಾನ್, ಇಂಗ್ಲೆಂಡ್, ಇಟಲಿ, ರಶಿಯ, ಬಲ್ಗೇರಿಯ, ಯುಗೊ ಸ್ಲಾವಿಯ, ಹಂಗೇರಿ – ಎಲ್ಲೆಡೆಯೂ ಕಾರಂತರ ಸ್ಪರ್ಶವುಳ್ಳ ಯಕ್ಷಗಾನ ತಂಡ, ಅವರಿಂದ ವಿಶ್ವವೇದಿಕೆ ಏರಲು ವಿಶಿಷ್ಟ ತರಬೇತಿ ಪಡೆದ ತಂಡ ಮನ್ನಣೆ ಪಡೆದೇ ಮರಳಿತು. 'ಯಕ್ಷಗಾನ' ವೆಂಬ ಕರ್ನಾಟಕೀ ಹೆಸರು ವಿಶ್ವದ ರಂಗಕಾರ್ಯಕರ್ತರಿಗೆ ಅರಿವಾಗುವಷ್ಟು ಪ್ರಸಿದ್ಧಿಯನ್ನು ನಮ್ಮ ತಂಡ ತಂದಿದೆ ಎಂಬುದಕ್ಕೆ ತನ್ನ 'ಮಹಾಭಾರತ' ವನ್ನ ರಂಗವೇರಿಸುವ ಮುನ್ನ ಫ್ರಾನ್ಸಿನ ಮಹಾನ್ ನಿರ್ದೇಶಕ ಪೀಟರ್ ಬ್ರೂಕ್ ನಮ್ಮ ಕೇಂದ್ರವನ್ನು ಹುಡುಕಿ ಕೊಂಡು ಉಡುಪಿಗೆ ಎರಡೆರಡು ಸಾರಿ ಬಂದು ಯಕ್ಷಗಾನದ ಸೊಗಸನ್ನು ತಮ್ಮ ಎಲ್ಲ ನಟರಿಗೂ ಉಣಿಸಿದ್ದು ಸಾಕ್ಷಿ. ಇದು ಸಿದ್ಧಿಯಾದರೆ ಅದಕ್ಕೆ ಪೂರ್ವಭಾವಿ ಸಾಧನೆಗಳು ಕಾಲೇಜು ಕ್ಯಾಂಪಸ್ಸಿನಲ್ಲೇ – ಗೋಷ್ಠಿ, ಕಮ್ಮಟಗಳ ರೂಪದಲ್ಲಿ — ಎರಡು ದಶಕಗಳಷ್ಟು ಕಾಲ ನಡೆಯಬೇಕಾಗಿತ್ತೆಂಬುದನ್ನು ಮರೆಯಬಾರದು. ಶಿಕ್ಷಣಕ್ಕೆ ನೇರ ಸಂಬಂಧವಿಲ್ಲದಾಗಲೂ ಕಾರಂತರು ಮಾಡುವುದೆಲ್ಲ ಒಂದು ಮುಖ್ಯ ಸಾಂಸ್ಕೃತಿಕ ಕೆಲಸವೆಂಬುದರಿಂದ ಇದಕ್ಕೆ ಬೆಂಬಲ ನೀಡಲೇ ಬೇಕೆಂದು ನಮ್ಮ ಸಂಸ್ಥೆಯ ವರಿಷ್ಠರಿಗೆ ತಿಳಿಸುವುದೊಂದು ನನ್ನ ಕರ್ತವ್ಯವಾಗಿತ್ತು ಆ ಕಾಲದಲ್ಲಿ.

ಮಾಸ್ತಿಯವರನ್ನು ಅವರು ಪರಿಷತ್ತಿನ ಅಧ್ಯಕ್ಷರಾದ ಲಾಗಾಯಿತು ಬಲ್ಲೆನಾದರೂ ಅವರ ಸಾಮೀಪ್ಯ ಕಡಿಮೆ. ಕನ್ನಡದ ಕೆಲಸವನ್ನು ಒಂದು ಕರ್ತವ್ಯವೆಂದು ಭಾವಿಸಿ ಜೀವನಪರ್ಯಂತ ಅವರು ಮಾಡಿದ ಬಹುಮುಖ ಕೆಲಸಗಳು, ಉಪಕಾರಗಳು, ಕೃತಿಗಳು, ಪ್ರಕಟನೆಗಳು ಮುಂತಾದುವಲ್ಲದೆ ಪ್ರತಿ ಕನ್ನಡ ಉತ್ಸಾಹಿಯೊಡನೆಯೂ ಅವರು ಇರಿಸಿಕೊಂಡ ಸ್ನೇಹಸಂಬಂಧ ಮರೆಯಲಾಗದ್ದು. ಜ್ಞಾನ ಪೀಠದ ಹಣವನ್ನು ಉದೀಯಮಾನ ಲೇಖಕರ ಸಲುವಾಗಿ ವಿನಿಯೋಗಿಸಲು ಸಿದ್ಧರಾದ ಮಾಸ್ತಿಯವರ ಬದುಕು ಕನ್ನಡಕ್ಕಾಗಿ ಮುಡಿಪಿಟ್ಟದ್ದು. ನಮ್ಮ ಸಾಹಿತ್ಯದ 'ನವೋದಯ' ಕಾಲದಲ್ಲಿ ಎಂತೆಂಥ ಹಿರಿಯರು ಕಾರ್ಯೋನ್ಮುಖರಾಗಿದ್ದರು ಎಂಬುದಕ್ಕೆ ಮಾಸ್ತಿ ನೆನಪು ನಂದಾದೀಪವಾದೀತು. 90 ವರ್ಷ ವಯಸ್ಸಾದಾಗ ಅಷ್ಟೊಂದು ಆರೋಗ್ಯ ಚೆನ್ನಾಗಿಲ್ಲದಿರುವ ಮಾಸ್ತಿಯವರನ್ನು ಧರ್ಮಸ್ಥಳ ಸಾಹಿತ್ಯದಿಬ್ಬಣದ ಗದ್ದಲದೊಳಗಿನಿಂದ ಪಾರು ಮಾಡಿ ಅಡ್ಡದಾರಿಯಿಂದ ಸಭಾಮಂಟಪಕ್ಕೆ ನಾನು ಕೊಂಡೊಯ್ದೆ. ಅವರಿಗೆ ಕೈ ಹಿಡಿದು ಒಯ್ದವನು ನಾನೆಂದು ತಿಳಿಯದೆ ಹೋಯಿತು – ಕನ್ನಡಕ ಇಲ್ಲದುದರಿಂದ. ನಾನು ಗೊತ್ತಿದೆ ಎಂದು ಸ್ವಪರಿಚಯ ಮಾಡಿಸಲಿಲ್ಲ. ಕೆಲ ದಿನ ಬಳಿಕ ಬೆಂಗಳೂರಿನಿಂದ ಅವರ ಪತ್ರ; 'ನನ್ನನ್ನು ಕರೆದೊಯ್ದವರು ನೀವಿರಬೇಕೆಂದು ಆಮೇಲೆ ಭಾಸ

ವಾಯಿತು. ಕ್ಷಮಿಸಬೇಕು, ನಿಮಗೆ ಒಂದು ಮಾತೂ ಹೇಳಲಿಲ್ಲ' ಎಂದು ಬರೆದಿದ್ದರು –'ಸಂದ ಜೀವನದ ರೀತಿ'ಗನುಗುಣವಾಗಿ.

ಉತ್ತಮ ಗದ್ಯ ಲೇಖಕ ವಿಮರ್ಶಕ ಸಾಹಿತಿಯಾಗಿಯೂ ಆ ವರ್ಗದ ಯಾವುದೇ ಸೋಂಕು. ಸೋಗುಗಳಿಗೆ ಒಳಗಾಗದೆ ನಿರಾಳವಾದ ಒಬ್ಬ ಸಾಮಾನ್ಯ ಮಿತ್ರನಂತೆ ವರ್ತಿಸುವ ಎ. ಎನ್. ಮೂರ್ತಿರಾಯರ ವ್ಯಕ್ತಿತ್ವ ನನಗೆ ಬಲು ಇಷ್ಟ. ಈ ಇಳಿವಯಸ್ಸಿನಲ್ಲೂ ಊರಿಂದೂರಿಗೆ ಅಲೆಯುತ್ತಾರೆ, ಮಿತ್ರರನ್ನು ಕಂಡು ತಾಸುಗಟ್ಟಲೆ ಸುಖಸಂಕಥಾ ವಿನೋದದಲ್ಲಿ ಕಾಲ ಕಳೆಯುತ್ತಾರೆ. ಅಷ್ಟೊಂದು ಪಾಂಡಿತ್ಯವನ್ನು ಹೂವಿಗಿಂತ ಹಗುರವಾಗಿ ಧರಿಸಿಕೊಂಡಿರುವ ಮೂರ್ತಿರಾವ್ ಸರಳಸಜ್ಜನಿಕೆಯ ಮನುಷ್ಯ – ಸಾಹಿತಿ.

ಕಡೆಂಗೋಡ್ಲು ಶಂಕರ ಭಟ್ಟರು 'ಜಾಣ' ತರಗತಿಯಲ್ಲಿ ಪಾಠ ಮಾಡಿದ ಗುರುಗಳೆಂದು ನನಗೆ ಪೂಜ್ಯರು. ಅವರ 'ಮಾದ್ರಿಯ ಚಿತೆ' 'ನಲ್ಮೆ'ಗಳಲ್ಲಿ ಕಂಡು ಬರುವ ಕನ್ನಡದ ಸಿದ್ಧ ಶೈಲಿ ಕುಮಾರವ್ಯಾಸನನ್ನು ನೆನಪಿಗೆ ತರುವಂಥ ಮಹಿಮಾನ್ವಿತ ಶೈಲಿ. 1940 ರಿಂದಲೂ ಅವರನ್ನು ಕಾಣುತ್ತಿದ್ದೆ. ಮಂಗಳೂರಿನಲ್ಲಿ ಆಗ ಮದರಾಸು ರೈಲು ಸಾಯಂ. 4 – 30ಕ್ಕೆ ಬಂದು ಮುಟ್ಟುತ್ತಿತ್ತು. ಅದರಲ್ಲಿ ಒಂದು ದಿನ ಹಳೆಯದಾದ 'ಹಿಂದೂ' ಪತ್ರಿಕೆ ಮಂಗಳೂರಿಗೆ ಲಭಿಸುವ 'ಲೇಟೆಸ್ಟ್' ಪತ್ರಿಕೆ ಆಗಿತ್ತು. ಅದನ್ನು ಕೊಂಡು ಹೋಗಲು ದಿನಾಲೂ ರೈಲು ಸ್ಟೇಶನ್ನಿಗೆ ಹೋಗಿ ಅಲ್ಲಿಂದ ಮೈದಾನಿನ ರೇಡಿಯೋದ ಬಳಿ 6 ಗಂಟೆಯ ವರ್ತಮಾನ ಕೇಳಿ ಮನೆಗೆ ವಾಪಾಸಾಗುವ ಕಡಂಗೋಡ್ಲು ಅವರಿಗೆ ದಾರಿಗುಂಟ ಹೋಗುವ ನಾನು ನಮಸ್ಕಾರ ಸಲ್ಲಿಸುವೆ. ಅವರಾಗ ರಾಷ್ಟ್ರಬಂಧುವಿನ ಸಂಪಾದಕ, ಕೆಲಗಾಲ ಕಳೆದು 'ರಾಷ್ಟ್ರಮತ'ದ ಸಂಪಾದಕರಾದರು. ನಾನು ಉಡುಪಿಯಲ್ಲಿ ಕಾಲೇಜು ಸೇರಿದ ಬಳಿಕ ಒಂದು ಬಾರಿ ರಾಷ್ಟ್ರಮತದ ವಾರ್ಷಿಕ ವಿಶೇಷಾಂಕಕ್ಕೆ ನನ್ನನ್ನು 'ಅತಿಥಿ ಸಂಪಾದಕ'ನಾಗಲು ಕರೆಕೊಟ್ಟರು. ನಾನು ಅವರಿಗಾಗಿ ಒಂದು ಸಂಚಿಕೆ ಹೊರತಂದೆ. ಅವರ ಮೂರನೇ ಮಗನ ಪರೀಕ್ಷೆಗೋಸ್ಕರ ನಮ್ಮ ಕಾಲೇಜಿಗೆ ಬಂದಾಗ ಮನೆಯಲ್ಲೇ ಎರಡು ದಿನ ಉಳಿದುಕೊಂಡಿದ್ದರು. ಸವೇಗವಾದ ಅವರ ಮಾತಿನ ಶೈಲಿ ರಾಷ್ಟ್ರ 'ಬಂಧು' ಮತ್ತು 'ಮತ'ದ ಓದುಗರಿಗೆ ಆಶ್ಚರ್ಯವೆನಿಸದು. ಮಾತಿನ ಹಿಂದೆ ಅಷ್ಟೇ ವೇಗಶೀಲವಾದ ಧೀಮಂತಿಕೆಯೂ ಇತ್ತು. ಅವರು ಬಿಟ್ಟು ಹೋದ ಕೃತಿಗಳು ಸಂಖ್ಯೆಯಲ್ಲಿ ಕಡಿಮೆ ಎನಿಸಿದರೂ ಗುಣಮಟ್ಟದಲ್ಲಿ ಶ್ರೇಷ್ಠವಾದುವು. ಅವರ ಮಕ್ಕಳ ಕೈಯಿಂದ ನಾನು ಅವರ ಹಸ್ತಪ್ರತಿಗಳ ಕಡತವನ್ನು ವಶಪಡಿಸಿಕೊಂಡರೆ ಅಲ್ಲಿ ಅವರ ಅನೇಕ ಅಪ್ರಕಟಿತ ಕವನ – ನಾಟಕಗಳಿವೆ. ಅವನ್ನ ಅವರು ತಾವೇ ಸೆನ್ಸಾರು ಮಾಡಿ ಪ್ರಕಟನೆ ತಡೆಹಿಡಿದರೋ ಎಂಬ ಸಂಶಯ ಬರುತ್ತದೆ. (ಈಗಿನ ಕಾಲದಲ್ಲಿ ನಾನು ಬರೆದದ್ದೆಲ್ಲ ಗಮನಾರ್ಹ ಕೃತಿ ಎಂಬ ಅಹಮಿಕೆಯಿಂದ ಪ್ರಕಟನೆಗೆ ಜಟಪಡಿಸುವವರನ್ನು ಕಂಡರೆ ಕಡಂಗೋಡ್ಲು ಸಾಹಿತ್ಯ ಎಷ್ಟು ಸ್ವನಿಷ್ಠುರಿಯಾಗಿದ್ದರೆಂಬುದು ಅಚ್ಚರಿಯಾದೀತು.) ಇತ್ತೀಚಿಗೆ ಮಂಗಳೂರು ವಿಶ್ವವಿದ್ಯಾನಿಲಯ ಇವನ್ನು ಪ್ರಕಟಿಸಿದೆ.

ಕಡಂಗೋಡ್ಲು ಅವರ ಜತೆಗೇ ನೆನಪಿಗೆ ಬರುವ ವ್ಯಕ್ತಿ ಇನ್ನೂ ಭಾಗ್ಯವಶಾತ್ ನಮ್ಮೊಂದಿಗಿರುವ ಪಂಡಿತ ಸೇಡಿಯಾಪು ಕೃಷ್ಣ ಭಟ್ಟರದು. ಶ್ವೇತ ಖಾದಿವಸನ ಧಾರಿಯಾಗಿ ತಲೆಯ ಮೇಲೆ ಬಿಳಿ ಗಾಂಧೀ ಟೋಪಿ ಇಟ್ಟು ಕನ್ನಡದ ಪಾಠ ಹೇಳುವ ಸೇಡಿಯಾಪು ಅವರ ಚಿತ್ರ ನನ್ನ ಕಣ್ಣಿಂದ ಇನ್ನೂ ಮಾಸುವುದಿಲ್ಲ. 'ಪರಮಪರಂಜ್ಯೋತಿ ಕೋಟಿ ಚಂದ್ರಾದಿತ್ಯ, ಕಿರಣ ಸುಜ್ಞಾನಪ್ರಕಾಶ' ಎಂಬ ಭರತೇಶ ವೈಭವದ ಸಾಹಿತ್ಯವನ್ನು ರಾಗವಾಗಿ ಅಕ್ಷರಕ್ಷರ ಸ್ಪಷ್ಟವಾಗಿ ಹೇಳಿ ವಿವರಿಸುವ ಅವರ ಕರಾರುವಾಕ್ಕಾದ ರೀತಿ ಮರೆಯಲಾಗುವುದಿಲ್ಲ. ಅನಾರೋಗ್ಯ ಸ್ಥಿತಿಯಲ್ಲೂ ಈಚಿಗಿನ ಹತ್ತು ಹನ್ನೆರಡು ವರ್ಷಗಳಲ್ಲಿ ಅವರ ಕೆಲವು ವಿಶಿಷ್ಟ ಸಂಶೋಧನೆಗಳು ಪ್ರಕಟಗೊಂಡಿವೆ. 'ಛಂದೋಗತಿ' ಎಂಬ ಅವರ ತೀರ ಈಚಿಗಿನ ಪ್ರಬಂಧದಲ್ಲಿ ಅವರು ಮಂಡಿಸಿದ್ದ ಮೌಲಿಕ ಅಂಶಗಳು ಈ ವಿಷಯದಲ್ಲಿ ಪ್ರವೇಶವುಳ್ಳವರಿಗೆ ಅನರ್ಘ್ಯ ಕಾಣಿಕೆ ಎಂದು ತೋರೀತು. ಇದರ ರಚನೆಗಾಗಿ ಅವರು ನಿಡುಗಾಲದ ತಪಸ್ಸನ್ನೇ ಮಾಡಿರಬೇಕು. ಅವರ ಪಾಂಡಿತ್ಯದ ಈಷತ್‌ದರ್ಶನ ಮಾಡಿದ್ದೇನೆ, ಮಣಿಪಾಲದಲ್ಲಿರುವುದರಿಂದ ಅವರನ್ನು ಎಂದಾದರೊಮ್ಮೆ ಹೋಗಿ ನೋಡ ಬಲ್ಲೆ ಎಂಬುದಕ್ಕಿಂತಲೂ ಅವರ ಸುಮಕೋಮಲವಾದ ಮನಸ್ಸನ್ನು ಅರಿಯುವ ಸಂದರ್ಭಗಳನ್ನು ಅವರು ಒದಗಿಸಿಕೊಟ್ಟದ್ದು ನನಗೆ ಶ್ರೀರಕ್ಷೆಯಂತಾಗಿದೆ.

ಗದುಗಿಗೂ ನನಗೂ ನನ್ನ ಆಯುಷ್ಯದ ಮೊದಲ ವರ್ಷದಿಂದಲೇ ಸಂಬಂಧ ಕಲ್ಪಿತವಾದ್ದರಿಂದ ಧಾರವಾಡ ನನಗೆ ತೀರ ಸಮೀಪದ ಒಂದು ಊರಾಯಿತು. ಕರ್ನಾಟಕದ ಸಾಹಿತ್ಯೇತಿಹಾಸದಲ್ಲಿ ಮಹತ್ವದ ಪಾತ್ರ ವಹಿಸಿದ 3 ವಲಯಗಳಲ್ಲೆ ಧಾರವಾಡವೂ ಒಂದಷ್ಟೇ. (ಮೈಸೂರು ಮತ್ತು ಮಂಗಳೂರು ಉಳಿದೆರಡು) ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಧಾರವಾಡ ಹೋರಾಟಕ್ಕೆ ಹೆಸರು ಪಡೆದಿತ್ತು. ಮಾತ್ರವಲ್ಲದೆ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರಂಥ ಸಾಹಿತಿಗಳನ್ನೂ ವಾಗ್ಮಿಗಳನ್ನೂ ಕನ್ನಡಕ್ಕೆ ಅರ್ಪಿಸಿತ್ತು. ಅದೇ ಕಾಲಕ್ಕೆ ಸುಮಾರು ಶಂಬಾ ಮತ್ತು ಬೇಂದ್ರೆಯವರು ಧಾರವಾಡವನ್ನು ಕರ್ನಾಟಕದ ಸಾಹಿತ್ಯ ನಕ್ಷೆಯಲ್ಲಿ ಢಾಳವಾಗಿ ನಿಲ್ಲಿಸಿದರು. ಕರ್ನಾಟಕ ಕಾಲೇಜಿನಲ್ಲಿ ಸ್ವಲ್ಪ ಸಮಯ ಇದ್ದು ಹೊರಬಿದ್ದ ಶ್ರೀರಂಗರು, ಆ ಮೇಲೆ ಆ ಕಾಲೇಜಿನ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ ವಿ. ಕೃ. ಗೋಕಾಕರು, ಇಂಗ್ಲೀಷ್ ಪ್ರಾಧ್ಯಾಪಕ ವಿ. ಎಂ.

ಇನಾಂದಾರರು ಇವರೆಲ್ಲರನ್ನು ನೋಡಿ, ಮಾತಾಡಿ, ವ್ಯಕ್ತಿ ಪರಿಚಯವೂ, ಗ್ರಂಥ ಪರಿಚಯವೂ ನನಗೆ ಜತೆ ಜತೆಗೇ ಆದುವು. ಹೆಚ್ಚು ಕಮ್ಮಿ ನನ್ನ ವಯಸ್ಸಿನವರೇ ಆದ ಎನ್ಕೆ ಮತ್ತು ದ.ಬಾ.ಕುಲಕರ್ಣಿ ಅವರ ಸ್ನೇಹವೂ ಧಾರವಾಡದಲ್ಲಿ ವಿಶ್ವವಿದ್ಯಾನಿಲಯ ಹುಟ್ಟುವುದಕ್ಕೆ ಮುನ್ನವೇ ನನಗೆ ದೊರೆಯಿತು. ಜಯ ಕರ್ನಾಟಕ ಮತ್ತು 'ಜಯಂತಿ' ಕೆಲ ವರ್ಷ ಜೀವನವು ಕೂಡ ಧಾರವಾಡದಿಂದ ಪ್ರಕಟವಾಗುತ್ತಿತ್ತು. ಮಾಸಪತ್ರಿಕೆಗಳ ಸಂಚಿಕೆ ನೋಡಿ ನನಗೆ ಪತ್ರಿಕೆಗಳಲ್ಲಿ ಬರೆಯಲೇಬೇಕೆಂಬ ಆಸಕ್ತಿ ಮತ್ತು ಮೋಹ ಉದಯಿಸಿದವು. ಹಿಂದೆ ಅನುವಾದಕರಲ್ಲಿ ಶ್ರೇಷ್ಠರಾದ ಗುರುನಾಥ ಜೋಶಿ ನನಗೆ ಒಂದು ರೀತಿಯಲ್ಲಿ ಅನುವಾದ ಕಾರ್ಯಕ್ಕೆ ಮಾರ್ಗ ದರ್ಶಕರಾದರೆಂದೇ ಹೇಳಬೇಕು. ರಮಾನಾಥ್ – 'ಚಂದ್ರಹಾರ' – 'ಗಬನ್' ಪ್ರೇಮಚಂದರ ಹಿಂದೀ ಕಾದಂಬರಿಯ ಕನ್ನಡ ಅನುವಾದದ ಹಕ್ಕನ್ನು ಪುಕ್ಕಟೆ ದೊರಕಿಸಿ ಕೊಟ್ಟವರು ಗುರುನಾಥ ಜೋಶಿ. ಜೀವನಪರ್ಯಂತ ಹಿಂದೀ ಸೇವೆ, ಹಿಂದೀ ಅನುವಾದಗಳಲ್ಲೆ ಕಳೆದರು.

ನನ್ನ ಧಾರವಾಡದ ಗೆಳೆಯರಲ್ಲಿ ಎಲ್ಲರಿಗೂ ಹೆಚ್ಚಾಗಿ ನೆನಪಿಗೆ ಬರುವವರೆಂದರೆ ನನ್ನ ಓರಗೆಯ ದ.ಬಾ. ಕುಲಕರ್ಣಿ. ಅಕಾಲದಲ್ಲಿ ಮೃತ್ಯುವಶರಾಗುವ 6 ತಿಂಗಳಿಗೆ ಮೊದಲು ಅವರು 'ಲಲಿತ ಸಾಹಿತ್ಯಮಾಲೆ'ಯ ಪುಸ್ತಕಗಳನ್ನು ಎರಡು ಚೀಲಗಳಲ್ಲಿ ತುಂಬಿಸಿ ಉಡುಪಿಗೆ ಬಂದಿದ್ದರು. ಬಂದಾಗಲೆಲ್ಲ ನಮ್ಮ ಮನೆಯಲ್ಲೇ ಅವರು ಅತಿಥಿಗಳು. ನಾನು ಧಾರವಾಡಕ್ಕೆ ಹೋದಾಗ ಬಸ್ ನಿಲುಮನೆಯ ಎದುರುಗಡೆಯ ಅವರ ಪುಟ್ಟ ಅಂಗಡಿಯ ಒಬ್ಬ ಗಿರಾಕಿ — ನಿಜಕ್ಕೂ ಅವರು ಕೊಡುವ ಬಿಸಿ ಚಹಾದ ಗಿರಾಕಿ, ಬಿಸಿ ಅಂದರೆ ಒಂದು ಕಪ್ಪಿನ ಚಹದಲ್ಲಿ ಕಪ್ಪು ಅವರಿಗೆ, ಬಸಿ ನನಗೆ. ವ್ಯಕ್ತಿ ಚಿತ್ರಗಳನ್ನು ಬರೆಯುವುದರಲ್ಲಿ ಎತ್ತಿದ ಕೈ ಎನಿಸಿದ ದ.ಬಾ. ಅವರ ಅಂಗಡಿಯಲ್ಲಿ "ಬಸಿಪೋ ಕಪ್ಪೋ" ಚಹ ಕುಡಿಯದವರಿರಲಿಲ್ಲ; ಜೋಳಿಗೆ ಹಿಡಿದುಕೊಂಡು ಅವರ ಪುಸ್ತಕ ಮಾರಾಟದ ನೆಪದಲ್ಲಿ ನೋಡದ ಊರಿಲ್ಲ. 'ಮನೆ ಮನೆಗೆ ಸರಸ್ವತಿ' ಎಂಬ ಸೊಲ್ಲನ್ನು ಎಸ್.ವಿ.ಪಿ.ಯವರೋ ಕ. ಸಾ. ಪರಿಷತ್ತೋ ಘೋಷಿಸುವುದರ ಎರಡು ದಶಕ ಮೊದಲು ಧಾರವಾಡದಲ್ಲಿ ಇಬ್ಬರು ಜೋಳಿಗೆ ಪ್ರಕಾಶಕರು (ಜಿ. ಬಿ. ಜೋಶಿ ಮತ್ತು ದ. ಬಾ.) ತಮ್ಮ ಕಾಯಕವನ್ನು ತೊಡಗಿದ್ದರು. ಅವರು ಕೊಂಡು ಹೋದ ಸರಸ್ವತಿಗೆ ಎಷ್ಟು ಗಿರಾಕಿ ಸಿಕ್ಕರೋ, ರೈಲಲ್ಲೆ ಬಸ್ಸಲ್ಲೆ, ನಡೆದಾಡಿಕೊಂಡು ಕರ್ನಾಟಕದ ಪೇಟೆ ಪಟ್ಟಣ ಹಳ್ಳಿಗಳನ್ನು ಸುತ್ತಾಡಿ ಗ್ರಂಥವಿತರಣೆಗೆ ಬನ್ನಪಟ್ಟ ಇವರಿಬ್ಬರನ್ನೂ ಮರೆಯಲಾರದು ನನ್ನನೆನಪು. ಅದರಲ್ಲೂ ದ. ಬಾ. ಜತೆಗೆ ನಾನೊಮ್ಮೆ ಕಾರವಾರಕ್ಕೆ ಹೋಗಿ ಅಲ್ಲಿನ ಗೋಪಾಲಾಚಾರ್ಯರ ಹೋಟೆಲಿನಲ್ಲಿ ತಂಗಿದಾಗ ಒಂದು ಇರುಳೆಲ್ಲ ಸಾಹಿತ್ಯ ಚರ್ಚೆ ನಡೆಸಿ ಕೋಳಿಯನ್ನು ಕೂಗಿಸಿದೆವು. ಕಾರಣ ಗೋಪಾಲಾಚಾರ್ಯರ ರೂಮಿನ ಮಂಚದಲ್ಲಿ ತಿಗಣೆಗಳ ಸೈನ್ಯ ದೀಪ ನಂದಿಸಿದ ನಿಪ್ರಾತುರರನ್ನು ಮಂಚದಿಂದ ಇಳಿಸಿ ಧರಾಶಾಯಿಯಾಗಿ ಮಾಡಿ ಅಲ್ಲೂ ಕಾಟ ಕೊಡುವಷ್ಟು ಸಂಖ್ಯೆಯಲ್ಲಿ ಬೀಡು ಬಿಟ್ಟಿದ್ದವು. ಕಾರವಾರದ ಬೀಚು. ಬಿಣಗಾ, ಆವರ್ಸೆ ಮುಂತಾದ ಸ್ಥಳನಾಮಗಳನ್ನು ಮೊದಲಿಗೆ ಕೇಳಿದ್ದು ದ. ಬಾ. ಬಾಯಿಂದ. ಅಖಂಡ ಸಜ್ಜನಿಕೆ, ದಾಕ್ಷಿಣ್ಯಪರತೆ ಮತ್ತು ಆಜೀವ ಸ್ನೇಹಕ್ಕೆ ದ. ಬಾ. ಇನ್ನೊಂದು ಹೆಸರು. ಮುದ್ದಣನಂತೆ ದ. ಬಾ. ಕೂಡ ಸಂಪತ್ತಿನ ಶತ್ರುವಾಗಿಯೇ ದಿನಕಳೆದರು. ವಿಧಿವಶವಾದ ಅವರ ಭಗ್ನಸ್ನೇಹದ ವೇದನೆ ಈಗಲೂ ನನ್ನನ್ನು ಬಾಧಿಸುತ್ತಿದೆ.

ದ. ಬಾ.ರಿಗೂ ನನಗೂ ತೀರ ಆತ್ಮೀಯತೆ ಉಂಟಾಗಲು ಕಾರಣ ನಮ್ಮಿಬ್ಬರ ಸ್ವಭಾವದಲ್ಲೂ ಚಿರಸ್ಥಾಯಿಯಾಗಿರುವ ವ್ಯವಹಾರ ಪ್ರಜ್ಞಾಶೂನ್ಯತೆ ಎಂದು ಹೇಳಬೇಕು. ಅಂಥದರಲ್ಲಿ ಮನೋಹರ ಗ್ರಂಥಮಾಲೆಯ ಜಿ.ಬಿ. ಜೋಶಿ ಯಾರಿಗೂ ಬೇಡವಾದ ಪ್ರಕಟನೆಯ ದಂಧೆಯಲ್ಲಿ ತೊಡಗಿದರೂ ಏನೇನೋ ಯೋಚನೆ ಹಂಚಿಕೆಗಳನ್ನು ಹಾಕಿ ಲೆಕ್ಕ ಸರಿದೂಗಿಸಬಲ್ಲ ಜಾಣ್ಮೆ ಉಳ್ಳವರಾಗಿದ್ದರು. 1940ರ ದಶಕದಲ್ಲಿ ಎರಡೆರಡು ಚೀಲ ಪುಸ್ತಕಗಳನ್ನು ಹೊತ್ತುಕೊಂಡು ಗದಗು ಪ್ಲಾಟ್‌ಫಾರಂನಲ್ಲಿ ಇಳಿಯುತ್ತಿದ್ದ ಜೋಶಿಯವರನ್ನು ಕಂಡ ನನಗೆ ಅವರು ನಾಟಕಕಾರರೂ ಸಾಹಿತಿಯೂ ಆಗಿ ಪ್ರಸಿದ್ಧರಾದ್ದು ತುಂಬಾ ಸಂತೋಷವುಂಟು ಮಾಡಿತು. ಮ. ಗ್ರ. ಮಾಲೆಯ ಅಟ್ಟ ಇಂಗ್ಲೇಂಡಿನ ಬರಹಗಾರರ 'ಇನ್'ಗಳಿಗೆ ಸಮಾನವಾಗಿ ಹಗಲಲ್ಲೆಲ್ಲ ಹಿರಿ – ಕಿರಿ ಕಿರಿಕಿರಿ ಸಾಹಿತಿಗಳಿಂದ ತುಂಬಿ ತುಳುಕುತ್ತಿತ್ತು. ಜಿ.ಬಿ.ಯವರು ಕಾರಂತರ ಮರಳಿಮಣ್ಣಿಗೆಯ ಮೊದಲ ಮುದ್ರಕ – ಪ್ರಕಾಶಕರಷ್ಟೇ. ಅದು 3 ಭಾಗಗಳಲ್ಲಿ ಹೊರಬಿದ್ದು ಕರ್ನಾಟಕವೆಲ್ಲ ವ್ಯಾಪಿಸಿದ ಬಳಿಕವೇ ಮ. ಗ್ರ. ಮಾಲೆ ತನ್ನ ಊರ್ಧ್ವಮುಖಿ ಪ್ರಕಾಶನ ಸತ್ರದಲ್ಲಿ ಜಯಗಳಿಸಿತೆಂದು ನನ್ನ ಊಹೆ. ಎಷ್ಟೋ ತರುಣ ಲೇಖಕರಿಗೆ (ಉದಾ: ಗಿರೀಶ ಕಾರ್ನಾಡ) ಇಂಬುಕೊಟ್ಟ ಪ್ರಕಾಶಕರೆಂದರೆ ಜೋಶಿ. ಯಾವ ಪ್ರಾದೇಶಿಕ ಸಂಕೋಚಗಳೂ ಇಲ್ಲದೆ ಎಲ್ಲರಿಗೂ ಅವಕಾಶ – ಆಸರೆ ನೀಡುವ ಪ್ರಕಾಶಕರು ಎಂದರೆ ಕನ್ನಡದಲ್ಲಿ ಇಬ್ಬರೇ. 'ಜೀವನ' ಪ್ರಕಟಣಾಲಯದ ಮಾಸ್ತಿ ಮತ್ತು ಜಿ.ಬಿ. ಜೋಶಿ'. ಧಾರವಾಡದ ಮಾರ್ಕೆಟ ಬಳಿಯ ಮುಖ್ಯ ಬೀದಿಯಲ್ಲೆ ಒಂದು ಹಳೇ ಕಟ್ಟಡದ ಮಹಡಿಯಲ್ಲಿರುವ ಈ ಪುಸ್ತಕದಂಗಡಿಯಲ್ಲಿ ದಿನವೆಲ್ಲ ಸಭೆ ಸೇರುತ್ತಿದ್ದ ಸಾಹಿತಿಗಳಿಗೆ ಹರಟೆಮಲ್ಲರಿಗೆ ಚಹ ಚೂಡಾಗಳ ಸತ್ಕಾರ ನಡೆದೇ ನಡೆಯುತ್ತದೆ. ಇಂದು ಕೂಡ ವಯೋವೃದ್ಧರಾದ ಜಿ.ಬಿ. ಜೋಶಿಯನ್ನು ಈ ಚಟ ಬಿಟ್ಟು ಕೊಟ್ಟಿಲ್ಲ. ಕೊಟ್ಟರೆ ಮಗನಿಗೆ ಹಿಡಿದು ಕೊಟ್ಟಿದ್ದಾರೆನ್ನಬಹುದು. ಎಷ್ಟೆಷ್ಟೋ

ಸೃಜನಶೀಲ ಲೇಖಕರನ್ನು ಕನ್ನಡಕ್ಕೆ ಮೊದಲ ಬಾರಿಗೆ ಪರಿಚಯಿಸಿಕೊಟ್ಟದ್ದಲ್ಲದೆ ವಾರ್ಸಿಟಿಗಳಿಗೂ ಮುನ್ನವೇ ಆಧುನಿಕ ಕನ್ನಡ ಸಾಹಿತ್ಯದ ವಿಸ್ತೃತ ವಿಮರ್ಶೆಯನ್ನು 'ನಡೆದುಬಂದ ದಾರಿ'ಯಲ್ಲಿ ಪ್ರಕಟಿಸಿದ ಜಿ. ಬಿ. ಜೋಶಿ ಪ್ರಕಟನೋದ್ಯಮದ ಸಾಹಸಪುರುಷರೇ ಸರಿ. ಅವರು ಕೆಲ ವರ್ಷಗಳಿಗೆ ಹಿಂದೆ ಮಣಿಪಾಲ ಮುದ್ರಣದ ಸೌಂದರ್ಯವನ್ನರಸಿಕೊಂಡು ಬಂದಾಗ ಹೆಚ್ಚು ನಿಕಟವಾದ ಸಂಪರ್ಕ ಬೆಳೆಯಿತು. ಪ್ರಕಟನೆಯ ಬಗ್ಗೆ ತಾನು ಹಾಕಿದ ಯೋಜನೆಗಳನ್ನು ಯಶಸ್ವಿಯಾಗಿ ಕೊನೆಮುಟ್ಟಿಸಬಲ್ಲ ಛಲ ಅವರಿಗಿದ್ದೀತೆಂದು ಜೋಶಿಯವರನ್ನು ಕಾಣುವವರಿಗೆ ಹೊಲಬಾಗದು. 'ಪದ್ಮಶ್ರೀ' ಅವರ ಈ ಪ್ರಕಟನ ಛಲಕ್ಕೆ ಸಂದ ಬಾವಲಿಯೇ ಸೈ.

ಧಾರವಾಡದ ವಿದ್ಯಾವರ್ಧಕ ಸಂಘದ ಉಚ್ಛ್ರಾಯ ಸ್ಥಿತಿಯನ್ನು ಕಂಡವನಲ್ಲವಾದರೂ ಅದೊಂದು ಘಟ್ಟದಲ್ಲಿ (1953?) ಅಲ್ಲಿ ಶ್ರೀರಂಗ, ನೆಗಳೂರು, ವರದರಾಜ ಹುಯಿಲಗೋಳ, ಎನ್ಕೆ ಮೊದಲಾದವರು ಹಮ್ಮಿಕೊಂಡ ಒಂದು ಚಿಂತನ ವೇದಿಕೆಯಲ್ಲಿ ನಾನು ಭಾಗವಹಿಸಿದ ನೆನಪಾಗುತ್ತದೆ. ಘನ ಗಂಭೀರವಾದ ಒಂದು ಸಾಹಿತ್ಯ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳಲಾಗಿತ್ತು. ನನ್ನನ್ನು ಉಡುಪಿಯ ಒಬ್ಬ ಕಿರಿಯ ಸಾಹಿತಿ ಎಂದು ದ.ಬಾ. ಪರಿಚಯಿಸಿದರು. ಶ್ರೀರಂಗರು ಆಗತಾನೇ ಕರ್ನಾಟಕ ಕಾಲೇಜಿಂದ ರಾಜೀನಾಮೆ ಕೊಟ್ಟು ನಿರುದ್ಯೋಗಿ ಎನಿಸಿದ್ದ ಆ ಸಂಧಿಕಾಲದಲ್ಲಿ ನಾನು ಉಡುಪಿಯಲ್ಲೆ ಅವರ ಪ್ರಪಂಚಪಾಣಿಪತ್ತನ್ನು ಆಡಿಸಲು ಯತ್ನಿಸಿ ಸೋತು ಹೋಗಿದ್ದೆ. ಆಗ ಶ್ರೀರಂಗರೊಡನೆ ನನಗೆ ಪತ್ರವ್ಯವಹಾರವೂ ನಡೆದಿತ್ತು. ಅದು ಚಿಂತನವೇದಿಕೆಯ ಪರಿಚಯದ ಫಲ. ನಾಟಕ ಬೇಕಾದಷ್ಟು ಆಡಿ ಅದರ ನಿರುದ್ಯೋಗಿಯಾಗಿರುವ ಲೇಖಕರಿಗೆ 25 ರೂಪಾಯಿ ಆದರೂ ಕೊಡಿ ಎಂದು ಶ್ರೀರಂಗ ತಮ್ಮದೇ ಶೈಲಿಯಲ್ಲಿ ಸ್ವಾರಸ್ಯವಾಗಿ ಬರೆದಿದ್ದರು. ಉಡುಪಿಯಲ್ಲಿ 'ಪ್ರಪಂಚಪಾಣಿಪತ್ತು' ಆಡಲು ನನ್ನ ಮಿತ್ರರು ಎರಡು ರಿಹರ್ಸಲ್ ಮಾಡಿದವರೇ ಜಿಸ್ನವಿಸಿಕೊಂಡರು – ಸ್ವಾಮಿ, ಈ ಧಾರವಾಡದ ಧಾಟಿ ನಮ್ಮ ನಾಲಿಗೆಯಿಂದ ಹೊರಡುವುದಿಲ್ಲ; ಎಂದರು. ಆ ಮೇಲೆ ಶ್ರೀರಂಗರ ನಿಕಟ ಪರಿಚಯ ಬೇರೆ ಬೇರೆ ಕಡೆಗಳಲ್ಲೆ ಆಗುತ್ತಲೇ ಇತ್ತು. ಆ ಪೈಕಿ ಎರಡು ಸ್ವಾರಸ್ಯಕರವಾಗಿರುವುದರಿಂದ ಹೇಳುತ್ತೇನೆ. ಬಿ. ವಿ. ಕಾರಂತರು ನಮ್ಮಲ್ಲಿನ ಕಾಲೇಜು ಅಧ್ಯಾಪಕರನ್ನ 'ರಂಗಭಾರತಕ್ಕೆ' ಅಣಿಗೊಳಿಸಿ ಒಂದು ಉತ್ಕೃಷ್ಟ ಪ್ರದರ್ಶನ ನೀಡಿದರು. 1973ರಲ್ಲಿ ಎಂದು ತೋರುತ್ತದೆ. ಅದರ ಕೀರ್ತಿ ಬೆಂಗಳೂರು ತಲುಪಿ ಶ್ರೀರಂಗರ ಕಿವಿಗೂ ಬಿದ್ದಿತ್ತು. ಮುಂದಿನ ವರ್ಷ ಸಾಹಿತ್ಯೋತ್ಸವಕ್ಕೆ ಬಂದ ಶ್ರೀರಂಗರ ಸಲುವಾಗಿ ಮತ್ತೊಮ್ಮೆ ಕಲಾವಿದರನ್ನು ಕರೆಸಿ ನಾಲ್ಕು ದಿನ ರಿಹರ್ಸಲ್ ಮಾಡಿ 'ರಂಗಭಾರತ'ವನ್ನು ಆಡಿ ತೋರಿಸಿದಾಗ ಶ್ರೀರಂಗರು ಬಿ. ವಿ. ಕಾರಂತರ ದರ್ತಪ್ಪ ಮತ್ತು ಕೃಷ್ಣಮೂರ್ತಿ ಆಚಾರ್ಯರ ಸಂಜಯ ಪಾತ್ರಗಳ ನಿರ್ವಹಣೆಯನ್ನು ಬಲು ಮೆಚ್ಚಿಕೊಂಡರು. ಸ್ವಾಭಿಮಾನ, ಸ್ವಾಭಿಪ್ರಾಯ ಮಂಡನೆ, ಖಂಡತುಂಡ ವಚೋವಿಲಾಸದಿಂದ ಅನನ್ಯ ವ್ಯಕ್ತಿತ್ವವನ್ನು ಪಡೆದ ಶ್ರೀರಂಗರು ನವೋದಯ ಕಾಲದ ವಿಲಕ್ಷಣ ನಾಟ್ಯಾಚಾರ್ಯರೇ ಸರಿ. ಕೊನೆ ತನಕವೂ ಅವರ ನಾಟಕದ ಹುಚ್ಚು ಅವರನ್ನು ಬಿಡಲಿಲ್ಲ, ಬರೆದರು, ಆಡಿಸಿದರು, ವಿಮರ್ಶಿಸಿದರು, ರಂಗಶಾಸ್ತ್ರದ ಗ್ರಂಥಗಳನ್ನು ಬರೆದು ತೋರಿಸಿದರು – ಅಂತೂ ಕನ್ನಡದ ನಾಟಕ ಚಳವಳಿಯಲ್ಲೆ ಮುಂಚೂಣಿಯಲ್ಲಿ ನಿಂತವರು ಇವರು. ಬಾದಲ್ ಸರ್ಕಾರ ಅವರ 'ಏವಂ ಇಂದ್ರಜಿತ್' ಭಾರಿ ಜನಪ್ರಿಯತೆ ಗಳಿಸಿದಾಗ ಇದಕ್ಕಿಂತ ಚೆನ್ನಾದ್ದು ನಾನು ಬರೆದೇನೆಂದು 'ಏನ ಬೇಡಲಿ ನಿನ್ನ ಬಳಿಗೆ ಬಂದು?' ಎಂಬುದರಲ್ಲಿ ಅದೇ ತಂತ್ರವನ್ನು ಯಶಸ್ವಿಯಾಗಿ ಬಳಸಿಯೇ ಬಳಸಿದರು. 1970ರ ದಶಕದಲ್ಲಿ 'ಕೇಳು ಜನಮೇಜಯ' ಹಿಂದಿಯಲ್ಲಿ ಬಿ. ವಿ. ಕಾರಂತರ 'ಸುನೋ ಜನಮೇಜಯ'ವೆಂದು ಮೂಡಿದ ಪಶ್ಚಾತ್ ಒಂದು ದಶಕದಲ್ಲಿ ಬೆಂಗಳೂರಿಗೆ ಬಂದ ಕಾರಂತರೇ ಶ್ರೀರಂಗರ 'ದಾರಿ ಯಾವುದಯ್ಯ' 'ಕತ್ತಲೆಬೆಳಕು' ಮುಂತಾದುವನ್ನು ನವ್ಯನಾಟಕತಂತ್ರದಲ್ಲಿ ಅಳವಡಿಸಿದ ತರುವಾಯ ಶ್ರೀರಂಗರ ಪ್ರತಿಭೆಯ ಅರಿವು ರಂಗನಾಟಕ ಶೀಲರಿಗೆ ಆಯಿತೆಂದು ಹೇಳಬಹುದೇನೋ. ಬೆಂಗಳೂರಲ್ಲಿ ನೋಡಿದ್ದಕ್ಕಿಂತ ಹೆಚ್ಚು ಶ್ರೀರಂಗ ನಾಟಕಗಳನ್ನು ನಾನು ನೋಡಿದ್ದು ಮುಂಬಯಿಯಲ್ಲಿ. ಅಲ್ಲಿನ ಒಂದು ನಾಟಕ ತಂಡ ಪ್ರತಿವರ್ಷ ಒಂದಾದರೂ ಶ್ರೀರಂಗ ಕೃತಿಯನ್ನು ಆಡಬೇಕು, ಅದೇ ಹೊತ್ತಿಗೆ ಸರಿಯಾಗಿ ದಿಲ್ಲಿಯ ದಾರಿಹೋಕನಾದ ನಾನು ವ್ಯಾಸರಾಯ ಬಲ್ಲಾಳರಲ್ಲೆ ತಂಗಬೇಕು ಅಂದೇ ಸಂಜೆ ಶ್ರೀರಂಗ ನಾಟಕ–ಎಷ್ಟೋ ಸಲ ಮುಖ್ಯ ಅತಿಥಿಗಳೋ, ಅಧ್ಯಕ್ಷರೋ ಬರಲಾಗದ ಅನಿವಾರ್ಯತೆಯಿಂದ ಬಳಲಿದಾಗ ತೆರವಿದ್ದ ಕುರ್ಚಿ ನನಗೆ ಅಂಟಿಕೊಳ್ಳುತ್ತಿತ್ತು. ಮುಂಬಯಿ ತಂಡ ಹೆಚ್ಚಾಗಿ ಧಾರವಾಡದ ಜನರದೇ ಆಗಿದ್ದುದರಿಂದ ಸ್ಪಷ್ಟೋಚ್ಚಾರ ಮತ್ತು ಪ್ರಾದೇಶಿಕ ಧ್ವನಿ ಹಾವ ಭಾವಗಳಿಂದ ರಂಜಿಸುತ್ತಿತ್ತು. ಮೂರನೇ ಸಲ ನಾವು ಭೆಟ್ಟಿಯಾದ್ದು ವಿಧಿವಶ. ಭೆಟ್ಟಿ ಉಜ್ಜಯಿನಿಯಲ್ಲಿ. 'ಯಕ್ಷಗಾನವಾಗಿ ಕಾಡಿತು ಮಾಯೆ' ಎಂಬಂಥ ಅಲ್ಲಿನ ಕಾಳಿದಾಸ ಸಮಾರೋಹದಲ್ಲಿ (1977?) ಪಾಲ್ಗೊಳ್ಳಲು ಬಂದ ಶ್ರೀರಂಗರನ್ನು ಒಂದು ಹಳೇಮಾದರಿ ಸರ್ಕಾರಿ ಪ್ರವಾಸಿ ಬಂಗ್ಲೆಯಲ್ಲಿ ಇಳಿಸಿದ್ದರು. ಆಗಲೇ 70 ದಾಟಿದ್ದ ಶ್ರೀರಂಗರ ಉಪಚಾರಕ್ಕೆ ಯಾರನ್ನೂ ಅಲ್ಲಿ ಕಾವಲಿಟ್ಟಂತೆ ತೋರಲಿಲ್ಲ. ಆದ್ದರಿಂದ ನಾನೇ ನಮ್ಮ ಪ್ರದರ್ಶನ ಮುಗಿದ ಮೇಲೆ ಶ್ರೀರಂಗರ ಛಾರ್ಜ್ ವಹಿಸಿಕೊಂಡೆ. ಉತ್ಸವದ ಲೋಪದೋಷಗಳ ಚರ್ಚೆಯ ಬಳಿಕ 'ಸಾರ್, ನಿಮಗೆ ಇಲ್ಲಿ ತೊಂದರೆ ಆಗುತ್ತದೆ. ನಾಳೆಯೇ ಮುಂಬಯಿಗೆ ಹೋಗಬೇಕಾದರೆ ಇಲ್ಲಿಂದ ವಿಮಾನ ಓಡಿಯಲು ಇಂದೋರಿಗೆ

ಮುಂಜಾನೆ ಹೋಗುವುದು ಕಷ್ಟವಾದೀತು. ಆದ್ದರಿಂದ ನನ್ನ ಜತೆ ಇಂದೋರಿಗೆ ಬನ್ನಿ ಅಲ್ಲಿ ನನ್ನ ಬ್ಯಾಂಕಿನ ಶಿಷ್ಯರಿದ್ದಾರೆ. ಅವರ ಮನೆಯಲ್ಲಿಳಿದರೆ ಅವರೇ ನಿಮ್ಮನ್ನ ಬೇಗನೇ ವಿಮಾನಕ್ಕೆ ತಲುಪಿಸುತ್ತಾರೆ' ಎಂದೆ. ಸಂತೋಷದಿಂದ ಒಪ್ಪಿದರು. ನನ್ನ ಏರ್ಪಾಟು ಅವರಿಗೆ ಹಿತವೆನಿಸಲು ಇನ್ನೂ ಒಂದು ಕಾರಣ: ಅವರಿಗೆ ಮೈ ಜಡ್ಡಾಗಿತ್ತು. ಸ್ವಲ್ಪ ಜ್ವರವೂ ಇತ್ತು. ಇಂದೋರಿನಲ್ಲಿ ಸುಖರಾತ್ರಿ ಕಳೆದು ಮುಂಜಾನೆ ನಿಲ್ದಾಣಕ್ಕೆ ಹೋದರು. ಇಂಥ ವೃದ್ಧಜನ ಶುಶ್ರೂಷಾ ಕರ್ತವ್ಯವನ್ನು ನಾನು ಅನೇಕ ಸಲ ಮಾಡಿ ಪುಣ್ಯಕಟ್ಟಿಕೊಂಡಿದ್ದೇನೆ – ಮುಂದಿನ ಜನ್ಮದವರೆಗೂ ಸಾಲುವನಿತು ಪುಣ್ಯ. ಅದೇ ಕೆಲವೊಮ್ಮೆ ಎಂಥ ಪಜೀತಿಗೆ ನನ್ನನ್ನ ಕೆಡೆಯಿತೆಂಬುದನ್ನು ಅನುಭವಿಸಿದ್ದೇನೆ.

20 ವರ್ಷಗಳ ಅನಂತರ ಧಾರವಾಡದ ವಿದ್ಯಾವರ್ಧಕ ಸಂಘ ಮತ್ತೊಮ್ಮೆ ಜೀವಂತಿಕೆ ತೋರಿದ್ದು ಇತ್ತೀಚಿನ ಹತ್ತು ವರ್ಷಗಳಲ್ಲಿ ಪಾಟೀಲ ಪುಟ್ಟಪ್ಪನವರು ಅದರ ಅಧ್ಯಕ್ಷತೆ ಸ್ವೀಕರಿಸಿದ ಮೇಲೆ. ಕರ್ನಾಟಕದ ಸರ್ಕಾರ ಬೆಂಗಳೂರಿನ ಸಾಹಿತ್ಯ ಪರಿಷತ್ತೊಂದೇ ಕನ್ನಡದ ಏಕಮಾತ್ರ ಪ್ರಾತಿನಿಧಿಕ ಸಾಹಿತ್ಯ ಸಂಸ್ಥೆಯೆಂದು ಭ್ರಮೆ ಇಟ್ಟುಕೊಂಡು ಇತ್ತೀಚಿನ ವರ್ಷಗಳಲ್ಲಿ ಅದಕ್ಕೆ ವಿಧವಿಧ ಧನಸಹಾಯ ಕೊಡುತ್ತ ಚಾರಿತ್ರಿಕವಾದ ವಿದ್ಯಾವರ್ಧಕ ಸಂಘವನ್ನುಮರೆತದ್ದು ದೊಡ್ಡ ಅಪರಾಧವೇ ಆಯಿತು. ಯಾವುದೇ ಸಂಸ್ಥೆಗೆ ಒಳ್ಳೆತನ್ನು ಬಯಸುವವರು ಅದಕ್ಕೆ ಕೇಳಿದ ಹಾಗೆ ವಿತ್ತಪೂರೈಕೆ ಮಾಡಬಾರದೋ ಏನೋ. ಸ್ವಲ್ಪ ಕಷ್ಟ, ಪ್ರಯಾಸ, ಸುತ್ತಲಿನ ಮಂದಿಯಿಂದ ದೇಣಿಗೆ ಸಿಗುವ ಸಂಭವವಿದ್ದರೆ ಮಾತ್ರ ಆ ಸಂಸ್ಥೆಯ ಆರೋಗ್ಯ ಚೆನ್ನಾಗಿ ಉಳಿಯುತ್ತದೆ. ಚಾರಿತ್ರಿಕ ಕಾರಣಗಳಿಂದಾಗಿ ಹುಟ್ಟಿ, ಆ ಮೇಲೆ ಅಷ್ಟೇ ಚಾರಿತ್ರಿಕ ಕಾರಣಗಳಿಗಾಗಿ ಬಳಲಿ ಬೆಂಡಾದ ಕ.ವಿ. ವರ್ಧಕ ಸಂಘವಾದರೋ ಇದೀಗ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ತನ್ನ ಹಳೇ ಕಟ್ಟಡಕ್ಕೆ ಗೂಡಂಗಡಿ ಮಾರ್ಕೇಟನ್ನೇ ಒಂದು ಹೊದಿಕೆಯಾಗಿ ಹೊದ್ದುಕೊಳ್ಳುವುದು ಸಂಸ್ಥೆಗಳಿಗೂ ಒಂದು ಆರ್ಥಿಕ ಮುಖ ಇರುತ್ತದೆಂಬುದನ್ನು ಗಮನಿಸುವ ಯಾಪನೂ ಮೆಚ್ಚುತಕ್ಕದ್ದು. ಇದರಿಂದ ಹಳೇ ಸುಂದರ ಕಟ್ಟಡದ ನೋಟ ಕೊಂಚಕೊರೆಯಾದರೂ ಅಡ್ಡಿ ಇಲ್ಲ. ಕಟ್ಟಡಕ್ಕಿಂತ ಅದರೊಳಗೆ ಕೆಲಸ ನಡೆಯಬೇಕಾದ್ದು ಮುಖ್ಯ ಅಲ್ಲವೇ? ಈ ಮಾತನ್ನು ಪಾಪು ನನ್ನ ಆಪ್ತರಲ್ಲಿ ಒಬ್ಬರಾದರೆಂದ ಮಾತ್ರಕ್ಕೆ ನಾನು ಹೇಳುತ್ತಿಲ್ಲ. ಇಂದು ದೇವಸ್ಥಾನ, ಇಗರ್ಜಿಗಳ ಮುಂಗಟ್ಟು, ಹಿಂಗಟ್ಟುಗಳಲ್ಲಿ ಸರಕಿನ ಮಳಿಗೆಗಳು ಎದ್ದಿರುವಾಗ ಒಂದು ಸಾಹಿತ್ಯ ಸಂಘ ತನ್ನ ಆರ್ಥಿಕೋನ್ನತಿಗಾಗಿ ಇಂಥ ನವೀಕರಣ ಮಾಡಿಕೊಳ್ಳಲು ಏನಡ್ಡಿ?

'ಪ್ರಪಂಚದ' ಪಾಪು ನನ್ನ ಸಾಹಿತ್ಯ ಜೀವನದಲ್ಲಿ ಧಾರವಾಡದ ಒಂದು ಸ್ನೇಹಸೇತುವೇ ಆದರೂ ಅವರ 'ಪ್ರಪಂಚ' ತನ್ನ ಮೊದಲ ದಶಕದಲ್ಲಿ, ಪಾಪು ಕನ್ನಡ ಪತ್ರಕರ್ತನಾಗಿ ಬೆಳೆಯುತ್ತಿರುವ ವೇಳೆ ತೋರಿದ ನಾವೀನ್ಯಕ್ಕೆ ನಾನು ಮಾರುವೋಗಿದ್ದೆ. ಅವರ ಪ್ರಭಾವಶಾಲಿ ಚುಟುಕು ಶೈಲಿಯನ್ನು ಅನುಸರಿಸಲು ಯತ್ನಿಸುತ್ತಿದ್ದೆ. ನಮ್ಮಲ್ಲೇ ಎಷ್ಟೋ ವಿಚಾರಗಳಲ್ಲಿ ಸಹಮತವಿದ್ದುದರಿಂದ ಹುಬ್ಬಳ್ಳಿಗೆ ಹೋದಾಗಲೆಲ್ಲ ಅವರನ್ನ ಅವರ ಮುರಕಲು ಸಾರಿಗೆ ದ್ವೀಪದ ಕಚೇರಿಯಲ್ಲೇ ನೋಡುವುದು ಅನಿವಾರ್ಯ. ಗದುಗಿನಲ್ಲಿ ಬಸವರಾಜ ಕಟ್ಟೀಮನಿಯವರು 1945 – 6 ಸುಮಾರಿಗೆ ಕರ್ನಾಟಕ ಬಂಧುವಿನ ಉಪಸಂಪಾದಕರಾಗಿ ಭೆಟ್ಟಿಯಾದರೂ, ಆಮೇಲೆ 1960ರ ಸಾಹಿತ್ಯ ಸಮ್ಮೇಳನದ ಟೀಕಾಕಾರರಾಗಿ ಪ್ರತ್ಯಕ್ಷರಾದರು. ತರುವಾಯ ನಾನೊಮ್ಮೆ ಮಾಡಿದ ಅವರ 'ಮೋಹದ ಬಲೆಯಲ್ಲಿ' ಎಂದುದರ ವಿಮರ್ಶೆಯನ್ನ ಮೆಚ್ಚಿದರು. 'ಜರತಾರೀ ಜಗದ್ಗುರು' ನನಗೆ ಅಷ್ಟು ಹಿಡಿಸಲಿಲ್ಲವೆಂದು ಹಾಗೆಯೆ ಹರಿತವಾಗಿ ವಿಮರ್ಶಿಸಿದಾಗ ಉಗ್ರವಾಗಿ ಒಂದು ಪತ್ರ ಬರೆದು ತನ್ನ ನೋವು ತೋಡಿಕೊಂಡರು. ಇಷ್ಟಾಗಿಯೂ ನನಗೆ ಅವರ ಸಾಹಿತ್ಯದ ಜೀವಂತಿಕೆ, ಸತುವು ಏನೆಂದು ಪೂರ್ತಿ ಗೊತ್ತಿದೆ. ಉತ್ತರ ಕರ್ನಾಟಕದ ಮಣ್ಣಿನವಾಸನೆಯನ್ನು ಬಿಂಬಿಸುವ ಅವರ ಸಾಹಿತ್ಯ ಕೃತಿಗಳ ಮೇಲೆ ನನಗೆ ಅಭಿಮಾನವಿದ್ದೇ ಇದೆ. ಸಿಡುಕು, ಕೋಪಗಳೇನಿದ್ದರೂ ಅವು ಸಂಚಾರಿಗಳೆಂದು ಬಗೆಯುತ್ತ ಸಾಹಿತಿಗಳ ಸ್ಥಾಯಿಯ ಅನ್ವೇಷಕನು ನಾನಾದ್ದರಿಂದ ಈ ಬಗ್ಗೆ ಸ್ಥಿತಪ್ರಜ್ಞನೇ ಆಗಿದ್ದೇನೆ.

ಸಾಹಿತಿ ಏಕಾಭಿಪ್ರಾಯವನ್ನು ಬಯಸಬಾರದು. ಸಹಮತವಲ್ಲ ಸಹನೆ, ಆತ ವರ್ಧಿಸಬೇಕಾದ ಗುಣ ತನ್ನ ಸಾಹಿತ್ಯದ ಮುಖೇನ. ಪರಸ್ಪರ ಪ್ರಶಂಸೆ ಅತಿಗೆ ಹೋದರೆ ಅಜೀರ್ಣವಾದೀತೆಂದು ಬಗೆದು ಅಸಹನೆಯೇ ವ್ಯಕ್ತಿಯ, ಅಥವಾ ಗುಂಪಿನ ಧ್ಯೇಯವಾಗಬಾರದು. ಬಹುಶಃ ಧಾರವಾಡ–ಹುಬ್ಬಳ್ಳಿ ಗದುಗುಗಳನ್ನು ಪ್ರತಿನಿಧಿಸುವ ಭೌಗೋಲಿಕ ಪ್ರದೇಶದಲ್ಲಿ ಪ್ರಸನ್ನ ವಾತಾವರಣ ನಿರ್ಮಾಣಕ್ಕೆ ಅವಕಾಶ ಅಷ್ಟಾಗಿ ಇಲ್ಲದೆ ಇರೋಣದರಿಂದ, ಇಂಥ ಸ್ನೇಹ ಗುಣವನ್ನು ಅಲ್ಲಿನ ಸಂಸ್ಥೆಗಳು ವರ್ಧಿಸಲು ಯತ್ನಿಸದೆ ಇದ್ದುದರಿಂದ ಮೈಸೂರು ಪ್ರದೇಶಕ್ಕೆ ಹೋಲಿಸಿದರೆ ಅಲ್ಲಿನ ಸಿದ್ಧಿಗಳು ಅಲ್ಲಿನ ಜನರ ಸಾಮರ್ಥ್ಯ, ಸಾಧ್ಯತೆಗಳಿಗೆ ತದ್ರೂಪಿಯಾಗಿ ತತ್ಸಮವಾಗಿ ಬೆಳೆದು ಬರಲಿಲ್ಲವೇನೋ ಎಂಬ ಸಂಶಯ ನಮಗೆ. ಹಳೇ ತಲೆಮಾರಿನ ಶ್ರೀ ಟಿ.ಎ. ಪೈ ಅವರು ಹಾಗೂ ಮಣಿಪಾಲದ ಪೈಬಂಧುಗಳು. ಮುಖ್ಯವಾಗಿ ಟಿ.ಎ.ಪೈ ಅವರನ್ನು ಪಾಪು ಅಪದ್ಬಾಂದವರೆಂದು ಪರಮಾಪ್ತರೆಂದೂ ತಿಳಿದಿರಲಾಗಿ ನಮಗೆ ಅವರೇ ಸಾಮಾನ್ಯ ವಿಷಯ; ಆಮೇಲೆ ಮೈಸೂರಿನ ಸಾಹಿತ್ಯಕರ ವಿಷಯ ಇದ್ದೇ ಇರುತ್ತಿತ್ತು. ಪಾಪುಗೆ

ರಾಜಕೀಯ ಸ್ಪರ್ಶವಾಗಿ ಸಂಸತ್ಸದಸ್ಯತನವನ್ನು ಮೆರೆದರೂ ಅದು ನಮ್ಮ ಚರ್ಚೆಯ ವಿಷಯವೇ ಆಗಿರಲಿಲ್ಲ. ನಿರುಪಯೋಗಿ ರಾಜಕೀಯದಿಂದಾಗಿ ಪಾಪು ತಮ್ಮ ಪತ್ರಿಕೆಯನ್ನು ಗಮನಿಸಬೇಕಾದಷ್ಟು ಗಮನಿಸಲಿಲ್ಲ ವೆಂದೇ ನನಗೆ ಈಗಲೂ ಅನಿಸುತ್ತಿದೆ. 'ಹಿರಿಣ್ಮಯೇನಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ' ಅಂದಂತೆ ರಾಜಕೀ ಯಸ್ಯ ಪಾತ್ರೇಣ ಅಸಲೀ ಪಾಪುಸ್ಯಾಪಿ ಹಿತಂ ಮುಖಂ ಎಂದು ಹೇಳಿಯೇನು. ಭೆಟ್ಟಿಯಾದ ತಕ್ಷಣ 'ಹಾಂ, ಮನೆಯವರೆಲ್ಲಿ? ಬನ್ನಿ ಊಟಕ್ಕೆ ಯಾವಾಗ ಬರುತ್ತೀರಿ ಇಬ್ಬರೂ ಎಂಬ ಮಾತು ನನಗೆ ಪಾಪು ಸಂಪ್ರ ದಾಯದಲ್ಲೇ ನಾನು ಹಳೆ ಬ್ರಿಟಿಷ್ ಕಲೆಕ್ಟರ್ ಇರಬೇಕು, ಲೇಡಿಸಹಿತನಾಗಿ ಹೊರಡಬೇಕೆಂದೇನೂ ಆಸೆ ಇರುವಂತೆ ತೋರುತ್ತದೆ. ಹೌದು ನಾನು ಈ ವಿಷಯದಲ್ಲಿ ಒಬ್ಬ ಅಪರಾಧಿ. ಸಂಚಾರದಲ್ಲಿ ಏಕಾಕಿತನ ನನಗೆ ಪ್ರಿಯ. ಇಬ್ಬರಾಗಿ ಹೋಗುವಂತೆ ವಾರ್ಸಿಟಿಗಳು ತಮ್ಮ ಟೀಎ ರೂಲು ಬದಲಾಯಿಸುವ ತನಕ ನನಗೆ ಏಕಾಂಗಿತನವೇ ವಿಹಿತ, ಶ್ರೇಯಸ್ಕರ. ಪಾಪು ಹಾಗಲ್ಲ – ಅವರು ಪಾರ್ವತೀ ಪರಮೇಶ್ವರರಂತೆ ಉಭಯತಾಣ ಪ್ರತ್ಯಕ್ಷರು. ಅವರ ಹಾದಿ ಅವರಿಗೆ.

ಧಾರವಾಡ ಸೀಮೆಯಿಂದ ಉಡುಪಿಗೆ ಬಂದು – ಹಾಗೆ ಬಂದ ಮೇಲೆ ನನಗೆ ಆತ್ಮೀಯರಾದ ಸ್ನೇಹಿತ ರೆಂದರೆ ಪ್ರೊ. ವಿ. ಎಂ. ಇನಾಂದಾರರು ಅವರನ್ನು 'ನನ್ನ ಇಷ್ಟ ಮಿತ್ರ ಬಂಧು ಬಾಂಧವ'ರಲ್ಲೊಬ್ಬನನ್ನಾಗಿಸಿ ನನ್ನ ಅನಿಸಿಕೆಗಳನ್ನು ಇನ್ನೊಂದೆಡೆ ನಿವೇದಿಸಿಕೊಂಡಿದ್ದೇನೆ.

ನನ್ನ ಸಾಹಿತ್ಯಕ ಜೀವನದ ತೇಲಾಟದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ನಾನು ಸಂಧಿಸಿದ ಮಿತ್ರರೂ, ಹಿರಿಯರೂ ಆದ ಸಾಹಿತಿಗಳಲ್ಲಿಯೂ ಕನ್ನಡದ ಬಗ್ಗೆ ಇದ್ದಷ್ಟು ಪ್ರೇಮ ಅವರರವರೊಳಗೇ ಇದ್ದಿರಲಿಲ್ಲವೆಂದು ನನ್ನ ಅನುಭವ ಪಡಿನುಡಿಯುತ್ತಿದೆ. 'ಶಂಬಾ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ದಿನ ಬೇಂದ್ರೆಯವರು ನಮ್ಮ ಮನೆಯೊಳಗಿದ್ದರು. ಮುಂಜಾವಿನ ಪತ್ರಿಕೆಯಲ್ಲೆ ದಪ್ಪಕ್ಷರದಲ್ಲಿ ಮುದ್ರಿತವಾದ ಈ ಸುದ್ದಿ ಬೇಂದ್ರೆಗೆ ಹಿಡಿಸಲಿಲ್ಲ – ಶಂಬಾಗೆ 200 ಮೈಲು ದೂರದಲ್ಲಿದ್ದರೂ ಅಪಥ್ಯವಾಗಿತ್ತು ಎಂದರೆ ಯೋಚಿಸಬೇಕು ತಾನೇ? ಧಾರವಾಡದಲ್ಲಿ ಅಕ್ಕಪಕ್ಕದ ಸಾಧನಕೇರಿ ಮನೆಗಳಲ್ಲಿ ವಾಸಮಾಡುತ್ತಿದ್ದ ಇಬ್ಬರನ್ನೂ ನೋಡಲು ಹೋಗುವ ನನ್ನಂಥವರು 'ಅಲ್ಲಿಂದ ಬಂದೆ' ಎಂದು ಹೇಳಬಾರದು. ಆಗ ಆದ್ಯತೆಯ ಪ್ರಶ್ನೆ ಬಂದೀತು ! ಆ ಅವರ ಬಗ್ಗೆ ನಿಮಗೆ ವಾಚನಪಗದ ಮಾತು ಹೊರಟೀತು. ಆದ್ದರಿಂದ ನನ್ನ ಮಿತ್ರರು ನನಗೆ ಎಚ್ಚರಿಕೆ ನೀಡಿದ್ದರು. ಅವರ ಇಂಥ ನಿಗಿನಿಗಿ ಸಾಹಿತ್ಯದ ಕಡಲಿನಲ್ಲಿ ಎಂಥ ಹೃದಯವಿತ್ತು ಎಂಬುದಕ್ಕೆ ಬೇಂದ್ರೆಯವರು ತಮ್ಮ ಮೃತ್ಯು ಶಯ್ಯೆಯಲ್ಲಿದ್ದ ಶಂಬಾಗೆ ಹೇಳಿದರೆಂದ ಮಾತು ಬಲು ಹೃದ್ಯವಾಗಿದೆ; ಶಂಬಾ ಹೇಳಿ ಕಳಿಸಿದರಂತೆ, ಮುಂಬಯಿಗೆ ಹೋಗುತ್ತೀರಿ ಎಂದು ಕೇಳಿದೆ. ನೋಡಲು ಬರಲೇ?' 'ಏನಂತೆ ಒಬ್ಬರಲ್ಲ ಇಬ್ಬರೂ ಬನ್ನಿ, ದಂಪತಿ ಸಮೇತ ಎಂದುಬಿಟ್ಟರಂತೆ ಬೇಂದ್ರೆ. ಜೀವನದಲ್ಲಿಯೂ ಕಾವ್ಯದ ಸೊಬಗೆಂದರೆ ಇದು.



ಸಾಹಿತ್ಯದ ಸುಗ್ಗಿ

ಉಡುಪಿ – ಕರ್ನಾಟಕದ ಒಂದು ಪುಣ್ಯಸ್ಥಳ, ಯಾತ್ರಿಕರು ಪರಿಷೆ ಸೇರುವ ಸರ್ವಋತು ಬಂದರು. ಎಂದಿನಿಂದಲೋ – ತಿಳಿಯದು, ಹುಟ್ಟೂರು ಉಡುಪಿಯನಾದ ನನಗೆ ಬುದ್ಧಿ ತಿಳಿದಂದಿನಿಂದಲೂ ಇಲ್ಲಿಯ 'ಪೊಡವಿಗೊಡೆಯ'ನ ಸನ್ನಿಧಾನದಲ್ಲಿ ಪಂಡಿತರ ಚರ್ಚೆ – ಭಾಷಣ ಘಟಪಟ ಸಂವಾದ ನಡೆಯುತ್ತಲೇ ಇತ್ತು. ಆದರೆ ನನ್ನ ಆಯುಷ್ಯದ ಮೊದಲ 20 ವರ್ಷ ನನ್ನ ಸಾಹಿತ್ಯದ ಕಣ್ಣು ತೆರೆಯದೆ ಇದ್ದುದರಿಂದ ಇದೆಲ್ಲ ನನ್ನ ಮಟ್ಟಿಗೆ ಪುರಾಣ, ಇತಿಹಾಸ. ಇಂಥವು ನಡೆದಲ್ಲಿ ನನ್ನ ಜೀವನದ ಇಪ್ಪತ್ತು ವಸಂತಕಾಲ ನಾನು ಗೈರು ಹಾಜರು – ಅಲ್ಲಿ ನಾನು ಪ್ರೇಕ್ಷಕನೂ ಅಲ್ಲ, ಶ್ರೋತೃವೂ ಅಲ್ಲ. ಕಾರ್ಯಕರ್ತನೂ ಅಲ್ಲ, ವಿಮರ್ಶಕನೂ ಆಗಿರಲಿಲ್ಲ. ಆ ಎಳವೆಯಲ್ಲಿ ಉಡುಪಿಗೆ ಕನ್ನಡ ನವೋದಯ ದಿಗ್ಗಜಗಳೆಲ್ಲ ಬಂದು ಘೀಂಕರಿಸಿ ಹೋಗಿದ್ದರು – ಅಂತೆ. ಸ್ವಾಮಿಗಳು – ಉಡುಪಿ ಎಂದ ಮೇಲೆ ಸ್ವಾಮಿಗಳಿರಲೇ ಬೇಕಲ್ಲವೆ? – ಸಾಹಿತ್ಯ ಕಲಾರಸಿಕರಾಗಿದ್ದರೆ ಊರಿನ ಜನಕ್ಕೆ ಪರ್ಯಾಯದ ಎರಡು ವರ್ಷವೂ ಕರ್ಣರಸಾಯನ. ಈಗ ಐವತ್ತು ವರ್ಷಗಳಿಗೆ ಹಿಂದಿನ ಫಲಿಮಾರು ಶ್ರೀಗಳು ಬಿ.ಎಂ. ಶ್ರೀ ಮುದವೀಡು ಮೊದಲಾದವರನ್ನು ಕರೆಸಿ ಅವರ ವಾಗ್ಮಿತೆಯನ್ನು ಚೌಕಿ ಮೃಷ್ಟಾನ್ನದ ಪ್ರಸಾದದ ಜತೆಗೇ ಊರಿನ ಜನರಿಗೆ ಮನತಣಿಯ ಉಣಬಡಿಸಿದರೆಂದು ನಾನು ಕೇಳಿದ್ದೆ; ಇದು ನನ್ನ ಮಟ್ಟಿಗೆ ಕೇವಲ ಕಥಾಶ್ರವಣ. ಆಗ ಉಡುಪಿಯಲ್ಲಿ ಕೊರಡ್ಕಲ್ ಶ್ರೀನಿವಾಸರಾಯರು, ಸಾಂತ್ಯಾರು ವೆಂಕಟರಾಜರು, ತುಳುನಾಡ ಹುದ್ದರಿ ಶ್ರೀನಿವಾಸ ಪಣಿಯಾಡಿ, 'ಅಂತರಂಗದ' ಹೈದರ್ ಎಂ. ವಿ. ಹೆಗ್ಡೆ, ಪಾ. ವೆಂ. ಆಚಾರ್ಯ, ಎನ್. ಎಸ್. ಕಾರಂತ (ನಾ. ಸು. ಹರ್ಡೀಕರ ಅವರ ತೈನಾತಿ) ಅವರ ಕ್ರಿಯಾತಾತ್ಪರ್ಯದ ಕಾಲ; ಕೊರಡ್ಕಲ್ – ನಾಟಕಕಾರರು, ಕಥೆಗಾರರು. ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಇವರು ಆಗಿನ ಕಾಲದ ಸೃಷ್ಟಿಶೀಲ ಲೇಖಕರು; ಸಾಮಾನ್ಯತಃ ಸತ್ಯ ವಾದಿ, ಕಟುವಾದಿ, ವೆಂಕಟರಾಜರು ಉಡುಪಿಯ ಖಾಸಾ ಕವಿಗಳು. ಕನ್ನಡದ ನವೋದಯದ ಕಾಲದಿಂದಲೂ ಭಾವಗೀತೆಗಳನ್ನು ಬರೆಯುವುದರಲ್ಲಿ ಇವರದು ಎತ್ತಿದ ಕೈ. ಉಳಿದವರೆಲ್ಲ ಗಾಂಧಿಯುಗದ ಹುಮ್ಮಸ್ಸಿನ ತರುಣ ಪತ್ರಿಕೋದ್ಯಮಿಗಳು. ಇವರಲ್ಲಿ ಪಾ. ವೆಂ. ಅತ್ಯಂತ ಸೃಷ್ಟಿಶೀಲ, ಮೌಲಿಕ, ಚಿಂತನಶೀಲ ಬರಹಗಾರ ರಾದರೂ ಜೀವನೋಪಾಯಕ್ಕಾಗಿ ಪತ್ರಿಕೋದ್ಯಮವನ್ನು ನೆಮ್ಮಿಕೊಂಡಿದ್ದರು. ಮೊದಲು ಉಡುಪಿಯ ಕಥೆ ಗಾರರಾಗಿ ಉದಯಿಸಿ ಆಮೇಲೆ ಪತ್ರಿಕೋದ್ಯಮಕ್ಕೆ ಮಾರು ಹೋದ ಬನ್ನಂಜೆ ರಾಮಾಚಾರ್ಯರು ಕೂಡ ಹೆಚ್ಚುಕಡಿಮೆ ಇದೇ ಯುಗಕ್ಕೆ – 1930, 40ರ ದಶಕಕ್ಕೆ ಸೇರಿದ ಸಾಹಿತ್ಯಿಕ ಕಾರ್ಯಕರ್ತರು. ದಾಸರ ಪದಗಳು ಮತ್ತು ಯಕ್ಷಗಾನ ಪ್ರಸಂಗಗಳ ಪ್ರಕಟನೆಗೆ ಪ್ರಸಿದ್ಧರಾದ ಪಾವಂಜೆ ಗುರುರಾಯರು ತಮ್ಮ ದಾಸೋಹವನ್ನು ಸದ್ದಿಲ್ಲದ ಮಾತೇ ಇಲ್ಲದೆ ನಡೆಸುತ್ತಿದ್ದರು. ಸಂಪ್ರದಾಯ ಶರಣ ಕೃತಿಗಳನ್ನು ಪ್ರಸಿದ್ಧಿಸಿದ ಈ ಪ್ರಕಾಶಕರ ಅಳಿಯಂದಿರಾದ ಶ್ರೀನಿವಾಸ ಪಣಿಯಾಡಿ ಅವರ 'ಅಂತರಂಗ', ತುಳುಭಾಷೆಯ ಅಭಿವೃದ್ಧಿಗಾಗಿ ಅವರು ಮಾಡಿದ ಪ್ರಯತ್ನ, ಸಂಸ್ಥೆಗಳನ್ನು ಕಟ್ಟಿ ಉಡುಪಿಯ ಜನಜೀವನದ ಸಂಘಟನೆ ಮಾಡಲೆಳಸಿದ ಅವರ ಅದಮ್ಯ ಉತ್ಸಾಹ, ಆರ್ಥಿಕ ವಿಪರ್ಯಾಸದಿಂದಾಗಿ ಅವರು ಊರು ಬಿಡಬೇಕಾಗಿ ಬಂದ ದುರ್ಭರ ಸನ್ನಿವೇಶ – ಇವೆಲ್ಲ ನಮ್ಮ ಉಡುಪಿಯ ಇತಿಹಾಸದಲ್ಲಿ ಮನೆಮಾತಾಗಿ ನಿಂತಿವೆ. ಆ ಗಾಂಧೀಯುಗದ ಸ್ವದೇಶಾಭೀಮಾನ, ಹುರುಪು, ನಿರ್ಮಲ ಸ್ವತಂತ್ರ ಜೀವನಕ್ಕಾಗಿ ಈ ಕೆಲವು ಜನ ಮಾಡಿದ ತಪಸ್ಸು, ತ್ಯಾಗ; ಕೆಲವೇ ರೂಪಾಯಿ ಸಂಬಳ ಪಡೆದರೂ ಅವರು ಸಂಪಾದಿಸಿದ ಪತ್ರಿಕೆಯ ಓರಣ, ಅಚ್ಚುಕಟ್ಟು ಆರ್ಥಿಕ ದೃಷ್ಟಿ ವ್ಯಾಪಾರಿ ಮನೋ ವೃತ್ತಿ ಊರಲ್ಲಿನ್ನೂ ಬೆಳೆಯದ ಆ ಕಾಲದಲ್ಲಿ ಸ್ವಾಭಾವಿಕವಾಗಿ ಸಹಜವಾಗಿ ನೆಲೆಯಾಗಿತ್ತು.

ಉಡುಪಿ ಸಂಪ್ರದಾಯದ ಒಂದು ಕೋಟೆ ಎಂದು ಹೊರಗಿನವರಿಗೆ ತೋರುವುದುಂಟು. ಆದರೆ ವಸ್ತು ಸ್ಥಿತಿ ಎಂದೂ ಹಾಗಾಗಿರಲಿಲ್ಲ. 1931 – 1933ರ ಸಂದಿನಲ್ಲಿ ಅಷ್ಟಮಠಗಳ ಎದುರಾಎದುರಿ ಮಠಗಳಲ್ಲಿ ನಡೆಯುವ ಅನ್ಯಾಯಗಳ ಕುರಿತು ಡಾಣಾಡಂಗುರವಾಗಿ ಇಂಗ್ಲೀಷಿನಲ್ಲಿ ಭಾಷಣ ಮಾಡುವುದು ಸಾಧ್ಯವಾಗಿತ್ತು. ಇಂಗ್ಲೀಷ್ ಭಾಷಣ ಕನ್ನಡ ಅನುವಾದ ಎಲ್ಲೋ ಕನಸಿನಂತೆ ನನ್ನ ಸ್ಮೃತಿಪುಟದಲ್ಲಿ ಉಳಿದಿದೆ. 'ಸತ್ಯಾಗ್ರಹಿ' ಎಂಬ ಕಲ್ಲಚ್ಚಿನ ಪತ್ರಿಕೆ ಅಸಹಕಾರ ಚಳುವಳಿಯ ಸಂದೇಶವನ್ನು ಗುಪ್ತವಾಗಿ ಉಡುಪಿಯಿಂದ ಮಂಗಳೂರಿಗೆ

ಪ್ರಚಾರ ಮಾಡುತ್ತಿತ್ತು. ಎ.ಬಿ. ಶೆಟ್ಟರಿಂದ ಸ್ಥಾಪಿತವಾದ 'ನವಯುಗ' ಕೆ.ಕೆ ಶೆಟ್ಟರ ತರುಣ ಸಂಪಾದಕತ್ವದಲ್ಲಿ ಕಾಂಗ್ರೆಸ್ ಪಕ್ಷದ ಮುಖಪತ್ರವಾಗಿ ಜಿಲ್ಲೆಯ ಉತ್ತರಭಾಗದ ಜನರಿಗೆ ಪ್ರಯೋಜನ ಬಯಸಿತು. ಶ್ರೀ ಕೆ. ಕೆ. ಶೆಟ್ಟರು ಧೈರ್ಯಶಾಲಿ ವಿಮರ್ಶಕರು. ಆಗಿನ ನಮ್ಮ ಮಠದ ಸಂಸ್ಥಾನಗಳ ಹುಳುಕನ್ನು ನಾಟಕರೂಪವಾಗಿ ಬರೆದು ಆಡಿಸಿದ್ದರಂತೆ. ಮಂಗಳೂರಿನಿಂದ ಕುಂದಾಪುರದ ವರೆಗೆ ಪಸರಿಸಿದ್ದ ಸ್ವಾತಂತ್ರ್ಯ ಚಳುವಳಿಯ ಪ್ರವಾಹದಲ್ಲಿ ಉಡುಪಿ ಒಂದು ಮಧ್ಯಬಿಂದುವಾಗಿ, ದಾರ್ಮಿಕ ನೇತೃತ್ವವು ಮಂಜುಮುಸುಕಾದಾಗ ರಾಜಕೀಯದ ಮೊನೆಯನ್ನೂ ಸಮಾಜ ಸುಧಾರಣೆಯ ಚೂಪನ್ನೂ, ರೂಢಿಸಿಕೊಂಡ ಒಂದು ಸ್ಥಳವಾಗಿತ್ತು. ಗಾಂಧೀ ಚಳುವಳಿಯ ಸಾಮಾಜಿಕ ಸುಧಾರಣೆಯ ಅಂಗವಾಗಿ ನನ್ನ ಈ ಉಡುಪಿಯ ಪ್ರಶಾಂತ ಸರೋವರದಲ್ಲಿ ಕಿರಿ ತೆರೆಗಳು ಎದ್ದದ್ದುಂಟು. ಒಂದು ದೃಶ್ಯ ನನಗೆ ಈಗಲೂ ನೆನಪಿಗೆ ಬರುತ್ತದೆ – ನಾನಾಗ ಹೈಸ್ಕೂಲು ವಿದ್ಯಾರ್ಥಿ. ಮಧ್ಯಾಹ್ನ ಮೂರು ಗಂಟೆಯ ಸಮಯ – ಒಂದು ಅಪೂರ್ವ ಮೆರವಣಿಗೆಯನ್ನು ಕಂಡೆ. ಮುಂಡಾಸು ಸುತ್ತಿ ಕೇಸರಿ ಬಣ್ಣದ ಅಂಗಿ ತೊಟ್ಟು, ಅರಸಿನ ಗೊಂಡೆ ಹೂವಿನ ಮಾಲೆ ಹಾಕಿಕೊಂಡ ಮುದ್ರಾಡಿ ಜನಾರ್ದನ ಆಚಾರ್ಯರು – ಅವರ ಬೆನ್ನ ಹಿಂದೆ ನಾಲ್ಕಾರು ಜನ 'ಆಚಾರ್ರು ಬಗೆ'ಯವರು ತುಳುವಿನ 'ಕುದ್ಕದಿಬ್ಬಣ' (ನರಿದಿಬ್ಬಣ) ಮಾದರಿಯ ಈ ಮೆರವಣಿಗೆಯ ಅರ್ಥ ನನಗೆ ಆದದ್ದು ಮತ್ತೆ ಹಲ ವರ್ಷಗಳ ತರುವಾಯ. ಇವರೇ ಸನಾತನಧರ್ಮ ಸಂಸ್ಥಾಪನಾರ್ಥವಾಗಿ ಕಾರಂತರ ವಿಜಾತೀಯ ವಿವಾಹವನ್ನು ತಮ್ಮ 'ಶ್ರೀಕೃಷ್ಣ ಸಂದೇಶ'ವೆಂಬ ಮಾಸಿಕದಲ್ಲಿ ಟೀಕಿಸಿ, ಕೋರ್ಟಿನ ಕಟ್ಟೆ ಹತ್ತಿ, ಜೈಲಿನ ಸೊಗಸನ್ನುಂಡು ಮರಳಿದ ಸಂಪ್ರದಾಯ ಶೂರರು. ಯಾವ ಬಿರುದುಬಾವಲಿಯೂ ಇಲ್ಲದೆ, ತಮ್ಮಟೆ ದುರುಸು ಬಾಣ ಇಲ್ಲದೆ ಉಡುಪಿಯ ಅಷ್ಟ ಮಠಗಳು ತೀರ ಸಪ್ಪೆಯಾಗಿ ಅವರನ್ನು ಸ್ವಾಗತಿಸಿದ್ದನ್ನು ಎಣಿಸಿದರೆ, ಇಲ್ಲಿ ಸನಾತನಧರ್ಮ ಕೊನೆಗಾಲದಲ್ಲಿ ನಿಂತಿದೆ ಎಂದು ತೋರಬೇಕು; ಕೆಲಗಾಲಾನಂತರ ಮುದ್ರಾಡಿ ಆಚಾರ್ಯರೂ ಉಡುಪಿಯನ್ನು ಬಿಟ್ಟು ಪರದೇಶಿಗಳಾಗಬೇಕಾಯಿತು. ಸಂಪ್ರದಾಯದ ಭದ್ರ ಕೋಟೆಯಲ್ಲಿ ಸಂಪ್ರದಾಯದ ಧುರೀಣನಿಗೆ ಸ್ಥಾನವಿರಲಿಲ್ಲ.

ಈ ನನ್ನ ಉಡುಪಿಯಲ್ಲಿ ಎಂದಿನಿಂದಲೂ ಒಂದು ಲವಲವಿಕೆ, ಹುರುಪು, , ಏನಾದರೂ ಮಾಡಬೇಕೆಂಬ ಹುಮ್ಮಸ ಇದ್ದೇ ಇರುತ್ತಿತ್ತು – ಇದು ಕವಿ ಅಡಿಗರ 'ಏನಾದರೂ ಮಾಡುತಿರು ತಮ್ಮ' ಎಂಬ ಸಮಯ ಭಂಜಕ ಉದ್ಯೋಗವಾಗಿರಲಿಲ್ಲ. ಯಶೋ ಪ್ರವಾಹದ ದಂಡೆಗುಂಟ ತೆರಳುವ ಪ್ರಯತ್ನವೂ ಆಗಿರಲಿಲ್ಲ. ವಸ್ತುಸ್ಥಿತಿಯನ್ನು ನಿರ್ಭೀತ, ಮುಕ್ತ ಮನಸ್ಸಿನಿಂದ ಇದಿರಿಸುವ ಛಲ ಉಳ್ಳವರ ತವರೂರು ಉಡುಪಿ ಎನಿಸಿತ್ತು. ವಿಫಲತೆಯೇ ಇಲ್ಲಿನ ಕೆಲವರ ಬದುಕಿನ ಗುರಿಯಾದಂತೆ, ಸೋತು ಊರು ಬಿಡುವುದೇ ಒಂದು ಉದ್ಯೋಗವಾದಂತೆ ಅನಿಸುತ್ತಿತ್ತು. ಅರ್ಥವುಳ್ಳ ಆದರೂ ಸ್ವಾರ್ಥವಿಲ್ಲದ ಬರಿಯ ಭಾವಗೀತದಂತೆ ಬದುಕನ್ನು ಬಾಳಿ ಉಡುಪಿಯ ಒಂದು ತುಣುಕನ್ನು ತಮ್ಮೆದೆಯಲ್ಲಿ ಹೊತ್ತು ದೂರದ ಊರುಗಳಲ್ಲಿ – ಪರಪ್ರಾಂತ್ಯಗಳಲ್ಲಿ ನವೆದು ಜೀವ ತೇದ ಈ ಧೀರರ ನೆನಪೂ ಈಗಿನ ಉಡುಪಿಯ ಜನಸಾಮಾನ್ಯಕ್ಕಿರಲಾರದು.

ಉಡುಪಿ ನ್ಯಾಯವಾಗಿ ತುಳುವಿನ ಕೇಂದ್ರವಾಗಬೇಕಾಗಿತ್ತು. ತುಳು ಸಂಸ್ಕೃತಿಯನ್ನು ಬಿತ್ತರಿಸುವ ಹೃದಯ ಸ್ಥಾನವಾಗಬೇಕಾಗಿತ್ತು. ಉಡುಪಿ ಶ್ರೀಕೃಷ್ಣ ಮಠದ ಪೂಜೆ ಪುರಸ್ಕಾರ, ಮೃಷ್ಟಾನ್ನ, ಪ್ರಸಾದ ಇಷ್ಟೇ ಒಂದು ವಿಧಿನಿಯಮದಂತೆ ಇಲ್ಲಿ ನಡೆಯುತ್ತಿದೆ; ಮಠಗಳ ಪಾಂಡಿತ್ಯ ಮತ್ತು ಗುರುತ್ವದ ವಿಸ್ತರಣ ಉಡುಪಿಯಲ್ಲೇ ಸರಿಯಾಗಿ ಆಗದಿದ್ದರೆ ದ್ವೈತ ವೇದಾಂತದ ಪ್ರತಿಫಲನ, ಪ್ರತಿಧ್ವನಿ ಎಲ್ಲಿ ಕೇಳಿಸಬೇಕು? ಈಗಂತೂ ವೇದ ಘೋಷ ಟೇಪುಗಳಲ್ಲಿ, ಸಹಸ್ರನಾಮ ರಿಕಾರ್ಡು ಮತ್ತು ಬಾನುಲಿಯಲ್ಲಿ ಕೇಳಿಸುವ ದುಷ್ಕಾಲವೂ ಬಂದಿದೆ. ಹೀಗಾಗಿ ಇಲ್ಲಿನ ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡುವ ಹೊಣೆ ಜನರ ಮೇಲೆ ಬೀಳಬೇಕಾಯಿತು.

ಈ ಹೊಣೆಯನ್ನು ಅರಿತು, ಆಚರಿಸಿದವರಲ್ಲಿ ದಿ। ನಿಡಂಬೂರು ರಾಜಗೋಪಾಲಕೃಷ್ಣ ರಾಯರು ಎಲ್ಲರಿಗೂ ಆದ್ಯರು. ಉಡುಪಿಯ ಸಾಹಿತ್ಯಿಕ ಚಳವಳಿಯ ಅಗ್ರಗಾಮಿಗಳಾದ ಅವರು ಬಂಗಾಳಿ ಕಲಿತು, ಕೃಷ್ಣಸೂಕ್ತಿ, ಸಂಪಾದಿಸಿ, ಆಲೂರ, ಮುದವೀಡು, ಪಂಜೆಯವರ ಸಮಕಾಲೀನರಾಗಿ ಕನ್ನಡದ ಕೆಲಸವನ್ನು ಈ ಊರಲ್ಲಿ ಮೂರು ನಾಲ್ಕು ದಶಕಗಳ ಕಾಲ ನಡೆಸಿಕೊಟ್ಟರು. ಕರ್ನಾಟಕಸ್ಥರಾದ ಇವರಿಗೆ ಮೈಸೂರು – ಧಾರವಾಡದ ಕಡೆಯ ಕನ್ನಡ ಸಾಹಿತಿಗಳೆಂದರೆ ಪಂಚಪ್ರಾಣ. 1943ರ ಸುಮಾರಿಗೆ ಸ್ಥಾಪಿತವಾಗ ಉಡುಪಿಯ ಕರ್ನಾಟಕ ಸಂಘಕ್ಕೆ ರಾಯರೇ ಜೀವಾಳ – ಸಾಂಸ್ಕೃತಿಕವಾಗಿಯೂ, ಆರ್ಥಿಕವಾಗಿಯೂ. ಬಂದ ಸಾಹಿತಿಗಳನ್ನು ಕಡೆಕಾರಿನ ತಮ್ಮ ನಿವಾಸಕ್ಕೆ ಕರೆದೊಯ್ದು ಆತಿಥಿಸತ್ಕಾರ ಮಾಡಿದಷ್ಟೂ ರಾಯರು ದಣಿಯರು. 1910 – 20ರ ದಶಕದ 'ಕೃಷ್ಣಸೂಕ್ತಿ' ಸಂಪಾದಕ ರಾಯರು ನನಗೆ ಗೊತ್ತಿಲ್ಲ; ಆದರೆ ಕರ್ನಾಟಕ ಸಂಘದ ಅಧ್ಯಕ್ಷತನದಿಂದ ಅವರು ದಸರೆಗೆ ಒಂದು ವಾರ ಇಡೀ – ಸುಮಾರು ಹತ್ತು ವರ್ಷ – ಏರ್ಪಡಿಸಿದ ನಾಡಹಬ್ಬ ನನಗೆ ಅನುಭವವೇದ್ಯ. ರಾಯರಂಥ ಹಿರಿಯರು ಕರೆದರೆ ಬರದಿರುವ ಸಾಹಿತಿ ಯಾರು? ದಿನಕ್ಕೆ ಬೆಳಗ್ಗೆ – ಸಂಜೆ ಎಂಟೆಂಟು ಜನ ಸಾಹಿತಿಗಳು ಭಾಷಣ ಮಾಡಿದ್ದೂ ಉಂಟು. ಭಾಷಣ ಮುಗಿದ ಮೇಲೆ ನಾಟಕ, ಯಕ್ಷಗಾನದ ವಿನೋದದ ಸರದಿ. ಸಾಹಿತಿಗಳ ಆಗಮನ, ನಿರ್ಗಮನಕ್ಕೆ ಸಿ.ಪಿ.ಸಿ. ಕಂಪೆನಿಯ ಕುಡ್ವರ ಸಹಕಾರ. ಅವರ ಕಂಪೆನಿಯ ಬಸ್ಸು ಓಡುವಲ್ಲಿ

ಸಾಹಿತಿಗಳಿಗೆ, ಅಭ್ಯಾಗತರಿಗೆ ಪುಕ್ಕಟೆ ಪ್ರವಾಸ. ಪ್ರತಿಯೊಬ್ಬರ ಹೆಸರಿಗೂ ಬರುವ ಹೋಗುವ ಟಿಕೇಟು ಬರೆದು ಸಮಾರಂಭಕ್ಕೆ ಮೂರು ದಿನ ಇರುವಾಗಲೇ ಅಂಚೆಯಿಂದ ರವಾನಿಸುತ್ತಿದ್ದ ಶ್ರೀ ವಾಮನ ಕುಡ್ವರ (ಇವರ ಕಾರ್ಯಕ್ಷೇತ್ರವೂ ಮೊತ್ತಮೊದಲು ಉಡುಪಿಯಲ್ಲಿ ಇತ್ತು ಎಂಬುದು ಇಲ್ಲಿ ಸ್ಮರಣೀಯ) ಔದಾರ್ಯ ಮರೆಯುವಂಥಾದ್ದಾಗಿರಲಿಲ್ಲ. ಉಡುಪಿಯಿಂದ ಕುಂದಾಪುರದ ವರೆಗಿನ ಕನ್ನಡ ಅಭಿಮಾನಿಗಳಿಗೆ ರಾಯರ ಕೃಪೆಯಿಂದ ಸಾಹಿತ್ಯದ ರಸದೌತಣ ದೊರೆಯುತ್ತಿತ್ತು.

. ಓದಿದ್ದು ಅರ್ಥಶಾಸ್ತ್ರವಾದರೂ, ನನ್ನ ಪ್ರೀತಿ ಎಲ್ಲ ಸಾಹಿತ್ಯದ ಕಡೆಗೇ, ಅಂತೂ 1950ರ ಹೊತ್ತಿಗೆ ಉಡುಪಿಗೆ ಮರಳಿ ಆಗತಾನೇ ಸ್ಥಾಪಿತವಾದ ಎಂ. ಜಿ. ಎಂ. ಕಾಲೇಜಿಗೆ ಉಪಾಧ್ಯಾಯನಾಗಿ ಸೇರಿದಾಗ ನನ್ನ ಪ್ರಾಥಮಿಕ ಶಾಲಾ ಮಾಸ್ತರಿಕೆಯ ಪುಕ್ಕಲು, ಅಳುಕು, ಅಳಬುರುಕತನ ಮಾಯವಾಗಿ ನಾನು ಕನ್ನಡಿ ಗರಡಿಯಾಳು ಆಗಿಬಿಟ್ಟಿದ್ದೆ. ಅದೇ ವರ್ಷ ರಾಜಗೋಪಾಲ ರಾಯರ ಅಧ್ಯಕ್ಷತನದ ಸಂಘಕ್ಕೆ ಕಾರ್ಯದರ್ಶಿ ಆದೆ. ಅಷ್ಟು ನನ್ನ ಸಾಹಿತ್ಯ ಸಂಘಟನೆಯ ಉಪೋದ್ಘಾತ. ಈ ಸಂಘಟನೆ ಹೊರತು, ಹೊರಗೆ ನನ್ನ ಬದುಕಿನ ಅರ್ಥ ಸಾಹಿತ್ಯದ ಮಟ್ಟಿಗೆ ಹೆಚ್ಚು ವಿಸ್ತರಿಸಲಿಲ್ಲವಾದ್ದರಿಂದ ಇದೇ ನನ್ನ ಆತ್ಮಕಥನವೂ ಆದೀತು.

ನನ್ನ ಕನ್ನಡ ಸಂಘಟನೆಯ ಮೊದಲ ವರ್ಷದ ಅನುಭವ ಎಲ್ಲಾ ಸಾರ್ವಜನಿಕ ಕಾರ್ಯಕರ್ತರಿಗೆ ಆಗುವಂಥದೇ ಆಯಿತು. ಸಿಹಿ-ಕಹಿ, ನೆಳಲು-ಬೆಳಕು, ನಾಡಹಬ್ಬದ ಕಾರ್ಯಕ್ರಮವನ್ನು ರೇಶನಿಂಗ್ ಜಾರಿಯಲ್ಲಿದ್ದ ಆ ಕಾಲದಲ್ಲಿ ಮೂರು ದಿನಕ್ಕೆ ಇಳಿಸಿದರೂ ಬೇಕೆನಿಸುವಷ್ಟು ಧನಸಂಗ್ರಹ ಮಾಡುವಾಗ ಊರಿನ ಹಿರಿಯರ, ಮಹನೀಯರ ಕಟೂಕ್ತಿ ವೈದ್ಯರ ಸೂಜಿಯಂತೆ ಚುಚ್ಚುತ್ತಿತ್ತು. ನನ್ನ ಜತೆ ನಿ. ರಾಜಗೋಪಾಲರಾಯರ ಅಭಿಮಾನಿಗಳಾದ ಒಬ್ಬ ಜನಪ್ರಿಯ ವೈದ ಡಾ. ಐತಾಳರೇ ಬಂದರೂ ಅವರಿಗೂ ಜನ ಅನ್ನುವ ಮಾತು ಕೇಳಿ ಕನ್ನಡದ ಕೆಲಸಗಾರರಿಗೆ ಮೊದಲ ಅರ್ಹತೆ ಕಿವಿ ಕಿವುಡಾಗಿರಬೇಕು ಅನಿಸಿತು. ಒಬ್ಬ ಮಹನೀಯರು ನಾವು ಬಂದ ಇರಾದೆ ತಿಳಿದ ಮೇಲೆ ಮೇಜಿನ ಮೇಲಿಟ್ಟ ಕಾಲನ್ನು ಹಿಂತೆಗೆಯದೆ ಅವರ ಪವಿತ್ರ ಪಾದಗಳನ್ನಷ್ಟು ತೋರಿಸಿದರು. ಪುಣ್ಯಕ್ಕೆ ಮನೆಯ ಹಜಾರದಲ್ಲಿ ಅವರು ಕೂತಿದ್ದುದರಿಂದ ಕಾಲುಗಳಿಗಿರಬೇಕಾದ 'ರಕ್ಷೆ'ಯ ದರ್ಶನ ನಮಗಾಗಲಿಲ್ಲ. ಇನ್ನೊಂದು ಕಡೆ 'ಹೌದಯ್ಯಾ, ನಿಮಗೆ ಈ ಭಿಕ್ಷೆ ಬೇಡುವ ಕೆಲಸ ಯಾಕೆ ಬೇಕು?' ಅಂದರು. ಕೊಡುವ ಅಥವಾ ಕೊಡದ ಒಂದು ರೂಪಾಯಿಗೆ ಅವರನ್ನುವ ಮಾತುಗಳನ್ನು ಕೇಳಿ ನಾನು ನಾಡಹಬ್ಬ ಮುಗಿದ ಮೇಲೆ, ಕಾರಂತರಿಗೆ ಒಂದು ಪತ್ರ ಬರೆದು 'ಈ ಕೆಲಸ ಯಾತಕ್ಕಾಗಿ ಮಾಡಬೇಕು?' ಎಂದು ಪ್ರಶ್ನೆ ಕೇಳಿದೆ. ಅವರಿಂದ ಅನುಭವದ ಉತ್ತರ ಬಂತು – 'ಸಂಘದ ಕೆಲಸ ಎಂದರೆ ಇರುವುದೇ ಹೀಗೆ – ಯಾರಾದರೂ ಕತ್ತೆ ಚಾಕರಿ ಮಾಡುತ್ತಿರಬೇಕು ಅನಿಸಿಕೊಳ್ಳಲೇಬೇಕು'. ಈ ವಾಕ್ಯ ಆ ಮೇಲಿನ ಹಲವರ್ಷಗಳ ನನ್ನ ಕಾರ್ಯದರ್ಶಿತ್ವಕ್ಕೆ ವಜ್ರ ಕವಚವಾಯಿತು. ಕಿವಿ ಕಿವುಡಾಗದಿದ್ದರೂ, ನನ್ನ ಚರ್ಮ ದಪ್ಪವಾಯಿತು.

ಆ ವರ್ಷ ಗೊರೂರು ಅವರು ನಮ್ಮ ಮುಖ್ಯ ಅತಿಥಿಗಳು, ನಾನಾಗ ಇನ್ನೂ ಬ್ರಹ್ಮಚಾರಿ ಆದ್ದರಿಂದ ಸಾಹಿತಿಗಳಿಗೆ ಬಿಡಾರ ಉಡುಪಿಯ ಹೋಟೆಲೊಂದರಲ್ಲಿ ಮಾಡಿದ್ದೆ. ಸಾಹಿತಿಗಳನ್ನು ನೋಡಿಕೊಳ್ಳಲು ಗೆಳೆಯ ಬನ್ನಂಜೆಯವರನ್ನು ಪ್ರಾರ್ಥಿಸಿಕೊಂಡಿದ್ದೆ. ಗೊರೂರು ಅವರು ಬಸ್ಸಿಂದ ಬಂದಿಳಿದಾಗ ಯಾರೂ ಇರಲಿಲ್ಲ; ಅವರೇ ನಮ್ಮನ್ನು ಹುಡುಕಿಕೊಂಡು ಬಂದರು, ಯಾವಾಗಲೂ ನಗುಮೊಗದ ಸ್ವಾಗತ ನೀಡುತ್ತಿದ್ದ ಅವರ ಮಾನವೀಯ ದೃಷ್ಟಿ – ಸಾಹಿತಿಗಳನ್ನೇಕರಲ್ಲಿ ವಿರಳವಾದ ಗುಣ – ಎಂದುಕೊಂಡಿದ್ದೇನೆ. 'ರಾಮಾಚಾರ್ರೆ, ನೀವು ಒಂದ್ಕೆಲಸ ಮಾಡಿ, ಈ ಹೋಟಲಿನವರು ಹಾಕುವ ರೇಶನ್ ನನಗೆ ಸಾಲುವುದಲ್ಲ. ಬೇರೆಲ್ಲಾದರೂ ಊಟ ಮಾಡಿಸಿ' ಎಂದರಂತೆ ಗೊರೂರು. ರಾಮಾಚಾರ್ಯರು ಅವರನ್ನು ಇನ್ನೊಂದು ಕಡೆ ಒಯ್ದು ಎರಡನೇ ಊಟ ಮಾಡಿಸಿದ ಕಥೆ ಹೇಳಿದರು. ಮರು ವರ್ಷ ಎಂ. ಆರ್. ಶ್ರೀ ಅವರು ಬರುವಾಗಲೂ ಬಸ್ಸು ಬರುವ ಹೊತ್ತಿಗೆ ನಮ್ಮ ಸ್ವಯಂಸೇವಕರು ಕಾಣೆ – ಹಾಗಾಗಿ ಅವರ ಬಿಡಾರದ ಫಲಿಮಾರು ಮಠವನ್ನು ಅವರೇ ಹುಡುಕಿಕೊಂಡು ಬರುವಂತಾಯಿತು. ಹಿಂದಿನ ನಾಡಹಬ್ಬದ ಆಯವ್ಯಯ ಪಟ್ಟಿಯನ್ನು ತೆಗೆದು ನೋಡಿದಾಗ ಕಾಲಂಶ ವೆಚ್ಚ ಸ್ವಯಂಸೇವಕರ ಸ್ವಯಂಸೇವನೆಗೆ ಮೀಸಲಾದ್ದನ್ನು ಕಂಡು ನನ್ನ ಮೊದಲ ಸುಗ್ರೀವಾಜ್ಞೆ ಹೊರಡಿಸಿದೆ – ಸ್ವಯಂ ಸೇವಕರು ಕೈಬೆರಳೆಣಿಕೆಗಿಂತ ಮೀರಬಾರದು; ಅವರು ಅವರವರ ಮನೆಯಲ್ಲಿ ತಿಂಡಿ ತೀರ್ಥ ಮಾಡಿ ಬರಬೇಕು. ಹೀಗಾಗಿ ನಾವು ಸಂಗ್ರಹ ಮಾಡುತ್ತಿದ್ದ 300 - 350 ರೂಪಾಯಿಗಳಲ್ಲಿ ಮೂರು ದಿನಗಳ ಗಡದ್ದಾದ ಉತ್ಸವ ನಡೆಸಲು ಬರುತ್ತಿತ್ತು. ಪ್ರಥಮ ವರ್ಷದಲ್ಲಿ ನಾನು ಕಂಡುಕೊಂಡ ವಿಷಯ: ಕಾರ್ಯ ಸಮಿತಿ ಎಂದರೆ ಒಂದು ನಾಮಕೇ ವಾಸ್ತೇ ಬಂಧನ: ಕೆಲಸ ಮಾಡಲು ಸಿಗುವವರೆಲ್ಲ ನಿಮ್ಮ ಅಪ್ತರೇ ಆಗತಕ್ಕದ್ದು. ಐನ್ ಸಮಯ ನಿಮಗೆ ಕೈಕೊಡಬೇಕಾದರೆ ಕಾರ್ಯಸಮಿತಿಯ ಸದಸ್ಯರಿಗೋ, ನಿಮ್ಮ ಜತೆ ಕಾರ್ಯದರ್ಶಿಗೋ ಒಂದು ಕೆಲಸ ಕಟ್ಟಿಕೊಡಿ – ಹೊತ್ತಿಗೆ ಆತ ಇರುವುದೂ ಇಲ್ಲ, ಬರುವುದೂ ಇಲ್ಲ. ಪ್ರಧಾನ ಕಾರ್ಯದರ್ಶಿ ಹೇರುಗತ್ತೆಯಾಗಿ ದುಡಿಯಲು ಸಿದ್ಧನಾಗಬೇಕು. ಅವನಿಗೆ ನೆರವಾಗಲು ಆತ್ಮೀಯರನ್ನೇ ಕರೆದುಕೊಳ್ಳಬೇಕು; ಜೀವನದ ಇತರ ರಂಗಗಳವರು ಆದರೆ ಒಳ್ಳೆಯದು. ಸಾಹಿತಿಗಳನ್ನಂತೂ ಹತ್ತಿರ ಬರಗೊಡಬಾರದು. ತಮಗೆ

ಸಲ್ಲದ ಗೌರವ ಈತ ಬೇರೆಯವರಿಗೆ – ನಮ್ಮ ಊರಲ್ಲಂತೂ ಆ ಕಾಲಕ್ಕೆ ಮೈಸೂರವರಿಗೆ' – ಈತ ಯಾಕೆ ಸಲ್ಲಿಸಬೇಕು, ನಾವೇನು ಕಮ್ಮಿ ಎಂಬ ಧೋರಣೆ ಉಳಿದುಕೊಂಡಿರಲಾಗಿ ನನ್ನ ಕಷ್ಟಕಾಲದಲ್ಲಿ ನೆರವಿಗೆ ನಿಂತವರು ನನ್ನ ಓರಗೆಯ ಕೆಲವರು ವ್ಯಾಪಾರೀ ಮಿತ್ರರು. ಒಬ್ಬಿಬ್ಬರು ನನ್ನ ಸಹೋಪಾಧ್ಯಾಯರು – ಅಷ್ಟೇ. ಸುಮಾರು ನಾಲ್ಕೈದು ವರ್ಷಗಳ ಕಾಲ ಕರ್ನಾಟಕ ಸಂಘ ತನ್ನ ಮೂರು ದಿನದ ನಾಡಹಬ್ಬವನ್ನು ಯಶಸ್ವಿಯಾಗಿ ನಿರ್ವಹಿಸಿತು. ರಾಜಗೋಪಾಲ ರಾಯರು ದಿವಂಗತರಾದ ಬಳಿಕ ಸಿಂಡಿಕೇಟ್ ಬ್ಯಾಂಕಿನ ಟಿ.ಎ.ಪೈ. ಸಂಘದ ಅಧ್ಯಕ್ಷರಾದರು. ಬಳಿಕ ಡಾ. ಕೆ. ಎಲ್. ಐತಾಳರು, ಸುಮಾರು ಹದಿನೈದು ವರ್ಷ – 1955ರಿಂದ ಈ 1970ರ ವರೆಗೆ – ಸಂಘ ನಿಶ್ಚೇಷ್ಟವಾಯಿತು. ಈ ನಿರೋದ್ಯೋಗ ವರ್ಷದಲ್ಲಿಯೂ ನನ್ನ ಹೆಸರು ಕಾರ್ಯದರ್ಶಿ ಎಂದೋ, ಕೊನೆಗೆ ಅಧ್ಯಕ್ಷನೆಂದೋ 'ರಾರಾಜಿಸು'ತ್ತಲೇ ಇದ್ದರೂ, ಸಂಘದ ಹೆಸರು ಉಡುಪಿಯ ಗತಕಾಲದ ವೈಭವಕ್ಕೆ ಸೇರಿಕೊಂಡಿತು. ಇದಕ್ಕೆ ಒಂದು ಕಾರಣ ಕಾರ್ಯಕರ್ತರ – ನನ್ನನ್ನು ಸೇರಿಸಿ – ಔದಾಸೀನ್ಯ; ಇನ್ನೊಂದು ಅಷ್ಟು ಹೊತ್ತಿಗೆ ಉಡುಪಿಯಲ್ಲಿ ಉದಯವಾದ ಒಂದು ಅಪೂರ್ವ ಶೈಕ್ಷಣಿಕ ಸಂಘಟನೆಯ ಬದಲಿ ವೇದಿಕೆ. ನಾನು ಮಣಿಪಾಲದ ಎಕಾಡೆಮಿಯ ಒಂದು ಕಾಲೇಜಿನ ನೌಕರನಾದರೂ ಸಂಸ್ಥೆಯ ಮುಖ್ಯಸ್ಥರು ನನ್ನ ಮೇಲೆ ತೋರಿದ ಪ್ರೀತಿ, ವಿಶ್ವಾಸ, ನಂಬಿಕೆಯ ದ್ಯೋತಕವಾಗಿ ಕನ್ನಡದ ಚಟುವಟಿಕೆಗಳಿಗೆ ನಾನು ಈ ಬದಲಿ ವೇದಿಕೆಯನ್ನೇ ಬಳಸಿಕೊಂಡೆ. ಇಲ್ಲಿ ಕ್ರಯಕೊಟ್ಟು ಪಡೆದು ಕೊಳ್ಳಬೇಕಾದ ಎಷ್ಟೋ ಸವಲತ್ತುಗಳು ತನ್ನಿಂತಾನೆ ಯಾವ ವೆಚ್ಚವೂ ಇಲ್ಲದೆ ನಮಗೆ ಲಭ್ಯವಾಗುತ್ತಿರುವಾಗ ಊರೆಲ್ಲ ಬಿಕ್ಷೆ ಬೇಡಿ ಕನ್ನಡ ಸಂಘದ ಉತ್ಸವ ಏಕೆ ನಡೆಸಬೇಕು ಎಂದು ನನಗೆ ಅನಿಸಿತು. ಅಲ್ಲದೆ ನಾಡಹಬ್ಬದ ಕಾರ್ಯಕ್ರಮಗಳು 1956ರ ನಂತರ ಸಂಪ್ರದಾಯದಂತೆ ಸರ್ವವ್ಯಾಪಿಯಾಗಿ ತಹಸೀಲ್ದಾರರ ಮುಖಾಂತರ ಅರ್ಥವಿಹೀನವಾಗಿ ನಡೆಯುವ ವಿದ್ಯಮಾನದಿಂದ ನನಗೆ ನಾಡಹಬ್ಬದಿಂದ ನುಣುಚಿಕೊಳ್ಳವುದೇ ಜಾಣತನವೆಂದು ತೋರಿತು. ಈ ಪ್ರವೃತ್ತಿಗೆ ಪೋಷಕವಾಗಿ ನಡೆದ ಕೆಲವು ಸನ್ನಿವೇಶಗಳನ್ನು ನಾನು ನಿರೂಪಿಸಲೇಬೇಕು. ಕರ್ನಾಟಕ ರಾಜ್ಯೋದಯವಾದ ತಕ್ಷಣ ನಮ್ಮ ಸಾಹಿತಿ ವರ್ಗದಲ್ಲಿ ಏನೋ ನಿರಾಶೆ ಮೂಡಿದಂತೆ, ನನಗೆ ಅನುಭವವಾಯಿತು. ಕರೆದವರು ಬಂದಾರೆಂದು ಕತ್ತು ಚಾಚಿ ಎಷ್ಟೋ ಸಾರಿ ನಿರಾಶರಾಗುವ, ಬಂದ ಸಭಿಕರಿಗೆ ಅಂಗಲಾಚುವ, ಅಥವಾ ಸ್ವತಃ ನಾನೇ ಭಾಷಣ ಮಾಡಿ – ಅರ್ಥಾತ್ ಯಾರೂ ಇಲ್ಲದ್ದಕ್ಕೆ ಕಾರ್ಯದರ್ಶಿಯಾದವನೇ ಪ್ರಾರ್ಥನೆಯಿಂದ ಹಿಡಿದು, ಭಾಷಣ, ವಂದನಾರ್ಪಣೆ ಎಲ್ಲವನ್ನೂ ಸಾಕಲ್ಯವಾಗಿ ಮಾಡಬೇಕಾದ ವಿಕಟ ಸನ್ನಿವೇಶ ಒದಗಿದಾಗ ಸಂಘದ ಮೇಲೆ ನನಗೆ ವಾಸ್ತವವಾಗಿ ಜುಗುಪ್ಸೆ ಹುಟ್ಟಿತು. ಒಂದು ವರ್ಷ ಉಡುಪಿ ಶ್ರೀಕೃಷ್ಣ ಮಠದಲ್ಲಿ ಪೇಜಾವರ ಶ್ರೀಗಳ ಪರ್ಯಾಯ ಕಾಲದಲ್ಲಿ ನಮ್ಮ ಮಠ, ಸಂಘದ ಸಂಯುಕ್ತ ನಾಡಹಬ್ಬ ಕಾರ್ಯಕ್ರಮಕ್ಕೆ ಎರಡು ದಿನ ಬರಬೇಕಾದ ಇಬ್ಬಿಬ್ಬರೂ ಗೈರು ಹಾಜರಾಗಿ ನಾನೇ ಎಲ್ಲಿಂದಲೋ ಓಡೋಡಿ ಬಂದು ಅನಿವಾರ್ಯ ಭಾಷಣ ಮಾಡಿ ನಗೆಗೀಡಾದ ಪ್ರಸಂಗ ನೆನಪಿಗೆ ಬರುತ್ತದೆ. ಅಂದಿನಿಂದ ಸಂಘದ ಚಟುವಟಿಕೆಗೆ ಶ್ರೀಕೃಷ್ಣಾರ್ಪಣವೇ ಆಯಿತು (ಆದರೆ ಉಡುಪಿಯ ಲಕ್ಷಣವೋ ಏನೋ ಮತ್ತೆ ಈ ಇಪ್ಪತ್ತೇಳನೇ ವರ್ಷದಲ್ಲಿ, ಸಂಘವು ವರಕವಿ ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ ತರುಣ ಲೇಖಕರ, ಪತ್ರಿಕೋದ್ಯಮಿಗಳ ಒಂದು ಚಿಂತನಶೀಲ ಚರ್ಚಾಕೂಟವಾಗಿ, ಬರೆಹಗಾರರ ಬಳಗವನ್ನು ಕಟ್ಟಿ, ಕಾರ್ಯತತ್ಪರವಾಗಿರುವುದು ಸಂತೋಷದ ವಿಚಾರ. ಸಂಘದ ಕೆಲಸಕ್ಕೆ ಅಣಿಯಾದ ಈ ಅಕ್ಷಯ ಕುಮಾರರಿಗೆ ನನ್ನ ಶುಭಾಶಯಗಳುಂಟು) ಸಂಘದ ನಿತ್ಯನೈಮಿತ್ತಿಕ, ಕಾಲಾವಧಿಯ ನಾಡಹಬ್ಬ ಮುಂತಾದ ಚಟುವಟಿಕೆಗಳು ಹಿಂದಾಗಲು ಇನ್ನೂ ಒಂದು ಪ್ರಬಲ ಕಾರಣ ಸಂಘದೊಳಗಿನ ನಾನೇ – ನಾವುಗಳೇ – ಆದೆವು.

ನಮ್ಮ ಕಾಲೇಜಿನ ಪ್ರಪ್ರಥಮ ಪ್ರಿನ್ಸಿಪಾಲ್ ಸುಂದರರಾಯರು ಇಂಗ್ಲಿಷ್ ಸಾಹಿತ್ಯದಲ್ಲಿ ಶ್ರೇಷ್ಠ ಅಧ್ಯಾಪಕರೂ ಒಟ್ಟು ಸಾಹಿತ್ಯದ ಅಭಿಮಾನಿಗಳೂ ಆಗಿದ್ದರು. ಉಡುಪಿ ಕವಿ ಮುದ್ದಣನ ಖಾಸಾ ಅಡುಂಬೊಲವಾದ್ದರಿಂದ ಮುದ್ದಣನ ಹೆಸರಲ್ಲಿ ನಾವು ಮೂರು ದಿನಗಳ ಸಾಹಿತ್ಯೋತ್ಸವ ನಡೆಸಬೇಕೆಂಬ ಸೂಚನೆಗೆ ಅವರು ಬೆಂಬಲವಿತ್ತರು. ಕಾಲೇಜಿನ ಭಾಷಾ ಸಂಘದ ಆಶ್ರಯದಲ್ಲಿ ಈ ಹದಿನೈದು ವರ್ಷಗಳಿಂದ ಏಕಪ್ರಕಾರವಾಗಿ ಮುದ್ದಣನ ಸ್ಮರಣೆಯಲ್ಲಿ ಸಾಹಿತ್ಯದ ಉಪನ್ಯಾಸಗಳೂ, ಕವಿಸಮ್ಮೇಳನಗಳೂ, ಚರ್ಚಾ ಗೋಷ್ಠಿಗಳೂ ನಡೆದು ಬಂದಿವೆ. ಉತ್ಸಾಹಿ ವಿದ್ಯಾರ್ಥಿಗಳೂ, ಪ್ರಾಧ್ಯಾಪಕರೂ ಸಂತೋಷವಾಗಿ ಸ್ವಯಂಸೇವಕರಾಗಿ ದುಡಿಯುತ್ತಾರೆ. ಅತಿಥಿಗಳಿಗಾಗಿ ಅತಿಥಿಗೃಹವುಂಟು, ಆರ್ಥಿಕವಾಗಿ ಪ್ರಿನ್ಸಿಪಾಲ ಸುಂದರರಾಯರ ಕೊಡುಗೈತನವುಂಟು – ಎನ್ನುವಾಗ ಮುದ್ದಣ ಸ್ಮಾರಕ ಸಾಹಿತ್ಯೋತ್ಸವ ಉಡುಪಿಯ ತರುಣ ಜನಾಂಗಕ್ಕೆ ಎರಡು ಮೂರು ದಿನಗಳ ಸಂಭ್ರಮವಾಯಿತು. ಹಾಲು, ಬೆಂಚು, ಕುರ್ಚಿ, ದೀಪ, ಧನ, ಜನ – ಎಲ್ಲಕ್ಕೂ ಪರಾವಲಂಬಿಯಾಗಿರಬೇಕಾಗಿದ್ದ ಕರ್ನಾಟಕ ಸಂಘದ ನೂರು ಬಗೆಯ ಕೀಟಲೆಗಳ ಬದಲು ಸಲೀಸಾಗಿ ರಂಗಮಂಟಪ, ಸುಖಾಸನ, ಸ್ವಯಂಸೇವಕರು, ಆರ್ಥಿಕ ಬೆಂಬಲವುಳ್ಳ – ಈ ನಮ್ಮ ಕಾಲೇಜಿನ ಮುದ್ದಣ ಉತ್ಸವ ಕಾಲೇಜಿನ ಭಾಷಾ ಸಂಘಗಳ ಇತಿಹಾಸದಲ್ಲಿ ಒಂದು ಸ್ಥಾನ ಕಲ್ಪಿಸಿಕೊಂಡಿದೆ. ಈ ಉತ್ಸವಕ್ಕೆ ಬಾರದ ಸಾಹಿತಿಗಳಿಲ್ಲ; ಬಂದವರೇ ವಿದ್ಯಾರ್ಥಿಗಳ ಕೇಳಿಕೆ ಮೇರೆಗೆ ಮೂರು ನಾಲ್ಕು ಸಲ ಬಂದಿದ್ದಾರೆ (ಉದಾ: ಶ್ರೀ ವೆಂಕಟರಾಮಪ್ಪ, ವಿ. ಸೀ., ಕಾರಂತರು)

ಕುಡುವರ ಸಿ.ಪಿ.ಸಿ. ಬಸ್ಸಿನ ಪುಕ್ಕಟೆ ಟಿಕೇಟು ಹಿಡಿದುಕೊಂಡು, ಎರಡು ಮೂರು ಕಡೆ ಬಸ್ಸು ಬದಲಾಯಿಸಿ ಬರಬೇಕಾಗಿದ್ದ ಆ ಕಾಲ ಮರೆಯಾಗಿ ಕಾರಿನಲ್ಲಿ, ಏಕೆ ವಿಮಾನದಲ್ಲಿಯೂ ಸಾಹಿತಿಗಳನ್ನು ಬರಮಾಡಿಕೊಳ್ಳುವ ಸತ್‌ಸಂಪ್ರದಾಯವನ್ನು ಆರಂಭಿಸಿದ ವಿಷಯದಲ್ಲಿ ನಮ್ಮ ಕಾಲೇಜಿನ ಭಾಷಾ ಸಂಘಕ್ಕೆ ಅಗ್ರಸ್ಥಾನ. ಊರಿನ ಜನರಿಗೆಲ್ಲ ಈ ಉತ್ಸವಕ್ಕೆ ಆಮಂತ್ರಣವಿರುವುದರಿಂದ ಅಭಿಮಾನಿಗಳು ಕಾಲೇಜು ತನಕ ಬಂದೇ ಬರುತ್ತಾರೆ. ಕನ್ನಡದ ಕೆಲಸ ನಿಂತಿಲ್ಲ – ಇದು ನಮ್ಮ ನಿಲುವು.

ಎರಡನೆಯ ಪ್ರಬಲ ಕಾರಣ: ನಾವು ಆಚರಿಸಿದ ಎರಡು ಅಭೂತಪೂರ್ವ ಶತಮಾನೋತ್ಸವ – ಪುರಂದರದಾಸ ಮತ್ತು ಕನಕದಾಸರ ಶತಮಾನೋತ್ಸವ. ಇದಕ್ಕೆ ನನ್ನ ಜತೆಗೆ ದುಡಿಯಲೂ ದಣಿಯಲೂ – ಕೆಲವೊಮ್ಮೆ ನನ್ನನ್ನು ಹೆಸರಿಗಾಗಿ ಮುಂದಿಟ್ಟು ಹಿಂದಿನಿಂದ ಕ್ರಿಯಾಶೀಲನಾಗಿರಲೂ ನನ್ನೊಬ್ಬ ವಿದ್ಯಾರ್ಥಿಯೇ ತಯಾರಾಗಿ ಬಿಟ್ಟ. ವಿಜಯನಾಥ ಶೆಣೈ ಎಂಬ ಹೆಸರಿನಲ್ಲಿ ಈತ ಊರವರಿಗೆಲ್ಲ ಚಾಕರಿ ಒದಗಿಸುವುದನ್ನೇ ತನ್ನ ನಿಜಗುಣವನ್ನಾಗಿ ಮಾಡಿಕೊಂಡು, ಸಂಗೀತಸಭೆ, ಚರ್ಚ್ - ಸಂಘ - ಪರ್ಯಾಯ - ಮಠ ಎಲ್ಲಿಂದರಲ್ಲಿ ರಾತ್ರಿ ಹಗಲೆನ್ನದೆ – ಹಸಿವು ನೀರಡಿಕೆ ಇಲ್ಲದೆ – ಕೇವಲ ಬೀಡದಲ್ಲಿರುವ ಪತ್ರಪರಿಶ್ರಿಸಿಂದಲೇ ಎಂತೆಂಥ ಮಹೋತ್ಸವಗಳನ್ನೂ ನಡೆಸುವ ತಾಕತ್ತು, ವಿಶ್ವಾಸ ಪಡೆದವನಾಗಿದ್ದ. ಉತ್ಸವ ತೊಡಗುವ ವರೆಗೆ ಕ್ಲಬ್ಬಿನಲ್ಲೋ, ಪ್ರೆಸ್ಸಿನಲ್ಲೋ ಕಾಗದ ಹರಿಯುತ್ತ, ಕಾರ್ಯಕ್ರಮ ರಚಿಸುತ್ತಾ, ಪತ್ರವ್ಯವಹಾರ ಮಾಡುತ್ತ, ಏಕಾಕಿ ಯೋಚನಾ ಯೋಜನಾ ಮಗ್ನನಾಗುವ ಕಾರ್ಯಪಟುವಾದ ಈತನಿಂದ 'ಶಿಷ್ಯಾದಿಚ್ಛೇತ್ ಪರಾಜಯಂ' ಆಯಿತು ನನಗೆ. ಈತನ ಕೈಸನ್ನೆ ಕಣ್ಸನ್ನೆಗೆ ಸಿದ್ಧವಾಗಿರುತ್ತಿದ್ದ ಕಪಿಪಾಳ್ಯ ರಾತ್ರೋ ರಾತ್ರಿ ಊರು ಮನೆಯ ಬೆಂಚು ಕುರ್ಚಿಗಳನ್ನೆಲ್ಲಾ ಹೊತ್ತು ತಂದು ಸಭಾಭವನವನ್ನು ತುಂಬಿಕೊಡುತ್ತಿದ್ದರು. ನೇಪಥ್ಯದಲ್ಲೇ ಸುಖ ಕಾಣುವ ವಿಜಯನಾಥ – ನಡೆಸಿದ ಎರಡು ಶತಮಾನೋತ್ಸವಗಳ ತೇರಿಗೆ ಹೆಸರಿಗಿಷ್ಟೇ ನಾನು ಪುರೋಹಿತ; ಸೂತ್ರಧಾರ ಅವನೇ. ಮೂರು ಮೂರು ದಿನ ನಡೆದ ಈ ಉತ್ಸವಕ್ಕೆ ಒಂದೊಂದಕ್ಕೆ ಹತ್ತು ಸಹಸ್ರ ರೂಪಾಯಿಗಳ ವರೆಗೂ ವೆಚ್ಚ ಬಂದಿತ್ತು; ಆದರೆ ಅದಕ್ಕೆ ವಿಜಯನಾಥನ ಮಾಂತ್ರಿಕ ಆರ್ಥಿಕ ಯಂತ್ರ – ಸೋವನೀರು (ಸ್ಮೃತಿಸಂಪುಟ) ಬಾಯಿ ಕೂಡಿಸಿ ಕೊಡುತ್ತಿತ್ತು. ಪುರಂದರ ಶತಮಾನೋತ್ಸವದ ನಮ್ಮ ಸ್ಮರಣ ಸಂಪುಟದಲ್ಲಿ ಕೇವಲ 36 ಪುಟಗಳು – ಆದರಿಂದ ನಮಗೆ ಒದಗಿದ ಜಾಹೀರಾತು ಉತ್ಪತ್ತಿ – ಕೆಲವು ಸಾವಿರ;

ಪತ್ರ ವ್ಯವಹಾರದಲ್ಲಿ ವಿಜಯನಾಥ ಗಟ್ಟಿಗ. ಯಾರು ಯಾರಿಗೆ ಯಾರು ಯಾರಿಂದ ಬರೆಸಬೇಕು, ಹೇಳಿಸಬೇಕು, ಫೋನಿಸಬೇಕು, ಪ್ರತ್ಯಕ್ಷ ಭೆಟ್ಟಿ ಮಾಡಿಸಬೇಕು, ಹೇಗೆ ಬರೆದರೆ ಸಾಹಿತಿಗಳು ಬಂದಾರು, ಬಂದವರನ್ನು ಎಲ್ಲೆಲ್ಲಿ ಇಳಿಸಬೇಕು; ಎಲ್ಲದರ ರಂಗೋಲೆ ಮೊದಲೇ ಸಿದ್ಧಮಾಡಿಕೊಳ್ಳುತ್ತಿದ್ದ. ಬ್ಯಾಂಕಿನ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡುವ ಇವನಿಗೆ ಜಾಹೀರಾತು ಕಲೆ ನೀರು ಕುಡಿದಂತೆ. ಉತ್ಸವದ ಪ್ರಚಾರಕ್ಕೆ ಆಕಾಶವಾಣಿ ಬೇಕೇ, ರಾಜಧಾನಿಯ ಪತ್ರಿಕೋದ್ಯಮಿಗಳು ಬರಬೇಕೆ? ದಿಲ್ಲಿಯ ಫಿಲ್ಮ್ ಡಿವಿಜನ್ ಬರಬೇಕೆ? ಎಲ್ಲದಕ್ಕೂ ಈತನ ನೀಲ ನಕಾಶೆ ಸಿದ್ಧವಾಗಿ ಸಕಾಲಕ್ಕೆ ಅವರುಗಳೆಲ್ಲ ಬಂದು ಉತ್ಸವ ಮಂಟಪದಲ್ಲಿ ಸಿದ್ಧರಾಗತಕ್ಕದ್ದು. ಮಾಹಿತಿ, ಪ್ರಚಾರ, ಜಾಹೀರಾತು, ಡಂಗುರ – ಪೂರ್ವನಿಶ್ಚಿತ ಯೋಜನೆಯಂತೆ ಸಾಗಬೇಕು. ಮಂಟಪಕ್ಕೆ ಸಾವಿರ ಖರ್ಚಾದರೂ ಅಡ್ಡಿಯಿಲ್ಲ (ಉತ್ಸವಕಾಲದಲ್ಲಿ ಊರಿನ ಮಂಟಪಕಾರರೆಲ್ಲ ದುಂಬಿಗಳಂತೆ ಈತನ ಸುತ್ತು ತಿರುಗುತ್ತಿರುವುದುಂಟು) ಬರಬರುತ್ತ ಮುಕ್ತ ಹೃದಯ, ಮುಕ್ತ ಹಸ್ತದ ಈತನ ಆಮಂತ್ರಣಕ್ಕೆ ಓಗೊಡದ ಸಾಹಿತಿಗಳೇ ಇಲ್ಲ ಎಂದಾಯಿತು. ಇಂಥ ಉತ್ಸವಗಳಲ್ಲಿ ಹೆಸರಿಗೆ ಕರ್ನಾಟಕ ಸಂಘವನ್ನು ಸೇರಿಸಿ ಹೆಚ್ಚಿನ ಆರ್ಥಿಕ ಭಾರವನ್ನು ಸಿಂಡಿಕೇಟ್ ಬ್ಯಾಂಕೀಗೂ, ಮಣಿಪಾಲದ ಎಕಾಡೆಮಿಗೂ ಗಂಟುಹಾಕಿ, ಸವಲತ್ತುಗಳಿಗಾಗಿ ಉಡುಪಿಯ ಶೈಕ್ಷಣಿಕ ಸಂಸ್ಥೆಗಳನ್ನು ನಂಬಿ, ಚಾಕರಿಗೆ ವಿದ್ಯಾರ್ಥಿ ಸ್ವಯಂಸೇವಕರ ಬೆಂಬಲ ಪಡೆದು ಎಂಥ ಅದ್ಭುತವಾದ ಉತ್ಸವನ್ನೂ ವಿಜಯನಾಥ ಮಾಡಿಸಿಯಾನು ಎಂಬ ಧೈರ್ಯ ನಮ್ಮಲ್ಲಿ ಮೂಡಿತು. ಊರಿನ ಜನ ಉತ್ಸವಕ್ಕೆ ಒಂದು ತಿಂಗಳ ಮೊದಲು ನಾವು ಹೊಡೆಯುವ ಡಂಗುರ ಕೇಳಿಸದಿದ್ದರೆ – ಕೇಳಿಸದಿರುವಂಥ ಯಾವ ಸಾಮಾನ್ಯ ಚಟುವಟಿಕೆಗೂ ಗೌರವ ತೋರಿಸದಂತಾಯಿತು. (ಇಂಥ ಒಂದು ಅವಸರ್ಪಿಣಿಯ ಕಾಲದಲ್ಲಿ ಕರ್ನಾಟಕ ಸಂಘಕ್ಕೆ ಜೀವದಾನ ಮಾಡಿ ಎರಡು ದಿನದ ನಾಡಹಬ್ಬದ ಉತ್ಸವ ಮಾಡಿದೆವು. ಶ್ರೀ ಪರಮೇಶ್ವರ ಭಟ್ಟರಂಥ ವಾಗ್ಮಿಗಳನ್ನು ಕರೆಸಿದರೂ ಸೇರಿದ ಜನ 12 ಮಾತ್ರ – ಅಷ್ಟನ್ನಾದರೂ ತಯಾರಿಸ ಬೇಕಾದರೆ ನಾನೂ ಸ್ನೇಹಿತ ಇನಾಂದಾರರೂ ನಮ್ಮ ಮನೆಮಂದಿಯನ್ನೆಲ್ಲ ಕರೆದುಕೊಂಡು ಬರಬೇಕಾಯಿತು;) ನಗಾರಿ ಬಡಿಯಬೇಕು; ಗರ್ನಾಲ್ ಹೊಡೆಯಬೇಕು, ಅಲ್ಲಲ್ಲಿ ಭಿತ್ತಿಪತ್ರ ಕಂಗೊಳಿಸಬೇಕು, ದೈನಿಕಗಳಲ್ಲಿ ಉದ್ದಕ್ಕೆ ಕಾರ್ಯಕ್ರಮ ಅಚ್ಚಿಸಬೇಕು. ಅಂದರೆ ಮಾತ್ರ ಉಡುಪಿಯಲ್ಲೇನೋ ಉತ್ಸವವುಂಟು. ಹೋಗೋಣ ಎಂದು ನಾಗರಿಕರು ತೀರ್ಮಾನ ಮಾಡುವ ದಿನ ಬಂತು. ವ್ಯಕ್ತಿಗಳ ಶಕ್ತಿ ಬೆಳೆದಂತೆ ಸಂಘದ ಬಲ ಕುಗ್ಗಿತು. ಸಂಘದ

ಹೆಸರು ಪಟ್ಟಿ ಇಲ್ಲದೆಯೂ ಸುರಳೀತವಾಗಿ ಕಾರ್ಯಕ್ರಮಗಳು ಗಡದ್ದಾಗಿ ನಡೆಯುವ ಪರಿಪಾಠ ಮಾಡಿದವರು ನಾವೇ. ಇಂಥ ಮಹನೀಯರ ಭಾಷಣ – ಇಂಥಲ್ಲಿ – ಬನ್ನಿ ಎಂದು ಉಪ್ಪುಖಾರ ಇಲ್ಲದೆ ಹೇಳಿದರೆ ಈಗ ಉಡುಪಿಯ ನಾಗರಿಕರು ನಾಳೆಯ ಪೇಪರಿನಲ್ಲಿ ನೋಡುವ ಎನ್ನುತ್ತಾರೆ.

ಸಂಘದಲ್ಲಿ ನಾನು ಪಡೆದ ಹತ್ತು ವರ್ಷ ಗಳ ಏರುತಗ್ಗಿನ ಅನುಭವವನ್ನು ಒರೆಗೆ ಹಚ್ಚುವ ಒಂದು ಉತ್ತಮ ಸನ್ನಿವೇಶ 1960ನೆಯ ದಶಂಬರದಲ್ಲಿ ಒದಗಿತು. ಅದೇ 42ನೆಯ ಕನ್ನಡ ಸಾಹಿತ್ಯ ಸಮ್ಮೇಳನ. ಸಮ್ಮೇಳನಕ್ಕೆ ಎಂಟು ತಿಂಗಳು ಮೊದಲು ಬೆಂಗಳೂರಲ್ಲಿ ಭೆಟ್ಟಿ ಮಾಡಿದ್ದಲ್ಲದೆ, ಪರಿಷತ್ತಿಗೂ ಕರೆದೊಯ್ದು ಹಾರಹಾಕಿ ಹೊಗಳಿದ್ದರ ಫಲಿತಾಂಶವೇ ಮಣಿಪಾಲದಲ್ಲಿ ನಡೆದ ಸಾಹಿತ್ಯ ಸಮ್ಮೇಳನ – ಅನೇಕ ವರ್ಷಗಳ ಬಳಿಕ ನಡೆದ ನಿಜವಾದ ಸಾಹಿತಿಗಳ ಸಮ್ಮೇಳನ. ಅದುವರೆಗಿನ ಯಾವ ಸಮ್ಮೇಳನಕ್ಕೂ ಸೇರದಷ್ಟು ಪ್ರತಿನಿಧಿಗಳು ರೊಕ್ಕ ತೆತ್ತು ಬಂದವರು – ಮಣಿಪಾಲದಲ್ಲಿ ಸೇರಿದರು. ನನ್ನ ನೆನಪಿನಲ್ಲಿ 711 ಮಂದಿ ಪ್ರತಿನಿಧಿ ಶುಲ್ಕ ತೆತ್ತರು. ಅವರಲ್ಲಿ ಹಿರಿ – ಕಿರಿ – ಮರಿ ಸಾಹಿತಿಗಳ ಜತೆಗೆ ಸಾಹಿತ್ಯಭಕ್ತರೂ ಅಭಿಮಾನಿಗಳೂ ಕೂಡಿಕೊಂಡಿದ್ದರು. ಇವರಲ್ಲದೆ ನಿತ್ಯದ ಸಭೆಗಳಿಗೆ ಮೂರು ನಾಲ್ಕು ಸಾವಿರ ಜನ ಮುದ್ದಣ ಮಂಟಪದಲ್ಲಿ ಹಾಜರಾಗುತ್ತಿದ್ದರು. ಊಟ – ವಸತಿಗೆ ಮೆಡಿಕಲ್ ಕಾಲೇಜಿನ ಮೂರು ಬೃಹತ್ ಹಾಸ್ಟೆಲುಗಳಲ್ಲಿ ಏರ್ಪಾಟು ನಡೆಯಿತು. ದಿನವೂ ಐದಾರು ಸಹಸ್ರ ಜನಕ್ಕೆ ಸಂತರ್ಪಣೆ. ದುಡ್ಡು ಕೊಟ್ಟವರೂ – ಅಭ್ಯಾಗತರೂ – ಉಂಡರು, ಕೊಡದ ಅತಿಥಿಗಳೂ ಉಂಡರು – ಉಡುಪಿಯ – ಮೃಷ್ಟಾನ್ನದ ಸವಿಯನ್ನೆಲ್ಲರೂ ಪ್ರತ್ಯಕ್ಷ ಅನುಭವಿಸಿದರು. ಊಟದ ಮನೆಯು – ಅರ್ಥಾತ್ ಸಮ್ಮೇಳನದ ಹೃದಯಸ್ಥಾನದ – ಅಚ್ಚುಕಟ್ಟನ್ನು ಕಾಪಾಡಲು ಅಹರ್ನಿಶಿ ದುಡಿದ ವಿದ್ವಾನ್ ಕಡಿಯಾಳಿ ರಾಮಚಂದ್ರ ಉಪಾಧ್ಯಾಯರು ನನ್ನ ಕನ್ನಡದ ಗುರುಗಳು; ಅವರಿಗೆ ಸಹಚಾರಿಯಾಗಿ ಎಲ್ಲಾ ಸರಕು ಸರಂಜಾಮುಗಳಿಗೆ ಸರ್ಪಕಾವಲು ಹಾಕಿ ನಿಂತ ನನ್ನ ಬಾಲ್ಯಸ್ನೇಹಿತ ಪ್ರಭಾಕರ ಪೈಗಳು. ಉಡುಪಿಯ ತಿಂಡಿತೀರ್ಥಗಳ ಸವಿ ಹೆಚ್ಚೋ, ಇವರ ಉಪಚಾರದ ಮಾತಿನ ಸವಿ ಹೆಚ್ಚೋ ಎಂದು ನಿರ್ಣಯಿಸುವುದು ಸಾಹಿತಿಗಳಿಗೆ ಕಷ್ಟವಾಯಿತು. ಯಾರೇನೆಂದರೂ ತಮ್ಮ ನಿಜವಾದ ಪ್ರತಿಕ್ರಿಯೆ ತೋರದೆ ಹಗಲು ರಾತ್ರಿ ಭೋಜನ ಶಾಲೆಯ ವ್ಯವಸ್ಥೆ ನೋಡಿಕೊಂಡ ಇವರಿಬ್ಬರ ಸಾಹಸ ಸಮ್ಮೇಳನದ ಯಶಸ್ಸಿನ ಬಹುಭಾಗಕ್ಕೆ ಕಾರಣವಾಯಿತು.

ಊಟದ ಮನೆಯ ಮುಂಭಾಗದಲ್ಲಿ ಎತ್ತರದ ಪ್ರತಿನಿಧಿ ನಿವಾಸದ ಮುಖ್ಯ ಸ್ವಾಗತ ಕಚೇರಿಯ ಸಂಪೂರ್ಣ ಆಡಳಿತ, ಹೋಗಿ ನನ್ನ ನಾಲ್ಕು ಜನ ಕಾಲೇಜಿನ ಅಧ್ಯಾಪಕರಿಗೆವಹಿಸಿಕೊಟ್ಟೆ. ಇವರ ನಾಯಕರಾದ ಪ್ರೊ. ಬಿ.ವಿ. ಆಚಾರ್ಯರು ಸ್ವತಃ ಸಾಹಿತಿಗಳಲ್ಲವಾದರೂ ಸಾಹಿತ್ಯದ ಮತ್ತು ಸಾಹಿತಿಗಳ ಅಂತರಂಗವನ್ನು ಬಲ್ಲವರಾಗಿದ್ದರು. ಹುಟ್ಟು ಸಾಹಿತಿಗಳ ಮನಸ್ತನಕ್ಕೆ ಸೇರಿದ ಆಚಾರ್ಯರ ಮಾತಾಮಹಸ್ಥಾನದಲ್ಲಿ ನಿ. ರಾಜಗೋಪಾಲರಾಯರಿದ್ದರು; ಶ್ವಶುರ ಸ್ಥಾನದಲ್ಲಿ ಕಾದಂಬರಿಕಾರ ಬೆಳ್ಳೆಯವರಿದ್ದರು. ಸ್ವತಃ ಬರೆಯ ಬಲ್ಲರಾದರೂ ಅದಕ್ಕೆ ಸ್ವನಿರ್ಣಯದ ಮುಟ್ಟುಗೋಲು ಹಾಕಿ ಮಾತಿನಲ್ಲಿಯೇ ಕಥೆ, ಕಾದಂಬರಿ ಹೆಣೆದು ಎಲ್ಲರನ್ನೂ ರಂಜಿಸುವ, ಇಪ್ಪತ್ತನಾಲ್ಕು ತಾಸು ನಗುಮೊಗದಿಂದಲೇ ಸೊಗಯಿಸುವ ಆಚಾರ್ಯರ ಬೀಡಚರ್ಚಿತ ವದನಾರವಿಂದದ ಪ್ರಸನ್ನತೆಗೆ ಮರುಳಾಗದವರು ಯಾರು? ಹಾಸ್ಟೆಲಿನ ಹತ್ತೆಂಟು ಜನ ಸಿಬ್ಬಂದಿಯ ಕೊರಗರು, ಹತ್ತು ಜನ ವಿದ್ಯಾರ್ಥಿಗಳು ಮತ್ತು ಹತ್ತು ಜನ ಸ್ನೇಹಿತರನ್ನು ಬಿಟ್ಟರೆ ಬೇರೆ ಸ್ವಯಂಸೇವಕ ದಳವೇ ನಮ್ಮಲ್ಲಿ ಇರಲಿಲ್ಲ.

ಪರಿಷತ್ತಿನ ಅಧ್ಯಕ್ಷರಿಗೊಂದು ಪ್ರತ್ಯೇಕ (ಮಠದ ಸ್ವಾಮಿಗಳನ್ನು ಇರಿಸಿದಂತೆ) ಬಿಡಾರ; ಸಮ್ಮೇಳನದ ಅಧ್ಯಕ್ಷರಿಗೆ ಏರ್‌ಕಂಡೀಷನ್ಡ್ ಕೊಠಡಿಯುಳ್ಳ ಬಂಗಲೆ. ಬೆಂಗಳೂರಿಂದ ಬರಲು ಬಾಡಿಗೆ ವ್ಯಾನು; ಅತಿಥಿ ಅಭ್ಯಾಗತರಿಗೆ ಪ್ರಥಮ ದರ್ಜೆ ಹಾಸ್ಟೆಲು ಕೊಠಡಿಗಳ ಸೌಕರ್ಯ; ಕಿಕ್ಕಿರಿದ ಮುದ್ದಣ ಮಂಟಪದಲ್ಲಿ ಅವ್ಯಾಹತವಾಗಿ ಮುಂಜಾನೆ 9ರಿಂದ ಸಂಜೆ 6ರ ವರೆಗೆ ಉಪನ್ಯಾಸ ಕಾರ್ಯಕ್ರಮ. ವಿಚಾರ ಗೋಷ್ಠಿ, ಕಾವ್ಯಗೋಷ್ಠಿ, ಪರಿಷತ್ತಿನ ಬಹಿರಂಗ, ಅಂತರಂಗ ಅಧಿವೇಶನಗಳು; ಆಕಾಶವಾಣಿಯವರಿಗೂ, ಪತ್ರಿಕಾ ಪ್ರತಿನಿಧಿಗಳಿಗೂ ವಿಶಿಷ್ಟ ವ್ಯವಸ್ಥೆ; ಕಾರ್ಯಕ್ರಮದ ನಿರ್ವಾಹದಲ್ಲಿ ಕ್ಲಪ್ತತೆ; ಭಾಷಣಕಾರರ ಆಯ್ಕೆಯಲ್ಲಿನ ವಿವೇಚನೆ; ಸಮ್ಮೇಳನಾಧ್ಯಕ್ಷರ ಅಭೂತಪೂರ್ವ ಪುರಪ್ರವೇಶದ ಮೆರವಣಿಗೆ; ಉಡುಪಿಯ ಪರ್ಯಾಯೋತ್ಸವವನ್ನು ಮೀರಿಸಿದ ಈ ಸಮ್ಮೇಳನಕ್ಕೆ ಮೂರು ತಿಂಗಳ ಮೊದಲೂ, ಅನಂತರವೂ ದೊರೆತ ಪತ್ರಿಕಾ ಪ್ರಚಾರ, ವಾದ, ವಿವಾದ, ಅಪವಾದ– ಹೀಗೆ ಈ 42ನೇ ಸಾಹಿತ್ಯ ಸಮ್ಮೇಳನ ಸಮ್ಮೇಳನಗಳ ತುಲನಾತ್ಮಕ ವಿಮರ್ಶೆ ಮಾಡಬಲ್ಲ ನಿರೀಕ್ಷಕರ ಅಭಿಪ್ರಾಯದಂತೆ 'ಇನ್ನಿಲ್ಲ ಮುನ್ನಿಲ್ಲ' ಎಂಬಂತಾಯಿತು. 'ಊಟ ಮದ್ರಾಸಿನಲ್ಲಿ ಚೆನ್ನಾಗಿತ್ತು. ಆದರೆ ಕಾರ್ಯಕ್ರಮ ಇಷ್ಟು, ಇಂಥಾ ಮಟ್ಟದ್ದು ಅಲ್ಲಿ ಇರಲಿಲ್ಲ' ಎಂದು ಒಬ್ಬರು ನುಡಿದರೆ 'ಇದು ದ.ಕ. ಜಿಲ್ಲೆಗೆ ಮಾತ್ರ ಸಾಧ್ಯ. ಮಣಿಪಾಲದ ಮಾಧವ ಪೈ ಅವರಿಗೆ ಮಾತ್ರ ಸಾಧ್ಯ' ಎಂದು ಇತರರು ಅನ್ನುತ್ತಿದ್ದರು.

ಆದರೆ ಉಡುಪಿಯ ಮಹತ್ವಕ್ಕೆ ಹೇಗೆ ಶ್ರೀಕೃಷ್ಣ ಕಾರಣನೋ ಹಾಗೆ ಮಣಿಪಾಲ ಸಮ್ಮೇಳನದ

ಯಶಸ್ಸಿಗೆ ಸಮ್ಮೇಳನಾಧ್ಯಕ್ಷ ಅ. ನ. ಕೃಷ್ಣರಾಯರು ಮೂಲಕಾರಣ ಎಂದು ನಾನು ತಿಳಿದಿದ್ದೇನೆ. 'ನಿಮ್ಮ ಉಡುಪಿಯ ಸಮ್ಮೇಳನಕ್ಕೆ ಕೃಷ್ಣರಾಯರಿಗೊಂದು ಅವಕಾಶ ಮಾಡಿಕೊಡಿ', ಎಂದು ಮೊತ್ತ ಮೊದಲು ಅಂದವರು ಶಿವರಾಮ ಕಾರಂತರು. 'ನೋಡಿ, ಅವರ ಹೆಸರೆತ್ತಿದರೆ ಬೇರೆ ಕಡೆ ವಿರೋಧ ಮಾಡುವವರೇ ಹೆಚ್ಚು. ನಿಮ್ಮಲ್ಲಿ ಮಾತ್ರ ಅವರು ಅಧ್ಯಕ್ಷರಾಗುವುದು ಸಾಧ್ಯ' ಎಂದು ಕಾರಂತರು ತಿಳಿಸಿದ ಮೇಲೆ ಎಂದೋ ಆಗಬೇಕಾಗಿದ್ದ ಒಂದು ನ್ಯಾಯ ನಮ್ಮಲ್ಲಿ ನಡೆಯಲಿ ಎಂದು ನಾನೂ ನನ್ನ ಕೆಲವು ಸಾಹಿತಿ ಮಿತ್ರರೂ ಒಮ್ಮತದಿಂದ ನಿರ್ಣಯಿಸಿ ಸ್ಥಾನೀಯ ಕಾರ್ಯಸಮಿತಿಗೆ ಸೂಚನೆ ಮಾಡಿದೆವು. ಸಮ್ಮೇಳನದ ಅಧ್ವರ್ಯು ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಪೈ ಅವರೂ ಇದಕ್ಕೆ ಹೃದಯದಿಂದ ಒಪ್ಪಿಗೆ ಕೊಟ್ಟರು. ಆದರೆ ಈ ತನ್ಮಧ್ಯೆ ಪತ್ರಿಕೆಗಳಲ್ಲಿ ಕೋಲಾಹಲ ತೊಡಗಿತು; ಅ. ನ. ಕೃ. ಆಯ್ಕೆಯನ್ನು ಪರಿಷತ್ತಿನ ಅಧ್ಯಕ್ಷರು ವಿರೋಧಿಸುತ್ತಿದ್ದಾರೆ. ಸ್ವಾಗತ ಸಮಿತಿಯವರೂ ಶಾಸ್ತ್ರಿಗಳ ಪಕ್ಷದಲ್ಲಿ ನಿಲ್ಲುತ್ತಾರೆ ಎಂಬರ್ಥದ ವದಂತಿ ಹಬ್ಬಿತು. ಅದನ್ನು ಸಮರ್ಥಿಸುವಂತೆ ಯಾರಿಂದಲೋ ಡಾ. ಪೈಯರಿಗೆ ಒಂದು 'ಪತ್ರವೂ ಬಂದಿತು– ಎಸ್. ವಿ. ಕೃಷ್ಣಮೂರ್ತಿ ರಾಯರನ್ನು ನೀವು ಅಧ್ಯಕ್ಷರಾಗಿ ಮಾಡಿದರೆ ಯಾವ ಚರ್ಚೆಯೂ ಇರುವುದಿಲ್ಲ ಎಂದು. ಡಾ. ಪೈಯವರಿಗೆ ಭಾರತೀಯ ರಾಜ್ಯಸಭೆಯ ಉಪಾಧ್ಯಕ್ಷರಂಥ ಅಧಿಕಾರಸ್ಥ ಜನದ ಕಡೆಗೇ ಒಲವು ಹೆಚ್ಚು. ಕಾರ್ಯಸಮಿತಿಯ ಸಭೆಯಲ್ಲಿ ಅವರು ಎಸ್. ವಿ. ಕೃ. ಅವರ ಪರವಾಗಿ ಮಾತನಾಡುವುದು ಖಂಡಿತ. ಹಾಗಾಗಿ ಒಂದು ಜೇಬಿನಲ್ಲಿ ಕಾರ್ಯದರ್ಶಿ ಸ್ಥಾನದ ರಾಜೀನಾಮೆ ಪತ್ರವನ್ನು ಬರೆದಿಟ್ಟುಕೊಂಡಿದ್ದೆ. ಒಂದು ಪಕ್ಷ ಎಸ್. ವಿ. ಕೃ.ಅಧ್ಯಕ್ಷರಾಗುವುದಕ್ಕೆ ಸಮಿತಿಯ ಬಹುಮತ ಸಮ್ಮತಿಸಿದರೆ ಸಾಹಿತ್ಯ ಪಕ್ಷಪಾತಿಯಾದ ನನ್ನಂಥವನಿಂದ ಸಾರಥ್ಯ ಸಾಧ್ಯವಿಲ್ಲ ಎಂಬುದನ್ನು ಸಾರಬೇಕೆಂದು ನನ್ನ ಆಕಾಂಕ್ಷೆ. ಆದರೆ ಡಾ. ಪೈ ಅವರ ಔದಾರ್ಯ, ಅ.ನ.ಕೃ. ಅವರ ಅದೃಷ್ಟ – ನಮ್ಮ ಸ್ನೇಹಿತರೆಲ್ಲ ಅ.ನ.ಕೃ.ಗೂ ಎಸ್. ವಿ. ಕೃ. ಗೂ ಇರತಕ್ಕ ವ್ಯತ್ಯಾಸವನ್ನು ತಿಳಿಯಪಡಿಸಿದ ಮೇಲೆ – ಡಾ. ಪೈ ಅವರು ತಮಗೆ ಬಂದ ಪತ್ರ ಓದಿ ಹೇಳಿದರೇ ವಿನಾ ಛಲ ಹಿಡಿಯಲಿಲ್ಲ. ನನ್ನ ಜೇಬಿನ ಪತ್ರ ನನ್ನ ಕೈಯಲ್ಲೇ ಉಳಿಯಿತು. – ಅ.ನ.ಕೃ. ಅವರ ಹೆಸರು ಬೆಂಗಳೂರಿಗೂ ಹೋಯಿತು. ನಮ್ಮ ಇಚ್ಛೆಗೆ ವಿರೋಧವಾಗಿ ಪರಿಷತ್ತಿನ ಅಧ್ಯಕ್ಷರು ನಡೆದುಕೊಳ್ಳಲಿಲ್ಲ. ಆದರೆ ಮಾತ್ರ ಈ ಸನ್ನಿವೇಶದಿಂದಾಗಿ ನನ್ನ ಹೊಣೆ ಅಧಿಕವಾಯಿತು. ಕಾರ್ಯಕರ್ತರ ಕಷ್ಟಸುಖದ ಪರಿವೆಯಿಲ್ಲದೆ ಕೆಲವರು ಕುಚೋದ್ಯಗಾರರು ಪತ್ರಿಕೆಗಳಲ್ಲಿ ಏಕಪ್ರಕಾರವಾಗಿ ಈ ವಿಷಯವನ್ನು ಅದರ ತೀರ್ಮಾನವಾದ ಬಳಿಕವೂ ಮಥಿಸಿ ವಾತಾವರಣದಲ್ಲೆಲ್ಲ ನಂಜು ಹಬ್ಬಿಸಿದರು. ಸಮ್ಮೇಳನಪೂರ್ವದ ಮೂರು ತಿಂಗಳ ಈ ಚರ್ವಿತ ಚರ್ಚೆಯಿಂದಾಗಿ ನಮ್ಮ ಸಮ್ಮೇಳನಕ್ಕೆ ಪುಕ್ಕಟೆ ಜಾಹೀರಾತು ಒದಗಿಸಿದ ಹಾಗಾಯಿತು. ಪ್ರತಿನಿಧಿಗಳ ಸಂಖ್ಯೆ ಏರುತ್ತಲೇ ಹೋಗಿ 711ಕ್ಕೆ ಮುಟ್ಟಿತು. ನನಗೆ ಮಾತ್ರ ಏಳೂ ಹನ್ನೊಂದೂ ಆಯಿತು.

ಅ.ನ.ಕೃ. ಅವರನ್ನು ನಾನು ಮೂರು ಸಾರಿ ಭೆಟ್ಟಿಯಾಗಿ ಅವರಿಗೂ ಶಾಸ್ತ್ರಿಗಳಿಗೂ ಎಂಥ ಭಿನ್ನಾಭಿಪ್ರಾಯಗಳಿದ್ದರೂ, ಮಣಿಪಾಲ ಸಮ್ಮೇಳನ ಶಾಂತವಾಗಿ ನಡೆಯಬೇಕೆಂಬುದು ನಮ್ಮ ಅಪೇಕ್ಷೆ. ಡಾ. ಪೈ ಅವರ ಅಭಿಮತ ಎಂದು ಬಿನ್ನವಿಸಿದೆ. ಅಂಥದ್ದೇನೂ ಆಗದೆಂದು ಅವರು ಭರವಸೆ ಕೊಟ್ಟ ಮೇಲೆ, ಸಮ್ಮೇಳನದ ದಿನದ ವರೆಗೂ ನಾನು ನಿಶ್ಚಿಂತನಾಗಿಯೇ ಇದ್ದೆ. ಸಮ್ಮೇಳನಕ್ಕೆ ಮೂರು ದಿನ ಮೊದಲು ಅ. ನ. ಕೃ. – ಸಪರಿವಾರ – ಪತ್ನಿ, ಮಗ, ಮಗಳು, ಅಳಿಯ, ಸೊಸೆಯರನ್ನು ಕೂಡಿಕೊಂಡು ಶಿವಮೊಗ್ಗ – ತೀರ್ಥಹಳ್ಳಿ ದಾರಿಯಾಗಿ ಉಡುಪಿಗೆ ಬಿಜಯ ಮಾಡಿಸಿದರು. ನಾನು ಬೇಡ ಎಂದರೂ ಯಾವುದೋ ಹಳೇ ವ್ಯಾನನ್ನು ಸಂಪಾದಿಸಿ ಹೊರಟಿದ್ದರು. ಅದು ಸರಿಯಾದ ವೇಳೆಗೆ ಕೈ ಕೊಟ್ಟಿತ್ತು. ಸಮ್ಮೇಳನಕ್ಕೆ ಮುನ್ನ ಸಂಜೆ ನಾವು ಇರಿಸಿಕೊಂಡ ಭಾರೀ ಮೆರವಣಿಗೆಯ ವೇಷಗಳೆಲ್ಲ ಸಿದ್ಧವಾಗಿ ಕಾಲ್ತುರಿಕೆಯಿಂದ ನಿಂತಿದ್ದಾವೆ – ಅ. ನ. ಕೃ. ಸುಳಿವಿಲ್ಲ; ಮುಂಜಾನೆ ಬರುತ್ತೇನೆ ಅಂದವರು ಸಂಜೆ 5 ಆದರೂ ಸುಳಿವಿಲ್ಲ. ಹಠಾತ್ತನೆ ಸುದ್ದಿ ಸಿಕ್ಕಿತು – ಧಾರವಾಡದಿಂದ ಕಾರಿನಲ್ಲಿ ಬರುತ್ತಿದ್ದ ಬೇಂದ್ರೆಯವರ ಮೂಲಕ. ಉಡುಪಿಯಿಂದ ಎಂಟು ಮೈಲಿ ದೂರದಲ್ಲಿ ವ್ಯಾನಿನ ಎಕ್ಸಲ್ ಕೆಟ್ಟು ಅ.ನ.ಕೃ. ಪೇಚಿಗೆ ಸಿಕ್ಕಿದ್ದಾರೆ ಎಂದು. ಕೂಡಲೇ ನಮ್ಮ ಕಾರನ್ನು ಕಳಿಸಿಕೊಟ್ಟೆ. ಅಂತೂ ಸಾಯಂ 6ಕ್ಕೆ ಮೆರವಣಿಗೆ ಹೊರಡಿಸಿದೆವು. ಒಂದೂವರೆ ತಾಸಿಗೆ ಒಂದೂವರೆ ಮೈಲಿಗಳಷ್ಟು ಪುರಭ್ರಮಣ ಮಾಡಿದ ಮೆರವಣಿಗೆ ನಮ್ಮ ಕಾಲೇಜಿನಲ್ಲಿ ವಿಸರ್ಜಿತವಾಯಿತು. ಗೋಕುಲಾಷ್ಟಮಿಯ ಹುಲಿ, ಬಯಲಾಟದ ವೇಷಗಳನ್ನು ಮುಂದಿರಿಸಿ ಅ.ನ.ಕೃ. ಶಾಸ್ತ್ರಿ, ಡಾ. ಪೈ ಅವರನ್ನು ಅಲಂಕೃತ ಮೋಟಾರಿನಲ್ಲಿ ಕೂಡಿಸಿ ಊರೆಲ್ಲಾ ಸುತ್ತಿಸಿದ್ದಾಯಿತು. 'ಸಿರಿಗನ್ನಡಂ ಗೆಲ್ಗೆ' ಉಡುಪಿಯ ಸಾಲ್ಮರಗಳ ಗೆಲ್ಲುಗಳಿಗೂ ತಗಲುವಂತೆ ಕೂಗೆದ್ದಿತು. ಅ.ನ.ಕೃ. ಜೈ ಜೈಕಾರ ಉಡುಪಿಯ ಜನಕ್ಕೆ ಗಾಂಧಿ, ನೆಹ್ರೂ ಅವರ ಸ್ವಾಗತದ ಸಂಭ್ರಮವನ್ನು ನೆನಪಿಗೆ ತಂದಿತು. ಮಣಿಪಾಲದ ಅತಿಥಿಗೃಹ ಮತ್ತು ಬಯಲಿನ ಮುದ್ದಣ ಮಂಟಪದಲ್ಲಿ ಆ ಸಂಜೆ ಜನರ ಗದ್ದಲ ಹೇಳತೀರದು. ರೂಮುಗಳ ವಿತರಣೆ, ಮರುದಿನದ ಧ್ವಜಾರೋಹಣದಿಂದ ಹಿಡಿದು ಮಹಾಧಿವೇಶನದ ವರೆಗಿನ ಕಾರ್ಯಕ್ರಮ ಸಂಯೋಜನೆಯಲ್ಲಿ ಬದ್ಧಿರುತ್ತ ಡಾ. ಪೈ

ಅವರ ಮನೆಯಲ್ಲಿ ಇನ್ನೊಂದೇ ಪ್ರಕರಣ ನಡೆದಿತ್ತು. ಸಮ್ಮೇಳನದ ಅಧ್ಯಕ್ಷರ ಭಾಷಣ ತರಿಸಿ ನೋಡಿದರೆ ಅದರಲ್ಲಿ ಮೂರು ಪುಟ ಪರಿಷತ್ತಿನ ಅಧ್ಯಕ್ಷರ ಧೋರಣೆಯ ಕಟು ಸತ್ಯವಾದ ಟೀಕೆ – ಅ.ನ.ಕೃ. ಅವರ ನಿಶ್ಚಿತ ಶೈಲಿಯಲ್ಲಿ ವಜ್ರಕ್ಕೆ ಕುಂದಣದ ಕಟ್ಟು ಹಾಕಿದಂತೆ ನಿಶ್ಚಲವಾಗಿ, ನಿರ್ಭಯವಾಗಿ ಮೂಡಿ ಬಂದಿತ್ತು. ಡಾ. ಪೈ ಅವರು ಸಾಹಿತ್ಯ ಪ್ರಪಂಚದ ಟೀಕೆಗೂ, ಇತರ ಬಗೆಯ ಟೀಕೆಗಳಿಗೂ ತಾರತಮ್ಯವನ್ನು ಅರಿಯಲಾರದ ಮನೋಭೂಮಿಕೆಯುಳ್ಳವರಾಗಿ ಇದರಿಂದ ಹೌಹಾರಿದರು. ಉದ್ಘಾಟಕ ಎಸ್.ವಿ.ಕೃ. ರಾಯರ ಹತ್ತಿರ ಸಮ್ಮೇಳನವನ್ನು ಇಲ್ಲಿಗೆ ಬರ್ಖಾಸ್ತು ಮಾಡಲೇ ಎಂದು ಕೇಳಿದರಂತೆ. ಸಾಹಿತ್ಯಜ್ಞರಾದ – ಅಥವಾ ಸಾಹಿತಿಗಳ ಹರ್ಣೇಬರಹವನ್ನು ಸ್ವಲ್ಪವಾದರೂ ಅರಿತಿದ್ದ ಎಸ್.ವಿ.ಕೃ. – ಪೈ ಅವರು ಎತ್ತಿದ ಕೈಯನ್ನು ತಡೆದು ನಿಲ್ಲಿಸಿದರಂತೆ, ಪರಿಷತ್ತು – ಸಮ್ಮೇಳನ ಎಂದರೆ ದೂರ ಸಿಡಿದು ನಿಂತಿದ್ದ ಕಾರಂತರು ನಮ್ಮ ಸಲುವಾಗಿ ಅ.ನ.ಕೃ. ಅವರ ಮೇಲಿನ ಪ್ರೀತಿಯಿಂದ ಈ ಸಮ್ಮೇಳನಕ್ಕೆ ಬಂದಿದ್ದರು. ಅನೇಕ ಸಾಹಿತಿಗಳು ಅ.ನ.ಕೃ ಭೀತಿಯಿಂದಲೂ ಬಂದಿದ್ದರು. ಏನಿಲ್ಲೆಂದರೂ ಮಾಸ್ತಿ, ಕಾರಂತ, ಬೇಂದ್ರೆ, ಪಡುಕೋಣೆ, ನರಸಿಂಹಸ್ವಾಮಿ. ಹಿರೇಮಠ, ಶ್ರೀಧರ, ಎಕ್ಕುಂಡಿ ಆದಿಯಾಗಿ ಹಿರಿಯ ಕಿರಿಯ ನೂರಾರು ಸಾಹಿತಿಗಳು ಸಮ್ಮೇಳನಕ್ಕೆ ಆಗಮಿಸಿ ಮೂರು ದಿನ ಇದ್ದು ಸಂತೋಷ ಕೊಟ್ಟರು, ಪಟ್ಟರು. ಸ್ವಾಗತ ಸಮಿತಿಯನ್ನು ಬಹುವಾಗಿ ಟೀಕಿಸುತ್ತಿದ್ದ ಬೀಚಿ, ಕಟ್ಟೀಮನಿಯವರೂ ಕೂಡ ಅ.ನ.ಕೃ. ಅಭಿಮಾನದಿಂದ ಬಂದು ನೆರೆದಿದ್ದರು. ಅ.ನ.ಕೃ. ನಮ್ಮ ಸಮ್ಮೇಳನದ ಅಧಿದೈವತ, ಆಕರ್ಷಣೆ, ಆ ಮೂರು ದಿನ ಅ.ನ.ಕೃ. ದಂಪತಿ ಸಮೇತ ವೇದಿಕೆಯ ಮೇಲೆ ಶೋಭಿಸಿದರು. ಜನ ನೋಡಿ ನೋಡಿ ತಣಿಯದು – ಈ ಸಾಹಿತ್ಯ ಸಾರ್ವಭೌಮನನ್ನು ಶಿಸ್ತಿನ ಸೈನಿಕನಂತೆ ಕಾರ್ಯದರ್ಶಿಯಾದ ನಾನು ಹೇಳಿದಷ್ಟು ಹೊತ್ತಿಗೆ ಅ.ನ.ಕೃ. ಎಲ್ಲೆಂದರಲ್ಲಿ ಹಾಜರು. ಮುಂಜಾನೆಯಿಂದ ರಾತ್ರಿ ಹನ್ನೆರಡರ ತನಕ ಅವರ ಬೆನ್ನು ಹಿಡಿದು, ಮಾತನಾಡಿಸಿ, ಸಮಯದ ಕ್ಲಪ್ತತೆ ಕಾಯಲು ನಾನು ಸಾಹಿತಿಗಳ ನಕ್ಷತ್ರಕನೊಬ್ಬನನ್ನು – ನನ್ನ ಸ್ನೇಹಿತ ಬೈಕಾಡಿಯನ್ನು – ನೇಮಿಸಿ ಬಿಟ್ಟಿದ್ದೆ. ಅಂತೂ ಅ.ನ.ಕೃ. ಕನ್ನಡಿಗರಿಗೆ ಎಷ್ಟು ಪ್ರಿಯರು, ಕನ್ನಡಿಗರು ಅವರಿಗೆಷ್ಟು ಪ್ರಿಯರು ಎಂಬುದು ನಮ್ಮ ಸಮ್ಮೇಳನದಲ್ಲಿ ಸ್ಪಷ್ಟವಾಗಿ ವ್ಯಕ್ತವಾಯಿತು. ಮುಂಜಾನೆ ಏಳರ ಸೂರ್ಯನನ್ನು ಅ.ನ.ಕೃ. ನೋಡದೆ ಎಷ್ಟು ವರ್ಷವಾಗಿತ್ತೋ, ಆದರೆ ಮಣಿಪಾಲದಲ್ಲಿ ಮಾತ್ರ ಕೋಳಿ ಕೂಗುವ ಮೊದಲೇ ಅವರು ಸಿದ್ಧರು.

ಉದ್ಘಾಟನೆಯ ಪರ್ವದಲ್ಲಿ, ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೃಷ್ಣರಾಯರನ್ನು ಪರಿಚಯ ಮಾಡಿಸಿದ ಶೈಲಿ – ಆ ಹೃದಯಸ್ಪರ್ಶಿ ಮಾತುಗಳನ್ನು ಯಾರು ಮರೆಯಬಲ್ಲರು? ಮಾಸ್ತಿಯವರ ಆಶೀರ್ವಾದ ಮತ್ತು ಅ.ನ.ಕೃ. ಅವರ ಪುಣ್ಯಬಲದಿಂದ ಸಮ್ಮೇಳನ ಎಂತೆಂಥ ಗಂಡಾಂತರಗಳಿಂದಲೂ ಪಾರಾಗಿ ಎಲ್ಲರ ಹೆಸರನ್ನೂ ಉಳಿಸಿಕೊಟ್ಟಿತು. ಅ.ನ.ಕೃ. ಆವೇಗವನ್ನು ನಿಯಂತ್ರಿಸುವ ಸಲುವಾಗಿಯೇ ನಾನು ಮಾಸ್ತಿ ಕಾರಂತ ಅವರನ್ನು ಬರಮಾಡಿಕೊಂಡಿದ್ದೆ. ಇವರಿಬ್ಬರ ನಡುವೆ ಅ.ನ.ಕೃ. ಅವರನ್ನು ಉಪಶಮನಗೊಳಿಸಬಹುದೆಂಬ ನನ್ನ ಆಶಯ ಸಂಪೂರ್ಣವಾಗಿ ಈಡೇರಿತು. ಆದರೂ ಚಕಮುಕಿಗೆ ಯಥೇಷ್ಟ ಅವಕಾಶವಿತ್ತು. ವಿಷಯ ನಿಯಾಮಕ ಸಮಿತಿಯ ಸಭೆಗೆ ಕಾರಂತರು ಬರುವುದಿಲ್ಲವೆಂದರೂ ಅವರನ್ನು ಅಂಗಲಾಚಿಕೊಂಡೆ. ಬಂದರು – ಬಂದಮೇಲೆ ಕಾರಂತರು – ಕೇಳಬೇಕೆ? ಪರಿಷತ್ತಿನ ಬೆಂಗಳೂರು ನೀತಿಯನ್ನು ಖಂಡಿಸಿದರು. 'ಮುಂದಕ್ಕೆ ತಿದ್ದಿಕೊಳ್ಳುತ್ತೇವೆ', ಅಂದರೆ 'ಮುಂದಿನ ಜನ್ಮಕ್ಕೋ?' ಅನ್ನುವಾಗಲೆ ಡಾ. ಪೈ ಅವರು ಬಂದುಬಿಡಬೇಕೆ? ಇದೇನು ಈ ಸಾಹಿತಿಗಳು ಬರೇ ಭಾಷಣ ಮಾಡುತ್ತಾರೆ ಎಂದಿದ್ದ ಪೈ ಅವರಿಗೆ ಅವರ ಬಿರುಸಾದ ತಾತ್ತ್ವಿಕ ಮತ್ತು ಸಂಘಟನೆಯ ನೀತಿಯ ವಿರುದ್ಧ ಚರ್ಚೆ ವಿಪರೀತ ಜಗಳದಂತೆ ತೋರುತ್ತಿತ್ತು. 'ಇದು ನಿಮಗೆ ಸಂಬಂಧಪಟ್ಟದ್ದಲ್ಲ, ಸಮ್ಮೇಳನಗಳು ಬಿಸಿಯೇರುವುದೇ ಹೀಗೆ' ಎಂದು ಪೈ ಅವರನ್ನೊಪ್ಪಿಸುವುದೇ ಕೆಲಸವಾಗುತ್ತಿತ್ತು. ಸಮ್ಮೇಳನದ ಕೊನೆಯ ದಿನ ಬಹಿರಂಗ ಅಧಿವೇಶನ – ಠರಾವುಗಳ ಮಂಡನೆ. ಒಂದು ಠರಾವನ್ನು ಕಾರಂತರೇ ಮಂಡಿಸಿದರು. 'ನಾನು ದುಡ್ಡು ತಿಂದಿದ್ದೇನೆಂದು ಅಪವಾದ ಹೊರಿಸುವ ಮಹಾನುಭಾವರು ಅಧ್ಯಕ್ಷಪೀಠದಲ್ಲಿರುವ ವರೆಗೆ.........ಎಂದು ಮುಂತಾಗಿ ಹೇಳಿ ಒಂದು ಖಂಡನಾತ್ಮಕ ನಿರ್ಣಯವನ್ನು ಮಂಡಿಸಿದರು. ಹೊಳೇನರಸೀಪುರದ ತರುಣ ರಾಮಪ್ರಸಾದ ಅನುಮೋದಕ ಭಾಷಣದಲ್ಲಿ ಪರಿಷತ್ತಿನ ಬಗ್ಗೆ ಅದರ ಅಧ್ಯಕ್ಷರ ಬಗ್ಗೆ ಕೆಲವು ಮಣಿಮುತ್ತಿನಂಥ ಪದಪುಂಜಗಳನ್ನು ಎಸೆಯಲಾರಂಭಿಸಿದ. ನಾಲ್ಕು ಸಾವಿರ ಜನಸಂದಣಿ ಈ ದಿಗ್ಗಜಗಳ ನಡುವಣ ಹೋರಾಟವನ್ನು ಉತ್ಸುಕತೆಯಿಂದ ಕತ್ತೆತ್ತಿ ಅನುಮೋದಿಸುತ್ತಿತ್ತು. ಇಡೀ ಸಭೆ ಅ.ನ.ಕೃ. – ಕಾರಂತರ ಕಡೆಗೆ ತಿರುಗಿದ ಸೂಚನೆ ಅವರ ಚಪ್ಪಾಳೆ, ಮುಖದ ಉತ್ಸಾಹದಿಂದ ತಿಳಿಯುತ್ತಿತ್ತು. ಮಹಾಚಿಂತಾಕ್ರಾಂತರಾದ ಡಾ. ಪೈ ಮತ್ತು ನನ್ನ ಪಕ್ಷಕ್ಕೆ ದೇವರ ಹೊರತು ಯಾರಿದ್ದಾರೆಂದು ನಾವು ವಿಷಣ್ಣತೆಯಿಂದ ಪ್ರಾರ್ಥಿಸುವಷ್ಟಕ್ಕೆ ಅ.ನ.ಕೃ. ಅವರು ನಮ್ಮ ಹೆಸರನ್ನು, ಇಡೀ ಸಮ್ಮೇಳನದ ಹೆಸರನ್ನು ಉಳಿಸುವ ನಿಲುವು ತಾಳಿದರು. ಇದು ನನ್ನ ನಿರೀಕ್ಷೆಗೆ ಮಿಗಿಲಾದ, ನನ್ನ ಜೀವನದ ಅತ್ಯಂತ ವಿಸ್ಮಯಕಾರಿ ಘಟನೆಗಳಲ್ಲಿ ಒಂದಾಯಿತು. ಅ.ನ.ಕೃ. ರಾಮಪ್ರಸಾದನ ನಾಲಗೆಗೆ ಕಡಿವಾಣ

ಹಾಕಿದರು ಮಾತ್ರವಲ್ಲ ನಿರ್ಣಯದ ಪರವಾಗಿ ಮಾತನಾಡುವವರಿಗೆ ಅವಕಾಶ ಕೊಡದೆ ವಿರೋಧ ಮಾಡುವವರು ಬನ್ನಿ (ಹಾಗೆ ಬರುವವರು ಯಾರೂ ಇರಲಿಲ್ಲವೆಂದು ಗೊತ್ತಿತ್ತು.) ಎಂದು ದ್ವಾಪರಯುಗದ ಆ ಭಗವಂತನ ಮುತ್ಸದ್ದಿತನವನ್ನು ಮೆರೆದರು. ನಿರ್ಣಯವನ್ನು ಮತಕ್ಕೆ ಹಾಕುವಾಗಲೂ ವಿರೋಧಿಸುವವರು ಕೈ ಎತ್ತಿ ಎಂದಾಗ ಯಾರೂ ಎತ್ತದೆ ಯಾವ ಗದ್ದಲವೂ ಇಲ್ಲದೆ ನಿರ್ಣಯ ಸರ್ವಾನುಮತದಿಂದ ಸ್ವೀಕೃತವಾಯಿತು. ಕಾರ್ಯಕರ್ತರಾದ ನಾವು ಪಾರಾದೆವು.

ಬಹಿರಂಗವಾಗಿ ಪರಿಷತ್ ಅಧ್ಯಕ್ಷರ ಅವಮಾನ ಮಾಡುವುದು ಯಾರ ಉದ್ದೇಶವೂ ಆಗಿರಲಿಲ್ಲವಾದರೂ ಅಂದಿನ ಪರಿಷತ್ತಿನ ಘೋರಣೆಗೆ ಅ.ನ.ಕೃ. ಅಧ್ಯಕ್ಷರಾಗಿರುವ ಸಮ್ಮೇಳನದಲ್ಲಿ ಟೀಕೆ – ಖಂಡನೆ ದೊರೆಯದಿರಲು ಸಾಧ್ಯವೆ? ಖಂಡನೆಯನ್ನು ಸುತರಾಂ ಒಲ್ಲದ ಡಾ. ಪೈಯವರು ಶಿವಮೂರ್ತಿ ಶಾಸ್ತ್ರಿಗಳ ಹತ್ತಿರ ಅತ್ತು ಕ್ಷಮೆ ಬೇಡಿದರು. ಸಮ್ಮೇಳನ ಮುಗಿದ ಮೇಲೆ ನನ್ನನ್ನು ತರಾಟೆಗೆ ತೆಗೆದುಕೊಂಡರು. 'ನಿನಗೆ ಗೊತ್ತಿದ್ದೂ ಹೀಗೆ ಮಾಡಿದಿಯಲ್ಲಾ?' ಎಂದು ಚೆನ್ನಾಗಿ ಥಳಿಸಿದರು. ಶಿಕ್ಷವರಿಗೆ ಅಂದರು. ಇಂಥ ಸಮ್ಮೇಳನ ನನಗೆ ಬೇಡವಿತ್ತು ಎಂದು ಕೊರಗಿದರು. ನಾನೂ ಅತ್ತೆ – ಕಾರಂತರೇ ಸಮಾಧಾನ ಮಾಡಿದರು. ಆ ಮೇಲೆ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಲು 15 ದಿನ ಮದರಾಸಿನಲ್ಲಿ ಅಜ್ಞಾತವಾಸ ಮಾಡಿ ಮರಳಿದೆ.

ಸಮ್ಮೇಳನದ ಮೂರು ದಿನ – ಎಪ್ಪತ್ತೆರಡು ಗಂಟೆ – ನಾಲ್ಕು ಸಾವಿರದ ಮುನ್ನೂರಯಿಪ್ಪತ್ತು ಮಿನಿಟು ಅದೆಷ್ಟು ಸಮಸ್ಯೆಗಳು ಬಂದುವೋ. ಹೇಗೆ ಪರಿಹಾರವಾದುವೋ, ಯಾರು ಮಾಡಿದರೋ ಬಿಟ್ಟರೋ ಒಂದೂ ತಿಳಿಯದು. ಇಷ್ಟು ಜನ ವಿವಿಧ ಮನೋಧರ್ಮದ ಮನುಷ್ಯರನ್ನು ಒಂದೇ ಕಡೆ ಸೇರಿಸಿದ ಮೇಲೆ ಉಡುಪಿ ಶ್ರೀ ಕೃಷ್ಣಾ, ನೀನೇ ಕಾಪಾಡು ಎಂದು ಅವನನ್ನೇ ಶೇಕಡಾ ನೂರರಷ್ಟು ಆಸ್ತಿಕನಲ್ಲದ ನಾನು ಪ್ರಾರ್ಥಿಸಬೇಕಾಯಿತು.

ಸಮ್ಮೇಳನ ಮುಗಿದರೂ ಪ್ರತಿಕ್ರಿಯೆ ನಿಲ್ಲಲಿಲ್ಲ, ಕಟ್ಟೀಮನಿಯವರು ರೊಚ್ಚಿನಿಂದ ಟೀಕೆ ಮಾಡಿದರು – ಸಾಹಿತಿಗಳನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದು ಆಪಾದಿಸಿದರು. ಬೀಚಿಯವರು ಲೇವಡಿ ಮಾಡಿ ನನ್ನನ್ನು ಕುರಿದಾಸ ಎಂದು ಕರೆದರು. ಆದರೆ ಇದಾವುದೂ ನನಗೆ ಸಲ್ಲದ ಬಿರುದು. ಪ್ರಾಮಾಣಿಕವಾಗಿ ದುಡಿದ ನನಗೆ ಈ ಟೀಕೆಗಳು ಅಮೃತಪ್ರಾಯವಾದುವು. ನಡೆದ ವಿಷಯ ಸನ್ನಿವೇಶಗಳು ಕ್ಷಣಿಕ ವಿಪ್ಲವವನ್ನುಂಟು ಮಾಡಿದರೂ ಆರೋಗ್ಯ ಸಂವರ್ಧನೆಗೆ ನೆರವಾದುವು. ಸಾರ್ವಜನಿಕ ಕಾರ್ಯಕರ್ತನ ಮನಸ್ಸು ದೃಢವಾಗಬೇಕಾದರೆ, ಸ್ನೇಹಿತರ ಶಾಭಾಸಗಿರಿಗಿಂತ ಇಂಥ ಟೀಕಾಕಾರರ ವಾಗ್ಬಾಣಗಳು ಹೆಚ್ಚು ಪ್ರಯೋಜಕವೆಂಬ ತೀರ್ಮಾನಕ್ಕೆ ನಾನು ಬಂದೆ. ಮುಂದಿನ ಕೆಲವು ವರ್ಷಗಳಲ್ಲಿ ನಾನು ಭಾಗವಹಿಸಿದ ಶತಮಾನೋತ್ಸವಗಳ ಪ್ರಮಾಣ. ಗುಣ – ಎರಡೂ ಹೆಚ್ಚುವುದಕ್ಕೂ 42ನೆ ಸಾಹಿತ್ಯ ಸಮ್ಮೇಳನದ ಕಷಾಯ ಕಾರಣವಾಯಿತು.

1962ನೆಯ ಆಕ್ಟೋಬರ 10ನೆಯ ತಾರೀಕಿಗೆ ಶಿವರಾಮ ಕಾರಂತರಿಗೆ ಅರುವತ್ತು ತುಂಬುವ ದಿನ. ಉಡುಪಿಯವರಾದ ನಮಗೆ ಅದು ಹಬ್ಬದ ದಿನವಾಯಿತು. ಕೋಟದಲ್ಲಿ ಹುಟ್ಟಿದರೂ, ಪುತ್ತೂರಲ್ಲಿ ಮನೆಮಾಡಿ ಕೊಂಡರೂ, ಉಡುಪಿಯ ಜನರನ್ನು ಉಡಾಫೆಯವರೆಂದು ಬೈದರೂ, ಕಾರಂತರಿಗೆ ನಮ್ಮೂರಲ್ಲಿ ಒಂದು ಹಿತಾಸಕ್ತಿ ಇದ್ದೇ ಇತ್ತು. ಮಠ ಸಂಸ್ಥಾನದ ಗುರು ಪರಂಪರೆಯವರನ್ನು ಅಷ್ಟಾಗಿ ಒಪ್ಪದ ಕಾರಂತರಿಗೆ ನಮ್ಮ ಉಡುಪಿಯ ಮಠಗಳು ವಿಡಂಬನೆಯ ವಸ್ತುವಾಗಿ ಕಂಡರೆ ಅಚ್ಚರಿಯೇನಲ್ಲ. ಉಡುಪಿಯಲ್ಲಿಯೇ ಅವರ ಸ್ವಾತಂತ್ರ್ಯ ಹೋರಾಟದ ಸ್ನೇಹಿತ ವರ್ಗ ನೆಲಸಿತ್ತೆಂದೋ, ವರ್ಷಕ್ಕೆ ನಾಲ್ಕು ಸಲ ಪುತ್ತೂರಿಂದ ಕೋಟಕ್ಕೆ ಹೋಗುವ ದಾರಿಯಲ್ಲಿ ಉಡುಪಿ ಒಂದು ತಂಗುದಾಣವಾಗಿರುವುದೆಂದೋ, ಹೇಗೂ ನನಗೂ ಅವರಿಗೂ ಪರಿಚಯವೇ ಇಲ್ಲದ ನನ್ನ ಚಿಕ್ಕಂದಿನಲ್ಲಿ ಉಡುಪಿಯ ಬೀದಿಗಳಲ್ಲಿ ದ್ರುತಗತಿಯಿಂದ ಮೋರೆ ಅಡಿಗಿಕ್ಕಿ ನಡೆಯುವ ಕಾರಂತರ ಚಿತ್ರ ನೆನಪಿಗೆ ಬರುತ್ತಿದೆ. ಉಡುಪಿಯ ಲೇಖಕರು ಒಂದು ಕಾಲಕ್ಕೆ ಕಾರಂತರಿಂದ ಪ್ರಭಾವಿತರಾದಂತೆ ತೋರುತ್ತದೆ. ನನ್ನೂರಿನ ಒಬ್ಬರು (ಬನ್ನಂಜೆ) ಕಾರಂತರಂತೆ ಕೂದಲನ್ನು ಬಿಟ್ಟು ಕಾರಂತರ ನಕಲು ಹೊಡೆದಿದ್ದಾರೆ; ಕಾರಂತರಂತೆ ಹಲವಾರು ಪತ್ರಿಕೆಗಳನ್ನೂ ನಡೆಸಿ, ಕೂರಿಸಿ, ನಿಲ್ಲಿಸಿ ಯಶಸ್ವಿಯಾಗಿದ್ದಾರೆ. ಉಡುಪಿಗೆ ಬಂದಾಗಲೆಲ್ಲ ಕಾರಂತರು ಅಜ್ಜರಕಾಡಿನ ಕೊಚ್ಚಿಕಾರ ಪಾಂಡುರಂಗ ಪೈ ಎಂಬ ತಮ್ಮ ಸಹಪಾಠಿಯೊಬ್ಬರ ಮನೆಯಲ್ಲಿ ತಂಗುತ್ತಿದ್ದರು. 1944ರ ಸುಮಾರಿಗೆ ಉಡುಪಿಯ ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿಗಳು 'ಕಲಾವೃಂದ' ಎಂಬ ಹೆಸರಲ್ಲಿ ಒಂದು ಸಾಹಿತ್ಯ ಸಂಘವನ್ನು ಕಟ್ಟಿದರು: ಅಲ್ಲಿ ಕನ್ನಡ ಜಾಣ, ಕಾವ ಪರೀಕ್ಷೆಗಳಿಗೆ ನಾನು ವ್ಯಾಕರಣ, ಕಾವ್ಯ ಪಾಠ ಹೇಳುತ್ತಿದ್ದೆ. ಕಲಾವೃಂದದ ನನ್ನ ಶಿಷ್ಯರು ಒಮ್ಮೆ ಕಾರಂತರನ್ನು ತಮ್ಮ ದಸರಾ ಸಭೆಗೆ ಕರೆದಾಗ ಕೊಚ್ಚಿಕಾರ್ ಅವರ ಮನೆಯಿಂದ ಕಾರಂತರನ್ನು ಕರೆತರುವ ಹೊಣೆ ನನಗೊಪ್ಪಿಸಿದರು. ಆಗ ಉಡುಪಿಯಲ್ಲಿ ಬಾಡಿಗೆ ಮೋಟಾರುಕಾರು ಇನ್ನೂ ಬಂದಿರಲಿಲ್ಲ – ಜಟ್ಕಾ ಬಂಡಿಯ ಯುಗ ಅದು. ಜಟ್ಕಾದಲ್ಲಿ ಕಾರಂತರ ಜತೆ ಬರುತ್ತಿರುವಾಗ ಅವರಿಗೊಂದು ಮಹಾ ಪ್ರಶ್ನೆ ಕೇಳಿದೆ. ಪ್ರೇಮಚಂದ ಅವರ 'ಗಬನ್' ಕಾದಂಬರಿಯನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಬೇಕಾಗಿತ್ತು. 'ಗಬನ್' ಅಂದರೆ ಏನು?, ಎಂದು ಕೇಳಿದರು.

'ದುಡ್ಡು ತಿನ್ನುವುದು' ಎಂದೆ. 'ಗುಳುಂ' ಅಂತ ಹೆಸರಿಡಿ ಎಂದರು (ನನ್ನ ಚೊಚ್ಚಲ ಅನುವಾದ – ಕೃತಿಗೆ ಇಂಥ ಹೇಸಿಗೆ ಹೆಸರು ಸಲ್ಲದೆಂದು ನಾನು 'ಗುಳುಂ' ಒಪ್ಪಲಿಲ್ಲ) ಬಹುಶಃ ಇದೇ ಕಾರಂತರಿಗೆ ನಾನು ಭೆಟ್ಟಿಯಾದ ಪ್ರಥಮ ಸಂದರ್ಭ. ಹೈಸ್ಕೂಲು ಸೇವೆಯ ಘಟ್ಟ ಮುಗಿದು ಕಾಲೇಜು ವಿದ್ಯಾಭ್ಯಾಸ ಮುಗಿಸಿ ಊರಿಗೆ ಮರಳು ವಷ್ಟು ಹೊತ್ತಿಗೆ ನನ್ನೂರಲ್ಲಿ ಒಂದು ಕಾಲೇಜು ಸಿದ್ಧವಾಗಿ ನಿಂತಿತು . ಈ ಕಾಲೇಜಿಗೆ ಚಂದಾ ಎತ್ತಲು ಮಣಿಪಾಲದ ಪೈ ಬಂಧುಗಳ ಜತೆಗೆ ಕಾರಂತರೂ ಊರೂರು ಸುತ್ತಾಡಿದವರಂತೆ, ಕರ್ನಾಟಕದ ತನ್ನ ಪರಿಚಯಸ್ಥರ ಕಡೆ ಎಲ್ಲ ಕರೆದುಕೊಂಡು ಹೋದರಂತೆ. ಊರಿನ ಕರ್ನಾಟಕ ಸಂಘದ ಮತ್ತು ಕಾಲೇಜಿನ ಸಾಹಿತ್ಯೋತ್ಸವದ ಸಲುವಾಗಿ ಕಾರಂತರನ್ನು ಹಲವು ಬಾರಿ ಕರೆಯುವ, ಕರೆದೊಯ್ಯುವ, ಕೊಚ್ಚಿಕಾರ ಪಾಂಡುರಂಗ ಪೈ ಅವರ ನಿಧನಾ ನಂತರ ಮನೆಯಲ್ಲಿಯೇ ಇರಿಸಿಕೊಳ್ಳುವ ಕೆಲಸ ನನ್ನದಾಯಿತು. ಯಾವಾಗ ನಾವು ಕರೆದರೂ ಇಲ್ಲ ಎಂದವರಲ್ಲ. ಒಂದು ಸಾರಿ ಎಲ್ಲರಂತೆ ಎಂದುಕೊಂಡು ಬಂದದ್ದಕ್ಕೆ ಭತ್ತೆಯನ್ನು ಮನಿಯಾರ್ಡರ್ ಮಾಡಿದೆವು – ಕೈಯಲ್ಲಿ ಕೊಡಲು ಹೆದರಿ. ಮನಿ ಆರ್ಡರ್ ಮರಳಿ ಬಂತು. ಈ ಜಿಲ್ಲೆಯ ಒಳಗೆ ನನ್ನದು ಧರ್ಮ ದರ್ಶನ ಎಂದೇನೊ ಬರೆದಿದ್ದರು. ನನ್ನ ವಿವಾಹಪೂರ್ವದಲ್ಲಿ ನನ್ನ ಮುಪ್ಪಿನ ಮಾತಾಪಿತರಿಗೂ ಕಾರಂತರು ನಮ್ಮಲ್ಲಿ ಬರುವುದೆಂದರೆ ಒಂದು ಹಿಗ್ಗು, ತವಕ, ಮದುವೆಯಾದ ಮೇಲೆ ನಾನು ಹೇಳಿದಂತೆ ಕೇಳುವ ಒಂದು ಜೀವ ನನಗೆ ದೊರೆತ ಮೇಲೆ ನಮ್ಮ ಮನೆಯಲ್ಲಿ ಕಾರಂತರಿಗೆ ಆತಿಥ್ಯಮಾಡುವುದು ಅಚ್ಚುಕಟ್ಟಾಗಿ ನಡೆಯತೊಡಗಿತು. ಕಾರಂತರ ಗುಬ್ಬಚ್ಚಿ ಊಟಕ್ಕೆ ಯಾವುದೂ ಹೆಚ್ಚಾಗಿ ಬೇಕಾಗುತ್ತಿರಲಿಲ್ಲ. ಕೆಲವು ಸಮಯದ ಮೇಲೆ ನಮ್ಮ ಹಳ್ಳಿಯ ಪದಾರ್ಥಗಳನ್ನೇ ಅವರು ಮೆಚ್ಚುವುದನ್ನು ಕಂಡು ಅಮಟೆ ಗೊಜ್ಜು, ಉದ್ದಿನ ಹಿಟ್ಟು ಇದೇ ಅವರಿಗೆ ತಯಾರಾಗುತ್ತಿತ್ತು. ಕಾಫಿ ಒಂದು ನಾಲ್ಕು ಸಲ ಭಟ್ಟಿ ಇಳಿಸಿದರಾಯಿತು. ರಾತ್ರಿ ಒಂಬತ್ತಾಯಿತೋ ಕಾರಂತರ ಕಣ್ಣು ಬಾಡಲು ತೊಡಗುತ್ತವೆ – ಯಾರು ಇರಲಿ ಬಿಡಲಿ ನಿದ್ದೆ ಬಂದೇ ಬಿಡುತ್ತದೆ. ಮುಂಜಾನೆ ನಾನೇಳುವ ಮುನ್ನವೇ ಎದ್ದರೂ ಸದ್ದಿಲ್ಲದೆ ಸಿಕ್ಕಿದ ಪುಸ್ತಕ, ಪೇಪರು ಓದುತ್ತಾ ಕಾಫಿಗಾಗಿ ಕಾಯುತ್ತಾರೆ. ನಮ್ಮ ಐದು ಮಕ್ಕಳು ಒಂದೊಂದಾಗಿ ಅವರ ನಿದ್ರಾಭಂಗ ಮಾಡುವ ದಿನಗಳನ್ನು ಅವರು ಸಹಿಸಿಕೊಂಡಿದ್ದಾರೆ. ಅವುಗಳ ಬಾಲಾಪ್ಯದ ಕಾಟ ಸೆಚ್ಚಿಕೊಂಡಿದ್ದಾರೆ; ಕಾರು ಬಂದ ಮೇಲೆ ಅವುಗಳಿಗೆ ಮಣಿಪಾಲದ ವರೆಗೆ ಒಂದು ಟ್ರಿಪ್ ಕೊಡುತ್ತಾರೆ. ಅವರ ಜತೆ ನಾನು ಅವರ ಕೃತಿಗಳ ಜನನ ದಿನಾಂಕ, ಮಾರಾಟದ ಸ್ಥಿತಿಗತಿ, ಅವರ ಮನೆ ಮಕ್ಕಳ ಕ್ಷೇಮಸಮಾಚಾರ ಇಷ್ಟೇ ಕೇಳುತ್ತೇನೆ. ಅವರ ಕೃತಿಯ ವಿಮರ್ಶೆ ನಾನು ಈಗ ಮಾಡುವುದಿಲ್ಲ – ಮುದ್ರಿತವಾದ ಪ್ರತೀ ಗ್ರಂಥವೂ ನನಗೆ ಬಂದೇ ಬರುತ್ತದೆ. ಅವರ ಮಕ್ಕಳಲ್ಲಿ ಉಲ್ಲಾಸ ಒಬ್ಬನನ್ನು ಬಿಟ್ಟು ಉಳಿದವರೆಲ್ಲರೂ ನಮ್ಮ ಕಾಲೇಜಿಗೇ ಕಲಿಯಲು ಬಂದರು. ಈ ಇಪ್ಪತ್ತು ವರ್ಷಗಳಲ್ಲಿ ಕಾರಂತರು ನಮ್ಮ ಮನೆಯವರೇ ಆಗಿದ್ದಾರೆ. ಯಾವ ತಿಳಿಸುವ ಅಗತ್ಯವಿಲ್ಲದಿದ್ದರೂ ಬರುವ ಸುದ್ದಿ ಮೊದಲೇ ತಿಳಿಸಬೇಕು – ಅದು ಅವರ ಶಿಸ್ತು. ಅವರ ಎಷ್ಟೋ ಮಂದಿ ದೇಶೀಯ ವಿದೇಶೀಯ ಸ್ನೇಹಿತರ ಪರಿಚಯ ನಮಗಾಗಿದೆ. ನಾನು ಮಣಿಪಾಲಕ್ಕೆ ಬಂದ ವಿದೇಶೀಯ ಸಾಹಿತ್ಯ ಕಲಾಭಿಮಾನಿಗಳನ್ನು ಪುತ್ತೂರಿಗೆ ಭೇಟಿ ಕೊಡಿಸಿ ಅಟ್ಟುತ್ತೇನೆ, ಅಲ್ಲಿಂದ ಹಿಂದಿರುಗಿದ ಮೇಲೆ ಈ ವಿದೇಶೀಯ ಪಂಡಿತರು ಕಾರಂತರ ಪ್ರತಿಭೆಗೆ ಮನಸೋತು ಬಂದು ನನಗೆ ವರದಿ ಮಾಡಿ ಹೋಗುತ್ತಾರೆ. ಹೀಗೆ ನಮ್ಮ ಪರಸ್ಪರ ಭಾಂದವ್ಯ ಕುದುರಿದೆ, ಬೆಳೆದಿದೆ.

1958ರ ಹೊತ್ತಿಗೆ ಕಾರಂತರಿಗೆ ಅವರ ಬಾಲಾಪ್ಯದ ಒಂದು "ಹುಚ್ಚು" ಮರುಕಳಿಸಿ ಪೀಡಿಸಲು ತೊಡಗಿತು – ಅದೇ ಯಕ್ಷಗಾನದ ಮರುಳು. 1957ರಲ್ಲಿ ಅವರ ಒಂದು ಸೆಮಿನಾರು ದಿಲ್ಲಿಯ ಸಂಗೀತ ನಾಟಕ ಅಕಾಡೆಮಿಯ ಕೃಪಾಶ್ರಯದಲ್ಲಿ ಬ್ರಹ್ಮಾವರದಲ್ಲಿ ನಡೆಯಿತು. ಇಲ್ಲಿ ನನ್ನ ಸಹೋದ್ಯೋಗಿ ಬಿ.ವಿ. ಆಚಾರ್ಯರು ಉಳಿದ ಏರ್ಪಾಟುಗಳನ್ನು ನೋಡಿಕೊಂಡರು. ಆ ತರುವಾಯ ನಮ್ಮ ಮನೆಯ ಹಿಂದಿನ ಕಲ್ಯಾಣಮಂಟಪದಲ್ಲಿ ಒಂದು ವಾರದ ತನಕ ಯಕ್ಷಶೈಲಿಯ ಸಂಗೀತದ ಕುರಿತ ಚರ್ಚೆ, ಪ್ರದರ್ಶನ ನಡೆದವು. ಈ ಎರಡು ಸೆಮಿನಾರುಗಳ ಫಲಶ್ರುತಿಯೇ ಕಾರಂತರ 'ಯಕ್ಷಗಾನ ಬಯಲಾಟ'. ಮತ್ತೆರಡು ವರ್ಷದಲ್ಲಿ ಕಾರಂತರ ಬ್ಯಾಲೇ ಪ್ರಯೋಗಗಳಿಗೆ ತರಬೇತಿ ನಡೆಯಬೇಕಾಯಿತು. ಎರಡು ಸಲ ಉಡುಪಿಯಲ್ಲಿ, ಒಂದು ಸಲ ಬ್ರಹ್ಮಾವರದಲ್ಲಿ – ಹೀಗೆ ಭೀಷ್ಮ ವಿಜಯ, ಪಂಚವಟಿ, ಬಭ್ರುವಾಹನ, ಗಯಚರಿತ್ರೆ, ಕಾರಂತರ ಕಲಾಸೃಷ್ಟಿಯ ಅದ್ಭುತ ಲೋಕವನ್ನು ಭಾರತೀಯ ಕಲಾಪ್ರಪಂಚಕ್ಕೆ ಬಿತ್ತರಿಸಿದವು. ಬ್ಯಾಲೆ ತಯಾರಿಸುವಾಗ, ಅದನ್ನು ಹೊರಡಿಸುವಾಗ ಯಕ್ಷಗಾನ ಕಲಾವಿದ ಕಪ್ಪೆಗಳನ್ನು ಹಿಡಿದು ಒಟ್ಟು ಮಾಡುವ ಸೇರೆಗಾರ ಕೆಲಸ ಬಿ. ವಿ. ಆಚಾರ್ಯರಿಗೆ ಮಾತ್ರ ಸಾಧ್ಯವಾದದ್ದು. ಕಾಲೇಜಿನ ಯಾವತ್ತೂ ಸೌಕರ್ಯಗಳನ್ನು ಒದಗಿಸುವುದು, ಸ್ವಯಂಸೇವಕರು ಬೇಕಾದರೆ ಅವರನ್ನು ನೀಡುವುದು ನನ್ನ ಕೆಲಸ. ಹೀಗೆ ಕಾರಂತರ ಕಲಾಪ್ರಯೋಗದಲ್ಲಿ ನಮ್ಮ ಅಳಿಲಸೇವೆ ಸಲ್ಲಿಸಿದ್ದೇವೆ, 'ರಾಮನ ಬಳಿ ಇದ್ದೆ ನಾನು; ಕಂಡೆ ಕೋದಂಡದೋರ್ದಂಡ ಬಲ ನನ್ನ ಕಣ್ಣ ಮುಂದೆಯೇ ಮೊಳೆತು, ಬೆಳೆದ ರೀತಿಯ' ಎಂದು ನಾವೂ ಕಾರಂತರ ಪ್ರಯೋಗಗಳ ಬಗ್ಗೆ ಹೇಳಬಹುದು.

1956ನೆಯ ರಾಜ್ಯೋತ್ಸವದ ದಿನದ ತರುವಾಯ ಕರ್ನಾಟಕದಲ್ಲಿ ಕವಿಪೂಜೆ – ವಿಭೂತಿಪೂಜೆ ಅಲ್ಲಿ ಇಲ್ಲಿ ಅದ್ದೂರಿಯಿಂದ ನಡೆಯಲು ಉಪಕ್ರಮವಾಯಿತು. ಸ್ಥಳೀಯ ಅಭಿಮಾನಕ್ಕೂ ಕನ್ನಡದ ಅಭಿಮಾನಕ್ಕೂ ಮಹಾಪೂರ ಎಂಬಂತೆ ಸರ್ಕಾರದ ಮತ್ತು ಜನಾಭಿಪ್ರಾಯ ಎರಡೂ ಪ್ರತ್ಯೇಕ ಪ್ರತ್ಯೇಕವಾಗಿ ಸಾಹಿತಿಗಳ ಮನ್ನಣೆಯ ಕಾರ್ಯಕ್ರಮ ಕೈಗೊಂಡವು. ವಿಶ್ವವಿದ್ಯಾನಿಲಯದ ಪಂಡಿತೋತ್ತಮರಿಗಂತೂ ಅವರ ಅಪಾರ ಶಿಷ್ಯ ವರ್ಗ ಹಾರ–ತುರಾಯಿ ಒಪ್ಪಿಸಲು ಸದಾ ಸಿದ್ಧವಾಗಿರುತ್ತಿತ್ತು. ಅರುವತ್ತಾಗುವುದೇ ತಡ–ಸಮಿತಿ, ಸಭೆ, ಹಾರ, ಸನ್ಮಾನ, ಅಭಿನಂದನ ಉಪನ್ಯಾಸ, ಗ್ರಂಥನಿಧಿ, ಇದೊಂದು ಸಂಪ್ರದಾಯವೇ ಆಯಿತು. (ಈಗ 50ಕ್ಕೆ ಇದು ಪ್ರಾರಂಭ;) ಕಾರಂತರಿಗೆ ಶಿಷ್ಯರೆಲ್ಲಿದ್ದಾರೆ? ಎಂದು ತಡಕಾಡಿದಾಗ ಯಕ್ಷಗಾನ ಶೈಲಿಯಲ್ಲಿ 'ನಾವೇ ಅಂದುಕೊಳ್ಳ ಬಹುದು' ಎಂದು 1962ರ ಸಪ್ಟಂಬರ ತಿಂಗಳಿಂದ ಮತ್ತೆ ಉಡುಪಿಯ ಕರ್ನಾಟಕ ಸಂಘವನ್ನು ಚುಚ್ಚಿ ಎಬ್ಬಿಸಿ ಒಂದು ಸನ್ಮಾನ ಸಮಿತಿ ರಚಿಸಿ ನಾವು ಕಾರ್ಯಪ್ರವೃತ್ತರಾದೆವು. ನಿಧಿ ಸಂಗ್ರಹಕ್ಕಾಗಿ 'ಕಾರಂತರ ಅರವತ್ತು' ಎಂಬ ಅಭಿನಂದನಗಳ ಚಿಕ್ಕ ಹೊತ್ತಗೆ ಹೊರಡಿಸಿದೆವು. ಅದರೊಳಗಿನ 30 – 40 ಪುಟ ಜಾಹೀರಾತಿನಿಂದ ಮೂರು ಸಹಸ್ರ ರೂಪಾಯಿಗಳ ಆದಾಯ ಹುಟ್ಟಿತು. ಅಕ್ಟೋಬರ ಒಂದರಿಂದ ಹತ್ತರ ತನಕ ಉಡುಪಿಯ ಆಸುಪಾಸೇ ಅಲೆದಾಡಿ ಮತ್ತೆ ಮೂರು ನಾಲ್ಕು ಸಾವಿರ ಕೂಡಿಸಿದೆವು. ಕಾರಂತರಿಗೆ 5,000 ರೂಪಾಯಿ ನಿಧಿ ಅರ್ಪಿಸಿ, ಒಂದೆರಡು ಸಾವಿರ ರೂಪಾಯಿ ಸಮಾರಂಭದ ವೆಚ್ಚಕ್ಕೆ ಹಿಡಿದೆವು. ಒಂದೇ ದಿನದ ಉತ್ಸವ – ಎ. ಎನ್. ಮೂರ್ತಿರಾವ್, ಕಯ್ಯಾರ ಕಿಞ್ಞಣ್ಣ ರೈ, ಟಿ. ಎ. ಪೈ ಮುಂತಾದ ಮೂರು ನಾಲ್ಕು ಜನರ ಅಭಿನಂದನ ಉಪನ್ಯಾಸ. ರಾತ್ರಿ ಪೆರ್ಡೂರು ಕಲಾಮಂಡಳಿಯ 'ಸೋಮಿಯ ಸೌಭಾಗ್ಯ'ವನ್ನು ಕಾರಂತರಿಗೆ ಕಡ್ಡಾಯವಾಗಿ ತೋರಿಸಲಾಯಿತು. 'ಪರವಾಗಿಲ್ಲ ಚೆನ್ನಾಗಿತ್ತು' ಎಂಬ ಶಿಫಾರಸು ಪೆರ್ಡೂರಿನವರಿಗೆ ಪರ್ವತವಾಯಿತು. ಕಾರಂತರ ಸಮಕಾಲೀನರೂ, ಓರಗೆಯವರೂ, ಪರಿಚಯಸ್ಥರೂ ಆದ ಸುಮಾರು 20 – 30 ಜನ ಸಾಹಿತಿಗಳಿಂದ ನಾನು ತರಿಸಿಕೊಂಡ ಪ್ರಶಂಸೆಯ ಸರಮಾಲೆ 'ಕಾರಂತರ ಅರವತ್ತು' ಮಣಿ ಪಾಲದಲ್ಲಿ ಬಹಳ ಸುಂದರವಾಗಿ ಮುದ್ರಿತವಾಯಿತು. ಮೊನೋಟೈಪ್ ಯುಗಕ್ಕೆ ಪೂರ್ವದ ಈ ಚಿಕ್ಕ ಪುಸ್ತಕದ ಚೆಲುವನ್ನು ಎಲ್ಲರೂ ಕೊಂಡಾಡಿದರು. ಕಾರಂತರ ಸ್ವಂತ ಅಲ್ಬಮಿನಿಂದ ಪುಟಗಳನ್ನು ಕಿತ್ತು ತಂದು ಅಚ್ಚು ಹೊಡೆದಿದ್ದೆ. ಈ ಗ್ರಂಥಕ್ಕೆ ಯಾವ ಬೆಲೆಯನ್ನೂ ಇಟ್ಟರಲಿಲ್ಲ. ಮುದ್ರಿತ 500 ಪ್ರತಿಗಳನ್ನು 'ವಿಶ್ವಾಸ ಗೌರವ ಪೂರ್ವಕವಾಗಿ' ಮುಗಿಸಿಬಿಟ್ಟೆ. ಉಳಿದ ಕೆಲವನ್ನು ಅಟ್ಟದ ಮೇಲೆ ಒರಳೆಗಳಿಗೆ ಆಹಾರವಾಗಿ ಕೊಟ್ಟೆ. ಈ ಉತ್ಸವದ ಸಮಯ ಕಾರಂತರ ಮುಂಬಯಿ ಮಿತ್ರರಾದ ಎಸ್.ಎನ್.ಮೂಡಬಿದ್ರಿ, ಕೆ.ಕೆ.ಹೆಬ್ಬಾರ, ನಿ.ವ್ಯಾಸರಾಯ ಬಲ್ಲಾಳ ಅವರಿಗೂ ವಿನಂತಿ ಕಳಿಸಿ ಚಂದಾ ಎತ್ತಿದ್ದೆ. ಬಲ್ಲಾಳರು 'ಕಾರಂತರ ಅರವತ್ತು'ರ ಸಂಕ್ಷಿಪ್ತತೆಯನ್ನು ಬಿ.ಎಂ. ಶ್ರೀ ಸಂಭಾವನಾ ಗ್ರಂಥದ ಗಾತ್ರದೊಡನೆ ಹೋಲಿಸಿ 'ನಮ್ಮಿಂದ ಇಷ್ಟೇ ಸಾಧ್ಯವಾಯಿತೇ' ಎಂದು ಕೊರಗಿ ಪತ್ರ ಬರೆದರು. ನನಗೂ ಹಾಗೆಯೇ ಅನಿಸಿತ್ತು. ಆದರೆ ಬಿಡುಸಮಯದಲ್ಲಿ ಮಾತ್ರ ಇಂಥ ಕೆಲಸ ನಿರ್ವಹಿಸಬಲ್ಲ ತರಾತುರಿಯ ನಮ್ಮಿಂದ ಇದಕ್ಕಿಂತ ಹೆಚ್ಚು ಸಾಧ್ಯವೆ? ಇಷ್ಟಾದರೂ ಆಯಿತಲ್ಲಾ ಎಂದು ಅಂದಿನ ಮಟ್ಟಿಗೆ ಸಮಾಧಾನ ತಂದುಕೊಂಡೆ. ಕಾರಂತರಿಗೂ ಇದರಿಂದ ಸಂತೋಷವಾಯಿತು. ಅವರ ಆತ್ಮ ಕಥನದ ಎರಡನೆಯ ಆವೃತ್ತಿಯಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದಾರೆ. '1962ರ ಮಳೆಗಾಲದಲ್ಲಿ ನಾನು ಎರಡು ತಿಂಗಳ ಕಾಲ ಉಡುಪಿಯಲ್ಲಿ ಕಳೆಯಬೇಕಾಯಿತು. ಅಲ್ಲಿ ನನ್ನ ಕೆಲಸ ಮಾಡುತ್ತಿದ್ದಾಗ ಮಿತ್ರರಾದ ಹರಿದಾಸ ಭಟ್ಟರು ಏನೇನೋ ಹಂಚಿಕೆ ನಡೆಯಿಸುತ್ತಿದ್ದುದು ಪರೋಕ್ಷವಾಗಿ ತಿಳಿಯಿತು. ಅವರು ನನ್ನ ಅರವತ್ತನೇ ವರ್ಷಾಬ್ದಿ ಯನ್ನು ನಡೆಯಿಸಲು ಯೋಚಿಸುತ್ತಿದ್ದರು... ವಾಸ್ತವಿಕವಾಗಿ ಅಂಥ ಉಪಚಾರಗಳಲ್ಲಿ ನನಗೆ ಏನೂ ತೃಪ್ತಿ ಇಲ್ಲ. ಈ ನೆಪದಲ್ಲಿ ನನ್ನನ್ನು ನಾನು ಚಿರಸ್ಥಾಯಿಯಾಗಿ ಮಾಡಿಕೊಳ್ಳಲು ಇಚ್ಛಿಸಲಾರೆ. ಅವರ ಮನಸ್ಸನ್ನು ಮುರಿಯುವ ಕೆಲಸವೂ ಒಪ್ಪಲಿಲ್ಲ.. ಸ್ನೇಹ, ಪ್ರೀತಿಗಳ ನಡುವೆ ನಾನೆಷ್ಟರವ – ಎನಿಸಿತು. ಹೀಗೆ ನನಗೆ ಅರವತ್ತು ತುಂಬುತ್ತದೆ – ಎಂಬ ನೆನಪನ್ನು ಅವರು ಪ್ರಕಟಿಸುತ್ತಲೇ ಆ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ಲೇಖನಗಳೂ ಬರತೊಡಗಿದವು... 10 – 10 – 1962. ಉಡುಪಿಯವರಂತೂ ಆ ದಿನವನ್ನು ಬಲು ವಿಜೃಂಭಣೆಯಿಂದ ಜರುಗಿಸಿದರು. ಹರಿದಾಸ ಭಟ್ಟರು, ಅವರ ಮಿತ್ರವರ್ಗ, ಪೈ ಬಂಧುಗಳು, ಡಾ. ಐತಾಳರು – ಎಲ್ಲರೂ ದೀರ್ಘ ಕಾಲದಿಂದ ನನ್ನನ್ನು ತನ್ನವನೆಂದು ತಿಳಿದವರೇ. ಆ ದಿವಸ ಅವರೆಂದ ನುಡಿಗಳಿಗೆ ಕಿವುಡಾಗಿ ಕುಳಿತು 'ನಿಮ್ಮ ವಿಶ್ವಾಸಕ್ಕೆ ನಾನು ಋಣಿ' ಎನ್ನಲೇ ಬೇಕಾಯಿತು... ಉಡುಪಿ ಹಾಕಿದ ಪಾಠವನ್ನು ಕರ್ನಾಟಕದ ಹಲವು ನಗರಗಳು ಅನುಸರಿಸಿದವು. ನಾನು ಆ ಒಂದು ವರ್ಷವೆಲ್ಲ ಸನ್ಮಾನ ಹೆಕ್ಕುತ್ತ ಶಿವಮೊಗ್ಗ, ಅಂಕೋಲೆ, ಕಾರವಾರ, ಹೊಳೆನರಸೀಪುರ, ಮೈಸೂರು, ಭದ್ರಾವತಿ ಮೊದಲಾದ ಹಲವಾರು ಕಡೆಗಳಿಗೆ ಹೋಗಿ ನನ್ನ ಋಣಭಾರವನ್ನು ಹೆಚ್ಚಿಸಿಕೊಂಡು ಮರ ಳುವಂತಾಯಿತು." ಉಡುಪಿ ಕಟ್ಟಿಕೊಟ್ಟ ಅರುವತ್ತರ ಸನ್ಮಾನದ ತೇರು ಅಖಿಲ ಕರ್ನಾಟಕ ಸಂಚಾರ ಮಾಡಿತು.

1966ರಲ್ಲಿ ಕನ್ನಡದ ನವ್ಯಕವಿ ಗೋಪಾಲಕೃಷ್ಣ ಅಡಿಗರು ನಮ್ಮೂರಿಗೆ ಪ್ರಿನ್ಸಿಪಾಲರಾಗಿ ಬಂದರು.

ಅದೇ ವರ್ಷ ಅವರಿಗೆ ಐವತ್ತು ತುಂಬಿತ್ತೆಂದು ಅವರ ಸ್ನೇಹಿತ ವರ್ಗದವರೆಲ್ಲ ಒಂದು ಸನ್ಮಾನೋತ್ಸವ ವನ್ನು ಏರ್ಪಡಿಸುವ ಯೋಚನೆ ಮಾಡಿದರು. ಸಾಗರದಿಂದ ಶ್ರೀ ಕೆ. ವಿ. ಸುಬ್ಬಣ್ಣ, ಮೈಸೂರಿಂದ ಶ್ರೀ ನ. ರತ್ನ ಮೊದಲಾದವರು ಮೊದಲೇ ಯೋಚಿಸಿಕೊಂಡಿದ್ದ ಒಂದು ಉತ್ಸವಕ್ಕೆ ಉಡುಪಿ ವೇದಿಕೆಯನ್ನೊದಗಿಸಿತು. ನಿಸ್ಸಿಮ ಎಜಿಕಲ್, ಲಂಕೇಶ್, ಸುಮತೀಂದ್ರ ನಾಡಿಗ, ಯಶವಂತ ಚಿತ್ತಾಲ, ವೈ. ಎನ್. ಕೆ., ಎಂ. ಜಿ. ಕೃಷ್ಣ ಮೂರ್ತಿ, ಮುಂತಾದ ನವ್ಯಕವಿ ಕಥೆಗಾರರೂ, ವಿಮರ್ಶಕರೂ ಸೇರಿ ಕೆಲವು ಕೃತಿಗಳನ್ನು ಚರ್ಚಿಸಿದರು. ಓದಿದ ಒಂದು ಉತ್ತಮ ಸಂಕಲನ ಕರ್ನಾಟಕ ಸಂಘದ ಹೆಸರಿನಲ್ಲಿ ಪೈ ಬಂಧುಗಳ ಮಣಿಪಾಲ ಪ್ರೆಸ್ಸಿನ ಕೃಪೆಯಿಂದ ಪ್ರಕಟವಾಯಿತು. ಕಲ್ಕತ್ತೆಯ ರೈಟರ್ಸ್ ವರ್ಕ್‌ಶಾಪ್ ವತಿಯಿಂದ ಪ್ರಕಟಿತವಾದ ಅಡಿಗರ ಆಯ್ದ ಕವನಗಳ ಇಂಗ್ಲೀಷ್ ಅನುವಾದವೂ ಅಂದೇ ಬಿಡುಗಡೆ ಹೊಂದಿತು. ಇದಲ್ಲದೆ 'ಆಯ್ದ ಕವನಗಳು' ಎಂಬ ಹೆಸರಲ್ಲಿ ಅಡಿಗರ ಒಂದು ಉತ್ತಮ ಕವನ ಸಂಕಲನವನ್ನು ಅಕ್ಷರ ಪ್ರಕಾಶನದವರು ಈ ಉತ್ಸವದ ಸಂದರ್ಭದಲ್ಲಿಯೇ ಪ್ರಕಟಿಸಿದರು. ಸೆಮಿನಾರಿನಲ್ಲಿ ಎಂ. ಜಿ. ಕೃಷ್ಣ ಮೂರ್ತಿ ಕಾನೂರು ಹೆಗ್ಗಡಿತಿ ಕುರಿತ ಒಂದು ಉತ್ತಮ ಪ್ರಬಂಧ ಓದಿದರು. ಒಬ್ಬಿಬ್ಬರು ಚೆನ್ನಾಗಿ ಮಾತನಾಡಿದರು. ಎಜಿಕಲ್ ಅವರ ಹೆಚ್ಚಿನ ಚರ್ಚೆ ಅವರ ವಿವರ ತಿಳಿಯದೆ ಆಗಾಗ ತಮ್ಮ ವಿಚಾರವನ್ನು ಸಂಬಂಧ ಇದ್ದೂ ಇರದೆಯೂ ಮಂಡಿಸುತ್ತಿದ್ದರು. ಚರ್ಚಾಳುಗಳಿಗೆ ಸ್ವತಃ ಹೇಳುವುದೇನಿಲ್ಲವಾದರೂ ಚರ್ಚೆಯು ಸಲುವಾಗಿ ಚರ್ಚೆ ನಡೆಯಿತು.

ಅಡಿಗರ ಐವತ್ತರ ಹುಟ್ಟುಹಬ್ಬ ಮಾತ್ರ ನಮ್ಮ ಉಡುಪಿಯ ಇತಿಹಾಸದಲ್ಲಿ ನಡೆಯದ ರೀತಿಯಲ್ಲಿ ನಡೆಯಿತು. ಹೆಸರಿಗೆ ಮಾತ್ರ ನಾನು ಪುರೋಹಿತನಾಗಿದ್ದ ಈ ಉತ್ಸವದಲ್ಲಿ ನಾನು ಬೇರೆಯವರಿಗೆ ವಹಿಸಿಕೊಟ್ಟ ಸ್ವಾತಂತ್ರ್ಯ ಹೆಚ್ಚಾಯಿತೆಂದು ನನಗೆ ಆಮೇಲೆ ವಿಷಾದವೆನಿಸಿತು.ಉಡುಪಿಯಲ್ಲೇ ಬಹುಜನಕ್ಕೆ ಆಮಂತ್ರಣವಿರಲಿಲ್ಲ. ಹೊರಗಿನ ಊರವರಿಗೂ ಹೆಕ್ಕಿ ಹೆಕ್ಕಿ 'ಅವಕಾಶ' ನೋಡಿ ಆಮಂತ್ರಣ ಕೊಟ್ಟಿರಲಾಗಿ ಒಬ್ಬ ಮಹಾಕವಿಯ ಹುಟ್ಟು ಹಬ್ಬದ ಸಂದರ್ಭದಲ್ಲಿ ಎದ್ದು ತೋರಬೇಕಾದ ಉಲ್ಲಾಸಮಯ ವಾತಾವರಣದ ಬದಲು ಯಾವುದೋ ಅನಗತ್ಯವಾದ ಗಂಭೀರ ವಾತಾವರಣ ನಿರ್ಮಿತವಾಗಿತ್ತು. ಇದನ್ನೇ ಆಮೇಲೆ ನಿರಂಜನ ಉಡುಪಿಯ 'ನವಮಠ' ಎಂದು ಕರ್ಮವೀರದಲ್ಲಿ ಟೀಕಿಸಿದರು. ಮಹಾಕವಿಯೊಬ್ಬನನ್ನು ಅವನ ಸ್ನೇಹಿತರೇ ಕರಡಿಗೆಯೊಳಗೆ ಹಾಕಿಡುವ ಈ ವಿಷ್ಕಂಭಕದಲ್ಲಿ ನಾನೂ ಸೇರಿಕೊಂಡೆನಲ್ಲ ಎಂದು ದುಃಖವಾಯಿತು. ಕವಿಗಳು ಮಾರ್ಕೇಟಿನ ಸರಕಲ್ಲವಾದರೂ ಯಾವುದೋ ಒಂದು ಮುಹೂರ್ತ ಅವರ ಕವಿತೆಯನ್ನು ಅರ್ಥಮಾಡಿಕೊಳ್ಳದವರೂ ಸೇರಿ, ಮಹತ್ತನ್ನು ಗುರುತಿಸಬಲ್ಲವರೆಲ್ಲರೂ ಪರಸ್ಪರ ಭೇದ ಮರೆತು ಪೂರ್ವಗ್ರಹ ಬಾಧ ತೊರೆದು ಸಮಾನ ವೇದಿಕೆಯಲ್ಲಿ ಮಿಲನವಾಗುವುದು ಸಾರ್ವಜನಿಕ ಜೀವನವೆಲ್ಲ ಗುಂಪುಗಾರಿಕೆಯಿಂದ ಕಲುಷಿತವಾಗಿರುವ ಈ ಕಾಲದಲ್ಲಿ ಆರೋಗ್ಯವರ್ಧಕವೆಂದು ಬಗೆದವನು ನಾನು. ಶ್ರೀ ಅಡಿಗರಿಗೆ ಆ ಎರಡು ಮೂರು ದಿನವೂ ಮೈ ಚೆನ್ನಾಗಿದ್ದಿಲ್ಲವಾದರೂ ಸ್ನೇಹಶೀಲರಾದ ಅವರು ಸಾಕಷ್ಟು ಕಾಲ ಚರ್ಚೆಯಲ್ಲಿ ಕೂತು ಉತ್ಸವವನ್ನು ನಡೆಸಿಕೊಟ್ಟು ಸಮರ್ಪಕವಾದ ಉತ್ತರವನ್ನಿತ್ತು. ಉತ್ಸವಕ್ಕೆ ಅರ್ಥ ಹಚ್ಚಿದರು. ಊರವರೆಲ್ಲಾ ಆ ಮೇಲೆ ಪತ್ರಿಕೆಗಳಲ್ಲಿ ತಿಳಿದು ಸಂತೋಷ ಪಡಬೇಕಾಯಿತು.

ಅಡಿಗರ ಸನ್ಮಾನ ಪ್ರಸಂಗದಲ್ಲಿ ಒಂದು ಸ್ವಾರಸ್ಯಕರವಾದ ಘಟನೆ ನಡೆಯಿತು. ಸನ್ಮಾನಕ್ಕೆ ಮೊದಲು ನಡೆಯಬೇಕಾದ ಯಾವುದೋ ಮಠದ ಸಭೆಗೆ ಬೇಂದ್ರೆಯವರನ್ನು ಒಪ್ಪಿಸಬೇಕೆಂದು ಪೇಜಾವರ ಶ್ರೀಗಳು ನನ್ನ ಹತ್ತಿರ ಹೇಳಿದರು. ಧಾರವಾಡಕ್ಕೆ ಹೋಗಿ ಬೇಂದ್ರೆಯವರನ್ನು ಒಪ್ಪಿಸಿ, ಯುಕ್ತ ಏರ್ಪಾಟು ಮಾಡಿ, ನಾನು ಮೈಸೂರಿಗೆ ಹೋದೆ. ಈ ನಡುವೆ ಸನ್ಮಾನ ಸಮಿತಿಯ ಕಾರ್ಯದರ್ಶಿ 'ನೀವು ಬಂದವರು ಹೇಗೂ ಇರುತ್ತೀರಿ, ಅಡಿಗರ ಸನ್ಮಾನದ ಅಧ್ಯಕ್ಷತೆ ವಹಿಸಿಬಿಡಿ' ಎಂಬರ್ಥದ ತಂತಿ ಬೇಂದ್ರೆಯವರಿಗೆ ಕಳಿಸಿದ... ಬೇಂದ್ರೆಯವರಿಗೆ ಮನಸ್ಸು ವ್ಯಗ್ರವಾಯಿತು. ಉಗ್ರವೂ ಆಯಿತು. ನೇರವಾಗಿ ಅಡಿಗರ ಸನ್ಮಾನಕ್ಕೆ ಕರೆದರೆ ಎಲ್ಲಿ ತಾನು ಬರಲಾರೆ ನೇನೋ ಎಂಬ ಶಂಕೆಯಿಂದ ಈ ಆಟ, ಆಟಮಟ ಹೂಡಿದ್ದಾರೆಂದು ಅವರಿಗೆ ನನ್ನ ಮೇಲೆ ಸಂದೇಹ, ಮುನಿಸು ಎರಡೂ ಉಕ್ಕಿತು. ನಾನು ಮೈಸೂರಿನಿಂದ ಮನೆಗೆ ಮರಳಿದಾಗ ಒಂದು ತಣ್ಣಗಿನ ಕನ್ನಡ ತಂತಿ ಕಾದಿತ್ತು: 'ಶ್ರೀಕೃಷ್ಣನಿಗೆ ನಮಸ್ಕಾರ, ಸ್ವಾಮಿಗಳಿಗೆ ಪ್ರಣಾಮ, ಅಡಿಗರಿಗೆ ಆಶೀರ್ವಾದ – ಬೇಂದ್ರೆ' ನಾನು ಬರುವ ತನಕ ಇದರರ್ಥ ಯಾರಿಗೂ ಆಗಲಿಲ್ಲ. ನನಗೆ ತಂತಿ ನೋಡಿದ ತಕ್ಷಣ ಇದು ಯಾರ ತುಂಟತನದ ಪರಿಣಾಮವೆಂದು ತಿಳಿದೇಹೋಯಿತು. ಇನ್ನಾದರೂ ಸ್ವಾಮಿಗಳು ಬಿಡಬೇಕೆ? ಅವರ ಧಾರವಾಡದ ಶಿಷ್ಯರನ್ನೆಲ್ಲ ಬೇಂದ್ರೆಯವರ ಹತ್ತಿರ ಅಟ್ಟಿದರು. ಆದರೆ ಬೇಂದ್ರೆ ಜಗ್ಗಲಿಲ್ಲ: ಭಟ್ಟರು ಬಂದವರು ಒಂದು ಮಾತು ಯಾತಕ್ಕಾದರೂ ಅನ್ನಲಿಲ್ಲ? ಅಡಿಗರು ಯಾರು? ನನಗೇನು ಅರಿಯದವರೇ? ಅವರ ಸನ್ಮಾನಕ್ಕೆ ಹೋಗುವುದು ನನಗೆ ಇಷ್ಟವಿರಲಾರದು ಎಂದು ಈ ರೀತಿ ಒಳಸಂಚೀಕೆ ಮಾಡಬೇಕು? ನನ್ನ ಮೇಲೆ ಸಂಶಯ ಯಾಕೆ ಮಾಡಿದರು? ನಾನು ಸುತರಾಂ ಬರಲಾಗುವುದಿಲ್ಲ' ಎಂದು ಬಿಟ್ಟರು. ಹಳೆ ತಲೆಮಾರಿನ

ಬರೆಯುವ ಔದಾರ್ಯವನ್ನರಿಯಲಾರದ ಒಬ್ಬ ಮಹನೀಯನ ಉಪಟಳದಿಂದ ಇದೊಂದು ಪ್ರಮಾದವೇ ಆಯಿತು. 'ಅಧ್ಯಕ್ಷತೆಗೆ ಕೊನೆಗಳಿಗೆಗೆ ಕಾರಂತರೂ ಒಪ್ಪಲಾರರು, ಅಲ್ಲದೆ ಈಗ ಅವರು ತಮ್ಮ ಬ್ಯಾಲೆ ಪ್ರದರ್ಶನದ ತರಾತುರಿಯಲ್ಲಿರುತ್ತಾರೆ' ಎಂದು ವಾಸ್ತವ ಸಂಗತಿ ಹೇಳಿದರೂ ಕೇಳದೆ ನನ್ನ ಕಾರ್ಯದರ್ಶಿ ಕಾರಂತರಿಗೂ ಏನೇನೋ ಪತ್ರ ಬರೆದು ಅವರಿಂದ ನಾವೆಲ್ಲ ಬೈಸಿಕೊಳ್ಳುವಂತೆ ಮಾಡಿದ. ಉತ್ಸಾಹಕ್ಕೂ ಸ್ವಲ್ಪ ಮಿತಿ ಇರಬೇಕೆಂದು ನನಗೆ ಅರ್ಥವಾಗುತ್ತಿತ್ತು.

ಕನಕದಾಸ ಶತಮಾನೋತ್ಸವ ಸಂದರ್ಭದಲ್ಲೂ ಇಂಥದೇ ಇಕ್ಕಟ್ಟಿನ ಪ್ರಸಂಗ ಉದ್ಭವಿಸಿತ್ತು. ಬೇಂದ್ರೆಯವರಿಗೆಂದೇ ನಾನು ಕಳಿಸಿದ ವಾಹನದಲ್ಲಿ, ಸಹಕಾರ್ಯದರ್ಶಿ ಇತರ ಕೆಲವರನ್ನು ತುಂಬಿಸಿ ಸ್ವತಃ ಕಾದು ಕೂತಿದ್ದ ಬೇಂದ್ರೆ ದಂಪತಿಗೆ ಸ್ಥಳವಿಲ್ಲದೆ ಬೇಂದ್ರೆ ಅವರನ್ನು ಬಿಟ್ಟೇ ಬರಬೇಕಾಯಿತು. ಉದ್ದಕ್ಕೂ ಉಸಿರು ಹಿಡಿದುಕೊಂಡು ಬಂದ ಬೇಂದ್ರೆಯವರು ನಮ್ಮ ಮನೆ ಮುಂದೆ ಇಳಿದಾಗ ಕಾದಕೆಂಡವಾಗಿದ್ದರು. ಆ ಮೇಲಿನ ಮೂರು ದಿನವೂ ಅವರನ್ನು ಉಪಶಮನಗೊಳಿಸುವುದರಲ್ಲಿಯೇ ಕಳೆಯಬೇಕಾಯಿತು. ಅಲ್ಲಿಂದ ಕೆಲವೇ ತಿಂಗಳಲ್ಲಿ ಶ್ರೀಮತಿ ಬೇಂದ್ರೆ ತೀರಿಕೊಂಡಾಗಲಂತೂ, ಬೇಂದ್ರೆಯವರಿಗೆ ನಮ್ಮ ಅಪರಾಧ ಅಕ್ಷಮ್ಯವೆನಿಸಿತು. ಜಿ. ಬಿ. ಜೋಶಿ ಏರ್ಪಡಿಸಿದ ಗ್ರಂಥ ಉದ್ಘಾಟನೆ ಉತ್ಸವಕ್ಕೆ ಬಂದಾಗ ಅವರ ಮೊದಲ ವಾಕ್ಯ ನೆನಪು – ತಮ್ಮ ಧರ್ಮಪತ್ನಿಯದೇ ಆಗಿತ್ತು. 'ಈ ಸಾರಿ ನಾನೊಬ್ಬನೇ ಬಂದೆ. ಇದೇ ದಿವಸ ಬಂದೆ' ಎನ್ನುವಾಗ ನನಗೆ ತಬ್ಬಿಬ್ಬಾಯಿತು. ನಮ್ಮ ಈ ಸಾಹಿತ್ಯದ ಪಾರುಪತ್ಯದಲ್ಲಿ ಅದೆಷ್ಟು ಜೀವಗಳಿಗೆ ನೋವು ಆಗಬೇಕು?

ಆದರೆ ಮೋಜಿನ ಘಟನೆ ನಡೆದಿದ್ದು ನಮ್ಮ ಮಣಿಪಾಲ ಸಮ್ಮೇಳನದಲ್ಲಿ. ಸಮ್ಮೇಳನ ಮುಗಿದ ಮರುದಿನ ಆಗಮಿಸಿದ ಹತ್ತೈವತ್ತು ಸಾಹಿತಿಗಳನ್ನು ನನ್ನ ಮನೆಗೆ ಬೆಳಗಿನ ಉಪಹಾರಕ್ಕೆ ಕರೆದಿದ್ದೆ. ಬೇಂದ್ರೆಯವರನ್ನೂ ಅವರ ಪತ್ನಿಯನ್ನೂ ಅವಸರಿಸಿ ವ್ಯಾನಿನೊಳಗೆ ತುಂಬಿ, ತಂದುಬಿಟ್ಟೆ. ಈ ಮಧ್ಯೆ ಊರಿಗೆ ಹೊರಟು ನಿಂತ ಅವರ ಟ್ರಂಕು ಬೆಡ್ಡಿಂಗ್ ಕಾಣೆಯಾಯಿತು. ಅತಿಥಿ ಗೃಹ, ಉಡುಪಿ ಬಸ್ ಸ್ಟ್ಯಾಂಡ್, ಎಲ್ಲಿ ಹುಡುಕಿದರೂ ಯಾರನ್ನು ಕೇಳಿದರೂ ನೂರಾರು ಮಂದಿ ಹೊರಡುವ ಗದ್ದಲದಲ್ಲಿ ಏನೆಂದು ಕೇಳಿದರೂ ಗೊತ್ತಾಗದು. ಬೇಂದ್ರೆಯವರು ಪ್ರಸನ್ನ ರೂಪ ಕಳಚಿ ಸಿಡುಕಿನಿಂದ 'ಚಹಾ ಎಲ್ಲಾದರೂ ಸಿಗುತ್ತಿತ್ತು. ಟ್ರಂಕೆಲ್ಲಿ ಸಿಗಬೇಕು?' ಎಂದರು. 'ಈ ಒಳಗಿನ ಬೇಂದ್ರೆ ಹೊರಗಿನ ಬೇಂದ್ರೆಗೆ ಅಂತಾನೆ – ಯಾಕೀ ಚಹಾ ಚಾಪಲ್ಯಕ್ಕೆ ಬಲಿಬಿದ್ದನೋ?' ಒಂದೆರಡು ತಾಸಿನ ಅನ್ವೇಷಣೆ ಮುಗಿದು, ನಿರಾಶರಾಗಿ ನಾವು ಮಣಿಪಾಲದ ಬಸ್ ಸ್ಟ್ಯಾಂಡಿಗೆ ಹೋದಾಗ ಟ್ರಂಕ್ ಸಿಕ್ಕಿತು – ಒಬ್ಬ ಮುದಿ ಕೂಲಿ ಬೇಂದ್ರೆಗೆ ಕಾದು 'ಇನ್ನೂ ಯಾಕೆ ಬರಲಿಲ್ಲಾಂವಾ ಹುಬ್ಬಳ್ಳಿಯಾಂವ' ಅಂತ ಅಂದುಕೊಂಡು ಕಸಬಿಯಾಂಕನಂತೆ ಟ್ರಂಕಿನ ಬಳಿ ಆಸೀನ – ಉದಾಸೀನ – ನಾಗಿದ್ದ; ಬದುಕಿ ಪಾರಾದ.

ಇಷ್ಟಾದರೂ ಕಾರಂತರಿಗೆ ಸರಿಯಾದ ಒಂದು ಅಭಿನಂದನ ಗ್ರಂಥವನ್ನು ತರಲಿಲ್ಲವಲ್ಲಾ ಎಂಬ ವ್ಯಥೆ ಉಳಿದೇ ಉಳಿಯಿತು. ಕಾರಂತ ಅರವತ್ತರ ಉತ್ಸವದ ಪುಣ್ಯಫಲವೇನೋ ಎಂಬ ಹಾಗೆ ಆ ಉತ್ಸವ ಕಳೆದ ಒಂದು ತಿಂಗಳಲ್ಲಿ ನಾನು ಇಟಲಿಗೆ ಯಾತ್ರೆ ಹೊರಟೆ. ಎಂಟು ತಿಂಗಳು ಕಳೆದು ತಾಯ್ನಾಡಿಗೆ ಮರಳಿದಾಗ ಕಾಲೇಜಿನಲ್ಲಿ ನನ್ನ ಹೊಣೆ ಪ್ರಾಧ್ಯಾಪಕತನದಿಂದ ಆಡಳಿತಕ್ಕೆ ವರ್ಗವಾಯಿತು. ಮತ್ತೊಂದು ವರ್ಷದಲ್ಲಿ ಪ್ರಿನ್ಸಿಪಾಲಗಿರಿಯ ಕಿರಿಕಿರಿ ತೊಡಗಿತು. ಅಭಿನಂದನ ಗ್ರಂಥ ಯಾವಾಗ ಹೊರಡಿಸೋಣ ಎಂಬ ಯೋಚನೆ ಪ್ರತಿವರ್ಷವೂ ಹುಟ್ಟಿ ಹಿಂದೆ ಸರಿಯುತ್ತಿತ್ತು. ಅದೇಕೋ 1969ನೆ ಇಸವಿಯಲ್ಲಿ ಕಾರಂತರು ನಾನು ನಿಮ್ಮಲ್ಲಿ ಒಂದು ಯಕ್ಷಗಾನ ಸೆಮಿನಾರು ಮಾಡುತ್ತೇನೆ – ಅಕ್ಟೋಬರ ಕೊನೆಯವಾರ ಎಂದಾಗ ಅಭಿನಂದನ ಗ್ರಂಥದ ಆಸೆ ಮತ್ತೆ ಚಿಗುರಿತು. ಈ ಸಲ ಗ್ರಂಥಕ್ಕೋಸ್ಕರ ಒಂದು – ಉತ್ಸವ ಮಾಡೋಣ ಎಂದು ಮೊದಲ ಪ್ರಕಟಣೆ ಹೊರಡಿಸಿದೆ. ನಮ್ಮ ಜಿಲ್ಲೆಯ ದೈನಿಕದಲ್ಲಿ ಇದಕ್ಕೆ ಒಂದು ಪ್ರತಿಕೂಲ ಪ್ರತಿಕ್ರಿಯೆಯೂ ಹೊರಟಿತು. ಅರವತ್ತೂ ಅಲ್ಲ ಎಪ್ಪತ್ತೂ ಅಲ್ಲ ಅದರ ನಡುವಣ ವರ್ಷ ಮಾಡಬೇಕೆ? ಎಂಬ ವ್ಯಂಗೋಕ್ತಿಯನ್ನು ಒಬ್ಬ ಕೈಲಾಗದ ಮಹಾನುಭಾವ ತೋಡಿಕೊಂಡ. ಆದರೆ ನನ್ನ ನಂಬಿಕೆ ಧೈರ್ಯ, ಆಸರೆ ಮುಂಬಯಿ ಮಿತ್ರರು, ಕಾರಂತರ ಅಪಾರ ಕನ್ನಡಿಗ ಭಕ್ತವೃಂದದ ಮತ್ತು ನನ್ನ ಆಪ್ತ ಸಹೋದ್ಯೋಗಿ – ವಿದ್ಯಾರ್ಥಿ ಮಿತ್ರರು. ಏಪ್ರಿಲ್ ಮೇ ಸುಮಾರಿಗೆ ಅಭಿನಂದನ ಗ್ರಂಥಕ್ಕೆ ಲೇಖನ ಬೇಡಿ ವಿಮರ್ಶಕರಿಗೆ ಪತ್ರ ಬರೆದೆ. ರಾಯಲ್ ಅಷ್ಟದಳ ಗಾತ್ರದ 600 ಪುಟಗಳ ಬೃಹದ್ ಗಾತ್ರದ ಗ್ರಂಥದ ರಂಗೋಲೆ ಹಾಕಿದ ನನಗೆ ಮೂರು ತಿಂಗಳಲ್ಲಿ ಕೇವಲ ಮೂರು ಮಹನೀಯರಿಂದ ಲೇಖನಗಳು ಕರಗತವಾದವು. ಗೌರೀಶ ಕಾಯ್ಕಿಣಿ, ಬಿ.ಎಚ್. ಶ್ರೀಧರ ಮತ್ತು ಎಂ. ಜಿ. ಕೃಷ್ಣಮೂರ್ತಿ. ಎದೆ ನಡುಗಿತು. ಪುಟ ತುಂಬಿಸುವ ಸಮಸ್ಯೆ ಭೂತಾಕಾರವನ್ನು ತಳೆದು ನಿತ್ಯವೂ ಇರುಳಿನಲ್ಲಿ ಬಾಧಿಸತೊಡಗಿತು. ಲೇಖಕರು ಕೈ ಕೊಟ್ಟರೆ ನಾನು ಕೆಟ್ಟೆನಲ್ಲಾ ಎಂದು ಪತ್ರವ್ಯವಹಾರವನ್ನು ಇಮ್ಮಡಿ ವೇಗದಿಂದ ಮಾಡಲಾರಂಭಿಸಿದೆ. ಒಬ್ಬರು ಇಲ್ಲವೆಂದಾಗ ಇನ್ನೊಬ್ಬರು, ಅವರೂ ಇಲ್ಲವೆಂದರೆ

ಮೂರನೆಯವರು ಹೀಗೆ ಬೆನ್ನು ಹತ್ತಿದೆ. ಕೊನೆಯ ದಿನವನ್ನು ನಾಟಕ ಕಂಪನಿಯವರಂತೆ ಮೇ 30ರಿಂದ ಜುಲೈ 30, ಸೆಪ್ಟಂಬರ್ 15 ಹೀಗೆ ಮುಂದೂಡಿಕೊಂಡು ಹಾಗೂ ಹೀಗೂ ಸೆಪ್ಟಂಬರ 15ರ ವೇಳೆಗೆ ಗ್ರಂಥದ ಸ್ಥೂಲ ರೂಪರೇಖೆಯ ಹೂರಣ ಅಷ್ಟಿಷ್ಟು ತುಂಬಿಸಿಕೊಂಡೆ.

'ಕಾರಂತ ಪ್ರಪಂಚ' ಎಂದು ಈ ಹೆಸರಿಟ್ಟ ಈ ಅಭಿನಂದನ ಗ್ರಂಥದ ನನ್ನ ಮಸ್ತಿಷ್ಕದೊಳಗಿನ ಭ್ರೂಣ ರೂಪ ಕೈಕಾಲುಗಳನ್ನು ತಳೆದು ಒಂದೊಂಭತ್ತು ತಿಂಗಳಲ್ಲಿ ಜನ್ಮ ತಾಳಲು ಸಿದ್ಧವಾಯಿತು. ವ್ಯಕ್ತಿ ಪ್ರಪಂಚ, ಕಲಾಪ್ರಪಂಚ, ಸಾಹಿತ್ಯ ಪ್ರಪಂಚ, ಕಾದಂಬರಿ ಪ್ರಪಂಚ ಮತ್ತು ಕೃತಿ – ಲೇಖನದರ್ಶಿಕೆ – ಹೀಗೆ ಐದು ವಿಭಾಗಗಳಲ್ಲಿ ಲೇಖನಗಳು ಬಂದುವು: ಹಿರಿಯರ ಹರಕೆ, ಓರಗೆಯವರ ಹಾರೈಕೆ, ಬಂಧುಮಿತ್ರರ ನೆನಪುಗಳು, ರಸಪ್ರಸಂಗಗಳು ಮತ್ತು ಸಂದರ್ಶನ ಸೇರಿದ ವ್ಯಕ್ತಿಪ್ರಪಂಚ ಅನ್ಯಾದೃಶ್ಯವಾಗಿ ಮೂಡಿಬಂದಿತು. ಇದರಲ್ಲಿನ 'ರಸ ಪ್ರಸಂಗ'ಗಳ ಸಂಪಾದನಾ ಕಾರ್ಯ ಗೆಳೆಯ ಜಿ. ಟಿ. ನಾರಾಯಣ ರಾಯರು ಸಂತೋಷದಿಂದ ಮಾಡಿದರು. ಸಂಪಾದಕ ಮಂಡಳಿಯ ವಿ. ಎಂ. ಇನಾಂದಾರರರೂ ನಾನೂ ಒಂದು ದಿನ ಪುತ್ತೂರಿಗೆ ಹೋಗಿ ಮೂರುವರೆ ತಾಸು ಕಾರಂತರ ಸಂದರ್ಶನವನ್ನು ಧ್ವನಿಮುದ್ರಿಸಿಕೊಂಡೆವು. ಈ ಧ್ವನಿಮುದ್ರಣವನ್ನು ಬರೆಹವಾಗಿ ಮಾರ್ಪಡಿಸುವಲ್ಲಿ ಇನಾಂದಾರರು ಪಟ್ಟ ಶ್ರಮವೆಷ್ಟೋ ತಿಳಿಯದು. ಇನಾಂದಾರರು ಕೇಳಿದ ಸಾಹಿತ್ಯಕ ಪ್ರಶ್ನೆಗಳಿಗೆ ನೇರವಾಗಿ ಮುಕ್ತಮನಸ್ಸಿನಿಂದ ಕಾರಂತರು ಉತ್ತರಿಸುತ್ತಿದ್ದರು. ಇಷ್ಟು ವಿವರವಾದ ಸಾಹಿತ್ಯ ಸಂದರ್ಶನ ಬೇರೆ ಯಾವ ಸಂದರ್ಭದಲ್ಲಿಯೂ ನಡೆದಿರುವಂತೆ ತೋರಲಿಲ್ಲ. ಕಲಾಪ್ರಪಂಚದಲ್ಲಿ ಕಾರಂತರ ಯಕ್ಷಗಾನ ಪ್ರಯೋಗಗಳ ಸಿದ್ಧಿ ಸಾಧನೆಗಳ ಕುರಿತು ಸಂಬಂಧಪಟ್ಟ ಸ್ನೇಹಿತರು ಪರಿಚಯವನ್ನು, ಮೌಲ್ಯ ಮಾಪನವನ್ನು ಮಾಡಿದರು. ಸಾಹಿತ್ಯ ಪ್ರಪಂಚದಲ್ಲಿ ಕಾದಂಬರಿಯನ್ನು ಹೊರತು ಇತರ ಕಾರಂತ ಸಾಹಿತ್ಯದ ಕೂಲಂಕಷ ವಿಮರ್ಶೆಯನ್ನು ಆಯಾ ಸಾಹಿತ್ಯಭಾಗದ ತಜ್ಞರಿಂದಲೇ ಬರೆಸಿದೆ. ಸುಮಾರು ನೂರಕ್ಕಿಂತಲೂ ಹೆಚ್ಚು ಪುಟಗಳಲ್ಲಿ ಕಾರಂತರ ಕಾದಂಬರಿಯ ವಿಮರ್ಶೆ ನಾನಾ ವಿಚಾರವರ್ಗದ ಲೇಖಕರು – ಎಂ.ಜಿ.ಕೃ., ಶೇಷಗಿರಿ ರಾವ್, ಜವರೇಗೌಡ, ಅನಂತಮೂರ್ತಿ, ಮೊಕಾಶಿ, ಕುರ್ತುಕೋಟಿ – ಮಾಡಿಕೊಟ್ಟರು. ಇದರೊಳಗಿನ ಒಂದು ಉಪ ವಿಭಾಗದಲ್ಲಿ ಕಾರಂತರ ಕೆಲವು ಕಾದಂಬರಿಗಳ ಮೊದಲ ವಿಮರ್ಶೆಯನ್ನು ಹೊಸದಾಗಿ ಬರೆಯಿಸಿದ ಅದೇ ಕಾದಂಬರಿಯ ವಿಮರ್ಶೆಯ ಜತೆ ತುಲನೆ ಮಾಡುವ ಅವಕಾಶ ಒದಗಿಸಿದೆ. ಉದಾ: ಮರಳಿ ಮಣ್ಣಿಗೆಯ ಕುರಿತು ಡಿ. ಎಲ್. ಎನ್. 25 ವರ್ಷ ಕೆಳಗೆ ಬರೆದ ವಿಮರ್ಶೆಯ ಬೆಂಗಡೆಯಲ್ಲಿ ಗೋಪಾಲಕೃಷ್ಣ ಅಡಿಗರು ಇಂದಿನ ಕಾಲದೃಷ್ಟಿಯಿಂದ ಬರೆದ ಸೊಗಸಾದ ತುಲನೆಯನ್ನು ಸೇರಿಸಿದೆ. 'ಕಾರಂತ ಅರವತ್ತ'ಕ್ಕೆ ಶ್ರೀನಿವಾಸ ಹಾವನೂರು ತಯಾರಿಸಿದ ಕೃತಿಸೂಚಿಯನ್ನೇ ನವೀಕರಿಸಿ, ವಿಸ್ತರಿಸಿ, ಶೇಖರ ಇಡ್ಯ ಅವರು ಒಂದು ಉತ್ತಮವಾದ ಕಾರಂತ ಕೃತಿದರ್ಶಿಕೆಯನ್ನು ಸಿದ್ಧಗೊಳಿಸಿದರು. ಚಿತ್ರಕ್ಕಾಗಿ ಹೆಬ್ಬಾರರಿಗೆ ಬರೆದೆ: 'ಕಾರಂತ ಅರವತ್ತ'ರ ಸಮಯ ಹೆಬ್ಬಾರರು ಕಾರಂತರ ತೈಲಚಿತ್ರವೊಂದನ್ನು ಬರೆದು ಅರ್ಪಿಸಿದ್ದರು. ಅದನ್ನು ತ್ರಿವರ್ಣದಲ್ಲಿಯೂ, ಈ ಸಂಪುಟಕ್ಕೆ ಬರೆದ ರೇಖಾ ಚಿತ್ರವನ್ನು ಕಪ್ಪುಬಿಳುಪಿನಲ್ಲಿಯೂ ಅಚ್ಚುಹಾಕಿಸಿದೆ. ದಿಲ್ಲಿಯಿಂದ ಟಿ. ಎಸ್. ಸತ್ಯನ್ ಅವರು ತೆಗೆದ ಕಾರಂತರ ಚಿತ್ರವನ್ನು ಶ್ರೀ ಶಾರದಾ ಪ್ರಸಾದ್ ಕಳಿಸಿಕೊಟ್ಟರು. ಯಕ್ಷಗಾನದ ಚಿತ್ರಗಳನ್ನು ಐತಾಳರಿಂದಲೂ, ಹಳೇ ಚಿತ್ರಗಳನ್ನು ಲೀಲಾ ಕಾರಂತರ ಅಲ್ಬಮಿನಿಂದಲೂ ಹೆಕ್ಕಿ ತೆಗೆದು ನನಗೆ ಬೇಕಾದ ರೀತಿಯಲ್ಲಿ ಬಳಸಿಕೊಂಡೆ. ಸೆಪ್ಟೆಂಬರ 30ಕ್ಕೆ ಆರಂಭವಾದ ಮುದ್ರಣ ಸರಿಯಾಗಿ ಒಂದು ತಿಂಗಳಲ್ಲಿ ಅಂದರೆ ಅಕ್ಟೋಬರ 30ಕ್ಕೆ ಮುಗಿದು ಪ್ರಥಮ ಪ್ರತಿ ಕೈಗೆ ಬಂದಾಗ ಸೌಂದರ್ಯ – ಗಾತ್ರ ಎರಡೂ ಅಪ್ರತಿಮವಾಗಿತ್ತು. ಪಡಿಯಚ್ಚಿನ ಪುಟಗಳೂ ಸೇರಿ ಸುಮಾರು 600 ಪುಟಗಳ 'ಕಾರಂತ ಪ್ರಪಂಚ' ಸನ್ಮಾನ ಗ್ರಂಥಗಳ ಸಾಲಿನಲ್ಲಿ ಒಂದು ದಾಖಲೆ ನಿರ್ಮಿಸಿದರೆ, ಮುದ್ರಣ ವೇಗದ ದೃಷ್ಟಿಯಿಂದ ಇನ್ನೊಂದೇ ದಾಖಲೆ ಮಾಡಿಕೊಂಡಿತು. ನನ್ನ ಸಹೋದ್ಯೋಗಿ ಗೆಳೆಯ ಶ್ರೀನಿವಾಸ ಭಟ್ಟರೂ, ತಿರುಮಲೇಶ್ವರ ಭಟ್ಟರೂ ನಟ್ಟಿರುಳ ತನಕವೂ ಕರಡು ತಿದ್ದುವ ಕೆಲಸವನ್ನು ಮುದ್ರಣಾಲಯದ ಕಚೇರಿಯಲ್ಲಿ ಅಚ್ಚಿನ ಮೊಳೆಗಳ ಕೋಣೆಯಲ್ಲಿ, ಯಂತ್ರಗಳ ನಡುವೆ ನೆರವೇರಿಸಿ ದಣಿದರು. ಕಾಗದದ ವೆಚ್ಚವೇ ಐದು ಸಾವಿರದಷ್ಟು ಬಂದಿತ್ತು. ಉಳಿದ ವೆಚ್ಚಕ್ಕೆ ಗೀತಾ ಬುಕ್ ಹೌಸ್‌ನ ಸತ್ಯನಾರಾಯಣ ಸಹೋದರರು ಸಹಕರಿಸಿದ್ದರಿಂದ ಮರ್ಯಾದೆ ಉಳಿಯಿತು. ಇಲ್ಲವಾದರೆ ಸನ್ಮಾನ ಸಮಿತಿಯ ಧನಸಂಗ್ರಹದಲ್ಲಿ ಅರ್ಧಾಂಶ ಗ್ರಂಥಕ್ಕೆ ಮುಡಿಪಾಗುತ್ತಿತ್ತು.

ಅಕ್ಟೋಬರ 31ರಿಂದ ನವಂಬರ 4ರ ವರೆಗೆ ರಾಜ್ಯದ ಸಂಗೀತ ನಾಟಕ ಏಕಾಡೆಮಿ ಆಶ್ರಯದಲ್ಲಿ ಕಾರಂತರೇ ಒಂದು ಸೆಮಿನಾರು ನಡೆಸುವ ನಿರ್ಧಾರ ಮಾಡಿದ್ದರೆಂದು ಮೊದಲೇ ಹೇಳಿದೆನಲ್ಲವೆ? ಕಾರಂತರು ಕ್ರಿಯಾಶೀಲರಾಗಿರುವ ಈ ಸುವರ್ಣ ಸಂದರ್ಭವನ್ನೇ ನಮ್ಮ ಅಭಿನಂದನ ಗ್ರಂಥ ಸಮರ್ಪಣ ಉತ್ಸವಕ್ಕೆ ಯಾಕೆ ಬಳಸಿಕೊಳ್ಳಬಾರದೆಂದು ಯೋಚಿಸಿ ನವಂಬರ 5 – 6 ದಿನಾಂಕಗಳನ್ನು ನಾವು ಆರಿಸಿದೆವು. ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಭಾಗವತರು, ನೃತ್ಯವಾದಕ ಕುಶಲಿಗಳು – ಎಲ್ಲರೂ ಕಾರ್ಯನಿರತ ಯಕ್ಷಗಾನ ವ್ಯವಸಾಯಿ

ಗಳು – ಸೇರುವ ಈ ಸೆಮಿನಾರಿಗೆ ಐವತ್ತು ಅರವತ್ತು ಮಂದಿ ಬಂದಾರು. ಊಟಕ್ಕೆ ನೂರೆಲೆ ಆದೀತು ಎಂದು ಕಾರಂತರ ನಿರೀಕ್ಷೆ ಇತ್ತು; ಆದರೆ ಆ ವರ್ಷ ವ್ಯವಸಾಯಿಗಳಲ್ಲಿ ಉತ್ಸಾಹ ಅತಿಶಯವಾಗಿತ್ತು. ನೂರು ಮಂದಿ ಬಂದರು. ಊಟದ ಮನೆ ಎಲೆ ಸರಬರಾಜು ನೂರರಿಂದ ಇನ್ನೂರು. ಕೊನೆಯ ದಿನಕ್ಕೆ ಮುನ್ನೂರು ಆಗಿ ಬಿಟ್ಟಿತು. ಅಳಿಯನ ಒಂದೆ ಗೆಳೆಯನಂತೆ ಒಬ್ಬೊಬ್ಬ ವ್ಯವಸಾಯಿಗೆ ಅವರ ಅಭಿಮಾನಿ (ಫ್ಯಾನ್ಸ್)ಗಳ ಗುಂಪು ಬೇರೆ ಇತ್ತಲ್ಲವೆ? ಊಟದ ಹೊತ್ತಿಗೆ ಅವರನ್ನು ಬೇರ್ಪಡಿಸಲು ಸಾಧ್ಯವೇ? 'ಸಾಧ್ಯ'ದ ಪ್ರಶ್ನೆಯೇ ಬೇಕರಲಿಲ್ಲ. ನಾವು ಕಾರಂತರಿಗೆ ಹೇಳದೆಯೆ ಸೆಮಿನಾರಿನ ಭೋಜನ ಪರಿಷ್ಕಾರವೂ. ವ್ಯವಸಾಯಿಗಳ ಮನೋಧರ್ಮದಂತೆ ಪುಷ್ಕಳವೂ ಆಗತಕ್ಕದ್ದೆಂದು ನಮ್ಮೊಳಗೆಯೆ ನಿಶ್ಚಯ ಮಾಡಿ ಸಿದ್ಧರಾಗಿದ್ದೆವು. ಕಾಲೇಜಿಗೆ ಮಧ್ಯಾವಧಿ ಬಿಡುವಾದ್ದರಿಂದ ನಮ್ಮ ಹಾಸ್ಟೆಲುಗಳಲ್ಲಿ ಉಳಕೊಳ್ಳುವ ವ್ಯವಸ್ಥೆಯೂ ಚೆನ್ನಾಗಿ ಆಯಿತು.

ಎಲ್ಲಕ್ಕೂ ಹೆಚ್ಚಾಗಿ ಸೆಮಿನಾರಿಗೆ ಕಳೆಕಟ್ಟಿದ್ದು ಕಾರಂತರ ಯಥಾಪೂರ್ವ ನಿರ್ದೇಶನ. ಅದೆಷ್ಟು ಪಿಚಾರದ ಸುರುಳಿಗಳನ್ನು ತಮ್ಮ ತಲೆಯಲ್ಲಿ ಬಚ್ಚಿಟ್ಟಿದ್ದಾರೋ ತಿಳಿಯದು. ಯಕ್ಷಗಾನದ ಸಂಗೀತ, ನೃತ್ಯ – ವಾದನ ಈ ಮೂರರಲ್ಲೂ ವ್ಯವಸಾಯಿಗಳು ನಿರ್ದಾಕ್ಷಿಣ್ಯವಾಗಿ (ತನ್ನಂತೆಯೆ) ತಮ್ಮ ವಾದವನ್ನು ಮುಂದಿಡತಕ್ಕದ್ದು. ಎಲ್ಲ ಪ್ರತಿನಿಧಿಗಳಿಗೂ ಸರಿಯಾಗಿ ಕಾಲಾವಕಾಶ ಕೊಡತಕ್ಕದ್ದು. ಪ್ರತಿ ಮಾತುಗಾರನಿಗೂ, ಪ್ರದರ್ಶಕನಿಗೂ ಸಮಯದ ಮಿತಿ ಇರತಕ್ಕದ್ದು, ಸೆಮಿನಾರಿನ ಆರಂಭ, ಕೊನೆ ಕ್ಲಪ್ತ ಕಾಲಕ್ಕೆ ಆಗತಕ್ಕದ್ದು – ಈ ಪರಿಯ ಶಿಸ್ತಾವ ದೇವರೊಳು ನಾ ಕಾಣೆ ಎಂಬಂತಾಯಿತು. ಮುಂಜಾವದ ಕಡುಬು – ದೋಸೆ – ಇಡ್ಲಿಗಳ ಹೊಡತಕ್ಕೆ ತಾಳಲಾರದೆ ಎರಡು ಫರ್ಲಾಂಗು ದೂರದ ವಸತಿ ಗೃಹದಿಂದ ಏದುತ್ತ ಏದುತ್ತ ಧಾವಿಸುವ ಕಲಾವಿದರ ಪಾಡು ನೋಡುವಂತಿತ್ತು. – ಹುಲಿಯ ಬಾಯಿಗೆ ಬೀಳಲು ಯಾರು ಬಯಸುತ್ತಾರೆ? ಈ ಸೆಮಿನಾರಿನಲ್ಲೇ ಹೊಸತಾಗಿ ಕಾರಂತರು ಕೆಲವು ಪಂದ್ಯಗಳನ್ನು – ಸಬಹುಮಾನ ಪಂಥಗಳನ್ನು – ಇಟ್ಟಿದ್ದರು: ನೃತ್ಯ. ಸಂಗೀತ. ವಾದನ ಈ ಮೂರರಲ್ಲೂ ಪಂದ್ಯದ ಸಮಯ ಮಂಗಳೂರಿನಿಂದ ಬೈಂದೂರ ವರೆಗಿನ ಯಕ್ಷಗಾನ ಕಲಾಭಿಮಾನಿಗಳು ಕಿಕ್ಕಿರಿದು ರವೀಂದ್ರ ಮಂಟಪದಲ್ಲಿ ನೆರೆದು ಸೆಮಿನಾರು ಸಾರ್ವಜನಿಕ ಸಭೆಯೇ ಆಗಿಬಿಡುತ್ತಿತ್ತು.

ದಿಲ್ಲಿಯಿಂದ ಸಂಗೀತ ನಾಟಕ ಏಕಾಡೆಮಿಯ ವರಿಷ್ಠರಾದ ಸುರೇಶ ಅವಸ್ಥಿಯವರೂ, ರಾಕ್‌ಫೆಲರ್ ಪ್ರತಿಷ್ಠಾನದ ಜನಪದ ಯೋಜನೆಯ ಇಬ್ಬರು ಛಾಯಾ ಚಿತ್ರಗ್ರಾಹಕರೂ, ಮುಂಬಯಿಯ ನಾಟಕ ಕಲಾತಜ್ಞರಾದ ಸತ್ಯದೇವ ದುಬೇ ದಂಪತಿಯವರೂ, ಇಬ್ಬರು ಅಮೇರಿಕನ್ ವಿದ್ಯಾರ್ಥಿನಿಯರೂ ಸೆಮಿನಾರು ನೋಡಲು ಬಂದಿದ್ದರು. ಸಂಗೀತ ನಾಟಕ ಅಕಾಡೆಮಿಯ ಗೋವಿಂದ ವಿದ್ಯಾರ್ಥಿಗೆ ಕಾರಂತರ ಸೆಮಿನಾರಿನ ವೈಶಿಷ್ಟ್ಯವನ್ನು ಈ ವಿದೇಶೀಯರಿಗೆ ತಿಳಿಸುವುದು, ಚಿತ್ರ ತೆಗೆಯುವುದು, ಧ್ವನಿ ಮುದ್ರಣ ಮಾಡಿಕೊಳ್ಳುವುದು ಅತಿಪ್ರಿಯವಾದ ದುಡಿಮೆ. 1958ರ ಸೆಮಿನಾರಿನ ರುಚಿಕಂಡ ವಿದ್ಯಾರ್ಥಿ – ಭಾರತೀಯ ಜನಪದ ಕಲೆಯ ಅಂತರಂಗ ಬಲ್ಲವನು – ಕಾರಂತ ಭಕ್ತನಾಗಿ ಬಿಟ್ಟಿದ್ದ. ಅವರ ಸೆಮಿನಾರೆಂದ ಕೂಡಲೆ ದಿಲ್ಲಿಯಿಂದ ಹಾರಿಬಂದು ಬಿಡುತ್ತಿದ್ದ. ಇಷ್ಟೊಂದು ಶಾಸ್ತ್ರೀಯವಾಗಿ, ನಿರಾಡಂಬರವಾಗಿ, ವ್ಯವಸಾಯಾತ್ಮಕವಾಗಿ ಎಲ್ಲೂ ಸೆಮಿನಾರು ನಡೆಯುತ್ತಿಲ್ಲ. ಬರೇ ಷೋಕಿ, ಪರಿಷೆ, ದೊಡ್ಡ ಮನುಷ್ಯರಿಗೆ ಕಾಕಾ ಹಿರಿಯುವ ಹುಮ್ಮಸಷ್ಟೇ ಬೇರೆ ಕಡೆ ಸಾಮಾನ್ಯವಾದುದ್ದು ಎಂದು ವಿದ್ಯಾರ್ಥಿ ಅಭಿಪ್ರಾಯ.

ಕಾರಂತರ ಅಭಿನಂದನದ ಎರಡು ದಿನಗಳ ಉತ್ಸವಕ್ಕೆ ಎಷ್ಟು ವೆಚ್ಚ ಬರಬಹುದು ಎಂದು ಸಮಿತಿಯ ಸದಸ್ಯರು ಕೇಳಿದಾಗ ಹತ್ತು, ಹದಿನೈದು – ಹೀಗೆ ಹಾರಿಕೆಯ ಉತ್ತರ ಕೊಟ್ಟು ಪಾರಾಗುತ್ತಿದ್ದೆ; ಆದರೆ ನನ್ನ ಯೋಜನೆಯಂತೆ ಕನಿಷ್ಠ 25 ಸಾವಿರ ರೂಪಾಯಿಗಳಾದರೂ ಬೇಕು. ಈ ಸುದ್ದಿ ಕೆಲವೇ ಸ್ನೇಹಿತರಿಗೆ ಗುಟ್ಟಾಗಿ ತಿಳಿಸಿದ್ದೆ. ಮುಂಬಯಿಯಲ್ಲಿ ಮಲೆನಾಡಿನಲ್ಲಿ, ದ. ಕ. ಜಿಲ್ಲೆಯ ಮಂಗಳೂರು ಕುಂದಾಪುರ ಇತ್ಯಾದಿ ಕೇಂದ್ರಗಳಲ್ಲಿ ಕ್ಷೇತ್ರಾಧಿಕಾರಿಗಳನ್ನು ನೇಮಿಸಿ ಅವರ ಹತ್ತಿರ ರಸೀದಿ ಪುಸ್ತಕ ಕೊಟ್ಟಿದ್ದೆ. ಕಾಲ ಮೀರಿದರೂ – ಉತ್ಸವಕ್ಕೆ ಇನ್ನೆರಡು ವಾರಗಳಿವೆ ಎನ್ನುವಾಗಲೂ – ಬರಿಯ ಮೂರು ನಾಲ್ಕು ಸಾವಿರಗಳಷ್ಟೇ ಕೂಡಿರುತ್ತ, ಬರಿಗೈಯಲ್ಲಿ ಮೊಳಹಾಕಿದೆನೇನೋ ಎನಿಸಿತು. ಆದರೆ ಹಿಂಜರಿಯುವ ದಾರಿ ಇಲ್ಲವಲ್ಲಾ, ಹೇಗೂ ಕಡಿಮೆ ಬಿದ್ದರೆ ಟಿ. ಎ. ಪೈ ಅವರಿದ್ದಾರೆ. ಡಾ. ಪೈ ಇದ್ದಾರೆ. ನಷ್ಟ ಭರ್ತಿಗೆ ಎಂಬ ಹುಚ್ಚು ವಿಶ್ವಾಸ ಒಂದು ಕಡೆ, ಇಂಥ ದೈನ್ಯಾವಸ್ಥೆ ಬರಕೂಡದೆಂಬ ಹಠ ಇನ್ನೊಂದು ಕಡೆ. ಅಂತೂ ಪತ್ರದಲ್ಲಿ ನನ್ನ ಸ್ಥಾನೀಯ ಗೆಳೆಯರನ್ನು ಹುರಿದುಂಬಿಸುವುದರ ವಿನಾ ಬೇರೆ ದಾರಿ ಗೋಚರಿಸಲಿಲ್ಲ. ಉಡುಪಿಯನ್ನೊಮ್ಮೆ ಗಾಳಿಸಿ ಆಗಿತ್ತು. ಆದ್ದರಿಂದ ಈ ಸಾರಿ ಸಂಗ್ರಹವೆಲ್ಲ ಅಖಿಲ ಕರ್ನಾಟಕ ಮತ್ತು ಮುಂಬಯಿಯಿಂದ ಬರತಕ್ಕದ್ದು ಎಂಬ ನನ್ನ ನಿರೀಕ್ಷೆ ಫಲಿಸೀತೆ? ಎಂದು ಅಂಜಿಕೊಂಡಿದ್ದೆ. ಅಷ್ಟರಲ್ಲಿ ಮುಂಬಯಿಯಿಂದ ಗಣೇಶ ಭಟ್ಟರು 6000 ರೂಪಾಯಿ ಚೆಕ್ ಹಿಡಿದುಕೊಂಡು ಅಕ್ಟೋಬರ 30ಕ್ಕೇನೆ ಬಂದರು. ಅಲ್ಲಿಂದ ವಿದ್ಯಾರಣ್ಯರ ಕಾಲದಲ್ಲಾದಂತೆ ನಮ್ಮ ಸಗ್ರಿಯ ಪುಣ್ಯಭೂಮಿಯಲ್ಲಿ ಸುವರ್ಣವೃಷ್ಟಿಯೇ ಕರೆಯಿತು – ನಗದು ಬೇರೆ, ಸರಕು ಬೇರೆ; ಮುಂಬಯಿಯ ಆರು ಸಾವಿರ ಮುಂದಿನ ಆರೇ ದಿನಗಳಲ್ಲಿ – ಚೆಕ್ಕು, ಮನಿಆರ್ಡರು, ತಂತಿ, ಕೈ ಸಂದಾಯ

ಮುಂತಾದ ನಾನಾ ವಿಧವಾಗಿ–ಇಪ್ಪತ್ತಾರು ಸಾವಿರಕ್ಕೇರಿತು (ಇನ್ನೊಂದು ನಾಲ್ಕಾರು ಸಾವಿರ ಸ್ಮರಣ ಸಂಪುಟದಿಂದ ಕೆಲವೇ ಜಾಹೀರಾತಿನಿಂದ ಬರುವ ಹಂಚಿಕೆ ಹಾಕಿದ್ದೆ.) ಎಲ್ಲರೂ ಪ್ರೀತಿ, ಅಭಿಮಾನ, ಗೌರವ ಗಳಿಂದ ಹಣಸಲ್ಲಿಸುವ ದೃಶ್ಯ ದೇವಸ್ಥಾನಕ್ಕೆ ಹರಕೆ ಸಲ್ಲಿಸುವಂತೆಯೇ ತೋರುತ್ತಿತ್ತು. ಮುಂಬಯಿ ಮಿತ್ರರ ಸಂಗ್ರಹ ವಿಧಾನ ಸರ್ವೋತ್ತಮವಾಗಿತ್ತು–ಪ್ರತಿ ಕನ್ನಡ ಸಂಘದಿಂದಲೂ ನೂರು ಇನ್ನೂರು ಸೇರಿಸಿದರು. ಯಕ್ಷಗಾನ ನವೋದಯ ಗುಂಪಿನಿಂದ ಕೆಲವು ಸಾವಿರ, ಮೂಡಬಿದ್ರೆಯವರು ಕೆಲವು–ಹೀಗೆ ಮುಂಬಯಿ ಯವರು ಉಡುಪಿಯಲ್ಲಿ ನಡೆಯುವ ಕಾರಂತ ಉತ್ಸವ ತಮ್ಮದೇ ಎಂದು ತಿಳಿದು ದುಡಿದರು. ಶ್ರೀ ಸಂಜೀವ ರಾಯರಿಗೂ ನಿ. ವ್ಯಾಸರಾಯ ಬಲ್ಲಾಳರಿಗೂ ಆರೋಗ್ಯವೂ ಸರಿಯಾಗಿಲ್ಲದ ಕಾಲದಲ್ಲಿ ಸುಮಾರು ಹತ್ತು ಸಾವಿರ ರೂಪಾಯಿ ಮುಂಬಯಿಯ ಬಳಗದವರೇ ಕೂಡಿಸಿ ಕೊಟ್ಟದ್ದು. ನನ್ನ ಮಟ್ಟಿಗೆ ಅನಿರೀಕ್ಷಿತ ವೇನು ಅವಲ್ಲವಾದರೂ, ಅವರ ಪ್ರೀತಿಯ ಆಳ ಅವರ್ಣನೀಯ ಎನಿಸಿತು. ಇದೇ ರೀತಿ ಉಡುಪಿಗೆ ಹತ್ತಿರದ ಹರಿಹರಪುರದ ಭಾಗದಲ್ಲಿ ಈ ಹತ್ತು ವರ್ಷಗಳಲ್ಲಿ ಕಾರಂತರಿಗೆ ಹೊಸದಾಗಿ ಕೂಡಿದ ಅನರ್ಘ್ಯ ಮಿತ್ರ ಸಂಪತ್ತುಇದ್ದಿತ್ತು. ಹಿಡುವಳಿದಾರರಾದ ಶ್ರೀ ಜೋಯಿಸರೂ, ವಿಷ್ಣುಮೂರ್ತಿ ಭಟ್ಟರೂ ಸದ್ದಿಲ್ಲದೆ ತಿಂಗಳೊಪ್ಪತ್ತು ಮಲೆನಾಡ ಸೆರಗಿನ ಸ್ನೇಹಿತರನ್ನೆಲ್ಲ ಕಾಡಿ, ಬೇಡಿ, ಹುರಿದುಂಬಿಸಿ ಅಡಿಕೆ ಉದುರಿದಷ್ಟು ಸುಲಭವಾಗಿ ದುಡ್ಡಿನ ಚೀಲವನ್ನುದುರಿಸಿದರು. ಮಲೆನಾಡಿನಿಂದ ಉತ್ಸವಕ್ಕೆ ಐವತ್ತು ಜನ ಅಭಿಮಾನಿಗಳ ಪಟಾಲಮುವನ್ನು ಎಬ್ಬಿಸಿಕೊಂಡು ಬಂದ ಜೋಯಿಸರ ಅವಿರತ ಮಾತುಗಾರಿಕೆಯ ನಡುವೆಯೇ ಮಿಂಚುತ್ತಿದ್ದ ಸ್ಫೂರ್ತಿ, ಉತ್ಸಾಹ ನಮಗೆ ಪ್ರಚೋದಕವಾಯಿತು. ಬರಿಯ ದುಡ್ಡೊಂದೇ ಅಲ್ಲ, ಎಲೆ–ಹಣ್ಣು ಕಾಯಿಕಡ್ಡಿ ಊರಿನ ದೇವಸ್ಥಾನದ ಉತ್ಸವಕ್ಕೆ ತಂದಹಾಗೆ ನಮ್ಮ ಊಟದ ಮನೆಗೆ ತಂದು ರಾಶಿ ಹಾಕಿದ ಮಲೆನಾಡಿನವರ ಉತ್ಸವದ ಮುಂದೆ ನಮ್ಮ ದಣಿವೇತರದು ಎನಿಸಿತು.

ಅಭಿನಂದನ ಗ್ರಂಥ ಒಂದು ನೆಪವಾದರೆ, ಕಾರಂತರು ಇನ್ನೊಂದು ನೆಪ–ನನಗಾಗ ಬೇಕಾಗಿತ್ತು ಸಾಹಿತಿಗಳ ಒಂದು ಪ್ರಸನ್ನ ಸಮ್ಮೇಳನ. 1960ರ ಮಣಿಪಾಲ ಸಮ್ಮೇಳನದ ಕಹಿ ನೆನಪಿನ ಅಭಿಶಾಪವನ್ನು ಹುರಿ ಗೊಳಿಸಲು ಮಸಿಗೊಳಿಸಲು ಒಂದು ಸಂತೋಷ ಸಮಾರಂಭ. ಇದಕ್ಕೆ ಕಾರಂತರಂಥ ಬಂಡವಾಳ ಬೇರೆಲ್ಲಿದ್ದೀತು–ಎಂದು ಅವರ ಹೆಸರು ಬಳಸಿದೆ. ಅವರ ಮಿತ್ರ ಸಂಪತ್ತಿನ ಲಾಭ ದೋಚುವ ಹಂಚಿಕೆ ಹೂಡಿದ್ದೆ. ಅವರದೇ ಕಾರ್ಯ ಕಲಾಪಗಳ ನಡುವೆ–ಅವರ ಕ್ರಿಯಾತತ್ಪರತೆ ಉಚ್ಛ್ರಾಯದಲ್ಲಿರುವಂಥ–ಸಂದರ್ಭ ಹುಡುಕಿದ್ದೆ. ಕನಿಷ್ಠ ನೂರು ಮಂದಿ ನಮ್ಮ ಜಿಲ್ಲೆ ಮತ್ತು ಅಖಿಲ ಕರ್ನಾಟಕದ ಸಾಹಿತಿಗಳಿಗೆ ಆಮಂತ್ರಣ ಇತ್ತಿದ್ದೆ. ಅವರುಗಳ ಉಪಚಾರಕ್ಕೆ ಹತ್ತು ಮಂದಿ ಉಪಾಧ್ಯಾಯರ ಮತ್ತು 30 ಮಂದಿ ವಿದ್ಯಾರ್ಥಿ ಸ್ವಯಂಸೇವಕರ ಶಿಸ್ತಿನ ಸೈನ್ಯವ್ಯೂಹ ರಚಿಸಿಕೊಂಡಿದ್ದೆ. ಎಂದಿನಂತೆ ಬಿ. ವಿ. ಆಚಾರ್ಯರ ನಾಯಕತ್ವದಲ್ಲಿ ನಮ್ಮ ಸೇವಾಪಥಕ, ಸ್ವಾಗತ ಸಮಿತಿ ಕಚೇರಿಯ ವ್ಯವಸ್ಥೆ, ವೀಳ್ಯದೆಲೆಯ ಅಕ್ಷಯ ತಟ್ಟೆ, ಅತಿಥಿಗಳಿಗೆ ಬೇಕಾದ ಸುಗಂಧ ತೈಲ, ಸಾಬೂನು, ಟವೆಲು (ಇದು ಈ ಸಾರಿಯ ಅನುಬಂಧ). ಭೋಜನಶಾಲೆ ಎಂದಿನರತೆ ಕಡಿಯಾಳಿಯ ರಾಮಚಂದ್ರ ಉಪಾಧ್ಯಾಯರು ಮತ್ತು ಪ್ರಭಾಕರ ಪೈ ಅವರ ಸಮರ್ಥ ದಿಗ್ದರ್ಶನದಲ್ಲಿ–ರಾತ್ರಿ ಹಗಲಾಗುವುದರೊಳಗೆ ಸ್ಥಳ ಬದಲಾವಣೆ ಮಾಡಿಕೊಂಡು ರವೀಂದ್ರ ಮಂಟಪದ ಮಗ್ಗುಲಿನ ಚಪ್ಪರದೊಳಗಡೆ ಸನ್ನದ್ಧವಾಯಿತು. ಇಡ್ಲಿ–ದೋಸೆ–ಮೆರವಣಿಗೆ–ಸಭೆ, ಚರ್ಚೆ, ಊಟ, ತಿಂಡಿ ಮಾವಿನ ಮರದ ಕೆಳಗೋ ಮಲ್ಪೆಯ ಬೀಚಿನಲ್ಲೋ ಗೆಳೆಯರ ನಿರಂಕುಶ ವಿಚಾರಗೋಷ್ಠಿ, ರಾತ್ರಿ ಅಪರ ವೇಳೆಯಲ್ಲೂ ಅತಿಥಿಗೃಹದಲ್ಲಿ ನಗು–ಹಾಸ್ಯದ ಲಹರಿ. ರವೀಂದ್ರ ಮಂಟಪದ ಸುತ್ತುಮುತ್ತ, ಉಡುಪಿಯ ಆಸುಪಾಸು, ವಾತಾವರಣದ ತುಂಬೆಲ್ಲ ಸಾಹಿತ್ಯ ಮಥನ, ಸಾಹಿತಿಗಳ ಕಥನ. ಆ ನಲ್ವತ್ತೆಂಟು ತಾಸು ಸಂಘಟಕರಾದ ನಮ್ಮ ಬದುಕಿನ ರಸನಿಮಿಷಗಳು–ನಿಮಿಷ ನಿಮಿಷವೂ ನಾವು ಬದುಕಿದ್ದು ಉಳಿದವರು ನಮ್ಮನ್ನೆಚ್ಚರಿಸಿದ್ದು–ಮರೆಯಲಾದೀತೆ? ಕಾರಂತರ ಯಕ್ಷಗಾನ ಸೆಮಿನಾರು ತೊಡಗುವಷ್ಟರಲ್ಲಿ ಬೆಂಗಳೂರಿನಲ್ಲಿ ನಮ್ಮ ಅಭಿನಂದನ ಉತ್ಸವಕ್ಕಾಗಿ ಮನಃಪೂರ್ವಕ ದುಡಿದ ಗುಂಡ್ಮಿ ರಾಮಕೃಷ್ಣ ಐತಾಳರೂ, ಮಲ್ಲಿಕಾರ್ಜುನಯ್ಯನವರೂ ತಮ್ಮ ಕೊಡುಗೈ ತನವನ್ನು ಮೊದಲೇ ಮೆರೆದದ್ದಲ್ಲದೆ ತಮ್ಮ ಗೆಳೆಯರನ್ನೂ ಕಟ್ಟಿಕೊಂಡು ಬಂದು ನಮ್ಮ ಜತೆ ಶ್ರಮಿಸಲು ಸಿದ್ಧರಾದರು. ಪೊಲೀಟೆಕ್ನಿಕ್ಕಿನ ಧ್ವನಿಶಿಲ್ಪಶಾಸ್ತ್ರದ ತಂತ್ರಜ್ಞರಾದ ಮೂರ್ತಿದ್ವಯರು ಒಂದು ಕಾಲಕ್ಕೆ ಕಾರಂತರ ಜತೆ ಕೆಲಸ ಮಾಡಿದವರು. ಅವರೂ ಐತಾಳರ ಗುಂಪಿನಲ್ಲಿ ಸೇರಿಕೊಂಡು ಗಟ್ಟದ ಮೇಲಿಂದ ಬಂದ ಸಾಹಿತಿಗಳ ಯೋಗಕ್ಷೇಮ ನೋಡಿಕೊಳ್ಳುವುದರಲ್ಲಿ ನೆರವಾದರು. ಕಾರ್ಕಳ ಕಾಲೇಜಿನ ಎಂ. ರಾಮಚಂದ್ರ ನನ್ನು ನನ್ನ ಜತೆ ಕಾರ್ಯಕ್ರಮ ನಿರ್ವಹಣೆಗಾಗಿ ಕರೆದಿದ್ದೆ. ಮೂಡಬಿದಿರೆಯ ಶೇಖರ ಇಡ್ಯ ಏಕಾಕಿಯಾಗಿ ಕಾರಂತ ಗ್ರಂಥಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯದ ಪ್ರದರ್ಶನವೊಂದನ್ನು ಕೂಡಿಸಲು ಒಂದು ತಿಂಗಳ ಕಾಲ ಸದ್ದಿಲ್ಲದೆ ಊರೆಲ್ಲ ಅಲೆದು, ಸಂಗ್ರಹಕಾರ್ಯಕ್ಕಾಗಿ ದಣಿದರು. ಹೆಚ್ಚು ಖರ್ಚು ವೆಚ್ಚ ಇಲ್ಲದೆ ಬರಿಯ ಶ್ರದ್ಧೆಯ ಬಂಡವಾಳದಿಂದಲೇ ಅವರು ನಡೆಸಿದ ಪ್ರದರ್ಶನದ ಕಾರ್ಯವನ್ನು ಅಖಿಲ ಕರ್ನಾಟಕಸ್ಥರೆಲ್ಲ

ಮನಸಾರೆ ಮೆಚ್ಚಿದರು. ನನ್ನ ಸಹೋಪಾಧ್ಯಾಯರು ಹತ್ತು ಮಂದಿ ಅಭ್ಯಾಗತರ ಚಿಲ್ಲರೆ ಕೆಲಸಗಳನ್ನು ತಮ್ಮ ಪರಿಚಯ ನೀಡದೆಯೇ ಮಾಡಿಕೊಟ್ಟು ತಮ್ಮ ಸೌಜನ್ಯವನ್ನೂ, ಆದರ್ಶವನ್ನೂ ಪರಿಪಾಲಿಸಿದರು. ವಿದ್ಯಾರ್ಥಿಗಳಂತೂ ನಮ್ಮ ತರುಣ ಪ್ರಾಧ್ಯಾಪಕರ ನೇತೃತ್ವದಲ್ಲಿ ಹಗಲಿರುಳು ಕಣ್ಣಿಗೆ ಎಣ್ಣೆ ಹಾಕಿಕೊಂಡು ಬೇಸರವೇ ಇಲ್ಲದೆ ಆಗಮಿಸಿದ ಅತಿಥಿಗಳ ಸೇವೆ ಮಾಡಿದರು – ಯಾವ ತಾರತಮ್ಯವೂ ಇಲ್ಲದೆ ಆಟದವರಿರಲಿ, ಕೋಟದವರೇ ಇರಲಿ, ಯಾವ ನಾಗರಿಕ ಕೂಟದವರೇ ಆಗಲಿ ಎಲ್ಲರಿಗೂ ಅವರ ಹಸನ್ಮುಖದ ಸ್ವಾಗತ. ಬೆಳಗಿನ ಹಾಸಿಗೆ ಕಾಫಿಯಿಂದ ತೊಡಗಿ ಒಂದು ವಾರದ ತನಕ ವಿಜೃಂಭಿಸಿ ಬಂದವರ ಬಾಯಲ್ಲಿ, ಮನಸ್ಸಿನಲ್ಲಿ ಪ್ರತಿಫಲಿಸಿತು.

ನವಂಬರ 5 ಮುಂಜಾನೆ 9 – 30ಕ್ಕೆ ಕಾರಂತ ದಂಪತಿಗಳಿಗೆ ಪೂರ್ಣಕುಂಭ ಸ್ವಾಗತ. ಮಠದ ಬಿರುದಾವಳಿ, ಸಾಲಂಕೃತ ಆನೆಯನ್ನು ಮುಂದಿಟ್ಟುಕೊಂಡು ಮೆರವಣಿಗೆ, ಸಮಾರಂಭದ ಅಧ್ಯಕ್ಷ ಸುನೀತಿ ಕುಮಾರ ಚಟರ್ಜಿ ಅವರನ್ನೂ ಡಾ. ಪೈಯವರನ್ನೂ ಸೇರಿಸಿ ನಮ್ಮ ಕಾಲೇಜಿನ ಮಹಾದ್ವಾರದಿಂದ ರವೀಂದ್ರ ಮಂಟಪದವರೆಗೆ ಚಿಕ್ಕ ಮೆರವಣಿಗೆ, ಬಿ. ವಿ. ಆಚಾರ್ಯರು ಸ್ವಾಗತಕ್ಕಾಗಿ ತಳಿರುತೋರಣಗಳಿಂದ ಪರಿಸರವನ್ನೇ ಅಲಂಕರಿಸಿಬಿಟ್ಟಿದ್ದರು; ಹತ್ತು ಹನ್ನೆರಡು ಬಯಲಾಟದ ವೇಷ ನಿಯೋಜಿಸಿದ್ದರು; ಬಿರುದಾವಳಿ, ಬ್ಯಾಂಡು ಬಜಂತ್ರಿ ಗರ್ನಾಲಿನ ನಡುವೆ ಉತ್ಸವವು ಒಂದೇ ಸಲಕ್ಕೆ ಪುಟನೆಗೆಯಿತು. ಕಾರಂತ ದಂಪತಿ ಮತ್ತು ಚಟರ್ಜಿಯವರನ್ನು ಇದಿರ್ಗೊಳ್ಳಲು ಆಗಮಿಸಿದ ಸಕಲ ಸಾಹಿತಿಗಳನ್ನೂ ಮರುದಿಬ್ಬಣವಾಗಿ ಮಾವಿನ ಮರದಡಿಯಲ್ಲಿ ಬಿಸಿಲಲ್ಲಿ ಅರ್ಧ ತಾಸು ಅಕ್ಷರಶಃ ಕಾಯಿಸಿ ಹದಗೊಳಿಸಿ ನಿಧಾನವಾಗಿ ಕರೆತಂದೆವು. ರವೀಂದ್ರ ಮಂಟಪದ ಒಳಹೊಕ್ಕು ಮುಖ್ಯ ಪಾತ್ರಧಾರಿಗಳನ್ನು ಕೂರಿಸುವಷ್ಟಕ್ಕೆ ಎರಡು ಕುರ್ಚಿ ಬಿಕೋ ಅನ್ನುತ್ತಿತ್ತು, ಇದೇನು, ಇದು ಯಾರಿಗೆ? ಎಂದು ಯೋಚಿಸಿದ್ದಷ್ಟಕ್ಕೆ ಕಣ್ಣು ಕತ್ತಲಾಗುವಂಥ ಒಂದು ವಿದ್ಯಮಾನ ನಡೆದುಹೋಗಿತ್ತು. ಮೆರವಣಿಗೆಯಲ್ಲಿ ಬರಬೇಕಾಗಿದ್ದ ಕನ್ನಡ ವಿ.ಸೀ. (ವಿ. ಸೀತಾರಾಮಯ್ಯ) ಮತ್ತು ನಮ್ಮ ವಿಶ್ವವಿದ್ಯಾನಿಲಯಕ್ಕೆ ಆಗತಾನೇ ನೇಮಿತರಾದ ಇಂಗ್ಲೀಷ್ ವಿ. ಸೀ. (ಶ್ರೀ ಜವರೇಗೌಡ) ಅವರಿಬ್ಬರನ್ನೂ ಮಹಡಿ ಮೇಲಿನ ನನ್ನ ಕೊಠಡಿಯಲ್ಲೇ ಇರಗೊಟ್ಟು, ಮೆರವಣಿಗೆಯ ಅಬ್ಬರಕ್ಕೆ ತನ್ನ ಕಾವ್ಯಕ್ಕೆ ತಾನೇ ಮಣಿಯುವ ಕವಿಯಂತೆ ನಾನೇ ಬೆಕ್ಕಸ ಬೆರಗಾಗಿ, ಕರ್ತವ್ಯಭ್ರಷ್ಟನಾಗಿಬಿಟ್ಟಿದ್ದೆ. ಬಿ. ವಿ. ಆಚಾರ್ಯರ ಪ್ರಸಂಗಾವಧಾನ, ಬುದ್ಧಿವಂತಿಕೆಯ ದೆಸೆಯಿಂದ ಈ ಪ್ರಥಮ ಅವಘಡದಿಂದ ಪಾರಾದೆ. ಮೇಲಿನಿಂದಲೇ ರತ್ನಾಕರವರ್ಣಿಯ ಉಪ್ಪರಿಗೆ ಸಂಧಿಯಲ್ಲಿದ್ದ ಇಬ್ಬರು ವಿ. ಸೀ. ಅವರೂ ಇನ್ನೇನು ಹೋಗಿ ಸೇರಿಕೊಳ್ಳೋಣ ಎಂದು ನಿರಾಶೆಯಿಂದ ಬರುವಷ್ಟಕ್ಕೆ ಎರಡನೇ ದಿಬ್ಬಣ ಹೊರಡಿಸಿಬಿಟ್ಟಾಗಿತ್ತು. ಮಠದ ಆನೆ ಅವರನ್ನು ಇದಿರ್ಗೊಂಡು ಚಾಮರಸೇವೆ ನಡೆಸಿ ರವೀಂದ್ರ ಮಂಟಪ ಮುಟ್ಟಿಸಿತು. ಇದೇನು ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗಾಗಿ ಪ್ರತ್ಯೇಕ ಮೆರವಣಿಗೆ ಮಾಡಿಸಿದರಲ್ಲಾ? ಎಂದು ನನ್ನ ಕೆಲವು ಹಿತೈಷಿಗಳು ಗೊಣಗುತ್ತಿರುವುದರೊಳಗೆ ಕಾರ್ಯಕ್ರಮ ಆರಂಭವಾಗಿ ಬಿಟ್ಟಿತು. ದಾರಿಯಲ್ಲಿ ಇಂಥ ಕಾರ್ಯಕ್ರಮದ ಅಪ್ಪಿತ ತಪ್ಪಿತಗಳ ಸ್ವಾನುಭವವುಳ್ಳ ಜವರೇಗೌಡರು ಇದೇನು ಹೆಣ್ಣಿನ ಕಡೆಗೆ ಬೇರೆ ದಿಬ್ಬಣ ತೆಗೆದಿರಲ್ಲಾ ಎಂದು ನಮ್ಮ ಗುಟ್ಟು ತಿಳಿದಂತೆ ನಕ್ಕು ನುಡಿದರು. ವಿ. ಸೀ. ಅವರಿಗಂತೂ ನಮ್ಮ ಪೇಚು ಕೊನೆಯವರೆಗೂ ತಿಳಿಯಲಿಲ್ಲ. ಅಷ್ಟು ತೀವ್ರವಾಗಿ ಎರಡನೇ ಮೆರವಣಿಗೆ ತೆಗೆದಿದ್ದರು – ನಮ್ಮ ಆಚಾರ್ಯರು.

ವಯೋಜ್ಞಾನವೃದ್ಧರೂ, ಭಾರತೀಯ ಭಾಷಾ ಸಾಹಿತ್ಯ ಸಾರ್ವಭೌಮರೂ ಆದ ಬಂಗಾಳದ ಸುನೀತಿ ಕುಮಾರ ಚಟರ್ಜಿಯವರು ನಮಗೆ ದೊರೆತದ್ದೊಂದು ಮಹಾಭಾಗ್ಯ. ಇಲ್ಲಿಂದ ನಾನು ದಿಲ್ಲಿಗೆ ಬರೆದ ಪತ್ರ ಕಲ್ಕತ್ತೆಗೆ ತೆರಳಿ ಡಾರ್ಜಿಲಿಂಗಿನ ಪ್ರವಾಸದಲ್ಲಿದ್ದ ಚಟರ್ಜಿಯವರ ಸಮ್ಮತಿ ಬಂದಂದಿನಿಂದ ಅವರ ಬೆನ್ನುಹಿಡಿದು ಅವರ ದಿಲ್ಲಿ ವಿಳಾಸಕ್ಕೆ ಮರಳಿ ಮಣ್ಣಿಗೆಯ ಇಂಗ್ಲೀಷ್ ಅನುವಾದ ಕಳಿಸಿ, ನಾಲ್ಕು ದಿನ ಮುಂಚಿತವಾಗಿ ಅವರ ಅಧ್ಯಕ್ಷೀಯ ಭಾಷಣದ ಹಸ್ತ ಪ್ರತಿ ತರಿಸಿ ಮುದ್ರಿಸುವ ವ್ಯವಸ್ಥೆ ಮಾಡಿದ್ದೆ. ಹಳೇ ತಲೆಮಾರಿನ ಜನದ ಶ್ರದ್ಧೆ, ಆಸಕ್ತಿಗಳಿಗೆ ಸಾಕ್ಷಿಯಾದಂತೆ ಚಟರ್ಜಿಯವರು 'ಕರ್ನಾಟಕ, ಕೊಂಕಣ ಮತ್ತು ಶಿವರಾಮ ಕಾರಂತ' ಎಂಬ ಘನತರ ಪ್ರಬಂಧವನ್ನೇ ಬರೆದು ತಂದಿದ್ದರು. ಅಡಿಗಡಿಗೆ ಗೋವಿಂದ ಪೈ ಅವರನ್ನು ನೆನಪಿಸುತ್ತಿದ್ದ ಅವರ ಭಾಷಣದ ಶೈಲಿ, ಓಘ, 'ಮರಳಿ ಮಣ್ಣಿಗೆ'ಯನ್ನು ಭಾರತೀಯ ಕೃತಿರತ್ನವೆಂದು ಅವರು ಮರ್ಮಸ್ಪರ್ಶಿಯಾಗಿ ಅನುಭವಿಸಿ ಆಡಿದ ಮಾತು – ಭಾರತೀಯ ಸಾಹಿತ್ಯ ದೇವತೆ ಕಾರಂತರ ಸಾಹಿತ್ಯ ವ್ಯವಸಾಯಕ್ಕೆ 'ಅಸ್ತು' ಎಂದಹಾಗಿತ್ತು. 80ರ ಹಿರಿತನದಲ್ಲೂ ಚಟರ್ಜಿ ಲವಲವಿಕೆ ಹೇಳತೀರದು – ಯಾವ ಕಾರ್ಯಕ್ರಮಕ್ಕೂ ಹಾಜರು, ಶೇಖರ ಇಡ್ಯ ಏರ್ಪಡಿಸಿದ ಕಾರಂತ ಮತ್ತು ದ. ಕ. ಜಿಲ್ಲಾ ಪ್ರದರ್ಶನದಲ್ಲಿ ಎರಡು ತಾಸು ಕೂಲಂಕಷ ಪ್ರಶ್ನೆಗಳನ್ನು ಕೇಳಿ ದಣಿಯದು ಅವರ ಕುತೂಹಲ ಬುದ್ಧಿ. ನಮ್ಮ ಊರಿನ ಹೋಳಿಗೆಯನ್ನು ಬಹಳ ಮೆಚ್ಚಿಕೊಂಡರು. ಅಲ್ಲದೆ ಸಾಹಿತ್ಯಜ್ಞರಿಗೆ ಈ ರೀತಿ ಗೌರವ ನೀಡುವ ಸಂಪ್ರದಾಯವನ್ನು ಮನಸಾ ಹೊಗಳಿದರು. ಅಭಿನಂದನ ಪರ ಉಪನ್ಯಾಸಗಳನ್ನು ಚೊಕ್ಕಾ – ಚುಟುಕಾಗಿ

ಮಾಡಿದ ಕೆ. ಕೆ. ಹೆಬ್ಬಾರರು, ಸಿಂಪಿ, ಟಿ. ಎ. ಪೈ ಅವರು, ದೇಜಗೌ ಅವರು, ಸಾಯಂಕಾಲದ ಕಾರ್ಯಕ್ರಮವನ್ನು ಒಂದು ಆತ್ಮೀಯ ಘಟನೆಯಾಗಿ ಪರಿವರ್ತಿಸಿದರು. ಕಾರಂತರ ಉತ್ತರ ಮಾತ್ರ – ಸಾಹಿತಿಗಳ ಬಗ್ಗೆ ಮಾಡಿದ ಕಟು ವಿಮರ್ಶೆ ಬಿಟ್ಟರೆ – ರಸಮಯವಾದ ಒಂದು ಅಪೂರ್ವ ಅನುಭವವೇ ಆಯಿತು. ನಿರಾತಂಕವಾದ, ಸ್ಪಷ್ಟವಾದ ಈ ಆತ್ಮ ನಿವೇದನೆಯಲ್ಲಿ ಯಾವ ಅಲಂಕಾರವೂ ಇಲ್ಲದೆ ತಾನು ಬದುಕಿದ ಬಾಳಿನ ನೆಲೆಸೆಲೆಗಳನ್ನು ತಾನ ಮೆಚ್ಚಿದ ಬೆಲೆ – ಕಲೆಗಳನ್ನು ಸಂಕ್ಷಿಪ್ತವಾಗಿ ಪ್ರಾಮಾಣಿಕವಾಗಿ ಸಭಿಕರ ಮುಂದೆ ಇರಿಸಿದರು. 'ಬಂಧುವರ್ಗದ ನಡುವೆ ನಿಂತ ಅರ್ಜುನನ ಸ್ಥಿತಿ ನನ್ನದಾಗಿದೆ' ಎಂದು ಅವರನ್ನುವಾಗ ಅವರ ಹಲವು ಅಣ್ಣಂದಿರ, ಸ್ನೇಹಿತ ವರ್ಗದ ಹೃದಯ ಉಮ್ಮಳಿಸಿತು. ಅರ್ಥದಲ್ಲಿ ಮಾತಿನ ಒತ್ತಿನಲ್ಲಿ – ಇದು ಕಾರಂತರ ಅತ್ಯಂತ ಮಹತ್ವಪೂರ್ಣ ಭಾಷಣವಾಯಿತು. ಅದರ ಪೂರ್ತ ಶಕ್ತಿ ಮುದ್ರಣದಲ್ಲಿ ಬಂದಿಲ್ಲವೆಂದು ಅಂದಿನ ಸಭೆಗೆ ಹಾಜರಿದ್ದವರೆಲ್ಲ ಬಲ್ಲರು. ಆ ಪರಿಸರ, ಆಗ ಏರ್ಪಟ್ಟ ಮಾನವೀಯ ಸಂಬಂಧ ಅಂಥದ್ದಾಗಿತ್ತು.

ಕನ್ನಡ ಕಾದಂಬರಿಗಳು, ಪಠ್ಯಪುಸ್ತಕಗಳು, ಪತ್ರಿಕೆಗಳು – ಈ ಕುರಿತು ಮೂರು ಸೆಮಿನಾರು ನಿಯೋಜಿಸಿದ್ದೆ. ಇದಕ್ಕೆ ಬರೆಸಿದ ಪ್ರಬಂಧಗಳನ್ನೆಲ್ಲ 'ಅಭಿವಂದನ' ದಲ್ಲಿ ಅಚ್ಚು ಹಾಕಿಸಿದೆ. ಇದು ಕೊನೆಗಳಿಗೆಯ ಕಸಿಯಾದ್ದರಿಂದ ಕೆಲವು ವಿಷಯಗಳಲ್ಲಿ ಬರೆಯುತ್ತೇನೆ ಬರೆಯುತ್ತೇನೆ ಅಂದವರು ನಿರ್ಯೋಚನೆಯಿಂದ ಕೈಕೊಟ್ಟದ್ದರಿಂದ ಪ್ರಬಂಧಗಳ ಗುಣ ಸಮಾನವಾಗಿಲ್ಲದಿರಬಹುದು; ಆದರೂ ಪ್ರಾಮಾಣಿಕ ಪ್ರಯತ್ನವೆಂಬ ದೃಷ್ಟಿಯಿಂದ ಇದನ್ನು ಸ್ವಾಗತಿಸಬೇಕು. ಎಲ್ಲಾ ಗೋಷ್ಠಿಗಳಲ್ಲಿಯೂ ಸೇರಿದ ಸಾಹಿತಿಗಳೂ ವಿಮರ್ಶಕರೂ ಮುದ್ದಾಂ ಬಾಯಿಗೆ ಬೀಗ ಹಾಕಿ ಕೂತಹಾಗಿತ್ತು. ಅದೇನು ಮಾನಸಿಕ ದ್ವಂದ್ವವೋ, ಬಿಗುಮಾನವೋ, ಕಾರಂತರ ಅಂಜಿಕೆಯೋ, ಬಾಯಿ ಬಿಟ್ಟರೆ ಕೆಟ್ಟೆವೆಂಬ ಅಳುಕೋ ತಿಳಿಯದು. ಕನ್ನಡ ನಾಡಿನ ಸುಪ್ರಸಿದ್ಧ ವಿಮರ್ಶಕರೆಲ್ಲ ತಣ್ಣಗೆ ಕೂತಿರುತ್ತಿದ್ದರು. ಖಾಲಿಯಾದ ಸ್ಥಳ ತುಂಬಿ ಕೊಡುವಂತೆ ಕೊನೆಗೆ 'ಮದುಮಗ'ನಾದ ಕಾರಂತರೇ ಸ್ವಧರ್ಮ ಪರಿಪಾಲನೆಯ ದೃಷ್ಟಿಯಿಂದ ಮಾತಿಗಿಳಿಯುತ್ತಿದ್ದರು. ಪತ್ರಿಕಾಗೋಷ್ಠಿಯಲ್ಲಿ ಅವರೆಂದ ಹತ್ತು ಹಲವು ವಿಚಾರಗಳಲ್ಲಿ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಅಂಶಗಳೆಷ್ಟೋ ಅನಾಯಾಸ ಬಂದವು. ಕಾದಂಬರಿಗಳ ಮೇಲೆ ಅಧಿಕೃತ ವಾಣಿಯಿಂದ ಬರೆಯಬಲ್ಲ, ಆಡಬಲ್ಲ, ಎಂ. ಜಿ ಕೃಷ್ಣಮೂರ್ತಿ ಐದು ಮಿನಿಟಿನೊಳಗೆ ತಮ್ಮ ಅಧ್ಯಕ್ಷೀಯವನ್ನು ಔಪಚಾರಿಕವಾದ ರೀತಿಯಲ್ಲಿ ಮುಗಿಸಿ ತೆಪ್ಪಗಾದರು. ಇಲ್ಲಿ ನನ್ನದೂ ಒಂದು ಅಪರಾಧವಾಯಿತು. ನಾನು ಹೀಗೇ ಗೋಷ್ಠಿ ನಡೆಯಬೇಕೆಂದು ಮುಕ್ತಾ ಹೇಳಿರಲಿಲ್ಲ – ಬರೆದು ಕೊಟ್ಟಿದ್ದೆ – ಪ್ರಾಯಃ ನಮ್ಮಂಥ ಸೃಷ್ಟಿಶೀಲ ಕವಿ ವಿಮರ್ಶಕರಿಗೆ ಬುದ್ಧಿ ಹೇಳುವವ 'ಯಾರಿವನು?' ಎಂದಿರಬಹುದು; ಅಥವಾ ನನ್ನ ಗೈರುಹಾಜರಿಯ ಸದುಪಯೋಗವನ್ನೂ ಅವರು ಮಾಡಿಕೊಂಡಿದ್ದಾರು. ಅಂತೂ ಅಷ್ಟೊಂದು ಸಾಹಿತಿಗಳನ್ನು ಒಂದೇ ಬುಟ್ಟಿಯಲ್ಲಿ ಸೇರಿಸಿಯೂ ಅವರು ಅರಚದೆ ಪರಚದೆ 'ಮೌನಂ ಪಂಡಿತ ಲಕ್ಷಣಂ' ಎನಿಸಿದ್ದು, ನೂರಾರು ಸಾಹಿತ್ಯ ಭಕ್ತರ ದೃಷ್ಟಿಯಿಂದ ಒಂದು ರೀತಿಯ ಅಪರಾಧವೆನಿಸಿತು. ಚರ್ಚೆ ಮಸಗಲಿ ಎಂದು ನಾನು ಸ್ವಾತಂತ್ರ್ಯ ಕೊಟ್ಟಿದ್ದೇ ತಪ್ಪಾಯಿತು; ಎಲ್ಲರಿಗೂ ಹತ್ತು ಮಿನಿಟು ಭಾಷಣ ಮಾಡಿ ಎಂದರೆ ಸಭಾಸದರೂ ಸಂತೃಪ್ತರಾಗುತ್ತಿದ್ದರು. ಅಂತೂ ಕಾರಂತರಲ್ಲದೆ ಹೋಗಿದ್ದರೆ ನಮ್ಮ ಗೋಷ್ಠಿ ಕೇವಲ ಪ್ರಬಂಧ ವಾಚನದ ಅಣುಕು ಪ್ರಹಸನವಾಗುತ್ತಿತ್ತು.


ಆರನೇ ತಾರೀಕೆಲ್ಲ ಕಾರಂತರು ಸಾಹಿತಿಗಳು ವಾಸಮಾಡುತ್ತಿದ್ದ ಅತಿಥಿಗೃಹದಲ್ಲಿ ಬಂದ ಸಾಹಿತಿಗಳೊಡನೆ ಹರಟುತ್ತ ಕಾಲಕಳೆದರು. ಇದು ಕಿರಿಯ ಸಾಹಿತಿಗಳಿಗೆ ದೊಡ್ಡ ಪ್ರಸಾದದಂತೆ ಕಂಡಿತು. ನನ್ನನ್ನೇ ಬೇಕಾದರೆ ಬಂದು ನೋಡಲಿ ಎನ್ನುವ ದೊಡ್ಡಸ್ತಿಕೆ ಎಲ್ಲಿ, ತನ್ನ ಸಲುವಾಗಿ ಬಂದವರನ್ನು ತಾನೇ ನೋಡಬೇಕೆನ್ನುವ ಕರ್ತವ್ಯ ಪ್ರಜ್ಞೆ ಎಲ್ಲಿ?

ಮರುದಿನ ಮುಂಜಾನೆ ಬಂದವರೆಲ್ಲ ಹೊರಡುವ ನಿಷ್ಕ್ರಮಣ ದೃಶ್ಯ. ಯಾರಿಗೂ ಹೊರಡಲು ಇಚ್ಛೆ ಇಲ್ಲ; ವಿ. ಸೀತಾರಾಮಯ್ಯನವರು ತಮ್ಮ ಮಕ್ಕಳಿಗೆ ದಕ್ಷಿಣ ಕನ್ನಡ ಜಿಲ್ಲೆ ತೋರಿಸಿ ಸಂತೃಪ್ತರಾಗಿ ಮಧ್ಯಾಹ್ನದ ಊಟ ತೀರಿಸಿ ಹೊರಟರು. ಅವರ ಜತೆ ಕಾರಂತ ಭಕ್ತರಾದ ಗುಂಡ್ಮಿ ರಾಮಕೃಷ್ಣ ಐತಾಳರೂ, ಮಲ್ಲಿಕಾರ್ಜುನಯ್ಯ, ಮರುಳಪ್ಪನವರೂ ವಿ. ಸೀ. ಅಂಗರಕ್ಷಕರಂತೆ ತೆರಳಿದರು. ಚಟರ್ಜಿಯವರ ಕಾರ್ಯದರ್ಶಿಯನ್ನು ಮುಂಬೈಗೆ ಮುಟ್ಟಿಸಬೇಕಾಗಿದ್ದ ಬಲ್ಲಾಳ ಸರ್ವಿಸಿನವರ ವಂಚನೆಯಿಂದಾಗಿ ನಮಗೆ ಅವರನ್ನು ಕಾರಲ್ಲಿ ಮುಂಬಯಿ ಮುಟ್ಟಿಸುವ ಅಧಿಕ ಹೊಣೆ ಬಿತ್ತು. ಅದೊಂದು ಮೂರು ತಾಸು ಸಂಧಿಕಾಲದಂತೆ ಕಳೆದು ಹೋಯಿತು. ಗಂಭೀರ ನಾಟಕವು ಕೊನೆಯಂಕದಲ್ಲಿ ಪ್ರಹಸನವಾಗಿ ರೂಪುಗೊಂಡು ನಮ್ಮ ಕಷ್ಟಪರಂಪರೆ ಹೇಗೋ ನೀಗುತ್ತಿತ್ತು. ಚಟರ್ಜಿ ಹೆಬ್ಬಾರರನ್ನು ಮರುದಿನ ವಿಮಾನಕ್ಕೆ ಮುಟ್ಟಿಸಿ ಬಂದಾಗ ನನ್ನ ತಲೆಯ ಮೇಲಿನ ದೊಡ್ಡ ಹೊರೆ ಇಳಿಯಿತು.

ಯಾವನೇ ಒಬ್ಬ ಸಾಹಿತಿಗೆ ನೋವಾಗದಂತೆ ಉಪಚಾರ, ಸೌಕರ್ಯ, ಸೇವೆ ಒದಗಿಸಿದ ಸ್ವಯಂಸೇವಕ ವರ್ಗ – ಮುಖ್ಯವಾಗಿ ವಿದ್ಯಾರ್ಥಿಗಳಿಗೆ – ಕಾರಂತರು ಸ್ವಪ್ರೇರಣೆಯಿಂದ ಬಹಿರಂಗವಾಗಿ ಶಾಭಾಸೆಂದರು.

ಇಂಥ ಉಪಾಧ್ಯಾಯ–ಶಿಷ್ಯ ಸಂಬಂಧ ಇರುವಲ್ಲಿ ವಿದ್ಯಾರ್ಥಿ ಸಮಸ್ಯೆ ಹೇಗೆ ಬಂದೀತು? ಎಂದರು. ಅಂದು ಸಂಜೆ ನಮ್ಮ ಸ್ವಯಂಸೇವಕರಿಗೆ ವಿದಾಯ ಕೊಡುವುದು ನನಗೆ ಭಾರೀ ಕಷ್ಟವಾಯಿತು. ಒಂದು ವಾರದಿಂದ ರಾತ್ರಿ ಹಗಲು ನನ್ನ ಆಜ್ಞೆ, ಕೇಳಿಕೆ, ಸಿಡುಕು, ರೇಗನ್ನೆಲ್ಲ ತಡೆದುಕೊಂಡ ಅವರ ಮಹೋನ್ನತ ಔದಾರ್ಯಕ್ಕೆ ನಾನು ಸುಖಾಶ್ರುಗಳಿಂದ ನನ್ನ ಕೃತಜ್ಞತೆಯ ಧಾರೆಯೆರೆದೆ. ಅಂಥ ಸಮಗ್ರವಾದ ಉತ್ಸವವನ್ನು ಮೇಲಿಂದ ಮೇಲೆ ನಮ್ಮ ಕೈಯಿಂದ ಮಾಡಿಸುವ ಧೈರ್ಯ, ಹಿನ್ನಲೆಯನ್ನೊದಗಿಸುತ್ತಿರುವ ಮಣಿಪಾಲದ ಹಿರಿಯ ಕ್ರತುಶಕ್ತಿಗೆ ಎಲ್ಲರ ಪರವಾಗಿ ವಂದನೆ ಸಲ್ಲಿಸಿದೆ. ಪ್ರಾಧ್ಯಾಪಕರನ್ನು ಗಾಡಿ ಎತ್ತುಗಳಂತೆ ದುಡಿಸಿ ದಣಿಯಿಸಿದ ಪಾಪಕ್ಕೆ ಪಶ್ಚಾತ್ತಾಪ ಕೋರಿದೆ. ನನ್ನ ಗುರುಗಳ ಕೈಯಿಂದ ಊಟದ ವ್ಯವಸ್ಥೆ ಮಾಡಿಸಿದ ತಪ್ಪಿಗೆ ಪ್ರಾಯಶ್ಚಿತ್ತರೂಪವಾಗಿ ಸುವರ್ಣದಾನ ಮಾಡಿದೆ. ನನ್ನ ಮೇಲೆ ಇಷ್ಟೊಂದು ಜನ ತೋರಿದ ಪ್ರೀತಿ ವಿಶ್ವಾಸಗಳ ಭಾರಕ್ಕೆ ನಾನು ಕುಗ್ಗಬೇಕಾಗಿತ್ತು, ಆದರೆ ಹಿಗ್ಗಿದೆ. ಮತ್ತೊಂದು ತಿಂಗಳ ಅವಧಿಯಲ್ಲಿ ಅಭ್ಯಾಗತ ಸಾಹಿತಿಗಳಿಂದ ಬಂದ ಓಲೆಗಳನ್ನು ಓದುವಾಗ ಯಾರಿಗೆ ತಾನೇ ಧನ್ಯತೆ ಮೂಡದು?

ಕ್ರಿಯಾಶೀಲ, ಸೃಷ್ಟಿಶೀಲ ಸಾಹಿತ್ಯಕ್ಕೆ ಇಂಥ ಉತ್ಸವಗಳ, ನನ್ನಂಥ ಸಂಘಟಕರ ಅನಿವಾರ್ಯತೆ ಇಲ್ಲವೆಂದು ನಾನು ಬಲ್ಲೆ. ಆದರೆ ಸಾಹಿತ್ಯದ ಸಂದೇಶ ಜನಗಣಮನದಲ್ಲಿ ಒಂದಿಷ್ಟಾದರೂ ಪಸರಿಸುವಲ್ಲಿ, ನಮ್ಮ ನಾಡಿನ ಸಾಮಾಜಿಕ ಪರಿಸರದಲ್ಲಿ, ಸಾಹಿತಿ ವಿಮರ್ಶಕ ವಾಚಕರ ಅನ್ಯೋನ್ಯ ಸಂಬಂಧದ ಮಧುರ ಆವಿರ್ಭಾವದಲ್ಲಿ ಅಷ್ಟೋ, ಇಷ್ಟೋ ಅವಿನಾಭಾವೋದಯ ರಸಪ್ರಸಂಗದಲ್ಲಿ ನನ್ನಂಥ ದಪ್ಪ ತೊಗಲಿನ ಕುರಿಗಳು ಅಗತ್ಯ ಎಂದುಕೊಂಡಿದ್ದೇನೆ.



ಉಡುಪಿಯ ಭಾಗ್ಯದ ಬಾಗಿಲು

ಉನ್ನತ ಶಿಕ್ಷಣ ರಂಗದಲ್ಲಿ ಮಹಾತ್ಮ ಗಾಂಧೀ ಮೆಮೋರಿಯಲ್ ಕಾಲೇಜು ನಿರ್ವಹಿಸಿದ ಚಾರಿತ್ರಿಕ ಪಾತ್ರವನ್ನು ಸಿಂಹಾವಲೋಕಿಸುವಾಗ ಈ ಸಂಸ್ಥೆಯಲ್ಲಿ ದುಡಿಯುತ್ತಿರುವ ಒಬ್ಬನಿಗೆ ಕೆಲ ಮಿತಿಗಳೂ ಕೆಲ ಅತಿಗಳೂ ಬಾಧಿಸಬಹುದೆಂಬ ತಿಳಿವು ನನಗಿದೆ. ಉಡುಪಿಯಲ್ಲೇ ಹುಟ್ಟಿ ಬೆಳೆದು ಇಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ನಿಕಟ ಸಂಪರ್ಕ ಪಡೆದ ನನಗೆ ಈ ಕಾಲೇಜು ಒದಗಿಸಿದ ಮಹತ್ವಪೂರ್ಣ ಅವಕಾಶಗಳ ಕುರಿತು ಅಭಿಮಾನ ಇರುವಂಥಾದ್ದು ಸಹಜವೇ. 1947ಕ್ಕೆ ಹಿಂದೆ ಒಂದು ತಲೆಮೊರೆಯಷ್ಟು ಕಾಲವೂ ನಿದ್ರೆಯ ಮಬ್ಬಿನಲ್ಲಿದ್ದ ಉಡುಪಿ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಒಮ್ಮಿಂದೊಮ್ಮೆ ರಾಷ್ಟ್ರೀಯ ಖ್ಯಾತಿ ಮತ್ತು ಅಂತಾರಾಷ್ಟ್ರೀಯ ಸುದ್ದಿಯನ್ನು ಗಳಿಸಲು ಮೂಲ ಕಾರಣಗಳು ಎರಡು: ಒಂದು ಡಾ. ತೋನ್ಸೆ ಮಾಧವ ಪೈ ಅವರ ಸೃಜನಶೀಲ ಆರ್ಥಿಕ ಕ್ರಿಯಾಕರ್ಮಗಳು; ಎರಡು: ಅವರದೇ ಸಾಹಸದ ಫಲವಾಗಿ ಜನಿಸಿದ ಎಂ. ಜಿ. ಎಂ. ಕಾಲೇಜು ಮತ್ತು ಇತರ ಶಿಕ್ಷಣಾಲಯಗಳು. ಜನನ ಕಾಲದಲ್ಲಿ ನಮ್ಮ ಕಾಲೇಜಿಗೆ ಅಡ್ಡವಾದ ವಿಘ್ನ ವಿಡ್ಡೂರಗಳೇನು, ಅವನ್ನು ಉಡುಪಿಯ ಜನನಾಯಕರು ಬಗೆಹರಿಸಿದ ಜಾಣ್ಮೆ ಎಂಥದ್ದು ಅವರ ಪ್ರಾಮಾಣಿಕವಾದ ಸೇವಾಕಾರ್ಯದ ಸತ್ಫಲಗಳೇನು ಎಂಬುದರ ಕುರಿತು ಸರಿಯಾದ ಮಾಹಿತಿ ಕೊಟ್ಟರೆ ಅದು ಇತಿಹಾಸವಾಗುತ್ತದೆ. 37 ಮಳೆಗಾಲ ಕಳೆದ ಎಂ. ಜಿ. ಎಂ.ನ ಹೊರ ಮತ್ತು ಒಳ ಸತ್ವಕ್ಕೆ ಬೆಂಬಲವಾಗಿ ನಿಂತ ಪ್ರೇರಣೆಗಳನ್ನೂ ಇದಿರಾಂತ ಪ್ರಚೋದನೆಗಳನ್ನೂ ಇಲ್ಲಿನ ಜನ ಹೇಗೆ ಸಮನ್ವಯಗೊಳಿಸಿ ಕಲ್ಲಿನ ಮೇಲೆ ಕಲ್ಲು, ಇಟ್ಟಿಗೆಯ ಮೇಲೆ ಇಟ್ಟಿಗೆ, ಕಟ್ಟಡದ ಮೇಲೊಂದು ಕಟ್ಟಡ ಇರಿಸಿ ಕಷ್ಟದಿಂದ ಸಸಿಯನ್ನು ಬೆಳೆಸಿದ ಸತ್ಯ ಮುಂದಿನ ಜನಾಂಗಕ್ಕೆ ಕಥೆಯಂತೆ, ಕಟ್ಟು(ವ) ಕಥೆಯಂತೆ ಜನಜೀವನವನ್ನು ಉತ್ತಮಿಕೆಗೆ ಒಯ್ಯುವ ಪ್ರವಾಸ ಕಥನದಂತೆ, ಕಂಡೀತು. ಒಂದು ಮಾತನ್ನು ಮತ್ತೆ ಮತ್ತೆ ಹೇಳುವ ಅಗತ್ಯವೇನು ಎಂಬ ಪ್ರಶ್ನೆಗೆ ಮ್ಯಾಕ್ಸ್‌ಮುಲ್ಲರ್ ಬಹಳ ಹಿಂದೆಯೇ ಉತ್ತರ ಕೊಟ್ಟಿದ್ದಾರೆ. ಗಾಂಧೀಜಿ ಕೂಡ ಇದನ್ನೇ ಒಪ್ಪಿಕೊಂಡಿದ್ದರು. ಎಂದಿನವರೆಗೆ ಶಂಕೆಗಳೂ, ಸಂದೇಹವಾದಿಗಳೂ, ಹಗಲಾದ ಮೇಲೂ ರಾತ್ರಿ ಮರಳಿ ಬಂದೀತೆಂಬ ಭೀರುಗಳೂ ಇರುತ್ತಾರೋ ಅಂದಿನ ವರೆಗೆ ಸತ್ಯವನ್ನು ಮರಳಿ ಮರಳಿ ಉಚ್ಚರಿಸುವ ಅಗತ್ಯ ಉಂಟೆಂದು ಮ್ಯಾಕ್ಸ್‌ಮುಲ್ಲರ್ ಹೇಳಿದ್ದಾರೆ. ಮಾತು ಒಳ್ಳೆಯದಾದರೆ ಅದನ್ನು ನೀವೇಕೆ ಬಚ್ಚಿಡಬೇಕು? ನಿಮ್ಮ ಸ್ನೇಹಿತರಿಗೆ ಹೇಳಿ, ಅವರು ಅವರ ಸ್ನೇಹಿತರಿಗೆ ಹೇಳಲಿ – ಒಂದಲ್ಲ ಒಂದು ದಿನ ಒಬ್ಬಾನೊಬ್ಬ ಆ ಮಾತನ್ನು ಕೃತಿಗಿಳಿಸಬಹುದು. ಇಂದು ಬರಿಯ ಮಾತೆಂದು ಕಾಣುವ ವಿಷಯ ನಾಳೆ ಕೃತಿಯ ರೂಪದಲ್ಲಿ ಜನೋಪಕಾರಿಯಾಗಬಹುದು. ಇಂದಿನ ಕ್ರಾಂತಿ ತತ್ವವೇ ನಾಳಿನ ಸಂಪ್ರದಾಯ. ಇದು ಡಾ. ಪೈ ಅವರ ಜೀವನ ತತ್ವ, ಬದುಕಿನ ತಾತ್ಪರ್ಯ. ಹೆಚ್ಚಾಗಿ ಕೃತಿಗೆ ಈಡಾಗದ ಮಾತು ಅವರಿಗೆ ಹೊಳೆಯದಿರುವುದರಿಂದಲೂ, ತನ್ನ ಮಾತನ್ನು ಇನ್ನೊಬ್ಬರು ಕೃತಿ ಮಾಡಲಿ ಎನ್ನುವ ಪರಾವಲಂಬಿಗಳು ಅವರಲ್ಲವಾದ್ದರಿಂದಲೂ, ಡಾ. ಪೈ ಒಂದು ಮಾತನ್ನು ಆಡಿದ ರೆಂದರೆ ಅದು ಕೃತಿಯಾಗಲು ಹೆಚ್ಚು ಕಾಲ ಹಿಡಿಯಲಾರದು ಎಂದೇ ಅರ್ಥ. ಭಗವದ್ಗೀತೆಯ ಕಾಲದಿಂದಲೂ ದುರ್ಲಭರಾಗಿದ್ದಂಥ ಯೋಜಕರು ಡಾ. ಪೈ. ಅವರ ಸಾನ್ನಿಧ್ಯದಿಂದಲೂ, ಕರ್ಮಯೋಗದಿಂದಲೂ ಉಡುಪಿಯ ಜೀವನದ ಮಟ್ಟ ಆರ್ಥಿಕವಾಗಿ ಹೇಗೋ ಹಾಗೆ ಶೈಕ್ಷಣಿಕವಾಗಿಯೂ ಉನ್ಮುಖವಾಯಿತು. ಸಾವಿರಾರು ಬಡ ಕುಟುಂಬಗಳಿಗೆ ಅನ್ನ – ವಸನದ ಸಮಸ್ಯೆಯನ್ನು ಬ್ಯಾಂಕ್ – ವಿಮೆಗಳ ಮುಖಾಂತರ ಪರಿಹರಿಸಿದ ಪ್ರತಿಭೆ 1947ರಿಂದ ಈಚೆಗೆ ವಿದ್ಯಾರಂಗದಲ್ಲಿಯೂ ಪ್ರವೃತ್ತವಾದದ್ದು ನಾಡಿನ ಪುಣ್ಯಭಾಗ್ಯವೆಂದೂ, ಅವರು ನಿರ್ಮಿಸಿದ ಮೊತ್ತಮೊದಲ ಭಾಗ್ಯದ ಬಾಗಿಲು ಎಂ. ಜಿ. ಎಂ. ಎಂದೂ ನಾನು ನಂಬಿದ್ದೇನೆ.

ಎಂ. ಜಿ. ಎಂ. – ಡಾ. ಪೈ ಅವರ ಬೋಧಿವೃಕ್ಷ. ಇದರ ನೆರಳಿನಲ್ಲಿ ಅವರಿಗೆ ದೊರೆತ 'ಬೋಧಿ' ಯಿಂದಲೇ ಮಣಿಪಾಲದ ಮುಂದಿನ ಶಿಕ್ಷಣ ಸಂಸ್ಥೆಗಳು ರೂಪುಗೊಂಡವು. ಎಲ್ಲರ ಸಲುವಾಗಿ ಕೆಲವಾರಾದರೂ ಒದ್ದಾಡಬೇಕೆಂದು ವಿಧಿಯೇ ಬರೆದಿಟ್ಟಂತೆ ತೋರುತ್ತದೆ. ಪೈ ಅವರ ಶಿಕ್ಷಣ ಸಂಸ್ಥೆಗಳ ಸ್ಫೂರ್ತಿ ಮಿಶನರಿಗಳ ಪರೋಪಕಾರ ಬುದ್ಧಿಯಿಂದಲೇ ಉಗಮಿಸಿದರೂ ಅವರ ಸಂಘಟನಾ ಚಾತುರ್ಯ ವಿದೇಶಿಯರ ಕುಶಾಗ್ರಮತಿಗೂ ನಿಲುಕದಂಥದ್ದು. ವಿದೇಶೀಯ ಜನರು ಬಿಚ್ಚಲಾರದ ಒಗಟುಗಳಿಗೆ ಡಾ. ಪೈ

ಅವರ ಮಿದುಳಲ್ಲಿ ಹದಿನಾರಾಣೆ ಸ್ವದೇಶೀ ಉತ್ತರಗಳಿವೆ. ಚಿಂತನೆ ಮತ್ತು ವ್ಯವಹಾರ ಜ್ಞಾನ ಎರಡನ್ನೂ ಏಕೀಕೃತಗೊಳಿಸಿದ ಪೈ ಪ್ರತಿಭೆಗೆ ಸಾಟಿಯಾದದ್ದು ಕರ್ನಾಟಕದಲ್ಲಿ ಬೇರೆ ಇಲ್ಲ. ಟೀಕೆಗಳಿಗೆ ಎದೆಯೊಡ್ಡಿ ನಿಲ್ಲುವ ಎಂಟೆದೆ ಅವರದು, ಆ ಟೀಕೆಗಳ ಮೊನಚು ಮತ್ತು ವಿಷವೆಲ್ಲ ಇಂಗಿ ಅವು ಗೊಬ್ಬರವಾಗಿ ಅವರ ಸಂಸ್ಥೆಗಳಿಗೆ ಸಾರಜನಕ ಒದಗಿಸುವಷ್ಟು ದೀರ್ಘಕಾಲ ಅವರಿಗೆ ಭಗವಂತನು ಆಯುಷ್ಯ ಕೊಟ್ಟದ್ದರಿಂದ ಅವರಂಥ ಕೃತಾರ್ಥ ಜೀವಿಗಳು ಬೇರೆ ನನ್ನ ಸಮೀಪದಲ್ಲಿ ನನಗೆ ಕಂಡದ್ದಿಲ್ಲ. ಸ್ವಂತ ಕಾಲ ಮೇಲೆ ತಲೆಎತ್ತಿ ತಾನು ನಿಂತಂತೆ, ತನ್ನ ಜನರೂ ನಿಲ್ಲಬೇಕೆಂದು ಪೈ ಮಾಡಿದ ವಿಭಿನ್ನ ಕ್ಷೇತ್ರಗಳ ಕಾಯಕದಲ್ಲಿ ಅತ್ಯಂತ ಪ್ರಸಿದ್ಧವಾದದ್ದು, ಕ್ರಾಂತಿಕಾರಕವಾದದ್ದು ಮೋಡಗಳನ್ನು ಭೇದಿಸಿಬರುವ ಕೋಲ್ಮಿಂಚಿನಂತೆ ಸಂಕಟ ಪರಂಪರೆಗಳನ್ನು ಹರಿದು ಮೆರೆದದ್ದು – ಅವರ ಮೆಡಿಕಲ್ ಕಾಲೇಜಿನ ಸಹಕಾರಿ ಯೋಜನೆ. ಅದಕ್ಕೆ ಬೀಜ ಒದಗಿಸಿದ್ದು ಎಂ. ಜಿ. ಎಂ. ನಿರ್ಮಾಣದ ಅನುಭವ. ಭಿಕ್ಷೆಗೆ ಬಂದವರಂತೆ ತಮ್ಮನ್ನು ನಿರಾಕರಿಸಿದ ಮಹನೀಯರ ವಾಗ್ಬಾಣಗಳಿಂದ ನೊಂದ ಮನಸ್ಸು ಹೊಸ ಯೋಚನೆಯ ಹಾದಿ ಹಿಡಿಯಿತು. ಮನುಷ್ಯರ ಹೃದಯದಲ್ಲಿರುವ ಕಲ್ಪಂಡೆಯನ್ನು ಕರಗಿಸಲಾಗದಿದ್ದರೆ, ಅದನ್ನು ಸುತ್ತು ಬಳಸುವ, ಮನುಷ್ಯಮಾತ್ರನ ಹೃದಯಸ್ಥಿತವಾದ ಸ್ವಾರ್ಥಾಭಿಲಾಷೆಯನ್ನೇ ತನ್ನ ಯೋಜನೆಗೆ ಹೂಡುವ ಒಂದು ಉಪಾಯದಿಂದ ಮಣಿಪಾಲದ ಬೃಹತ್ ಸಂಸ್ಥೆಗಳನ್ನು ಪೈ ನಿರ್ಮಾಣ ಮಾಡಿದರು. 'ನಿಂದಕರಿರಬೇಕು' ಎಂದು ದಾಸರು ಹೇಳಿದ್ದು ಇದಕ್ಕೆ. ಇಂಥ ನಿಂದಕರು ಇಲ್ಲದೆ ಹೋಗಿದ್ದರೆ ಡಾ. ಪೈ ಮುಂದಿನ ತ್ರಿವಿಕ್ರಮ ಹೆಜ್ಜೆ ಇಡುತ್ತಿರಲಿಲ್ಲ: ಎಂತಲೆ ಎಂ. ಜಿ. ಎಂ. ಇತಿಹಾಸ ಮಣಿಪಾಲದ ಸಂಸ್ಥೆಗಳ ಗರ್ಭದಲ್ಲಿ ಸುಖಾಸೀನವಾಗಿದೆ.

1947ರಲ್ಲಿ ಡಾ. ಪೈ ಉಡುಪಿಗೊಂದು ಕಾಲೇಜಿನ ಬಗ್ಗೆ ಕೆಲಸ ತೊಡಗಿದರು. ಮಣಿಪಾಲದ ಅಕಾಡೆಮಿಗೆ ಉಡುಪಿಯ ಹೊರಗೆ ಯಾವ ಪ್ರಸಿದ್ಧಿಯೂ ಇಲ್ಲದಂಥ ಕಾಲ ಅದು. ಪೈ ಅವರು ಕಾಲೇಜಿನ ಬಗ್ಗೆ ತಾವೇ ದುಡುಕಲಿಲ್ಲ. ಪರಿಸರದಲ್ಲೇ ಉತ್ತಮ ಸೇವೆ ಸಲ್ಲಿಸುತ್ತಿದ್ದ ಕ್ರಿಶ್ಚನ್ ಹೈಸ್ಕೂಲಿನ ಆಡಳಿತ ಮಂಡಳಿಯ ಮುಂದೆ ತಮ್ಮ ಬೇಡಿಕೆಯನ್ನಿಟ್ಟರು. ಬಾಸೆಲ್ ಇವ್ಯೇಂಜಲಿಕಲ್ ಮಿಶನ್ನಿನ ಕರಾವಳಿಯ ವರಿಷ್ಠರಾದ ರೆವರೆಂಡ್ ಬ್ರುಕ್ಹಾರ್ಟ್ ಅವರಿಗೆ ತಮ್ಮ ವಿಮಾ ಕಂಪನಿಯ ಭವನದಲ್ಲಿ ಔತಣ ಕೊಟ್ಟು ಉಡುಪಿಗೊಂದು ಕಾಲೇಜು ನೀಡುವುದಾದರೆ ತಾವು ಕಟ್ಟಡ ಕಟ್ಟಿಸಿ ಕೊಡುವುದಾಗಿ ಭರವಸೆಯನ್ನೂ, ಪ್ರಾರ್ಥನೆಯನ್ನೂ ಏಕಕಾಲಕ್ಕೆ ಸಲ್ಲಿಸಿದರು. ಬ್ರುಕ್ಹಾರ್ಟ್ ಅವರು ಬರೇ ಕಟ್ಟಡವಲ್ಲ, ಸಂಸ್ಥೆಯ ನಿರ್ವಹಣ ವೆಚ್ಚಕ್ಕೂ ಬಂಡವಾಳ ಕೂಡಿಸಿದರೆ ತಮ್ಮ ಸಂಸ್ಥೆ ಆ ಬಗ್ಗೆ ಚಿಂತಿಸಬಹುದೆಂದು ತೇಲು ಮಾತನ್ನಾಡಿದರು. ಡಾ. ಪೈ ಅವರಿಗೆ ಇದು ವ್ಯವಹಾರವಲ್ಲ ಎನಿಸಿತು. ಯಾವ ಹೊಣೆಯನ್ನೂ ಹೊರಲೊಲ್ಲದ ಸಂಸ್ಥೆಗಾಗಿ ದುಡಿಯುವ ಬದಲು ತಾವೇ ಉಜ್ಜುಗಿಸಿದರೇನಂತೆ ಎಂದು ಅಕಾಡೆಮಿಯೇ ಕಾಲೇಜಿನ ಸ್ಥಾಪನೆ ಮಾಡಿಬಿಡಬೇಕೆಂಬ ನಿರ್ಧಾರ ಕೈಗೊಂಡರು. ಉಡುಪಿಯ ಟೀಕಾಚಾರ್ಯರುಗಳ ನಾಲಿಗೆ ಎಲ್ಲೆಲ್ಲೋ ಓಡಿತು. ಉಡುಪಿಗೆ ಕಾಲೇಜೇ? ಮಾಧವ ಪೈಗಳಿಗೆ 'ಹುಚ್ಚು' ಎಂದರು. ಊರಿನಲ್ಲಿ ಒಂದು ವರ್ಷ ಯಾವ ಸಹಕಾರವೂ ಸಿಗದೆ ಪೈ ಅವರು ನಿರಾಶರಾಗಿ ಜಮೆಯಾದ ದುಡ್ಡನ್ನು ದಾನಿಗಳಿಗೆ ಮರುಪಾವತಿ ಮಾಡಿದರು. 'ಈ ದುಡ್ಡಿನ ಬಡ್ಡಿ ಎಲ್ಲಿದೆ?' ಎಂದು ಪೈಯನ್ನೂ ಕೊಡದ ಮಹನೀಯರೊಬ್ಬರು ಕೇಳಿ ತಮ್ಮ ತುರಿಕೆ ತೀರಿಸಿಕೊಂಡರು. 1948ರಲ್ಲಿ ಗಾಂಧೀಜಿಯ ಮರಣದ ಅನಂತರದಲ್ಲಿ ಮತ್ತೆ ಡಾ. ಪೈ ಕಾಲೇಜು ರಚನೆಗಾಗಿ ಜನರನ್ನು ಕೂಡಿಸಿದರು; ದಾನಕ್ಕಾಗಿ ಅಲೆದರು, ಗಾಂಧೀಜಿ ಹೆಸರು ಹೇಳಿದರೆ ಜನರು ಔದಾರ್ಯ ತೋರಿಸಬಹುದೆಂಬ ಮನೀಷೆಯಿಂದ ಹೊಸತಾಗಿ ಪ್ರಯತ್ನ ನಡೆಸಿದರು. ವಿಶ್ವವಿದ್ಯಾನಿಲಯಕ್ಕೆ ಅದೂ ಶಿಸ್ತು, ನಿಯಮ, ಶರತ್ತುಗಳಲ್ಲಿ ಒಂದಿನಿಸೂ ರಿಯಾಯಿತಿ ತೋರಿಸದ ಮದರಾಸು ವಿಶ್ವವಿದ್ಯಾನಿಲಯಕ್ಕೆ ಕಾಲೇಜನ್ನು ಸೇರ್ಪಡೆಗೊಳಿಸುವುದು ಭಗೀರಥ ಯತ್ನವೇ ಆಯಿತು. ಹಿಡಿದ ಕೆಲಸ ಬಿಡಬಾರದು ಎಂಬ ನಿಷ್ಠೆ ಡಾ. ಪೈ ಅವರ ಜತೆ ಅವರ ರಕ್ತಸಂಬಂಧಿಗಳೂ ಹೇಗೋ,ಹಾಗೆ ಅಲ್ಲದ ಅನೇಕರೂ ಸೇರಿಕೊಂಡರು. ಉಡುಪಿ ಬರೇ ಚಿಕ್ಕ ಪಟ್ಟಣ; ಇಲ್ಲಿನ ವ್ಯಾಪಾರ, ವ್ಯವಹಾರ ಎಲ್ಲಾ ಸಾವಿರದ ಲೆಕ್ಕದಲ್ಲೇ ನಡೆದದ್ದು; ಲಕ್ಷಲಕ್ಷಗಳ ಹಣ ಕೂಡಿಸುವ ಕಾಲೇಜು ನಮಗೆ ಅಸಾಧ್ಯವೆಂಬುದು ಆಗಿನ ಸಾರ್ವಜನಿಕ ಅಭಿಪ್ರಾಯ.. ಇದನ್ನು ಪೈ ಗೆಲ್ಲಬೇಕಾಗಿತ್ತು; ಮದರಾಸು ವಿಶ್ವವಿದ್ಯಾನಿಲಯದ ಪಂಡಿತರ, ಮುಖ್ಯವಾಗಿ, ಅಲ್ಲಿನ ಉಪಕುಲಪತಿಗಳ ಮನ ಒಲಿಸಿಕೊಳ್ಳಬೇಕಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಸಾಕಷ್ಟು ಧನಸಂಗ್ರಹ ಮಾಡಬೇಕಾಗಿತ್ತು. ಉಡುಪಿಯಲ್ಲಿ ಹಾಲಿ ವಾಸ ಮಾಡುವವರಲ್ಲದೆ, ಊರಿನ ಮೇಲೆ ಮಮತೆಯುಳ್ಳವರನ್ನೂ, ಪರವೂರಿಗೆ ಹೋಗಿ ಯಶಸ್ವಿಗಳಾದವರನ್ನೂ, ತನ್ನ ಬಂಧುಬಳಗದವರನ್ನೂ, ತನ್ನವೇ ಸಂಘಸಂಸ್ಥೆಗಳನ್ನೂ ಪೈ ನಮ್ರರಾಗಿ ಯಾಚಿಸಿ ಕೊಟ್ಟದ್ದು ಮೃಷ್ಟಾನ್ನವೆಂಬ ತೃಪ್ತಿಯಿಂದ ಯಾವ ಕಟೂಕ್ತಿಯನ್ನೂ ಗಮನಿಸದೆ ದೇಣಿಗೆ ಸಂಗ್ರಹಣಕ್ಕಾಗಿ ಸಂಚರಿಸಿದರು. ಈ ಸಂದರ್ಭದಲ್ಲಿ ಡಾ. ಶಿವರಾಮ ಕಾರಂತರೂ ಅವರೊಡನೆ 'ಭಿಕ್ಷಾಟನೆ'ಗೆ ಹೋಗಿದ್ದರಂತೆ. ಉತ್ತರ ಕರ್ನಾಟಕ ಸಂಚಾರ ಕಾಲದಲ್ಲಿ ಒಂದು ಸ್ವಾರಸ್ಯ ನಡೆಯಿತು. ನಮ್ಮೂರಿನವರದೇ – ಒಂದು ಹೋಟೆಲು, ಕಾರಿನಿಂದಿಳಿದ

ಕೂಡಲೇ ಗಲ್ಲದ ಮೇಲಿದ್ದ ಮಾಲಿಕರು ಎಲ್ಲರಿಗೂ ಕಾಫಿಗೆ ಆರ್ಡರು ಮಾಡಿದರಂತೆ. ಅವರು ಬಂದ ಕೆಲಸದ ಅರಿವಾದ ಕೂಡಲೇ ಕಾಫಿಯನ್ನು ಅರ್ಧಕಾಫಿಗೆ ಇಳಿಸಿದರಂತೆ. ದೇಣಿಗೆ ಹರಹರ ಎಂದು ಅರ್ಧ ಕಾಫಿಯಷ್ಟೇ ಕಷ್ಟದಲ್ಲಿ ಇಳಿದದ್ದು ನೋಡಿ ಕಾರಂತರು ಹೊರಗೆ ಬಂದ ಮೇಲೆ ಸಂಗಡಿಗರಿಗೆ ಅಂದರಂತೆ: ಹೆಸರು ನೋಡಿದಿರಾ – ಮಾನಹಾರ ಭವನ ('ಮನೋಹರ'ದ ವ್ಯಂಗ್ಯ) ದಲ್ಲಿ ನಮಗೆ ನ್ಯಾಯೋಚಿತವಲ್ಲವೆ ? ಊರಿಗೆ ದೊಡ್ಡವರಾದರೇನಂತೆ? ದಾನಕ್ಕಾಗಿ ಹಸ್ತ ಚಾಚಿದಿರೋ ದಾನಿ ಮಹಾರಾಯನಿಗೆ ಜಿಹ್ವಾ ಸ್ವಾತಂತ್ರ್ಯ ಒದಗುತ್ತದೆ. 'ಇಲ್ಲ' ಎಂದು ಹೇಳಿದರೆ ಕಡಿಮೆ. ಆದೀತೆಂದು ನಾಲ್ಕು ವೇದಾಂತದ ಮಾತು ಸೇರಿಸುವುದು ರೂಢಿಯಷ್ಟೇ. ಅಂಥ ಮಾನಹಾರ ಪ್ರಸಂಗಗಳನ್ನೆಲ್ಲ ಕಾಲೇಜು ಸಮಿತಿ ಗಣನೆಗೆ ತರಲಿಲ್ಲ. ಭಾರೀ ತಪಾಸಣೆಯ ಬಳಿಕ ವಿಶ್ವವಿದ್ಯಾನಿಲಯ ಉಡುಪಿಗೆ ಸೆಕೆಂಡ್ ಗ್ರೇಡ್ (ಅಂದರೆ ಇಂಟರ್ಮೀಡಿಯೇಟ್) ಕಾಲೇಜನ್ನು ಮಂಜೂರು ಮಾಡಿದಾಗ ಪೈ ಅವರು ಉಲ್ಲಸಿತರಾದರು. ಐದು ಲಕ್ಷದ ಅಪದ್ಧನ ಕೂಡಿಸಲು ತಡವಾಯಿತು. ಕಂತು ಪಾವತಿಗೆ ತನ್ನ ಮನೆ ಬೇಕಾದರೂ ಈಡು ಮಾಡಿಕೊಡುತ್ತೇನೆಂದು ಬಿನ್ನವಿಸಿದರು. ನಗರಸಭೆಯ ಪ್ರಾಥಮಿಕ ಶಾಲೆಯಲ್ಲಿ ಸಮೀಪ ಕ್ಲಬ್ ಕಟ್ಟಡ ಸೇರಿಸಿಕೊಂಡು ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು ಜೂನ್ 27, 1949ರಲ್ಲಿ ಕಾರ್ಯಾರಂಭ ಮಾಡಿತು. ಮದನಪಳ್ಳಿಯಿಂದ ಪ್ರೊಫೆಸರ್ ಸುಂದರರಾಯರು ಎರಡು ತಿಂಗಳ ಮೊದಲೇ ಪ್ರಿನ್ಸಿಪಾಲರಾಗಿ ನೇಮಕಗೊಂಡು ಪೂರ್ವಭಾವೀ ಸಿದ್ಧತೆಗಳಲ್ಲಿ ಮಗ್ನರಾಗಿದ್ದರು. ಅವರ ಸಂಗಡ ಕನ್ನಡಕ್ಕೆ ಪ್ರೊ. ಪಿ. ನಾರಾಯಣ ಅಯ್ಯಂಗಾರರೂ, ಇಂಗ್ಲೀಷಿಗೆ ಕೆ. ಎಸ್. ಕಾಮತ್‌ರೂ, ಇತಿಹಾಸಕ್ಕೆ ಕುಮಾರಿ ಶಾಲಿನಿಯವರೂ, ಹಿಂದಿಗೆ ಗಂಗಾಧರ ಪಣಿಕ್ಕರ್ ಅವರೂ, ಸಂಸ್ಕೃತಕ್ಕೆ ಬಿಕಾನೇರನಲ್ಲಿ ಕ್ಯುರೇಟರ್ ಆಗಿದ್ದ ಮಾಧವ ಕೃಷ್ಣ ಶರ್ಮಾ ಅವರೂ, ಗಣಿತಕ್ಕೆ ಪ್ರೊ. ಬಿ. ವಿ. ಆಚಾರ್ಯರೂ ನೇಮಕಗೊಂಡರು.

ನಾನು ಕಾಲೇಜಿನ ಇತಿಹಾಸ ವಿಭಾಗದ ಪ್ರಾಧ್ಯಾಪಕನಾಗಿ ಸೇರಿದ್ದು ಎರಡನೆಯ ವರ್ಷ (1950)ದಲ್ಲಿ. ನನಗಿಂತ ಮೊದಲು ಸೇರಿದ ಪ್ರಾಧ್ಯಾಪಕರು – ಯಾವ ಭಾಷೆ ಯಾವ ಜಾತಿಯವರಾದರೂ – ಊರಿನ ಜನಜೀವನದಲ್ಲಿ ಬೆರೆತಿದ್ದರು; ಇವರೂ ಪೈ ಬಂಧುಗಳೇ ಆಗಿ ಗೌರವಾನ್ವಿತರೆನಿಸಿಬಿಟ್ಟರು. ಪಾಂಡಿತ್ಯ ಮತ್ತು ಚಾರಿತ್ರ್ಯದಲ್ಲಿ ಈ ಮೊದಲ ವರ್ಷದ ಪ್ರಾಧ್ಯಾಪಕ ಮಂಡಳ ತದನಂತರ ಗಳಿಸಿದ ಕೀರ್ತಿಗೆ ಪ್ರಥಮ ವರ್ಷದ ಪರೀಕ್ಷಾ ಪರಿಣಾಮ ಕಳಸವಿಟ್ಟಿತ್ತು.* ನನ್ನ ಜತೆಗೆ ಸೇರಿದ ಡಾ. ಕೆ. ಬಿ. ರಾಮಕೃಷ್ಣ ರಾಯರು ಉತ್ತಮ ಅಧ್ಯಾಪಕರು, ಕಲಾವಿದರು, ಮತ್ತು ಸಂಶೋಧಕರು. ಶಾರೀರಕ ಶಿಕ್ಷಣದ ಗುರು ಮಂಡ್ಯದ ಸೋಮಸುಂದರ್ ಮೃದುಭಾಷಿತಕ್ಕೂ ನಿಷ್ಠಲ ಕಾಯಕಕ್ಕೂ ಹೆಸರು ಹೊತ್ತರು, ಪಡಮುನ್ನೂರು ಗೋಪಾಲಕೃಷ್ಣ ಭಟ್ಟರು ಸಂಸ್ಕೃತ ಮತ್ತು ಸಂಸ್ಕೃತಿಯ ಅಧ್ಯಾಪಕರಾಗಿದ್ದರು. 1952ರಲ್ಲಿ ವಿಜ್ಞಾನ ವಿಭಾಗವನ್ನು ತೆರೆದ ಮೇಲೆ ಎಂ.ಜಿ.ಎಂ. ಸೇರಿದ ಸರ್ವಶ್ರೀ ಯು.ಎಲ್ ಆಚಾರ್ಯ, ಶ್ರೀಪತಿ ಆಚಾರ್ಯ, ಶ್ರೀಮತಿ ಲೀಲಾ ಭಟ್, ಕೃಷ್ಣಪ್ಪ, ಥೆರೆಸಾ ಜೋಸೆಫ್, ಶ್ರೀಕಂಠಯ್ಯ, ರಾಮದಾಸ್, ಬಾಲಕೃಷ್ಣನ್, ಈಶ್ವರನ್ ಮುಂತಾದವರು ಕಾಲೇಜಿನಲ್ಲಿ ಇಂದಿಗೂ ಕರ್ತವ್ಯ ನಿರತರಾಗಿದ್ದು ಪಾಠಪ್ರವಚನದ ಶಿಸ್ತು, ಗಾಂಭೀರ್ಯ, ಪ್ರಾವೀಣ್ಯಗಳಿಗೆ ಮನೆಮಾತಾಗಿದ್ದಾರೆ. ವಿದ್ಯಾರ್ಥಿಗಳ ಪ್ರೀತಿಪಾತ್ರರಾದ ಇವರೇ ಎಂ.ಜಿ.ಎಂ.ನ ನಿಜವಾದ ಶಿಲ್ಪಿಗಳು. ಆರ್ಥಿಕವಾಗಿ ಆಕರ್ಷಕವಾಗಿಲ್ಲದ ಕಾಲದಲ್ಲಿ ಇವರೆಲ್ಲ ಪ್ರಾಧ್ಯಾಪಕರಾದವರು. ಉಪಾಧ್ಯಾಯ ವರ್ಗಕ್ಕೆ ಇರುವ ಕಷ್ಟ ಕಾರ್ಪಣ್ಯ ಇವರಿಗೂ ಇದೆ. ಆದರೆ ಇದನ್ನು ಲೆಕ್ಕಿಸದೆ ಮಕ್ಕಳನ್ನು ಪೋಷಿಸಿದವರು ಇವರು. ಗೃಹಕೃತ್ಯದ ತಾಪತ್ರಯಗಳೇನಿದ್ದರೂ ಅವಕ್ಕೆ ಕಾಲೇಜಿನ ಗೇಟಿನೊಳಗಡೆ ಪ್ರವೇಶ ನೀಡದೆ ಕಾಯೇನ ವಾಚಾ ಮನಸಾ ಸೇವೆಯನ್ನು ಸಲ್ಲಿಸಿದ ಇಂಥ ಅಧ್ಯಾಪಕರನ್ನು ಡಾ. ಪೈ ಅವರಾಗಲಿ ಅವರ ತರುವಾಯ (1956ರಲ್ಲಿ) ಕಾಲೇಜಿನ ಆಡಳಿತ ವಹಿಸಿಕೊಂಡ ಶ್ರೀ ಟಿ. ಎ. ಪೈ ಅವರಾಗಲಿ ಮರೆಯಲಿಲ್ಲ. ಎಲ್ಲೂ ಇಲ್ಲದ ವೈದ್ಯಕೀಯ ಸೌಕರ್ಯ ನಮ್ಮ ಪ್ರಾಧ್ಯಾಪಕರಿಗೆ ಇದೆ. 'ಮೆಡಿಕೇರ್' ಯೋಜನೆಗೆ ಪ್ರಾಧ್ಯಾಪಕರು ಕೊಡುವ ಒಂದು ರೂಪಾಯಿಗೆ ಆಡಳಿತ ಎರಡು ರೂಪಾಯಿ ಕೊಡುತ್ತದೆ. ವರ್ಷವಿಡೀ ಆತನಿಗೂ ಆತನ ಕುಟುಂಬದವರಿಗೂ ಮತ್ತು ಮೂರು ಮಕ್ಕಳಿಗೂ ಮೆಡಿಕಲ್ ರಕ್ಷಣೆ ಸಿಗುತ್ತದೆ. ಪ್ರಾಧ್ಯಾಪಕರ ಮಕ್ಕಳ ಕಾಲೇಜು ಶಿಕ್ಷಣದ ವೆಚ್ಚವನ್ನು ಆಡಳಿತ ಮಂಡಳಿಯೇ ಭರಿಸುತ್ತದೆ. ಅವರಿಗಾಗಿ 27 ಮನೆಗಳನ್ನು ಕಟ್ಟಿಸಿದ್ದೇ ಅಲ್ಲದೆ ಯಾವ ಕಾಲಕ್ಕೂ ಅವರ ಹಿತಸಂರಕ್ಷಣೆಯನ್ನು ಮಾಡುವಂಥ ನೈತಿಕ ಹೊಣೆಗಾರಿಕೆಯನ್ನು ಮಣಿಪಾಲದ ನಾಯಕರು ಹೊತ್ತಿರುವಂತೆ ಇದು ತನಕ ನಡೆದುಬಂದಿದೆ. ಶ್ರೀ ಟಿ. ಎ. ಪೈ ಅವರು ಎಲ್ಲ ಪ್ರಾಧ್ಯಾಪಕರಿಗೂ ಸಂಶೋಧನೆ ನಡೆಸಲು ಪ್ರೋತ್ಸಾಹ ನೀಡುವ ಭರವಸೆ ನೀಡಿದರು. ಅದರಂತೆ ಕೆ.ಬಿ.

---

* ಕುಮಾರಿ ನಿರ್ಮಲಾ ಪೈ ಇಂಗ್ಲೀಷಿನಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದಳು ! ಮದ್ರಾಸ್ ನಗರದ ಬುದ್ಧಿವಂತರನ್ನು ಸೋಲಿಸಿ !

ರಾಮಕೃಷ್ಣರಾಯರು ಡಾಕ್ಟರೇಟ್ ಗಳಿಸಿದಾಗ ಅವರಿಗೆ ಮೂರು ಮುಂಬಡ್ತಿ ಕೊಟ್ಟರು. ಸರಕಾರದ ಸಹಾಯಧನವಿಲ್ಲದೇನೆ ಅದೆಷ್ಟೋ ವರ್ಷ ನಮ್ಮ ಗ್ರಂಥಪಾಲಕರಿಗೂ, ವ್ಯಾಯಾಮ ಶಿಕ್ಷಕರಿಗೂ ಎಲ್ಲೂ ಇಲ್ಲದ ಸಂಬಳ ಕೊಟ್ಟರು.

ಟಿ. ಎ. ಪೈ 12 ವರ್ಷಗಳ ಕಾಲ ಕಾಲೇಜಿನ ವ್ಯವಸ್ಥಾಪಕರಾಗಿದ್ದರು. ಅವರಿಗೆ ಅಧ್ಯಾಪಕರ ಮೇಲೆ ಕನಿಕರ ಎಷ್ಟೋ ಅಷ್ಟೇ ವಿದ್ಯಾರ್ಥಿಗಳ ಮೇಲೆ ಕರುಣೆ. ಕೆಲವು ವರ್ಷ (1958 ಇರಬೇಕು) ಸೇಕಡಾ ಎಪ್ಪತ್ತರ ಮೇಲೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪೂರ್ತಿ ಸಂಬಳ ಮಾಫಿ ಮಾಡಿದ್ದಾರೆ. ಈಗಿನಂತೆ ಸರಕಾರದ ಆಧಾರವುಳ್ಳ ಶಿಷ್ಯವೇತನಗಳು ಆಗ ಇರಲಿಲ್ಲ. ಆದರೂ ಪೈ ಅವರು ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಸಲುವಾಗಿ ನಾವೇನು ಸವಲತ್ತು ನೀಡಿದರೂ ಅದಕ್ಕೆ ಸಮ್ಮತಿ ನೀಡುತ್ತಿದ್ದರು. ಪ್ರಾಧ್ಯಾಪಕರನ್ನೂ ವಿದ್ಯಾರ್ಥಿಗಳನ್ನೂ ಸರಿಯಾಗಿ ನೋಡಿಕೊಂಡರೆ ಕಾಲೇಜಿನ ಪರಿಣಾಮ ತನ್ನಷ್ಟಕ್ಕೆ ಉತ್ತಮವಾಗುವುದೆಂಬ ನಿಶ್ಚಯ ಜ್ಞಾನದಿಂದ ಟಿ. ಎ. ಪೈ ಪದೇ ಪದೇ ಕಾಲೇಜಿನ ಮುಂದೆ ತಮ್ಮ ಆದರ್ಶಗಳನ್ನು ಇಡುತ್ತಿದ್ದರು. ಹಂಬಲಗಳನ್ನು ತೋಡಿ ಕೊಳ್ಳುತ್ತಿದ್ದರು. ದೇಶದ ರಾಷ್ಟ್ರೀಯ ಲ್ಯಾಬೋರೇಟರಿಗಳಲ್ಲಿ ಅರ್ಧಾಂಶ ಹುಡುಗರು ಎಂ. ಜಿ. ಎಂ.ನವರೇ ಆಗಲಾರರೇಕೆ? ಪರಮಾಣು ಸಂಶೋಧನೆಯಲ್ಲಿ ಯಾರಾದರೂ ಎಂ. ಜಿ. ಎಂ. ವಿದ್ಯಾರ್ಥಿ ಹೆಸರು ಗಳಿಸಬಾರ ದೇಕೆ ? ದಲಿತವರ್ಗದಿಂದ ಬಂದವರಾದರೂ ಉತ್ತಮವಾಗಿ ತೇರ್ಗಡೆ ಹೊಂದಬಾರದೇಕೆ? ಹಿಂದುಳಿ ದವರೂ ಪರಿಶ್ರಮದಿಂದ ಮುಂದೆ ಬರಬಾರದೇಕೆ? ನಿಮ್ಮ ಪ್ರಯೋಗಾಲಯ ದೇಶದಲ್ಲೇ ಒಂದನೆಯದು ಎನಿಸಬಾರದೇಕೆ? ಗ್ರಂಥಾಲಯದ ಪ್ರಯೋಜನ ಹೆಚ್ಚು ಸಮಯ ಪಡೆಯುವಂತೆ ಏರ್ಪಾಟು ಮಾಡಬಾರದೇಕೆ? ಎಂದು ಹತ್ತಾರು ಪ್ರಶ್ನೆಗಳನ್ನು ಅವರು ಕೇಳದ ದಿನವಿಲ್ಲ. ಅವರ ಮನೋವಿಲಾಸಕ್ಕೆ ಅನುಗುಣವಾಗಿ ತಾಳ ಹಾಕಲು ನಮ್ಮಿಂದ ಆಗದೆ ಹೋದರೂ ಅವರ ಮಾತು ನಮ್ಮ ಗುರುವೃಂದದ ಮನಸ್ಸಿನಲ್ಲಿ ಮಾಗಿ ಹಣ್ಣಾಗಿದೆ, ಹಣ್ಣು ನೀಡಿದೆ. ಕಾಲೇಜು ಗಳಿಸುತ್ತಿರುವ ರ್‍ಯಾಂಕುಗಳ ಶ್ರೇಣಿಯಿಂದಾಗಿ ನಮ್ಮ ಹೆಸರು ವಿಶ್ವವಿದ್ಯಾನಿಲಯದ ದಾಖಲೆಯಲ್ಲಿ ಶ್ರೇಷ್ಠತ್ವಕ್ಕೆ (ಎಕ್ಸಲೆನ್ಸ್) ಮನ್ನಣೆ ಪಡೆದಿದೆ. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ತನ್ನ ಪ್ರಯೋಗಗಳಿಗೆ ಎಂ. ಜಿ. ಎಂ. ಸಮರ್ಪಕವಾದ ಸ್ಥಳವೆಂದು ಆಯ್ದುಕೊಂಡಿದೆ. ವಿಜ್ಞಾನ ಶಿಕ್ಷಣೋನ್ನತಿ (ಕಾಸಿಪ್), ಬೇಸಗೆ ಶಿಬಿರ (ಸಮ್ಮರ್ ಇನ್‌ಸ್ಟಿಟ್ಯೂಟ್) ಮುಂತಾದ ಕಾರ್ಯಕ್ರಮಗಳಿಗೆ ಇದೇ ಪ್ರಶಸ್ತ ರಂಗಸ್ಥಳವೆಂದು ದಿಲ್ಲಿಯ ಅರಿವಾಗಿದೆ.

ಡಾ. ಪೈ ಅವರ ಆಡಳಿತ ಕ್ರಮದ ವಿಷಯ ಒಂದು ಮಾತು ಹೇಳಬೇಕು. ಮಣಿಪಾಲದ ಎಕಾಡೆಮಿ ನಡೆಸುವ ಎಲ್ಲ ಸಂಸ್ಥೆಗಳಿಗೂ ಪೈ ನೀಡುವ ಸ್ವಾತಂತ್ರ್ಯ, ಅಲ್ಲಿನ ಕಾರ್ಯಕರ್ತರ ಮೇಲೆ ಅವರು ಇಡುವ ಮಾನವೀಯ ವಿಶ್ವಾಸ, ಪ್ರಾಧ್ಯಾಪಕರ ಮೇಲೆ ಅವರಿಗಿರುವ ಗೌರವ ಕಾಲೇಜು ಶಿಕ್ಷಣ ಪ್ರವರ್ತಕರಲ್ಲಿ ಅಪೂರ್ವವೆನ್ನಬಹುದು. ಪೈಗಿಂತ ಮೊದಲು ಬೃಹದಾಕಾರವಾಗಿ ಕಾಲೇಜು ಕಟ್ಟಿದವರಿದ್ದಾರೆ. ಆದರೆ ಅಂಥಲ್ಲಿ ಅಧಿಕಾರವೆಲ್ಲ ಕೇಂದ್ರೀಕೃತ. ಪೈ ಅವರದು ವಿಕೇಂದ್ರೀಕರಣದ ಗಾಂಧೀಮಾರ್ಗ. ಸ್ಥಳವಂದಿಗರ ನಿರ್ಣಯಕ್ಕೇ ಅವರು ಬದ್ಧರು. ಆರ್ಥಿಕ ಪೋಷಣೆ ತಮ್ಮ ಹೊಣೆ; ಸಂಸ್ಥೆಯ ಆಂತರಿಕ ಧೋರಣೆ ಅಲ್ಲಿನ ಪ್ರಾಧ್ಯಾಪಕ ಮಂಡಳಿಯ ವಶ. ಒಳಶಿಸ್ತಿನ ವಿಷಯದಲ್ಲಿ ಯಾವ ಸಂದಿಗ್ಧಕ್ಕೂ, ಅಸ್ಪಷ್ಟತೆಗೂ, ಅಧಿಕಾರದ ಸಂಘರ್ಷಕ್ಕೂ ಪೈ ಆಸ್ಪದ ನೀಡುವುದಿಲ್ಲ. ಯಾರು ಏನು ಮಾಡಬೇಕು, ಎಷ್ಟು ಸ್ವಾತಂತ್ರ್ಯ ಯಾರಿಗೆ ಕೊಡಬೇಕು; ಎಷ್ಟು ನಿಯಂತ್ರಣ ತನ್ನ ಕೈಯಲ್ಲಿರಬೇಕು – ಎಂಬುದನ್ನು ಪೈ ಬಲ್ಲರು.. ವಿದ್ಯಾರ್ಥಿಗಳ ಪ್ರವೇಶ, ಪ್ರಾಧ್ಯಾಪಕರ ನೇಮಕ, ಮತ್ತು ಆಂತರಿಕ ಶಿಸ್ತು ಪಾಲನೆಗಳಲ್ಲಿ ಆಡಳಿತ ಹಸ್ತಕ್ಷೇಪ ಮಾಡಬಾರದೆಂಬುದು ಅವರ ಅಚಲ ನಿರ್ಧಾರ. ಮೂವತ್ತೆರಡು ವಿದ್ಯಾಸಂಸ್ಥೆಗಳನ್ನಾಳುವ ಈ 'ಕುಲಪತಿ' ಎಂದೂ ಚಿಂತಿತರಾದದ್ದು, ಉದ್ರಿಕ್ತರಾದದ್ದು ನಾವು ಕಾಣೆವು. ಹತ್ತು ಸಾವಿರ ವಿದ್ಯಾರ್ಥಿಗಳು, ಎಂಟುನೂರು ಪ್ರಾಧ್ಯಾಪಕರುಳ್ಳ ಅಕಾಡೆಮಿಯ ಅಧ್ಯಕ್ಷತನವನ್ನು ಲೀಲಾಜಾಲವಾಗಿ ಹೊರುವ ಪೈ ಅವರ ಕರ್ತವ್ಯ ಶಕ್ತಿಗೆ ಎಣೆಯೇ ಇಲ್ಲ. ಅವರ ಜತೆ ಹೆಗಲುಕೊಟ್ಟು ದುಡಿಯಲು ಅಣ್ಣನ ಮಗ ರಮೇಶ ಪೈ ಅವರನ್ನು ತಯಾರಿಸಿದ್ದಾರೆ. ರಮೇಶ ಪೈ ನಿಜಕ್ಕೂ ಸವ್ಯಸಾಚಿಗಳು. ತನ್ನ ಅವಿರತ ಔದ್ಯಮಿಕ ಚಿಂತಾಭಾರದ ನಡುವೆ ನಾಲ್ಕಾರು ತಾಸು ಅಕಾಡೆಮಿಯ ದೈನಂದಿನ ಆಡಳಿತಕ್ಕೆ ಇವರು ನೀಡುತ್ತಾರೆ. ಒಂದು ದೊಡ್ಡ ಸಾರ್ವಜನಿಕ ಖಾತೆ ಮಾಡುವ ಕೆಲಸವನ್ನು ರಮೇಶ ಪೈ ಒಬ್ಬರೇ ಮಾಡಬಲ್ಲರು. ಯಾವ ಡಿಗ್ರಿಯನ್ನೂ ಪಡೆಯದ ರಮೇಶ ಪೈ ಮಾತಾಡಿದ್ದನ್ನು ಕೇಳಿ ಎಷ್ಟೋ ಜನ ಅವರಿಗೆ ಮುಫತ್ತಾಗಿ ಡಾಕ್ಟರೇಟ್ ದಯ ಪಾಲಿಸಿ ಅವರ ಬಗ್ಗೆ ಡಾ. ರಮೇಶ ಪೈ ಎಂದು ಉಸಿರು ಹಿಡಿದು ಮಾತನ್ನಾಡುವುದುಂಟು. ಶತಾವಧಾನಿ ಗಳಾದ ರಮೇಶ ಪೈ ಎಕಾಡೆಮಿಯ ಸಮರ್ಥ ಸಾರಥಿ. ಅವರಿಗೆ ಜಗತ್ತೆಲ್ಲ ಸ್ನೇಹಿತರು. ನಾಲ್ಕಾರು ಸಲ

ಭೂಪ್ರದಕ್ಷಿಣೆ ಮಾಡಿಬಂದ ಅವರ ಹತ್ತಿರ ದಿನಕ್ಕೊಂದು ನೂತನ ಯೋಜನೆಗಳಿವೆ. ಶಿಕ್ಷಣದ ಬಗ್ಗೆ ಅವರೊಡನೆ ಚರ್ಚೆ ಮಾಡಿದರೆ ಬುದ್ಧಿಗೆ ಸಾಣೆ ಹಿಡಿದಂತಾಗುತ್ತದೆ. ಎಂಥ ಜಡ ಚೇತನವನ್ನೂ ಅವರ ವಾಗ್ವೈಖರಿ ಅಲ್ಲಾಡಿಸ ಬಲ್ಲದು, ಸಮ್ಮೋಹಿಸಬಲ್ಲದು.

ಎಂ.ಜಿ.ಎಂ. ಆಡಳಿತ ಸಮಿತಿಯ ಪ್ರಥಮ ಅಧ್ಯಕ್ಷ ಕೊಚ್ಚಿಕಾರ ಪದ್ಮನಾಭ ಪೈ 1949ಕ್ಕೆ ಊರಿಗೇ ಹಿರಿಯರಾಗಿದ್ದವರು. ಬಾಂಬೇ ಲೈಫ್ ವಿಮಾ ಕಂಪನಿಯ ಪ್ರತಿನಿಧಿಗಳಾಗಿ ಅವರು ಉಡುಪಿಯ ಅಜ್ಜರ ಕಾಡಿಗೆ ಶೋಭಾಯಮಾನವಾದ ಒಂದು ತಾರಸಿ ಕಟ್ಟಡ ನಿರ್ಮಿಸಿದ್ದು ನನ್ನ ಬಾಲ್ಯಕಾಲದ ಒಂದು ರೋಮಾಂಚಕ ಘಟನೆಯಾಗಿತ್ತು. ಅವರು ಅಧ್ಯಾಪಕರನ್ನು ಬಲು ಪ್ರೀತಿಯಿಂದ ಕಂಡವರು. ಅವರ ಅನಂತರ ಅಧ್ಯಕ್ಷರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಉಡುಪಿಯ ಹೆಸರಾಂತ ವಕೀಲರು, ನಗರಪತಿಗಳು, ಜಿಲ್ಲೆಯ ಸಾಮಾಜಿಕ ಕಾರ್ಯಕರ್ತರು, ಸಾರಿಗೆ ಉದ್ಯಮದಾರರು. ಉಡುಪಿಯ ಅಭಿವೃದ್ಧಿಯ ಮೇಲೆ ಅವರಿಗೆ ಅತ್ಯಂತ ಅಭಿಮಾನ. ಬಡ ವಿದ್ಯಾರ್ಥಿಗಳ ಮೇಲೆ ಅವರ ಕರುಣೆ ಅಪಾರ. ಕಾಲೇಜಿನ ಮೊದಲ ವರ್ಷದಿಂದಲೂ ಅವರು ಪ್ರತಿಭಾವಂತರಿಗೆ ಶಿಷ್ಯವೇತನಗಳನ್ನು ನಿರ್ಮಿಸುತ್ತಲೇ ಬಂದರು. ವಿಶ್ರಾಂತಿ ಜೀವನವನ್ನು ಅವರು ನಮ್ಮ ಸಂಸ್ಥೆಯ ಸೇವೆಗೆ ಮುಡಿಪಾಗಿಟ್ಟರು. ಆರಂಭದ ಸದಸ್ಯರಾದ ಶ್ರೀ ಸುಂದರರಾಮ ಪೈ ಅವರು ಮತ್ತು ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯಕರೂ, ಪಾಂಗಾಳ ಜನಾರ್ಧನ ನಾಯಕರೂ ಅತ್ಯಂತ ಉತ್ಸಾಹ ದಿಂದ ಕಾಲೇಜಿಗೆ ಸಹಕಾರ ನೀಡಿದರು. ಪೈ ಅವರ ತಮ್ಮನಾದ ಶ್ರೀ ಟಿ.ಆರ್.ಎ.ಪೈ. ಕಾಲೇಜು ಸಮಿತಿಯ ಕಾರ್ಯದರ್ಶಿಯಾಗಿ ಶಿಸ್ತಿನಿಂದ ಕರ್ತವ್ಯ ಸಾಧಿಸಿದ್ದಾರೆ. ಆರೂರು ಲಕ್ಷ್ಮೀನಾರಾಯಣ ರಾಯರ ನಿಧನಾ ನಂತರ ಕಾಲೇಜಿನ ಅಧ್ಯಕ್ಷರಾಗಿ ನೇಮಕಗೊಂಡವರು ಅವರ ಚಿರಂಜೀವರಾದ ಆರೂರು ರಾಮಮೋಹನ ರಾಯರು, ಅವರ ಕಾರ್ಯಕ್ಷೇತ್ರ ಮಂಗಳೂರಾದರೂ ದಕ್ಷತೆಯ ಮಾರ್ಗದರ್ಶನವನ್ನು ಕಾಲೇಜಿಗೆ ನೀಡು ತ್ತಿರುವುದಲ್ಲದೆ ತಮ್ಮ ತೀರ್ಥರೂಪರ ಸತ್ಯ ಸಂಪ್ರದಾಯ ಪಾಲನೆಯಂತೆ ಸಂಸ್ಥೆಯ ವಿದ್ಯಾರ್ಥಿ ಕ್ಷೇಮದ ಅಗತ್ಯ ಗಳನ್ನು ಉದಾರ ದಾನಗಳಿಂದ ಪೂರಯಿಸುತ್ತಿದ್ದಾರೆ. ಶ್ರೀ ಟಿ.ಎ.ಪೈ. ಅವರು ಎಲ್ ಐ ಸಿಯ ಅಧ್ಯಕ್ಷರಾಗಿ ಹೊರಡುವ ವೇಳೆ ತನ್ನ ವ್ಯವಸ್ಥಾಪಕ ಸ್ಥಾನವನ್ನು ಅವರ ಮಿತ್ರರಾದ ಶ್ರೀಪತಿ ಆಚಾರ್ಯರ ಹತ್ತಿರ ಕೊಟ್ಟರು. ಇವರಂಥ ಸಜ್ಜನರೂ, ಪರೋಪಕಾರಿಗಳೂ ವಿರಳ, ಮಲ್ಪೆಯ ಮತ್ತೋದ್ಯಮಿ ಮಧ್ವರಾಜರು ನಮ್ಮ ಈ ಮಂಡಳಿಯ ಇನ್ನೊಬ್ಬ ಸದಸ್ಯರು. ಆಡಳಿತ ಮಂಡಳಿ ಕೇವಲ ಹಿನ್ನಲೆಯಲ್ಲಿದ್ದೇ ಇಡೀ ಸಂಸ್ಥೆಯ ಕಾರ್ಯ ಕಲಾಪಗಳನ್ನು ಅಧ್ಯಾಪಕ ಮಂಡಳಿಗೂ ಅದರ ಕರ್ಣಧಾರತ್ವವನ್ನು ಪ್ರಿನ್ಸಿಪಾಲರಿಗೂ ವಹಿಸಿದ್ದರಿಂದಲೇ ಎಂ.ಜಿ.ಎಂ. ನಿಶ್ಚಿಂತೆಯಿಂದ ಕಾರ್ಯ ನಿರತವಾಗಿದೆ.

ಪ್ರಿನ್ಸಿಪಾಲ ಸುಂದರರಾಯರು ಎಂ. ಜಿ. ಎಂ.ನ ಸತ್ಸಂಪ್ರದಾಯಗಳ ನೇತಾರರಾಗಿ ಸಂಸ್ಥೆಯನ್ನು ಹದಿನೈದು ವರ್ಷ (1949–1964) ನಡೆಸಿದರು. ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಗಲ್ಭ ಪಂಡಿತರೂ, ಅನ್ನಿಬೆಸೆಂಟ್ ಪ್ರಣೀತವಾದ ರಾಷ್ಟ್ರೀಯ ಮನೋವೃತ್ತಿಯವರೂ, ಧರ್ಮಭೀರುಗಳೂ ಆದ ಹೆವ್ಮಾಡಿ ಸುಂದರ ರಾಯರ ವ್ಯಕ್ತಿತ್ವ ನಮ್ಮ ಕಾಲೇಜಿಗೆ ತೂಕ ಮತ್ತು ಶೋಭೆಗಳನ್ನು ತಂದುಕೊಟ್ಟಿತು. ಇಂಗ್ಲಿಷ್ ಸಾಹಿತ್ಯ ಪ್ರವಚನದ ಅವರ ವೈಖರಿ ಅದ್ವಿತೀಯವಾದದ್ದು, ವಿದ್ಯಾರ್ಥಿಗಳ ಚಿತ್ತಕ್ಷಿತಿಜದಲ್ಲಿ ಅವಿಸ್ಮರಣೀಯವಾದದ್ದು. ಕಿರಿಯ ಅಧ್ಯಾಪಕರಾದ ನಮ್ಮನ್ನು ಅವರು ನೋಡಿಕೊಂಡ ಪರಿ ಕಳೆದುಹೋದ ಯಾವುದೋ ಸಂಸ್ಕೃತಿಗೆ ಸೇರಿದ್ದೆಂದು ಈಗ ನಮಗನಿಸುತ್ತಿದೆ. ನಿಷ್ಠುರದ ಯಾವ ಮಾತನ್ನೂ ಅವರು ನಮಗೆ ಆಡಲಾರರು, ಅಷ್ಟು ಇಂಗ್ಲಿಷಿದ್ದೂ ಅವರಿಗೆ ಅದಕ್ಕೆ ಪದಗಳೇ ಸಿಗಲೊಲ್ಲವು. ಕಿರಿಯರ ಜೊತೆ ಸೇರಿ ದುಡಿಯುವುದೆಂದರೆ ಅವರಿಗೆ ಉತ್ಸಾಹ. ನಮ್ಮ ಜತೆ ಅವರು 50ನೇ ವರ್ಷ ದಾಟಿದ ಮೇಲೂ ನಾಟಕದಲ್ಲಿ ಪಾತ್ರವಹಿಸಿದ್ದಿದೆ. ಕಠಿಣವಾದ ಶಿಸ್ತು, ಉದಾರವಾದ ಕ್ಷಮೆ – ಎರಡನ್ನೂ ಸರಿದೂಗಿಸಿಕೊಂಡು ಸುಂದರರಾಯರು ಕಾಲೇಜಿನ ಧುರೀಣತ್ವವನ್ನು ಊರೆಲ್ಲ ಸೈ ಎನ್ನುವಂತೆ ನಿರ್ವಹಿಸಿದರು. ಅವರ ಅಸಾಮಾನ್ಯ ವಾಗ್ವೈಖರಿ, ಅಲೆಅಲೆಯಾಗಿ ಹೊರಳುವ ವಿಲಕ್ಷಣ ನಗು, ಸೌಮ್ಯ ವಿನೋದಪರತೆ, ಗಂಭೀರ ಪಾಂಡಿತ್ಯ, ಉನ್ನತ ಶಿಕ್ಷಣದ ಕುರಿತ ಆಳವಾದ ಕಾಳಜಿ – ಅವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಶೈಕ್ಷಣಿಕ ಇತಿಹಾಸದಲ್ಲಿ ಸ್ಥಿರವಾದೊಂದು ಅಗ್ರಸ್ಥಾನವನ್ನು ಒದಗಿಸಿದೆ. ಉಡುಪಿಯ ಜಾಯಮಾನಕ್ಕನುಗುಣವಾದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂದರ್ಭಗಳನ್ನು ಏರ್ಪಡಿಸಿದಷ್ಟೇ ಉಮೇದಿನಿಂದ ಸುಂದರರಾಯರು ವನಮಹೋತ್ಸವವನ್ನೂ ಆಚರಿಸುತ್ತಿದ್ದರು. ಕಾಲೇಜಿನ ಸಂಪನ್ಮೂಲ ಹೆಚ್ಚಾಗಿರದಿದ್ದ 1950ರ ದಶಕದಲ್ಲಿ ಅವರು ನೆಟ್ಟ ಹಲವು ಗಿಡಗಳು ಗೋ ಸೇವೆಗೆ ಅನುಕೂಲವಾದರೂ, ಬದುಕಿ ಉಳಿದವುಗಳ ಮೇಲೆ ಅವರಿಗೆ ಮನುಷ್ಯರ ಮೇಲಿದ್ದಷ್ಟೇ ಪ್ರೀತಿ. ಅವರ ಆದರ್ಶಗಳು ನಮ್ಮಲ್ಲಿ ಕೆಲವರ ಮೇಲಾದರೂ ಪ್ರಭಾವ ಬೀರಿವೆ.

ಸುಂದರರಾಯರು ಹಾಕಿದ ತಳಹದಿಯ ಮೇಲೆ ಕಾಲೇಜಿನ ಭವ್ಯ ಪರಂಪರೆ ನಿರ್ಮಿತವಾಯಿತು. ಎಲ್ಲ ಪರಿಕರಗಳ ಏಕಮೇವ ಉದ್ದೇಶ – ವಿದ್ಯಾರ್ಥಿಗಳ ಪ್ರತಿಭಾ ಪಾಲನೆ, ಅವರ ಚಾರಿತ್ರ್ಯ ವಿಕಾಸ, ಶೀಲಸಂವರ್ಧನೆ.

ಮೊದಲ ವರ್ಷದಲ್ಲೇ ಪಿ. ಜಿ. ಪಿ. ಇಂಗ್ಲಿಷಿನಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ, ಸುವರ್ಣ ಪದಕ ಪಡೆಯಿತು (ಸುವರ್ಣಾ ಪೈ) ಎಂಬುದನ್ನು ಮರೆಯಲೂ ಮರೆಯಲಾಗುತ್ತಿಲ್ಲ. ಇದೊಂದು ಶುಭ ಸೂಚನೆಯಾಗಿ ಕಾಲಕ್ರಮದಲ್ಲಿ ಬುದ್ಧಿವಂತ ವಿದ್ಯಾರ್ಥಿಗಳನ್ನು ಜಿಲ್ಲೆಯ ಒಳಗಿಂದಲೂ, ಹೊರಗಿಂದಲೂ ಆಕರ್ಷಿಸುವ ಸಾಮರ್ಥ್ಯವನ್ನು ಇಲ್ಲಿನ ಪ್ರಾಧ್ಯಾಪಕರ ಪರಿಶ್ರಮ ಮತ್ತು ವಿದ್ಯಾರ್ಥಿಗಳ ಮಹಿಮೆ ಸಂಪಾದಿಸಿಕೊಂಡವು. ಕೇವಲ ಮೂರನೇ ದರ್ಜೆ ಪಾಸಾಗಿ ಸೇರಿದ ವಿದ್ಯಾರ್ಥಿಯೂ ಪ್ರಾಮಾಣಿಕನಾಗಿದ್ದರೆ ಪ್ರಥಮ ದರ್ಜೆಯಲ್ಲಿ ಡಿಗ್ರಿ ಅರ್ಜಿಸುವುದು ಇಲ್ಲಿ ಸಾಮಾನ್ಯ. ಬರಬರುತ್ತ ಸರ್ಕಾರದ ರಾಷ್ಟ್ರೀಯ ಶಿಷ್ಯವೃತ್ತಿ ಪಡೆದವರ ಒಂದು ಪಂಗಡವೇ ಇಲ್ಲಿ ನಿರ್ಮಾಣವಾಗಿದೆ. ಅಖಿಲ ಕರ್ನಾಟಕದಲ್ಲಿ ನಮಗಿಂತ ಹೆಚ್ಚು ಸಂಖ್ಯೆಯಿರುವ ಕಾಲೇಜುಗಳಲ್ಲಿಯೂ ನಮ್ಮಲ್ಲಿರುವಷ್ಟು ಪ್ರತಿಭಾವಂತರಿಲ್ಲವೆಂಬುದು ಒಂದು ವರ್ಷ ಕಾಲೇಜು ಶಿಕ್ಷಣ ಇಲಾಖೆಯವರು ಕಳಿಸಿದ ರಾಷ್ಟ್ರೀಯ ಶಿಷ್ಯವೇತನ ಪಟ್ಟಿಯಿಂದ ನಮಗೆ ಗೋಚರವಾಯಿತು. 'ರ್‍ಯಾಂಕ್'ಗಳ ಸಂಖ್ಯೆಗೆ ಪರಿಶ್ರಮದಷ್ಟೇ ಅದೃಷ್ಟವೂ ಅಗತ್ಯ. ನಮ್ಮಲ್ಲಿ ಅದು ಬಂದಾಗ ನಾವು ಸಂತೋಷಪಡುತ್ತೇವೆ; ಬರದಿರುವಾಗ ದುಃಖಿ ಪಡುವುದಿಲ್ಲ. ಕಾರಣ: ಹತ್ತು ರ್‍ಯಾಂಕುಗಳ ಕೆಳಗಿನ ನೂರಾರು ಪ್ರತಿಭಾವಂತ ವಿದ್ಯಾರ್ಥಿಗಳು ನಮ್ಮಲ್ಲೂ ಇತರ ಕಾಲೇಜುಗಳಲ್ಲೂ ಹರಡಿಕೊಂಡಿದ್ದಾರೆನ್ನುವುದು ನಮಗೆ ಖಚಿತವಾಗಿದೆ. ರ್‍ಯಾಂಕಿಗಿಂತ ಶೇಕಡಾವಾರು ಫಲಿತಾಂಶ ಹೆಚ್ಚು ಅರ್ಥಪೂರ್ಣವಾದದ್ದು – ಬೇರಾವ ಮಾನದಂಡವೂ ಇಲ್ಲದಿರುವಾಗ ಶೇಕಡಾಗಳಿಂದ ಶಿಕ್ಷಣ ಸಂಸ್ಥೆಯ ಗುಣಮಟ್ಟವನ್ನು ಪಾಲಕ ಮಹನೀಯರು ಅಳೆದರೆ ತಪ್ಪಲ್ಲ. ಬೇರೆ 'ಮಾನ'ಗಳು ನಮಗೆ ಸಿಗುವ ತನಕ ಇವನ್ನಾದರೂ ನದರಿನಲ್ಲಿಟ್ಟುಕೊಂಡಿರುವುದು ಕ್ಷೇಮ. ವಿದ್ಯಾರ್ಥಿ ಸಂಖ್ಯೆ ಹೆಚ್ಚಾದಾಗ ನಮ್ಮಲ್ಲೇ ಇದರ ಬಗ್ಗೆ ವೈರಾಗ್ಯ ಮೂಡುವುದುಂಟು; ಸುಖಜೀವನಕ್ಕಾಗಿ ಬರುವ ವಿದ್ಯಾರ್ಥಿ ಇದರ ಬಗ್ಗೆ ಔದಾಸೀನ್ಯ ತಾಳುವುದುಂಟು – ಇವೆರಡೂ ವಿದ್ಯಾರಂಗಕ್ಕೆ ಮಾರಕವಾಗುವ ಪ್ರವೃತ್ತಿಗಳು. ವಿಶ್ವವಿದ್ಯಾನಿಲಯಗಳು ಜಾರುವ ದಾರಿಯಲ್ಲಿ ಮುನ್ನುಗ್ಗುತ್ತಿರುವ ವೇಳೆ ಇವಷ್ಟು ಮರ್ಯಾದೆಯನ್ನಾದರೂ ಕಾಪಾಡಿಕೊಳ್ಳ ಬೇಕಾದರೆ ನಾವು ನಮ್ಮ ರ್‍ಯಾಂಕು ಮತ್ತು ಶೇಕಡಾಗಳಿಗೆ ಜೋತುಬೀಳದೆ ಉಪಾಯವಿಲ್ಲ.

1949ರಲ್ಲಿ ಕಾಲೇಜು ಜನ್ಮವೆತ್ತಿದಾಗ ಅಜ್ಜರಕಾಡು ವಾರ್ಡು ಇಲ್ಲಿನ ಪ್ರತಿಷ್ಠಿತರ ನಿವಾಸ ಸ್ಥಾನ ವಾಗಿತ್ತು. ಅಲ್ಲೇ ದೊಡ್ಡದಾದ ಕುರುಚಲು ಮೈದಾನವೂ ಇತ್ತು. ಆದರೆ ಮದರಾಸು ಸರ್ಕಾರ ಅದನ್ನು ಗೋ ಚರಾವಿಗೆ ಮೀಸಲಿಟ್ಟಿದ್ದರಿಂದ ಕಾಲೇಜು ಉಡುಪಿಯ ಕೃಷ್ಣನಂತೆ ಪಶ್ಚಿಮದಿಂದ ತಿರುಗಿ ಪೂರ್ವಕ್ಕೆ ಮುಖ ಮಾಡಿತು. ಸಗರೀಗುಡ್ಡ ಮಣಿಪಾಲಕ್ಕೆ ಹೋಗುವ ದಾರಿಯ ಎಡಪಕ್ಕದ ಬಟ್ಟಬಯಲು. ಊರಿನ ನಟ್ಟನಡುವಿನಿಂದ ಒಂದು ಮೈಲು ದೂರದ ಈ ಬಯಲಿನಲ್ಲಿ ಡಾ. ಪೈ ಕಾಲೇಜಿನ ಪ್ರಥಮ ಕಟ್ಟಡದ ಶಿಲಾನ್ಯಾಸ ಮಾಡಿದರು. ರಾತ್ರಿ ಹಗಲು ತಾವೇ ಮೇಲ್ವಿಚಾರಣೆ ನೋಡಿಕೊಂಡರು. ಶ್ರಮದಾನಕ್ಕೆ ಊರವರನ್ನೆಲ್ಲ ಸೇರಿಸಿದರು. ಉಡುಪಿಯ ಸ್ವಾಮಿಗಳನ್ನೂ ಶ್ರಮದಾನಕ್ಕೆ ಆಹ್ವಾನಿಸಿದರು. ಅವರಲ್ಲಿ ಕೆಲವರು ಒಂದು ಗುದ್ದು ಮಣ್ಣು ಹೊತ್ತರು. ಸೋದೆ ವಾದಿರಾಜ ಮಠದ ಯತಿವರ್ಯರು ವಿದ್ಯಾರ್ಥಿಗಳಿಗಾಗಿ ಒಂದು ವಸತಿಗೃಹ ಒದಗಿಸಿದರು. ಇದೇ ನಮ್ಮ ಮೊದಲಿನ ವಸತಿಗೃಹ. ಪೇಜಾವರ, ಅದಮಾರು ಶ್ರೀಗಳವರ ನೇತೃತ್ವದಲ್ಲಿ ಸಂಸ್ಕೃತ ವಿದ್ಯೆಗೆ ಮೀಸಲಾಗಿದ್ದ ಉಡುಪಿಯ ಭೋಜನಶಾಲೆ 'ಮ್ಲೇಚ್ಛ' ವಿದ್ಯೆಗೂ ತೆರವಾಯಿತು. ಸಾವಿರಾರು ವಿದ್ಯಾರ್ಥಿಗಳಿಗೆ ನಿತ್ಯವೂ – ಈಗ ಕೆಲ ವರ್ಷಗಳಿಂದ ಜಾತಿಭೇದವಿಲ್ಲದೆ – ಅನ್ನಸಂತರ್ಪಣೆ ನಡೆಯುತ್ತಿದೆ. ಇದರಿಂದ ಉಡುಪಿಯು ನಮ್ಮ ಕಾಲೇಜಿಗೆ ತೆಂಕುತಿಟ್ಟಿನವರೂ ಅರಸಿಕೊಂಡು ಬರುವಂತಾ ಯಿತು. ಅಗ್ಗದ ಬಿಡಾರ, ಧರ್ಮಾರ್ಥ ಊಟ, ಬಡ ವಿದ್ಯಾರ್ಥಿಗಳಿಗೆ ವರದಾನವಾಯಿತು (ಪಡೆದ ಈ ದಾನಕ್ಕೆ ಅವರು ಉತ್ಕರ್ಷಕ್ಕೆ ಬಂದ ಮೇಲೆ ಕೃತಜ್ಞರಾಗಿದ್ದಾರೋ ಎಂಬುದು ಅನ್ನಹಾಕಿದ ಶ್ರೀಗಳವರಿಗೂ ಆ ಪೊಡವಿ ಗೊಡೆಯನಿಗೂ ಮಾತ್ರವೇ ಗೊತ್ತು); ಅಂತೂ ಉಡುಪಿಯ ಅನ್ನದಾನದ ಸಂಪ್ರದಾಯ (ಇದು ಅನ್ನದಹನದ ಒಂದು ಪೋಳಿ ಎಂದು ಅ.ನ.ಕೃ. ಎಲ್ಲೋ ಹೇಳಿದ್ದಾರೆ) ಆಧುನಿಕ ವಿದ್ಯೆಯನ್ನೂ ಪುಷ್ಟಗೊಳಿಸಲು ಸಿದ್ಧವಾಯಿತು.

ವಿದ್ಯಾರ್ಥಿ ಸಂಖ್ಯಾನುಸಾರ ಕಾಲೇಜಿನ ಕಟ್ಟಡಗಳನ್ನು ಹೊಂದಿಸುವ ಕೆಲಸವನ್ನು ಧರ್ಮದರ್ಶಿಗಳು ಸತತವಾಗಿ ಕೈಗೊಂಡರು. ರಾಜ್ಯ ಪುನರ್ವಿಂಗಡಣೆಯ ಬಳಿಕ ನಾವು ಸೇರಿದ ಮೈಸೂರು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿ ನಮಗೆ 1956ರ ಹೊತ್ತಿಗೆ ಬಿ.ಎ. ಬಿ.ಎಸ್.ಸಿ., ಬಿ.ಕಾಂ. ಪದವಿ ತರಗತಿಗಳು ದೊರಕಿದವು. 1960ರ ದಶಕ ಕಾಲೇಜಿನ ಬೆಳವಣಿಗೆಗೆ ನಿರಾತಂಕವಾದ ಅವಧಿಯೆನಿಸಿತು. ಮಾಧವ ಪೈ ವಿಜ್ಞಾನ ಮಂದಿರದ ನಿಂತ ಕೆಲಸ 8 ವರ್ಷಗಳ ಮೇಲೆ ಸಂಪೂರ್ಣವಾದದ್ದು ಆಗ. ಒಳಗಿನ ಸಂಪನ್ಮೂಲಗಳು ಕಡಮೆ ಇದ್ದು, ಹೊರಗಿನ ನೆರವು ಇಲ್ಲದಿರುವ ಕಷ್ಟದ ಕಾಲದಲ್ಲೂ ಆಡಳಿತ ಮಂಡಳಿ ವಿದ್ಯಾರ್ಥಿಗಳ ಅನುಕೂಲಗಳನ್ನು ಮರೆಯಲಿಲ್ಲ. ಶ್ರೀ. ಕೆ. ಆರ್.ಕೆ. ಭಟ್ಟರು ದಾನವಾಗಿ ನೀಡಿದ ಅವರ ಹಳೇ ಮನೆಯಲ್ಲಿ 25 ವಿದ್ಯಾರ್ಥಿನಿಯರಿಗೆ ಹಾಸ್ಟಲನ್ನು ಒದಗಿಸಿದ್ದು, ಸಿಮೆಂಟು ಹಾಕಿದ ಗೋದಾಮನ್ನು ಕ್ಯಾಂಟೀನಾಗಿಯೂ ವಿದ್ಯಾರ್ಥಿನಿಯರ ವಿಶ್ರಾಮ ಭವನವನ್ನಾಗಿಯೂ ಪರಿವರ್ತಿಸಿದ್ದು, ಸಗರಿಯ ಆಟದ ಮೈದಾನವನ್ನು ಸಮತಟ್ಟು ಮಾಡಿದ್ದು, ಗೋಡೆ-ಬಲೆ ಇಲ್ಲದೆಯೂ

ಉಪವನಗಳನ್ನು ನಿರ್ಮಿಸಲು ಹೆಣಗಿದ್ದು, ಯಾತಕ್ಕೂ ಬಾರದ ರಿಕ್ರಿಯೇಶನ್ ಹಾಲನ್ನು ಗೋಣಿತಟ್ಟಿನ ಮುಚ್ಚಿಗೆಯಿಂದ ರವೀಂದ್ರ ಮಂಟಪವಾಗಿ ಪರಿವರ್ತಿಸಿದ್ದು, ನೀರಿಲ್ಲದೆಯೂ ತೆಂಗಿನ ತೋಟ ಬೆಳೆಸಿ ಸಿಗುವ ಸೋಗೆಯಿಂದಲೇ ತೃಪ್ತರಾಗಬೇಕಾದದ್ದು, ಡಾ. ಪೈ ಸಗರಿಯ ಮೊದಲ ವರ್ಷದಲ್ಲಿ (1951) ನೆಡಿಸಿದ ಮಾವಿನ ಗಿಡಗಳಿಂದಾಗಿ ಒಂದು ಮಾವಿನ ತೋಪೇ ಬೆಳೆದದ್ದು ಇವೆಲ್ಲ ಕಾಲೇಜು ವೃದ್ಧಿಯ ರಸಪೂರ್ಣ ಅಂಶಗಳು. ಯು.ಜಿ.ಸಿ. ನೆರವಿನ ಸೂಚನೆ ಸಿಕ್ಕೊಡನೆ 1960ರಲ್ಲಿ ಸುಂದರರಾಯರು ಗ್ರಂಥಾಲಯಕ್ಕೆ ಹೊಸದೊಂದು ಭವನದ ರಂಗೋಲೆ ಹಾಕಿದರು. ಹೆಣ್ಮಕ್ಕಳಿಗಾಗಿ ಹಾಸ್ಟೆಲಿನ ನಕ್ಷೆ ಬಿಡಿಸಿದರು. ಇವೆರಡೂ ಅಕ್ಕಪಕ್ಕದಲ್ಲಿ ನಮ್ಮ ಕ್ಯಾಂಪಸಿನ ಪೂರ್ವಭಾಗದಲ್ಲಿ ನಿಂತಿವೆ. ಗ್ರಂಥಾಲಯ – ಪುಸ್ತಕ ಎಂದರೆ ಸುಂದರರಾಯರಿಗೆ ಪ್ರೀತಿ. ಅವರು ಮದರಾಸಿಗೆ ಹೋದಾಗಲೆಲ್ಲ ಅಲ್ಲಿನ ಮಹಾದೇವನ್ ಅವರ ಗ್ರಂಥಭಂಡಾರದಿಂದ ಪುಸ್ತಕ ಹೊತ್ತು ತರುವರು: ಅಥವಾ ಕೂತಲ್ಲೇ ಟೈಮ್ಸ್ ಸಾಹಿತ್ಯ ಸಾಪ್ತಾಹಿಕದಲ್ಲಿ ಹಸುರು ಶಾಯಿಯ ಗುರುತು ಹಚ್ಚಿ ಇಂಗ್ಲೆಂಡಿನಿಂದಲೇ ನೇರವಾಗಿ ಪುಸ್ತಕ ಆಮದು ಮಾಡುವರು. ಅವರು ತರಿಸಿದ ಇಂಗ್ಲಿಷ್ ಸಾಹಿತ್ಯದ ಮೌಲಿಕ ಮತ್ತು ವಿಮರ್ಶನ ಗ್ರಂಥಗಳಿಂದ ಎಂಥ ಎಂ.ಎ. ತರಗತಿಯನ್ನೂ ನಾವು ನಡೆಸಬಹುದಾಗಿದೆ. ಸಾಲದ್ದಕ್ಕೆ ಕಾರ್ಪೊರೇಷನ್ ಬ್ಯಾಂಕಿನ 10000-00 ದೇಣಿಗೆಯಿಂದ ತೊಡಗಿದ ನಮ್ಮ ಗ್ರಂಥಾಲಯಕ್ಕೆ ಹತ್ತು ಕಡೆಗಳಿಂದ ದೈವ ಸಹಾಯ ಒದಗಿ ಬಂತು. ಈಗ ಕಾಲೇಜು ಗ್ರಂಥಾಲಯಗಳ ಪೈಕಿ ನಮ್ಮದೇ ಸಂಖ್ಯೆಯಲ್ಲಿ ದೊಡ್ಡದು. ಸುಂದರರಾಯರ ಅಧಿಕಾರಾವಧಿಯಲ್ಲಿ ಕಾರ್ಕಳದಿಂದ ತಂದ ಎರಡು ಸಾವಿರ ಪುಸ್ತಕಗಳ ಒಂದು ಇಡೀ ಗ್ರಂಥ ಭಂಡಾರದಲ್ಲಿ ವಿಶಿಷ್ಟವಾದ ಕೃತಿಗಳಿವೆ. ಈ ಗ್ರಂಥ ಭಂಡಾರ ಕಾರ್ಕಳದವರೇ ಆದ ಡಾ. ಸೋಮನಾಥ ಭಟ್ಟ ಎಂಬ ಸಾರಸ್ವತ ಮಹನೀಯರದ್ದು. ಅವರು ಲಂಡನ್ನಿನ ಹಾರ್ವೇ ಸ್ಟ್ರೀಟಿನಲ್ಲಿ ಪ್ರಸಿದ್ಧ ಯುದ್ಧಕಾಲದಲ್ಲಿ ಖಂಡಾಂತರ ಸೇವೆ ಸಲ್ಲಿಸಿದ್ದರು. ಅವರ ಪುಸ್ತಕದ ಹುಚ್ಚಂತೂ ಅದ್ಭುತ. ಓದಲು ಮಾತ್ರವೇ ಅಲ್ಲ, ಸಂಗ್ರಹಿಸುವುದಕ್ಕಾಗಿಯೂ ಅವರು ಪುಸ್ತಕ ಕೊಂಡಿರಬೇಕು. ಜಾನ್ಸನ್ ನಿಘಂಟು (1810ನೆ ಇಸವಿ) ಪ್ರತಿ ನಮ್ಮಲ್ಲಿದೆ. ಆ್ಯಡಿಸನ್‌ನ ಸ್ಪೆಕ್ಟೇಟರ್ ಪ್ರತಿಗಳಿವೆ. ಅಲಗರ್‌ಸಾಲ್, ವಾಲ್ಟೇರ್, ಅನಾತೋಲ್ ಫ್ರಾನ್ಸ್, ಯೂಜಿನ್ ಸ್ಯೂ ಮುಂತಾದ ಪ್ರಸಿದ್ಧ ಲೇಖಕರ ಸಕಲ ಕೃತಿಗಳ ಶ್ರೇಣಿಯೇ ಇದರಲ್ಲಿ ಅಡಕವಾಗಿದೆ. ಜೇಮ್ಸ್ ಫ್ರೇಸರನ 'ಗೋಲ್ಡನ್ ಬೌ' ಇದೆ. ಡಾ. ಭಟ್ಟರು ಸ್ವತಃ ಸಂಪಾದಿಸುತ್ತಿದ್ದ 'ಸೋಮಾ' ಎಂಬ ನಿಯತಕಾಲಿಕ ಬಲು ಸ್ವಾರಸ್ಯವಾಗಿದೆ. ಡಾ॥ ಭಟ್ಟರಿಗೆ ಇಂಗ್ಲಂಡಿನ ಸಮಕಾಲೀನ ಲೇಖಕರ ಪರಿಚಯ, ಸ್ನೇಹ ಇದ್ದದ್ದು ಮಾತ್ರವೇ ಅಲ್ಲ, ಸ್ವತಃ ಸಾಹಿತ್ಯಾಸಕ್ತಿಯೂ ಇತ್ತೆಂಬುದಕ್ಕೆ ಈ ಸಂಚಿಕೆಗಳು ಸಾಕ್ಷಿ. ಇಂಥ 2000 ಗ್ರಂಥಗಳ ತವನಿಧಿಗೆ (ಪಳೆಂಟು ಕಪಾಟುಗಳ ಸಮೇತ) ನಾವು ತೆತ್ತ ಬೆಲೆ ಕೇವಲ 2500. ಡಾ. ಭಟ್ಟರ ಸಂಗ್ರಹದ ಬಳಿಕ ನನ್ನ ಕಣ್ಣಿಗೆ ಬಿದ್ದ 'ಅನಾಥ' ಸಂಗ್ರಹ ದಿವಂ ರಾಷ್ಟ್ರಕವಿ ಗೋವಿಂದ ಪೈ ಅವರದ್ದು. ಗೋವಿಂದ ಪೈ ಅವರು ತೀರಿದ ಮೂರನೇ ವಾರವೇ ಮಂಗಳೂರಿನವರು ಅತ್ಯುತ್ಸಾಹದಿಂದ ಘಟಾನುಘಟಿಗಳ ಒಂದು ಸಮಿತಿ ರಚಿಸಿ, ರಾಜ್ಯದ ಮುಖ್ಯಮಂತ್ರಿಯನ್ನೇ ಅದರ ಅಧ್ಯಕ್ಷತೆಗೇರಿಸಿ ಮಂಜೇಶ್ವರವನ್ನು ಕನ್ನಡಿಗರ ಕಾಶಿಯಾಗಿ ಮಾಡುವ ಬೃಹತ್ ಯೋಜನೆಯನ್ನು ಜಾಹೀರು ಮಾಡಿದರು. ಆದರೆ ಮುಖ್ಯಮಂತ್ರಿಗಳು ಕೆಲ ತಿಂಗಳಲ್ಲಿ ಉರುಳಿದ ಮೇಲೆ ಮಂಗಳೂರಿಗರು ಮಂಜೇಶ್ವರವನ್ನು ಮರೆತು ಬಿಟ್ಟರು. ನಾನು ಮಾತ್ರ ಆ ಮನೆಯ ಇರಸ್ತಿಕೆಯನ್ನು ಸ್ವಲ್ಪ ಬಲ್ಲವನಾಗಿ, ಮಂಗಳೂರಿಗರ ನಿರಭಿಮಾನವನ್ನು ಹೆಚ್ಚು ಬಲ್ಲವನಾಗಿ, ಈ ಗ್ರಂಥಾಲಯವನ್ನು ಹೇಗಾದರೂ ಮಾಡಿ ಕೇರಳದಿಂದ ವರ್ಗಾಯಿಸದಿದ್ದರೆ ಅನ್ಯಾಯವಾಗುತ್ತದೆಂದು ಶ್ರೀ ತುಕಾರಾಮ ಪೈ ಅವರನ್ನು ವಿನಯಪೂರ್ವಕವಾಗಿ ಅಂಗಲಾಚಿದೆ. ಅದಾವುದೋ ಸಮುಹೂರ್ತದಲ್ಲಿ ವಾರ್ಸಿಟಿ ಪ್ರೇಕ್ಷಕರಾಗಿ ಬಂದ ದೇ.ಜ.ಗೌ. ಅವರು ನನ್ನ ಪರವಾಗಿ ಅಂದರೆ ನಮ್ಮ ಕಾಲೇಜಿನ ಪರವಾಗಿ ಒಂದು ಮಾತು ಹಾಕಿದ್ದರಿಂದ ತುಕಾರಾಮ ಪೈ ಅವರಿಗೆ ನಮ್ಮ ಮೇಲೆ ವಿಶ್ವಾಸ ಬಂದಿತು. ಮಂಜೇಶ್ವರಕ್ಕೆ ಅವರೇ ಹೋಗಿ, ಹಿರಿಯರನ್ನು ಒಪ್ಪಿಸಿ 'ಬಂದು ಕೊಂಡು ಹೋಗಿ' ಎಂದು ನಮಗೆ ಕರೆಕೊಟ್ಟರು. ಕೂಡಲೇ ಅದೊಂದು ಬೇಸಗೆಯ ರಜಾದಿನ ನಮ್ಮ ಗ್ರಂಥಾಲಯದ ಸಕಲ ಸಿಬ್ಬಂದಿಯನ್ನೂ ಮಂಜೇಶ್ವರಕ್ಕೆ ಕಳಿಸಿದೆ: ಹಿರಿಯರಾದ ಅನಂತ ಪೈ ಅವರು ನಮ್ಮ ಸಿಬ್ಬಂದಿಯವರನ್ನು ಬಲು ಪ್ರೀತಿಯಿಂದ ನಡೆಸಿದರು. ಉಟೋಪಚಾರ ಒದಗಿಸಿದರು. ಆದರೆ ಶರ್ತ ಮಾತ್ರ ಹಿಂತೆಗೆಯಲಿಲ್ಲ – 5000 ಪುಸ್ತಕಗಳ ಯಾದಿಯನ್ನು ಸಿದ್ಧಗೊಳಿಸಿದ ಮೇಲೆಯೇ ನೀವು ಪುಸ್ತಕವನ್ನು ವರ್ಗಾಯಿಸಬಹುದೆಂದು ಅವರ ತಾಕೀತು. ನಾವು ಒಪ್ಪಿದೆವು. ನಮ್ಮ ಗ್ರಂಥಪಾಲ ರತ್ನಾಕರ ಪೈ ಒಂದಿಷ್ಟೂ ಬೇಸರವಿಲ್ಲದೆ ಏಳು ದಿನ ಮಂಜೇಶ್ವರದಲ್ಲೇ ಠಾಣ್ಯ ಹೂಡಿ ಪಟ್ಟಿ ಮಾಡಿದರು. ಅದರ ದ್ವಿಪ್ರತಿ, ಮುಪ್ರತಿ ಮಾಡಿದರು. ಈ ಕೆಲಸದಲ್ಲಿ ಮಂಜೇಶ್ವರಕ್ಕೆ ಅಳಿಯಂದಿರಾದ ನನ್ನ ಮಿತ್ರ, ಉಡುಪಿಯ ಆಗಿನ ಸಂಸತ್ಸದಸ್ಯ ಪರ್ಕಳ ರಂಗನಾಥ ಶೆಣೈ ನಮಗೆ ನೆರವಾದರು. ಈ ನಡುವೆ ನಾನು ನಾಲ್ಕಾರು ಬಾರಿ ಮಂಜೇಶ್ವರ ಯಾತ್ರೆ ಮಾಡಿದೆ. ಕೊನೆಯ ಯಾತ್ರೆ ಲಾರಿಯಲ್ಲಿ: ಲಾರಿ ಉಡುಪಿ ಮುಟ್ಟಿದ ಮೇಲೆ ಆ ರಾತ್ರಿ ಸಂತಸದ ನಿದ್ದೆ ನಮಗೆಲ್ಲ. ಗೋವಿಂದ ಪೈ ಗ್ರಂಥಾಲಯ ನಮ್ಮಲ್ಲಿಗೆ ಬರುವುದಕ್ಕೂ ನಮ್ಮ ಹಳೆ ಗ್ರಂಥಾಲಯ ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವುದಕ್ಕೂ ಮೇಳ ಬಿತ್ತು. ಆದ್ದರಿಂದ 5000 ಪುಸ್ತಕಗಳನ್ನು ನಮ್ಮ ಲೈಬ್ರರಿಯಲ್ಲೇ ಇರಿಸಿದೆವು.

ಈಗ ನನ್ನ ಕಾರ್ಯಾಲಯಕ್ಕೆ ಗೋವಿಂದ ಪೈ ಗ್ರಂಥಭಂಡಾರವೇ ಸ್ವಾಗತ ಕಚೇರಿಯಾಗಿದೆ. ಅವರ ಗ್ರಂಥಗಳಿಗೆ ಬರಹದ ಪಟ್ಟಿ ಮಾಡಿಸಿದ್ದೇವೆ – ಇಲ್ಲಿನ ಅಪೂರ್ವ ಗ್ರಂಥಗಳನ್ನು ಹುಡುಕಿಕೊಂಡು ಎಲ್ಲೆಲ್ಲಿಂದಲೋ ಸಂಶೋಧಕರು ಬರುತ್ತಾರೆ. ಇದರ ಸುತ್ತಲೂ ಒಂದು ಸಂಶೋಧನಾ ಕೇಂದ್ರ ನಿರ್ಮಿಸಿದ್ದೇವೆ; ಪಾದೂರು ಗುರುರಾಜ ಭಟ್ಟರ ಮಾರ್ಗದರ್ಶನದಲ್ಲಿ ಒಂದು ವಸ್ತುಸಂಗ್ರಹಾಲಯ ಕಟ್ಟಿದ್ದೇವೆ. ಇವೆರಡೂ ಯಾವುದೇ ಪದವಿಪೂರ್ವ ಕಾಲೇಜು ಹಿಂದೆ ಮಾಡಿರದಂಥ ಉದ್ಯಮಗಳೆಂಬ ಹೆಮ್ಮೆ ನಮಗುಂಟು. ಆರ್ಥಿಕ ತಾಪತ್ರಯದಿಂದಾಗಿ ಕೆಲಸ ಮಂದವಾಗಿ ಸಾಗುತ್ತದೆ; ಆದರೆ ನಮ್ಮ ಗುರಿ ನಿಶ್ಚಿತವಾಗಿರುವುದರಿಂದ ಕಾಲಕ್ರಮದಲ್ಲಿ ಸಂಶೋಧನೆಯನ್ನು ತ್ವರೆಗೊಳಿಸಲು ಸಾಧ್ಯವೆಂದು ನಾವು ಬಗೆದಿದ್ದೇವೆ. ಸದ್ಯವೇ ಈ ಗ್ರಂಥಸಂಗ್ರಹದ ಮುದ್ರಿತ ಯಾದಿಯೊಂದು ಸಿದ್ಧಗೊಳಿಸಬೇಕಾಗಿದೆ. ಇತ್ತೀಚೆಗೆ ಕಾರಂತರು ಪುತ್ತೂರಿನಿಂದ ಸಾಲಿಗ್ರಾಮಕ್ಕೆ ಮರಳುವ ವೇಳೆ ತಮ್ಮ ಲೈಬ್ರರಿಯ ಸುಮಾರು ಒಂದು ಸಾವಿರ ಸಂಪುಟಗಳನ್ನು ನಮ್ಮ ಗ್ರಂಥಾಲಯಕ್ಕೆ ದಾನ ಮಾಡಿದರು. ಇದನ್ನು 'ಶಿವರಾಮ ಕಾರಂತ ಸಂಗ್ರಹ'ವೆಂಬುದಾಗಿ ಪ್ರತ್ಯೇಕಿಸಿದ್ದೇವೆ.*

ಯು.ಜಿ.ಸಿ. ನೆರವಿನಿಂದ 1964ರಲ್ಲಿ ನಿರ್ಮಿತವಾದ ನಮ್ಮ ಗ್ರಂಥಾಲಯದ ಕಟ್ಟಡದಲ್ಲಿ ಸಾರ್ಥಕವಾದ ವಿದ್ಯಾರ್ಥಿ ಸ್ವಾಧ್ಯಾಯ ನಡೆಯುತ್ತಿರುವುದು ನನಗೆ ಅತೀವ ಆನಂದದ ವಿಷಯ. 1972ರಲ್ಲಿ ಕಟ್ಟಿದ 'ವಿಕ್ರಮಶಿಲೆ'ಯಲ್ಲಿ ಇನ್ನಷ್ಟು ಸೌಲಭ್ಯ ಕಲ್ಪಿಸಿ ರಾತ್ರಿ ಎಂಟರವರೆಗೂ ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಬಾಗಿಲು ತೆರೆದಿಟ್ಟು ಅವರ ಅಧ್ಯಯನದ ರುಚಿ ಬೆಳೆಯುವಂತೆ ಮಾಡಿದ್ದೇವೆ. ಅದೆಷ್ಟು ಶ್ರದ್ಧೆಯಿಂದ, ಅವಿರತವಾದ ದುಡಿಮೆಯಿಂದ ನಮ್ಮ ಕಾಲೇಜಿನ ಹಳೆವಿದ್ಯಾರ್ಥಿಯೆ ಆಗಿರುವ ರತ್ನಾಕರ ಪೈ ಇದನ್ನು ನಡೆಸಿದ್ದಾರೆಂಬುದನ್ನು ವಿದ್ಯಾರ್ಥಿಗಳು ಎಂದಿಗೂ ಮರೆಯಲಾರರು. ಆದರಂತೆ ಕಾಲೇಜಿನ ಅಧ್ಯಯನ ಮತ್ತು ಅಧ್ಯಾಪನ ಪರಂಪರೆಯನ್ನು ಬೆಳೆಸಿದ ನನ್ನ ಎರಡನೆ ಸಾಲಿನ ತರುಣ ಪ್ರಾಧ್ಯಾಪಕರೂ ಹಿಂದೆ ನಮ್ಮ ವಿದ್ಯಾರ್ಥಿಗಳಾಗಿದ್ದರೆಂಬುದನ್ನು ಇಲ್ಲಿ ಸೂಚಿಸಬೇಕು. ಸ್ವಪ್ರತಿಭೆ ಮತ್ತು ಶ್ರದ್ಧೆಗೆ ನಮ್ಮಲ್ಲಿ ಸೇರಿದ ನಮ್ಮ ಹಳೆ ವಿದ್ಯಾರ್ಥಿ ಪ್ರಾಧ್ಯಾಪಕರನ್ನು ಎತ್ತಿ ಹೇಳಬೇಕು. ಅವರಲ್ಲೊಬ್ಬರನ್ನು (ಶ್ರೀ ಎನ್. ವಜ್ರ ಕುಮಾರ) ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು ತಮ್ಮೊಂದು ದೊಡ್ಡ ಸಂಸ್ಥೆಯ ಸಮಸ್ಯಾ ಪೂರಣಕ್ಕಾಗಿ ಒಯ್ದು ಕಾರ್ಯದರ್ಶಿ ಸ್ಥಾನದಲ್ಲಿ ಕುಳ್ಳಿರಿಸಿದ್ದು ಎಂ.ಜಿ.ಎಂ.ಗೆ ಒಂದು ಗೌರವವೆಂದು ನಾನು ತಿಳಿದಿದ್ದೇನೆ.

ಎಂ.ಜಿ.ಎಂ. ಹೀಗೆ ಬೆಳೆಯಿತು. ಪಶ್ಚಿಮದಿಂದ ಪೂರ್ವಕ್ಕೆ ಸುಮಾರು ಮುಕ್ಕಾಲು ಮೈಲು ಹಬ್ಬಿದ ಸಗರಿ ಗುಡ್ಡದಲ್ಲಿ ಎಲ್ಲೂ ಕಟ್ಟೋಣವಿಲ್ಲದ ತೆರ ಜಾಗವೇ ಇಲ್ಲದಂತೆ ಮೂರು ಅಧ್ಯಯನ ಭವನಗಳೂ, ಎರಡು ಹಾಸ್ಟಲುಗಳೂ, ಮೂರು ನಾಟಕಗೃಹಗಳೂ, ಮೂರು ಗ್ರಂಥಾಲಯ ಸನ್ನಿವೇಶಗಳೂ, ಹದಿನೇಳು ಪ್ರಾಧ್ಯಾಪಕರ ನಿವಾಸಗಳೂ, ಎರಡು ಆಟದ ಬಯಲುಗಳೂ ವ್ಯಾಪಿಸಿದವು. ಉತ್ತರೋತ್ತರವಾದ ಈ ಅಭಿವೃದ್ಧಿಯ ಕೆಲವು ಸೋಪಾನಗಳನ್ನಷ್ಟೇ ಇಲ್ಲಿ ಲೇಖಿಸಿದ್ದೇನೆ. ಇದು ಬರಿಯ ರೇಖಾಚಿತ್ರವಷ್ಟೆ. ಇದರಲ್ಲಿ ಜೀವ ತುಂಬಿಸಿದವರು ನನ್ನ ಓರಗೆಯ, ನನ್ನ ಶಿಷ್ಯರಾದ, ನನ್ನ ಒಡನಾಡಿಗಳಾದ ಪ್ರಾಧ್ಯಾಪಕ ಬಂಧುಗಳು ಮತ್ತು ತರುಣ ವಿದ್ಯಾರ್ಥಿ ಮಿತ್ರರು. ಪ್ರಿನ್ಸಿಪಾಲತನವೆಂಬ ಘನತರ ಹುದ್ದೆ ಇವತ್ತಿಗೆ ಮುಳ್ಳಿನ ಮಣೆಯಂತಾಗಲು ಕಾರಣವೇನೆಂಬ ಸಂಶೋಧನೆಗೆ ನಾನೀಗ ಹೊರಡಲಾರೆ; ಆದರೆ ನಾನು ಕೂತ ಮಣೆಯಲ್ಲಿ ಇನ್ನೂ ಹೆಚ್ಚು ಮುಳ್ಳುಗಳು ಹುಟ್ಟಿಲ್ಲ ಎಂದಷ್ಟೇ ಸಮಾಧಾನ ಅಥವಾ ಮುಳ್ಳು ಚುಚ್ಚಲಾರದ ಗಟ್ಟಿತನ ನನ್ನ ಚರ್ಮಕ್ಕೆ ಮೂಡಿರಬಹುದೆ? ಏನಿದ್ದರೂ ಪರಿಸ್ಥಿತಿ ಹತೋಟಿಯಲ್ಲಿರುವಾಗಲೇ ಎಂ.ಜಿ.ಎಂ. ಬೆಳ್ಳಿಹಬ್ಬದ ಕಾರ್ಯಕ್ರಮ ಮುಗಿಸಬೇಕೆಂದು 1973ರ ಆರಂಭದಲ್ಲಿಯೇ ನಿರ್ಣಯಿಸಿ 1974ರ ಫೆಬ್ರವರಿ 7ರಿಂದ 11ರವರೆಗೆ ಐದು ದಿನ ಆಚರಣೆ ಮಾಡಿ ಸಂಪ್ರದಾಯವನ್ನು ಪಾಲಿಸಿದಂತಾಯಿತು. ನಾನು ಹೇಳ ಬೇಕಾಗಿದ್ದುದು ಬೆಳ್ಳಿಹಬ್ಬದ ಕಥೆ, ಹೇಳಿದ್ದು ಹಿಂದಿನ ಚರಿತ್ರೆ. ಇದೂ ಬೇಕು, ಚರಿತ್ರೆಯ ಬೇರಿಲ್ಲದೆ ವರ್ತಮಾನವೆಲ್ಲಿದೆ? ಭವಿಷ್ಯ ಹೇಗಾದೀತು?

ಕಾಲೇಜುಗಳಲ್ಲಿ ಸಾಹಿತ್ಯೋತ್ಸವದ ಸಂಪ್ರದಾಯದ ಮೂಲಕರ್ತರು ನಾವು. ಮೂರು ದಿನ ಮುದ್ದಣನ ಹೆಸರಿನಲ್ಲಿ ಪ್ರತಿ ವರ್ಷವೂ ಪಾಂಕ್ತವಾಗಿ ಕನ್ನಡ ಸಾಹಿತಿಗಳನ್ನು ಬರಮಾಡಿಕೊಂಡು ವಿದ್ಯಾರ್ಥಿಗಳಿಗೆ ಸಾಹಿತ್ಯ, ಸಂಸ್ಕೃತಿ ದರ್ಶನ ಮಾಡಿಸುತ್ತಿದ್ದೇವೆ. ಶತಮಾನೋತ್ಸವಗಳನ್ನು ಆಚರಿಸುತ್ತೇವೆ. ನಾವೇ ಉತ್ಸವಗಳನ್ನು ಬೀಜ ಬಿತ್ತಿ ಬೆಳೆಸುವುದೂ ಇದೆ. ಕಾರಂತರಿಗೆ ಅಭಿನಂದನ ಗ್ರಂಥ ಅರ್ಪಿಸುವ ಕಾರಂತ ಉತ್ಸವ ಇಂಥ ಒಂದು ಯೋಜನೆ (1969). ಇದನ್ನೆಲ್ಲ ನೋಡಿದ ಉಡುಪಿ ಮತ್ತು ಜಿಲ್ಲೆಯ ರಸಿಕರು ನಮ್ಮ ಬೆಳ್ಳಿಯ ಹಬ್ಬದ ಬಗ್ಗೆ ತುಂಬಾ ನಿರೀಕ್ಷೆಯಿಟ್ಟಿರುತ್ತಾರೆಂದು ನನಗೆ ಗೊತ್ತು. ಆದರೇನು ಮಾಡೋಣ, ಊರಿಗೆ ಬಂದ ಮಾರಿ ನಮ್ಮನ್ನು

---

* ಇನ್ನೂ ಕೆಲವು ಉಲ್ಲೇಖನೀಯ ಸಂಗ್ರಹಗಳು ಎಂ.ಜಿ.ಎಂ. ಲೈಬ್ರರಿಗೆ ದಾನವಾಗಿ ದೊರೆತಿವೆ: 1. ಡಾ. ಎನ್. ರಾಜಕುಮಾರ್ ಸಂಗ್ರಹ 2. ತೀರ್ಥಹಳ್ಳಿಯ ಜವಳಿ ಸಂಗ್ರಹ 3. ದಿವಂ. ಎನ್. ಎಸ್. ಕಿಲ್ಲೆ ಸಂಗ್ರಹ 4. ದಿವಂ. ಯಜ್ಞನಾರಾಯಣ ಉಡುಪರ ಸಂಗ್ರಹ.

ಚಿಂತೆಗೀಡು ಮಾಡಿತು. ಅತಿರೇಕ ಧಾರಣೆ ಏರಿಕೆಯ ಕಾಲದಲ್ಲಿ ಎಂಥ ಉತ್ಸವ ಮಾಡಲು ಸಾಧ್ಯ? ಎಷ್ಟು ವೆಚ್ಚ ಮಾಡಬಹುದು? ಊಟೋಪಚಾರ ಸೌಕರ್ಯ ನಮ್ಮ ಸಂಪ್ರದಾಯದಂತೆ ನಡೆಸಬೇಕಾದರೆ ಎಲ್ಲಿಂದ ಹಣ ತರೋಣ? 1974ರ ಕಾಲೇಜಿನ ಇಪ್ಪತ್ತೈದನೆಯ ವರ್ಷ, ಅದೇ ನಮ್ಮ ಲೆಕ್ಕದಲ್ಲಿ ಬೆಳ್ಳಿಹಬ್ಬದ ವರ್ಷ. ಜನವರಿಗೇ ಉತ್ಸವವೆಂದು ನಮ್ಮ ಮೊದಲ ತೀರ್ಮಾನ. ಅದು ಬುಡ ಮೇಲಾಗುವಂಥ ವಿದ್ಯಮಾನ 73ರ ದಶಂಬರದಲ್ಲಿ ನಾಡಿನ ಮೇಲೆ ಎರಗಿತು – ಅದೇ ಕಠಿಣತಮವಾದ ರಿಸರ್ವ್‌ಬ್ಯಾಂಕಿನ ಸಾಲ ಹಿಂಡುವ ನೀತಿ. ಅವರು ಸಾಲ ಹಿಂಡುವುದು ನಮಗೆ ಜೀವ ಹಿಂಡಿದಷ್ಟೇ ಪೀಡೆಯಾಯಿತು. ಧನಸಂಗ್ರಹಕ್ಕೆ ಹೊರಗೆ ಹೊರಡದಂತೆ ಮುಟ್ಟುಗೋಲಾಯಿತು. ಅಚ್ಚು ಮಾಡಿದ ವಿನಂತಿ ಪತ್ರಗಳೂ, ಕೂಪನುಗಳೂ ಮೂಲೆಪಾಲಾದುವು. ಆದರೂ ನಮ್ಮ ಹಳೆ ವಿದ್ಯಾರ್ಥಿಗಳನ್ನು ಹುರಿದುಂಬಿಸುವ ಕೆಲಸವನ್ನು ಬಿ.ವಿ. ಆಚಾರ್ಯರು ಸಮರ್ಪಕವಾಗಿ ಮಾಡುತ್ತಲೇ ಹೋದರು. ಪತ್ರ ವ್ಯವಹಾರವೇ ಭೇಟಿಗಿಂತ ಉತ್ತಮವೆನಿಸಿದ ಕಾಲ ಅದು. ದೇಶಾದ್ಯಂತ ಹರಡಿದ ನಮ್ಮ ವಿದ್ಯಾರ್ಥಿವೃಂದ ಮೆಲ್ಲಮೆಲ್ಲನೆ ಸಣ್ಣ ಮೊತ್ತದ ದಾನಗಳನ್ನು ಕಳಿಸಲು ತೊಡಗಿತು. ನೂರಿದ್ಪುದು ಸಾವಿರವಾಯಿತು; ಲಕ್ಷಕ್ಕೆ ಮುಟ್ಟಿದ್ದು ಜನವರಿ ಕೊನೆಯವಾರ. ಅಮೆರಿಕದಲ್ಲಿರುವ ನಮ್ಮ ವಿದ್ಯಾರ್ಥಿಗಳು ಹೆಚ್ಚಿನವರು ನೂರರ ಸದಸ್ಯತ್ವದಿಂದಲೇ ತೃಪ್ತರಾದರೂ ಆರೆಂಟು ಮಂದಿ ಸಾವಿರಕ್ಕೆ ಹಿಂಜರಿಯಲಿಲ್ಲ; ಕನಿಷ್ಠ ಪಕ್ಷ ಇನ್ನೂರು ಮಂದಿ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಅಮೇರಿಕ ಮತ್ತು ಇಂಗ್ಲೆಂಡ್‌ಗಳಲ್ಲಿ ಸುಖ ಸಂಪಾದನೆಯಲ್ಲಿರುವುದರಿಂದ ಅವರ ಜೀವನೋಲ್ಲಾಸದಲ್ಲಿ ಕಾಲೇಜಿಗೂ ಒಂದು ಪಾಲು ಕೊಟ್ಟಾರು: ಅವರನ್ನೇ ಮುಖತಃ ಕಂಡರೆ ಡಾಲರಿನಿಂದಲೇ ಒಂದು ಲಕ್ಷ ತರಬಹುದೆಂದು ನನಗೆ ಇನ್ನೂ ಆಸೆ ಇದೆ. ಪತ್ರ ವ್ಯವಹಾರದ ಮೂಲಕ ಬಂದದ್ದು ಕಡಮೆ. ಭಾರತೀಯ ಸನ್ನಿವೇಶದಲ್ಲಿ ಕಾಲೇಜಿನಿಂದ ಹೊರಬಿದ್ದ ಮೇಲೆ ಮಾತೃಸಂಸ್ಥೆಯ ಸಂಪರ್ಕ ಇಟ್ಟುಕೊಂಡಿರುವ ವಿದ್ಯಾರ್ಥಿ ಅಪರೂಪ. ಎಷ್ಟು ವಿಳಾಸ ಸಂಗ್ರಹಿಸಿದರೂ ಎದುರು ಪಾರ್ಟಿಯವರಿಗೆ ಉತ್ಸಾಹವಿಲ್ಲದೇ ಹೋದರೆ ಪ್ರಯೋಜನವಿಲ್ಲ. ವಿಳಾಸ ಬದಲಾವಣೆ ಆಧುನಿಕ ಉದ್ಯೋಗಗಳಲ್ಲಿ ಸಾಮಾನ್ಯ, ಅಲ್ಲವೆ? ಬದಲಾಗುವಾಗ ವಿದ್ಯಾರ್ಥಿ ನಮಗೆ ತಿಳಿಸಿದರೆ ಸರಿ, ಇಲ್ಲದಿದ್ದರೆ ಹಳೆ ವಿಳಾಸಗಳನ್ನು ಹಿಡಿದುಕೊಂಡು ಅವರನ್ನು ಮಾತಾಡಿಸಲು ಸಾಧ್ಯವೇ? ಇಷ್ಟಾಗಿಯೂ ನಮ್ಮಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವೆನ್ನಬೇಕು. ಪ್ರೊ. ಬಿ. ವಿ. ಆಚಾರ್ ಮತ್ತು ಯು.ಎಲ್. ಆಚಾರ್ಯರು ಸಹಜವಾದ ವಿದ್ಯಾರ್ಥಿ ಪ್ರೇಮದಿಂದ ಹಳೆ ವಿದ್ಯಾರ್ಥಿಗಳ ನಿರಂತರ ಸಂಪರ್ಕ ಇರಿಸಿಕೊಂಡಿದ್ದಾರೆ. ಅವರ ದೆಸೆಯಿಂದಲೇ ಅಷ್ಟಾದರೂ ಹೊರ ವಿಳಾಸ ನಮಗೆ ದೊರೆಯಿತು. ಧನ ಸಂಗ್ರಹದ ವೇಳೆ ನಮಗೆ ದೊರೆತ ಇನ್ನೊಂದು ಅನುಭವ – ಸದ್ಯದ ನಮ್ಮ ದೇಶದ ಪರಿಸ್ಥಿತಿಯಲ್ಲಿ ಹಳೆ ವಿದ್ಯಾರ್ಥಿಗಳನ್ನು ಪೂರ್ತಿ ನಂಬಿ ಯಾವ ಬೃಹತ್ ಯೋಜನೆಯನ್ನೂ ನಾವು ಹೂಡುವಂತಿಲ್ಲ. ಆರ್ಥಿಕ ಕಾರಣಗಳು ಯಾವ ಕಾಲಕ್ಕೂ ಇದ್ದಂಥವೇ. ಕೊಡುವ ಕೈಯನ್ನು ಹಿಂದೂಡುವ ಪ್ರೇರಣೆ ಹೊರಗಿನ ಒತ್ತಡಗಳಿಗಿಂತ ಹೆಚ್ಚಾಗಿ ಒಳಗಿನ ಔದಾಸೀನ್ಯದಿಂದ ಬರುತ್ತದೆಂದು ನಾನಂದುಕೊಂಡಿದ್ದೇನೆ. ಸುಸ್ಥಿತಿಯಲ್ಲಿರುವ ಎಷ್ಟೋ ವಿದ್ಯಾರ್ಥಿಗಳಿಂದ ನೂರು ರೂಪಾಯಿ ಸಂಪಾದಿಸಲೂ ನಾವು ವಿಫಲರಾಗಿದ್ದೇವೆ; ಆದರೆ ಸಾಮಾನ್ಯರೆಂದು ನಾವೆಣಿಸಿದ ಎಷ್ಟೋ ಮಹನೀಯರು ತಾವಾಗಿ ನೀಡಿದ್ದಾರೆ – ಅದಕ್ಕೆ ಇದು ಪ್ರಾಯಶ್ಚಿತ್ತ ಎಂಬಂತೆ.

ಎಂಟು ತಿಂಗಳ ಕಾಲ ನಾವು ಧನಸಂಗ್ರಹದ ಯೋಜನೆಯನ್ನು ಕಾಗದದಲ್ಲಿಟ್ಟು ಕೊಂಡಿರಬೇಕಾಯಿತು. ಯೋಜನೆಯಲ್ಲಿ ನಾಲ್ಕು ಅಂಶಗಳನ್ನು ಅಡಕಗೊಳಿಸಿದ್ದೆವು – 1. ನಮ್ಮ ಹಳೆವಿದ್ಯಾರ್ಥಿಗಳನ್ನು ಪತ್ರ ಮೂಲಕ ಸಂಪರ್ಕಿಸುವುದು, 2. ಮುಂಬಯಿ, ದಿಲ್ಲಿ, ಬೆಂಗಳೂರು, ಮಂಗಳೂರುಗಳಂಥ ಮಹಾನಗರಗಳಲ್ಲಿ ಹಳೆವಿದ್ಯಾರ್ಥಿಗಳ ಸಮಿತಿಯನ್ನು ರಚಿಸಿ, ಆ ಮೂಲಕ ಒಂದೆರಡು ಲಕ್ಷ ನಿಧಿಯನ್ನು ಕೂಡಿಸಲು ಪ್ರಯತ್ನ ಮಾಡುವುದು, 3. ಕಾಲೇಜಿನಲ್ಲಿ ಈಗ ಓದುತ್ತಿರುವ ವಿದ್ಯಾರ್ಥಿಗಳು ಒಂದು ರೂಪಾಯಿ ತಿಕೇಟಿನ ಮುಖಾಂತರ ಇಪ್ಪತ್ತೈದು ಸಾವಿರವನ್ನಾದರೂ ಸಂಗ್ರಹಿಸುವುದು, 4. ಬೆಳ್ಳಿಹಬ್ಬದ ಸಮಿತಿಯವರು ಊರ ಪರವೂರ ಮಹನೀಯರಿಂದ ಹೆಚ್ಚು ಮೊತ್ತದ ದೇಣಿಗೆಗಳಿಗಾಗಿ ಸಂಚಾರ ಮಾಡುವುದು. ಈ ಪೈಕಿ ಬೆಳ್ಳಿಹಬ್ಬದ ಹೊತ್ತಿಗೆ ಪೂರ್ತಿ ಯಶಸ್ವಿಯಾದದ್ದು ಮೂರನೆಯ ವಿದ್ಯಾರ್ಥಿ ಸಹಕಾರ ಕಾರ್ಯಕ್ರಮ ಮಾತ್ರ. ನಾಲ್ಕನೆಯದಕ್ಕಾಗಿ ನಾನೂ ಕೆಲ ಹಿತೈಷಿಗಳೂ ಅತ್ತಿತ್ತ ಅಲೆದಾಡಿದ್ದೇವೆ–ಆದರೆ ನಮ್ಮ ಪ್ರಯತ್ನ ಸಾಲದು. ಇನ್ನೂ ಮುಂದುವರಿಯಬೇಕಾಗಿದೆ. ಮುಂಬಯಿಯ ಎಂ.ಜಿ. ಎಮ್ಮೈಟ್ಸ್ ಸಂಘದವರು ಸುಮಾರು 15 ಸಾವಿರ ಕೂಡಿಸಿದ್ದಾರೆಂದು ಕೇಳಿದೆ. ಅವರು ಆರಿಸಿದ ಸಮಯ ಮುಂಬಯಿ ಕನ್ನಡಿಗರಿಗೆ – ಅದರಲ್ಲೂ ದಕ್ಷಿಣ ಕನ್ನಡಿಗರಿಗೆ ಅತಿ ಕೆಟ್ಟ ಅವಧಿಯಾಗಿತ್ತು. ಹೊರಗಿನ ಕ್ರೆಡಿಟ್ ನಿಯಂತ್ರಣದ ಜತೆಗೆ ಮರಾಠಿಗರ ದುಂಡಾವೃತ್ತಿಯಿಂದಾಗಿ ಯಾವ ಪ್ರಕಟಣೆಯನ್ನೂ ಮಾಡದೆ ಅವರು ಮೌನವಾಗಿ ಎಂ.ಜಿ.ಎಂ. ಬೆಳ್ಳಿಹಬ್ಬ ಆಚರಿಸಬೇಕಾಯಿತಂತೆ. ದಿಲ್ಲಿ, ಬೆಂಗಳೂರುಗಳಲ್ಲಿ ಇನ್ನೂ ಕೆಲಸ ನಡೆಯಬೇಕಾಗಿದೆ. ಮುಂಬಯಿಯಲ್ಲೂ ಇನ್ನಷ್ಟು ಪ್ರಯತ್ನ ಮಾಡಬಹುದು ಎಂದುಕೊಂಡಿದ್ದೇವೆ.

ಧನಸಂಗ್ರಹಕ್ಕಿಂತ ಸುಲಭವಾದದ್ದು ಉತ್ಸವದ ಯೋಜನೆ, ಆದರೆ ಆರ್ಥಿಕ ಸಂಕಟ ಜನವರಿಗೂ ಮುಗಿಯಲಿಲ್ಲ. ಉತ್ಸವವನ್ನು ಇಡೀ ವರ್ಷ ಮುಂದೂಡುವ ಸೂಚನೆ ಬಂತು. ಆದರೆ ನನಗೋ ಒಂದು ಕೆ.ಜಿ. ಅಕ್ಕಿಗೆ

5 ರೂಪಾಯಿ ಆಗಬಹುದಾಗ ಮಳೆಗಾಲ ಬರುವ ಮುನ್ನವೇ ಹಬ್ಬ ಆಚರಿಸಿ ಮುಗಿಸಿಬಿಡಬೇಕೆಂಬ ಹಂಬಲ. ಜನವರಿ ಮೊದಲ ವಾರದಲ್ಲಿ ಸಭೆ ಕರೆದು ಇನ್ನೊಂದು ತಿಂಗಳಲ್ಲಿ ಹಬ್ಬ ಆಚರಿಸುವುದಕ್ಕೆ ಬೆಳ್ಳಿ ಹಬ್ಬದ ಸಮಿತಿಯ ಅಪ್ಪಣೆ ಪಡೆದೆ. ವಿಜಯನಾಥ ಶೆಣೈ, ದಾಮೋದರ, ಮಾರ್ಟಿಸ್ ಮುಂತಾದ ನಮ್ಮ ಹಳೆಯ ವಿದ್ಯಾರ್ಥಿಗಳನ್ನು ಆಪ್ತಾಲೋಚನೆಗೆ ಕರೆದು ಯಾವ ಯಾವ ರೀತಿ ನೀತಿ ಉತ್ಸವ ಆಚರಿಸಬೇಕೆಂದು ಅಭಿಪ್ರಾಯ ಸಂಗ್ರಹಿಸಿದೆ. 1973ರ ಅಕ್ಟೋಬರದಿಂದ ಉತ್ಸವದ ತಿಂಗಳವರೆಗೂ ಪ್ರತಿ ತಿಂಗಳೂ ಒಂದಲ್ಲ ಒಂದು ಹಬ್ಬದ ಕಾರ್ಯಕ್ರಮ ನಡೆಸಬೇಕೆಂಬ ನಮ್ಮ ಪೂರ್ವದ ಯೋಜನೆ ಆಗಲೇ ಆರ್ಥಿಕ ಸಂಕಟದ ದೆಸೆಯಿಂದ ಅಂತರ್ಧಾನವಾಗಿತ್ತು. ಎಲ್ಲೂ ಉತ್ಸಾಹದ ಸುಳಿವೇ ಕಾಣಿಸದು. ಇತ್ತ ಸಂಗ್ರಹವೂ ನಿರೀಕ್ಷೆಯ ಯಾವ ಮಟ್ಟವನ್ನೂ ಮುಟ್ಟಿರಲಿಲ್ಲ. ಇಂಥ ದಾರುಣ ಸನ್ನಿವೇಶದಲ್ಲಿ ನನ್ನನ್ನೂ, ಈ ಮಹಾಸಂಸ್ಥೆಯನ್ನೂ ಕೈಕೊಟ್ಟು ನಡೆಸಿದವರು ಉಡುಪಿಯಲ್ಲಿ ದುಡಿಯುತ್ತಿರುವ ಕಾಲೇಜಿನ ಹಳೆ ವಿದ್ಯಾರ್ಥಿಗಳೆಂದು ಹೇಳಲು ನನಗೆ ಅತ್ಯಂತ ಅಭಿಮಾನವಾಗುತ್ತಿದೆ. ವರಮಾನದ ಚಿಂತೆಯನ್ನು 'ಉದಯವಾಣಿ'ಯ ಮೋಹನದಾಸ ಪೈ ಮತ್ತು ಸತೀಶ ಪೈ ಅವರು ಹೊತ್ತರು; ಸ್ವಯಂಸೇವಕತನದ ಗುರುತರ ಹೊಣೆಯನ್ನು ದಾಮೋದರ್, ಮಾರ್ಟಿಸ್, ಭಾಸ್ಕರ ಕಿಣಿ, ಸೋಮಶೇಖರ ಭಟ್ಟರು ವಹಿಸಿದರು; ಹಬ್ಬದ ಹಾದಿ ತೋರಿಸಲು ವಿಜಯನಾಥ ಶೆಣೈ ಹತ್ತು ಹಲವು ಯೋಜನೆಗಳನ್ನು ರೂಪಿಸಿದರು. ದೈನಂದಿನ ವ್ಯವಸ್ಥೆಗೆ ನನ್ನ ಸಹೋದ್ಯೋಗಿಗಳು ಟೊಂಕಕಟ್ಟಿದರು. ಒಂದೇ ಒಂದು ತಿಂಗಳು ಉತ್ಸವದ ರೂಪರೇಖೆ ಸಿದ್ಧವಾಯಿತು. ವಿಕ್ರಮಶಿಲಾ ಭವನದ ಹಿಂದುಗಡೆಯ ಬಯಲನ್ನು ಸಮತಟ್ಟು ಮಾಡಿ ಇಲ್ಲೇ ಹಬ್ಬದ ವೇದಿಕೆ ಸ್ಥಾಪಿಸುತ್ತೇವೆಂದು ಡಾ. ಪೈ ಅವರಿಗೆ ತೋರಿಸಿದೆ. ಒಂದೈದು ನಿಮಿಷ ಪೈ ಮೌನವಿದ್ದರು; ಅಷ್ಟು ವಿಶಾಲವಾದ ಬಯಲಿನಲ್ಲಿಪ್ರದರ್ಶನ, ಸಭೆ, ಕಾರ್ಯಕ್ರಮಗಳ ರಂಗೋಲೆ ಹಾಕಿರಬೇಕಾದರೆ ನಾನೇನೋ ದೊಡ್ಡದಾಗಿ ಯೋಚನೆ ಮಾಡಿದೆನೆಂದು ಅವರಿಗೆ ಕ್ಷಣಾರ್ಧದಲ್ಲಿ ವಿದಿತವಾಗಿತ್ತು. ಈ ಸ್ಥಳ ನೀನು ತುಂಬಿಸಿದರೆ ಅಖಿಲ ಉಡುಪಿ ಇಲ್ಲಿ ಹಾಜರಾಗುತ್ತದೆಂದು ಡಾ. ಪೈ ಧೈರ್ಯಕೊಟ್ಟರು. ಮಣಿಪಾಲದ ಸಂಸ್ಥೆಗಳ ಹತ್ತಿರ ಬೇಕಾದದ್ದು ಕೇಳು, ಕೊಡಿಸುತ್ತೇನೆ ಎಂದರು. ನನ್ನ ಸಹೋದ್ಯೋಗಿಗಳಿಗೆ ಮಾತ್ರ ನಂಬಿಕೆ ಬರಲಿಲ್ಲ; ನನಗೂ ಒಳಗಿಂದೊಳಗೆ ಅಂಜಿಕೆ. ಇಷ್ಟು ದೊಡ್ಡ ಸಭಾಮಂಟಪ ರಚಿಸಿ ಜನ ಬರದೆ ಹೋದರೆ, ನಾಟಕ ನೋಡಲು ಜನರಿಲ್ಲವಾದರೆ, ಒಂದೆರಡು ಮೈಲು ನಡೆದು ಬರಬೇಕಾದ ಜನ ಉದಾಸೀನರಾಗಿ ಬಿಟ್ಟರೆ – ಎಲ್ಲರಿಗೂ ಸಂದೇಹ, ಪ್ರದರ್ಶನಕ್ಕೆ 25 ಪೈಸೆ ಇಟ್ಟರೆ ಯಾರೂ ಬರಲಿಕ್ಕಿಲ್ಲ ಎಂದು ಕಳವಳ ಕೂಡ ಇತ್ತು.

ಒಂದು ದಿನ ನಮ್ಮ ಧರ್ಮದರ್ಶಿ ಮಂಡಳದ ಸದಸ್ಯರಾದ ಶ್ರೀಪತಿ ಆಚಾರ್ಯರನ್ನು, ರಮೇಶ ಪೈ ಅವರನ್ನು ಕರೆದುಕೊಂಡು ಉಡುಪಿಯ ದಾನಿಗಳನ್ನು ಭೆಟ್ಟಿಯಾದೆ. ಆ ಮೇಲೆ ಕೆಲವು ದಿನ ಡಾ. ಮೋಹನದಾಸ ಪೈ ಅವರನ್ನು ಕರೆದುಕೊಂಡು ಇರುಳು ಬೇಟೆ ಆಡಿದೆ. ಒಂದು ದಿನ ಮಲೆನಾಡು ಪ್ರದೇಶದ ಸ್ನೇಹಿತರನ್ನು ಕರೆದುಕೊಂಡು ಭಿಕ್ಷೆ ಎತ್ತಿದೆ. ನನ್ನ ವಿಶ್ವಾಸವೆಲ್ಲ ಮುಂಬಯಿ-ಡಿಲ್ಲಿ–ಬೆಂಗಳೂರುಗಳ ಮೇಲೆ. ಆದರೆ ಕ್ರೆಡಿಟ್ ಹಿಂಡು ವನೀತಿಯಿಂದ ಅಲ್ಲಿ ಕೆಲಸ ಸ್ಥಗಿತವಾಗಿತ್ತು. ಕಾಲೇಜಿನ ಪ್ರಸ್ತುತ ವಿದ್ಯಾರ್ಥಿಗಳು ಮಾತ್ರ ಜನವರಿ ಹೊತ್ತಿಗೆ 20000ದಷ್ಟು ಮೊತ್ತವನ್ನು ಒಂದು ರೂಪಾಯಿ ತಿಕೇಟಿನ ಮಾರಾಟದಿಂದಲೆ ಕೂಡಿಸಿದ್ದರು. ನಮ್ಮ ಬೆಳ್ಳಿಹಬ್ಬದ ಅಖಂಡ ಪ್ರಸಾರ ಅವರಿಂದಲೇ ಆಯಿತು. ಅವರಿಗೆ ಸ್ಪರ್ಧೆ ನಿಂತಂತೆ ನಮ್ಮ ಹಳೆ ವಿದ್ಯಾರ್ಥಿಗಳು ಒಂದು ಫ್ಯಾನ್ಸಿಫೀಟ್ ಏರ್ಪಡಿಸಿದರು. ರಾತ್ರಿ ಕಾಲದ ಕಬಡ್ಡಿ ಆಟ ಆಡಿಸಿದರು. ಅದರಿಂದ 8500 ರೂ ಕೂಡಿತು. ಏನು ಮಾಡಿದರೂ ಲಕ್ಷ ಗೆರೆ ಮುಟ್ಟಲಿಲ್ಲ. ಅಷ್ಟರಲ್ಲಿ ಸಮಿತಿಯ ಒಂದು ಸಭೆಗೆ ಬಂದ ನಮ್ಮ ಧರ್ಮದರ್ಶಿ ಮಧ್ವರಾಜರು ತಮ್ಮ 25000ದ ದೇಣಿಗೆಯನ್ನು ಪ್ರಕಟಿಸಿದರು. ಆಮೇಲೆ ಟಿ.ಎ.ಪೈ ಸಹೋದರರು 50000 ನೀಡಿದರು. ಹಬ್ಬದ ಸಮಯ ಸಮೀಪಿಸಿದಂತೆ ನಮ್ಮ ಗುರಿ ದೂರ ಹೋದಂತೆ ಅನಿಸುತ್ತಿತ್ತು. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ 5000 ಕೊಟ್ಟರು. ಗುರಿ ಅರ್ಧ ಹಾದಿ ಮುಟ್ಟಿದ್ದು ಉತ್ಸವದ ಹಿಂದಿನ ದಿನ ಡಾ. ಪೈ ಅವರ ಮಕ್ಕಳು 2,50,000ದ ವಾಗ್ದಾನ ಮಾಡಿದ ಮೇಲೆ, ಅಂತೂ 5 ಲಕ್ಷ ತಲುಪಿದ ಸಂತೋಷದಲ್ಲಿ ಹಬ್ಬ ತೊಡಗಿತು.

ಹಬ್ಬದ ಕಾರ್ಯಕ್ರಮದ ರಚನೆಯಲ್ಲಿ ನಮಗೆ ಮುಖ್ಯವಾದದ್ದು–ನಮ್ಮ ಸಂಸ್ಥೆಯ ಹಿತೈಷಿಗಳ, ಪೂರ್ವದ ಅಧ್ಯಾಪಕರ ಮತ್ತು ಮಾಜಿ ಪ್ರಿನ್ಸಿಪಾಲರ ಆಗಮನ ಒಂದನೆಯದು; ಎರಡನೆಯದು ಸಾಹಿತಿಗಳ ಮತ್ತು ಶಿಕ್ಷಣವೇತ್ತರ ಸಮಾಗಮ; ಅವರು ಯಾರು ಅವರೇನು ಮಾಡಿದರು; ಆಡಿದರು ಎಂಬ ವಿಷಯ ವಿಸ್ತೃತವಾದ ವರದಿ 'ಭಾಗ್ಯದ ಬಾಗಿಲು' ಎಂಬ ವರದಿಯಲ್ಲಿ ಪ್ರಕಟವಾಯಿತು. ನಾವು ಕರೆದವರೆಲ್ಲ ತಪ್ಪದೆ ಬಂದಿದ್ದಾರೆ (ಒಬ್ಬ ಸಚಿವರನ್ನು ಬಿಟ್ಟು) ದಿಲ್ಲಿಯಿಂದ ಬಂದವರಿಗೆಷ್ಟು ಸಂತೋಷವೋ ಹಳ್ಳಿಯಿಂದ ಬಂದವರಿಗೂ ಅಷ್ಟೇ ಆಯಿತು. ಸಚಿವರು ಮಾಡಬೇಕಾದ ಉದ್ಘಾಟನಾ ಕಾರ್ಯವನ್ನು ಕಾರಂತರು ಮಾಡಿದ್ದು ನಮಗೆ ಹಿತವೇ ಆಗಿತ್ತು. ದಿನದಿಂದ ದಿನಕ್ಕೆ ಜನಸಂದಣಿ ಅಧಿಕವಾಗುತ್ತ ಹೋಯಿತು. ಪ್ರದರ್ಶನದ ಆಕರ್ಷಣೆ ಹಗಲೆಲ್ಲ ಇದ್ದರೆ, ಸಂಜೆಯ ಸಭಾಕಾರ್ಯಕ್ರಮಕ್ಕೂ ಐದಾರು ಸಾವಿರ ಜನ ಹಾಜರಿ ಹಾಕಲು ತೊಡಗಿದರು. ಮೂರು ತಾಸಾದರೂ ಬಿಟ್ಟೇಳದೆ ಕೂತು ಆಲಿಸಿದರು. ಮೂರನೆಯ ದಿನ ನಮ್ಮ ಹಳೆವಿದ್ಯಾರ್ಥಿಗಳು ಒಂದು ಮಧುರ ಸನ್ನಿವೇಶವನ್ನು ನ...

ಮಾಡಿದರು. ಬಹಳ ಕಾಲ ಕಾಲೇಜಿಗೆ ಸೇವೆ ಸಲ್ಲಿಸಿದ ಪ್ರಾಧ್ಯಾಪಕರಿಗೂ, ಪ್ರಿನ್ಸಿಪಾಲ ಸುಂದರರಾಯರಿಗೂ ಪದಕವಿತ್ತು ಸನ್ಮಾನಿಸಿದ್ದಲ್ಲದೆ, ಡಾ. ಪೈ ಅವರನ್ನು ಮೆರವಣಿಗೆಯಲ್ಲಿ ಸಂತೆಕಟ್ಟೆಯ ಮೆಯಿನ್ ಶಾಲೆ (ಕಾಲೇಜು ಆರಂಭವಾದ ಪ್ರಾಥಮಿಕ ಶಾಲೆ)ಯಿಂದ ಸಗರಿಯವರೆಗೆ ಕರೆತಂದರು. ಪ್ರತಿಷ್ಠಿತರೂ ಸ್ಥಾನಸಂಪನ್ನರೂ ಆದ ನಮ್ಮ ಅನೇಕ ಹಳೆವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲೇ ಒಂದೂವರೆ ಮೈಲು ದೂರ ತುಳಿದರು. ಮೆರವಣಿಗೆ ಕಾಲೇಜಿನೊಳಗೆ ಪ್ರವೇಶ ಮಾಡುವಾಗ ನನಗೆ ಭಯ – ನಮ್ಮ ಸಭಾಮಂಟಪ ನಿರ್ಜನವಾಗಿರುತ್ತದೋ ಎಂದು. ಆದರೆ ವಿಕ್ರಮಶಿಲೆ ಮೆಟ್ಟಲಿಳಿದ ನನಗೆ ಕಣ್ಣನ್ನು ನಂಬಲಾಗಲಿಲ್ಲ. ಐದು ಸಾವಿರ ಕುರ್ಚಿಗಳೂ ಭರ್ತಿ ತುಂಬಿದ್ದವು. ಮೂರು ತಾಸಿನ ಈ ಕರುಳು ಮಿಡಿಯುವ ಸಮಾರಂಭವನ್ನು ನಮ್ಮ ಪ್ರೇಕ್ಷಕರೆಲ್ಲಾ ಮೆಚ್ಚಿದರು. ಡಾ. ಪರಮಾನಂದ ರಾಯರು ಅಧ್ಯಾಪಕರಾದ ನಮ್ಮ ಹೆಸರನ್ನೋದಿ ಹಾರ, ಪದಕ ಮತ್ತು ಶಾಲು ಹೊದಿಸುವಾಗ ಎಲ್ಲರಿಗೂ ರೋಮಾಂಚನವಾಯಿತು. ದೇವತೆಗಳು ಎಲ್ಲಾದರೂ ಇದ್ದಿದ್ದರೆ ಅಂದು ದೇವಲೋಕದ ಪಾರಿಜಾತದ ಮಳೆಕರೆದಿರಬೇಕಾಗಿತ್ತು. ಅಂಥ ಸುಗಂಧವನ್ನು ಹೊಮ್ಮಿಸಿತು ಈ ಕಾರ್ಯಕ್ರಮ. ನನ್ನ ಮನಸ್ಸಿನ ಅನಿಸಿಕೆಯನ್ನು ನಾನು ಅಂದು ತೋಡಿಕೊಂಡಂತೆ ಎಂದೂ ಅನುಭವಿಸಿರಲಿಲ್ಲ. ಡಾ. ಪೈ ಅವರು ಮುಂದಿನ ಎರಡು ದಿನ ನನ್ನನ್ನು ಕಂಡಲ್ಲಿ ಕೈಯಿಟ್ಟು ಆಶೀರ್ವಾದ ಮಾಡತೊಡಗಿದರು. ಒಂದು ಸಂಸ್ಥೆಯ ಜೀವಮಾನವೆಲ್ಲಾ ಅದರ ಶುಭ ಹಾರಯಿಸಿದ ಅವರ ಚೇತನಕ್ಕೆ ಹಳೆ ವಿದ್ಯಾರ್ಥಿಗಳು ನೀಡಿದ ಹೃದಯಸ್ಪರ್ಶಿ ಕೃತಜ್ಞತೆಯ ಮಾದರಿ ಧನ್ಯತೆಯ ಭಾವವನ್ನು ತುಂಬಿಸಿತ್ತು. ಪಟ್ಟ ಶ್ರಮ ಸಾರ್ಥಕವಾಯಿತೆಂಬುದನ್ನು ಅವರ ಅಂತರಾತ್ಮ ಒಪ್ಪಿಕೊಂಡಿತು. ಸಂಸ್ಥೆ ಕಟ್ಟಲು ಹೆಣಗಿದ ನನ್ನ ಸಹೋದ್ಯೋಗಿಗಳಿಗಾದರೂ ಅಷ್ಟೇ ತುಮ್ ತುಮ್ ತುಂಬಿ ಬಂದಿತು – ಕಣ್ಣು ಮತ್ತು ಹೃದಯ. ಭಾರೀ ಮೇಧಾವಿಗಳಾದರೂ ಸ್ವಂತ ಜೀವನದ ಐಹಿಕ ಅಭ್ಯುದಯಕ್ಕಾಗಿ ಕಾತರಿಸದೆ ಸದ್ದಿಲ್ಲದೆ ದುಡಿಯುತ್ತಿರುವ ನನ್ನ ಕೆಲ ಮಿತ್ರರನ್ನೆಣಿಸಿದರೆ ನನ್ನ ಹೃದಯ ಭಾರವಾಗುತ್ತದೆ. ಅಹರ್ನಿಶಿ ವಿದ್ಯಾರ್ಥಿಗಳ ಚಿಂತೆಯಲ್ಲಿ ನಮ್ಮ ಚಿಂತಾಶತಕಗಳನ್ನು ಮರೆಯಲು ಯತ್ನಿಸುವ ಈ ಮಹಾನುಭಾವರಿಗೆ ಸಮಾಜ ಏನು ಕೊಟ್ಟೀತು – ಕೃತಜ್ಞತೆಯ ಎಸಳನ್ನಲ್ಲದೆ? ಇದನ್ನೇ ಟಿ. ಎ. ಪೈ ಅಂದಿನ ಭಾಷಣದಲ್ಲಿ ಯಥೇಚ್ಛವಾಗಿ ಹೃತ್ಪೂರ್ವಕವಾಗಿ ವಿಶದಗೊಳಿಸಿದರು. ಸುದೀರ್ಘವಾದ ಅವರ ಭಾಷಣವನ್ನು ಉಡುಪಿಯ ಜನತೆ ಕೊಂಡಾಡಿದರು.

ಪ್ರದರ್ಶನಕ್ಕೆ ಬಂದ ಜನ ಹೆಚ್ಚೇ, ನಾಟಕಗಳಿಗೆ ಬಂದವರು ಹೆಚ್ಚೇ – ಲೆಕ್ಕವಿಟ್ಟವರಾರು? ಅಂತೂ ಟಿಕೇಟು ಮಾರಾಟದ ಮೇಲಿಂದ ಕನಿಷ್ಠ ಪಕ್ಷ ದುಡ್ಡು ಕೊಟ್ಟು ಪ್ರದರ್ಶನ ನೋಡಿದವರ ಸಂಖ್ಯೆ ನಲ್ವತ್ತು ಸಾವಿರ ಮಿಗಬಹುದು. ಉಳಿದವರನ್ನು ಸೇರಿಸಿದರೆ ನಮ್ಮ ಸಗರಿಯ ನೆಲ ಐದೇ ಐದು ದಿನಗಳಲ್ಲಿ ಐವತ್ತು ಸಾವಿರ ಜನರ ಪಾದಧೂಳಿಯಿಂದ ಪವಿತ್ರವಾಯಿತೆನ್ನಲು ಯಾವ ಅಡ್ಡಿಯೂ ಇಲ್ಲ. ಜ್ಞಾನವಿಜ್ಞಾನ ವಸ್ತು ಪ್ರದರ್ಶನದ ವಸ್ತುಗಳನ್ನು ಕಾಲೇಜಿನ ಭೌತ, ರಸಾಯನ, ಪ್ರಾಣಿ, ಸಸ್ಯಶಾಸ್ತ್ರಗಳ ಅಧ್ಯಾಪಕರು ಆರು ತಿಂಗಳಿಂದ ತಯಾರಿಸುತ್ತಿದ್ದರು. ಅದೇನೆಂದು ನಾನು ಮೊದಲು ಕೇಳಿದವನೂ ಅಲ್ಲ. ನೋಡಿದವನೂ ಅಲ್ಲ. ಆದರೆ ರಾತ್ರಿ ಎಂಟು ಒಂಬತ್ತು ತಾಸಿನ ವರೆಗೂ ನಮ್ಮ ವಿಜ್ಞಾನ ವಿಭಾಗದಲ್ಲಿ ಬೆಳಕು ಬೀರುತ್ತಿತ್ತು. ಅಧ್ಯಾಪಕರು ತಮ್ಮ ಆಪ್ತ ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ಪ್ರದರ್ಶಿಕೆಗಳನ್ನು ಜತನದಿಂದ ಅಣಿಗೊಳಿಸುತ್ತಿದ್ದರು. ಮಣಿಪಾಲದ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಪ್ರಾಧ್ಯಾಪಕರೂ ಅವರ ವಿಜ್ಞಾನವನ್ನು ಮೇಳಯಿಸಿದರು. 'ವಿಜ್ಞಾನ ಮಂದಿರ' ಮತ್ತು ವಿಕ್ರಮಶಿಲೆ ಎರಡು ಭವನಗಳಲ್ಲಿಯೂ ಬಹಳ ಓರಣವಾದ ಪ್ರದರ್ಶನ ನಡೆಯಿತು. ಸಹಸ್ರಾರು ಸ್ತ್ರೀಪುರುಷರು ಬೆಳಗಿಂದ ರಾತ್ರಿ ಎಂಟರವರೆಗೆ ಅದನ್ನು ನೋಡಿ ದಣಿದರು. ಕೊನೆಯ ಎರಡು ದಿನ ಮಧ್ಯಾಹ್ನ 3ಕ್ಕೇ ಮೂರು ಫರ್ಲಾಂಗು ಕ್ಯೂ ಸೇರುತ್ತಿತ್ತು. ಬಂದವರಿಗೆ ವಿವರಿಸಿ ವಿವರಿಸಿ ನನ್ನ ವಿದ್ಯಾರ್ಥಿಗಳ ಗಂಟಲು ಒಣಗಿತು. ಪ್ರಾಧ್ಯಾಪಕರು ಸೋತರು; ಆದರೂ ಹಸನ್ಮುಖರಾಗಿ ವಿವರಿಸುವುದನ್ನು ಬಿಡಲಿಲ್ಲ. ಉಡುಪಿಯ ಜನ ಅವರ ಸಹನೆಯನ್ನೂ, ಶ್ರದ್ಧೆಯನ್ನೂ ಮೆಚ್ಚಿಕೊಂಡರು. ನಾಲ್ಕಾಣೆಗೆ ಇಷ್ಟೆಲ್ಲಾ ತೋರಿಸಿದರಲ್ಲಾ ಎಂದು ಕನಿಕರ ಪಟ್ಟರು. ನೂಕು ನುಗ್ಗಲಿನಲ್ಲಿ ಅಪಾಯ ಸಂಭವಿಸದಂತೆ ಪ್ರತಿ ಮಹಡಿಯಲ್ಲೂ ನಮ್ಮ ಹಳೇ ವಿದ್ಯಾರ್ಥಿಗಳು ಕಾವಲು ನಿಂತರು. ಇಂದು ದೇವಸ್ಥಾನದ ಉತ್ಸವದ ವೇಳೆ ಕೂಡ ಗುಂಡಾವೃತ್ತಿ ಪ್ರದರ್ಶಿಸುವ ಕಾಲೇಜು ವಿದ್ಯಾರ್ಥಿಗಳಂತೆ ವೇಷ ತೊಟ್ಟಿರುವ, ಅಸಾಮಾಜಿಕ ಪ್ರವೃತ್ತಿಯ ತುಂಟ ಪೋಕರಿಗಳು ಹೆಚ್ಚುತ್ತಿರುವಾಗ ನಮ್ಮ ಹಬ್ಬವನ್ನಾದರೂ ಅವರೇಕೆ ಬಿಟ್ಟಾರೆಂದು ಮುನ್ನೆಚ್ಚರಿಕೆ ವಹಿಸಿ ಸಮಿತಿಯ ಪರವಾಗಿ ನಮ್ಮ ಹಳೇ ವಿದ್ಯಾರ್ಥಿಗಳು ಅಹರ್ನಿಶಿ ಆಸ್ತಿಪಾಸ್ತಿಗಳನ್ನು ಕಾದಂತೆ, ನಮ್ಮ ಸಂಸ್ಥೆಯ ಮರ್ಯಾದೆಯನ್ನೂ ಕಾಪಾಡಿದರು. ಯಾವುದೇ ತರದ ಗುಂಡಾವೃತ್ತಿ ಇಲ್ಲದೆ, ಪೋಲೀಸರಿಗೆ ಆಸ್ಪದ ಕೊಡದೆ ಉತ್ಸವ ಮುಗಿಯುವಂತಾಯಿತು.

ಐದು ದಿನಗಳ ಹಬ್ಬ, ನೂರಾರು ಜನ ನಿಮಂತ್ರಿತರಿಗೆ ಊಟೋಪಚಾರ, ಸ್ವಯಂಸೇವಕರಿಗೆ ತಿಂಡಿತೀರ್ಥ. ಎಲ್ಲದರ ಮೇಲೂ ನಿಯಂತ್ರಣವಿಲ್ಲದೆ ಹಿಂದಿನ ಧಾರಾಳತನವನ್ನೆ ವಹಿಸಿದರೆ ವೆಚ್ಚ ಮಿತಿಮೀರೀತೆಂದು ಈ

ಬಾರಿ ನಾನು ದುಡ್ಡಿನ ಚೀಲದ ನೂಲನ್ನು ಗಟ್ಟಿಯಾಗಿ ಬಿಗಿ ಹಿಡಿದಿದ್ದೆ. ಸತ್ಕಾರದ ಕೂಟ ಎಂದಿನವೇ ಆದರೂ ಅವರೇ ಶ್ರೀ ಪ್ರಭಾಕರ ಪೈ ಶ್ರೀ ರಾಮಚಂದ್ರ ಉಪಾಧ್ಯಾಯರ ಅಪೂರ್ವ ಜೋಡಿ ಆದರೂ – ಲಗಾಮು ಹಿಡಿಯದಿದ್ದರೆ ಖರ್ಚು ಹಿಡಿತಕ್ಕೆ ಸಿಗಲಾರದೆಂದು ಮೃದು ನೀತಿಯನ್ನು ತೊರೆದಿದ್ದೆ. ಒಂದೇ ದಿನದ ತಿಂಡಿ ತೀರ್ಥಕ್ಕೆ ಸ್ವಯಂಸೇವಕರು ಅಸಂತುಷ್ಟರಾದರು. ಅವರಿಗೂ ಎಲ್ಲರಂತೆ ಊಟೋಪಚಾರವನ್ನು ಒದಗಿಸಿದ ಮೇಲೆ ಪುಕಾರು ಅಳಿಯಿತು. ನಿಮಂತ್ರಿತರಿಗೊಂದು ಭೋಜನ ಗೃಹ ಬೇರೆ, ಸ್ವಯಂಸೇವಕರಿಗೆ ಬೇರೆ ರಚಿಸಿಕೊಂಡಿದ್ದವಾಗಿ ಪರಿಸ್ಥಿತಿ ಮೇರೆ ಮೀರಲಿಲ್ಲ. ಸಾಲದ್ದಕ್ಕೆ ಒಂದು ಕ್ಯಾಂಟೀನನ್ನು ನಡೆಸಿ ಊರಿನಿಂದ ಬಂದವರಿಗೆ ಸತ್ಕಾರ ನಡೆಯುವಂತೆ ಏರ್ಪಾಡು ಮಾಡಿದೆವು. ಕೊನೆಯ ಎರಡು ದಿನ ಕ್ಯಾಂಟೀನ್ ವ್ಯಾಪಾರ ಚೆನ್ನಾಗಿ ಕುದುರಿ ಎರಡು ಸಾವಿರದ ವರೆಗೂ ಮುಟ್ಟಿತು. ಕ್ಯಾಂಟೀನಿನಲ್ಲಿ ನನ್ನ ಸಹಾಧ್ಯಾಪಕರು ದೋಸೆ ಹಾಕಿದ್ದಾರೆ. ತಟ್ಟೆ ತೊಳೆದಿದ್ದಾರೆ. ಸಾಕಪ್ಪಾ ಮುಚ್ಚಿ ಎಂದು ನಾನು ಹೇಳಿದರೆ ಇಲ್ಲಾ ಸಾರ್ ಇನ್ನೊಂದು ತಾಸು ಇಟ್ಟರೆ ಇದ್ದದ್ದೆಲ್ಲಾ ಖರ್ಚಾಗುತ್ತದೆ. ಎರಡು ಸಾವಿರಕ್ಕೆ ಭರ್ತಿಯಾಗುತ್ತದೆ ಅನ್ನುತ್ತಿದ್ದರು. ಕೊಟ್ಟ ಕೆಲಸ ಯಾವುದೇ ಇರಲಿ ಅದನ್ನು ಅತ್ಯಂತ ಶ್ರದ್ಧೆಯಿಂದ ಮಾಡುವ ಕರ್ತವ್ಯಬುದ್ಧಿ ನಮ್ಮ ಅಧ್ಯಾಪಕರಿಗೆ ಹುಟ್ಟುಗುಣದಂತೆ ಆಗಿಬಿಟ್ಟಿದೆ. ನಾರಾಯಣ ಐತಾಳರೂ, ಸಿ. ಎ. ಭಟ್ಟ ಮತ್ತು ವಾದಿರಾಜ ತಂತ್ರಿ ಮೂವರು ಕ್ಯಾಂಟೀನಿನ ಲೆಕ್ಕಾಚಾರವನ್ನು ಅವರ ಕಲಿಕೆಯ ಲೆಕ್ಕದಂತೆ ನೂರಕ್ಕೆ ನೂರು ಯಶಸ್ವಿಗೊಳಿಸಿದರು.

ಅತಿಥಿ ಗೃಹದ ಒಡೆಯರಾಗಿ ನಮ್ಮ ಸಂಸ್ಕೃತ ಅಧ್ಯಾಪಕ ಕೃಷ್ಣಭಟ್ಟರು ಮಿಣ್ಣಗೆ ತಣ್ಣಗೆ ಎಲ್ಲರನ್ನೂ ಅವರವರ ಯೋಗ್ಯತಾನುಸಾರವಾಗಿ ವಿಚಾರಿಸಿಕೊಂಡರು. ನಮ್ಮ ಕೆಲ ಸಾಹಿತಿಗಳಿಗೆ ಸಂಜೆಯಾಗುತ್ತಲೇ ಕಾಲೇಜು ಯಾವುದು, ಹೈಸ್ಕೂಲು ಯಾವುದು, ಕ್ಯಾಂಟೀನ್ ಯಾವುದು ಎಂದು ತಿಳಿಯದೆ ಹೋಗುವ ಮಬ್ಬು ಹರಡುವುದುಂಟು. ಯಾವ ಶಿಸ್ತೂ ತಮಗಿಲ್ಲವೆಂದು ಅವರು ಭಾವಿಸುವುದುಂಟು. ಅಂಥ ಮಹಾತ್ಮರನ್ನು ಕೃಷ್ಣಭಟ್ಟರು, ಅಚ್ಚ ಸಂಸ್ಕೃತದಲ್ಲಿ ಸೊಗಸಾಗಿ ಉಪಚರಿಸಿದ್ದಾರೆ. ಜತೆಗೆ ಅವರೊಡನೆ ನಾಲ್ಕು ಮುಗ್ಧ ಸ್ವಭಾವದ ವಿದ್ಯಾರ್ಥಿ ಸ್ವಯಂಸೇವಕರು. ಚರ್ಚಾಮಗ್ನರಾದ ಸಾಹಿತಿಗಳನ್ನು ಮೆತ್ತಗೆ ತೋಳು ಹಿಡಿದು ಊಟದ ಮನೆಗೆ ಕರೆದೊಯ್ಯುವ ಅವರ ವಿನಯವನ್ನು ನೋಡಬೇಕು. ರಾತ್ರಿ ಹಗಲು ಎರಡೂ ಒಂದೇ ಅವರಿಗೆ. ಭೋಜನ ಶಾಲೆಯ ಒಳಗೆ ಕಾಲಿಟ್ಟರೆ ನಿಮಗೆ ಹಾರ್ದಿಕ ಸ್ವಾಗತ ಕಾದಿರುತ್ತಿತ್ತು. ಗಂಟೆಗೆ ಸರಿಯಾಗಿ ವ್ಯವಸ್ಥೆ ನೋಡಿಕೊಳ್ಳಲು ಪ್ರಭಾಕರ ಪೈ ಅವರು ನಿಯಂತ್ರಣ ಇಟ್ಟಿದ್ದರು. ಎಲ್ಲ ಔತಣಗಳೂ ಈ ಸಾರಿ ಸರಳ, ಸುಂದರ, ಅತಿಗೆ ಎಡೆಯಿಲ್ಲದ ಸುಗ್ರಾಸ ಭೋಜನ.

ಸ್ವಾಗತ ಸಮಿತಿಯ ಕಚೇರಿಗೆ ಅದೇಕೋ ಈ ಸಲ 'ಕಂಟ್ರೋಲ್ ರೂಮ್' ಎಂದು ಹೆಸರಿಟ್ಟಿದ್ದೆವು. ಅಲ್ಲಿಗೆ ಎರಡೆರಡು ಫೋನ್ ಜೋಡಿಸಿದ್ದೆವು. ಕಾಲೇಜಿನ ಬರ್ಸಾರ್ ರಾಮ್‌ದಾಸ್ ಅವರು ಹತ್ತು ಹಲವು ಸಹೋದ್ಯೋಗಿ ಸಿಬ್ಬಂದಿಗಳ ಜತೆ ಅಲ್ಲಿ ಒಡ್ಡೋಲಗ ಕೊಟ್ಟರು. ಮುನ್ನಾ ದಿನವೇ ಮೇಜರ್ ಬಾಲಕೃಷ್ಣನ್ ಸ್ವಯಂ ಸೇವಕರ ವಿತರಣೆ ಅವರ ಮಿಲಿಟರಿ ಕ್ರಮದಲ್ಲಿ ಮಾಡಿದ್ದರೂ ಬ್ಯಾಜ್ ಬಟವಾಡೆ ಕಾಲದ ನೂಕುನುಗ್ಗುಲು ನೋಡಿ ನಾನು ಗಾಬರಿಯಾಗಿ ಹೊರಗೋಡಿದೆ. ಎರಡು ತಾಸಿನಲ್ಲಿ ಎಲ್ಲವೂ ಶಾಂತವಾಗಿತ್ತು. ಕೆಲಸ ಮುಂದುವರಿಯಿತು. ಅಂದಿನ ದಿನ ರಾಮ್‌ದಾಸ್ ಅವರಿಗೆ ಬಹಳ ಕಷ್ಟದ ದಿನ, ಸಂಜೆಯವರೆಗೂ ಸ್ವಯಂಸೇವಕರ ತಿಂಡಿ ಪುಕಾರು ಅವರ ಕಿವಿಗೆ ಬೀಳುತ್ತಿತ್ತು. ತಡೆದುಕೊಂಡು ಸಾಕಾಗಿ ರಾತ್ರಿ ನನ್ನ ಹತ್ತಿರ ಹೇಳಿದರು. ನಾನೂ ನನ್ನ ಹಠ ಬಿಡಲಿಲ್ಲ. ರಾತ್ರಿ ಎಲ್ಲರ ಸಭೆ ಸೇರಿಸಿ ನಿರ್ಣಯ ಮಾಡೋಣ ಎಂದು ಠೇಂಕರಿಸಿದೆ. ವಾಸ್ತವವನ್ನರಿತ ಮೇಲೆ ಅವರ ಮಾತಿನಂತೆ ನಡೆದುಬಿಟ್ಟೆ. ನಾನು ಈ ರೀತಿ ಅನುದಾರನಾದ ಕಾರಣ ಅವರಿಗೆಲ್ಲ ತಿಳಿದಿದ್ದರಿಂದ ಯಾರೂ ನನ್ನ ಬಿಗುನೀತಿಗೆ ಕೋಪಿಸಲಿಲ್ಲ. ಕಂಟ್ರೋಲ್ ರೂಮಿನಲ್ಲಿ ಈ ಸಲ 24 ತಾಸೂ ಜನರಿದ್ದೇ ತೀರಬೇಕೆಂದು ತಾಕೀತು ಮಾಡಲಾಗಿತ್ತು. ನಮ್ಮ ಕಾರ್ಯಕ್ರಮಗಳಾದರೂ ಏನು ಸಾಮಾನ್ಯವೇ – ಮುಂಜಾನೆ 9ಕ್ಕೆ ತೊಡಗಿದರೆ ರಾತ್ರಿ ಎರಡರ ತನಕವೂ ಒಂದಲ್ಲ ಒಂದು ಭಾಗದಲ್ಲಿ ಜನಸಂದಣಿ ಇದ್ದೇ ಇರುತ್ತಿತ್ತು. ಸೆಮಿನಾರ ಒಂದೆಡೆ, ವಸ್ತುಪ್ರದರ್ಶನ ಒಂದೆಡೆ, ಸಭಾಕಾರ್ಯಕ್ರಮ ಇನ್ನೊಂದೆಡೆ, ನಾಟಕಗಳ ಉಸ್ತುವಾರಿ ಮತ್ತೊಂದೆಡೆ – ಎಲ್ಲವನ್ನೂ ರಾಮ್‌ದಾಸ್, ಬಾಲಕೃಷ್ಣನ್, ಸೋಮಸುಂದರ್, ಆಚಾರ್ ಮುಂತಾದ ಸಹೋದ್ಯೋಗಿಗಳು ನೋಡಿಕೊಂಡರು. ಕೊನೆಯ ದಿನ ಯಾರ ಮುಖದಲ್ಲೂ ಗೆಲುವಿಲ್ಲ. ಒಂದು ವಾರದ ದುಡಿತ ದೇಹವನು ಕುಗ್ಗಿಸಿತ್ತು. ಕೂತು ಕೂತು ಬೆನ್ನಿಗೇ ಬೇಸರ ಬಂದಿತ್ತು. ಕೊನೆಯ ದಿನ ಯಾರೋ ಸುದ್ದಿ ತಂದರು. 'ಪ್ರದರ್ಶನ ಇನ್ನೂ ನಾಲ್ಕು ದಿನ ಮುಂದುವರಿಸಬೇಕೆಂದು ಡಾ. ಪೈ ಹೇಳುತ್ತಾರೆ.' ಎಂದು. ನಮ್ಮ ಮಾನಸಿಕ ಸ್ಥಿತಿಯನ್ನು ಅರಿತ ನಾನು ಡಾ. ಪೈ ಅವರ ಹತ್ತಿರ ಮುಖತಃ ಮಾತನಾಡಲಾರದೆ ನಾಟಕ ನೋಡುತ್ತಿದ್ದ ಅವರಿಗೆ ಚೀಟಿಕಳಿಸಿದೆ. 'ರಾತ್ರಿ ಹನ್ನೆರಡಾಗಿದೆ, ಇಂದು ನಮ್ಮ ಕಡೇ ದೇಖಾವೆ. ಚಪ್ಪರ ಬಿಚ್ಚಲು ನಿಮ್ಮ ಅನುಮತಿಗಾಗಿ ಕಾಯುತ್ತಿದ್ದೇನೆ.' ಡಾ. ಪೈ ಅವರಿಂದ ಉತ್ತರ – 'ಒಪ್ಪಿದೆ' ಕಂಟ್ರೋಲ್ ರೂಮಿನಲ್ಲಿ ನನ್ನ ಸಹೋದ್ಯೋಗಿಗಳು ಅಂದು ಗಂಟೆ ಅಲ್ಲ ನಿಮಿಷಗಳನ್ನು ಲೆಕ್ಕ ಮಾಡುತ್ತಿದ್ದರು: ನಾಟಕ ಎಂದು ಮುಗಿದೀತು? ಒಂದು ಗಂಟೆ ಎಂದು ಆದೀತು?

ಆ ಅಪರಾತ್ರಿಗೂ ನಮ್ಮ ಎನ್.ಎಸ್.ಎಸ್. ಮತ್ತು ಇತರ ಸ್ವಯಂಸೇವಕರು ಕುರ್ಚಿ ಸಾಗಿಸಿದರು. ಸುಮಾರು 3 ಗಂಟೆಗೆ ಅವರ ಕೆಲಸ ಮುಗಿದಾಗ ಡಾ. ಪೈ ಫೆಬ್ರುವರಿ 7ರ ಮುಂಜಾನೆ ಏರಿಸಿದ ಎಂ. ಜಿ. ಎಂ. ಬಾವುಟವನ್ನು ನಾನು ಇಳಿಸಿದೆ. ಹಬ್ಬಕ್ಕಾಗಿ ಹಗಲಿರುಳು ದುಡಿದ ನನ್ನ ಸಹೋದ್ಯೋಗಿಗಳ ಋಣಭಾರವನ್ನು ಏರಿಸಿದೆ.

ನಾಟಕಗಳ ಸುಗ್ಗಿ, ಮೊದಲ ದಿನ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ ಅಭಿಮನ್ಯು ವಧೆ. ಎರಡನೆಯ ದಿನ ನಮ್ಮ ಕಾಲೇಜು ವಿದ್ಯಾರ್ಥಿಗಳ 'ಕೆಂಪೇಗೌಡ'. ಅಂದು ಮತ್ತು ರಂಗಭೂಮಿಯವರ 'ವೀರ ಪುರೂರವ' ನೋಡಲು ಕಮ್ಮಿ ಎಂದರೆ ಆರೇಳು ಸಾವಿರ ಜನ ಇದ್ದಿರಬಹುದು. ಎರಡೂ ಕಂಪನಿ ನಾಟಕಗಳೇ ಆದರೂ ಜನ ಸಾಮಾನ್ಯರಿಗೆ ಬಹಳ ಮೆಚ್ಚಿಗೆಯಾದವು. ವಿದ್ಯಾರ್ಥಿಗಳು ಬಹಳ ಪ್ರಯಾಸಪಟ್ಟು ತಾವೇ ಈ ನಾಟಕ ತರಬೇತಿ ಮಾಡಿಸಿಕೊಂಡು ಉಡುಪಿಯ ರಂಗಭೂಮಿಯ ಜತೆಗೆ ಸ್ಪರ್ಧೆಗೆ ಇಳಿದಿದ್ದರು. ಅವರ ಪ್ರಾಮಾಣಿಕ ಪ್ರಯತ್ನಕ್ಕೆ ಜಯ ಲಭಿಸಿತು. ರಂಗಭೂಮಿಯವರು ನಮ್ಮೂರಿನ ಉತ್ತಮ ನಾಟಕ ಕಲಾವಿದರು. ಹೋದಲ್ಲಿ ಬಹುಮಾನ ಗಿಟ್ಟಿಸಿಕೊಳ್ಳುವುದು ಅವರ ಗ್ರಹಚಾರ. ನಾನು ಅವರ ಧುರೀಣರಿಗೆ ಶಾಲು ಕೊಟ್ಟೆ, ಅವರು ಬೆಳ್ಳಿ ಹಬ್ಬದ ನಿಧಿಗೆ ಕಾಣಿಕೆ ನೀಡಿದರು. ನಮ್ಮ ಲೆಕ್ಕ ಚುಕ್ತಾ ಆಗಿದೆ. ಈ ಎರಡೂ ನಾಟಕಗಳ ಪ್ರಸಾದಗುಣ ಮುಂದಿನ ನವ್ಯ ನಾಟಕಗಳಿಗೆ ಬರಲಿಲ್ಲ. ಸಂತೆಯೊಳಗೆ ಆಡುವ ನಾಟಕಗಳೂ ಅವು ಆಗಿರಲಿಲ್ಲ. ಎಲ್ಲ ವಿದ್ಯಾರ್ಥಿಗಳಿಗೂ ಏನಾದರೊಂದು ಪಾತ್ರ ಸಿಗುವ ಒಂದು ದೃಶ್ಯರೂಪಕವನ್ನು ಜನವರಿಯಲ್ಲಿ ಬಂದ ಬಿ. ವಿ. ಕಾರಂತ ಜೋಡಿಸಿ ಕೊಟ್ಟಿದ್ದರು. ಮೋಹನ್ ರಾಕೇಶ್ ಬರೆದ 'ಉನ್ಮತ್ತ ಉಲ್ಲಾಸ'ದಲ್ಲಿ ನಮ್ಮ ಕಾಲೇಜಿನ ನಲ್ವತ್ತೈದು ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಾಟಕ ಅರ್ಥವಾಗುವುದರೊಳಗೆ ಮುಗಿದು ಹೋಯಿತು – ಹೋದದ್ದು ಒಳ್ಳೆದಾಯಿತು ಎಂದರು ಹಲರು. ಅಯ್ಯೋ ಎಷ್ಟು ಅರ್ಥಪೂರ್ಣವಾಗಿತ್ತು ಎಂದು ಹಂಬಲಿಸಿದರು ಕೆಲರು, ಕೆಲರೇ ಕೆಲರು; ಶ್ರೀರಂಗರ 'ಏನ ಬೇಡಲಿ ನಿನ್ನ ಬಳಿಗೆ ಬಂದು' ಎಂಬ ನಾಟಕವನ್ನು ಸಾಗರದ ಉಭಯ ಕಲಾವಿದರೂ ಜೆ. ಬಿ. ಜೋಶಿಯವರ 'ಕದಡಿದ ನೀರ'ನ್ನು ಮೈಸೂರಿನ ಸಮತೆಂತೋ ಅವರೂ ಆಡಿ ತೋರಿಸಿ ದರು. ಕೆಂಪೇಗೌಡ ಮತ್ತು ಪುರೂರವನ ಅಭಿಮಾನಿಗಳಿಗೆ ಇವು ಸುತರಾಂ ಹಿಡಿಸಲಿಲ್ಲವಾದರೂ ಇವನ್ನು ನೋಡಲೆಂದೇ ದೂರದೂರುಗಳಿಂದ ಬಂದ ರಸಿಕರೂ ಬಲ್ಲಿದರೂ ಇದ್ದರೆಂಬುದು ನನ್ನ ಸಮಾಧಾನ.

ಪ್ರಿನ್ಸಿಪಾಲ ಸುಂದರರಾಯರಿಗೆ 70, ಡಾ. ಪೈಯವರಿಗೆ 75. ಒಬ್ಬರು ನಮ್ಮ ಕಾಲೇಜಿನ ಅಂತರಂಗದ ಶ್ರೀಮಂತಿಕೆಯನ್ನೂ, ಇನ್ನೊಬ್ಬರು ಬಹಿರಂಗದ ಶ್ರೀಮಂತಿಕೆಯನ್ನೂ ಹೆಚ್ಚಿಸಿದವರು. ಎಂ. ಜಿ. ಎಂ. ಬೆಳ್ಳಿ ಹಬ್ಬ ಅವರ ಕಣ್ಣೆದುರೇ ನಡೆಯಬೇಕೆಂಬ ನನ್ನ ಆಸೆ ಪೂರ್ತಿಯಾಯಿತು. ಸುಂದರರಾಯರನ್ನು ಹಬ್ಬಕ್ಕೆ ಎಂಟು ದಿನ ಮೊದಲೇ ಬರಮಾಡಿಕೊಂಡೆ. ಸಕುಟುಂಬ ಅವರು ದಯಮಾಡಿಸಿದರು. ಅವರಂತೆ ಮೈಸೂರು ವಿಶ್ವವಿದ್ಯಾನಿಲಯದ ದರ್ಶನ ಶಾಸ್ತ್ರದ ಪ್ರೊಫೇಸರ್ ಡಾ. ಕೆ. ಬಿ. ರಾಮಕೃಷ್ಣರಾಯರೂ ಬಂದರು. ಇಬ್ಬರಿಗೂ ಒಂದು ಪ್ರತ್ಯೇಕ ಅತಿಥಿಗೃಹವನ್ನು ಏರ್ಪಡಿಸಿದೆ. ಸುಂದರರಾಯರು ನಮ್ಮ ಗುರುಕುಲದಲ್ಲಿ ಒಂದೊಂದು ಹೊತ್ತು ಒಬ್ಬೊಬ್ಬರಲ್ಲಿ ಸ್ವಾಮಿಗಳಂತೆ 'ಭಿಕ್ಷೆ' ಸ್ವೀಕರಿಸಿದರು. ತಮ್ಮ ಹಳೆಯ ನೆನಹುಗಳನ್ನು ಬಿತ್ತರಿಸಿದರು. ಕಾಲೇಜಿನ ಸಕಲ ಅಧ್ಯಾಪಕರನ್ನೂ ಒಂದೆಡೆ ಕೂಡಿಸಿ ತಾನು ನೋಡಬೇಕೆಂದು ಅವರಾಗಿ ಅಪೇಕ್ಷೆಪಟ್ಟರು. ಎಲ್ಲರೂ ಬೇರೆ ಬೇರೆ ಕರ್ತವ್ಯಗಳಲ್ಲಿ ನಿರತರಾಗಿದ್ದರೂ ಗದ್ದಲದ ನಡುವೆ ಅತಿಥಿಗೃಹದಲ್ಲಿ ಸಭೆ ಸೇರಿದೆವು. ಸುಂದರ ರಾಯರು ಕಾಲೇಜಿನ ಮೇಲಿನ ಮಮತೆಯಿಂದ ಹಿಂದಿನ ಸಹೋದ್ಯೋಗಿಗಳಿಗೆ ಕೃತಜ್ಞತೆ ಸಲ್ಲಿಸಿದರು; ತರುಣ ಪ್ರಾಧ್ಯಾಪಕರಿಗೆ ಪ್ರಾಮಾಣಿಕ ಸೇವೆಯ ಕಿವಿಮಾತು ನುಡಿದರು. ಅನಾರೋಗ್ಯ ಸ್ಥಿತಿಯಲ್ಲೂ ಸಾಕಷ್ಟು ಕಾರ್ಯ ಕ್ರಮಗಳಿಗೂ ಹಾಜರಿ ಹಾಕಿದರು. ಎಂ.ಜಿಎಂ. ಅಧ್ಯಾಪಕರ ಸಾಂಘಿಕಶಕ್ತಿ, ಅವರ ಆತ್ಮ ಬಲವೇ ಸಂಸ್ಥೆ ಇನ್ನೂ ಅಚ್ಚಳಿಯದುಳಿದುದನ್ನು ಅವರು ಕೊಂಡಾಡಿದರು.

ಕರಾವಳಿಯ ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಭವಿತವ್ಯ, ಸಾಹಿತ್ಯ ಮತ್ತು ಸಾಮಾಜಿಕ ಕ್ರಾಂತಿ, ಜಾನಪದ ಅಧ್ಯಯನ, ಆಧುನಿಕ ಕನ್ನಡ ರಂಗಭೂಮಿ – ಈ ನಾಲ್ಕು ವಿಷಯಗಳ ಕುರಿತು ವಿಚಾರಗೋಷ್ಠಿ ಏರ್ಪಡಿಸಲಾಗಿತ್ತು. ಅದರಲ್ಲಿ ಮೊದಲನೆಯ ಗೋಷ್ಠಿಯಲ್ಲಿ ದೀರ್ಘ ಚರ್ಚೆ ನಡೆಯಿತು. 'ಸಾಮಾಜಿಕ ಕ್ರಾಂತಿ' ಗೋಷ್ಠಿಯಲ್ಲಿ ಭಾಗವಹಿಸುವ ಕೆಲವು ಮಹನೀಯರು ಒಂದು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಸಾಕಷ್ಟು ಧೂಳೆಬ್ಬಿಸಿ ಪತ್ರಿಕಾ ಪ್ರಸಿದ್ಧಿ ಗಳಿಸಿದ್ದರಿಂದ ನಮ್ಮ ಗೋಷ್ಠಿಯಲ್ಲೇನೋ ಭಾರೀ ಗೊಂದಲ ಆಗುತ್ತದೆಂದು ಜನ ನಿರೀಕ್ಷಿಸಿದ್ದರು. ನಾನು ಎಲ್ಲರನ್ನೂ ಸಮಾಧಾನ ಮಾಡಿದೆ. ಒಂದನೆಯದಾಗಿ ಇಲ್ಲಿ ಜಗಳಕ್ಕೆ ನಾನು ಎಡೆ ಕೊಡುವುದಿಲ್ಲ. ಎರಡನೆಯದಾಗಿ ಅಧ್ಯಕ್ಷತೆ ವಹಿಸುವ ನಾಯಕರು ಇಂಥವರನ್ನು ತಹಬಂದಿಗೆ ತರಲು ಸಮರ್ಥರು. ಮೂರನೆಯದಾಗಿ ಇವರು ಅಸಂಬದ್ಧವಾಗಿ ಮಾತನಾಡಿದರೆ ನಮ್ಮಲ್ಲೂ ಅಷ್ಟೇ ಅಸಂಬದ್ಧವಾಗಿ ಆಡಬಲ್ಲವರು ಇದ್ದಾರೆಂಬುದನ್ನು ಅವರಿಗೆ ಮೊದಲೇ ಸೂಚಿಸಿಬಿಡುತ್ತೇನೆ. ನಾಲ್ಕನೆಯದಾಗಿ ಅವರ ಬಾಯಿ ಜಗಳಗಳಿಗೆ ಯಾರಾದರೂ ಯಾತಕ್ಕಾಗಿ ಅಂಜಬೇಕು? ಇದು ನನ್ನ ಧೋರಣೆ. ಪ್ರಬಂಧಗಳನ್ನು ಓದಿದ ಬಳಿಕ ಅಭ್ಯಾಗತ ಸಾಹಿತಿಗಳು ತಂತಮ್ಮ ಅಭಿಪ್ರಾಯಗಳನ್ನು ನಿರ್ದಿಷ್ಟ ಅವಧಿಯಲ್ಲಿ ಮಂಡಿಸಬೇಕು. ಒಬ್ಬ

ರನ್ನೊಬ್ಬರು ಕತ್ತರಿಸಕೂಡದು ಎಂಬ ಶಿಸ್ತಿನಲ್ಲೇ ಗೋಷ್ಠಿ ಗೊಂದಲವಿಲ್ಲದೆ ಸುಸೂತ್ರವಾಗಿ ಮುಕ್ತಾಯವಾಯಿತು. ಈ ಗೋಷ್ಠಿಯಲ್ಲಿ ಸೇರಿದ ನವೋನವ್ಯ ಸಾಹಿತಿಗಳಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರಾರಿಗೂ ಅಸಂತೋಷವಾಗಲಿಲ್ಲ. ರಂಗಭೂಮಿ ಗೋಷ್ಠಿಯಲ್ಲಿ ಪ್ರಬಂಧ ಓದಿದ ಒಬ್ಬ ಮಹಾಶಯರಿಗೆ ಮಾತ್ರ ಇಲ್ಲಿ ಅವರ ವಿದ್ವತ್ ಪ್ರದರ್ಶನಕ್ಕೆ ಅವಕಾಶವೇ ದೊರೆಯಲಿಲ್ಲವೆಂದು ಭಾರೀ ಬೇಸರವಾಯಿತು.ಅದನ್ನು ಮುಖತಃ ಪ್ರಕಟಿಸುವ ಧೈರ್ಯವಿಲ್ಲದೆ ಇನ್ನೊಂದು ಕಡೆ ಹೋಗಿ 'ಮುಕ್ತ ಚರ್ಚೆ' ನಡೆಸಿದ್ದಲ್ಲದೆ ನನಗೆ 'ನಿಮ್ಮ ಗೋಷ್ಠಿ ಕಳಪೆಯಾಗಿತ್ತು. ಕಾರಂತರ ದಬ್ಬಾಳಿಕೆ ಸಹಿಸಲಾಗುವುದಿಲ್ಲ' ಎಂಬಿತ್ಯಾದಿ ಪತ್ರವನ್ನು ಬರೆದರು. ಊರೂರಿಗೆ ಹೋಗಿ ಅಲ್ಲಿನ ಪ್ರತಿಷ್ಠಿತ ಮೂರ್ತಿಗಳು ಯಾರೆಂಬುದನ್ನು ಶೋಧಿಸಿ ಅವರ ಬಗ್ಗೆ ಅಗೌರವದ ಮಾತುಗಳನ್ನಾಡುವುದನ್ನೇ ಉಪಕಸುಬಾಗಿ ಮಾಡಿಕೊಂಡಿರುವ ಈ ಸಾಹಿತಿಗಳಿಗೆ ಯಾವ ಶಿಷ್ಟಾಚಾರದ ಬಾಧೆಯೂ ಇಲ್ಲದಿರುವುದರಿಂದ ಅವರೊಡನೆ ಪತ್ರ ವ್ಯವಹಾರ ನಿಲ್ಲಿಸಿದೆ. ನಮ್ಮೂರಿನ ಒಬ್ಬ ಸಾಹಿತಿ ಕೂಡ ಇಂಥವರ ಪ್ರಭಾವಕ್ಕೆ ಒಳಗಾಗಿ ನಮ್ಮ ಗೋಷ್ಠಿಯ ಸಾಹಿತಿಗಳು ಮಾತ್ರವಲ್ಲ, ಪ್ರೇಕ್ಷಕರ ಜಾತಿ ಕುಲಗೋತ್ರದ ಅಂಕಿಅಂಶಗಳನ್ನು ಕಲೆಹಾಕಿ ಅಸಂಗತರ ಗುಂಪಿನೊಳಗೆ ಸೇರಿಕೊಂಡು ಪ್ರಸಿದ್ಧ ಪುರುಷರಾದದ್ದು ನಮ್ಮ ಬೆಳ್ಳಿಹಬ್ಬದ ಒಂದು ಬೈಪ್ರೊಡಕ್ಟ್ ಎಂಬುದಾಗಿ ಭಾವಿಸಬಹುದು. ಬೈ – ಕನ್ನಡದ ಬೈ; ಗೋಷ್ಠಿಗಳು ನಡೆಯುತ್ತಿರುವ ವೇಳೆ ಕನ್ನಡದ ಗೌರವಾನ್ವಿತ ಸಾಹಿತಿಗಳಾದ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರೂ ವಿ. ಸೀತಾರಾಮಯ್ಯನವರೂ ಆಗಮಿಸಿದರು. ಅಂದಿನ ಗೋಷ್ಠಿಯ ಕಳೆಗೆ ಈ ಹಿರಿಯರ ಆಗಮನ ಕಲಶವಿಟ್ಟಿತು. ಪಂಜೆ ಶತಮಾನೋತ್ಸವ ಸಂದರ್ಭದಲ್ಲಿ ಮಂಗಳೂರಿಗೆ ಬಂದಿದ್ದ ಹಿರಿಯರು ನಮ್ಮ ಸಂಸ್ಥೆಯ ಮೇಲಿನ ಅಭಿಮಾನದಿಂದ ಉಡುಪಿಯವರೆಗೆ ಬಿಜಯ ಮಾಡಿದ್ದರು. ಜಾನಪದ ಅಧ್ಯಯನ ಗೋಷ್ಠಿಗೆ ದೇಜಗೌ ಅಧ್ಯಕ್ಷರು. ಗೊರೂರು ಉದ್ಘಾಟಕರು. ಈ ಗೋಷ್ಠಿಯಲ್ಲಿ ಅಮೇರಿಕಾದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ನಾಟಕ ವಿಭಾಗದ ಪ್ರೊಫೆಸರ್ ಹೆಲ್‌ಸ್ಟೇನ್ ಮತ್ತು ಅವರ ಮಡದಿ ಒಂದು ಪ್ರಬಂಧ ಮಂಡಿಸಿದರು. ಎರಡು ತಿಂಗಳಿಂದ ಹೆಲ್‌ಸ್ಟೇನ್ ದಂಪತಿಗಳು ಕಾಲೇಜಿನ ಅತಿಥಿಗೃಹದಲ್ಲೇ ಬಿಡಾರ ಹೂಡಿ ಕರ್ನಾಟಕದ ಗೊಂಬೆಯಾಟಗಳನ್ನು ಅಧ್ಯಯನ ಮಾಡುತ್ತಿದ್ದರು. ದೇಜಗೌ ಯಕ್ಷಗಾನ ಸಂಶೋಧನೆಯ ಅಂಗವಾಗಿ ನಾವು ನಿರ್ಮಿಸಿದ ಜಾನಪದ ಧ್ವನಿ ಮುದ್ರಣ ಕೇಂದ್ರವನ್ನು ಉದ್ಘಾಟಿಸಿದರು. ಇದನ್ನು ಮೈಸೂರು ವಿಶ್ವವಿದ್ಯಾಲಯದ ಸುವರ್ಣೋತ್ಸವ ಸ್ಮಾರಕವಾಗಿ ನಾವು ರಚಿಸಿದ್ದೇವೆ. ಯಕ್ಷಗಾನ ಪ್ರಸಂಗಗಳನ್ನು ಧ್ವನಿಮುದ್ರಿಸುವ ಕೆಲಸ ಇಲ್ಲಿ ಆರಂಭವಾಗಿದೆ.

ಮದರಾಸು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿದ್ದಾಗಲೇ ನಾನು ಸಮಿತಿ ಮನುಷ್ಯನಾಗಿಬಿಟ್ಟು ಪ್ರಾಧ್ಯಾಪಕ ಮಿತ್ರರು ನನ್ನನ್ನು ಅಲ್ಲಿ ಎಕೆಡೆಮಿಕ್ ಕೌನ್ಸಿಲಿಗೆ ಎರಡೆರಡು ಸಾರಿ ಪ್ರತಿನಿಧಿಯಾಗಿ ಕಳಿಸಿದರು. ಡಾ. ಮುದಲಿಯಾರರ ಏಕೆಡೆಮಿಕ್ ಕೌನ್ಸಿಲ್ ಎಂದರೆ ಅದೊಂದು ವಿಶಿಷ್ಟ ಮಾದರಿಯ ಸರ್ವಾಧಿಕಾರ. ಅಲ್ಲಿ ಹೊಸಬರಿಗೆ ಮಾತನಾಡಲು ಅವಕಾಶವೇ ಇಲ್ಲ. ಹಳಬರಿಗೂ ಅಧಿಕಪ್ರಸಂಗಕ್ಕೆ ಸಂದರ್ಭ ಸಿಗಲಾರದು. ಎಲ್ಲವೂ ನಿಶ್ಚಿತ. ಉಪಕುಲಪತಿಯ ಭ್ರೂಭಂಗದಿಂದ ನಿರ್ದೇಶಿತ. ಅಲ್ಲಿ ನಾನೂ ನನ್ನ ಸಹಚರ ಯು. ಎಲ್. ಆಚಾರ್ಯರೂ ಸಮರ್ಪಕವಾಗಿ ಮಾಡಿದ ಕೆಲಸ ಎಂದರೆ ಪ್ರಯಾಣ ಭತ್ತೆಯ ಬೀಲು ತುಂಬಿಸುವುದಷ್ಟೇ. 1958ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊಸ ಕಾಯಿದೆ ರಚಿತವಾದಾಗ ಮತ್ತೆ ನಾನು ಚುನಾವಣೆಗೆ ನಿಂತೆ. ಮಂಗಳೂರಿನಿಂದ ಡಾ. ಪಿ. ನಾರಾಯಣ ರಾಯರು, ಉಡುಪಿಗೆ ನಾನು. 'ಆಗ ಪ್ರಿನ್ಸಿಪಾಲರುಗಳಿಗೂ ಸ್ವಾಧಿಕಾರವಶಾತ್ (ಎಕ್ಸ್–ಅಫಿಸಿಯೋ) ಸಮಿತಿಸದಸ್ಯತ್ವ ಇರಲಿಲ್ಲ, ಕೇವಲ 5 ಸ್ಥಾನಗಳಿಗೆ ಪ್ರಾಧ್ಯಾಪಕರಾದ ನಾವಿಬ್ಬರೂ ಹೋರಾಡಿದೆವು. ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜು ಪ್ರಾಧ್ಯಾಪಕರು ಮೊದಲ ಎರಡು ಮತಗಳನ್ನು ನಮಗಿಬ್ಬರಿಗೆ ಹಂಚಿಕೊಟ್ಟುದರಿಂದ ಇಬ್ಬರೂ ಗೆದ್ದು ಬಂದೆವು. ನಮಗೆ ರಾಜ್ಯದ ಬೇರೆ ಕಾಲೇಜುಗಳಿಂದ ಸಾಕಷ್ಟು ಮತಗಳು ಬಿದ್ದರೂ ಜಯ ನಿರ್ಣಯ ನಮ್ಮ ಜಿಲ್ಲೆಯ ಕಾಲೇಜು ಸ್ನೇಹಿತರಿಂದಲೇ ಶಕ್ಯವಾದದ್ದು. ಆಗ ಅಕಡೆಮಿಕ್ ಕೌನ್ಸಿಲ್ ಬೆಂಗಳೂರಲ್ಲೊಮ್ಮೆ, ಮೈಸೂರಲ್ಲೊಮ್ಮೆ ಸಭೆ ಸೇರುತ್ತಿತ್ತು. ನಾನು ಸಮಿತಿಯ ಸಭೆಗಳಲ್ಲಿ ಮಾತನಾಡಲು ತೊಡಗಿದೆ. ಸಿಂಡಿಕೇಟ್ ಸದಸ್ಯರು ಬಹುಪಾಲು ಸಮಯವನ್ನು ತೆಗೆದುಕೊಂಡರೂ ಉಳಿದ ಹೊತ್ತು ನಮ್ಮಂಥ 'ಅನಾಮಧೇಯ'ರ ಭಾಷಣ ಕಾರ್ಯಕ್ರಮಕ್ಕೆ ಒದಗುತ್ತಿತ್ತು. ಕುವೆಂಪು, ನಿಕಮ್, ಶ್ರೀಮಾಲಿ, ದೇಜಗೌ–ಈ ನಾಲ್ವರು ಕುಲಪತಿಗಳು ಅಧ್ಯಕ್ಷತೆ ನಡೆಸಿದ ಸಭೆಗಳಲ್ಲಿ ನಾನು ಧಾರಾಳವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಮನಸ್ಸಿಗೆ ತೋಚಿದ್ದನ್ನು ಹೇಳಿದ್ದೇನೆ. ನನ್ನ ವಾದಗಳ ನಿಷ್ಠುರತೆಯನ್ನು ಸಾಹಿತ್ಯ ಶೈಲಿಯ ಲೇಪದೊಡನೆ ಸಭಾಸದರಿಗೆ ದಾಟಿಸಿದ್ದೇನೆ. ಒಮ್ಮೆ ವಾರ್ಸಿಟಿ ರಾಜಕೀಯಕ್ಕೆ ಮಲೆತು ನಿಂತು ಒಂದು ಅನ್ಯಾಯದ ಠರಾವನ್ನು ಸೋಲಿಸಿದ್ದೇನೆ. ಆ ಕಥೆ ಹೀಗೆ: ವಿಶ್ವವಿದ್ಯಾನಿಲಯಕ್ಕೆ ತನ್ನ ಅಕ್ಕಪಕ್ಕದ ಮಹಾರಾಜ, ಯುವರಾಜ ಕಾಲೇಜುಗಳ ಮೇಲೆ ವಿಶೇಷ ವಾತ್ಸಲ್ಯ. ಅವು ವರ್ತಮಾನ ಕಾಲದಲ್ಲಿ ಇತರ ಅಂಗಸಂಸ್ಥೆಗಳಿಗಿಂತ ಯಾವ ರೀತಿ ಶ್ರೇಷ್ಠತೆಯನ್ನು ಸಾರದೆ ಹೋದಾಗಲೂ ಅಲ್ಲಿ ಆನರ್ಸ್ ತರಗತಿಯನ್ನು, ತೆರೆದು ಕೆಲವರನ್ನು ಪ್ರೊಫೇಸರಗಿರಿಗೇರಿಸುವ ಹೊಂಚು ನನ್ನ ಮನಸ್ಸಿಗೆ ಬರಲಿಲ್ಲ. ಅಂಗಸಂಸ್ಥೆಗಳ ಹಲವರನ್ನು ನಾನು ಮೊದಲೇ ಭೇಟಿಯಾಗಿ ಆನರ್ಸ್

ಕೋರ್ಸ್ ಶುರುಮಾಡಿದರೆ ಎಲ್ಲರಿಗೂ ಅನ್ವಯವಾಗಬೇಕೆಂದು ಹಠಹಿಡಿಯಲು ಕೇಳಿಕೊಂಡೆ. ಠರಾವು ಬಿದ್ದು ಹೋಯಿತು. ಆದರೆ ಎಂ.ಜಿ.ಎಂ. ಕಾಲೇಜಿಗೆ ನ್ಯಾಯವಾಗಿ ಸಿಗಬೇಕಾಗಿದ್ದ ಎಂ.ಎ.ಎಂ.ಕಾಂ.ಎಂ.ಎಸ್.ಸಿ. ತರಗತಿಗಳನ್ನು – ವೀಕ್ಷಕ ಸಮಿತಿಯ ಸಮ್ಮತಿ ಇದ್ದೂ–ಅಕಾಡೆಮಿಕ್ ಕೌನ್ಸಿಲ್ ಬದಿಗೊತ್ತುವಂತೆ ವಾರ್ಸಿಟಿ ರಾಜಕೀಯ ನನಗೆ ಪ್ರತಿ ಜವಾಬು ಕೊಟ್ಟಿತು. ಡಾ. ಶ್ರೀಮಾಲಿ ಈ 'ರಾಜಕೀಯ'ದ ನೇತೃವಾಗಿ ಮಂಗಳೂರಿಗೊಂದು ಸ್ನಾತಕೋತ್ತರ ಕೇಂದ್ರ ದಯಪಾಲಿಸುವ ಅಸ್ತ್ರ ಹೂಡಿದ ಮೇಲೆ ನಾನು ನನ್ನ ಹಠ ಮುಂದುವರಿಸಲಿಲ್ಲ. ಇನ್ನೊಂದು ದೃಷ್ಟಿಯಿಂದ ಜಯಾಪಜಯಗಳನ್ನು ಬಿಟ್ಟರೆ, ಹೋರಾಟವೊಂದೇ ನಮಗೆ ಸ್ವಧರ್ಮವೆಂದು ಅನಿಸಿದ್ದೂ ಉಂಟು. ಕುಲಪತಿ ದೇಜಗೌ; ನನ್ನ ಪರಮ ಸ್ನೇಹಿತರು – ಇಪ್ಪತ್ತೈದು ವರ್ಷಗಳಿಂದಲೂ ನಾವು ಜತೆ ಜತೆಯಾಗಿ ಕನಸು ಕಂಡವರು. ಅವರ ಪ್ರೇಮಕ್ಕೆ ಎಣೆಯಿಲ್ಲ. ಅವರ ದಯೆಯಿಂದ ನಾನು ಸೇರದ ಸಮಿತಿಯಿರಲಿಲ್ಲ. ಚುನಾವಣೆಗೆ ನಿಲ್ಲಿಸುವವರೂ ಅವರೇ, ಗೆಲ್ಲಿಸುವವರೂ ಅವರೇ, ಕೆಲವೊಮ್ಮೆ ಚುನಾವಣೆಯೆ ಇಲ್ಲದಂತೆ ಮಾಡಿ ಸದಸ್ಯತನ ನೀಡುವವರೂ ಅವರೇ. ಅವರ ಮೂಲಕ ನನಗೆ ಮೈಸೂರಿನಲ್ಲಿ ಒಂದು ಮಿತ್ರ ಮಂಡಳವೇ ದೊರಕಿದೆ. ಅವರಿಗೆ ನನ್ನಿಂದ ಯಾವ ಪ್ರಯೋಜನವಾಗದೆ ಹೋದರೂ ನನಗೆ ಅವರ ಸ್ನೇಹ ಅತಿಶಯವೆಂದು ಕಂಡಿದೆ. ಕಾಲೇಜಿನ ಆರ್ಥಿಕ ಭಾರ ವರ್ಷದಿಂದ ವರ್ಷಕ್ಕೆ ಏರುತ್ತಿರುವುದನ್ನು ಸೂಚಿಸುತ್ತದೆ ತುಲನಾತ್ಮಕವಾಗಿಯೂ, ಹೊರಗಣ್ಣಿಗೂ ಎಂ. ಜಿ. ಎಂ.ನ ಆರ್ಥಿಕತೆ ಸುಭದ್ರವೆಂದು ತೋರಿದರೂ ಈಗ ಮೂರು ವರ್ಷಗಳಿಂದ ಅದು ನಿರ್ವಹಣೆಯ ವೆಚ್ಚವನ್ನು ಸರಿದೂಗಿಸುವ ಸಮಸ್ಯೆಗೆ ಈಡಾಗಿದೆ. ಅಕಾಡಮಿಯಿಂದ ನಿಬಡ್ಡಿಯಾಗಿ ಸಾಲ ಪಡೆದ 13 ಲಕ್ಷ ರೂಪಾಯಿಗಳ ಮರುಪಾವತಿ ಹೇಗೂ ಕಷ್ಟವಾದ ಮಾತು. ಪ್ರಾಧ್ಯಾಪಕರ ಏರು ಸಂಬಳಗಳ, ತುಟ್ಟಿಭತ್ತೆಗಳ, ಪ್ರಯೋಗಶಾಲಾ ಸರಕುಗಳ, ಗ್ರಂಥಗಳ ಬೆಲೆ ಅಪರಿಮಿತವಾಗಿ ಬೆಳೆದು ಆರ್ಥಿಕ ಪರಿಸ್ಥಿತಿ ಬಿಕ್ಕಟ್ಟಿನಲ್ಲಿದೆ. ಇದಕ್ಕೆ ಡಾ. ಪೈ ಬಲು ಹಿಂದೆ ಹೆತ್ತವರ ಸಹಕಾರದಿಂದ ವರ್ಷಂಪ್ರತಿ ಏನಾದರೂ ದೇಣಿಗೆ ತೆಗೆದುಕೊಳ್ಳದೆ ಧರ್ಮದರ್ಶಿಗಳಿಗೆ ಕಾಲೇಜಿನ ವೆಚ್ಚದ ಕೊರಕಲನ್ನು ತುಂಬಿಸಲು ಸಾಧ್ಯವಿಲ್ಲವೆಂದು ತಮ್ಮ ಸಹಕಾರ ಯೋಜನೆಯನ್ನು ಬೇರೆ ಕಾಲೇಜುಗಳಲ್ಲಿ ಅಳವಡಿಸಿದ್ದರು. ಎಂ. ಜಿ. ಎಂ. ಇದರಿಂದ ಪ್ರತ್ಯೇಕವಾಗಿ ನಿಂತು ಹತ್ತು ವರ್ಷಕಾಲ ಸಂಬಳ ಹೊರತು ಬೇರಾವ ದೇಣಿಗೆಯೂ ಇಲ್ಲದೆ ನಡೆಯಲು ಸಾಧ್ಯವಾದದ್ದು ಶ್ರೀ ಟಿ. ಎ. ಪೈ ಅವರ ಔದಾರ್ಯದಿಂದ – ಸಿಂಡಿಕೇಟ್ ಬ್ಯಾಂಕಿನ ಸಾಲ, ಓವರ್ ಡ್ರಾಫ್ಟ್, ಕೈಕಡಗಳಿಂದ, ಆಪತ್ಕಾಲಕ್ಕೆ ಬ್ಯಾಂಕರ್ ಪೈ ಇರುವಾಗ 'ಚಿಂತೆ ಯಾತಕೋ ಮನುಜಾ' ಎಂದುಕೊಂಡಿದ್ದ ನಮಗೆ ಟಿ. ಎ. ಪೈ ಊರಿಂದ ನಿರ್ಗಮಿಸಿದ ಬಳಿಕ ಆಸರೆ ಇಲ್ಲವಾಯಿತು. ಹೆತ್ತವರ ಹತ್ತಿರ ಉಪಾಯವಿಲ್ಲದೆ ಸ್ವಲ್ಪ ದೇಣಿಗೆ ಕೇಳಿದೆವು; ಅವರು ಸಂತೋಷವಾಗಿ ಕೊಟ್ಟರು. ಆದರೆ ಇದು ಕೆಲವು ಸುಧಾರಕ ಪ್ರವೃತ್ತಿಯ ರಾಜಕಾರಣಿಗಳಿಗೆ ಹಿಡಿಸಲಿಲ್ಲ. ಅವರು ಚಳುವಳಿಯ ಬೆದರಿಕೆ ಹಾಕಿದರು. ಡಾ. ಪೈ ಕಾಲೇಜಿಗೆ ಅಡ್ಡಿ ಮಾಡಿದರೆ ತಾನು ಅದನ್ನು ಮುಚ್ಚಿಬಿಡುತ್ತೇನೆಂದು ಸಾರಿದರು. ಹೆತ್ತವರ ಸಭೆಯಲ್ಲಿ ಕಣ್ಣೀರು ಕರೆದು 'ಪ್ರಯಾಸಪಟ್ಟು ನಾವು ಬೆಳೆಸಿದ ಈ ಸಂಸ್ಥೆ ಊರಿನ ಜನರಿಗೆ ಬೇಡವೆಂದೋ. ನಾವಿದನ್ನು ನಡೆಸಲುಕೂಡದೆಂದೋ ಅನಿಸಿದರೆ ಯಾರಿಗೆ ಕೊಡಲೂ ನಾವು ಸಿದ್ಧರು, ಅಥವಾ ಮುಚ್ಚಿ ಬಿಡಬೇಕೆಂಬ ಆಸೆ ಯಾರಿಗಾದರೂ ಇದ್ದರೆ ಹಾಗೇ ಆಗಲಿ, ದೈವೇಚ್ಛೆ' ಎಂದರು. ಅಕಸ್ಮಾತ್ತಾಗಿ ಆ ಸಂದರ್ಭದಲ್ಲಿ ದಿಲ್ಲಿಯಿಂದ ಮಣಿಪಾಲಕ್ಕೆ ಆಗಮಿಸಿದ ಟಿ. ಎ. ಪೈ 'ಉದಯವಾಣಿ' ಸಂದರ್ಶನದಲ್ಲಿ ಎಂ. ಜಿ. ಎಂ. ಆರ್ಥಿಕ ಪರಿಸ್ಥಿತಿಯನ್ನು ವಿಶಾಲವಾದ ಸಾಮಾಜಿಕ ಸಂದರ್ಭದೊಡನೆ ತುಲನೆ ಮಾಡಿ ಉತ್ತಮ ಶಿಕ್ಷಣಕ್ಕೆ ಬೆಲೆ ಕೊಡುವ ಪ್ರವೃತ್ತಿ, ತ್ಯಾಗ ಮಾಡಬೇಕಾದ ಅವಶ್ಯಕತೆಗಳನ್ನು ಒತ್ತಿ ಹೇಳಿದರು. ಒತ್ತರಿಸಿದ ಮೋಡಗಳು ಚದರಿದಾಗ ಸುಸೂತ್ರವಾಗಿ ಮಕ್ಕಳ ಪೋಷಕರು ನಮಗೆ ಬೆಂಬಲ ನೀಡಿದರು. ಕಾಲೇಜಿನ ವರಮಾನ ಮತ್ತು ವೆಚ್ಚದ ಅಸಮತೋಲನವನ್ನು ಗಮನಿಸಿದರೆ ನಮ್ಮ ಕಾಲೇಜುಗಳು ಬಹಳ ಕಾಲ ತಮ್ಮ ಸ್ವಾತಂತ್ರ್ಯವನ್ನುಳಿಸಿಕೊಳ್ಳಲಾರವು ಎಂದೇ ನನಗನ್ನಿಸುತ್ತದೆ. ಒಂದೋ ಪೋಷಕರು ಕೊರತೆ ತುಂಬಿಸಬೇಕು. ಅಥವಾ ಸರ್ಕಾರವೇ ಕಾಲೇಜುಗಳನ್ನು ವಹಿಸಿಕೊಳ್ಳಬೇಕು. ಇವೆರಡರ ನಡುವಿನ ತ್ರಿಶಂಕು ಪರಿಸ್ಥಿತಿ ಶಿಕ್ಷಣ ಮಟ್ಟವನ್ನು ಅಧೋಗತಿಗಿಳಿಸುತ್ತದೆ. ತಿಂಗಳ ಸಂಬಳವನ್ನು ಸರಿಯಾಗಿ ನಿಶ್ಚಿತ ದಿನಾಂಕಕ್ಕೋ ಅಥವಾ ಪೂರ್ತಿಯಾಗಿಯೋ ಪಾವತಿ ಮಾಡಲಾರದ ಸಂಸ್ಥೆಯಲ್ಲಿ ಪರಿಶುದ್ಧ ವಾತಾವರಣ ನೆಲೆಸಲಾರದು. ಒಳ್ಳೆಯ ಶಿಕ್ಷಣ ಅಥವಾ ಸರ್ಕಾರಿ ಶಿಕ್ಷಣ – ಇವೆರಡರ ಕವಲುದಾರಿಯಲ್ಲಿ ನಾವು ನಿಂತಿದ್ದೇವೆ. ಖಾಸಗಿ ವಿದ್ಯಾಲಯಗಳಿಗೆ ಪೋಷಕರು ನೆರವು ನೀಡುವ ಡಾ. ಪೈ ಅವರ ಯೋಜನೆಯಿಂದಾಗಿ ಅವರ ಕಾಲೇಜುಗಳಲ್ಲಿ ಇದುವರೆಗೆ ಸಂಬಳಕ್ಕಾಗಿ ಪ್ರಾಧ್ಯಾಪಕ ಪರದಾಟ ಮಾಡಿದ್ದಿಲ್ಲ. ದೇಶದ ನಾಲ್ಕು ಸಾವಿರ ಕಾಲೇಜುಗಳಲ್ಲಿ ಅಧ್ಯಯನ ಮಾಡುವ 40 ಲಕ್ಷ ವಿದ್ಯಾರ್ಥಿಗಳಿಗೆ ವಿದ್ಯಾದಾನ ನಡೆಯುತ್ತಿರುವಾಗ ಸರ್ಕಾರದ ಪ್ರಬಲ ಸಂಪನ್ಮೂಲಗಳಿಗೂ ಒಂದು ಮಿತಿ ತನ್ನಂತೆ ಉಂಟಾಗುತ್ತದೆ. 'ಸಹಾಯಧನ'ವನ್ನು ಒಂದಲ್ಲ ಒಂದು ನೆಪದಿಂದ ಕಮ್ಮಿ ಮಾಡುವ ಉಪಾಯಗಳನ್ನು ಸರ್ಕಾರ ಯೋಚಿಸುತ್ತದೆ. ಕಟ್ಟಡದ ಬಾಡಿಗೆ ಇಲ್ಲ. ಲೆಬೊರೇಟರಿಗೆ ಸಹಾಯ ಇಲ್ಲ, ಮುಂದೆ ಏನಿಲ್ಲವಾಗುತ್ತದೋ ಎಂಬ ಗಾಬರಿಯಲ್ಲಿ ಖಾಸಗೀ ಆಡಳಿತ ಈಗ ತತ್ತರಿಸಿದೆ. ಯಾರೋ

ನಾಲ್ಕು ಜನ ಊರಿನ ಮೇಲಿನ ಮಮತೆಯಿಂದ ಕಾಲೇಜು ಕಟ್ಟುವಾಗ ಉಳಿದವರು ಕೈಕಟ್ಟಿ ಕುಳಿತರೂ ಸ್ವಂತ ಮಕ್ಕಳ ವಿದ್ಯಾಭ್ಯಾಸದ ಮುಹೂರ್ತದಲ್ಲಾದರೂ ಉದಾರತೆ ತೋರಿಸಲಿ ಎಂಬ ತತ್ತ್ವ ನಮ್ಮ ಜಿಲ್ಲೆಯ ಕಾಲೇಜುಗಳ ಆಂತರಿಕ ಆರ್ಥಿಕ ಪರಿಸ್ಥಿತಿಯನ್ನು ಇಷ್ಟಾದರೂ ಸುಸ್ಥಿತಿಯಲ್ಲಿಟ್ಟಿರುವುದನ್ನು ಧುರೀಣರು ಗಮನಿಸ ಬೇಕು. ಕಡ್ಡಾಯ ಪ್ರಾಥಮಿಕ ಶಿಕ್ಷಣ ಒಂದೇ ರಾಷ್ಟ್ರದ ಧ್ಯೇಯ : ಉನ್ನತ ಶಿಕ್ಷಣಕ್ಕೆ ಸಂವಿಧಾನಾತ್ಮಕ ಅನಿವಾರ್ಯತೆ ಇಲ್ಲ. ಅಂದರೆ ಈಗಲೇ ಇರುವ, ಮುಂದೆ ಇನ್ನಷ್ಟು ಬಿಗಡಾಯಿಸಲಿರುವ ಆರ್ಥಿಕ ಸಂಕಟದಲ್ಲಿ ಸರಕಾರ ಸಹಾಯಧನ ಪ್ರಮಾಣವನ್ನು ಮತ್ತಷ್ಟು ಕೊರೆ ಮಾಡುವ ಸಂಭವವಿದೆ. ಸ್ವಲ್ಪ ಕಾಲದಲ್ಲೇ – ನಮ್ಮ ರಾಜಕೀಯಸ್ಥ ಜನಕ್ಕೆ ಸಾಕಷ್ಟು ಆರ್ಥಿಕ ಬುದ್ಧಿಯೂ, ಧೈರ್ಯವೂ ಬಂದರೆ ಕಾಲೇಜು, ವಿಶ್ವವಿದ್ಯಾನಿಲಯಗಳಿಗೆ ಕೊಡುವ ಗ್ರಾಂಟನ್ನು ಅವರು ನಿಲ್ಲಿಸಿದರೂ ಯಾವ ಅನರ್ಥವೂ ಸಂಭವಿಸಲಾರದು. ಆಗ ಉಚ್ಚ ವಿದ್ಯಾಭ್ಯಾಸ ಬೇಕಾದವರು ದಕ್ಷಿಣೆ, ಧಾರಣೆ ಕೊಟ್ಟು ವಿದ್ಯೆ ಪಡೆಯಬಹುದು. ದುರ್ಬಲರ ರಕ್ಷಣೆಗೆ ಮಾ-ಬಾಪ್ ಸರ್ಕಾರ ಇದ್ದೇ ಇದೆ. ಅವರಿಗೆ ಶಿಷ್ಯವೇತನ ಕೊಡಲಿ. ತೆರಿಗೆಯ ಹಣ ಕೇವಲ ಪ್ರಾಥಮಿಕ, ವಯಸ್ಕ ಶಿಕ್ಷಣಕ್ಕೆ ಮೀಸಲಾಗಲಿ. ದೇಶದಲ್ಲಿ 70 ಶೇಕಡಾ ಜನರು ನಿರಕ್ಷರಕುಕ್ಷಿಗಳಾಗಿರುವಾಗ ವಿವಿ. ನಿಲಯಗಳಂಥ ಐರಾವತಗಳನ್ನು ಸಾಕುವುದೇಕೆ? ಊರೆಲ್ಲ ಬೇಕಾಬಿಟ್ಟಿ ಅವರನ್ನು ಬಿಡುವುದೇಕೆ? – ಈ ಪ್ರಶ್ನೆಯನ್ನು ಭಾರತದ ನಾಗರಿಕ ಕೇಳಬಹುದು.*

ಪೈ ಬಂಧುಗಳಿಗೆ ನಾನು ಚಿರಋಣಿ. ನಾನು ಎಂ.ಎ. ಮಾಡಿದ ವರ್ಷವೇ ಅವರು ನನಗೆ ಕರೆದು ಕೆಲಸ ಕೊಟ್ಟಿದ್ದಾರೆ. ನಾನು ಪ್ರಾಧ್ಯಾಪಕನಾಗಿ ಮಾಡಿದ ಕರ್ತವ್ಯವನ್ನು ಮೆಚ್ಚಿ ಸಂಸ್ಥೆಯನ್ನೇ 1964ರಲ್ಲಿ ನನ್ನ ವಶ ಕೊಟ್ಟಿದ್ದಾರೆ. ಸಂಸ್ಥೆಯ, ಅಭಿವೃದ್ಧಿಗಾಗಿ ನನ್ನನ್ನು ಹುರಿದುಂಬಿಸಿ ಸದಾ ಬೆಂಬಲಕ್ಕೆ ನಿಂತಿದ್ದಾರೆ. ಎಂ.ಜಿ.ಎಂ.ನ ಶ್ರೇಯಸ್ಸನ್ನು ಎಲ್ಲಿದ್ದರೂ ಹಾರೈಸುತ್ತಿರುವ ಡಾ. ಪೈ ಮತ್ತು ಟಿ.ಎ. ಪೈ ಅವರನ್ನೂ ದಿವಂ॥ ಆರೂರು ಲಕ್ಷ್ಮೀ ನಾರಾಯಣ ರಾಯರನ್ನೂ ನಾನು ವೈಯಕ್ತಿಕವಾಗಿಯೂ ಉಲ್ಲೇಖಿಸಬೇಕಾದ ಅಗತ್ಯವಿದೆ. ಡಾ. ಪೈ ನನ್ನನ್ನು ತೀರ ಆತ್ಮೀಯನಂತೆ ಕಂಡಿದ್ದಾರೆ. ಅವರು ನನ್ನ ಹತ್ತಿರ ಚರ್ಚಿಸದ ವಿಷಯವಿಲ್ಲ. ಶ್ರೀ ಟಿ.ಎ. ಪೈ ಅವರು 1950ರಲ್ಲಿ ನನ್ನ ನೇಮಕವಾದಾಗ ತಾರುಣ್ಯದ ಮಹತ್ವಾಕಾಂಕ್ಷೆಗೆ ಅರಿವುಳ್ಳವರಾಗಿ 'ಒಂದು ವರ್ಷವಾದರೂ ಇರುತ್ತೀ ಅಲ್ಲಾ?' ಎಂದು ಪ್ರಶ್ನಿಸಿದ್ದರು. ಪ್ರಶ್ನೆಗೆ 'ಹೌದು' ಎಂದು ನಿರ್ಧಾರವಾಗಿ ಉತ್ತರಿಸಿದ್ದೆ. ಒಂದೇ ವಾರದಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ನನಗೆ ಕರೆ ಬಂತು. ಕೊಟ್ಟ ಮಾತಿಗೆ ತಪ್ಪದೆ ಇಲ್ಲೇ ನಿಂತುಬಿಟ್ಟೆ. ನನ್ನ ಆಸಕ್ತಿಗಳನ್ನು ಬಲ್ಲ ಟಿ.ಎ. ಪೈ ಆಗಾಗ 'ನಿಮ್ಮಂಥವರು ಬ್ಯಾಂಕಿನಲ್ಲಿರಬೇಕಿತ್ತು' ಅನ್ನುತ್ತಿದ್ದರು. ಆಗ 'ಕಾಲೇಜಿಗೆ ಯಾರು' ಎಂದು ಕೇಳಿಬಿಡುತ್ತಿದ್ದೆ. ಒಮ್ಮೆ ಅವರು ಗಂಭೀರವಾಗಿಯೇ 'ಬರುತ್ತೀರಾ?' ಎಂದು ಕೇಳಿದರು. ನನಗೆ ಬ್ಯಾಂಕ್ ಸೇರಿದರೆ ನನ್ನ ಓದು, ಬರವಣಿಗೆ ಎರಡೂ ನಷ್ಟವಾಗುವುದೆಂಬ ಭೀತಿ ಹೋಗಲಿಲ್ಲ. ಆ ಮೇಲೆ ನಾನು ಇಟಲಿಗೆ ತೆರಳಿ ಆರು ತಿಂಗಳ ಕೋರ್ಸು ಮುಗಿಸಿದಾಗ ಮತ್ತೊಮ್ಮೆ ಟಿ.ಎ.ಪೈ ಆಸೆ ತೋರಿಸಿ ದರು. ಲಂಡನ್ನಿನ ವೆಸ್ಟ್‌ಮಿನ್‌ಸ್ಟರ್ ಬ್ಯಾಂಕ್‌ನಲ್ಲಿ ಕ್ರೆಡಿಟ್ ಇಂಟೆಲಿಜೆನ್ಸ್, ಮಾರ್ಕೆಟಿಂಗ್ ಇನ್‌ಫಾರ್ಮೆಶನ್ ವಿಭಾಗಗಳಲ್ಲಿ ಮಾಹಿತಿ ಪಡೆದುಕೊಂಡು ಬಾ ಎಂದರು. ಇದು ಬ್ಯಾಂಕಿಗೆ ಸೇರಿಸಲು ಅವರು ಏರ್ಪಡಿಸಿದ ಖೆಡ್ಡಾ ಎಂದುಕೊಂಡು ನಾನು ಎರಡೇ ದಿನ ಆ ಬ್ಯಾಂಕಿಗೆ ಹರಕೆ ಸಂದಾಯ ಮಾಡಿ ಹೊರಬಿದ್ದು, ಬ್ಯಾಂಕರನಾಗುವ ಆಪತ್ತನ್ನು ತಪ್ಪಿಸಿಕೊಂಡೆ. ಉಪಾಧ್ಯಾಯ ವೃತ್ತಿ ದೊಡ್ಡದೆಂದೂ, ಅದೊಂದೇ ನನ್ನ ಪರಿಮಿತಿಗೆ ಯುಕ್ತ ವಾದದ್ದೆಂದೂ ತಿಳಿದ ನನಗೆ ಈ ಬಗ್ಗೆ ಯಾವ ದುಃಖವೂ ಇಲ್ಲ. ಇಂದು ಎಲ್ಲರೂ ಜೊಲ್ಲು ಸುರಿಸುತ್ತಿರುವ ಬ್ಯಾಂಕ್ ಹುದ್ದೆಯನ್ನು ತಿರಸ್ಕರಿಸಿದ ಬಗ್ಗೆ ಬೆಳ್ಳಿಹಬ್ಬದಲ್ಲಿ ಟಿ.ಎ. ಪೈ ಬಹಿರಂಗವಾಗಿ ಒಳ್ಳೆಯ ಮಾತು ಹೇಳಿದಾಗ ನನ್ನ ಜನ್ಮ ಸಾರ್ಥಕವಾಯಿತು ಎಂದುಕೊಂಡಿದ್ದೇನೆ. ದುಡ್ಡಿಗೆ ನಾನೆಂದೂ ಬೆಲೆ ಕೊಟ್ಟವನಲ್ಲ; ಅಧಿಕಾರಕ್ಕೂ ಜಗ್ಗಿದ ವನಲ್ಲ. ಈ ಪ್ರಿನ್ಸಿಪಾಲಗಿರಿಯನ್ನು ವಿಧಿವಶವಾಗಿ ನಾನು ಹೊತ್ತಿದ್ದೇನೆಂದು ನನ್ನ ಸಹೋದ್ಯೋಗಿಗಳು ಬಲ್ಲರು. ಅವರೆಲ್ಲರ ಸ್ನೇಹಹಸ್ತ ನನ್ನನ್ನೂ ಸಂಸ್ಥೆಯನ್ನೂ ಇದುವರೆಗೆ ಶುಭಮಂಗಲವಾಗಿ ನಡೆಸಿದೆ. ಈ 'ಗಿರಿ'ಯ ಭಾರವನ್ನು ನಾವು ಸರಿಸಮವಾಗಿ ಹಂಚಿಕೊಂಡಿರುವುದೇ ಎಂ.ಜಿ.ಎಂ. ಶ್ರೇಯಸ್ಸಿನ ರಹಸ್ಯ.

---

* 1978ರಲ್ಲಿ ಕರ್ನಾಟಕ ಸರ್ಕಾರದ ನೇರವು ನೀತಿಯಲ್ಲಿ ಆಮೂಲಾಗ್ರ ಬದಲಾವಣೆ ಆಗಿ ಶಿಕ್ಷಕರ ಸಂಬಳದ ನೇರಪಾವತಿ ತೊಡಗಿದ ಮೇಲೆ ಈ ಸಮಸ್ಯೆ ಕೊನೆಗೊಂಡಿದೆ.

ನನ್ನ ವಿಶ್ವವಿದ್ಯಾನಿಲಯಗಳು

ಮದರಾಸು ವಿಶ್ವವಿದ್ಯಾನಿಲಯದ ಸ್ನಾತಕನೂ ಅಲ್ಲದೆ ಎಂ.ಜಿ.ಎಂ. ಕಾಲೇಜು ಆರಂಭ ದೆಶೆಯಲ್ಲಿ ಮದರಾಸಿಗೆ ಜೋಡಣೆಯಾಗಿದ್ದುದರಿಂದ ಅಲ್ಲಿನ ಅಧ್ಯಯನ ಮಂಡಳದ ಸದಸ್ಯನೂ ಆಗಿದ್ದುದರಿಂದ 1946ರಿಂದ 1956ರ ವರೆಗೆ ಮದರಾಸಿಗೂ ನನಗೂ ನಿಕಟ ಸಂಬಂಧವೇ ಇತ್ತು. ರಾಜ್ಯ ಪುನರ್ವಿಂಗಡನೆ ಆದ ತಕ್ಷಣ ಕಾಲೇಜನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಕಕ್ಷೆಗೆ ಸೇರಿಸಿದ್ದರಿಂದ ಒಂದು ವರ್ಷ ಅದರ ರುಚಿಯನ್ನು ಕಂಡಂತಾಯಿತು. 1957 ರಿಂದ 1979ರ ತನಕ 22 ವರ್ಷಗಳ ಕಾಲ ನನ್ನ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಯಾಗಿದ್ದುದರಿಂದ ಅದರ ಸಂಬಂಧವೂ ಕುದುರಿತು. ಮೈಸೂರು ಸಂಬಂಧದ ಕೊನೆಯ ಘಟ್ಟದಲ್ಲಿ ಮಂಗಳೂರಿನಲ್ಲಿ ಹುಟ್ಟಿದ ಸ್ನಾತಕೋತ್ತರ ಕೇಂದ್ರವನ್ನು ಪೂರ್ಣ ವಿಶ್ವವಿದ್ಯಾನಿಲಯವನ್ನಾಗಿ ರೂಪಿಸುವ ಸಂದರ್ಭದಲ್ಲಿ ವರದಿ ಒಪ್ಪಿಸುವ ಸಮಿತಿಯಲ್ಲಿ ನಾನಿದ್ದುದರಿಂದ ಈ ಹೊಸ ವಿಶ್ವವಿದ್ಯಾನಿಲಯದ ಜನನಕ್ಕೂ ನಾನು ಸಾಕ್ಷೀಭೂತನಾದೆ; ಅದಲ್ಲದೆ ಎಂ.ಜಿ.ಎಂ. ಕಾಲೇಜಿನ ಸ್ನಾತಕೋತ್ತರ ಸಂಶೋಧನ ಕೇಂದ್ರ (ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ)ದಲ್ಲಿ ನಿರ್ದೇಶಕನೆಂದೂ, ಡಾ. ಟಿ.ಎಂ.ಎ. ಪೈ ಪ್ರಾಧ್ಯಾಪಕನೆಂದೂ ಕೆಲಸ ನಿರ್ವಹಿಸುತ್ತಿರುವುದರಿಂದ ಮಂಗಳೂರಿನ ಸಂಬಂಧವೂ ಒದಗಿ ಬಂದಿದೆ.

ವಿಶ್ವವಿದ್ಯಾನಿಲಯಗಳು ಗ್ರಾಮಾಂತರದ ಜನರಿಗೆ ಎಟುಕದ ಬಲುದೂರದ ವಿಷಯವಾಗಿದ್ದಾಗ ವಿದ್ಯಾರ್ಥಿಗಳಲ್ಲಿ ಉದಿಸುವ ಥ್ರಿಲ್ ವಿ.ವಿ. ನಿಲಯಗಳೇ ಗ್ರಾಮಾಂತರಗಳಿಗೆ ಬಂದಿರತಕ್ಕ ಈ ಕಾಲದಲ್ಲಿ ಇದ್ದೀತೆ? 551 ಮೈಲು ದೂರದ ಮದ್ರಾಸಿನಲ್ಲಿ ಸ್ನಾತಕೋತ್ತರ ತರಗತಿಗೆ ಸೇರಿದ ನನಗೆ ಮದ್ರಾಸಿನ ಪರಂಪರೆಯ ಜ್ಞಾನವಿದ್ದುದರಿಂದ ಅಲ್ಲಿ ವಿದ್ಯಾಭ್ಯಾಸ ಮಾಡುವುದು ಒಂದು ಮಹತ್ತರ ಘಟನೆ ಎಂದನಿಸಿತ್ತು. ಹೀಗಿದ್ದೂ ಎರಡು ವರ್ಷದ ಉಪಾಧ್ಯಾಯ ತರಬೇತಿ ಮತ್ತು 4 ವರ್ಷಗಳ ವೃತ್ತಿ ಜೀವನದ ಅನಂತರ ವಿಶ್ವವಿದ್ಯಾನಿಲಯಕ್ಕೆ ತೆರಳಿದ ನನ್ನಲ್ಲಿ ವಿಮರ್ಶನ ಬುದ್ಧಿ ಸಾಕಷ್ಟು ಬಲಿತಿದ್ದುದರಿಂದ ನಾನು ಬಂದದ್ದನ್ನು ಸ್ವೀಕರಿಸುವ ಭೋಳೇತನ ಒಪ್ಪಿಕೊಳ್ಳಲಿಲ್ಲ. ಆಗಲೇ ಉಪಾಧ್ಯಾಯನಾಗಿದ್ದುದರಿಂದಲೂ ಸದರಿ ವೃತ್ತಿಯನ್ನು ಪರಮ ಗೌರವದಿಂದ ಕಂಡದ್ದರಿಂದಲೂ ನನ್ನ ಸ್ನಾತಕೋತ್ತರ ಜ್ಞಾನಾರ್ಜನೆ ಬಲು ಗಂಭೀರ ಗತಿಯಿಂದಲೇ ಸಾಗಿತು ಎನ್ನಬೇಕು. ವಿದ್ಯಾರ್ಥಿಜೀವನಕ್ಕೆ ಸಹಜವೆನಿಸುವ ಯಾವ ಲಘು ಉದ್ಯೋಗಕ್ಕೂ ನನ್ನ ಮನಸ್ಸು ಒಡಂಬಡುತ್ತಿರಲಿಲ್ಲ. ನಾನು ಆಯ್ಕೆ ಮಾಡಿದ ಅರ್ಥಶಾಸ್ತ್ರದಲ್ಲಿ ಉತ್ತಮ ವರ್ಗದಲ್ಲಿ ಪಾಸಾಗಬೇಕೆಂಬ ಧ್ಯೇಯಕ್ಕಾಗಿ 3 ವರ್ಷಗಳ ಕಾಲ ಏಕಾಗ್ರತೆಯಿಂದ ದುಡಿದೆ. ಸಂಜೆಯ ಹೊತ್ತು ನನಗೆ ಆಟದ ಸಮಯವಾಗಿರಲಿಲ್ಲ. ಕೊಠಡಿಗೆ ಕದವಿಕ್ಕಿ ಮಿತ್ರರನ್ನು ದೂರೀಕರಿಸಿ ಓದಿನಲ್ಲಿ ಮಗ್ನನಾಗಿ ಬಿಡುವೆ. ವಾರಾಂತ್ಯದ ದಿನಗಳಲ್ಲಿ ಮಾತ್ರ ತಂಬರಮಿನಿಂದ ಮದರಾಸಿಗೆ ಹೋಗಿ ಒಂದಾದರೂ ಸಿನಿಮಾ ನೋಡದೆ ಮರಳುತ್ತಿರಲಿಲ್ಲ. ಆಗ ತಂಬರಂ – ಮದರಾಸು ವಿದ್ಯುತ್ ರೈಲುಬಂಡಿಯ ತ್ರೈಮಾಸಿಕ ಪಾಸ್‌ಗೆ ಕೇವಲ 8½ ರೂಪಾಯಿ. ಅದೊಂದು ಇದ್ದರೆ ಬೇಕೆನಿಸಿದಾಗ ಸಿಟಿಗೆ ಸಲೀಸಾಗಿ ಪಯಣಿಸಬಹುದು. ಮೂರ್ ಮಾರ್ಕೆಟಿನಲ್ಲಿ ಪುಸ್ತಕ ಕೊಳ್ಳುವುದಕ್ಕೆ, ವಿಶ್ವವಿದ್ಯಾನಿಲಯ ಕೇಂದ್ರದಲ್ಲಿ ಗ್ರಂಥಾಲಯದಲ್ಲಿ ವಾಚನ ಹಾಗೂ ಫ್ರೆಂಚ್ ಭಾಷಾಧ್ಯಯನ ಮಾಡುವುದಕ್ಕೆ, ರಾಷ್ಟ್ರೀಯ ಲೀಡರುಗಳ ಭಾಷಣ ಕೇಳುವುದಕ್ಕೆ ಹಾಗೂ ಸಿನಿಮಾ ದರ್ಶನಕ್ಕೆ ಈ ಪಾಸನ್ನು ನಾನು ಧಾರಾಳವಾಗಿ ಬಳಸಿಕೊಂಡಿದ್ದೇನೆ. ನನ್ನ ಚಿಕ್ಕಪ್ಪ ಗದುಗಿಂದ ಕಳಿಸಿಕೊಟ್ಟ ಮಾಹೆಯಾನ 75 ರೂಪಾಯಿ ಊಟ ವಸತಿ ಪ್ರಯಾಣ ಇತ್ಯಾದಿ ಸಕಲ ವೆಚ್ಚಗಳನ್ನು ನಿಭಾಯಿಸಲು ಕಷ್ಟವಾಗುತ್ತಿರಲಿಲ್ಲ. ಒಂದೇ ಕಷ್ಟ : ಹೆಚ್ಚು ಹಣ ಉಳಿಯುತ್ತಿದ್ದರೆ ಇನ್ನಷ್ಟು ಪುಸ್ತಕ ಕೊಳ್ಳಬಹುದಿತ್ತಲ್ಲವೇ ಎಂಬ ಆಸೆ ಮಾತ್ರ.

ನಾನು ಮದರಾಸು ಕ್ರಿಶ್ಚನ್ ಕಾಲೇಜಿಗೆ ಸೇರಿದ ವರ್ಷ (1946) ಭಾರತೀಯ ಇತಿಹಾಸದಲ್ಲೇ ಒಂದು ಮಹತ್ವದ ವರ್ಷವಲ್ಲವೆ? ಸ್ವಾತಂತ್ರ್ಯಪೂರ್ವದ ಈ ಒಂದು ವರ್ಷ ದೇಶಾದ್ಯಂತ ಚಳವಳಿ, ಸಂಭ್ರಮದ ವಾತಾವರಣ. ಬ್ರಿಟಿಷರು ಹೊರಡುವ ನಿರ್ಣಯ ಮಾಡಿ ಆಗಿತ್ತು. ಶತಮಾನದ ಹೋರಾಟ ಫಲಪ್ರದವಾಗುವ ಘಟ್ಟವನ್ನು ಮುಟ್ಟಿತ್ತು. ಮದರಾಸಿನಲ್ಲಿ ಆಗಿಂದಾಗ್ಗೆ ಬೃಹತ್ ರಾಜಕೀಯ ಸಭೆಗಳು; ಐಲೆಂಡ್ ಗ್ರೌಂಡ್ಸ್‌ನಲ್ಲಿ ನೆಹರೂ ಭಾಷಣ ಕೇಳಿದ್ದೆ, ಮಾಂಬಳಂನಲ್ಲಿ ಅರುಣಾ ಆಸಫ್ ಅಲಿ ಮತ್ತು ಅಚ್ಯುತ ಪಟವರ್ಧನ್, ಪೆರಂಬೂರಿ

ನಲ್ಲಿ ಡಾಂಗೆ ಮುಂತಾದವರನ್ನು ಆಲಿಸುತ್ತಿದ್ದೆ. ಈ ಸಭೆಗಳ ಬಗ್ಗೆ ನನಗಿಂತಲೂ ಉತ್ಸಾಹ ಇದ್ದವರು ಮಿತ್ರರಾದ ಮಲ್ಲರು, ದೇವರಾಯರು, ಬಹುಶಃ ನನಗಿಂತ ಹೆಚ್ಚು ರಾಜಕೀಯ ಪ್ರಜ್ಞೆ ಉಳ್ಳವರು ಅವರೇನೋ ಎಂದು ಕೇಳುತ್ತಿದ್ದೆ. ಆದರೆ ಅವರ ಬೆಂಬಿಡುತ್ತಿರಲಿಲ್ಲ. ವೈಚಾರಿಕವಾಗಿಯೂ, ವೈಯಕ್ತಿಕವಾಗಿಯೂ ಈ ಇಬ್ಬರು ಮಿತ್ರರ ಮನೋಧರ್ಮ, ಹವ್ಯಾಸ, ಜೀವನಾಸಕ್ತಿಗಳು ನನ್ನ ಮೇಲೆ ಪರಿಣಾಮ ಮೂಡಿಸಿವೆ. ಉಪಾಧ್ಯಾಯ ವೃತ್ತಿಗೆ ಅಂಟಿಕೊಳ್ಳುವ ಅಳುಕಿನ ಪರೆ ಕಳಚಲು ಇವರು ನನಗೆ ನೆರವಾಗಿದ್ದಾರೆ. ವಿದ್ಯಾರಂಗದಲ್ಲಿ ಸತ್ಸಹವಾಸ, ಸತ್ಸಂಗಗಳು ನೇರ ವಿದ್ಯಾಭ್ಯಾಸಕ್ಕಿಂತಲೂ ಪರೀಕ್ಷಾಂಕಗಳಿಗಿಂತಲೂ ಮಹತ್ವದ ಭಾಗಗಳೆಂದು ನಾನು ಇಂದು ಪೂರ್ವಾವಲೋಕನದಿಂದ ಹೇಳಬಲ್ಲೆ. ಈ ಇಬ್ಬರ ಸಖ್ಯ ಸಹವಾಸ ದೊರಕದೆ ಇರುತ್ತಿದ್ದರೆ ನಾನು ಹೀಗಿರುವ ನಾನಾಗುತ್ತಿದ್ದೆನೆ?

ಮದರಾಸು ವಿಶ್ವವಿದ್ಯಾನಿಲಯದ ಕಕ್ಷೆಯಲ್ಲಿರುವ ಕಾಲೇಜುಗಳಲ್ಲಿ ಎಲ್ಲವೂ ಅದರ ಅಂಗಸಂಸ್ಥೆಗಳೇ ಆದರೂ ಆ ನಗರದಲ್ಲೇ ಇರುವ ಪ್ರೆಸಿಡೆನ್ಸಿ, ಲೊಯಲಾ, ಪಚಯಪ್ಪ, ಮತ್ತು ತಾಂಬರಮಿನ ಕ್ರಿಶ್ಚನ್‌ಗಳಿಗೆ ಒಂದು ವಿಶೇಷ ಸ್ಥಾನ ಪ್ರಾಪ್ತವಾಗಿತ್ತು. ಐತಿಹಾಸಿಕವಾಗಿ ಇವುಗಳ ಪೈಕಿ ಕೆಲವು ವಿ.ವಿ. ನಿಲಯದ ಸಾಂಪ್ರದಾಯಿಕ ಹಂದರಕ್ಕೆ ಮೊದಲೇ ಹುಟ್ಟಿದವು. ವಿದೇಶೀಯ ಮತ್ತು ಸ್ವದೇಶೀಯ ಮಹಾಮಹಾ ಪ್ರೊಫೆಸರುಗಳ ಮತ್ತು ಪ್ರಿನ್ಸಿಪಾಲರ ಹೆಸರುಗಳಿಂದ ಯಶಃಪತಾಕೆ ಹಾರಿಸಿದಂಥವು. ವಿಶ್ವವಿದ್ಯಾನಿಲಯ ಹೆಚ್ಚಿನಂಶ ಬರೀ ಆಡಳಿತ ಕೇಂದ್ರವಾಗಿದ್ದು ಸ್ನಾತಕೋತ್ತರ ಹಾಗೂ ಪಿಹೆಚ್‌ಡಿ ಪಾಠಪ್ರವಚನಗಳು ಕೂಡ ಕ್ರಿಶ್ಚನ್‌ನಂಥ ಮುಖ್ಯ ಕಾಲೇಜುಗಳಲ್ಲಿ ನಡೆಯುತ್ತಿದ್ದುದರಿಂದ ನಮಗೆ ನೇರವಾದ ವಿ.ವಿ. ನಿಲಯದ ನೆರಳೇ ಸಿಕ್ಕಿದಂತಾಗಿತ್ತು – ಸ್ವಾಯತ್ತತೆ ಎಂಬ ಪದ ಈಚೆಗೆ ಬಳಕೆಗೆ ಬಂದಿದೆಯಷ್ಟೆ? ಅದನ್ನು ಸ್ವಂತ ಶಕ್ತಿಯಿಂದ ಗಳಿಸಿ ವಿದ್ಯಾಪ್ರಸಾರದ ಶ್ರೇಯಸ್ಸಿಗೆ ಕಾರಣವಾದ ಸಂಸ್ಥೆಗಳೆಂದರೆ ಮದರಾಸಿನ ಈ ದೊಡ್ಡ ಕಾಲೇಜುಗಳು. ವಿಶ್ವವಿದ್ಯಾನಿಲಯಕ್ಕೂ ಅವುಗಳ ಬಗ್ಗೆ ಗೌರವ. ಅಂಗಸಂಸ್ಥೆಗಳನ್ನು ವಸಾಹತುಶಾಹಿ ದೃಷ್ಟಿಯಿಂದ ನೋಡಿ ಅಲ್ಲಿನ ಉಪಾಧ್ಯಾಯರನ್ನು ಎರಡನೇ ದರ್ಜೆ ನಾಗರಿಕರೆಂದು ಪರಿಗಣಿಸುವ ಅಹಿತಕರ ಸಂಪ್ರದಾಯ ಇತ್ತೀಚೆಗಷ್ಟೇ ನಮ್ಮ ಪರಿಸರದಲ್ಲಿ ಉತ್ಪನ್ನವಾಗಿದೆ. ದೇಶದ ಪರಮೋಚ್ಚ ವಿಶ್ವವಿದ್ಯಾನಿಲಯಗಳಲ್ಲಿ ಅಂಗಸಂಸ್ಥೆಯೂ, ವಿ.ವಿ. ಕೇಂದ್ರವೂ ಅನ್ಯೋನ್ಯಾಶ್ರಯ ಉಳ್ಳವಾಗಿ, ಅನ್ಯೋನ್ಯತೆಯಿಂದಲೇ ಇದ್ದುವು. ಶಕ್ತಿಯ ತುಮುಲಕ್ಕಾಗಲಿ ಘರ್ಷಣೆಗಾಗಲಿ ಅಲ್ಲಿ ಅವಕಾಶವೇ ಇರುತ್ತಿರಲಿಲ್ಲ. ಮದರಾಸು ಕ್ರಿಶ್ಚನ್ ಕಾಲೇಜಿನ ನೈಸರ್ಗಿಕ ಆವರಣ, ಅಧ್ಯಯನ ವಿಷಯದಲ್ಲಿ ಅಲ್ಲಿ ಪ್ರಾಧ್ಯಾಪಕರು ತಳೆಯುತ್ತಿದ್ದ ಉದಾರ ನೀತಿ, ವಿದ್ಯಾರ್ಥಿಗಳಿಗೆ ಅವರು ನೀಡುತ್ತಿದ್ದ ಸ್ವಾತಂತ್ರ್ಯ, ಆ ಸ್ವಾತಂತ್ರ್ಯದ ಸದುಪಯೋಗ, ಪಾಠದ ಕೊಠಡಿಯಲ್ಲಾಗಲಿ, ಆಟದ ಬಯಲಲ್ಲಾಗಲಿ ವಿದ್ಯಾರ್ಥಿ ಸಮುದಾಯ ತೋರುತ್ತಿದ್ದ ಉಲ್ಲಾಸ ಮತ್ತು ತುಲನಾತ್ಮಕ ವಿಕ್ರಮಗಳನ್ನು ನೆನಸಿಕೊಂಡರೆ ರೋಮಾಂಚನವಾಗುತ್ತದೆ. ಸಂಯಮಪೂರ್ವಕ ಸ್ವಾತಂತ್ರ್ಯವೇ ಉನ್ನತ ಶಿಕ್ಷಣದ ಅಡಿಗಲ್ಲು.

1950ರಲ್ಲಿ ಎಂ.ಜಿ.ಎಂ. ಕಾಲೇಜು ಸೇರಿದ ಮೇಲೆ 6 ವರ್ಷ ಕಾಲ ನಾನು ಅಲ್ಲಿನ ಪ್ರಾಧ್ಯಾಪಕರ ಪ್ರತಿನಿಧಿಯಾಗಿ ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳದ ಸದಸ್ಯನಾದೆ. ವರ್ಷಕ್ಕೆರಡು ಬಾರಿ ವಿ.ವಿ. ನಿಲಯದ ಲೆಕ್ಕದಲ್ಲಿ ಪ್ರಯಾಣ ಮಾಡುವ ಸೌಕರ್ಯ, ಮಗದೊಮ್ಮೆ ಟ್ರಿಪ್ಲಿಕೇನ್ ಮೌಂಟ್ ರೋಡ್‌ನ ಗ್ರಂಥಭಂಡಾರಗಳ ಸಂದರ್ಶನ. ಇಷ್ಟಕ್ಕೇ ಈ ಸದಸ್ಯತ್ವ ಅನುಕೂಲವಾಯಿತೇ ವಿನಾ ವಿಶ್ವವಿದ್ಯಾಲಯದ ಮೇಲೆ ಯಾವ ಪರಿಣಾಮ ಬೀರಲೂ ಆಗಲಿಲ್ಲ, ಆಗುವುದು ಶಕ್ಯವೇ ಇರಲಿಲ್ಲ. ಡಾ. ಲಕ್ಷ್ಮಣಸ್ವಾಮಿ ಮೊದಲಿಯಾರ್ ಅಂಥ ಗೊಮ್ಮಟ ವ್ಯಕ್ತಿ ಕುಲಪತಿ ಆಗಿರುವವರೆಗೆ ಸದಸ್ಯರು ಇಷ್ಟಬಂದಂತೆ ಮಾತಾಡುವ ಹಾಗೆಯೇ ಇರಲಿಲ್ಲ. ಪ್ರತಿ ಠರಾವಿಗೂ ಇಂಥವನೇ ಮಾತನಾಡಬೇಕು ಎಂಬುದು ಮೊದಲೇ ನಿರ್ಣಯವಾಗಿ ಬಿಟ್ಟಂತೆ ಠರಾವಿನ ಸೂಚನೆಯ ಬೆನ್ನಲ್ಲೇ ಅನುಮೋದನೆ, ಠರಾವು ಪಾಸ್; ಚರ್ಚೆಗೆ ಆಸ್ಪದವೇ ಇಲ್ಲ ಎಂದರೂ ಸಲ್ಲುತ್ತದೆ. ಅಂಥ ಚರ್ಚಾಸ್ಪದ ವಿಷಯಗಳು ಬರುತ್ತಲೂ ಇರಲಿಲ್ಲ. 1956ರ ಸಂದಿನಲ್ಲಿ ಪ್ರಕಟಗೊಂಡ ಒಂದು ವರ್ಷದ ಪಿಯುಸಿ ಸೂಚನೆ ಒಂದನ್ನು ಬಿಟ್ಟರೆ ಯಾವ ಚರ್ಚೆಯೂ ನಮ್ಮ ಮದ್ರಾಸಿನ ಅಧ್ಯಯನ ಮಂಡಳದಲ್ಲಿ ನಡೆಯಲಿಲ್ಲ. ಸಭಾಕಟ್ಟಡ ಪ್ರವೇಶಿಸುತ್ತಿರುವಂತೆ ನಮ್ಮ ಕೈಗೆ ಒಪ್ಪಿಸಿದ ಪ್ರಯಾಣಭತ್ತೆ ಅರ್ಜಿಯನ್ನು ತುಂಬಿಸಿ, 3 ತಾಸು ಮೌನವಾಗಿ ಕೂತಿದ್ದು, ಮಧ್ಯಂತರ ಭೋಜನ ವಿರಾಮದ ವೇಳೆ ಭತ್ತೆಯನ್ನು ವಟಾಯಿಸಿ ಅಲ್ಲಿಂದ ಕಾಲು ಕಿತ್ತರೆ ಅಲ್ಲಿ ಮಧ್ಯಾಹ್ನದ ಅಧಿವೇಶನ ಬಿಕೋ ಅನ್ನಬೇಕು.

ಚರ್ಚಾತೀತ ವಿಷಯಗಳೇ ಮದರಾಸು ವಿ.ವಿ. ನಿಲಯದ ಜೀವನದ ಹೂರಣವಾಗಿದ್ದುವೆ? ಹೀಗನಿಸುತ್ತಿದ್ದ ನನಗೆ ಅಲ್ಲಿನ ಇತಿಹಾಸದಲ್ಲಿ ಅಪೂರ್ವವಾದ ಚರ್ಚಾಸಂದರ್ಭ ಒಂದು 1956ರಲ್ಲಿ ದೊರೆಯಿತು. ಅದನ್ನ ಡಾ. ಲಕ್ಷ್ಮಣಸ್ವಾಮಿಯವರು ನಿರ್ವಹಿಸಿದ ನಾಟಕೀಯ ರೀತಿ ಅವರ ಚಾಣಾಕ್ಷತೆಗೆ ಸಾಕ್ಷಿ. ಎರಡು ವರ್ಷದ ಇಂಟರ್ಮೀಡಿಯಟನ್ನು ವಜಾಮಾಡಿ ಒಂದು ವರ್ಷದ ಪಿಯುಸಿ ತೊಡಗುವ ಸಲಹೆ ಅಧ್ಯಯನ ಮಂಡಳದ ಮುಂದೆ ಬಂತು. ಯುಜಿಸಿ ಹಾಗೂ ಜಿಲ್ಲೆಯ ಶಿಕ್ಷಣ ಸಚಿವಾಲಯ ಆಗಲೇ ಈ ಬಗ್ಗೆ ತೀರ್ಪು ಕೊಟ್ಟಿತ್ತು;

ಆಮಿಷಗಳನ್ನು ಒಡ್ಡಿತ್ತು. ಒಂದು ವರ್ಷದ ಪಿಯುಸಿ ಒಪ್ಪಿಕೊಂಡ ವಿ. ವಿ. ನಿಲಯಗಳಿಗೆ ವಿಶೇಷ ಅನುದಾನ, ಹಾಗೆಯೇ ಒಂದು ವರ್ಷದ ಅನಂತರ ಬರಲಿರುವ 3 ವರ್ಷದ ಡಿಗ್ರಿ ಕೋರ್ಸಿಗೆ ಕಾಲೇಜುಗಳಿಗೂ ಧಾರಾಳ ಅನುದಾನ ಆಶ್ವಾಸನೆ. ಈ ಪ್ರಲೋಭನವನ್ನು ಯಾರು ತಡೆಗಟ್ಟಬಲ್ಲರು? ಹೀಗಿದ್ದೂ ಎರಡು ವರ್ಷದ ಇಂಟರ್ + ಎರಡು ವರ್ಷದ ಡಿಗ್ರಿ (11 + 2 + 2) ಅನೂಚಾನವಾಗಿ ನಡೆದು ಬಂದ ಪದ್ಧತಿ; ಕಾಲೇಜುಗಳಿಗೆ ಹೆಚ್ಚು ಆದಾಯ ಬರುವುದೂ ಇಂಟರ್ ಮೀಡಿಯೆಟ್‌ನ ವರ್ಗಗಳಿಂದ ತಾನೇ? ಹಾಗಾಗಿ ಕ್ರಿಶ್ಚನ್‌ನಂಥ ಕಾಲೇಜುಗಳಲ್ಲಿ ಎರಡು ಇಂಟರ್ ವರ್ಷಗಳಲ್ಲಿ 1500–2000 ವಿದ್ಯಾರ್ಥಿಗಳು ಬಹು ಸಂಖ್ಯಾತರಾಗಿ ಮೇಲಿನ ಎಂ.ಎ. ಆನರ್ಸ್ ತರಗತಿಗಳ ಆರ್ಥಿಕ ಕೊರತೆಯನ್ನ ತುಂಬಿಸಿಕೊಡಬೇಕಾಗಿತ್ತು. ನನ್ನ ಪ್ರಿನ್ಸಿಪಾಲ ಆಗಿದ್ದ ಡಾ. ಬಾಯ್ಡ್ ಅವರು ನನ್ನ ಜತೆಗೇ ಅಧ್ಯಯನ ಮಂಡಳದ ಸದಸ್ಯರು. ಅವರ ಅಭಿಪ್ರಾಯವನ್ನ ನನ್ನನ್ನು ತಮ್ಮ ಬಳಿ ಕರೆದು ಹೇಳಿದರು 'ಹರಿದಾಸ್, ಈ ಜನ ಬರಿಯ ಬದಲಾವಣೆಯೇ ಪ್ರಗತಿ ಎಂದು ಭ್ರಮಿಸುತ್ತಿದ್ದಾರಲ್ಲಾ?' ಆದರೆ ಸಭೆಯಲ್ಲಿ ವಿರೋಧ ಮಾಡಲಿಲ್ಲ. ಕಾರಣ ಅವರಿಗೆ ಅಷ್ಟು ಹೊತ್ತಿಗೆ ಕುಲಪತಿಯ ಅಂತರಾಳ ತಿಳಿದಿತ್ತು, ಕುಲಪತಿಗಿರುವ ಬೆಂಬಲದ ರಹಸ್ಯವೂ ತಿಳಿದಿದ್ದುದರಿಂದ ಬಾಯಿಮುಚ್ಚಿ ಕೂತದ್ದು ಮಾತ್ರವೇ ಅಲ್ಲ ಆ ಮುಂದಿನ ವರ್ಷವೇ ತಮ್ಮ ಕಾಲೇಜನ್ನು ಬಿಟ್ಟು ಸ್ವದೇಶಕ್ಕೆ ಮರಳಿದರು.

11+2+2 ಇಷ್ಟಕ್ಕೆ ಒಬ್ಬ ವಿದ್ಯಾರ್ಥಿ ಒಂದು ಡಿಗ್ರಿ ಪಡೆಯುತ್ತಿದ್ದುದು ರೂಢಿಗತ. ಅದೇಕೋ ಕೇಂದ್ರ ಸಚಿವರೊಬ್ಬರು ಜರ್ಮನಿಗೆ ಹೋದಾಗ ಅಲ್ಲಿ ಹೈಸ್ಕೂಲ್ ಶಿಕ್ಷಣ 10 ವರ್ಷ ಎಂಬುದನ್ನ ಪರಾಂಬರಿಸಿದರಂತೆ, ಆ ಮೇಲೆ ಡಿಗ್ರಿ ಶಿಕ್ಷಣ 3ವರ್ಷ ಇದ್ದುದನ್ನು ನೋಡಿದರಂತೆ. ಈ ಅಸ್ಥಿಪಂಜರವನ್ನು ಭಾರತಕ್ಕೆ ತಂದು ಅದರಲ್ಲಿ ಜೀವ ತುಂಬಿಸಬೇಕೆಂದು ಅವರಿಗೆ ಗೀಳು ಹಚ್ಚಿಕೊಂಡಿತಂತೆ; ನಮ್ಮ ಕಾಲೇಜು ಪದ್ಧತಿಯನ್ನು ಇದು ಪ್ರಗತಿಯ ಹಾದಿ ಹಿಡಿಸೀತೆಂದು ಅವರಿಗೆ ಅನಿಸಿತಂತೆ; ಆ ಪ್ರಕಾರವಾಗಿ ದಿಲ್ಲಿಯಿಂದ ಫರ್ಮಾನು ಹೊರಟದ್ದೇ ಡಾ. ಲಕ್ಷ್ಮಣ ಸ್ವಾಮಿಯಂಥ ಗಟ್ಟಿ ಕುಳವನ್ನು ಕೂಡ ಅಲುಗಾಡಿಸಿ ಹಿಂಬಾಲಕನಾಗುವಂತೆ ಪ್ರೇರೇಪಿಸಿತು. ಸಭೆಯಲ್ಲಿ ಪ್ರಸ್ತಾವವನ್ನು ಸೂಚಿಸಿದೊಡನೆಯೇ ಡಾ. ಲಕ್ಷ್ಮಣಸ್ವಾಮಿ ದಿಗ್ಗನೆ ತಮ್ಮ ಉನ್ನತ ಪೀಠದಿಂದೆದ್ದು 'ಚರ್ಚೆ ಸ್ವತಂತ್ರವಾಗಿ ನಡೆಯಲನುಕೂಲವಾಗುವಂತೆ ನಾನು ನಿಮ್ಮ ಜತೆಗೇ ಕೂರುತ್ತೇನೆ. ಯಾರು ಬೇಕಾದರೂ ತಮ್ಮ ಅಭಿಪ್ರಾಯ ತಿಳಿಸಬಹುದು' ಎಂದು ಪರವಾನಿಗೆ ಕೊಟ್ಟು ತಾವು ಹತ್ತಿರದ ಒಂದು ಕುರ್ಚಿಯಲ್ಲಿ ಆಸೀನರಾದರು. ಪರವಾನಿಗೆ ಇದ್ದರೂ ಸೂಚನೆಗೆ ಯಾವ ವಿರೋಧವೂ ಕಾಣಿಸಲಿಲ್ಲ. ಠರಾವು ಪಾಸ್ – ಎಂದಿನಂತೆ. ಇಷ್ಟು ಮಟ್ಟಿಗೆ ಸಹಕರಿಸುವ ಸದಸ್ಯರಿಗೆ ಕುಲಪತಿ ಆ ದಿನ ವಿಶೇಷ ಚಹಾ ಸತ್ಕಾರವಿತ್ತು. ಮಧ್ಯಂತರ ವಿರಾಮಕಾಲದಲ್ಲಿ ಎಲ್ಲರೊಡನೆಯೂ ಬೆರೆತು ಆಡಿದರು; ಒಂದು ಅಪೂರ್ವ ಸಂದರ್ಭವಿದು. ಏಕೆಂದರೆ ತಿಂಡಿತೀರ್ಥದ ಕಥೆಯೇ ಮದ್ರಾಸಿನ ಸಭೆಗಳಲ್ಲಿ ಇದ್ದಿರಲಿಲ್ಲ – ಮೈಸೂರು ವಿ ವಿ ನಿಲಯದ ಸಂಪ್ರದಾಯಕ್ಕೆ ತೀರ ವ್ಯತಿರಿಕ್ತವಾಗಿ.

ಒಂದು ವರ್ಷದ ಪಿಯುಸಿಯನ್ನ ಪುರಸ್ಕರಿಸಿ ಭಾಷಣ ಮಾಡಿದ ವಿದ್ವಾಂಸರೇ ತದನಂತರ 2 ವರ್ಷದ ಪಿಯುಸಿಯನ್ನು ಶಿಫಾರಸು ಮಾಡಿದರು ಅರ್ಥಾತ್ ಮತ್ತೆ ಇಂಟರ್‌ಮೀಡಿಯೇಟನ್ನು ತುರುಕಿದರು. ಶಿಕ್ಷಣದ ಅರ್ಥವನ್ನೂ, ಅದರ ಅಂತಸ್ಸತ್ವವನ್ನೂ ಗುಣಮಟ್ಟವನ್ನೂ ಪರಿಷ್ಕರಿಸಲು ಆಗದಂಥ ಸನ್ನಿವೇಶದಲ್ಲಿ ವಿ ವಿ ನಿಲಯದ ಪಂಡಿತ ಮಂಡಳಿ ಶಿಕ್ಷಣದ ಅಸ್ಥಿಪಂಜರದಲ್ಲಿ ಎಲುಬುಗಳೆಷ್ಟಿರಬೇಕು ಎಂಬುದನ್ನು ಲೆಕ್ಕ ಹಿಡಿಯುವ ಆಟ ಹೂಡಿದೆ. ಎಲ್ಲರಿಗೂ ಎಲ್ಲ ಬಗೆಯ ಶಿಕ್ಷಣವನ್ನು ಕೇಳಿದಷ್ಟು ಅಗ್ಗದರದಲ್ಲಿ ಒದಗಿಸಲು ಸಾಮಾಜಿಕ ನ್ಯಾಯದ ಹಿನ್ನೆಲೆಯಲ್ಲಿ ಕಟಿಬದ್ಧವಾಗಿರುವ ಸರ್ಕಾರ ಇಂದು ವಿ ವಿ ನಿಲಯಗಳ ಮೇಲೆ ತನ್ನ ಕರಾಳ ಛಾಯೆಯನ್ನು ಹರಡಿ ಬಿಟ್ಟಿದೆ. ವಿ ವಿ ನಿಲಯದ ನಿರ್ಣಯಗಳನ್ನು ಹಿಂತಳ್ಳಿ, ತಾನೇ ಮನ್ನಣೆ ಕೊಡುತ್ತದೆ; ಉಪಚಾರಕ್ಕಾದರೂ ವಿ ವಿ ನಿಲಯವನ್ನ ಕೇಳದೇನೆ ಮೆಡಿಕಲ್ ಇಂಜನಿಯರಿಂಗ್ ಕಾಲೇಜುಗಳು ಕೂಡ ಹುಟ್ಟಿಕೊಳ್ಳುವ ಸನ್ನಿವೇಶ ಪ್ರಾಪ್ತವಾಗಿದೆ. ಮೈಸೂರಿನ ಓರ್ವ ಕುಲಪತಿ 'ಹೌದು ಸ್ವಾಮಿ ನೀವು ಕಾಲೇಜುಗಳಿಗೆ ಸ್ವಾಯತ್ತತೆ ಅಂತ ಬಡಕೊಳ್ಳುತ್ತಿದ್ದೀರಿ, ಇಲ್ಲಿ ನಮಗೇ ಸ್ವಾಯತ್ತತೆ ಇಲ್ಲವಲ್ಲಾ?' ಎಂದಿದ್ದುಂಟು.

1956ನೇ ವರ್ಷದಲ್ಲಿ ರಾಜ್ಯ ಪುನರ್ವಿಂಗಡಣೆಯಾದದ್ದು ನವಂಬರದಲ್ಲಿ. 1957ರಲ್ಲಿ ಎಪ್ರಿಲ್‌ನಲ್ಲಿ ಸರ್ಕಾರದ ಆದೇಶದಂತೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಒಂದು ಅಫಿಲಿಯೇಶನ್ ಆಯೋಗ ಬಂದು ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳನ್ನು ಸಂದರ್ಶಿಸಿ ಕರ್ನಾಟಕ ವಿ ವಿ ಕಕ್ಷೆಯೊಳಗೆ ಸೇರಿಸಿಕೊಂಡಿತು. ಮಣಿಪಾಲ ಅಕಾಡೆಮಿಗೆ ಸೇರಿದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜಿನ ದೆಸೆಯಿಂದ ನಮ್ಮ ಸಂಸ್ಥೆಗಳಿಗೆ ಕರ್ನಾಟಕದ ಸಂಬಂಧ ಪೂರ್ವದಲ್ಲೇ ಬೆಳೆದು ಬಂದಿತ್ತು. ಇದರ ಹಿನ್ನೆಲೆಯಲ್ಲಿ ಸರ್ಕಾರ ದಕ್ಷಿಣ ಕನ್ನಡವನ್ನ ಕರ್ನಾಟಕದ ವ್ಯಾಪ್ತಿಯೊಳಗೆ ಸೇರಿಸ ಬಯಸಿದ್ದು ತರ್ಕಬದ್ಧವೇ ಆಗಿತ್ತು. ಆದರೆ ಯಾವುದೋ ರಾಜಕೀಯ ಹೀಗಾಗಲು ಬಿಡಲಿಲ್ಲ; ಆರೇ ಆರು ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೈಸೂರು ವಿ ವಿ ನಿಲಯಕ್ಕೆ ಸೇರಬೇಕೆಂದು ಸರ್ಕಾರ ಮರು ತೀರ್ಪು ಕೊಟ್ಟಿತು. ಆ ವರ್ಷದ ಮಟ್ಟಿಗೆ ಪರೀಕ್ಷಾ ಪದ್ಧತಿ ಕರ್ನಾಟಕದ್ದೇ ಆದರೂ ಮೈಸೂರು ಪರೀಕ್ಷೆ ಮಾಡಿ ಪರಿಣಾಮವನ್ನು ಘೋಷಿಸಿ ದಕ್ಷಿಣ ಕನ್ನಡವನ್ನು ತನ್ನ ಅಧಿಕಾರ ವಲಯದಲ್ಲಿ ಸೇರಿಸಿಕೊಂಡಿತು.

ಧಾರವಾಡದಲ್ಲಿ ನಡೆದ ವಿ ವಿ ನಿಲಯಗಳ ಯುವಜನೋತ್ಸವದಲ್ಲಿ ನಮ್ಮ ಕಾಲೇಜು ಯಶಸ್ವೀ ಭಾಗವಹಿಸಿದ್ದೊಂದು ಬಿಟ್ಟರೆ – ಎಂ.ಜಿ.ಎಂ. ಸಂಬಂಧ ಉಭಯತರಿಗೂ ಅಪಾಯವಿಲ್ಲದೇ ಕ್ಷಿಪ್ರದಲ್ಲಿ ಮುಗಿದೇ ಹೋಯಿತು. ದಿಢೀರ್ ಪ್ರವೇಶ, ದಿಢೀರ್ ನಿರ್ಗಮನ : ಕಣ್ತೆರೆಯುವಾಗ ಎಂಜಿಎಂ ಮೈಸೂರಿನ ಮಡಿಲಲ್ಲಿತ್ತು. ಒಳ್ಳೆಯದೇ ಆಯಿತು ಎಂದು ಈಗ ಹಿನ್ನೋಟದಿಂದ ಅನ್ನಬಹುದು – ಅಂಥ ಮಧುರ ಬಾಂಧವ್ಯವನ್ನು ಎರಡೂವರೆ ದಶಕಗಳ ಕಾಲ ಮೈಸೂರು ಕುದುರಿಸಿಕೊಟ್ಟಿತು. ಶೈಕ್ಷಣಿಕ ಬೆಳವಣಿಗೆಯ ಒಂದು ಘಟ್ಟದಲ್ಲಿ ಮೈಸೂರು ವಿ ವಿ ನಿಲಯ ಅನುಸರಿಸಿದ ವಸ್ತುನಿಷ್ಠ, ಆದರೂ ಸ್ನೇಹಪರ, ದಯಾಶೀಲ ಮತ್ತು ಮಾನವೀಯ ನೀತಿಗಳಿಂದಾಗಿ ಒಟ್ಟು ದಕ್ಷಿಣ ಕನ್ನಡದ ಶಿಕ್ಷಣ ವ್ಯವಸ್ಥೆಗೂ, ವಿಶೇಷತಃ ನಮ್ಮ ಕಾಲೇಜಿನ ಬೆಳವಣಿಗೆಗೂ ಅಪಾರ ಲಾಭವುಂಟಾಯಿತು. ಸ್ವಂತದ ಮಾತು ಹೇಳಬೇಕೆಂದರೆ ಪಂಡಿತ ಮಂಡಳಿಯ ಸಭೆಗಳ ಮರ್ಮವನ್ನರಿತು ಆಡಲೂ, ಅಕಾಡೆಮಿಕ್ ವಿಷಯಗಳಲ್ಲಿ ಆಸಕ್ತಿ ವಹಿಸಲೂ, ವಿ ವಿ ನಿಲಯದ ಆಗುಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸಲೂ ಮೈಸೂರು ನನಗೆ ವಿಪುಲ ಅವಕಾಶಗಳನ್ನೊದಗಿಸಿತು. ಅಲ್ಲಿನ ಕುಲಪತಿಗಳಾಗಿ ಬಂದ ಕುವೆಂಪು, ಶ್ರೀಮಾಲಿ, ಜವರೇಗೌಡ ಹಾಗೂ ಡಿ.ವಿ. ಅರಸು ಅವರ ಯುಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳು ಗೌರವಾನ್ವಿತ ಸ್ಥಾನ ಪಡೆದಿದ್ದವು. ಇದೇ ಸಂದರ್ಭದಲ್ಲಿ ಮಂಗಳೂರಿಗೆ ಒಂದು ಸ್ನಾತಕೋತ್ತರ ಕೇಂದ್ರವೂ ಹುಟ್ಟಿಕೊಂಡದ್ದು ಮಂಗಳೂರಿನ ವಿದ್ಯಾರ್ಥಿ ಪ್ರತಿಭೆಗೂ ಶಿಕ್ಷಣ ವ್ಯವಸ್ಥೆಗೂ ಸಂದ ಗೌರವ ಎಂದು ಹೇಳಬೇಕು.

1958ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಂಡಿತ ಮಂಡಳಿ – ಅಕಾಡೆಮಿಕ್ ಕೌನ್ಸಿಲ್ – ಇದರ ಸದಸ್ಯತ್ವದ ಮೂಲಕ ನಾನು ವಿ ವಿ ನಿಲಯದ ಆಡಳಿತದ ಅನುಭವ ಪಡೆಯಲು ಬಯಸಿದೆ. ಮೈಸೂರು ದೇಶೀ ಸಂಸ್ಥಾನವಾಗಿದ್ದ ವೇಳೆ ಜನಿಸಿದ ಮೈಸೂರು ವಿಶ್ವವಿದ್ಯಾನಿಲಯದ ರಚನೆ ತತ್ಕಾಲೀನ ವ್ಯವಸ್ಥೆಯಂತೆ ಘನ ಸರ್ಕಾರದ ಅಂಗ ಸಂಸ್ಥೆಯಂತೆ ಅಥವಾ ಇಲಾಖೆಯಂತೆ ನಡೆದುಕೊಂಡು ಬಂದಿತ್ತು. ಅದಕ್ಕೆ 1958ರ ಸುಮಾರಿಗೆ ಮೈಸೂರು ಸರ್ಕಾರ (ಆಗಿನ್ನೂ ಕರ್ನಾಟಕವೆಂಬ ನಾಮಕರಣ ಸರ್ಕಾರಕ್ಕೆರಲಿಲ್ಲ) ಹೊಸತಾದ ಅಂಗರಚನೆ ರೂಪಿಸಲು ಆದೇಶವಿತ್ತಂತೆ ನೂತನವಾಗಿ ವಿ ವಿ ನಿಲಯದ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಆದಿ ನೇಮಕಗೊಳ್ಳಬೇಕಾಗಿತ್ತು. ಸರ್ವ ಕಾಲೇಜುಗಳ ಅಧ್ಯಾಪಕರಿಗೆ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ 5 ಮಂದಿಗೆ ಪ್ರಾತಿನಿಧ್ಯ. ದಕ್ಷಿಣ ಕನ್ನಡ ಜಿಲ್ಲೆಯ ಅಲೋಶಿಯಸ್ ಕಾಲೇಜಿನ ಡಾ. ನಾರಾಯಣರಾಯರೂ, ನಾನೂ ಇದರಲ್ಲಿ ಎರಡು ಸೀಟಿಗೆ ನಮ್ಮ ಅಭ್ಯರ್ಥಿತನ ಸೂಚಿಸಿದೆವು. ಯಾವ ಧೈರ್ಯವೋ ಎಂದರೆ ಚುನಾವಣೆಯ ಪ್ರೊಪೋರ್‌ಶನಲ್ ರೆಪ್ರೆಸೆಂಟೇಶನ್ ದಾರಿಯಾಗಿ ನಡೆಯುವಂತಾದ್ದು; ಇದರಲ್ಲಿ ಮತಗಳನ್ನ ಒಂದನೇ ಎರಡನೇ ಮೂರನೇ ಎಂದು ಮತದಾರ ಬಂಧುಗಳು ಬರೆಯುವ ಪದ್ಧತಿಯಷ್ಟೇ. ಒಂದನೇ ಮತಗಳನ್ನು ಒಂದು ದಾಮಾಶಯದಲ್ಲಿ ಕಲೆ ಹಾಕುವುದು ಸಾಧ್ಯವಾದರೆ ಅಭ್ಯರ್ಥಿಗೆ ಯಶಸ್ಸು ಕಾದಿಟ್ಟದ್ದು. ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳು – ಆಗ ಇದ್ದುದು ಕೇವಲ ಆರೆಂಟು ಈಗಿನಂತೆ ಮೂವತ್ತೈಂಟಲ್ಲ – ಎಲ್ಲವೂ ನಮಗೆ ಪೂರ್ಣ ಬೆಂಬಲ ಕೊಟ್ಟವು. ಮಂಗಳೂರಿನ ಕಾಲೇಜುಗಳು ನಾರಾಯಣರಾಯರಿಗೆ ಮೊದಲ ಮತ ಕೊಟ್ಟರು, ಎರಡನೇ ಮತ ನನಗೆ ಹಾಕಿದರು; ಉಡುಪಿಯ ನಮ್ಮ ಕಾಲೇಜಿನಲ್ಲಿ ಮೊದಲ ಮತ ನನಗೆ, ಎರಡನೆಯದು ನಾರಾಯಣ ರಾಯರಿಗೆ. ಇಷ್ಟು ಖಾತರಿ ಮಾಡಿಕೊಂಡ ನಮಗೆ ಬೇರೆ ಎಂಟು ಜಿಲ್ಲೆಗಳಿಂದಲೂ ಸಾಕಷ್ಟು ಮತ ಬಿದ್ದು ಚುನಾಯಿತ ಐವರಲ್ಲಿ ಮತಗಣನೆಯ ವೇಳೆ ಡಾ. ನಾರಾಯಣ ರಾಯರು ಪ್ರಥಮ ಸ್ಥಾನದಲ್ಲಿಯೂ, ನಾನು ದ್ವಿತೀಯ ಸ್ಥಾನದಲ್ಲಿಯೂ ಇದ್ದೆವು. ಹೀಗಾಗಲು ಕಾರಣ : 1. ನಮಗೂ ಬೇರೆ ಜಿಲ್ಲೆಗಳಿಂದ ಮತಗಳು ದೊರೆತದ್ದು, 2. ಅಲ್ಲಿನ ಅಭ್ಯರ್ಥಿಗಳ ಮತಗಳು ನಮ್ಮಂತೆ ಸಾರಾಸಗಟು ಸಿಗದೇ ಹೋದದ್ದು, ಅವರವರೊಳಗೇ ಚದುರಿ ಹೋದ ಮತಗಳಿಂದಾಗಿ ಆ ಕಡೆಯವರು ಕೆಲವರು ಸೋತರು. ಗೆದ್ದವರು ನಮಗಿಂತ ಕಡಿಮೆ ಮತ ಪಡೆದು ಗೆದ್ದು ಬಂದರು. ಯಾವ ಮತದಾರನ ಮೇಲೂ ನಮ್ಮ ಪ್ರಭಾವ ಬೀರಲು ಮೊಕ್ತಾ ಭೇಟಿ ಸಾಧ್ಯವಿರಲಿಲ್ಲ; ನಮ್ಮದು ಬರಿದೆ ಪತ್ರಲೇಖನ, ಸುತ್ತೋಲೆ ಇಷ್ಟೇ; ಬಹಳ ಕಾಲದಿಂದ ಸಾಹಿತ್ಯ ಕ್ಷೇತ್ರದ ಸಮಾನ ವ್ಯಸನಿಗಳಾಗಿ ನಾನು ಆಗಲೇ ಅರಿತಿದ್ದ ಪ್ರೊ. ದೇಜಗೌ ಅವರಂಥ ಒಬ್ಬಿಬ್ಬರಿಗೆ ಬರೆದಿರಬಹುದು, ಕಂಡೂ ಇರಬಹುದೇ ವಿನಾ ಬೇರಾವ ಚುನಾವಣೆ ಪ್ರಚಾರವೂ ಅಗತ್ಯ ಬೀಳಲಿಲ್ಲ; ಪತ್ರಿಕಾ ಲೇಖನಗಳ ಮೂಲಕ ಹೆಸರು ತಿಳಿಸಿದ್ದರಿಂದ ಕರ್ನಾಟಕದ ಇತರ ಭಾಗಗಳ ಮತದಾರ ಪ್ರಾಧ್ಯಾಪಕರು ನನಗೆ ಆದ್ಯತೆ ಕೊಟ್ಟರೆಂದು ಊಹಿಸುತ್ತೇನೆ. ಅಥವಾ ತಮ್ಮಲ್ಲಿನ ಅಭ್ಯರ್ಥಿಯ ಮೇಲೆ ಯಾವ ಸಿಟ್ಟೋ? ಅಂತೂ ನಮ್ಮ ಅಳತೆಗಿಂತ ಎಷ್ಟೋ ಪಟ್ಟು ಮೀರಿ ಮತಗಳನ್ನ ಸಂಗ್ರಹಿಸಿ ಗೆದ್ದು ಬಂದೆ.

ರಾಷ್ಟ್ರಕವಿ ಕುವೆಂಪು ಕುಲಪತಿ ಕಾಲದ ಸದಸ್ಯರಲ್ಲಿ ಅನೇಕ ಹಳೆ ಹುಲಿಗಳಿದ್ದರು. ಘಟಾನುಘಟಿಗಳು, ಒಳ್ಳೆಯ ಮಾತುಗಾರರಿದ್ದರು. ಜೆ.ಬಿ. ಮಲ್ಲಾರಾಧ್ಯರು, ಎಂ.ಪಿ.ಎಲ್. ಶಾಸ್ತ್ರಿಗಳು, ಪ್ರತಿಭಾವಂತ ಪ್ರಾಧ್ಯಾಪಕರನೇಕರು ಪಂಡಿತ ಮಂಡಳಿಯ ಸಭೆಗೆ ಜೀವಕಳೆ ತುಂಬುತ್ತಿದ್ದರು. ಕನ್ನಡದಲ್ಲಿಯೂ ಚರ್ಚೆ ಮಸಗುತ್ತಿತ್ತು. ಇಂಗ್ಲಿಷ್ ವರ್ಜ್ಯವಾಗಿರಲಿಲ್ಲ. ಕುವೆಂಪು ಹಿತಮಿತವಾಗಿ ಮಾತ್ರ ವಿಷಯಕ್ಕೆ ಸಂಬಂಧಿಸಿ ಮಾತನಾಡುತ್ತಿದ್ದರು. ಚರ್ಚೆಯನ್ನ ಆಸಕ್ತಿಯಿಂದ ಆಲಿಸುವುದೇ ಅವರಿಗಿಷ್ಟ. ಅವರ ರಿಜಿಸ್ಟ್ರಾರ್ ಆಗಿ ಶ್ರೀ ಮಲ್ಲಿಕಾರ್ಜುನಪ್ಪನವರಿದ್ದರು.

ಕಾಲೇಜಿನ ಪ್ರಯೋಗಶಾಲೆಯಿಂದ ಆಗತಾನೇ ಬಿಡುಗಡೆ ಪಡೆದು ರಿಜಿಸ್ಟ್ರಾರ್ ಪದವಿಗೇರಿದ ತರುಣ ಮಲ್ಲಿಕಾರ್ಜುನಪ್ಪ ತನ್ನ ಕೆಲಸವನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಒಬ್ಬ ಅಧಿಕಾರಿಯಾಗಿ ರೂಪು ತಳೆದದ್ದನ್ನ ನಾನು ಕಂಡೆ. ಅಕಾಡೆಮಿಕ್ ಸಮಸ್ಯೆಗಳ ಸಿಕ್ಕುಗಳ ಬಗ್ಗೆ ಕುಲಪತಿ ಕುವೆಂಪು ಪರವಾಗಿ ರಿಜಿಸ್ಟ್ರಾರ್ ಅವರೇ ಸಕಲ ಹೇಳಿಕೆಗಳನ್ನು ಕೊಡಬಲ್ಲವರಾಗಿದ್ದರು. ನಮ್ಮ ಮೊದಲ ಸಭೆ ನಡೆದದ್ದು ಬೆಂಗಳೂರು ಸೆಂಟ್ರಲ್ ಕಾಲೇಜಿನ ಸೆನೆಟ್ ಹಾಲ್‌ನಲ್ಲಿ. ಒಂದು ಸಲ ಮೈಸೂರು, ಒಮ್ಮೆ ಬೆಂಗಳೂರಲ್ಲಿ ಸಭೆ ನಡೆಯುವುದು ಕೆಲ ವರ್ಷಗಳಿಂದ ನಡೆದು ಬಂದ ಸಂಪ್ರದಾಯ, ಮೆಲ್ಲಮೆಲ್ಲನೆ ಎಲ್ಲ ಸಭೆಗಳೂ ಮೈಸೂರಿನ ಕ್ರಾಫರ್ಡ್ ಹಾಲ್‌ನಲ್ಲೇ ನಡೆಯ ಬೇಕೆಂದು ನಿರ್ಣಯವಾಯಿತು. (ಮೊದಲ 3 ವರ್ಷ ಎರಡು ಕಡೆಗೂ ಸಭೆ ಸೇರುತ್ತಿತ್ತು) ಮಲ್ಲಾರಾಧ್ಯರ ನಿರರ್ಗಳ ವಾಗ್ಝರಿ ಇಂಗ್ಲಿಷ್‌ನಲ್ಲಿ ನಡೆದರೂ ಅಲ್ಲಲ್ಲಿ ಒಗ್ಗರಣೆಗಾಗಿ ಕನ್ನಡ ಸಾಲುಗಳು ಬರುತ್ತಿದ್ದವು ಅಥವಾ ಕುವೆಂಪು ಪ್ರೀತ್ಯರ್ಥ ಕನ್ನಡದಲ್ಲೇ ಒಂದಷ್ಟು ಮಾತನಾಡುತ್ತಿದ್ದರು. ಎಂ.ಪಿ.ಎಲ್. ಶಾಸ್ತ್ರಿಗಳು ಇಂಗ್ಲಿಷಿನಷ್ಟೇ ಪ್ರಭಾವಶಾಲಿ ಯಾಗಿ ಕನ್ನಡದಲ್ಲೂ ಆಡಬಲ್ಲವರು. ಇವರಿಂದಲೇ ನಾನು ಇಂಥ ಸಭೆಗಳಲ್ಲಿ ಮಾತನಾಡುವ ಕಲೆಯನ್ನು ಕಲಿತೆ ನೆಂದು ತೋರುತ್ತದೆ. ಏಕೆಂದರೆ ಕಾಲಾನಂತರ ಇವರುಗಳೆಲ್ಲ ಸಭೆಗೆ ಬಾರದಿದ್ದಾಗ ನಾನೇ ಆ ಸ್ಥಳದಲ್ಲಿದ್ದೆ.

1958ರಿಂದ 1978ರವರೆಗೂ ಅಂದರೆ ಸನ್ನ ನಿವೃತ್ತಿಯ ಒಂದು ವರ್ಷದ ಪೂರ್ವದವರೆಗೂ ನಾನು ಒಂದೋ ಅಕಾಡೆಮಿಕ್ ಕೌನ್ಸಿಲ್ ಅಥವಾ ಸೆನೆಟ್‌ಗೆ ಸದಸ್ಯತ್ವದ ಕಾಣಿಕೆ ತೆತ್ತೆ. ಇದರಿಂದ ಮೈಸೂರಿನಲ್ಲಿ ನನ ಗೊಂದು ಸ್ನೇಹಿತರ ಬಳಗವೇ ಪ್ರಾಪ್ತಿಯಾಯಿತು. ವಿ ವಿ ನಿಲಯದ ಕ್ರಿಯಾ ಕರ್ತವ್ಯಗಳ ಅರಿವಾಯಿತು. ಪ್ರಾತಿ ನಿಧಿಕ ಮಂಡಳಿಗಳು ನಿಜಕ್ಕೂ ಪ್ರವರ್ತಿಸುವ ವಿಧಾನಗಳೂ ಮರ್ಮಗಳೂ ಯಾವ್ಯಾವೆಂದು ಒಳಗಿಂದ ಅರಿತು ಕೊಳ್ಳುವ ಸಂದರ್ಭ ಒದಗಿತು. ಒಂದು ವಾರ್ಸಿಟಿಯ ಹಂದರ ಜೀವಂತವಾಗಿ ಸ್ಪಂದಿಸುವ ವಿಧಿವಿಧಾನಗಳ ಪರಿಚಯವಾಯಿತು. ಈ ಸ್ನೇಹ ಸಂಪತ್ತನ್ನೂ, ಜ್ಞಾನ ಸಂಪತ್ತನ್ನೂ ನಾನು ನನ್ನ ಕಾಲೇಜಿನ ಅಭಿವೃದ್ಧಿಯ ಸಲು ವಾಗಿ ಬಳಸಿಕೊಂಡೆನೆಂದು ಅನಿಸುತ್ತದೆ. ನಮ್ಮ ಒಂದು ಕಾಲೇಜಿಗೆ ಮಾತ್ರವೇ ಅಲ್ಲ ಮೈಸೂರಿನ ಪ್ರೇಮಸಂಬಂಧ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಕಾಲೇಜುಗಳ ಮೇಲೂ ಸಮಾನ ರೀತಿಯಲ್ಲಿ ಹರಿಯಿತು. ನಮ್ಮ ಕಾಲೇಜುಗಳ ಸೇರ್ಪಡೆಯ ಬಳಿಕವೇ ವಿ.ವಿ. ಆಡಳಿತ ಅಂಗಸಂಸ್ಥೆಗಳಾದ ಸ್ನಾತಕಪೂರ್ವ ಕಾಲೇಜುಗಳ ಬಗ್ಗೆ ಅಭಿಮಾನ ತಳೆಯಿತೆಂದು ಹೇಳಬಹುದು. ಹಳೇ ಮೈಸೂರು ರಾಜ್ಯದಲ್ಲಿ ಸರ್ಕಾರ ಸ್ಥಾಪಿಸಿದ ಕಾಲೇಜುಗಳೇ ಅಧಿಕ – ಕೆಲವೇ ಕೆಲವನ್ನ ಬಿಟ್ಟರೆ ಉಳಿದ ಖಾಸಗೀ ಕಾಲೇಜುಗಳ ಆಂತರಿಕ ಸ್ಥಿತಿ, ಕಟ್ಟಡ ಉಪಕರಣಗಳ ಸ್ಥಿತಿ ಯಾವುದೋ ನಿರೀಕ್ಷಿತ ಮಟ್ಟದಲ್ಲಿರುತ್ತಿರಲಿಲ್ಲ. ಸರ್ಕಾರ ನಡೆಸುತ್ತಿದ್ದ ಕಾಲೇಜುಗಳ ಸಂಬಳ ಸರಿಯಾಗಿ ಸಿಗುತ್ತಿದ್ದರೂ, ಶಿಕ್ಷಣ ವ್ಯವಸ್ಥೆ ಚೆನ್ನಾಗಿರುತ್ತಿರಲಿಲ್ಲ; ಖಾಸಗೀ ಕಾಲೇಜುಗಳಲ್ಲಿ ಪ್ರಾಧ್ಯಾಪಕರಿಗೆ ಸಲ್ಲಬೇಕಾದ ಪ್ರೊವಿಡೆಂಟ್ ಫಂಡ್ ಮಾಹೆಯಾನ ಸಂಬಳಗಳಿಗೇ ವಿಘ್ನಗಳು. ಅಷ್ಟಾಗಿಯೂ ಮಾನಸಿಕ ಪಳೆಯುಳಿಕೆಯಂತೆ ಸರ್ಕಾರಿ ಕಾಲೇಜು ಶ್ರೇಷ್ಠವೆಂಬ ಒಂದು ಸ್ವಾಭಿಮಾನ, ದರ್ಪ ತುಂಬಿಕೊಂಡಿತ್ತು. ಜತೆಗೆ ಗುಣಮಟ್ಟವಿರದ ಖಾಸಗೀ ಕಾಲೇಜುಗಳ ಬಗ್ಗೆ ಹೀನಾಯ ಭಾವನೆಯೂ ಇತ್ತು. ಇಂಥ ಸನ್ನಿವೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳು ಕಟ್ಟಡ, ಪ್ರಾಧ್ಯಾಪಕರು, ಸಂಘಟನೆ ಎಲ್ಲದರಲ್ಲೂ ಅಚ್ಚುಕಟ್ಟುತನವನ್ನು ಪಾಲಿಸಿಕೊಂಡು ಬರುತ್ತಿದ್ದ ಆದರ್ಶ ಮಾರ್ಗವನ್ನ ಕಂಡು ಮೆಲ್ಲಮೆಲ್ಲನೆ ಮೈಸೂರಿನ ಜಾಣರ ಮನಸ್ಸು ಪರಿವರ್ತನೆಗೊಂಡಿತು. ಖಾಸಗೀ ಕಾಲೇಜುಗಳು ಎಂದರೆ ಹೇಗಿರ ಬೇಕೆಂದು ನೋಡಿಕೊಂಡು ಬನ್ನಿ, ಉಡುಪಿಗೆ ಹೋಗಿ, ಮಂಗಳೂರಿಗೆ ಹೋಗಿ, ಮಣಿಪಾಲಕ್ಕೆ ಹೋಗಿ ಎಂದು ವಿಶ್ವವಿದ್ಯಾನಿಲಯ ಮೈಸೂರಿನ ಇತರ ಜಿಲ್ಲೆಗಳ ಕಾಲೇಜಿಗೆ ಸ್ನೇಹ ಸಲಹೆ ಕೊಡುವಷ್ಟು ದೂರ ನಮ್ಮ ಸ್ಥಿತಿಯ ಅರಿವು ಅವರಿಗೆ ಮೂಡಿತು. ತಿಪಟೂರಿನ (ಈಗ ಪ್ರಸಿದ್ಧವಾಗಿರುವ) ಕಲ್ಪತರು ಕಾಲೇಜಿನ ಆಡಳಿತ ಮಂಡಳಿ ಯವರು ಎಂಜಿಎಂ ಕಾಲೇಜಿಗೆ ಭೇಟಿ ಕೊಟ್ಟದ್ದು ನೆನಪಾಗುತ್ತದೆ.

ಡಿಗ್ರಿ ಸನದನ್ನು ಪಡೆಯಲು ವಾರ್ಸಿಟಿ ಕೇಂದ್ರಕ್ಕೆ ಹೋಗುವುದು ನಾವು ಮದ್ರಾಸಿನಲ್ಲಿದ್ದಾಗ ಅಪರೂಪದ ವಿಷಯವಷ್ಟೆ; ಡಿಗ್ರಿ ದೊರೆತ ಕೂಡಲೇ ಕೆಲಸಕ್ಕಾಗಿ ಎಲ್ಲೆಲ್ಲೋ ಇರುತ್ತೇವೆ; ಅಲ್ಲದೇ ಅಂಚೆ ನೆರವಿನಿಂದ ಅಗ್ಗಕ್ಕೆ ಬರುವ ಡಿಗ್ರಿಗಾಗಿ ಮದರಾಸಿನವರೆಗೆ ಯಾರು ಪಯಣಿಸಿಯಾರು? ಮೈಸೂರಲ್ಲಿ ಮಾತ್ರ ಘಟಿಕೋತ್ಸವ ಒಂದು ಊರಿನ ತೇರಿನಷ್ಟೇ ಸಂಭ್ರಮದಿಂದ ಆಚರಿಸಲ್ಪಡುತ್ತದೆಂದು ನನಗೆ ತಿಳಿದದ್ದು ಮೈಸೂರಿನಲ್ಲಿ ನಾನು ಕಂಡಂಥ ಪ್ರಥಮ ಘಟಿಕೋತ್ಸವದಲ್ಲಿ-ಕ್ಯಾಂಪಸ್ಸೆಲ್ಲ ಜರಿಸೀರೆ, ಜರಿ ಮುಂಡಾಸಗಳ ಮೆರವಣಿಗೆ. ನೂತನ ಸ್ನಾತಕರ ಉಲ್ಲಸಿತ ವದನಾರವಿಂದ. ಡಿಗ್ರಿ ಪಡೆಯುವ ಅಭ್ಯರ್ಥಿಯ ಜತೆಗೆ ಅವನ ತಂದೆತಾಯಿ ಬಂಧುಬಳಗ. ಒಟ್ಟು ಹಬ್ಬದ ವಾತಾವರಣ. ಆಧುನಿಕ ಶಿಕ್ಷಣದ ಜತೆಗೆ ಒಂದಿಷ್ಟು ಸ್ಥಾನೀಯ ಪರಂಪರಾಗತ ಸಂಸ್ಕೃತಿಯ ಸ್ವಾರಸ್ಯಕರ ಬೆರಕೆ, ಆತ್ಮೀಯತೆ, ಮಾನವೀಯತೆ.

ಆತ್ಮೀಯತೆ, ಮಾನವೀಯತೆಗಳೇ ಮೈಸೂರಿನ ಪ್ರಧಾನ ಗುಣಗಳೆಂದು ನನಗನಿಸಲು ಬಹುಶಃ ಮದರಾಸು ನಾರೀಕೇಳಪಾಕವಾಗಿದ್ದುದು ಕಾರಣವೋ ? ಅಲ್ಲ ಮೈಸೂರು ವಿಶ್ವವಿದ್ಯಾನಿಲಯ ಜನ್ಮಾರಭ್ಯ ನಡೆದುಕೊಂಡು ಬಂದ ರೀತಿಯಲ್ಲಿಯೇ ಈ ಮಾರ್ದವತೆ ಇತ್ತೇ? ವಿ.ವಿ. ನಿಲಯದ ಹೃದಯದಂತಿದ್ದ ಮಹಾರಾಜಾ ಕಾಲೇಜು

ಮತ್ತು ಯುವರಾಜಾ ಕಾಲೇಜುಗಳ ಪೂರ್ವೇತಿಹಾಸದ ಅನುಭವ ಕಥನವನ್ನು ಎ.ಎನ್. ಮೂರ್ತಿರಾವ್ ಮತ್ತು ವಿ.ಸೀ. ಅಂಥವರು ಮಾಡಿದ್ದನ್ನು ಓದಿದ ಯಾವನಿಗೂ ಇಲ್ಲಿನ ಪ್ರಾಧ್ಯಾಪಕರು ಇಲ್ಲಿಗೆ ಬಂದ ರೋಲೋ, ವಾಡಿಯಾ ಮುಂತಾದ ಮಹಾನ್ ಪ್ರಾಧ್ಯಾಪಕರ ನೆರಳಲ್ಲಿ ಯಾವುದೋ ಮೌಲ್ಯಕ್ಕೆ ತಮ್ಮನ್ನು ತೆರೆದಿಟ್ಟು ಕೊಂಡಂತೆ ಅನಿಸೀತು. ಬುದ್ಧಿಯ ಕೆಲಸವನ್ನು ಸಹೃದಯತೆಯಿಂದ ನಿಭಾಯಿಸುವುದರಲ್ಲಿ ಖ್ಯಾತನಾಮರಾದ ವಿದ್ವಾಂಸರನ್ನು ನೆನೆದಲ್ಲಿ ಅವರ ಮೂಲಕ ವಿ ವಿ ನಿಲಯದ ಮೂಲಸ್ಫೂರ್ತಿ ಎಷ್ಟೋ ಕಾಲ ಹರಿದು ಬಂದುದು ಗೋಚರವಾದೀತು. ಅವರಿಲ್ಲದಾಗ ಅವರ ಶಿಷ್ಯರ ಮೂಲಕ ಆಮೇಲೆ ಹೇಳಿಕೆ ಕೇಳಿಕೆಗಳ ಮೂಲಕ ಉಳಿಯಿತೆಂದು ತೋರುತ್ತದೆ. ಇಂಥ ಮೌಲ್ಯ ಸ್ಥಾಪನೆ ಆಧುನಿಕತೆಯ ಗೀಳು ಹಿಡಿದ ಈ ದುಷ್ಕಾಲದಲ್ಲಿ ಅಸಾಧ್ಯವಾದ್ದರಿಂದ, ಹಿಂದಿನದರ ನೆನಪನ್ನಾದರೂ ಇಟ್ಟಿರುವುದು ಲೇಸಲ್ಲವೇ? ಮೈಸೂರು ವಿ ವಿ ನಿಲಯದ ಪೂರ್ವೇತಿಹಾಸದಲ್ಲಿ ಇಂಥ ಸುವರ್ಣ ಪುಟಗಳು ಅನೇಕ ಇರುತ್ತವೆ. ಆ ಯುಗದ ಹೊಂಬೆಳಕಿನ ಛಾಯೆ 1958–78ರ ಸಂದಿನಲ್ಲಿಯೂ ಆಗೊಮ್ಮೆ ಈಗೊಮ್ಮೆ ಮಿಂಚುತ್ತಿರುವುದನ್ನು ಪರಂಪರೆಯನ್ನು ಬಲ್ಲ ವ್ಯಕ್ತಿಗಳ ಮೂಲಕ ಅರಿಸಿ, ಅನುಭವಿಸಿ ಬಲ್ಲೆ.

ಐದು ಮಂದಿಗೆ ಮಾತ್ರ ಸೀಮಿತವಾಗಿರುತ್ತಿದ್ದ ಸದಸ್ಯತ್ವವನ್ನ ಸರ್ವಕಾಲೇಜುಗಳ ಪ್ರಿನ್ಸಿಪಾಲರಿಗೂ ಪದನಿಮಿತ್ತ ತೆರೆದಿಡುವ ಕಾಲ ಮುಂದಿನ ನಾಲ್ಕಾರು ವರ್ಷಗಳಲ್ಲಿ ಒದಗಿದಾಗ ಮಣಿಪಾಲದ ಅಕಾಡೆಮಿ ಕಾಲೇಜುಗಳ ಎಲ್ಲ ಪ್ರಿನ್ಸಿಪಾಲರೂ ಗುಂಪಾಗಿ ಕಾರು ಮಾಡಿಕೊಂಡು ಮೈಸೂರಿನ ಸಭೆಗಳಿಗೆ ಹೋಗುವುದು ರೂಢಿಯಾಯಿತು. ಅಷ್ಟು ಹೊತ್ತಿಗೆ ವಿಧಾನ ಪರಿಷತ್ತಿನಿಂದ ನೇಮಕಗೊಂಡ ಮಂಗಳೂರಿನ ಶ್ರೀ ಕೆ. ಸೂರ್ಯ ನಾರಾಯಣ ಅಡಿಗರೂ ವಿಶ್ವವಿದ್ಯಾನಿಲಯಕ್ಕೆ ಸೇರಿದರು. ನೇರ ನಡೆನುಡಿಗೆ ಹೆಸರಾಂತ ಅಡಿಗರು ವಿಶ್ವವಿದ್ಯಾ ನಿಲಯದ ಆಡಳಿತದಲ್ಲಿ ಒಂದು ಮುಖ್ಯಸ್ಥಾನ ನಿರ್ವಹಿಸಿದರು. ಎಂಥ ಗಂಭೀರ ವಿಷಯವನ್ನಾದರೂ ಕೊನೆಗೆ ನಗುವಿನಲ್ಲಿ ತೇಲಿಸಿ ರುಚಿಸಲು ಬೇಕಾದ ಜಾಣ್ಮೆ, ಚಾಕಚಕ್ಯತೆ ಪಡೆದಿದ್ದ ಅಡಿಗರ ಸಹವಾಸ, ಸ್ನೇಹ ಎಲ್ಲರಿಗೂ ಬೇಕಾಗಿತ್ತು. ಯಾರೂ ಅವರಿಗೆ ಸಣ್ಣವರಲ್ಲ, ಯಾರ ಸಮಸ್ಯೆಯೂ ಸಣ್ಣದಲ್ಲ, ಅವರ ಮಾತಿನ ಕೃತಿಯ ಸಹಾಯ ಸರ್ವರಿಗೂ ಸಮ ಲಭ್ಯ; ಕುಲಪತಿಗೂ ಆಫೀಸು ಪೇದೆಗೂ ಎಂಬಂಥ ಸಮಚಿತ್ತವುಳ್ಳವರು ಅವರು. ವೃತ್ತಿಯಲ್ಲಿ ವಕೀಲರಾದ ಅಡಿಗರು ತಮ್ಮ ವಾದವನ್ನು ಸೆನೆಟ್ ಸಭೆಯಲ್ಲಿ ಮಂಡಿಸುತ್ತಿದ್ದ ರೀತಿ, ಅದಕ್ಕಾಗಿ ಅವರು ಆಯ್ದು ಕೊಳ್ಳುತ್ತಿದ್ದ ವ್ಯೂಹರಚನೆ (ಸ್ಟ್ರೇಟಜಿ) ಇದನ್ನು ಕಂಡ ಯಾರೂ ಅಚ್ಚರಿಪಡಬೇಕು. ವಿಷಯ ಮಂಡನೆಯ ವೈಖರಿ ಮಾತಿನ ಓಘ, ನಡುನಡುವೆ ಹಾಸ್ಯದ ಹೊನಲು ಇವನ್ನೆಲ್ಲ ಕೇಳಲು ಸಭಾಸದರು ಕಿವಿನಿಗುರಿಸಿ ಕೂತಿರುತ್ತಿದ್ದರೂ ಇಷ್ಟಾಗಿ ಅವರೇನೂ ಬರೇ ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳ ವಕಾಲತ್ತಿಗಾಗಿ ಮೀಸಲಾದವರಲ್ಲ, ಎಲ್ಲವರಿಗೂ ಬೇಕಾದವರಾಗಿ 9 ವರ್ಷಗಳ ಕಾಲ ತಮ್ಮ ಸದಸ್ಯತ್ವವನ್ನು ಸಮರ್ಥವಾಗಿ ನಿರ್ವಹಿಸಿದರು.

ಮೈಸೂರಿನ ಮಾಡರ್ನ್ ಹಿಂದು ಹೋಟೆಲಿನಲ್ಲಿಯೇ ಅವರ ವಾಸ. ನಮ್ಮದೂ ಅದೇ ಹೋಟಲು, ನಟ್ಟಿರುಳವರೆಗೆ ಲೋಕಾಭಿರಾಮವಾಗಿ ಹರಟೆ ಹೊಡೆಯುತ್ತ ಮರುದಿನದ ಸಭೆಯ ಸುತ್ತ ಜಾಲಾಡಿಸುವುದು ನಮ್ಮ ನಿತ್ಯ ಕರ್ಮವೇ ಆಗಿತ್ತು. ಮಾಡರ್ನ್ ಹಿಂದು ಹೋಟೆಲ್‌ಗೂ ವಿಶ್ವವಿದ್ಯಾನಿಲಯುಕ್ಕೂ ಒಂದು ರೀತಿಯ ಅವಿನಾ ಸಂಬಂಧವೇ ಏರ್ಪಟ್ಟಿದ್ದು ವಿ ವಿ ನಿಲಯದ ಇತಿಹಾಸಕ್ಕೆ ಸಂದ ವಿಷಯ. ಪರೀಕ್ಷೆಗಳ ಸಭೆಗಾಗಿ ಬೆಂಗಳೂರಿ ನಿಂದ ಬರುವ ಪ್ರಾಧ್ಯಾಪಕರೂ, ವಿ ವಿ ನಿಲಯದ ಸಭೆಗಳಿಗಾಗಿ ಬರುವ ಸದಸ್ಯರೂ ಇದನ್ನೇ ತಮ್ಮ ಮಾವನ ಮನೆಯೆಂದು ಭಾವಿಸಿಕೊಂಡಿದ್ದರು. ಅಲ್ಲಿನ ವ್ಯವಸ್ಥಾಪಕರಾದ ಶ್ರೀ ತಂತ್ರಿಗಳೂ ಆಡಳಿತ ನಿರ್ವಹಿಸುತ್ತಿದ್ದ ಸಿಬ್ಬಂದಿಯ ಸರ್ವಶ್ರೀ ಗಿರಿಯವರು, ಶ್ರೀನಿವಾಸರಾಯರು, ನಂಬೂದರಿ ಮುಂತಾದವರು ನಿಜಕ್ಕೂ ಈ ಹೋಟೆಲನ್ನು 'ದೂರದಲ್ಲಿರುವ ಮನೆ' ಹೋಮ್ ಎವೆ ಫ್ರಾಮ್ ಹೋಮ್ ಎಂಬ ಬಿರುದಿಗೆ ಸರಿಯಾಗಿ ನಡೆಸುತ್ತಿದ್ದರು. ಮಂಗಳೂರಿನ ರಾತ್ರಿ ಬಸ್ಸು ಮೈಸೂರು ತಲುಪುವುದು ಮುಂಜಾನೆ 5 ಗಂಟೆಗೆ – ಆಗ ಅಲ್ಲೇ ಆಫೀಸಿನ ಹೊರಗಡೆಯೇ ನಿದ್ರಿಸುತ್ತಿದ್ದ ವಯೋವೃದ್ಧ ಕೃಷ್ಣರಾಯರು ಬೇಹಾಲಸ್ಯ ಗಮನಿಸದೆ ನಮಗೆ ಉಪ್ಪರಿಗೆಯ ಕೊಠಡಿ ಕೊಡುತ್ತಿರುವ ನೆನಪು ಇನ್ನು ಮಸುಕಾಗಿಲ್ಲ. ವಿಶ್ವವಿದ್ಯಾನಿಲಯ ಕೊಡುತ್ತಿದ್ದ ದಿನ ಭತ್ತೆಗೆ ಸರಿಯಾಗಿ ಹೋಟೆಲ್ ವಸತಿ – ಊಟಗಳ ದರ ಇತ್ತು; ಆಧುನಿಕ ಹೋಟೆಲಿನ ಸೌಕರ್ಯಗಳು ಯಾವುವು ಅಲ್ಲಿಲ್ಲದೆ ಹೋದರೂ ಗ್ರಾಮಾಂತರದಿಂದ ಹೋದ ನಮಗೆ ಹಿತವಾಗಿರುತ್ತಿತ್ತು. ಹಂಡೆಯಲ್ಲಿ ಕುದಿಯುವ ನೀರು, ಮರದ ಟಬ್, ಎಲೆಯ ಮೇಲೆ ಬಡಿಸುವ ಹನ್ನೆರಡಾಣೆ – ಒಂದು ರೂಪಾಯಿ ಊಟದ ಸವಿಯನ್ನು ನಾವು ಮರೆತಿಲ್ಲ. ಊಟಕ್ಕಿಂತ ಹೆಚ್ಚು ಉಪಚಾರ: ಮಾವಿನ ಹಣ್ಣಿನ ಋತುವಿನಲ್ಲಿ ಸ್ವತಃ ತಂತ್ರಿಯವರೇ ಊಟದ ಮನೆಗೆ ಬಂದು ಸ್ಪೆಶಲ್ಲಾಗಿ ಒಂದೊಂದು ಮಾವಿನ ಹಣ್ಣನ್ನು ಅವರ ಲೆಕ್ಕದಲ್ಲಿ ಬಡಿಸಬೇಕು ಎಂದರೆ ಅವರಿಗೆ ತೃಪ್ತಿ. ಮಂತ್ರಿಗಳು, ಮಂತ್ರಿಗಳಾಗಿ ಹೋಗಿ ಉರುಳಿ ಹೋದವರು, ವಿಧಾನ ಸಭಾಸದಸ್ಯರು, ಸೆನೆಟ್ ಸದಸ್ಯರು ಎಲ್ಲರಿಗೂ ಮೋಡರ್ನ್ ಆಶ್ರಯತಾಣವಾಗಿತ್ತು. ಮಾನ್ಯ ಸಿದ್ಧವೀರಪ್ಪ, ದೇವರಾಜ ಅರಸು ಅವರ ಮಟ್ಟದ ಎಲ್ಲರೂ ಅಲ್ಲಿ ಬರುತ್ತಿದ್ದರು, ಇರುತ್ತಿದ್ದರು. ಆತ್ಮೀಯತೆಯಿಂದ ತುಂಬಿದ್ದ ಈಗ ಎರಡೋ ಮೂರೋ ಸ್ಟಾರ್

ಹಂತದ ಈ ಹೊಟೇಲು ಹೋಟೆಲಾಗಿ ಪರಿವರ್ತನೆಗೊಂಡಿದೆ. ಕಟ್ಟಡ ಅದೇ ಸ್ಥಳದಲ್ಲಿದೆ – ಆದರೆ ಆತ್ಮ ಹೊರಟು ಹೋಗಿದೆ.

ಅಡಿಗರು ಸಿಂಡಿಕೇಟ್ ಸದಸ್ಯರಾದ್ದರಿಂದ ಅವರನ್ನು ನೋಡಲು ತಂತಮ್ಮ ದೂರುಪಟ್ಟಿ ಹಿಡಿದುಕೊಂಡು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ, ಸಿಬ್ಬಂದಿ ವರ್ಗದವರೂ ತಪ್ಪದೆ ಹಾಜರು. ಎಲ್ಲರನ್ನೂ ಒಮ್ಮೆ ತಮಾಷೆಗಾಗಿ ಕುಟುಕಿ ಆ ಮೇಲೆ ಅವರು ಹೇಳಿದಂತೆ ಶಿಫಾರಸು ಮಾಡಿ ಕೆಲಸವನ್ನು ಆಗ ಮಾಡಿಸುವ ಜಾಣ್ಮೆ ಅಡಿಗರ ವೈಶಿಷ್ಟ್ಯ ತಾನೇ, ಸಭೆಗೆ ಬರುವಾಗ ಏಜೆಂಡಾವನ್ನು ಪೂರ್ತಿ ಓದಿ ಟಿಪ್ಪಣಿಗಳನ್ನು ಬರೆದುಕೊಂಡು ಬರುತ್ತಿದ್ದವರು ಅಡಿಗರು ಮಾತ್ರವೋ ಏನೋ ಎಂದು ನನಗನ್ನಿಸುತ್ತಿತ್ತು. ಮೊದಲು ಎಲ್ಲರ ಮಾತುಗಳನ್ನು ತದೇಕಚಿತ್ತದಿಂದ ಆಲಿಸುತ್ತಿದ್ದ ಅಡಿಗರಿಗೆ ಯಾವ ವಿಷಯವೂ ಮರೆಯದು. ಆಯಕಟ್ಟಿನ ಒಂದು ಮುಹೂರ್ತದಲ್ಲಿ ಎದ್ದು ನಿಂತು ಸುತ್ತು ಬಳಸಿ ವಾದಮಾಡಿ ದಾರಿಗುಂಟ ಪ್ರತಿಯೊಬ್ಬ ಪೂರ್ವಭಾಷಿಕನ ವಾದವನ್ನೂ ಹರಿದು ಬಿಸಾಟು ಕೊನೆಗೆ ಮುಖ್ಯ ವಿಷಯಕ್ಕೆ ಬರುವ ಅವರ ವಾದ ಪ್ರತಿಭೆ ಅಸಮಾನ್ಯವಾದದ್ದೇ ಸರಿ. ಯಾವ ಸಣ್ಣ ಠರಾವಾದರೂ ಸರಿಯೇ ಅಡಿಗರು ಮಾತನಾಡಿದ ಮೇಲೆ ಅವರ ಮಾತಿನಂತೆಯೇ ನಿರ್ಣಯ.

ಕೆಲವೊಂದು ಕ್ಷುಲ್ಲಕ ಕಾರಣಗಳಿಗಾಗಿ, ವಾರ್ಸಿಟಿಯ ಕ್ಷುದ್ರ ರಾಜಕೀಯದ ಸುಂಟರಗಾಳಿಗೆ ಸಿಲುಕಿ ಡಾ. ಶ್ರೀಮಾಲಿಯವರೂ, ಪ್ರೊ. ದೇಜಗೌ ಅವರೂ ಒದ್ದಾಡುತ್ತಿದ್ದಾಗ ಅವರ ಕೀರ್ತಿಯನ್ನು ಕೇವಲ ತನ್ನ ವಾದವೈಖರಿಯಿಂದ ಸದೆಬಡಿದು ಉಳಿಸಿಕೊಟ್ಟವರು ಸೂರ್ಯನಾರಾಯಣ ಅಡಿಗರು. ಕುಲಪತಿ ಶ್ರೀಮಾಲಿಯ ಮೇಲೆ ಏನೇನೋ ತರಲೆ ಹಚ್ಚಿ ಒಂದು ಅವಿಶ್ವಾಸ ಠರಾವನ್ನು ಮಂಡಿಸಲಾಯಿತು. ಡಾ. ಶ್ರೀಮಾಲಿಯವರು ಸ್ವತಃ ನಿರ್ವಿಕಲ್ಪ ಸಮಾಧಿಯಲ್ಲಿರುವಂತೆ ತನ್ನ ಮೇಲಿನ ಅಪವಾದಗಳನ್ನು ಕಿವಿಮುಚ್ಚಿ ಆಲಿಸುತ್ತಲೇ ಇದ್ದರು. ಅಪವಾದಗಳ ತೂರಾಟ ಮುಗಿದ ಮೇಲೆ ಅಡಿಗರು ತಮ್ಮ ಅರ್ಥತಾಸಿನ ಮಂಡನೆಯಲ್ಲೇ ಆರೋಪಗಳನ್ನು ಬೇರು ಸಹಿತ ಕಿತ್ತು ಶ್ರೀಮಾಲಿಗೆ ರಕ್ಷಣೆ ಒದಗಿಸಿದರು. ದೇಜಗೌ ಅವರ 6 ವರ್ಷಗಳ ಅಧಿಕಾರಾವಧಿಯಲ್ಲೂ ಇಂಥದೇ ಒಂದು ಪ್ರಹಸನ ನಡೆಯಿತು. ಕುಲಪತಿಗಳು ಉಪಕರಣ ರಿಪೇರಿಗೆ ಒಂದು ವರ್ಕ್‌ಶಾಪ್ ಮಾಡಿ ಕೊಟ್ಟಿಲ್ಲ, ಇಲಾಖೆಗಳೊಳಗೆ ಪಕ್ಷಪಾತ ನೋಡುತ್ತಾರೆ. ಇತ್ಯಾದಿ ಚಿಲ್ಲರೆ ಸಂಗತಿಗಳು. ಇಲ್ಲೂ ಅಡಿಗರ ಮಾತಿನ ಬಳಿಕ ಯಾವ ಆರೋಪಕ್ಕೂ ಅರ್ಥವಿರಲಿಲ್ಲ. ಮಂಡಿಸಿದವರು ಮೋರೆ ಕೆಳಗಿಟ್ಟರು.

ಡಾ. ಶ್ರೀಮಾಲಿಯವರನ್ನು ಮೈಸೂರಿನ ಕುಲಪತಿಯಾಗಿ ಆಹ್ವಾನಿಸಿ ಕರ್ನಾಟಕ ಸರ್ಕಾರ ಒಳ್ಳೆಯ ಕೆಲಸ ಮಾಡಿತು. ಸ್ಥಾನೀಯ ರಾಜಕೀಯಕ್ಕೆ ಸಡ್ಡು ಹೊಡೆಯದೆ ದೂರದಿಂದ ಹಿಂದಿನ ಶಿಕ್ಷಣ ಸಚಿವರೊಬ್ಬರನ್ನು ಆಹ್ವಾನಿಸಿದ್ದರಿಂದ ವಿ ವಿ ನಿಲಯಕ್ಕೆ ಆಧುನಿಕ ಕಾಲದಲ್ಲೇ ಒಂದು ತೂಕವೂ ಒದಗಿತು. ಅಲ್ಲದೆ ದಿಲ್ಲಿಯಿಂದ ಅನುದಾನಗಳು ನಿರ್ವಿಘ್ನವಾಗಿ ಪ್ರವಹಿಸುವಂತೆಯೂ ಆಯಿತು. ಮಾನಸಗಂಗೋತ್ರಿಯ ಕ್ಯಾಂಪಸ್‌ನ ಮುಖ್ಯ ಕಟ್ಟಡಗಳೆಲ್ಲ ಶ್ರೀಮಾಲಿಯ ಪ್ರಭಾವದಿಂದ ರಚಿತವಾದುವು; ಅದಕ್ಕೊಂದು ವಿಶಾಲ ವಿ ವಿ ನಿಲಯದ ರೂಪ ಬಂದದ್ದು ಕುಕ್ಕನಹಳ್ಳಿ ಕೆರೆಯ ಆ ದಡದಿಂದ ಈ ದಡಕ್ಕೆ ಅದು ಲಂಘಿಸಿದ ಮೇಲೆಯೆ. ಎಣಿಸಿದರೆ ಈಗ ಯಾರಿಗೂ ನಗುಬರಬೇಕು – ಕುಕ್ಕನಹಳ್ಳಿ ಕೆರೆಯ ಗಡಿ ದಾಟಿ ಬರಲು ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರು ಸಿದ್ಧರಿರಲಿಲ್ಲ ಎಂಬುದನ್ನು ನೆನಸಿಕೊಂಡರೆ. ತಾವು ಇದ್ದಲ್ಲೇ ಇರುತ್ತೇವೆಂದು ಚಂಡಿ ಹಿಡಿದ ಪ್ರಾಧ್ಯಾಪಕರಿದ್ದರು. ಹೊಸ ಕ್ಯಾಂಪಸಿನ ದೋಷಗಳನ್ನು ಮಾತ್ರ ಗಣಿಸಿ, ಗುಣಿಸಿ ಹೇಳುತ್ತಿದ್ದವರೇ ಹಲವರು. ಕನ್ನಡ ಪ್ರಾಧ್ಯಾಪಕರಾದ ಜವರೇಗೌಡರು ಸಂಸ್ಕೃತ ಮತ್ತು ಇನ್ನಾವುದೋ ಇಲಾಖೆಯನ್ನ ಹುರಿದುಂಬಿಸಿ ತಮ್ಮ ಜತೆಗೆ ಹೊಸ ಕ್ಯಾಂಪಸಿಗೆ ಕರೆದುಕೊಂಡು ಬಂದರು. ಆಗ ಅಲ್ಲಿದ್ದ ಕಟ್ಟಡ ಒಂದು ಹಳೇ ಅರಮನೆ – ಅದರಲ್ಲಿ ಬಿಡಾರ ಮಾಡಿದ್ದ ಕೋತಿ ಹಾವುಗಳನ್ನೋಡಿಸುವುದೇ ಒಂದು ಮುಖ್ಯ ಕೆಲಸ. ಹರಿವ ಹಾವಿಗಂಜಿಯೋ ಅಲ್ಲ, ಭವಿಷ್ಯದ ಭವ್ಯತೆಯ ಕಾಂಕ್ಷೆ ಇಲ್ಲದ್ದರಿಂದಲೋ ಪದಪ್ರತಿಷ್ಠ ಪ್ರಾಧ್ಯಾಪಕರು ಮೊದಮೊದಲು ಹಳೆ ಜಾಗಬಿಡಲು ಹಿಂದೇಟು ಹೊಡೆದರು. ಕೊನೆಗೆ ಅಂತೂ ದಾರಿಗೆ ಬಂದರು ಅನ್ನಿ.

'ಲೋಕ ಗುರುಗಳೆಲ್ಲಾ ಬನ್ನಿ' ಎಂದು ಆಹ್ವಾನವಿತ್ತ ಮಹಾಕವಿ ಒಬ್ಬ ಕುಲಪತಿಯಾಗಿದ್ದಂಥ ವಿ ವಿ ನಿಲಯದಲ್ಲಿ ಡಾ. ಶ್ರೀಮಾಲಿ ಮತ್ತು ದೇಜಗೌ ಅನೇಕ ಸಾಧನೆಗಳನ್ನು ಮಾಡಿದ್ದು ಸ್ವಾಭಾವಿಕವೆಂದೇ ಅನಿಸಬೇಕು. ತಮ್ಮ ವಿ ವಿ ನಿಲಯಕ್ಕೆ ಸೇರಿದ ಸ್ಥಳದಲ್ಲಿ ಸ್ವಲ್ಪ ಭಾಗವನ್ನು ಕೇಂದ್ರೀಯ ಭಾಷಾ ಸಂಸ್ಥಾನಕ್ಕೆ ಒಪ್ಪಿಸಿದ್ದು, ಹಾಗೆಯೇ ಎಪಿಗ್ರಾಫಿ ಇಲಾಖೆಗೆ ಸ್ವಲ್ಪಾಂಶ ಒಪ್ಪಿಸಿದ್ದು ಸಾಮಾನ್ಯವಾಗಿ ವಿ ವಿ ನಿಲಯಗಳಲ್ಲಿ ನಡೆಯುವ ಸಂಗತಿಗಳಲ್ಲ, ಆದರೆ ಅಧ್ಯಯನದ ಸೌಕರ್ಯವನ್ನು ವಿಶಾಲವಾಗಿ ಯೋಜಿಸುವ ಈ ಇಬ್ಬರೂ ಇಂಥ ಹೊಸತನವನ್ನು ಪುರಸ್ಕರಿಸಿದರು. ಈಗ ಗಂಗೋತ್ರಿ ಕ್ಯಾಂಪಸಿನಲ್ಲಿ ವಿಶ್ವವಿಖ್ಯಾತ ಭಾಷಾ ಸಂಸ್ಥಾನ ಕಾರ್ಯನಿರ್ವಹಿಸುತ್ತದೆ. ಹಾಗೆಯೇ ಕೇಂದ್ರೀಯ ಎಪಿಗ್ರಾಫಿಯವರೂ ತಮ್ಮ ಕಟ್ಟಡ ಕಟ್ಟಲು ಮುಂದಾಗಿದ್ದಾರೆ.

ಮೈಸೂರಿನ ಗ್ರಂಥಾಲಯವನ್ನು ಅಲ್ಲಿನ ಕ್ಯಾಂಪಸಿನ ಕಣ್ಮಣಿಯಾಗಿ ಸೇರ್ಪುಗೊಳಿಸಿ ನಿಲ್ಲಿಸಿದ ಕರ್ನಾಟಕದ ಅಗ್ರಮಾನ್ಯ ಗ್ರಂಥಪಾಲ ಕೆ. ಎಸ್. ದೇಶಪಾಂಡೆಯವರ ಸೇವೆಯನ್ನು ಇಲ್ಲಿ ಸ್ಮರಿಸಬೇಕು. ಗ್ರಂಥಾಲಯ

ವನ್ನು ಒಂದು ವಿಜ್ಞಾನವಾಗಿಯೂ, ಕಲೆಯಾಗಿಯೂ ಹಾಗೂ ಕಸುಬಾಗಿಯೂ ರೂಪಿಸಿದ ಮಾನನೀಯ ರಂಗನಾಥನ್ ಅವರಂತೆ ಗ್ರಂಥಶಾಸ್ತ್ರಕ್ಕಾಗಿ ಸರ್ವಾರ್ಪಣಭಾವದಿಂದ ದುಡಿದು ಕರ್ನಾಟಕದ ಗ್ರಂಥಾಲಯ ಇತಿಹಾಸದಲ್ಲೇ ತಮ್ಮ ಸ್ಥಾನ ಭದ್ರಗೊಳಿಸಿಕೊಂಡವರು ಮಿತ್ರ ದೇಶಪಾಂಡೆ. ಗ್ರಂಥಪಾಲಕನಿಗೆ ವಿದೇಶಗಳಲ್ಲಿ ಎಂಥ ಪ್ರಭಾವಶಾಲಿ ಸ್ಥಾನಮಾನವಿದ್ದರೂ ನಮ್ಮಲ್ಲಿ ಅದು ದೊರಕಿದ್ದೇ ತೀರ ಇತ್ತೀಚೆಗೆ. ಅದುವರೆಗೆ ಪುಸ್ತಕಗಳ ಲೆಕ್ಕವಿಡುವ ಒಬ್ಬ ಲೆಕ್ಕಿಗನಾಗಿ ಮಾತ್ರ ಆತನ ಗುರುತು, ಕಾಲೇಜು ಗ್ರಂಥಾಲಯಗಳು ನಾಮಕೇ ವಾಸ್ತೆ ಹಂದರಗಳು. ಅಲ್ಲಿ ಪುಸ್ತಕ ರಬೋಲೆ ಇಡುವಾತ ಒಬ್ಬ ಸೆಕೆಂಡ್ ಡಿವಿಜನ್ ಕ್ಲರ್ಕ್. ಇಂಥ ಪರಿಸ್ಥಿತಿ ತೊಲಗಿ ಗ್ರಂಥಾಲಯವು – ಕಾಲೇಜಲ್ಲಾಗಲಿ, ವಿ ವಿ ನಿಲಯ ಕ್ಯಾಂಪಸಿನಲ್ಲಾಗಲಿ – ಹೃದಯಸ್ಥಾನವೆಂದು ಪರಿಗಣಿಸಲ್ಪಡುವುದಕ್ಕೆ ಕಾಲದ ಪ್ರಗತಿಯ ಜತೆಗೆ ವಿಶ್ವವಿದ್ಯಾನಿಲಯದ ಗ್ರಂಥಾಲಯ ಧೋರಣೆಯೂ ಕಾರಣವಾಯಿತು. ಗ್ರಂಥಪಾಲನೆ ಒಂದು ವಿಜ್ಞಾನವಾಯಿತು; ಅದರಲ್ಲಿ ಪದವಿಪೂರ್ವ ತರಗತಿ ಮತ್ತು ಸ್ನಾತಕೋತ್ತರ ವರ್ಗಗಳು ಸಿದ್ಧಗೊಂಡವು. ದೇಶಪಾಂಡೆಯವರಂಥ ಗ್ರಂಥಪಾಲರು ಹಾಕಿಕೊಟ್ಟ ಮೇಲ್ಪಂಕ್ತಿ, ಅವರ ಕಾರ್ಯನಿಷ್ಠತೆ ಗ್ರಂಥ ವಿಜ್ಞಾನಕ್ಕೆ ಅರ್ಥವನ್ನು ಮಹತ್ವಿಕೆಯನ್ನು ತುಂಬಿಸಿಕೊಟ್ಟವು. ಗ್ರಂಥಾಲಯ ವಹಿಸುವ ಖಚಿತವಾದ ಪಾತ್ರದ ಬಗ್ಗೆ ವಿಶ್ವಾಸ; ವಿದ್ಯಾರ್ಥಿ ಸೇವೆಯಲ್ಲಿ ಔತ್ಸುಕ್ಯ; ಗ್ರಂಥಾಲಯದ ಒಳ – ಹೊರ ಸೌಂದರ್ಯ ಪ್ರಜ್ಞೆ, ಜಗತ್ತಿನ ಜ್ಞಾನ ಭಂಡಾರದ ಪೋಷಣೆಗೆ ತಾವು ಅರ್ಹತೆ ಗಳಿಸುವ ಕಾರ್ಯ – ಇವೆಲ್ಲವೂ ಸೇರಿ ವಿರಚಿಸಿದ ಒಂದು ಶುಭ್ರ ಚೇತನ ದೇಶಪಾಂಡೆಯವರು. ತಾವು ದುಡಿದು ತನ್ನ ನೌಕರರನ್ನು ದುಡಿಸುವ ಕಲೆಯನ್ನ ಬಲ್ಲ ದೇಶಪಾಂಡೆ ಹಗಲು ರಾತ್ರಿ ಎನ್ನದೆ ಮಾನಸಗಂಗೋತ್ರಿಯಲ್ಲಿ ಗ್ರಂಥಗಳನ್ನು ಜೋಡಿಸಿಟ್ಟಿದ್ದಾರೆ. ಧಾರವಾಡದಿಂದ ಮೈಸೂರು ವಿ ವಿ ನಿಲಯಕ್ಕೆ ಎರವಲು ಬಂದ ದೇಶಪಾಂಡೆಯವರು ಕಾಲಾನಂತರ ಹೊಸತಾಗಿ ಹುಟ್ಟಿದ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೂ ಗುಲ್ಬರ್ಗ ವಿಶ್ವ ವಿದ್ಯಾನಿಲಯಕ್ಕೂ ಸೇವೆ ಸಲ್ಲಿಸಿ ತಮ್ಮ ಮಾತೃ ಸಂಸ್ಥೆ ಕರ್ನಾಟಕ ವಿ ವಿ ದಿಂದ ನಿವೃತ್ತರಾಗಿದ್ದಾರೆ. ಅವರು ಮಂಗಳೂರಿಗೂ ಬರಬೇಕಾಗಿತ್ತು. ಅದೇಕೋ ಬರಲಿಲ್ಲ. ಗ್ರಂಥಾಲಯಗಳನ್ನ ಬಳಸುವ ವಿದ್ಯಾರ್ಥಿಗಳ ಹೃದಯ ಸಂಪುಟದಲ್ಲಿ ದೇಶಪಾಂಡೆ ಚಿರ ಸನ್ನಿಹಿತರು.

ದೇಶಪಾಂಡೆಯವರ ಸೌಂದರ್ಯ ಪ್ರಜ್ಞೆಯಿಂದಲೇ ಅನ್ನಬೇಕು ಮೈಸೂರು ವಿ ವಿ ನಿಲಯ ಕೆ.ಕೆ. ಹೆಬ್ಬಾರರ ಎರಡು ಅಸನ್ಯ ಸಾಧಾರಣ ಕಲಾಕೃತಿಗಳನ್ನು ತನ್ನ ಗ್ರಂಥಾಲಯದಲ್ಲಿ ಇರಿಸಿಕೊಂಡಿದ್ದು. ಬೆಂಗಳೂರಿನಲ್ಲೂ ಒಂದು ಹೆಬ್ಬಾರರ ಕೃತಿ ಇದೆ. ವಿಜ್ಞಾನ, ಇತಿಹಾಸ, ಅರ್ಥಶಾಸ್ತ್ರ ಯಾವುದನ್ನೇ ಗ್ರಂಥಾಲಯದೊಳಗೆ ಅಧ್ಯಯನ ಮಾಡುವಾಗಲೂ ವಿದ್ಯಾರ್ಥಿ ಕಲಾಪ್ರಜ್ಞೆಯನ್ನು ಹೊಂದಿರಲು ಈ ಭಿತ್ತಿಚಿತ್ರಗಳು ನೆರವಾಗುತ್ತವೆಂಬ ಮಹತ್ವಾಕಾಂಕ್ಷೆ, ಕೆಲೆಂಡರ್ ಬಣ್ಣದ ಚಿತ್ತಾರಗಳಿಂದ ಕೆಟ್ಟ ಕಣ್ಣುಗಳಿಗೆ ನಿಜವಾದ ಸೌಂದರ್ಯದ ಪ್ರಜ್ಞೆ ಮೂಡುವಂತೆ ಅನುಕೂಲ್ಯ – ಒಂದು ಸಲ ಕಣ್ಣೆತ್ತಿ ಗೋಡೆಯ ಚಿತ್ರ ನೋಡಿದರಾಯಿತು. ಆದಿಮಾನವ ನಾಗರಿಕನಾಗುವ ಚಿತ್ರ ಸರಣಿ. ಹಾಗೆಯೇ ಕಳಿಂಗ ಯುದ್ಧದಿಂದ ಮನನೊಂದ ಅಶೋಕ ಚಕ್ರವರ್ತಿಯ 'ಬುದ್ಧಂ ಶರಣಂ ಗಚ್ಛಾಮಿ'ಯ ಶಾಂತಿ ಸಂದೇಶ. ನಾಗರಿಕತೆ ಉದಿಸುವ ಹಾಗೂ ಅದನ್ನುಳಿಸುವ ಸಂದೇಶಗಳು ಈ ಎರಡು ಚಿತ್ರಗಳಲ್ಲೇ ಅಡಕಗೊಂಡಿವೆ. ಮೈಸೂರಿನ ಗ್ರಂಥಾಲಯ ಓದಲ್ಕು ಮಾತ್ರವೇ ಅಲ್ಲ ನೋಡಲೂ ಅರ್ಹವಾದ ಒಂದು ಅಂಗ ಭಾಗ. ಪ್ರತಿಯೊಂದು ಚಿತ್ರವನ್ನೂ ಅದಕ್ಕೆ ಸರಿಯಾದ, ಆದರೆ ವಿ ವಿ ನಿಲಯದ ಲೆಕ್ಕತಪಾಸಣಾಧಿಕಾರಿಗಳ ದೃಷ್ಟಿಯಿಂದ ದುಬಾರಿ ಎನಿಸುವ, ಬೆಲೆಗೆ ಕೊಳ್ಳುವಾಗ ಉಂಟಾದ ಸಮಸ್ಯೆಗಳ ಪುರಾಣವನ್ನೇ ದೇಶಪಾಂಡೆ ಬಿಚ್ಚುತ್ತಾರೆ, ಮಾರ್ಮಿಕವಾಗಿ ರೋಚಕವಾಗಿ. ವಿ ವಿ ನಿಲಯದ ನೈಮಿತ್ತಿಕ ಜಂಜಾಟಗಳ ನಡುವೆ ಕಲಾಪ್ರಪಂಚ, ಸಂಸ್ಕೃತಿ ಪ್ರಪಂಚದ ವಸ್ತುಗಳಿಗೆ ಎಡೆ ಮಾಡಿಕೊಡುವುದು ಎಷ್ಟು ಕಷ್ಟವೆಂಬುದನ್ನು ಅನುಭವಿಸಿದರೆಯೇ ವಿದಿತ. ಅಂಥ ಅನುಭವದಿಂದ ಹಣ್ಣಾಗಿದ್ದಾರೆ ಗ್ರಂಥಪಾಲ ದೇಶಪಾಂಡೆ.

ಬೆಂಗಳೂರಿನ ಗ್ರಂಥಾಲಯದ ವಾಸ್ತುವಿನಲ್ಲಿ, ತೀರ ಈಚೆಗೆ ಅವರು ನಿವೃತ್ತಿ ಪೂರ್ವದಲ್ಲಿ ಅಧಿಕಾರ ವಹಿಸಿದ ಕರ್ನಾಟಕ ವಿಶ್ವ ವಿದ್ಯಾನಿಲಯದ ನೂತನ ಭವನದಲ್ಲೂ ದೇಶಪಾಂಡೆಯವರ ಮುದ್ರೆ ಇದೆ, ಓದುಗರ ಅನುಕೂಲತೆ, ಪರಿಸರದ ಸೌಂದರ್ಯ ದೃಷ್ಟಿ ಎರಡನ್ನು ಗಮನದಲ್ಲಿಡುವ ಗ್ರಂಥಪಾಲನೆಯನ್ನು ಒಬ್ಬ ಮಿಶನರಿಯಂತೆ ಸಾಧಿಸಿ ಧನ್ಯರಾಗಿದ್ದಾರೆ ದೇಶಪಾಂಡೆ.

ವಿ ವಿ ನಿಲಯದ ಪಂಡಿತ ಮಂಡಳಿಯ ನನ್ನ ಸದಸ್ಯತ್ವದ ಪೂರ್ವ ಭಾಗದಲ್ಲಿ ಸಭಾಚರ್ಚೆಯ ಮಟ್ಟ ಉತ್ತಮವಾಗಿತ್ತು. ಅನಾವಶ್ಯಕವಾಗಿ ತೌಡುಕುಟ್ಟುವ ಹಾಗೂ ತಪ್ಪುದಾರಿ ಹಿಡಿಸುವ ವಾದಗಳಿಗೆ ಕಾಯಿದೇಶೀರ್ ಕಡಿವಾಣ ಹಾಕಲು ನರಹರಿರಾಯರೆಂಬ ವಕೀಲ ಸದಸ್ಯರೊಬ್ಬರಿದ್ದರು. ಅವರು ದಿವಂ. ಎ. ಆರ್. ಕೃ. ಅವರ ಅಳಿಯಂದಿರಂತೆ. ಚರ್ಚೆಯಲ್ಲಿ ಮಧ್ಯಪ್ರವೇಶ ಮಾಡಿ ವಿಧಿಪುಸ್ತಕದಿಂದ ಸಂಬಂಧಿಸಿದ ಅಂಶವನ್ನು ಓದಿ ಹೇಳಿದರೆ ಅಲ್ಲಿಗೆ ಚರ್ಚೆ ಪೂರ್ಣವಿರಾಮವೇ ಬೀಳುತ್ತಿತ್ತು. ವಿತಂಡವಾದಗಳು, ಉತ್ಸಾಹಜನ್ಯವಾದ ಪ್ರತಿವಾದಗಳು ಮುಂತಾದ್ದರಿಂದ ಚರ್ಚೆ ರಂಜಿಸೀತೇ ವಿನಾ ಅದರಿಂದ ಪ್ರಯೋಜನವಾಗಬೇಕಾದರೆ ಅದು ವಿ ವಿ ಸಂವಿಧಾನದ ಕಟ್ಟೆಯೊಳಗಡೆಯೇ ಹರಿಯುತ್ತಿರಬೇಕು. ಹಾಗೆ ಅದನ್ನು ಮೇರೆ ಮೀರದಂತೆ ಮಾಡಲು

ಯಾರಾದರೊಬ್ಬರು ವಾರ್ಸಿಟಿ ಕಾಯಿದೆ ಅಭ್ಯಾಸ ಮಾಡಿದ ವಕೀಲ ಮನೋಧರ್ಮದವರು ಸದನದಲ್ಲೇ ಇರಬೇಕು. ರಿಜಿಸ್ಟ್ರಾರ್ ಸಮರ್ಥನಾದರೆ ಈ ಕೆಲಸ ಮಾಡಬಲ್ಲ; ಆದರೆ ಮೈಸೂರು ವಿ ವಿ ನಿಲಯ ಓರಗೆಯ ಇತರ ಭಾರತೀಯ ರಚನೆಗಳಂತೆ ಐ. ಎ. ಎಸ್. ವರ್ಗದ ಅಧಿಕಾರಿಗಳ ಮೇಲೆ ನಂಬಿಕೆ ಇಟ್ಟಿತ್ತು. ಅವರಲ್ಲಿ ಕೆ. ಆರ್. ರಾಮಚಂದ್ರನ್ ಅಂಥ ಕಾರ್ಯಕರ್ತರು ಸಿಕ್ಕುವುದು ಅಪರೂಪ. ಪ್ರಾಧ್ಯಾಪಕರನ್ನು ಈ ಹುದ್ದೆಗೇರಿಸಿದರೆ ಅವರು ತಮ್ಮ ಪೂರ್ವಗ್ರಹವನ್ನು ಬಿಡಲೊಲ್ಲರು – ಅವರಿಗೆ ಇವರ ಓರಗೆಯವರ ಸಹಕಾರ ಅಷ್ಟಕಷ್ಟೇ. ಇತ್ತ ಕುಲಪತಿಗಳಿಗೂ ಅತ್ತ ಸದನಕ್ಕೂ ಹೊಣೆಗಾರನಾಗಿದ್ದು ಆಡಳಿತದಲ್ಲಿ ಜಾಣ್ಮೆಯುಳ್ಳ ವ್ಯಕ್ತಿಗಳೇ ವಿರಳ. ಸಾಮಾನ್ಯ ಆಡಳಿತಕ್ಕೇನೆ ಅಂಥವರ ಸೇವೆ ಬೇಕಾಗಿರುವಾಗ ಶಿಕ್ಷಣ ಕ್ಷೇತ್ರಕ್ಕೆ ಅವರನ್ನು ಎರವಲು ಕೊಡುವುದು ಸರ್ಕಾರಕ್ಕೂ ಕಷ್ಟ.

ಪಂಡಿತ ಮಂಡಳಿಯ ಸಭೆಯಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ಚರ್ಚೆಗೆ ಬರುತ್ತಿದ್ದ ವಿಷಯಗಳು ಹೆಚ್ಚಾಗಿ ಆಯಾ ವರ್ಷದ ಪಠ್ಯ, ಪರೀಕ್ಷೆ ಇತ್ಯಾದಿಗಳಿಗೆ ಸಂಬಂಧಿಸಿಯೇ ಇರುತ್ತಿದ್ದವು. ಆಗೊಮ್ಮೆ ಈಗೊಮ್ಮೆ ಧೋರಣಾತ್ಮಕ ಸಂದಿಗ್ಧಗಳಿಗೆ ಚರ್ಚಾಪೂರ್ವಕವಾಗಿ ಉತ್ತರ ಕೊಡಬೇಕಾಗುತ್ತಿತ್ತು. ಆಗ ಪೂರ್ವಾಪರ ವಿಮರ್ಶೆ ಮಾಡಿ ಒಳ್ಳಿತರ ಕಡೆಗೆ ಬಹುಮತವು ದೊರೆಯುವಂತೆ ನೋಡಿಕೊಳ್ಳಬೇಕಾದ ಹತ್ತಾರು ಸಂದರ್ಭಗಳು ಬರುತ್ತಿದ್ದವು. ಅಲ್ಲಿ ನಾನು ಕಾರ್ಯಶೀಲನಾಗಿರುತ್ತಿದ್ದೆ – ವಿಷಯವನ್ನು ಓರಗೆಯ ಪ್ರಿನ್ಸಿಪಾಲರು, ಪ್ರೊಫೆಸರುಗಳ ಜತೆ ಮೊದಲೇ ವಿಚಾರವಿನಿಮಯ ಮಾಡಿಕೊಂಡು ಅವರ ಸಹಕಾರವನ್ನು ಕೋರಿ ಸದನದಲ್ಲಿನ ನಿರ್ಣಯಗಳಿಗೆ ಬಹುಮತ ಒದಗಿಸಿಕೊಳ್ಳುವುದು ನನ್ನ ಕರ್ತವ್ಯವಾಗಿತ್ತು. 3 ವರ್ಷದ ಡಿಗ್ರಿಯಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದ್ದ ಫಿಸಿಕ್ಸ್, ಕೆಮಿಸ್ಟ್ರಿ, ಅಥವಾ ಇಕನಾಮಿಕ್ಸ್, ಹಿಸ್ಟರಿ, ಸೋಶಿಯಾಲಜಿ ಅಂಥ ಓಬೀರಾಯನ ತ್ರಿವಿಷಯದ ಸಮಾನ ಮೇಜರ್‌ಗಳ ಬದಲು ಒಂದು ಮೇಜರ್ ಎರಡು ಮೈನರ್ ಮಾಡಬೇಕೇ?, ಎರಡು ಮೇಜರ್ ಒಂದು ಮೈನರ್ ಮಾಡಬೇಕೆ? ಎಂಬ ಕುರಿತು ವಿಶೇಷ ಚರ್ಚೆ ನಡೆದಿತ್ತು. ನಮ್ಮ ಶಿಕ್ಷಣ ವ್ಯವಸಾಯದಲ್ಲೇ ಏನೋ ಒಂದು ಬಂದಲ್ಲಿಗೇ ಹಿಂದೆ ಹೋಗುವ ಪ್ರವೃತ್ತಿ ಅಂತರ್ಗತವಾದಂತೆ ತೋರುತ್ತದೆ. ಅದಕ್ಕೆ ಮೈಸೂರು ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೇಟ್ ಎಷ್ಟೋ ಬಾರಿ ಉದಾಹರಣೆ ಒದಗಿಸಿದವು. ಬದಲಾವಣೆಯನ್ನು ಸೂಚಿಸುವಾಗ ಎಂತೆಂಥ ವಾದಗಳನ್ನು ಕೊಟ್ಟವರೇ ಅದನ್ನು ಮತ್ತೊಮ್ಮೆ ಪೂರ್ವಸ್ಥಿತಿಗೆ ತರುವಾಗ ತಾವು ಹಿಂದೆ ಹೇಳಿದ್ದನ್ನು ಮರತೇ ಬಿಟ್ಟು ಆತ್ಮವಂಚನೆ ಮಾಡಿಕೊಳ್ಳುವವರಂತೆ ಹಳೆಯದನ್ನು ಮತ್ತೆ ಹುಡಕಲು ಹೊರಡುತ್ತಾರೆ. ಮೈಸೂರಲ್ಲಿ 60ನೇ ಇಸವಿಗೆ ಹಿಂದೆ ಆನರ್ಸ್ ತರಗತಿಗಳಿದ್ದವು – ಅವನ್ನ ತೊಲಗಿಸಿ 2ವರ್ಷದ ಡಿಗ್ರಿಯ ಅನಂತರ 2 ವರ್ಷದ ಎಂ.ಎ. ಮಾಡುವುದು ಸ್ಥಿರಗೊಂಡ ಮೇಲೆ ಇದ್ದಕ್ಕಿದ್ದಂತೆ ಸಭೆಯ ಮುಂದೆ ಒಂದು ದಿನ ಆನರ್ಸ್‌ನ್ನು ಮತ್ತೆ ಊರ್ಜಿತಗೊಳಿಸಬೇಕು – ಅಂದರೆ ಬರೇ ಮಹಾರಾಜ ಕಾಲೇಜಿನಲ್ಲಿ ಮಾತ್ರ ಎಂಬ ಸೂಚನೆ ಬಂದಿತು. ಮಹಾರಾಜ ಮತ್ತು ಯುವರಾಜ ಕಾಲೇಜಿಂದ ಕುಕ್ಕನಹಳ್ಳಿ ಕೆರೆಯಾಚೆಗಿನ ಮಾನಸಗಂಗೋತ್ರಿ ಕ್ಯಾಂಪಸಿಗೆ ಎಂ. ಎ. ವರ್ಗಗಳು ವಲಸೆ ಹೋದ ಮೇಲೆ ತಾವು ಬರೇ ಪದವಿಪೂರ್ವ ಕಾಲೇಜಾಗಿ ಉಳಿಯಬೇಕಲ್ಲ ಇದು ಸಲ್ಲದು. ತಾವು ಎಲ್ಲರಂತಲ್ಲ – ಅಂದರೆ ಉಳಿದ ಡಿಗ್ರಿ ಕಾಲೇಜುಗಳಿಗಿಂತ ಶ್ರೇಷ್ಠರು ಎಂದಾಗಲು ಆನರ್ಸ್ ತೆರೆಯೋಣ, ಉಳಿದವರಿಗೆ ಅದನ್ನು ಮಾಡಲು ಬಿಡದಿರೋಣ ಎಂಬ ಸಂಚು. ಜಾರ್ಜ್ ಆರ್ವೆಲನ ಆಲ್ ಆರ್ ಈಕ್ವಲ್ ಬಟ್ ಸಮ್ ಆರ್ ಮೋರ್ ದೇನ್ ಈಕ್ವಲ್ ಎಂಬ ನೀತಿಯ ಈ ಧೋರಣೆಯನ್ನು ಕಾಲೇಜು ಪ್ರಿನ್ಸಿಪಾಲರೂ ವಿ. ವಿ. ನಿಲಯದ ವಿವೇಚನಾಪರರೂ ಸೇರಿ ಖಂಡಿಸಿ, ನಿರ್ಣಯವನ್ನು ಸೋಲಿಸಿದೆವು. ಅಂದಿನದು ಪ್ರಾಯಃ ನನ್ನ ಅತ್ಯಂತ ಉಗ್ರ ಮತ್ತು ವ್ಯಗ್ರ ಭಾಷಣವಾಗಿತ್ತು. ಕಾರಣ: ನನ್ನ ಯಾವಂದಿನ ಬಂಡಾಯ ಮನೋವೃತ್ತಿಗೆ ಇಲ್ಲಿ ಒಂದು ಅವಕಾಶ ಸಿಕ್ಕಿತು. ಮೈಸೂರು ಕೇಂದ್ರದಿಂದ ಹೊರಗಿರುವ ಅಂಗಸಂಸ್ಥೆಗಳು ವಾರ್ಸಿಟಿ ಕೇಂದ್ರದ ವಸಾಹತುಶಾಹಿ ಅಧಿಪತ್ಯಕ್ಕೆ ಸೇರಿದುವು. ಕಚ್ಚಾಸರಕು(ಡಿಗ್ರಿವಂತ) ತಯಾರಿಸಿ ಕಳಿಸಬೇಕು ಎಂದರೆ ವಾರ್ಸಿಟಿ ಕೇಂದ್ರ ಅವುಗಳನ್ನು ಎಂ.ಎ, ಎಂ.ಎಸ್.ಸಿ. ಆಗಿ ಮಾರುಕಟ್ಟೆಗೆ ಹಿಂತಿರುಗಿಸುತ್ತದೆ. ಭಾರತವು ಡೆಮಾಕ್ರಸಿಗೆ ಅರ್ಹವಲ್ಲ ಎಂದು ಬ್ರಿಟಿಷರು ಹೇಳುತ್ತಿದ್ದಂತೆ ವಾರ್ಸಿಟಿ ಕೇಂದ್ರದ ಪಟ್ಟಭದ್ರರು ಪದವಿಪೂರ್ವಕಾಲೇಜುಗಳು ಕೆಲ ಶೈಕ್ಷಣಿಕ ವಿಷಯಕ್ಕೆ ಅನರ್ಹರು ಎಂದೇ ತೀರ್ಪುಕೊಟ್ಟರು. ಆನರ್ಸ್‌ನ್ನು ಏಕ ಕಾಲೇಜಿನಲ್ಲಿ ಪುನರ್ಜೀವಿಸುವುದು ಅಂಥ ಒಂದು ವಿಷಯವಾಗಿತ್ತು. ಈ ಒಳಗುಟ್ಟನ್ನು ಅರಿತ ನಾನು ಅಂಗಸಂಸ್ಥೆಗಳ ವರಿಷ್ಠರಿಗೆಲ್ಲ ಬೆಂಬಲಿಸಲು ಪತ್ರ ಬರೆದೆ. ಹಾಗೂ ದಿನಮುಂಚಿತವಾಗಿ ಮೈಸೂರಿಗೆ ಹೋಗಿ ಅಲ್ಲಿ ಭೆಟ್ಟಿಯಾಗಿ ಎಲ್ಲರೂ ತಮ್ಮ ವಾದ ಮಂಡಿಸಲು ಹೇಳಿದೆ. ಒಂದೇ ಕಡೆ ಕೂತಿರಬೇಡಿ – ಬೇರೆ ಬೇರೆ ಸ್ಥಳಗಳಿಂದ ನಿಮ್ಮ ಪ್ರತಿಕ್ರಿಯೆ ಸೂಚಿಸಿದರೆ ಆಗ ಇಡೀ ಸಭೆಯೇ ವಿರೋಧಿಸಿದಂತೆ ಆಗುತ್ತದೆ; ಠರಾವು ಸೋತು ವಾಪಾಸಾಗುತ್ತದೆ ಎಂದಿದ್ದೆ – ಹಾಗೆಯೇ ಆಯಿತು.

ಆದರೆ ಎಂ.ಜಿ.ಎಂ. ಕಾಲೇಜಿಗೆ ಸ್ನಾತಕೋತ್ತರ ವರ್ಗಗಳನ್ನು ನಡೆಸಲು ಅನುಮತಿ ಕೋರಿ ನಾನು ಸಲ್ಲಿಸಿದ

ಅರ್ಜಿ ಸಫಲವಾಗಲಿಲ್ಲ. ಎಫಿಲಿಯೇಷನ್ ಸಮಿತಿ ಶಿಫಾರಸು ಮಾಡಿದರೂ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಡಾ. ಶ್ರೀಮಾಲಿಯವರ ಉಪಾಯದಿಂದ ಸೋತು ಹೋಯಿತು. ಮತಕ್ಕೆ ಹಾಕಿದ್ದರೆ ಅದು ಗೆಲ್ಲುತ್ತಿತ್ತು. ಕಾರಣ: ಆಗ ಬಹುಮತ ಎಫಿಲಿಯೇಟೆಡ್ ಕಾಲೇಜು ಪ್ರಿನ್ಸಿಪಾಲರದ್ದೇ ಆಗಿತ್ತು. ಎಂ.ಜಿ.ಎಂ. ಒದಗಿಸಿದ್ದು ಒಂದು ಟೆಸ್ಟ್ ಕೇಸ್ ಎಂದು ಎಲ್ಲರೂ ಸಮ್ಮತಿಸಲು ಸಿದ್ಧರಾಗಿದ್ದರು. ಆದ್ದರಿಂದ ನೇರ ಹೋರಾಟದಲ್ಲಿ ವಿಫಲರಾದೇವೆಂಬ ಶಂಕೆಯುಳ್ಳ ಚಾಣಾಕ್ಷಮತಿಗಳು ಶ್ರೀಮಾಲಿಯವರನ್ನು ಹಿಡಿದು ಏನೋ ಉಪಾಯ ಸೂಚಿಸುವರೆಂದು ನಾನು ಎಣಿಸಿರಲಿಲ್ಲ. ವರದಿ ಎಂ.ಜಿ.ಎಂ.ನ ಕಾರ್ಯಾಸಕ್ತತೆಯ ಬಗ್ಗೆ ವಿಶ್ವಾಸ ಸೂಚಿಸಿ ಅರ್ಥಶಾಸ್ತ್ರ, ಗಣಿತ ಮತ್ತು ಇಂಗ್ಲೀಷ್‌ಗಳಲ್ಲಿ ಸರಿಯಾದ ಪ್ರಾಧ್ಯಾಪಕರನ್ನು ನೇಮಿಸಿ ಸ್ನಾತಕೋತ್ತರ ಶಿಕ್ಷಣ ನಡೆಸಲು ಅರ್ಹತೆಯುಳ್ಳದೆಂದು ಅನುಮೋದಿಸಿದ. ಗೆಲುವಿನಲ್ಲಿ ನಾನು ಒಳಪೆಟ್ಟುಗಳನ್ನು ಮರೆತಿದ್ದೆ. ಅಧ್ಯಯನ ಮಂಡಳದ ಒಪ್ಪಿಗೆ ಬಂದೇ ಬರುತ್ತಿದೆ ಎಂದುಕೊಂಡಿದ್ದೆ. ನಿರ್ಣಯದ ಸೂಚನೆ ಎತ್ತಿಕೊಂಡ ಕೂಡಲೇ ಕುಲಪತಿ ಶ್ರೀಮಾಲಿ ಎದ್ದು ನಿಂತು 'ನಾವು ಮಂಗಳೂರಿಗೆ ಎಲ್ಲ ವಿಷಯಗಳಲ್ಲಿ ಪರಿಪೂರ್ಣವಾದ ಒಂದು ಸ್ನಾತಕೋತ್ತರ ಕೇಂದ್ರ ಕೊಡುವ ನಿರ್ಣಯ ಮಾಡಿದ್ದೇವೆ – ಇದಕ್ಕೆ ಯೂಜಿಸಿ ನೆರವು ಸಿಗುವಂತಿದೆ. ಆದ್ದರಿಂದ ಸದರಿ ನಿರ್ಣಯ ಸದ್ಯ ಪ್ರಸ್ತುತ ವಲ್ಲ' ಎಂದು ಹೇಳಿ ನಿರ್ಣಯವನ್ನು ಉರುಳಿಸಿಬಿಟ್ಟರು. ನನಗೆ ಇದರಿಂದ ನೋವಾಯಿತು.

ಸ್ನಾತಕೋತ್ತರ ವರ್ಗಗಳ ಮೂಲಕವಾಗಿ ಒಂದು ಕಾಲೇಜು ತನ್ನ ಅಧ್ಯಯನ ಗುಣವನ್ನು ಎತ್ತರಿಸಿಕೊಳ್ಳಲು ಆಗುತ್ತದೆಂಬುದನ್ನು ಪ್ರತ್ಯಕ್ಷವಾಗಿ ನನ್ನ ಸ್ವಂತ ವಿದ್ಯಾರ್ಜನೆಯ ಕಾಲದಲ್ಲಿ ನಾನು ಕಂಡವನಾದ್ದರಿಂದ; ಮದರಾಸಿನ ಮೇಲ್ದರ್ಜೆಯ ಕಾಲೇಜುಗಳ ಮಟ್ಟವನ್ನು ನಾವು ಆಗಲೇ ಮುಟ್ಟಿರುವೆವೆನ್ನುವುದು ನನಗೆ ಮನೋಗತವಾದ್ದರಿಂದ; ಎಂ. ಜಿ. ಎಂ.ನ 20 ವರ್ಷಗಳ ಸಾಧನೆಯ ಹೃದಯಸ್ಥಾನದಲ್ಲಿ ಅಲ್ಲಿನ ವಿದ್ಯಾರ್ಥಿಗಳ ಪ್ರತಿಭೆ ಪ್ರಜ್ವಲಿಸುತ್ತಿದ್ದುದರಿಂದ ಅಂಥವರನ್ನು ಮತ್ತೆರಡು ವರ್ಷ ನಮ್ಮ ಆಶ್ರಯದಲ್ಲಿ ಇರಿಸಿ ಅವರ ವ್ಯಕ್ತಿತ್ವ ವಿಕಸನಕ್ಕೆ ಪೋಷಣೆ; ಚಾಲನೆ ನಾವೇ ಕೊಡಲಾರವೆ? ಎಂಬ ಉತ್ಸಾಹ ಯಾವತ್ತೂ ನನ್ನನ್ನು ಕಾಡುತ್ತಿತ್ತು . ನನ್ನ ಕಾಲೇಜು ಇನ್ನೊಂದು ಮದರಾಸು ಕ್ರಿಶ್ಚನ್ ಆಗಬೇಕು; ಸ್ನಾತಕ ಪೂರ್ವರಂಗದಲ್ಲಿ ಆಗಿದೆ: ಉತ್ತರದಲ್ಲೂ ಯಾಕಾಗ ಬಾರದು ಎಂಬುದೇ ಸವಾಲು. ಈ ಸವಾಲಿಗೆ ನನ್ನಲ್ಲಿ ಇಂಥ ಉತ್ತರ ಹುಟ್ಟಲು ಕಾರಣ ಎಂಜಿಎಂ 60ರ ದಶಕದಲ್ಲಿ ತೋರಿದ ಅಕಾಡೆಮಿಕ್ ವಿಕ್ರಮಗಳು. ನೂರಾರು ಕಾಲೇಜುಗಳಿರುತ್ತ ನಮ್ಮೊಂದು ಕಾಲೇಜಿಗೆ ಪಾಂಕ್ತವಾಗಿ ಕೆಲವು ವರ್ಷ, ಪ್ರತಿ ವರ್ಷ 5ರಿಂದ 9ರ ವರೆಗೆ ವಾರ್ಸಿಟಿ ರ್‍ಯಾಂಕುಗಳು ಬಂದಿವೆ. ಜಿಲ್ಲೆಯಲ್ಲಿ ಆದರೂ ನಮಗಿಂತಲೂ ಹಿರಿಯ ಕಾಲೇಜೊಂದರ ಅಧ್ಯಾಪಕರು ಕುತೂಹಲದಿಂದ ಅದು ಹೇಗೆ ನೀವು ವಿದ್ಯಾರ್ಥಿಗಳನ್ನು ತಯಾರು ಮಾಡುತ್ತೀರಿ ಎಂಬುದನ್ನು ಪರೀಕ್ಷಿಸಲು ಬಂದದ್ದುಂಟು. ವಿಜ್ಞಾನ ವಿಭಾಗದ ಕುಶಲಮತಿಗಳ ದೆಸೆಯಿಂದ ಇಂಥ ಕೋರೈಸುವ ವಿಕ್ರಮ ನಮ್ಮದಾಯಿತು. ಈ ಬಗ್ಗೆ ಜಿಜ್ಞಾಸೆಗಳು ನಡೆದಿವೆ. ರ್‍ಯಾಂಕಿನ ಸುರಿಮಳೆಯ ಮೊದಲ ವರ್ಷ ಉಡುಪಿಯ ನಾಗರಿಕರು ಈ ಬಗ್ಗೆ ಕಾಲೇಜಿಗೆ ಒಂದು ಅಪೂರ್ವ ಸನ್ಮಾನ ಏರ್ಪಡಿಸಿದರು – ಇಡೀ ಕಾಲೇಜಿಗೆ ಸನ್ಮಾನ ! ಮರು ವರ್ಷವೂ ಅದೇ ಸಾಧನೆ ! ಎರಡನೆ ಸಲ ಸನ್ಮಾನಕ್ಕೆ ನಾನು ಒಪ್ಪಲಿಲ್ಲ. ಕಾಲೇಜಿಗೆ ತಾಯಿ ದೃಷ್ಟಿ, ತಂದೆ ದೃಷ್ಟಿ ಬಿದ್ದೀತು ಸ್ವಾಮಿ – ಪ್ರತೀ ವರ್ಷವೂ ನಾವು ಹೀಗೇ ಇರುತ್ತೇವೆ ಇರಗೊಡಿ, ರ್‍ಯಾಂಕ್ ತರುತ್ತೇವೆ, ತರಗೊಡಿ ಎಂದು ಅಂಗಲಾಚಿದೆ. ರ್‍ಯಾಂಕ್ ಪರಾಕ್ರಮಿಗಳ ಯಾದಿಯನ್ನು ಇಂದಿಗೆ ನೋಡಿದರೂ ಸಂತೋಷವಾಗುತ್ತದೆ – ಎಲ್ಲರೂ 'ಪ್ರ್ಯೇಮಯಾತ್ರೆ' ಮಾಡಿದ್ದಾರೆ – ತಮ್ಮ ಇರಸ್ತಿಕೆಯನ್ನೂ ಕುಟುಂಬದ ಆರ್ಥಿಕತೆಯನ್ನೂ ಬಲಪಡಿಸಿದ್ದಾರೆ, ಉತ್ತಮ ನಾಗರಿಕರಾಗಿದ್ದಾರೆ, ಮುಂದಾಳಾಗಿದ್ದಾರೆ. ನನಗೆ ಅತ್ಯಂತ ಸಂತೋಷವನ್ನು ತಂದ ಒಬ್ಬ ರ್‍ಯಾಂಕುವಂತ ಎಂದರೆ ಶ್ರೀ ಶಂಕರನಾರಾಯಣ ಭಟ್ಟ. ವಿಜ್ಞಾನದಲ್ಲಿ ಪ್ರಥಮ ರ್‍ಯಾಂಕ್ ಬಂದ ಮೇಲೆ ಒಂದು ದಿನ ನನ್ನ ಕೊಠಡಿಗೆ ಬಂದು ತಾನು ಆಂಗ್ಲ ಸಾಹಿತ್ಯದಲ್ಲಿ ಎಂ. ಎ. ಮಾಡಲು ಹೋಗುತ್ತೇನೆ ಅಂದು ಬಿಟ್ಟ ! ಸಾಹಿತ್ಯದಲ್ಲಿ ಅಷ್ಟು ಪ್ರೇಮವಿದ್ದರೆ ಖಂಡಿತ ಹೋಗಬಹುದು ಎಂದಿದ್ದೆ.

ರ್‍ಯಾಂಕು ಬರುವುದು ಹೇಗೆ? ಅದಕ್ಕೆ ಬಡವರೇ ಆಗಬೇಕೆಂದಿಲ್ಲ. ಮಧ್ಯಮ ವರ್ಗದವರೂ ಆಗಬಹುದು. ಅಂತಃಪ್ರೇರಣೆ ಬೇಕು. ಹೊರಗಿನ ಪರಿಸರದ ಪ್ರಚೋದನೆಯೂ ಬೇಕು ಈ ಎರಡನೆಯದನ್ನು ಪೂರೈಸುವುದು ಪ್ರಾಧ್ಯಾಪಕನಾದವನ ಕರ್ತವ್ಯ. ಶಿಕ್ಷಣವೆಂಬ ಸಾಮೂಹಿಕ ಯಜ್ಞದಲ್ಲಿ ಆತ ಎಲ್ಲರಿಗೂ ವಿದ್ಯೆಯನ್ನು ಸಮಾನವಾಗಿ ಹಂಚಿದರೂ ಗುಡ್ಡಗಳನ್ನೂ ಶಿಖರಗಳನ್ನೂ ಗುರುತಿಸಬಲ್ಲವನಾಗಬೇಕು. ಅಂಥವರಿಗೆ ಪ್ರೀತಿ ವಿಶ್ವಾಸ ಅಭಿಮಾನ ಸ್ವಲ್ಪ ಮಟ್ಟಿನ ಮಾರ್ಗದರ್ಶನ ಮಾಡಿ ಎಳೆಯರಲ್ಲಿ ಆತ್ಮ ವಿಶ್ವಾಸ ಬರುವಂತೆ ಮಾಡಬೇಕು. ಇಂಥ ಕೆಲಸವೊಂದು 70ರ ದಶಕದಲ್ಲಿ ಸ್ವತಃ ನನ್ನಿಂದಲೇ ಆಯಿತು (ನನ್ನ ಪ್ರಾಧ್ಯಾಪಕರಲ್ಲಿ ನಿಷ್ಣಾತರಾದ ಬಿ.ವಿ. ಆಚಾರ್. ಯು.ಎಲ್. ಆಚಾರ್, ಶ್ರೀಶ ಆಚಾರ್, ರಾಮ್ ಭಟ್, ಈಶ್ವರನ್ ಅಂಥವರು ವಿದ್ಯಾರ್ಥಿಗಳ ಮನೋರಂಗದ ಮೇಲೆ ಎಂದಿನಿಂದಲೂ ಪ್ರಭಾವ ಮೂಡಿಸಿದ್ದು ಜನಜನಿತ ತಾನೇ?)

ನಾನೊಬ್ಬ ಲೋಕಲ್ ಗಾರ್ಡಿಯನ್ ಆಗಿ ಒಬ್ಬ ವಿದ್ಯಾರ್ಥಿಗೆ ಹಾಸ್ಟೆಲಿನಲ್ಲಿ ಸಕಲ ಸೌಕರ್ಯಗಳನ್ನು




ಮಾರ್ಕಸ್ ಒರಿಲಿಯಸ್ ಅರಮನೆ, (ಇಟಲಿ) ಮುಂಭಾಗದಲ್ಲಿ ಕು. ಶಿ. ಯವರು (1984)



ಐಎಸ್‌ವಿಇಯ ತಜ್ಞರ ಬಳಗದಲ್ಲಿ ಸೇರಿದ ಕು. ಶಿ.ಯವರು (1963)



ಯಕ್ಷಗಾನ ಕೇಂದ್ರದ ಉದ್ಘಾಟನೆ 1971ರಲ್ಲಿ



ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳೊಂದಿಗೆ—ಮೈಸೂರು ವಿ.ವಿ. ನಿಲಯದ
ಕುಲಪತಿ ಪ್ರೊ| ದೇ. ಜವರೇಗೌಡರ ಭೇಟಿಯ ಸಂದರ್ಭದಲ್ಲಿ



ಯಕ್ಷಗಾನ ಕೇಂದ್ರದಲ್ಲಿ ಸಮಾರಂಭ




ಯಕ್ಷಗಾನದ "ಗುರು" ಡಾ. ಶಿವರಾಮ ಕಾರಂತರೊಂದಿಗೆ ಸಂದರ್ಶನ



ಯಕ್ಷಗಾನಕ್ಕೆ ಆಹ್ವಾನ ತಂದ ಜಪಾನಿನಿಂದ ಬಂದ ಅತಿಥಿಗಳೊಂದಿಗೆ (1981)



ಜಪಾನಿನ ರಂಗಸ್ಥಳದಲ್ಲಿ ತೆರೆಹಿಡಿದ ಕು. ಶಿ. ಹಾಗೂ ಪ್ರಭಾಕರ ವೈಗಳು (1981)



ಗೋವಿಂದ ಪೈ ಸಂಶೋಧನಾಲಯದಲ್ಲಿ ಪ್ರದರ್ಶನ





ಜಾನಪದ ವೈಭವವನ್ನು ದೇಶ ವಿದೇಶಗಳ ಜನರಿಗೆ ಚಿತ್ರಿಸಿದ ಕಾರ್ಯಾವಳಿ



ಬಿ. ವಿ. ಕಾರಂತ ನಿರ್ದೇಶಿತ ಅಶ್ವತ್ಥಾಮನ್ ನಾಟಕದಲ್ಲಿ
ಅಶ್ವತ್ಥಾಮ ಪಾತ್ರಧಾರಿ ಕು. ಶಿ.ಯವರು



ಇಟಲಿಯಲ್ಲಿ ಶ್ರೀಮತಿ ಆಪ ಅವರ ನಿವಾಸದಲ್ಲಿ ಭೇಟಿ (1984)



ಶ್ರೀಮತಿ ಸಿಲೋನೆ ಉಡುಪಿಗೆ ಬಂದಿದ್ದಾಗ (1980)



ಬಾಲ್ಯದ ಗೆಳೆಯರು ರಂಗನಾಥ ಶೆಣೈ ಮತ್ತು ಬಾಗಲೋಡಿ ದೇವರಾಯರೊಂದಿಗೆ (1976)



ಜಪಾನಿಗೆ ಯಕ್ಷರಂಗವನ್ನೊಯ್ಯುವ ಪೂರ್ವಭಾವಿಯಾಗಿ
ಕಟೀಲು ದುರ್ಗಾ ಸನ್ನಿಧಿಯಲ್ಲಿ ವೇದಮೂರ್ತಿ ಅಸ್ರಣ್ಣನವರಿಂದ ಆಶೀರ್ವಚನ (1981)



ರಷ್ಯಾದಲ್ಲಿ ಯಕ್ಷರಂಗ ತಂಡ ಪ್ರದರ್ಶನ ನೀಡಿದಾಗ
ಕು. ಶಿ. ಅವರಿಗೆ ಸನ್ಮಾನ (1982)



ಕಟ್ಟಿಂಗೇರಿ ಕೃಷ್ಣ ಹೆಬ್ಬಾರ–ಕಲೆ ಮತ್ತು ಬದುಕು ಪುಸ್ತಕ ಬಿಡುಗಡೆ (1988)



ಶ್ರೀಮತಿ ಶೆರಿಲ್ ಎಡ್ವಿನ್‌ಜರೋ ಅವರ ಜತೆಗೆ ಹರಿದಾಸ ಭಟ್ಟ ದಂಪತಿ



ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರ ಜತೆಯಲ್ಲಿ ಉಡುಪಿಯ ಪರ್ಯಾಯ ಸಭೆಯಲ್ಲಿ



ಅಮೆರಿಕದ ಕೊಲಂಬಿಯಾ ನದೀಕಣಿವೆಯಲ್ಲಿ ಒಂದು ಜಲಪಾತದ ಮುಂದೆ



ಪೋರ್ಟ್‌ಲ್ಯಾಂಡ್ ರಾಜ್ಯದ ಸಾವಿರ ವರ್ಷ ಆಯುಸ್ಸಿನ ಮರ ಉಳ್ಳ ಕಾನನಗಳ ನಡುವೆ



ಯಕ್ಷರಂಗದ ಕಲಾವಿದರು ಶ್ರೀಮತಿ ಇಂದಿರಾಗಾಂಧಿ ಅವರೊಂದಿಗೆ
ಅವರ ನಿವಾಸದಲ್ಲಿ (1976)



ಪ್ರೊ। ಕು. ಶಿ.ಯವರು ಸಂಘಟಿಸಿದ ಫಿನ್ನಿಷ್-ಇಂಡಿಯನ್ ಜಾನಪದ ಅಧ್ಯಯನ ತಂಡದ ಅಂತಾರಾಷ್ಟ್ರೀಯ
ತಂಡದೊಂದಿಗೆ ಪ್ರೊ। ಲಾರಿ ಹೊಂಕೋ (ಫಿನ್ನಿಷ್ ಜಾನಪದ ತಜ್ಞ), ಸಂಘಟನೆಗೆ ಬೆಂಬಲ ನೀಡಿದ
ಧರ್ಮಸ್ಥಳ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಮತ್ತಿತರು. (1989)



ಫಿನ್‌ಲೇಂಡ್ ಸರಕಾರವು ಕು. ಶಿ. ಅವರಿಗೆ ನೀಡಿದ ಕಾಲೇವಾಲದ ಪ್ರಕಟಣೆಯ
150ನೇ ಹಬ್ಬದ ಸಂದರ್ಭದಲ್ಲಿ ನೀಡಿದ ಗೌರವ ಪದಕ (1985)



ISTITUTO DI STUDI PER LO SVILUPPO ECONOMICO · NAPOLI

ISVE

Si attesta che il Signor

Bhat

Shjiva Haridasa Kunjibettu

ha frequentato i corsi di:

Teorie dello Sviluppo Economico

Politiche e Realizzazioni dello Sviluppo Economico

Principi e Tecniche Aziendali e di Mercato

Scienze Sociologiche Applicate

dal 3 dicembre 1962 al 31 maggio 1963

Il Direttore dell'ISVE

Il Presidente dell'ISVE

(1963)

ಕರ್ನಾಟಕ
ಸಾಹಿತ್ಯ ಅಕಾಡೆಮಿ

ಗೌರವ ಪ್ರಶಸ್ತಿ
[illegible]

ಪ್ರೊ॥ ಕು. ಶಿ. ಹರಿದಾಸ ಭಟ್ಟ ಅವರು
ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿರುವ
ಅಮೂಲ್ಯ ಸೇವೆಗಾಗಿ
ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅವರಿಗೆ
ನಟರಾಜ ವಿಗ್ರಹ, ಶಾಲು ಮತ್ತು
ಐದು ಸಾವಿರ ರೂಪಾಯಿಗಳ
ಸಂಭಾವನೆಯೊಡನೆ ನೀಡಿದ ಪ್ರಶಸ್ತಿ ಪತ್ರ.

(ಎಸ್. ಟಿ. ಬಾದಾಮಿ)
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

(ಡಾ॥ ಹಾ. ಮಾ. ನಾಯಕ)
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

(ಡಾ॥ ವಿ. ಕೃ. ಗೋಕಾಕ್)
ಅಧ್ಯಕ್ಷರು
ಕೇಂದ್ರ ಸಾಹಿತ್ಯ ಅಕಾಡೆಮಿ

ಬೆಂಗಳೂರು [illegible]

ಕರ್ನಾಟಕ ಸಾಹಿತ್ಯ ಅಕಾಡೆಮಿ ನೀಡಿದ ಪ್ರಶಸ್ತಿ

ಧರ್ಮಾರ್ಥವಾಗಿ ಒದಗಿಸಿದೆ. 'ಕಲಿಕೆ – ಗಳಿಕೆ'ಯ ಸೂತ್ರದಂತೆ ಹಾಸ್ಟೆಲಿನಲ್ಲಿ ಬಡಿಸಲು ಹೇಳಿದೆ. ಪಿ.ಯು.ಸಿ.ಯಲ್ಲಿ ರ್‍ಯಾಂಕ್ ಸಮೀಪದ ಅಂಕಗಳುಳ್ಳ ಆತನನ್ನು ಬಿಟ್ಟರೆ ಗಿಳಿ ತಪ್ಪಿಸಿಕೊಂಡು ಹೋದೀತೆಂದು ಇಲ್ಲೇ ಬಿ.ಎಸ್.ಸಿ. ಮಾಡು ಆ ಮೇಲೆ ಇಂಡಿಯನ್ ಇನ್‌ಸ್ಟಿಟ್ಯೂಟ್‌ಗೆ ಹೋಗು ಎಂದು ಸೂಚನೆ ಮಾಡಿದೆ. ಅದಕ್ಕೊಪ್ಪಿ ನಿಂತ. ಈ ವಿದ್ಯಾರ್ಥಿ (ಶ್ರೀ ವಿಠಲ್ ಮಡಿವಾಳ) ಬಿ.ಎಸ್.ಸಿ.ಯಲ್ಲಿ ದ್ವಿತೀಯ ರ್‍ಯಾಂಕ್ ಪಡೆದು ಪಾಸು ಮಾಡಿದ. ಇಂಡಿಯನ್ ಇನ್‌ಸ್ಟಿಟ್ಯೂಟ್‌ನಲ್ಲಿ ಇಲೆಕ್ಟ್ರಾನಿಕ್ಸ್ ಪಾಸು ಮಾಡಿದ. ಈ ಆರು ವರ್ಷಗಳಿಂದ ಫಿಲಿಪ್ಸ್‌ನಲ್ಲಿ ಕೆಲಸಕ್ಕಿದ್ದಾನೆ. ವಿಶ್ವ ಸಂಚಾರ ಕಾಲದಲ್ಲಿ ನನಗೆ ಭೆಟ್ಟಿಯಾಗುತ್ತಾನೆ. – ಒಮ್ಮೆ ಹಾಲಂಡಿನಲ್ಲಿ, ಒಮ್ಮೆ ಇಟಲಿಯಲ್ಲಿ. ಅವನ ಭಯ ಭಕ್ತಿಗೆ ಮಿತಿ ಇಲ್ಲ. ಪ್ರೇಮಕ್ಕೆ ಮಿತಿಯಿಲ್ಲ. ಆಯಿತ ಸಮಯದಲ್ಲಿ ಹಾಕಿದ ಒಂದು ಮಾತನ್ನು ಆತ ಕೇಳಿದ, ದುಡಿದ. ಜೀವನದ ಹೋರಾಟದಲ್ಲಿ ಗೆದ್ದ. ಎಲ್ಲಾ ಯಾತರಿಂದ? ಹೆಜ್ಜೆ ಹೆಜ್ಜೆಗೂ ಆತನಲ್ಲಿ ಧೈರ್ಯ ತುಂಬಿದ್ದರಿಂದ, ಯಾವುದೇ ಶಿಕ್ಷಣ ಒಂದು ಮಾನವೀಯ ಪ್ರತಿಕ್ರಿಯೆ, ಅಂತಃಕರಣ ಶುದ್ಧವಾಗಿರಬೇಕು. ಗುರುಶಿಷ್ಯರ ಅನ್ಯೋನ್ಯತೆ . ಪರಸ್ಪರ ವಿಶ್ವಾಸ ಅಗತ್ಯ. ಇದು ಬರೇ ಜ್ಞಾನವನ್ನು ಒಂದು ಹಿರಿತಲೆಯಿಂದ ಇನ್ನೊಂದು ಎಳೆಬುರುಡೆಗೆ ವರ್ಗಾಯಿಸುವ ಯಾಂತ್ರಿಕ ಕೆಲಸವಲ್ಲ; ಒಂದು ಮನುಷ್ಯ ಚೇತನ ಇನ್ನೊಂದರ ಅಗತ್ಯಗಳಿಗೆ ಸ್ಪಂದನ ತೋರಿಸುವ ಕುಸುರಿ ಕೆಲಸ.

ಇಂಥ ವಿದ್ಯಾರ್ಥಿ ಸಮುದಾಯವನ್ನು ಒಂದು ನಿಶ್ಚಿತ ಪ್ರಮಾಣದಲ್ಲಿ ಪಡೆದ ಕಾಲೇಜಿನ ಧನ್ಯತೆಗೆ ಸ್ನಾತಕೋತ್ತರ ಕೇಂದ್ರವೂ ಬಂದರೆ ಸುವರ್ಣಕ್ಕೆ ಸುಗಂಧವಿಟ್ಟಂತೆ ಆಗುತ್ತದೆಂದು ತಿಳಿದು ಈ ಬೇಡಿಕೆ ಸಲ್ಲಿಸಿದ್ದೆ. ಅದರ ಸೋಲಿನ ಬಳಿಕ ವಿಶ್ವವಿದ್ಯಾನಿಲಯವೇ ಸಮ್ಮಲ್ಲಿಸ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರಕ್ಕೆ ಎಂ. ಎ. ಅಲ್ಲ ಪಿ. ಹೆಚ್. ಡಿ. ಮಾಡಿಸಲು ಅನುಮತಿ ನೀಡಿತು. ಹಾಮಾನಾಯಕರ ಏಕವ್ಯಕ್ತಿ ಆಯೋಗ ಇದಕ್ಕಾಗಿ ಶಿಫಾರಸು ಮಾಡಿದ್ದರಿಂದ ಅನುಮತಿ ನೀಡಿತು. ಗೋವಿಂದ ಪೈ ಗ್ರಂಥಾಲಯ ಹಾಗೂ ಪರಿಸರದಲ್ಲಿದ್ದ ವಿದ್ವಾಂಸರು ಮಾರ್ಗದರ್ಶಕರಾಗಿರುವ ಈ ಕೇಂದ್ರ 1976ರಲ್ಲಿ ಕಾರ್ಯಪ್ರವೃತ್ತವಾಯಿತು. ಮಂಗಳೂರಿನಲ್ಲಿ ಸ್ಥಾಪಿತವಾದ ಸ್ನಾತಕೋತ್ತರ ಕೇಂದ್ರವು ಪೂರ್ಣರೂಪದ ವಿ. ವಿ. ನಿಲಯವಾಗಿ ರೂಪಿತವಾಗುವುದಕ್ಕೆ ಮುನ್ನವೂ ಬಳಿಕವೂ ಈ ಕೇಂದ್ರದಲ್ಲಿ ಎಲ್ಲ ಬಗೆಯ ವಿದ್ವತ್ ಕಾರ್ಯಗಳು ನಡೆಯುತ್ತಿವೆ. ಈ ಕೇಂದ್ರಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವೇ ಈಚೆಗೆ ಮನ್ನಣೆ ನೀಡಿದೆ. ಕಾಲೇಜು ನಡೆಸುವ ಯಕ್ಷಗಾನ, ತುಳು ಸಂಶೋಧನೆ. ನಿಘಂಟು ರಚನಾ ಕಾರ್ಯ. ಹಾಗೂ ಇತ್ತೀಚೆಗೆ ಫೋರ್ಡ್ ಪ್ರತಿಷ್ಠಾನದ ನೆರವಿನಿಂದ ನಡೆಯುತ್ತಿರುವ ಜಾನಪದ ಅನ್ವೇಷಣೆಗಳ ದೆಸೆಯಿಂದ ಕಾಲೇಜಿಗೆ ಒಂದು ಹೊಸ ಆಯಾಮ ಒದಗಿದೆ. ಯಾವ ಮಟ್ಟ ಎನ್ನುವುದು ಅಡಿಗೋಲನ್ನು ಅವಲಂಬಿಸಿಲ್ಲ.. ನಾವು ಬೆಳೆದಿರುವ ಮಟ್ಟಕ್ಕೆ ಬೆಲೆ. ತಲೆಪಟ್ಟಿಗಳು ಸೂಚನೆಗೆ ಮಾತ್ರ, ಪ್ರಯತ್ನ. ಸಿದ್ಧಿ. ಸಾಧನೆ. ಮುಖ್ಯವೆಂದು ನಂಬಿ ಈ ಕೆಲಸಗಳಲ್ಲಿ ನಾನು ನಿಮಗ್ನನಾಗಿದ್ದೇನೆ. ಯಾರಿಗೂ ಇದರಿಂದ ಆತಂಕವಿಲ್ಲ ಎಂಬ ಭಾವನೆಯಿಂದ ಕಾಲೇಜಿನಿಂದ ನಿವೃತ್ತನಾದ ಮೇಲೂ ಈ ಸ್ನಾತಕೋತ್ತರ ಮಟ್ಟದ ಭಾಷೆ ಹಾಗೂ ಸಾಂಸ್ಕೃತಿಕ ದುಡಿಮೆಯಲ್ಲಿ ಅರ್ಥ ಕಂಡಿದ್ದೇನೆ.

1980ರಲ್ಲಿ ಕೋಣಾಜೆಯ ಸ್ನಾತಕೋತ್ತರ ಕೇಂದ್ರವೇ ಮಂಗಳೂರು ವಿಶ್ವವಿದ್ಯಾನಿಲಯವಾಗಿ ರೂಪು ತಳೆದಾಗ ಈ ನಾಲ್ಕನೇ ವಿಶ್ವವಿದ್ಯಾನಿಲಯದ ಸಂಪರ್ಕ ಒದಗಿತು. ಇದು ನನ್ನ ಕಣ್ಮುಂದೆಯೇ ಅವತರಿಸಿದ ವಿಶ್ವವಿದ್ಯಾನಿಲಯವಾದ್ದರಿಂದ ಇದರ ಪೀಠಿಕಾ ಪ್ರಕರಣಕ್ಕೆ ನಾನು ಸಾಕ್ಷಿ ಹೇಳಬಹುದಾಗಿದೆ. ಸ್ನಾತಕೋತ್ತರ ಕೇಂದ್ರವೇ ಮುಂಬರುವ ವಿಶ್ವವಿದ್ಯಾನಿಲಯಕ್ಕೆ ಬೀಜ ರೂಪದಲ್ಲಿರುತ್ತದೆಂಬ ಭ್ರಮೆಯಿಂದ ಈಗೀಗ ವಿ.ವಿ. ನಿಲಯಗಳನ್ನು ಕೇಳುವ ಬದಲು – ಮೊದಲು ಸ್ನಾತಕೋತ್ತರ ಕೇಂದ್ರ ಕೇಳುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಬೆಳೆಯುತ್ತಿರುವಾಗ ಜಿಲ್ಲೆಗೊಂದರಂತೆ ವಿಶ್ವವಿದ್ಯಾನಿಲಯ ಹಂಚುವ ಪರಿಸ್ಥಿತಿ ಕೂಡ ಬರಬಹುದು. ವಿಶ್ವವಿದ್ಯಾನಿಲಯದ ಯೋಗ್ಯತೆಗೆ, ಪರಿಪೂರ್ಣತೆಗೆ ತಕ್ಕಂತೆ ಅದಕ್ಕೆ ಅರ್ಥಪುಷ್ಟಿ ಒದಗಿಸುವ ತಾಕತ್ತು ಸರ್ಕಾರಕ್ಕಿದೆಯೇ ಎಂಬುದಷ್ಟೇ ಮುಖ್ಯ ಮಾತು ಇಲ್ಲಿನದು. ಆದರೆ ಮಂಗಳೂರಿನ ಸ್ನಾತಕೋತ್ತರ ಕೇಂದ್ರದ ಸ್ಥಾಪನೆ ಅನ್ಯಕಾರಣಗಳಿಗಾಗಿ ಆಯಿತು ಎಂದೆನಷ್ಟೇ. ಆ ಬಳಿಕ ಮೈಸೂರು ವಿ.ವಿ. ನಿಲಯ ಒಂದು ರೀತಿಯಲ್ಲಿ ಅದಕ್ಕೆ ತಕ್ಕದಾದ ಪೋಷಣೆ ನೀಡಲು ಸಂಕೋಚ ಮಾಡಿತು. ಶ್ರೀಮಾಲಿಯವರೂ ಅವರ ಅನಂತರ ಕುಲಪತಿಗಳಾಗಿ ಬಂದ ಜವರೇಗೌಡರೂ ಸದಾಶಯವುಳ್ಳವರಾಗಿದ್ದರೂ ಕೇಂದ್ರವು ಆವಶ್ಯಕ ಸೌಲಭ್ಯಗಳಿಲ್ಲದೆ ಕೃಶವಾಗಿಯೇ ದಶಕಕ್ಕೂ ಮೇಲೆ ಉಳಿಯಿತು. ವಿಶ್ವವಿದ್ಯಾನಿಲಯ ಇನ್ನಷ್ಟು ಈ ಕೇಂದ್ರಕ್ಕೆ ಬೆಂಬಲ ನೀಡಬೇಕೆಂದು ಸೆನೆಟ್ ಸಭೆಯಲ್ಲಿ ನಾನು ವಾದಿಸುತ್ತಿದ್ದೆ.

ಸುಮಾರು 1977–78ರ ವೇಳೆಗೆ ಸರ್ಕಾರವೂ ಕೇಂದ್ರ ಅಭಿವೃದ್ಧಿಗೊಳ್ಳಬೇಕಾದರೆ ಅದನ್ನು ವಿಶ್ವ-ವಿದ್ಯಾನಿಲಯವಾಗಿ ಪರಿವರ್ತಿಸುವುದು ಒಂದೇ ಮಾರ್ಗವೆಂಬ ನಿರ್ಣಯಕ್ಕೆ ಬಂದು ಅದಕ್ಕಾಗಿ ಆರ್. ಪಿ. ರಾವ್ ಅವರ ಹಿರಿತನದಲ್ಲಿ ಸಮಿತಿ ನೇಮಕ ಮಾಡಿತು. ರಾವ್ ಅವರು ಸ್ಥಳ ತನಿಖೆಗೆ ಬಂದಾಗ ಕೇಂದ್ರದ ಕೊರತೆಗಳನ್ನು ಗಮನಿಸಿದರು. ಮಂಗಳೂರಿನಿಂದ 12–14 ಕಿ.ಮೀ. ದೂರದ ಗುಡ್ಡದಲ್ಲಿ; ಸುತ್ತು ಬಳಸಿನ ದಾರಿಯಿಂದಾಗಿ

ದುರ್ಗಮ ಪ್ರದೇಶದಂತಿದ್ದ ಸದರಿ ಸ್ಥಳದಲ್ಲಿ ವಿಜ್ಞಾನ ವಿಭಾಗ ಮಾತ್ರ ಕೆಲಸ ಮಾಡಲಿ. ವಾಣಿಜ್ಯ, ಇತಿಹಾಸ, ಸಾಹಿತ್ಯ ಇತ್ಯಾದಿ ಮಾನವಿಕ ವಿಷಯಗಳು ಜನ ಸಮ್ಮರ್ದವುಳ್ಳ ಮಂಗಳೂರಲ್ಲಿಯೇ ಸ್ಥಾಪನೆಗೊಳ್ಳಲಿ. ವಿ.ವಿ. ನಿಲಯ ಇಂದಿನ ಯುಗದಲ್ಲಿ ಋಷ್ಯಾಶ್ರಮವಾಗಲು ಸಾಧ್ಯವಿಲ್ಲ; ಜನರಿಗೂ ಅದಕ್ಕೂ ನಿತ್ಯ ಸಂಪರ್ಕ, ಶಾಶ್ವತ ಸಂವಾದ ಇರುವುದು ಅದರ ಆರೋಗ್ಯಕ್ಕೆ ಒಳ್ಳೆಯದು ಎಂದು ತೀರ್ಪು ಕೊಟ್ಟರು. ಮಂಗಳೂರಲ್ಲಿ ಮಿತಿಗೆ ಮೀರಿದ ಭೂಹಿಡುವಳಿಗಳು ಸರ್ಕಾರದ ವಶಕ್ಕೆ ಬಂದಿರುವುದರಿಂದ ಅಂಥ ಸಾಲ್ಯಾರು ತುಂಡುಗಳಲ್ಲಿ ಒಂದೆರಡನ್ನು ಆಯ್ದು ವಿಶ್ವವಿದ್ಯಾನಿಲಯದ ಕಚೇರಿ ಹಾಗೂ ಮಾನವಿಕ ವಿಭಾಗಗಳನ್ನು ಸ್ಥಾಪಿಸುವ ಸಲಹೆ ಮಾಡಿದರು, ಒಂದು ಉತ್ತಮ ಗ್ರಂಥಾಲಯ, ಆಕರ ವಾಚನಾಲಯವನ್ನು ವಿದ್ಯಾರ್ಥಿ ಸಮುದಾಯವೂ, ಹಳೆ ವಿದ್ಯಾರ್ಥಿ ಸಮುದಾಯವೂ, ಅನೇಕ ಸಾರ್ವಜನಿಕರೂ ಉಪಯೋಗಿಸುವಂತೆ ಸಿದ್ಧಗೊಳಿಸಬೇಕು ಎಂದು ಸಲಹೆ ಮಾಡಿದರು. ಈ ಸಮಿತಿಯ ಒಂದು ಹಂತದಲ್ಲಿ ಬಹುಶಃ ವರದಿ ತಯಾರಿಕೆಯ ಹಂತದಲ್ಲಿ ನಾನೂ ಸಹಕರಿಸಿದ್ದೇನೆಂದು ನೆನಪಾಗುತ್ತದೆ. ಗುಲ್ಬರ್ಗಾವೂ ನಮ್ಮ ಜತೆಗೇನೆ ವಿಶ್ವವಿದ್ಯಾನಿಲಯವಾಗಲಿರುವುದರಿಂದ ಅಲ್ಲಿನ ಪ್ರಗತಿ ಏನೆಂದು ತಿಳಿದುಕೊಳ್ಳಲು ಮೇ ತಿಂಗಳ ಬಿರುಬಿಸಿಲಿನಲ್ಲಿ ನಾನು ಅಲ್ಲಿಗೆ ಹೋಗಿದ್ದೂ ಬೆಂಗಳೂರಿನಲ್ಲಿ ವರದಿಯ ಕರಡನ್ನು ಮೈಸೂರಿನ ಮಾಜಿ ರಿಜಿಸ್ಟ್ರಾರ್ ರಾಮಚಂದ್ರನ್ ಅವರ ಹಿರಿತನದಲ್ಲಿ ತಯಾರಿಸಿ ಕೊಟ್ಟದ್ದೂ ಇದೆ. ಈ ವರದಿಯ ಸೂಚನೆಗಳು ಜಾರಿಗೆ ಬರುವ ಕಾಲಕ್ಕೆ ಸರ್ಕಾರ ಉರುಳಿತೋ ಹೊರಳಿತೋ ಏನೋ ಒಂದಾಗಿ ಅದರ ಸೂಚನೆಗಳನ್ನು ಮಾನ್ಯ ಮಾಡದೇ ತನ್ನದೇ ದಾರಿಯಲ್ಲಿ ಸರ್ಕಾರ ಮುಂದುವರಿಯಿತು. ಯುಜಿಸಿಗೆ ತಿಳಿಸದೆನೆ ಮಸೂದೆ ಮಂಡಿಸಿ ಮಂಗಳೂರು ಗುಲ್ಬರ್ಗ ವಿಶ್ವವಿದ್ಯಾನಿಲಯಗಳನ್ನು ಘೋಷಿಸಿತು. ನ್ಯಾಯವಾಗಿ ಬರತಕ್ಕ ಧನಸಹಾಯ ಆಯೋಗದ ನೆರವು ಕೆಲವರ್ಷ ಸಿಗಲು ಇದರಿಂದ ಆತಂಕವಾಯಿತು; ಆದರೆ ಈಗ 3 ವರ್ಷಗಳಿಂದ ಯುಜಿಸಿ ಮನ್ನಣೆ ದೊರಕಿ ಅನುದಾನವು ಲಭಿಸಲು ತೊಡಗಿದ ಮೇಲೆ ಕ್ಯಾಂಪಸ್ ಪ್ರಗತಿಪರವಾಗಿ ಸಾಗಿದೆ. ಆದರೂ ಅದರ ಸ್ಥಾನಿಕ ಅನನುಕೂಲತೆಯನ್ನು ಥಟ್ಕನೆ ನಿವಾರಿಸಲು ಸಾಧ್ಯವಿಲ್ಲದೆ ಹೋಗಿದೆ. ಅಧ್ಯಯನ ವಿಷಯಗಳ ವಿಸ್ತರಣೆ, ಹಾಸ್ಟೆಲು ಇತ್ಯಾದಿ ಸೌಕರ್ಯಗಳು ಇನ್ನಷ್ಟು ಹೆಚ್ಚಿದಲ್ಲಿ ಮಂಗಳೂರು ಒಂದು ಸುಂದರ ವಿಶ್ವವಿದ್ಯಾನಿಲಯವಾಗಿ ಅರಳಬಹುದು.

ಇಷ್ಟು ಹೊರನೋಟವಾದರೆ ಒಳಗಡೆ ಪ್ರಗತಿಪರ ದೃಷ್ಟಿಕೋನವುಳ್ಳ ಪ್ರಾಧ್ಯಾಪಕ ಮತ್ತು ವಿದ್ಯಾರ್ಥಿ ವೃಂದ ಸಮರಸವಾಗಿ, ಸಮಂಜಸವಾಗಿ ಕ್ರಿಯಾತಾತ್ಪರ್ಯವನ್ನು ತೋರಿಸಬೇಕಲ್ಲವೇ? ಅದೇಕೋ ಈ ವಿಷಯದಲ್ಲಿ ಮಂಗಳೂರು ಅದರ ನಿರ್ಮಾಪಕರ ನಿರೀಕ್ಷೆಯನ್ನು ಈಡೇರಿಸಲು ಹಿಂದೇಟು ಹೊಡೆಯುತ್ತಿದೆ. ಐತಿಹಾಸಿಕವಾಗಿ ಬೌದ್ಧಿಕ ಪ್ರತಿಭೆ ಮತ್ತು ಪ್ರಗತಿಗೆ ಹೆಸರಾಂತ ಈ ಭೂಭಾಗದಲ್ಲಿ ಇದೀಗ ಒಂದು ಕನಿಷ್ಠಾವಧಿ ಬದಲಾವಣೆಗೂ ವಿಘ್ನಗಳು ಮೂಡಿ ಬರುತ್ತಿವೆ. ಅಧ್ಯಯನದಲ್ಲಿ ನಿಶ್ಚಿತವಾಗಿ ಉತ್ತಮಿಕೆಯನ್ನೂ, ಪರಿಷ್ಕಾರವನ್ನೂ ಸಾಧಿಸುವ ಉದ್ದೇಶದಿಂದ ರೂಪಿಸಲ್ಪಡುವ ಇಂಗ್ಲಿಷ್ ಸಿಲೆಬಸ್ ಸುಧಾರಣೆ ಹಾಗೂ ಕಾಲೇಜುಗಳಿಗೆ ಸ್ವಾಯತ್ತತೆಯ ವಿಷಯದಲ್ಲಿ ವಿರಚಿಸಿದ ರಾಷ್ಟ್ರೀಯ ನೀತಿಗೂ ವಿಶ್ವವಿದ್ಯಾನಿಲಯದಲ್ಲಿ ಇಂಬಿಲ್ಲದಾಗಿದೆ. ವಿದ್ಯಾರ್ಥಿಗಳಾದರೂ ತಮ್ಮ ಅಭ್ಯುದಯ ಮಾರ್ಗಕ್ಕೆ ತಾವೇ ಆತಂಕವುಂಟು ಮಾಡುವ ಹೆಜ್ಜೆಗಳನ್ನು ಕೈಗೊಳ್ಳುತ್ತಿದ್ದಾರೆ. ಬದಲಾವಣೆಯನ್ನು ಸೂಕ್ತ ಕಾಲದಲ್ಲಿ ತಾರದೆ ಹೋದಲ್ಲಿ ನಾವು ಹಿಂದುಳಿಯಬೇಕಾಗುತ್ತದೆ. ಮಂಗಳೂರು ಇತರ ವಿಶ್ವವಿದ್ಯಾ-ನಿಲಯಗಳಿಗೆ ಮಾದರಿಯಾದೀತೆಂದು ಜಗತ್ತು ನಿರೀಕ್ಷಿಸುತ್ತಿರುವಾಗ ಪ್ರಗತಿ ವಿಮುಖಿ ಧೋರಣೆಗಳನ್ನು ವಿ.ವಿ. ನಿಲಯ ಪುರಸ್ಕರಿಸಬಾರದು. ಅಜ್ಞಾನ ಜನ್ಯವಾದ ಆತಂಕಗಳನ್ನು ಸಂವಾದ ಮೂಲಕ ಪರಿಹರಿಸಿಕೊಳ್ಳುವ ಅರ್ಥಪೂರ್ಣ ವೇದಿಕೆಯೊಂದನ್ನು ಸಿದ್ಧಗೊಳಿಸಬೇಕು. ಹೇಗೆ ವಿಶ್ವವಿದ್ಯಾನಿಲಯವಿಲ್ಲದಿದ್ದಾಗ ಇಲ್ಲಿನ ಕಾಲೇಜುಗಳು ಜಗತ್ತಿಗೆ ಉತ್ಕೃಷ್ಟತೆ ಮತ್ತು ಗುಣಶ್ರೇಷ್ಠತೆಯ ಮಾದರಿಗಳನ್ನು ತೋರಿಸಿಕೊಟ್ಟವೋ ಅದಕ್ಕೂ ಅತಿಶಯವಾಗಿ ವಿ.ವಿ. ನಿಲಯ ಹಂತದಲ್ಲಿ ಶೋಭಿಸಲು ಮಂಗಳೂರಿಗೆ ಶಕ್ಯವಾಗಬೇಕು. ನಮ್ಮ ಜಿಲ್ಲೆಯ ಜನ ಪ್ರಯತ್ನ ಮಾಡಿ ಸಾಧಿಸದಿದ್ದುದು ಯಾವುದು ?

ಮದರಾಸು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಜನೆಯನ್ನೂ ಅಧ್ಯಾಪನವನ್ನೂ ಮಾಡಿದ್ದೇನೆ. ಹಾಗೆಯೇ ಕರ್ನಾಟಕ-ಮೈಸೂರು ವಿ.ವಿ. ನಿಲಯಗಳ ಆಶ್ರಯದಲ್ಲಿ ನನ್ನ ಪಾಲಿನ ವಿದ್ಯಾದಾನ ಕಾರ್ಯ ಮಾಡಿದ್ದೇನೆ. ಮಂಗಳೂರಲ್ಲಿಯೂ ಕಾರ್ಯತತ್ಪರನಾಗಿದ್ದೇನೆ. ಹೀಗೆ ನನಗೆ ನಾಲ್ಕು ವಿಶ್ವವಿದ್ಯಾನಿಲಯಗಳ ಸಂಪರ್ಕ ಉಂಟಾಗಿದೆ. ಜ್ಞಾನದ ಹಂಬಲ ಇನ್ನೂ ತೀರಿಲ್ಲ. ಸ್ವಾಧ್ಯಾಯವನ್ನು ನಾನಿನ್ನೂ ಬಿಟ್ಟುಗೊಟ್ಟಿಲ್ಲ. ಇಂದಿಗೂ ನಮ್ಮ ಕಾಲೇಜು ಗ್ರಂಥಾಲಯ ಮೈಸೂರಿನ ಕಕ್ಷೆಯಲ್ಲಿದ್ದಾಗಲಂತೂ ಮಂಗಳೂರಿನಲ್ಲೂ ಅಂತೆಯೇ ಕಾಲೇಜು ಮಟ್ಟದಲ್ಲಿ ಬಲು ದೊಡ್ಡದು. ಮಂಗಳೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಆಗತ್ಯ ಬಿದ್ದ ಕಾಲಕ್ಕೆ ನಮ್ಮಲ್ಲಿಂದ ಗ್ರಂಥಗಳನ್ನು ಎರಡು ವರ್ಷಗಳಿಗೆ ಎರವಲು ಕೊಡುವಷ್ಟು ಸಮೃದ್ಧವಾಗಿ ನಮ್ಮ ಲೈಬ್ರೆರಿಯನ್ನು ನಾವು ಬೆಳೆಸಿ ನಿಲ್ಲಿಸಿದ್ದೇವೆ. ಜ್ಞಾನ ಸಂಗ್ರಹದ ಕಾರ್ಯಕ್ಕಾಗಿ ಗೋವಿಂದ ಪೈ ಸ್ಮಾರಕವಾಗಿ ನಾವು ಅಣಿಗೊಳಿಸಿದ ಸಂಶೋಧನ ಕೇಂದ್ರದ ಅಳಿಲಸೇವೆ ನಿರಂತರವಾಗಿ ನಡೆದಿದ್ದುದನ್ನು ಗಮನಿಸಿ ಯಾವುದೇ ಆತಂಕವಿಲ್ಲದ ಸಂತೋಷದಿಂದ ಮಂಗಳೂರು ತನ್ನ

ಮನ್ನಣೆಯ ಅಂಕಿತವನ್ನು ಈ ಕೇಂದ್ರಕ್ಕೆ ಸಲ್ಲಿಸಿದೆ. ಇಲ್ಲಿ ತುಳು ಯೋಜನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ. ಉಪಾಧ್ಯಾಯ ದಂಪತಿಗಳ ಮಾರ್ಗದರ್ಶನದಲ್ಲಿ 7 ಮಂದಿ ಅಭ್ಯರ್ಥಿಗಳು ಪಿ.ಹೆಚ್.ಡಿ.ಗಾಗಿ ದಾಖಲು ಮಾಡಿಕೊಂಡಿದ್ದಾರೆ. ಯಾವುದೇ ಸಂಸ್ಥೆ ತನ್ನ ಉಪಕಾರವನ್ನು ಆಶ್ರಿತರಿಗೆ ಎಷ್ಟು ಸಣ್ಣ ಪ್ರಮಾಣದಲ್ಲಿ ನೀಡಿದರೂ ದೇಶದ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಅದಕ್ಕೊಂದು ಬೆಲೆ ಇರುತ್ತದೆ. ವಿಶ್ವವಿದ್ಯಾನಿಲಯದ ಕರ್ತವ್ಯಗಳಿಗೆ ಪೂರಕವಾಗಿ ನಮ್ಮದೂ ಒಂದು ಅಳಿಲಸೇವೆ – ಜ್ಞಾನ ಮುಖಿ ವಾದದ್ದು, ಪರೈಕಪ್ರಯೋಜನ ಉಳ್ಳದ್ದು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದ್ದು. ಮುಖ್ಯವಾಗಿ ಗೋವಿಂದ ಪೈ ಗ್ರಂಥಾಲಯದ ಉಪಯೋಗವನ್ನು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆ ನಡೆಸುವ ಅಭ್ಯರ್ಥಿಗಳು ಪಡೆಯುತ್ತಿದ್ದಾರೆನ್ನುವುದು ನನಗೆ ಸಾರ್ಥಕವಾಗಿ ಕಂಡಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕ್ಷೇತ್ರದಲ್ಲಿ ವರ್ಷ ವರ್ಷ ಉದಯಿಸುವ ಹೊಸ ಕಾಲೇಜುಗಳಿಗೆ ಮನ್ನಣೆ ನೀಡುವ ತನಿಖಾ ಸಮಿತಿ – ಎಫಿಲಿಯೇಶನ್ ಕಮಿಶನನಲ್ಲಿ – ನನ್ನನ್ನು ಸದಸ್ಯನಾಗಿ ವಾರ್ಸಿಟಿ ಆರಿಸುತ್ತಿತ್ತು. ಶಿವಮೊಗ್ಗ, ಚಿತ್ರದುರ್ಗ. ಬಳ್ಳಾರಿ. ಕೋಲಾರ, ಕೊಡಗು ಇತ್ಯಾದಿ ಅನೇಕ ಜಿಲ್ಲೆಗಳಲ್ಲಿ ಉತ್ಸಾಹೀ ಕಾರ್ಯಕರ್ತರು ಕಾಲೇಜು ಸ್ಥಾಪನೆಗೆ ಮುಂದೆ ಬಂದರೆ ವಿ.ವಿ. ನಿಲಯ ತನ್ನ ತನಿಖಾ ತಂಡವನ್ನು ಕಳಿಸುತ್ತದೆ. 4-5 ಸದಸ್ಯರುಳ್ಳ ಈ ತಂಡದಲ್ಲಿ ನನ್ನ ಜತೆಗೆ ದೇಜಗೌ. ಡಾ. ತೋಟಪ್ಪ, ವಿ.ಎಂ. ಇನಾಂದಾರ್ ಸಾಮಾನ್ಯವಾಗಿ ಇರುತ್ತಿದ್ದರು. ವರ್ಷದಲ್ಲಿ ವಾರ ಎರಡುವಾರ ಪರಜಿಲ್ಲೆಗಳಲ್ಲಿ ಪ್ರಯಾಣ. ಈ ಮಿತ್ರರ ಜತೆ ಸರಸ ಸಂವಾದ. ಪ್ರತಿ ಕಾಲೇಜು ಮಂಡಳಿಯವರಿಂದಲೂ, ಹೂಹಾರ, ಸ್ವಾಗತ, ಉಪಚಾರ, ಸ್ಥಳತನಿಖೆ, ಸ್ಥಳದಲ್ಲೇ ವರದಿ ರಚನೆ.

ದಕ್ಷಿಣ ಕನ್ನಡ ಜಿಲ್ಲೆಯ ಕಲ್ಯಾಣಪುರದ ಮಿಲಾಗ್ರಿಸ್, ಸುರತ್ಕಲ್ಲಿನ ಗೋವಿಂದದಾಸ್, ಪುತ್ತೂರಿನ ವಿವೇಕಾನಂದ ಹಾಗೂ ಧರ್ಮಸ್ಥಳದ ಮಂಜುನಾಥೇಶ್ವರ ಕಾಲೇಜಿನ ಸ್ಥಾಪನೆಯ ಮುನ್ನ ತನಿಖೆಗೆ ಹೋದವರು ನಾವೇ. ಬೇಡಿಕೆ ಅಧಿಕವಾದಂತೆ ವಾರ್ಸಿಟಿ ಅಫಿಲಿಯೇಶನ್ ಶುಲ್ಕದ ಜತೆಗೆ ನಿರಖು ಠೇವಣಾತಿಯನ್ನೂ ಕಾಲೇಜು ನಿರ್ಮಾಪಕರಿಗೆ ಹೊರಿಸಬೇಕಾಯಿತು. ಠೇವಣಾತಿ ರಶೀದಿಯನ್ನು ತನಿಖೆಯ ಸಂದರ್ಭದಲ್ಲಿಯೇ ತೋರಿಸಬೇಕೆಂಬ ನಿಯಮವಿತ್ತು; ಅದನ್ನು ಕಟ್ಟುನಿಟ್ಟಾಗಿ ಪಾಲಿಸಿದವರೂ ಇದ್ದರು, ತತ್ಕಾಲಕ್ಕೆ ಕಡ ತಂದು ಪೂರೈಸಿದವರೂ ಇದ್ದರು. ಒಟ್ಟಿನಲ್ಲಿ 1960ರಿಂದ ಮುಂದಿನ 15 ವರ್ಷಗಳಲ್ಲಿ ಕಾಲೇಜು ಶಿಕ್ಷಣದ ಹರವು ಬಹಳ ವಿಸ್ತಾರವಾಯಿತು. ಹಳ್ಳಿಪಳ್ಳಿಗಳಿಂದ ಬೇಡಿಕೆ ಬರಲಾರಂಭಿಸಿತು. ಕಟ್ಟಡ ಮುಂದೆ ಕಟ್ಟಿಕೊಳ್ಳುತ್ತೇವೆ, ಈಗ ಈ ಹೈಸ್ಕೂಲಲ್ಲಿರುತ್ತೇವೆ ಎಂದರೂ ನಾವು ಸಮ್ಮತಿಸುತ್ತಿದ್ದೆವು. ತೀರ್ಥಹಳ್ಳಿಯಲ್ಲಿ ಹಳೆಕಾಲದ ಗಂಧದ ಕೊಟ್ಟಿಗೆಯನ್ನು ಕಾಲೇಜಿನ ಕ್ಲಾಸ್‌ರೂಮ್ ಎಂದು ತೋರಿಸಿದರು. ಈ ಥಂಡಿಯಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡಿದರೆ ಅವರ ಆರೋಗ್ಯ? ಎಂದು ಪ್ರಶ್ನೆ ಕೇಳಿದರೆ ನಮ್ಮಲ್ಲಿ ಮಳೆಗಾಲದಲ್ಲಿ ಹೊರಗೂ ಹೀಗೆಯೇ ಇರುತ್ತೆ, ಎಲ್ಲರಿಗೂ ರೂಢಿಯಾದ ವಿಷಯ ಎಂದು ಮರುನುಡಿದರು. ಮುಂದಿನ ವರ್ಷವೇ ಕಟ್ಟಡ ಮಾಡಿ ತೋರಿಸುತ್ತೇವೆಂದವರು 5 ವರ್ಷ ಆದರೂ, ವಿದ್ಯಾರ್ಥಿ ಸಂಖ್ಯೆ ಹೆಚ್ಚಿದರೂ ಅಲ್ಲೇ ಇರುತ್ತಿದ್ದುದುಂಟು. ಜನನಿಬಿಡವಾದ ಒಂದು ಕೇರಿಯ ಒಂದು ಮನೆಯನ್ನೇ ಹುಡುಗಿಯರ ಕಾಲೇಜಿಗಾಗಿ ಒಬ್ಬ ನಿರ್ಮಾಪಕ ತೋರಿಸಿದರು. ಕೋಲಾರ ಜಿಲ್ಲೆಯ ಚಿಂತಾಮಣಿಯಲ್ಲಿ ಹುಲ್ಲು ಮಾಡಿನ ಕೊಠಡಿಗಳಲ್ಲಿ ಕಾಲೇಜು ನಡೆಸಬೇಕಾಗಿತ್ತು. ಸರ್ಕಾರಿ ಕಾಲೇಜುಗಳೂ ಕೆಲವು ಇದೇ ದುಃಸ್ಥಿತಿಯಲ್ಲಿದ್ದುವು. ಒಂದೂರಿನಲ್ಲಿ ಊರಿನ ಹೊರಗೆ ಸರ್ಕಾರದ ಹೊಸ ಕಾಲೇಜು ಕಟ್ಟಡ ನಿರ್ಮಾಣವಾದರೂ ಉಳಿದ ಪರಿಕರಗಳಿಲ್ಲದೆ ಕಾಲೇಜು ಹಳೇಹೆಂಚಿನ ಮನೆಯಲ್ಲೇ ನಡೆಯುತ್ತಿತ್ತು. ಹೊಸ ಕಟ್ಟಡದ ಕಿಟಕಿಯ ಶಲಾಕೆಗಳನ್ನು ಊರ ಅಭಿಮಾನಿಗಳು ಆಗಲೇ ಕಿತ್ತುಕೊಂಡು ಹೋಗಿದ್ದರು; ಎಫಿಲಿಯೇಶನ್ ಸಮಿತಿ ಇವನ್ನೆಲ್ಲ ನೋಡಿಯೂ ಹಿಂದುಳಿದ ಪ್ರದೇಶಗಳ ಜನರ ಅಭಿವೃದ್ಧಿಯ ದೃಷ್ಟಿಯಿಂದ ಕೇಳಿದಲ್ಲಿ ಕಾಲೇಜು ಸೃಷ್ಟನೆಗೆ ಶಿಫಾರಸು ಮಾಡುತ್ತಿತ್ತು. ತಪ್ಪೇನೂ ಇರಲಿಲ್ಲ–ದಾರಿದ್ರ್ಯ ಈ ದೇಶದ ವಸ್ತುಸ್ಥಿತಿ. ಬೆಳವಣಿಗೆ ದಾರಿದ್ರ್ಯದ ನಡುವೆಯೇ ಸಂಪನ್ನಗೊಳ್ಳಬೇಕಾದರೆ ಮೊದಮೊದಲು ಉದಾರ ನೀತಿ ಅವಶ್ಯವೆಂಬುದು ದೇಜಗೌ ಅವರ ಇಂಗಿತ. ನನಗೂ ನನ್ನದೇ ಈಗ ಬೃಹತ್ ವಿಸ್ತಾರವುಳ್ಳ ಕಾಲೇಜು ಒಂದು ಪ್ರಾಥಮಿಕ ಶಾಲೆಯಲ್ಲಿ ಹುಟ್ಟಿದ್ದೆಂಬುದನ್ನು ಮರೆಯಲಾಗುತ್ತಿರಲಿಲ್ಲ. ಆದ್ದರಿಂದ ಯಾವ ಊರಿಗೂ ನಮ್ಮಿಂದ ತೊಂದರೆ ಆಗಲಿಲ್ಲ. ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ಈ ಕಾಲೇಜುಗಳು ಸ್ವಂತ ಕಟ್ಟಡವನ್ನು, ಸಲಕರಣೆಗಳನ್ನು ಪಡೆದು ಸಾಕಷ್ಟು ವಿದ್ಯಾರ್ಥಿ ಸಂಖ್ಯೆಯನ್ನು ಗಳಿಸಿ ಜನೋಪಕಾರ ಸಾಧಿಸಿದ್ದನ್ನು ನೋಡಿದರೆ ನಿಷ್ಠುರ ನೀತಿಗಿಂತ ಔದಾರ್ಯ ಮತ್ತು ಮಾನವೀಯತೆಗಳೇ ಅಭಿವೃದ್ಧಿ ಹೇತುಗಳಾಗುತ್ತವೆಂಬಂಶ ಸ್ಫುಟವಾಯಿತು.

ದಾರಿಗುಂಟ ಹೋಗುವಾಗ ಹೊಸ ಕೋರ್ಸ್‌ಗಳಿಗಾಗಿ ಅರ್ಜಿ ಸಲ್ಲಿಸಿದ ಸರ್ಕಾರಿ ಕಾಲೇಜುಗಳನ್ನೂ ನಾವು ಸಂದರ್ಶಿಸಬೇಕಾಗುತ್ತಿತ್ತು. ಅಲ್ಲಿನ ಪರಿಸ್ಥಿತಿ ಖಾಸಗೀ ಕಾಲೇಜುಗಳಿಗಿಂತ ತೀರ ಭಿನ್ನ. ಖಾಸಗೀ ಕಾಲೇಜುಗಳಲ್ಲಿ ಸಮಿತಿಯ 'ಘನತೆವೆತ್ತ' ಸದಸ್ಯರಿಗಾಗಿ ಪ್ರಿನ್ಸಿಪಾಲರು ಊರವರು ಕಾಯುತ್ತಿದ್ದರೆ ಸರ್ಕಾರಿ ಕಾಲೇಜು ಕೇಂದ್ರಗಳಲ್ಲಿ ನಾವು ಅವರಿಗಾಗಿ ಕಾಯಬೇಕಾಗಿತ್ತು. 'ಖಾಸಗಿ' ಮಟ್ಟದ ಉಟೋಪಚಾರವೂ ಇಲ್ಲಿ ಸಾಧ್ಯವಿರಲಿಲ್ಲ.

ಗ್ಲೂಕೋಸ್ ಬಿಸ್ಕಿಟ್ ಎರಡು ಮತ್ತು ಕಾಫಿ – ಎಲ್ಲ ಜಿಲ್ಲೆಗಳ ಸರ್ಕಾರಿ ಕಾಲೇಜುಗಳಲ್ಲೂ ಒಂದೇ ರೀತಿಯಾದ ಉಪಚಾರ. ಕಾರಣ : ಈ ಖರ್ಚು ಪ್ರಿನ್ಸಿಪಾಲರ ಅಲ್ಪ ವೇತನದಿಂದಲೇ ಸಲ್ಲಬೇಕು; ಅದಕ್ಕೆ ಸರ್ಕಾರಿ ಮಂಜೂರಾತಿ ಇರಲಿಲ್ಲ. ಪ್ರಿನ್ಸಿಪಾಲರಿಗೆ ಸಮಿತಿ ಸದಸ್ಯರ ಭಯವೇ ಇರಲಿಲ್ಲ. 'ಬರೀರಿ ಸ್ವಾಮಿ, ಎಲ್ಲಾ ಬರೀರಿ. ನನಗೆ ಬರೆದು ಸಾಕಾಯಿತು' ಎಂದು ಉತ್ಸಾಹದಿಂದ ತಮ್ಮಲ್ಲಿನ ಲೋಪದೋಷಗಳನ್ನು ಸಮಿತಿ ಎತ್ತಿತೋರಿಸುವಂಥ ವರದಿ ತಯಾರಿಸಲು ಪ್ರಚೋದಿಸುತ್ತಿದ್ದರು. ಖಾಸಗೀ ಕಾಲೇಜಿನ ಪ್ರಿನ್ಸಿಪಾಲರು ಯಾವುದನ್ನು ಮುಚ್ಚಿಡಲು ಕಾತರರಾಗಿರುತ್ತಿದ್ದರೋ ಅಂಥವನ್ನು ಬಿಚ್ಚಿ ತೋರಿಸಲು ಪ್ರಿನ್ಸಿಪಾಲರೇ ಸಲಹೆ ಕೊಡುತ್ತಿದ್ದರು. ಅವರ ಅಸಹಾಯ ಸ್ಥಿತಿಯಲ್ಲಿ ನಮ್ಮ ವರದಿಯನ್ನು ಕಂಡ ಮೇಲಾದರೂ ಸರ್ಕಾರ ಕಣ್ತೆರೆದು ಸಲಕರಣೆ, ಗ್ರಂಥಾಲಯ, ಸೇವಾ ಸೌಕರ್ಯ ಮುಂತಾದುವನ್ನು ಕೊಡಬಹುದೆಂಬ ಆಸೆ ತುಂಬಿರುತ್ತಿತ್ತು.

ತುಮಕೂರಿನಲ್ಲಿ ಬಹುಕಾಲ ಸರ್ಕಾರಿ ಕಾಲೇಜಿನ ಹೊರತು ಬೇರೆ ಕಾಲೇಜಿರಲಿಲ್ಲ. ಆದ್ದರಿಂದ ಅದರ ಸಂಖ್ಯೆ ಸಾವಿರ, ಎರಡು ಸಾವಿರ, ಮೂರು ಸಾವಿರ ಎಂದು ಏರುತ್ತಲೇ ಹೋಯಿತು. ಕಟ್ಟಡ ವಿಸ್ತರಿಸಿದರೂ ಸಾಲದಿದ್ದಾಗ ವಿಜ್ಞಾನ ಮತ್ತು ಮಾನವಿಕ ವಿಭಾಗಗಳ ವಿಭಜನೆ ಆಯಿತು. ಹಾಗಾದ ಮೇಲೂ ಮೊದಲೂ ವಿದ್ಯಾರ್ಥಿ ಸೌಕರ್ಯ ತತ್ಸಮಾನ ಖಾಸಗೀ ಕಾಲೇಜುಗಳ ಮಟ್ಟಕ್ಕೆ – ಅದರಲ್ಲಿ ದಕ್ಷಿಣಕನ್ನಡದ ಮಟ್ಟಕ್ಕೆ ಬರುತ್ತಿರಲಿಲ್ಲ. ವಿದ್ಯಾರ್ಥಿಗಳ ವಿದ್ಯಾಸಕ್ತಿ ಮಾತ್ರ ಚೆನ್ನಾಗಿಯೇ ಇತ್ತು. ಪಾಠ ಮಾಡಲು ಬಲ್ಲ ಅಧ್ಯಾಪಕನ ಮೇಲೆ ಭಯಭಕ್ತಿ ನಮ್ಮಲ್ಲಿಗಿಂತಲೂ ಹೆಚ್ಚು, ವೇದಿಕೆಯ ಮೇಲೋ, ಕಿಟಕಿಯ ದಂಡೆಯಲ್ಲೋ ಕೂತು ಆಸಕ್ತಿಯಿಂದ ಆಲಿಸುವ ವಿದ್ಯಾರ್ಥಿಗಳನ್ನು ನಾನು ಅಂಥ ಸೌಕರ್ಯ ಕಮ್ಮಿ ಇರುವ ಕಾಲೇಜುಗಳಲ್ಲೂ ಕಂಡಿದ್ದೇನೆ. ಸೌಕರ್ಯ – ಕನಿಷ್ಠ ಮಟ್ಟದ್ದು – ಇರಬೇಕು ನಿಜ, ಆದರೆ ಅದೇ ಶಿಕ್ಷಣದ ಸರ್ವಸ್ವವಲ್ಲ.

ಜಿಲ್ಲೆಗೊಂದು ಕಾಲೇಜು – ಅದೂ ಇಂಟರ್ಮೀಡಿಯೇಟ್ ಕಾಲೇಜು – ಇರುತ್ತಿದ್ದ ಕಾಲ ಹೋಗಿ, ಹಳ್ಳಿಗೊಂದು ಕಾಲೇಜು ಹುಟ್ಟುವ ಕಾಲ ಮೂಡಿದೆ. ಜಿಲ್ಲೆಗೊಂದು ಅಥವಾ ನಾಲ್ಕು ಜಿಲ್ಲೆಗಳಿಗೊಂದು ವಿ.ವಿ. ನಿಲಯವೇ ಸ್ಥಾಪನೆಯಾಗುತ್ತಿದೆ. ಜನಸಂಖ್ಯಾಸ್ಫೋಟದ ಸಕಲ ದುರ್ಲಕ್ಷಣಗಳೂ ಕಾಲೇಜು ರಂಗದಲ್ಲಿ ಪಸರಿಸುವುದು ಸಹಜ. ವಿದ್ಯಾರ್ಥಿಗಳ ಆಸಕ್ತಿಯನ್ನು ಅಳೆಯದೆ ಡಿಗ್ರಿದಾನ ಮಾಡುವ ವಿ.ವಿ. ಮಹಾಯಜ್ಞಕ್ಕೂ ಸಾಮಾಜಿಕ ಆರ್ಥಿಕ ಸ್ಥಿತಿಗತಿಗೂ ಸಂಬಂಧವೇ ಕಡಿದು ಹೋಗಿದೆ. ಎಂದಿನವರೆಗೆ ಡಿಗ್ರಿ ಉಳ್ಳವನಿಗೆ – ನೂರರಲ್ಲೊಬ್ಬನಿಗೇ ಆದರೂ – ಇಲ್ಲದವನಿಗಿಂತ ಹೆಚ್ಚು ವರಮಾನ ಬರುವ ಸಾಧ್ಯತೆ ಇದೆಯೋ, ಎಂದಿನವರೆಗೆ ಡಿಗ್ರಿ ಗೌರವದ ಸಂಕೇತವಾಗಿರುತ್ತದೆಯೋ, ಹೆಣ್ಮಕ್ಕಳಿಗೆ ಮದುವೆಯ ಕನಿಷ್ಠ ಶರತ್ತಾಗಿರುತ್ತದೆಯೋ – ಅಂದಿನವರೆಗೆ ಡಿಗ್ರಿ ಎಂಬ ಅಲಂಕಾರಕ್ಕಾಗಿ ಸಮಾಜ ಹಾತೊರೆಯುತ್ತದೆ. ಸಾಮಾಜಿಕ ಸ್ಥಿತ್ಯಂತರದ ಯುಗದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕಾಲೇಜುಗಳು ತಲೆ ಎತ್ತಲೇಬೇಕು. ಹಾಗೆ ಗ್ರಾಮಾಂತರ ಅಭಿವೃದ್ಧಿ ಕಾರಕಗಳಾದ ಕೆಲ ಕಾಲೇಜುಗಳು ಜನ್ಮ ತಳೆಯಲು ನಮ್ಮ ತನಿಖಾವರದಿ ನೆರವಾಗುವುದು ಖಂಡಿತ.

ನನಗೆ ಮೈಸೂರು ವಿ.ವಿ. ನಿಲಯದಲ್ಲಿ ಅತ್ಯಂತ ಶೀತಲವೂ ಹಿತಕರವೂ ಆದ ಅನುಭವವನ್ನು ಕೊಟ್ಟ ವಿಷಯಗಳು ಎರಡು : ಒಂದು ಪ್ರಸಾರಾಂಗದ ಸದಸ್ಯತ್ವ, ಎರಡನೆಯದು ಇಂಗ್ಲಿಷ್ ಕನ್ನಡ ನಿಘಂಟು ಸಮಿತಿಯ ಸದಸ್ಯತ್ವ. ಎರಡು ತಿಂಗಳಿಗೊಮ್ಮೆ ನಡೆಯುತ್ತಿದ್ದ ನಿಘಂಟು ಸಮಿತಿಯಲ್ಲಿ ಕಾರಂತರೂ ಸದಸ್ಯರು. ಎರಡು ದಿನಗಳ ಸಭೆ ಈಗ ಜಾನಪದ ವಸ್ತು ಸಂಗ್ರಹಾಲಯ ಇರುವ ಅರಮನೆಯಲ್ಲಿ ನಡೆಯುತ್ತಿತ್ತು – ಬೇಸರ ಬರುವ ವೇಳೆ ಕಾರಂತರ ಚಟಾಕಿಗಳಿರುತ್ತಿದ್ದವು . ನಾನೋ ಬೇಸರ ಬಂದಾಗ ಅರಮನೆಗೆ ಒಂದು ಸುತ್ತು ಬಂದು ಸಾಕಷ್ಟು ಗಾಳಿ ತಿಂದು ಒಳ ಸೇರುವವನು. ಪ್ರಸಾರಾಂಗದ ಸಭೆಗೆ ಕುವೆಂಪು ಅವರೇ ಅಧ್ಯಕ್ಷರು – ಬಹುಶಃ ಈಗಲೂ ವಿಶ್ವವಿದ್ಯಾನಿಲಯದ ಸರ್ವ ಸಂಪರ್ಕಗಳನ್ನು ಕಡಿದುಕೊಂಡರೂ ಇದೊಂದನ್ನು ಕುವೆಂಪು ಇರಿಸಿಕೊಂಡಿರುವರೇನೋ. ಜ್ಞಾನದ ಗಂಗೋತ್ರಿ ಶ್ರೀಸಾಮಾನ್ಯನ ಕಡೆಗೆ ಹರಿಯುವಂತೆ ಮಾಡುವ ಪ್ರಸಾರಾಂಗದ ಪ್ರಕಟನೆಗಳ ಮೇಲೆ ಕುವೆಂಪು ಅವರಿಗೆ ಅಪಾರ ಅಭಿಮಾನ, ಆಸಕ್ತಿ. ಇಲ್ಲಿನ ಎರಡಾಣೆಯ ಪ್ರಚಾರೋಪನ್ಯಾಸಮಾಲೆ ಹಾಗೂ ಹನ್ನೆರಡಾಣೆಯ ಕಾವ್ಯಸಂಗ್ರಹಗಳು, ವಚನಧರ್ಮಸಾರ. ಸಂಸ್ಕೃತ ನಾಟಕ ಮುಂತಾದ ಅಪೂರ್ವ ಸಂಕಲನಗಳ ಗುಣಮಟ್ಟ, ಆಲೋಚನಾಮಟ್ಟವನ್ನೆಣಿಸುವಾಗ ಹಿಂದಿನ ಕಾಲದ ವಿದ್ವಾಂಸರ ಮೇಲೆ ಗೌರವ ಸ್ಫುಟಿಯುತ್ತದೆ. ಕಾದಂಬರೀ ಸಂಗ್ರಹ, ಪಂಪ ರಾಮಾಯಣ ಸಂಗ್ರಹ, ಮುಂತಾದವು ಮಾದರಿ ಸಂಗ್ರಹಗಳಾಗಿ ಯಾವ ಕಾಲಕ್ಕೂ ನಿಲ್ಲುವ ಗ್ರಂಥಗಳಲ್ಲವೇ? ಎರಡಾಣೆ ಮಾಲೆಯಲ್ಲಿ ಪ್ರಕಟಗೊಂಡ ಉಪನ್ಯಾಸಗಳು ಕನ್ನಡನಾಡಿನಲ್ಲಿ ಹಳ್ಳಿಹಳ್ಳಿಗಳಿಗೂ ಸಾಹಿತ್ಯ ಮತ್ತು ವಿಜ್ಞಾನದ ಸಂದೇಶವನ್ನು ಮುಟ್ಟಿಸಿದ ಕೃತಿಗಳಾದುವು. ಸಾಹಿತ್ಯ ಪರಿಷತ್ತಿನ ಇಂಗ್ಲಿಷ್ ಕನ್ನಡ ನಿಘಂಟನ್ನೂ ಪ್ರಸಾರಾಂಗ ಪ್ರಕಟಿಸಿ, ಅಗ್ಗ ಬೆಲೆಗೆ ಮಾರುತ್ತಿದೆ. ಈಚೆಗೆ ಕಾಗದ ಮತ್ತು ಮುದ್ರಣದ ಏರುದರಗಳಿಂದ ಪ್ರಸಾರಾಂಗ ತತ್ತರಿಸಿ ಹೋದದ್ದಲ್ಲದೆ, ಆಡಳಿತ ದೋಷಗಳೂ ತಲೆದೋರಿದ್ದು ಕುವೆಂಪು ಅವರಿಗೆ ತುಂಬಾ ಬೇಸರ ತರಿಸಿರಬೇಕು. ಆದರೆ ನಾನು ಸದಸ್ಯನಾಗಿದ್ದಾಗ ಹಣದ ಸಲುವಳಿ ಸಾಕಷ್ಟು ಇರಲಾಗಿ ಪ್ರಕಟಣೆಗಳು ಪುಂಖಾನುಪುಂಖವಾಗಿ ಹೊರ ಬೀಳುತ್ತಿದ್ದವು.

ವಿಶ್ವವಿದ್ಯಾನಿಲಯದ ಗರಡಿಯಲ್ಲಿ ನನ್ನನ್ನು ನಿಯೋಜಿಸಿ ತರಬೇತಿ ನೀಡಿ ನನ್ನಲ್ಲಿ ಜ್ಞಾನದಾಹ ಹಸಿರಾಗಿರುವಂತೆ ನೋಡಿಕೊಂಡ ಒಬ್ಬರು ಮಿತ್ರರನ್ನು ಇಲ್ಲಿ ನೆನೆಯುತ್ತೇನೆ. ಅವರು ತೀರ ಆತ್ಮೀಯರಾದ್ದರಿಂದ ಅವರ ಕುರಿತು ಎಲ್ಲ ಮಾತುಗಳನ್ನ ಆಡಲು ಸಾಧ್ಯವಾಗದೆಂದು ತೋರುತ್ತದೆ. ವಿ.ವಿ. ನಿಲಯದ ಆಗುಹೋಗುಗಳಲ್ಲಿ ನನಗೊಂದು ಪಾತ್ರ ಕೊಟ್ಟವರೇ ಅವರು : ಇಲ್ಲವಾದರೆ ನಾನು ಉಳಿದನೇಕ ಪ್ರಿನ್ಸಿಪಾಲರುಗಳಂತೆ ಮೂಲೆಯ ಕುರ್ಚಿಯಲ್ಲಿ ಹಾಯಾಗಿ ವಿರಮಿಸಿಕೊಂಡು ಬಿಡುತ್ತಿದ್ದೆ. ಹಿಡಿದೆಳೆದು ಮುಂತಂದು ನಿಲ್ಲಿಸಿ ಕಾಲಾನಂತರ ಅವರೇ ಕುಲಪತಿಯಾದಾಗ ನನ್ನ ಟೀಕೆಗಳನ್ನೂ ಸಹಿಸಿಕೊಂಡ ಪರಮೋದಾರಿ ಅವರು. ಮೈಸೂರಿನ ನನ್ನ ಮಿತ್ರ ಬಳಗದ ಹಿರಿಯ ಸದಸ್ಯರಾದ ದೇಜಗೌ ಅವರದು 'ಜನ್ಮಾಂತರ ಸುಹೃದ'ವೆಂದು ನನಗನಿಸಿದೆ. ಯಾವುದೇ ಸ್ಥಾನದಲ್ಲಿದ್ದರೂ ಅವರ ಸ್ನೇಹಸಿಂಚನ ನನ್ನನ್ನು ತಟ್ಟದೆ ಬಿಟ್ಟಿಲ್ಲ. ಮೈಸೂರಿನಲ್ಲಿ ಕಂಟ್ರೋಲರ್ ಆಗಿ, ಕನ್ನಡದ ಪ್ರಾಧ್ಯಾಪಕರಾಗಿ ಆ ಮೇಲೆ ಕುಲಪತಿಯಾಗಿ, ಅದು ಮುಗಿದ ಮೇಲೆ ಮತ್ತೆ ಸ್ನೇಹಿತನಾಗಿ – ಯಾವುದೇ ಸ್ಥಾನದಲ್ಲಿರಲಿ ಬಿಡಲಿ ಅವರ ಪ್ರೀತಿ ಏಕ ರೀತಿ. ಕನ್ನಡದ ಕೈಂಕರ್ಯ ನಮ್ಮಿಬ್ಬರನ್ನು ಒಂದುಗೂಡಿಸಿ ನಾನು ಅವರನ್ನು ಅಣ್ಣನೆಂದು ಕರೆಯುವಂತೆ ಮಾಡಿದ್ದು ನಿಜ.ಅದರಲ್ಲೂ ನಾವಿಬ್ಬರೂ ಗದ್ಯಪಕ್ಷಪಾತಿಗಳು ತಾನೇ? ಅವರದೂ ಗದ್ಯದಲ್ಲಿ ವ್ಯವಸಾಯ, ನನ್ನದೂ ಅದೇ; ಆದರೆ ಅವರದು ಸಮೃದ್ಧ ಬೆಳೆ, ನನ್ನದು ಆಟಗೊಮ್ಮೆ ಸೋಟಕ್ಕೊಮ್ಮೆ ಎಂಬ ಹಾಗೆ. ಇದನ್ನೂ ಅವರು ಮೆಚ್ಚಿಕೊಂಡಿದ್ದಾರೆ. ಹತ್ತು ದಿಕ್ಕಿಗೆ ಹರಿಯುವ ನನ್ನ ಚಂಚಲ ಮನಸ್ಸು ಯಾವ ಒಂದು ಸೃಷ್ಟಿ ಮಾರ್ಗಕ್ಕೂ ಅಧೀನವಾಗದೆ ಪಾತರಗಿತ್ತಿತನವನ್ನು ತೋರಿಸುತ್ತಿರುವಾಗ ಅದನ್ನೇ ಸಾಹಿತ್ಯ ವ್ಯವಸಾಯವೆಂದು ಬಗೆದವರು ನನಗೆ ರಾಜ್ಯದ ಸಾಹಿತ್ಯ ಪ್ರಶಸ್ತಿಯನ್ನು ಕೊಟ್ಟು ಬಿಟ್ಟರು. ಅದಕ್ಕಿಂತ ಹೆಚ್ಚು ನನಗೆ ನನ್ನ ಬರಹಗಳನ್ನು ಮೆಚ್ಚಿಕೊಂಡ ದೇಜಗೌ, ಹಾಮಾನಾ ಅಂಥ ವಿಮರ್ಶಕರ ಮಾತಿನಿಂದ ಹೆಮ್ಮೆ ಎನಿಸಿದೆ. ದೇಜಗೌ ಪ್ರೀತಿಯ ನಾನಾ ಮುಖಗಳಲ್ಲಿ ಒಂದನ್ನ ನಾನು ವಿವರಿಸಿದರೆ ಯಾರೂ ನಗಬಾರದು. ಅವರು ಸ್ವಪ್ರಯತ್ನದಿಂದ, ನನಗೆ ಯಾವ ಮುನ್ಸೂಚನೆಯೂ ಇಲ್ಲದೆ ರೂ. 30.000–00ಗಳ ದತ್ತಿ ನಿರ್ಮಾಣ ಮಾಡಿ ಅವರೇ ಹುಟ್ಟು ಹಾಕಿದ ಅ. ಭಾ. ಸ್ಥಳನಾಮ ಸಂಸ್ಥೆಯಲ್ಲಿ ವಾರ್ಷಿಕ ಉಪನ್ಯಾಸವೊಂದನ್ನು ನನ್ನ ಹೆಸರಲ್ಲಿ ಸ್ಥಾಪಿಸಿಬಿಟ್ಟಿದ್ದಾರೆ. ಪ್ರಥಮ ಸ್ಥಳನಾಮ ಸಮ್ಮೇಳನವನ್ನು ಉಡುಪಿಯಲ್ಲಿ ನಡೆಸಿಕೊಟ್ಟ ಅಪರಾಧಕ್ಕೆ ಅವರು ಇಂಥ 'ದಂಡನೆ' ಕೊಟ್ಟಾರೆಂದು ನಾನಂತೂ ಊಹಿಸಿರಲಿಲ್ಲ. ಅವರ ನಿವೃತ್ತಿ ಜೀವನದಲ್ಲಿ ಅವರು ಅನೇಕ ಉದ್ಗ್ರಂಥಗಳನ್ನ ರಚಿಸಿದ್ದಾರೆ; ಟೋಲ್ಸ್ಟಾಟ್‌ಯ ಬೃಹತ್ ಕಾದಂಬರಿಗಳನ್ನೇ ಕನ್ನಡಕ್ಕೆ ತರುತ್ತಿದ್ದಾರೆ ಎಂದರೆ ನಾನು ಅವರ ಈ ಕಾರ್ಯಕ್ಕೆ ಶರಣೆನ್ನುವೆ. ನಾನಾದರೋ ನಿವೃತ್ತಿಕಾಲದಲ್ಲಿ ತಿರುಕುಳಿ ಜೀವನದ ನೆಪದಲ್ಲಿ ಬರಹವನ್ನು ಕೊನೇ ಸಾಲಿನಲ್ಲಿ ಕುಳ್ಳಿರಿಸಿದಂತಾಗಿದೆ. ನನ್ನ ಅವರ ಸ್ವಭಾವದ ಸಾಂಗತ್ಯಗಳೂ, ವೈರುಧ್ಯಗಳೂ ಸೇರಿಯೇ ನಮ್ಮ ನಂಟನ್ನು ಬಿಗಿಗೊಳಿಸಿವೆ. 'ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು?' ಎಂದು ನಾನು ಹಾಡಬಹುದು.



ನನ್ನ ಇಷ್ಟಮಿತ್ರ ಬಂಧು ಬಾಂಧವರು

ಜೀವನ ವೃತ್ತಾಂತದಲ್ಲಿ ನಮಗೆ ಸಮೀಪಸ್ಥರಾದವರ ಕುರಿತು ಬರೆಯುವುದು ಬಲು ಕಷ್ಟ. ಬರೆದರೂ ಅಂಥ ಸಾಮೀಪ್ಯಗಳು ನಮ್ಮಲ್ಲಿ ಒಡಮೂಡಿಸಿದ ಮಾಧುರ್ಯವನ್ನು ಶಬ್ದಗಳಲ್ಲಿ ಸೆರೆಹಿಡಿಯುವುದು ಕಷ್ಟ. ಬದುಕಿನ ವರದಿ ಸಂಪೂರ್ಣವಾಗುವ ದೃಷ್ಟಿಯಿಂದ ಬರೆಯಬೇಕು. ಸಾಂದರ್ಭಿಕವಾಗಿ ಹೆಸರು ಹೇಳದೇ ಬರೆಯಲು ಸಾಧ್ಯ ಎಂಬಂಥ ಪ್ರಸಂಗಗಳನ್ನು ಬಿಟ್ಟರೆ ನಾನು ಮುಂದಕ್ಕೆ ಸಮೂದಿಸುವ ಮಹನೀಯರು ನನಗೆ ಮಾಡಿದ ಉಪಕಾರ ಸ್ಮರಿಸುವ ದೃಷ್ಟಿಯಿಂದ ನಾಲ್ಕು ಮಾತು ಬರೆಯುತ್ತೇನೆ. ಎಲ್ಲವನ್ನೂ ಹೇಳುವುದು ಅಗತ್ಯವೂ ಅಲ್ಲ. ಅದರಿಂದ ಉಪಯೋಗವೂ ಇಲ್ಲ.

ಹಿರಿಯರೂ ಮಿತ್ರರೂ ಎಂದು ನಾನಂದುಕೊಂಡಿರುವ ಪ್ರೊ.ವಿ.ಎಂ. ಇನಾಂದಾರ್ ಅವರ ಸ್ನೇಹಿತ ವರ್ಗದ ತೀರಾ ತೀರಾ ಒಳಸುತ್ತಿನಲ್ಲಿ ಅವರು ನನಗೊಂದು ಸ್ಥಾನ ಕೊಟ್ಟಿರುವುದನ್ನು ನಾನು ಜೀವನದ ಒಂದು ಸೌಭಾಗ್ಯವೆಂದು ತಿಳಿದಿದ್ದೇನೆ. ಸುಲಭದಲ್ಲಿ ಸ್ನೇಹ ಕೊಡುವವರೂ ಅಲ್ಲ. ತೆಗೆದುಕೊಳ್ಳುವಂಥವರೂ ಅಲ್ಲ ಇನಾಂದಾರ್ – ಎಂಬುದರಿಂದ ಈ ನಮ್ಮ ಅನ್ಯೋನ್ಯ ಸ್ನೇಹಕ್ಕೆ ಇನ್ನಷ್ಟು ಗಾಢವಾದ ಬೆಲೆ ಆವಾಹಿತವಾಗುತ್ತದೆ.

ಪ್ರಾಚ್ಯ ಹಾಗೂ ಪಾಶ್ಚಾತ್ಯ ವಿಮರ್ಶನ ಪದ್ಧತಿಯನ್ನು ಕರಗಿಸಿ ಅರಗಿಸಿಕೊಂಡಿರುವ ಇನಾಂದಾರ್ ಹಿಂದೊಮ್ಮೆ – ಈಗ ಸುಮಾರು 35 ವರ್ಷಗಳ ಪೂರ್ವದಲ್ಲಿ – ನನ್ನ ದುಡುಕು-ವಿಮರ್ಶೆಗೆ ತುತ್ತಾಗಿದ್ದರು ಎಂಬುದು ಒಂದು ಮೋಜಿನ ಮಾತು. ಅವರ ಕಿರು ಕಾದಂಬರಿ – 'ಈ ಪರಿಯ ಸೊಬಗು' ಮೊದಲ ದಿನಗಳದ್ದು – ಆಗತಾನೆ ಪ್ರಕಟವಾಗಿತ್ತು. ಅದನ್ನು ಕನ್ನಡ ಸಾಹಿತ್ಯ ಪರಿಷತ್ತು ನನ್ನ ಬಳಿ ವಿಮರ್ಶೆಗಾಗಿ ಕಳಿಸಿಕೊಟ್ಟಿತ್ತು; ನಾನು ಅದರ ವಿಮರ್ಶೆ ಏನು ಬರೆದೆನೊ ನೆನಪಿಲ್ಲ. ಇದು 25ರ ಹರೆಯದ ವಿಮರ್ಶೆ ಆಗಿತ್ತು. ಎಂದರೆ ಯಾವುದೇ ದಯಾದಾಕ್ಷಿಣ್ಯವಿಲ್ಲದ ನನ್ನ ವಿಮರ್ಶನ ರೀತಿಯಲ್ಲೇ ಇತ್ತು ಎಂದು ನನ್ನ ನೆನಪು. ಅದನ್ನೀಗ ಇನಾಂದಾರರು ಮರೆತು ಬಿಟ್ಟಿದ್ದಾರು. ನಮ್ಮೊಳಗೆ ತದನಂತರ – ಮುಖ್ಯವಾಗಿ ಅವರು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿಗೆ ಪ್ರಿನ್ಸಿಪಾಲರಾಗಿ ನೇಮಕಗೊಂಡು ಇಲ್ಲೇ ಬಿಡಾರ ಹೂಡಿದ ಮೇಲೆ – ನಿಧಾನವಾಗಿ, ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ ಸ್ನೇಹ ವಿಸ್ತಾರವಾಗುತ್ತಲೂ ಆಳವಾಗುತ್ತಲೂ ಹೋಯಿತು. ಮೊದಲು ದೂರದ ವಿಮರ್ಶಕ ಓದುಗನಾಗಿ, ಆಮೇಲೆ ಅವರ ಸಾಹಿತ್ಯ ವ್ಯವಸಾಯದ ಭಕ್ತಭಾವುಕನಾಗಿ, 1964ರಿಂದ ನಾನು ಎಂ.ಜಿ.ಎಂ. ಕಾಲೇಜಿನ ಕರ್ಣಧಾರತ್ವ ವಹಿಸಿಕೊಂಡ ಬಳಿಕ ಓರಗೆಯ ಪ್ರಿನ್ಸಿಪಾಲನಾಗಿ ನಮ್ಮೊಳಗಿನ ಸ್ನೇಹ ವಿಧವಿಧವಾಗಿ ಕವಲೊಡೆಯಿತು.

ಇನಾಂದಾರರು ನನಗಿಂತ 10–11 ವರ್ಷಕ್ಕೆ ಹಿರಿಯರು. ನನಗಿಂತ ಎಷ್ಟೋ ಮೊದಲು ಕನ್ನಡ ಸಾಹಿತ್ಯ ಸರೋವರದಲ್ಲಿ 'ಈಸಬೇಕು. ಇದ್ದು ಜೈಸಬೇಕು' ಎಂದು ಜಯ ಗಳಿಸಿದವರು. ಆದರೆ ಈ ವಯಸ್ಸಿನ ಅಂತರ ಸ್ನೇಹಕ್ಕೆ ಎಂದೂ ಆತಂಕ ಒಡ್ಡಿದ್ದಿಲ್ಲ. ಏನನ್ನೂ. ಯಾರನ್ನೂ ಕುರಿತಂಥ ನಮ್ಮಗಳ ಲಘುಗುರು ವಿಮರ್ಶೆ ಸಮಾನಭೂಮಿಕೆಯಲ್ಲೇ ನಡೆಯುವಂಥಾದ್ದು. ನನ್ನ ಹಾಗೆ ಅಥವಾ ನನಗಿಂತಲೂ ದೀರ್ಘಕಾಲದ ಮಿತ್ರರೊಬ್ಬರಿದ್ದಾರೆ ಇನಾಂದಾರ್ ಅವರಿಗೆ – ಕರ್ನಾಟಕ ಸರ್ಕಾರದ ಆಡಳಿತದಲ್ಲಿ ದಕ್ಷತೆಗೆ ಹೆಸರಾಂತ ಶ್ರೀ ಪಿ. ವಿ. ಜೋಶಿ ಬರೇ ಆಡಳಿತ ಒಂದೇ ಅಲ್ಲ. ಸಂಸ್ಕೃತ, ಇಂಗ್ಲಿಷ್ ಎರಡೂ ಸಾಹಿತ್ಯದ ಒಳಹೊರಗನ್ನೂ ಬಲ್ಲ ಜೋಶಿಯವರು. ವಿರುದನಿಯಲ್ಲಿ ಇನಾಂದಾರರ ಹತ್ತಿರ ಸಾಹಿತ್ಯ ಸಂಗ್ರಾಮ ಎಸಗುವುದರ ರುಚಿಯನ್ನು ಕೇಳಿದವರೇ ಬಲ್ಲರು. ಜೋಶಿಯವರ ಠೇಂಕಾರ, ಹೂಂಕಾರಗಳಿಗೆ ಇನಾಂದಾರರ ಉತ್ತರ ಮೆಲುದನಿಯಲ್ಲೇ ಇರುತ್ತದೆ; ಏಕೆಂದರೆ ಸಾಹಿತ್ಯದ ಬಗ್ಗೆ ದನಿ ಎತ್ತಿ ಮಾತನಾಡುವ ಪೈಕಿ ನಮ್ಮ ಮಿತ್ರರಲ್ಲವೇ ಅಲ್ಲ. ಅವರದೇನಿದ್ದರೂ ಬರವಣಿಗೆಯ ಶಕ್ತಿ, ಆಯುಧ, ನಿಷ್ಠುರವಾದ, ಏಕಪಕ್ಷೀಯವಾದ ವಿಮರ್ಶೆ ಅವರಿಗೆ ಸಲ್ಲ. ಬಹುಶಃ ಇಂಗ್ಲಿಷ್ ಪ್ರಾಧ್ಯಾಪಕರಾಗಿ

ಸೇವೆ ಸಲ್ಲಿಸಿದ್ದರಿಂದಲೋ ಏನೋ ಎಲ್ಲ ಮಾರ್ಗಗಳನ್ನೂ ಅವರು ಸ್ವೀಕಾರ ಮಾಡಿ ಒಂದಕ್ಕಿಂತ ಒಂದು ಶ್ರೇಷ್ಠವೆಂದು ಹಿತಮಿತವಾಗಿ ಕಾಂತಾಸಮ್ಮಿತಿಯಿಂದ ಹೇಳಿಯಾರೇ ವಿನಾ ಅದಕ್ಕಾಗಿ ಯುದ್ಧ ಸಾರುವವರಲ್ಲ. ಅವರ ಈಚೆಗಿನ ಬೃಹತ್‌ಕೃತಿ ಪಾಶ್ಚಾತ್ಯ ವಿಮರ್ಶೆ ಕುರಿತದ್ದನ್ನು ಓದಿದವರಿಗೆ ಅವರ ಅಧ್ಯಯನಶೀಲ ಮನಸ್ಸಿನ ಹರವು, ಹರಿವು ವಿದಿತವಾಗದಿರದು. ಎಲ್ಲೂ ಉದ್ವಿಗ್ನತೆ ಇಲ್ಲ. ಅನುದ್ವೇಗಕರಂ ವಾಕ್ಯಂ – ಇದೇ ಸಾಹಿತ್ಯ ಎನ್ನುವವರಿಗೆ ಇನಾಂದಾರರ ಸೃಷ್ಟಿಶೀಲ ಸಾಹಿತ್ಯ ಬಿಂಬಗಳಾದ ಕಾದಂಬರಿಗಳೂ, ಅವರ ವಿದ್ವತ್ತಿಗೆ ಕನ್ನಡಿ ಹಿಡಿಯುವ ಆಂಗ್ಲ, ಕನ್ನಡ ರಚನೆಗಳೂ ಸಾಕ್ಷಿ.

ಇನಾಂದಾರರ ಬರವಣಿಗೆಯ ಶಿಸ್ತು ಹೊಣೆಗೇಡಿಗಳ ಪಂಕ್ತಿಯಲ್ಲಿ ಅಗ್ರಸ್ಥಾನದಲ್ಲಿರುವ ನನ್ನಂಥವನಿಗೆ ಒಂದು ಹಸುರುಗಣ್ಣಿನ ಮತ್ಸರದ ವಿಷಯ. ಒಂದು ಲೇಖನವನ್ನೇ ಕೇಳಿ, ಗ್ರಂಥವನ್ನೇ ಕೇಳಿ – ಕೊಡುವೆ ಎಂದ ದಿನ ಕೊಟ್ಟೇ ಕೊಟ್ಟಾರು. ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು ಅವರಿಂದ ಗೋವಿಂದ ಪೈ ಬಗ್ಗೆ ಒಂದು, ಬಿ.ಎಂ. ಶ್ರೀ ಬಗ್ಗೆ ಒಂದು ಸಾಹಿತ್ಯ ಜೀವನಚಿತ್ರ ಬರೆಯಿಸಿದರು. ಇವನ್ನೆಲ್ಲ ಒಂದೆರಡು ತಿಂಗಳಲ್ಲೇ ಇನಾಂದಾರರು ಪೂರೈಯಿಸಿಕೊಟ್ಟದ್ದು ನನ್ನಂಥವನಿಗೆ ಅಚ್ಚರಿಯ ವಿಷಯ. ಅಚ್ಚರಿ ಏಕೆಂದರೆ ನಾನು ಬಹಿರಂಗವಾಗಿ ಹೇಳದೆ ಇದ್ದಲ್ಲಿ ಈ ಗ್ರಂಥಗಳನ್ನು ಓದಿದ ಯಾರಿಗೂ ಇದು ವರ್ಷಗಟ್ಟಲೆ ಅಧ್ಯಯನದ ಫಲವಾಗಿ ತಿಂಗಳುಗಟ್ಟಲೆ ಯೋಚನೆ ಮಾಡಿ ಬರೆದ ಗ್ರಂಥವೆಂದು ಭಾಸವಾದೀತು. ಅಧ್ಯಯನದಲ್ಲೂ ಏಕಪಾಠಿ ಎನಿಸುವ ಇನಾಂದಾರರು ತನಗೆ ಬೇಕಾದ ವಿಷಯಗಳನ್ನು ಹಲಕಾಲ ಸ್ಮರಣೆಯಲ್ಲಿಟ್ಟದ್ದು ಸ್ವವಿಮರ್ಶೆಯ ಬೆಳಕನ್ನು ಅದರ ಮೇಲೆ ಚೆಲ್ಲಿ ಸ್ಥಿರಗೊಳಿಸಿಕೊಂಡಿರುತ್ತಾರೆ. ಸಮಯ, ಸಂದರ್ಭ ಬಂದಾಗ ಅವು ಅವರು ಕರೆದಂತೆ ಹಾಜರಾಗಿ ಅವರ ಘನವಿಮರ್ಶೆಗೆ ಈಡಾಗುತ್ತವೆ ಎಂದು ನಾನಂದುಕೊಂಡಿದ್ದೇನೆ. ಪ್ರತಿಭಾವಂತ ಬರೇ ಪ್ರತಿಭೆಯಿಂದ ಏನೂ ಮಾಡಲಾರ ಅಥವಾ ಪ್ರತಿಭೆಯಲ್ಲೇ ಒಬ್ಬನ ವ್ಯವಸಾಯವೂ ಅಡಕವಾಗಿದೆ. Genius is half industry – ಎಂದನ್ನುತ್ತಾರೆ. ಹಾಗೆ ಇನಾಂದಾರರ ಸಾಹಿತ್ಯ ಪ್ರತಿಭೆಯಲ್ಲಿ ಅಡಕಗೊಂಡ ಅವರ ಪರಿಶ್ರಮ, ವ್ಯವಸಾಯಗಳನ್ನು ನಾನು ಮೆಚ್ಚಿಕೊಂಡಿದ್ದೇನೆ.

ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ನಮ್ಮ ಲೇಖಕವರ್ಗದಲ್ಲಿ ಅಪರೂಪವೆನಿಸಿದ ಈ ಗುಣವನ್ನು ಇನಾಂದಾರರು ಹೇರಳವಾಗಿ ಪಡೆದಿದ್ದಾರೆ. ಈಚೆಗೆ ಯಾವುದೋ ಸಾಹಿತ್ಯ ಸಂಘದ ಸಭೆಯಲ್ಲಿ ಭಾಗವಹಿಸಿದ್ದೆ. ಅಲ್ಲಿ ಐದು ವರ್ಷ, ಹತ್ತು ವರ್ಷ ಪೂರ್ವದಲ್ಲಿ ಬರೆದುಕೊಡುತ್ತೇವೆಂದು ಹೇಳಿದ ಗ್ರಂಥಗಳ ಒಂದು ಪುಟವನ್ನೂ ಬರೆಯದ ಮಹನೀಯರು ಹಲವರ ದೊಡ್ಡ ಹೆಸರನ್ನು ಕೇಳಿದ ಮೇಲೆ ನನ್ನಂಥ ಸಣ್ಣ ಸಾಹಿತಿ ಇಂಥ ಅಪರಾಧ ಮಾಡುವುದನ್ನು ನಾನೇ ಕ್ಷಮಿಸಿಕೊಂಡುಬಿಟ್ಟೆ. ಮಿತ್ರ ಇನಾಂದಾರರ ಪಣಕ್ಕೆ ವಿಶೇಷ ಬೆಲೆ ಕೊಡುವುದು ನಾನು ಈ ಅಪೂರ್ವತೆಗಾಗಿ. 1969ರಲ್ಲಿ 'ಕಾರಂತ ಪ್ರಪಂಚ'ದ ಸಂಪಾದನಾಕಾರ್ಯ ನಡೆಸುತ್ತಿದ್ದಾಗ ನಾವಿಬ್ಬರೂ ಕಾರಂತರ ಬಾಲವನಕ್ಕೆ ಹೋಗಿ ಅವರ ಸಂದರ್ಶನವನ್ನು ಟೇಪ್ ಮಾಡಿಕೊಂಡೆವು. ಇನಾಂದಾರರು ಅದನ್ನು ಕ್ಲುಪ್ತ ಕಾಲಕ್ಕೆ ಲಿಪೀಕರಿಸಿಕೊಟ್ಟರು. ಬರೆದರು ಎಂದರೆ ಸುಲಭದ ಕೆಲಸವೆಂದು ತಿಳಿದೀರಾ ಎಂದು 'ಲಿಪೀಕರಿಸಿ' ಎಂದಿದ್ದೇನೆ. ಸುಲಭದಲ್ಲಿ ಯಾಂತ್ರಿಕವಾಗಿ ಟೇಪ್‌ನಲ್ಲಿ ಹುದುಗಿರುವ ಧ್ವನಿಯನ್ನು ಲಿಪಿಗೆ ತರಲು ಅದೆಷ್ಟು ಪ್ರಯಾಸವೆಂಬುದನ್ನು ಆ ಕೆಲಸ ಮಾಡಿದವರೇ ಬಲ್ಲರು. ಇನಾಂದಾರರು ಸಲೀಸಾಗಿ ಮಾಡಿ ಗೀಟು ಹಾಕಿದ ಅರ್ಧ ಶೀಟಿನಲ್ಲಿ 50–60 ಪುಟಗಳಷ್ಟು ನಮೂದಿಸಿ ಕೈತೊಳೆದುಕೊಂಡು ಸುಮ್ಮಗಾಗಿ ಬಿಟ್ಟರು. ಸುಮ್ಮನಿರುವುದೂ ಇನಾಂದಾರರ ದೈನಂದಿನ ಕಾರ್ಯಕ್ರಮಗಳಲ್ಲಿ ಒಂದು. ಹಗಲೆಲ್ಲ ಯಾರ್‍ಯಾರೊಡನೆ ಹರಟುತ್ತಲೇ ಕಾಲಕಳೆಯುತ್ತ ಮೌನಾನುಸಂಧಾನಕ್ಕೆ ಎಡೆಯೇ ಇಲ್ಲದ ನನಗೆ ಇದೂ ಅವರ ಬಗ್ಗೆ ಒಂದು ಸ್ವಾರಸ್ಯವಾದ ಸಂಗತಿ. ಅವರ ಕಥೆ ಕಾದಂಬರಿಗಳು ಸಿದ್ಧವಾಗುವುದು ಈ ಮೌನದ ಪಾಕಶಾಲೆಯಲ್ಲಿ. ಮನಸ್ಸಿನಲ್ಲಿ ಮಂಥನಗೊಂಡು, ಚರ್ವಿತವಾಗಿ ಕಸವನ್ನು ವಿಸರ್ಜಿಸಿ ರಸವನ್ನು ಮಾತ್ರ ಕೊಡಬೇಕೆಂಬ ಅವರ ವರ್ಣಪ್ರವೃತ್ತಿ ಅವರ ಕೃತಿಗಳಿಗೆ ಅವರದೇ ಆದ ಒಂದು ಸ್ವಂತಿಕೆಯನ್ನು ರೂಢಿಸಿದ್ದನ್ನು ಗಮನಿಸಬಹುದು.

ಅವರ ವಿಮರ್ಶೆಯ ತೂಕವನ್ನು ಕಾಣಬೇಕಾದರೆ ಅವರು ಇಂಗ್ಲಿಷಿನಲ್ಲಿ ಮೊದಲು ಬರೆದು, ಆಮೇಲೆ ಅವರೇ ಕನ್ನಡಿಸಿಕೊಟ್ಟ 'ಶಿವರಾಮ ಕಾರಂತ : ಬದುಕು–ಬರೆಹ' ಗ್ರಂಥವನ್ನು ಪರಿಶೀಲಿಸಬೇಕು. ಒಬ್ಬಾನೊಬ್ಬ ವಿಮರ್ಶಕ ತನ್ನೆಲ್ಲ ಗ್ರಂಥಗಳನ್ನು ತಿರುವಿ ಹಾಕಿ ಇಷ್ಟೊಂದು ವಿಶಾಲವಾದ ಹಿನ್ನೆಲೆ – ಮುನ್ನೆಲೆಯಲ್ಲಿ ಒಂದು ವಿಮರ್ಶೆ ರಚಿಸಿಯಾನೆಂಬುದು ಕಾರಂತರಿಗೇನೇ ಅಚ್ಚರಿ ಹುಟ್ಟಿಸಿತಂತೆ. ಇನಾಂದಾರರ ವಿಮರ್ಶೆಯ ಮಾತುಗಳಿಗೆ ತೂಕ ಬಂದಿರುವುದು ಹಿನ್ನೆಲೆಯ ಅವರ ಅಧ್ಯಯನದಿಂದ ಮತ್ತು ತುಲನಾತ್ಮಕ ದೃಷ್ಟಿಯಿಂದ. ಇಂಗ್ಲಿಷ್ ಭಾಷೆಯ ಉತ್ತಮ ವಿಮರ್ಶಕರ ಜಾಡಿನಲ್ಲಿ ನಡೆವ ಅಗ್ರಗಣ್ಯರಲ್ಲಿ ಇನಾಂದಾರ್ ಸೇರಿಕೊಳ್ಳುತ್ತಾರೆ. ಅವರ ಕಾದಂಬರಿಗಳ ಬಗ್ಗೆ ನಾನೇನೂ ಹೇಳುವುದಿಲ್ಲ. ಓದಿದ್ದೇನೆ – ಎಲ್ಲವನ್ನೂ. ಈ ಕಾದಂಬರಿಗಳ ಬಗ್ಗೆ ನೆನಪಿಡುವಷ್ಟು ಸ್ಥಳ ನನ್ನ ಶಿರೋಭಾಗದಲ್ಲಿರುವುದಿಲ್ಲ. ಆದರೆ ಒಂದು ಮಾತು ಹೇಳಲೇಬೇಕು. ಅದು ಪ್ರಬುದ್ಧತೆಗೆ ಸಂಬಂಧಪಟ್ಟದ್ದು. ಸುಪ್ರಸಿದ್ಧ ವಾರಪತ್ರಿಕೆಗಳಲ್ಲಿ ಕನ್ನಡದ ಸಾಮಾನ್ಯ ಓದುಗರ ಮಾನಸಿಕ ತುರಿಕೆಯನ್ನು

ಕಳೆಯಲೆಂದು ಸೃಷ್ಟಿಗೊಳ್ಳುವ ಮಸಾಲೆ ಕೃತಿಗಳಿಗಿಂತ ನೂರು ಹರದಾರಿ ದೂರದಲ್ಲಿ ಇನಾಂದಾರರು ಇದ್ದಾರೆ. ಅವರ ಧ್ಯೇಯ-ಬದುಕಿನಲ್ಲಿ ಮಾನುಷ ವ್ಯಾಪಾರದ-ಸಂಬಂಧಗಳ ಪೂರ್ವಾಪರ ವಿಮರ್ಶೆ. ಗಾಢವಾದ ಸಾಹಿತ್ಯ ಪ್ರಜ್ಞೆಯ ಸ್ತರದಲ್ಲಿ ಬದುಕನ್ನು ವೀಕ್ಷಿಸುವ ದೃಷ್ಟಿ – ಇವುಗಳಿಂದ ಇನಾಂದಾರ್ ಕಾದಂಬರಿಗಳು ನಮ್ಮ ಸಾಹಿತ್ಯದ ಸಾರ್ವಕಾಲಿಕ ಕೃತಿಗಳೇ ಆಗುತ್ತವೆ.

ಸಾಹಿತ್ಯ ಪ್ರಪಂಚದ ಹೊರಗೆ ಶಿಕ್ಷಣ ಪ್ರಪಂಚಕ್ಕೆ ಬರೋಣ. ನನಗೂ ಇನಾಂದಾರರಿಗೂ ಬಾಂಧವ್ಯ ತೀರ ನಿಕಟವಾಗಿ ಬೆಸೆದದ್ದು ಉಡುಪಿಯಲ್ಲಿ, ನಾವು ಸಮಾನ ವ್ಯಸನಿಗಳಾದ ಮೇಲೆ, ಮುಖ್ಯವಾಗಿ ನಾನು 1964ರಲ್ಲಿ ಪ್ರಿನ್ಸಿಪಾಲನಾಗಿ ಅಧಿಕಾರ ವಹಿಸಿಕೊಂಡ ಮೇಲೆ. ಪ್ರತಿ ಸಂಜೆ ಎಂಬಂತೆ ನಮ್ಮ ಭೇಟಿ. ಆಯಾ ದಿನದ ಅನುಭವ ಕಥನ. ನಾಳೆಯ ನಿರೀಕ್ಷೆ, ಮೈಸೂರಿಗೆ ಹೋಗುವ-ಬರುವ ವಿಚಾರ. ಪರೀಕ್ಷೆ, ನಿರೀಕ್ಷೆಗಳಲ್ಲಿ ನಮ್ಮ ಸತ್ತ್ವ ಪರೀಕ್ಷೆಯ ಕುರಿತಾದ ಜಂಟಿ ಅಧ್ಯಯನ. ಇನಾಂದಾರ್ ಉಡುಪಿಯಲ್ಲಿದ್ದಷ್ಟು ಕಾಲ ನಮ್ಮದು ಮೈಸೂರಿಗೆ ಸಹ-ಗಮನ. ಈ ಘಟ್ಟದ ಒಂದು ವಿಶೇಷ ಸ್ವಾರಸ್ಯವನ್ನು ನಾನು ಹೇಳಲೇಬೇಕು. ನಾನೂ ಅವರೂ ಇಬ್ಬರೇ ಕೂರುವಾಗ ಗಂಟೆಗಟ್ಟಲೆ ಹರಟೆಗೆ ಅನುವಾಗುತ್ತಿದ್ದ ಇನಾಂದಾರರು ನಮ್ಮ ಪ್ರಥಮ ಸಾಮೂಹಿಕ (ಅಂದರೆ ಬೇರೆ ಅಕಾಡೆಮಿ ಕಾಲೇಜುಗಳ ಪ್ರಿನ್ಸಿಪಾಲರೂ ಆ ಕಾರಿನ 6 ಸೀಟುಗಳನ್ನು ತುಂಬಲು ಭರ್ತಿಯಾಗಿದ್ದರು) ಯಾತ್ರೆಯ ವೇಳೆ ಹೋಗುವಾಗಲೂ ಬರುವಾಗಲೂ, ತುಟಿ ಪಿಟ್ಟೆನ್ನಲಿಲ್ಲ. ನಾವೆಲ್ಲ ಒಬ್ಬರಿಗೊಬ್ಬರು ಹೊಡೆದಾಡಿ ಕೊಂಡಂತೆ ಇನ್ನೂರು ಮೈಲು ಮಾತು ಬೆಳೆಸುತ್ತಿರುವಾಗ ಇನಾಂದಾರರದ್ದು ನಿರಾಳ ಮೌನ. ಅವರನ್ನು ಅಷ್ಟಾಗಿ ಅರಿಯದ ಉಳಿದ ಪ್ರಿನ್ಸಿಪಾಲರುಗಳಿಗೆ ಇದೊಂದು ಅದ್ಭುತವೆಂದು ಕಂಡು, ಮುಂದಿನ ಟ್ರಿಪ್‌ನಲ್ಲಿ ಅವರ ಈ ಮೌನವ್ರತವನ್ನು ಭಂಗಗೊಳಿಸಿದವನಿಗೆ ಬಹುಮಾನ ನಿಗದಿಯಾಯಿತು. ಒಬ್ಬರು ಆ ಬಹುಮಾನವನ್ನು ಗೆದ್ದರು ಎನ್ನಿ. ಕೆಲ ಯಾತ್ರೆಗಳ ತತ್‌ಪಶ್ಚಾತ್ ಸದರಿ ಇನಾಂದಾರರು ನಮ್ಮಂತೆ ಹರಟಲು ಕಲಿತರು ಎನ್ನಿ. ನಮ್ಮ ವಾಚಾಳಿತನವನ್ನು ಅವರಿಗೆ ಅಂಟಿಸಿದ ಶ್ರೇಯಸ್ಸು ನನಗೆ ಸಲ್ಲಬೇಕು. ಇನ್ನೂ ಒಂದು ಶ್ರೇಯಸ್ಸನ್ನು ಅವರು ನನಗೆ ಬಿಟ್ಟಾರು ಎನಿಸುತ್ತದೆ. ಅದೆಂದರೆ, ವಾರ್ಸಿಟಿಯ ಅಧ್ಯಯನ ಮಂಡಲಿ, ಸೆನೆಟ್ ಮುಂತಾದ ಸಭೆಗಳಲ್ಲಿ ಕುಕ್ಕಿ ಕುಕ್ಕಿ ಮಾತಾಡಿ ಮಾತಾಡಿ ಎಂದು ಅವರನ್ನು ಎಬ್ಬಿಸುವವನು ನಾನು. ವಿಷಯ ಎಲ್ಲ ತಿಳಿದವರಾದರೂ ಇಂಥ ಕ್ಷುಲ್ಲಕ ಸಭೆಗಳ ವ್ಯರ್ಥ ವಾಗ್ವಾದಗಳಲ್ಲಿ ಅವರಿಗೆ ಅಭಿರುಚಿ ಇರಲಿಲ್ಲ. ನನ್ನಂಥವನಿಗೆ ಅದೇ ಜೀವನಾಧಾರ. ಆಯಕಟ್ಟಿನ ಸ್ಥಳದಲ್ಲಿ ಕೂತು ಕುಲಪತಿಯ ಕಣ್ಣು ಸೆಳೆದು ಅವರು ನಿಲ್ಲಿಸು ಎನ್ನುವ ತನಕ ಗಟ್ಟಿಯಾಗಿ ಒದರಿ, ಗಟ್ಟಿತನವನ್ನೇ ವಾದದ ಮುಖ್ಯ ಶಕ್ತಿಯಾಗಿ ಒಂದೂ ಆಯುಧದಂತೆ ಬಳಸಿ ಮಲ್ಲತನ ಪ್ರದರ್ಶಿಸುವುದು ನನ್ನ ಚಟ. ಆಗ ನನ್ನ ಪಕ್ಷದಲ್ಲೇ ಇರುತ್ತಿದ್ದ ಇನಾಂದಾರರು ಮೌನವಾಗಿ ನನ್ನ ಮಾತಿನ ಮಂಗತನವನ್ನು ಆಸ್ವಾದಿಸುತ್ತಿದ್ದರೆಂದು ನನ್ನ ಊಹೆ.

ಪ್ರಿನ್ಸಿಪಾಲರಾಗಿ ಇನಾಂದಾರರು ಪೂರ್ಣಪ್ರಜ್ಞ ಕಾಲೇಜಿಗೆ ಸಲ್ಲಿಸಿದ ಸೇವೆಗಳ ಪೈಕಿ ಅಲ್ಲಿನ ಅಧ್ಯಯನ – ಅಧ್ಯಾಪನ ಶೈಲಿಯನ್ನು ರೂಪಿಸಿದ್ದಕ್ಕೆ ಆದ್ಯ ಸ್ಥಾನ ನೀಡಬೇಕಾಗುತ್ತದೆ. ತನಗಿಂತ ತರುಣರಾದ ಪ್ರಾಧ್ಯಾಪಕರಿಗೆ ಮಾರ್ಗದರ್ಶನ ನೀಡುವುದು ಮಾತ್ರವಲ್ಲದೆ ಅವರನ್ನು ಹುರಿದುಂಬಿಸಿ ಅವರ ಸ್ನೇಹಶೀಲತೆಯನ್ನು ಸಂವರ್ಧಿಸಿ, ಸಂಸ್ಥೆಗೂ ಅದರ ವರಿಷ್ಠರಿಗೂ ದುಡಿಯುವ ಅಧ್ಯಾಪಕರಿಗೂ ಒಂದು ಸುಲಲಿತ ಬಾಂಧವ್ಯವನ್ನು ನೇರ್ಪುಗೊಳಿಸಿದ್ದು ಅವರ ಸಾಧನೆ. ಅವರನ್ನು ಅಲ್ಲಿನ ಅಧ್ಯಾಪಕರು ಮರೆಯದೆ ತಮ್ಮ ಗುರು ಸ್ಥಾನದಲ್ಲಿ ಕೆಲವರಾದರೂ ನಿಲ್ಲಿಸಿಕೊಂಡದ್ದು ಅವರ ಕಾಯಕಕ್ಕೆ ಒದಗಿದ ಸತ್ಫಲ.

ಇನಾಂದಾರರೂ ನಾನು ಜತೆಯಾಗಿ ಕೆಲಸ ಮಾಡುತ್ತಿದ್ದ ವೇಳೆ ನಡೆದ ಒಂದೆರಡು ಘಟನೆಗಳು ಇನಾಂದಾರರ ವೈಯಕ್ತಿಕ ನೆಲೆ ಬೆಲೆಗಳನ್ನು ಗುರುತಿಸಲು ಸಹಾಯವಾಗುತ್ತವೆಂಬ ನಿಟ್ಟಿನಲ್ಲಿ ಇಲ್ಲಿ ಚಿತ್ರಿಸುತ್ತೇನೆ. ಕರ್ನಾಟಕದಲ್ಲಿ ಕಾಲೇಜು ಶಿಕ್ಷಣಕ್ಕೆ ಹೊಸದಾಗಿ ಒಂದು ನಿರ್ದೇಶನಾಲಯ ವಿರಚಿತವಾಗಿ ಅದಕ್ಕೆ ಡಾ. ದಾವರ್ ಎಂಬುವರು ಡೈರೆಕ್ಟರ್ ಆಗಿ ನೇಮಕಗೊಂಡ ವರ್ಷ (1967–68 ಇರಬಹುದೇ?). ದಾವರ್ ಅವರೂ ಇನಾಂದಾರರೂ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಹೋದ್ಯೋಗಿಗಳಾಗಿದ್ದವರು – ಮುಂಬಯಿ ಸರ್ಕಾರದ ಆಶ್ರಯದಲ್ಲಿ. ನಮ್ಮ ಇನ್ನೊಂದೂರಿನ ಕಾಲೇಜಿನ ಪ್ರಿನ್ಸಿಪಾಲರು ಯಾವುದೋ ಹಾಜರಾತಿ ವಿಷಯದಲ್ಲಿ ಫಜೀತಿಗೆ ಸಿಲುಕಿದ್ದರು. 20–30 ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಹೊಣೆಗಾರಿಕೆಯ ಪ್ರಶ್ನೆ. ತಲೆಯಿಂದಲೇ ತೆರ ಕೊಡಬೇಕಾದಂಥ ಗಂಭೀರ ಸವಾಲು. ಆಗ ಹಂಗಾಮಿ ಕುಲಪತಿಯಾಗಿ ಮೈಸೂರಿನಲ್ಲಿದ್ದ ದಾವರ್ ನಾವು ಅವರ ಭೇಟಿಗೆ ಹೋದ ದಿನವೇ ಕುಲಪತಿತ್ವ ತ್ಯಜಿಸಿ ಮರಳಿ ಡೈರೆಕ್ಟರ್ ಸ್ಥಾನಕ್ಕೆ ಹೊರಡುವವರಿದ್ದರು. ಹಾಸಿಗೆ ಸುರುಳಿ ಸುತ್ತಿ ಸಿದ್ಧವಾಗಿ ಹೊರಾಂಗಣದಲ್ಲಿ ಬಿದ್ದಿತ್ತು. ಇಂಥ ವೇಳೆಯಲ್ಲಿ ನಮಗೆ – ಅಂದರೆ 'ಅಪರಾಧಿ'ಗಳಿಗೆ – ಭೇಟಿ ಸಿಕ್ಕಿದ್ದೇ ಇನಾಂದಾರರ ದೆಸೆಯಿಂದ. ಅವರು ಬಾಯಿ ತೆರೆದು ಊರಿನ ಹೆಸರು ಹೇಳಿದ್ದೇ ತಡ, 'ಇನಾಂದಾರ್, ನೀನು ಏನು ಹೇಳುತ್ತಿ ಎನ್ನುವುದು ಗೊತ್ತಿದೆ. ಕ್ಷಮೆ ಕೊಟ್ಟಿದ್ದೇನೆ, ಹೇಳು ಅವರಿಗೆ. ಇನ್ನು ಹೀಗೆ ಮಾಡಬಾರದು ಅಂತ ಹೇಳು. ನೀನು ಬಂದ ಮೇಲೆ ಬೇರೆ ಮಾತೆಲ್ಲಿದೆ?' ಎಂದು ಚಹ ಕೊಟ್ಟೇ ಕಳಿಸಿದರು. ಇನ್ನೊಂದು

ಸಂದರ್ಭ ನಾವು ಗ್ರಾಂಟ್ ತರುವ ಸಲುವಾಗಿ ಬೆಂಗಳೂರಿಗೆ ನಾಲ್ಕು ಸಲ ಪಯಣಿಸಿ ಅಲ್ಲಿನ ಹೋಟೆಲುಗಳಿಗೆ ದಂಡ ಕೊಡಬೇಕೆಂದು ಮೈಸೂರು ಸರಕಾರ ತೀರ್ಪು ಕೊಟ್ಟಿತ್ತಷ್ಟೆ. (ನಾವು ಮದರಾಸಿನಲ್ಲಿ ಒಳ್ಳೆಯ ಕಾಲ ನೋಡಿದ್ದವರಾದ್ದರಿಂದ ಇದರಷ್ಟು ಖೇದಕರ ಯಾತ್ರೆ ನಮಗೆ ಬೇರೆ ಇರಲಿಲ್ಲ. ಮದರಾಸ್ ಅಧಿಪತ್ಯದಲ್ಲಿ ಯಾವ ದಿನವೂ ಗ್ರಾಂಟಿಗಾಗಿ ಪ್ರಿನ್ಸಿಪಾಲ್ ರಾಜಧಾನಿಗೆ ಹೋಗಿ ಟೇಬಲಿಂದ ಟೇಬಲಿಗೆ ಕುಪ್ಪಳಿಸಿದ್ದಿಲ್ಲ.) ದಾವರ್ ಡೈರೆಕ್ಟರ್ ಆಗಿದ್ದಾಗ ನಾನೂ ಇನಾಂದಾರರೂ ಪಕ್ಕದ ಕೋಣೆಯ ಸೂಪರಿಂಟೆಂಡೆಂಟ್ ಹತ್ತಿರ ಸಂಭಾಷಿಸುತ್ತಿದ್ದೆವು. ಇನಾಂದಾರರ ಸ್ವರವನ್ನು ಗುರುತಿಸಿದ ದಾವರ್ ಅವರನ್ನು ತನ್ನ ಕೋಣೆಗೆ ಕರೆದರು. 'ಇನಾಂದಾರ್, ಇದೇನು? ನೀನು, ನಿನ್ನ ಸ್ನೇಹಿತ ಎನಿಸಿದ ಇವರು ಬರಬೇಕಾದದ್ದು ನನ್ನ ಹತ್ತಿರ. ನಿಮಗೆ ನನ್ನ ಗುಮಾಸ್ತೆಗಳ ಹತ್ತಿರ ಸಂಭಾಷಣೆ ಬೇಡ. ಏನಾಗಬೇಕು ನಿಮಗೆ?' ಎಂದು ಬೆಲ್ ಒತ್ತಿ ಆಚೆ ಕೊಠಡಿಯ ಮಹನೀಯನನ್ನು (ಗ್ರಾಂಟ್ ಖೋತಾ ಮಾಡುವವನಾದ್ದರಿಂದ ಆತನನ್ನು ನಾವು 'ಮಹನೀಯ'ನೆಂದೂ ಕರೆಯುತ್ತಿದ್ದುದುಂಟು!) ಕರೆಸಿ, 'ನೋಡು, ಇನ್ನರ್ಧ ತಾಸಿನಲ್ಲಿ ಇವರ ಪೇಪರ್ ಸಂಪೂರ್ಣಗೊಳಿಸಿ ನನ್ನ ದಸ್ಕತ್ತಿಗೆ ತಾ' ಎಂದರು. ಡಾ. ದಾವರ್ ಭಾರೀ ಶಿಸ್ತಿನ ಮನುಷ್ಯ, ಅವರ ಮಾತಿಗೆ ಎರಡು ಹೇಳುವ ಧೈರ್ಯ ಯಾವ ಲೆಕ್ಕಣಿಗಾರನಿಗೂ ಇದ್ದಿರಲಿಲ್ಲ. ಅರ್ಧ ತಾಸು ಸರಸಸಲ್ಲಾಪ ಮತ್ತು ಧಾರವಾಡದ ಪ್ರಚಲಿತ ಪದ್ಧತಿಯಂತೆ ಚಹಾ. ಇನಾಂದಾರರ ಸೆರಗು ಹಿಡಿದಿದ್ದರಿಂದ ನನಗೆ ಎಷ್ಟೋ ಕಡೆ ಚಹಾ ಪಾನ ಅನಿವಾರ್ಯವಾಗಿ ನಾನೂ ಚಹಾಪ್ರಿಯನಾದೆ ಅಥವಾ ಚಹವೇನು ಕಾಫಿಯೇನು ಎಂಬಂಥ ಸ್ಥಿತಪ್ರಜ್ಞತ್ವಕ್ಕೇರಿದೆ.

ಮಿತ್ರ ಇನಾಂದಾರರನ್ನು ನಂಬಿ ನಾನು ಕೆಟ್ಟದ್ದು ಒಂದೇ ಒಂದು ಸಲ. ಅದು ಅವರು ಕಾರಿಟ್ಟಿದ್ದಾರೆಂದು ಪೈಪೋಟಿಯಿಂದ ನಾನೂ ಎರಡು ವರ್ಷ ಕಾರು ಇಡಲು ಹೋಗಿ ನನ್ನ ಸಂಬಳಕ್ಕೆ ತಿಂಗಳು 200 ರೂಪಾಯಿಯ ಖೋತಾ ಮಾಡಿಕೊಂಡೆ. ಅವರು ಹಳೇ ಆಸ್ಟಿನ್ ಕೊಂಡರೆಂದು ನಾನೂ ಹುಡುಕಾಡಿ ಅದನ್ನೇ ತಂದೆ. ನನ್ನ ಆಸ್ಟಿನ್ ಇಂಗ್ಲೆಂಡಿನಲ್ಲಿ ಹುಟ್ಟಿತ್ತಾದರೂ ಇಲ್ಲಿ ಬಾಲ್ಯ ಕೌಮಾರ್ಯಗಳನ್ನು ಕಳೆದು ಅದಕ್ಕೆ ಯೌವನಪ್ರಾಪ್ತಿಯಾಗಿತ್ತು. ಅಂದರೆ ಅದಕ್ಕೆ 25 ವರ್ಷ ಕಳೆದಿತ್ತು. ಆದರೇನು? ಇನಾಂದಾರರದ್ದೂ ಅಷ್ಟೇ ವಯಸ್ಸಿನದು. ದಾರಿ ನಡೆಯುತ್ತದೆಂದು ನಾನೂ ಕೊಂಡೆ. ಡ್ರೈವಿಂಗ್ ಕಲಿತೆ. ಅದರ ಒಂದೊಂದೇ ಬಿಡಿ ಭಾಗಗಳು ಉದುರಿ. ಕಗಲಿ ಕಣ್ಣೆದುರೇ ಅದು ನಶಿಸುವುದನ್ನು ನೋಡಿ ಭಾರೀ ಪ್ರಯಾಸದಿಂದ ಅದನ್ನು ಮಾರಿ ನಿವಾಳಿಸಿದೆ. 'ಆಸ್ಟಿನ್'ನ ಎಂಜಿನ್ 'ಭಲೋ' ಅನ್ನುವ ಭಾವನೆಯನ್ನು ಇನಾಂದಾರರು ನನ್ನ ಮಿದುಳಲ್ಲಿ ತುರುಕಿದ್ದರು. ಅದಿನ್ನೂ ಮಾಸಿಲ್ಲ. ಟೊಯೊಟದಲ್ಲಿ ಜಪಾನಿನಲ್ಲಿ ಪ್ರಯಾಣಿಸುವಾಗಲೂ ನನ್ನ ಮನಸ್ಸಿನ ಮಾನದಂಡ ಆಸ್ಟಿನ್ ಎಂಜಿನ್ನೇ – ಅದರಲ್ಲೂ ನನ್ನದಲ್ಲ, ಇನಾಂದಾರ್ ಆಸ್ಟಿನ್!

ಇನಾಂದಾರರು ಪ್ರಿನ್ಸಿಪಾಲಗಿರಿ ಬಿಟ್ಟರು, ಶಿವಮೊಗ್ಗ, ಬೆಂಗಳೂರುಗಳಲ್ಲಿ ಪ್ರಾಧ್ಯಾಪಕರಾದರು. ಆಮೇಲೆ ವಿಶ್ರಾಂತರಾದರು, ಬೆಂಗಳೂರಲ್ಲಿ ಮನೆ ಮಾಡಿದರು. ಅದನ್ನು ಬಿಟ್ಟು ಮೈಸೂರಲ್ಲಿ ಮನೆ ಮಾಡಿದರು. ಇದಕ್ಕೆಲ್ಲ ಸಂದ ಈ 20 ವರ್ಷಗಳಲ್ಲಿ ನಮ್ಮ ಅನ್ಯೋನ್ಯತೆ ಗಾಢವಾಗುತ್ತಲೇ ಹೋಗಿದೆ. ನನ್ನ ಮಕ್ಕಳ ಕ್ಷೇಮ ಚಿಂತನೆಯನ್ನು ಅವರೂ ಶ್ರೀಮತಿ ಇನಾಂದಾರರೂ ಮಾಡುತ್ತಲೇ ಬಂದಿದ್ದಾರೆ. ಅವರಿಗೂ ನನಗೂ ಈಗ ಭೌಗೋಲಿಕವಾಗಿ ಇನ್ನೂರು ಮೈಲಿ ದೂರದ ಅಂತರ. ಆದರೆ ನಮ್ಮ ಸಮೀಪವೇ ಇದ್ದಾರೆಂಬ ಅನಿಸಿಕೆ. ಇನಾಂದಾರರ ಸ್ನೇಹ ಸುಲಭ ಸಾಧ್ಯವಲ್ಲ ಎನ್ನುವವರಿದ್ದಾರೆ. ಅದಕ್ಕೆ ಕಾರಣ ನಾನು ಮೊದಲೇ ಹೇಳಿದಂತೆ ಅವರ ಚುನಾಯಿಸಿಕೆ (choosiness). ಹೇಗೇ ಇರಲಿ. ನನಗಂತೂ ಅದು ತೀರಾ ಸುಲಭವೆನಿಸಿದೆ. ಹೊರ ನೋಟಕ್ಕೆ ಇನಾಂದಾರ್ ಕಠಿಣತೆಯ ಸೋಗು ಹಾಕಿದರೂ, ಒಳಗೆ ಅಂತರಾಳದಲ್ಲಿ ತೀರ ಸ್ನೇಹಪರರಾದ ಮನುಷ್ಯ. ನನ್ನನ್ನು ಅವರು ಮುಗ್ಧನನ್ನಾಗಿ ಮಾಡಿದ ಸಂದರ್ಭ ಹೇಳಲೇಬೇಕು. ನನ್ನ ಮಗಳ ವಿವಾಹಕ್ಕೆ ಆಮಂತ್ರಣ ಕೊಡಲು ಬೆಂಗಳೂರಿಗೆ ನಾನು ಪತ್ನೀಸಮೇತ ಹೋದೆ. ಇನಾಂದಾರ್ ದಂಪತಿ ನಮಗೇ ಮದುವೆಯೋ ಎಂಬ ಹಾಗೆ ಉಪಚಾರ ಮಾಡಿ ಉಡುಗೊರೆ ಕೊಟ್ಟರು. ಹೊರಡುವ ವೇಳೆ ಇನಾಂದಾರ್ ನನ್ನನ್ನು ಪಕ್ಕಕ್ಕೆ ಕರೆದು 'ಮದುವೆ ಅಂದ ಮೇಲೆ ಖರ್ಚು; ಏನಾದರೂ ಬೇಕೆ?' ಎಂದು ಗುಟ್ಟಾಗಿ ಕೇಳಿದರು. ನಾನು ಖರ್ಚಿನ ಮನುಷ್ಯ ಎಂಬುದನ್ನರಿತ ಅವರು ನನಗೆ 'ಆಪತ್ಕಾಲ'ದ ನೆರವು ನೀಡಲು ಮಾನಸಿಕ ಹಾಗೂ ಆರ್ಥಿಕ ಸಿದ್ಧತೆ ಮಾಡಿಕೊಂಡಿದ್ದನ್ನು ನೋಡಿ ನಾನು ಸ್ತಂಭೀಭೂತನಾಗಿ ಬಿಟ್ಟೆ. ಅವರ ಸ್ನೇಹದ ಪರಿ ಇಂಥದು. ಇದರ ಸವಿಯನ್ನುಂಡದ್ದು ನಾನೆಷ್ಟೋ ಸಲ; ಅದು ನನ್ನ ಭಾಗ್ಯ ಎಂದುಕೊಂಡಿದ್ದೇನೆ.

ಮಣಿಪಾಲದ ಪೈ ಬಂಧುಗಳಿಗೂ ನನಗೂ ಪರಿಚಯವಾಗುವ ಮೊದಲೇ, ಪ್ರಾಥಮಿಕ ಶಾಲೆಯಿಂದಲೇ, ನನ್ನ ಸಮಕಾಲೀನರಾಗಿ ಪ್ರಸಿದ್ಧರಾದ ಕಲ್ಸಂಕದ ಪೈ ಮನೆತನದವರೊಂದಿಗೆ ನನ್ನದು ನಿಕಟ ಸಂಬಂಧ. ಅವರ ಮನೆಗೂ ನಮ್ಮ ಕಂಪೌಂಡಿಗೂ ಸ್ವಲ್ಪ ದೂರ. ಒಂದೇ ಗೋಡೆ. ಆದರೆ ಬಾಲ್ಯದಲ್ಲಿ ಈ ಗೋಡೆಯನ್ನೇ ಹಾರಿ ನಮ್ಮ ಆಟ ಪಾಠಗಳು ನಡೆಯುತ್ತಿದ್ದವು. ನಮ್ಮ ಮಟ್ಟಿಗೆ ಗೋಡೆ ಇರಲಿಲ್ಲವೆಂದರೂ ಸಲ್ಲುತ್ತದೆ. ಆಟಕ್ಕೆ ಒಮ್ಮೆ ನಮ್ಮ ಮನೆ ಅಂಗಳವಾದರೆ ಇನ್ನೊಮ್ಮೆ ಅವರದು. ಅವರ ಮನೆಯೇ ವಾರದ ರಜಾದಿನ, ಬೇಸಗೆ ರಜಾದಿನಗಳ

ಆಶ್ರಯಸ್ಥಾನ. ಇವರ ಹಿರಿಯರು ಉಡುಪಿಯ ರಥಬೀದಿಯ ಪ್ರಸಿದ್ಧ ದಿನಸಿ ವ್ಯಾಪಾರಸ್ಥರಾದ ಕಲ್ಸಂಕ ವೆಂಕಟ್ರಾಯ ಪೈ ಅವರು. ಅವರ ಪ್ರಥಮ ಪುತ್ರ ಕಲ್ಸಂಕ ಕಮಲಾಕ್ಷ ಪೈ ನನಗಿಂತ ಮೂರು ನಾಲ್ಕು ವರ್ಷ ಹಿರಿಯರಾದ್ದರಿಂದ ಅಷ್ಟು ವರ್ಷ ಮೇಲಿನ ವರ್ಗದಲ್ಲಿ ಕಡಿಯಾಳಿ ಶಾಲೆಯಲ್ಲಿ ಭೆಟ್ಟಿಯಾದರು. ಅವರ ತಮ್ಮನಾದ ಪ್ರಭಾಕರ ನನಗಿಂತ ವರ್ಗದಲ್ಲಿ ಒಂದೇ ವರ್ಷ ಮುಂದು; ಆದ್ದರಿಂದ ನಮ್ಮದು ಸಮಾನ ಮನೋಧರ್ಮ, ಆಟಪಾಠಗಳೆರಡರಲ್ಲೂ. ಕಮಲಾಕ್ಷ ಪೈ ಅವರು ಮಂಗಳೂರಲ್ಲಿಯೂ ಮುಂಬಯಿ ಸಿಡನಾಹ್ಯಮ್ ಕಾಲೇಜಿನಲ್ಲಿ ಓದಿ ಬ್ಯಾಂಕಿಂಗ್ ಉದ್ದಿಮೆಯಲ್ಲಿ – ಉಡುಪಿಯಲ್ಲೇ ಜನ್ಮವೆತ್ತಿದ ಸಿಂಡಿಕೇಟ್ ಬ್ಯಾಂಕಿನಲ್ಲಿ – 1941ರಿಂದ ಸೇವಾರಂಭ ಮಾಡಿ ಕೊನೆಗೆ ರಾಷ್ಟ್ರೀಕರಣದ ಅನಂತರದ 9 ವರ್ಷಗಳ ಕಾಲ ಅಧ್ಯಕ್ಷರಾಗಿದ್ದುಕೊಂಡು ದಕ್ಷ ಅಧಿಕಾರಿಗಳೆಂದೂ ಜನೋಪಕಾರಿಗಳೆಂದೂ ಕೀರ್ತಿಶಾಲಿಗಳಾದರು. ಮಾಧವ ಪೈ ಅವರ ಗರಡಿಯಲ್ಲಿ ಪಳಗಿದ ಬ್ಯಾಂಕಿಂಗ್ ಉದ್ದಿಮೆದಾರರ ದೃಷ್ಟಿಕೋನವೇ ಬೇರೆ ಇರುತ್ತದೆ. ಸುಮಾರು 40 ವರ್ಷಗಳ ಕಾಲ ಸಿಂಡಿಕೇಟ್ ಬ್ಯಾಂಕಿನ ಸೇವೆ ಮಾಡಿದ ಕೆ.ಕೆ. ಪೈ ಅಂಥವರ ಔದಾರ್ಯದಿಂದಲೇ ಇಂದು ದಕ್ಷಿಣ ಕನ್ನಡ ಜಿಲ್ಲೆ, ಅದೇಕೆ ಕರ್ನಾಟಕದ ಅನೇಕ ಬಡವರ ಮನೆಗಳಲ್ಲಿ ದೀಪ ಉರಿಯುತ್ತಿದೆ. ಅವರು ಕೊಟ್ಟ ಉದ್ಯೋಗಾವಕಾಶದಿಂದ ಸಾವಿರಾರು ಕುಟುಂಬಗಳ ಜೀವನ ನಿರ್ವಹಣೆ ಸುಗಮವಾಗಿದೆ. ವ್ಯಕ್ತಿಗತ ಪರಿಜ್ಞಾನ ಕುಟುಂಬದ ಆರ್ಥಿಕ ದುಸ್ಥಿತಿಯ ಪರಿಜ್ಞಾನ ಒಮ್ಮೆ ಆದರೆ ಸಾಕು ಪೈ ಅವರ ಸಹಾಯಹಸ್ತ ಸಿದ್ಧ. ತಮ್ಮ ವರಿಷ್ಠ ಹುದ್ದೆಯಲ್ಲಿ ನಿರ್ಭೀತಿಯಿಂದ ತನ್ನದೇ ಉದ್ಯೋಗ ವಿತರಣೆಯ ನೀತಿಯನ್ನು ಪಾಲಿಸಿದ ಪೈ ಅವರನ್ನು ನಾಡು ಮರೆಯಬಾರದು.

ಕೆ. ಕೆ. ಪೈ ವರಿಷ್ಠಾಧಿಕಾರ ಹೊಂದಿದ್ದ 9 ವರ್ಷ ಬ್ಯಾಂಕಿಂಗ್ ಉದ್ದಿಮೆ ಅತಿ ಕ್ಷಿಪ್ರಗತಿಯಿಂದ ಬೆಳೆಯಿತು. ರಾಷ್ಟ್ರೀಕೃತ ಬ್ಯಾಂಕನ್ನು ಗ್ರಾಮಾಂತರಗಳಿಗೆ ಮುಟ್ಟಿಸುವ ದೃಷ್ಟಿಯಿಂದ ಶಾಖೆಗಳ ಸಂಖ್ಯೆ ಮುಮ್ಮಡಿ ನಾಲ್ಮಡಿ ಬೆಳೆಯುವಾಗ ವಿಸ್ತರಿಸಿದ ಉದ್ಯೋಗಗಳನ್ನು ಜಾತಿಮತ ಬೇದವಿಲ್ಲದೆ ಆರ್ಥಿಕವಾಗಿ ದುರ್ಬಲರಾದ ಜನರಿಗೆ ಪೈ ಒದಗಿಸಿದರು. ಉದ್ಯೋಗಿಯ ವೈಯಕ್ತಿಕ ಉತ್ಕರ್ಷಗಳಲ್ಲಿ ಹರ್ಷಪಟ್ಟರು; ಪೈ ಅವರಿಗೆ ಬಹುಶಃ ಬ್ಯಾಂಕಿನ ಎಲ್ಲ ಅಧಿಕಾರಿಗಳ ಅಲ್ಲದೆ ಕೆಳವರ್ಗದ ನೌಕರರ ಪರಿಸ್ಥಿತಿಯನ್ನು ಹಾರ್ದಿಕವಾಗಿ ಅರ್ಥಮಾಡಿಕೊಂಡು ಅವರ ವೃತ್ತಿ ಜೀವನವನ್ನು ಹಿಂಬಾಲಿಸುತ್ತಿದ್ದರು ಎಂದರೂ ಸರಿಯೇ. ಸಿಂಡಿಕೇಟಿನ ಪರಂಪರೆಯಲ್ಲಿ ಈ ಬಗೆಯ ಮಾನವೀಯತೆಯನ್ನು ರೂಢಿಸಿದ ಶ್ರೀ ಟಿ. ಎ. ಪೈ ಅವರಿಗೆ ಭಾವಂದಿರಾದ ಕೆ. ಕೆ. ಪೈಯವರು ಸಿಂಡಿಕೇಟ್ ಸಂಪ್ರದಾಯವನ್ನು ಇನ್ನೊಂದು ಮಜಲು ಎತ್ತರಿಸಿದ್ದು ರಾಷ್ಟ್ರೀಕರಣದ ಯುಗದಲ್ಲಿ ಎಂದರೆ ಅದಕ್ಕೆ ಇನ್ನಷ್ಟು ಅರ್ಥ ಬರುತ್ತದೆ. ಕೆ. ಕೆ. ಪೈಗಳಿಗಿಂತ ಕಡಿಮೆ ಧೈರ್ಯವುಳ್ಳ ಯಾವನಿಂದಲೂ ಮಾಡಲಾಗದ ಕರ್ತವ್ಯಗಳನ್ನು ಬ್ಯಾಂಕರ್ ಪೈ ಮಾಡಿ ತಮ್ಮ ಸೇವಾ ಕಾರ್ಯದಿಂದ ಧನ್ಯರೆನಿಸಿದ್ದಾರೆ. ಪ್ರವಾಹಗುಂಟ ಈಜಲು ಗೊತ್ತಿರುವ ಕೆ. ಕೆ. ಪೈಯವರು ಸಂದರ್ಭ ಬಂದಾಗ ಅದಕ್ಕೆ ವಿರುದ್ಧವಾಗಿಯೂ ಈಜಾಡಿ ಗೆದ್ದಿದ್ದಾರೆ, ಹೋರಾಡಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದ ಒಳಹೊರಗನ್ನು ಬಲ್ಲ ಪೈ ಅಂಥವರ ಸೇವೆಯನ್ನು ಇಂಡಿಯಾ ಸರ್ಕಾರ ಇನ್ನಷ್ಟು ಬಳಸಿಕೊಳ್ಳಬೇಕಾಗಿತ್ತು ಎಂದು ನನಗನಿಸಿದೆ. ಶುಷ್ಕ ಆರ್ಥಿಕ ವ್ಯವಹಾರ ಒಂದಕ್ಕೆ ಮಾನವೀಯ ಮುಖವನ್ನು ಕೊಡುವುದು ಇಂದಿನ ಭಾರತೀಯ ಆರ್ಥಿಕ ಸನ್ನಿವೇಶದಲ್ಲಿ ಅತ್ಯಗತ್ಯವಾದ ಹೆಜ್ಜೆ ಎಂಬುದನ್ನರಿತು ಆ ದಿಶೆಯಲ್ಲೇ ದಿಟ್ಟ ಹೆಜ್ಜೆ ಇರಿಸಿದ ಪೈ ಅವರನ್ನು ಸಮಾಜ ಸ್ಮರಿಸಬೇಕು.

ಜಿಲ್ಲೆಯ ಮುಖ್ಯವಾಗಿ ಉಡುಪಿಯ ಸಾಮಾಜಿಕ ವಿಷಯಗಳಲ್ಲಿ ಪೈ ಸದಾ ಆಸಕ್ತರು. ಪುಟ್ಟ ಉಡುಪಿಯ ನಗರಸಭೆಗೆ ಒಂದು ಅವಧಿಯಲ್ಲಿ ಅಧ್ಯಕ್ಷರಾಗಿಯೂ ಇದ್ದರು. ಹಾಗಾಗಿ ಬ್ಯಾಂಕಿಂಗ್ ಮಾತ್ರವೇ ಅಲ್ಲ, ಸಾರ್ವಜನಿಕ ಆಡಳಿತ ರಂಗದಲ್ಲೂ ತರಬೇತಿ ಪಡೆದರು. ಯಾವುದೇ ಸ್ಥಾನವೂ ಅವರಿಗೆ ಸಣ್ಣದೆಂದು ಕಂಡದ್ದಿಲ್ಲ. ಯಾವ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಅಧ್ಯಕ್ಷತೆಯೋ ಅಕಾಡೆಮಿ ಶಾಲೆಗಳ ಆಡಳಿತ ಸದಸ್ಯತ್ವವೋ ಯಾವುದಾದರೋ ಸರಿಯೆ ಅದರಲ್ಲಿ ತಮ್ಮ ಸಮಯ ವಿನಿಯೋಗಕ್ಕೆ ಅವರು ಸಿದ್ಧರು. ಯಾವುದೇ ಕೆಲಸದಲ್ಲಾದರೂ ಕೂಲಂಕಷ ವಿಮರ್ಶೆ ಮಾಡದೆ ವಿವರಗಳನ್ನರಿಯದೆ ನಿರ್ಣಯ ಕೊಡುವವರಲ್ಲ. ಅಧಿಕಾರ ನಿರ್ವಹಣೆಯ ಶಿಸ್ತು ಪ್ರತಿಯೊಬ್ಬನೂ ಗಳಿಸಬೇಕೆಂದು ಅವರ ನಿಲುಮೆ. ತಾನು ಕಲಿತ ಕಡಿಯಾಳಿ ಶಾಲೆಯ ಮೇಲೆ ಅವರ ಪ್ರೇಮ ಅಪಾರ; ಅಲ್ಲಿನ ಅಧ್ಯಾಪಕರ ಮೇಲೆ ಪ್ರೀತಿ. ಅಲ್ಲಿನ ಶತಮಾನೋತ್ಸವವನ್ನು ವೈಭವದಿಂದ ಆಚರಿಸಲು ನೆರವಾದರು. ಹೌದು ಕಡಿಯಾಳಿ ಶಾಲೆಯ ಸಂಬಂಧವೇ ನಮ್ಮಿಬ್ಬರನ್ನು ಬೆಸೆದ ಕೊಂಡಿ. ನನ್ನ ಉದ್ಯೋಗ ಜೀವನದಲ್ಲಿ ಹಲಬಗೆಯ ನೆರವು ನೀಡಿದ್ದಾರೆ. ಧೈರ್ಯ ತುಂಬಿದ್ದಾರೆ. ನಾನಾ ಮುಖವಾಗಿ ಹರಿದ ಎಂ. ಜಿ. ಎಂ. ಕ್ರಿಯಾಕರ್ತವ್ಯಗಳನ್ನು ನಾನು ಕೈಗೊಳ್ಳುವಾಗ ಪೈ ಅವರಂಥ ಆಪದ್ಬಾಂಧವರು ನನ್ನ ಬೆನ್ನಿಗಿದ್ದಾರೆಂದು ದುಡುಕುತ್ತಿದ್ದೆನೇ ವಿನಾ ನನ್ನೊಬ್ಬನ ಶಕ್ತಿಯಿಂದಲ್ಲ. ನೇಪಥ್ಯದಲ್ಲಿರುವ ನನ್ನ ಸ್ನೇಹಿತ ಬಲವೇ ನನ್ನ ಬಲ. ಏಕಾಕಿಯಾಗಿ ನಾನು ದುರ್ಬಲನೆಂಬ ಎಚ್ಚರ ನನ್ನಲ್ಲಿತ್ತು. ವೈಯಕ್ತಿಕವಾಗಿ ನನ್ನ ಮಗನಿಗೂ ಒಂದು ಕೆಲಸ

ಕೊಟ್ಟು ಬ್ಯಾಂಕಿಗೆ ಸೇರಿಸಿಕೊಂಡು ನಮ್ಮ ಕುಟುಂಬಕ್ಕೆ ಅನ್ನದಾತರೂ ಎನಿಸಿದ್ದಾರೆ. ಈಗ ಎಂ.ಜಿ.ಎಂ. ಕಾಲೇಜಿನ ಅಧ್ಯಕ್ಷರಾಗಿ ಬಂದಿದ್ದಾರೆ – ಕಾಲೇಜು ಬೆಳವಣಿಗೆಯಲ್ಲಿ ಆಳವಾದ ಆಸಕ್ತಿವಹಿಸಿದ್ದಾರೆನ್ನುವುದು ನನಗೆ ಆನಂದದ ವಿಷಯ.

ಕೆ. ಕೆ. ಪೈಯವರ ತಮ್ಮನೇ ಪ್ರಭಾಕರ ಪೈ. ಈತ ಮದರಾಸು ಕ್ರಿಶ್ಚನ್ ಕಾಲೇಜಿನಲ್ಲಿ ಬಿ.ಎಸ್.ಸಿ. ಮಾಡಿ ಉದ್ಯೋಗಾರ್ಥಿಯಾಗಿ ಎರಡು ವರ್ಷ ಮುಂಬಯಿಯಲ್ಲಿ ಅಲೆದು ಬಳಿಕ ತಮ್ಮ ಕುಟುಂಬದ ಅಂಗಡಿಯನ್ನು ಸೇರಿ ಸಮರ್ಥವಾಗಿ ಅದನ್ನು ನಡೆಸಿಕೊಂಡು ಬಂದಿದ್ದಾನೆ. ಅವರಿಗೂ ನನಗೂ ಗಳಸ್ಯಕಂಠಸ್ಯ ಎಂಬುದರಿಂದ ಏಕವಚನದಲ್ಲಿಯೇ ಬರೆಯುತ್ತೇನೆ. ಪ್ರತಿಯೊಬ್ಬ ಮನುಷ್ಯನಿಗೂ ಅವನ ಜೀವನದಲ್ಲಿ ಇಂಥ ಒಬ್ಬ ಮಿತ್ರರು ಇರುತ್ತಾರೆ. ಇರಬೇಕು ಅಂದುಕೊಂಡಿದ್ದೇನೆ. ಆಪತ್ತು ಅನುಪತ್ಯಗಳಿಗೆ ಬೇಕಾದವರು. ಎಂಥ ಕಾಲದಲ್ಲೂ ವಿಮರ್ಶೆ ಮಾಡದೆ ಸಹಾನುಭೂತಿ ತೋರಿಸುವವರು ಬೇಕಾಗುತ್ತಾರಲ್ಲವೆ? ಯಾರಿಗೇ ಆದರೂ ಈ ಸಂಸಾರ ಸಾಗರ ಸಾಗರವೇ. ಹಾದಿ ಇಲ್ಲದ್ದು, ನಾವೇ ಮಾಡಿಕೊಳ್ಳಬೇಕಾದ ಹಾದಿಯಲ್ಲಿ ಕಿರುಗಾಳಿ, ಸುಳಿಗಾಳಿ. ಬಂಡೆ ಸಿಕ್ಕಾಗ ಬೆಂಬಲ ನೀಡಲು ಇನ್ನೊಂದು ಜೀವ ಸಿಕ್ಕರೆ ಹೋರಾಟ ಸುಲಭವಾಗುತ್ತದೆ. ನನಗಿಂತ ಮೊದಲು ಕಾಲೇಜು ಮೆಟ್ಟಲು ಹತ್ತಿದ ಪ್ರಭಾಕರನ ದಾರಿಯಲ್ಲೇ ನಾನು ಹೋದೆ – ಅಂದರೆ ಮದರಾಸಿಗೆ ಹೋಗಿ ಅದೇ ಕಾಲೇಜಿನಲ್ಲಿ; ಅದೇ ಹಾಸ್ಟೆಲಿನಲ್ಲಿದ್ದು ಕಲಿತು ಬಂದೆ. ನನಗಿಂತಲೂ ಭಾವುಕನಾದ ಪ್ರಭಾಕರ ಕ್ರಿಶ್ಚನ್ ಕಾಲೇಜು ಉತ್ಸವಗಳಿಗೆಲ್ಲ ಅಕ್ಷರಶಃ ತನ್ನ ಕೆಲಸಗಳನ್ನು ಬದಿಗೊತ್ತಿ ಧಾವಿಸುತ್ತಾನೆ. ಹಳೆ ದಿನಗಳ ಮೆಲಕು ಹಾಕುತ್ತಾನೆ. ನನಗೆ ವರದಿ ಮಾಡಿ ಸಂತೋಷ ಪಡುತ್ತಾನೆ. ತನ್ನ ಮಕ್ಕಳಿಗೆಲ್ಲ ಉತ್ತಮ ಶಿಕ್ಷಣ ಕೊಡಿಸಿ ವೈದ್ಯವೃತ್ತಿ, ಬ್ಯಾಂಕಿಂಗ್, ಮುಂತಾದ ಉದ್ಯಮಗಳಿಗೆ ಅರ್ಹರನ್ನಾಗಿ ಮಾತ್ರವೇ ಅಲ್ಲ ವಿದೇಶಿಯ ನಿರ್ಯಾತಕ್ಕೆ ಅಣಿಗೊಳಿಸಿದ್ದಾನೆ. ಗುಣಶೀಲ ಸಮನ್ವಿತರಾದ ಮಕ್ಕಳಲ್ಲಿ ವಿಧೇಯತೆಯ ಪಾರಂಪರಿಕ ಮೌಲ್ಯವನ್ನು ನೆಟ್ಟು ಪೋಷಿಸಿದ್ದಾನೆ. ಬುದ್ಧಿ ಭಾವಗಳ ಒಂದು ಅಪೂರ್ವ ಸಂಗಮ ನನ್ನ ಮಿತ್ರ, ವ್ಯಾಪಾರದಲ್ಲಿ ನಿಷ್ಠಾವಂತ, ಅಹರ್ನಿಸಿ ದುಡಿಯಬಲ್ಲವನು, ಇಳಿವಯಸ್ಸಿನಲ್ಲೂ ತರುಣನಂತೆ ದುಡಿಯುವ ಮನೋಧಾರ್ಢ್ಯವುಳ್ಳವನು. ಯಕ್ಷಗಾನದ ವಿದೇಶ ಸಂಚಾರ ಕಾಲದಲ್ಲಿ ನನ್ನ ಒಡನಾಡಿಯಾಗಿ ಅದರ ಹೊರೆ ಹೊತ್ತವನು, ನನ್ನ ಹೊರೆ ಇಳಿಸಿದವನು, ಬಾಲ್ಯ ಸ್ನೇಹವನ್ನೂ, ಕಡಿಯಾಳಿಯ ಆಟದ ಓಟದ ಬಯಲುಗಳನ್ನೂ ಕ್ರಿಶ್ಚನ್ ಕಾಲೇಜಿನ ಸ್ಮರಣೆಯನ್ನು ಸದಾ ಹಸಿರಾಗಿಟ್ಟುಕೊಂಡು ನನ್ನ ವೈಯಕ್ತಿಕ, ಕೌಟುಂಬಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಪಾಲ್ಗೊಂಡವನು. ಕಷ್ಟಕಾರ್ಪಣ್ಯಗಳಿಗೆ ನೆರವು ನಿಂತು ಬೇಸಗೆಗೆ ನೆರಳೆನಿಸಿದವನು. ನನಗೆ ಮಾತ್ರವೇ ಅಲ್ಲ ವೈಯಕ್ತಿಕ ನೆಲೆಯಲ್ಲಿ ಆತ ತನ್ನ ಸಂಸಾರದ, ಬಂಧುಬಳಗದ, ನೆರೆಹೊರೆಯವರ, ಮಿತ್ರರ ಸುಖಕಷ್ಟಗಳಲ್ಲಿ ಸಹಭಾಗಿಯಾಗಿ, ಮಾರ್ಗದರ್ಶಕನಾಗಿ, ಉಪದೇಶಕನಾಗಿ ಯಾವ ಸಂದರ್ಭದಲ್ಲಿಯೂ ಒಂದು ಪ್ರಶ್ನೆಗೆ ಹತ್ತು ಪರಿಹಾರ ಸೂಚಿಸುವ ಜಾಣ್ಮೆಯುಳ್ಳವನಾಗಿ ಪರೋಪಕಾರಿ ಎನಿಸಿದ್ದಾನೆ. ವೈಯಕ್ತಿಕವಾದ ಸ್ನೇಹ ಮತ್ತು ತೀರ ಆತ್ಮೀಯತೆಯ ದೆಸೆಯಿಂದ ಇಷ್ಟಕ್ಕೇ ಈ ಆಖ್ಯಾನ ನಿಲ್ಲಿಸಬೇಕಾಗಿದೆ.

ನಾನು ಉಡುಪಿಯಲ್ಲಿ ಪ್ರಿನ್ಸಿಪಾಲಗಿರಿಯ ದೆಸೆಯಿಂದ ಖ್ಯಾತನಾಗುವ ಮುನ್ನ, ಕ್ರಿಶ್ಚನ್ ಹೈಸ್ಕೂಲ್ ಮತ್ತು ಕಡಿಯಾಳಿ ಉಪಾಧ್ಯಾಯನೆಂದು ಎಲ್ಲರಿಗೂ ನನ್ನ ಪರಿಚಯವಿತ್ತು. ಆದರೆ ಎಂ. ಜಿ. ಎಂ. ಸೇವೆಯ ದೀರ್ಘ ಅವಧಿಯಲ್ಲಿ – 30ವರ್ಷ (15 ವರ್ಷ ಅಧ್ಯಾಪಕ, 15 ವರ್ಷ ಪ್ರಿನ್ಸಿಪಾಲ) ಊರಿನ ಸರ್ವ ಕುಟುಂಬಗಳ ಸಂಪರ್ಕವೂ ಅವರ ಮಕ್ಕಳ ಮೂಲಕ ನನಗೆ ಲಭಿಸಿತು, ಕ್ರಮೇಣ ಜಿಲ್ಲೆಗೂ ಅದು ವಿಸ್ತರಿಸಿತು. ಈಗ ನಾನು ಪಾದಯಾತ್ರೆ ಮಾಡುತ್ತಾ ಹೊರಟಲ್ಲಿ ಊಟದ ಹೊತ್ತಿಗೆ ನನ್ನೊಬ್ಬ ವಿದ್ಯಾರ್ಥಿಯ ಮನೆ ಸಿಕ್ಕೇ ಸಿಗುತ್ತದೆ. ನನ್ನ ಜಾನಪದ ಸಂಶೋಧನೆಯ ಕಾಲಕ್ಕೆ ನಾವು ಯಾವ ಹಳ್ಳಿಯನ್ನಾರಿಸಿದರೂ ಅಲ್ಲಿ ನಮ್ಮ ವಿದ್ಯಾರ್ಥಿಗಳು ಬೆಂಬಲಕ್ಕೆ ಸಿಗುತ್ತಾರೆ. ಹೀಗಾಗಿ ನನ್ನ ವಿದ್ಯಾರ್ಥಿ ಸಂದೋಹದ ಮಾತಾಪಿತರುಗಳ ಸ್ನೇಹ ನನ್ನ ಬಲು ದೊಡ್ಡ ಸಂಪತ್ತು. ಒಂದು ಸಂದರ್ಭ ಹೇಳುತ್ತೇನೆ – ನನ್ನ ಸೇವಾವಧಿಯ ಕೊನೇ ದಿನ ಮಾರ್ಚ್ 31, 1979, ಮುಂಜಾನೆದ್ದು ನಾನು ದಿನಪತ್ರಿಕೆ ಬಿಡಿಸಿದ್ದೆನಷ್ಟೆ, ಬಸ್ಸಿನಿಂದ ಒಬ್ಬರು ಮಹನೀಯರು (ಅಮ್ಮುಂಜೆ ಮಾಧವ ನಾಯಕ್) ಇಳಿದು ಬಂದರು. ಏನೇನೋ ಗೋಣಿ ಚೀಲದಲ್ಲಿ ತುಂಬಿಸಿ ಎಳೆದುಕೊಂಡು ಬರುತ್ತಿದ್ದಾರೆ. ಮನೆ ಒಳಕ್ಕೆ ಬಂದು ಅದನ್ನು ನನ್ನ ಕೈಗೊಪ್ಪಿಸಿ ಇದೇನು ಸ್ವಾಮಿ ಎಂದು ಕೇಳಿದರೆ ನೋಡಿ ನೀವು ನಮ್ಮ ಮಕ್ಕಳ ಬಗ್ಗೆ ಎಷ್ಟೋ ಚಿಂತೆ ಮಾಡಿದ್ದೀರಿ, ಇವತ್ತು ನೀವು ನಿವೃತ್ತರಾಗುತ್ತೀರಿ ಎಂದು ಪೇಪರಿನಲ್ಲಿ ಓದಿದೆ ಎಂದರು. ಚೀಲ ತುಂಬ ಫಲವಸ್ತು ಪುಷ್ಪ, ವ್ಯಾಪಾರದಿಂದ ನಿವೃತ್ತರಾಗಿದ್ದ ನಾಯಕರು ಮಾಡಿದ ಈ ಕೆಲಸ ಬಲು ದೊಡ್ಡದೆಂದು ನನಗನಿಸಿತು. ಸಾರ್ವಜನಿಕ ನೆಲೆಯ ಸಭೆ ಸನ್ಮಾನಕ್ಕಿಂತಲೂ ಮಾರ್ಮಿಕವಾದ ಈ ವೈಯಕ್ತಿಕ ಸ್ನೇಹ, ಉಪಕಾರ ಸ್ಮರಣೆ ಈ ದೇಶ ಇನ್ನೂ ಕೆಟ್ಟಿಲ್ಲವೆಂಬುದಕ್ಕೆ ಉದಾಹರಣೆ. ಅಂದೇ ಮಧ್ಯಾಹ್ನ

ಇನ್ನೊಬ್ಬರು ದೂರದ ಪುತ್ತೂರಿನಿಂದ ಇದೇ ರೀತಿ ಕಪ್ಪುಕಾಣಿಕೆ ಸಹಿತ ಬಂದು ಹೊರೆ ಇಳಿಸಿ ಹೋದರು. ಕುಪ್ಪಳಾಚಾರ ಮರಿಭಟ್ಟರ ಮಗ ರಾಮಕೃಷ್ಣ ಭಟ್ಟ – ಇವರು ನನ್ನ 'ಲೋಕಾಭಿರಾಮ' ಬರೆಹದ ಅಭಿಮಾನಿ-ಸಭೆಯು ತನಕ ನಿಲ್ಲದೆ ನನ್ನ ಗೌರವ ಸೂಚಿಸಬೇಕು ಎಂದು ಬಂದೆ ಎಂದರು; ನಾನು ಮೂಕವಿಸ್ಮಿತ.

ನನ್ನ ನಿವೃತ್ತಿಯ ಆ ದಿನವನ್ನು, ಆ ವರ್ಷವನ್ನೇ ಎನ್ನಿ ನಾನು ಮರೆಯಲಾರೆ. ನನಗೆ ಖಂಡಿತ ಪೂರ್ವಜನ್ಮವಿಲ್ಲ. ಏಕೆಂದರೆ ನಾನು ಮಾಡಿದ ಪುಣ್ಯ ಕಾರ್ಯಕ್ಕೆ ಇಹ ಜನ್ಮದಲ್ಲೇ ನನಗೆ ರಸೀದಿ ಸಿಕ್ಕಿದೆ ಆ ಸಮಾರಂಭದ ವೈಭವ. ಅದಕ್ಕೆ ಹಿಂದಿನ ಸಾರ್ವಜನಿಕ ಹೃದಯಸ್ಪಂದನ ಎಣಿಸಿದರೆ ಇಂದಿಗೂ ರೋಮಾಂಚನವಾಗುತ್ತದೆ. ಆ ವರ್ಷದ ಕಾಲೇಜು ಡೇ ಮುಗಿಸಿ, ವಿನೋದಾವಳಿಗೆ ಸ್ವಲ್ಪ ಹೊತ್ತು ಹಾಜರಿ ಹಾಕಿ ಮನೆಗೆ ಬಂದು ಮಲಗಿದ ನನ್ನನ್ನು ಎಬ್ಬಿಸಿ ನನ್ನ ಹುಡುಗರು ಮತ್ತೊಮ್ಮೆ ನನಗೆ ಉಪಕಾರ ಸ್ಮರಣೆ ಹೇಳಿದ ರೀತಿ – ಸ್ಟ್ಯಾಂಡಿಂಗ್ ಒವೇಶನ್‌ನ ರೀತಿ — ಹೃದಯಂಗಮವಾಗಿತ್ತು. ಇಂಥ ಸಂದರ್ಭಗಳಲ್ಲಿ ನನ್ನ ಮನಸ್ಸು ತುಂಬಿ ಬರುತ್ತದೆ. ಮಾರ್ಚ್ 31ಕ್ಕೆ ನನ್ನ ನಿವೃತ್ತಿ ಸಭೆಯನ್ನು ಅರ್ಥಪೂರ್ಣವಾಗಿ ನಡೆಸಬೇಕೆಂದು ನನ್ನ ಪೂರ್ವ ವಿದ್ಯಾರ್ಥಿಗಳು ಶ್ರೀ ವಿಜಯನಾಥ ಶೆಣೈ ಮತ್ತು ಟಿ. ಮೋಹನ್ ದಾಸ್ ಪೈ ಅವರು ದೀಕ್ಷಾಬದ್ಧರಾಗಿದ್ದರು. 'ಪ್ರವೃತ್ತಿ' ಎಂಬ ಪುಸ್ತಕವನ್ನು ಮುದ್ರಿಸಿ ಹೊಗಳಿಕೆ ಒಪ್ಪಿಸಿದರು. ಮಾಲೆ ಹಾಕುವವರೆಲ್ಲ ಜತೆಯಲ್ಲಿ ಒಂದೊಂದು ಪುಸ್ತಕವನ್ನು ತರಬೇಕೆಂದು ವಿಜಯನಾಥರ ತಾಕೀತು ಇದ್ದಂತೆ ತೋರಿತು. ನಿವೃತ್ತಿಯ ಹಿಂದಿನ ವಾರ ನಾನೊಂದು ನಿರ್ಧಾರ ಕೈಗೊಂಡು ನನ್ನ ಲೈಬ್ರರಿಯ ಹೆಚ್ಚಿನ ಪುಸ್ತಕಗಳನ್ನು ಗೋವಿಂದ ಪೈ ಕೇಂದ್ರದ ಗ್ರಂಥಾಲಯಕ್ಕೆ ದೇಣಿಗೆ ಕೊಟ್ಟಿದ್ದೆ. ಇನ್ನು ಮುಂದೆ ಬರವಣಿಗೆ ಮಾಡುತ್ತೇವೆ. ಓದುಗಾರಿಕೆ ಬರವಣಿಗೆಗೆ ವಿಘ್ನ ಅಲ್ಲವೆ? ಆದ್ದರಿಂದ ಪುಸ್ತಕಗಳು ಬೇಡ ಎಂದು ನಿಶ್ಚಯಿಸಿದೆ. ಆದರೆ ವಿಜಯನಾಥನ ಅಪ್ಪಣೆಯಿಂದಾಗಿ ಮಾಲೆಯ ಜತೆಗೆ ಮತ್ತೊಮ್ಮೆ ನೂರಾರು ಪುಸ್ತಕಗಳು ಕಪಾಟು ಸೇರಿದವು. ಪುಸ್ತಕಗಳಿಂದ ನಾನು ತಪ್ಪಿಸಿಕೊಳ್ಳಲಾರೆನೆಂದು ತೋರುತ್ತದೆ. ಉಡುಪಿಯ ಸಾರ್ವಜನಿಕರಲ್ಲಿ ನನ್ನ ಕಾಯಕವನ್ನು ಮೆಚ್ಚಿಕೊಂಡ ಸರ್ವರೂ ಉಪಸ್ಥಿತರಾಗಿ ತಮ್ಮ ವಿಶಾಲ ಹೃದಯ ಹಾಗೂ ಸ್ನೇಹದ ಪರಿಚಯ ಮಾಡಿಸಿದರು. ನನಗಂತೂ ಆ ಸಮಾರಂಭ ಸ್ವಪ್ನಸದೃಶ. ಇನ್ನಿಲ್ಲ, ಮುನ್ನಿಲ್ಲ.

ಶ್ರೀ ಟಿ.ಎ. ಪೈ ಅವರು ಯಾವಾಗಲೂ ನೆನಪಿಸಿಕೊಳ್ಳುತ್ತಿದ್ದುದುಂಟು – 'ಈತನಿಗೆ ನಮ್ಮ ಬ್ಯಾಂಕಿಗೆ ಸೇರು ಎಂದು ಹೇಳಿದರೆ ಎಲ್ಲರೂ ಹಪಹಪಿಸುವ ಆ ಹುದ್ದೆಯನ್ನು ಈತ ನನಗದು ಬೇಡ ಎಂದಿದ್ದ. ಇಂಥ ಒಳ್ಳೇ ಉದ್ಯೋಗವನ್ನು ಈ ರೀತಿ ನಿರಾಕರಿಸುವ ಮೂರ್ಖ(ಫೂಲ್ಸ್)ರು ಇರುವ ತನಕ ದೇಶದ ಆರೋಗ್ಯ ಚೆನ್ನಾಗಿದೆ ಎಂದು ಈಗ ನನಗನ್ನಿಸುತ್ತಿದೆ'. ಬ್ಯಾಂಕ್ ಲೆಕ್ಕ ಇಡುವ ಉದ್ಯೋಗ ಎನ್ನಿ, ಯಾವುದೇ ಲೆಕ್ಕವನ್ನಾದರೂ ಇಡುವ ಉದ್ಯೋಗ ನನಗಾಗದು ಎಂದು ನಾನು ನಿರ್ಣಯಿಸಿ ಬಿಟ್ಟಿದ್ದೆ. ಪ್ರಿನ್ಸಿಪಾಲನಾಗಿರುವಾಗಲೂ, ಕಾಲೇಜಿನ ಲೆಕ್ಕ ನೋಡಲು 'ಬರ್ಸಾರ' ಅಂತ ಒಂದು ವಿಶೇಷ ಹುದ್ದೆಯನ್ನು – ಮದರಾಸು ಕ್ರಿಶ್ಚನ್ ಕಾಲೇಜು ಮಾದರಿಯಲ್ಲೇ ನಿರ್ಮಾಣ ಮಾಡಿ ನನ್ನ ಸಹೋದ್ಯೋಗಿ ಒಬ್ಬರನ್ನು ಅದಕ್ಕೆ ನೇಮಿಸಿ ನಾನು ದಿನದ ಕೊನೆಯ ಲೆಕ್ಕ ತಪಾಸಣೆಯ ಹೊರೆಯನ್ನಿಳಿಸಿಕೊಂಡು ಬಿಟ್ಟಿದ್ದೆ. ಲೆಕ್ಕಾಚಾರದ ಕಾಷ್ಠ ವ್ಯಸನವನ್ನು ಎಂದೂ ಹಚ್ಚಿಕೊಳ್ಳಲಿಲ್ಲ. ನೂರಾರು ಬ್ಯಾಂಕರುಗಳು ನಮ್ಮ ಕಾಲೇಜು ಮೆಟ್ಟಲಿನಿಂದಲೇ ವಿಶ್ವವಿಶಾಲವಾದ ಬ್ಯಾಂಕಿಂಗ್ ಕ್ಷೇತ್ರಕ್ಕೆ ಪ್ರವೇಶ ಮಾಡಿ ಅಲ್ಲಿ ರಾರಾಜಿಸುತ್ತಿದ್ದಾರೆ. – ಅಖಿಲ ಭಾರತದಲ್ಲಿ, ಏಕೆ ಜಗತ್ತಿನ ಎಲ್ಲೆಡೆಗೂ. ಇದರಲ್ಲಿ ರಾಷ್ಟ್ರೀಕೃತ ಬ್ಯಾಂಕ್–ಕಾರ್ಪೋರೇಶನ್ನಿನ ಅಧ್ಯಕ್ಷ ಯೇಣಗುಡ್ಡೆ ಶಿವಣ್ಣ ಹೆಗ್ಡೆ – ವೈ. ಎಸ್. ಹೆಗ್ಡೆ – ಕೂಡ ವರ್ಗದಲ್ಲಿ ಕೂತಿದ್ದರೆಂಬುದು ನನಗೆ ಹೆಮ್ಮೆಯ ವಿಷಯ. ಇಂಥವರೆಲ್ಲ ಇರುವಾಗ ನಾನು ಏಕೆ ಲೆಕ್ಕಕ್ಕಾಗಿ ಒದ್ದಾಟ ಮಾಡಲಿ?

ಶ್ರೀ ಟಿ. ಎ. ಪೈ ಅವರಂಥ ಬ್ಯಾಂಕರುಗಳ ಸ್ನೇಹ ಮರೆಯಲಾಗದ್ದು. ನನ್ನ ದಿಲ್ಲಿಯ ವಿದ್ಯಾರ್ಥಿಗಳು 1974ರಲ್ಲಿ ಕಾಲೇಜು ಬೆಳ್ಳಿ ಹಬ್ಬ ಆಚರಿಸಿದ ಸಂದರ್ಭದಲ್ಲಿ ಕೆಲವು ಲಕ್ಷ ಹಣ ಕೂಡಿಸಲು ನೆರವಾದರು. ಟಿ. ಎ. ಪೈ ಅವರು ಆಗ ಸಚಿವರಾದ್ದರಿಂದ ಅವರ ಹೆಸರು ಹೇಳದೆಯೇ ನಾವು ನಮ್ಮ ಸಂಗ್ರಹಕಾರ್ಯ ನಡೆಸಬೇಕಾಗಿತ್ತು. ಅದು ಸಾಧ್ಯವೂ ಇತ್ತು. ಏಕೆಂದರೆ 25 ವರ್ಷಗಳಲ್ಲಿ ನಮ್ಮ ವಿದ್ಯಾರ್ಥಿಗಳೇ ರೆಕ್ಕೆ ಬಲಿತು ವ್ಯಾಪಾರಿ ಪ್ರಪಂಚದಲ್ಲಿ ಸ್ವತಂತ್ರವಾಗಿ ಈಸಾಡಬಲ್ಲವರಾಗಿದ್ದರು. ಪ್ರಭಾವಶಾಲಿಗಳಾಗಿದ್ದರು. ಆದರೆ ಟಿ. ಎ. ಪೈ ಅವರನ್ನು ನಾನು ಬರೇ ಮಂತ್ರಿ ಮತ್ತು ಬ್ಯಾಂಕರ್ ರೂಪದಲ್ಲಿ ಕಾಣಲಾರೆ. ಅವರಂಥ ಒಬ್ಬ ಹೃದಯವಂತ, ಸಂಸ್ಕಾರವಂತ ಮನುಷ್ಯನೇ ನನ್ನ ಅನುಭವದಲ್ಲಿ ಬಂದಿಲ್ಲ. ವ್ಯವಹಾರ ಪ್ರತಿಭೆಯ ಪ್ರಖರತೆಯ ಜತೆಗೆ ಅಷ್ಟೊಂದು ಹೃದಯವಂತಿಕೆಯನ್ನು ಸಾಧಿಸಿಕೊಂಡಿದ್ದರಿಂದಲೇ ಅವರ ಹೆಸರು ಕರುಣೆಗೆ ಮನೆಮಾತಾಗಿದೆ. ಪೂರ್ವಜನ್ಮ ಸಂಸ್ಕಾರ ಬಲದಿಂದಲೇ ಅವರಿಗೆ ದೇವರು ಇಂಥ ಹೃದಯ ಕೊಟ್ಟಿರಬೇಕು. ಕಾಲೇಜಿನ ಕರಸ್ಪಾಂಡೆಂಟ್ ಆಗಿ ಅವರು ನನಗೆ ನೀಡಿದ ಸ್ವಾತಂತ್ರ್ಯ ಸಂಸ್ಥೆಯ ಬೆಳವಣಿಗೆಯಲ್ಲಿ ವಹಿಸಿದ ಪಾತ್ರದ ಬಗ್ಗೆ ಹಿಂದಿನ ಪರಿಚ್ಛೇದಗಳಲ್ಲಿ ಬರೆದಿದ್ದೇನೆ. ಇಲ್ಲಿ ಇಷ್ಟೇ ಹೇಳಬಲ್ಲೆ – ನನ್ನ ಮಟ್ಟಿಗೆ ಇವತ್ತಿಗೂ ಟಿ. ಎ. ಪೈ ತಮ್ಮ ಹಿಂ

ಯರಾದ ಮಾಧವ ಪೈಗಳಂತೆ ಪ್ರಾತಃ ಸ್ಮರಣೀಯರು. ಈ ಮಾತು ಎಷ್ಟು ದೊಡ್ಡದು ಎಂಬುದು ನನಗೀಗ ತಿಳಿದಿದೆ. ಯಾವುದೇ ಕೆಲಸ ಮಾಡುತ್ತಿರುವಾಗ ಟಿ. ಎ. ಪೈ ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಮನಸ್ಸಿನಲ್ಲಿ ಖೇದ ಮೂಡುತ್ತದೆ – ಎಷ್ಟು ವರ್ಷ ಕಳೆದರೂ ಅವರ ಹಸನ್ಮುಖ ಮಾಸಲೊಲ್ಲದು.

ಟಿ. ಎ. ಪೈ ಅವರ ತಮ್ಮ, ಬಹು ವರ್ಷ ಕಾಲ ಮಣಿಪಾಲ ಎಕಾಡೆಮಿಯಲ್ಲಿ ಸೇವಾನಿರತರಾಗಿರುವ ಟಿ. ರಮೇಶ ಪೈ ಅವರದು ಒಂದು ಅಪೂರ್ವ ವ್ಯಕ್ತಿತ್ವ. ವಿಶ್ವ ಸಂಚಾರಿಯಾದ ಅವರ ಅನುಭವದ ಹರವು ಬಹುದೊಡ್ಡದು. ವಿದ್ಯಾರಂಗದ ಬಗ್ಗೆ ಅವರ ತೀರ್ಮಾನಗಳು, ಸಿದ್ಧಾಂತಗಳು ಇವತ್ತಿನ ಜಗತ್ತಿನ ಸ್ಥಿತಿಗೆ ಅನುಕೂಲವಾದವು. ಜಡ್ಡು ಹಿಡಿದ ಶಿಕ್ಷಣ ಪದ್ಧತಿಗೆ ಇದನ್ನೆಲ್ಲ ಸ್ವೀಕರಿಸುವ ಶಕ್ತಿ ಇಲ್ಲದೆ ಹೋದಾಗಲೂ ಕಣ್ತೆರದು ಜಗದಗಲ ಸಂಚರಿಸುವ ರಮೇಶ ಪೈಗೆ ಬೌದ್ಧಿಕ ಮಟ್ಟದಲ್ಲಿ ಒಬ್ಬ ಶಿಕ್ಷಣ ತಜ್ಞನೆಂಬ ಬಿರುದು ಕೊಡಲೇ ಬೇಕು. ನಮ್ಮ ನಮ್ಮ ಕೆರೆಯೇ ನಮ್ಮ ಜಗತ್ತೆಂದು ಕಪ್ಪೆ ಭ್ರಮಿಸಿದಂತೆ ವಿದ್ಯಾರಂಗದಲ್ಲಿ ಕಾರ್ಯ ನಿರತರಾಗಿರುವ ನಮಗೆ ಗೋಚರವಾಗದ ಸತ್ಯಗಳು, ಸತ್ವಗಳೂ ಅದಕ್ಕೆ ತುಸು ದೂರ ನಿಂತು ನೋಡಬಲ್ಲವರಿಗೆ ಕಾಣಿಸಬಹುದಲ್ಲವೆ? ಇಂಥ ಕಾಣ್ಕೆಗಳನ್ನು ಶಿಕ್ಷಕರು ತನ್ನ ಸೀಮೆಗೆ ಸೇರಿಸಿಕೊಳ್ಳಬೇಕು. ಅಕಾಡಮಿಯ ಭಾಗ್ಯ ನಿರ್ಮಾಣದಲ್ಲಿ ರಮೇಶ ಪೈ ಮಹತ್ವದ ಪಾತ್ರ ವಹಿಸಿದ್ದಾರೆ. ಡಾ. ಮಾಧವ ಪೈಗಳಿಗೆ ಬಲಗೈ ಬಂಟನಾಗಿ ದುಡಿದು ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಇವರೊಡನೆ 5 ಮಿನಿಟು ಮಾತನಾಡಿದರೂ ಸಾಕು ಒಂದು ಸಲಕ್ಕೆ ಹೊಸ ಗಾಳಿ ಬೀಸಿದಂತಾಗುತ್ತದೆ. ಅವರು ಮಾಡುವ ಮೂರು ಕೆಲಸದ ಬಗ್ಗೆ ಹೇಳಬೇಕು (1) ನನ್ನ ಜನ್ಮ ದಿನವನ್ನು ನೆನಪಿನಲ್ಲಿಟ್ಟು ನನಗೇ ಮರೆತ ಆ ದಿನವನ್ನು ನನಗೆ ತಪ್ಪದೆ ಜ್ಞಾಪಿಸುವುದು – ಪ್ರತಿ ವರ್ಷವೂ (2) ಶಿಕ್ಷಣಕ್ಕೆ, ಕಲೆಗೆ ಸಂಬಂಧ ಪಟ್ಟ ಯಾವುದೇ ಲೇಖನದ ಪ್ರತಿಯನ್ನು ನನಗೆ ಕಳಿಸಿಕೊಡುವುದು. ಹತ್ತಾರು ಕಂಪನಿಗಳ ಅಧ್ಯಕ್ಷತನದ ಗಡಿಬಿಡಿಯ ನಡುವೆಯೂ ಇದನ್ನು ಮರೆಯುವವರಲ್ಲ. (3) ಮಣಿಪಾಲಕ್ಕೆ ಬರುವ ಸ್ವದೇಶ ಯಾ ವಿದೇಶದ ಅತಿಥಿಗಳಿಗೆ ಮಾರ್ಗದರ್ಶಕರಾಗಿ ದಣಿವರಿಯದೆ ಮಲ್ಪೆಯಿಂದ ಮಣಿಪಾಲದ ವರೆಗೆ ಸಂಚರಿಸುವುದು. ಸಂಸ್ಥೆಯಲ್ಲಿ ಅವರು ಪಡೆದ ತಾದಾತ್ಮ್ಯವನ್ನೂ, ಅವರು ಅದಕ್ಕೆ ಕೊಡುವ ಸಮಯ ಮತ್ತು ಪರಿಶ್ರಮವನ್ನು ಕಂಡು ನಾನು ಬೆರಗಾಗಿದ್ದೇನೆ.

ನಾನೂ ಒಬ್ಬ ಸಂಸಾರಿ. ನನ್ನ ಬಂಧುಬಾಂಧವರ ಬಗ್ಗೆ ನಾಲ್ಕು ಮಾತು ಬರೆದು ಈ ಕಥಾನಕಕ್ಕೆ ವಿರಾಮ ಕೊಡುತ್ತೇನೆ. ಮೊದಲನೆಯವಳು ನನ್ನ ಸತೀ ಸಹಧರ್ಮಿಣಿ ಸುಮತಿ. ನನ್ನ ತೀರ್ಥರೂಪರಿಗೆ ನಾನು 29 ವರ್ಷದ ವರೆಗೂ ಲಗ್ನಕ್ಕೆ ಒಲ್ಲದಿರುವುದನ್ನು ವೀಕ್ಷಿಸಿ ಬಹುಶಃ ಇವನು ಬ್ರಹ್ಮಚಾರಿಯಾಗಿಯೇ ಇರುತ್ತಾನೊ ಎಂದುಂಟಾದ ಶಂಕೆಯನ್ನು ಬಿಡಿಸಿದವಳು ಈಕೆ. ಮಹಾಮಹೋಪಾಧ್ಯಾಯ ಶ್ರೀ ಕೆ. ಎಲ್. ವ್ಯಾಸರಾಯ ಶಾಸ್ತ್ರಿಯವರ ಒಬ್ಬಳೇ ಒಬ್ಬಳು ಮಗಳು. ಶಾಸ್ತ್ರಿಯವರು ಮದ್ರಾಸು ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಸಂಸ್ಕೃತ ಪಂಡಿತರು. ಪ್ರೆಸಿಡೆನ್ಸಿ ಕಾಲೇಜಿನಿಂದ ನಿವೃತ್ತರಾದ ಮೇಲೆಯೇ ಮಗಳ ಲಗ್ನ ಸಾಧ್ಯವಾದದ್ದು. ಪಂಡಿತರು ಎಂದರೆ 1940 – 50ರ ಸಂದಿನಲ್ಲಿ ಸಂಬಳ 100 ರೂಪಾಯಿ ಇದ್ದಿರಬಹುದು. ಅಷ್ಟರಲ್ಲೇ ಕಾಲಯಾಪನೆ ಮಾಡುವ ಕಲೆಯನ್ನರಿತು ತನ್ನ 5 ಮಕ್ಕಳನ್ನು, ನಾಲ್ವರು ಗಂಡು, ಒಬ್ಬ ಹೆಣ್ಣು ಸಾಕಿಸಲಹಿ ವಿದ್ಯಾಬುದ್ಧಿಗಳನ್ನು ದಯಪಾಲಿಸಿದರು. ನನ್ನ ಹಿರಿಭಾವ ಪ್ರೊ. ಲಕ್ಷ್ಮೀಧರ್ ಕಾನ್ಪುರದ ಐ.ಐ.ಟಿ.ಯಲ್ಲಿ ಪ್ರೊಫೆಸರ್. ಎರಡನೆಯವನು ಅಪ್ರತಿಮ ಬುದ್ಧಿಶಾಲಿ ಕೆ. ವಿ. ರಾಜಗೋಪಾಲ ಅಮೇರಿಕಾದ ಡ್ಯೂರಾಮ್ ವಿಶ್ವವಿದ್ಯಾನಿಲಯದ ಜೀವರಸಾಯನ ಶಾಸ್ತ್ರದ ಡೀನ್, ಮೂರನೆಯವನು ಇಂಡಿಯಾ ಸರ್ಕಾರದ ಶಿಲಾಲೇಖ ಶಾಸ್ತ್ರ ವಿಭಾಗದಲ್ಲಿ ನಿರ್ದೇಶಕ. ಈತ ತೀರ್ಥರೂಪರಂತೆ ಸಂಸ್ಕೃತವನ್ನು ಕಲಿತು ಊಟಿಯಲ್ಲಿದ್ದ ಎಪಿಗ್ರಾಫಿ ಇಲಾಖೆ ಸೇರಿ ಅಲ್ಲಿಯೇ ಹಂತ ಹಂತವಾಗಿ ಮೇಲಕ್ಕೇರಿ ಈಗ ನಿರ್ದೇಶಕರ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಈತ ತಂದೆಯಂತೆ ಒಳ್ಳೆಯ ಬರಹಗಾರ. ವಾಗ್ಮಿ ಬಹುಭಾಷಾ ವಿಶಾರದ. ತುಳು ನಾಡಿನ ಇತಿಹಾಸವನ್ನು ಶಾಸನಗಳ ಮೂಲಕ ಉಲ್ಲೇಖಿಸುವ ಈತನ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಕೊಟ್ಟಿದೆ. ನಾಲ್ಕನೆಯವನು ಮದ್ರಾಸಿನಲ್ಲಿ ವಕೀಲ ವೃತ್ತಿಯಲ್ಲಿದ್ದಾನೆ.. ಒಳ್ಳೆಯ ಮಾತುಗಾರ. ಡಾ. ಶಿವರಾಮ ಕಾರಂತರ ಮಗಳು ಕ್ಷಮಾ ಈತನ ಮಡದಿ. ಈ ನಾಲ್ವರ ನಟ್ಟನಡುವಿನಾಕೆ ನನ್ನ ಮಡದಿ.

ನನ್ನ ಮನೆಯಲ್ಲಿ ಊಟ ಮಾಡಿದ ಸಾಹಿತಿಗಳು ಎಲ್ಲರೂ ಆಕೆಗೆ ಅನ್ನಪೂರ್ಣೆಯೆಂದೇ ಹೆಸರು ಕೊಟ್ಟಿದ್ದಾರೆ. ಏಕೆಂದರೆ ರೇಶನ್ ಕಾಲದಲ್ಲಿಯೂ ನಮ್ಮ ಅನ್ನದ ಬಟ್ಟಲು ಪೂರ್ಣವಾಗುವಂತೆ ನೋಡಿಕೊಂಡವಳೀಕೆ. ಗಂಡನ ಅಲೆಮಾರಿ ವಿಚಾರ, ಸಂಚಾರ, ಓಡಾಟ, ಕಾಟಗಳನ್ನೆಲ್ಲ ಸಹಿಸಿಕೊಂಡು ಜವಾಬ್ದಾರಿಯಿಂದ ಸಂಸಾರ ನಿರ್ವಹಣೆ ಮಾಡಿದವಳು. ಜತೆಗೆ ಐದು ಮಕ್ಕಳನ್ನು ಕೊಟ್ಟವಳು – ಮೂವರು ಗಂಡು ಇಬ್ಬರು ಹೆಣ್ಣು. ಪಿತ್ರಾರ್ಜಿತವಾದ ನಮ್ಮ ಹೋಟಲುದ್ಯಮ ಗದುಗಿನಲ್ಲಿ ಈಗ ನಡೆಸುತ್ತಿರುವವನು ನನ್ನ ಹಿರೇಮಗ ಜಯದೇವ, ಎರಡನೆಯವನು ಅನಂತಮೋಹನ ಸಿಂಡಿಕೇಟ್ ಬ್ಯಾಂಕಿನಲ್ಲಿದ್ದಾನೆ. ಮೂರನೆಯ ಹರ್ಷವರ್ಧನ ಜಾನಪದ ಕೇಂದ್ರದಲ್ಲಿ ವಿಡಿಯೋಗ್ರಾಫರ್ ಆಗಿದ್ದಾನೆ. ಹೆಣ್ಣು ಮಕ್ಕಳಲ್ಲಿ ಹಿರಿಯವಳು ಸುಜಾತ ಮುಂಬಯಿಯ

ಒಬ್ಬ ಇಂಜಿನಿಯರ್ ಪತಿ ಹಾಗೂ ಮೂರು ಮಕ್ಕಳೊಡನೆ ಸುಖವಾಗಿದ್ದಾಳೆ. ನನ್ನ ಹಿರೇ ಮಗನಿಗೊಬ್ಬ ಮಗನಿದ್ದಾನೆ(3ವರ್ಷ) ಎರಡನೆಯವನಿಗೆ ಮಗಳಿದ್ದಾಳೆ (5 ತಿಂಗಳು). ಮೊಮ್ಮಕ್ಕಳ ಮೋಹ ಇದೀಗ ನನ್ನನ್ನು ಬಲವತ್ತರವಾಗಿ ಕಾಡುತ್ತಿದೆ. ಮನುಷ್ಯನಿಗೆ ಚಿರಂಜೀವಿಯಾಗಬೇಕೆಂಬ ಆಸೆ ಯಾತಕ್ಕಾಗಿ ಹುಟ್ಟುತ್ತದೆ ಎಂಬ ಪ್ರಶ್ನೆಗೆ ನನಗೆ ಸದ್ಯ ಐದು ಉತ್ತರ ಸಿಕ್ಕಿದೆ– ನನ್ನ ಐದು ಮೊಮ್ಮಕ್ಕಳೇ ಆ ಉತ್ತರ. ನಿರ್ವ್ಯಾಜ ಹಾಗೂ ಬೇಜವಾಬ್ದಾರಿ ಪ್ರೇಮ ಎಂದರೆ ಅಜ್ಜ–ಮೊಮ್ಮಕ್ಕಳ ನಡುವಣ ವಾತ್ಸಲ್ಯವೆಂದು ತೋರುತ್ತದೆ. ನಾನೀಗ ಅಹರ್ನಿಶಿ ಇವರ ಪ್ರೇಮ ಪಾಶದ ಬಂದಿಯಾಗಿದ್ದೇನೆ. ನನ್ನ ಹತ್ತಿರ ಯಾರೂ ಇಲ್ಲದಿರುವಾಗಲೂ ಅವರು ನನ್ನ ಮನೋರಂಗದಲ್ಲಿ ಕ್ಷಣಕ್ಷಣವೂ ನಲಿಯುತ್ತಿದ್ದಾರೆ. ಈ ನಲಿವೇ ಸಂಸಾರ ಸಾರ ಸರ್ವಸ್ವಫಲಂ. ಐದನೆಯವಳು ಆಶಾ ಅಮೇರಿಕಾದಲ್ಲಿ ತನ್ನ ಕಂಪ್ಯೂಟರ್ ವಿಜ್ಞಾನಿ ಗಂಡನೊಡನೆ ನ್ಯೂಜೆರ್ಸಿಯಲ್ಲಿದ್ದಾಳೆ. ಸಾಹಿತ್ಯದಲ್ಲಿ ಕಲೆಯಲ್ಲಿ ಈಕೆಗೆ ಆಸಕ್ತಿ ಇದೆ. ಬರವಣಿಗೆ ಮಾಡು ಎಂದು ಅವಳಿಗೆ ಪ್ರೋತ್ಸಾಹಿಸುತ್ತಿದ್ದೇನೆ. ಯಕ್ಷಗಾನ ಕೇಂದ್ರ, ತುಳು ನಿಘಂಟು ಹಾಗೂ ಜನಪದ ಅನ್ವೇಷಣೆಯ ಕರ್ತವ್ಯಗಳು ನನ್ನ ನಿವೃತ್ತಿ ಪರ್ವದಲ್ಲಿ ನನ್ನ ಜೀವನದ ಹೊರೆಗಳಾಗಿ ಮುಂಬರಲು ನನ್ನ ಪ್ರಯತ್ನಕ್ಕಿಂತ ಬಾಹ್ಯ ಪ್ರಯತ್ನಗಳೇ ಕಾರಣವೆಂದರೆ ಆಶ್ಚರ್ಯಪಡಬಾರದು. ಕಾರಂತರಿಗೆ ವೀರಭದ್ರನಾಯ್ಕರ ಗುರುತನಕ್ಕಾಗಿ ಒಂದು ಯಕ್ಷಗಾನ ಶಾಲೆ ತೆರೆಯಬೇಕಾಗಿತ್ತು – ನಮ್ಮ ಕಾಲೇಜಿನ ಒಂದು ಕಟ್ಟಡ ಅದಕ್ಕಾಗಿ ಮೀಸಲಿಟ್ಟೆ. ಆ ಮೇಲೆ ಅದಕ್ಕೆ ಸಂಬಂಧಿಸಿದ ಭಿಕ್ಷಾಟನೆ, ವಂತಿಗೆ ವರಾಡ ಗ್ರೆಂಟು ಇತ್ಯಾದಿ ಆರ್ಥಿಕ ವಿಚಾರಗಳ ಆಡಳಿತ ನೋಡಿಕೊಳ್ಳುವುದರಲ್ಲಿ ಸಂತೋಷಪಟ್ಟೆ. 3 ವರ್ಷಗಳ ಕಾಲ ದೇಶವೆಲ್ಲ ಅಲೆದಾಡಿ ಕಾರಂತ ಬ್ಯಾಲೆಗಳ ಮೂಲಕ ಯಕ್ಷಗಾನ ಪ್ರಚಾರ ಮಾಡಿದೆ. ಅಸೇತು ಹಿಮಾಚಲ ನಾನು ಈ ನೆಪದಲ್ಲಿ ಕಾಲೇಜಿಗೆ ಅಗಿಂದಾಗ ರಜೆ ಹಾಕಿದರೂ ನನ್ನ ಸಹೋದ್ಯೋಗಿಗಳು ಕಾಲೇಜನ್ನು ಸಂಭಾಳಿಸಿ ನನ್ನ ಗೈರುಹಾಜರಿಯನ್ನು ಮನ್ನಿಸಿದ್ದನ್ನು ನೋಡಿದಾಗ ಅವರ ವಾತ್ಸಲ್ಯ ಹಾಗೂ ನನ್ನ ಕಾಯಕದ ಬಗ್ಗೆ ಅವರಿಗಿದ್ದ ಉತ್ಸಾಹ ಅರ್ಥವಾಗುತ್ತದೆ. 1979ಕ್ಕೆ ನಮ್ಮ ಯಕ್ಷಗಾನ ಮೇಳ ಮೊದಲ ಬಾರಿಗೆ ಹಾಂಕಾಂಗ್‌ಗೆ ವಿದೇಶ ಯಾತ್ರೆ ಮಾಡಿತು. ಆ ಮೇಲಿನ ನಾಲ್ಕು ವರ್ಷಗಳಲ್ಲಿ ಇಂಗ್ಲೆಂಡ್, ರಶಿಯಾ, ಬಲ್ಗೇರಿಯಾ, ಜಪಾನ್ ಆದಿ ಹಲವಾರು ದೇಶಗಳಲ್ಲಿ ಕೀರ್ತಿಗಳಿಸಿತು. ಸಾಂಪ್ರದಾಯಿಕ ಶಿಕ್ಷಣಕ್ಕೆ ಒಂದು ಕಲಾಕೇಂದ್ರ, ಯಕ್ಷಗಾನ ಪ್ರಚಾರಕ್ಕೆ ಒಂದು ಮೇಳ – ಈ ಎರಡೂ ನಮ್ಮ ಕಾಲೇಜಿನ ಅಪೂರ್ವ ಸಾಹಸಗಳು. 1971ಕ್ಕೆ ತೊಡಗಿದ ಕೇಂದ್ರ ಈಗ ಕರ್ನಾಟಕ ಸರ್ಕಾರದ ಅನುದಾನ ಪಡೆಯಲರ್ಹವಾಗಿ ಒಂದು ಶಿಸ್ತುಬದ್ಧ ಚೌಕಟ್ಟಿನಲ್ಲಿ ನಡೆಯುತ್ತಿದೆ. ಅದನ್ನು ನಿರ್ವಹಿಸಿದ ಗುರು ವೀರಭದ್ರ ನಾಯಕರು. ನೀಲಾವರ ರಾಮಕೃಷ್ಣಯ್ಯನವರು, ಹಿರಿಯಡ್ಕ ಗೋಪಾಲರಾಯರು, ಹೆರಂಜಾಲ್ ಹಾಗೂ ಮಹಾಬಲ ಕಾರಂತರ ನಿರಂತರ ಸೇವಾಧರ್ಮವೇ ಕೇಂದ್ರಕ್ಕೆ ರಕ್ಷೆ. ಚ್ಯುತಿ ಇಲ್ಲದ ಉತ್ಸಾಹದಿಂದ ಕಾಲೇಜು ಕೇಂದ್ರವನ್ನು ನಡೆಸುತ್ತಿದೆ –ಅನುಸ್ಯೂತವಾಗಿ ನಡೆಯುತ್ತಿರುವ, ಕೇಂದ್ರವೆಂದರೆ ಇದು ಒಂದೇ ಎಂದು ತೋರುತ್ತದೆ. ಇದರ ಸೇವೆಯನ್ನು ಪಡಕೊಳ್ಳಲು ಹಾತೊರೆದು ಇಂಡಿಯಾ ಸರ್ಕಾರ, ರೋಮ್ ವಿಶ್ವವಿದ್ಯಾನಿಲಯಗಳು ಇಲ್ಲಿಗೆ ಬಂದು ಕೆಲಸ ಮಾಡಿವೆ. ಪೀಟರ್ ಬ್ರೂಕ್ ಮಹಾಶಯನು ಸಂದರ್ಶನವಿತ್ತಿದ್ದಾನೆ ಎಂದ ಮೇಲೆ ಕೇಂದ್ರದ ದಾಖಲೆ ಸಣ್ಣದೇನೂ ಅಲ್ಲ. ಕನಿಷ್ಠ ಜನಬಲ ಧನಬಲಗಳಿಂದ ಇಷ್ಟು ದೊಡ್ಡ ಕೆಲಸ ನೆರವೇರಿದ್ದು ಕಾರಂತರ ದೊಡ್ಡ ಹೆಸರಿನ ಚೈತನ್ಯಶೀಲ ಬಲ ಮತ್ತು ಇಲ್ಲಿನ ಕಾರ್ಯಕರ್ತರ, ಮುಖ್ಯವಾಗಿ ಅಧ್ಯಾಪಕರ ಮತ್ತು ಕಲಾವಿದರ ದುಡಿಮೆಯಿಂದಲೇ ಎನ್ನಬೇಕು.

1982ರಲ್ಲಿ ದಿಲ್ಲಿಯ ನಾಟಕ ಶಾಲೆಯ ನಿರ್ದೇಶಕ ಬಿ. ವಿ. ಕಾರಂತರು ತಮ್ಮ ವಿದ್ಯಾರ್ಥಿಬಳಗಕ್ಕೆ 10 ದಿನಗಳ ಸರ್ವಗ್ರಾಹಿ ಯಕ್ಷಗಾನ ಶಿಬಿರವೊಂದನ್ನು ಏರ್ಪಡಿಸಲು ದ್ರವ್ಯಾನುಕೂಲತೆ ಒದಗಿಸಿದರು. ವಿಧವಿಧ ಯಕ್ಷಗಾನ ಪ್ರದರ್ಶನಗಳನ್ನು, ಪ್ರಾತ್ಯಕ್ಷಿಕೆಗಳನ್ನು ನೋಡಿ ವಿದ್ಯಾರ್ಥಿಗಳು ಪರಿಣಿತರಾಗಬೇಕಿತ್ತು. ಹತ್ತು ದಿನಗಳ ವಿಶಿಷ್ಟ ಉತ್ಸವಕ್ಕೆ ಶ್ರೀಮತಿ ರುಕ್ಮಿಣಿದೇವಿ ಆರುಂಡೇಲ್, ಶ್ರೀ ಕೆ.ಕೆ ಹೆಬ್ಬಾರ್. ಡಾ. ಕಾರಂತ, ಪ್ರೊ. ಮರೊತ್ತಿ (ಇತಾಲಿಯ ನಾಟಕ ವಿಭಾಗದ ಮುಖ್ಯಸ್ಥ) ಬಂದಿದ್ದರು. ನಾನು ರೂಪಿಸಿಕೊಂಡಿದ್ದ ಪಠ್ಯಕ್ರಮ, ಪ್ರದರ್ಶನ, ಉತ್ಸವಗಳು ಒಟ್ಟಂದದಲ್ಲಿ ಪ್ರಭಾವಶಾಲಿಯಾಗಿ ಮೂಡಿಬಂದವು. ಮುಕ್ತಾಯ ಸಮಾರಂಭದಲ್ಲಿ ಶ್ರೀಮತಿ ರುಕ್ಮಿಣಿದೇವಿ ನೆರೆದಿದ್ದ 'ದೇವಸಭೆ'ಯಲ್ಲಿ ಕೇಂದ್ರದ ಯತ್ನವನ್ನು ಕೊಂಡಾಡಿದರು. ಅಂದು ಹಾಜರಿದ್ದ ಫೋರ್ಡ್ ಫೌಂಡೇಶನ್ನಿನ ಅಧಿಕಾರಿಣಿ ಪುಷ್ಪಾ ಸುಂದರ್ ಅವರಿಗೂ ಸಂತೋಷವಾಯಿತು.

ಅವರ ಸಂತೋಷ ಕೆಲವೇ ದಿನಗಳಲ್ಲಿ ಒಂದು ಯೋಜನೆಯ ಅನುದಾನ ರೂಪ ತಳೆಯಿತು. ಬರೇ ಯಕ್ಷಗಾನ ಒಂದೇ ಅಲ್ಲ ಕರ್ನಾಟಕದ ಇಡೀ ಜಾನಪದ ಲೋಕದ ಸಮೀಕ್ಷೆ ಮಾಡಲು ನೀವು ಸಿದ್ಧರಿದ್ದೀರಾ? ಇರುವಿರಾದರೆ ನೀವು ನಿಮ್ಮ ಸೂಚನೆಗಳನ್ನು ಕೊಡಿ. ಫೋರ್ಡ್ ಪ್ರತಿಷ್ಠಾನ ನಿಮಗೆ ಎರಡು ವರ್ಷಕ್ಕೆ 88,000 ಡಾಲರು ಅನುದಾನ ಕೊಡುತ್ತದೆ ಎಂಬ ಭರವಸೆ ನೀಡಿದರು. ಜಾನಪದ ರಂಗಕಲೆಗಳ ಕುರಿತು ಮಾಹಿತಿ ಕೇಂದ್ರವಾಗಿ ಇದನ್ನು ರೂಪಿಸಬೇಕೆಂದು ಫೋರ್ಡ್ ಪ್ರತಿಷ್ಠಾನ ಬಯಸಿದಂತೆ ಆಡಿಯೋ ವೀಡಿಯೋ ಹತ್ಯಾರುಗಳ ಮೂಲಕ ಚಿಕ್ಕಪುಟ್ಟ

ರಂಗಸ್ಥಳಗಳ ವಿವರಗಳನ್ನು ಸಂಗ್ರಹಿಸಲು 1984, 1985, 86ರಲ್ಲಿ ಬಳ್ಳಾರಿ, ಧಾರವಾಡ, ಬೆಳಗಾವಿ, ಕೊಡಗು, ಮೈಸೂರು ಹೀಗೆ ಕೆಲವು ಜಿಲ್ಲೆಗಳಲ್ಲಿ ಕ್ಷೇತ್ರಪರ್ಯಟನ, ಉತ್ಸವ, ಕಮ್ಮಟ, ಸೆಮಿನಾರುಗಳನ್ನು ನಡೆಸಿದೆವು. ಸ್ಥಾನೀಯ ಕಾರ್ಯಕರ್ತರೂ ವಿದ್ವಾಂಸರೂ ನಮಗೆ ಈ ವಿಷಯದಲ್ಲಿ ನೆರವು ನಿಂತರು. ಕೇಂದ್ರದಲ್ಲಿ ಸಾವಿರಾರು ಗಂಟೆಗಳ ಧ್ವನಿಮುದ್ರಣ, 200 ತಾಸುಗಳ ದೃಶ್ಯಮುದ್ರಣ ದಾಖಲುಗೊಂಡಿದೆ. ಆಸಕ್ತರಿಗೆ ಇದನ್ನು ಸಂಶೋಧನೆಗೆ ತೆರೆದಿಡಲಾಗಿದೆ. ವಿಷಯ ಸೂಚಿಯ ನಿರ್ಮಾಣ, ಗ್ರಂಥ ಪ್ರಕಟನೆ – ಕನ್ನಡ, ಇಂಗ್ಲೀಷ್ ಎರಡರಲ್ಲೂ ನಡೆಯುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆಯ ಬಗ್ಗೆ, ಉತ್ತರ ಕರ್ನಾಟಕದ ವಾದ್ಯಗಳ ಬಗ್ಗೆ, ಕರಪಾಲದ ಬಗ್ಗೆ, ನಾಗಮಂಡಲದ ವೈದ್ಯರ ಬಗ್ಗೆ, ಸಣ್ಣಾಟಗಳ ಬಗ್ಗೆ ಪ್ರಮಾಣೀಕೃತ ಅಧ್ಯಯನ ಹೊತ್ತಗೆಗಳು ಪ್ರಕಟಗೊಂಡಿವೆ. ಸಂಖ್ಯಾ ಬಾಹುಲ್ಯದಿಂದಲ್ಲವಾದರೂ ಗುಣ ಮಟ್ಟದ ದೃಷ್ಟಿಯಿಂದಲೂ ಮೌಲಿಕತೆಯ ದೃಷ್ಟಿಯಿಂದಲೂ ಈ ಗ್ರಂಥಗಳನ್ನು ವಿಮರ್ಶಕರು ಮೆಚ್ಚಿಕೊಂಡಿದ್ದಾರೆ. ಇಲ್ಲಿನ ಅನ್ವೇಷಣಾ ಕಾರ್ಯಕ್ಕೆ ನಾನು ಮೊದಲಾಗಿ ನಂಬಿದ್ದು ನಿವೃತ್ತ ವಿದ್ವಾಂಸರನ್ನು; ಅವರು ಮಾತ್ರ ಕೇಂದ್ರದಲ್ಲಿ ಖಾಯಂ ಆಗಿ ನಿಲ್ಲಲು ಬಯಸದೆ ಇದ್ದುದು ಒಂದು ಬಗೆಯ ಅಸಾಹಯಕತೆಯ ಭಾವ ಮೂಡಿಸಿತ್ತು. ಅಲ್ಪಾವಧಿಗೆ ಕೆಲಸಕ್ಕೆ ದೊರಕಿದ ಶ್ರೀ ಕೆ. ಶಂಕರ್ ಅವರು, ಶ್ರೀ ಎ.ಎಂ. ಜೋಶಿ ಅವರು ತಮ್ಮ ಹೃತ್ಪೂರ್ವಕ ಕಾಣಿಕೆ ಕೊಟ್ಟಿದ್ದಾರೆ. ಕೇಂದ್ರಕ್ಕೆ ಮೊತ್ತ ಮೊದಲು ಸೇರಿದ ಶ್ರೀ ಕೃಷ್ಣಯ್ಯ ಮಾತ್ರ ಕೇಂದ್ರದ ಜೊತೆ ತಾವೂ ಬೆಳೆದು ಸ್ಥಿರವಾಗಿ ನಮ್ಮ ಜತೆ ನಿಂತು ಸೇವೆ ಸಲ್ಲಿಸುತ್ತಿದ್ದಾರೆ. ಕ್ಷೇತ್ರಕಾರ್ಯದಲ್ಲಿ ನಿಷ್ಣಾತರಾದ ಇವರ ಸೇವೆಯನ್ನ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಗೊಂಬೆಯಾಟದಲ್ಲಿ ತಜ್ಞತೆಯುಳ್ಳ ಕೃಷ್ಣಯ್ಯ ಸ್ವತಃ ಜನಪದ ಕಲಾವಿದರೂ ಆಗಿದ್ದುದರಿಂದ ಅವರನ್ನೇ ಈಚೆಗೆ ಸ್ವೀಡನ್‌ಗೆ ಹೋಗುವ ಭಾರತೋತ್ಸವ ಕಂಸಾಳೆ ತಂಡಕ್ಕೆ ನಾಯಕನಾಗಿ ನಾನು ಶಿಫಾರಸು ಮಾಡಿದೆ. ಹಾಗೆಯೇ ಎರಡು ವರ್ಷದ ಹಿಂದೆ ಫಿನ್ಲೆಂಡಿನ ನಾರ್ಡಿಕ್ ಇನ್‌ಸ್ಟಿಟ್ಯೂಟಿನಲ್ಲಿ ಆ ದೇಶದ ಜನಪದ ದಾಖಲಾತಿ ವಿಧಾನಗಳನ್ನು ಅಭ್ಯಾಸ ಮಾಡಲು ಒಂದು ತಿಂಗಳು ಪರ್ಯಟನೆ ಮಾಡಿ ಬಂದರು. ಕೇಂದ್ರದ ವಿಡಿಯೋಗ್ರಾಫರ್ ಹರ್ಷವರ್ಧನನಿಗೂ ಇಟಲಿಯ ರೋಮ್ ವಿಶ್ವವಿದ್ಯಾನಿಲಯ (ಥೇಟರ್ ಇನ್‌ಸ್ಟಿಟ್ಯೂಟಿನಲ್ಲಿ) ಆರು ತಿಂಗಳ ವಿಡಿಯೋಗ್ರಾಫಿ ವಿದ್ಯೆಯನ್ನು 50 ಮಂದಿಯ ಒಂದು ಇಟಾಲಿಯನ್ ವರ್ಗದಲ್ಲಿ ಕೂತು ಅಭ್ಯಾಸಮಾಡುವ ಅವಕಾಶ ಒದಗಿ ಬಂದಿತು. ಇದು ಮಿತ್ರ ಪ್ರೊ. ಫೆರೊಚೋ ಮರೊತ್ತಿ ಅವರ ಔದಾರ್ಯದಿಂದ. ತರಬೇತಿಯ ಪೂರ್ತಿ ಪ್ರಯೋಜನ ಪಡೆದ ವಿದ್ಯಾರ್ಥಿ ಈತ ಎಂದು ಅಲ್ಲಿನ ತಜ್ಞರು ನಿರ್ಣಯಿಸಿದರಂತೆ.

ನಮ್ಮ ವಿಡಿಯೋ ಚಿತ್ರೀಕರಣದ ಸಂಸ್ಕರಣ ಕಾರ್ಯ ಇನ್ನು ನಡೆಯಬೇಕಾಗಿದೆ. ಬಹುಶಃ ಜನಪದ ಕ್ಷೇತ್ರದಲ್ಲಿಯೇ ವ್ಯಾಪಕವಾಗಿ ವಿಡಿಯೋ ದಾಖಲಾತಿ ನಡೆಸಿದ ಸಂಸ್ಥೆ ನಮ್ಮದು;ಅದರಂತೆ ಯಂತ್ರದಾಸ್ಯದ ನೋವನ್ನೂ ನಾವು ಉಂಡಿದ್ದೇವೆ. ಸುಂಕ ವಿನಾಯಿತಿಯ ಸವಲತ್ತಿನಿಂದ ನಾವು ತರಿಸಿದ ಬೆಲೆಬಾಳುವ ಯಂತ್ರಗಳು ಕೈಕೊಟ್ಟರೆ ನಾವು ಕೈಚೆಲ್ಲಿ ಕೂರದೆ ಬೇರೆ ಉಪಾಯವಿಲ್ಲ. ಉಪಕರಣಗಳು ನಾವು ಹೇಳಿದಂತೆ ಕೇಳಬೇಕೆಂದೇನು ನಿಯಮವಿಲ್ಲ ತಾನೇ? ಅಂತೂ ಹೇಗೆ ಹೇಗೊ ಸಾವರಿಸಿಕೊಂಡು ನಡೆಸಿಕೊಂಡು ಬರುತ್ತಿದ್ದೇವೆ. ನಮ್ಮ ಕಾಯಕದಿಂದ ನಮಗೆ ಸಂಪೂರ್ಣ ತೃಪ್ತಿ ಆಗದೆ ಹೋದರೂ ನಮ್ಮ ದಾನಿಗಳಾದ ಪ್ರತಿಷ್ಠಾನದವರಿಗೆ ಸಂತೋಷವಾಗಿದೆ. ಅವರಿಂದ ದಾನ ಪಡೆದ 20 ಸಂಸ್ಥೆಗಳ ಪೈಕಿ ನಮ್ಮದಕ್ಕೆ ಒಂದು ಒಳ್ಳೆಯ ಬೆಲೆ ಕೊಟ್ಟಿದ್ದಾರೆ. ಅಷ್ಟು ಮಾತ್ರವೇ ಅಲ್ಲ 1989ನೇ ಇಸವಿ ವರೆಗಿನ ಎರಡನೇ ಅವಧಿಗೆ ಮತ್ತೆ ಕೆಲಸ ಮುಂದುವರಿಸಲು 55,000 ಡಾಲರು ಒದಗಿಸಿ ಕೊಟ್ಟಿದ್ದಾರೆ. 1989ರ ಮೇಲೆ ಸಂಸ್ಥೆಯನ್ನು ನಡೆಸಲು ಮಣಿಪಾಲ ಅಕಾಡೆಮಿ ನೆರವುಗೈ ನೀಡಿ ಆರಂಭಿಸಿದ ಕಾರ್ಯ ಗುರಿಮುಟ್ಟುವ ಸಾಧ್ಯತೆ ಕಂಡು ಬರುತ್ತಿದೆ. ಕರ್ನಾಟಕದಲ್ಲಿ ಈ 30 ವರ್ಷಗಳಲ್ಲಿ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ನಡೆಯುತ್ತಿರುವ ಜಾನಪದ ವಿದ್ವತ್‌ಕಾರ್ಯ, ಸಂಶೋಧನೆ, ಮೈಸೂರಿನ ವಸ್ತುಸಂಗ್ರಹಾಲಯ ದೇಶಕ್ಕೇನೆ ಮಾದರಿಯಾಗಬಲ್ಲ ಕೆಲಸ ಮಾಡಿವೆ. ಈ ದಿಶೆಯಲ್ಲಿ ನಮ್ಮದೊಂದು ಪುಟ್ಟ ಹೆಜ್ಜೆ ಜಾನಪದ ಅಧ್ಯಯನಕ್ಕೆ ಒಂದು ಹೊಸ ದಿಕ್ಕುದೆಶೆ ಪ್ರಾಪ್ತವಾದರೆ ಅದರಲ್ಲಿ ನಮ್ಮದೂ ಒಂದು ಅಳಿಲಸೇವೆ, ಕಾಣಿಕೆ ಇದೆ ಎನ್ನುವಷ್ಟು ಕೆಲಸವನ್ನು ಪ್ರಾಮಾಣಿಕವಾಗಿ ನಾವು ಮಾಡುತ್ತಿದ್ದೇವೆನ್ನಬಹುದೇ ಹೊರತು ಬೇರೇನೂ ಹೇಳುವಂತಿಲ್ಲ.

ತುಳು ನಿಘಂಟು ಯೋಜನೆಗೆ ಚಾಲನೆ ಒದಗಿಸಿದವರು ಕರ್ನಾಟಕದ ಶಿಕ್ಷಣ ಸಚಿವ ಶ್ರೀ ಸುಬ್ಬಯ್ಯ ಸೆಟ್ಟರು. ಒಂದೇ ತಿಂಗಳಲ್ಲಿ ಒಂದು ಲಕ್ಷದ ಅನುದಾನ ಒದಗಿಸಿ ಅವರು 1979ರ ಅಕ್ಟೋಬರ್‌ಗೆ ಯೋಜನೆಯ ಉದ್ಘಾಟನೆಯನ್ನು ಮಾಡಿದರು. ಈ ಯೋಜನೆ ರೂಪಿಸಿದ ಡಾ. ಯು.ಪಿ. ಉಪಾಧ್ಯಾಯರು 1981ರಲ್ಲಿ ನಿಘಂಟಿನ ನೇತೃತ್ವವನ್ನು ತಾನೇ ವಹಿಸಿಕೊಂಡರು. ಅನೇಕ ಭಾಷಾ ತಜ್ಞರೂ, ಹಿಂದೆ ಸಿಐಐಎಲ್‌ನಲ್ಲಿ, ಪ್ರಿನ್ಸಿಪಾಲರು, ಆಫ್ರಿಕದ ಸೆನೆಗಲ್‌ನಲ್ಲಿ ಎಂಟು ವರ್ಷ ಪ್ರಾಧ್ಯಾಪಕರೂ ಆಗಿದ್ದ ಡಾ. ಉಪಾಧ್ಯಾಯರು (ಅವರ ಪತ್ನಿ ಡಾ. ಸುಶೀಲಾ ಉಪಾಧ್ಯಾಯರು) ಸಣ್ಣ ಸಿಬ್ಬಂದಿಯ ಜೊತೆ 8 ವರ್ಷಗಳಿಂದ ನಿಘಂಟಿನ ರಚನೆಯಲ್ಲಿ ಅವಿರತವಾದ ದುಡಿಮೆ ಸಲ್ಲಿಸುತ್ತಿದ್ದಾರೆ. ಕಾಲೇಜು ಯಾ ವಿಶ್ವವಿದ್ಯಾನಿಲಯಕ್ಕೆ ತತ್ಸಮಾನ ಸಂಬಳ ಸಾರಿಗೆ, ಉದ್ಯೋಗದ ಸೌಕರ್ಯಗಳು ಈ

ತಾತ್ಕಾಲಿಕ ಯೋಜನೆಗೆ ಇಲ್ಲದಿರುವುದರಿಂದ ಒಳ್ಳೆಯ ವಿದ್ವಾಂಸರನ್ನು ಆಕರ್ಷಿಸುವುದು, ಅವರು ಬಂದರೆ ಖಾಯಂ ಆಗಿ ಸಿಲ್ಲಿಸಿಕೊಳ್ಳುವುದು ದುಸ್ತರವಾಗಿ ಬಿಟ್ಟು ನಿಘಂಟಿನ ನಡೆ ನಿರೀಕ್ಷಿತ ವೇಗವನ್ನು ಸಾಧಿಸಲಾರದಾಗಿದೆ. ಆದರೂ ಪ್ರಥಮ ಸಂಪುಟದ 10 ಸಾವಿರ ಪದಗಳು ಮುದ್ರಣಕ್ಕೆ ಸಿದ್ಧವಾಗಿವೆ. ಇನ್ನು ಕೆಲವೇ ತಿಂಗಳಲ್ಲಿ ಆ ಪ್ರಥಮ ಸಂಪುಟ ಪ್ರಕಟಿತವಾದಾಗ ಸರ್ವರಿಗೂ ಕೆಲಸದ ಗುರುತ್ವ ಅರಿವಾಗಬಹುದೆಂದು ತೋರುತ್ತದೆ. ತುಳು ಭಾಷಾಭಿಮಾನಿಗಳಾದ ನನ್ನ ಮಿತ್ರರು ಸಲಹಾ ಮಂಡಳಿಯಲ್ಲಿ ಸೇರಿ ನಮ್ಮ ಕೆಲಸಕ್ಕೆ ಒಂದು ಸಾರ್ವಜನಿಕ ಮಹತ್ವವನ್ನುಂಟು ಮಾಡಿದ್ದಾರೆ; ಮಿತ್ರ ದೇಜಗೌ ನಮ್ಮನ್ನು ಹುರಿದುಂಬಿಸುವ ಸಲುವಾಗಿ ಸಲಹಾ ಮಂಡಳಿಗೆ ಆಗಿಂದಾಗ ಬಂದು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಿದ್ದಾರೆ. ಮುಂದಿನ ಹಂತದಲ್ಲಿ ನಿಘಂಟು ಕಚೇರಿಗೆ ಒಂದು ಶಾಶ್ವತ ರೂಪ ನೀಡುವ ನೆಲೆಯಲ್ಲಿ ಪ್ರಯತ್ನ ಮುಂದುವರಿಸಬೇಕಾಗಿದೆ.

ಪ್ರಾಯೋಗಿಕ, ನೂತನ, ಆವಿಷ್ಕಾರಕ ಕೆಲಸಗಳಲ್ಲಿ ರೂಢಿಗತ ಸಂಸ್ಥಾ ಕಾರ್ಯಗಳಿಗಿಂತ ಹೆಚ್ಚಿನ ಕ್ಲೇಶಗಳಿವೆ. ಅನಿಶ್ಚಿತತೆ, ಅನಿರ್ದಿಷ್ಟತೆಯ ಪರಿಸರದಲ್ಲಿ ಕೆಲಸ ನಡೆಯಬೇಕು. ಸಾಹಸದ ಉದ್ಯೋಗಕ್ಕೆ ನೂರು ವಿಘ್ನಗಳು, ಶಂಕೆಗಳಿಗೆ ಅಂತಿಮವಾಗಿ ಬರುವ ಸಿದ್ಧಿ ಒಂದು ಫಲವಾದರೆ, ಇಂಥ ಚರ್ವಿತಚರ್ವಣವಲ್ಲದ ಹಾದಿಯಲ್ಲಿ ಪಯಣಿಸುವುದೇ ಒಂದು ರೋಚಕ ಅನುಭವ ಆಗಿದೆ. ಇನ್ನೂ ನನ್ನ ಮನಸ್ಸಿಗೆ ಆಯಾಸ ಉಂಟಾಗಿಲ್ಲ – ದೇಹ ಸಂಕೋಚಿಸಿದರೂ ಮನಸ್ಸು ಏನನ್ನಾದರೂ ಗೆಲ್ಲುತ್ತದೆಂದು ಹಿರಿಯರು ಹೇಳಿದ ಮಾತಿನ ಮೇಲೆ ವಿಶ್ವಾಸವಿಟ್ಟು ಇನ್ನೂ ಒಂದು ವರ್ಷ ಕಾರ್ಯಕರ್ತನಾಗಿ ಆಮೇಲೆ ನಿಜಕ್ಕೂ ವಿಶ್ರಾಂತನಾಗಿ ನೂರಕ್ಕೆನೂರು 'ಅಜ್ಞಾತನ'ವನ್ನು ನಿರ್ವಹಿಸುವ ರಸಘಟ್ಟವನ್ನು ಇದಿರು ನೋಡುತ್ತಿದ್ದೇನೆ. ನನ್ನ ಈ ಕೆಲಸಗಳು ಯಾ ಹುಚ್ಚುಗಳನ್ನು ಕೇರಾಫ್ ಎಂ.ಜಿ. ಕಾಲೇಜು ಮಾಡಲು 3 ತಿಂಗಳ ನೋಟೀಸು ಕೂಡ ಕೊಡುವುದಗತ್ಯವಿಲ್ಲ. ಕೆಲಸ ಮುಂದುವರಿಯುತ್ತದೆ, ಹಾಗೆ ಮುಂದುವರಿಯುವುದು ಮುಖ್ಯ. ನಾನಲ್ಲ; ಇದು ನನ್ನ ಕೆಲಸವಲ್ಲ. ಸಮಾಜದ ಕೆಲಸ.

9 ವರ್ಷಗಳ ಹಿಂದೆ ನನ್ನ 55ನೇ ವರ್ಷಕ್ಕೆ ನಾನು ನಿವೃತ್ತನಾಗುವ ಮುನ್ನ ವಿದ್ಯಾರ್ಥಿ ಮಿತ್ರರು ಕೊಟ್ಟ ಅಭಿನಂದನ ಗ್ರಂಥಕ್ಕೆ 'ಪ್ರವೃತ್ತ' ಎಂದು ಹೆಸರಿಟ್ಟು ನನ್ನನ್ನು ತಪ್ಪುದಾರಿ ಹಿಡಿಸಿಬಿಟ್ಟರು. ನಾನು ನಿಜಕ್ಕೂ ನಿವೃತ್ತನಾಗಿ ಬರವಣಿಗೆಯ ಉದ್ಯಮಕ್ಕೆ ಸೇರುವ ನಿರ್ಧಾರ ಮಾಡಿದ್ದೆ. ಆದರೆ ಅವರ ಹೊಗಳಿಕೆಗಳನ್ನೆಲ್ಲ ಓದಿ ಹೀಗೂ ಉಂಟೇ? ಇದ್ದರೆ ಇವರನ್ನ ನಿರಾಶೆಗೊಳಿಸಬಾರದು ಎಂದು ಮತ್ತೆ ನೊಗಕ್ಕೆ ಕೊರಳು ಕೊಟ್ಟೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ನಡೆಯುತ್ತಿರುವ ತುಳುನಿಘಂಟು ಕೆಲಸ, ಸಭೆ, ಸಮ್ಮೇಳನಗಳ ಕೆಲಸ, ಜಾನಪದ ಅನ್ವೇಷಣೆಗಳ ನಡುವೆ ಬಿಡುವಿರದ ಸಂಚಾರಗಳು ಯಕ್ಷಗಾನದ ಜನ್ನಗುದುರೆಯ ಬೆಂಬತ್ತಿ ವಿಶ್ವಸಂಚಾರಗಳು, ಸರ್ಕಾರಿ ಅನುದಾನದ ಬಗ್ಗೆ ನಿರಂತರ ಬೆಂಗಳೂರು ವಾಸಪ್ರವಾಸಗಳು, ಈಚೆಗಿನ ದಿನಗಳಲ್ಲಿ ನನಗೆ ದೊರೆತ ದಿಲ್ಲಿಯ ಇಂದಿರಾಗಾಂಧಿ ಕೇಂದ್ರ ಹಾಗೂ ಐಸಿಸಿಆರ್‌ನ ಸಭೆಗಳ ಸಲುವಾಗಿ ದಿಲ್ಲಿ ಯಾತ್ರೆಗಳು, ಸ್ಥಾನೀಯವಾಗಿ ಜಿಲ್ಲೆಯೊಳಗಡೆ ಹಾಗೂ ಹೊರಗೆ ಭಾಷಣ – ಸಂಭಾಷಣೆಗಳು, ಹೀಗೆ ಒಂದು ಕಾರ್ಯಜಾಲದೊಳಗಡೆ ಸಿಲುಕಿಕೊಂಡಿದ್ದೇನೆ. 'ದುಡಿಮೆ ನಮ್ಮ ದೇವರೆಂದು' ನಾನು ಬರೆದ ಒಂದು ಕವಿತೆಯ ಸಾಲನ್ನು ನಾನೇ ಚರಿತಾರ್ಥಗೊಳಿಸುವಂತೆ. ತನ್ನ ಕಾವ್ಯಕೆ ತಾನೆ ಮಣಿಯುವಂತೆ.


ಒಂದು ಧ್ಯೇಯಕ್ಕಾಗಿ ನಿಷ್ಠೆಯಿಂದ ಹೋರಾಡುವಾಗ ನನಗೆ ಶ್ರಮ ಎನಿಸಿದ್ದೇ ಇಲ್ಲ. ಎಂ.ಜಿ.ಎಂ. ಕಾಲೇಜಿನ ಪ್ರಾಂಗಣದ ಒಂದು ಪಾರ್ಶ್ವದಲ್ಲಿ, ಮಾವಿನ ಮರದ ತೆರೆ (ಮ್ಯಾಂಗೋ ಟ್ರೀ ಕರಟನ್)ಯ ಮರೆಯಲ್ಲಿ ಮೌನಸಂಧಾನ ಮಾಡುತ್ತಿರುವುದು, ನನ್ನ ಚಿಕ್ಕ ನೌಕರ ಪಡೆಯೊಡನೆ ನಿರ್ದಿಷ್ಟ ಕೆಲಸಗಳಲ್ಲಿ ಮಗ್ನನಾಗಿರುವುದು ನನಗೆ ಇಷ್ಟ. ಜಾನಪದ ಕೇಂದ್ರದ ವಿಡಿಯೋ ನೋಡಿ, ಮಾಹಿತಿ ಪಡೆಯಲು ಬರುವ ವಿದೇಶಿ ಸಂಚಾರಿಗಳು, ಸ್ವದೇಶಿ ಪ್ರವಾಸಿಗಳು ನನ್ನ ಮೌನವನ್ನ ಭಂಗಗೊಳಿಸುತ್ತಾರೆ. ಅವರ ಪ್ರಸನ್ನತೆಯ ಮುಖ ಮುದ್ರೆ ಸಂತೋಷವುಂಟುಮಾಡುತ್ತದೆ. ಸಂದರ್ಶಕರ ಪುಸ್ತಕದಲ್ಲಿ ಅವರ ಅನುಭವ ಕಥನ ಮತ್ತೆ ನನ್ನನ್ನ ಕೆಲಸಕ್ಕೆ ಹುರಿದುಂಬಿಸುತ್ತದೆ. ದಿನಗೆಲಸ ಮುಗಿದ ಮೇಲೆ ಮಣಿಪಾಲಕ್ಕೆ ಹೋಗಿ ಅಲ್ಲಿನ ಮುದ್ರಣಾಲಯದ ತರುಣಮಿತ್ರರ – ಮೋಹನದಾಸ ಪೈ, ಸತೀಶ ಪೈ ಹಾಗೂ ನನ್ನ ಆತ್ಮೀಯ ಮಿತ್ರ ಕೃಷ್ಣಯ್ಯನವರನ್ನು ನೋಡುತ್ತೇನೆ. ಲೋಕಾಭಿರಾಮವಾಗಿ ತಾಸರ್ಧತಾಸು ಅವರನ್ನ ಮಾತನಾಡಿಸಿದೆನೆಂದರೆ ಆವತ್ತಿನ ಕರ್ತವ್ಯ ಪೂರ್ತಿ ಆದಂತೆ. ದಾರಿಯಲ್ಲಿ ಮಾಧವ ಪೈ ಸ್ಮೃತಿ ಮಂದಿರದಲ್ಲಿ ಮಿತ್ರ ಪಿ.ಎಸ್. ರಾಮಕೃಷ್ಣ ಸಾಹಿತ್ಯ ಸಲ್ಲಾಪಕ್ಕೆ ಒದಗುತ್ತಾರೆ, ಪರ್ಕಳದವರೆಗೆ ಹೋದರೆ ಭಾರತ ಸಂಚಾರದ ಮೇಲೆ ವಿಶ್ವಾಸವುಳ್ಳ, ಎಣಿಸಿದ ಕೂಡಲೇ ದಿಗ್ಗನೆ ಸಿಕ್ಕಿಂ, ಹಿಮಾಲಯ, ಲೇ, ರಾಜಸ್ಥಾನ ಎಂದು ಸುತ್ತಾಡುವ ಸನ್ಮಿತ್ರ ಡಾ. ಗಿರಿಧರರಾಯರ ಶಾಪಿನಲ್ಲಿ ಕೂತು ಹರಟೆ ಹೊಡೆದು ಮನೆಗೆ ಮರಳುವುದೂ ಉಂಟು. ರಥಬೀದಿ ಈಗ ಒಂದು ಸಂತೆ ಆಗಿರುವುದರಿಂದ ಅತ್ತ ಕಡೆ ತಿರುಗಲು ಮನಸ್ಸಾಗುವುದಿಲ್ಲ.

ಅಲ್ಲಿ ಪಾವಂಜೆ ಗ್ರಂಥಾಲಯದ ಪೀಠವನ್ನೀಗ ನಾನು ತ್ಯಾಗಮಾಡಿದ್ದೇನೆ. ಬಹುಶಃ ಅಲ್ಲಿ ಪೀಠ ಬಿಡದೆ ಸದಾ ಕಾಲ ನಿಲ್ಲುವವನು ಕಡೆಗೋಲು ಧಾರಿ ಶ್ರೀ ಕೃಷ್ಣ ಮಾತ್ರವೋ ಏನೋ.

ಉಡುಪಿ ನನ್ನ ಬಾಲ್ಯಕಾಲದ ಉಡುಪಿಯಾಗಿಯೇ ಉಳಿಯಬೇಕೆಂದು ಹಂಬಲಿಸುತ್ತೇನೆ. ಆದರೆ 80ರ ದಶಕದ ಉಡುಪಿ ತೀವ್ರವಾಗಿ ಬೆಳೆಯುತ್ತಿದೆ. ಹಂಚಿನ ಮಾಡುಗಳೆಲ್ಲವೂ ಪ್ರಗತಿಯ ಬಿರುಗಾಳಿಯಲ್ಲಿ ತಾರಸಿ ಮಾಡುಗಳಾಗುತ್ತಿವೆ. ಹಳೆ ಬಂಗಲೆಗಳು, ಖಾಲಿ ಸ್ಥಳಗಳು, ಹೊಲಗದ್ದೆಗಳು ತ್ರಿತಾರಾ ಹೋಟೆಲುಗಳಿಗೆ ಎಡೆ ಮಾಡುತ್ತಿವೆ. ಹಾದಿಬೀದಿಗಳು ಪಾದಚಾರಿಗಳಿಗಲ್ಲ ಬರೇ ವಾಹನಗಳಿಗಾಗಿ ಮಾತ್ರವೇ ಎಂದು ಬೋರ್ಡು ಹಾಕುವ ಕಾಲ ಬರುತ್ತಿದೆ. ಮಲ್ಪೆ–ಉಡುಪಿ–ಮಣಿಪಾಲದ ಹೆದ್ದಾರಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ವಾಹನ ನಿಬಿಡತೆಯನ್ನು ಕಾಣುತ್ತೇವೆ. ಉಡುಪಿಯ ಕೃಷ್ಣನ ನಿತ್ಯಪೂಜೆ ರಥೋತ್ಸವ, ಪರ್ಯಾಯಗಳ ಜತೆಗೆ ಸಂಘಸಂಸ್ಥೆಗಳ ಅಸಂಖ್ಯ ಉತ್ಸವಗಳು ಸೇರಿ ಮೈಕುಗಳಿಗೆ ಬೇಡಿಕೆ ಹೆಚ್ಚಿದೆ. ಆಧುನಿಕ ಪ್ರಗತಿಯ ವೇಗ, ಧಾವತಿ, ಸಿಡಿತ ಸೆಡೆತ ಎಲ್ಲವೂ ಇಲ್ಲಿ ದಟ್ಟವಾಗಿ ಹರಡಿದೆ. ಜನಜೀವನದ ಸಂಕೀರ್ಣತೆಗೆ ವಿದ್ಯಾಸಂಸ್ಥೆಗಳ ಒಳಹೊರಗೂ ಅಲುಗಾಡುತ್ತಿದೆ. ಗ್ರಾಮಾಂತರದ ಒಂದು ಚಿಕ್ಕಪಟ್ಟಣ ಇಂದು ಭಾರತದ ರಾಷ್ಟ್ರೀಯ ಉದ್ಯೋಗ ಮತ್ತು ಆರ್ಥಿಕ ಜಾಲದಲ್ಲಿ ಸೇರಿಕೊಂಡಿದೆ. ಶೇಕಡಾ 80ಕ್ಕೂ ಮಿಕ್ಕು ಅಕ್ಷರಸ್ಥರನ್ನ ಪಡೆದ ಉಡುಪಿ ನಗರ – ಇಲ್ಲಿನ ನಗರ ಸಭೆಗೆ ಪ್ರಥಮಸ್ಥಾನ ಎರಡು ಸಲ ದಕ್ಕಿದೆ–ಗ್ರಾಮಾಂತರದ ಪ್ರಸಿದ್ಧ ಪ್ರಗತಿ ಬಿಂದುವಾಗಿ ಪರಿಗಣಿತವಾಗಿದೆ. ಹಳೇ ಹೊಸತೆಂಬ ಭೇದವಿಲ್ಲದೆ ಯಾವುದೇ ಮೌಲ್ಯ ಸ್ಥಿರವಾಗಿ ಉಳಿದೀತೇ ಈ ಜಂಜಾಟದಲ್ಲಿ ಎಂದು ವ್ಯಥೆಪಡಬೇಕೇ? ಕಾಲಾಯತಸ್ಮೈ ನಮಃ ಅಲ್ಲವೇ?

---

1 ನವಂಬರ 1987



Village deities — Hebbar 1986.



ರಶ್ಮಿ ೨



ಅವರಿವರು ಕಂಡಂತೆ

೧ ಸ್ನೇಹಸೇತು

— ದೇಜಗೌ

— ೧ —

'ಉಡುಪಿ ಕೃಷ್ಣ ಪೊಡವಿಗೊಡೆಯ ಬಿಡದೆ ಕಾಯೊ ಮೃಡನ ಸಖನೆ' ಎಂಬ ಸಾಲಿನಿಂದ ಮೊದಲಾಗುವ ಹಾಡನ್ನು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿ ದಿನಕ್ಕೊಂದು ಸಲವಾದರೂ ಗುನುಗಿಕೊಳ್ಳುತ್ತಿದ್ದಾಗ, ಆ ಉಡುಪಿ ನಾವು ವಾಸಿಸುವ ಜಗತ್ತಿನಲ್ಲಿಲ್ಲವೆಂದೂ, ಶ್ರೀಕೃಷ್ಣ ವಾಸಿಸುವ ಪ್ರತ್ಯೇಕವಾದ ಲೋಕವೆಂದೂ. ಅಲ್ಲಿಂದಲೇ ಅವನು ತನ್ನ ಭಕ್ತರ ಲಾಲನೆ-ಪಾಲನೆಗಳಲ್ಲಿ ನಿರತನಾಗಿದ್ದಾನೆಂದೂ. ಅದರ ಪ್ರವೇಶ ಸಾಮಾನ್ಯರಿಗಿಲ್ಲ ವೆಂದೂ ನಾನಾಗ ಊಹಿಸಿಕೊಳ್ಳುತ್ತಿದ್ದುದುಂಟು.

ಆ ಉಡುಪಿ ನಾವು ವಾಸಿಸುವ ಭೂಮಿಯಲ್ಲಿಯೇ ಇರುವ ಒಂದು ಪಟ್ಟಣವೆಂದೂ, ಪೊಡವಿಗೊಡೆಯ ನಾದ ಶ್ರೀಕೃಷ್ಣ ಅಲ್ಲಿಯೇ ವಾಸಿಸುತ್ತಿದ್ದಾನೆಂದೂ, ಅಲ್ಲಿ ಜನ್ಮ ಪಡೆಯುವ ಸಕಲ ಜೀವಜಂತುಗಳು ಪುಣ್ಯ ಭಾಜನವೆಂದೂ, ಅಲ್ಲಿಗೆ ಹೋಗಿ ಬರುವ, ಶ್ರೀಕೃಷ್ಣನನ್ನು ದರ್ಶಿಸುವ ಜನ ಭಾಗ್ಯವಂತರೆಂದೂ. ಆದರಿಂದಾಗಿ ಅದೊಂದು ತೀರ್ಥಕ್ಷೇತ್ರವೆಂದೂ. ಬರಬರುತ್ತ ಅವರಿವರ ಮೂಲಕ ಕೇಳಿ ತಿಳಿದುಕೊಂಡಿದ್ದೆ.

ಶ್ರೀಕೃಷ್ಣ ಸಹ ಹದಿನಾಲ್ಕನೆಯ ಶತಮಾನದಲ್ಲಿ ಉಡುಪಿಗೆ ಬಂದು ನೆಲಸಿದನೆಂದೂ, ದ್ವೈತಮತ ಸ್ಥಾಪಕರಾದ ಮಧ್ವಾಚಾರ್ಯರೇ ಅವನ ನೆಲಸಿಗೆ ಹಾಗೂ ಅವನ ಪೂಜೆ ಪುನಸ್ಕಾರಗಳಿಗೆ ಅನುವು ಮಾಡಿ ಕೊಟ್ಟರೆಂದೂ, ಕನ್ನಡ ನಾಡಿನ ಒಂದು ಭೂಪ್ರದೇಶ ಧರ್ಮಭೂಮಿಯಾಗಲು, ಪವಿತ್ರಕ್ಷೇತ್ರವಾಗಲು ಮಧ್ವಾಚಾರ್ಯರೇ ಕಾರಣರೆಂದೂ. ಅವರಿಂದೀಚೆಗೆ ಅದು ಕಾಂತಶಕ್ತಿಯಾಗಿ ನಾಡಿನ ಜನರನ್ನು ಆಕರ್ಷಿಸುತ್ತಿದೆ ಯೆಂದೂ, ಅಲ್ಲಿಯ ಧರ್ಮಜಾತ್ರೆ ಸಂಸ್ಕೃತಿ ಮೇಳವೂ ಆಗಿ ಪರಿವರ್ತನೆ ಹೊಂದಿದೆಯೆಂದೂ ಕಂಡವರಿಂದ ಕೇಳಿ ಅರಿತುಕೊಂಡಿದ್ದೆ.

ನಾಡು ನುಡಿಗಳ ಬಗ್ಗೆ ಗೌರವಾಭಿಮಾನಗಳು ಉಕ್ಕಂದವಾಗಿ ಚಿಮ್ಮುತ್ತಿದ್ದಂತೆ, ಹೃದಯುನ್ಮವಾದ, ಉಡುಪಿಯ ಸುತ್ತ ಭಾವ ಪರಿವೇಶವೊಂದು ದಿನೇದಿನೇ ಪ್ರಕಾಶಮಾನವಾಗಿ, ನಿರ್ದಿಗಂತವಾಗಿ ಹಿಗ್ಗಲಿಸುತ್ತಿತ್ತು. ಜತೆಜತೆಯಲ್ಲಿಯೇ ಅದನ್ನು ನೋಡುವ ಆಸೆಯೂ ತೀವ್ರಗೊಳ್ಳುತ್ತಿತ್ತು. ಮೊತ್ತಮೊದಲ ಬಾರಿಗೆ ಕು.ಶಿ. ಭಟ್ಟರು ಅಯಾಚಿತರಾಗಿ, ಅಭ್ಯಾಗತರಾಗಿ 'ಗುರುಕೃಪಾ' ಮನೆಗೆ ಬಂದಾಗ, ಶ್ರೀಕೃಷ್ಣನ ಊರಿನವರೆಂಬ ಹೆಮ್ಮೆ, ಗತಜನ್ಮದ ಬಂಧುವೆಂಬ ಸಂತೋಷ ನನಗೆ; ಶ್ರೀಕೃಷ್ಣನ ಸಂದೇಶವಾಹಕರೆಂದೇ ನಾನವರನ್ನು ಗೌರವಿಸಿದೆ, ಪ್ರೀತಿಸಿದೆ.

1958ರಲ್ಲೆಂದು ನೆನಪು. 1957 ಇದ್ದರೂ ಇರಬಹುದು. ನಾನಾಗ ಪರೀಕ್ಷಾಧಿಕಾರಿ. ಮಡದಿ ಮಕ್ಕಳೊಡನೆ ಮಂಗಳೂರಿಗೆ ಹೋಗಿದ್ದೆ. ಕಡಲು ಉಡುಪಿಗಳನ್ನು ತೋರಿಸುವುದಾಗಿ ನಾನವರಿಗೆ ವಾಗ್ದಾನ ನೀಡಿದ್ದೆ. ನಮ್ಮ ಜತೆಯಲ್ಲಿ ನನ್ನ ಮಾವಂದಿರೂ ಇದ್ದರು. ನಾನು ಮಂಗಳೂರಿಗೆ ಹೋಗಿದ್ದ ವಿಷಯ ಹರಿದಾಸ ಭಟ್ಟರಿಗೆ ಹೇಗೆ ತಿಳಿದಿತ್ತೋ ಕಾಣೆ ಅಥವಾ ಶ್ರೀಕೃಷ್ಣನೇ ಅವರ ಮನಸ್ಸಿನಲ್ಲವಿತಿದ್ದು ಹೇಳಿದನೋ. ಅವರು ನಾನಿಳಿದು ಕೊಂಡಿದ್ದ ಹೋಟಲಲ್ಲಿ ಪ್ರತ್ಯಕ್ಷರಾದರು. ಕೈಯಲ್ಲಿ ಮುರಳಿಯಿರಲಿಲ್ಲ. "ಉಡುಪಿಗೆ ಬನ್ನಿ", 'ಬರುತ್ತೇವೆ. ಬಸ್ಸಿನಲ್ಲಿ' 'ಬಸ್ಸಿನಲ್ಲೇ? ಅಷ್ಟೇಕೆ ತ್ರಾಸ? ನೀವು ಹೊರಡಲು ಸಿದ್ಧರಾಗಿ. ಅರ್ಧಗಂಟೆಯಲ್ಲಿ ಬಂದು ಬಿಡುತ್ತೇನೆ.'

ಅವರು ಅರ್ಧಗಂಟೆಗೆ ಬಂದರು. ಸದ್ದಿಲ್ಲದೆ ಅವರನ್ನು ಹಿಂಬಾಲಿಸಿದೆವು. ಆಗ ಹೃದಯಗಳಲ್ಲಿ ಪರಸ್ಪರವಾಗಿ ಸಲುಗೆಯಿದ್ದರೂ, ಬಾಯಿಬಾಯಿಗಳ ನಡುವೆ ಸಲುಗೆಯಿರಲಿಲ್ಲ. ಆದ್ದರಿಂದಲೇ ಮಾತು ಮಿತ. ನಾವು ಹೋಟಲ ಮುಂದೆ ನಿಂತಿದ್ದ ಬಾಡಿಗೆ ಕಾರನ್ನೇರಿದೆವು. ದಾರಿಯುದ್ದಕ್ಕೂ ಅವರು ಸಿಕ್ಕಿದ ಊರುಗಳ ಪರಿಚಯವನ್ನು ಹೇಳುತ್ತ, ನಡುನಡುವೆ ಸಾಹಿತ್ಯದ ಬಗ್ಗೆ ಪ್ರಸ್ತಾವಿಸುತ್ತಿದ್ದರು.

ಕುಂಜಿಬೆಟ್ಟದ ಅವರ ಮನೆಯನ್ನು ಸೇರಿದ ಕೆಲವು ನಿಮಿಷಗಳಲ್ಲಿ ಉಪಾಹಾರ ಮುಗಿಸಿ, ಮಲ್ಪೆಗೆ ಹೊರಟೆವು; ಅಲ್ಲಿಂದ ನೇರವಾಗಿ ಶ್ರೀಕೃಷ್ಣನ ಮಂದಿರಕ್ಕೆ ಹೊರಟೆವು. ನನ್ನ ಮಾವ ಮಡದಿ ಮಕ್ಕಳು ಶ್ರೀಕೃಷ್ಣನ ವಿಗ್ರಹಕ್ಕೆದುರಾಗಿ ನಿಲ್ಲಲು ಅನುಕೂಲ ಒದಗಿಸಲಾಗಿತ್ತು. ನಾನು ಮತ್ತು ಕುಶಿಯವರು ಬೇರೆಡೆ ನಿಂತುಕೊಂಡು ದೇವಾಲಯದ ಕಾರುಬಾರುಗಳು, ಅಲ್ಲಿಯ ರೀತಿ ನೀತಿಗಳನ್ನು ಕುರಿತು ಚರ್ಚಿಸುತ್ತಿದ್ದೆವು; ಬಂದು ಹೋಗುತ್ತಿದ್ದ ಭಕ್ತವೃಂದದ ಚರ್ಯೆ ಚಹರೆಗಳನ್ನು ನೋಡುತ್ತಿದ್ದೆವು. ಪೂಜೆ ಮುಗಿದ ನಂತರ ಕುಶಿಯವರ ಮನೆಗೆ ಮರಳಿದೆವು.

ನಮ್ಮ ಮುಂದೆ ಪುಸ್ತಕ ಪತ್ರಿಕೆಗಳನ್ನು ಹರಡಿ, ಕುಶಿಯವರು ಅಡುಗೆ ಮನೆಯ ಕಡೆಗೆ ನಡೆದರು. ನಾವು ಪತ್ರಿಕೆಗಳನ್ನೋದುತ್ತ, ಚಟಾಕು ಪಾವು ಸೇರು ಪ್ರಮಾಣದ ಮಕ್ಕಳ ಆಟಪಾಟಗಳನ್ನು ನೋಡುತ್ತ, ಕೆಲ ಹೊತ್ತು ಕಾಲಕಳೆದೆವು. ಅಷ್ಟರಲ್ಲಿ ಮುಂಡದ ವಸನಗಳನ್ನು ತೆಗೆದು, ಕಚ್ಚೆಪಂಚೆಯನ್ನು ಮೇಲೆತ್ತಿ ಕಟ್ಟಿಕೊಂಡು, ಭಟ್ಟರು ನಮ್ಮನ್ನೆಲ್ಲ ಊಟಕ್ಕೆ ಕರೆದರು. ಅಡುಗೆ ಮನೆಯ ಹಜಾರದಲ್ಲಿ ಎಲೆ ಹಾಕಿದ್ದರು. ಆಗಿನ್ನೂ ಮನೆಯ ತೊಟ್ಟಿಗೆ ಕಲ್ನಾರು ಹಾಳೆ ಹೊದಿಸಿರಲಿಲ್ಲ. ಆಗಾಗ್ಗೆ ತಂಗಾಳಿ ಸಲೀಸಾಗಿ ಒಳನುಗ್ಗಿ ಅತಿಥಿಗಳನ್ನು ಸತ್ಕರಿಸುತ್ತಿತ್ತು. ಭಟ್ಟರಂತೆ ಭಟ್ಟರೇ ಒಂದರ ಮೇಲೊಂದರಂತೆ ಪದಾರ್ಥಗಳನ್ನು ಬಡಿಸುತ್ತಿದ್ದರು. ಮುಂದಿನ ದಿನಗಳಲ್ಲಿ ತಂಗಿಗಿಂತ ಮಿಗಿಲಾಗಿ, ಅನ್ನಪೂರ್ಣೆಯಂತೆ ಅಕ್ಕರೆಯಿಂದ ಉಪಚರಿಸುತ್ತಿದ್ದ ಶ್ರೀಮತಿ ಸುಮತಿ ಭಟ್ಟರು ಕಾಣಲಿಲ್ಲ. ಅವರು ಅಡುಗೆ ಕೋಣೆಯೊಳಗೋ ಬಾಣಂತಿ ಗೃಹದಲ್ಲಿಯೋ ಬಂಧನಗೊಂಡಿದ್ದಿರಬಹುದೆಂದು ಕಾಣುತ್ತದೆ. ಆದರೆ ಭಟ್ಟರು ಭಟ್ಟರಂತಲ್ಲದೆ ಆತಿಥ್ಯದ ಮರ್ಮವನ್ನರಿತ, ಅತಿಥಿಗಳ ಬಗೆಯನ್ನರಿತ ಸದ್ಗೃಹಿಣಿಯಂತೆ ನಮ್ಮನ್ನು ತಣಿಸಿದರು; ದಣಿಯುವ ತನಕ ತಣಿಸಿದರು.

ನಾವು ಕಾರು ಹತ್ತುವ ತನಕ ಅವರು ಊಟ ಮಾಡಲಿಲ್ಲ. ಅವರು ಊಟ ಮಾಡಲೆಂದೇ ನಾವು ಬೇಗ ಅದೇ ಕಾರಿನಲ್ಲಿ ಮಂಗಳೂರಿಗೆ ಹಿಮ್ಮೊಗರಾದೆವು. ದಾರಿಯುದ್ದಕ್ಕೂ, ಅವರದೇ ಮಾತು; ಕೃಷ್ಣನದೇ ಕತೆ. ಹೋಟಲ ಬಳಿ ಕಾರಿಳಿದ ಕೂಡಲೇ 'ಬಾಡಿಗೆ ಎಷ್ಟಪ್ಪ?' ಎಂದು ಕೇಳಿದೆ. 'ಬಾಡಿಗೆ ಪೂರ್ತಿಯಾಗಿ ಸಂದಿದೆ' ಎಂದು ಕಾರಿನವ ಹೇಳಿದ. ಕುಶಿಯವರನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಾದರೆ ಎಷ್ಟು ದಿನ ಬೇಕಾದೀತೋ? ಎಂಬ ಆಲೋಚನೆ, ನನ್ನ ಮನಸ್ಸನ್ನು ಪ್ರವೇಶಿಸಿತು. ಆ ಆಲೋಚನೆಯ ಗುಂಗಿನಲ್ಲಿಯೇ ನಾನು ಹಾಸುಗೆಯ ಮೇಲೆ ಬಿದ್ದುಕೊಂಡೆ.

ಹೊಸ ಜಾಗವೋ, ಹೊಟ್ಟೆಯ ಭಾರವೋ, ಪ್ರಯಾಣದ ಆಯಾಸವೋ, ಆಲೋಚನೆಯ ಗುಂಗೋ ಕಾರಣವಾಗಿ ನನಗೆ ನಿದ್ದೆ ಹತ್ತಲಿಲ್ಲ. ಉಡುಪಿಯಲ್ಲಿ ಒಂದಕ್ಕಿಂತ ಒಂದು ಹೆಚ್ಚು ಚೆನ್ನು; ವಿಸ್ತಾರ ಸಾಗರ, ಕಾದ ಕಬ್ಬಿಣದುಂಡೆಯಂತಿರುವ ನೇಸರಿನ ಮುಳುಗು, ಶ್ರೀಕೃಷ್ಣ ಮಂದಿರದ ದೃಶ್ಯಾವಳಿಯ ಹಾವಳಿ, ಹರಿದಾಸ ಭಟ್ಟರ ಸುಸ್ನಿಗ್ಧ ಸುಮಧುರ ಸ್ನೇಹ ಮಾಧುರ್ಯ. ಮಲ್ಪೆ ಶ್ರೀಕೃಷ್ಣರ ದರ್ಶನಕ್ಕೆ ನಿಮಿತ್ತವಾಗಿದ್ದ ಕುಶಿಯವರ ಖುಶಿ ಅವರನ್ನು ಮರೆಸಿ ಬಿಟ್ಟಿತು. ಅವು ಒಂದೊಂದಾಗಿ ಅದೃಶ್ಯಗೊಂಡು, ಕೊನೆಗುಳಿದದ್ದೇ ಕುಶಿಯವರ ಖುಶಿ. ಕೊನೆಗೂ ಉಡುಪಿಗೆ ಪರ್ಯಾಯ ನಾಮವಾಗಿ (ನನ್ನ ಪಾಲಿಗೆ) ಉಳಿದದ್ದೇ ಕುಶಿ ಎಂಬ ಎರಡಕ್ಷರದ ಹೆಸರು.

– ೨ –

ಅಲ್ಲಿಂದೀಚೆಗೆ ನಾವು ಮಾಡಿದ ಭೇಟಿಗಳಿಗೆ ಲೆಕ್ಕವಿಲ್ಲ; ಆಡಿದ ಮಾತುಗಳಿಗೆ ಮಿತಿಯಿಲ್ಲ. ನನ್ನ ಪ್ರತಿಯೊಂದು ಭೇಟಿಯೂ ಮಾತುಕತೆಗಳೂ ನಮ್ಮನ್ನು ನಿಕಟಗೊಳಿಸಿವೆ, ಆತ್ಮೀಯಗೊಳಿಸಿವೆ, ಸಂದಿಲ್ಲದಂತೆ ಬೆಸೆದಿವೆ. ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳು ಮೈಸೂರು ವಿಶ್ವವಿದ್ಯಾಲಯದೊಡನೆ ಜೋಡಣೆಗೊಂಡ ಮೇಲಂತು ನಮ್ಮ ಸುಖದುಃಖಗಳು ಪಾರಸ್ಪರಿಕವಾಗಿವೆ. ಕೆಲವೊಮ್ಮೆ ನಮ್ಮ ಮಾತುಕತೆಗಳಲ್ಲಿ ತೋರಿದ ಭಿನ್ನಾಭಿಪ್ರಾಯಗಳು ನಮ್ಮ ಹೃದಯಗಳ ಬೆಸುಗೆಯನ್ನು ಬಿಡಿಸಲಾಗಿಲ್ಲ. ಪೈ ಬಂಧುಗಳು ಪ್ರಾರಂಭಿಸಿದ ಕಾಲೇಜುಗಳಲ್ಲೆಲ್ಲ ನಾನು ಹರಿದಾಸ ಭಟ್ಟರ ಪ್ರಭಾವವನ್ನು ಗುರುತಿಸುತ್ತಿದ್ದುದುಂಟು. ಪೈಗಳ ಕೀರ್ತಿ ಲೋಕವಿಸ್ತಾರವಾಗಿತ್ತು, ದಿಟ. ನನಗವರ ಪರಿಚಯವಾದದ್ದೂ, ಹರಿದಾಸ ಭಟ್ಟರ ಮೂಲಕ. ಅವರಿಗೆ ನನ್ನ ವಿಷಯದಲ್ಲಿ ಅಪಾರ ವಿಶ್ವಾಸವಿದ್ದದ್ದೂ ನಿಜ. ಆದರೂ ಅವರು ಮಾನಸಿಕವಾಗಿ ಹಾಗೂ ಭೌತಿಕವಾಗಿ ನನಗೆ ದೂರ;

ಭಟ್ಟರೇ ಹತ್ತಿರ. ಪೈಗಳು ಭಟ್ಟರ ಕಡೆಯವರೆಂದು ಅವರಲ್ಲಿ ನನಗೆ ಗೌರವಾದರ ವಿಶ್ವಾಸಗಳು[1]. ಪೈಗಳ ಸಂಸ್ಥೆಗಳಲ್ಲಿ ಭಟ್ಟರ ಕೈವಾಡವಿದೆಯೆಂದೇ ತಿಳಿದು ನಾನವುಗಳಿಗೆ ನನ್ನ ಕೈಲಾದ ಸಹಾಯ ಮಾಡಿದ್ದೇನೆ. ಮಹಾತ್ಮಾಗಾಂಧಿ ಸ್ಮಾರಕ ಕಾಲೇಜಿನಲ್ಲಿ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಬೇಕೆಂಬ ಸಲಹೆ ಬಂದಾಗ, ಅಲ್ಲಿ ಭಟ್ಟರಿದ್ದಾರೆಂದೇ ನಾನು ಆ ಸಲಹೆಯನ್ನು ಬೆಂಬಲಿಸಿದ್ದುಂಟು. ಆದರೆ ಆ ಸಲಹೆ ಕಾರ್ಯಗತಗೊಳ್ಳಲಿಲ್ಲ. ಹಾಗೆ ಕಾರ್ಯಗತಗೊಳ್ಳದಿರಲು ಕೆಲವು ಮಂದಿ ಪ್ರಾಧ್ಯಾಪಕರು ಮತ್ತು ಒಬ್ಬಿಬ್ಬರು ಪ್ರಭಾವಶಾಲೀ ವ್ಯಕ್ತಿಗಳು ಕಾರಣರಾಗಿರುವಾಗ, ಇಡೀ ವಿಶ್ವವಿದ್ಯಾಲಯವನ್ನು ದೂರುವುದು ಸರಿಯಲ್ಲ.

ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ ಹರಿದಾಸ ಭಟ್ಟರ ಕೂಸು. ಅದು ಅವರ ಮಾರ್ಗದರ್ಶನದಲ್ಲಿ ಪ್ರಬಲವಾಗಿ, ಸುಪುಷ್ಟವಾಗಿ ಬೆಳೆಯಬೇಕೆಂಬುದೇ ನನ್ನ ಆಸೆ. ಸ್ನಾತಕೋತ್ತರ ಸಂಶೋಧನೆಗೆ ಅಲ್ಲಿ ಅವಕಾಶವಿರಬಾರದೆಂದು ಸರ್ವರೂ ವಾದಿಸುತ್ತಿದ್ದಾಗ, ಅದಕ್ಕೆ ನನ್ನೆಲ್ಲ ಶಕ್ತಿಯನ್ನು ವಿನಿಯೋಗಿಸಿ, ಮಾನ್ಯತೆಯನ್ನು ದೊರಕಿಸಿಕೊಟ್ಟದ್ದುಂಟು. ಈ ದಿಶೆಯಲ್ಲಿ ನನಗೆ ಸಂಪೂರ್ಣ ಬೆಂಬಲ ನೀಡಿದ ಶ್ರೀ ಸೂರ್ಯ-ನಾರಾಯಣ ಅಡಿಗರನ್ನು ಮರೆಯಲಾರೆ. ನನ್ನ ಅಧಿಕಾರಾವಧಿಯಲ್ಲಿ ಪೈ ಸಂಸ್ಥೆಗಳಿಗೆ ಅಧಿಕವಾಗಿ ಸಹಾಯ ದೊರೆತಿದ್ದರೆ ಅದಕ್ಕೆ ಭಟ್ಟರ ಮೇಲಣ ಗೌರವವೇ ಕಾರಣವೆಂದು ಹೇಳಿದರೆ ಉತ್ಪ್ರೇಕ್ಷೆಯಾಗದು.

ಕಾಲೇಜುಗಳ ಮಾನ್ಯತಾ ಸಮಿತಿಯಲ್ಲಿ ನಾವಿಬ್ಬರೂ ಸಾಮಾನ್ಯವಾಗಿ ಜತೆಜತೆಯಾಗಿಯೇ ಇರುತ್ತಿದ್ದೆವು. ಆ ಸಮಿತಿಯಲ್ಲಿ ಶ್ರೀಮಂತ ಮನೆತನದ ಸಂಪ್ರದಾಯಬದ್ಧ ಪ್ರಾಂಶುಪಾಲರೊಬ್ಬರು ಸದಸ್ಯಸ್ಥಾನದಲ್ಲಿರುತ್ತಿದ್ದರು. ಹಳ್ಳಿಗಳಿಗೆ ಅಥವಾ ತಾಲ್ಲೂಕಿನ ಕೇಂದ್ರಸ್ಥಳಗಳಿಗೆ ಕಾಲೇಜು ಕೊಡುವ ವಿಷಯದಲ್ಲಿ ಅವರಿಗೂ ನನಗೂ ಯಾವಾಗಲೂ ಢಕ್ಕಾಮುಕ್ಕಿ. ಹಣವಿಲ್ಲ, ಕಟ್ಟಡವಿಲ್ಲ, ಉಪಕರಣಗಳಿಲ್ಲ, ಗ್ರಂಥಭಂಡಾರವಿಲ್ಲವೆಂಬುದೇ ಅವರ ನ್ಯಾಯಬದ್ಧ ನಿಯಮಾಧೀನ ವಾದ. ಒಂದು ದಿನದಲ್ಲಿ ರೋಮ್‌ನಗರವನ್ನು ಕಟ್ಟಿ ಪೂರೈಸಲಿಲ್ಲ. ಏಕ್‌ದಂ ಅನುಕೂಲತೆಗಳನ್ನೆಲ್ಲ ಹಳ್ಳಿಗಳಲ್ಲಿ ನಿರೀಕ್ಷಿಸುವುದೂ ಸರಿಯಲ್ಲ; ಸಾಮಾಜಿಕ ಕ್ರಾಂತಿಯಾಗದೆ ದೇಶ ಪ್ರಗತಿಪಥದಲ್ಲಿ ಹೆಜ್ಜೆಯಿಡಲಾರದು; ಸಾಮಾಜಿಕ ಕ್ರಾಂತಿಯೋ, ರಕ್ತಕ್ರಾಂತಿಯೋ ಸಂಭವಿಸಬೇಕಾದರೆ ಸಾಮಾನ್ಯರಿಗೆ ಜ್ಞಾನದ ಬೆಳಕು ನೀಡಬೇಕಾಗಿದೆ; ಈ ದೃಷ್ಟಿಯಿಂದ ಹಳ್ಳಿಗಳಿಗೆ ಕಾಲೇಜು ಕೊಡಬೇಕೆಂಬುದು ನನ್ನ ವಾದ. ಹರಿದಾಸ ಭಟ್ಟರು ಯಾವಾಗಲೂ ನನ್ನ ವಾದಕ್ಕೆ ಮನ್ನಣೆ ನೀಡುತ್ತಿದ್ದರು. ಹೀಗಾಗಿ ಸಮಿತಿಯಲ್ಲಿ ನನ್ನ ಪರವಾಗಿ ಬಹುಮತ ದೊರೆಯುತ್ತಿತ್ತು. ಸಾಮಾನ್ಯ ಜನತೆ ವಿದ್ಯಾವಂತರಾಗದೆ ಸಾಮಾಜಿಕ ಕ್ರಾಂತಿ ಸಾಧ್ಯವಾಗದೆಂಬ ವಾದವನ್ನವರು ಮೆಚ್ಚುತ್ತಿದ್ದರು. ಪೈ ಬಂಧುಗಳ ದೃಷ್ಟಿಯೂ ಅದೇಯೇ.

ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿಂದು ಲೋಕವಿಖ್ಯಾತ ಸಂಸ್ಥೆಯಾಗಿದೆ. ಗುಣಮಟ್ಟದ ಸಾಧನೆ ಅದರ ಪ್ರಥಮ ಧ್ಯೇಯ. ಕಾಲೇಜೊಂದಿಗೆ ಭಟ್ಟರು ಬೆಳೆದಂತೆ, ಭಟ್ಟರೊಂದಿಗೆ ಕಾಲೇಜು ಬೆಳೆದಿದೆ. ಫರ್ಲಾಂಗು ದೂರ ಹಬ್ಬಿ, ಗಗನಚುಂಬಿಯಾಗಿ ಬೆಳೆದಿರುವ ಕಾಲೇಜಿನ ಹಿರಿಮೆಗೆ ಪೈ ಬಂಧುಗಳೆಂತು ಕಾರಣರೋ, ಭಟ್ಟರೂ ಅಂತೆಯೇ ಕಾರಣರು. 'ಸಾವಿರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕಾಲೇಜಿನಲ್ಲಿ ತಮ್ಮ ಬದುಕಿಗೊಂದು ಅರ್ಥವನ್ನು, ಹೊಸ ಜೀವನಮಾರ್ಗಗಳನ್ನೂ ಕಂಡುಕೊಂಡಿದ್ದಾರೆ. ಇಷ್ಟಕ್ಕೆಲ್ಲ ಕೆ.ಎಸ್. ಹರಿದಾಸ ಭಟ್ಟರ ಮಾರ್ಗದರ್ಶನವೇ ಮೂಲ ಮುಖ್ಯ ಕಾರಣ. ಅವರಿಂದಾಗಿ ಈ ಕಾಲೇಜಿನಲ್ಲಿ ಗುಪ್ತಕ್ರಾಂತಿ ನಡೆದಿದೆ' ಎಂಬ[2] ಟಿ.ಎ. ಪೈಗಳ ಪ್ರಶಂಸೆಯಲ್ಲಿ ಅತಿಶಯೋಕ್ತಿ ಎಳ್ಳಷ್ಟೂ ಇಲ್ಲ. 'ಕಾಲೇಜಿನ ಆವರಣದಲ್ಲಿ ಹಲವು ಕಟ್ಟಡಗಳನ್ನು ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಿ, ಅವರು ಸಾಧಿಸಿರುವ ರೂಪಾಂತರವೇ ಅವರೆಂಥ ಮಹತ್ವಪೂರ್ಣರಾದ ಶಿಲ್ಪಿಯೆಂಬುದಕ್ಕೆ ಸಾಕ್ಷಿಯಾಗಿದೆ'[3]ಯೆಂಬ ಟಿ.ಎಂ.ಎ. ಪೈಗಳ ಅಭಿಪ್ರಾಯ ಸದಾ ವಿಶ್ವಸನೀಯ

---

1. ಈ ಸಂದರ್ಭದಲ್ಲಿ ನನಗೆ ವಿಶ್ವೇಶ್ವರಯ್ಯನವರ ಜೀವನದ ಒಂದು ಸಂದರ್ಭ ನೆನಪಿಗೆ ಬರುತ್ತದೆ. ಅವರೊಮ್ಮೆ ಶಿವಮೊಗ್ಗ ಜಿಲ್ಲೆಯ ಪ್ರವಾಸಕ್ಕೆ ಹೋಗಿದ್ದರು. ಹಿಂದಿನ ರಾತ್ರಿ ಮಳೆಹೊಯ್ದು ಕಾಲುವೆಗಳಲ್ಲಿ ನೀರು ಹರಿಯುತ್ತಿತ್ತು. ಒಂದಾನೊಂದು ಕಾಲುವೆಯಲ್ಲಿ ಅವರ ಕಾರಿನ ಚಕ್ರ ಹೂತುಕೊಂಡುವು. ದಿವಾನರ ಕಾರು ಚಾಲಕ, ಸೇವಕರು ಗದ್ದೆ ಉಳುತ್ತಿದ್ದ ರೈತರನ್ನು ಕಾರೆತ್ತಲು ಸಹಾಯಕ್ಕಾಗಿ ಕರೆದರು; ದಿವಾನರ ಹೆಸರನ್ನು ಹೇಳಿದರು. ಆದರೂ ರೈತರು ಜಗ್ಗಲಿಲ್ಲ. ತುಸು ಹೊತ್ತಿನ ನಂತರ ಶೇಕದಾರ ಬಂದ. ನೋಡಿದ. ಗಾಬರಿಗೊಂಡ. ರೈತರ ಬಳಿ ಹೋಗಿ 'ಏನ್ರಯ್ಯ, ನಮ್ಮ ದಿವಾನರ ಕಾರಿನ ಚಕ್ರ ಹೂತುಕೊಂಡು ಅವರ ಕಡೆಯವರು ಕರೆದರೆ ನೀವು ಸಹಾಯ ಮಾಡಬಾರದೆ?' ಎಂದು ಕೇಳಿದ. 'ಆಗಲಿ, ಸ್ವಾಮಿ ಬರ್‍ತೀವಿ. ಈ ದಿವಾನರು ನಮ್ಮ ಶೇಕದಾರರ ಕಡೆಯವರು ಅಂತ ಮೊದಲೇ ಹೇಳಬಾರದೆ? ನಮಗೇನು ಗೊತ್ತು, ಅವರು ನಿಮ್ಮ ಕಡೆಯವರೆಂದು? ಈಗ ಗೊತ್ತಾಯ್ತು, ನಡೀರಿ, ಬರ್‍ತೀವಿ' ಎಂದರು ಆ ರೈತರು.

2. ಪ್ರವೃತ್ತ ಪು 104 (ಇಂಗ್ಲಿಷ್ ಲೇಖನ)

3. ಅದೇ. ಪು 103

ವಾದದ್ದು. ಈ ಕಾಲೇಜಿನ ಭವ್ಯ ಸೌಧಗಳ ನಿರ್ಮಾಣಕ್ಕಾಗಿ ಭಟ್ಟರು ದೆಹಲಿ-ಬೆಂಗಳೂರು-ಮೈಸೂರು-ಉಡುಪಿಗಳ ನಡುವೆ ತುಳಿದ ಹಾದಿ ತುಂಬ ಸವೆದಿರಬೇಕು. ತಮ್ಮ ಸಹೋದ್ಯೋಗಿಗಳ ಸಹಾಯದಿಂದ ಕಾಲೇಜಿನ ಆತ್ಮ. ಶಕ್ತಿಯನ್ನು ಅನುಪಮವಾಗಿ ಬೆಳೆಸಿ. ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಅಪೂರ್ವವಾದ ಕೊಡುಗೆ ನೀಡಿದ್ದಾರೆ

ಪೈಗಳ ದೂರದೃಷ್ಟಿ, ಬುದ್ಧಿಮತ್ತೆ ಹಾಗೂ ಸಾಹಸ ಗುಣಗಳಿಂದಾಗಿ ಉಡುಪಿ ಜಗತ್ತಿನ ಭೂಪಟದಲ್ಲಿ ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಪ್ರಮುಖ ಸ್ಥಾನವನ್ನು ಪಡೆದಿದೆ; ಹರಿದಾಸ ಭಟ್ಟರ ಕಲಾಪ್ರಜ್ಞೆ. ಹೃದಯ ವೈಶಾಲ್ಯ ಮತ್ತು ಜ್ಞಾನಾನುಭವಗಳ ಪರಿಪಕ್ವತೆಯಿಂದಾಗಿ ಅದು ಲೋಕದ ಸಾಂಸ್ಕೃತಿಕ ನಕ್ಷೆಯಲ್ಲಿ ಅಚ್ಚಳಿಯದ ಸ್ಥಾನವನ್ನು ಹೊಂದಿದೆ. ಉಡುಪಿಗೆ ಬಂದವರು ಮಲ್ಪೆ. ಶ್ರೀಕೃಷ್ಣ ಮಂದಿರ, ಮಣಿಪಾಲ. ಮಹಾತ್ಮ ಗಾಂಧಿ ಕಾಲೇಜುಗಳನ್ನು ನೋಡದೇ ಮರಳುವುದಿಲ್ಲ. ಇಷ್ಟು ಯಾವನ್ನು ಬಿಟ್ಟರೂ ಪೈಗಳನ್ನು ನೋಡಬೇಕು; ಪೈಗಳನ್ನು ಬಿಟ್ಟರೂ ಭಟ್ಟರನ್ನು ಬಿಡುವಂತಿಲ್ಲ. ಭಟ್ಟರನ್ನು ನೋಡಿದರೆ ಈ ಎಲ್ಲವನ್ನೂ ನೋಡಿದಂತಾಗುತ್ತದೆ. ಉಡುಪಿಯು ಸರ್ವದರ್ಶನವಾಗುತ್ತದೆ. ಆದ್ದರಿಂದಲೇ ನನ್ನಂಥವನ ದೃಷ್ಟಿಯಲ್ಲಿ ಉಡುಪಿಗೆ ಮತ್ತೊಂದು ಹೆಸರು ಕಾಶಿ.

ರಾಜಮಹಾರಾಜರು, ಸೇನಾನಿಗಳು, ಪ್ರಧಾನಿಗಳು ಮತ್ತು ಮಂತ್ರಿಗಳು ಮಾತ್ರ ಇತಿಹಾಸ ನಿರ್ಮಾಪಕರೆಂಬುದು ಸಂಕುಚಿತ ದೃಷ್ಟಿಯ ಇತಿಹಾಸಕಾರನ ಅಭಿಪ್ರಾಯ. ಇದು ಸರ್ವಥಾ ತಪ್ಪು. ಒಂದೇ ಒಂದು ನಿದರ್ಶನದ ಮೂಲಕ ಇದು ಖಂಡ ದೃಷ್ಟಿಯ ಫಲವೆಂದು ಸಾಧಿಸಬಹುದು. ಹರಿದು ಹಂಚಿ ಹೋಗಿದ್ದ ಕರ್ನಾಟಕ ಒಂದಾಗಬೇಕೆಂಬುದು ಪಂಪನಿಂದ ಹಿಡಿದು ಕುವೆಂಪು ವರೆಗಿನ ಎಲ್ಲ ಕವಿ ಸಾಹಿತಿಗಳ ಹೆಬ್ಬಯಕೆ. ಆ ಬಯಕೆಯನ್ನು ಕಾರ್ಯಗತಗೊಳಿಸುವಲ್ಲಿ ಕೆಲವು ಕವಿಗಳು ಆಂದೋಲನವೆಬ್ಬಿಸಿದ್ದು ಉಂಟು. ಆ ಕವಿ ಬಯಕೆ ಸಮಷ್ಟಿ ಚೇತನದ ಬಯಕೆಯಾಗಿ ಪರಿಣಮಿಸಿದಾಗ ರಾಜಕಾರಣಿ ಅನಿವಾರ್ಯವಾಗಿ ಅದನ್ನು ಅನುಷ್ಠಾನಕ್ಕೆ ತರಬೇಕಾಗುತ್ತದೆ. ಹನುಮಂತಯ್ಯ, ನಿಜಲಿಂಗಪ್ಪ, ದೇವರಾಜ ಅರಸು ಅವರಿಗೆ ಅದು ಇಷ್ಟವಿರಲಿ, ಇಲ್ಲದಿರಲಿ, ಆ ಸಾಮೂಹಿಕ ಇಚ್ಛೆಯನ್ನವರು ಕಾರ್ಯರೂಪಕ್ಕೆ ತರುವುದು ಅನಿವಾರ್ಯವಾಗಿತ್ತು. ಆದ್ದರಿಂದ ಇತಿಹಾಸದ ಮೂಲ ನಿರ್ಮಾತೃಗಳ ಸಾಲಿನಲ್ಲಿ ಕವಿಗಳಿಗೂ ಪ್ರಮುಖ ಸ್ಥಾನ ದೊರಕಬೇಕೆಂಬುದರಲ್ಲಿ ಲವಲೇಶವೂ ಅನುಮಾನವಿಲ್ಲ.

ಈ ಮಾತು ಕಲಾವಿದ ಶಿಕ್ಷಣತಜ್ಞರಿಗೂ ಸಮಾನವಾಗಿ ಅನ್ವಯಿಸುತ್ತದೆ. ಸುಬ್ಬುಲಕ್ಷ್ಮಿ, ಮಲ್ಲಿಕಾರ್ಜುನ ಮನ್ಸೂರರಂಥ ಕಲಾತಪಸ್ವಿಗಳ ಮಧುರ ಗಾನಕ್ಕೆ ಮನಸೋತು, ತಮ್ಮ ಬದುಕನ್ನು ಸುಧಾರಿಸಿಕೊಂಡವರು ಹಲವು ಮಂದಿ. ಪ್ರತಿಯೊಂದು ರಾಜಸ್ಥಾನದಲ್ಲಿಯೂ ಗೌರವ ಪ್ರತಿಷ್ಠೆಗಳಿಗೆ ಪಾತ್ರರಾಗಿದ್ದ ಗಾಯಕರು ಚಕ್ರವರ್ತಿಗಳ ಮೇಲೆ ಅಪಾರ ಪ್ರಭಾವ ಬೀರಿರಬೇಕೆಂಬುದೂ ನಿಜ. ಈ ಮಾತಿಗೆ ಅಕ್ಬರನೇ ಸಾಕ್ಷಿ. ಶಿಕ್ಷಕರಂತು ಇತಿಹಾಸ ನಿರ್ಮಾಪಕರ ನಿರ್ಮಾಪಕರೆಂಬುದಂತು ಸತ್ಯ. ಸರ್ವಲೋಕವೇದ್ಯ. ಮಹಾಭಾರತದ ಆದ್ಯಂತಗಳಿಗೆ ದ್ರೋಣನೇ ಕಾರಣ. ರಾಜ ಮಹಾರಾಜರಾದರೂ ಗುರುಮುಖೇನ ವಿದ್ಯೆ ಕಲಿಯಬೇಕು, ಆಡಳಿತ ವಿಧಾನವನ್ನರಿಯಬೇಕು. ಐನ್‌ಸ್ಟೀನ್‌ನಂಥ ವಿಜ್ಞಾನಿಯೂ ಅಷ್ಟೇ. ಆದ್ದರಿಂದ ಗುರು ಅಗೋಚರ ಇತಿಹಾಸ ನಿರ್ಮಾಪಕನೆಂಬುದಂತು ಆಕಾಶದ ಸೂರ್ಯನಂತೆ ಸುಸ್ಪಷ್ಟ.

ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನಿಂದ ತೇರ್ಗಡೆ ಹೊಂದಿದ ಸ್ನಾತಕರು ಜಗತ್ತಿನ ಮೂಲೆ ಮೂಲೆಗಳಲ್ಲೆಲ್ಲ ವ್ಯಾಪಿಸಿಕೊಂಡು ತಾವು. ವಿದ್ಯಾರ್ಥಿ ದೆಶೆಯಲ್ಲಿ ಸಂಪಾದಿಸಿದ ವಿದ್ವತ್ತಿನ ಬಂಡವಾಳವನ್ನು ಬಳಸಿಕೊಂಡು ಜೀವನ ಯಾಪನೆ ಮಾಡುತ್ತಿರುವರಲ್ಲದೆ, ಆಯಾಯ ಭಾಗದ ಸರ್ವಾಭ್ಯುದಯವನ್ನು ಸಾಧಿಸಿ, ಅಲ್ಲಿಯ ಸಾಂಸ್ಕೃತಿಕ ಕ್ಷೇತ್ರದ ಮೇಲೆ ತಮ್ಮ ಮುದ್ರೆಯೊತ್ತುತ್ತಿರುವುದು ಲಕ್ಷಿಸಬೇಕಾದ ಸಂಗತಿ. ಕಾಲೇಜಿನ ಉಪಾಧ್ಯಾಯ ವೃಂದ ಹರಿದಾಸ ಭಟ್ಟರ ನೇತೃತ್ವದಲ್ಲಿ ವಿದ್ಯಾರ್ಥಿಗಳಿಗರಿವಾಗದಂತೆಯೇ ಅವರ ಮನಗಳನ್ನರಳಿಸಿ. ಶೀಲವನ್ನು ಕಸಿ ಮಾಡಿ, ವ್ಯಕ್ತಿತ್ವವನ್ನು ರೂಪಿಸಿದ್ದರಿಂದಲೇ ಅದೆಲ್ಲ ಸಾಧ್ಯವಾಯಿತು. ನೆರೆಹೊರೆಯ ಜಿಲ್ಲೆಗಳ ಮೇಲೂ, ಅಷ್ಟೇಕೆ, ದೇಶವಿದೇಶಗಳಲ್ಲಿಯೂ ದಕ್ಷಿಣ ಕನ್ನಡದ ಸಂಸ್ಕೃತಿ ಪ್ರಭಾವ ಬೀರುವಂತೆ, ಮೆರೆಯುವಂತೆ ಹರಿದಾಸ ಭಟ್ಟರು ನಡೆಸಿದ ಪ್ರಯತ್ನ, ಪಟ್ಟ ಶ್ರಮ ಅಸಾಧಾರಣವಾದದ್ದು, ಅಪೂರ್ವವಾದದ್ದು. ಒಂದು ರೀತಿಯಲ್ಲವರು ಅನಭಿಷಿಕ್ತ ಸಾಂಸ್ಕೃತಿಕ ರಾಯಭಾರಿ. ಆದ್ದರಿಂದಲೇ ಅವರು ಇತಿಹಾಸ ನಿರ್ಮಾಪಕರೆಂಬ ಖ್ಯಾತಿಗೆ ಪಾತ್ರರಾಗುತ್ತಾರೆ.

ಸೃಷ್ಟಿಯ ಸಂಗತಿಗಳು ಅನಿರೀಕ್ಷಿತ ಹಾಗೂ ವಿಚಿತ್ರ. ಬಡತನದ ಕೊಂಪೆಯಲ್ಲಿ ರಿಕ್ತತೆಯ ಬಸಿರಿನಲ್ಲಿ ಜನ್ಮಧಾರಣೆ ಮಾಡಿದ ವ್ಯಕ್ತಿಯೊಬ್ಬ ನಿರಂತರ ಸಾಧನಾತಪಸ್ಸುಗಳ ಮೂಲಕ, ಸ್ವಾರ್ಥತ್ಯಾಗ, ಪರಾರ್ಥ ಸಾಧನೆಯ ಮೂಲಕ ಲೌಕಿಕ ಶ್ರೇಯಸ್ಸಿನ ನಿಚ್ಚಣಿಕೆಯನ್ನೇರಿಯೂ ಇತಿಹಾಸದ ಕಣ್ಣಿಗೆ ಬೀಳುವುದಿಲ್ಲ. ಆಗರ್ಭ ಶ್ರೀಮಂತನಾಗಿಯೋ, ಪಂಡಿತ ಪುತ್ರನಾಗಿಯೋ ಲೋಕಕಂಟಕನಾಗಿಯೋ, ಸಮಾಜ ಭಯಂಕರನಾಗಿಯೋ ಹುಟ್ಟಿ ಮೆರೆಯುವ ವ್ಯಕ್ತಿಯೇ ಕೆಲವೊಮ್ಮೆ ಇತಿಹಾಸ ನಿರ್ಮಾಪಕನೆಂದು ಪ್ರಕೀರ್ತಿತನಾಗುತ್ತಾನೆ. ನೆಪೋಲಿಯನ್, ಹಿಟ್ಲರ್ ಮೊದಲಾದವರೆಲ್ಲ ಈ ಎರಡನೆಯ ಗುಂಪಿಗೆ ಸೇರಿದವರು. ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಿದ, ಹೋಮರ್

ವಾಲ್ಮೀಕಿ, ಕಾಳಿದಾಸ ಮೊದಲಾದವರು ಮೊದಲನೆಯ ಗುಂಪಿಗೆ ಸೇರಿದವರು. ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರೆಲ್ಲರನ್ನು ಗುರುತಿಸಬೇಕಾದ್ದು ಇತಿಹಾಸದ ಧರ್ಮ. ಇಲ್ಲವಾದರೆ ಸತ್ಯಕ್ಕೆ ಅಪಚಾರವೆಸಗಿದಂತಾಗುತ್ತದೆ. ನಿಜವಾದ ಇತಿಹಾಸ ನಿರ್ಮಾಪಕರ ಸಾಧನೆ ಸಿದ್ಧಿಗಳು ರಾಜಕೀಯ ಪ್ರಾಬಲ್ಯವುಳ್ಳ ಜನರ ಹೆಸರಿಗೆ ಜಮಾವಣೆಗೊಳ್ಳುತ್ತಿರುವುದು ಇತಿಹಾಸದ ವಿರೋಧಾಭಾಸವಾಗಿದೆ.

— ೨ —

ಕುಶಿಯವರು ಜನ್ಮಧಾರಣೆ ಮಾಡಿದ್ದು 1924ರಲ್ಲಿ, ಶ್ರೀಕೃಷ್ಣನ ಊರಿನಲ್ಲಿ. ಹುಟ್ಟುವಾಗಲೇ ಅವರ ಬಾಯಲ್ಲಿ ಬೆಳ್ಳಿಯ ಚಮಚವಿರಲಿಲ್ಲ. ಅವರು ಅವತರಿಸಿದ್ದು, ಬಡತನದ ಸಂಕೇತದಂತಿದ್ದ ನೆಲ್ಲು ಹುಲ್ಲು ಹಾಡಿನ ಮನೆ. ತಂದೆ ನಿರಕ್ಷರ ಕುಕ್ಷಿಯಲ್ಲದಿದ್ದರೂ, ವಿದ್ಯಾವಂತರಲ್ಲ. ಅವರ ಪೂರ್ವಿಕರು ಕೋಟಾದವರು; ಸಂಪ್ರದಾಯ ಸಂಪನ್ನರಾದ ಶೈವ ಮತಾವಲಂಬಿಗಳು. ಶೈವ ಮತವನ್ನವಲಂಬಿಸುವ ಮುನ್ನ ಅವರೇನಾಗಿದ್ದರೋ ಗೊತ್ತಿಲ್ಲ. ದೀರ್ಘಕಾಲದ ಶೋಧನೆಯಿಂದ ಮಾತ್ರ ಕಂಡು ಹಿಡಿಯಬೇಕಾದ ಸತ್ಯವದು. ಕುಶಿಯವರಿಂದ ಎರಡು ಮೂರು ತಲೆಮಾರು ಹಿಂದಿನ ಪೂರ್ವಿಕರು ಹಸಿವು ತಾಳಲಾರದೆ ಮಾಧ್ವಮಠದಲ್ಲಿ ದೊರೆಯುತ್ತಿದ್ದ ಉಚಿತ ಅನ್ನಕ್ಕಾಗಿ ಕೋಟಾವನ್ನು ತೊರೆದು, ಉಡುಪಿಯಲ್ಲಿ ನೆಲೆಸಿದರು. ಮಾಧ್ವಮತವನ್ನು ಸ್ವೀಕರಿಸದೆ ಮಾಧ್ವ ಮಠಕ್ಕೆ ಪ್ರವೇಶ ದೊರೆಯುತ್ತದೆಯೇ? ಮಾಧ್ವಮತ ಸೇರಿದರೂ ಅವರ ಪೂರ್ವಜರು ವೀರ ವೈಷ್ಣವರಾಗದೆ. ಹರಿಹರಾಭೇದ ತತ್ವವನ್ನು ಮನ್ನಿಸಿ, ಅದರ ಸ್ಮರಣಾರ್ಥವಾಗಿ ತಮ್ಮ ಹೆಸರಿನ ಪ್ರಾರಂಭದಲ್ಲಿ 'ಶಿವ' ಪದವನ್ನು ಮರೆಯದೆ ಉಳಿಸಿಕೊಂಡು ಬಂದಿದ್ದಾರೆ. ಕುಶಿಯವರ ಅಜ್ಜ ಶಿವನಾರಾಯಣ, ಅವರ ತಂದೆ ಶಿವಗೋಪಾಲ, ಅವರು ಶಿವ ಹರಿದಾಸ. ಅವರ ತಂದೆಯೊಡನೆ ಹುಟ್ಟಿದವರು ಶಿವಅನಂತ ಭಟ್ಟರು. ಮತ್ತೊಬ್ಬರು ಬಣ್ಣದ ರಾಮಣ್ಣನೆನಿಸಿಕೊಂಡವರು. ಮೊದಲನೆಯ ಇಬ್ಬರಿಗೂ ಮಠದ ಪಾಕಶಾಲೆಯಲ್ಲಿ ನೌಕರಿ. ಸಂಬಳವೋ ಈಗಿನ ಕಾಲದಲ್ಲಿ, ಬಕ್ಷೀಸು ಅಥವಾ ಭಿಕ್ಷೆ ನೀಡಲು ನಾಚಿಕೆ ಪಟ್ಟುಕೊಳ್ಳಬಹುದಾದ ಎರಡೇ ಎರಡು ರೂಪಾಯಿ.

ಕರ್ನಾಟಕದ, ಏಕೆ ಇಡೀ ಭಾರತೀಯ ಹೋಟಲುದ್ಯಮಕ್ಕೆ ಭದ್ರ ಬುನಾದಿಯನ್ನು ನಿರ್ಮಿಸಿದ್ದು ಉಡುಪಿಯ ಶ್ರೀಕೃಷ್ಣ ಮಠ. ಹೋಟಲುದ್ಯಮದ ಇತಿಹಾಸದಲ್ಲಿ ಅದಕ್ಕೊಂದು ಭದ್ರವಾದ ಸ್ಥಾನವಿದ್ದೇ ಇದೆ. ಮಠದ ಪಾಕಶಾಲೆಯಲ್ಲಿ ತಯಾರಾದ ಪಾಕಶಾಸ್ತ್ರಿಗಳ ಉದ್ಯಮಕ್ಕೆ ಉಡುಪಿ ಸಾಲದಾಯಿತು: ವಿಶಾಲವಾದ ಸಭಾಂಗಣ ಅನಿವಾರ್ಯವಾಯಿತು. ತಮ್ಮ ಕಲಾವೈಭವವನ್ನು, ಉಡುಪಿಯ ಕೀರ್ತಿಯನ್ನು ಮೆರೆಯುವ ಸಲುವಾಗಿ ಧ್ರುವಾದಿ ಶಿಖರಗಳನ್ನೊಳಗೊಂಡಂತೆ ಪ್ರಪಂಚದ ಸಕಲ ಭೂಭಾಗಗಳನ್ನು ಸೌಟಾಯುಧದಿಂದಲೇ ಗೆಲ್ಲುವ ಸಾಹಸಕ್ಕೆ ಮನತೆತ್ತು, ಜಯಶಾಲಿಗಳಾದರು. ಅಂಥವರಲ್ಲಿ ಮೊದಲಿಗರು ಕುಶಿಯವರ ತಂದೆ ಶಿವಗೋಪಾಲ ಭಟ್ಟರು. ತಮ್ಮ ಸಾಹಸೋದ್ಯಮಕ್ಕೆ ಹುಬ್ಬಳ್ಳಿ ಗದಗಗಳು ಪ್ರಶಸ್ತವಾದುವೆಂದು ಅವರಿಗೆ ಮನವರಿಕೆಯಾಗಿ, ತಮ್ಮ ಪ್ರತಿಭೆಯನ್ನು ಅಮುಖವಾಗಿ ಹರಿಸುತ್ತಾರೆ. ಆದರೆ ಅನಾರೋಗ್ಯದ ದೆಸೆಯಿಂದಾಗಿ ಅವರಿಗೆ ಆ ಉದ್ಯಮದಲ್ಲಿ ನಿರೀಕ್ಷಿತ ಫಲ ಲಭಿಸದಿದ್ದರೂ ಅದು ಅವರ ತಮ್ಮಂದಿರಿಗೆ ಮತ್ತು ಮುಂದಿನ ಪೀಳಿಗೆಗೆ ಬಂಡವಾಳವಾಗುತ್ತದೆ.

ವೇದಾಧ್ಯಯನ, ವಿದ್ಯಾರ್ಜನೆ ಬ್ರಾಹ್ಮಣರ ಮಕ್ಕಳಿಗೆ ಅನಿವಾರ್ಯವಾಗಿದ್ದ ಕಾಲವದು. ಶಾಲೆಯ ವಯಸ್ಸು ಪ್ರಾಪ್ತವಾದ ಕೂಡಲೇ ಅವರನ್ನು ಕಡಿಯಾಳಿ ಶಾಲೆಗೆ ಸೇರಿಸುವ ಏರ್ಪಾಡು ನಡೆಯುತ್ತದೆ. ಹಕ್ಕಿಯಂತೆ ಸ್ವತಂತ್ರವಾಗಿ ಆಡಿಕೊಂಡಿದ್ದವರಿಗೆ ಶಾಲೆ ಮೊದಮೊದಲು ಸೆರೆಮನೆಯಾಗುತ್ತದೆ. ಇದು ಎಲ್ಲ ಮಕ್ಕಳ ಜೀವನದಲ್ಲಿ ಕಾಣಬಹುದಾದ ಸಾಮಾನ್ಯ ಲಕ್ಷಣ. ಮಕ್ಕಳ ಮನಸ್ಸನ್ನರಿಯಬಲ್ಲ, ಮಕ್ಕಳ ಸಮಸ್ಯೆಗಳನ್ನು ಗುರುತಿಸಬಲ್ಲ, ಮಕ್ಕಳೊಡನೆ ಮಗುವಾಗಿ ವ್ಯವಹರಿಸಬಲ್ಲ, ಕಲ್ಪನಾ ಪ್ರತಿಭೆಯುಳ್ಳ ಸುಸಮರ್ಥ ಅಧ್ಯಾಪಕನಿಂದ ಮಾತ್ರ ಶಾಲೆ ಮಕ್ಕಳಿಗೆ ಕಲ್ಪತರುವಾದೀತು, ಬೋಧಿವೃಕ್ಷವಾದೀತು. ಆದರೂ ಹಿರಿಯರ ಬಲಾತ್ಕಾರದಿಂದ ಪ್ರಾರಂಭವಾದ ರೂಢಿ ಕಾಲಕ್ರಮೇಣ ದೃಢವಾದ ಅಭ್ಯಾಸವಾಗುತ್ತದೆ.

ಈ ನಡುವೆ ತನ್ನನ್ನು ಮೊದಮೊದಲು ಶಾಲೆಗೆ ಕರೆದೊಯ್ಯುತ್ತಿದ್ದ ಅಣ್ಣ ಉದರ ಬೇನೆಯಿಂದ ನರಳಿ, ನರಳಿ ಸತ್ತಾಗ, ಇತರರ ಗೋಳಿಗೆ ಉತ್ತರವೆಂಬಂತೆ ಎಳೆಯ ಹರಿದಾಸ ಅತ್ತದ್ದುಂಟು. ಅಣ್ಣ ಹೋದ ಮೇಲೆ ಉಳಿದವರು ಇಬ್ಬರು ಅಕ್ಕತಂಗಿಯರು. ಪುತ್ರಶೋಕದಿಂದಾಗಿ ತಂದೆಯ ಆರೋಗ್ಯ ತೀರ ಹದಗೆಡುತ್ತದೆ. ಅದೇ ತಾನೆ ಕುದುರುತ್ತಿದ್ದ ಆರ್ಥಿಕ ಸ್ಥಿತಿ ಕುಸಿಯುತ್ತದೆ. ಹುಬ್ಬಳ್ಳಿಯ ಹೋಟಲನ್ನು ಮುಚ್ಚಬೇಕಾಗುತ್ತದೆ. ಗದುಗಿನಲ್ಲಿ ಹೋಟಲು ನಡೆಸುತ್ತಿದ್ದ ಚಿಕ್ಕಪ್ಪನೇ ಎರಡು ಸಂಸಾರಗಳ ಹೊರೆಯನ್ನು ಹೊರಬೇಕಾಗುತ್ತದೆ. ಅವರಿಗೆ ಮಕ್ಕಳಿಲ್ಲದ್ದರಿಂದ ಅಣ್ಣನ ಸಂಸಾರದ ಸುಖದುಃಖಗಳಲ್ಲಿ ಭಾಗಿಯಾಗಲು ಸಾಧ್ಯವಾಗುತ್ತದೆ. ಅದೆಲ್ಲ ವಿಧಿವಿಲಾಸವೆನ್ನದೆ ಬೇರೆ ದಾರಿಯಿಲ್ಲ. ಶ್ರೀಮಂತರಾಗಿದ್ದೂ ಬಡತನದ ದವಡೆಯಲ್ಲಿರುವ ಅಣ್ಣಂದಿರ ಕಷ್ಟಗೆ

ನಿರ್ಲಕ್ಷ್ಯದಿಂದಿರುವ ತಮ್ಮಯ್ಯರು ವಿರಳವೇನಲ್ಲ. ಆದರೆ ಕೊನೆಯತನಕ ಅಣ್ಣನ ಮಗನ ವ್ಯಾಸಂಗಕ್ಕೆ ನೆರವಾದ, ಅವನ ಅಭ್ಯುದಯ ಸಾಧನೆಗಾಗಿ ಅಪಾರ ಪ್ರಮಾಣದಲ್ಲಿ ತ್ಯಾಗ ಮಾಡಿದ ತಮ್ಮಂದಿರು, ಅರ್ಥಾತ್ ದಾಯಾದಿಗಳೇ ಅಪರೂಪ.

ಕುಶಿಯವರು ಶಾಲಾಜೀವನಕ್ಕೆ ಸಂಪೂರ್ಣವಾಗಿ ಒಗ್ಗಿಕೊಂಡನಂತರ ಅವರ ಜ್ಞಾನದಾಹ ದಿನೇದಿನೇ ಅಧಿಕವಾಗುತ್ತದೆ. ಪಠ್ಯಪುಸ್ತಕಗಳು ಅವರ ಜ್ಞಾನದಾಹವನ್ನು ತಣಿಸುವಂತಿರಲಿಲ್ಲ. ಮಾನವನ ಆಶೆ-ಆಕಾಂಕ್ಷೆ-ಇಚ್ಛೆಗಳು ಪ್ರಾಮಾಣಿಕವಾಗಿದ್ದು, ಪ್ರಬಲವಾಗಿದ್ದರೆ, ಜತೆಗೆ ಶ್ರದ್ಧೆಯಿದ್ದರೆ ಅವುಗಳ ಪೂರ್ತಿಕೆಗೆ ನಾನಾ ಕಡೆಗಳಿಂದ ಹೇಗೋ ಸಹಾಯವೊದಗುವುದರಲ್ಲಿ ಆ ಇಚ್ಛೆಯೇ ಗುರಿಯಾಗಿ, ಗುರಿಯಲ್ಲಿಯೇ ಸಾಧನಾಮಾರ್ಗವಿರುತ್ತದೆಂಬುದಕ್ಕೆ ಹಲವು ಬದುಕುಗಳಿಂದ ಸಾಕ್ಷಿ ದೊರಕುತ್ತದೆ. ಅವರ ಹತ್ತಿರದ ನೆಂಟರೊಬ್ಬರು ಆಗಾಗ್ಗೆ ಹುಬ್ಬಳ್ಳಿಯಿಂದ ಪುಸ್ತಕಗಳನ್ನು ತರುತ್ತಿದ್ದರು. ಅವುಗಳಲ್ಲಿ ಶೇಷಾಚಲ ಗ್ರಂಥಮಾಲೆಯ ಪುಸ್ತಕಗಳೇ ಹೆಚ್ಚು. ಆನಂದಮಠ, ಮಾಧವ ಕರುಣಾವಿಲಾಸ, ವಿಷವೃಕ್ಷ ಮೊದಲಾದ ವೆಂಕಟಾಚಾರ್ ಮತ್ತು ಗಳಗನಾಥರ ಕಾದಂಬರಿಗಳನ್ನು ಭಟ್ಟರು ಓದಿದ್ದೇ ಆಗ. ಆಗವರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಎನ್ನುವುದನ್ನು ಮರೆಯುವಂತಿಲ್ಲ. ಈ ಹೊತ್ತಿಗೂ ಹಳ್ಳಿಯ ಮಕ್ಕಳಿಗೆ ಅಂಥ ಆಸಕ್ತಿಯಾಗಲಿ, ಅವಕಾಶಾನುಕೂಲಗಳಾಗಲಿ ಇಲ್ಲವೆಂಬುದು ಗಮನಿಸಬೇಕಾದ ವಿಷಯ.

ತಾವು ಚಿಕ್ಕಂದಿನಲ್ಲಿ ಹಟಮಾರಿಯಾಗಿದ್ದುದಾಗಿ ಹರಿದಾಸ ಭಟ್ಟರೇ ಹೇಳಿಕೊಳ್ಳುತ್ತಾರೆ. ತಮ್ಮ ಹಠಮಾರಿತನವನ್ನು ಪಳಗಿಸಿ, ಜ್ಞಾನಾಸಕ್ತಿಯನ್ನು ಅರಳಿಸಿದ ಜಾಣ ಉಪಾಧ್ಯಾಯ ಲಿಂಗಪ್ಪ ಶೆಟ್ಟರನ್ನವರು ಜ್ಞಾಪಿಸಿಕೊಳ್ಳುತ್ತಾರೆ. ಆ ಹಟಮಾರಿತನ ಅಂದಿಗೇ ಮುಕ್ತಾಯವಾಗಲಿಲ್ಲವೆಂದೂ, ಇನ್ನೂ ಅದರ ಸೋಂಕು ಆಗಾಗ್ಗೆ ತಲೆಯೆತ್ತುತ್ತದೆಂದೂ ಅವರ ಕೈಹಿಡಿದವರೆ ಹೇಳುತ್ತಾರೆ. ಹಟ ಸತ್ಕಾರ್ಯನಿರತವಾದಾಗ ಅತ್ಯುತ್ತಮ ಗುಣವಾಗುತ್ತದೆ. ಋಷಿಗಳ ತಪೋಜಯಕ್ಕೆ ಅವರ ಹಟವೇ ಕಾರಣ. ಗಾಂಧೀಜಿಯ ಧ್ಯೇಯಸಾಧನೆಯ ಯಶಸ್ಸಿಗೆ ಅವರ ಹಟ ಕಾರಣವೆಂಬುದು ಸರ್ವವೇದ್ಯ. 'ಛಲವಿಲ್ಲದವರ ಮೆಚ್ಚ ನಮ್ಮ ಕೂಡಲ ಸಂಗಮದೇವ' ಎಂದು ಬಸವಣ್ಣನವರೇ ಸಾರಿ ಸಾರಿ ಹೇಳುತ್ತಾರೆ. ಪರೀಕ್ಷೆಯಲ್ಲಿ ಜಯ ಸಂಪಾದಿಸುವ ಹಟ ವಿದ್ಯಾರ್ಥಿಗೆ ಅವಶ್ಯಕ; ಉದ್ಯಮದಲ್ಲಿ ಯಶಸ್ಸು ಸಂಪಾದಿಸುವ ಹಟ ಉದ್ಯಮಿಗಿರಬೇಕು; ಮಹಾಕಾವ್ಯವನ್ನು ರಚಿಸುವ ಹಟ ಮಹಾಕವಿಗಿರಬೇಕು; ಜಾನಪದ ಮೇಳಗಳನ್ನು ದೇಶವಿದೇಶಗಳಲ್ಲಿ ಮೆರೆಸುವ ಹಟ ಜಾನಪದ ಪ್ರಿಯನಿಗಿರಬೇಕು; ಹಟದ ಒಂದು ಮುಖ ಸಾಧನೆ; ಮತ್ತೊಂದು ಮುಖ ಸಿದ್ಧಿ. ಹರಿದಾಸ ಭಟ್ಟರ ಯಶಸ್ಸಿನ ಗುಟ್ಟೇ ಇದು.

ಕಡಿಯಾಳಿ ಶಾಲೆಯ ಉಪಾಧ್ಯಾಯರ ಪೈಕಿ ಭಟ್ಟರ ಆರಾಧನೆಗೆ ಪಾತ್ರರಾಗಿರುವ ಮತ್ತೊಬ್ಬರೆಂದರೆ ರಾಮಚಂದ್ರ ಉಪಾಧ್ಯಾಯರು. ಭಟ್ಟರ ಸಾಹಿತ್ಯ ಜೀವನಕ್ಕೆ ಪ್ರಪ್ರಥಮವಾಗಿ ಪ್ರೇರಣೆ ದೊರೆತದ್ದೇ ಅವರಿಂದ. ಪ್ರಾಥಮಿಕ ಶಾಲೆಯ ಹಂತದಲ್ಲಿಯೇ ಗದುಗಿನ ಭಾರತ, ಜೈಮಿನಿ ಭಾರತ ಮತ್ತು ಶ್ರೀ ರಾಮಾಶ್ವಮೇಧ ಕೃತಿಗಳು ಅವರಿಗೆ ಪರಿಚಯವಾದದ್ದು ಆ ಪೂರ್ವಪುಣ್ಯದ ಫಲ. ರಜಾದಿನಗಳಲ್ಲಿ ಉಪಾಧ್ಯರು ಅವರಿಗೆ ಸಾಹಿತ್ಯದ ಔತಣವನ್ನು ಉಣಬಡಿಸುತ್ತಿದ್ದರು. ಮುಂದೆ ಶಾಲೆಯ ಓದು ಮುಗಿದು, ಆರ್ಥಿಕ ಕಾರಣಗಳಿಂದಾಗಿ ಕಾಲೇಜಿಗೆ ಹೋಗಲು ಸಾಧ್ಯವಾಗದಿದ್ದಾಗ, ಅವರ ಸಾಹಿತ್ಯ ಪ್ರಜ್ಞೆ ವಿಕಾಸಗೊಂಡು, ದಾಂಗುಡಿಯಿಟ್ಟದ್ದು ಕಡೆಂಗೋಡ್ಲು ಶಂಕರಭಟ್ಟ, ಮುಳಿಯ ತಿಮ್ಮಪ್ಪಯ್ಯ, ಶಿವರಾಮ ಕಾರಂತರ ಪ್ರವಚನ ರೂಪದ ಪ್ರೇರಣೆಯಿಂದ. ಭಟ್ಟರು ಕಾವ್ಯ ಮತ್ತು ಜಾಣ ಪರೀಕ್ಷೆಗಳಿಗೆ ಕುಳಿತಾಗ ಆ ಸಾಹಿತಿ ದಿಗ್ಗಜಗಳ ಚರಣತಳದಲ್ಲಿ ಕುಳಿತು, ಸಾಹಿತ್ಯವನ್ನು ವ್ಯಾಸಂಗಿಸುವ ಸುವರ್ಣಾವಕಾಶ ದೊರೆಯುತ್ತದೆ. ಸುಮಾರು ಅದೇ ಸಮಯದಲ್ಲವರು ಹಿಂದಿಯಲ್ಲಿ ಸಹ ಪ್ರಾವೀಣ್ಯ ಸಂಪಾದಿಸಲು ಪ್ರಯತ್ನಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಎರಡು ಪ್ರಮುಖ ಸಾಂಸ್ಕೃತಿಕ ಶಿಖರಗಳ ನೆಲೆಗಟ್ಟುಗಳೆಂದರೆ ಯಕ್ಷಗಾನ ಮತ್ತು ಭೂತಾರಾಧನೆ. ಅವೇ ಅಲ್ಲಿಯ ಸಾಂಸ್ಕೃತಿಕ ಜೀವನದ ಚೈತನ್ಯಗಳು. ಇವೇ ಅಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿನ ಹೃದಯಗಳಾದಂತೆ, ಶ್ವಾಸಕೋಶಗಳಾದಂತೆ, ಜೀವನಾಡಿಗಳಾದಂತೆ ತೋರುತ್ತದೆ; ಹುಟ್ಟಿದಂದಿನಿಂದ ಸಾಯುವ ತನಕ ಅವು ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಅವಿಭಾಜ್ಯಾಂಗವಾಗುತ್ತವೆ. ನಿರಕ್ಷರಕುಕ್ಷಿಯು ಯಕ್ಷಗಾನದಲ್ಲಿ ಪ್ರವೀಣನಾಗಿರುತ್ತಾನೆ. ಅಂಥವನನ್ನು ಅವಿದ್ಯಾವಂತ ಎಂದು ಕರೆಯುವುದೇ ಉಗ್ರತನವಾಗುತ್ತದೆ. ನಾಟಕೀಯತೆ ಮತ್ತು ಸಾಹಿತ್ಯ ಪ್ರೌಢಿಮೆಗಳು ಅವರ ಜೀವನದ ಸೌಂದರ್ಯದ ಪ್ರಮುಖ ಲಕ್ಷಣಗಳು. ಯಕ್ಷಗಾನ ಅಲ್ಲಿಯ ಸಚರಾಚರ ವಸ್ತುಗಳ ಮತ್ತು ಪಂಚಭೂತಗಳ ಒಂದು ಭಾಗವಾದ್ದರಿಂದ ಅಲ್ಲಿಯ ಜನರ ಜೀವನೋಲ್ಲಾಸಕ್ಕೆ ವಿನಾಶವಿಲ್ಲ. ಯಕ್ಷಗಾನ ಪ್ರತ್ಯಕ್ಷ, ಪರೋಕ್ಷ ಹಾಗೂ ಕರತಲ ವಿಶ್ವವಿದ್ಯಾಲಯವಾಗಿದೆ. ಭಟ್ಟರಾಗಲಿ, ಕಾರಂತರಾಗಲಿ, ಹೆಗ್ಗಡೆಗಳಾಗಲಿ, ಆಳ್ವರಾಗಲಿ, ಪೈಗಳಾಗಲಿ ಯಾರೂ ಅದರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದೇ ತಾನೇ ಹುಟ್ಟಿದ ಕರು ಮೇಲೆದ್ದು ಕುಣಿದು ಕುಪ್ಪಳಿಸುವಂತೆ ಪ್ರತಿಯೊಂದು ಮಗುವೂ ಯಕ್ಷಗಾನದ ಪಾತ್ರಧಾರಿಗಳನ್ನನುಸರಿಸಿ, ಕುಣಿಯುತ್ತಾನೆ, ಹಾಡುತ್ತಾನೆ; ಭ್ರೂಣಸ್ಥಿತಿಯಲ್ಲಿದ್ದಾಗಲೇ

ಯಕ್ಷಗಾನದ ಸತ್ವ ಅವನ ನಾಡಿನಾಡಿಗಳಲ್ಲಿ ಸಂಚರಿಸುತ್ತದೆ. ಮನುಷ್ಯ ವಾತಾವರಣದ ಶಿಶು ಎಂಬುದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೂ ಯಕ್ಷಗಾನಕ್ಕೂ ಇರುವ ಹೊಕ್ಕುಳಬಳ್ಳಿ ಸಂಬಂಧವೇ ಸಾಕ್ಷಿಯಾಗಿದೆ.

ಹರಿದಾಸ ಭಟ್ಟರ ಹೃದಯದಲ್ಲಿ ಹುದುಗಿದ್ದ ನಾಟಕ ಪ್ರೇಮವನ್ನು ಕೆರಳಿಸಿ, ಅದು ವೇದಿಕೆಯ ಮೇಲೆ ಪ್ರವರ್ಶಿತವಾಗುವಂತೆ ಪ್ರೇರಣೆ ನೀಡಿದವರೇ ರಾಮಚಂದ್ರ ಉಪಾಧ್ಯರು. ಬಾಯಿಪಾಠದಲ್ಲಿ ಹಾಗೂ ಧಾರಣ ಶಕ್ತಿಯಲ್ಲಿ ಭಟ್ಟರು ಗಟ್ಟಿಗರು ಎಂಬುದನ್ನು ಉಪಾಧ್ಯರು ಬಲ್ಲರು. ಶಾಲೆಯ ವತಿಯಿಂದ ನಡೆಸುವ ನಾಟಕಗಳಲ್ಲಿ ಭಟ್ಟರದೇ ಪ್ರಧಾನ ಪಾತ್ರ. ಕಂಪೆನಿ ನಾಟಕಗಳಲ್ಲಿಯೂ ಅವರು ನಾಯಕಪಾತ್ರ ವಹಿಸಿ, ಪ್ರೇಕ್ಷಕರ ಪ್ರಶಂಸೆಯನ್ನು ಗಳಿಸಿಕೊಂಡದ್ದುಂಟು. ಶಿಕ್ಷಣದ ಸಾಧನೋಪಕರಣಗಳು ಪುಸ್ತಕಗಳಲ್ಲ. ಕಪ್ಪು ಹಲಗೆಯಲ್ಲ. ಕಟ್ಟಡಗಳೂ ಅಲ್ಲ. ಗುರುಶಿಷ್ಯರ ನಡುವಣ ಸ್ನೇಹ ಸಂಬಂಧವೆಂಬುದು ಭಟ್ಟರು ಹೋದೆಡೆಯಲ್ಲೆಲ್ಲ ವ್ಯಕ್ತವಾಗುತ್ತದೆ. ಕಡಿಯಾಳಿ ಶಾಲೆಯಲ್ಲಿ ಚಿಗುರೊಡೆದ ನಾಟಕ ಪ್ರತಿಭೆ ಅವರ ಬದುಕಿನ ಒಂದು ಭಾಗವಾಗಿದ್ದು, ತಾವು ಮಾಸ್ತರಿಕೆ ಮಾಡಿದ ಶಾಲೆಯಲ್ಲಿ ಮಾತ್ರವಲ್ಲ, ಇಡೀ ಜೀವನದ ಯಶಸ್ಸಿಗೆ ಚೈತನ್ಯಶಕ್ತಿಯಾಗುತ್ತದೆ. ದೇಶವಿದೇಶಗಳಲ್ಲೆಲ್ಲ ಅವರನ್ನು ಮೆರೆಸಿರುವ ಶಕ್ತಿ ನಾಟಕ-ಜಾನಪದ ಪ್ರತಿಭೆಯೇ ಹೊರತು, ಅವರ ಅರ್ಥಶಾಸ್ತ್ರದ ಪಾಂಡಿತ್ಯವಲ್ಲ.

ವಿಚಾರವಂತರು ಒಪ್ಪಲಿ, ಬಿಡಲಿ, ಆಕಸ್ಮಿಕತಾ ಅಥವಾ ಅವಶ್ಯಕತಾನಿಯಮವೊಂದು ಮನುಷ್ಯನ ಜೀವನವನ್ನು ಗಳಿಗೆಗಳಿಗೆಗೂ ರೂಪಿಸುತ್ತದೆ. ಮನುಷ್ಯ ಸ್ವತಂತ್ರನಾಗಿ ಹುಟ್ಟುತ್ತಾನೆಂದೂ, ಅವನಿಗೆ ಇಚ್ಛಾ ಸ್ವಾತಂತ್ರ್ಯವಿದೆಯೆಂದೂ ತತ್ವಜ್ಞಾನಿಗಳು ಸಾಮಾನ್ಯವಾಗಿ ಹೇಳುವುದುಂಟು. ಆ ಸ್ವಾತಂತ್ರ್ಯಕ್ಕೆ ಇತಿಮಿತಿಗಳುಂಟೆಂಬುದನ್ನು, ಇಚ್ಛಾ ಸ್ವಾತಂತ್ರ್ಯ ಪರಿಸರಬದ್ಧವೆಂಬುದನ್ನು ಮರೆಯಲಾಗದು. ಆಕಸ್ಮಿಕತಾ ನಿಯಮ ಅನುಲ್ಲಂಘನೀಯ. ಅದನ್ನುಲ್ಲಂಘಿಸಿದ ಇಚ್ಛಾ ಸ್ವಾತಂತ್ರ್ಯಕ್ಕೆ ಯಶಸ್ಸು ದೊರೆಯಲಾರದು. ಮೂರುಗಂಟೆಯ ಅವಧಿಯೊಳಗಾಗಿ ಬೆಂಗಳೂರು ತಲುಪುತ್ತೇನೆಂದು ಹೊರಟವನು ದಾರಿಯಲ್ಲಿ ಅಪಘಾತಕ್ಕೀಡಾಗಿ ನಿಮ್ಹಾನ್ಸ್ ಆಸ್ಪತ್ರೆ ಸೇರುತ್ತಾನೆ. ಇಲ್ಲಿ ಮನುಷ್ಯೇಚ್ಛೆಗೆ ಅಪಜಯವೂ, ಆಕಸ್ಮಿಕತಾ ನಿಯಮಕ್ಕೆ ಪೂರ್ಣ ಜಯವೂ ಲಭಿಸುತ್ತದೆ. ಇದರಿಂದ ಇಚ್ಛಾಸ್ವಾತಂತ್ರ್ಯಕ್ಕೆ ಬೆಲೆಯಿಲ್ಲವೆಂದಲ್ಲ. ಬೆಲೆಯಿದ್ದೀತು ಇದೆ: ಮಾತ್ರವಲ್ಲ. ಅದಕ್ಕೆ ಆದ್ಯತೆಯೂ ಸಲ್ಲಬೇಕು. ಇಚ್ಛಾ ಸ್ವಾತಂತ್ರ್ಯದಿಂದ ಮಾತ್ರ ಜಗತ್ತಿನ ಚಲನೆ ಸಾಧ್ಯ. ಆದರೆ ಆ ಚಲನೆಗೆ ಆಕಸ್ಮಿಕತಾ ನಿಯಮವೂ ಸಹಾಯಕಾರಿ ಅಥವಾ ಅಪಾಯಕಾರಿ ಎಂಬುದನ್ನು ಮರೆಯುವಂತಿಲ್ಲ.

ಮಗನಿಗೆ ಸಂಸ್ಕೃತಾಭ್ಯಾಸವನ್ನು ಮಾಡಿಸಿ ಸನಾತನ ಸಂಪ್ರದಾಯಕ್ಕೋ ಉಡುಪಿಯ ಮಠಕ್ಕೋ ಕಟ್ಟಿ ಹಾಕಬೇಕೆಂಬುದು ತಂದೆ ಶಿವಗೋಪಾಲ ಭಟ್ಟರ ಅಪೇಕ್ಷೆ. ಪಾಶ್ಚಾತ್ಯ ಸಂಪ್ರದಾಯದ ಶಿಕ್ಷಣವನ್ನು ಕಲಿತ ಮಗ ಊರಲ್ಲಿ ನಿಲ್ಲಲಾರನೆಂಬುದೊಂದು ಕಾರಣವಾದರೆ, ಅದರ ಕಲಿಕೆಗೆ ದುಡ್ಡು ಒದಗಿಸುವುದು ಕಷ್ಟವೆಂಬುದು ಮತ್ತೊಂದು ಕಾರಣ. ಆದರೂ ಹರಿದಾಸ ಭಟ್ಟರು 1937ರಲ್ಲಿ ಬೋರ್ಡ್ ಹೈಸ್ಕೂಲು ಸೇರುತ್ತಾರೆ. ಅವರ ಓದುವ ಗೀಳು ದಿನೇದಿನೇ ಹೆಚ್ಚುತ್ತದೆ. ಸರ್ವಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದಾಗ, ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸುವಂತೆ ಆ ಶಾಲೆಯ ಪ್ರತಿಯೊಬ್ಬ ಉಪಾಧ್ಯಾಯನೂ ಅವರಿಗೆ ಸಲಹೆ ನೀಡುತ್ತಾನೆ. ಆದರೆ ತಂದೆಯೊಡ್ಡಿದ ವಿಘ್ನದಿಂದಾಗಿ ಭಟ್ಟರು ಕಾಲೇಜಿನ ಯೋಚನೆಯನ್ನು ಬಿಡಬೇಕಾಗುತ್ತದೆ. ತಮ್ಮ ಸಂಸಾರದ ನಿರ್ವಹಣೆಗೂ ತಮ್ಮನ ಕಡೆಗೆ ಕೈಚಾಚಬೇಕಾಗಿದ್ದ ಕಾಲದಲ್ಲಿ, ಅವರ ಮೇಲೆ ಹೆಚ್ಚು ಭಾರ ಬೀಳಬಾರದೆಂಬುದೇ ಅವರ ಉದ್ದೇಶವಾಗಿತ್ತು. ಉಪಾಧ್ಯಾಯ ತರಬೇತಿ ಶಾಲೆ ಸೇರಿ, ಅಲ್ಲಿಯ ಪಾಠಪ್ರವಚನಗಳಲ್ಲಿ ಗಮನವನ್ನು ಕೇಂದ್ರೀಕರಿಸಿರುವಾಗಲೂ, ಕಾಲೇಜಿನಲ್ಲಿ ವ್ಯಾಸಂಗವನ್ನು ಮುಂದುವರಿಸಲಿಲ್ಲವಲ್ಲ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ಆದರೂ ಅವರು ತರಬೇತಿ ಪರೀಕ್ಷೆಯಲ್ಲಿ ಅಂದಿನ ಮದ್ರಾಸ್ ಪ್ರಾಂತ್ಯದಲ್ಲೆಲ್ಲ ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದರು.

1942ನೆಯ ಜೂನ್ ತಿಂಗಳಲ್ಲಿ ಮಗ ಶಿಕ್ಷಕನಾಗಿ ಕಡಿಯಾಳಿ ಪ್ರಾಥಮಿಕ ಶಾಲೆಯನ್ನು ಸೇರಿದಾಗ ಅವರ ತಂದೆಯ ಸಂತೋಷಕ್ಕೆ ಪಾರವಿಲ್ಲ. ಇದ್ದೊಬ್ಬ ಮಗ ಸೌಟು ಹಿಡಿಯದೆ, ಬುದ್ಧಿವಂತನಾಗಿ, ವಂಶದ ಗೌರವವನ್ನು ಕಾಪಾಡುತ್ತಾನೆಂದು ತಿಳಿದು ಅವರು ಹಿರಿಹಿರಿ ಹಿಗ್ಗಿದರು. ಅವರು ಉತ್ತಮ ಶಿಕ್ಷಕರಾಗಿ, ಶಾಲೆಯ ಶ್ರೇಯೋಭಿವೃದ್ಧಿಗಾಗಿ ತಮ್ಮನ್ನು ತಾವೇ ನಿವೇದಿಸಿಕೊಂಡವರಾಗಿ, ಶಾಲೆಯಲ್ಲಿಯೇ ವಿದ್ಯಾರ್ಥಿಗಳ ನಡುವೆ ತಮ್ಮ ಬಹು ವೇಳೆಯನ್ನು ಕಳೆಯುತ್ತಿದ್ದವರಾಗಿ, ಭಟ್ಟರು ವಿದ್ಯಾರ್ಥಿ ವೃಂದದಲ್ಲಿ ಮಾತ್ರವಲ್ಲ, ಸಹೋದ್ಯೋಗಿಗಳ ಸಮುದಾಯದಲ್ಲಿಯೂ ಬಹು ಪ್ರಿಯರಾದರು. ಎರಡು ವರ್ಷಗಳ ನಂತರ ಅವರು ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ನೇಮಕಗೊಂಡರು. ಕನ್ನಡವಲ್ಲದೆ, ಇಂಗ್ಲಿಷ್ ಮತ್ತು ವಿಜ್ಞಾನ ಪಾಠಗಳನ್ನು ಸಹ ಅವರಲ್ಲಿ ಕಲಿಸುತ್ತಿದ್ದರು. ಅಜನ್ಮ ಬೋಧಕರೆಂಬ ಕೀರ್ತಿ ಅವರಿಗಲ್ಲಿ ಲಭಿಸುತ್ತದೆ. ಯಾವ ವಿಷಯವನ್ನಾದರೂ ಸರಿಯೆ ವಿದ್ಯಾರ್ಥಿಗಳಿಗೆ ಮನವ್ರುಗುವಂತೆ ಬೋಧಿಸುತ್ತಿದ್ದರು. ಅಲ್ಲಿ ಅವರ ಮೇಲೆ ವಿಶೇಷ ಪ್ರಭಾವ ಬೀರಿದ ಹಿರಿಯ ಸಹೋದ್ಯೋಗಿಯೆಂದರೆ ಪಂಡಿತ ವೆಂಕಟರಾಮಾಚಾರ್ಯರು. ರಸರತ್ನಾಕರ ಮತ್ತು ಪಂಪ ಭಾರತಗಳನ್ನು ಭಟ್ಟರು ಅವರಿಂದ ಹೇಳಿಸಿಕೊಂಡು ಪ್ರಾವೀಣ್ಯ ಸಂಪಾದಿಸುತ್ತಾರೆ. ಮದ್ರಾಸ್ ವಿಶ್ವವಿದ್ಯಾಲಯದ ವಿದ್ವಾನ್

ಪರೀಕ್ಷೆಯಲ್ಲಿ ದಾಖಲೆ ಅಂಕಗಳನ್ನು ಪಡೆದು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿದಾಗ ಅವರು ವೆಂಕಟರಾಮಾಚಾರ್ಯರನ್ನು ಗೌರವಭಾವದಿಂದ ನೆನೆಸಿಕೊಳ್ಳುತ್ತಾರೆ. ಮುದ್ರಣ ಕಲಿಸಿದ ಶಾಲೆಯೆಂಬ ಕತದಿಂದ ಕ್ರಿಶ್ಚಿಯನ್ ಶಾಲೆಯೆಂದರೆ ಅವರಿಗೆ ಹೆಮ್ಮೆ.

ದೃಢವೂ ಪ್ರಾಮಾಣಿಕವೂ ಆದ ಇಚ್ಛೆಯ ಮುಂದೆ ವಿಘ್ನಕೋಟಿಗಳು ಹುಸಿಯಾಗುತ್ತವೆ. ಖಾಸಗಿಯಾಗಿಯೇ ಓದಿಕೊಂಡು, ಇಂಟರ್‌ಮೀಡಿಯಟ್ ಪರೀಕ್ಷೆಗಳನ್ನು ಕಟ್ಟಿ, ಭಟ್ಟರು ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದಾಗ, ಕಾಲೇಜು ವ್ಯಾಸಂಗ ಮುಂದುವರಿಸುವಂತೆ ಅವರ ಹಿತಚಿಂತಕರು ಒತ್ತಾಯ ಪಡಿಸುತ್ತಾರೆ. ಸದಿಚ್ಛೆಗೆದುರಾದ ವಿಘ್ನಗಳೇ ಅನುಕೂಲ ಸಾಧನಗಳಾಗಿ ಪರಿಣಮಿಸುತ್ತವೆ. ತಮ್ಮಣ್ಣನ ಮಗ ಸಾಮಾನ್ಯ ಶಕ್ತಿಯಲ್ಲ. ವಂಶದ ಕೀರ್ತಿಲತೆಯನ್ನು ಹಬ್ಬಿಸಬಲ್ಲ ಧೀಮಂತ ವ್ಯಕ್ತಿಯೆಂಬ ಭರವಸೆ ಮೂಡಿದ ಕೂಡಲೇ ನಿರಸೂಯಶೀಲರಾದ ಚಿಕ್ಕಪ್ಪ ಭಟ್ಟರ ಬೆನ್ನು ತಟ್ಟಿ, ಅವರ ಓದಿಗೆ ತಾನು ಧನಸಹಾಯ ನೀಡುವುದಾಗಿ ಆಶ್ವಾಸನೆ ನೀಡುತ್ತಾರೆ. ಭಟ್ಟರ ಬದುಕಿನ ತಿರುವಿಗೆ ಆ ಆಶ್ವಾಸನೆಯೊಂದು ಪ್ರಬಲ ಪರಿವರ್ತನ ಶಕ್ತಿಯಾಗುತ್ತದೆ.

ಆಗಿನ ಕಾಲಕ್ಕೆ ಲಂಡನ್ ಎಂತು ಜಗತ್ತಿನ ಶ್ರೇಷ್ಠ ವಿದ್ಯಾಕೇಂದ್ರವಾಗಿತ್ತೋ ಅಂತೆಯೇ ಮದ್ರಾಸ್ ಪ್ರಾಯಶಃ ಆಂಗ್ಲರ ನೆಲಸಿನಿಂದಾಗಿ ದಕ್ಷಿಣ ಭಾರತದ ಶ್ರೇಷ್ಠ ವಿದ್ಯಾಕೇಂದ್ರವೆಂದು ಹೆಸರಾಗಿತ್ತು. ಸ್ವಾತಂತ್ರ್ಯದ ಸೂಚನೆ ಅಸ್ಪಷ್ಟವಾಗಿ ಪೂರ್ವದಿಗಂತದಲ್ಲಿ ಕಾಣಿಸಿಕೊಂಡರೂ, ಭಾರತೀಯ ಪ್ರಬುದ್ಧ ಯುವಕರಿಗೆ ಆಂಗ್ಲರೋ, ಅವರ ಕಡೆಯವರೋ ಸ್ಥಾಪಿಸಿದ ವಿದ್ಯಾಸಂಸ್ಥೆಗಳು ಆಕರ್ಷಕ ಕೇಂದ್ರಗಳಾಗಿದ್ದುವು . ಸುಮಾರು ಒಂದು ಒಂದೂವರೆ ಶತಮಾನಗಳ ಕಾಲ ಮದ್ರಾಸ್ ಪ್ರಾಂತ್ಯದೊಡನೆ ತನ್ನ ಹಣೆಬರಹವನ್ನು ಮಾತ್ರವಲ್ಲ, ಹೃದಯವನ್ನು ಸಹ ಬೆಸೆದುಕೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆ ಯಾವಾಗಲೂ ಆ ಕಡೆಗೇ ಮುಖಮಾಡಿಕೊಂಡಿದ್ದುದು ಸಹಜವೇ. ಆದ್ದರಿಂದ ಹರಿದಾಸ ಭಟ್ಟರು ಪದವಿಯ ವ್ಯಾಸಂಗಕ್ಕಾಗಿ 1946ರಲ್ಲಿ 'ತಾಂಬರಮ್'ನಲ್ಲಿದ್ದ ಮದ್ರಾಸ್ ಕ್ರಿಶ್ಚಿಯನ್ ಕಾಲೇಜು ಸೇರಿದರು. ಅಲ್ಲಿ ಅವರು ವಿಶೇಷ ವ್ಯಾಸಂಗಕ್ಕೆ ಮೊದಲು ಆರಿಸಿಕೊಂಡದ್ದು ಆಂಗ್ಲ ಸಾಹಿತ್ಯವಾದರೂ, ಕೆಲವು ದಿನಗಳಲ್ಲಿ ಆಲಿಂಗಿಸಿಕೊಂಡದ್ದು ಅರ್ಥಶಾಸ್ತ್ರ.

ಭಟ್ಟರು ಇಂಗ್ಲಿಷ್ ಬಿಟ್ಟರೂ, ಇಂಗ್ಲಿಷ್ ಅವರನ್ನು ಬಿಡಲಿಲ್ಲ. ಅವರ ಉತ್ತರ ಪತ್ರಿಕೆಯನ್ನು ಓದಿ ಸಂತುಷ್ಟನಾದ ಆಂಗ್ಲ ಪ್ರಾಧ್ಯಾಪಕ 'ಇಂಗ್ಲಿಷ್ ಬರೆದರೆ ಹೀಗೆ ಬರೆಯಬೇಕು' ಎಂದು ಹೇಳಿ ಅದನ್ನು ತರಗತಿಯಲ್ಲಿ ಓದಿದ್ದುಂಟು. ಪಾರುಪತ್ಯಗಾರರೇ ಪಾಕಕಾರ್ಯಕ್ಕಿಳಿದರೆ, ಕಂತ್ರಾಟುದಾರರೇ ಗಾರೆಯ ಕೆಲಸಕ್ಕಿಳಿದರೆ ಎಷ್ಟು ಕಷ್ಟವಾಗುತ್ತದೋ, ಕಲಿಸುವವರು ಕಲಿಕೆಗಿಳಿದಾಗ ಅಷ್ಟರಮಟ್ಟಿಗೆ ಕಷ್ಟವಾಗುತ್ತದೆ. ಪ್ರಾರಂಭದ ಎರಡು ಮೂರು ತಿಂಗಳ ಕಾಲ ಕಷ್ಟವಾದರೂ, ಬುದ್ಧಿಯ ಹಸಿವೆಯಿಂದಾಗಿ ಅವರು ಬಹುಬೇಗ ಹೊಸ ವಾತಾವರಣಕ್ಕೆ ಹೊಂದಿಕೊಳ್ಳುತ್ತಾರೆ. ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ತಾವು ಕಳೆದ ಕಾಲ ತಮ್ಮ ಜೀವನದ ಸುವರ್ಣಯುಗವೆಂದು ಅವರೇ ಹೇಳಿಕೊಳ್ಳುತ್ತಾರೆ. ಪಾಠಪ್ರವಚನಗಳ ಮೂಲಕ ಕಲಿತದ್ದಕ್ಕಿಂತ ಹೆಚ್ಚಾಗಿ ಓರಗೆಯ ಗೆಳೆಯರಿಂದ, ಕಾಲೇಜಿನ ವಿಶಿಷ್ಟ ಸನ್ನಿವೇಶದಿಂದ, ಸಮಕಾಲೀನ ವಿದ್ಯಮಾನಗಳ ಪ್ರಭಾವದಿಂದ ಗಳಿಸಿದ ಅನುಭವ ಅಮೂಲ್ಯವಾದದ್ದೆಂದು ಅವರು ಹೆಮ್ಮೆಯಿಂದ ನೆನೆಯುತ್ತಾರೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆಂಬಲ ನೀಡುವ ಮೆರವಣಿಗೆಯಲ್ಲಿ ಅವರು ಭಾಗವಹಿಸಿದ್ದುಂಟು; ಇಂಕ್ವಿಲಾಬ್ ಜಿಂದಾಬಾದ್ ಘೋಷಣೆ ಕೂಗಿದ್ದುಂಟು. ರಾಷ್ಟ್ರನಾಯಕರ ಭಾಷಣಗಳನ್ನು ಆಲಿಸಿದ್ದುಂಟು. ಆದರೆ ತಾವು ಮದ್ರಾಸಿಗೆ ಬಂದದ್ದು ಓದಲಿಕ್ಕಾಗಿ ಎಂಬ ಗುರಿಯನ್ನು ಮಾತ್ರ ಅವರೆಂದೂ ಮರೆಯುವುದಿಲ್ಲ. ಕ್ರೀಡಾಂಗಣ ಅವರಿಗೆ ಬೇಡವಾಗುತ್ತದೆ. ಪಾಠಕ್ಕಿಂತ ಸ್ವಾಧ್ಯಾಯವೇ ಆ ಕಾಲೇಜಿನಲ್ಲಿ ಮುಖ್ಯವಾದ್ದರಿಂದ, ಗ್ರಂಥಾಲಯ ಅವರ ದೀರ್ಘಕಾಲದ ಆರಾಧನಾ ಮಂದಿರವಾಗುತ್ತದೆ. ಓದೇ ಅವರ ಸರ್ವ ಸುಖವಾಗುತ್ತದೆ. ಎಂದಾದರೊಮ್ಮೆ ಹದಿನೇಳು ಮೈಲಿ ದೂರದ ಮದ್ರಾಸ್ ನಗರಕ್ಕೆ ಹೋದದ್ದಾದರೆ, ನಾಲ್ಕಾರು ಗ್ರಂಥಾಲಯಗಳನ್ನು ಜಾಲಾಡಿದ್ದರೆ ಅವರಿಗೆ ಸಮಾಧಾನವಿಲ್ಲ; ಒಂದೆರಡು ಪುಸ್ತಕದಂಗಡಿಗಳ ಮೇಲೆ ಧಾಳಿ ನಡೆಸದಿದ್ದರೆ ಅವರು ತಿಂದನ್ನ ಮೈ ಹತ್ತುವುದಿಲ್ಲ. ಚಿಕ್ಕಪ್ಪ ಕಳಿಸಿದ ಹಣದಲ್ಲೊಂದು ಭಾಗವನ್ನು ಪುಸ್ತಕ ಖರೀದಿಗಾಗಿ ಎತ್ತಿಡುತ್ತಾರೆ. ಗೆಳೆಯರು ಜತೆಗಿದ್ದರೆ ಮಾತ್ರ ಎಂದಾದರೊಮ್ಮೆ ಸಿನಿಮಾಮಂದಿರವನ್ನು ಪ್ರವೇಶಿಸುತ್ತಾರೆ. ಸಾಹಿತ್ಯಾಸಕ್ತರೂ ಧೀಶಕ್ತಿಸಂಪನ್ನರೂ ಆದ ಬಾಗಲೋಡಿ ದೇವರಾಯ ಮತ್ತು ಸೇವನಮಿರಾಜಮಲ್ಲರು ಅವರ ಆತ್ಮೀಯ ಗೆಳೆಯರು. ಅವರು ಒತ್ತಾಯಿಸಿದಾಗ ಮಾತ್ರ ಅವರೊಡನೆ ಆರೇಳು ಮೈಲಿಗಳ ತಿರುಗಾಟ. ಆ ತಿರುಗಾಟ ಮೈಗೆ ಮಾತ್ರವಲ್ಲ ಮನಸ್ಸಿಗೂ ಕಸರತ್ತಾಗುತ್ತಿತ್ತು. ಆಕಾಶದ ಕೆಳಗಣ ಯಾವೊಂದು ಸಂಗತಿಯೂ ಅವರ ಚರ್ಚೆಯ ಹೊರಗುಳಿಯುತ್ತಿರಲಿಲ್ಲ. ಸಾಮಾನ್ಯವಾಗಿ ಸಾಹಿತ್ಯ ಅವರ ಚರ್ಚೆಯ ವಿಶೇಷ ವಿಷಯವಾಗುತ್ತಿತ್ತು. ಆ ಚರ್ಚೆಗಳು ಭಟ್ಟರ ಚಿಂತನ ಸಾಮರ್ಥ್ಯವನ್ನು ತೀಕ್ಷ್ಣಗೊಳಿಸುತ್ತವೆ, ಬುದ್ಧಿಗೆ ಸಾಣೆ ಹಿಡಿಯುತ್ತವೆ, ಸಂವೇದನಭಾವಕ್ಕೆ ಇಂಬು ನೀಡುತ್ತವೆ. ಆ ಇಬ್ಬರು ಗೆಳೆಯರ ಸಂಪರ್ಕದ ಸೋಂಕಿನಿಂದಾಗಿ ಅವರು ಜಗತ್ತಿನ ಮಹಾಕೃತಿಗಳನ್ನೋದುವಂತಾಗುತ್ತದೆ. ಆದರೆ ಸಾಹಿತ್ಯಾಮೃತ ಸೇವನೆಯ ಅಮಲಿನಲ್ಲವರು ಲೌಕಿಕ ಕ್ಷೇಮಕ್ಕೆ ಆಧಾರಸ್ತಂಭವೆನಿಸಿದ ಅರ್ಥಶಾಸ್ತ್ರವನ್ನು ಮರೆಯುವುದಿಲ್ಲ. ಅದೇ ಸಂದರ್ಭದಲ್ಲಿ ಗೆಳೆಯರಾದ

ಜಿ.ಟಿ. ನಾರಾಯಣರಾಯರ ಕಠೋರ ಶಿಸ್ತು, ಚುರುಕು ಬುದ್ಧಿಗಳನ್ನವರು ಇಂದಿಗೂ ನೆನೆಸಿಕೊಳ್ಳುತ್ತಾರೆ. ಅವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಮೆಚ್ಚಿನ ಪ್ರಾಧ್ಯಾಪಕರಲ್ಲಿ ಚಂದ್ರನ್ ದೇವನೇಶನ್ ಪ್ರಮುಖರು.

— ೪ —

ಪ್ರತಿಯೊಬ್ಬ ವ್ಯಕ್ತಿಯ ಜೀವಮಾನದಲ್ಲಿ ಆಕಸ್ಮಿಕತಾನಿಯಮ ಪ್ರಮುಖವೂ ಅನಿವಾರ್ಯವೂ ಆದ ಪಾತ್ರವನ್ನು ವಹಿಸುತ್ತದೆ. ಎಲ್ಲಿಯೋ ಹುಟ್ಟಿ ಬೆಳೆದು. ಎಂದೂ ಕಾಣದಿದ್ದ. ಎಂದೂ ಭೇಟಿ ಮಾಡದಿದ್ದ ಎರಡು ಜೀವಿಗಳು ಯಾವುದೋ ಅನಿರೀಕ್ಷಿತವಾದ ಮುಹೂರ್ತದಲ್ಲಿ ಒಂದುಗೂಡಿ ಸಂಸಾರದ ನೊಗಕ್ಕೆ ಹೆಗಲು ಕೊಡುತ್ತವೆ. ಜಗತ್ತಿನ ಯಾವುದೋ ಮೂಲೆಯಲ್ಲಿ ಹುಟ್ಟಿ ತಪಸ್ಯೆಯ ಮೂಲಕ ಸಿದ್ಧಿ ಪಡೆದ ಶ್ರೀಗುರು ಮತ್ತೆಲ್ಲಿಯೋ ಹುಟ್ಟಿ ಮೌಢ್ಯಾಂಧಕಾರದಲ್ಲಿ, ಪಾಪದ ಕೂಪದಲ್ಲಿ ಬಿದ್ದು ಒದ್ದಾಡುತ್ತಿದ್ದ ಶಿಷ್ಯನನ್ನು ಉದ್ಧರಿಸಿ ಪಾವನಗೊಳಿಸುತ್ತಾನೆ; ಗಾಂಧಿ ಎಲ್ಲಿ? ದಕ್ಷಿಣ ಆಫ್ರಿಕೆ ಎಲ್ಲಿ? 'ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ?' ಮಣಿಪಾಲದ ಪೈ ಬಂಧುಗಳಿಗೂ. ಕುಲಿ ಹರಿದಾಸಭಟ್ಟರಿಗೂ ಎಲ್ಲಿಗೆಲ್ಲಿಯ ಸಂಬಂಧ? ಕಲ್ಯಾಣಪುರದ ಕಮಲಾಕ್ಷ ಪೈ ಮತ್ತು ಪ್ರಭಾಕರ ಪೈಗಳು ಭಟ್ಟರ ಬಾಲ್ಯ ಸ್ನೇಹಿತರು; ಇಂದಿಗೂ ಅವರ ಗೆಳೆತನ ಅಚ್ಚಳಿಯದೆ ಉಳಿದಿದೆ. ಆದರೆ ಕ್ಷೇಮಂಕರ ಮೂರ್ತಿಗಳಾಗಿ ಭಟ್ಟರ ಜೀವನವನ್ನು ಪ್ರವೇಶಿಸಿದವರು ಮಣಿಪಾಲದ ಪೈ ಬಂಧುಗಳು: ಟಿ.ಎಂ.ಎ.ಪೈ, ಟಿ.ಎ. ಪೈ ಮತ್ತು ಟಿ.ಆರ್.ಯು.ಪೈಗಳು. ಅವರ ಪ್ರವೇಶವಿರದಿದ್ದರೂ ಭಟ್ಟರ ಜೀವನ ಇಲ್ಲಿಯೋ, ಮತ್ತೆಲ್ಲಿಯೋ, ಪ್ರಾಯಶಃ ಮತ್ತಷ್ಟು ತೇಜೋನ್ವಿತವಾಗಿಯೇ ಸಾಗುತ್ತಿತ್ತೆನ್ನುವುದರಲ್ಲಿ ಸಂಶಯವಿಲ್ಲ. ಸ್ವಾತಂತ್ರ್ಯೋತ್ತರದ ಅಭಿವೃದ್ಧಿ ಮುಖವಾದ ಭರತಖಂಡದಲ್ಲಿ ಭಟ್ಟರಂಥ ಬುದ್ಧಿವಂತ ವಿದ್ವಾಂಸರಿಗೆ ಜೀವನಯಾಪನೆ ಕಷ್ಟವಾಗುತ್ತಿರಲಿಲ್ಲ. ಅವರು ವಿಶ್ವವಿದ್ಯಾಲಯವೊಂದರಲ್ಲಿ ಪ್ರಾಧ್ಯಾಪಕರಾಗಬಹುದಿತ್ತು; ಭಾರತದ ರಾಯಭಾರಿಯಾಗಬಹುದಿತ್ತು; ಅಥವಾ ಯಾವುದಾದರೂ ವಿಶ್ವವಿದ್ಯಾಲಯದ ಕುಲಪತಿಯಾಗಬಹುದಿತ್ತು. ಅದೆಲ್ಲ ಬಹುದು ಲೋಕದ ಕತೆ. ಆದರೆ ಭಟ್ಟರಿಗೆ ಈಹೊತ್ತು ಎಂಥ ಅದ್ಭುತ ಖ್ಯಾತಿ ಲಭಿಸಿದೆಯೋ ಅದು ಲಭಿಸುತ್ತಿತ್ತೆ ಎನ್ನುವುದು ಸಂದೇಹದ ಸಂಗತಿ. ಆಕಸ್ಮಿಕತಾ ನಿಯಮಕ್ಕನುಗುಣವಾಗಿ ಪೈಗಳ ಅದೃಷ್ಟದೊಡನೆ ಭಟ್ಟರ ಅದೃಷ್ಟವೂ ಹೆಣೆಗೆಗೊಂಡಿರಲಾಗಿ ಯಶೋಲಕ್ಷ್ಮಿ ಅವರ ಕೈಹಿಡಿದಳೇನೋ ಎನಿಸುತ್ತದೆ.

ಟಿ.ಎಂ.ಎ.ಪೈ ಭರತಖಂಡದಲ್ಲೊಬ್ಬರು ಅಪರೂಪದ ವ್ಯಕ್ತಿ. ನಿಜಕ್ಕೂ ಭಾರತರತ್ನ. ಅವರಲ್ಲಿ ವಿಜ್ಞಾನಿಯ ವಾಸ್ತವದೃಷ್ಟಿಯೂ, ಕವಿಯ ಕಲ್ಪನಾ ಸಾಮರ್ಥ್ಯವೂ ಸಮ್ಮಿಲನಗೊಂಡಿದ್ದುವು. ಜತೆಗೆ ಕ್ರತುಶಕ್ತಿ ಹುಟ್ಟಿನೊಡನೆಯೇ ಬೆಳೆದುಬಂದ ಹೆಗ್ಗುಣ. ಅವರು ಕಂಡ ಕನಸೆಲ್ಲ ನನಸಾದದ್ದುಂಟು; ಅವರ ಮನಸ್ಸಿನಲ್ಲಿ ಅಂಕುರಿಸಿದ ಆಲೋಚನೆಯೆಲ್ಲ ಕ್ರಿಯಾರೂಪ ತಾಳಿದ್ದುಂಟು. ಅವರು ಸಮಾಜದ ನಡುವೆಯೆ ಬಾಳಿ ಬದುಕಿದ ನಂಜುಂಡರೂ ಹೌದು. ವಿಘ್ನರಾಜರೂ ಹೌದು. ಅವರ ಸಾಮಾಜಿಕ ಪ್ರಜ್ಞೆ ಸಾಂದ್ರವಾಗಿತ್ತು, ಪ್ರಖರವಾಗಿತ್ತು. ತಮ್ಮ ಸೃಷ್ಟಿ ಶಕ್ತಿಯನ್ನೆಲ್ಲ ಸಮಾಜೋದ್ಧಾರಕ್ಕಾಗಿ ನಿವೇದಿಸಿದರು. ಅವರದು ಬಹುಮುಖ ಪ್ರತಿಭೆಯ ವೈನತೇಯ ಸಾಹಸ. ಕೈಗಾರಿಕೆ, ಶಿಕ್ಷಣ, ಆರೋಗ್ಯ – ಈ ಮೂರು ಅವರ ದೃಷ್ಟಿಯ ಸಮಾಜೋದ್ಧರಣದ ಮೂಲಮಂತ್ರಗಳು. ಅವರು ಬಿಡಿಸಲಾರದ ಸಮಸ್ಯೆಯಿಲ್ಲ; ಮಾಡಲಾರದ ಕಾರ್ಯವಿಲ್ಲ. ಮಹಾತ್ಮಾಗಾಂಧಿ ಸ್ಮಾರಕ ಕಾಲೇಜು ನಿರ್ಮಾಣದ ಅನುಭವ ಅವರ ಮುಂದಿನ ಶೈಕ್ಷಣಿಕ ಯೋಜನೆಗಳಿಗೆ ನಾಂದಿಯಾಗುತ್ತದೆ.

ಕಾಲೇಜಿನ ಮಹಿಮೆಗರಿಮೆಗಳು ಅದರ ಅದ್ದೂರಿಯ ಬಾಹ್ಯಾಕಾರವನ್ನವಲಂಬಿಸುವುದಿಲ್ಲ; ಅದರ ಅಂತಸ್ಸತ್ವದಿಂದಲೇ ಕಾಂತಿಕೀರ್ತಿಗಳೊದಗಬೇಕು. ಕಟ್ಟಡಗಳು ಬರಿಯ ಪಂಜರ ಮಾತ್ರ; ಸಾಧನೋಪಕರಣಗಳು ಅದರ ಮಾಂಸಪಿಂಡಗಳು: ಅಧ್ಯಾಪಕರ ವಿದ್ವತ್ತು, ವಿದ್ಯಾರ್ಥಿಗಳ ಕಸರತ್ತು ಅದರ ಅಂತಸ್ಸತ್ವ. ಈ ಅಂತಸ್ಸತ್ವ ಶೂನ್ಯವಾದ ಕಾಲೇಜುಗಳು ಜೀವಚ್ಛವಗಳೇ ಸರಿ. ಅಧ್ಯಾಪಕರ ಆಯ್ಕೆಯಲ್ಲಿ ಪೈಗಳು ಅಪಾರ ಜಾಗರೂಕತೆ ವಹಿಸಿದರು; ಮೈಯೆಲ್ಲ ಕಣ್ಣಾಗಿ, ಒಳಗಣ್ಣಿನಿಂದಲೂ ನೋಡಿ ಯೋಗ್ಯ ಅಧ್ಯಾಪಕರನ್ನಾರಿಸಿದವರು. ಕ್ಷಣಾರ್ಧದಲ್ಲಿ ಜನರ ಮರ್ಜಿಯನ್ನರಿಯುವ ನಿಸ್ಸೀಮರವರು. ಅವರು ಆರಿಸಿದ ಬೋಧಕರಲ್ಲಿ ಹರಿದಾಸ ಭಟ್ಟರೂ ಒಬ್ಬರು. ಪೈ ಅವರು ತಮ್ಮ ಜೀವನದಲ್ಲಿ ಗುರುತಿಸಿದ ಹಲವು ವೈಚಿತ್ರ್ಯಗಳಲ್ಲಿ ಭಟ್ಟರೂ ಒಬ್ಬರು. ಆ ದಿನಗಳಲ್ಲಿ ಕಾಲೇಜಿನ ಆಡಳಿತ ಧರ್ಮದರ್ಶಿಗಳೂ ಸಿಂಡಿಕೇಟ್ ಬ್ಯಾಂಕಿನ ಜನರಲ್ ಮ್ಯಾನೇಜರ್‌ರೂ ಆಗಿದ್ದ ಟಿ.ಎ. ಪೈ ಅವರು 'ನೀವೇಕೆ 250/-ರೂ. ತಲುಬಿನ ಅಧ್ಯಾಪಕ ವೃತ್ತಿಗೆ ಬಂದಿರಿ. ನೀವು ಬ್ಯಾಂಕಿನಲ್ಲಿ ನೌಕರಿಯನ್ನೊಪ್ಪಿಕೊಳ್ಳಲು ಸಿದ್ಧರಾಗಿದ್ದರೆ 800/- ರೂ. ಸಂಬಳದ ಹುದ್ದೆಯನ್ನು ನೀಡುತ್ತೇನೆ. ನೀವು ಮುಂದೆ ದೊಡ್ಡ ಅಧಿಕಾರಿಯಾಗಬಲ್ಲಿರಿ' ಎಂದು ಭಟ್ಟರನ್ನು ಪುಸಲಾಯಿಸಿದ್ದುಂಟು. ಅವರು ಶಿಕ್ಷಣ ಕ್ಷೇತ್ರದಲ್ಲಿ ನೆಲೆಯಾಗಿ ನಿಲ್ಲಲು ಆ ಹೊತ್ತಿಗೆ ಸಂಕಲ್ಪ ಮಾಡಿಕೊಂಡಿದ್ದರು. ಇಂಡಿಯಾದಲ್ಲಿ ನಿಮ್ಮಂಥ ಬೆಪ್ಪುತಕ್ಕಡಿಗಳಿರುವತನಕ

ದೆ ಶಕ್ಕೆ ಭವಿಷ್ಯವಿದೆ ಎಂದು ನಾನವರಿಗೆ ಪತ್ರ ಬರೆದೆ. ಜೀವನಾನುಕೂಲವಿಲ್ಲದೆ, ಸರ್ವತ್ಯಾಗಗಳಿಗೂ ಸಿದ್ಧರಾಗಿ ಗುಪ್ತ ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರ ಮಹತ್ವವನ್ನು ನಾವಿನ್ನೂ ಅರಿತುಕೊಂಡಿಲ್ಲ'[1] ಎಂದವರು ಅವರ ಬಗ್ಗೆ ಮೆಚ್ಚಿಕಾಣ್ಕೆ ಸಲ್ಲಿಸುತ್ತಾರೆ.

ಕಾಲೇಜು ಪ್ರಾರಂಭವಾದ ಎರಡನೆಯ ವರ್ಷ, ಅಂದರೆ 1950ರಲ್ಲಿ ಹರಿದಾಸ ಭಟ್ಟರು ತಮ್ಮ ಮೆಚ್ಚಿನ ತನಗೆ ಸಂಪೂರ್ಣ ಉದ್ಯೋಗ ತೃಪ್ತಿ ನೀಡಿದ ಅಧ್ಯಾಪನ ವೃತ್ತಿಯನ್ನು ಪ್ರಾರಂಭಿಸುತ್ತಾರೆ. ಹುಟ್ಟಿದ ಊರ ಪ್ರೀತಿ, ಬೆಳೆದ ಮನೆಯ ಸಮೀಪದಲ್ಲಿಯೇ ಇಷ್ಟವಾದ ಹುದ್ದೆ ಸಿಕ್ಕಿದ್ದರಲ್ಲಿ ಈ ಆಕಸ್ಮಿಕತಾ ನಿಯಮದ ಪಾಲು ಇದೆಯೆಂದೇ ಹೇಳಬಹುದು. ಸ್ವಂತ ಊರಿನಲ್ಲಿ ಕೆಲಸ ಸಿಕ್ಕಾಗ ರಾಜಕೀಯ ಮಾಡುವ, ಇಲ್ಲವೇ ಉಪವೃತ್ತಿಯನ್ನವಲಂಬಿಸುವ ಉಪಾಧ್ಯಾಯರೇ ಹೆಚ್ಚು ಮಂದಿ ಸಿಗುತ್ತಾರೆ. ಕೆಲವರಂತೂ ಯಾವ ಊರಿನಲ್ಲಿದ್ದರೂ ತಮ್ಮ ಚಾಳಿ ಬಿಡುವುದಿಲ್ಲ. ಹಲವು ಸಲ ಉಪವೃತ್ತಿಯೇ ಮುಖ್ಯ ವೃತ್ತಿಯಾಗಿ, ಮುಖ್ಯವೃತ್ತಿಯೇ ಉಪವೃತ್ತಿಯಾಗಿ ಪರಿವರ್ತನೆಯಾಗುವುದುಂಟು. ಇದರಿಂದಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ನಿರೀಕ್ಷಿತ ಫಲ ದೊರಕುತ್ತಿಲ್ಲ. ಮಹಾತ್ಮಗಾಂಧಿ ಸ್ಮಾರಕ ಕಾಲೇಜಿನ ಅಧ್ಯಾಪಕರು ಈ ಅಲಿಖಿತ ಅನಿಷ್ಟ ನಿಯಮಕ್ಕೆ ಅಪವಾದವಾಗಿದ್ದಾರೆ. ತಮ್ಮ ಅಚ್ಚು ಮೆಚ್ಚಿನ ಹುದ್ದೆ ದೊರೆತ ಕೂಡಲೇ ಭಟ್ಟರು ತ್ರಿಕರಣ ಶುದ್ಧಿಯಾಗಿ ಬೋಧನವೃತ್ತಿಗೆ ವ್ಯಾಸಂಗದ ಹವ್ಯಾಸಕ್ಕೆ – ಶೈಕ್ಷಣಿಕ ತಪಸ್ಸಿಗೆ, ತಮ್ಮನ್ನು ತಾವು ಸಮರ್ಪಿಸಿಕೊಳ್ಳುತ್ತಾರೆ. ವಿಶಾಲ ಸಾಗರದಲ್ಲಿ ತನ್ನ ಆಶ್ರಯವನ್ನು ಕಂಡುಕೊಂಡ ಹಮ್ಮೀನಿನಂತೆ ಅವರು ತಮ್ಮ ನೆಲೆಯನ್ನು ಕಂಡುಕೊಳ್ಳುತ್ತಾರೆ.

ಆ ಕಾಲೇಜಿನ ತೀವ್ರಾಭಿವೃದ್ಧಿಗೆ ಹಾಗೂ ರಾಷ್ಟ್ರೀಯ ಖ್ಯಾತಿಗೆ ಪೈಯವರ ಸತತ ಪ್ರೋತ್ಸಾಹ, ಉದಾರ ನೀತಿ ಮತ್ತು ಅವರು ಪ್ರಾಧ್ಯಾಪಕರಿಗೆ ನೀಡಿದ ಸ್ವಾತಂತ್ರ್ಯ ಎಷ್ಟರ ಮಟ್ಟಿಗೆ ಕಾರಣವೋ, ಅಧ್ಯಾಪಕರ ಶ್ರದ್ಧಾನಿಷ್ಠೆ, ವಿದ್ಯಾರ್ಥಿಪ್ರೇಮ, ವಿದ್ವತ್ತುಗಳೂ ಅಷ್ಟರಮಟ್ಟಿಗೆ ಕಾರಣವಾಗಿವೆ. ಫಲಿತಾಂಶಗಳೇ ಸಂಸ್ಥೆಯ ಮಾನದಂಡಗಳೆಂಬುದನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪ್ರಾರಂಭದ ದಿನಗಳಿಂದಲೇ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಹೀಗಾಗಿ ರಾಜ್ಯ ಹಾಗೂ ಕೇಂದ್ರ ಸರಕಾರಗಳ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಗಮನ ಆ ಕಾಲೇಜಿನ ಕಡೆಗೆ ಹರಿಯುತ್ತದೆ; ನಾನಾ ಬಗೆಯ ಸಹಾಯಗಳು ಅದಕ್ಕೆ ಲಭಿಸುತ್ತವೆ. ನಗರಸಭೆಯ ಪ್ರಾಥಮಿಕ ಶಾಲೆಯಲ್ಲಿ ಪ್ರಾರಂಭವಾದ ಕಾಲೇಜು ಆ ವೇಳೆಗೆ ಸಗರಿಗುಡ್ಡೆಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಸುಮಾರು ಮುಕ್ಕಾಲು ಮೈಲಿ ಹಬ್ಬಿಕೊಂಡು, ಇಡೀ ಉಡುಪಿಗೆ ಕಣ್ಸೆಲೆಯಾಗಿ ರಾರಾಜಿಸುತ್ತಿದೆ. ಆ ಕಾಲೇಜು ಈ ಮಟ್ಟಕ್ಕೆ ಬರಲು ಪೈ–ಭಟ್ಟರ ಸಂಯುಕ್ತ ನೇತೃತ್ವವೇ ಕಾರಣವೆನ್ನಬೇಕು.

'ಉತ್ಸಾಹ ಸಾಹಸ ಧೈರ್ಯ ಬುದ್ಧಿಶಕ್ತಿ ಪರಾಕ್ರಮಗಳು ಸಮ್ಮಿಳಿತವಾದಲ್ಲಿ ಕೈಗೊಂಡ ಕಾರ್ಯಗಳು ಕೈಗೂಡುತ್ತವೆ. ಅಲ್ಲಿ ದೈವಾನುಗ್ರಹದ ಒಲವೂ ಒದಗುತ್ತದೆ[1]. ಈ ಮಾತು ಪ್ರಾಚಾರ್ಯ ಕು.ಶಿ. ಹರಿದಾಸ ಭಟ್ಟರಿಗೆ ಬಹಳ ಅನ್ವಯವಾಗುತ್ತದೆ. ಅವರ ಎಲ್ಲ ಕೆಲಸಗಳಲ್ಲಿ ಮೇಲೆ ಹೇಳಿದ ಆರು ಗುಣಗಳು ಪ್ರತಿಬಿಂಬಿತವಾಗಿವೆ' ಎಂಬ ಮರಿಯಪ್ಪ ಭಟ್ಟರ[2] ಮಾತುಗಳಲ್ಲಿ ಪೂರ್ಣಸತ್ಯ ಇದೆ. ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನ ಅಭ್ಯುದಯಪರವಾದ ಅದ್ಭುತ ಪರಿವರ್ತನೆಗೆ, ನಾನಾ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಂದಾಗಿ ಅದಕ್ಕೊದಗಿರುವ ಶ್ರೀಮಂತತೆಗೆ ಹರಿದಾಸ ಭಟ್ಟರೇ ಕಾರಣರೆಂದು ನಿವೃತ್ತರಾದ ಟಿ.ಎಂ.ಎ. ಪೈ ತಿಳಿಸುತ್ತಾರೆ.[3] ಮಹಾತ್ಮ ಗಾಂಧಿ ಕಾಲೇಜಿನಲ್ಲಿ ನಡೆದಿರುವ ಮೌನಕ್ರಾಂತಿಗೆ, ಆ ಕಾಲೇಜು ನೂತನ ಜನಾಂಗದ ಮುಂದಿಟ್ಟಿರುವ ನವಜೀವನ ಸಂದೇಶಕ್ಕೆ ಮೊದಲು ಪ್ರಾಧ್ಯಾಪಕರಾಗಿ, ತದನಂತರ ಪ್ರಾಂಶುಪಾಲರಾಗಿ ಭಡ್ತಿ ಹೊಂದಿದ ಹರಿದಾಸ ಭಟ್ಟರ ಮುಖಂಡತ್ವವೇ ಕಾರಣವೆಂದು ಟಿ.ಎ. ಪೈಯವರು ಘೋಷಿಸುತ್ತಾರೆ.[4] ಭಟ್ಟರು ಬಹುವರ್ಣರಂಜಿತ ಪ್ರತಿಭಾವಂತರೆಂದೂ, ಅವರ ಪರಿಪಕ್ವಾನುಭವ, ಆತ್ಮವಿಶ್ವಾಸ, ಆಶಾವಾದಗಳಿಂದಾಗಿ ಕಾಲೇಜು ಶೈಕ್ಷಣಿಕ ಕ್ರಾಂತಿಯ ಪ್ರಾಯೋಗಿಕ ಕೇಂದ್ರವಾಗಿದೆಯೆಂದೂ, ಮಹಾ ಆಚಾರ್ಯರಾದ ಅವರು ತಮ್ಮ ಸಂಸ್ಥೆಗೊಂದು ಶಕ್ತಿಯಾಗಿದ್ದಾರೆಂದೂ ಪ್ರಖರ ಪ್ರತಿಭೆಯ ಜ್ಞಾನಸಾಗರದಂತಿರುವ ವ್ಯವಹಾರ ಕುಶಲಿ ರಮೇಶ ಪೈ ಅವರು ಹೇಳುತ್ತಾರೆ[5]. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲಿಯೂ ಉಡುಪಿಯಲ್ಲಿ ಉನ್ನತ ಶಿಕ್ಷಣದ ಪ್ರಗತಿ ಮತ್ತು ಪ್ರಾಧ್ಯಾಪಕ ಹರಿದಾಸ ಭಟ್ಟರ ಹೆಸರು ಪರ್ಯಾಯ ನಾಮಗಳಾಗಿವೆ ಎಂದು ಯು.ಆರ್.ರಾವ್ ಸೂಚಿಸುತ್ತಾರೆ.[6]

ಸುಂದರ ರಾಯರು ಪ್ರಿನ್ಸಿಪಾಲ್ ಹುದ್ದೆಯಿಂದ ನಿವೃತ್ತರಾದ ನಂತರ, 1964ರಲ್ಲಿ ಹರಿದಾಸ ಭಟ್ಟರು ಆ ಸ್ಥಾನಕ್ಕೆ ನಿಯೋಜಿತರಾಗುತ್ತಾರೆ. ಶ್ರೇಷ್ಠ ಸಂಘಟಕರೂ, ಘನ ವಿದ್ವಾಂಸರೂ, ವಿಚಾರಶೀಲರೂ ಶಿಷ್ಯವತ್ಸಲರೂ ಆದ ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಗೌರವಾದರಗಳಿಗೆ ಪಾತ್ರರಾಗುತ್ತಾರೆ: ವಿನಯಶೀಲರೂ, ನೀತಿ ಸಂಪನ್ನರೂ, ಸಮರ್ಪಣ ಮನೋಭಾವದವರೂ ಆದದ್ದರಿಂದ ಅವರು ಅಧ್ಯಾಪಕರ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ.

---

1. ಪ್ರವೃತ್ತ, ಪು 104, 2. ಅದೇ, ಪು 70; 3. ಅದೇ, ಪು 103; 4. ಅದೇ, ಪು 104; 5. ಅದೇ, ಪು 115. 6. ಅದೇ, ಪು 110

ರಾಜಕೀಯಕ್ಕೆ ದೂರವಾಗಿದ್ದ, ಕರ್ತೃತ್ವಶಕ್ತಿಯ, ಕಾರ್ಯತತ್ಪರತೆಯ, ಏಕನಿಷ್ಠೆಯ ಸಮ್ಮಿಶ್ರರಾದ್ದರಿಂದ ಆಡಳಿತ ಮಂಡಳಿಗೆ ಅವರು ಅಚ್ಚುಮೆಚ್ಚಿನವರಾಗುತ್ತಾರೆ. ಇಂಥ ಅದೃಷ್ಟಕ್ಕೆ ಪಾತ್ರರಾದ ಪ್ರಿನ್ಸಿಪಾಲರು ಯಶಸ್ಸು ಗಳಿಸುವುದರಲ್ಲಿ ಸಂದೇಹವಿಲ್ಲ. ಹದಿನೈದು ವರ್ಷಗಳ ಅವರ ಪ್ರಾಂಶುಪಾಲಾವಧಿಯಲ್ಲಿ ತೋರಿಸಿದ ಚಾಕಚಕ್ಯತೆ, ಜಾಣ್ಮೆ ಹಾಗೂ ದುಡಿಮೆಗಳು ಮನೆಮಾತಾಗಿವೆ. ಅವರ ಕಾಲದಲ್ಲಿ ಕಾಲೇಜಿನ ಸರ್ವಾಂಗೀಣ ಪ್ರಗತಿ ತೀವ್ರಗತಿಯಲ್ಲಿ ಸಾಗುತ್ತದೆ. ತರಗತಿ ಕೋಣೆಗಳು ಹೆಚ್ಚುತ್ತವೆ, ಗ್ರಂಥಾಲಯ ವಿಸ್ತಾರಗೊಳ್ಳುತ್ತದೆ, ವಿದ್ಯಾರ್ಥಿ–ನಿ–ನಿಲಯಗಳು ಸೇರ್ಪಡೆಯಾಗುತ್ತವೆ; ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಊರಿನ ಜನರಿಗೂ ಪ್ರಿಯವಾಗುತ್ತವೆ. ಬೆಳ್ಳಿಯ ಹಬ್ಬದ ಹೊತ್ತಿಗೆ ಕಾಲೇಜು ರಾಷ್ಟ್ರದ ಪ್ರಥಮ ದರ್ಜೆಯ ಕಾಲೇಜುಗಳಲ್ಲೊಂದಾಗಿ, ಸ್ವಾಯತ್ತತಾಪ್ರಾಪ್ತಿಗೂ ಅರ್ಹವಾಗುತ್ತದೆ.

ಭಟ್ಟರ ಅಧಿಕಾರಾವಧಿಯಲ್ಲಿಯೇ ಕಾಲೇಜಿನ ರಜತ ಮಹೋತ್ಸವವೂ ಸಂಪ್ರಾಪ್ತವಾದದ್ದು ಅವರ ಯಶಸ್ಸಿಗೆ ಕಿರೀಟವಿಟ್ಟಂತಾಗುತ್ತದೆ; ಅವರ ಸರ್ವಶಕ್ತಿಗಳನ್ನು ಏಕಕಾಲದಲ್ಲಿ ಒರೆಗೀಡು ಮಾಡಿದಂತಾಗುತ್ತದೆ. ಉಡುಪಿಯಲ್ಲಿ ನಡೆಯುವ ಎಲ್ಲ ಹಬ್ಬಗಳನ್ನು ಐದು ದಿನಗಳ ಬೆಳ್ಳಿಹಬ್ಬ ಮೀರಿಸುತ್ತದೆ. ಮಾಜಿ ಪ್ರಿನ್ಸಿಪಾಲರ ಮತ್ತು ಅಧ್ಯಾಪಕರ, ಹಾಲಿ ಅಧ್ಯಾಪಕರ ಮತ್ತು ಹೊಸ–ಹಳೆಯ ವಿದ್ಯಾರ್ಥಿಗಳು, ಕರ್ನಾಟಕದ ಸಾಹಿತಿಗಳ ಮತ್ತು ಶಿಕ್ಷಣವೇತ್ತರ, ಜತೆಗೆ ಊರವರ ಮಧುರ ಸ್ನೇಹ ಸಮ್ಮಿಲನವಾಗುತ್ತದೆ. ಆ ಹಬ್ಬ ಆಗ ನಡೆದ ವಿಚಾರ ಗೋಷ್ಠಿಗಳಲ್ಲಿ ಭೂತ–ವರ್ತಮಾನ–ಭವಿಷ್ಯತ್ ವಿಷಯಗಳನ್ನು ಕುರಿತಂತೆ ವಿದ್ವತ್ಪೂರ್ಣವಾದ ಚರ್ಚೆ ನಡೆಯುತ್ತದೆ. ಜಾನಪದ ಸಂಬಂಧವಾದ ವಿಚಾರ ಸಂಕಿರಣ ಉತ್ಸವದ ಮಹತ್ವಪೂರ್ಣವಾದ ಕಾರ್ಯಕ್ರಮವಾಗುತ್ತದೆ. ಐದು ದಿನಗಳೂ ಬೆಳಗಿನಿಂದ ನಟ್ಟ ನಡುರಾತ್ರಿಯವರೆಗೆ ವಿಚಾರಗೋಷ್ಠಿ, ವಸ್ತುಪ್ರದರ್ಶನ, ಸಭೆ ಮತ್ತು ಮನರಂಜನ ಕಾರ್ಯಕ್ರಮಗಳು ನಡೆದು, ಸಹಸ್ರಸಹಸ್ರ ಮಂದಿ ಪ್ರೇಕ್ಷಕರನ್ನು ತಣಿಸುತ್ತವೆ. ಬಂದವರಿಗೆ ಭಟ್ಟರ ಸಂಘಟನ ಸಾಮರ್ಥ್ಯದ ಪೂರ್ಣ ಪರಿಚಯವೊದಗುತ್ತದೆ.

ಕಾಲೇಜು ಪ್ರಿನ್ಸಿಪಾಲರಾಗಿದ್ದುಕೊಂಡು ಭಟ್ಟರು ಮೈಸೂರು ವಿಶ್ವವಿದ್ಯಾಲಯದ ಆಡಳಿತ ಹಾಗೂ ಶೈಕ್ಷಣಿಕ ನೀತಿಗಳ ಮೇಲೆ ಅಪಾರ ಪ್ರಭಾವ ಬೀರುತ್ತಾರೆ. ಅವರೆಂದೂ ಮಾತಾಡುವ ಚಾಪಲ್ಯಕ್ಕಾಗಿ ಸಭೆಸಮಿತಿಗಳಲ್ಲಿ ಮಾತಾಡಿದವರಲ್ಲ. ಅವರ ಮಾತಿನಲ್ಲಿ ಪರಿಪಕ್ವಾನುಭವದ ಘನತೆಯೂ, ದೀರ್ಘಾಲೋಚನೆಯ ಗಾಂಭೀರ್ಯವೂ ಇರುತ್ತಿದ್ದುವು. ವಿಶ್ವವಿದ್ಯಾಲಯದ ನೀತಿಯನ್ನು ಪ್ರತಿಭಟಿಸುವಾಗಲೂ ಅವರು ಮರ್ಯಾದೆಯ ಎಲ್ಲೆಯನ್ನು ಮೀರಿದವರಲ್ಲ. ಅವರ ಅಭಿಪ್ರಾಯಕ್ಕೆ ಸಾಮಾನ್ಯವಾಗಿ ಎಲ್ಲ ಕಡೆಗಳಿಂದ ಮನ್ನಣೆ ದೊರೆಯುತ್ತಿತ್ತು. ಮನ್ನಣೆ ದೊರೆಯದಿದ್ದಾಗ ಅವರ ಮನಸ್ಸಿನಲ್ಲಿ ಕೊಳ್ಳುದಿ ಕೂಸಾಕುಳಿಗಳಾಗಲಿ, ಕಿನಿಸು ಕೊಚ್ಚೆಗಳಾಗಲಿ ಉಳಿಯುತ್ತಿರಲಿಲ್ಲ. ನಿಗರ್ವಿಯೂ ವಿನಯದ ತವನಿಧಿಯೂ ಆದ ಆ ವ್ಯಕ್ತಿಯ ಇಡೀ ಬದುಕು ಸ್ನೇಹದ ಸುಗಂಧದಲ್ಲದ್ದಿ ತೆಗೆದಂತಿದೆ. ಆದ್ದರಿಂದ ದ್ವೇಷ-ಮಾತ್ಸರ್ಯಗಳು, ಪ್ರತೀಕಾರ ಪ್ರತಿರೋಧಗಳು ಅವರಿಗೆ ತೀರ ಪರಕೀಯ. ಪೈಯವರ ಮಹಾತ್ಮ ಗಾಂಧಿ ಸ್ಮಾರಕ ಮಹಾ ವಿದ್ಯಾಲಯದಲ್ಲಿ ಅನೇಕ ಸಮರ್ಥರೂ ಗುಣಸಂಪನ್ನರೂ ಆದ ಅಧ್ಯಾಪಕರಿದ್ದರು; ಆದರೆ ಆ ಮಹಾ ವಿದ್ಯಾಲಯ ರೂಪದ ಸರಸ್ವತಿ ತನ್ನ ಮೆಚ್ಚುಗೆಯ ಪುತ್ರನನ್ನಾಗಿ ಆರಿಸಿಕೊಂಡದ್ದು ಕುಶಿಯವರನ್ನು; ಆ ಕಾಲೇಜನ್ನು ರೂಪಿಸಿದವರು ಕುಶಿಯವರು; ತನ್ನನ್ನು ರೂಪಿಸಿದವರನ್ನು ಕಾಲೇಜು ರೂಪಿಸಿತು. ಧರ್ಮೋ ರಕ್ಷತಿ ರಕ್ಷಿತಃ ಕುಶಿಯವರು ನಿವೃತ್ತರಾಗುವ ಹೊತ್ತಿಗೆ ಕಾಲೇಜು ಮಹಾ ಸಾಂಸ್ಕೃತಿಕ ಕೇಂದ್ರವಾಗಿ, ವೈಚಾರಿಕ ವೇದಿಕೆಯಾಗಿ, ಸಂಶೋಧನ ಮಂದಿರವಾಗಿ ವಿರಾಜಮಾನವಾಗುತ್ತದೆ.

— ೫ —

ಸದಾ ಅಧ್ಯಯನಶೀಲನೂ, ಆಲೋಚನಾಪರನೂ, ಆಚಾರವಂತನೂ, ನಿರಂತರ ತಪಸ್ವಿಯೂ ಆದ ವಿದ್ವಾಂಸ ಮಹಾ ಪ್ರಾಧ್ಯಾಪಕನೆಂಬ ಬಿರುದಿಗೆ ಪಾತ್ರನಾಗುತ್ತಾನೆ. ಆದರೆ ಮಹಾ ಪ್ರಾಧ್ಯಾಪಕರೆಲ್ಲ ಉತ್ತಮ ಆಡಳಿತಗಾರರಾಗಲಾರರು. ಅದಕ್ಕೆ ಕಾರಣ ಅಸಾಮರ್ಥ್ಯವಲ್ಲ. ಆವಶ್ಯಕ ಯಶೋಧರ್ಮದ ಅಭಾವ. ಆದರೆ ಉತ್ತಮ ಆಡಳಿತಗಾರರು ಮಹಾಪ್ರಾಧ್ಯಾಪಕರಾಗಲಾರರು. ಅದಕ್ಕೆ ವಿದ್ವತ್ತಿನ ಅಭಾವವೇ ಕಾರಣ. ದೂರದೃಷ್ಟಿಯುಳ್ಳ ಸೃಜನಶೀಲದ ಮಹಾಪ್ರಾಧ್ಯಾಪಕ ಒಂದು ಶೈಕ್ಷಣಿಕ ಸಂಸ್ಥೆಯ ಆಡಳಿತಗಾರನಾಗಿ, ಉತ್ತಮ ಆಡಳಿತಗಾರನೆಂದು ಯಶಸ್ಸು ಪಡೆದದ್ದಾದರೆ, ಅದು ಆ ಸಂಸ್ಥೆಯ ಪುಣ್ಯ. ಒಂದು ಸಂಸ್ಥೆಯನ್ನು ಸರ್ವತೋಮುಖವಾಗಿ ಬೆಳೆಸಲಾರದ, ಆತ್ಮಸಮರ್ಪಣ ಭಾವದಿಂದ ಅದರ ಅಂತಸ್ಸತ್ವವನ್ನು ಹೆಚ್ಚಿಸದ, ಯಾವೊತ್ತೂ ಪರಹಿಂಸೆ, ಪ್ರತೀಕಾರ ಬುದ್ಧಿ, ದರ್ಪಾಹಂಕಾರಗಳಿಂದ ಮೆರೆಯುವ, ಆತ್ಮವಿಶ್ವಾಸ ಸ್ವಾವಲಂಬನ ಸಾಮರ್ಥ್ಯವಿಲ್ಲದೆ ಪರಶಕ್ತಿಯ ರಕ್ಷೆಯಲ್ಲಿಯೇ ಸದಾ ಆಡಳಿತ ನಡೆಸುವ ವ್ಯಕ್ತಿ ಶಿಕ್ಷಣ ಕ್ಷೇತ್ರದ ನಾಯಕನಾಗಲನರ್ಹನಾಗುತ್ತಾನೆ. ಶತಾವಧಾನಿಯಾದ ಮಹಾ ಪ್ರಾಧ್ಯಾಪಕ ಮಾತ್ರ ಶ್ರೇಷ್ಠ ಪ್ರಾಂಶುಪಾಲನಾಗುತ್ತಾನೆ. ಹರಿದಾಸ

ಭಟ್ಟರ ಕಾರ್ಯವಿಸ್ತಾರ ಪ್ರಾಂಶುಪಾಲಾಧಿಕಾರಕ್ಕೆ ಸೀಮಿತಗೊಂಡಿದ್ದರೆ ಸಾವಿರ ಸಂತೋಷಗಳೊಟ್ಟಿಗೆ ನಿವೃತ್ತರಾಗುತ್ತಿದ್ದರು. ಅದಮ್ಯವಾದ ಅವರ ಚೈತನ್ಯದ ವಿಹಾರಕ್ಕೆ ವ್ಯಾಪವಿಸ್ತಾರವೇ ಅತ್ಯಗತ್ಯವಾಗಿತ್ತು. ಹಾರುವ ಚೈತನ್ಯದ ಒಡಲಲ್ಲಿಯೇ ಅವಕಾಶದ ಬೀಜವೂ ಹುದುಗಿರುತ್ತದೆ; ಆ ಚೈತನ್ಯಕ್ಕೆ ಪರರ ಆಸರೆಯಾಗಲಿ, ಅನುಗ್ರಹವಾಗಲಿ ಅನಗತ್ಯ. ಅದು ಸ್ವಯಂಭೂ ಹಾಗೂ ಸ್ವಾವಲಂಬಿ. ತನ್ನ ವಿಹಾರಕ್ಕೆ ಬೇಕಾದ ಅವಕಾಶವನ್ನು ಅದೇ ಸೃಷ್ಟಿಸಿಕೊಳ್ಳುತ್ತದೆ. ಸೃಜನಶೀಲತೆ ಅದರ ಪ್ರಮುಖ ಲಕ್ಷಣ; ಸಂಘಟನ ಕೌಶಲವೇ ತನ್ನ ಅಭಿವ್ಯಕ್ತಿಗೆ ಅದು ಆರಿಸಿಕೊಳ್ಳುವ ಮಾಧ್ಯಮ.

ಈ ಸಂಘಟನ ಸಾಮರ್ಥ್ಯ ಹರಿದಾಸ ಭಟ್ಟರ ಹುಟ್ಟುಗುಣಗಳಲ್ಲೊಂದು. ಅವರು ಕಟ್ಟಿದ ಸಂಘ-ಸಂಸ್ಥೆಗಳು ಹಲವಾರು; ಅವರು ನಡೆಸಿದ ಸಭೆ ಸಮಾರಂಭಗಳಿಗೆ ಲೆಕ್ಕವಿಲ್ಲ. ಶ್ರೀರಾಮ ಶಿವಜಾಪವನ್ನು ಮಾಡಿದಷ್ಟು ಸುಲಭವಾಗಿ, ನೀರು ಕುಡಿದಷ್ಟು ಅನಾಯಾಸವಾಗಿ ಎಂಥ ಬೃಹತ್ ಸಮಾರಂಭವನ್ನಾಗಲಿ ದೇವತೆಗಳಿಗೂ ಪ್ರಿಯವಾಗುವಷ್ಟು ವೈಭವದಿಂದ ವ್ಯವಸ್ಥೆಗೊಳಿಸುವ ಕಲೆ ಅವರಿಗೆ ಕರತಲಾಮಲಕವಾಗಿದೆ. ಸಂಘ-ಸಂಸ್ಥೆಗಳನ್ನು ಕಟ್ಟುವುದರಲ್ಲಿ ಅವರು ಜಾಣರು. ಅವರ ಚಾಣಾಕ್ಷತೆ ದೂರದೃಷ್ಟಿ ಮತ್ತು ಕರ್ತೃತ್ವ ಸಾಮರ್ಥ್ಯಗಳಿಗೆ ಅವರು ನೆಟ್ಟಿರುವ ಸಂಸ್ಥಾವೃಕ್ಷಗಳೇ ಸಾಕ್ಷಿಯಾಗಿವೆ. ಪುಣೆಯ ಭಂಡಾರ್‌ಕರ್ ಸಂಸ್ಥೆಯನ್ನು ನೆನಪಿಗೆ ತಂದುಕೊಡುವ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಭಾವಾತ್ಮಕವಾಗಿ ಮಹಾತ್ಮ ಗಾಂಧಿ ಸ್ಮಾರಕ ಕಾಲೇಜಿನೊಂದಿಗೆ ಬೆಸುಗೆಗೊಂಡಿದ್ದರೂ, ವಾಸ್ತವವಾಗಿ ಅದೊಂದು ಸ್ವತಂತ್ರ ಸಂಸ್ಥೆ. ಅದು ಅವರ ಮಮತೆಯ ಕೂಸು. ಈಗದು ಕೂಸಲ್ಲ: ಪ್ರಾಪ್ತ ವಯಸ್ಕ. ಅದು ಇಂದಿನ ಸ್ಥಿತಿಗೆ ಬರಬೇಕಾದರೆ ಅವರು ಪಟ್ಟಿರುವ ಶ್ರಮ, ಅನುಭವಿಸಿರುವ ಯಾತನೆ, ಸುರಿಸಿರುವ ಬೆವರು ಮಾತಿಗೆ ನಿಲುಕುವಂಥವಲ್ಲ. ಗೋವಿಂದ ಪೈ ಗ್ರಂಥಾಲಯವನ್ನು ಪಡೆದುಕೊಳ್ಳುವ ಮುನ್ನ, ಮಂಗಳೂರು ಮಂಜೇಶ್ವರಗಳಲ್ಲಿ ಬೇಸಗೆಯ ಬಿರುಬಿಸಿಲಲ್ಲಿ ಅಲೆದಾಡಿದ ದೃಶ್ಯ ಅವರೊಡನಿದ್ದವರ ಕಣ್ಣಿಗೆ ಕಟ್ಟಿದಂತಿದೆ. ಒಂದು ಸಂಸ್ಥೆಯನ್ನು ಕಟ್ಟುವಾಗ ಮೊದಲಿಗರು ಪಟ್ಟ ಕಷ್ಟನಿಷ್ಠುರಗಳಲ್ಲಿ ಒಂದಂಶವಾದರೂ ಅಮೇಲೆ ಬಂದು ಅಲ್ಲಿ ತಣ್ಣಗೆ ಸೊಂಪಾಗಿ ನೆಲಸುವವರಿಗೆ ಅರ್ಥವಾಗುವುದಿಲ್ಲ. ಅರಮನೆ ಸಿದ್ಧವಾದ ನಂತರ ರಾಜರು ಭೋಗವಿಲಾಸದ ನಡುವೆ ಮೈಮರೆಯಬಹುದು; ದೇವಾಲಯ ನಿರ್ಮಾಣಗೊಂಡ ನಂತರ ಪೂಜಾರಿ ಸುಲಿಗೆಯ ಪವಿತ್ರ ಕರ್ಮಕಾಂಡದಲ್ಲಿ ನಿರತನಾಗಬಹುದು; ಸ್ವಾತಂತ್ರ್ಯವನ್ನು ತಂದುಕೊಟ್ಟ ತ್ಯಾಗವೀರರು ಸ್ವರ್ಗಾರೋಹಣ ಪರ್ವವನ್ನು ಪ್ರವೇಶಿಸಿದ ನಂತರ, ಅವರ ಉತ್ತರಾಧಿಕಾರಿಗಳೆಂದು ಹೇಳಿಕೊಳ್ಳುತ್ತ ಭೋಗಮಗ್ನರಾದ ಜನ ಶೋಕಿಲಾಲರಾಗಿ, ದೇಶವನ್ನು ದಿವಾಳಿಯೆಬ್ಬಿಸಬಹುದು; ಹಿಂದಿನ ಹುತಾತ್ಮರನ್ನು ಸಂಪೂರ್ಣವಾಗಿ ಮರೆಯಬಹುದು. ಅದೇನೇ ಇರಲಿ, ಒಂದು ಸಂಸ್ಥೆಯನ್ನು ಕಟ್ಟಿದ ಮೊದಲಿಗನಿಗೆ ಒಂದು ದೇವಕಾರ್ಯವನ್ನು ಪೂರೈಸಿದ ಹಾಗೂ ಸ್ವಕರ್ತವ್ಯವನ್ನು ನೆರವೇರಿಸಿದ ಆನಂದ ಹಾಗೂ ಧನ್ಯಭಾವಗಳಂತು ಇದ್ದೇ ಇರುತ್ತವೆ.

ಯಕ್ಷಗಾನವೆಂದ ಕೂಡಲೇ ದಕ್ಷಿಣ ಕನ್ನಡದ ನೆನಪಾಗುತ್ತದೆ; ದಕ್ಷಿಣ ಕನ್ನಡವೆಂದ ಕೂಡಲೇ ಯಕ್ಷಗಾನದ ನೆನಪಾಗುತ್ತದೆ. ಅವೆರಡೂ ಪರ್ಯಾಯನಾಮಗಳೆ ಆಗಿವೆ. ಕಲೆ ಮತ್ತು ಬದುಕುಗಳು ಹಾಲು-ಜೇನುಗಳಂತೆ, ಅಲ್ಲ ಅಲ್ಲ, ಮಧುಮಾಧುರ್ಯಗಳಂತೆ ಅಷ್ಟೊಂದು ಗಾಢವಾಗಿ, ಬಂಧುರವಾಗಿ, ಸಮರಸವಾಗಿ, ಅಪ್ರತ್ಯೇಕವಾಗಿ, ದೇಹಾತ್ಮಗಳಂತೆ ಸೇರಿಕೊಂಡಿರುವುದನ್ನು ಮತ್ತೆಲ್ಲಿಯೂ ಕಾಣಲಾಗದು. ಯಕ್ಷಗಾನದಂತೆ ಒಂದು ಜನಾಂಗವನ್ನು ಸುಸ್ಪಷ್ಟವಾಗಿ, ವಿಲಕ್ಷಣವಾಗಿ ಗುರುತಿಸುವ ಮತ್ತೊಂದು ಕಲಾಪ್ರಕಾರವನ್ನು – ಪ್ರಾಯಶಃ ಬ್ಯಾಲೆ ಬಿಟ್ಟರೆ, ಬೇರೆಲ್ಲಿಯೂ ಕಾಣಲಾಗದು. ಪರಂಪರೆಯನ್ನತಿಕ್ರಮಿಸದೆ, ಕಾಲಾನುಗುಣವಾಗಿ ಅದಕ್ಕೊಂದು ಹೊಸತನವನ್ನು ಸಂಗಳಿಸಿ, ವಿದೇಶೀಯರು ಸಹ ಮೆಚ್ಚುವಂತೆ ಅಪೂರ್ವ ಶೋಭೆಯನ್ನೊದಗಿಸಿದ ಕಲಾಪರಮೇಷ್ಠಿ, ಪ್ರತಿಭಾಶ್ರೀಮಂತ, ವಿಚಾರವಂತ ಶಿವರಾಮ ಕಾರಂತರು ಯಕ್ಷಗಾನದ ಸೀಮೆಯಲ್ಲಿ ಜನಿಸಿದ್ದೇ ಒಂದು ಪುಣ್ಯ. ಯಕ್ಷಗಾನದ ಹೊಸ ಆಯಾಮಗಳ ಅವರ ಕನಸನ್ನು ನನಸುಗೊಳಿಸುವಲ್ಲಿ ಅವರೊಂದಿಗೆ ನಿಸ್ವಾರ್ಥತೆಯಿಂದ ದುಡಿದವರು ಹರಿದಾಸ ಭಟ್ಟರು. 'ಮುಂದಣ ದೀರ್ಘಕಾಲದಲ್ಲಿ ಹರಿದಾಸ ಭಟ್ಟರು ನಾನು ಕೈಕೊಂಡ ಅನೇಕ ಕೆಲಸಗಳ ಸಲುವಾಗಿ ದೈಹಿಕ, ಮಾನಸಿಕ ಶ್ರಮವನ್ನೆಲ್ಲ ವಹಿಸಿಕೊಂಡರು. ಅದೇ ಉಡುಪಿಯಲ್ಲಿ ಯಕ್ಷಗಾನ ಕೇಂದ್ರವೊಂದನ್ನು ತೆರೆಯುವುದಕ್ಕೂ ಅವರು ಮುಂದಾದರು. ಯಕ್ಷರಂಗ ಸಂಸ್ಥೆಯ ಹೆಚ್ಚಿನ ಹೊಣೆಯನ್ನು ನಿರ್ವಹಿಸುವುದರಲ್ಲಿ ಮುಂದಾದರು.[1]. ಅವರ ಆಧಾರಸ್ತಂಭವೇ ಅವರೆಂದು ಸಹ ಕಾರಂತರು ಭಟ್ಟರ ಬಗ್ಗೆ ಹೇಳಿದ್ದುಂಟು. ಈ ಬಗ್ಗೆ ಮಂಗಳೂರಿನ ಶ್ರೀನಿವಾಸ ಉಡುಪರ ಮಾತು ಸಹ ಗಮನಾರ್ಹವಾದದ್ದು: 'ನಮ್ಮ ಜಿಲ್ಲೆಯ ಯಕ್ಷಗಾನ ಕಲೆ ನಾಡಿನ, ದೇಶದ, ಈಗಲಂತೂ ಪರದೇಶಗಳ ಗಮನವನ್ನು ಸೆಳೆದುದು ಡಾ। ಕಾರಂತರ ಪರಿಶೋಧನೆ, ಪ್ರಯೋಗಗಳಿಂದ. ಆದರೆ ಕಾರಂತರ ಪ್ರಯೋಗಗಳಿಗೆ ಚಾಲನೆ ದೊರೆತುದು ಕು.ಶಿ.ಯವರಿಂದ. ಕಾರ್ಯನಿರತ ಯಕ್ಷಗಾನ ತಂಡವನ್ನು ಕುತ್ತಿಗೆಗೆ ಕಟ್ಟಿಕೊಂಡು, ಊರೂರುಗಳಲ್ಲಿ ಅವುಗಳ

---

1. ಬೀಳ್ಕೊಡುಗೆ (ಹರಿದಾಸ ಭಟ್ಟರ ಅಭಿನಂದನ ಸಂಪುಟ) ಪು 6.

ಪ್ರದರ್ಶನ ಏರ್ಪಡಿಸಿ, ಪರಿಚಯಿಸುವ ಕೆಲಸ, ಬಹುಮುಖಿ ಚಟುವಟಿಕೆಗಳಲ್ಲಿ ಸದಾ ನಿರತರಾಗಿರುವ ಕಾರಂತರಿಂದ ಸಲ್ಲದು. ಅದಕ್ಕೆ ಬೇಕಾದ ಸಹನೆ-ತಾಳ್ಮೆಗಳು ಅವರಲ್ಲಿಲ್ಲ. ಇರಬೇಕೆಂದು ಭಾವಿಸುವುದು ಸರಿಯಲ್ಲ. ತಾನು ಹೊಸ ಮಾರ್ಗವನ್ನು ತೋರಿಸಿದ್ದೇನೆ. ಅದರಲ್ಲಿ ನಡೆಯುವುದು. ಬಿಡುವುದು ನಿಮಗೆ ಸೇರಿದ್ದು ಎಂದರು ಅವರು. ಪ್ರತಿಭೆಯ ಸ್ತರದಲ್ಲಿ ಅಜಗಜಾಂತರವಿರುವ ಕಾರಂತರ ಮತ್ತು ಯಕ್ಷಗಾನ ವೃತ್ತಿ ಕಲಾವಿದರ ನಡುವಣ ಆಳ ಹರಹುಗಳನ್ನು ಸಮರ್ಥವಾಗಿ ತುಂಬಿಸಿದವರು ಭಟ್ಟರು.'[1]. 'ದಕ್ಷಿಣ ಕನ್ನಡ ಜಿಲ್ಲೆ–ವಿಶೇಷವಾಗಿ ಉಡುಪಿ–ಅವರಿಗೆ ಋಣಿಯಾಗಿದೆ. ಉಡುಪಿ ಕಲೆ, ಯಕ್ಷಗಾನ, ಕನ್ನಡ ಸಾಹಿತ್ಯ ಚಟುವಟಿಕೆಗಳ ಕೇಂದ್ರವಾಗಿ ರೂಪುಗೊಂಡದ್ದರಲ್ಲಿ ಹರಿದಾಸ ಭಟ್ಟರ ಪಾಲು ದೊಡ್ಡದು.'[2] ಕಾರಂತರೇ ಮೊದಲಾಗಿ ಈ ಎಲ್ಲ ಮಹನೀಯರ ಮಾತುಗಳಿಂದ ಒಂದು ಸಂಗತಿಯಂತು ಸ್ಪಷ್ಟವಾಗುತ್ತದೆ: ಕಾರಂತರು ಪ್ರಯೋಗ ಸಂಶೋಧನೆಗಳ ಮೂಲಕ ಯಕ್ಷಗಾನದ ಅಂತಸ್ಸೌಂದರ್ಯವನ್ನು ಹೆಚ್ಚಿಸಿದರೆ, ಹರಿದಾಸ ಭಟ್ಟರು ಕೇಂದ್ರವನ್ನು ವ್ಯವಸ್ಥೆಗೊಳಿಸುವ ಮೂಲಕ, ಅದಕ್ಕೆ ರಾಜ್ಯಗಳ ಸಹಾಯವನ್ನೊದಗಿಸಿಕೊಳ್ಳುವ ಮೂಲಕ, ಅದನ್ನು ದೇಶವಿದೇಶಗಳಲ್ಲಿ ಮೆರೆಸುವ ಮೂಲಕ ಅದಕ್ಕೆ ಹೊಸ ಚೈತನ್ಯವನ್ನೂ ಚಾಲನೆಯನ್ನೂ ನೀಡುತ್ತಾರೆ. ಆ ಕೇಂದ್ರ ಈ ಇಬ್ಬರು ಮಹನೀಯರ ಜಂಟಿ ಪ್ರಯತ್ನದ ಫಲವಾಗಿ ತಲೆಯೆತ್ತಿ, ಸ್ವದೇಶೀಯ ವಿದೇಶೀಯ ತಜ್ಞರನ್ನು ಆಕರ್ಷಿಸುತ್ತದೆ.

ಕಡಿಯಾಳಿ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿ ಕಾಲಿಟ್ಟಕೂಡಲೇ ಭಟ್ಟರ ಸಂಘಟನಕಾರ್ಯ ಪ್ರಾರಂಭವಾಗುತ್ತದೆ. 'ಉಡುಪಿ ನ್ಯಾಯವಾಗಿ ತುಳುವಿನ ಕೇಂದ್ರವಾಗಬೇಕಿತ್ತು; ತುಳು ಸಂಸ್ಕೃತಿಯನ್ನು ಬಿತ್ತರಿಸುವ ಹೃದಯಸ್ಥಾನವಾಗಬೇಕಿತ್ತು' ಎಂಬ ಕೊರಗು ಅವರಿಗಿದ್ದೇ ಇದೆ. ಯಾವಾಗಲೂ ವಿರಾಟ್‌ಶಕ್ತಿಯ ಸಂಕಲ್ಪಕ್ಕೆ ಜಯ, ಅದಕ್ಕನುಕೂಲವಾಗುವಂತೆ ಚಾರಿತ್ರಿಕ ಘಟನೆಗಳು ಅನಿವಾರ್ಯವೆನ್ನುವಂತೆ ನಡೆಯುತ್ತವೆ. ಈ ಅನಿವಾರ್ಯತಾ ನಿಯಮವನು ಚರಿತ್ರೆಯಾಗಲಿ, ಮನುಷ್ಯರಾಗಲಿ ಪುರಸ್ಕರಿಸಬೇಕಾಗುತ್ತದೆ. ಒಂದಾನೊಂದು ಕಾಲದಲ್ಲಿ ಮುಂಬಯಿ ಕನ್ನಡ ನಾಡಿನ ಭಾಗವಾಗಿತ್ತು. ರಾಷ್ಟ್ರೀಯತಾ ದೃಷ್ಟಿಯಿಂದ ಆ ವಿಚಾರವನ್ನು ಮರೆಯಬೇಕಾಗಿದೆ. ತುಳು ಪ್ರಬುದ್ಧ ಭಾಷೆ, ಸುಸಂಸ್ಕೃತ ಭಾಷೆ. ಅದು ಕನ್ನಡಕ್ಕೆ ಪೈಪೋಟಿಯಾಗಿ ನಿಲ್ಲುವ ಬದಲು ಅದಕ್ಕೆ ಪೂರೈಕೆಯಾಗಿ ಉಳಿದು ಬೆಳೆಯುವುದರಲ್ಲಿ ಎರಡಕ್ಕೂ ಕ್ಷೇಮವುಂಟು. ತುಳು ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆ ನೀಡುವಲ್ಲಿ, ತುಳು ಸಮ್ಮೇಳನವನ್ನು ಏರ್ಪಡಿಸುವಲ್ಲಿ, ಎಲ್ಲಕ್ಕಿಂತ ಮಿಗಿಲಾಗಿ ತುಳು ನಿಘಂಟಿನ ಸಂಘಟನೆಯಲ್ಲಿ ಭಟ್ಟರ ಪಾತ್ರ ಅಗ್ರಮಾನ್ಯವಾದದ್ದೆನ್ನುವುದರಲ್ಲಿ ಸಂದೇಹವಿಲ್ಲ. ಇವುಅವರ ದೂರದೃಷ್ಟಿಯನ್ನೂ ಸ್ವೋಪಜ್ಞತೆಯನ್ನೂ ವಿದ್ವತ್‌ಪ್ರೇಮವನ್ನೂ ಸಾರುವ ಶಾಸನಗಳಾಗಿವೆ.

ಇವು ಅವರ ಇತ್ತೀಚಿನ ಸಾಹಸಕ್ರಿಯೆಗಳು. 1950ರಲ್ಲಿ ಅವರು ವಿದ್ಯಾಭ್ಯಾಸ ಮುಗಿಸಿ ಉಡುಪಿಗೆ ಮರಳಿದ ನಂತರ ಕನ್ನಡ ಸಂಘದ ಕಾರ್ಯದರ್ಶಿಯಾಗುತ್ತಾರೆ. ಪ್ರತಿವರ್ಷ ಸಂಘದ ಆಶ್ರಯದಲ್ಲಿ ನಾಡಹಬ್ಬಗಳು ನಡೆಯುತ್ತವೆ; ಕರ್ನಾಟಕದ ಸಾಹಿತಿಗಳು ಉತ್ಸವದಲ್ಲಿ ಬಂದು, ಕೃಷ್ಣದರ್ಶನ ಮುಗಿಸಿ, ಭಟ್ಟರ ಆತಿಥ್ಯದ ಸವಿನೆನಪುಗಳೊಡನೆ ತಮ್ಮ ಊರುಗಳಿಗೆ ಹಿಂತಿರುಗುತ್ತಾರೆ. ಬರಬರುತ್ತ, ಕನ್ನಡ ಸಂಘದ ಕಾರ್ಯಕರ್ತರಲ್ಲಿ ನಿರುತ್ಸಾಹ ತಲೆದೋರಿದ್ದರಿಂದ, ಕಾಲೇಜಿನ ಭಾಷಾಸಂಘದ ಕಾರ್ಯಕ್ರಮಗಳಿಗೆ ಅವರು ತಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸುತ್ತಾರೆ. ಪ್ರತಿವರ್ಷವೂ ಮೂರು ದಿನಗಳ ಕವಿ ಮುದ್ದಣ್ಣನ ಉತ್ಸವವನ್ನು ಅದ್ದೂರಿಯಿಂದ ಆಚರಿಸುತ್ತಾರೆ. ಪುರಂದರದಾಸ-ಕನಕದಾಸರ ಶತಮಾನೋತ್ಸವವನ್ನು ಆಚರಿಸುವ ಮೂಲಕ ಅದಕ್ಕೊಂದು ಸ್ಥಾಯಿರೂಪವನ್ನು ಕಲ್ಪಿಸುತ್ತಾರೆ.

1960ನೆಯ ಇಸವಿಯ ಡಿಸೆಂಬರ್ ತಿಂಗಳಿನಲ್ಲಿ ನಡೆದ ನಲವತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಳನ ಅವರ ಸಂಘಟನ ಕೌಶಲಕ್ಕೆ ದ್ಯೋತಕವಾಗಿದೆ. ಮಾತ್ರವಲ್ಲ, ಅವರ ತಾಳ್ಮೆ ಸಹನೆ ಮತ್ತು ಸಮಯಪ್ರಜ್ಞೆಗಳಿಗೆ ಸವಾಲಾಗುತ್ತದೆ. ಪೈಗಳ ಆಶೀರ್ವಾದದ ರಕ್ಷೆಯಲ್ಲಿ ನಡೆದ ಆ ಉತ್ಸವಕ್ಕೆ ಸೌಕರ್ಯಗಳ ಕೊರತೆಯಿರಲಿಲ್ಲ. ನಿಜ. ಕರ್ನಾಟಕದ ನಾನಾ ಭಾಗಗಳಿಂದ ಎಂದಿಗಿಂತ ಅಧಿಕ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದ ಸಮ್ಮೇಳನ ಅದ್ದೂರಿಯಾಗಿ ನಡೆಯಿತು. ಆದರೆ ಪರಿಷದಧ್ಯಕ್ಷ ಮತ್ತು ಸಮ್ಮೇಳನಾಧ್ಯಕ್ಷರ ನಡುವೆ ದೀರ್ಘಕಾಲದಿಂದ ಗುಪ್ತಗಾಮಿಯಾಗಿ ಹರಿಯುತ್ತಿದ್ದ ವಿರಸ-ವಿಡ್ಡೂರಗಳು ತಮ್ಮ ಕ್ರೂರದಂಷ್ಟ್ರನಖಿಗಳನ್ನು ಸಮ್ಮೇಳನ ಸಮಯದಲ್ಲಿ ಹೊರಕ್ಕೆ ಚಾಚಿದುವು. ಹರಿದಾಸ ಭಟ್ಟರು ಕುರಿದಾಸ ಭಟ್ಟರೆಂದು ಕರೆಸಿಕೊಂಡದ್ದೂ ಆಯಿತು. ಕ್ರಿಶ್ಚಿಯನ್ ಮತ ಮೊತ್ತಮೊದಲು ತಲೆ ಹಾಕಿದ್ದು ದಕ್ಷಿಣ ಕನ್ನಡದಲ್ಲಿ ತಾನೆ. ಬೈಬಲ್ಲಿನಲ್ಲಿ ಕುರಿಗಳಿಗೆ ವಿಶೇಷ ಪ್ರಾಶಸ್ತ್ಯವುಂಟಷ್ಟೆ. ಅರಿತೋ ಅರಿಯದೆಯೋ ಭಟ್ಟರಿಗೆ ಕಟ್ಟಿ ಬಿರುದು ಸಾರ್ಥಕವಾಯಿತು. ಇದೆಲ್ಲ ಏನೇ ಇರಲಿ, ಸಮ್ಮೇಳನ ಇನ್ನಿಲ್ಲ ಮುನ್ನಿಲ್ಲವೆಂಬಂತೆ ಜರುಗಿತು. ಅದು ಹರಿದಾಸ ಭಟ್ಟರ ಖ್ಯಾತಿಯನ್ನು ಕರ್ನಾಟಕದೊಳಗೆ ಮತ್ತು ಆಚೆ

1. ಪ್ರವೃತ್ತ ಪು 83; 2. ಅದೇ, ಪು 22

ಡಂಗುರಿಸಿತು. ಈ ಸಂದರ್ಭದಲ್ಲಿ ಅವರ ಭುಜಕ್ಕೆ ಭುಜಕೊಟ್ಟು ಸಹಕರಿಸಿದವರು ಕೆ. ಪ್ರಭಾಕರ ಪೈ ಮತ್ತು ಪ್ರೊ। ಬಿ.ವಿ. ಆಚಾರ್ಯರು.

ಹರಿದಾಸ ಭಟ್ಟರ ವ್ಯಕ್ತಿತ್ವದ ಮೇಲೆ ನಿಚ್ಚಳವಾದ ಪ್ರಭಾವ ಬೀರಿದವರೆಂದರೆ ಶಿವರಾಮ ಕಾರಂತರು. ಭಟ್ಟರು ಬುದ್ಧಿ ಕಲಿಯುತ್ತಿದ್ದಂತೆಯೇ ಅವರಿಗೆ ಗೊತ್ತಿಲ್ಲದಂತೆಯೇ ಅನಿಮಿತ್ತ ಬಂಧುವೆಂಬಂತೆ, ಕಾರಂತರು ಅವರ ಬದುಕಿನಲ್ಲಿ ಸೇರಿಕೊಳ್ಳುತ್ತಾರೆ. ಕಾರಂತರ ಆತ್ಮಪರಿಚಯವಾದ ಹಲವು ದಿನಗಳ ನಂತರ ಅವರ ಭೌತಿಕ ಪರಿಚಯವಾಗುತ್ತದೆ. ಆಕಸ್ಮಿಕತಾ ನಿಯಮಕ್ಕೆ ಇದೂ ಒಂದು ಸ್ಪಷ್ಟ ಉದಾಹರಣೆ. ಮೊದಮೊದಲು ತಮ್ಮ ಮನದವರಾದ ಕಾರಂತರು ಭೌತಿಕ ಪರಿಚಯವಾದ ನಂತರ ಅವರ ಮನೆಯವರಾಗುತ್ತಾರೆ. ಅಂದರೆ ಉಡುಪಿಗೆ ಬಂದಾಗಲೆಲ್ಲ ಹರಿದಾಸ ಭಟ್ಟರ ಮನೆಯೇ ಅವರ ಮನೆಯಾಗುತ್ತದೆ. ಕಾರಂತರಿಗೆ ಅರವತ್ತು ತುಂಬಿದ ಸಮಯದಲ್ಲಿ, ಅಂದರೆ 1962ರಲ್ಲಿ 'ಕಾರಂತ ಅರವತ್ತು' ಎಂಬ ಅಭಿನಂದನ ಗ್ರಂಥವನ್ನೂ, ಒಂದು ನಿಧಿಯನ್ನೂ ಮಿತ್ರರ ನೆರವಿನಿಂದ ಅವರಿಗರ್ಪಿಸುತ್ತಾರೆ. 'ಕಾರಂತ ಅರವತ್ತು' ಸಮಾರಂಭ ಭಟ್ಟರಿಗೆ ತೃಪ್ತಿ ಕೊಡಲಿಲ್ಲ. 1969ರಲ್ಲಿ ಅವರು 'ಕಾರಂತ ಪ್ರಪಂಚ'ವೆಂಬ ಆರುನೂರು ಪುಟಗಳ ಬೃಹತ್ ಅಭಿನಂದನ ಗ್ರಂಥವನ್ನು ಸಿದ್ಧಗೊಳಿಸಿ, ದೊಡ್ಡ ಹಬ್ಬವನ್ನೇ ಆಚರಿಸುತ್ತಾರೆ. ಅದೇ ಸಮಯದಲ್ಲಿ ಕಾರಂತರಿಗೆ ಪ್ರಿಯವಾದ ಯಕ್ಷಗಾನ ವಿಚಾರಗೋಷ್ಠಿಯೂ ಜರಗುತ್ತದೆ. ಕಾರಂತರ ಹೆಸರಿನ ಬಂಡವಾಳ, ಹರಿದಾಸ ಭಟ್ಟರ ಶ್ರಮ ಮತ್ತು ಕೃಷ್ಣಭಟ್ಟ ಮೊದಲಾದ ಮಿತ್ರರ ಸಹಕಾರದಿಂದಾಗಿ, ಪೈಗಳ ಆಶೀರ್ವಾದದಿಂದಾಗಿ ಕಾರಂತೋತ್ಸವ ಸಾಹಿತ್ಯ ಸಮ್ಮೇಳನವನ್ನು ನೆನಪಿಗೆ ತಂದುಕೊಡುವ ವೈಭವೋಪೇತ ಉತ್ಸವವಾಗಿ ಕಣ್ಮನಗಳಿಗೆ ತುಷ್ಟಿಪುಷ್ಟಿಗಳನ್ನು ನೀಡುತ್ತದೆ. ಸುನೀತಿ ಕುಮಾರ ಚಟರ್ಜಿಯವರು ಉತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಲಾಗಿ, ಎರಡು ದಿನಗಳ ಹಬ್ಬಕ್ಕೆ ಕಳೆಯೇರುತ್ತದೆ.

ನನ್ನಂಥವರು ಮರೆಯಲಾಗದ ಮತ್ತೊಂದು ಸಂಗತಿಯೆಂದರೆ 1978ರಲ್ಲಿ ಭಟ್ಟರು ವ್ಯವಸ್ಥೆಗೊಳಿಸಿದ ಅಖಿಲ ಭಾರತೀಯ ಸ್ಥಳನಾಮ ಸಂಘದ ವಾರ್ಷಿಕ ಸಮ್ಮೇಳನ. ನನ್ನ ಮತ್ತು ಭಟ್ಟರ ಸ್ನೇಹ ಅನಾದಿಯಾದದ್ದೆಂದೇ ನನ್ನ ಭಾವನೆ. ಮುಗ್ಧ, ಶುದ್ಧ, ನಿರ್ಮಲ, ನಿರ್ವಿಕಾರ, ನಿಸ್ವಾರ್ಥ, ನಿಷ್ಕಾಮ, ಸ್ನೇಹವನ್ನು ನಾನು ಈ ಜನ್ಮದಲ್ಲಿ ಕಂಡದ್ದು ಅವರಲ್ಲಿಯೇ, ಅವರೊಬ್ಬರಲ್ಲಿಯೇ. ಅವರು ಉಪಾಯ ವೇದಾಂತಿಯೂ ಅಲ್ಲ, ಅನುಕೂಲ ಸಿಂಧುವೂ ಅಲ್ಲ, ಅಧಿಕಾರ ಕೈಂಕರ್ಯದ ಮಾನಹೀನರೂ ಅಲ್ಲ. ನಾನು ಅಧಿಕಾರದಲ್ಲಿದ್ದಾಗ ಮೆಚ್ಚಿಪಟ್ಟರು; ಅಧಿಕಾರ ಬಿಟ್ಟ ಮೇಲೂ ನನ್ನನ್ನಷ್ಟೇ ಪ್ರೀತಿಯಿಂದ ನೋಡಿಕೊಂಡರು. ಸ್ಥಳನಾಮ ಸಂಘದ ಪ್ರಪ್ರಥಮ ವಾರ್ಷಿಕ ಸಮ್ಮೇಳನವನ್ನೆಲ್ಲಿ ನಡಸುವುದೆಂದು ನಾನು ಚಿಂತಿಸುತ್ತಿದ್ದಾಗ, 'ನಾನಿದ್ದೇನೆ. ನಿಮಗೇಕೆ ಚಿಂತೆ?' ಎಂದು ನನ್ನ ತಲೆಯ ಭಾರವನ್ನು ಇಳಿಸಿದವರು ಅವರು. ಅಷ್ಟು ಹೊತ್ತಿಗೆ ಪ್ರಾಂಶುಪಾಲ ಹುದ್ದೆಯಿಂದವರು ನಿವೃತ್ತರಾಗಿದ್ದರು. ಆದರೂ ಕಾಲೇಜಿನ ಗೆಳೆಯರ ಸ್ನೇಹ ಸಹಕಾರಗಳಿಂದ ಅತ್ಯಂತ ಯಶಸ್ವಿಯಾಗಿ ಸಮ್ಮೇಳನವನ್ನು ನಡಸಿಕೊಟ್ಟು, ಮುಂದಿನ ಸಮ್ಮೇಳನಗಳಿಗೆ ನಾಂದಿ ಹಾಡಿದರಲ್ಲದೆ, ಸಂಘ ಭದ್ರವಾಗಿ ಬೇರೂರುವಂತೆ ಹಾರೈಸಿ, ಹರಸಿದರು. ಮೊದಲನೆಯ ಸಮ್ಮೇಳನವಾದರೂ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗಿನ ರಾಷ್ಟ್ರದ ಎಲ್ಲ ರಾಜ್ಯಗಳಿಂದ – ಸ್ಥಳನಾಮ ತಜ್ಞರು ಬಂದು, ಸಮ್ಮೇಳನವನ್ನು ಸಾರ್ಥಕಗೊಳಿಸಿದರು. ಕರ್ನಾಟಕದ ಹೊರಗಿನ ವಿದ್ವಾಂಸರು ಸಮ್ಮೇಳನದ ವ್ಯವಸ್ಥೆಯ ಅಚ್ಚುಕಟ್ಟನ್ನು ಮನಸಾರೆ ಪ್ರಶಂಸಿಸಿದರು. ಅಂದು ಹರಿದಾಸ ಭಟ್ಟರು ಮಂತ್ರಿಸಿ ಬಿಟ್ಟಿದ್ದ ಈ ಜನ್ನಗುದುರೆ ಊರೂರುಗಳಲ್ಲಿ ಯಶಸ್ವಿಯಾಗಿ, ಸಾರ್ಥಕವಾಗಿ ವಿಜಯಕೇತನವನ್ನು ಹಾರಿಸಿ, ಮುಂದುವರಿಯುತ್ತಿದೆ.

ಜಾನಪದ ರಂಗಕಲೆಗಳ ಮಾಹಿತಿ ಕೇಂದ್ರ ಹರಿದಾಸ ಭಟ್ಟರ ಕಿರೀಟದಲ್ಲಿರುವ ಮತ್ತೊಂದು ವಜ್ರ. ಫೋರ್ಡ್ ಪ್ರತಿಷ್ಠಾನದ ಪ್ರತಿನಿಧಿಗಳು 1982ರಲ್ಲಿ ನಡೆದ ಯಕ್ಷಗಾನ ಶಿಬಿರವನ್ನು ನೋಡುವ ಸಲುವಾಗಿ ಉಡುಪಿಗೆ ಬಂದರು; ನೋಡಿ ನಲಿದರು; ಅಲ್ಲಿಯ ಜನರ ಸಾಮರ್ಥ್ಯವನ್ನು ಕಂಡು ಬೆರಗಾದರು; ಜಾನಪದ ಲೋಕದ ಸಮೀಕ್ಷೆಯನ್ನು ಪೂರೈಸಲು ಸಾಧ್ಯವೆ? ಎಂದು ಸವಾಲೆಸೆದರು; ಪೈಗಳ ಗರಡಿಯಲ್ಲಿ ತಯಾರಾದ ಭಟ್ಟರ ಕೋಶದಲ್ಲಿ ಅಸಾಧ್ಯ ಎನ್ನುವ ಪದವಿಲ್ಲವಷ್ಟೆ. ಅವರು ಅಸ್ತು ಎಂದರು. ಯೋಜನೆ ಸಿದ್ಧವಾಯಿತು; ಅನುದಾನ ಒದಗಿದ್ದಾಯಿತು; ಮಾಹಿತಿ ಕೇಂದ್ರ ಪ್ರಾರಂಭವಾಯಿತು; ಲಾಂಗೂಲದಂತೆ ಬೆಳೆಯಿತು; ಇಡೀ ಕರ್ನಾಟಕದ ಜಾನಪದ ಲೋಕ ರೋಮಾಂಚನಗೊಂಡಿತು. ಭೂತಾರಾಧನೆಯ ಬಗ್ಗೆ, ವಾದ್ಯಗಳ ಬಗ್ಗೆ, ನಾಗಮಂಡಲದ ವೈದ್ಯರ ಬಗ್ಗೆ, ಸಣ್ಣಾಟಗಳ ಬಗ್ಗೆ ಅಧಿಕೃತ ಪುಸ್ತಕಗಳು ಹೊರಬಿದ್ದುವು. ಹುಟ್ಟೂರಿನ ಕೆಲವರಿಗೆ ಪ್ರಾಯಶಃ ವೈಯಕ್ತಿಕ ಅಸೆ-ಅಮಿಷಗಳಿಂದಾಗಿ ಕಣ್ಣು ಕಿಸುರಾಗಿದ್ದರೂ ಗಡಿಯಾಚೆಗಿನ ವಿದೇಶೀಯ ತಜ್ಞರು ಅಲ್ಲಿ ನಡೆಯುವ ಕೆಲಸಗಳನ್ನು ಮನಸಾರೆ ಮೆಚ್ಚಿಕೊಂಡಿದ್ದಾರೆ.

— ೬ —

ಹರಿದಾಸ ಭಟ್ಟರ ಕಾರ್ಯಕ್ಷೇತ್ರ ಉಡುಪಿ ಕರ್ನಾಟಕಗಳಿಗಿಂತ ವಿಶಾಲವಾದದ್ದು; ಭಾರತದ ಗಡಿಯನ್ನು ದಾಟಿ, ಎರಡು ಭೂಖಂಡಗಳನ್ನು ಆಲಿಂಗಿಸಿಕೊಂಡಿರುವಂಥದ್ದು. ತಾನು ಮುಟ್ಟಿದ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ಏಕಪ್ರಕಾರವಾದ ಖ್ಯಾತಿ ಯಶಸ್ಸುಗಳನ್ನವರು ಸಂಪಾದಿಸಿಕೊಂಡಿದ್ದಾರೆ. ಅವರ ಕಾರ್ಯಕ್ಷೇತ್ರ ಅಸೀಮವಾದದ್ದು ಮಾತ್ರವಲ್ಲ, ಬಹುಮುಖವಾದದ್ದೂ ಅಹುದು. ಅವರ ಜೀವನ ಬಹುಮುಖ ವ್ಯಾಪ್ತಿಯಿಂದಾಗಿ ಐವತ್ತು ವರ್ಷಗಳ ನಂತರದ ಜನ ಹರಿದಾಸ ಭಟ್ಟ ಎಂಬ ಹೆಸರಿನಲ್ಲಿ ಪ್ರಖ್ಯಾತಿ ಪಡೆದ ಮೇಧಾವಿಗಳು ಇಬ್ಬರೇ, ಮೂವರೇ ಎಂದು ಶಂಕಿಸಲವಕಾಶವಿದೆ. ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದು, ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನ ಪ್ರಾಂಶುಪಾಲರಾಗಿದ್ದು, ಅದರ ಏಳ್ಗೆಗೆ ದುಡಿದ ವಿದ್ವಾಂಸರೇ ಕೆ.ಎಸ್. ಹರಿದಾಸ ಭಟ್ಟರೆಂದೂ, ಜಾನಪದ ರಂಗಕಲೆಗಳ ಪ್ರಯೋಗಾಭಿವೃದ್ಧಿಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡು, ಊರೂರುಗಳಿಗೆ ದೇಶವಿದೇಶಗಳಿಗೆ ಕಲಾತಂಡಗಳನ್ನು ಕರೆದೊಯ್ದು, ಅಲ್ಲಲ್ಲಿ ಕರ್ನಾಟಕ ಸಂಸ್ಕೃತಿಯ ಭವ್ಯ ನಿಕೇತನವನ್ನು ಹಾರಿಸಿದ ಹರಿದಾಸ ಭಟ್ಟರೇ ಬೇರೆಯವರೆಂದೂ, ಸಮುದ್ರದ ಉಪ್ಪಿಗೂ, ಬೆಟ್ಟದ ನೆಲ್ಲಿಗೂ ಎಲ್ಲಿಗೆಲ್ಲಿಯ ಸಂಬಂಧ, ಅರ್ಥಶಾಸ್ತ್ರಕ್ಕೂ ಸಾಹಿತ್ಯಕ್ಕೂ ಯಾವ ಬಾದರಾಯಣ ಸಂಬಂಧವಿದ್ದೀತು, ಆದ್ದರಿಂದ ಸಾಹಿತಿ ಕು.ಶಿ. ಹರಿದಾಸ ಭಟ್ಟರೇ ಪ್ರತ್ಯೇಕವೆಂದೂ ಮುಂದಿನ ಜನ ಚರ್ಚಿಸುವುದಾದರೆ ಸೋಜಿಗಗೊಳ್ಳಬೇಕಾಗಿಲ್ಲ.

ಸ್ವಾನುಭವಗಳ ಕಲಾಪೂರ್ಣ ಬಂಧುರ ರಚನೆಯೇ ಸಾಹಿತ್ಯವೆನ್ನುವುದಾದರೆ ಕುಶಿಯವರು ಉತ್ತಮ ಸಾಹಿತಿಯೆನ್ನುವಲ್ಲಿ ಸಂಶಯವಿಲ್ಲ. ಆತ್ಮ ಮುಖದರ್ಶನದಲ್ಲಿಯೇ ನಲಿದಾಡುತ್ತ, ತಮ್ಮ ಪುಸ್ತಕಗಳ ಓದಿನಲ್ಲಿಯೇ ಸುಖಪಡುತ್ತ, ಪರರು ಏನು ಬರೆದಾರೆಂದು ಅಹಂಕಾರದಿಂದ ಬೀಗುವ ಸ್ವಗ್ರಂಥ ಭ್ರಾಂತರಿಗೆ ಹರಿದಾಸಭಟ್ಟರ ಸಾಹಿತ್ಯ ಕೃಷಿಯ ಹೆಚ್ಚುಗಾರಿಕೆ ಅರ್ಥವಾಗದು. ಹರಿದಾಸ ಭಟ್ಟರ ಸಾಹಿತ್ಯದ ವಿಸ್ತಾರ ವೈವಿಧ್ಯವನ್ನು ಪರಿಶೀಲಿಸುವಾಗ, ಅವರು ಇತರ ಕಾರ್ಯಕ್ಷೇತ್ರಗಳಲ್ಲಿ ಅಭಿವ್ಯಕ್ತಿರುವ ಸೃಜನಶೀಲ ಸಾಮರ್ಥ್ಯವನ್ನಾಗಲೀ ಪ್ರತಿಭಾ ಸಂಪನ್ನತೆಯನ್ನಾಗಲೀ ಮರೆಯುವಂತಿಲ್ಲ. ಅವರ ಪ್ರತಿಭೆಯ ಪ್ರವಾಹ ಒಂದೇ ಒಂದು ಕಾಲುವೆಗೆ ಸೀಮಿತಗೊಳ್ಳದೆ, ಹಲವು ಕಾಲುವೆಗಳ ಮೂಲಕ ಹರಿದು, ಹಲವು ಕ್ಷೇತ್ರಗಳ ಅಭಿವೃದ್ಧಿಗೆ ಕಾರಣವಾಗಿದೆಯೆನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ತುಳು ನಿಘಂಟು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಹಾಗೂ ಜಾನಪದ ರಂಗಕಲೆಗಳ ಕೇಂದ್ರ –ಈ ಒಂದೊಂದೂ ಅವರ ಪ್ರತಿಭೆಯ ಶಿಶುಗಳೆನ್ನಲಡ್ಡಿಯಿಲ್ಲ.

ಸಾಹಿತ್ಯ ಕಲೆ ಅವರ ಮೂಲಭೂತ ಪ್ರವೃತ್ತಿಯಾಗಿದೆ ಮಾತ್ರವಲ್ಲ, ಅವರ ಜೀವನದ ಒಂದು ಭಾಗವಾಗಿದೆ. ಯಕ್ಷಗಾನದ ಮಣ್ಣಿನಲ್ಲಿ ಹುಟ್ಟಿದ ಅವರು ತಾಯಿಯ ಎದೆ ಹಾಲಿನೊಡನೆ ಸಾಹಿತ್ಯದ ರುಚಿಯನ್ನು ಸಹ ಸವಿಯುತ್ತಾರೆ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಸಾಹಿತ್ಯ ವ್ಯಾಸಂಗ ಅವರ ಹವ್ಯಾಸವಾಗುತ್ತದೆ. ವಿದ್ಯಾರ್ಥಿಗಳು ಸಿದ್ಧಪಡಿಸುತ್ತಿದ್ದ ಹಸ್ತಪತ್ರಿಕೆಗೆ ಲೇಖನಗಳನ್ನು ಬರೆಯುವ ಕಾಲದಿಂದಲೇ ಅವರ ಸಾಹಿತ್ಯ ವ್ಯವಸಾಯ ಪ್ರಾರಂಭವಾಗುತ್ತದೆ. ಇತರ ಚಟುವಟಿಕೆಗಳು ಅವರ ಕನಸಿನಲ್ಲಿ ಸಹ ಮೈದೋರುವ ಮುನ್ನವೇ ಸಾಹಿತ್ಯ ದೇವಿಯ ವಾತ್ಸಲ್ಯ ಅವರ ಮೇಲೆ ಸತತವಾಗಿ ಸೂಸುತ್ತದೆ. ಮೈಥಿಲೀಶರಣ ಗುಪ್ತರ 'ಸಾಕೇತ'ದ ಭಾಗಗಳನ್ನವರು ಹಿಂದಿಯಿಂದ ಕನ್ನಡಕ್ಕೆ ಭಾಷಾಂತರಿಸುತ್ತಾರೆ. ಅವು 'ಜೀವನ'ದಲ್ಲಿ ಪ್ರಕಟಗೊಂಡಾಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ಅವರ ಸಾಹಿತ್ಯ ಕೃಷಿ ಪ್ರಾರಂಭವಾದದ್ದೇ ಭಾಷಾಂತರ ಪ್ರಕಾರದ ಮೂಲಕ. ಪ್ರೇಮ್‌ಚಂದ್‌ರ 'ಗಬನ್' ಕಾದಂಬರಿ ಅವರ ಮೂಲಕ 'ರಮಾನಾಥ' ಎಂಬ ಹೆಸರಿನಿಂದ ಕನ್ನಡದಲ್ಲವತರಿಸಿತು, 1943ರಲ್ಲಿ. ಕುವೆಂಪು ಅವರ 'ಸ್ವಾಮಿ ವಿವೇಕಾನಂದ' ಜೀವನ ಚರಿತ್ರೆಯನೋದಿದ್ದ ಅವರು ಆ ಕೃತಿಯ ಶೈಲಿಗೆ ಬೆರಗಾದದ್ದಲ್ಲದೆ, ಅದನ್ನನುಕರಿಸಲು ಶ್ರಮಿಸುತ್ತಾರೆ. ಪ್ರಕಾಶಕರು ಗ್ರಂಥಕರ್ತರಿಗೆಷ್ಟು ಅನ್ಯಾಯ ಮಾಡುತ್ತಾರೆಂಬುದಕ್ಕೆ ಅವರನ್ನು ಹೇಳದೆ ಕೇಳದೆ 'ರಮಾನಾಥ' ಕಾದಂಬರಿಯನ್ನು 'ಚಂದ್ರಾಹಾರ'ವೆಂಬ ಹೆಸರಿನಲ್ಲಿ ಎರಡನೆಯ ಬಾರಿಗೆ ಮುದ್ರಿಸಿಕೊಂಡದ್ದೇ ಸಾಕ್ಷಿಯಾಗಿದೆ. ಹೊನ್ನಯ್ಯ ಶೆಟ್ಟರು ನಡೆಸುತ್ತಿದ್ದ ಪತ್ರಿಕೆಗಳಲ್ಲಿ, ಅದರಲ್ಲಿಯೂ ಮುಖ್ಯವಾಗಿ 'ಅಂತರಂಗ'ವೆಂಬ ಪುಸ್ತಕ ಪತ್ರಿಕೆಯಲ್ಲಿ ಭಟ್ಟರ 'ವರ್ತಮಾನ ಕಾಲದ ನಾಲ್ವರು ಮಹಾನುಭಾವರು' (ಜೀವನ ಚರಿತ್ರೆ), 'ಕಾಲವೇ ಬದಲಾಗಿದೆ' (ಕಥೆ), ಮತ್ತು 'ಘಂಟಮಾರಾ' (ಅನುವಾದಿತ ಕಾದಂಬರಿ)ಗಳು ಬೆಳಕು ಕಂಡುವು. 'ಯುಗವಾಣಿ' ಎಂಬ ಅವರ ಏಕೈಕ ಕವಿತಾಗುಚ್ಛವೂ ಪ್ರಕಟಣೆಗೊಂಡದ್ದೂ ಅಲ್ಲಿಯೇ. ಮುದ್ದಣನ ನಾಡಿನಲ್ಲಿ ಹುಟ್ಟಿದ ಅವರಿಗಷ್ಟು ಹೊತ್ತಿಗೆ 'ಪದ್ಯಂ ವಧ್ಯಂ, ಗದ್ಯಂ ಹೃದ್ಯಂ' ಎಂಬ ಸುಭಾಷಿತ ರಕ್ತಗತವಾಗಿರಬೇಕೆಂದು ತೋರುತ್ತದೆ. ಗದ್ಯಕೃತಿಗಳಿಂದ ಮಾತ್ರವಲ್ಲ, ಅನುವಾದಿತ ಕೃತಿಗಳಿಂದ ಒಂದು ಭಾಷೆ ವ್ಯಾಪಕವಾಗಿ ಬೆಳೆಯುತ್ತದೆ, ಸಾಹಿತ್ಯ ಹೊರವಾಗುತ್ತದೆ, ಸಂಸ್ಕೃತಿ ವಿಶಾಲವಾಗುತ್ತದೆಂಬ ಸತ್ಯ ಸಂಗತಿ ಹೊಳೆದಾಗ ಅವರು ಡ್ಯೂಯಿಯ 'ಶಿಕ್ಷಣ ಮತ್ತು ಸಂಸ್ಕೃತಿ', 'ಅಮೆರಿಕದ ಆರು ಕತೆಗಳು',

ಕೊಸ್ಲರನ 'ನಡುಹಗಲಲ್ಲಿ ಕಗ್ಗತ್ತಲು' ಕೃತಿಗಳನ್ನು ಭಾಷಾಂತರಿಸಿ, ಗದ್ಯ ರಚನೆಯಲ್ಲಿ ಅಪೂರ್ವ ಪ್ರೌಢಿಮೆಯನ್ನು ಸಾಧಿಸಿದರಲ್ಲದೆ, ಕನ್ನಡವನ್ನು ಶ್ರೀಮಂತಗೊಳಿಸಿದರು.

ಲಕ್ಷ್ಮೀನಾರಾಯಣ ಆಚಾರ್ಯರೊಡನೆ ಅವರು ಅನುವಾದಿಸಿದ ಅಲೆಕ್ಸಿಸ್ ಕೆರೆಲ್‌ನ 'ಮ್ಯಾನ್ ದಿ ಅನ್‌ನೋನ್' ಸುಲಭವಾಗಿ ಭಾಷಾಂತರಕ್ಕೆ ಸಗ್ಗುವಂಥದಲ್ಲ. ಕನ್ನಡ ಜಾಯಮಾನಕ್ಕೊಗ್ಗುವಂತೆ ಅದನ್ನು ಭಾಷಾಂತರಿಸಿದ್ದು ಅನುವಾದಕರ ಭಾಷಾಕೌಶಲದ ಪರಿಪಕ್ವ ಸ್ಥಿತಿಗೊಂದು ನಿದರ್ಶನವಾಗಿದೆ. ಮೂಲಗ್ರಂಥಕರ್ತನ ವಿಷಯ ವಿಚಾರಗಳ ಗಹನತೆಯಿಂದಾಗಿ ಅನುವಾದದ ಭಾಷೆಯೂ ಅನಿವಾರ್ಯವಾಗಿ ಕಠಿಣವಾಗುತ್ತದೆ. 'ಪ್ರಜಾತಂತ್ರದ ಹೆದ್ದಾರಿ' ಮತ್ತು 'ಪಟ್ಟಿಯಾದ ಸಂಪತ್ತು'ಗಳು ಸ್ವತಂತ್ರ ವೈಚಾರಿಕ ಶಾಸ್ತ್ರಗ್ರಂಥಗಳಾದ್ದರಿಂದ ಸರ್ವಗ್ರಾಹ್ಯ ಶೈಲಿ ಅವುಗಳ ಯಶಸ್ಸಿನ ರಹಸ್ಯವಾಗಿದೆ.

ಹರಿದಾಸ ಭಟ್ಟರ ಕಾಲಿನಲ್ಲಿ ಚಕ್ರರೇಖೆ ಇರಬೇಕೆಂದು ತೋರುತ್ತದೆ. ಆದ್ದರಿಂದಲೇ ಅವರು ಆಯಾಸ ಬೇಸರಗಳಿಲ್ಲದೆ ದೇಶವಿದೇಶಗಳನ್ನು ಸುತ್ತುತ್ತಾರೆ. ಅಮೆರಿಕಾ ರಷ್ಯಾಗಳಿಲ್ಲದಿದ್ದರೂ ಕೊನೆಗೆ ಕರ್ನಾಟಕವನ್ನು ಸುತ್ತಿ ಬಂದಾಗಲೇ ಅವರ ದೇಹಾರೋಗ್ಯ ಕುದುರುವುದು, ಮಾನಸಿಕಾರೋಗ್ಯ ಚುರುಕಾಗುವುದು. ಅವರಂತೆ ದೇಶವಿದೇಶಗಳಲ್ಲಲೆದಾಡಿದ ಸಾಹಿತಿಗಳು ವಿರಳ. ಅವರಂಥ ಪ್ರವಾಸ ಪ್ರಿಯರೂ ಅಪರೂಪ. ಅವರು ಸರ್ವಸಾಮಾನ್ಯ ಪ್ರವಾಸಿಗಳಂತಿರದೆ, ಜ್ಞಾನತೃಷೆಯ, ಅನುಭವದಾಹದ, ಸೂಕ್ಷ್ಮವೀಕ್ಷಣ ಸಾಮರ್ಥ್ಯದ, ಸಂವೇದನಾಶೀಲದ ವಿಶಿಷ್ಟ ರೀತಿಯ ಪ್ರವಾಸಿಯವರು. ತಾವು ಹೋದೆಡೆಯಲ್ಲೆಲ್ಲ ಅವರು ಮೈಯೆಲ್ಲ ಕಣ್ಣಾಗಿ ಸುತ್ತಮುತ್ತಣ ಜಗತ್ತನ್ನು ವೀಕ್ಷಿಸುತ್ತಾರೆ. ಮೈಯೆಲ್ಲ ಕಿವಿಯಾಗಿ ಅಲ್ಲಿ ನಡೆಯುವ ಸಂಗತಿಗಳನ್ನು ಕೇಳಿಸಿಕೊಳ್ಳುತ್ತಾರೆ; ಮೈಯೆಲ್ಲ ಮನವಾಗಿ ಸರ್ವಸ್ವವನ್ನು ಗ್ರಹಿಸುತ್ತಾರೆ; ತಾವು ಕಂಡು ಕೇಳಿದ, ಗ್ರಹಿಸಿದ ಪ್ರತಿಯೊಂದು ಸಂಗತಿಯೂ ಅವರ ಅನುಭವದ ಭಾಗವಾಗುತ್ತದೆ. ಅನುಭವ ತೀವ್ರವಾದಾಗ ಬರಹವಾಗಿ ಹೊರಹೊಮ್ಮುತ್ತದೆ. ಅದು ಬರಹದಲ್ಲವತರಿಸುವ ತನಕ ಅವರ ಮನಸ್ಸು ಚಡಪಡಿಸುತ್ತದೆ; ಅದು ಬರಹದಲ್ಲಿಳಿದ ಕೂಡಲೇ ಮನಸ್ಸು ಶಾಂತವಾಗುತ್ತದೆ. ಅವರು ಕೈಯಲ್ಲಿ ಲೆಕ್ಕಣಿ ಹಿಡಿದರೆಂದರೆ ಅವರ ಮಾನಸ ಸರೋವರದಲ್ಲಿ ಮಿಂದ ಪ್ರವಾಸಾನುಭವಗಳು ಬರಹದ ಮೂಲಕ ಮೂರ್ತಸ್ವರೂಪವನ್ನು ಪಡೆದು, ಧಾರೆಧಾರೆಯಾಗಿ ಧುಮುಕುತ್ತವೆ; ಯಕ್ಷಗಾನದ ಪಾತ್ರಧಾರಿಗಳಂತೆ ವರ್ಣರಂಜಿತವಾಗಿ ಪುಸ್ತಕರಂಗದ ಮೇಲೆ ಪ್ರತ್ಯಕ್ಷವಾಗುತ್ತವೆ.

ತಾನು ಕಂಡುಂಡ ಅನುಭವಗಳನ್ನು ಪರರಿಗೂ ಹಂಚಬೇಕೆಂಬ, ಅವುಗಳನ್ನವರೂ ಸವಿಯಬೇಕೆಂಬ ತವಕ ಪ್ರವಾಸ ಕಥನದ ಉದ್ಭವಕ್ಕೆ ಪ್ರೇರಣೆಯಾಗುತ್ತದೆ. ಪ್ರವಾಸಕಥನ ಅನಿವಾರ್ಯವಾಗಿ ಆತ್ಮಕಥನವಾಗುವುದು ಸಹಜ. ಆದರೆ ಪ್ರವಾಸ ಸಾಹಿತಿ ಮಾರ್ಗದರ್ಶಿಯಂತಿರಬೇಕೇ ಹೊರತು ವಾಚಕ ಪ್ರವಾಸಿಗೆ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸದೆ, ಐತಿಹಾಸಿಕ ಸಾಂಸ್ಕೃತಿಕ ಸಂಗತಿಗಳನ್ನು ವಿವರಿಸದೆ, ಸ್ವ-ಪ್ರತಿಷ್ಠೆಯನ್ನು ಮೆರೆಯುವಂತಾಗಬಾರದು. ಪ್ರೇಕ್ಷಣೀಯ ದೃಶ್ಯದ ಮತ್ತು ವಾಚಕ ಪ್ರವಾಸಿಯ ನಡುವೆ ಪ್ರವಾಸ ಸಾಹಿತಿ ಅಡ್ಡಗೋಡೆಯಾಗಿ ನಿಲ್ಲಬಾರದು. ನೋಡಬೇಕಾದ ಸಂಗತಿಗಳು ವಾಚಕ ಪ್ರವಾಸಿಯ ಕಣ್ಣಿಗೆ ಕಟ್ಟಿದಂತಿರಬೇಕು. ಪ್ರವಾಸಿ ಮಾರ್ಗದರ್ಶಿನಿಗಳನ್ನು ತದ್ವತ್ತಾಗಿ ಇಳಿಸದೆ, ಸ್ವಾನುಭವಗಳ, ವಾಸ್ತವ ಸಂಗತಿಗಳ ಮತ್ತು ಚೆಲುವು ನೋಟಗಳ ಸುಂದರ ವಿವರಣೆ ಮತ್ತು ವರ್ಣನೆಗಳಿಗೆ ಮಾತ್ರ ಕಥನ ಮೀಸಲಾಗಿರಬೇಕು. ಸ್ತಬ್ಧ, ನಿರ್ಜೀವ, ನೀರಸ ವರ್ಣನೆಗಳಿಗಿಂತ ಕುತೂಹಲಜನಕ ಘಟನೆಗಳ ವಿವರಣೆಗೆ ವಿಶೇಷ ಗಮನಹರಿಸಬೇಕು. ಅನಾವಶ್ಯಕವಾದ ಪಟ್ಟಿ ವಿವರಣೆಗಳಿಗೆ ದಿಗ್ಬಂಧನ ಹಾಕಬೇಕು. ನಿರ್ಜಟಿಲತೆ, ನಿಷ್ಕುಟಿಲತೆ ಮತ್ತು ನಿಸ್ಸಂಕೀರ್ಣತೆಗಳು ಕಥನ ಶೈಲಿಯ ಹೆಗ್ಗುಣಗಳೆಂಬುದನ್ನು ಕಥನಕಾರ ಮರೆಯಲಾಗದು. ವಾಚನದ ಮೂಲಕ ವಾಚಕ ಪ್ರವಾಸಿ ವಿವಿಧ ದೇಶ ಜನಾಂಗಗಳ ಬಗ್ಗೆ ಸ್ವಂತ ಅಭಿಪ್ರಾಯವನ್ನು ರೂಪಿಸಿಕೊಳ್ಳುವಂತಿರಬೇಕೇ ಹೊರತು, ಪ್ರವಾಸ ಸಾಹಿತಿ ತನ್ನ ಅಭಿಪ್ರಾಯವನ್ನು ಸಂಪೂರ್ಣವಾಗಿ ಅವನ ಮೇಲೆ ಹೇರುವಂತಾಗಬಾರದು. ತನ್ನೊಡನೆ ವಾಚಕರನ್ನು ಕರೆದೊಯ್ಯಲು, ತನ್ನಂತೆಯೇ ಅವರೂ ಅನುಭವಗಳನ್ನು ಗಳಿಸಲು ಸಾಧ್ಯವಾಗುವಂತೆ ಸಾಹಿತಿ ಅವರ ಮನಸ್ಸನ್ನು ಸಿದ್ಧಗೊಳಿಸಬೇಕು. ಹರಿದಾಸ ಭಟ್ಟರ ವಿಪುಲ ಪ್ರಮಾಣದ ಪ್ರವಾಸ ಸಾಹಿತ್ಯದಲ್ಲಿ ಈ ಹತ್ತು ಹಲವು ಗುಣಗಳು ಮೇಳೈಸಿವೆಯೆಂದು ಹೇಳಬಹುದಾಗಿದೆ.

ಭಟ್ಟರು ರಚಿಸಿರುವ ಪ್ರವಾಸ ಸಾಹಿತ್ಯ ಕೃತಿಗಳು ನಾಲ್ಕು : ಇಟಾಲಿಯಾ ನಾನು ಕಂಡಂತೆ, ಜಗದಗಲ, ಒಮ್ಮೆ ರಶಿಯಾ ಮತ್ತೊಮ್ಮೆ ಇಟಾಲಿಯಾ, ಮತ್ತು ರಂಗಾಯನ. 1962ರಲ್ಲಿ ಆರಂಭವಾದ ವಿದೇಶ ಪ್ರವಾಸದ ಸುಖ ಅವರಿಗೆ ಮೇಲಿಂದ ಮೇಲೆ ದೊರೆಕೊಳ್ಳುತ್ತದೆ. ಇಟಾಲಿಯಾ ಅವರ ಪಾಲಿಗೆ ಎರಡನೆಯ ತವರು. ಅಲ್ಲಿಯ ಸರ್ಕಾರದ ಶಿಷ್ಯವೃತ್ತಿಯ ಬಲದಿಂದಾಗಿ, ಅವರ ವಿದೇಶ ಪ್ರವಾಸಕ್ಕೆ ಗರಿ ಮೂಡುತ್ತದೆ. ಒಂದು ಕಡೆ ಒಂದೆರಡು ವರ್ಷವಾದರೂ ನಿಂತ ಹೊರತು, ಅಲ್ಲಿಯ ಭಾಷೆಯನ್ನು ವ್ಯವಹಾರಕ್ಕೊದಗುವಂತೆ ಕಲಿತ ಹೊರತು, ಆ ಪ್ರದೇಶದ ಸಮಗ್ರ ಜೀವನದ ಪೂರ್ಣಾಧ್ಯಯನ ಸಾಧ್ಯವಿಲ್ಲ. ಅವಸರದ ಪ್ರವಾಸಿ ಅಲ್ಲಿಯ ಜೀವನದ ಸ್ಥೂಲ ರೂಪರೇಷೆಗಳನ್ನು ಮಾತ್ರ–ಅದೂ ಅವನು ಸದಾ ಎಚ್ಚರವಾಗಿರುವುದಾದರೆ ಮಾತ್ರ–ರೇಖಿಸಲು ಸಾಧ್ಯ

ವಾಗುತ್ತದೆ. ಆದರೆ ಭಟ್ಟರು ಇತಾಲಿಯಾಕ್ಕೆ ಮೇಲಿಂದ ಮೇಲೆ ಹೋಗಿ ಬಂದವರಾದ್ದರಿಂದ, ಅಲ್ಲಿಯ ಜೀವನವನ್ನು ಪೂರ್ಣವಾಗಿ ಅರ್ಥಮಾಡಿಕೊಂಡಿದ್ದಾರೆಂದೇ ಹೇಳಬಹುದಾಗಿದೆ. ಇತಾಲಿಯಾ ಸಮೃದ್ಧ ರಾಷ್ಟ್ರವೇನಲ್ಲ. ತೆಂಕಣ ಭಾಗವಂತು ದಾರಿದ್ರ್ಯದ ಪಂಕದಲ್ಲಿ ಒದ್ದಾಡುತ್ತಿದೆ. 'ದಾರಿದ್ರ್ಯ ಮತ್ತು ಅಜ್ಞಾನ' ಮನುಷ್ಯ ಜನಾಂಗದ ಬೆಂಬಿಡದ ಪರಮ ಶತ್ರುಗಳು. ಒಂದು ಇನ್ನೊಂದಕ್ಕೆ ಪೋಷಕ, ಪ್ರೇರಕ... ಬಡತನ ಎಲ್ಲಾದರೂ ಇರುವ ತನಕ ಶ್ರೀಮಂತ ನಿಜವಾದ ಶ್ರೀಮಂತನಲ್ಲ. ಅವನ ಶ್ರೀಮಂತಿಕೆಗೆ ಅಪಾಯ ತಪ್ಪಿದ್ದಲ್ಲ. ಇದನ್ನು ಸಿಸಿಲಿಯ "ಮಾಫಿಯಾ" ದರೋಡೆ ಕಳ್ಳರ ತಂಡ ಜಗತ್ತಿಗೆ ಡಂಗುರ ಸಾರಿತು' (112) ಎಂದವರು ಇತಾಲಿಯಾವನ್ನು ಕುರಿತು ಹೇಳುವ ಮಾತನ್ನು ಭಾರತಕ್ಕೂ ಅನ್ವಯಿಸಬಹುದು. 'ಕಸಕಡ್ಡಿ ಕೊಳಕು ಈ ಓಣಿಗಳ ವೈಶಿಷ್ಟ್ಯ. ನೂರು ಮಾರಿಗೊಮ್ಮೆ ಶಾಲೆಗೆ ಹೋಗದ ಮಕ್ಕಳ ಗುಂಪು. ಸಿಗರೇಟು ಸೇದಿಕೊಂಡು, ಗಟ್ಟಿಯಾಗಿ ಬೊಬ್ಬಿಡುತ್ತ ಮೋಜಿನಲ್ಲಿರುವ ನೋಟ. ಅವರ ಉಡುಪೋ ಕೊಳೆ ಮೆತ್ತಿಕೊಂಡೇ ಇರುತ್ತಿತ್ತು' (115) – ಇದು ಇಂಡಿಯಾದ ವರ್ಣನೆ ಇದ್ದಂತಿದೆ. ಸ್ವದೇಶದಲ್ಲಿ ಸಿಂಹಗಳಂತೆ ನಾಲಗೆಯಿರುವ ನಮ್ಮ ರಾಜಕೀಯ ನಾಯಕರು ವಿದೇಶಗಳಲ್ಲಿ ಹೇಗೆ ಗ್ರಾಮಸಿಂಹಗಳಂತೆ ವರ್ತಿಸುತ್ತಾರೆಂಬುದನ್ನು ಕುಶಿಯವರು ಮಾರ್ಮಿಕವಾಗಿ ತಿಳಿಸಿದ್ದಾರೆ. (217) ಹರಿದಾಸ ಭಟ್ಟ ಮತ್ತು ರಾಜೀವ ಗಾಂಧಿಯವರು ಇತಾಲಿಯಾ ಮತ್ತು ಇಂಡಿಯಾಗಳ ಸಮಾನ ಬಾಂಧವ್ಯವನ್ನು ಕಂಡುಕೊಂಡಿರುವವರಾದರೂ, ಇತಾಲಿಯಾ ಇಂಡಿಯಾದಿಂದ ಹೇಗೆ ಬೇರೆಯಾಗಿದೆಯೆಂಬುದನ್ನವರು ತಿಳಿಸಿದ್ದಾರೆ. ಇತಾಲಿಯಾ ಪ್ರಾಧ್ಯಾಪಕರಂತೆ ಇಂಡಿಯಾದ ಪ್ರಾಧ್ಯಾಪಕರು ಜನಸಾಮಾನ್ಯರ ಪ್ರಗತಿಯ ಬಗ್ಗೆ ಚಿಂತಿಸದೆ, ಸಕ್ರಿಯವಾಗಿ ಪಾಲ್ಗೊಳ್ಳದೆ, ದೈನಂದಿನ ಜೀವನದ ಮೇಲೆ ಪರಿಣಾಮಕಾರಿಯಾದ ಪ್ರಭಾವ ಬೀರಿರುವುದನ್ನು ಕಂಡು ಚೋದ್ಯಗೊಂಡಿದ್ದಾರೆ (130–131) ಭಾರತೀಯ ಅಧಿಕಾರಿಗಳಲ್ಲಿ ಕಂಡು ಬರುವ ಸ್ವಾರ್ಥಪರಾಯಣತೆ, ಅದಕ್ಷತೆ, ಭ್ರಷ್ಟಾಚಾರ ಮತ್ತು ದೇಶಪ್ರೇಮರಾಹಿತ್ಯಗಳು ಅಲ್ಲಿಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ (167). ಇಷ್ಟಕ್ಕೂ ಸರ್ಕಾರ ಸಹ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಸ್ವದೇಶೀಯರ ಆಚಾರ ವಿಚಾರಗಳನ್ನು ವಿದೇಶೀಯರ ನಡವಳಿಕೆಯೊಡನೆ ಹೋಲಿಸಿದಾಗ ಭಟ್ಟರಂಥ ದೇಶಪ್ರೇಮಿಗೆ ವ್ಯಾಕುಲವಾಗದಿರಲಾರದು. 'ನಾವು ಕಟ್ಟಿರುವ ಮೂರು ಬರಡೆಮ್ಮೆಗಳೆಂದರೆ (ಈಗ ವಾಸ್ತವವಾಗಿ ಎಂಟು) ನಮ್ಮ ವಿಶ್ವವಿದ್ಯಾಲಯಗಳು' (ಜಗದಗಲ, 27) ಎಂಬ ಅವರ ಮಾತು ಉತ್ಪ್ರೇಕ್ಷೆಯೇನಲ್ಲ.

ಭಾರತ ಸರ್ಕಾರದ ಕೃಪಾವರ್ಷ ಸುರಿಯುವುದು ಕೆಲವು ಜನ ಪುಣ್ಯವಂತರ ಮೇಲೆ ಮಾತ್ರ. ಅಂಥ ಪುಣ್ಯವಂತರಲ್ಲಿ ಕುಶಿ ಕಾರಂತರೂ ಇಬ್ಬರು. ಯಕ್ಷಗಾನವನ್ನು ರಾಷ್ಟ್ರೀಯ ಕಲೆಯ ಮಟ್ಟಕ್ಕೇರಿಸಿದ ಕೀರ್ತಿ ಕಾರಂತರಿಗೆ ಸಲ್ಲಬೇಕು; ಅದರಲ್ಲಿ ಕೆಲವು ಭಾಗ ಕುಶಿಯವರಿಗೂ ಸಲ್ಲಬೇಕಾಗಿದೆ. 'ಕಲೆ ಸೃಷ್ಟ್ಯಾತ್ಮಕವಾಗಿ ವರ್ಧಿಸಲು ಪರಂಪರೆಯ ಜ್ಞಾನವೂ ಬೇಕು, ಪ್ರಯೋಗಶೀಲತೆಯೂ ಬೇಕು' ಎಂಬ ಸಿದ್ಧಾಂತ ಈ ಇಬ್ಬರು ಪ್ರತಿಭಾವಂತರಲ್ಲಿ ಎಳೆಯತನದಿಂದಲೇ ರಕ್ತಗತವಾಗಿ ಬಂದಿದೆ. ಕಾರಂತರ ಯಕ್ಷಗಾನ ರಾಷ್ಟ್ರೀಯ ಕಲೆಯಾದದ್ದರಿಂದಲೇ ಕರ್ನಾಟಕದಿಂದಾಚೆ ಭಾರತದಿಂದಾಚೆ ಅದಕ್ಕೆ ಪ್ರಚಾರ ಸಿಗುವಂತೆ ಭಾರತ ಸರ್ಕಾರ ಪ್ರೋತ್ಸಾಹ ನೀಡಿದ್ದು. ಅದು ಪ್ರಪ್ರಥಮವಾಗಿ 1972ರಂದು ಮೇಘಾಲಯವನ್ನು ಪ್ರವೇಶಿಸುತ್ತದೆ. ಅನಂತರದ ದಿನಗಳಲ್ಲಿ ಅದು ಹಾಂಕಾಂಗ್ ಮೂಲಕ ಸರ್ವಸಮೃದ್ಧ ರಾಷ್ಟ್ರ ಜಪಾನನ್ನು ಆಲಿಂಗಿಸಿಕೊಳ್ಳುತ್ತದೆ. ಮುಖ್ಯವಾಗಿ ಯಕ್ಷಗಾನದ ಈ ಯಾತ್ರೆಯೇ 'ಜಗದಗಲ'. 'ನನ್ನದು ಈ ಕನ್ನಡ ನಾಡು' ಎಂಬ ಮೊದಲನೆಯ ಅಧ್ಯಾಯದ ವಿಷಯ ಯಕ್ಷಗಾನ ಯಾತ್ರೆಗೆ ನೇರವಾಗಿ ಸಂಬಂಧಿಸದಿದ್ದರೂ, ಅದಕ್ಕೆ ಪೀಠಿಕೆಯಂತಿದೆ, ಭಿತ್ತಿಯಂತಿದೆ. ಕನ್ನಡ ನಾಡಿನ ಬಗೆಗಿನ ಲೇಖಕರ ಕಕ್ಕುಲತೆ ಅದರಲ್ಲಿ ಅಭಿವ್ಯಕ್ತವಾಗುತ್ತದೆ. ಜಪಾನಿನಂಥ ಅತ್ಯಾಧುನಿಕ ರಾಷ್ಟ್ರದಲ್ಲಿ ಯಕ್ಷಗಾನ ಜಯಭೇರಿ ಬಾರಿಸಿದ್ದು ಅದರ ಹಿರಿಮೆಗೂ ಭವಿಷ್ಯಕ್ಕೂ ಉಜ್ವಲ ಸಾಕ್ಷಿಯಾಗಿದೆ. ಅದರ ಮೆಚ್ಚುಗೆಯಲ್ಲಿ, ಅಧ್ಯಯನದಲ್ಲಿ ಹಾಗೂ ಪ್ರಯೋಗದಲ್ಲಿ ಜಪಾನೀ ವಿದ್ವಾಂಸರು ತೋರಿದ ಅಭಿಮಾನ ಉತ್ಸುಕತೆ ಹಾಗೂ ತಾಂತ್ರಿಕ ಕೌಶಲ ನಿರುಪಮವಾದದ್ದು. ಅಲ್ಲಿಯ ಮಕ್ಕಳ ಶಿಸ್ತು ವರ್ತನೆಗಳು ಇಲ್ಲಿಯವರಿಗೆ ಆಶ್ಚರ್ಯವುಂಟು ಮಾಡಿದ್ದು ಸೋಜಿಗವೇನಲ್ಲ. ಇಂಡಿಯಾಕ್ಕಿಂತಲೂ ಸಾಂದ್ರ ಜನಸಂಖ್ಯೆಯುಳ್ಳ ಆ ನಾಡಿನ ನೈರ್ಮಲ್ಯವನ್ನು ಕಂಡು ಇಲ್ಲಿಯವರು ದಂಗಾಗುವುದು ಸಹಜವೇ. ಯುದ್ಧಾನಂತರದ ಅಲ್ಪಾವಧಿಯಲ್ಲಿ ಔದ್ಯಮೀಕರಣದ ಮೂಲಕ ಸರ್ವೋದಯವನ್ನು ಸಾಧಿಸಿ, ಪರಿಸರ ಮಾಲಿನ್ಯಾದಿ ಸಾಮಾಜಿಕ ಒತ್ತಡಗಳ ನಡುವೆಯೂ ಇಚ್ಛಾಶಕ್ತಿಯನ್ನೂ ಸಂಘಟನಾಶಕ್ತಿ ಸಾಮರ್ಥ್ಯವನ್ನೂ ಅವರು ಪ್ರಕಟಗೊಳಿಸಿದ್ದು ಕೊಂಡಾಟದ ಸಂಗತಿಯಾಗಿದೆ. 'ಇಂಥ ಒಂದು ಸಿದ್ಧಿಯ ನಡುವೆ, ಆಧುನಿಕತೆಯ ನಡುವೆಯೂ ತಮ್ಮ ಪ್ರಾಚೀನ ಪರಂಪರೆ ಬಳುವಳಿ ಕೊಟ್ಟಿರತಕ್ಕ ಸೌಜನ್ಯ, ನಯವಿನಯ ಶಿಷ್ಟಾಚಾರಗಳನ್ನು ನಿತ್ಯಜೀವನದಲ್ಲಿ ಬಳಸುವುದು ಜಪಾನೀ ಜನಜೀವನದ ವೈಶಿಷ್ಟ್ಯ. ಔದ್ಯಮಿಕ ಜಾಲ ಅಮೆರಿಕನ್ ಮಾದರಿಯದೇ – ಆದರೆ ಅದನ್ನು ಪೋಣಿಸಿದ ಜೀವ ಸೂತ್ರ ಜಪಾನೀ ಪರಂಪರಾಗತ ಶಿಸ್ತು ಓರಣದ್ದು'(143). ಕರ್ತವ್ಯಪ್ರಜ್ಞೆ, ಕಾಯಕ ಮತ್ತು ದೇಶಾಭಿಮಾನ ಅವರ ಸಕಲ ಸಿದ್ಧಿಗಳ ಹಿಂದಿರುವ, ಚಾಲಕ ಶಕ್ತಿಯೆನ್ನುವುದನ್ನು ಭಟ್ಟರು ಮನದಟ್ಟು ಮಾಡಿಕೊಡುತ್ತಾರೆ.

ಧರ್ಮರಾಯನ ಯಜ್ಞಾಶ್ವವನ್ನು ಹಿಂಬಾಲಿಸಿದಂತೆ, ಲೋಕವಿಜಯಿ ಯಕ್ಷಗಾನವನ್ನು 1982ರಲ್ಲಿ ಯುಗೊಸ್ಲಾವಿಯಾ, ಬಲ್ಗೇರಿಯಾ, ಲಂಡನ್, ಸೋವಿಯತ್ ರಷ್ಯಾ ಮತ್ತು ಹಂಗೇರಿಗಳಲ್ಲಿ ಹಿಂಬಾಲಿಸಿದ ಕತೆಯೇ 'ಒಮ್ಮೆ ರಶಿಯಾ, ಇನ್ನೊಮ್ಮೆ ಇತಾಲಿಯಾ' ಗ್ರಂಥದ ವಸ್ತು. ಸಾಂಸ್ಕೃತಿಕ ಕಾರ್ಯಕ್ರಮದ ವಿನಿಮಯದ ಅಂಗವಾಗಿ ಈ ಸಾರಿಯ ಯಕ್ಷಗಾನ ಯಾತ್ರೆ ಆರಂಭವಾಗುತ್ತದೆ. ಮುಖ್ಯವಾಗಿ ಯಕ್ಷಗಾನದ ವಿಜಯ ಪರಂಪರೆ ಇಲ್ಲಿಯ ಪುಟಪುಟಗಳಲ್ಲಿ ಮಾರ್ದನಿಸುತ್ತದೆ; ಅದು ಜಾಗತಿಕ ಕಲೆಯ ಸ್ವತ್ತಾಗಿದೆಯೆಂಬುದನ್ನು ಡಂಗುರಿಸುತ್ತದೆ. ಬಲ್ಗೇರಿಯಾ ಸಣ್ಣ ರಾಷ್ಟ್ರವಾದರೂ ಅದರ ಸಾಧನೆ ಮಹತ್ತರವಾದುದೆಂಬುದನ್ನು ಕುಶಿಯವರೂ ಸಂತೃಪ್ತಿಯಿಂದ ವಿವರಿಸುತ್ತಾರೆ. ಅಲ್ಲಿಯ ಸೋಫಿಯ ನಗರವನ್ನು ಪ್ರವೇಶಿಸಿದಾಗ ಅರಣ್ಯವನ್ನು ಪ್ರವೇಶಿಸುತ್ತಿದ್ದಂತೆ ಅನುಭವವಾಗುತ್ತದೆ. 'ಸೋಫಿಯದ ನಡುವೆ ತೋಟ, ಕೈತೋಟ, ಉಪವನ, ಅಲ್ಲದೆ ನಾಟಾವನ ಪ್ರದೇಶವನ್ನೇ ನಗರದ ಸೌಂದರ್ಯ ಸಾಧಕವೆಂಬ ನಿಟ್ಟಿನಲ್ಲಿ ಬೆಳೆಸಿಟ್ಟಿದ್ದಾರೆ. ನಮ್ಮಲ್ಲಿನ ಹಾಗೆ ವಿದ್ಯುತ್ ಇಲಾಖೆಗೂ ಮರಗಳಿಗೂ ಅಲ್ಲಿ ಶತ್ರುತ್ವವಿದ್ದಂತೆ ತೋರಲಿಲ್ಲ'(53). ನಮ್ಮಲ್ಲಿಯ ಪರಿಸ್ಥಿತಿ ತದ್ವಿರುದ್ಧ. ವಿದ್ಯುಚ್ಛಕ್ತಿ ಇಲಾಖೆ ಮಾತ್ರವಲ್ಲ, ಎಲ್ಲ ಇಲಾಖೆಗಳೂ ವೃಕ್ಷದ್ವೇಷಿಗಳು! ಸೋವಿಯತ್ ರಾಷ್ಟ್ರಗಳಂತೆ ಜಾನಪದ ಕಲೆಯನ್ನು ಪ್ರೋತ್ಸಾಹಿಸುವ ಆಸಕ್ತಿ ಇಲ್ಲಿಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗಿಲ್ಲದಿರುವುದು ನಿರ್ನಾಚುಗೆಯ ಸಂಗತಿಯಾಗಿದೆ. ಪರ್ವತರಾಷ್ಟ್ರವಾದ ಕಿರ್ಗೀಜಿಯಾದ ಜಾನಪದ ಮಹಾಕಾವ್ಯ 'ಮನಾಸ್' ಬಗ್ಗೆ ಭಟ್ಟರಿಗೆ ಹೆಮ್ಮೆ. ನಮ್ಮಲ್ಲಿಯೂ ಕಲೆವಾಲ ಮತ್ತು ಮನಾಸ್ ಗಳನ್ನು ಮೀರಿಸುವ ಜಾನಪದ ಮಹಾಕಾವ್ಯಗಳಿವೆಯೆಂಬುದನ್ನು ಅವರು ವಿದೇಶೀಯರಿಗೆ ತಿಳಿಸಿದರೋ ಇಲ್ಲವೋ ಕಾಣೆ. ರಶಿಯಾದ ಜನ ಸಾಂಸ್ಕೃತಿಕ ಪ್ರಕಾರಗಳಿಗೆ ಕೊಡುವ ಆದ್ಯತೆ ಪ್ರಾಮುಖ್ಯತೆಗಳಿಂದಾಗಿ, ಅವರಲ್ಲಿ ಬುದ್ಧಿಬಲ ಮಾತ್ರವಲ್ಲದೆ ಹೃದಯಶ್ರೀಮಂತಿಕೆಯೂ ಇದೆಯೆಂಬುದನ್ನು ಭಟ್ಟರು ಮನಗಂಡಿದ್ದಾರೆ. ಜಾನಪದ ವಸ್ತುಗಳನ್ನು ಅದ್ಯತನ ಸನ್ನಿವೇಶದಲ್ಲಿ, ಆಧುನಿಕ ರಂಗಭೂಮಿಯ ಮೇಲೆ ಅಳವಡಿಸುವುದನ್ನು ರಶಿಯಾದ ಏಷಿಯನ್ ಗಣರಾಜ್ಯಗಳಿಂದ ಕಲಿಯಬೇಕೆಂದವರು ಹೇಳುತ್ತಾರೆ. ಜನಪದ ಕಲೆ ಅಲ್ಲಿಯ ಬದುಕಿನ ಒಂದು ಅವಿಭಾಜ್ಯಾಂಗವಾಗಿದೆ. ಪಾಮರರಿಗೆ ಮಾತ್ರವಲ್ಲ ಶಿಷ್ಟರಿಗೂ ಅದು ಪ್ರಿಯವಾಗಿದೆ. ಹಂಗೇರಿಯಾಗಲಿ, ಯುಗೊಸ್ಲಾವಿಯಾವಾಗಲಿ, ಯಾವುದೂ ಈ ಮಾತಿಗೆ ಹೊರತಲ್ಲ. ವರ್ಷಂಪ್ರತಿ ಇಂಡಿಯಾ ಹಾಗೂ ರಾಜ್ಯ ಸರಕಾರಗಳ ಅಧಿಕಾರಿಗಳು ಸಹಸ್ರ ಸಂಖ್ಯೆಯಲ್ಲಿ ವಿದೇಶಗಳಿಗೆ ಹೋಗಿ ಬರುತ್ತಾರೆ. ಅವರು ಅಲ್ಲಿ ಕಲಿತದ್ದೇನು? ಕಾಗೆ ಮೇರುವನ್ನು ಸುತ್ತಿ ಬಂದಂತಾಗಿದೆ. ಯುರೋಪಿಗೆ ಹೋದ ಮೇಲೆ ಭಟ್ಟರು ಇತಾಲಿಯಾ ಮರೆಯುವುದುಂಟೆ?

1984ರಲ್ಲಿ ರೋಮ್ ವಿಶ್ವವಿದ್ಯಾಲಯದ ರಂಗಸ್ಥಳ ವಿಭಾಗದ ಸಂದರ್ಶಕ ಪ್ರಾಧ್ಯಾಪಕತನದ ಕರ್ತವ್ಯ ನಿರ್ವಹಣೆಗೆಂದು ಹೋಗಿದ್ದಾಗ ಇತಾಲಿಯಾ, ಫಿನ್ಲಂಡ್ ಮತ್ತು ಹಾಲಂಡ್‌ಗಳಲ್ಲಿ ಅವರು ಪೂರೈಸಿದ ಪ್ರವಾಸದ ಕತೆಯೇ 'ರಂಗಾಯನ'. ರಂಗತತ್ವದ ಬಗ್ಗೆ, ಯಕ್ಷಗಾನದ ಬಗ್ಗೆ, ಭೂತಗಳ ಬಗ್ಗೆ ರೋಮ್ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಪ್ರಯೋಗಾಧ್ಯಯನಗಳನ್ನು ಅವರು ಚೆಚ್ಚರದಿಂದ ವೀಕ್ಷಿಸಿದರಲ್ಲದೆ, ಆ ಬಗ್ಗೆ ತಾವು ಕಲಿತ ಅನುಭವಗಳನ್ನು ಅಲ್ಲಿಯ ವಿದ್ವಾಂಸರಿಗೆ ಶ್ರುತಪಡಿಸುತ್ತಾರೆ. ಕಲೆವಾಲ ಮಹಾಕಾವ್ಯದ ಫಿನ್ಲಂಡ್ ಅನ್ನು ನೋಡುವ ಅವರ ಹೇರಾಸೆ ಈ ಸಲದ ಪಯಣದಲ್ಲಿ ನೆರವೇರುತ್ತದೆ. ಕಲೆವಾಲಕ್ಕಿಂತ ಮುಖ್ಯವಾಗಿ ಅದರ ಸಂಗ್ರಹಣೆ, ರಕ್ಷಣೆ ಪ್ರಸರಣಗಳ ಬಗ್ಗೆ, ಅದರಿಂದ ಅಲ್ಲಿಯ ಜನ ಪಡೆದಿರುವ ಸ್ಫೂರ್ತಿಯ ಬಗ್ಗೆ, ಜಾನಪದ ಸಂಪತ್ತಿನ ಸಂಕಲನ, ಸಂಶೋಧನೆ ಮತ್ತು ಅಧ್ಯಯನಗಳ ಬಗ್ಗೆ ಅಲ್ಲಿಯ ಸರ್ಕಾರ ಮತ್ತು ಸಮಾಜಗಳು ತೋರಿಸುತ್ತಿರುವ ಹೆಮ್ಮೆ ಅಭಿಮಾನ ಕುತೂಹಲಾಸಕ್ತಿಗಳನ್ನು ಪ್ರತ್ಯಕ್ಷವಾಗಿ ನೋಡುವ ಮಹದಾಕಾಂಕ್ಷೆ ಅವರದು. 1835ರಲ್ಲಿ ಪ್ರಪ್ರಥಮವಾಗಿ ಪ್ರಕಟಣೆಗೊಂಡ ಆ ಮಹಾಕಾವ್ಯದ ಬಗ್ಗೆ ಆ ಜನ ವ್ಯವಸ್ಥೆಗೊಳಿಸುತ್ತಿರುವ ವಿಚಾರಗೋಷ್ಠಿ, ಸಮ್ಮೇಳನ, ಪ್ರದರ್ಶನ ಮತ್ತು ಭಾಷಾಂತರಗಳು ಯಾರನ್ನಾದರೂ ದಂಗುಬಡಿಸುವಂಥವು. ಫಿನ್ ಸಾಹಿತ್ಯ ಪರಿಷತ್ತು (1831) ಈ ದಿಶೆಯಲ್ಲಿ ಪವಾಡಸದೃಶವಾದ ಕೆಲಸವನ್ನು ನಿರ್ವಹಿಸುತ್ತಿದೆ. ಜಾನಪದ ದಾಖಲಾತಿ ಸಂಗ್ರಹ, ಮಾನವ ಶಾಸ್ತ್ರ ಗ್ರಂಥಾಲಯ ಮತ್ತು ಹೆಲ್ಸಿಂಕಿ ವಿಶ್ವವಿದ್ಯಾಲಯದ ಜಾನಪದ ವಿಭಾಗಗಳು ಪರಿಷತ್ತಿನ ಕಕ್ಷೆರಕ್ಷೆಗಳಲ್ಲುಳಿದದ್ದು ಇತರ ದೇಶಗಳಿಗೆ ಮಾದರಿಯಾಗಬೇಕಾಗಿದೆ. ನಾರ್ಡಿಕ್ ರಾಷ್ಟ್ರಗಳ (ಫಿನ್ಲಂಡ್, ನಾರ್ವೆ, ಸ್ವೀಡನ್, ಡೆನ್ಮಾರ್ಕ್ ಮತ್ತು ಐಸ್‌ಲೆಂಡ್) ಜಾನಪದ ಅಧ್ಯಯನಕ್ಕೆಂದು ಫಿನ್ಲಂಡಿನ ತುರ್ಕುನಗರದಲ್ಲಿ ಸಂಸ್ಥಾಪನೆಗೊಂಡಿರುವ, ಜಾನಪದ ವಿದ್ವಾಂಸರ ಕಾಶಿಯಾಗಿರುವ ನಾರ್ಡಿಕ್ ಇನ್‌ಸ್ಟಿಟ್ಯೂಟ್ ಆಫ್ ಫೋಕ್‌ಲೋರ್, ದರ್ಶನ ಭಟ್ಟರ ಬದುಕಿನ ಅವಿಸ್ಮರಣೀಯ ಸಂಗತಿಗಳಲ್ಲೊಂದಾಗಿರಬೇಕೆಂದು ತೋರುತ್ತದೆ.

ಯೂರೋಪೀಯ ರಾಷ್ಟ್ರಗಳಲ್ಲಿಯೂ ಭಾಷಾಸಮಸ್ಯೆ ಅಪರಿಹಾರ್ಯವಾದ ಕಗ್ಗಂಟಾಗಿದೆಯೆಂಬುದನ್ನು ಭಟ್ಟರು ಅರುಂಧತೀದರ್ಶನದ ಮಾಳ್ಕೆಯಲ್ಲಿ ಭಾರತೀಯರಿಗೆ ಅರಿವು ಮಾಡಿಕೊಟ್ಟಿದ್ದಾರೆ. ಯುಗೋಸ್ಲಾವಿಯಾ ಸಣ್ಣ ರಾಷ್ಟ್ರ; ಕರ್ನಾಟಕಕ್ಕಿಂತ ಚಿಕ್ಕದು. ಅಲ್ಲಿ ಐದು ಭಾಷೆಗಳು (ಸ್ಲೊವೇನ್, ಸರ್ಬಿಯನ್, ಕ್ರೊಯೇಷಿಯನ್,

ಮೆಸಿಡೋನಿಯನ್, ಬಲ್ಗೇರಿಯನ್ ಮೊದಲಾದುವು) ಚಾಲ್ತಿಯಲ್ಲಿವೆ. ಈ ವಿವಿಧ ಭಾಷಿಕರು ವಿವಿಧ ಜನಾಂಗಗಳಿಗೆ ಸೇರಿದವರೆಂಬುದನ್ನು ಮರೆಯುವಂತಿಲ್ಲ. ಭಾಷಾಂಧತೆಯೆಂದು, ಪ್ರಾಂತೀಯತೆಯೆಂದು ಕೂಗಾಡುವ ರಾಜಕೀಯ ಧುರೀಣರನ್ನು ಕೆಲವು ತಿಂಗಳು ಯುಗೋಸ್ಲಾವಿಯಾದಲ್ಲಿ ಇರಿಸಿದರೂ ಅವರಿಗೆ ವಿವೇಕೋದಯವಾಗಲಾರದು. ವಿವೇಕಿಗಳಿಗೆ ಭಾಷಾ ಸಮಸ್ಯೆಯ ಪರಿಹಾರ ತೀರಾ ಸುಲಭ. ಇಂಡಿಯಾ ದೇಶದಲ್ಲಿ ಭಾಷಾ ಸಮಸ್ಯೆಗಿಂತ ತೀವ್ರವಾದದ್ದು ಜಾತಿಮತಗಳ ಸಮಸ್ಯೆ, ಕೇಂದ್ರೀಕರಣದ ಸಮಸ್ಯೆಯೆಂಬ ವಿಷಯ ಇಲ್ಲಿಯ ಮೇಧಾವಿಗಳಿಗೆ ಅರಿವಾಗದಿರುವುದೊಂದು ದುರ್ದೈವ. ಈ ಭಾಷಾ ಸಮಸ್ಯೆ ಇತಾಲಿಯಾ, ಸ್ವಿಟ್ಜರ್‌ಲೆಂಡ್‌ಗಳಲ್ಲಿರಲಿ, ಇಂಗ್ಲೆಂಡಿನಲ್ಲಿಯೂ ಪ್ರಖರವಾಗಿದೆಯೆಂಬುದು ನೆನಪಿಡಬೇಕಾದ ಸಂಗತಿ.

ಪ್ರವಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿ, ಅದನ್ನು ಸಾಹಿತ್ಯದ ಮಟ್ಟಕ್ಕೇರಿಸಿದ ಕೀರ್ತಿಗೆ ಭಾಜನರಾದವರಲ್ಲಿ ಹರಿದಾಸ ಭಟ್ಟರು ಅಗ್ರಗಣ್ಯರು. ಪ್ರವಾಸ ಸಾಹಿತ್ಯ ಸಂಕೀರ್ಣ ಸ್ವರೂಪದ್ದು. ಅದರಲ್ಲಿ ನಾಟಕೀಯತೆಯ ಬಿನ್ನಾಣವುಂಟು, ವರ್ಣನೆಯ ಸೊಬಗುಂಟು, ಕಾದಂಬರಿಯ ರಮಣೀಯತೆಯುಂಟು, ಕತೆಯ ನಡಗೆಯುಂಟು, ಆತ್ಮಕಥೆಯ ಆತ್ಮೀಯತೆಯುಂಟು. ಪೆಡಸಿಲ್ಲದ, ಸುತ್ತುಬಳಸಿಲ್ಲದ, ಗಂಟಿಲ್ಲದ, ಸಿಕ್ಕುಸಿವುರುಗಳಿಲ್ಲದ,ಕೆಸರುಸುಬು ಸುಳಿಗಳಿಲ್ಲದ ಅನಾಯಾಸವಾದ ನಿರರ್ಗಳ ಸುಂದರ ಕಥನ ಶೈಲಿಯೇ ಪ್ರವಾಸ ಸಾಹಿತ್ಯದ ಯಶಸ್ಸಿಗೆ ಮೂಲ. ಹರಿದಾಸ ಭಟ್ಟರ ಶೈಲಿಯ ರಹಸ್ಯವಿರುವುದೇ ಇಲ್ಲಿ. ಅವರೆಂದೂ ಮಾತುಗಳಿಗೆ ತಿಣುಕಿದವರಲ್ಲ; ಅಭಿವ್ಯಕ್ತಿಗಾಗಿ ಬಳಲಿದವರಲ್ಲ. ನಿರಾಭರಣ ಸಾರಳ್ಯ ಅವರ ಶೈಲಿಯ ಹೆಗ್ಗುಣವಾದರೂ, ಕೆಲವು ಕಡೆ ಅನೈಚ್ಛಿಕವಾಗಿಯೇ ಅದು ಅಲಂಕಾರಯುಕ್ತವಾಗುತ್ತದೆ, ಮೊನಚಾಗುತ್ತದೆ. 'ಸ್ಮಾರಕ ವಸ್ತುಗಳ ಹಲವು ಅಂಗಡಿಗಳು ಸಾಲಾಗಿ ಪ್ರವಾಸಿಗಳ ಕಿಸೆಯನ್ನು ಬರಿದು ಮಾಡಲು ಸರ್ವಸಿದ್ಧತೆಯನ್ನೂ ಮಾಡಿಕೊಂಡು ಕಾದಿದ್ದುವು' (ಇತಾಲಿಯಾ,6). 'ಬದಾಮಿಯ ಹೋಟಲಿನಲ್ಲಿ ನೊಣಗಳ ಜತೆಗೆ ಹೋರಾಡಿ ಅಷ್ಟಿಷ್ಟು ಚಹ ಗುಟುಕಿಸಬೇಕು' (ಜಗದಗಲ,15). ಗ್ರಾಮೀಣ ಸಮಾಜದಲ್ಲಿ ನಾಗರಿಕ ಲಕ್ಷಣಗಳು ಸಿಡಿದೇಳುತ್ತದೆ, ಆರೋಗ್ಯವಂತ ಕಾಯದಲ್ಲಿ ಎದ್ದೇಳುವ ಕಾಯಿಲೆ ಬೊಕ್ಕೆಗಳಂತೆ. (ಅದೇ, 46) 'ರಾಯಲ್ಪಿ ಛೀ ಇತ್ಯಾದಿ ಇಲ್ಲದೇ ಕಾಫಿ ತಿಂಡಿ ಇಷ್ಟರಿಂದಲೇ ತೃಪ್ತರಾಗುವ ಕಲಾಮಂಡಳಿಗಳು ಸರ್ಕಾರಕ್ಕೆ ಅಗತ್ಯ' (ಒಮ್ಮೆ ರಶಿಯಾ, 17). 'ಕೇಸಿನ ಹಿಂದೆ ನಿಂತಂಥ ಹೆಣ್ಣು ಮಕ್ಕಳು ನಗುವನ್ನು ಮನೆಯಲ್ಲೆ ಕಟ್ಟಿಟ್ಟು ಬಂದ ಹಾಗೆ ತೋರುತ್ತಿತ್ತು' (ಅದೇ, 87). 'ಗುಂಪಾಗಿ, ಒಂಟಿಯಾಗಿ ನೃತ್ಯದ ರೇಖಾವಿನ್ಯಾಸಗಳನ್ನು ಪ್ರೇಕ್ಷಕರ ಕಣ್ಣಂಗಳದಲ್ಲಿ ಬರೆದು ನಿಲ್ಲಿಸಿದರು'. (ಅದೇ, 115)

ಹೋದ ಹೋದಲ್ಲಿ ಅಲ್ಲಲ್ಲಿಯ ಜನರ ರೂಢಿ ಸಂಪ್ರದಾಯಗಳನ್ನರ್ಥ ಮಾಡಿಕೊಂಡು, ಅಲ್ಲಿಯ ಜನ ಜೀವನದೊಡನೆ ಬೆರೆಯದಿದ್ದರೆ, ಅಲ್ಲಿಯ ಸಂಸ್ಕೃತಿಯ ದರ್ಶನ ಸಮಗ್ರವಾಗಿ ಲಭಿಸುವುದಿಲ್ಲ, ಅಲ್ಲಿಯ ಜನ ಜೀವನದ ನೆಲೆಬೆಲೆಗಳು ಪೂರ್ಣವಾಗಿ ಅರ್ಥವಾಗುವುದಿಲ್ಲ, ಮಾತ್ರವಲ್ಲ, ಅತಿಥಿ ಆತಿಥೇಯರ ಮನಸ್ಸಿಗೂ ಇರಿಸುಮುರಿಸಾಗುತ್ತದೆನ್ನುವುದಕ್ಕೆ ಭಟ್ಟರ ಗ್ರಂಥಗಳಲ್ಲಿಯೇ ನಿದರ್ಶನಗಳು ದೊರೆಯುತ್ತವೆ. ಆಹಾರ ಪಾನೀಯಗಳು ಹಾಗೂ ವೇಷಭೂಷಣಗಳು ಆಯಾಯ ಜನಾಂಗಗಳ ನಾಗರಿಕತೆಯ ಮೂಲದ್ರವ್ಯಗಳು. ಹರಿದಾಸ ಭಟ್ಟರಂಥ ಸಂಪ್ರದಾಯಸ್ಥರು ಪಾಶ್ಚಾತ್ಯ ದೇಶಗಳಿಗೆ ಹೋದಾಗ ಆಹಾರ ಪಾನೀಯಗಳ ವಿಷಯದಲ್ಲಿ ಮೈಯೆಲ್ಲ ಕಣ್ಣಾಗಿರುತ್ತಾರೆ. ಊಟ ತಿಂಡಿಗಳ ಸಮಯದಲ್ಲಿ ಅವರ ಪೀಕಲಾಟ ಪ್ರಾರಂಭವಾಗುತ್ತದೆ. ಬಿಸ್ಕತ್ತಿನೊಳಗೂ ಅವರು ಹಂದಿಯನ್ನೋ, ಕುರಿಯನ್ನೋ ಕಾಣುತ್ತಾರೆ, ಶುದ್ಧಾತಿಶುದ್ಧ ಕೇಕಿನೊಳಗೂ ಬೀರಿನ ಗುಣವನ್ನನುಭವಿಸುತ್ತಾರೆ. ಪ್ರಾಯಶಃ ಮಾಂಸೋತ್ಪನ್ನವಾದ ಹಾಲಿನಲ್ಲಿಯೂ ಅವರಿಗೆ ಸಂಶಯ ವುದಿಸಿರಬೇಕು; ವೆನಿಸಿನ ನಳಪಾಕಿಗಳ ಕೈತವ ಕೌಶಲಗಳು ಅವರ ಬ್ರಾಹ್ಮಣ್ಯಕ್ಕೆ ಸವಾಲೊಡ್ಡಿರಬೇಕು. 'ವೆನಿಸಿನ ರೆಸ್ಟುರಾಗಳ ಅಡುಗೆಯ ರುಚಿ ಬಲ್ಲವರೇ ಬಲ್ಲರು' ಎನ್ನುವ ಅವರ ಮಾತಿನಲ್ಲಿ ಪೂರೈಕೆಯಾಗದ ಬಯಕೆಯೊಂದು ಹುದುಗಿರುವಂತೆ ತೋರದಿರಲಾರದು. ಭಟ್ಟರೇನೋ ಆಹಾರ ಪಾನೀಯಗಳ ವಿಚಾರದಲ್ಲಿ ವಿಜಯಿಯಾಗಿ ಹಿಂದಿರುಗಿದ್ದರೂ, ಅಪ್ಪಟ ಮಡಿವಂತರಿಗೆ ಪಾಶ್ಚಾತ್ಯ ಪ್ರವಾಸ ಸುಖಮಯವಾಗಲಾರದೆಂದೇ ಕಾಣುತ್ತದೆ. ಅಲ್ಲಿಯ ಆಹಾರವನ್ನು ಸವಿಯದವರು ಪಾಶ್ಚಾತ್ಯ ಪ್ರವಾಸ ಸುಖದ ಪೂರ್ಣಾನುಭವದಿಂದ ವಂಚಿತರಾಗಬೇಕಾಗುತ್ತದೆಂಬ ನಿಜವನ್ನು ಬಲ್ಲವರೇ ಬಲ್ಲರು.

ಅಂಕಣ ಸಾಹಿತ್ಯ ಹರಿದಾಸ ಭಟ್ಟರು ಕೃಷಿ ಮಾಡಿರುವ ಮತ್ತೊಂದು ಬಹುಪ್ರಿಯ ಪ್ರಕಾರ. ಅದು ತತ್ಕಾಲೀನ ಸಂಬಂಧಿಯಾದ್ದರಿಂದ, ಅವಸರದ ಕ್ರಿಯೆಯಾದ್ದರಿಂದ ಅದರ ನಿರ್ಮಾಣ ಸುಲಭಸಾಧ್ಯವೇನಲ್ಲ. ಅದಕ್ಕೆ ಕಾಲವೇ ಪ್ರೇರಣೆಯಾಗಿ, ಅವಸರವೇ ಸ್ಫೂರ್ತಿಯಾದ್ದರಿಂದ ಅದು ಸಾಹಿತ್ಯದ ಮಟ್ಟಕ್ಕೇರುವ ಸಂಭವ ಕಡಮೆ. ಯಾವ ಸಮಯದಲ್ಲಾದರೂ ಭಾವಲೋಕವನ್ನು ಪ್ರವೇಶಿಸಬಲ್ಲ, ಸಮತೋಲನ ಬುದ್ಧಿಯ, ತತ್ವನಿಷ್ಠನ ನಿರಸೂಯನ, ಪರಿಶುದ್ಧ ಹೃದಯನ ಲೆಕ್ಕಣಿಯಿಂದ ಚಿರಕಾಲಿಕವಲ್ಲದಿದ್ದರೂ ಬಹುಕಾಲಿಕವೂ ಮೌಲ್ಯಾತ್ಮಕವೂ ಆದ ಅಂಕಣ ಸಾಹಿತ್ಯ ಮೂಡಿಯೇ ಮೂಡುತ್ತದೆ. ಅಂಕಣಕಾರ ಸ್ವಾರ್ಥಪರನಾಗಿ, ಪೂರ್ವಗ್ರಹ ದುರಾಗ್ರಹ

ಪಕ್ಷಪಾತ ದೃಷ್ಟಿಯುಳ್ಳವನಾದರೆ, ತತ್ತ್ವವನ್ನು ಗಾಳಿಗೆ ತೂರಿದವನಾದರೆ, ಅವನ ದೌರ್ಬಲ್ಯಗಳೆಲ್ಲ ನೇರವಾಗಿ ಅವನ ಅಂಕಣದಲ್ಲಿಯೂ ಪ್ರತಿಬಿಂಬಗೊಳ್ಳುತ್ತದೆ. ತನಗೆ ಬೇಕಾದವರು, ತನ್ನ ಹಿಂಬಾಲಕರು ಸಣ್ಣವರಾದರೂ ಅವರನ್ನು ದೊಡ್ಡದು ಮಾಡಿ ತೋರುವ, ತನಗಾಗದವರು ದೊಡ್ಡವರಾದರೂ ಅವರನ್ನು ಸಣ್ಣದು ಮಾಡಿ ತೋರುವ ಕುತ್ಸಿತ ಬುದ್ಧಿ ಹಾಗೂ ಕ್ಷುಲ್ಲಕತನ ಕೆಲವರಲ್ಲಿ ಮನೆಮಾಡಿಕೊಂಡಿರುತ್ತದೆ. ಅವರು ಉದ್ದೇಶಪೂರ್ವಕವಾಗಿ ಆತ್ಮಪ್ರಶಂಸೆಗೆ, ಮತ್ತು ಪರನಿಂದೆಗೆ ತಮಗೆ ದೊರಕುವ ಅವಕಾಶವನ್ನು ಬಳಸಿಕೊಂಡು ಸತ್ಯಧರ್ಮಗಳಿಗೆ ತಿಲತರ್ಪಣ ಬಿಡುವುದುಂಟು. ಅವರ ಲೇಖನಿ ಟಿಕ್ಕಕ್ಕೆ ಮೊದಲು ಬಲಿಯಾಗುವ ವಿಚಾರಗಳೆಂದರೆ ಸತ್ಯ ಮತ್ತು ನ್ಯಾಯ. ಗ್ರಂಥ ವಿಮರ್ಶೆಯಷ್ಟು ಹದಗೆಟ್ಟಿದೆಯೋ ಅಂಕಣ ಸಾಹಿತ್ಯವೂ ಅಷ್ಟರಮಟ್ಟಿಗೆ ಕಲುಷಿತವಾಗಿದೆ. ಸತ್ಯವನ್ನು ಮುಚ್ಚಿ ಅಸತ್ಯವನ್ನೆತ್ತಿ ಹಿಡಿಯುವ ದ್ವೇಷ ಸಾಧಕರಿವರು, ಮಾತ್ಸರ್ಯಶೀಲರಿವರು. ಈ ಕಾರಣಗಳಿಂದ ಅಂಕಣ ಸಾಹಿತ್ಯ ಏರುವಿಕೆಗಿಂತ ಜಾರುವಿಕೆಯ ಕಡೆಗೆ ವಾಲುವುದೇ ಹೆಚ್ಚು.

ಆದರೆ ದ್ವೇಷ, ಮಾತ್ಸರ್ಯ ಪ್ರತೀಕಾರ ಮನೋಭಾವಗಳ ಸೋಂಕಿಲ್ಲದ, ಸತ್ಯಕ್ಕೆ ಕನಸುಮನಸಿನಲ್ಲಿಯೂ ಅಪಚಾರವೆಸಗದ, ತಮಗಾಗದವರ ಸದ್ಗುಣಗಳನ್ನು ಮನಸಾರೆ ಮೆಚ್ಚುವ, ದುರಹಂಕಾರ ದುರಾಗ್ರಹ ಸ್ವಪ್ರತಿಷ್ಠೆಗಳಿಂದ ದೂರವಾದ, ತಾವು ಬರೆಯುವ ವಿಷಯ ಮಹತ್ವದ್ದಾಗಲಿ, ಅಲ್ಪತ್ವದ್ದಾಗಲಿ ಮೌಲಿಕತೆಗೆ ವಿಶೇಷ ಗಮನ ಕೊಡುವ, ಸಜ್ಜನಿಕೆ ಸಭ್ಯತೆಗಳಿಗೆ ಅಪಚಾರವೊದಗದಂತೆ ಎಚ್ಚರವಹಿಸುವ ಕೆಲವೇ ಕೆಲವು ಮಂದಿ ಅಂಕಣಕಾರರಲ್ಲಿ ಹರಿದಾಸ ಭಟ್ಟರೊಬ್ಬರು. ಈ ಸಂದರ್ಭದಲ್ಲಿ ನನಗೆ ಅನಾಯಾಸವಾಗಿ ನೆನಪಾಗುವ ಮತ್ತೊಂದು ಹೆಸರು ಎಚ್ಚೆಸ್ಕೆ. 'ಲೋಕಾಭಿರಾಮ'ದ ಯಾವ ಪುಟವನ್ನು ಮಗುಚಿದರೂ ಹರಿದಾಸ ಭಟ್ಟರ ಸಂಯಮಶೀಲತೆ, ಸ್ನೇಹಶೀಲತೆ, ನಿರ್ಮತ್ಸರತೆ, ಹೃದಯಶುದ್ಧಿ, ವಿಚಾರಬುದ್ಧಿ, ಮತ್ತು ವಿಷಯ ಪರಿಜ್ಞಾನಗಳು ಎದ್ದು ಕಾಣುತ್ತವೆ. ಅವರ ಬರಹದಲ್ಲಿ ವಿಡಂಬನೆಯಿದೆ, ಮೊನಚಿದೆ; ವಿಷಲವಲೇಶವೂ ಇಲ್ಲ. ತನ್ನ ಶರೀರದಲ್ಲಿಯೇ ಉತ್ಪತ್ತಿಯಾದ ಹಾಲು ಒಳ ಹೊಕ್ಕರೆ ಫರಂಗಿ ಹಣ್ಣು ಕೊಳೆತು ಹೋಗುತ್ತದೆ. ಅಂತೆಯೇ ವಿಷಪ್ರಾಯವಾದ ವಿಡಂಬನೆ ವಿಡಂಬನಕಾರನಿಗೆ ಮೃತ್ಯುವಾಗುತ್ತದೆ. ಹರಿದಾಸ ಭಟ್ಟರ ವಿಡಂಬನೆಯಲ್ಲಿ ಪುಷ್ಟಿಕಾರಕವಾದ ಆನಂದದಾಯಕವಾದ ಸತ್ವಗುಣವಿದೆ. ಅವರ ಒಂದೊಂದು ಅಂಕಣವೂ ಅವರ ವೈದುಷ್ಯಕ್ಕೆ, ಚಿಂತನದ ಗಾಢತೆಗೆ ಹಾಗೂ ಸಮಯಪ್ರಜ್ಞೆಗೆ ನಿದರ್ಶನವಾಗಿವೆ. ತಮಗೆ ಬೇಕಾದವರನ್ನು ಮತ್ತು ಬೇಕಾದ ವಿಷಯವನ್ನು ಕುರಿತು ಒಂದು ಮಾತು ಹೆಚ್ಚಾಗಿ ಬರೆಯಬಹುದು; ಆದರೆ ಬೇಕಾದವರನ್ನು ಪ್ರಶಂಸಿಸುವ ನೆವದಲ್ಲಿ ಬೇಡವಾದವರನ್ನು ನಿಷ್ಕಾರಣವಾಗಿ, ಕಪಟ ರೀತಿಯಲ್ಲಿ ಭರ್ತ್ಸನೆಗೈಯ್ಯುವ ದುರ್ಬುದ್ಧಿ ಅವರಲ್ಲಿಲ್ಲ. ಆರ್ಥಿಕ ಜಿಜ್ಞಾಸೆಯೇ, ಸಾಮಾಜಿಕ ವಿಚಾರವೇ, ರಾಜಕೀಯ ವೈಪರೀತ್ಯವೇ, ಸಾಹಿತ್ಯಿಕ ಸಂಗತಿಗಳೇ, ಶೈಕ್ಷಣಿಕ ಸಮಸ್ಯೆಗಳೇ – ಒಂದೇ, ಎರಡೇ, ನೂರಾರು ವಿಷಯಗಳ ಮೇಲೆ ಅವರು ತಮ್ಮ ಚಿಂತನೆಯ ಕ್ಷಕಿರಣ ಹಾಯಿಸುತ್ತಾರೆ. ಜಗತ್ತಿನಲ್ಲಿ ಅವರ ಅಂಕಣಗಳಿಗೆ ವಸ್ತುವಾಗದ ವಿಷಯವೇ ಇಲ್ಲ.

ಸೊಕ್ಕು ಹಿಡಿದ ಉಕ್ಕಿನ ಬಗ್ಗೆ ಬರೆಯುತ್ತ ನಾಡಿನ ಪ್ರಚಲಿತ ರಾಜಕೀಯವನ್ನು ನಿರ್ಮಾಣ ಮಾಡುವವರಲ್ಲಿ ಮೂರು ವರ್ಗಗಳನ್ನವರು ಗುರುತಿಸುತ್ತಾರೆ : 1. ದೇವರ ಹೆಸರಲ್ಲಿ ಸಂಚಿಸಿ ಹೊಟ್ಟೆ ತುಂಬಿಸಿಕೊಳ್ಳುವವರು, 2. ದೇಶದ ಹೆಸರಲ್ಲಿ ಹೊಟ್ಟೆ ತುಂಬಿಸಿಕೊಳ್ಳುವವರು, 3. ದ್ವೇಷದ ಹೆಸರಲ್ಲಿ, ವರ್ಗದ್ವೇಷದ ನೆಪದಲ್ಲಿ ತಮ್ಮ ರಾಜಕೀಯ ಶಕ್ತಿಯನ್ನು ಬಳಸಿಕೊಳ್ಳುವ ಬಡವರ ಬಂಧುಗಳು. ಈ ಮೂರು ಮಾತುಗಳಲ್ಲಿವರು ರಾಜಕೀಯದ ವಿಶ್ವರೂಪದರ್ಶನವನ್ನು ತೋರಿಸಲು ಪ್ರಯತ್ನಿಸಿದ್ದಾರೆ.

ಭಾರತೀಯ ಸಾಹಿತ್ಯದ ಏಕೈಕ ಹಕ್ಕುದಾರರಾದ ಖುಶ್ವಂತ್‌ಸಿಂಗ್‌ರ ಅಜ್ಞಾನವನ್ನು 'ಭಾರತೀಯ ಸಾಹಿತ್ಯಕ್ಕೆ ಯಾರೆಂದು ಕೇಳಿದ್ದೀರಿ?' ಎಂಬ ಲೇಖನದಲ್ಲಿ ಬಯಲಿಗೆಳೆದಿದ್ದಾರೆ. ಎಂಥದೋ ಇಂಗ್ಲಿಷಿನಲ್ಲಿ ಏನೇನೋ ಬರೆಯುತ್ತಾರೆಂಬ ಕಾರಣದಿಂದ ಭಾರತೀಯ ಸಾಹಿತ್ಯದ ಬಗ್ಗೆ ವಿಚಾರ ತಿಳಿದುಕೊಳ್ಳುವ ಸಂದರ್ಭದಲ್ಲಿ ಇಡೀ ಜಗತ್ತು ಖುಶ್ವಂತರ ಕಡೆಗೆ ನೋಡುತ್ತದೆ. ಯಾವ ಭಾರತೀಯ ಸಾಹಿತ್ಯವೂ ಅವರಿಗೆ ಗೊತ್ತಿಲ್ಲ. ಗೊತ್ತಿಲ್ಲದ್ದರಿಂದ ಭಾರತೀಯ ಭಾಷೆಗಳಲ್ಲಿ ಎತ್ತಮ ಸಾಹಿತ್ಯವೇ ಬಂದಿಲ್ಲವೆಂದು ಅವರು ಹೋದೆಡೆಯಲ್ಲೆಲ್ಲ ಡಂಗುರಿಸುತ್ತಾರೆ. ನಾರಾಯಣ್, ಮುಲ್ಕ್‌ರಾಜ್, ರಾಜರಾವ್, ನಾಯ್‌ಪಾಲ್, ಭವಾನಿ ಭಟ್ಟಾಚಾರ್ಯ ಮೊದಲಾದ ಇಂಡಾಂಗ್ಲ ಮೂರ್ತಿ ಲೇಖಕರ ಅಭಿಪ್ರಾಯವೂ ಇದೇ ಆಗಿದೆ. ಈ ಇಂಡಾಂಗ್ಲ ಲೇಖಕರು ಕನ್ನಡದ ದ್ವಿತೀಯ ದರ್ಜೆಯ ಲೇಖಕರಿಗೂ ಹೆಗಲೆಣೆಯಾಗಲಾರರೆಂಬುದು ಸರ್ವವೇದ್ಯ ಸಂಗತಿ. 'ಭಾರತೀಯ ಸಾಹಿತ್ಯಕ್ಕೆ ಯಾರಿದ್ದಾರೆ? ನಾವೇ ಅಂದುಕೊಳ್ಳಬಹುದು ಎಂದು ಕೊತ್ತಳವೇರಿ ಹುಂಜದಂತೆ ಕತ್ತೆತ್ತಿ ಕೂಗುವ ಈ ಹಿಟ್ಟಿನ ಗೊಂಬೆಗಳನ್ನು ಅಸಲೀ ಭಾರತೀಯ ಸಾಹಿತ್ಯ ನಿರ್ಮಾಪಕರೆಂದೇ ವಿದೇಶೀಯರು ಭ್ರಮಿಸುವಷ್ಟು ಜಾಹೀರಾತು ಕಲೆಯ ಬಲೆಯನ್ನು ಇವರು ನೆಯ್ದಿದ್ದಾರೆ'. (110) ಅವರ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದಾಗ ಅವರ ಪೊಳ್ಳುತನ ಹಳ್ಳಿಗನಿಗೂ ಗೊತ್ತಾಗುತ್ತದೆ. ಖುಶ್ವಂತ್‌ಸಿಂಗ್ ನಾರಾಯಣ ಗೀರಾಯರಾರು ಒತ್ತಟ್ಟಿಗಿರಲಿ, ಕನ್ನಡದ ಕವಿಗಳೆನಿಸಿಕೊಂಡಿರುವ ವಿಮರ್ಶಕರು ಸಹ ಇಂಗ್ಲಿಷಿನಲ್ಲಿ ಕನ್ನಡ ಸಾಹಿತ್ಯವನ್ನು

ಕುರಿತು ಬರೆಯುವಾಗ ಕುವೆಂಪು ಮಾಸ್ತಿಯವರ ಹೆಸರು ಎತ್ತುವುದಿಲ್ಲ. ಇವರು ಕನ್ನಡದ ಸುಪ್ರಸಿದ್ಧ ಅಪ್ರಬುದ್ಧ ವಿಮರ್ಶಕರು! ಇದು ಕನ್ನಡ ವಿಮರ್ಶೆಯ ಪ್ರಚಲಿತ ಪರಿಸ್ಥಿತಿ.

ಹೃದಯವಂತಿಕೆ, ಸುಸಂಸ್ಕೃತ ಮನಸ್ಸು, ನಿರಾಡಂಬರ, ವಿನಯಶ್ರೀ, ಪ್ರಾಮಾಣಿಕತೆ, ಸತ್ಯನಿಷ್ಠೆಗಳು ಕುಶಿಯವರ ಅಂಕಣಗಳ ಒಲ್ಮೆ ಹಿರಿಮೆಗಳಿಗೆ ಕಾರಣವಾಗಿವೆ. 'ಹರಿದಾಸ ಭಟ್ಟರ ಕನ್ನಡದ ಬರವಣಿಗೆಯೆಂದರೆ ನೀರು ಕುಡಿದಂತೆ. ಅಷ್ಟೊಂದು ನಿರರ್ಗಳವಾದ ತೃಪ್ತಿಯನ್ನು ಒದಗಿಸಬಲ್ಲುದು. ಅವರ ಮನಸ್ಸಿನ ಓಟ ಅವರ ಮಾತಿಗೂ, ಅವರ ವೇಗಕ್ಕೆ ಸರಿಯಾಗಿ ಓಡಿಯೂ ದಣಿಯದೆ, ತೇಕದೆ, ಮುಗ್ಗರಿಸದೆ, ಸಮರ್ಥವಾಗಿ ತನ್ನ ಕೆಲಸವನ್ನು ಮಾಡುವ ಶಕ್ತಿಯನ್ನು ಅದರಲ್ಲಿ ರೂಢಿಸಿದ್ದಾರೆ' ಎನ್ನುವ ಹರಿದಾಸ ಭಟ್ಟರ ಶೈಲಿಯನ್ನು ಕುರಿತ ವಿ.ಎಂ. ಇನಾಂದಾರ್ ಅವರ ಮಾತು ಯಥಾರ್ಥವಾದದ್ದು. ಭಟ್ಟರ ನಿರುದ್ವೇಗದ ಈ ಲೇಖನಗಳಲ್ಲಿ ಸಾಮಾಜಿಕ ಪರಿವರ್ತನೆಯ, ರಾಷ್ಟ್ರಪ್ರಜ್ಞೆಯ, ಮಾನವಾಭ್ಯುದಯದ ಕಳಕಳಿಯಿದೆಯೆಂಬುದಂತು ನಿಜ. ಸಾಮಾಜಿಕ ಕಳಕಳಿಯಿಲ್ಲದ ಸಾಹಿತ್ಯ ನಿರ್ಮಧು ಕುಸುಮದಂತೆ, ಪೌರುಷಹೀನ ನಪುಂಸಕನಂತೆ, ವಂಧ್ಯೆಯಂತೆ ಅಬದ್ಧವಾಗುತ್ತದೆ, ಅಸಾರ್ಥಕವಾಗುತ್ತದೆ. 'ಕಲೆಗಾಗಿ ಕಲೆ' ಎನ್ನುವ ತತ್ವವನ್ನಾಧರಿಸಿದ ಸಾಹಿತ್ಯ ಕೋಲೆಬಸವನಂತಾಗುತ್ತದೆ. ಜೀವನವೆ ಕಲೆಯಾಗಿ, ಕಲೆಯೇ ಜೀವನವಾದಾಗ ಎರಡೂ ಸಿದ್ಧಿಯ ಪರಾಕಾಷ್ಠೆಯನ್ನು ಮುಟ್ಟುತ್ತವೆ. ಈ ದೃಷ್ಟಿಯಿಂದ ಭಟ್ಟರ ಹಲವು ಅಂಕಣಗಳು ಗ್ರಾಹ್ಯವಾಗುತ್ತವೆ.

— ೭ —

ಬಹುಮುಖ ಪ್ರತಿಭೆಯ ಭಟ್ಟರು ವಿಶ್ವಕುಟುಂಬಿ; ಲೋಕವೇ ಅವರ ಮನೆ, ಲೋಕದ ಜನರೆಲ್ಲ ಅವರ ಬಂಧುಗಳು. ಅವರು ತೌಳವರಾಗಿ ಕನ್ನಡಿಗರು; ಕನ್ನಡಿಗರಾಗಿ ಭಾರತೀಯರು; ಭಾರತೀಯರಾಗಿ ವಿಶ್ವಪ್ರಜೆ. ಅವರ ತಾಯಿ ಬೇರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರ್ಥಾತ್ ಕರ್ನಾಟಕದಲ್ಲಿ ಇಳಿದಿದ್ದರೂ, ಬಿಳಲುಕೊಂಬೆಗಳು ಜಗತ್ತಿನಲ್ಲೆಲ್ಲ ಹರಡಿಕೊಂಡಿವೆ, ಅವರ ಮಿತ್ರ ಸಂಪತ್ತು ಜಗತ್ತಿನಷ್ಟೇ ವ್ಯಾಪಕವಾದದ್ದು. ಅವರನ್ನು ಕಂಡರೆ ಆಗದವರಿರಬಹುದು. ಆದರೆ ಅವರಿಗಾಗದವರಿಲ್ಲ. ಅವರ ಆತಿಥ್ಯವಂತು ಕರ್ನಾಟಕದಲ್ಲಿ ಗಾದೆಮಾತಾಗಿದೆ. ಆ ಗಾದೆ ಮಾತನ್ನು ನಿಜವಾಗಿಸಿರುವವರು ಅವರ ಧರ್ಮಪತ್ನಿ ತಾಯಿ ಸುಮತಿಯವರು. ಅವರೊಬ್ಬರು ಗೃಹತಪಸ್ವಿನಿ. ಪತಿಯ ಸಾಧನೆ ಸಿದ್ಧಿಗಳಿಗೆ ಅವರು ಪ್ರೇರಕರೂ ಅಹುದು, ಚಾಲಕಶಕ್ತಿಯೂ ಅಹುದು. ಶಕ್ತಿ ಸ್ವರೂಪಿಯಾದ ಅವರು ಪತಿಯ ಪ್ರತಿಯೊಂದು ಸಾಧನೆಯಲ್ಲಿಯೂ ಗುಪ್ತವಾಗಿ ಸೇರಿಕೊಂಡಿದ್ದಾರೆ. ಅವರಿಗೆ ಹೆಸರಿನ ಆಸೆಯಿಲ್ಲ. ಪತಿಯ ಹೆಸರಿನಲ್ಲಿ ತಮ್ಮೆಲ್ಲ ತೃಪ್ತಿಯನ್ನು ಪಡೆಯುತ್ತಾರೆ; ಪತಿಯ ಯಶಸ್ಸಿಗಾಗಿ ತಮ್ಮೆಲ್ಲ ಶಕ್ತಿ ಶ್ರಮಗಳನ್ನು ಸಂತೋಷದಿಂದ ನಿವೇದಿಸುತ್ತಾರೆ. ಇದು ಭಾರತೀಯ ಮಹಿಳೆಯ ಆದರ್ಶ. ಅವರ ಮೌಲ್ಯಗಳ ಅರಿವಿನಿಂದಾಗಿ, ವಿವೇಕದಿಂದಾಗಿ, ಹೃದಯ ಶುದ್ಧಿಯಿಂದಾಗಿ, ಸುಸಂಸ್ಕೃತ ವರ್ತನೆಯಿಂದಾಗಿ ಕುಶಿಯವರ ಮನೆ ಮನಗಳಲ್ಲಿ ಅಕ್ಷುಣ್ಣ ಶಾಂತಿ ನೆಲಸಿದೆ, ಕುಟುಂಬದಲ್ಲಿ ಸಾಮರಸ್ಯವಿದೆ, ಬದುಕಿನಲ್ಲಿ ಉಲ್ಲಾಸವಿದೆ. ಕುಶಿಯವರ ಸಾಧನೆ ಸಿದ್ಧಿಗಳ ರಹಸ್ಯವಿಲ್ಲಿದೆ.

೨ ಕು. ಶಿ. ಶೈಕ್ಷಣಿಕ ಆಯಾಮದಲ್ಲಿ

— ಶ್ರೀಪತಿ ತಂತ್ರಿ

ಪ್ರೊ. ಕು.ಶಿ.ಯವರ ಪರಿಚಯ ನನಗಾದದ್ದು, ನನ್ನ ಅಧ್ಯಯನವನ್ನು ಮುಗಿಸಿ 1962ರಲ್ಲಿ ಮಣಿಪಾಲದಲ್ಲಿ ಉಪನ್ಯಾಸಕನಾಗಿ ನಾನು ಸೇರಿದಾಗ. ಅಂದಿನ ದಿನಗಳಲ್ಲಿ ಕಾಲೇಜಿನ ಉಪನ್ಯಾಸಕ ವೇದಿಕೆಯೊಡನೆ, ಉಡುಪಿಯ, ಹಾಗೂ ಇನ್ನಿತರ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಕಾಣಿಸಿಕೊಂಡು, ತಮ್ಮ ವಿಚಾರಪೂರ್ಣ ಮಾತುಗಾರಿಕೆಯ ಮೂಲಕ ಹೊರಗಿನ ಸಮಾಜಕ್ಕೆ ಪರಿಚಿತರಾಗಿದ್ದ ಪ್ರಾಧ್ಯಾಪಕರುಗಳೆಂದರೆ, ಕು. ಶಿ. ಯವರು ಮತ್ತು ಡಾ. ಗುರುರಾಜ ಭಟ್ಟರು. ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಾಪಕನಾಗಿ ಪ್ರವೇಶಿಸಿದ ನಾನು ಇವರಿಬ್ಬರೆಡೆಗೆ ಆಕರ್ಷಿತನಾಗಿದ್ದೆ. ಪೂನಾದ ನನ್ನ ಸ್ನಾತಕೋತ್ತರ ವಿದ್ಯಾರ್ಥಿದೆಶೆಯಲ್ಲಿ ಡಾ. ಈರಾವತಿ ಕರ್ವೆ, ಡಾ. ಡಿ. ಆರ್. ಗಾಡಗೀಳ್, ಡಾ. ಸಂಕಾಲಿಯರಂಥ ಮಹಾನ್‌ವ್ಯಕ್ತಿಗಳ ಪರಿಸರದಲ್ಲಿ ಬೌದ್ಧಿಕವಾಗಿ ಬೆಳೆದ ನನಗೆ ಉಡುಪಿಯಲ್ಲಿ ಬಂದು ನೆಲೆನಿಂತಾಗ, ಇಲ್ಲಿಯ ಬೌದ್ಧಿಕ ಪರಿಸರದ ನ್ಯೂನತೆಯು ಎದ್ದು ಕಾಣುತ್ತಿತ್ತು. ಅಧ್ಯಾಪಕರ ಪರಿಸರವು ಕೇವಲ ವೃತ್ತಿನಿಷ್ಠವಾಗಿತ್ತಲ್ಲದೆ, ಅಲ್ಲಿ ವೈಚಾರಿಕತೆಯು, ಸೃಜನಶೀಲತೆಯು, ಆಳವಾದ ಅಧ್ಯಯನ ಚರ್ಚೆಯು ಅಂಶವು ತೀರ ಕ್ಷೀಣವಾಗಿತ್ತು. ಇದಕ್ಕೆ ಅಪವಾದವಾಗಿ ಡಾ. ಗುರುರಾಜ ಭಟ್ಟರು ಮತ್ತು ಕು. ಶಿ. ಹರಿದಾಸ ಭಟ್ಟರು ನನಗೆ ಕಾಣುತ್ತಿದ್ದರು ಆಗ. ಒಬ್ಬ ಉತ್ತಮ ಅರ್ಥಶಾಸ್ತ್ರದ ಪ್ರಾಧ್ಯಾಪಕನೆಂದು ವಿದ್ಯಾರ್ಥಿಗಳ ಮೆಚ್ಚುಗೆ ಪಡೆದಿದ್ದ ಕು. ಶಿ. ಯವರು, ಒಬ್ಬ ಉತ್ತಮ ಸಾಹಿತಿಯ ಹೃದಯವನ್ನು ಪಡೆದಿದ್ದು, ಈ ಸಾಹಿತ್ಯ ಕ್ಷೇತ್ರವನ್ನು ಬಳಸಿಕೊಂಡು, ಕಾಲೇಜಿನ ಹೊರಗಿರುವ ಸಮಾಜದೊಡನೆ ತನ್ನ ಸಂಪರ್ಕವನ್ನು ಚಾಚಿದ್ದರು. ದಕ್ಷಿಣ ಕನ್ನಡದ ಸಾಹಿತ್ಯಕವಾದ ಎಲ್ಲ ಚಟುವಟಿಕೆಗಳಿಗೆ ಇವರು ಕೇಂದ್ರ ವ್ಯಕ್ತಿಯಾಗಿ ಬೆಳೆಯುತ್ತಿದ್ದರು. ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು, ಸಾಹಿತ್ಯದ ಕಾರ್ಯ ಕಲಾಪಗಳಿಗೆ, ಸಾಹಿತಿಗಳ ದರ್ಶನ – ಸಂದರ್ಶನಗಳಿಗೆ ಕೇಂದ್ರಸ್ಥಾನವಾಗಿ ಇವರ ಆಶ್ರಯದಲ್ಲಿ ಬೆಳೆಯುತ್ತಿತ್ತು. ಮೈಸೂರಿನ, ಧಾರವಾಡದ, ಬೆಂಗಳೂರಿನ ಕವಿಗಳು, ಕತೆಗಾರರು, ಕಾದಂಬರಿಕಾರರು ಆಗಿಂದಾಗ್ಗೆ ಕಾಣಿಸಿಕೊಳ್ಳುವ ಸ್ಥಾನವಾಗಿತ್ತು. ಸಾಹಿತಿಗಳು ಮಾತ್ರವಲ್ಲ, ಇತರ ಕ್ಷೇತ್ರದ ರಾಷ್ಟ್ರೀಯ ಮಟ್ಟದ ಉನ್ನತ ವಿದ್ವಾಂಸರನ್ನು ಕರೆಸಿಕೊಂಡು ಯಾವುದಾದರೊಂದು ಕಾರ್ಯಕ್ರಮದ ಮೂಲಕ ಅವರನ್ನು ಜನತೆಯ ಮುಂದೊಡ್ಡುವ ಅವಕಾಶವನ್ನು ಕಲ್ಪಿಸಿಕೊಂಡು, ಸಮಾಜಕ್ಕೆ ಜ್ಞಾನಸಂವಹನದ ಹಾಗೂ ಸಂಸ್ಥೆ ಸಮುದಾಯಗಳ ನಡುವೆ ಸಂಪರ್ಕವನ್ನು ಬಲಗೊಳಿಸುವ ಸಾರ್ಥಕ ಕಾರ್ಯಕ್ಕೆ ಇದೊಂದು ಅನುಕರಣೀಯ ಕೇಂದ್ರವಾಗಿತ್ತು – ಕು. ಶಿ. ಯವರ ಆಸಕ್ತಿಯಿಂದಾಗಿ.

ಕು. ಶಿ.ಯವರ ಬಗ್ಗೆ ನನಗೆ ಆದರವು ಬೆಳೆಯಲು ಇನ್ನೊಂದು ಕಾರಣ, ಅವರ ಸದಾ ಜೀವಂತ ಜಾಗ್ರತ ಶೈಕ್ಷಣಿಕ ವ್ಯಕ್ತಿತ್ವ. ಒಳ್ಳೆಯ ನೌಕರಿ ಸಿಗಬೇಕೆಂಬ ಒಂದೇ ಗುರಿಯಿಟ್ಟುಕೊಂಡು ರಾತ್ರಿ ಹಗಲು ಓದಿ, ಪ್ರಥಮ ಸ್ಥಾನದಲ್ಲಿಸ್ನಾತಕೋತ್ತರ ಪದವಿ ಪಡೆದು ಅಧ್ಯಾಪಕ ವೃತ್ತಿಗೆ ಸೇರಿದ ಬಳಿಕ ಓದುವುದನ್ನೆಲ್ಲ ನಿಲ್ಲಿಸಿ, ನೌಕರಿಯ ಭದ್ರತೆಗೆ ಅಗತ್ಯವಾದಷ್ಟು ಓದಿದ್ದನ್ನು ನೆನಪಿನಲ್ಲಿ ಉಳಿಸಿಕೊಂಡು, ಬದುಕುವ ವೃತ್ತಿನಿಷ್ಠ ಅಧ್ಯಾಪಕರುಗಳ ನಡುವೆ, ಕು.ಶಿ.ಯವರದ್ದು ದಣಿಯದ ಶೈಕ್ಷಣಿಕ ವ್ಯವಸಾಯದ ವ್ಯಕ್ತಿತ್ವ. ಯಾವುದಾದರೂ ಒಂದು ವಿಷಯದ ಬಗ್ಗೆ ಅವರು ಯೋಚಿಸುತ್ತಲೇ ಇರುತ್ತಾರೆ, ಯೋಚಿಸಿದ್ದನ್ನು ಉಳಿದವರಿಗೆ ಹೇಳುವ, ವಿಚಾರವಿಮರ್ಶೆ ಮಾಡುವ, ಅದರಲ್ಲಿಯೂ ತೃಪ್ತರಾಗದಿದ್ದಾಗ, ಜನರಿಗೆ ಬರವಣಿಗೆಯ ಮೂಲಕ ಮುಟ್ಟಿಸುವ ಮನೋಧರ್ಮ. ತಾನು ಕಂಡು ಗೌರವ ತಾಳಿದ ವ್ಯಕ್ತಿಗಳ ಬಗ್ಗೆ, ಕಂಡು ಸಂತೋಷಪಟ್ಟ ಸ್ಥಳಗಳು, ಕಲಾತ್ಮಕಕೃತಿಗಳು, ವಸ್ತುಗಳ ಇವೆಲ್ಲ ಅನುಭವಗಳನ್ನೂ ನೇರವಾಗಿ ಉಳಿದವರೊಡನೆ ಹಂಚಿಕೊಳ್ಳುವ ಆಸೆ – ಅವರ ಬರವಣಿಗೆಯ ಹೃದಯಸ್ಪರ್ಶಿ ಗುಣಕ್ಕೆ ಕಾರಣವಾಗಿದೆ. ಆಸಕ್ತಿ – ಅಭಿರುಚಿಗಳು ಏಕಮುಖವಾದವುಗಳಲ್ಲ, ಅದು ಜೀವನದ, ಪರಿಸರದ, ಸಂಸ್ಕೃತಿಯ, ಸಮಾಜದ ಎಲ್ಲಾ ಕ್ಷೇತ್ರಗಳಿಗೂ ಕಣ್ಣು ಹಾಯಿಸಿ, ಸಹಜ ಶೈಕ್ಷಣಿಕ ಕುತೂಹಲದಿಂದ ಎಳೆ – ಎಳೆಯಾಗಿ ಪದರು – ಪದರಾಗಿ ಬಿಡಿಸಿ ನೋಡುವ ಸ್ವಭಾವದ್ದು. ಕಳೆದ ಕೆಲವು ವರ್ಷಗಳಿಂದ ಅವರು 'ಲೋಕಾಭಿರಾಮ'ವಾಗಿ ಚರ್ಚಿಸಿದ ವಿಷಯಗಳ ವೈವಿಧ್ಯವನ್ನು ಕಂಡಾಗ ಇದರ ಪರಿಚಯವಾದೀತು. ಅವರ ಪ್ರವಾಸ ಕಥನದಲ್ಲಿ ಬರುವ ವಿವರಗಳು, ಅವರ ಕಣ್ಣುಗಳು ಎಲ್ಲೆಲ್ಲಿ ಹರಿಯುತ್ತವೆ – ಎಂಬುದನ್ನು ಸೂಚಿಸುತ್ತವೆ. ಈ ರೀತಿಯ ಸದಾ ತೆರೆದ ಕಣ್ಣಿನ, ತೆರೆದ ಹೃದಯದ ವ್ಯಕ್ತಿತ್ವವು ಅವರದ್ದಾಗಿರುವ ಕಾರಣ,

ಅವರು ಸಾಹಿತಿಯೊಡನೆ, ನಾಟಕಕಾರರೊಡನೆ, ಕೆ. ಕೆ. ಹೆಬ್ಬಾರರಂಥ ಕಲಾಕಾರರೊಡನೆ, ಯಕ್ಷಗಾನದವರೊಡನೆ, ಸಂಗೀತ ಭರತನಾಟ್ಯ ವಿದುಷಿಯರೊಡನೆ, ಅರ್ಥಪೂರ್ಣವಾಗಿ ಸಂವಾದಿಸಬಲ್ಲರು. ಸಂವಹನ ಬೆಳೆಸಬಲ್ಲರು, ಮೆಚ್ಚುಗೆಯನ್ನು ಪಡೆಯಬಲ್ಲರು, ಇವರೆಲ್ಲರಿಗೂ ಉಡುಪಿಯ, ದಕ್ಷಿಣ – ಕನ್ನಡದ ನೆನಪಾದಾಗ ಕು. ಶಿ. ಯವರ ಪ್ರತಿಮೆ ಕಣ್ಣಮುಂದೆ ಪ್ರತ್ಯಕ್ಷವಾಗುವಷ್ಟು ಗಮನಾರ್ಹತೆಯನ್ನು ಪಡೆದಿದ್ದಾರೆ.

ಇಂತಹ ಒಬ್ಬ ಪ್ರಾಚಾರ್ಯರ ಪ್ರಭಾವ, ಅವರ ವಿದ್ಯಾರ್ಥಿಗಳ ತಲೆಮಾರಿನ ಉಡುಪಿಯ ತರುಣರಲ್ಲಿ ಖಂಡಿತವಾಗಿಯೂ ಕಾಣಬಹುದು. ಒಂದು ಕಾಲೇಜಿನಿಂದ ಹೊರಬರುವಾಗ, ಸಾಹಿತ್ಯದ ಆಸಕ್ತಿ, ರಂಗಕಲೆಯ ಆಸಕ್ತಿ, ಯಕ್ಷಗಾನದ ಆಸಕ್ತಿಯನ್ನು ಕೆರಳಿಸಿಕೊಂಡು ಹೊರಬಂದವರ ಸಂಖ್ಯೆ ಎಂ. ಜಿ. ಎಮ್. ನಲ್ಲಿ ಆದಷ್ಟು 1960ರ ಮತ್ತು 70ರ ದಶಕದಲ್ಲಿ ಬೇರಾವ ಕಾಲೇಜಿನಲ್ಲೂ ಆಗಿಲ್ಲವೆನ್ನಬಹುದು. ಇಲ್ಲಿಂದ ವಿದ್ಯಾರ್ಥಿಗಳಾಗಿ ಹೊರಬಂದವರು ಬೇರೆ ಬೇರೆ ಕಾಲೇಜಿನಲ್ಲಿ ಅಧ್ಯಾಪಕರಾಗಿ ಅಲ್ಲಿ ಈ ಆಸಕ್ತಿಯ ಪರಿಸರದ ನಿರ್ಮಾಣಕ್ಕೆ ಕಾರಣರಾಗಿದ್ದಾರೆ, ಇನ್ನಿತರ ವೃತ್ತಿಗೆ ಸೇರಿಕೊಂಡವರೂ ಬಹುಮಂದಿ ಈ ದಿಸೆಯಲ್ಲಿ ತಮ್ಮ ಆಸಕ್ತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇಂತವರಿಂದಾಗಿ, ಇಂದಿಗೆ ಉಡುಪಿಯಲ್ಲಿ ಸಾಹಿತ್ಯ – ಸಂಗೀತ – ರಂಗಕಲೆ– ಮುಂತಾದ ಸಂಸ್ಕೃತಿಯ ನಾನಾ ಮುಖದ ಚಟುವಟಿಕೆಗಳಿಗೆ ಸಾಕಷ್ಟು ಗಮನಾರ್ಹ ಸ್ಥಾನವನ್ನು ಪಡೆದಿದೆ. ಒಂದು ಕಾಲೇಜಿನಲ್ಲಿ ಆಗಬೇಕಾದ ಮುಖ್ಯ ಕಾರ್ಯ – ನಾನಾ ಕ್ಷೇತ್ರದ ಉನ್ನತ ಸಾಧನೆ ಮಾಡಿಕೊಂಡ ವ್ಯಕ್ತಿಗಳನ್ನು ತರುಣ ವಿದ್ಯಾರ್ಥಿಗಳ ಮುಂದೆ ಮಾದರಿಯಾಗಿ ಒಡ್ಡುವುದು. ಪಠ್ಯವಿಷಯಗಳ ತರಗತಿಯ ಪಾಠಗಳಿಗಿಂತ ಹೆಚ್ಚಿನ ಪ್ರಭಾವವು, ಪ್ರೇರಣೆಯು ಈ ವಿಧಾನದಿಂದ ಸಾಧಿಸುವುದು. ಕು. ಶಿ. ಯವರಿಂದಾಗಿ, ಅವರಿದ್ದ ಕಾಲೇಜು ಒಂದು ಇಂತಹ ಚಟುವಟಿಕೆಗಳ ನಿರಂತರ ಕಮ್ಮಟವೇ ಆಗಿತ್ತೆನ್ನಬಹುದು.

ಪ್ರೊ. ಕು. ಶಿ. ಯವರು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸುತ್ತಿದ್ದ ಕಾಲ, ಈ ಜಿಲ್ಲೆಯ ಮಟ್ಟಿಗೆ ಶೈಕ್ಷಣಿಕವಾಗಿ ಒಂದು ಮಹತ್ವಪೂರ್ಣ ಕಾಲ. ಉನ್ನತ ಶಿಕ್ಷಣದ ಕಾಲೇಜುಗಳು ಒಂದೊಂದಾಗಿ ಹುಟ್ಟುತ್ತಿದ್ದ ಕಾಲ. ಕಾಲೇಜು ಶಿಕ್ಷಣವು ವ್ಯಾಪಕವಾಗಿ ಜಿಲ್ಲೆಯ ಮೂಲೆ ಮೂಲೆಗೆ ಮುಟ್ಟುವ, ಬೆಳವಣಿಗೆಯ ಕಾಲ, ಇವುಗಳಲ್ಲಿ ಹೆಚ್ಚಿನವು ಮಣಿಪಾಲ ಅಕಾಡಮಿಯವುಗಳೇ. ಈ ಹಿನ್ನೆಲೆಯಲ್ಲಿ ಖಾಸಗೀರಂಗದ ಕಾಲೇಜುಗಳಲ್ಲಿ ಅಂದಿನ ಕಾಲದ ಪ್ರತಿಷ್ಠೆಯ ಸರಕಾರೀ ಕಾಲೇಜುಗಳೊಂದಿಗೆ ಗುಣಮಟ್ಟದಲ್ಲಿ ಸ್ಪರ್ಧಿಸಿ, ಕ್ರಮೇಣ ಅಧ್ಯಾಪಕ ವರ್ಗದ ಶಿಸ್ತು, ಸಂಯಮ, ನಿಯಮಬದ್ಧ ದುಡಿಮೆ, ಸ್ವಯಂಪ್ರೇರಿತ ಅಧ್ಯಾಪನದ ಮೂಲಕ, ಸರಕಾರೀ ರಂಗಕ್ಕಿಂತಲೂ ಖಾಸಗೀರಂಗವು ಮೇಲಕ್ಕೇರಿ, ಪ್ರಶಂಸನೀಯ ಸ್ಥಾನವನ್ನು ಗಳಿಸಲು ಕಾರಣವಾದ ಸಂಸ್ಥಾನಾಯಕತ್ವ (Institutional Leadership.)ದಲ್ಲಿ ಕು.ಶಿ. ಯವರ ಹೆಸರು ಮೊದಲನೆಯದ್ದು. ಇವರ, ಇವರು ನಡೆಸುತ್ತಿದ್ದ ಕಾಲೇಜನ್ನು ಮಾದರಿಯಾಗಿಟ್ಟು, ಹೊಸದಾಗಿ ಹುಟ್ಟಿಕೊಂಡ ಕಾಲೇಜುಗಳ ಪ್ರಿನ್ಸಿಪಾಲರುಗಳು, ಅಧ್ಯಾಪಕರುಗಳು ತಮ್ಮ ಸಂಸ್ಥೆಯನ್ನು ಬೆಳೆಸಿದರು. ಒಟ್ಟು ಜಿಲ್ಲೆಯ ಶೈಕ್ಷಣಿಕ ಪರಂಪರೆಯು ಒಂದು ಒಳ್ಳೆಯ ಹಿರಿಯಕ್ಕನ ಮಾದರಿಯಲ್ಲಿ ಉಳಿದ ತಂಗಿಯರು ಬೆಳೆದಂತೆ, ಸತ್ವಯುತ ಸತ್ಪರಂಪರೆಯಾಗಿ ಬೆಳೆಯಿತು.

ಇನ್ನು ವಿ. ವಿ. ದ ಮಟ್ಟದಲ್ಲೂ ಕು. ಶಿ. ಯವರು ಈ ಜಿಲ್ಲೆಯ ಶಿಕ್ಷಣದ ಪ್ರಧಾನ ವಕ್ತಾರರು. ಡಾ. ಶ್ರೀಮಾಲಿ, ಪ್ರೊ. ಜವರೇ ಗೌಡರು, ಡಿ. ವಿ. ಅರಸು – ಮುಂತಾದ ಉಪಕುಲಪತಿಗಳ ಆಧಿಪತ್ಯದ ಅಧಿಕಾರ ಮಂಡಳಿಗಳಲ್ಲಿ ಬಹಳ ಮಾರ್ಮಿಕವಾದ ವಿಶ್ಲೇಷಣೆ, ರಚನಾತ್ಮಕ ಸಲಹೆಗಳ ಅಗತ್ಯದ ಸಂದರ್ಭಗಳಲ್ಲಿ ಸಭೆಯು ಸ್ವಾಭಾವಿಕವಾಗಿ ಕು. ಶಿ. ಯವರ ಕಡೆಗೆ ತಿರುಗಿ, ಇವರೇನನ್ನುತ್ತಾರೆಂದು ನಿರೀಕ್ಷಿಸುವಷ್ಟು ಕೇಂದ್ರವ್ಯಕ್ತಿಯಾಗಿ ಮುಂದರಿದಿದ್ದರು. ಅನೇಕವೇಳೆ ಬುದ್ಧಿಜೀವಿಗಳನೇಕರಿಗೆ ಸಹಜವಾದ ವಾಸ್ತವ್ಯ ದೂರವಾದ ಸಿದ್ಧಾಂತಗಳ ಒಲವು ಅತಿರೇಕವಾದಾಗ, ಖಂಡತುಂಡವಾದ ನೇರವಾದಮಾತುಗಳಿಂದ ವಿರೋಧಿಸಿದ ಸಂದರ್ಭಗಳೂ ಹೇರಳ.

ಉಪಕುಲಪತಿಗಳ ಮಾರ್ಗವು ಸರಿಯೆನಿಸದಾಗ, ಮುಚ್ಚುಮರೆಯಿಲ್ಲದೆ ವಿರೋಧಿಸಿಯೂ ಉಪಕುಲಪತಿಗಳ ಮೆಚ್ಚುಗೆಗೆ ಚ್ಯುತಿ ಬರುತ್ತಿರಲಿಲ್ಲ. ಕಾರಣ ಕು. ಶಿ. ಯವರು ಎಂದಿಗೂ ವ್ಯಕ್ತಿ ವಿರೋಧಿಯಾಗಿರಲಿಲ್ಲ. ವಸ್ತುನಿಷ್ಠ ವಿಮರ್ಶಕರಾಗಿದ್ದರು. ಎಂಥಾ ಪ್ರಖರ ಚರ್ಚೆಯ ಸಂದರ್ಭದಲ್ಲೂ ಸಹೃದಯತೆಯನ್ನು ಕಳೆದುಕೊಂಡವರಲ್ಲ. ಉಪಕುಲಪತಿಗಳ ಅಭಿಪ್ರಾಯವನ್ನು ವಿರೋಧಿಸಿದಲ್ಲಿ, ಅವರು ನೊಂದುಕೊಂಡಾರೆಂದು ಮೌನವ್ರತಿಯಾಗಿರುವ ಪ್ರಿನ್ಸಿಪಾಲರುಗಳ ಸಾಲಿಗೆ ಇವರೆಂದೂ ಸೇರಿದವರಲ್ಲ. ಬಿಚ್ಚು ಮನಸ್ಸಿನ ಮಾತುಗಾರಿಕೆಯಿಂದಲೇ ಎಲ್ಲರ ಮನಸ್ಸನ್ನು ಗೆದ್ದವರು. ಮೈಸೂರು ವಿ. ವಿ. ದ ಪ್ರಿನ್ಸಿಪಾಲರ ಪರಂಪರೆಯಲ್ಲಿ ಕು. ಶಿ. ಯವರಿಗೆ ವಿಶಿಷ್ಟ ಸ್ಥಾನವಿದೆ. ಮೈಸೂರು ವಿ. ವಿ. ದ 1970ರ ದಶಕದ ಅನೇಕ ಮಹತ್ವಪೂರ್ಣ ನಿರ್ಣಯಗಳಲ್ಲಿ ಕು. ಶಿ. ಯವರ ವೈಚಾರಿಕತೆಯ ಪ್ರಭಾವವಿದೆ.

ಮಂಗಳೂರು ವಿ. ವಿ. ದ ಸ್ಥಾಪನೆಯ ಕುರಿತಾಗಿ ಡಾ. ವಿ.ಕೆ. ಆರ್.ವಿ. ರಾಯರ ನೇತೃತ್ವದಲ್ಲಿ ಸ್ಥಾಪಿತವಾದ ಸಮಿತಿಯಲ್ಲಿಯೂ ಕು. ಶಿ. ಯವರು ಒಬ್ಬ ಸದಸ್ಯನಾಗಿ ತನ್ನ ಮಹತ್ವಪೂರ್ಣ ಕೊಡುಗೆಯನ್ನು

ಸಲ್ಲಿಸಿದ್ದಾರೆ. ಪಿ. ಪಿ. ವ ರೂಪುರೇಷೆಯನ್ನು ಸಿದ್ಧಪಡಿಸುವಲ್ಲಿ ಅವರ ವಿಚಾರಗಳು ಮಾರ್ಗದರ್ಶಿಯಾಗಿದ್ದುವು. ಈ ಸಮಿತಿಯ ಒಬ್ಬ ಸದಸ್ಯನಾಗಿದ್ದ ನಾನು. ಸಮಿತಿಯಲ್ಲಿ ಇವರ ಮಾತಿಗೆ ಹೆಚ್ಚಿನ ಬೆಲೆಯನ್ನು ಉಳಿದ ಸದಸ್ಯರು ಕೊಡುತ್ತಿದ್ದುದನ್ನು ಕಂಡಿದ್ದೇನೆ. ಪ್ರಾದೇಶಿಕ ಜಾಯಮಾನಕ್ಕೆ ಅನ್ವರ್ಥಕವಾದ ಪಿ. ಪಿ. ವು ಸ್ಥಾಪಿತವಾಗಬೇಕೆಂಬ ಕಾಳಜಿ ಇವರದ್ದಾಗಿತ್ತು. ಈ ಪ್ರದೇಶದ ಸಂಸ್ಕೃತಿ, ಭಾಷೆ, ಆರ್ಥಿಕ ಸಾಮಾಜಿಕ, ಅಭ್ಯುದಯಕ್ಕೆ ಅನುವರ್ತಿಯಾಗಿ, ಪೂರಕವಾಗಿ ಈ ಪಿ. ಪಿ. ವು ಬೆಳೆಯಬೇಕೆಂಬ ಆಶಯವು ಅವರದಾಗಿತ್ತು. ವರದಿಯನ್ನು ಸಿದ್ಧಪಡಿಸುವಾಗ.

ವೃತ್ತಿನಿರತ ಪ್ರಿನ್ಸಿಪಾಲರುಗಳಿಗೆ ಒಂದು ನಿರ್ದಿಷ್ಟ ವಯಸ್ಸಿನಲ್ಲಿ ನಿವೃತ್ತಿಯುಂಟಾಗಿದೆ. ಆದರೆ ಅದು ಕು. ಶಿ. ಯವರಿಗಿಲ್ಲ. ಪ್ರಿನ್ಸಿಪಾಲ ಕು. ಶಿ. ಯವರು ನಿವೃತ್ತರಾಗಿದ್ದರೂ, ಕು. ಶಿ. ಯವರ ವ್ಯಕ್ತಿತ್ವ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರವೃತ್ತವಾಗಿಯೇ ಮುಂದುವರಿದಿದೆ. ಒಂದು ರೀತಿಯಿಂದ ಕೇವಲ ನೀತಿ ನಿಯಮಗಳ ಪಾಲನೆಗೇ ಮೀಸಲಾಗಿರುವ ಪ್ರಿನ್ಸಿಪಾಲ ಪದವಿಯಿಂದ ನಿವೃತ್ತರಾದದ್ದೇ ಒಳ್ಳೆಯದಾಯಿತು. ತಮ್ಮ ಸಂಪೂರ್ಣ ಸಮಯವನ್ನು ಸೃಜನಾತ್ಮಕ ಕ್ರಿಯೆಗಳ ಸಂಘಟನೆ, ನಿರ್ವಹಣೆಯ ಕಡೆಗೆ ತೊಡಗಿಸಿಕೊಳ್ಳಲು ಅನುಕೂಲವಾಯಿತು. ಇದೀಗ ಮಹಾತ್ಮ ಗಾಂಧೀ ಮೆಮೋರಿಯಲ್ ಕಾಲೇಜಿನ ಬಲಭಾಗವು. ಈಗಿನ ಶಿಕ್ಷಣ ನೀತಿಯ ಪ್ರಮುಖ ಕ್ಷೇತ್ರವಾದ ಅನೌಪಚಾರಿಕ (Non - formal education) ಶಿಕ್ಷಣ ಮತ್ತು ಸಂಶೋಧನಾ ಕೇಂದ್ರವಾಗಿ, ಉನ್ನತ ಮಟ್ಟದ ವಿದ್ವಾಂಸರುಗಳು ಆಗಾಗ್ಗೆ ಸೇರುವ ಚರ್ಚಿಸುವ, ಭಾಷಾ ವಿಜ್ಞಾನ, ಜಾನಪದ ಕಲೆ, ಜನಾಂಗ ಶಾಸ್ತ್ರ, ಯಕ್ಷಗಾನ, ಮುಂತಾದ ಜ್ಞಾನ ಮತ್ತು ಕಲೆಯ ಪ್ರಕಾರಗಳು ಗುರುತಿಸಿ, ದಾಖಲಿಸಿ, ಪ್ರದರ್ಶಿಸಿ, ಪೋಷಿಸುವ ಕೇಂದ್ರವಾಗಿ ಕು. ಶಿ. ಯವರ ನೇತೃತ್ವದಲ್ಲಿ ಬೆಳೆದಿದೆ. ಈ ದೇಶದ ಕಲೆ, ಜಾನಪದ ಸಂಸ್ಕೃತಿಗಳ ಬಗ್ಗೆ ಆಸಕ್ತರಾದ ದೇಶವಿದೇಶದ ವಿದ್ವಾಂಸರು ಅರಸಿಕೊಂಡು ಬರುವ ತಾಣವಾಗಿದೆ. ಹಗಲು ರಾತ್ರೆ ಕು.ಶಿ. ಯವರು ಯೋಚಿಸುತ್ತಿರುವುದುಈ ವ್ಯವಸ್ಥೆಯನ್ನು ಸಜೀವವಾಗಿ ಉಳಿಸಿಕೊಳ್ಳುವುದನ್ನು, ಇದು ಇನ್ನೂ ಉತ್ತಮವಾಗಿ ಬೆಳೆಯುವುದಕ್ಕೆ ಬೇಕಾದ ಕಾರ್ಯಕ್ರಮಗಳನ್ನು. ಹಳೆಯ ವಿದ್ವತ್ಪರಂಪರೆ, ಜ್ಞಾನಪ್ರಕಾರಗಳ ಬಗ್ಗೆ ಗೌರವದೊಡನೆ, ಹೊಸತನ್ನು ತೆರೆದ ಹೃದಯದಿಂದ ಸ್ವಾಗತಿಸುವ, ಗ್ರಹಿಸುವ, ಪ್ರೋತ್ಸಾಹಿಸುವ ಗುಣವುಳ್ಳ ಕು. ಶಿ. ಯವರಿಂದ ಮಾತ್ರ ಶಿಕ್ಷಣ, ಜ್ಞಾನ ಪ್ರಸಾರ, ಸಂಶೋಧನೆಯ ಕಾರ್ಯಗಳು ಸಮರ್ಪಕವಾಗಿ ರೂಪುತಳೆಯಲು ಸಾಧ್ಯ. ಇಲ್ಲದಿದ್ದಾಗ ಇಂತಹ ನಾಯಕತ್ವವಿಲ್ಲದಿದ್ದಾಗ ಕಾಲೇಜೆನ್ನುವುದು, ಅದೆಷ್ಟೇ ಭೌತಿಕ ಸೌಲಭ್ಯಗಳಿಂದ ಶ್ರೀಮಂತವಾಗಿರಲಿ, ಜೀವವನ್ನು ಕಳೆದುಕೊಂಡ ಸತ್ವಹೀನ ಪಾಠಪ್ರವಚನ, ಕಟ್ಟು ಕಟ್ಟಲೆಗಳ, ವಿಚಾರ ರಹಿತ – ಆಚಾರ ನಿಷ್ಠ "ದೇವಾಲಯ"ವಾಗುವುದು. ಶೈಕ್ಷಣಿಕ ಗೊತ್ತು ಗುರಿಗಳನ್ನೇ ಮರೆತ ವ್ಯರ್ಥ ಶ್ರಮದ ಕಸರತ್ತಿನ ಗರಡಿಯಾಗುವುದು.

೩ ಕು. ಶಿ. ಯವರ ಬಗೆಗೆ

— ವಕ್ವಾಡಿ ಶ್ರೀನಿವಾಸ ಭಟ್

ಮನೆತನ:

ಹರಿದಾಸ ಭಟ್ಟರ ಹೆಸರಿನ ಹಿಂದಿರುವ ಕು. ಕುಂಜಿಬೆಟ್ಟನ್ನು ಹೆಸರಿಸುವಂತೆ 'ಕು. ಶಿ. 'ಯವರ ತಂದೆ ಶಿವಗೋಪಾಲ ಭಟ್ಟರು ಕುಂಜಿಬೆಟ್ಟಿನ ನಿವಾಸಿ. ಕುಂಜಿಬೆಟ್ಟಿಗೆ ಆ ಹೆಸರನ್ನಿತ್ತ 'ಕುಂಜಿತ್ತಾಯ' ಮನೆಯ ಸಮೀಪದಲ್ಲೇ ವಾಸ್ತವ್ಯ – ಚಿಕ್ಕಪ್ಪ ಶಿವಅನಂತ ಭಟ್ಟ – ಮನೆತನವು ಉಡುಪಿಯ ಆರಾಧ್ಯ ದೈವ ಶ್ರೀಕೃಷ್ಣನ ದೇವಸ್ಥಾನದಲ್ಲಿ ಕೈಂಕರ್ಯಗೊಂಡಿತ್ತು. ಗೋಪಾಲ ಭಟ್ಟರ ಆರೋಗ್ಯ ಅಷ್ಟಕಷ್ಟೆ. ಅಸ್ತಮಾದಿಂದ ಬಳಲುತ್ತಿದ್ದರು. – ಚಿಕ್ಕಪ್ಪ ಸಹಜವಾಗಿಯೇ – ಉಡುಪಿ ಬ್ರಾಹ್ಮಣರಿಗೆ ಜೀವನೋಪಾಯಕ್ಕೆ ಆಧಾರವೆನಿಸಿದ್ದ – ಹೋಟೆಲ್ ಉದ್ಯಮಿಯಾಗಿ ಗದುಗಿನಲ್ಲೇ 'ಗದಗ್ ರೆಸ್ಟೋರೆಂಟ್' ನಡೆಸುತ್ತಿದ್ದರು. ಅಣ್ಣ ತಮ್ಮಂದಿರೊಳಗಿನ ವೈಮನಸ್ಯ 'ಕು. ಶಿ.'ಯವರ ಜೀವನವನ್ನು ವಿಶಿಷ್ಟ ರೀತಿಯಲ್ಲಿ ರೂಪಿಸುವಲ್ಲಿ ಒಂದು ಮಹತ್ವದ ಘಟನೆ. ಇದರಿಂದಾಗಿಯೇ ಬಾಲ್ಯದಿಂದಲೂ ಕು. ಶಿ. ಯವರಿಗೆ ಬಡತನ, ದಾರಿದ್ರ್ಯ ಬಾಧೆ ತಟ್ಟದಿರಲಿಲ್ಲ. ಈಗಲೂ ಅವರನ್ನು ಬೆಂಬಿಡದೆ ಕಾಡುವ 'ಅಸ್ತಮಾ' ಹೆಚ್ಚುಕಡಿಮೆ ಪಿತ್ರಾರ್ಜಿತವೆಂದೇ ಹೇಳಬೇಕು.

ವಿದ್ಯಾಭ್ಯಾಸ

ಊರಿನ ಅತೀ ಪ್ರಾಚೀನ ಅಷ್ಟೇ ಖ್ಯಾತವೂ ಆಗಿದ್ದ 'ಕಡಿಯಾಳಿ' ಶಾಲೆಯಲ್ಲಿ – ಮನೆಯ ಸಮೀಪಕ್ಕೆ ಇತ್ತು – ಮೊದಲ ಎಂಟು ವರ್ಷಗಳು ಇಲ್ಲಿಯೇ ವಿದ್ಯಾಭ್ಯಾಸ – ಕಡಿಯಾಳಿ ರಾಮಚಂದ್ರ ಉಪಾಧ್ಯ (ಕನ್ನಡ ಪಂಡಿತ), ಬನ್ನಂಜೆ ಲಿಂಗಪ್ಪ ಶೆಟ್ಟಿ, ಸೋಮನಾಥ್ ರಾವ್ (ಸ್ಕೌಟ್ ಮಾಸ್ತರ್), ವಾಸು ಶೆಟ್ಟಿ (ಹೆಡ್ ಮಾಸ್ಟರ್) ಹಾಗೂ ನಾರ್ಣಪ್ಪಯ್ಯ ಮತ್ತು ಶೇಷಗಿರಿ ಕಾಮತ್ (ಕ್ರಮವಾಗಿ ನಾರಾಯಣ ಮಾಸ್ಟ್ರು (ಮೆನೇಜರ್) ಶೇಷ ಮಾಸ್ಟ್ರು) ಇವರು ಕು. ಶಿ.ಯವರ ಬಾಲ್ಯಕಾಲದ ಶಿಕ್ಷಣದಲ್ಲಿ ವಿಶೇಷ ಪಾತ್ರವಹಿಸಿದವರು — ಕು. ಶಿ.ಯವರು ಕಡಿಯಾಳಿ ಶಾಲೆಯಲ್ಲಿರುವಾಗಲೇ ದ. ಕ. ಜಿಲ್ಲಾ ಶಿಕ್ಷಣ ಸಮ್ಮೇಳನ ಉಡುಪಿಯಲ್ಲಿ (ಬೋರ್ಡ್ ಹ್ಯಾಸ್ಕೂಲ್) ಜರುಗಿ ಎಲ್ಲಾ ವಿಭಾಗಗಳಲ್ಲಿ ಕಡಿಯಾಳಿ ಶಾಲೆ ಪ್ರಶಸ್ತಿಗಳನ್ನು ದೋಚಿ, ಬಾಚಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಅನ್ಯಾದೃಶ ಶೈಕ್ಷಣಿಕ ಸಂಸ್ಥೆ ಎನ್ನಿಸಿದ್ದು – ಈ ಕೀರ್ತಿಯಲ್ಲಿ ಕು. ಶಿ. ಯಂಥ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ನ್ಯಾಯವಾದ ಪಾಲು ಸಲ್ಲುತ್ತದೆ. ಈ ಲೇಖಕನಿಗೂ ಕು. ಶಿ. ಯವರಿಗೂ ವಯಸ್ಸಿನಲ್ಲಿ 5 ವರ್ಷಗಳ ಅಂತರವಿದ್ದ ಕಾರಣ ಭಾಷಣದಲ್ಲಿ, ಮುದ್ದಾದ ಬರಹದಲ್ಲಿ, ಪ್ರಬಂಧ ರಚನೆಯಲ್ಲಿ, ನಾಟಕಾಭ್ಯಾಸದಲ್ಲಿ 'ಹರಿದಾಸ' ಎಂಬ ಚುರುಕು ಹುಡುಗನ ಹೆಸರು ಎಲ್ಲರ ಬಾಯಲ್ಲಿ ನಲಿದಾಡಿದ್ದನ್ನು ಕೇಳಿದ ನೆನಪು ಇನ್ನೂ ಮಾಸಿಲ್ಲ. ಹೈಸ್ಕೂಲ್ ವಿದ್ಯಾಭ್ಯಾಸ ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ – ಈ ಲೇಖಕ ಕಡಿಯಾಳಿ ಶಾಲೆಯಿಂದ ಅದೇ ಬೋರ್ಡ್ ಹೈಸ್ಕೂಲ್ ಸೇರುವ ಹೊತ್ತಿಗೆ ಕು. ಶಿ. ಹೈಸ್ಕೂಲ್ ಶಿಕ್ಷಣ ಮುಗಿಸಿಯಾದ್ದರಿಂದ ಕು. ಶಿ. ಯವರ ಹೈಸ್ಕೂಲ್ ಶಿಕ್ಷಣದ ಅವಧಿಯಲ್ಲಿ ನಡೆದ ಯಾವ ಘಟನೆಗಳೂ ಲೇಖಕನ ಗಮನಕ್ಕೆ ಬಂದಿಲ್ಲ. ಆದರೆ ಎಸ್‌ಎಸ್‌ಎಲ್‌ಸಿಯಲ್ಲಿ ಅನ್ಯಾದೃಶ ಗೆಲುವಿನಿಂದ ಗೆದ್ದು ಬಂದ ಈ ಹುಡುಗನಿಗೆ, ಆರ್ಥಿಕ ಅನಾನುಕೂಲತೆಯಿಂದಾಗಿ ವಿಶ್ವವಿದ್ಯಾನಿಲಯದ ಕಟ್ಟೆ ಹತ್ತಲಾಗಲಿಲ್ಲವೆಂಬ ಅನುತಾಪ ಈ ಪರಿಸರವಲ್ಲೆಲ್ಲ ಮನೆ ಮಾತಾದದ್ದು ನನಗೆ ಗೊತ್ತು. ಒಮ್ಮೆ 'ದರ್ಶನ'ವೂ ಮಾಡಿದ್ದೆ. ಮಸುಕು ಬಣ್ಣದ. ಗಿಡ್ಡ ಕೈಕಾಲುಗಳ, ದುಂಡು ಮುಖದ ಬಿರುಸು ಕೂದಲಿನ, ಆದರೆ ಹೊಳೆಹೊಳೆಯುವ ವಿಶಾಲ ನೇತ್ರಗಳ 'ಗಟ್ಟಿಗ'ನನ್ನು ಕಂಡ ನೆನಪು ಮಸುಕಾಗಿದೆ.

ಮಂಗಳೂರಿನ ಸರಕಾರೀ ಕಾಲೇಜಿನಲ್ಲಿಯ ಅಧ್ಯಾಪಕ ತರಬೇತಿ ವಿಭಾಗದಲ್ಲಿ 2 ವರ್ಷಗಳ ಅಧ್ಯಾಪನಾ ವೃತ್ತಿ ತರಬೇತಿ, ಆ ಕಾಲದಲ್ಲಿ ಅಧ್ಯಯನಶೀಲತೆಗೆ ಹೊಸ ಪ್ರೋತ್ಸಾಹ. ಆಗಿನ ಮದ್ರಾಸ್ ಪ್ರಾಂತ್ಯಕ್ಕೇ ಅತ್ಯಂತ ಪ್ರಸಿದ್ಧ ಪುಸ್ತಕ ಭಂಡಾರ ಸರಕಾರೀ ಕಾಲೇಜಿನದು. ಜಿ.ಕೆ. ಚೆಟ್ಟ್ಯೂರ್ ಪ್ರಿನ್ಸಿಪಾಲರಾಗಿದ್ದ ಸುವರ್ಣ ಯುಗ ಅದು. ಕಡೆಂಗೋಡ್ಲು, ಸೇಡಿಯಾಪು, ತೆಕ್ಕುಂಜ, ಕಾರಂತ ಮೊದಲಾದ ಕನ್ನಡದ ಪಂಡಿತವರ್ಯರ ಪರಿಚಯ ಶಿಷ್ಯತ್ವ – ಬಹುಶಃ ಸಾಹಿತ್ಯ ಪರಿಷತ್ತಿನ 'ಕನ್ನಡ ಜಾಣ' ಪರೀಕ್ಷೆ ಇಲ್ಲಿಯೇ ತಯಾರಿ – 'ಮುಳಿಯ'

ರ ಶಿಷ್ಯತ್ವದಲ್ಲಿ - All round ಯೋಗ್ಯತೆಯ ಅಧ್ಯಾಪಕನಾಗಿ, ಕನ್ನಡ, ಹಿಂದಿಗಳಲ್ಲಿ ಪ್ರಾವೀಣ್ಯದೊಂದಿಗೆ, ಸಾಹಿತ್ಯಾಕಾಶದಲ್ಲಿ ವಿಹರಿಸ ಬಯಸುವ ಹಕ್ಕಿಮರಿಯಂತೆ ಉಡುಪಿಗೆ ಬಂದರು.

ನೌಕರಿ:

ಪ್ರಶಿಕ್ಷಿತ ಅಧ್ಯಾಪಕರಾಗಿ ವೃದ್ಧ ಮಾತಾಪಿತರ ಏಕಮಾತ್ರ ಪುತ್ರನಾಗಿ ಮನೆ ಸೇರಿದ ಕು. ಶಿ. ತಮ್ಮ ಮನೆಯ ಬಳಿಯ ತಮ್ಮ ಮಾತೃಶಾಲೆ, ಕಡಿಯಾಳಿ ಶಾಲೆಯಲ್ಲಿ ಅಧ್ಯಾಪಕರಾದರು. ಕಡಿಯಾಳಿ ಶಾಲೆಯ ಇತಿಹಾಸದಲ್ಲೇ ಹೊಸ ಅಧ್ಯಾಯ ತೆರೆಯಿತು. ಇಂಥ ಚಟುವಟಿಕೆ, ಪಾದರಸದಂತ ಚುರುಕು, ಅಸಾಧಾರಣ ಅಧ್ಯಾಪನ ಚಾತುರ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಹಿಂದೆಂದೂ ಕಂಡಿರದ ತನ್ಮಯತೆ - ಪಾಚಿಗಟ್ಟಿದಂಥ ಕಡಿಯಾಳಿ ಶಾಲೆಯ ಶಿಕ್ಷಣ ಪ್ರಪಂಚದಲ್ಲಿ ಹಿಂದೆಂದೂ ಕಾಣದ್ದು ಕೇಳದ್ದು. ತಾನು ಹೊಸತಾಗಿ ಕಲಿತು ಬಂದ ಪ್ರತ್ಯಕ್ಷ ಪದ್ಧತಿ (ಡೈರೆಕ್ಟ್ ಮೆತಡ್) ಯನ್ನು ಇಂಗ್ಲೀಷ್ ಶಿಕ್ಷಣಕ್ಕೆ ಬಳಸಿ ಯಶಸ್ವಿಯಾದರು. ಸ್ಕೌಟಿಂಗ್, ನಾಟಕಗಳು (ಗಂಡುಗೊಡಲಿ, ಗಂಗಜ್ಜನ ಗಡಿಬಿಡಿ)–ಕಡಿಯಾಳಿ ಶಾಲೆ ಮತ್ತೆ ಸುದ್ದಿಯಲ್ಲಿ – ಆಗ ಬೋರ್ಡ್ ಹೈಸ್ಕೂಲಿನಲ್ಲಿ ಓದುತ್ತಿದ್ದ ನಾನು ಒಂದು ದಿನ ಕಡಿಯಾಳಿ ಶಾಲೆಯ ಪ್ರೋರ್ಟಿಕೋದಲ್ಲಿ 'at home' 'at road' ಎಂಬ ಪಡೆನುಡಿಗಳನ್ನು direct methodನಿಂದ ಇಂಗ್ಲೀಷ್ ಪಾಠ ಮಾಡುತ್ತಿದ್ದ ಕು. ಶಿ. ಯವರನ್ನು ನೋಡಿ ದಂಗಾಗಿ ಹೋಗಿದ್ದೆ. ಈ ಎಲ್ಲ ಚಟುವಟಿಕೆಗಳ ಮಧ್ಯೆ ಕಡಿಯಾಳಿ ರಾಮಚಂದ್ರ ಉಪಾಧ್ಯರ ಮಾರ್ಗದರ್ಶನದಲ್ಲಿ ಕನ್ನಡ ವಿದ್ವಾನ್ ಪರೀಕ್ಷೆಯನ್ನು ಫಸ್ಟ್ ರ್ಯಾಂಕ್‌ನಲ್ಲಿ ಉತ್ತೀರ್ಣರಾಗಿ ಶ್ರೀ ಪಿ. ಎನ್. ಕೃಷ್ಣಮೂರ್ತಿ 2ನೇ ಸ್ಥಾನ ಗೋಲ್ಡ್ ಮೆಡಲ್ – ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಪಡೆದರು. ಅದೇ ಹೊತ್ತಿಗೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳಿಗೂ ಬರೆದು ರಾ. ಭಾ. ವಿಶಾರದ ಪದವಿ ಪಡೆದರು. ರಾ.ಭಾ.ವಿಶಾರದ ಪದವೀ ದಾನ ಸಮಾರಂಭದಲ್ಲಿ ನೀಡಲಾಗುತ್ತಿದ್ದ ಖಾದೀ ಶಾಲುಹೊದ್ದು ಕಡಿಯಾಳಿ ಶಾಲೆಯ ವರ್ಷಾಂತ್ಯದ Group Photo ದಲ್ಲಿ ನಿಂತಿರುವ ವಾಮನ ಮೂರ್ತಿ ಕು. ಶಿ. ಯವರನ್ನು ಈಗಲೂ ಶಾಲೆಯಲ್ಲಿರುವ Group Photoದಲ್ಲಿ ಕಾಣಬಹುದು. ಆದರೆ ವಿಶ್ವವಿದ್ಯಾಲಯದ ಇಂಟರ್ ಮೀಡಿಯೇಟ್ ಪರೀಕ್ಷೆ ಕೊಡುವ, ಪದವೀಧರನಾಗುವ ಆಸೆ ಹೊತ್ತ ಕು. ಶಿ. ಯವರಿಗೆ ಕಡಿಯಾಳಿ ಶಾಲೆಯ ಎಲಿಮೆಂಟರಿ ಸ್ಕೂಲ್ ವಾತಾವರಣ ಏನೇನೂ ಕುಮ್ಮಕ್ಕು ನೀಡದಾಯಿತು. ಹೀಗಾಗಿ ಕು. ಶಿ. ಯವರು ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಧ್ಯಾಪನ ವೃತ್ತಿ ಕೈಗೊಂಡರು. ಅಲ್ಲಿ ಇಂಟರ್ ಮೀಡಿಯೇಟ್ ಪರೀಕ್ಷೆಯನ್ನು ಮೊದಲನೇ ದರ್ಜೆಯಲ್ಲಿ ಪಾಸ್ ಮಾಡುವುದು ಸಾಧ್ಯವಾಯಿತು.

ಇಷ್ಟು ಹೊತ್ತಿಗೆ ಕು. ಶಿ. ಯವರ ಅಪ್ಪ ಚಿಕ್ಕಪ್ಪನವರ ನಡುವಣ ವೈಮನಸ್ಸು ಸುಖಾಂತವಾಗಿ ಮುಕ್ತಾಯವಾಗಿತ್ತು. ಕು. ಶಿ. ಯವರ ಬಡತನ ಈಗ ಭೂತಕಾಲಕ್ಕೆ ಸೇರಿ ಹೋಯಿತು. ಅಲ್ಲಿಂದ ಮುಂದೆ ಅದು 'ಕು.ಶಿ.' ಯವರ ಸಮೀಪ ಎಂದೂ ಸುಳಿಯಲಿಲ್ಲ. ಕು. ಶಿ.ಯವರು ಚಿಕ್ಕಪ್ಪನ ಶುಭಾಶೀರ್ವಾದ ಪಡೆದು ಕ್ರಿಶ್ಚನ್ ಹೈಸ್ಕೂಲಿನ ಕೆಲಸಕ್ಕೆ ರಾಜೀನಾಮೆ ನೀಡಿ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನ ಬಿ. ಎ. ಆನರ್ಸ್‌ಗೆ ಸೇರಿಕೊಂಡು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ಉಡುಪಿಗೆ ಮರಳಿದರು. ಅವರಿಗಾಗ ಎರಡು ಕ್ಷೇತ್ರಗಳಿದ್ದವು. ಅದೇ ವರ್ಷ ಉಡುಪಿಯಲ್ಲಿ ಕಾರ್ಯಪ್ರವೃತ್ತವಾದ ಎಂ.ಜಿ.ಎಂ. ಕಾಲೇಜು ಮತ್ತು ಸಿಂಡಿಕೇಟ್ ಬ್ಯಾಂಕ್. ಕು. ಶಿ. ಯವರು ಎಂ. ಜಿ. ಎಂ. ನಲ್ಲಿ ಉಪನ್ಯಾಸಕರ ಪ್ರವೃತ್ತಿಯನ್ನೇ ಆರಿಸಿಕೊಂಡದ್ದು ಸರ್ವವಿದಿತ. ಮುಂದೆ ಎಂ. ಜಿ. ಎಂ.ನ ಪ್ರಿನ್ಸಿಪಾಲರಾದದ್ದು ಇದೆಲ್ಲ ಎಲ್ಲರಿಗೂ ತಿಳಿದದ್ದೆ – ಅಷ್ಟು ಹೊತ್ತಿಗೆ ಉಡುಪಿಯ ಕರ್ನಾಟಕ ಸಂಘದ ಸದಸ್ಯತ್ವ – ಸಕ್ರಿಯ ಭಾಗವಹಿಸುವಿಕೆ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳ ಆತ್ಮೀಯ ಪರಿಚಯ – ಬರಹ – ಹಿಂದಿ ಗ್ರಂಥಗಳ ಅನುವಾದ – ಗಬನ್ – ಸ್ವಂತ ಕತೆಗಳು ಅವರು ಯುದ್ಧಕ್ಕೆ ಹೋಗಲಿಲ್ಲ. ಯು. ಎಲ್. ಆಚಾರ್ ಅವರ ಜತೆಗೂಡಿ 'ಅವ್ಯಕ್ತಮಾನವ', ಹಣಪ್ರಪಂಚ– ನವೋದಯ ಗ್ರಂಥ ಮಾಲೆ ಇತ್ಯಾದಿ.

ಸಾಧನೆ, ಸಿದ್ಧಿ

ಕಡಿಯಾಳಿ ಶಾಲೆಯ ಮೇಲಿನ ವಿಶೇಷ ಮಮತೆ – ಹಳೆ ವಿದ್ಯಾರ್ಥಿ ಸಂಘ. ಶಾಲಾಭಿವೃದ್ಧಿ ಸಮಿತಿ. ಶತಮಾನೋತ್ಸವ ಸಮಿತಿಗಳಲ್ಲಿ ಸಕ್ರಿಯ ಪಾತ್ರ – ಎಂ. ಜಿ. ಎಂ. ನ ಎನ್‌ಎಸ್‌ಎಸ್ ಸಂಸ್ಥೆಯ ಮೂಲಕ ಶಾಲೆಯ ದತ್ತು ಸ್ವೀಕಾರ – ಹಳೆಯ ಅಧ್ಯಾಪಕರು ಗಳಿಗೆ ಪುರಸ್ಕಾರ ಇತ್ಯಾದಿ.

೪ ಸಾಂಸ್ಕೃತಿಕ ರಾಯಭಾರಿ

—ಕೆ. ವಿ. ಸುಬ್ಬಣ್ಣ

ಸಾಧಕ ಪ್ರೊ. ಹರಿದಾಸ ಭಟ್ಟರ ಬಗ್ಗೆ ಯೋಚಿಸುವಾಗ ಹಿಂದೊಮ್ಮೆ ಬರೆದದ್ದು ನೆನಪಾಗುತ್ತದೆ:

ಹರಿದಾಸ ಭಟ್ಟರು ಎಂದಕೂಡಲೇ ಯಾವತ್ತೂ ನನ್ನ ಮನಸ್ಸಿನಲ್ಲಿ ಮೂಡುವ ಚಿತ್ರ ಬರೀ ಆ ವ್ಯಕ್ತಿಯದಲ್ಲ. ಪ್ರೊ. ಹರಿದಾಸ್ ಭಟ್ – ಎಂ. ಜಿ. ಎಂ. ಕಾಲೇಜು, ಗೋವಿಂದ ಪೈ ಸ್ಮಾರಕ ಕೇಂದ್ರ, ಪ್ರಯೋಗ ಕಲೆಗಳ ಸಂಶೋಧನಾ ಕೇಂದ್ರ ಇತ್ಯಾದಿ – ಉಡುಪಿ – ದಕ್ಷಿಣ ಕನ್ನಡ – ಹೀಗೆ, ಕ್ರಮವಾಗಿ ವಿಳಾಸ ಬರೆದ ಹಾಗೆ, ಅವರ ಚಿತ್ರದ ಜತೆಯಲ್ಲೇ ಅವರ ಹಿನ್ನಲೆಯ ಚಿತ್ರವೂ ಅತ್ಯನಿವಾರ್ಯವೆನ್ನುವಂತೆ ಮೂಡಿಕೊಳ್ಳುತ್ತದೆ. ಒಂದು ವಿಸ್ತೃತ ಪ್ರದೇಶದಲ್ಲಿ ತಮ್ಮ ಬದುಕಿನ ಬೇರು ಬಿಳಲುಗಳನ್ನು ಹರಡಿ, ಹೆಣೆದು ಕಟ್ಟಿಕೊಂಡ ವ್ಯಕ್ತಿತ್ವ ಅವರದ್ದು. ಜತೆಗೆ – ಅವರು ತಮ್ಮ ವ್ಯಕ್ತಿತ್ವ ಬೇರೆ ಪರಿಸರ ಬೇರೆ ಎಂದು ಗಣಿಸದೆ, ಎರಡನ್ನೂ ಒಟ್ಟೊಟ್ಟಿಗೆ ಬೆಳೆಸಿಕೊಂಡವರು. ಅವರ ವಿಳಾಸ ಬಿಟ್ಟು ಹೆಸರಷ್ಟನ್ನೇ ಗಮನಿಸಲಿಕ್ಕೆ ಬಾರದಷ್ಟು ಪರಿಸರದಲ್ಲಿ ಬೆರತುಕೊಂಡಂಥ ವ್ಯಕ್ತಿತ್ವ ಅವರದು.

ಎಂ. ಜಿ. ಎಂ. ಕಾಲೇಜನ್ನು ರಾಷ್ಟ್ರದ ಅತ್ಯುತ್ತಮ ಕಾಲೇಜುಗಳಲ್ಲಿ ಒಂದಾಗಿ ರೂಪಿಸಿದ್ದು ಅವರ ಶ್ರಮದ ಸಾಧನೆ. ಅದು ಪಟ್ಟಿಯ ಪಾಠವನ್ನಷ್ಟೇ ಕಲಿಸಿಕೊಡುವ ಮಹಾಶಾಲೆಯಾಗದೆ ಹಲವಾರು ಆಸಕ್ತಿಗಳ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯುವಂತೆ ಮಾಡಿದವರು ಅವರು. ಅದರ ಸುತ್ತ ಹಲವಾರು ಸಾಂಸ್ಕೃತಿಕ ಸಂಸ್ಥೆಗಳನ್ನೂ ಕಾರ್ಯ – ಚಟುವಟಿಕೆಗಳನ್ನೂ ಅವರು ಸತತವಾಗಿ ಸಂಘಟಿಸುತ್ತಾ ಬಂದಿದ್ದಾರೆ. ಈ ಸಂಸ್ಥೆಗಳ ಮೂಲಕವಾಗಿ, ಉಡುಪಿಗೂ ದಕ್ಷಿಣ ಕನ್ನಡಕ್ಕೂ ಒಂದು ಹೊಸ ಬದುಕಿನ ಉತ್ಸಾಹ ಸೊಬಗುಗಳನ್ನು ತಂದುಕೊಟ್ಟಿದ್ದಾರೆ. ದಕ್ಷಿಣ ಕನ್ನಡದ ಜನಕ್ಕೆ ಅವರ ಸಂಸ್ಥೆಗಳು ಹಾಗೂ ಆ ಮೂಲಕ ಉಡುಪಿ, ಹೊರ ಕರ್ನಾಟಕಕ್ಕೆ ಇಂಡಿಯಾಕ್ಕೆ ಜಗತ್ತಿನ ವಿವಿಧ ದೇಶಗಳ ಸಾಂಸ್ಕೃತಿಕ ಚಟುವಟಿಕೆಗಳಿಗೆ 'ದೇಹಲಿ' (ಹೊಸ್ತಿಲು) ಯಾಗುವಂತೆ ಮಾಡಿದ್ದಾರೆ.

ಎಲ್ಲಿ ಪುಷ್ಕಳ ಅವಕಾಶ ಸಿಕ್ಕುತ್ತದೋ ಅಂಥಲ್ಲಿ ಅರಸಿ ವಲಸೆ ಹೋಗಿ ತಮ್ಮನ್ನು ಪ್ರಕಾಶಗೊಳಿಸಿಕೊಳ್ಳಲು ಹೆಣಗುವುದೇ ನಮ್ಮಲ್ಲಿ ರೂಢಿಯಾಗಿರುವಾಗ, ತಾನು ನಿಂತಲ್ಲೇ, ದಶದಿಕ್ಕುಗಳಿಗೂ ಕಿಟಕಿ ತೆರೆದುಕೊಂಡ ಹೊಸ ಬದುಕನ್ನು ಕಟ್ಟನಿಲ್ಲಿಸುವೆನೆಂದು ಸಾಹಸ ಪಡುವ ಹರಿದಾಸ ಭಟ್ಟರಂಥ ಸಾಧಕರು ನನಗೆ ತುಂಬ ಮುಖ್ಯರಾಗಿ ಕಾಣುತ್ತಾರೆ.

ಹಿಂದಿನ ಎಲ್ಲ ಕೇಂದ್ರೀಕೃತ ನಾಗರೀಕತೆ – ಸಂಸ್ಕೃತಿಗಳಿಂದ ಭಿನ್ನವಾದ ಹೊಸ ವಿಕೇಂದ್ರೀಕೃತವೂ ವಿಶ್ವಸಮೀಪವೂ ಆದ ಜೀವನ ಪದ್ಧತಿಯನ್ನು ನಾವು ಈಗ ಸೃಷ್ಟಿಸಿ ಕೊಳ್ಳಬೇಕಾಗಿದೆ. ಹಾಗೆ ನಮ್ಮ ಧೀಮಂತರು ಹೇಳುತ್ತಾರೆ. ಆದರೆ ಅದಿನ್ನೂ ಧೀಮಂತರು ವಾದಿಸಿ ಸಮರ್ಥಿಸುವ ತತ್ತ್ವವಷ್ಟೇ ಆಗಿ ಉಳಿದಿದೆ. ವಿಕೇಂದ್ರೀಕರಣವೆಂಬುದು ಸದ್ಯ ಆಡಳಿತದ ಜನ ತಮ್ಮನ್ನು ಬಚಾಯಿಸಿಕೊಂಡು ಮುಂದುವರೆಯಲು ಬಳಸುವ ಕೇವಲ ಘೋಷಣೆಯಾಗಿದೆ. ಕೇಂದ್ರೀಕರಣವನ್ನು ತತ್ತ್ವವಾಗಿ ಮಂಡಿಸಿ ಬೆರಗುಗೊಳಿಸಲಿಕ್ಕೋ ಘೋಷಣೆ ಕೂಗಿ ಮತ್ತು ತರಿಸಲಿಕ್ಕೋ ಹಾತೊರೆಯದೆ, ತಮ್ಮ ಬದುಕೇ ಹಾಗೆ ಸಹಜವಾಗಿ, ಸಮಗ್ರವಾಗಿ ವಿನ್ಯಾಸಗೊಳ್ಳುವಂತೆ ಬಾಳಿಸಿಕೊಳ್ಳುವ ಜನ, ಹರಿದಾಸ ಭಟ್ಟರಂಥವರು ನಿಜವಾಗಿ ನಮಗೆ ಮುಖ್ಯರು.

ಕೇಂದ್ರವಲ್ಲಿ ಕೂತು ತಜ್ಞರು ಆರ್ಥಿಕ ರಾಜಕೀಯ – ಸಾಂಸ್ಕೃತಿಕ ವಿಕೇಂದ್ರೀಕರಣದ ಬಗ್ಗೆ ರೂಪಿಸುವ ಮಹಾಯೋಜನೆಗಳಲ್ಲೋ ಆ ಬಗ್ಗೆ ಸರಕಾರದ ಬಜೆಟ್‌ನಲ್ಲಿ ಕಾಣುವ ಕೋಟಿ ಕೋಟಿ ಹಣದ ಮೊತ್ತವೋ ಹುಟ್ಟಿಸದ ಆಸೆಭರವಸೆಗಳನ್ನು ಹರಿದಾಸ ಭಟ್ಟರಂಥವರ ಬದುಕು ಹುಟ್ಟಿಸಿಕೊಡುತ್ತದೆ.

'ಸಾಂಸ್ಕೃತಿಕ ರಾಯಭಾರಿ' ಎಂಬ ನುಡಿಕಟ್ಟು ಮಹೋನ್ನತವನ್ನು ಮೊಳಗಿಸುತ್ತದೆ. ಆದ್ದರಿಂದಲೇ ಹೆಚ್ಚಾಗಿ ಟೊಳ್ಳು ಎನಿಸಿಬಿಡುತ್ತದೆ. ಆದರೆ ಹರಿದಾಸ ಭಟ್ಟರ ವಿಷಯದಲ್ಲಿ ಈ ಮಾತು ಪ್ರಶಂಸೆಯೂ ಅಲ್ಲ, ಉತ್ಪ್ರೇಕ್ಷೆಯೂ ಅಲ್ಲ. ಅವರ ವ್ಯಕ್ತಿತ್ವವನ್ನು – ಅದರ ಶಕ್ತಿ ಮಿತಿಗಳೆರಡನ್ನೂ – ಖಚಿತಗೊಳಿಸಲಿಕ್ಕೆ ನಾನು ಈ ನುಡಿಕಟ್ಟನ್ನು ಬಳಸಿದ್ದೇನೆ.

ಎಷ್ಟೋ ಸೀಮಿತ ವ್ಯಕ್ತಿಗಳು, ತಮ್ಮ ಮಿತಿಯಲ್ಲೇ ತಮ್ಮ ವ್ಯಕ್ತಿತ್ವದ ಮೂರ್ತಸ್ಮಾರಕವೊಂದನ್ನು

ಕಟ್ಟಿಬೆಳೆಸಿ ಹೋಗಿರುವುದುಂಟು. ಉದಾಹರಣೆಗೆ – ಒಂದೇ ಕಾದಂಬರಿಯನ್ನು ಬರೆದು ಆ ಮೂಲಕ ತನ್ನ ಹೆಸರಿಗೊಂದು ಸ್ಮಾರಕವನ್ನು ನಿರ್ಮಿಸಿಟ್ಟು ಹೋದವರಿದ್ದಾರೆ. ಹರಿದಾಸ ಭಟ್ಟರಂಥವರ ವ್ಯಕ್ತಿತ್ವ ಬೇರೆ ರೀತಿಯದು. ತಮ್ಮ ಶಕ್ತಿಯನ್ನೆಲ್ಲ ಸಂಗ್ರಹಿಸಿ ಸಂಗೋಪಿಸಲು ಹಂಬಲಿಸಿದವರಲ್ಲ ಅವರು. ಬದಲು – ಸುತ್ತಣ ಸಮೂಹದಲ್ಲಿ ನಿತ್ಯದ ಜಂಜಡದಲ್ಲಿ ಮುಳುಗಿಕೊಂಡಿದ್ದು, ಅದರಿಂದ ಸತ್ವ ಪಡೆದುಕೊಳ್ಳುತ್ತ ಪ್ರತಿಯಾಗಿ ತಮ್ಮ ಸತ್ವವನ್ನು ಆಯಾ ಕ್ಷಣದಲ್ಲೇ ಅದೇ ಸಮೂಹದಲ್ಲಿ ಕರಗಿಸಿಕೊಳ್ಳುತ್ತ ಬದುಕಿದವರು; ಹಾಗೆ ಸಮೂಹಕ್ಕೇ ಹೊಸ ನೇಸಲು ತಂದುಕೊಟ್ಟವರು.

ಇನ್ನೊಂದು ಹೋಲಿಕೆಯಿಂದ ಹೇಳುವುದಾದರೆ. ದೋಹದಕ್ಕಾಗಿಯೇ ತಮ್ಮ ಬಹುಭಾಗವನ್ನು ಮೀಸಲಿಟ್ಟವರು ಅವರು. ಗಿಡ ಹೂ ಬಿಡುತ್ತದೆ ಆದರೆ ಅದು ಸಕಾಲದಲ್ಲಿ ಸ್ಫೂರ್ತಿಗೊಂಡು ಹೂವರಳಿಸಿ ಸೊಬಗುಗೊಳಿಸಲಿಕ್ಕೆ ದೋಹದಕ್ರಿಯೆ ಬೇಕು; ಹೆಣ್ಣಿನ ಮೃದುವಾದ ಹೆಬ್ಬೆರಳು ಸವರಬೇಕು. ಬೆಚ್ಚನೆಯ ಪರಿಮಳದುಸಿರು ಹಾಯಬೇಕು ಹಾಗೆ – ಸಮೂಹದ ಬದುಕಿನ ಉತ್ಸಾಹ ಪುಷ್ಟಿಸುವುದಕ್ಕೆ ಸತತ ದೋಹದಕಾರರಾಗಿ ನಿಂತವರು ಅವರು.


ಹರಿದಾಸ ಭಟ್ಟರ ವೈಯಕ್ತಿಕ ಸಾಧನೆಗಳನ್ನು ನಾನೇನೂ ಮರೆತಿಲ್ಲ. ದೊಡ್ಡ ಗಾತ್ರದ ಅವರ ಬರವಣಿಗೆ – ಅನುವಾದಗಳು, ಸಂಶೋಧನೆ, ವಿದ್ಯಾಕ್ಷೇತ್ರದ ಸಾಧನೆ, – ಇವು ಒಬ್ಬ ವ್ಯಕ್ತಿ ಹೆಮ್ಮೆಪಟ್ಟುಕೊಳ್ಳುವಂಥವು. ಆದರೆ ಅವರು ಇವುಗಳ ಬಗ್ಗೆ ಉದಾಸೀನರೇ. ಅವರ ಗಮನವೇನಿದ್ದರೂ ಮುಖ್ಯವಾಗಿ ಸಮೂಹ ಜೀವನದ ಬಗ್ಗೆಯೇ.

ಸಮೂಹ ಸಂಸ್ಕೃತಿಯಲ್ಲಿ ರಕ್ತಗತವಾಗಲು, ಆ ಮೂಲಕ ನಿಶ್ಶೇಷ ಸವೆದುಕೊಳ್ಳಲು ಉತ್ಸಾಹಿಸುವ ವ್ಯಕ್ತಿತ್ವದ ಬಗ್ಗೆ ನನಗೆ ತುಂಬ ಆದರ. ಹರಿದಾಸ ಭಟ್ಟರ ಅಂಥ ವ್ಯಕ್ತಿತ್ವಕ್ಕೆ ನನ್ನ ಗೌರವ, ನಮಸ್ಕಾರ.



ಅರುವತ್ತರ (1984) "ಶಾಂತಿ"ಯಲ್ಲಿ ಉಲ್ಲಸಿತರಾದ ಕು.ಶಿ.









ವಿಶ್ವ ಸಂಚಾರ

ಮನೆಯಂಗಳದಲ್ಲೂ ವಿಹಾರ

1 ರಶ್ಯದ ಕಿರ್ಗಿಜಿಯದಲ್ಲಿ
ಭಾಸ್ಕರ ಜೋಶಿ, ಶ್ರೀಧರ ಹೆಬ್ಬಾರರ ಜತೆ

2 ಅಮೆರಿಕಕ್ಕೆ ಭೆಟ್ಟಿ—ಪತ್ನಿ ಸುಮತಿ ಅಮ್ಮನವರೊಂದಿಗೆ

3 ರಶ್ಯದ ಚಳಿಯ ಸುಖಾನುಭವ
ಯಕ್ಷಗಾನ ಕಲಾವಿದರೊಂದಿಗೆ

4 ಮನೆಯಂಗಳದಲ್ಲಿ ಮೊಮ್ಮಗಳು ಪ್ರಿಯಾಂಕ
ಬೆಕ್ಕು ಬ್ಲೇಕಿಯೊಂದಿಗೆ ಸರಸಸಲ್ಲಾಪ













ಬಂಧು-ಮಿತ್ರ ಕಳತ್ರರೊಂದಿಗೆ

1 ಕಲಾವಿದ ಕೆ. ಕೆ. ಹೆಬ್ಬಾರ ದಂಪತಿಗಳೊಂದಿಗೆ
ಕು. ಶಿ. ದಂಪತಿಗಳು ಮುಂಬಯಿಯಲ್ಲಿ

2 ಗದುಗಿನಲ್ಲಿ ನಡೆದ ಹೊಸಮನೆಯ ಪ್ರವೇಶೋತ್ಸವದಲ್ಲಿ
ಅತಿಥಿಗಳೊಂದಿಗೆ

3 ಮೊಮ್ಮಕ್ಕಳ ಸನಿಹದಲ್ಲಿ

4 ಅಳಿಯ ಡಾ। ಅಶೋಕ
ಭಾವ ಡಾ। ಕೆ. ವಿ. ರಾಜಗೋಪಾಲ್ ಅವರೊಂದಿಗೆ
ಅಮೆರಿಕದಲ್ಲಿ—ಅಪೂರ್ವ ಉಡುಗೆಯಲ್ಲಿ

5 ಕಲಾವಿದ ಹೆಬ್ಬಾರರೊಂದಿಗೆ, ಕುದುರೆಮುಖದ ಪ್ರಕೃತಿಯ ನೆಲೆಯಲ್ಲಿ

6 ಹೊಲೆಂಡಿನಲ್ಲಿ ವಿಹಾರ









ಸ್ನೇಹಸೇತು ಪಶ್ಚಿಮದಿಂದ ಪೂರ್ವಕ್ಕೆ

1 ಡಾ। ಎಡ್ವಿನ್ ಜೆರೋವ್ ಮತ್ತು ಶ್ರೀಮತಿ ಶೆರಿಲ್ ಜೆರೋವ್ ಜತೆ ಪ್ರೊ। ಹರಿದಾಸ ಭಟ್ಟರು ಮತ್ತು ಶ್ರೀಮತಿ ಸುಮತಿ ಅಮ್ಮ

2 1982ರಲ್ಲಿ ಯಕ್ಷಗಾನ ತಂಡದೊಂದಿಗೆ ಜಪಾನಿಗೆ ಭೇಟಿ ನೀಡಿದಾಗ ಜಪಾನೀಯರಿಂದ ಆತ್ಮೀಯ ವಿದಾಯ

3 ಯಕ್ಷಗಾನದ ಸೇವೆಗೆ ಕಟಿಬದ್ಧರಾದ ಗುರು ಡಾ। ಕಾರಂತರೊಂದಿಗೆ ಪ್ರೊ। ಕು. ಶಿ., ಕೆ. ಪ್ರಭಾಕರ ಪೈ

4 ಕಿರೀಟಧಾರಿ ಕಲಾವಿದರು ಜಪಾನಿನ ಅತಿಥೇಯರೊಂದಿಗೆ (1982) ನಡುವೆ ಕು. ಶಿ., ಪ್ರಭಾಕರ ಪೈ

೫ ಕು. ಶಿ.

— ಪಾ. ವೆಂ.

ಕು. ಶಿ. (ಕುಂಜಿಬೆಟ್ಟು ಶಿವ) ಹರಿದಾಸ ಭಟ್ಟರ ಮನೆತನ ತೀರ ಸಾಮಾನ್ಯತರವಾದದ್ದು. ಅವರ ತಂದೆ ಶಿವ ಗೋಪಾಲ ಭಟ್ಟರು, ನನಗಿಂತ ತುಂಬಾ ಹಿರಿಯರು. ನನಗೆ ಪರಿಚಯವಾದಾಗ (1925) ಹುಬ್ಬಳ್ಳಿಯಲ್ಲಿ ಹೋಟೆಲ್ ತೆರೆದು ಆರ್ಥಿಕವಾಗಿ ಅನುಕೂಲವಂತರಾಗಿದ್ದರೂ ತಮ್ಮ ಹಿಂದಿನ ದಿನಗಳನ್ನು ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳುತ್ತಿದ್ದುದುಂಟು. ಬಡತನ ಮಾತ್ರವಲ್ಲದೆ ಸಂಸ್ಕೃತ ಶಿಕ್ಷಣದ ಹಿನ್ನೆಲೆ ಕೂಡ ಅವರ ಮನೆತನಕ್ಕಿದ್ದಿಲ್ಲ. ದಕ್ಷಿಣ ಕನ್ನಡದಲ್ಲಿ ಈ ತೆರದ ಹಿನ್ನೆಲೆಯುಳ್ಳ ಬ್ರಾಹ್ಮಣ ತರುಣರೇ ಅದೃಷ್ಟದ ಅನುಸಂಧಾನದಲ್ಲಿ "ಘಟ್ಟದ ಮೇಲೆ" ಹೋಗಿ ಅಡಿಗೆಯೋ ನೀರು ಹೊರುವುದೋ ಮಾಡಿ ಕೊನೆಗೆ ಪಟ್ಟಣಗಳಲ್ಲಿ ಆಗ ತಾನೇ ತಲೆಯೆತ್ತ ತೊಡಗಿದ್ದ ಹೋಟೆಲ್ ಉದ್ಯಮದ ಪ್ರವರ್ತಕರಾದರು. ಶಿವ ಗೋಪಾಲ ಭಟ್ಟರು ಹುಬ್ಬಳ್ಳಿಯಲ್ಲಿಯೂ ಅವರ ತಮ್ಮ ಅನಂತ ಭಟ್ಟರು ಗದುಗಿನಲ್ಲಿಯೂ ಹೋಟೆಲ್ ಪ್ರಾರಂಭಿಸಿ ಆರ್ಥಿಕವಾಗಿ ಸುಧಾರಿಸಿಕೊಂಡರು. ಹುಬ್ಬಳ್ಳಿಯಲ್ಲಿ ಅವರ ಹೋಟೆಲ್ಲಿನ "ಪೇಪರ್ ದೋಸೆ" ಗಳ ವರ್ಣನೆಯನ್ನು 1942ರಲ್ಲಿ ನಾನು ಹುಬ್ಬಳ್ಳಿಗೆ ಬಂದ ಮೇಲೂ ಹಳಬರು ಮಾತಾಡುವುದನ್ನು ಕೇಳಿದ್ದೇನೆ. ಆದರೆ ಅವರ ಹಿರಿಯ ಮಗ ತಾರುಣ್ಯದಲ್ಲೇ (ಶೋಭನ ಪ್ರಸ್ತವಾದ ಕೆಲವೇ ದಿನಗಳಲ್ಲಿ) ಮರಣ ಹೊಂದಿದ ಮೇಲೆ ಹೋಟೆಲನ್ನು ಕೈ ಬಿಟ್ಟು ಉಡುಪಿಗೆ ಮರಳಿ ವಿಶ್ರಾಂತ ಜೀವನವನ್ನು ಕಳೆಯತೊಡಗಿದರು. ಹರಿದಾಸ ಭಟ್ಟರು ಆಗಿನ್ನೂ ಆರೆಂಟು ವರ್ಷದ ಹುಡುಗನೆಂದು ನನ್ನ ನೆನಪು. ಉದ್ಯಮವನ್ನು ಕೈಬಿಟ್ಟಿದ್ದರಿಂದ ಮನೆತನವನ್ನು "ಶ್ರೀಮಂತ" ವೆಂದು ಕರೆಯಲು ಆ ಮೇಲೆ ಕೂಡ ಬರುವಂತಿರಲಿಲ್ಲ.

ಹರಿದಾಸ ಭಟ್ಟರಿಗೆ ಒಬ್ಬ ಅಣ್ಣ (ಮೇಲೆ ಹೇಳಿದಂತೆ ದಿವಂಗತರಾದವರು), ಒಬ್ಬ ಅಕ್ಕ, ಒಬ್ಬ ತಂಗಿ.

ಹರಿದಾಸರು ಕುಟುಂಬದಲ್ಲಿ ಉಳಿದ ಏಕ ಮಾತ್ರ ಪುತ್ರನಾದ್ದರಿಂದ ಮತ್ತು ಅವರ ಚಿಕ್ಕಪ್ಪ ಅನಂತ ಭಟ್ಟರಿಗೂ ಸಂತಾನವಿಲ್ಲದ್ದರಿಂದ ಅಕ್ಕರೆಯಿಂದಲೇ ಬೆಳೆದರು. ಆದರೆ ಗೋಪಾಲ ಭಟ್ಟರು ಮಹಾತ್ವಾಕಾಂಕ್ಷಿ ವ್ಯಕ್ತಿಯಲ್ಲವಾದ್ದರಿಂದ ಮಗನ ಶಿಕ್ಷಣದ ಬಗ್ಗೆ ಅವರಿಗೆ ದೊಡ್ಡ ದೊಡ್ಡ ಕನಸುಗಳೇನೂ ಇದ್ದಂತೆ ನಾನು ಕಾಣೆ. ಆದರೆ ಹುಬ್ಬಳ್ಳಿ ಗದುಗುಗಳ ಸಂಪರ್ಕದಿಂದಾಗಿ ಕನ್ನಡದ ಪುನರುಜ್ಜೀವನದ ಕಾಲದ ಗಾಳಿ ಸ್ವಲ್ಪ ಅತ್ತ ಬೀಸಿ, ಆಗ ಪ್ರಕಟವಾಗುತ್ತಿದ್ದ ಹೆಚ್ಚು ಕಡಿಮೆ ಎಲ್ಲ ಗದ್ಯಗ್ರಂಥಗಳು ಅವರ ಚಿಕ್ಕಪ್ಪನ ಮನೆಗೆ ಬರುತ್ತಿದ್ದುದು ಹರಿದಾಸ ಭಟ್ಟರ ಮೇಲೆ ಪ್ರಭಾವವನ್ನುಂಟು ಮಾಡಿರಬೇಕು.

ಕು. ಶಿ. ಯವರ ಶಿಕ್ಷಣ ಮೊದಲು ಉಡುಪಿಯ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ (ಮುಂದೆ ಸಿಂಡಿಕೇಟ್ ಬ್ಯಾಂಕಿನ ಚೇರ್ಮನ್ನರಾದ ಶ್ರೀ ಕೆ. ಕೆ. ಪೈ ಅವರು ಅಲ್ಲಿ ಅವರ ಸಹಪಾಠಿ) ವಿದ್ಯಾಭ್ಯಾಸ ಪಡೆದು ಮುಂದೆ ಬಹುಶಃ ಬೋರ್ಡ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದರು. ಆಮೇಲೆ ಅದು ಸ್ವಲ್ಪ ಕುಂಟುತ್ತಲೇ ಮುಂದುವರಿಯಿತು. ಮಧ್ಯದಲ್ಲಿ ಕೆಲಕಾಲ ಶಿಕ್ಷಕರಾಗಿದ್ದು ಆಮೇಲೆ ಹಿಂದೀ ವಿಶಾರದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. (ಹಿಂದೀ ಅಭ್ಯಾಸದ ಫಲವೇ ಪ್ರೇಮಚಂದರ 'ಗೋದಾನ'ದ ಅನುವಾದ). ಡಿಗ್ರಿ ಪರೀಕ್ಷೆ ಮಂಗಳೂರಲ್ಲಿ ಮುಗಿಸಿ ಮದ್ರಾಸ್‌ನಲ್ಲಿ ಕ್ರಿಶ್ಚನ್ ಕಾಲೇಜಿನಲ್ಲಿ ಎಂ. ಎ. (ಅರ್ಥಶಾಸ್ತ್ರ) ಮಾಡಿದರು. ತಡೆತಡೆದು ಶಿಕ್ಷಣವಾದ್ದರಿಂದ ಆಗಲೇ ಸಾಕಷ್ಟು ವಯಸ್ಸು ಆಗಿತ್ತು. ಬಹುಶಃ ಅವರ 25ನೇ ವಯಸಿನಲ್ಲಿ ದೀರ್ಘಕಾಲ ವಿಷಮ ಜ್ವರದಿಂದ ನರಳಿದರು. ಆಗ ಅವರನ್ನು ನೋಡ ಹೋದಾಗ ಅವರ ತಂದೆಯವರು ಇದರಿಂದ ಮಗನಿಗೆ ಐ ಸಿ ಎಸ್ ಪರೀಕ್ಷೆಗೆ ಕಟ್ಟಲಾಗಲಿಲ್ಲವೆಂದು ನನ್ನೊಡನೆ ಹೇಳಿದಂತೆ ನೆನಪು.

ಮದ್ರಾಸಿನಲ್ಲಿ ಓದುತ್ತಿದ್ದಾಗಲೇ ಕನ್ನಡ ಸಾಹಿತ್ಯದ "ಚಟ" ಅವರಿಗೆ ಸಾಕಷ್ಟು ಅಂಟಿ ಆಗಿತ್ತೆಂದು ಅಲ್ಲಿ ಅವರ ಸಹಪಾಠಿಯಾಗಿದ್ದ ಜಿ.ಟಿ. ನಾರಾಯಣರಾಯರ ಮಾತಿನಿಂದ ಅರ್ಥವಾಗುತ್ತದೆ.

ಏನಾದರೂ ಅವರು ಎಂ. ಎ. ಮುಗಿಸಿದ ಹೊತ್ತಿಗೇ ಉಡುಪಿಯಲ್ಲಿ ಎಂ. ಜಿ. ಎಂ. ಕಾಲೇಜು ಸ್ಥಾಪನೆಯಾಗಿತ್ತು. ಕು. ಶಿ. ಅವರಿಗೆ ಅಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕ ವೃತ್ತಿ ದೊರೆಯಿತು. ಎಚ್. ಸುಂದರ ರಾಯರ ನಿವೃತ್ತಿಯ ನಂತರ ಕು. ಶಿ. ಯವರು ಪ್ರಿನ್ಸಿಪಾಲರಾದರು.

ಕು. ಶಿ. ಯವರ ಅಧ್ಯಾಪನ ವಿಷಯ ಅರ್ಥಶಾಸ್ತ್ರವಾದರೂ ಸಾಹಿತ್ಯ ಅವರನ್ನು ಮೊದಲಿಗೆ ಆಕರ್ಷಿಸಿತ್ತು. ವಾಸ್ತವಿಕವಾಗಿ ಅವರು ಇನ್ನೂ ಓದುತ್ತಿದ್ದಾಗಲೇ ಬರವಣಿಗೆ ಆರಂಭಿಸಿದ್ದರು. ಅನುವಾದ, ವಿಮರ್ಶೆ, ಆರ್ಥಿಕ – ರಾಜಕೀಯ ವಿಚಾರಗಳು ಮೊದಲಾದವು ಅವರ ಬರವಣಿಗೆಯ ವಿಷಯಗಳಾಗಿದ್ದವು. ಹುಬ್ಬಳ್ಳಿಯ "ಕರ್ಮವೀರ"ಕ್ಕೆ ಅವರು ಆಗಾಗ್ಗೆ ಬರೆಯುತ್ತಿದ್ದರು. ಒಂದು ರೆಫಿಕ್ ಕಥೆಯ ಅನುವಾದ, ಕಾರಂತರ "ಚೋಮನ ದುಡಿ" ಯೊಡನೆ ಅಂಥದೇ ಒಂದು ರೆಫಿಕ್ ಕಾದಂಬರಿಯನ್ನು ಹೋಲಿಸಿ ಭಾರತೀಯ ಲೇಖಕರ ಸಾಹಿತ್ಯಿಕ ಕಲಾತ್ಮಕ ಪ್ರಜ್ಞೆ (ಸೆನ್ಸಿಬಿಲಿಟಿ) ಗೂ ಯುರೋಪಿನ ಸಾಹಿತ್ಯ ಶ್ರೇಷ್ಠರದಕ್ಕೂ ಇರುವ ಅಂತರವನ್ನು ತೋರಿಸಿದ ಒಂದು ಲೇಖನ ಇಂದಿಗೂ (ಸುಮಾರು 35 ವರ್ಷಗಳ ನಂತರ) ನನ್ನ ನೆನಪಿನಲ್ಲಿ ಉಳಿಯುವಷ್ಟು ಚೆನ್ನಾಗಿದ್ದವು. ಸ್ಪಷ್ಟವಾಗಿ ನಿಸ್ಸಂದಿಗ್ಧವಾಗಿ ಬರೆಯುವುದು ಅವರಿಗಾಗಲೇ ಕೈಗೂಡಿತ್ತು.

1940ರ ವರೆಗೆ ಉಡುಪಿಯಲ್ಲಿ ಸಾಹಿತ್ಯ ಸಂಸ್ಕೃತಿ ಚಟುವಟಿಕೆಗಳ ಪರಿಯನ್ನು ಬಲ್ಲ ನನಗೆ ಹರಿದಾಸ ಭಟ್ಟರ ಅತೀ ದೊಡ್ಡ ಸಾಧನೆಯೆಂದರೆ ಉಡುಪಿಯನ್ನು ಕನ್ನಡ ಸಾಹಿತ್ಯ ಚಟುವಟಿಕೆಗಳ ನಕಾಶೆಯಲ್ಲಿ ಪ್ರಾಮುಖ್ಯವಾಗಿ ಸ್ಥಾಪಿಸಿದ್ದು. ಉತ್ತರ ಕರ್ನಾಟಕ ಮತ್ತು ಹಳೇ ಮೈಸೂರು ವಿಭಾಗಗಳಿಂದ ಎಲ್ಲ ದೊಡ್ಡ ಸಾಹಿತಿಗಳನ್ನು ಉಡುಪಿಗೆ ಕರೆದೊಯ್ದು ಭಾಷಣ – ವಾಚನಗಳನ್ನೇರ್ಪಡಿಸಿ, ಒಂದು ಬಗೆಯ ಸಾಹಿತ್ಯ ರಾಯಭಾರಿಯಾಗಿ ಅವರು ಕೆಲಸ ಮಾಡಿದ್ದಾರೆ. ಮಣಿಪಾಲ ಸಾಹಿತ್ಯ ಸಮ್ಮೇಳನ ಅವರ ಮುಕುಟದ ದೊಡ್ಡ ತುರಾಯಿ. ಈ ಸಮ್ಮೇಳನಕ್ಕೆ ಕೈಹಾಕಿ ಅವರು ಕೇಳಿಕೊಂಡ ಬೈಗಳೂ ಅತೀ ತೀಕ್ಷ್ಣವಾದದ್ದು. ಅಲ್ಲಿಯ ವ್ಯವಸ್ಥೆ ಸರಿಯಾಗಲಿಲ್ಲವೆಂದು ಪ್ರಗತಿಶೀಲ ಸಾಹಿತಿಗಳಲ್ಲನೇಕರು ಅವರನ್ನು ಪತ್ರಿಕೆಗಳಲ್ಲಿ ವಾಚಾಮಗೋಚರವಾಗಿ ಬೈದರು. (ಒಬ್ಬರು 'ಕುರಿದಾಸ ಭಟ್ಟ' ಎಂದೇ ಅವರಿಗೆ ಹೆಸರಿಟ್ಟರು.) ಇಷ್ಟಾದರೂ ಎದೆಗುಂದದೆ ಅವರು ಸಾಹಿತಿಗಳನ್ನು ಕರೆತಂದು ಉಡುಪಿಯನ್ನು ಸಾಂಸ್ಕೃತಿಕವಾಗಿ ಮೇಲೆತ್ತಿದರು. ಇಡೀ ಕರ್ನಾಟಕದಲ್ಲಿ ಯಾವೊಂದು ಕಾಲೇಜಿನಲ್ಲಿ ಇಷ್ಟು ಉತ್ಸಾಹ ಶಕ್ತಿಯಿಂದ ಸಾಂಸ್ಕೃತಿಕ ಕೆಲಸ ನಡೆದದ್ದು ಬೆರಳೆಣಿಕೆಯಷ್ಟು ಕಡೆ ಇರಬಹುದಷ್ಟೆ.

ಈಚೆಗೆ ಯಕ್ಷಗಾನ ಕೇಂದ್ರ, ಗೋವಿಂದ ಪೈ ಸಂಸ್ಥೆಗಳಲ್ಲಿ ಅವರು ಮಾಡಿದ ಕೆಲಸ ಕಡಮೆಯದಲ್ಲ.

ಗಟ್ಟಿ ತಲೆಯ ವ್ಯವಹಾರಜ್ಞ ಡಾ. ಮಾಧವ ಪೈಗಳನ್ನು ಅವರ ಬಳಗದವರನ್ನೂ ಸಾಹಿತ್ಯ ಸಂಸ್ಕೃತಿಗಳಿಗೆ ಪ್ರೋತ್ಸಾಹವೀಯುವಂತೆ ಮನವೊಲಿಸಿದ ಹರಿದಾಸ ಭಟ್ಟರ ನೈಪುಣ್ಯ ಅಸಾಧಾರಣವಾದದ್ದು.

ಯಾವೊಂದು ದೊಡ್ಡ ಸಾಂಸ್ಕೃತಿಕ ಚಟುವಟಿಕೆಗೆ ಹಣವನ್ನು ದೊರಕಿಸುವಲ್ಲಿ ಸರಕಾರಿ ಕಚೇರಿಗಳಿಂದ ಹಿಡಿದು ಬಂಡವಾಳಗಾರರವರೆಗೆ ನಾನಾ ಮನೋವೃತ್ತಿಯ ಜನರೊಡನೆ ಹೇಗೆ ವರ್ತಿಸಬೇಕೆಂಬ ಅವರ ಲೆಕ್ಕಾಚಾರಗಳು ಹೆಚ್ಚು ಪಾಲು ಫಲಕಾರಿಯಾಗಿ ಬಂದಿವೆ.

ಒಂದೆ "ಕರ್ಮವೀರ"ದೊಡನೆ ಅವರ ಸಂಬಂಧದ ಬಗ್ಗೆ ಬರೆದಿದ್ದೇನೆ. ಈಗ ಮಣಿಪಾಲದ ಪತ್ರಿಕೆಗಳ, ವಿಶೇಷತಃ 'ಉದಯವಾಣಿ'ಯ ಸಂಗಡ ಅವರ ನಿಕಟ ಸಂಬಂಧ ಎಲ್ಲರಿಗೆ ಗೊತ್ತಿದ್ದದ್ದು. ದಿವಂಗತ ಟಿ. ಎ. ಪೈ.ಗಳನ್ನು 'ಉದಯವಾಣಿ'ಯನ್ನು ಪ್ರಾರಂಭಿಸಲು ಪ್ರೋತ್ಸಾಹಿಸಿದವರು ಅವರೇ ಎಂಬ ಅನುಮಾನ ನನ್ನದು. ಆ ಪತ್ರಿಕೆಯಲ್ಲಿ ಅವರು ಕಾಲಕಾಲಕ್ಕೆ ಬರೆಯುವ 'ಲೋಕಾಭಿರಾಮ' ಮೊದಲಾದ ಲೇಖನ ಮಾಲೆಗಳು ಕನ್ನಡ ಪತ್ರಿಕಾ ಲೋಕದಲ್ಲೇ ಅಪರೂಪವಾದವುಗಳು. ಅವುಗಳ ಪ್ರಜ್ಞಾವ್ಯಾಪ್ತಿ, ಸ್ಪಷ್ಟ ಮತ್ತು ಸರಳ ವಿವೇಚನೆ, ನಿರ್ಭಯತೆ, ಅನುಭವ ವೈಶಾಲ್ಯ, ಕಟಕಿಯ ಮಾತುಗಳು ಹೊಗಳುವ ತೆಗಳುವಲ್ಲಿರುವ ವಿವೇಕ ಮತ್ತು ಮಿತಿಜ್ಞಾನ ದುರ್ಲಭ ಗುಣಗಳು.

ಒಂದು ವೇಳೆ ಪ್ರೊಫೆಸರಾಗುವ ಬದಲು ಸಂಪಾದಕರಾಗಿ ಜೀವನ ಸಮುದ್ರದಲ್ಲಿ ಅವರು ಒಗೆಯಲ್ಪಟ್ಟಿದ್ದರೂ ಅವರು ಅಲ್ಲಿಯೂ ಯಶಸ್ವಿಯಾಗುತ್ತಿದ್ದರೆಂಬುದು ತಪ್ಪು ತರ್ಕವಾಗಲಿಕ್ಕಿಲ್ಲ.

ಡಾ. ಕು. ಶಿ. ಹರಿದಾಸ ಭಟ್ - ನಾನು ಕಂಡಂತೆ

— ಕೆ. ಹರಿದಾಸ ಭಟ್
ಭೌತ ವಿಜ್ಞಾನ ರೀಡರ್.

ಕು. ಶಿ. ಯವರು ಪ್ರಿನ್ಸಿಪಾಲ್ ಹುದ್ದೆಯಿಂದ ನಿವೃತ್ತರಾದ ವರ್ಷ (1979) ಕಾಲೇಜಿನ ವರ್ಧಂತ್ಯುತ್ಸವದಲ್ಲಿ ಹೇಳಿದ್ದರು – ನನ್ನನ್ನು ನನ್ನ ಹೆತ್ತವರು ಪ್ರೀತಿ ವಾತ್ಸಲ್ಯಗಳ ಮಹಾಪೂರದಲ್ಲೇ ಬೆಳೆಸಿದ್ದರು. ಇದರ ಸ್ವಲ್ಪಾಂಶವನ್ನಾದರೂ ನಾನು ನನ್ನ ಸಹೋದ್ಯೋಗಿಗಳಿಗೆ, ವಿದ್ಯಾರ್ಥಿ ಸಮುದಾಯಕ್ಕೆ ನೀಡಿದ್ದೇನೆಂಬ ಸಂತಸ ನನಗಿದೆ ಎಂದು. ಪ್ರಾಯಶಃ ವ್ಯಕ್ತಿಯೊಬ್ಬನ ವಿಕಸನಕ್ಕೆ ತನ್ಮೂಲಕ ಸಮಾಜದ ಏಳಿಗೆಗೆ ಬದ್ಧಕಂಕಣರಾಗಿ ಶ್ರಮಿಸುವ ಪ್ರತಿಯೊಬ್ಬ ವ್ಯಕ್ತಿಗೂ ಈ ಮಾತು ಅನ್ವಯವಾಗತಕ್ಕದ್ದು. ಜೀವನದಲ್ಲಿ ಸಂತಸ ಪ್ರೀತಿ ವಾತ್ಸಲ್ಯಗಳನ್ನು ಕಾಣದ ವ್ಯಕ್ತಿ ಅದನ್ನು ಅದೆಂತು ಇನ್ನೊಬ್ಬನಿಗೆ ಕೊಟ್ಟಾನು.

ಹಾಸ್ಟೆಲಿನಲ್ಲಿ ಮಕ್ಕಳು ಸಲ್ಲದ ಸಮಸ್ಯೆಗಳ ಸೃಷ್ಟಿಯಲ್ಲಿದ್ದಾಗ ಅಧ್ಯಾಪಕ ಮಿತ್ರರು (ವಾರ್ಡನರು) ತನ್ನನ್ನು ಈ ಜವಾಬ್ದಾರಿಯಿಂದ ಬಿಡುಗಡೆಗೊಳಿಸಲು ದುಂಬಾಲು ಬಿದ್ದ ಸಂದರ್ಭ. ಕು. ಶಿ. ಯವರು ತಮ್ಮ "ಕಂಪಾರ್ಟ್‌ಮೆಂಟಲ್" ವಾದವನ್ನು ಪ್ರಯೋಗಿಸಿಯೇ ಬಿಟ್ಟರು; "ಕಾಲೇಜಿಗೆ ಬಂದಾಗ ಪಾಠದ ಬಗ್ಗೆ ಯೋಚಿಸಿ, ಹಾಸ್ಟೆಲ್ಲಿಗೆ ಹೋದಾಗ ಅಲ್ಲಿನ ಸಮಸ್ಯೆಗಳಿಗೆ ಪರಿಹಾರ ಹುಡುಕಿ. ಎಲ್ಲಿ ಏನು ಮಾಡಬೇಕೋ ಅದನ್ನೇ ಯೋಚಿಸಿರಿ. ಸಮಸ್ಯೆಗಳ ಸರಮಾಲೆಯನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಒಯ್ಯದಿರಿ". ಈ ಮಾತು ತುಂಬಾ ಅರ್ಥಗರ್ಭಿತ. ಇಂದಿನ ಸಂಕೀರ್ಣ ಸಮಾಜದಲ್ಲಿ ಯಾವುದೇ ಹುದ್ದೆಯಲ್ಲಿರುವ ವ್ಯಕ್ತಿ (ಅದರಲ್ಲೂ ಸಂಸ್ಥೆಯ ಪ್ರಮುಖನಾಗಿದ್ದಲ್ಲಿ) ವಿವಾದಗಳ ಸುಳಿಗೆ ಸಿಲುಕದೆ ಸಂಸ್ಥೆಯನ್ನು ಸಮರ್ಥ ರೀತಿಯಲ್ಲಿ ಮುನ್ನಡೆಸಲು ಕು. ಶಿ. ಯವರ ಕಂಪಾರ್ಟ್‌ಮೆಂಟ್ ವಾದ ರಾಮಬಾಣ. ಯಾವುದೇ ಸಮಸ್ಯೆಗೂ ನಿಗದಿತ ಪರಿಹಾರ ಇರಲೇಬೇಕೆನ್ನುವ ಕು. ಶಿ. ಯವರ ಆತ್ಮವಿಶ್ವಾಸ ಮೆಚ್ಚುವಂತಹುದು. ಇಂತಹ ಸಂದರ್ಭದಲ್ಲಿ ಎದೆಗುಂದದೇ ಕಾರ್ಯಾಚರಣೆಗೆ ಇಳಿಯುವ ವಿಧಾನವೂ ವೈಶಿಷ್ಟ್ಯಪೂರ್ಣ. ಕು. ಶಿ. ಯವರ keep one step forward, two steps backward ವಾದವು ವ್ಯಕ್ತಿಯೊಬ್ಬ ಸಂದರ್ಭಕ್ಕನುಸಾರ ಹೊಂದಿರಬೇಕಾದ ಹೊಂದಾಣಿಕೆಯ ಅವಶ್ಯಕತೆಯನ್ನು ಒತ್ತಿ ಸಾರುತ್ತದೆ.

ಕು. ಶಿ. ಯವರ ಹೃದಯ ವೈಶಾಲ್ಯ, ಸಹೃದಯತೆ, ಸಹೋದ್ಯೋಗಿಗಳ ಬಗ್ಗೆ ಅವರಿಗಿದ್ದ ಆತ್ಮೀಯತೆ, ಕಾಳಜಿ ಅಪಾರ. ವ್ಯಕ್ತಿಯ ಅರ್ಹತೆ, ಪ್ರತಿಭೆಗಳನ್ನು ಒಂದೇ ನೋಟದಲ್ಲಿ ಅಳೆಯಬಲ್ಲ ಅವರ ಸಾಮರ್ಥ್ಯ ಅನುಕರಣೀಯ. ಪ್ರತಿಭೆಯ ಪೂರ್ಣ ವಿಕಸನಕ್ಕೆ ಪೂರಕವಾಗುವ ರೀತಿ ಮಾರ್ಗದರ್ಶನ ನೀಡುವಲ್ಲಿ ಎಲ್ಲಿಲ್ಲದ ಉತ್ಸಾಹ.

ಎಂ. ಜಿ. ಎಂ. ಕಾಲೇಜಿನ ಚುಕ್ಕಾಣಿಯನ್ನು ಹಿಡಿದುದು ಕೇವಲ 15 ವರ್ಷಗಳಾದರೂ ಈ ಅವಧಿಯಲ್ಲಿ ಎಂ. ಜಿ. ಎಂ. ಹಾಗೂ ಕು. ಶಿ. ಪದಪುಂಜಗಳು ಯಾವುದೇ ವ್ಯತ್ಯಾಸವಿಲ್ಲದೇ ಅವಿಭಾಜ್ಯವಾಗಿ ಹಾಗೂ ನಿರಂತರವಾಗಿ ಈ ಪರಿಸರದಲ್ಲಿ ಬಳಕೆಯಾದವು. ಇವರ ಮಾರ್ಗದರ್ಶನದಿಂದ ಎಂ. ಜಿ. ಎಂ. ಭೌತಿಕವಾಗಿ ಹಾಗೂ ಶೈಕ್ಷಣಿಕವಾಗಿ ಉನ್ನತಿಯನ್ನು ಕಂಡ ವರ್ಷಗಳು ಈ ಅವಧಿಯಲ್ಲಿ ಆದ ಹೊಸ ಕಟ್ಟಡಗಳು – ಹುಡುಗರ, ಹುಡುಗಿಯರ ಹೊಸ ಹಾಸ್ಟೆಲುಗಳು, ಶಿಕ್ಷಕರಿಗಾಗಿ ಹತ್ತಾರು ಮನೆಗಳು, ವಿಜ್ಞಾನ ಮಂದಿರ, ಗ್ರಂಥಭಂಡಾರ, ವಿಕ್ರಮಶಿಲಾ, ಪಾರ್ವತಿ ನಿಲಯ, ನಲಂದ, ಗೀತಾಂಜಲಿ ಇತ್ಯಾದಿ.

ಶೈಕ್ಷಣಿಕ ದೃಷ್ಟಿಯಲ್ಲಿ ನೋಡಿದರೂ ಈ ಅವಧಿಯು ಎಂ.ಜಿ.ಎಂ.ನ ಮಟ್ಟಿಗೆ ಮರೆಯಲಾಗದ ಅವಧಿ. ಪ್ರಿಯೂನಿವರ್ಸಿಟಿ ಹಾಗೂ ಡಿಗ್ರಿ ತರಗತಿಗಳಲ್ಲಿ ರ್‍ಯಾಂಕುಗಳ ಮಹಾಪೂರವೇ ಉಂಟಾಯಿತು. ಸಿಒಎಸ್‌ಐಪಿ ಕಾರ್ಯಕ್ರಮ, ಹೈಸ್ಕೂಲು ಉಪಾಧ್ಯಾಯರುಗಳಿಗೆ ಮಾರ್ಗದರ್ಶಿ ತರಗತಿಗಳು, ಯಕ್ಷಗಾನ ತರಬೇತಿ ಇತ್ಯಾದಿ. ಕು. ಶಿ. ಯವರು ನನ್ನ ದೃಷ್ಟಿಯಲ್ಲಿ ಒಂದು ಬೃಹತ್ ಶಕ್ತಿ; ವ್ಯಕ್ತಿಯೂ ಹೌದು, ಸಂಸ್ಥೆಯೂ ಹೌದು!

ಸ್ನಾತಕೋತ್ತರ ಪದವಿ ಶಿಕ್ಷಣ ಆರಂಭಿಸಬೇಕೆಂಬ ಕು. ಶಿ. ಯವರ ಹಂಬಲ ಹಂಬಲವಾಗಿಯೇ ಉಳಿಯಿತು. ಕಾರಣ, ಸರಕಾರಿ ಮನೋಭಾವವು ಅವರ ಅವಿರತ ಪ್ರಯತ್ನವನ್ನು ಸೋಲಿಸುವಲ್ಲಿ ಯಶಸ್ವಿಯಾಯಿತು. ಆದರೆ ಕು. ಶಿ. ಯವರು ಸೋತು ಗೆದ್ದರು; ಸ್ನಾತಕೋತ್ತರ ತರಗತಿ ಆರಂಭಿಸದೆಯೇ ರಾಷ್ಟ್ರಕವಿ ಗೋವಿಂದ

ಷ್ಠೆ ಸಂಶೋಧನ ಕೇಂದ್ರ ಸ್ಥಾಪಿಸಿ, ಎಂ. ಜಿ. ಎಂ.ನಲ್ಲಿ ಸಂಶೋಧನಾ ಅಧ್ಯಯನಕ್ಕೆ ಅನುವು ಮಾಡಿ ಪವಾಡವನ್ನೇ ಸೃಷ್ಟಿಸಿದರು. ಅವರು ಹಮ್ಮಿಕೊಂಡ ಕಾರ್ಯಕ್ರಮಗಳು ಒಂದೇ ಎರಡೇ, ವಿಭಿನ್ನ ಆಸಕ್ತಿಗಳ ಪ್ರಕಾರಗಳು – ತುಳುನಾಡ ಭೂತಾರಾಧನಾ ಅಧ್ಯಯನ, ಯಕ್ಷಗಾನದಲ್ಲಿ ಹೊಸ ಹೊಸ ಪ್ರಯೋಗಗಳು, ಜಾನಪದ ನೃತ್ಯ, ತುಳು ನಿಘಂಟು ಯೋಜನೆ ಇತ್ಯಾದಿಗಳು.

ಕು. ಶಿ. ಯವರ ನೆನಪು ಶಕ್ತಿ ಅತ್ಯದ್ಭುತ; ಕಾಲೇಜಿನ ಸಮಸ್ತ ಹಳೇ ವಿದ್ಯಾರ್ಥಿಗಳೊಂದಿಗೂ ನಿಕಟ ಸಂಪರ್ಕ ಹೊಂದಿದ್ದಾರೆ. ಯಾವುದೇ ಊರಿಗೆ ಹೋದರೂ ಅವರ ಕಾರ್ಯಕ್ರಮದಲ್ಲಿ ಹಳೆ ವಿದ್ಯಾರ್ಥಿ ಮಿತ್ರರನ್ನು ಭೇಟಿಯಾಗುವ ಕಾರ್ಯಕ್ರಮವೂ ಸೇರಿರುತ್ತದೆ.

ನಮ್ಮ ದೇಶದ ದೊಡ್ಡ ದೊಡ್ಡ ಪಟ್ಟಣಗಳನ್ನು ಐತಿಹಾಸಿಕ, ಸಾಂಸ್ಕೃತಿಕ ಪ್ರಾಧಾನ್ಯತೆಯ ಹಳ್ಳಿಗಳನ್ನೂ ಸಂದರ್ಶಿಸಿ, ಅಲ್ಲಿನ ಸಂಸ್ಕೃತಿ, ಸಾಮಾಜಿಕ ರೀತಿ ನೀತಿಗಳನ್ನು ಆಳವಾಗಿ ಅಭ್ಯಸಿಸಿ ಮಾಹಿತಿಗಳನ್ನು ಪತ್ರಿಕೆಗಳ ಮೂಲಕ ಆಸಕ್ತರಿಗೂ ನೀಡಿದ್ದಾರೆ. ಶೈಕ್ಷಣಿಕ, ಅಧ್ಯಾಪನ, ಸಂಶೋಧನಾ ಕ್ಷೇತ್ರಗಳಲ್ಲಿ ಮುಟ್ಟಿದ್ದನ್ನು ಚಿನ್ನವಾಗಿಸುವ ಅವರ ಪವಾಡ ಶಕ್ತಿಯನ್ನು ಮೆಚ್ಚಲೇ ಬೇಕು.

ಶುದ್ಧ ಪರಿಸರದ ನಿರ್ಮಾಣದ ಅವಶ್ಯಕತೆಯನ್ನು ಕಾಲೇಜಿನ ಅಧಿಕಾರವಹಿಸಿಕೊಂಡಾಗಲೇ ಅರಿತು ಕಾರ್ಯ ಪ್ರವೃತ್ತರಾದರು. ಎಂ. ಜಿ. ಎಂ. ಪರಿಸರದಲ್ಲಿ ವ್ಯವಸ್ಥಿತ ರೀತಿಯಲ್ಲಿ ಕು. ಶಿ. ಯವರು ನೆಡಿಸಿದ ಮಾವಿನ ಗಿಡಗಳು ಈಗ ಸಾಕಷ್ಟು ಬೆಳೆದು ತಂಪಾದ ಗಾಳಿಯನ್ನೂ ನೆರಳನ್ನೂ ನೀಡುತ್ತಿವೆ. ಇವುಗಳ ರುಚಿಯಾದ ಹಣ್ಣುಗಳು, ಎಳನೀರು ಇವು ಬೇಸಗೆಯ ಬಿಸಿಲಿಗೂ, ಪರೀಕ್ಷೆಯ ಬಿಸಿಗೂ ಕಂಗೆಟ್ಟ ವಿದ್ಯಾರ್ಥಿ ಸಮುದಾಯಕ್ಕೆ ವರಪ್ರಸಾದ!

ಈ ರೀತಿ ಬಹುಮುಖ ಪ್ರತಿಭೆ ಹೊಂದಿರುವ ಕು. ಶಿ. ಯವರಿಗೆ ನಮ್ಮದೇ ವಿಶ್ವವಿದ್ಯಾನಿಲಯದ ಉಪಕುಲಪತಿ ಹುದ್ದೆ ಸಿಗದಿರಲು ಕಾರಣವೇನು? ಕಾರಣ ಏನಿದ್ದರೂ ಪರಿಣಾಮ ಮಾತ್ರ ಎಲ್ಲರಿಗೂ ತಿಳಿದದ್ದೇ – ಈ ಪ್ರದೇಶದ ವಿದ್ಯಾಕಾಂಕ್ಷಿಗಳು ಕು. ಶಿ. ಯವರ ಪ್ರತಿಭೆಯ ಫಲ ದೊರೆಯದೆ ವಂಚಿತರಾದರು. ಇದು ನಮ್ಮ ದೊಡ್ಡ ದುರದೃಷ್ಟವೂ ಹೌದು. ಕು. ಶಿ. ಯವರ ಮಟ್ಟಿಗೆ ಹೇಳುವುದಾದರೆ ಇದೊಂದು ದೊಡ್ಡ ಅದೃಷ್ಟವೆನ್ನಬೇಕು; ಕಾರಣ ಅವರ ಪ್ರತಿಭೆ ಅರಳಲು ಮುಕ್ತ ಹಾಗೂ ಕಲುಷಿತ ರಹಿತ ವಾತಾವರಣ ಬೇಕೇ ಬೇಕು.

ಕು. ಶಿ. ಯವರ ಮಂದಹಾಸ, ಲವಲವಿಕೆ, ಆಕರ್ಷಕ ಸ್ವರ, ಕ್ಷಿಪ್ರ ನಡಿಗೆ, ಮಾತಿನ ವರಸೆ – ಇವೆಲ್ಲವೂ ಅವರ ವ್ಯಕ್ತಿತ್ವಕ್ಕೆ ಹೊಸ ಆಯಾಮ ನೀಡಿವೆ.

ದೈಹಿಕವಾಗಿಯೂ, ಮಾನಸಿಕವಾಗಿಯೂ ಕು. ಶಿ. ಯವರು ಇನ್ನೂ ಯುವಕರಾಗಿಯೇ ಇದ್ದಾರೆ. ಅವರ ಚಟುವಟಿಕೆಗಳು ನಿರಂತರವಾಗಿ ಸಾಗುವಂತಾಗಲು ಅವರಿಗೆ ಭಗವಂತನು ಆಯುರಾರೋಗ್ಯ ಕರುಣಿಸಲಿ – ಇದು ನನ್ನ ಹಾಗೂ ಎಲ್ಲರ ಹಾರೈಕೆ.

ರಶ್ಮಿ ೨

ಕು. ಶಿ. ಸಾಹಿತ್ಯದ ನೆಲೆ - ಬೆಲೆ

೧ ಕು. ಶಿ. ಯವರ ಸಾಹಿತ್ಯ ಪ್ರವಾಸ

— ಡಾ। ತಾಳ್ತಜೆ ವಸಂತಕುಮಾರ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರವಾಸ ಸಾಹಿತ್ಯಕ್ಕೆ ಹೇಳತಕ್ಕಂತಹ ಇತಿಹಾಸವೇನೂ ಇಲ್ಲ. ಕೇವಲ ಇತ್ತೀಚೆಗಿನ ಕೆಲವು ದಶಕಗಳಲ್ಲಷ್ಟೇ – ಮುಖ್ಯವಾಗಿ ವಿದೇಶ ಪ್ರವಾಸ ಮಾಡಿ ಬಂದ ಸಾಹಿತಿಗಳಿಂದಾಗಿ – ಈ ಸಾಹಿತ್ಯಪ್ರಕಾರ ಬೆಳೆದು ಬಂದುದನ್ನು ಕಾಣುತ್ತೇವೆ; ಹಾಗೆ ಬರೆಯುವುದೊಂದು ಸಂಪ್ರದಾಯವೇ ಆಗಿ ಬಿಟ್ಟಿದೆ. ಭಾರತದಂತಹ ದೊಡ್ಡ ದೇಶದ ಉದ್ದಗಲಗಳಲ್ಲೂ ಪ್ರಾಚೀನ ಸಾಂಸ್ಕೃತಿಕ ನೆಲೆಗಳು, ನಿಸರ್ಗದ ಚೆಲುವಿನ ತಾಣಗಳು ಚೆಲ್ಲವರಿದಿವೆ. ಆದರೆ ಪ್ರವಾಸವನ್ನು ಕೇವಲ ಪ್ರವಾಸದ ಕಾರಣಕ್ಕಾಗಿಯೇ ಕೈಗೊಳ್ಳುವ ಜಾಯಮಾನ ನಮ್ಮದಲ್ಲ ವಾಗಿ, ಆ ಒಂದು ಪರಿಕಲ್ಪನೆಯೇ ನಮ್ಮಲ್ಲಿ ಹೆಚ್ಚಾಗಿ ಬೆಳೆಯಲಿಲ್ಲ. ಈಚೆಗೆ ಈ ನಿಟ್ಟಿನಲ್ಲೂ ಕೆಲವು ಒಳ್ಳೆಯ ಪುಸ್ತಕಗಳು ಬಂದಿವೆ.

ವಿದೇಶ ಪ್ರವಾಸಕ್ಕೆ ಸಂಬಂಧಿಸಿದ ಸಾಹಿತ್ಯದಲ್ಲಿ ಕಾರಂತರ 'ಅಪೂರ್ವ ಪಶ್ಚಿಮ', ಗೋರೂರರ 'ಅಮೆರಿಕದಲ್ಲಿ ಗೋರೂರು', ವಿ.ಎನ್. ಮೂರ್ತಿರಾಯರ 'ಅಪರವಯಸ್ಕನ ಅಮೆರಿಕ ಯಾತ್ರೆ' – ಮುಂತಾದವು ಈ ಸಾಲಿನಲ್ಲಿ ಹೆಸರಿಸಬಹುದಾದ ಕೃತಿಗಳು. ಇದಕ್ಕೆ ಸೇರ್ಪಡೆಯಾಗಬಹುದಾದ ಇನ್ನೆರಡು ಕೃತಿಗಳೆಂದರೆ, ಕು.ಶಿ. ಯವರ "ಇತಾಲಿಯಾ ನಾನು ಕಂಡಂತೆ" ಮತ್ತು "ಜಗದಗಲ".

ಪ್ರವಾಸ ಸಾಹಿತ್ಯದಲ್ಲಿ ಹೆಚ್ಚಿನವುಗಳು ಪಾಶ್ಚಿಮಾತ್ಯ ಜಗತ್ತನ್ನು ಬಣ್ಣಿಸುವಂಥವುಗಳು. ಇಂಗ್ಲೆಂಡ್, ಅಮೆರಿಕಾಗಳ ಜೀವನ ವಿಧಾನವಂತೂ ತೀರಾ ಪರಿಚಿತವೆನಿಸುವ ಮಟ್ಟಿಗೆ ಅವುಗಳ ಮೇಲೆ ಪುಸ್ತಕಗಳು ಬಂದಿವೆ. ಆದರೆ ಪೂರ್ವ ದೇಶಗಳ ಬಗೆಗಿನ ವಿವರ ಅಷ್ಟಾಗಿ ಸಿಗುವುದಿಲ್ಲ. ಭಟ್ಟರ ಕೃತಿಗಳು ಈ ನಿಟ್ಟಿನ ಕೊರತೆಯನ್ನು ಸ್ವಲ್ಪಮಟ್ಟಿಗೆ ತುಂಬಿಬಿಟ್ಟಿವೆ.

ಜ್ಞಾನದಾಹಿಯಾದ ಮನುಷ್ಯ ಓದಿ, ಕೇಳಿ ತಿಳಿಯುವುದಕ್ಕಿಂತ ಹೆಚ್ಚನ್ನು ನೋಡಿ, ಅನುಭವಿಸಿ ತಿಳಿಯಬಲ್ಲ. ಇಲ್ಲಿ ಜ್ಞಾನಾರ್ಜನೆಯ ಜೊತೆಗೇ ಮನಸ್ಸಿಗೆ ಮುದವಾಗುತ್ತದೆ. ಯಾಂತ್ರಿಕ ಬದುಕಿನ ಏಕತಾನತೆಯಿಂದ ಬೇಸತ್ತ ಮನಸ್ಸಿಗೆ ಇದೊಂದು ಉಲ್ಲಾಸ ನೀಡುವ ಸಾಧನವೂ ಹೌದು. ಆದುದರಿಂದಲೇ ಅನೇಕರಿಗೆ ಪ್ರವಾಸ ಹೋಗುವುದು ಒಂದು ನೆಚ್ಚಿನ ಹವ್ಯಾಸ. 'Travelling makes a perfect man' ಇದರ ಸತ್ಯ ನಮ್ಮ ಅರಿವಿಗೆ ಬರುವುದು ಕಾರಂತರಂಥ ಹಿರಿಯರು ತಮ್ಮ ಬಹುಮುಖಿ ಬೆಳವಣಿಗೆಗೆ ಈ ಹವ್ಯಾಸವೂ ಪ್ರಮುಖ ಕಾರಣ ಎಂದಾಗ. ಹರಿದಾಸ ಭಟ್ಟರಿಗಾದರೂ ಅಷ್ಟೇ. ಅವರು ತಮ್ಮ ಬಿಡುವಿಲ್ಲದ ದಿನಚರಿಯಲ್ಲಿಯೂ ಸಮಯ–ಅವಕಾಶ ಕಲ್ಪಿಸಿಕೊಂಡು ದೇಶವಿದೇಶಗಳಲ್ಲಿ ಅಲೆದಾಡಿದ್ದಾರೆ; ತಮ್ಮ ಅನುಭವಗಳನ್ನಿಲ್ಲಿ ದಾಖಲಿಸಿದ್ದಾರೆ. 'ಜಗದಗಲ'ದಲ್ಲಿ ಅವರೇ ಹೇಳಿಕೊಂಡಂತೆ ಅವರ ಬರೆಹಗಳು 'ಪ್ರವಾಸ ಕಥನದಷ್ಟೇ ಆತ್ಮ ಕಥನವೂ ಆಗಬಹುದು'. ತನ್ನ ಬರೆಹದ ಮೂಲ ಉದ್ದೇಶದ ಮೇಲೆ ಬೆಳಕು ಚೆಲ್ಲುತ್ತಾ ಅವರು, 'ಅಸ್ಪಷ್ಟ ಧ್ಯೇಯವಾದಿಯೊಬ್ಬ ತನ್ನ ಅಮೂರ್ತ ಭಾವನೆಗಳಿಗೆ ಬಾಯಿ ಕೊಡುವ ಮನುಷ್ಯರು ದೊರೆತಾರೇ ಎಂದು, ಕಂಡ ಕನಸುಗಳಿಗೆ ನೆಲೆ ಯಾವುದು ಎಂದು, ನಾಡಿನ ಭೂತಕಾಲದ ಸಂಪತ್ತಿನ ನೆಲೆ ಎಲ್ಲಿದೆ ಎಂದು, ವರ್ತಮಾನದ ಗೊಂದಲದ ನಡುವೆಯೂ ಚೆಲುವಿನ ಚಿಲುಮೆ ಅಡಗಿದೆಯೇ ಎಂದು. ಜನಜೀವನದ ಕಸುವು ಯಾವುದು ಎಂದು ಅರಸುತ್ತ ತನ್ನ ಬದುಕಿನ ಅಲೆಮಾರಿ ಪರ್ವದಲ್ಲಿ ಕಣ್ಣಲ್ಲಿ ಕಂಡದ್ದನ್ನು, ಮನಸ್ಸಲ್ಲಿ ಉಂಡದ್ದನ್ನು ಒಪ್ಪಿಸುವ ಸಂಕಲ್ಪ ಮಾಡಿದ್ದಾನೆ" ಎಂದಿದ್ದಾರೆ.

ಪ್ರಾಮಾಣಿಕವಾಗಿ ಹೇಳುವುದಾದರೆ, 'ಇತಾಲಿಯಾ ನಾನು ಕಂಡಂತೆ' – ಇದೊಂದೇ ಹರಿದಾಸ ಭಟ್ಟರ ನಿಜವಾದ ಪ್ರವಾಸ ಸಾಹಿತ್ಯವೆನಿಸುತ್ತದೆ. ಅವರೇ ಹೇಳುವಂತೆ 'ಇದರಲ್ಲಿ ಕಂಡಷ್ಟನ್ನೂ ಬರೆದಿದ್ದೇನೆ. ಇಪ್ಪತ್ತೊಂಬತ್ತು ದೇಶಗಳ ನಾಲ್ವತ್ತು ಸಹಪಾಠಿಗಳೊಡನೆ ಕಳೆದ ವಿದೇಶೀ ಜೀವನ ಸಾಕಷ್ಟು ಮಹತ್ವಪೂರ್ಣವಾದದ್ದೆಂದು ನನ್ನೆಣಿಕೆ".

ಅವರ ಪ್ರಯಾಣ ಮಾಧ್ಯಮ ಹಡಗಾಗಿದ್ದುದರಿಂದ (ರೋಮಾ) ಜಲಪ್ರಯಾಣದ ಅನುಭವಗಳನ್ನು ತಮ್ಮ ತಿಳಿಹಾಸ್ಯದ ಸುಂದರ ಶೈಲಿಯಲ್ಲಿ ಬಣ್ಣಿಸುತ್ತಾರೆ.

ವಿದೇಶದಲ್ಲಿ ಮೊತ್ತಮೊದಲ ದಿನ ತನ್ನನ್ನು ಕಾಡಿದ ಅನಾಥಪ್ರಜ್ಞೆಯ ಬಗೆಗೆ, ತನ್ನ ಪ್ರಯಾಣದ ಸಾರ್ಥಕತೆಯ ಬಗೆಗೆ ತನ್ನಲ್ಲುಂಟಾದ ಗೊಂದಲದ ಬಗೆಗೆ ಅವರು ಬರೆಯುವ ಮಾತುಗಳು ಎಲ್ಲಾ ವಿದೇಶ ಪ್ರವಾಸಿಗಳಿಗೂ ಸಮಾನವಾಗಿರುವಂಥವು. ಅಂತೆಯೇ ವಿದೇಶ ಯಾತ್ರಿಗಳು ಮೆಚ್ಚಿಕೊಳ್ಳುವ ಅಲ್ಲಿಯ ಶಿಸ್ತು, ನೈರ್ಮಲ್ಯ ಪ್ರಜ್ಞೆ, ದೇಶಾಭಿಮಾನ, ಕರ್ತವ್ಯ ಪ್ರಜ್ಞೆ ಮುಂತಾದವುಗಳನ್ನು ಇವರೂ ಗಮನಿಸಿದ್ದಾರೆ; ನಮ್ಮಲ್ಲಿ ಅವುಗಳಿಲ್ಲದ ಬಗೆಗೆ ಕಳವಳಿಸಿದ್ದಾರೆ. ಆಹಾರದ ವಿಷಯದಲ್ಲೂ ಸಸ್ಯಾಹಾರಿ ಭಾರತೀಯ ಸಾಮಾನ್ಯವಾಗಿ ಎದುರಿಸಲೇಬೇಕಾಗಿ ಬರುವ ಸಮಸ್ಯೆಗಳನ್ನು ಎದುರಿಸಿ ಪಾರಾಗಿದ್ದಾರೆ. ಒಂದರ್ಥದಲ್ಲಿ, ಭಾರತ ಬಿಟ್ಟು ಹೊರ ಹೋಗುವ ಎಲ್ಲರಿಗೂ ಇವು ಸಾಮಾನ್ಯ ಅನುಭವಗಳಾದುದರಿಂದ, ನಮ್ಮ ವಿದೇಶಗಳ ಕುರಿತಾದ – ಪ್ರವಾಸ ಸಾಹಿತ್ಯಗಳಲ್ಲಿ ಇವನ್ನು ಸಾಮಾನ್ಯ ಲಕ್ಷಣಗಳಾಗಿ ಗುರುತಿಸಬಹುದು. ಕೇವಲ ಶೈಲಿಯ ವ್ಯತ್ಯಾಸವನ್ನಷ್ಟೇ ನಾವಿಲ್ಲಿ ಕಾಣಬಹುದು.

ಇಟಲಿಯಲ್ಲಿ ಇವರ ವಾಸ್ತವ್ಯ ಆರು ತಿಂಗಳ ಅವಧಿಯದು. ಸಾಕಷ್ಟು ಸಮಯಾವಕಾಶವಿದ್ದುದರಿಂದ ಅಲ್ಲಿಯ ಬದುಕನ್ನು ಅವರು ವಿವರವಾಗಿ ಪರಿಶೀಲಿಸಿದ್ದಾರೆ. ಅಲ್ಲಿಯವರ ಮುಂಜಾವಿನಿಂದ ಸಂಜೆಯವರೆಗಿನ ದಿನಚರಿಯನ್ನು ಆ ಹಿನ್ನೆಲೆಯಲ್ಲಿ ತನ್ನ ಆಹಾರ-ವಿಹಾರಗಳು ಬದಲಾದ ರೀತಿಯನ್ನು, ಅದರಿಂದ ತನಗಾದ ಒಳಿತನ್ನು ಹೇಳುತ್ತಾರೆ. 'ಸ್ಪಗೆಟ್ಟಿ' (ಇಟಾಲಿಯನ್ ಶ್ಯಾವಿಗೆ)ಯನ್ನು ರೂಢಿಸಿಕೊಳ್ಳಲು ಅವರು ಪಟ್ಟ ಪಾಡಾಗಲಿ, ಫೋರ್ಕನ್ನು ಬಳಸುವಾಗಿನ ಫಜೀತಿಯಾಗಲಿ ಸುಸಂಸ್ಕೃತ ಹಾಸ್ಯ ಹೇಗಿರಬೇಕೆಂಬುದಕ್ಕೆ ಉದಾಹರಣೆಗಳಾಗಬಲ್ಲ ಪ್ರಸಂಗಗಳು. ಇಂಥವು ಕೃತಿಯ ಉದ್ದಕ್ಕೂ ಹೇರಳವಾಗಿ ಸಿಗುತ್ತವೆ.

ಹರಿದಾಸ ಭಟ್ಟರ ದೃಷ್ಟಿ ಬಹುಮುಖವಾದುದೆಂಬುದಕ್ಕೆ ಇಲ್ಲಿ ಸಾಕಷ್ಟು ನಿದರ್ಶನಗಳಿವೆ. ಇಂಗ್ಲಿಷ್ ಕಲಿಕೆ ಇಟಾಲಿಯನ್ನರಿಗೆ ಅನಿವಾರ್ಯವಲ್ಲ ಎಂಬ ಅಂಶವನ್ನು ಅವರು ಒತ್ತಿ ಹೇಳಿದ್ದಾರೆ. ಇಟಾಲಿಯನ್ ಭಾಷೆಯ ಬಗೆಗೆ ಪ್ರಾಥಮಿಕ ಜ್ಞಾನ ಸಂಪಾದಿಸಿದರೂ ನಿರರ್ಗಳವಾಗಿ ಸಂಭಾಷಿಸುವಷ್ಟು ಆ ಭಾಷೆಯ ಮೇಲೆ ತನಗೆ ಪ್ರಭುತ್ವ ಬರಲಿಲ್ಲವಲ್ಲಾ ಎಂದು ಕೊರಗಿದ್ದಾರೆ. ಯಾವುದೇ ಪ್ರಕಾರದ ಸಾಹಿತ್ಯವಾಗಿದ್ದರೂ, ಸಾಹಿತಿಯ ವ್ಯಕ್ತಿತ್ವ ಅದರಲ್ಲಿ ಹಣಿಕಿ ಹಾಕಿಯೇ ತೀರುತ್ತದೆಂಬುದಕ್ಕೆ ಈ ಕೃತಿ ಸಾಕ್ಷಿಯಾಗುತ್ತದೆ.

ಭಟ್ಟರ ಸಂಸ್ಕೃತಿಯ ಬೇರು ಇರುವುದು ಅವರ ನಾಡಿನ ಕಡಲ ಕರೆಯಲ್ಲಿ; ಹಳ್ಳಿಯ ಜನರ ಮುಗ್ಧ ಸಂಭ್ರಮದಲ್ಲಿ. ಯಾವ ದೃಶ್ಯವನ್ನು ಕಂಡರೂ ಅವರ ಪ್ರಜ್ಞೆಗೆ ಹೊಳೆಯುವುದು ಅವರ ಊರಿನ ಚಿತ್ರ, ಅವುಗಳ ನಡುವಿನ ಹೋಲಿಕೆ. ಆದರೂ ಒಳ್ಳೆಯದೇನನ್ನಾದರೂ ಕಂಡಾಗ (ವರ್ಣದ್ವೇಷ, ಭಾಷಾ ದುರಭಿಮಾನ ಅಲ್ಲಿ ಇಲ್ಲವೆಂಬುದನ್ನು ತೀರಾ ಖುಷಿಯಿಂದ ಹೇಳುವ ಅವರ ರೀತಿಯನ್ನು ಗಮನಿಸಿ ಪು. 29) ಚಿಕ್ಕ ಮಕ್ಕಳಂತೆ ಹರ್ಷಿಸುತ್ತಾರೆ. ಇಂಥ ಪ್ರಸಂಗಗಳಲ್ಲಿ ಎಷ್ಟೇ ವಸ್ತುನಿಷ್ಠವಾಗಿ ನೋಡಬೇಕೆಂದರೂ ಅವರ ವ್ಯಕ್ತಿತ್ವದ ಒಂದು ಮುಖವತ್ತಲೇ ಗಮನ ಹರಿದು ಬಿಡುತ್ತದೆ; ಬರವಣಿಗೆಯಲ್ಲಿ ಅವರು ಸಾಧಿಸಿದ ತಾದಾತ್ಮ್ಯ ಗಮನಾರ್ಹವೆನಿಸುತ್ತದೆ. ಒಂದು ದೇಶದ ಸಾಂಸ್ಕೃತಿಕ ಮೌಲ್ಯಕ್ಕೆ ಧಕ್ಕೆಯಾಗಬಹುದಾದ ಸಂದರ್ಭಗಳನ್ನು ಬಹು ನಾಜೂಕಾಗಿ, ಒಂದು ಸಮುದಾಯದ ಭಾವನೆಗಳಿಗೆ ನೋವಾಗದಂತೆ ತೇಲಿಸಿ ಹೇಳಿಬಿಡುತ್ತಾರೆ. (ಉದಾ : ದಕ್ಷಿಣ ಇಟಲಿಯ ಹೆಣ್ಣು ಮಕ್ಕಳ ನೈತಿಕ ಶೈಥಿಲ್ಯವನ್ನು ಪ್ರಸ್ತಾಪಿಸುವ ಸಂದರ್ಭ. ಪು. 30)

ಪ್ರವಾಸದ ಉದ್ದೇಶವೇ ಹೊಸ ಸಂಸ್ಕೃತಿಯೊಂದರ ಪರಿಚಯ ಮಾಡಿಕೊಳ್ಳುವುದೆಂಬುದನ್ನು ಭಟ್ಟರು ಸರಿಯಾಗಿ ಅರ್ಥೈಸಿಕೊಂಡಿದ್ದಾರೆ. ಇದಕ್ಕೆ ಪೂರಕವಾಗಿ ಅವರು ಹಲವು ಇಟಾಲಿಯನ್ ಕುಟುಂಬಗಳ ಬಗೆಗೆ ಬರೆದಿದ್ದಾರೆ. ಅಲ್ಲಿಯ ಕಲಾವೈಭವವನ್ನು ಸಾಕಷ್ಟು ಅಧ್ಯಯನ ಪೂರ್ವಕವಾಗಿ ಸಮೀಕ್ಷಿಸಿದ್ದಾರೆ. ಪೋಪರ ಭೇಟಿಯ ಸಂದರ್ಭದಲ್ಲೂ ಭಟ್ಟರು ತಮ್ಮ ಮನೋಭಾವಕ್ಕೇ ಒತ್ತುಕೊಟ್ಟು ಹೇಳಿದ್ದಾರೆ. ಗೌರವಕ್ಕೂ, ದಾಸ್ಯ ಮನೋಭಾವಕ್ಕೂ ಅಂತರ ಇಲ್ಲವಾಗುವುದೇ ವ್ಯಕ್ತಿಯ ವೈಯಕ್ತಿಕ ದುರಂತಕ್ಕೆ ಕಾರಣ ಎಂಬುದನ್ನಿಲ್ಲಿ ಸೂಚಿಸಿದ್ದಾರೆ; ಆದರೆ ಮಾನಸಿಕ ಸಮತೋಲನಕ್ಕೆ ಧಾರ್ಮಿಕ ನೆಲೆಗಟ್ಟು ಅಗತ್ಯವೆಂಬುದನ್ನು ಒಪ್ಪಿಕೊಳ್ಳುತ್ತಾರೆ. "ನಾನನುಭವಿಸಿದ ಕತೆಯನ್ನೇ ಸೂಕ್ಷ್ಮದಲ್ಲಿ ಹೇಳಬೇಕಾದರೆ ಇದು 'ನಾನು', 'ನಾವು' ಆದ ಕತೆ. ಹಿಂದುಳಿದ ವಿಧವಿಧ ಸಂಸ್ಕಾರ ಮತ್ತು ಹಿನ್ನೆಲೆಯ ಸುಮಾರು ನಲ್ವತ್ತು ಜನ ಬೆಳವಣಿಗೆಯ ಸೂತ್ರಗಳ ಬಗೆಗೆ ಅಹರ್ನಿಶಿ ಯೋಚಿಸುತ್ತ, ಯೋಜನೆಗಳ ಸುರುಳಿ ಬಿಚ್ಚುತ್ತ, ಆರ್ಥಿಕ-ಸಾಮಾಜಿಕ ತಾರತಮ್ಯಗಳ ನಡುವೆಯೂ ಎದ್ದು ತೋರುವ ಸಮಾನ ಸ್ವರೂಪ ದರ್ಶನವನ್ನು ಮಾಡಿಕೊಂಡು ವಿಶ್ವಕುಟುಂಬದ ಸುಖದುಃಖಗಳ ಏಕತಾನವನ್ನು ತಮ್ಮ ಹೃದಯದಲ್ಲಿಯೂ, ಏಕರೂಪತೆಯನ್ನು ತಮ್ಮ ಬುದ್ಧಿಯಲ್ಲಿಯೂ ಸ್ಥಿರಗೊಳಿಸಿದ ಸತ್ಯಕತೆ" ಎನ್ನುವ ಅವರ ಮಾತುಗಳು ಅವರ ಬರೆಹದ ಉದ್ದೇಶ – ವ್ಯಾಪ್ತಿಗಳನ್ನು ಸ್ಪಷ್ಟಪಡಿಸುತ್ತವೆ.

ಇಸ್ವೇ (I. S. V. E. = Institute Di Studi per to Sviluppo Economics

ದ ವಿದ್ಯಾರ್ಥಿ ವೇತನದಲ್ಲಿ, ಅರ್ಥಶಾಸ್ತ್ರದಲ್ಲಿ ಉನ್ನತ ಅಭ್ಯಾಸ ಭಟ್ಟರ ಇಟಲಿ ಸಂದರ್ಶನದ ಉದ್ದೇಶವಾಗಿತ್ತಷ್ಟೆ. ಆದುದರಿಂದ ಸಹಜವಾಗಿಯೇ ಅಲ್ಲಿಯ ಶಿಕ್ಷಣ ಕ್ರಮ, ಅಧ್ಯಯನ ಪದ್ಧತಿ, ವಿಷಯ ವಿಭಾಗಗಳ ಬಗೆಗೆ ಸಾಕಷ್ಟು ವಿವರಗಳನ್ನವರು ನೀಡುತ್ತಾರೆ. ಉಪನ್ಯಾಸದಷ್ಟೇ ಸಂಶೋಧನೆಗೂ ಪ್ರಾಶಸ್ತ್ಯವಿರುವ ಅಲ್ಲಿಯ ಶಿಕ್ಷಣ ಕ್ರಮದ ಹಿನ್ನೆಲೆಯಲ್ಲಿ ಭಾರತೀಯ ವಿದ್ಯಾಭ್ಯಾಸ ಪದ್ಧತಿಯನ್ನು ವಿಶ್ಲೇಷಿಸುತ್ತಾರೆ. ಹೀಗೆ ಭಟ್ಟರದು ಏಕಮುಖ ಪರಿಶೀಲನೆಯಾಗಿಲ್ಲ. ಬದಲಿಗೆ ಒಂದು ದೇಶವನ್ನು ಬೇರೆ ಬೇರೆ ಆಯಾಮಗಳಿಂದ ಅಭ್ಯಸಿಸಿದ್ದಾರೆ. ತನ್ನ ಸಹಾಧ್ಯಾಯಿಗಳ ಬಗೆಗೆ ಬರೆಯುವ ಸಂದರ್ಭವನ್ನು, ಅವರ ಮೂಲಕ ವಿವಿಧ ದೇಶಗಳ ಜೀವನ ವಿಧಾನವನ್ನು ಪರಿಚಯಿಸಲು ಇವರು ಬಹು ಚೆನ್ನಾಗಿ ಬಳಸಿಕೊಂಡಿದ್ದಾರೆ. ತರಗತಿಯಲ್ಲಾದ ಮೋಜಿನ ಪ್ರಸಂಗಗಳನ್ನು ಸಂಕಲಿಸುತ್ತಾ, ಕ್ಲಿಷ್ಟವಾಗಬಹುದಾಗಿದ್ದ ವಿಷಯ ಗ್ರಹಣವನ್ನು ಹೃದ್ಯವಾಗಿಸಿದ್ದಾರೆ.

ಬರಿಯ ಪುಸ್ತಕದಲ್ಲಿ ಏನೇನಿದೆಯೆಂಬುದರ ಪಟ್ಟಿ ಅಭ್ಯಾಸವಾಗಲಾರದು. ಅದರೊಂದಿಗೆ ಲೇಖಕನ ಮನೋಭಾವ, ಒಂದು ಘಟನೆಗೆ, ದೃಶ್ಯಕ್ಕೆ ಆತ ಪ್ರತಿಕ್ರಿಯಿಸುವ ರೀತಿ, ಅಪರಿಚಿತ ಜೀವನ ವಿಧಾನವನ್ನು ಪರಿಚಯಿಸುವಲ್ಲಿ ಆತ ಸಾಧಿಸಿದ ಸಾಫಲ್ಯ ಒಂದು ದೇಶದ ಒಟ್ಟು ಮನೋಧರ್ಮವನ್ನು ಆತ ಪ್ರತಿಬಿಂಬಿಸುವ ರೀತಿಗಳೂ ಪ್ರವಾಸ ಸಾಹಿತ್ಯದ ಮೌಲ್ಯ ಮಾಪನಕ್ಕೆ ಪ್ರಸ್ತುತವಾಗುತ್ತವೆ.

'ಕ್ಯೂ'ವೇ ಇಲ್ಲದೆ ನುಗ್ಗುವ ಜನಗಳ ಮಂದೆಯಲ್ಲಿ ಮಕ್ಕಳ ಹಿಂಡನ್ನೇ ಹಿಡಿದುಕೊಂಡು ಮಾರ್ಗದಲ್ಲಿ ಹೊರಡುವ ತಾಯ್ತಂದೆಯರನ್ನು ಕಂಡಾಗ ಭಟ್ಟರಿಗೆ ಕಾಡುವುದು ತನ್ನೂರ ನೆನಪು.

ಇಟಲಿ ಕಲೆಗೆ ತವರೂರು. ಅಲ್ಲಿಯ ಸಾಂಸ್ಕೃತಿಕ ಕೇಂದ್ರಗಳ ಬಗೆಗೆ ಬರೆಯುವಾಗ ಭಟ್ಟರ ಉತ್ಸಾಹಕ್ಕೆ ಗರಿ ಮೂಡುತ್ತದೆ; ಅಲ್ಲಿಯ ವಸ್ತು ಸಂಗ್ರಹಾಲಯದ ಬಗೆಗೆ ಬರೆಯುತ್ತಾ, ಅದರ ಚಾರಿತ್ರಿಕ ಮಹತ್ವವನ್ನು ಹೇಳುತ್ತಾರೆ. ಚಿತ್ರಕಲೆಯ ಬಗೆಗೆ ಹೇಳುತ್ತಾ ಅಲ್ಲಿಯ ಚಿತ್ರಕಾರರ ಸೂಕ್ಷ್ಮ ಪರಿಚಯ ಮಾಡಿಕೊಡುತ್ತಾರೆ. ಅಲ್ಲಿಯ ಸಂಗೀತವಾಗಲಿ, ಒಪೇರಾವಾಗಲಿ ವಿಶ್ವಮಾನ್ಯತೆಗೆ ಅರ್ಹವೆನ್ನುತ್ತಾರೆ. ಅವುಗಳ ಬಗೆಗಿನ ಸ್ಪಷ್ಟ ಚಿತ್ರ ಕೊಡುತ್ತಾರೆ.

ಇಟಾಲಿಯನ್ ಕುಟುಂಬಗಳೊಂದಿಗೆ ಕಾಲ ಕಳೆಯುವ ಯಾವುದೇ ಅವಕಾಶವನ್ನೂ ಅವರು ಹುಸಿಹೋಗಗೊಡಲಿಲ್ಲ. ಅಲ್ಲಿನವರ ಆತ್ಮೀಯತೆಯನ್ನು ಮನದುಂಬಿ ನೆನೆಯುತ್ತಾರೆ. ಸರಳವಾಗಿರುವ ಅವರನ್ನು ಇಷ್ಟಪಡುತ್ತಾರೆ. ಸಕಾಲಿಕವೆನಿಸುವ ಭಾವಚಿತ್ರಗಳು ಭಟ್ಟರ ವರ್ಣನೆಗಳನ್ನು ಸ್ಫುಟಗೊಳಿಸಲು ನೆರವಾಗುತ್ತವೆ. "ನಾನು ಸ್ನಾತಕನಾದದ್ದು ಉತ್ಸಾಹದ ಮೂರ್ತಿ ಮತ್ತು ವಿನೋದದ ಚಿಲುಮೆಯಾಗಿದ್ದ ಆಪ (ಒಬ್ಬ ಇಟಾಲಿಯನ್)ನ ಪ್ರೀತಿ ಸಾಗರದ ಸುಖೋಷ್ಣದಲ್ಲಿಯೇ ಅಥವಾ ಇಸ್ಲೇ ಅಧ್ಯಯನ ಮಂಡಲಿಯ ಮಹಿಮೆಯಲ್ಲಿಯೇ ಹೇಳಲಾರೆ" ಎಂಬಷ್ಟರ ಮಟ್ಟಿಗೆ ಅಲ್ಲಿನವರ ಪ್ರೀತಿಯ ಋಣವನ್ನು ನೆನೆಯುತ್ತಾರೆ.

ಒಟ್ಟಿನಲ್ಲಿ 'ನಾನು ಕಂಡ ಇತಾಲಿಯಾ' ಬರಿಯ ಏಕಮುಖ ಅಧ್ಯಯನವಾಗದೆ, ಇಟಲಿಯ ಸರ್ವಾಂಗೀಣ ಬೆಳವಣಿಗೆಯ ಕಥೆಯನ್ನು, ಸಾಂಸ್ಕೃತಿಕ ಇತಿಹಾಸವನ್ನು, ಸಾಮಾಜಿಕ ಬದುಕನ್ನು, ಧಾರ್ಮಿಕ ನಿಲುವು – ನಂಬಿಕೆಗಳನ್ನು ದಾಖಲಿಸುತ್ತದೆ. ಆದರೂ ಕೃತಿಯ ಪ್ರಮುಖ ಲಕ್ಷ್ಯ ಆ ದೇಶ ಆರ್ಥಿಕ ಪ್ರಗತಿಯ ಪಥದಲ್ಲಿ ಸಾಧಿಸಿದ ಮುನ್ನಡೆಯತ್ತ ಸಹಜವಾಗಿಯೇ ವಾಲುತ್ತದೆ. ಅಲ್ಲಿಯ ಔದ್ಯಮಿಕ ಕ್ರಾಂತಿಯ ಇತಿಹಾಸವಾಗಲಿ, ತೆಂಕ – ಬಡಗ ಇತಾಲಿಯನ್ನರ ಆರ್ಥಿಕ ಮಟ್ಟದಲ್ಲಿರುವ ಗಣನೀಯ ವ್ಯತ್ಯಾಸವಾಗಲಿ. ಅಲ್ಲಿನ ಉದ್ಯೋಗಾವಕಾಶಗಳ ವಿವರವಾದ ಸಮೀಕ್ಷೆಯಾಗಲಿ ಆ ಸರಕಾರ ಹಮ್ಮಿಕೊಂಡ ಅಭಿವೃದ್ಧಿ ಕಾರ್ಯಕ್ರಮಗಳಾಗಲಿ ಭಟ್ಟರ ಮನೋಭೂಮಿಕೆಗೆ ಹೆಚ್ಚು ಪ್ರಸ್ತುತವೆನಿಸಿವೆ. ಅವರು ಆ ದೇಶದ ಬಗೆಗೆ ತಾನು ತನ್ನ ದಿನಚರಿಯ ಪುಟಗಳಲ್ಲಿ ನಮೂದಿಸಿದುದನ್ನು ಹಾಗೆಯೇ ಓದುಗರ ಮುಂದಿಡುತ್ತಾರೆ.

ಹಣ್ಣುಗಳನ್ನು ಹೊತ್ತ ಸೇಬಿನ ಮರಕ್ಕೆ ಅವರು ಕೊಡುವ ಹೋಲಿಕೆ ನೋಡಿ. 'ಗಂಟು ಗಂಟಿನಲ್ಲಿ ಕಜ್ಜಿಯ ಹಾಗೆ ಸೇಬಿನ ಗೊಂಚಲು' ಈ ತರದ ಸ್ಪಷ್ಟ ಸಂಕ್ಷಿಪ್ತತೆಯ ಜಾಡಿನಲ್ಲಿಯೇ ಇತಾಲಿಯಾ ಬಡಗದ ಸಮೀಕ್ಷೆಯೂ ಸಾಗುತ್ತದೆ, ಕಾರಣ ಸ್ಪಷ್ಟವಾಗುವುದಿಲ್ಲ. ತನ್ನ ಅಮೇರಿಕಾದ ಸಂಕ್ಷಿಪ್ತ ಭೇಟಿಯ ಬಗೆಗೂ ತುಸು ಬರೆದು ಈ ಕೃತಿಯನ್ನು ಕೊನೆಗೊಳಿಸುತ್ತಾರೆ.

ಭಟ್ಟರ ಶೈಲಿ ಭಾಷೆಯ ಬಗೆಗೆ ಎರಡು ಅಭಿಪ್ರಾಯಗಳಿಲ್ಲದಿರುವುದರಿಂದ. ಆ ಕುರಿತಾಗಿ ಏನನ್ನೂ ಉಲ್ಲೇಖಿಸದೆ ಮುಂದುವರಿಯಬಹುದೆನಿಸುತ್ತದೆ.

'ಜಗದಗಲ'ದ ಮಟ್ಟಿಗೆ ಹೇಳುವುದಾದರೆ. ಓದೆಯೇ ಕಾಣಿಸಿದ ಅವರ ಆಶಯ ಅದರಲ್ಲಿ ಬಹು ಸಿದ್ಧಿಸಿದೆ ಎನ್ನಬೇಕು. ಇದರಲ್ಲಿ ಮುಖ್ಯವಾಗಿ – ಬಿಡಿ ಲೇಖನಗಳೆಂದರೂ ಸರಿಯೆ – ಐದು ಭಾಗಗಳಿವೆ. (1) ನನ್ನದು ಈ ಕನ್ನಡ ನಾಡು. (2) ಮೇಘಾಲಯದ ಹಾದಿಯಲ್ಲಿ. (3) ಹಾಂಕಾಂಗ್‌ನಲ್ಲಿ ಐದು ದಿನ. (4) ಜಪಾನ್‌ನಲ್ಲಿ ನಮ್ಮ ಯಕ್ಷಗಾನ (5) ಪ್ರವಾಸದ ಉದ್ಯಮ.

ಇವುಗಳಲ್ಲಿ ಕೊನೆಯದು ಪ್ರಸ್ತುತ ವಿಷಯದ ವ್ಯಾಪ್ತಿಗೆ ನೇರವಾಗಿ ಸಂಬಂಧಿಸಿದುದಲ್ಲವಾದ ಕಾರಣ ಅದರ ಸಮೀಕ್ಷೆಯನ್ನು ಕೈಬಿಡಲಾಗಿದೆ.

ಇವುಗಳಲ್ಲಿ ಮೊದಲನೆಯದು, ಕರ್ನಾಟಕದ ಕೆಲವು ಪ್ರವಾಸಿ ಕೇಂದ್ರಗಳ ಬಗೆಗಿನ ಇಣುಕು ನೋಟವನ್ನು ದೊರಕಿಸಿದರೆ. ಎರಡನೆಯದು ಅಸ್ಸಾಂ ಪರಿಸರದ ಬಗೆಗೆ ಕಲ್ಪನೆ ಕೊಡುತ್ತದೆ. ಮತ್ತೆರಡರ ಬಗೆಗೆ ಹೆಸರೇ ಸೂಚಿಸುತ್ತದೆ.

ಕೃತಿಯ ಉದ್ದಕ್ಕೂ ಎದ್ದು ಕಾಣುವುದು ಲೇಖಕರ ಸಮಕಾಲೀನ ಪ್ರಜ್ಞೆ, ಸೂಕ್ಷ್ಮ ನಿರೀಕ್ಷಣಾ ಸಾಮರ್ಥ್ಯ ಹಾಗೂ ವಿಮರ್ಶಕನ ಬುದ್ಧಿ. ತಮ್ಮ ಸಮರ್ಥ ಗದ್ಯ ಶೈಲಿಯಲ್ಲಿ ಅವರು ಬರೆಯುತ್ತಾ ಹೋದಂತೆಲ್ಲಾ ನಮ್ಮ ದೇಶಕ್ಕಾಗಿ, ನಾಡಿಗಾಗಿ ನಾವೇನು ಮಾಡಿದ್ದೇವೆ ಎಂಬ ಪ್ರಶ್ನೆ ನಮ್ಮಲ್ಲಿ ಏಳುತ್ತದೆ. ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಪ್ರವಾಸ ಹೋಗುವುದನ್ನು, ಅದಕ್ಕಾಗಿ ಖರ್ಚು ಮಾಡುವುದನ್ನು ನಮ್ಮ ಜನ, 'ಭೂಭೌತ, ಚಾರ್ವಾಕ ಕಾರಣಗಳೆಂದು, ಹೊಣೆಗೇಡಿ ವರ್ತನೆಯೆಂದು' ಪರಿಗಣಿಸುವುದರ ಬಗೆಗೆ ಭಟ್ಟರಿಗೆ ನೋವಿದೆ. ಈ ಅರ್ಥದಲ್ಲಿ ಈ ಕೃತಿ ಅವರ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಇದೊಂದು 'ಆತ್ಮಕಥನ' ಹೌದು ಎನಿಸುತ್ತದೆ. ಅಲಂಕರಣದ ಹೆಸರಿನಲ್ಲಿ ಮೂಲಕಲೆಗೆ ಭಂಗ ತರುವ, ಅದನ್ನು ವಿರೂಪಗೊಳಿಸುವ ಪ್ರವೃತ್ತಿ ಬೆಳೆಯುತ್ತಿರುವುದರ ಬಗೆಗೆ ಅವರಿಗೆ ಆತಂಕವಿದೆ; ಇಲ್ಲಿ ಆಗಬೇಕಾದ ಕೆಲಸಗಳ ಬಗೆಗೆ ಸೂಚನೆಯಿದೆ, ಒಳ್ಳೆಯ ಕೆಲಸ (ಉದಾ: ಪ್ರಾಚ್ಯ ಶಾಖೆಯವರು ಪಟ್ಟದಕಲ್ಲಿನಲ್ಲಿ ತೋರಿಸಿದ ಕ್ರಿಯಾಶೀಲತೆ) ಪ್ರಶಂಸೆಯಿದೆ. ತಿಳಿಹಾಸ್ಯವೇ ಕೃತಿಯ ಉದ್ದಕ್ಕೂ ಸ್ಥಾಯಿಯಾಗಿದ್ದರೂ ಆಗೊಮ್ಮೆ ಈಗೊಮ್ಮೆ ಅದು ಹರಿತವಾದ ವ್ಯಂಗ್ಯವಾಗುತ್ತದೆ. ಒಟ್ಟಿನಲ್ಲಿ 'ನನ್ನದು ಈ ಕನ್ನಡ ನಾಡಿ'ನ ಉದ್ದಕ್ಕೂ ಎದ್ದು ಕಾಣುವುದು ಅವರ ಉತ್ಕಟ ಕಲಾಭಿಮಾನ ಹಾಗೂ ದೇಶಪ್ರೇಮ. ಆದರೆ ಇದನ್ನು ಪ್ರವಾಸ ಸಾಹಿತ್ಯವೆನ್ನುವ ಬದಲಿಗೆ 'ಕನ್ನಡ ನಾಡಿನ ಸಾಂಸ್ಕೃತಿಕ ಸಮೀಕ್ಷೆ'ಯೆಂದರೆ ಸತ್ಯಕ್ಕೆ ಹೆಚ್ಚು ಸಮೀಪವಾಗಬಹುದೆನಿಸುತ್ತದೆ. ಇಲ್ಲಿ ಪ್ರಭಾವಿಯಾಗಿರುವುದು ಪ್ರವಾಸಿಗಿರಬೇಕಾದ ಸಾಕ್ಷೀಪ್ರಜ್ಞೆ, ತಟಸ್ಥ ಮನೋಭಾವವಲ್ಲ ಬದಲಾಗಿ ಭಟ್ಟರು ಅಲ್ಲಿ (involve) ಆಗಿ ಬಿಡುತ್ತಾರೆ. ಆಗ ಯಾವ ವಿಗ್ರಹದ ಎತ್ತರ ಎಷ್ಟು, ಕಲ್ಲಿನ ಗುಣಮಟ್ಟ ಹೇಗೆ, ಶಿಲ್ಪಿಯ ಚಾತುರ್ಯ ಅಲ್ಲಿ ಹೇಗೆ ಅಭಿವ್ಯಕ್ತವಾಗಿದೆ ಮುಂತಾದ ಪ್ರಶ್ನೆಗಳು ಅವರಿಗೆ ಗೌಣವಾಗಿ ನಾಡಿನ ಸಾಂಸ್ಕೃತಿಕ ಏಳಿಗೆಯೇ ಪ್ರಧಾನವಾಗುತ್ತದೆ. ಆದುದರಿಂದ, ಅವರ 'ಲೋಕಾಭಿರಾಮ'ದಂತೆ ಇದಕ್ಕೂ ಸಾಂಸ್ಕೃತಿಕ ಮೌಲ್ಯ ದೊರಕಿ ಬಿಡುತ್ತದೆ. ಹೀಗಾಗಿ ಮೂಲತಃ ಇದು ಪ್ರವಾಸ ಸಾಹಿತ್ಯ ಹೌದೇ ಎಂಬ ಪ್ರಶ್ನೆ ಉಳಿದು ಬಿಡುತ್ತದೆ.

ಮೇಘಾಲಯದ ಸುಂದರ ಪರಿಸರದ ಬಗೆಗೆ ಬರೆಯುವಾಗ ಸಹಜವಾಗಿ ಭಟ್ಟರ ಭಾಷೆ ಕಾವ್ಯಾತ್ಮಕವಾಗಿದೆ; ಅಸ್ಸಾಮಿಯರ ಮುಗ್ಧ ವಾತ್ಸಲ್ಯ, ನಾಗರಿಕತೆ ಕಲುಷಿತಗೊಳಿಸದ ಅವರ ಕಲಾಪ್ರೇಮ ಅಲ್ಲಿನ ನೆಲದ ಸಿರಿಯಷ್ಟೇ ಗಮನಾರ್ಹವಾಗಿ ಅವರಿಗೆ ಕಂಡಿವೆ. ಅವರ ಬಗೆಗೆ ನಿರ್ದಿಷ್ಟವಾಗಿ ತಾನೇನನ್ನೂ ಹೇಳಲಾರೆನೆಂಬುದನ್ನು ಸ್ಪಷ್ಟಪಡಿಸುತ್ತ ಅವರು "ಅವರ ನಡುವೆ ಹತ್ತು ದಿನ ಸಂಚರಿಸಿದ ನನ್ನ ಪ್ರವಾಸ ಕಥೆ, ಅಸ್ಸಾಮಿನ ಜನಜೀವನದ ಪ್ರತಿಬಿಂಬವನ್ನು ಮೂಡಿಸುವೆನೆಂಬ ಹಮ್ಮು ನನಗಿಲ್ಲ. ಹತ್ತು ದಿನ ಎತ್ತೆತ್ತಲೋ ಸಂಚರಿಸಿದ ಮೈಮನಗಳ ಸುಳಿವು – ಹೊಳವಿನಲ್ಲಿ, ಅರಿವಿನಂಚಿನಲ್ಲಿ ಕಂಡದೆಷ್ಟೋ ಯಾವುದೂ ತೀರ್ಮಾನವಲ್ಲ" (ಪು 42) ಎಂದಿದ್ದಾರೆ. ಬರಿಯ ಕ್ಷೇತ್ರ ಸಂದರ್ಶನ ಅವರ ಉದ್ದೇಶವಲ್ಲವೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಮನುಷ್ಯನ ಅಸ್ತಿತ್ವ, ತನ್ನ ಪರಿಸರದೊಂದಿಗೆ ಅತ ಸ್ಥಾಪಿಸಿಕೊಳ್ಳುವ ಸಂಬಂಧಗಳೇ ಪ್ರಧಾನವೆನಿಸಿರುವ ಮಾನವೀಯತೆಗೆ ಇದೇ ರೀತಿ ಸರಿಯೆನಿಸುತ್ತದೆ. ಇದು ಸಾಹಿತಿಯ ದೃಷ್ಟಿಕೋನ ನಿರ್ಧರಿಸುವ ವಿಷಯವಾದುದರಿಂದ ಅದನ್ನು ಹಿಗ್ಗಿಸುವ ಅಗತ್ಯವಿಲ್ಲವೆನಿಸುತ್ತದೆ. ಆದರೆ ಇದನ್ನು ಶುದ್ಧ ಪ್ರವಾಸ ಸಾಹಿತ್ಯವೆಂದು ಕರೆಯಲೂ ಹಿಂಜರಿಕೆ ಉಂಟಾಗುತ್ತದೆ. ಅವರ ಸಮೀಕ್ಷೆಯು ಅಸ್ಸಾಮಿನ ಜನಜೀವನದ ಮೇಲೆ ಕೇಂದ್ರೀಕೃತವಾಗಿರುವುದಲ್ಲದೆ ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳ ಮೇಲಲ್ಲ. ಶಿವಸಾಗರ ಕಾಜೀರಂಗದ ಬಗೆಗೆ ಮಾತ್ರ ವಿವರವಾದ ನಿರೂಪಣೆಯಿದೆ, ಲುಮ್ಡಿಂಗ್‌ನಲ್ಲಿ ನಡೆದ ಯಕ್ಷಗಾನದ ಪ್ರಸ್ತಾಪವಿದೆ.

ಮುಂದಿನದು 'ಕೈತಾಕ್' ವಿಮಾನ ನಿಲ್ದಾಣಕ್ಕೆ 'ಕಾಲ್ತಾಕಿ'ಸಿದ ಭಾರತೀಯ ಯಕ್ಷಗಾನ ತಂಡದ ಮುಂದಾಳುವಾಗಿ ಭಟ್ಟರು ಹಾಂಕಾಂಗಿಗೆ ಹೋದ ಪ್ರವಾಸ ಕಥನ. ಬರಿಯ ಐದು ದಿನಗಳ ಕಾಲ ಅಲ್ಲಿದ್ದ ಈ ತಂಡ ತನ್ನ ಕಾರ್ಯದಲ್ಲೇ ಮಗ್ನವಾಗಿತ್ತು. ಇಲ್ಲವಾದರೂ ಇಷ್ಟು ಅಲ್ಪ ಕಾಲಾವಧಿಯಲ್ಲಿ ಒಂದು ದೇಶದ – ಅದೆಷ್ಟು ಪುಟ್ಟದೇ ಆದರೂ – ಬಗೆಗಿನ ಸಮಗ್ರ ಕಲ್ಪನೆ ಮೂಡುವುದೂ ಸಾಧ್ಯವಿಲ್ಲ ಎನಿಸುತ್ತದೆ. ಭಟ್ಟರ ಅನುಭವವೂ ಯಕ್ಷಗಾನಕ್ಕೆ – ಬೇರೆಯೇ ಒಂದು ದೇಶದ ಸಾಂಪ್ರದಾಯಿಕ ಕಲೆಗೆ – ಆ ದೇಶದವರ ಪ್ರತಿಕ್ರಿಯೆಯ ಮೇಲೆ ಆಧಾರಿತವಾಗಿದೆ. ಉಳಿದಂತೆ ಹಾಂಕಾಂಗಿನ ಪ್ರಚಲಿತ ಸಮಸ್ಯೆಗಳು, ಅಲ್ಲಿನ ಧಾರ್ಮಿಕ ನಂಬಿಕೆ – ನಡಾವಳಿಗಳು ಮುಂತಾದವುಗಳ ಮೇಲೆ ಅಲ್ಲಷ್ಟು ಇಲ್ಲಷ್ಟು ಕೈಯಾಡಿಸಿದ್ದಾರೆ.

ಜಪಾನಿನಲ್ಲಿ ಅವರು ಕಳೆದ ದಿನಗಳು 18. ಆ ದೇಶದ ಬಗೆಗೆ ಸ್ಥೂಲ ಕಲ್ಪನೆ ಕೊಡುವಲ್ಲಿ 'ಜಪಾನಿನಲ್ಲಿ ನಮ್ಮ ಯಕ್ಷಗಾನ' ತುಸುಮಟ್ಟಿಗೆ ಸಫಲವಾಗಿದೆ. ಭಟ್ಟರು ಒಂದೇ ಮಾತಿನಲ್ಲಿ ತಮಗಾದ ಅನುಭವವನ್ನು ಹಿಡಿದಿಡುವ ಪ್ರಯತ್ನ ಮಾಡುತ್ತಾ, "ನಿನಗೆ ರಸವೊಂದೆ ಅದ್ಭುತಂ" ಎಂದು ಜಪಾನಿಗೆ ತೀರ್ಪುಕೊಡುವ

ಮನಸ್ಸಾಗಿದೆ ಎನ್ನುತ್ತಾರೆ. ಜಪಾನಿನ ಸತ್ಸಂಪ್ರದಾಯಗಳನ್ನು ಎತ್ತಿ ತೋರಿಸಿದ್ದಾರೆ. ಅವರು ತೋರಿಸಿದ ಆತ್ಮೀಯತೆಗೆ ತಲೆ ಬಾಗಿದ್ದಾರೆ. ಅಲ್ಲಿ ನಡೆದ ಯಕ್ಷಗಾನ – ನೃತ್ಯ ಗೋಷ್ಠಿಯ ಬಗೆಗೆ ಉಲ್ಲೇಖಿಸಿದ್ದಾರೆ.

ಅವರಿಗೆ ದೊರೆತ ತೀರಾ ಅಲ್ಪ ಕಾಲಾವಕಾಶ ಅವರಿಗೆ ಒಂದು ಮಿತಿಯನ್ನು ಹಾಕಿದರೆ, ಅವರು ರೂಢಿಸಿಕೊಂಡ ಮನೋಧರ್ಮ ಇನ್ನೊಂದು ರೀತಿಯಲ್ಲಿ ಅವರ ಬರವಣಿಗೆಯ ವ್ಯಾಪ್ತಿಯನ್ನು ಸೀಮಿತಗೊಳಿಸಿದೆ. ಆದುದರಿಂದ ಅವರ ಪ್ರವಾಸ ಸಾಹಿತ್ಯ ಅಧ್ಯಯನಕ್ಕೆ ವಸ್ತುವಾಗಬಹುದೇ ವಿನಾ ವಿಮರ್ಶೆಗೆ ಅಲ್ಲವೆಂದೇ ತೋರುತ್ತದೆ. ಏಕೆಂದರೆ ಅದು ವಿಮರ್ಶೆಗೆ ಅವಕಾಶವನ್ನೇ ಕೊಡುವುದಿಲ್ಲ. ಒಬ್ಬ ವ್ಯಕ್ತಿಯ ಅನಿಸಿಕೆಗಳ ಮೌಲ್ಯಮಾಪನ ಮಾಡುವುದಾಗಲೀ, ಅದನ್ನು ವಿಮರ್ಶಿಸುವುದಾದಲೀ ನಮ್ಮ ಮಿತಿಗೆ ಮೀರಿದ ವಿಚಾರಗಳಾಗಿವೆ. ಏನಿದ್ದರೂ ಹರಿದಾಸ ಭಟ್ಟರ ಹೃದ್ಯವಾದ ನಿರೂಪಣಾ ವಿಧಾನ, ಲಘುಧಾಟಿಯ ಚಿತ್ರಣಗಳು ಬಹು ಪರಿಣಾಮಕಾರಿಯಾಗಿವೆ. ಮುಖ್ಯವಾಗಿ ಅವರ ದೃಷ್ಟಿ ಕಲೋಪಾಸಕನದು, ಮಾನವತಾವಾದಿಯದು ಆದರೆ ಶುದ್ಧಾಂಗ ಪ್ರವಾಸಿಯದಲ್ಲವಾಗಿ ತನ್ನ ಮನೋಭಾವಕ್ಕೆ ತಕ್ಕಂತೆ ಕೃತಿಯನ್ನು ರೂಪಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿದ್ದಾರೆ.

---

೨. ಕು.ಶಿ.ಯವರ ಶೈಲಿ

— ಪ್ರೊ. ಎಂ. ರಾಜಗೋಪಾಲಾಚಾರ್ಯ
ಸಂಪಾದಕ: ಸುಗುಣಾಮಾಲಾ ಉಡುಪಿ

ಅನೇಕತೆಯಲ್ಲಿ ಏಕತೆಯೆಂಬುದು ಸೃಷ್ಟಿ ನಿಯಮವೇನೋ ! ಹಿಂಡದಷ್ಟು ಪ್ರಕೃತಿ ಎಂಬ ಮಾತೊಂದಿದೆ. 'ನೂರು ಮರ, ನೂರು ಸ್ವರ. ಒಂದೊಂದೂ ಅತಿಮಧುರ. ಬಂಧವಿರದೆ ಬಂಧುರ. ಸ್ವಚ್ಛಂದ ಸುಂದರ'. ಒಂದು ಮಾವಿನ ಗಿಡವನ್ನು ನೋಡಿರಿ. ಮತ್ತೊಂದನ್ನು ಪರೀಕ್ಷಿಸಿರಿ. ಒಂದೊಂದೂ ಬೇರೆ ಬೇರೆ. ಒಂದು ಮರದ ಹಣ್ಣಿನ ರುಚಿ, ರೂಪ ,ರಸ, ಗಂಧ ಮತ್ತೊಂದಕ್ಕಿಲ್ಲ. ಒಂದೊಂದೂ ಒಂದೊಂದು ತರ. ಆದರೆ ಸಾಮಾನ್ಯವಾಗಿ ಮಾವು ಎಲ್ಲಾ ಒಂದೇ ತರವಿದ್ದು ಹಲಸು ಇದಕ್ಕಿಂತ ಬೇರೆಯೆಂದು ಸ್ಪಷ್ಟ ತೋರುವ ಕಾರಣ ಮಾವು ಎಲ್ಲ ಒಂದೇ ಜಾತಿಯೆಂಬ ಪರಿಕಲ್ಪನೆಯುಂಟಾಯಿತು. ಮಾವುಗಳಲ್ಲಿ ಭೇದ ಕಾಣಬೇಕಾದರೆ ಸ್ವಲ್ಪ ಅನುಭವ ಬೇಕು. ಮಾವಿಗಿಂತ ಹಲಸು ಭಿನ್ನವೆಂದು ತಿಳಿಯಲು ಆ ರೀತಿಯ ಅನುಭವ ಬೇಡ. ಹೀಗಾಗಿ ಎಲ್ಲವನ್ನು ಜಾತಿವಾರಾಗಿ ವಿಂಗಡಿಸುವುದು ರೂಢಿಗೆ ಬಂತು. ಜಾತಿಯನ್ನು ಒಂದು ಪ್ರತ್ಯೇಕ ಪದಾರ್ಥ ಎಂದು ತಾರ್ಕಿಕರು ಕಲ್ಪಿಸಿದರು. ಗೋವಿಗಿಂತ ಗೋತ್ವ ಎಂಬುದು ಬೇರೆ. ಈ ಗೋತ್ವ ಎಂಬುದು ಎಲ್ಲ ಗೋವುಗಳಲ್ಲೂ ಇರುವ ಒಂದು ಸಾಮಾನ್ಯ ಧರ್ಮ (ಲಕ್ಷ್ಯತಾವಚ್ಛೇದಕ) ಎಂಬುದು ಅವರ ಅಭಿಪ್ರಾಯ. ಪ್ರತಿಯೊಂದು ಗೋವಿನ ಗೋತ್ವವೂ ಬೇರೆಯಾಗಿರುವುದರಿಂದ ಸಾಮಾನ್ಯವಾದ ಗೋತ್ವವೇ ಇಲ್ಲವೆಂದಾಗುವುದು. ಆದ್ದರಿಂದ ಜಾತಿಯನ್ನು ಪ್ರತ್ಯೇಕ ಪದಾರ್ಥವೆಂದು ಕಲ್ಪಿಸುವ ಅಗತ್ಯವಿಲ್ಲ ಎಂಬುದು ತತ್ವಶಾಸ್ತ್ರಜ್ಞರ (ವೇದಾಂತಿಗಳ) ಅಭಿಪ್ರಾಯ. ತತ್ವವನ್ನು ಬದಿಗಿಟ್ಟು ಒಂದು ಅನುಕೂಲಕ್ಕಾಗಿ ಜಾತಿ ಎಂಬುದನ್ನು ಒಪ್ಪಿಕೊಳ್ಳಬೇಕಾಯಿತು. ಈ ನಿಯಮದಿಂದ ಕಾಗೆಗಳಲ್ಲಿ, ಗುಬ್ಬಿಗಳಲ್ಲಿ ಒಂದೊಂದರ ಭೇದವನ್ನು ಕಾಣುವುದು ಕಷ್ಟವಾದೀತು. ಏಕೆಂದರೆ ಅವುಗಳ ವೈಯಕ್ತಿಕತೆಯ ಬಗೆಗೆ ನಾವು ಗಮನ ಕೊಡಲಿಲ್ಲ. ಕಾಗೆಗಳೆಲ್ಲಾ ಒಂದೇ ತರ ಎಂದು ಸ್ಥೂಲ ನೋಟಕ್ಕೆ ಕಾಣುವ ಸಾಧ್ಯತೆಯಿದೆ. ಆದರೂ ವ್ಯಕ್ತಿಶಃ ಅವುಗಳಲ್ಲಿ ಭೇದವಿದೆಯೆಂದು ಯಾರಾದರೂ ಒಪ್ಪಲೇ ಬೇಕು.

ಮನುಷ್ಯರ ವಿಚಾರ – ತಂದೆಯಂತೆ ಮಗ ಕಾಣಬಹುದು. ಹಾಗೆ ಅಣ್ಣತಮ್ಮಂದಿರಲ್ಲಿ ಅಕ್ಕ ತಂಗಿಯರಲ್ಲಿ ಹೋಲಿಕೆಯಿರಬಹುದು. ಆದರೂ ಒಬ್ಬನನ್ನು ಮತ್ತೊಬ್ಬನೆಂದು ಭಾವಿಸದಷ್ಟು ಪ್ರತ್ಯೇಕತೆಯಿದೆ. ಇದು ರೂಪ, ಗುಣಗಳಲ್ಲಿ ಮಾತ್ರವಲ್ಲದೆ ಪ್ರತಿ ಅಂಗಾಂಗಗಳಲ್ಲೂ ಇದೆ. ಈ ಕಾರಣದಿಂದಾಗಿ ಒಬ್ಬನ ಅಭಿಜ್ಞಾನಕ್ಕಾಗಿ ಅಥವಾ ಋಜುವಾತಿಗಾಗಿ ಹೆಬ್ಬೆರಳ ಒತ್ತನ್ನು ಬಳಸಲಾಯಿತು. ಹಾಗೇ ಎಷ್ಟೇ ಅನುಕರಣೆಯಿದ್ದರೂ ಒಬ್ಬನ ಹಸ್ತಾಕ್ಷರದಂತೆ ಮತ್ತೊಬ್ಬನದಿರಲು ಸಾಧ್ಯವಿಲ್ಲ. ಕೈ ಬರಹವನ್ನು ಕೃತ್ರಿಮವಾಗಿ ಅನುಕರಿಸಿದುದರಲ್ಲೂ ಅತಿ ಸೂಕ್ಷ್ಮವಾದ ಪ್ರತ್ಯೇಕತೆಯನ್ನು ಕಂಡು ಹಿಡಿಯುವ ವಿಧಾನವೂ ಇದೆ.

ಒಬ್ಬನ ದನಿಯಂತೆ ಮತ್ತೊಬ್ಬನದಿಲ್ಲ. ಸಾಮ್ಯವಿದ್ದಲ್ಲೂ ಭೇದವಿದೆ. ಪ್ರತಿಯೊಬ್ಬನ ಕೊರಳಿನಂತೆ ಬೆರಳಿನ ಕೆಲಸವೂ ಬೇರೆಯಾಗಿರುತ್ತದೆ. ಒಬ್ಬೊಬ್ಬನ ಕರಕೌಶಲ, ರಚನೆ ಮುಂತಾದ್ದರಲ್ಲೂ ಅವನವನ ಮುದ್ರೆ, ಛಾಪು, ಎದ್ದು ತೋರುವಂತಿರುತ್ತದೆ. ಒಬ್ಬ ಗುರುವಿನ ಬಳಿ ಇಬ್ಬರು ಪಿಟೀಲು ಕಲಿಯುತ್ತಾರೆಂದು ಭಾವಿಸುವ. ಇಬ್ಬರಿಗೂ ಒಂದೇ ರೀತಿಯ ಬೆರಳ ಎಸಕೆಯನ್ನು ಗುರು ಕಲಿಸಬಹುದಲ್ಲವೆ! ಆದರೂ ಆ ಮೂವರೂ ಪ್ರತ್ಯೇಕವಾಗಿ ಒಂದು ಕೋಣೆಯೊಳಗೆ ಪಿಟೀಲು ನುಡಿಸಿದಾಗ ಹೊರಗಿರುವ ಒಬ್ಬ ತಜ್ಞ (ಅಂದರೆ ಅವರನ್ನು ಬಲ್ಲವನು) ಆ ಮೂವರ ಎಸಕೆಯಲ್ಲಿರುವ ಭೇದವನ್ನು ಹೇಳಿಯಾನು. ಅಂದರೆ ಇದು ಯಾರ ನುಡಿಸುವಿಕೆಯೆಂದು ತಿಳಿಯಬಲ್ಲ ಎಲ್ಲರೂ ಒಂದೇ ರಾಗ ಒಂದೇ ನುಡಿತಗಳನ್ನು ನುಡಿಸಿದರೂ ಅವರವರ ಪ್ರತ್ಯೇಕತೆಯನ್ನು ಗುರುತಿಸಲು ಸಾಧ್ಯ. ಒಂದು ಮತ್ತೊಂದಾಗಲಾರದು.

ಇದನ್ನು ಒಬ್ಬನ ಬರವಣಿಗೆಯ ಶೈಲಿಗೂ ಅನ್ವಯಿಸಬಹುದು. ಒಬ್ಬನ ಶೈಲಿಯು ಅವನ ವ್ಯಕ್ತಿತ್ವದ ಪಡಿನೆಳಲು. ಒಬ್ಬ ಕವಿಯ ನಾಲ್ಕಾರು ಕಾವ್ಯಗಳೂ ಮತ್ತೊಬ್ಬನ ನಾಲ್ಕಾರು ಕಾವ್ಯಗಳೂ ನೋಡಿದಾಗ ಇದು ತಿಳಿಯುತ್ತದೆ. ಮಾತಿನಿಂದ ದೇಶವನ್ನು ಗುರುತಿಸಬಹುದು. (ದೇಶಮಾಖ್ಯಾತಿಭಾಷಿತಂ) ಎಂಬ ಹೇಳಿಕೆ ಇದೆ. ಹಾಗೆ 'ಕುಲವ ನಾಲಗೆಯುರುಹಿತು' ಎಂಬುದು ಮತ್ತೊಂದು ಗಾದೆ. ಇವೆರಡೂ ಭಾಗಶಃ ಸತ್ಯವಿರಬಹುದು. ಮಾತಿನಿಂದ ಒಬ್ಬನ ಸಂಸ್ಕೃತಿಯನ್ನು ಗುರುತಿಸಬಹುದು. (ವಚನಂ ಶ್ರುತಮಾಖ್ಯಾತಿ) ಎಂಬ ಹೇಳಿಕೆ ಬಹು

ಮಟ್ಟಿಗೆ ಸತ್ಯ. ಇವೆಲ್ಲದಕ್ಕಿಂತಲೂ Style is the man (ಮಾತಿನಲ್ಲಿ ಅವನ ವ್ಯಕ್ತಿತ್ವವೇ ಮೈತಳೆದಿರುತ್ತದೆ) ಎಂಬುದೇ ಸರಿಯಾದ್ದು. ಅಂದರೆ ವ್ಯಕ್ತಿತ್ವ ಸ್ಫುಟವಾಗಿ ಕಾಣುವಷ್ಟು ಸಂಸ್ಕಾರ ಅದರಲ್ಲಿ ಮೂಡಿರಬೇಕು. ಹತ್ತಾರು ಶಿಶುಗಳಲ್ಲಿರುವ ವ್ಯತ್ಯಾಸವನ್ನು ಗುರುತಿಸುವುದಕ್ಕಿಂತ ವಯಸ್ಕರಲ್ಲಿರುವ ವ್ಯತ್ಯಾಸವನ್ನು ಗುರುತಿಸುವುದು ಸುಲಭ. ಶೈಲಿಯೆಂಬುದು ಒಬ್ಬನ ವ್ಯಕ್ತಿತ್ವದ ಮುದ್ರೆಯನ್ನು ಪಡೆದಿರುವಷ್ಟು ಪರಿಪಾಕ ಹೊಂದಿರಬೇಕು. ಆಗ ಮಾತ್ರ ಈ ಹೇಳಿಕೆ ಸಂಗತ. (ಬರೀ ಒಂದೆರಡು ವಾಕ್ಯಗಳಿಂದಲ್ಲ) ಇದನ್ನು ತಿಳಿಯಲು ಮಾತಿನ ವೈಖರಿಯ ಅರಿವಾಗಬೇಕು.

ಕು. ಶಿ. ಯವರು ಅರ್ಥಶಾಸ್ತ್ರದ ಸಮರ್ಥ ವಿದ್ವಾಂಸರು. ಕನ್ನಡ ಸಾಹಿತ್ಯದಲ್ಲಿ ಅವರಿಗೆ ಮೊದಲಿಂದಲೂ ವಿಶೇಷ ಆಸಕ್ತಿ. ಕನ್ನಡದಲ್ಲಿ ಉನ್ನತ ಪರೀಕ್ಷೆಗಳನ್ನು ಪಾಸು ಮಾಡಿ, ಬರಹದಲ್ಲೂ ಕೃಷಿ ಮಾಡಿದವರು. ಸಣ್ಣಕತೆ, ಪ್ರಬಂಧ, ಅನುವಾದ (ಕಾದಂಬರಿ), ಅರ್ಥಶಾಸ್ತ್ರ, ಪ್ರವಾಸ ಸಾಹಿತ್ಯ, ವಿಮರ್ಶೆ, ಬದುಕು ಬರೆಹ, ಲೋಕಾಭಿರಾಮ ಮುಂತಾದ ಹಲವು ಪ್ರಕಾರಗಳಲ್ಲಿ ಅವರ ರಚನೆ ಸಾಗಿದೆ. ಸಂಪಾದಿತ ಗ್ರಂಥಗಳೂ, ಮುನ್ನುಡಿಗಳೂ ವಿಪುಲವಾಗಿವೆ, ಉದಯವಾಣಿಯಲ್ಲಿ ಅಂಕಣಕಾರರಾಗಿಯೂ ತಮ್ಮ ಹೆಸರನ್ನು ದಾಖಲಿಸಿಕೊಂಡವರು. ಎಲ್ಲದರಲ್ಲೂ ಸಾರಗ್ರಾಹಿಯಾದ ಅವರ ಮೊನಚು ಶೈಲಿಯನ್ನು ಯಾರೂ ಗುರುತಿಸಬಹುದು. 'ಕುಶಿಯವರ ಆಂಟೆನ (ಗ್ರಾಹಕ ತಂತು) ಅತಿ ಸಾಮರ್ಥ್ಯಯುತವಾದದ್ದು. ಸೂಕ್ಷ್ಮವಾದದ್ದು, ಸದಾ ಕ್ರಿಯಾಪಟುವಾದುದು. ಆಯಾ ಅವಧಿಯಲ್ಲಿ ನಡೆದ ಯಾವುದೇ ಘಟನೆಯನ್ನು ಇದು ಗ್ರಹಿಸಿ ಇವರ ಮನಃಪಟಲದ ಮೇಲೆ ಬಿಂಬಿಸುತ್ತದೆ' ಎಂಬ ಜಿ. ಟಿ. ನಾರಾಯಣ ರಾಯರ ಮಾತು ಸತ್ಯ. ಮನಃಪಟಲದ ಮೇಲೆ ಮೂಡಿದ ಭಾವಚಿತ್ರವನ್ನು ಶಬ್ದ ಚಿತ್ರಕ್ಕೆ ಪರಿವರ್ತಿಸುವಾಗಲೂ ಅವರ ಸಾಮರ್ಥ್ಯ ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡುತ್ತದೆ. ಹರಟೆಯಂತೆ ತೀರ ಲಘುವೂ ಅಲ್ಲದ ಇದು ಭಾವ ಸಾಹಿತ್ಯದಂತೆ ಗಂಭೀರವೂ ಅಲ್ಲದೆ ಇವರ ಶೈಲಿ ಕೆಲವೊಮ್ಮೆ ಒಗಟಿನಂತೆ ಕಾಣಿಸಿ ಕೊಳ್ಳುತ್ತದೆ. ತಿಳಿಹಾಸ್ಯ, ಕಟಕಿ, ವ್ಯಂಗ್ಯ, ಕುತೂಹಲ, ವಿಡಂಬನೆ-ಎಲ್ಲವೂ ತುಂಬಿ ಬಂದು ಬಿಗಿಯನ್ನೂ ಗಟ್ಟಿತನವನ್ನೂ ಪಡೆದುಕೊಳ್ಳುತ್ತದೆ' ಯಾವುದೇ ಬರೆಹವಿರಲಿ ಒಂದೆರಡು ಪಾರಾ ಓದುವಾಗಲೇ ಇದು ಕುಶಿಯವರದೆಂದು ಗುರುತಿಸಬಹುದಾದಷ್ಟು ಪಾಕಸಿದ್ಧಿ, ಹದ, ಬನಿ ಅದರಲ್ಲಿರುತ್ತದೆ.

ಇವರೇನು ನಿಘಂಟುವಿನಲ್ಲೂ ಸಿಗದ, ಇತರರು ಬಳಸದ ಹೊಸ ಶಬ್ದಗಳನ್ನು ಬಳಸುತ್ತಾರೆಯೇ? ಎನ್ನಬೇಡಿ. ಎಲ್ಲರೂ ಬಳಸುವ ನುಡಿ. ನುಡಿಗಟ್ಟು. ಅವುಗಳ ಅರ್ಥಭಾವ ಎಲ್ಲ ಬಹುಮಟ್ಟಿಗೆ ಒಂದೇ ಆದರೂ ಆ ಪದಯೋಜನೆಯಲ್ಲಿ ಅವರವರ ವ್ಯಕ್ತಿತ್ವದ ಮುದ್ರೆ ಅಥವಾ ಛಾಪು ಇರುತ್ತದೆ, ಇದನ್ನು ನಮ್ಮ ಹಿರಿಯರೇ ಗುರುತಿಸಿದ್ದಾರೆ.

ತ ಏವ ಪದ ಸಂಘಾತಾಃ ತಾ ಏವಾರ್ಥವಿಭೂತಯಃ
ತಥಾऽ ಪಿ ನವ್ಯಂ ಭವತಿ ಕಾವ್ಯಂ ಗ್ರಥನ ಕೌಶಲಾತ್॥

– ರಸಾರ್ಣವಸುಧಾಕರ.

ಪದಗಳ ಯೋಜನೆಯಲ್ಲೇ ಅವರವರ ಸ್ವಂತಿಕೆ ಕಾಣುವಂತಹ ವೈಶಿಷ್ಟ್ಯವಿರುತ್ತದೆ. ಇದು ಆಡುನುಡಿಯಲ್ಲಿ ಅಷ್ಟಾಗಿ ಕಾಣಿಸದಿರಬಹುದು. ಬರವಣಿಗೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಸಾಹಿತ್ಯಕ್ಕೆ ಶಬ್ದ ಸಮುದಾಯವೇ ಮೂಲದ್ರವ್ಯ. ನಮ್ಮ ಪ್ರಾಚೀನರು ಶಬ್ದ ಸಮುದಾಯವನ್ನೇ ಕಾವ್ಯ ಶರೀರವೆಂದು ಹೇಳಿದರು. ಮುಂದಿನವರು ಶಬ್ದಾರ್ಥಗಳೆರಡೂ ಕಾವ್ಯ ಶರೀರ ಎಂದರು. ಆ ಮೇಲೆ ಬಂದವರು 'ರಸಾತ್ಮಕವಾದ ವಾಕ್ಯವನ್ನೇ ಕಾವ್ಯ (ವಾಕ್ಯಂ ರಸಾತ್ಮಕಂ ಕಾವ್ಯಂ) ಎಂದು ತಮ್ಮ ಮಾತಿನಲ್ಲಿ ಅದನ್ನೇ ಹೇಳಿದರು. ಇದನ್ನು ಸಹಿಸದವರು 'ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ' ಎಂದು ಹಿಂದಿನವರು ಹೇಳಿದುದನ್ನೇ ಹೊಸ ಪದಗಳಲ್ಲಿ ನುಡಿದರು. ಆದರೆ ಯಾರೂ ಅರ್ಥವನ್ನು ಮಾತ್ರ ಕಾವ್ಯವೆಂದು ಹೇಳಲಿಲ್ಲ. ನಿಜವಾಗಿ ನೋಡಿದರೆ ಶಬ್ದಾರ್ಥಗಳು ಅವಿನಾಭೂತವಾದವು. ಒಂದನ್ನು ಬಿಟ್ಟು ಮತ್ತೊಂದಿಲ್ಲ. ಅರ್ಥವರಿಯದೆ ಯಾರೂ – ಹುಚ್ಚರ ಹೊರತು – ಪದ ಪ್ರಯೋಗ ಮಾಡುವುದಿಲ್ಲ. (ಅರ್ಥಂಬುಧ್ವಾಶಬ್ದ ರಚನಾ) ಆದರೆ ಕೇಳುವವನ ಮಟ್ಟಿಗೆ ಶಬ್ದ ತಿಳಿಯದೆ ಅರ್ಥವಾಗಲಾರದು,ಶ್ರೋತೃವಿನ ದೃಷ್ಟಿಯಿಂದ ಶಬ್ದವೇ ಮುಖ್ಯವಾಗುತ್ತದೆ. ಶಬ್ದವನ್ನೇ ಮುಖ್ಯವೆನ್ನಲು ಇನ್ನೊಂದು ಕಾರಣವಿದೆ. ಪ್ರಾಚೀನ ಕಾವ್ಯಗಳು ಈಗ ನಮಗೆ ಸಿಗುವುದು ಶಬ್ದ ಶರೀರದಲ್ಲಿ. ಅದಕ್ಕೆ ನಮಗೆ ಬೇಕಾದ ರೀತಿಯಲ್ಲಿ ಅರ್ಥ ಮಾಡುತ್ತೇವೆ. ಟೀಕಾಕಾರರೂ ಬೇರೆ ಬೇರೆ ಅರ್ಥ ಮಾಡಿದ್ದೂ ಇದೆ. ಅದೇ ಅರ್ಥ ಬರೆದವರಿಗೂ ಇದ್ದಿತ್ತೆ. ಅಂಥ ನಾವು ಹೊಸ ಬೆಳಕಿನಲ್ಲಿ ಕಂಡು ಕೊಂಡ ಅರ್ಥಸ್ವಾರಸ್ಯ ಅವರಿಗೂ ಇದ್ದಿರಬಹುದೇ? ಅವರು ಕಲ್ಪಿಸಿಕೊಂಡ ಅರ್ಥ ಅಥವಾ ಭಾವಸ್ಫುರಣ ನಮಗೂ ಆಗಿದೆಯೇ? ನಮಗೆ ಆದ ಅರ್ಥ ಕವಿಗೂ ಸಮ್ಮತವೆ? ಇದೂ ಒಂದು ಸಂಶಯ. ಶಬ್ದಗಳು ಕಾಲಕಾಲಕ್ಕೆ ಹೊಸ ರಸಭಾವಗಳನ್ನು ಸ್ಫುರಿಸುವಂತೆ ಮಾಡಿದರೂ ನಾವು ಅದನ್ನು ಅಂಗೀಕರಿಸುತ್ತೇವೆ. ಹೊಸ ಆಯಾಮ

ವನ್ನು ಕೊಡುತ್ತೇವೆ. ಹೀಗಾಗಿ ಶಬ್ದವೇ ನಮಗೆ ಸ್ಥೂಲರೂಪದಲ್ಲಿ ಸಿಗುವ ದ್ರವ್ಯ (ಕೇಶಿರಾಜನ ಮತದಂತೆ). ಈ ಶಬ್ದಗಳ ವಿವಿಧ ರೀತಿಯ ಜೋಡಣೆಯಲ್ಲೇ ಒಬ್ಬ ವ್ಯಕ್ತಿಯ ಅಂತರಂಗ ಪ್ರಕಟವಾಗುತ್ತದೆ. ವ್ಯಕ್ತಿತ್ವವೇ ಬಿಚ್ಚಿಕೊಳ್ಳುತ್ತದೆ. ಸ್ವಂತಿಕೆಯ ಛಾಪಾಗಿ ನಿಲ್ಲುತ್ತದೆ. ಇದಕ್ಕೆ 'ರೀತಿರಾತ್ಮಾ ಕಾವ್ಯಸ್ಯ' ಎಂದಿರಬೇಕು.

ಕಾಶಿಯವರ ಶೈಲಿಯಲ್ಲಿ ಅವರ ವಿಶಿಷ್ಟತೆಯನ್ನು ನೋಡಬಹುದು. ಇಲ್ಲಿ ಉದಾಹರಣೆಗಾಗಿ ಲೋಕಾಭಿರಾಮದ (ಭಾಗ 3) ಕೆಲವು ಭಾಗಗಳನ್ನು ಆಯ್ದುಕೊಡಲಾಗಿದೆ.

'ಹೌದು ಈಗೆರಡು ಮೂರು ತಿಂಗಳಿಂದ ಈ ದೇಶದ ಇಲಿಗಳಿಗೆ (ಕೆ.ಆರ್) ಗಣೇಶನ ಹಾವಳಿ ವಿಪರೀತ (= ಅಪರಿಮಿತ) ವಾಗಿ ವ್ಯಾಪಿಸಿ ಬಿಟ್ಟಿದೆ. ಸಾಸಿವೆ ಕಾಳಿನಂತಿದ್ದ ಗಣೇಶ ಈಗ ಕಡಲೆ ಕಾಳು ಗಾತ್ರಕ್ಕೆ ಉಬ್ಬಿದ್ದಾನೆ. ಇದ ನೋಡಿ ಕಾಳ ಸಂತೆಯ ಜಾತ ಹೆಗ್ಗಣಗಳೂ; ವಿದೇಶೀ ಮಾಲುಗಳ ಕಳ್ಳ ಸಾಗಣೆಯಲ್ಲಿ ಬೀತ ಹೆಗ್ಗಣಗಳೂ ಗಾಬರಿಗೊಂಡಿವೆ. ಕೆಲವು ಆಸ್ಪತ್ರೆಗಳಲ್ಲೂ ಕೆಲವು ನ್ಯಾಯಾಲಯಗಳಲ್ಲೂ ಆಶ್ರಯ ಪಡೆಯುತ್ತಿವೆ. ಈ ಕದೀಮ ಹೆಗ್ಗಣಗಳಿಗೂ ಭವ್ಯ ಭಾರತದಲ್ಲಿ ಮೂಲಭೂತ ಸ್ವಾತಂತ್ರ್ಯವನ್ನು ನೀಡಿರುವುದರಿಂದ ಸ್ವಾತಂತ್ರ್ಯವನ್ನು ದಯಪಾಲಿಸುವ ಪ್ರಖ್ಯಾತ ವಕೀಲರ ವಾದಕ್ಕೆ ಸೋತು ಇವು ಹೆಗ್ಗಣಗಳೇ ಅಲ್ಲವೆಂದು ಅಖೈರು ತೀರ್ಪು ಸಿಗಲೂಬಹುದು'

— ಒಂದು ಕಲ್ಪನಾವಿಲಾಸ P 155.

ಇಲ್ಲಿಯ ವಿಡಂಬನೆ ತುಂಬಾ ಸಹಜವಾಗಿದೆ. ನಗುವನ್ನು ತರಿಸುತ್ತದೆ. (ಶೈಲಿಯ ಓಘದಲ್ಲಿ ಕೆಲವೊಮ್ಮೆ ಅರ್ಥ ಸಂದಿಗ್ಧತೆಯೂ ತಲೆದೋರಬಹುದು. ಇಲ್ಲಿ ಜಾತ ಹೆಗ್ಗಣಗಳು ಅಂದರೆ ಉಬ್ಬಿದವು, ಬೀತ ಹೆಗ್ಗಣಗಳು ಎಂದರೆ ನಾಶ ಹೊಂದಿದವೋ ಅಥವಾ ಕೊಬ್ಬಿದವೋ ಸಂಶಯ)

ಒಂದು ಮಿಲಿಯ ಗಿಡಗಳನ್ನು ನೆಟ್ಟರೋ ಈ ದೇಶದಲ್ಲಿ ಅದಕ್ಕಿಂತ ಹೆಚ್ಚು ದನಗಳೂ. ಆಡುಗಳೂ, ಫೇಟ್ ಅಂಥದೇ ಬುದ್ಧಿಯ ಜನಗಳೂ ಇರುವಂತೆ ಕಾಣುತ್ತದೆ. ಒಂದು ಗಿಡವನ್ನು ನೆಡುವುದೂ ಅದನ್ನು ಸಾಯಿಸುವುದೂ ಒಂದೇ ಎಂಬಂಥ ಸ್ಥಿತಪ್ರಜ್ಞತ್ವ ನಿಮ್ಮಲ್ಲಿ ಬರುವಂತೆ ಈ ಮಹೋತ್ಸವಗಳು ನಡೆಯುತ್ತವೆ.

— ಭಯಪ್ರದ ಉದ್ಘಾಟನೆ P 361.

ಈ ಅಪ್ರಿಯ ಸತ್ಯವನ್ನು ಅಷ್ಟೇ ನವಿರಾಗಿ ನುಡಿಯುತ್ತಾರೆ.

'ಸಾಯಿ ಶಕ್ತಿ ಪರೀಕ್ಷಣ ಪ್ರಸಂಗ ಬರಿಯ ಬಾಯಿಶಕ್ತಿ ಮತ್ತು ಶಾಯಿ ಶಕ್ತಿಯ ಪ್ರದರ್ಶನವಾಗಿ ಪರಿಣಮಿಸುವುದೆಂದು ನಾನಂತೂ ಎಣಿಸಿರಲಿಲ್ಲ.

ವಿಜ್ಞಾನ ಮತ್ತು ನಂಬಿಕೆ P 351,

'ಗುರುಗಳನ್ನು ನಂಬುವುದು ಸುದ್ದಿಯಲ್ಲ. ಅವರನ್ನು ಕಳಪೆಯೆಂದು ನಿರಾಕರಿಸುವುದು ಸುದ್ದಿಯಾಗಿ ಬಿಡುತ್ತದೆ. ಗೃಹಸ್ಥನಾಗಿ ಮರ್ಯಾದೆಯಿಂದ ಬಾಳುವುದು ಸುದ್ದಿಯಲ್ಲ, ಮರ್ಯಾದೆ ಕೆಟ್ಟರೆ ಅದು ಸುದ್ದಿಯಾಗುತ್ತದೆ. ಪ್ರಕೃತಿ ಸುದ್ದಿಯಾಗದು, ವಿಕೃತಿ ದಪ್ಪಕ್ಷರದ ಸುದ್ದಿಯಾಗಿ ಹಬ್ಬಿ ಬಿಡುತ್ತದೆ. ಅಂದರೆ ವಿಕೃತಿಗಳು ಇನ್ನೂ ಪ್ರಕೃತಿಯಷ್ಟು ದೊಡ್ಡ ಸಂಖ್ಯೆಗೆ ಏರದೇ ಇರೋದರಿಂದ ಅವುಗಳಲ್ಲಿ ಸ್ವಾರಸ್ಯ. ಇದನ್ನೇ ನಾಯಿ ಕಚ್ಚಿದರೆ ಅದು ಸುದ್ದಿಯಲ್ಲ. ಮನುಷ್ಯ ನಾಯಿಯನ್ನು ಕಚ್ಚಿದನೋ ಅದು ಸುದ್ದಿಯ ಹತ್ತಕ್ಕೆ ಏರುತ್ತದೆ ಎನ್ನುತ್ತಾರೆ'

ನಿನಗೆ ನೀನೇ ಗೆಳೆಯ P 146.

ಇಂತಹ ಕಡೆ ಒಂದು ನಗ್ನ ಸತ್ಯವನ್ನು ಭಟ್ಟರು ವಕ್ರೋಕ್ತಿಯ ಬಿಚ್ಚು ಮಾತಿನಲ್ಲಿ ತೆರೆದಿಡುತ್ತಾರೆ. ಅವು ನಮಗೆ ಚುಚ್ಚಿದರೂ ನೋಯುವುದಿಲ್ಲ, ನಾಟುವುದೂ ಇಲ್ಲ.

'ಪೋಲೀಸರಿದ್ದಾರೆ ಎಂದು ಊರಿಗೆ ತಿಳಿಯಬೇಕಾದರೆ ಇಂಥ ಕಳ್ಳತನಗಳು ನಡೆಯಬೇಕು. ಸಾಮಾನ್ಯವಾಗಿ ನಾವು ಪೋಲೀಸರ ಬಗ್ಗೆ ಚಿಂತೆಯನ್ನೇ ಮಾಡುವುದಿಲ್ಲ.

– ಎಲ್ಲಿರುವೆ ಕಳ್ಳ ಬಾರೋ 222

ಶೇಕಡ 30 ಅಕ್ಷರತೆಯ ಮಟ್ಟದಲ್ಲೇ ವಿದ್ಯೆಗೆ ಸರಿಯಾದ ಉದ್ಯೋಗವನ್ನು ಉತ್ಪನ್ನ ಮಾಡಲಾರದ ಅಥವಾ ಇರುವ ಉದ್ಯೋಗಕ್ಕೆ ಸಮನಾದ ಶಿಕ್ಷಣ ನೀಡಲೊಲ್ಲದ ಸಮಾಜ ನಾವಾಗಿದ್ದೇವೆ.

ಮುಂದೇನು?

ಇಂತಹ ಕಡೆಗಳಲ್ಲಿ ವಿಡಂಬನೆ. ಕಟಕಿ, ವ್ಯಾಜನಿಂದೆ, ತಿಳಿಹಾಸ್ಯ ಮುಂತಾದುವುಗಳಿಂದ ಓದುಗರನ್ನು ಚಿವುಟಿ, ಕಚಗುಳಿಯಾಡುವ ನವುರಾದ ಶೈಲಿಯಿದೆ. ಜೊತೆಗೆ ವಕ್ರೋಕ್ತಿಯ ಸೂಜಿಮದ್ದೂ ಇದೆ. ಚರ್ಮ ದಪ್ಪವಿರುವವರಿಗೆ ನೋವಾಗದಿದ್ದರೆ ಯಾರೇನು ಮಾಡಬೇಕು?

ದಿ। ಯು. ಪುಂಡಲೀಕ ಶೆಣೈಯವರ ಬಗೆಗೆ ಅವರು –

'ಅಜನ್ಮ ಬ್ರಹ್ಮಚಾರಿಯಾಗಿದ್ದರೂ ಹಲವು ಮಕ್ಕಳ ತಂದೆ ಎನಿಸಿದ ಪುಂಡಲೀಕ ಶೆಣೈಯವರು ಮೊನ್ನೆ

ನಿಧನರಾದರು. ಮಾಗಿದ 80ನೇ ವಯಸ್ಸಿನಲ್ಲಿ ವಯಸ್ಸು 80 ಆದರೂ ವೃದ್ಧಾಪ್ಯ ಅವರನ್ನು ಸೋಕಲಿಲ್ಲ. ಸ್ವ ಕರ್ತವ್ಯವನ್ನು ತಾನೇ ನೋಡಿಕೊಳ್ಳುತ್ತಾ, ಯಾರ ಸೇವೆಯನ್ನೂ ಬಯಸದೆ, ಹಾಸುಗೆ ಹಿಡಿಯದೆ, ನೋಯದೆ, ನರಳದೆ, ಒಬ್ಬ ಪುಣ್ಯಜೀವಿ ಎಂಥ ಮರಣವನ್ನು ಬಯಸಬೇಕೋ ಅಂಥದೇ ಮರಣವನ್ನು ಅಪ್ಪಿದರು.

—ಹಲವು ಮಕ್ಕಳ ತಂದೆ P 366

ವ್ಯಕ್ತಿ ಗೌರವ, ಪ್ರಾಮಾಣಿಕತೆ ಇಂತಹ ಕಡೆ ಎದ್ದು ಕಾಣುವ ಅಂಶ. ಇದೇ ಕು.ಶಿಯವರ ಪ್ರಕೃತಿ. ಕುಶಿಯವರ ಚಿಂತನಪರವಾದ ವಿಚಾರಧಾರೆಯನ್ನು 'ಸಂಗೀತ ಕಲಿಸುವ ಪಾಠ' ಎಂಬ ಪ್ರಬಂಧದಲ್ಲಿ ಕಾಣಬಹುದು. ಸಂಗೀತದಲ್ಲಿ ಸಾಕಷ್ಟು ನುರಿತ ವಿದ್ವಾಂಸನೂ ಇಂತಹ ಒಂದು ನಿಬಂಧವನ್ನು ಬರೆದಾನೆಂಬ ಧೈರ್ಯ ನನಗಿಲ್ಲ.

'ತನ್ನ ತಾನರಿಯುವುದಕ್ಕೂ ಸಂಗೀತ ಬೇಕು. ತನ್ನ ತಾನರಿಯುವುದು – ಪರೇಂಗಿತಜ್ಞತೆ – ಇವೆರಡು ಸಮಾಜ ಜೀವನದ ರಹಸ್ಯ ತಾನೆ' ಎನ್ನುವ ಕುಶಿಯವರಿಗ ಸಂಗೀತ ಕಲೆಯ ಮರ್ಮ ತಿಳಿಯದೆನ್ನುವ ಎಂಟೆರ್ದೆಯಾರಿಗುಂಟು? ಇವರ ಬರವಣಿಗೆಯಲ್ಲಿ ಗಾದೆಯಂತಿರುವ ಮಾತುಗಳು ವಿಪುಲವಾಗಿವೆ, ಅವು. ಗಳಲ್ಲೂ ವಿಡಂಬನೆ ಎದ್ದು ತೋರುವ ಅಂಶ,

'ನಾಲಗೆ ಬಲವುಳ್ಳವನೇ ಇಲ್ಲಿ ರಾಜಕೀಯ ಪುಡಾರಿ,

'ಶಿಕ್ಷಣಾಲಯಗಳು ಶಿಕ್ಷಣಾಲಾಯಗಳಾಗಿ ಪರಿವರ್ತನೆಗೊಂಡಿವೆ'

'ಗುದ್ದೇ ಮದ್ದು' (ಶಿರೋನಾಮೆ)

'ನಮ್ಮದು ಹೇಳಿ ಕೇಳಿ ಕರ್ಣಾಟಕ! ಹೆಸರ ಕೊನೆಯ ನಾಟಕವನ್ನು ಕೊನೆಯುವರೆಗೂ ಬಿಡುವವರು ನಾವಲ್ಲ ನಿಜವಾದ್ದು ನಾಟಕದಂತೆಯೂ, ನಾಟಕವೇ ನಿಜವಾದಂತೆಯೂ ಅನಿಸುವ ಒಂದು ಸಂದಿಗ್ಧ ಸ್ಥಿತಿಯಲ್ಲಿ ನಾವಿದ್ದೇವೆ.

'ಜಯ ವಿಜಯರಂತೆ ಬೇಗನೆ ಸೇರುವುದು ಮುಖ್ಯ; ರಾಕ್ಷಸ ಜನ್ಮ ಪಡೆದರೂ ಅಡ್ಡಿಯಿಲ್ಲ. ಇದು ಆಧುನಿಕ ನಾಗರಿಕನ ಧೋರಣೆ'.

'ಏಳು ಲೋಕ ಗೆದ್ದರೂ ಒಂದಾಳು ಲೋಕ – ತನ್ನದೇ ಒಳಲೋಕವನ್ನು ಗೆಲ್ಲಲಾರದೆ ಸೋತಿದ್ದಾನೆ'. ಮುಂತಾದುವನ್ನು ಇಲ್ಲಿ ಉದಾಹರಿಸಬಹುದು.

ಕುಶಿಯವರ ನೆನಪಿನ ಉಗ್ರಾಣ ಬಹಳ ವಿಶಾಲವಾದದ್ದು ಅಂದರೆ ಯಾರೂ ಅಚ್ಚರಿಪಡಬೇಕಿಲ್ಲ. ಅದರ ಯಾವ ಮೂಲೆಯಲ್ಲಿ ಏನಿದೆಯೆಂಬುದನ್ನು ಯಾವ ಹೊತ್ತಿಗೂ ಅವರು ಥಕ್ಕನೆ ತೆಗೆದು ತೋರಿಸಬಲ್ಲರೆಂಬುದೇ ಆಶ್ಚರ್ಯ. ಪಂಪನಿಂದ ಹಂಪನಾವರೇಗೆ. ಕಂಬನಿಂದ ಕಂಬಾರರವರೆಗೆ ಎಲ್ಲ ಕವಿಗಳ. ಲೇಖಕರ ಬರೆಹಗಳೂ ಅವರ ನೆನಪಿನಲ್ಲಿವೆ. ಅಲ್ಲದೆ ಅರ್ಥಶಾಸ್ತ್ರ. ಚರಿತ್ರೆ. ಭೂಗೋಳ, ಸಾಹಿತ್ಯ, ಯಕ್ಷಗಾನ, ತುಳುಪಾಡ್ದನ, ನಿಘಂಟು ಹೀಗೆ ಹತ್ತು ಹಲವು ವಿಷಯಗಳ ಸುತ್ತ ವಿವರಗಳೂ ಅವರ ನೆನಪಿನ ಗೋದಾಮಿನಲ್ಲಿದ್ದು ಕರೆದಾಗ ಬಂದು ಕೈ ಮುಗಿದು ನಿಂತು 'ಬೆಸನೇನು ಜೀಯಾ' ಎನ್ನುತ್ತವೆ. ಆದ್ದರಿಂದ ಇವರ ಬರವಣಿಗೆಯನ್ನು ಓದಲು ಸ್ವಲ್ಪ ಪೂರ್ವಸಿದ್ಧತೆಯೂ ಬೇಕು. ಉದ್ಧರಣ ವಾಕ್ಯಗಳು ಎಲ್ಲಿಯವು? ಅವುಗಳ ಸಾಂದರ್ಭಿಕ ಅರ್ಥ ಔಚಿತ್ಯ ಏನು ಎಂದು ತಿಳಿಯದೆ ಹೋದರೆ ಭಾವಸ್ಪಂದನವಾಗುವುದು ಕಷ್ಟವಾದೀತು.

ಹಳೆಯ ಪದಗಳನ್ನೇ ಸಾಂದರ್ಭಿಕವಾಗಿ. ಸ್ವಲ್ಪ ತಿರುಚಿ ಓರೆ ಮಾಡಿ ಅದರ ಇನ್ನೊಂದು ಮುಖದಿಂದ ಉದ್ದಿಷ್ಟಾರ್ಥವನ್ನೂ, ಭಾವಚ್ಛಾಯೆಯನ್ನೂ ಬಿಂಬಿಸುವುದು ಇವರದೊಂದು ಬಹುರಿ. ಅದು ಅಪಪ್ರಯೋಗವಾದರೂ ಸರಿಯೆ. ಭಾಷಾಶಾಸ್ತ್ರದ ರಿಯಾಯಿತಿ ಅದಕ್ಕೆ ಇದ್ದೇ ಇದೆ. ಆ ಸಂದರ್ಭದಲ್ಲಿ ಅದು ಉಚಿತವಾಗಿಯೇ ಇರುತ್ತದೆ. ಉದಾ –

ಇತಿ-ಹಾಸಾಸ್ಪದ; ಧೃತ ರಾಷ್ಟ್ರೀಕರಣ. ವಿದೇಹ ಪ್ರಯಾಣ. ಶಿಕ್ಷಣಾಲಾಯ, ಅಭಿಮಾನ-ದಂಡ, ಬೋನಸ್ (ಸು) ಬೇಡುವ ಬಕಾಸುರ, ದೇವರು ರಜೆ ಮಾಡಿದನು, ದೌರ್ಗಂಧಿಕಾಪಹರಣ, ಅ-ತುರಿಕೆ. ಇಂಗ್ಲಿಷ್-ಬೀಜಾಕ್ಷರ, ಸದ್ಯೋಜಾತರು, ಸುಡದ ಕಿಡಿಗಳು. ಗುಪ್ತ ಕಾರ್ಯದರ್ಶಿಗಳು, ದಂಡ-ಯಾತ್ರೆ, ಅ-ಗಣಿತ ಜೀವಿ, ಬೆಂತರರು (ಅಂತರ ಪಿಶಾಚಿಗಳು) ಪುರೋಹಿತ-ತಿರೋಹಿತ, ದೋಷಾಭಿಮಾನಿ, ಬೃಹತ್ ದೊಡ್ಡಿ. ಕುಡಿಯುವ ಕೋಕ್, ತಿನ್ನುವ ಕೇಕ್, ಹಾಕುವ ಕೇಕೆ, ಉಂಬೋಕಿಲ್ಲದ ಹಂಬಲಿಗಳು ಇತ್ಯಾದಿ ಹಲವಾರು ಪದಗಳನ್ನು ನೋಡಬಹುದು.

"ಕನ್ನಡ ಗದ್ಯವನ್ನು ಇವರಷ್ಟು ಸುಂದರವಾಗಿ, ಕ್ರಿಯಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಂಡಿರುವವರು ಬಲು ವಿರಳ" ಎನ್ನುತ್ತಾರೆ. ಜಿಟಿ. ನಾರಾಯಣ ರಾಯರು. ಇದಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ನೋಡಬಹುದು. 'ಕನ್ನಡ ಕಟ್ಟಿದವರು', 'ಗೋವಿಂದ ಪೈ' ಮುಂತಾದ ವ್ಯಕ್ತಿ ಚಿತ್ರಗಳಲ್ಲಿ ಕುಶಿಯವರ ಮಾತು ಸರಲ ಸುಂದರವಾಗಿ ಸಂವಹನಗೊಳ್ಳುತ್ತದೆ. ಡಾ। ಕಾರಂತರ ಬಗೆಗೆ ಕುಶಿಯವರು ಕೊಡುವ ಶಬ್ದಚಿತ್ರ –

'ಭಾರತೀಯ ಪರಂಪರೆಯಲ್ಲಿ ವಿರಕ್ತಿ ಮಾರ್ಗದ ಶೋಧ ಬೋಧ ನಡೆಸಿದಷ್ಟು ಅನುರಕ್ತಿ ಮಾರ್ಗವನ್ನು

ಯಾರೂ ಅನ್ವೇಷಣೆ ಮಾಡಿಲ್ಲ. ಯುರೋಪ್ಯ ವಿದ್ವಾಂಸರ ಮನಃಶಾಸ್ತ್ರದಲ್ಲಿ ಮನುಷ್ಯನ ವ್ಯಕ್ತಿತ್ವದ ಒಂದು ಮಹತ್ವಪೂರ್ಣ ಸತ್ಯ ಗೋಚರಕ್ಕೆ ಬಂದಿದೆ. ಆದ್ದರಿಂದ ಇದನ್ನು ಬಿಡತಕ್ಕದ್ದಲ್ಲ. ವೈಜ್ಞಾನಿಕವಾಗಿ ಈ ಎರಡು ಮಾರ್ಗಗಳ ಸಮನ್ವಯ ಸಾಧ್ಯವೆ? ಅಸಾಧ್ಯವೆ? ಭೌತಿಕವೆಂದೆನಿಸಬಹುದಾದ ಈ ತಥ್ಯ ಎಲ್ಲರ ಮನಸ್ಸನ್ನು ವ್ಯಕ್ತಿತ್ವವನ್ನೂ ರೂಪಿಸುವುದರಲ್ಲಿ ಪ್ರಾಮುಖ್ಯವಾದ ಪ್ರೇರಣೆ ಆಗಿಲ್ಲವೆ? ಹಾಗಾದರೆ ಅದರ ತಳವನ್ನು ಶೋಧಿಸಬೇಕು. ಇದು ಕಾರಂತರ ಕಲೆಯ ಹಠಯೋಗ. ಬಸರೂರಿನ ಸೂಳೆಯೊಬ್ಬಳ ಆತ್ಮಕತೆಯನ್ನು ಅಳವಡಿಸಿಕೊಂಡ ಕಾರಂತರ ಮುಖ್ಯ ಕಾಳಜಿ ಇಲ್ಲಿ ಇಡಿ ಮನುಷ್ಯ ಜಾತಿಯ ಮೂಲಭೂತ ದೈಹಿಕ ಪ್ರಶ್ನೆಯಾದರೂ, ಕರುಣಾಳು ಕಾರಂತರು ಇಲ್ಲಿಯೂ ಮರೆಯಾಗಿಲ್ಲ.
– ಕನ್ನಡ ಕಟ್ಟಿದವರು

ಕವಿ ಬೇಂದ್ರೆಯವರನ್ನು ಕುರಿತು –

'ಸಾಧನ ಕೇರಿಯ ಈ ಸಾಧಕನ ಮನೆಯ ಗೋಡೆ ತುಂಬ ಅರವಿಂದ, ಶ್ರೀಮಾತೆ, ನಿತ್ಯಾನಂದ, ಅಕ್ಕಲಕೋಟೆ ಸ್ವಾಮಿಗಳು – ಇಂಥ ಸಾಧು ಸಂತರ ಚಿತ್ರಗಳ ಸಾಲೇಸಾಲು. ಅವರ ಗ್ರಂಥಾಲಯ ಬಿದಿರುಬೊಂಬಿನ ತೆರೆ ಕಪಾಟವಾದರೂ ಹೇರಳ ಪುಸ್ತಕಗಳನ್ನೊಳಗೊಂಡಿದೆ. ಕವಿ ಹಗಲೆಲ್ಲ ಈ ಗ್ರಂಥಗಳ ಸುತ್ತಮುತ್ತ ಭೃಂಗದ ಬೆನ್ನೇರಿ ಬಂದ ತಮ್ಮ ಕಲ್ಪನೆಯನ್ನು ಬೆನ್ನು ಹಿಡಿದು ಸಾಗುತ್ತಾರೆ. ಪಡುಗಡಲ ತಡಿಗೆ ನಿಂದ ಶ್ರೀ ಕೃಷ್ಣನ ದರ್ಶನಕ್ಕೆ ಕವಿ ನಿತ್ಯಕಾತರರು. ಅದು ಉಡುಪಿಯ ಆಕರ್ಷಣೆ. ಕನಕದಾಸನ ಉತ್ಸವಕ್ಕೆ ಬಂದವರು ಒಂದು ಕವನ ನಮ್ಮ ಮನೆಯಲ್ಲೇ ಬರೆದರು. 'ಜೀವನವೇ ಕನಕನ ಕಿಂಡಿ' ಎಂಬ ಹೃತ್ಸೂತ್ರವುಳ್ಳ ಆ ಕವನವನ್ನು ಸ್ವತಃ ಓದಿದರು. ಈಗಲೂ ಹೋದಲ್ಲಿ ತಮ್ಮ ಕಾವ್ಯಗಳನ್ನು ಪರಿಷದಿಯಲ್ಲಿ ಓದುವುದೆಂದರೆ ಕವಿಗಳ ಇಷ್ಟ. ಕರ್ನಾಟಕದ ನವೋದಯ ಕಾಲದಿಂದ ಇಂದಿನವರೆಗೆ ಬೇಂದ್ರೆ ಎಷ್ಟು ಉಪನ್ಯಾಸಗಳನ್ನು ನಾಡಿನ ಒಳಗೆ ಹೊರಗೆ ಕೊಟ್ಟರೋ ತಿಳಿಯದು. ಈ ನೂರಾರು ಉಪನ್ಯಾಸಗಳ ಮನೋರಂಜಕತ್ವಕ್ಕಿಂತ ಮಿಗಿಲಾಗಿ ಅವುಗಳಲ್ಲಿ ಹುದುಗಿರುವ ವಿಚಾರ ಪದ್ಧತಿ ದುರ್ದೈವದಿಂದ ಪಂಚಭೂತಗಳ ಪಾಲಾಗಿ ಹೋಗಿದೆ.
– ಕನ್ನಡ ಕಟ್ಟಿದವರು

ಇಂತಹ ಕಡೆಗಳಲ್ಲಿ ಭಟ್ಟರು ಯಾವ ವಕ್ರೋಕ್ತಿಯ ಛಾಯೆಯೂ ಇಲ್ಲದೆ ಸರಳವಾಗಿ ಆಯಾ ವ್ಯಕ್ತಿಯ ರೇಖಾಚಿತ್ರವನ್ನು ಮನೋಧರ್ಮವನ್ನು ನಯವಾಗಿ ಚಿತ್ರಿಸುತ್ತಾರೆ.

ಶ್ರೀಯುತ ಟಿ.ಎಂ.ಎ. ಪೈಯವರ ಒಂದು ವ್ಯಕ್ತಿ ಚಿತ್ರದ ಕಿರುಹೊತ್ತಿಗೆಯಲ್ಲಿ ಬರುವ ಒಂದು ಪ್ರಕೃತಿಚಿತ್ರವನ್ನು ನೋಡಿ. ಅದು ಇಂಗ್ಲೀಷಿನಲ್ಲಿದೆ. ಭಾಷೆ ಯಾವುದಾದರೇನು? ಕುಶಿಯವರ ಭಾವ ಅದರಲ್ಲೂ ಸರಾಗವಾಗಿ ಹರಿಯುತ್ತದೆ. ಯಥಾರ್ಥ ಪ್ರತಿಪಾದಕವಾಗಿರುತ್ತದೆ. ಯಾವ ಮುಖ್ಯ ವಿಷಯವನ್ನೂ ಅವರ ಹದ್ದಿನ ಕಣ್ಣು ತಪ್ಪಿಸಿಕೊಳ್ಳಲಾರದು. ಇಲ್ಲಿಯ ನಿಸರ್ಗ ಸೌಂದರ್ಯ ಹೇಗೆ ಯಥಾವತ್ತಾಗಿ ಮೂಡಿದೆ ನೋಡಿ :

"It is difficult to believe that fifty years ago Manipal was nothing but a grazing ground for cattle. It was an extensive strech of grassland, where the cows of the Krishna Matt of UDUPI were driven every-day to graze. After the wet rainy season nothing would grow there but wild grass. And the cattle, unless they were driven back home early in the evening, risked becoming a prey to the marauding leopard. On the western slope of the hill was the thick 'Kundel' forest whose caves often housed jackals, hyenas and leopards. Remains of carcass of a cow or a calf were the sign of its being a victim. At the fall of the evening people on their way home would double up their pace to reach quickly the human habitation below. The postman on foot would jerk his metal staff with the bunch of bells attached and the jingling sounds would announce his approach. The sharp, biting wind, the tall grass swaying, the thorny plants pricking the treading feet, the birds twittering in the trees of the surrounding woods, ponds overflowing in the rainy season and the

cascade springing down the slope of Budnar, the leopard sometimes squatting leisurely on the edge of the highway—this was the picture of the uninhabited Manipal of just a few decades ago. Old people of the UDUPI Town might remember it still but the youth of today cannot even believe this."

—T. M. A. Pai. P. 9

ಇಷ್ಟೆಲ್ಲ ಹೇಳಿದರೂ ಕುಳಿಯುವರ ಸಾಹಿತ್ಯವನ್ನು ಕುರಿತು ಏನೇನೂ ಹೇಳಿದಂತಾಗಲಿಲ್ಲ ಎಂಬುದು ನನಗೆ ಗೊತ್ತಿದೆ. ಏಕೆಂದರೆ ಅವರ ವಿಪುಲವಾದ ಬರವಣಿಗೆಯಲ್ಲಿ ಎಲ್ಲದರಲ್ಲೂ ಒಂದು ವೈಶಿಷ್ಟ್ಯವಿದೆ. ಅದು ಅವರದೇ ಸಿದ್ಧಿ, ಹದ. ಅದನ್ನು ಓದಿಯೇ ಸವಿಯಬೇಕು.

---

೩. ಪ್ರಾ। ಕು. ಶಿ. ಹರಿದಾಸ ಭಟ್ಟರ ಸಾಹಿತ್ಯದಲ್ಲಿ ಹಾಸ್ಯ

— ಡಾ. ಸೀ. ಹೊಸಬೆಟ್ಟು

"ಮೊನ್ನೆ ಬೆಂಗಳೂರಿನಿಂದ ದಿಲ್ಲಿಗೆ ಹೋಗುವಾಗ ನಾನೊಂದು ಕನ್ನಡ ಪುಸ್ತಕವನ್ನು ನನ್ನ ಜತೆ ಮೂವತ್ತು ಸಾವಿರ ಅಡಿ ಎತ್ತರಕ್ಕೆ ಒಯ್ದೆ. ಅಂಥ ಮಹೋನ್ನತಿಯಲ್ಲಿ ನನ್ನ ಕೈಯಲ್ಲಿದ್ದ ಕೃತಿ ಮಹಾಕೃತಿಯಾಯಿತು."

"ಮಂಗಳೂರಿನಲ್ಲಿ ಇನ್ನೂ ಬದಲಾಗದ ಎರಡು ಸಂಗತಿಗಳಿವೆ – ಒಂದು ಮಂಗಳೂರು ರೈಲ್ವೇ ಸ್ಟೇಶನ್. ಎರಡು – ಪ್ರೊಫೆಸರ್ ಕೃಷ್ಣಮೂರ್ತಿ".

"ಅದರಲ್ಲೂ ಬೆಂಗಳೂರಿನ ನಾಯಿಗಳು ಪರಸ್ಪರ ಕಚ್ಚಾಟದಲ್ಲಿ ತಮ್ಮ ಅರ್ಧಾಂಶ ಜೀವನವನ್ನು ಕಳೆಯುತ್ತವೆ."

"ನನ್ನ ಮುಂದೆ ದೋಸೆ ಎನ್ನುವುದಕ್ಕಿಂತಲೂ ದೋಸೆಯ ಮುಂದೆ ನಾನು ಎನ್ನುವುದು ಸೂಕ್ತ ಎನಿಸುವ ಗಾತ್ರದ ದೋಸೆ ಅದು".

"ಪ್ರಜಾಪ್ರಭುತ್ವದ ಮೋದಕ, ಪಂಚವಾರ್ಷಿಕ ಯೋಜನೆಯ ಎಳ್ಳುಂಡೆ, ಸಮಾಜವಾದದ ಕಜ್ಜಾಯ, ಸಹಕಾರೀ ತತ್ವದ ಲಡ್ಡುಗಳು, ರಾಷ್ಟ್ರೀಕರಣದ ಕರೀಗಡುಬು – ಎಲ್ಲವನ್ನೂ ತಿಂದುಂಡು ಸಾಲದ್ದಕ್ಕೆ ರಿಸರ್ವ್ ಬ್ಯಾಂಕ್ ತಯಾರಿಸಿದ ಅತಿಸಾರದ ಚಕ್ಕುಲಿ ನೋಟುಗಳನ್ನು ಮೆಲ್ಲುತ್ತ, ಬಿರಿದ ಹೊಟ್ಟೆಗೆ ಹಾವನ್ನೇ ಮಂಡಲಾಕಾರವಾಗಿ ಸುತ್ತಿಕೊಂಡು ಸಂತೋಷವಾಗಿ 'ಹಗ್ಗಣದ ಜೆನ್ನೇರಿ ಬಂದು ಕಲ್ಪನಾವಿಲಾಸಾ' ಎಂದು ಗುಣುಗುಣಿಸುತ್ತಾ ದೇಶಾದ್ಯಂತ ಪ್ರವಾಸ ಹೊರಟ ಈ ಗಣಪತಿಗೆ ಅಪಾಯದ ಗೋಚರವೇ ಆಗುವುದಿಲ್ಲ".

"ಬೆಲೆ ಬರುವುದೂ, ಇರುವುದೂ, ಏರುವುದೂ, ಇಳಿಯುವುದೂ 'ಬೇಲೆ'ಯಿಂದ.

"ಸ್ವತಂತ್ರ ಭಾರತದಲ್ಲಿ ಎರಡೇ ಬಲಗಳು – ಒಂದು ರಿಟ್ಟೇಬಲ, ಇನ್ನೊಂದು ರಟ್ಟೇಬಲ" –

ಇಂತಹ ಅಸಂಖ್ಯ ಹೇಳಿಕೆಗಳಿಂದ, ಉದ್ಗಾರಗಳಿಂದ ಸಂಪನ್ನವಾದ ಪ್ರಾ. ಕು.ಶಿ. ಯವರ 'ಲೋಕಾಭಿರಾಮ' ಸಾಹಿತ್ಯದ ವೈಶಿಷ್ಟ್ಯವಿರುವುದು ಅಲ್ಲಿಯ ವೈಚಾರಿಕ ಹಾಸ್ಯದಲ್ಲಿ ವಿಚಾರಗಳ ಮೂಲಕ ಹಾಸ್ಯವನ್ನೂ, ಹಾಸ್ಯದ ಮೂಲಕ ವಿಚಾರಗಳನ್ನೂ ಉದ್ದೀಪಿಸುವ ಅನನ್ಯ ಶೈಲಿಯಲ್ಲಿ.

"ದಯಾಭಾವ ಒಳ್ಳೆಯ ನಗೆಗೆ ಮೂಲ" ಎಂದೂ, 'ಚಿತ್ತ ವಿಕಾಸವೇ ಹಾಸ' ಎಂದೂ ನಮ್ಮ ಆಲಂಕಾರಿಕರು ಹೇಳಿದ್ದೂ ಕುಶಿಯವರ ಬರವಣಿಗೆಯಲ್ಲಿನ ಹಾಸ್ಯಕ್ಕೆ ಚೆನ್ನಾಗಿ ಒಪ್ಪುತ್ತದೆ.

ಒಳ್ಳೆಯದನ್ನು ಕಂಡಾಗ ಮನಸಾರೆ ಮೆಚ್ಚಿ ಹಾರ್ದಿಕವಾಗಿ ಪ್ರಶಂಸೆಗೆ ತೊಡುವ ಕು.ಶಿ. – ವಿಸಂಗತಿ, ವೈಷಮ್ಯ, ವೈಪರೀತ್ಯಗಳನ್ನು ತಮ್ಮ ಕಟು ವ್ಯಂಗ್ಯದ ಟೀಕೆಗೆ, ಹರಿತವಾದ ವಾಗ್ಬಾಣಗಳಿಗೆ ಗುರಿ ಮಾಡಲು ಹಿಂಜರಿಯುವುದಿಲ್ಲ. ಉತ್ತಮವಾದುದನ್ನು ಗುರುತಿಸಿ – ತಲೆಬಾಗಿ, ಬೆನ್ನತಟ್ಟಿ – ತಮ್ಮ ಹೃದಯದ 'ನಗೆ'ಯನ್ನು ಹೊರಚಿಮ್ಮುವ ಕು.ಶಿ – ಓರೆಕೋರೆಗಳನ್ನೂ, ಅಂಕುಡೊಂಕುಗಳನ್ನೂ ತಮ್ಮ ಬೌದ್ಧಿಕ ಹಾಸ್ಯದಿಂದ ಚುಚ್ಚದೆ ಬಿಡುವುದಿಲ್ಲ.

ಹೀಗೆ – ಸಹೃದಯ ಪರಿಪಾಕವೆನಿಸಿದ 'ನಗು' (ಹಾಸ), ಮತ್ತು ವಿಷಮತೆ, ವೈರೂಪ್ಯಗಳನ್ನು ಗೇಲಿಗೆ ಬಲಿ ಮಾಡುವ ವಿಮರ್ಶಕ ಸಂಸ್ಕಾರದ ವಿಡಂಬಕ 'ಹಾಸ್ಯ' – ಎರಡನ್ನೂ ಕುಶಿಯವರ ಬರವಣಿಗೆಯಲ್ಲಿ ಸಾಕಷ್ಟು ಕಾಣಬಹುದು.

ನಿಟ್ಟೂರ ಗ್ರಾಮದ ಒಬ್ಬ ಬಡಗಿ ಸೀನಾಚಾರಿಯ ಬದುಕನ್ನು ಕಂಡು ಓಗ್ಗಿ 'ಸಂದ ಜೀವನದ ರೀತಿ' ಎಂಬ ಲೇಖನದ ಮೂಲಕ ಮರಣೋತ್ತರ ಪ್ರಶಸ್ತಿ ನೀಡುವ ಕು.ಶಿ. 'ಥಳಥಳಿಸುವ ದಸರಾ'ದ ಸುತ್ತಲಿನ ಅಸಂಬದ್ಧತೆಗಳನ್ನು ಗುರುತಿಸಿ ಗೇಲಿ ಮಾಡದೇ ಇರುವುದು ಸಾಧ್ಯವಿಲ್ಲ.

'ಗುರುವೀರಭದ್ರ', 'ಸೋಬಾನೆ ನಾಗೇಗೌಡರು', 'ಜ್ಞಾನಪೀಠಸ್ಥ ಬೇಂದ್ರೆ', 'ಒಂದು ಹಿರಿಯ ಚೇತನ' (ಉಡುಪಿ ಲಕ್ಷ್ಮೀನಾರಾಯಣ ರಾವ್) 'ಹಲವು ಮಕ್ಕಳ ತಂದೆ' (ಪುಂಡಲೀಕ ಶೆಣೈ)ಗಳಂತಹ ಬರವಣಿಗೆಗಳು ಕುಶಿಯವರ ಗುಣಗ್ರಾಹಕತೆ ಹಿರಿದಾದುದನ್ನು ಕಂಡು ಗೌರವಿಸುವ ಸಂಸ್ಕೃತಿಗಳಿಗೆ ಸಾಕ್ಷಿಗಳಾಗಿ ನಿಲ್ಲುತ್ತವೆ. ಇಂತಹ ಅಭಿನಂದನ – ಅಭಿವಂದನ ಲೇಖನಗಳಲ್ಲೂ ಲೇಖಕರ 'ಕುಶಿ' ತನ, ರಸಿಕ-ವಿನೋದ ಹೊರ ಹೊಮ್ಮದೇ ಇರುವುದಿಲ್ಲ.

'ಅನೌಚಿತ್ಯವೇ ಹಾಸ್ಯಕ್ಕೆ ಕಾರಣ' – ಎನ್ನುತ್ತದೆ ಕಾವ್ಯ ಮೀಮಾಂಸೆ. 'ಸೊಕ್ಕು ಒಡಿದ ಉಕ್ಕು', 'ಅರ್ಧಬೆಲೆ', 'ಸಕ್ಕೋಟು–ಸನ್ಮಾನ', 'ಕಹಿಯಾದ ಸಕ್ಕರೆ', 'ಅಳಿಲು, ಆನೆ, ಅ–ಆ, 'ಅನಾರೋಗ್ಯ ವಿ.ವಿ. ನಿಲಯ', 'ಎಲ್ಲಿರುವೆ ಕಳ್ಳ ಬಾರೋ', ಗುದ್ದೇ ಮದ್ದು'ಗಳಂತಹ 'ಲೋಕಾಭಿರಾಮಗಳು' ಪ್ರಸವಗೊಂಡದ್ದು ಪ್ರಚಲಿತ 'ಅನೌಚಿತ್ಯ'ಗಳ ಪರಿಸರದಲ್ಲಿ.

ಇಂತಹ ಕುಶಿಯವರ ಬರವಣಿಗೆಗಳಲ್ಲಿ ಮೇಲಿಂದ ಮೇಲೆ ಹಾಸ್ಯದ ಲೇಪ ಕಂಡು ಬರುತ್ತಿದ್ದರೂ – ಅದರೊಳಗೆ ಸ್ಥಾಯಿಯಾಗಿರುವುದು, ಸಾತ್ವಿಕ ಸಂತಾಪ ಎನ್ನುವು ದರಲ್ಲಿ ಸಂದೇಹವಿಲ್ಲ. 'ಹಾಸ್ಯವು ಪರಿಪೂರ್ಣತೆಯನ್ನು ಪಡೆಯಬೇಕಾದರೆ ಸಹಾನುಭೂತಿಯೊಂದಿಗೆ ಕಲ್ಪನಾಶಕ್ತಿಯೂ ಬೇಕಾಗುತ್ತದೆ, - ವಸ್ತು-ವಿಷಯ-ವಿಚಾರಗಳ ಕುರಿತು ಸಹಜ ರೀತಿಯಲ್ಲಿ ಚಿಂತಿಸಿ, ವಿಶ್ಲೇಷಿಸಬಲ್ಲ ಕುಶಿ ತಮ್ಮ ಅನಿಸಿಕೆಗಳನ್ನು ಅಷ್ಟೇ ಸಮರ್ಥವಾಗಿ ಅಭಿವ್ಯಕ್ತಗೊಳಿಸಬಲ್ಲರು. ಇವರ ವೈಚಾರಿಕ ಅಭಿವ್ಯಕ್ತಿಯಲ್ಲಿ ಸಹಾನುಭೂತಿ ಕಟ್ಟುಕತೆಗಳ ಸರಸ-ಸಂಗಮವಿರುವು ದರಿಂದ ಅವರ ಬರವಣಿಗೆಗಳೆಲ್ಲವೂ ರಸಸಮೃದ್ಧವೆನಿಸಿ 'ಸಾಹಿತ್ಯಿಕ ರೂಪ'ವನ್ನು ತಾಳುವುದು ಸಾಧ್ಯವಾಗಿದೆ. ಈ ಸಂಬಂಧವಾಗಿ ಅವರೇ ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. "ಅಪರಂಜಿ ಚಿನ್ನವಾದರೂ ತುಸು ಬೆರಕೆ ಇಲ್ಲದೆ ಅದರಲ್ಲಿ ತಾಳಿಕೆ-ಬಾಳಿಕೆ ಗುಣ ಬರಲಾರದಂತೆ. ಹಾಗೆ ಸತ್ಯವಾದರೂ ಅದನ್ನೊಂದಿಷ್ಟು ಪ್ರಿಯವಾಗಿ ರುಚಿಕವಾಗಿ ಮಾಡಲು ಮಸಾಲೆ ಬೆರೆಸಬೇಕಾಗುತ್ತದೆ. ಒತ್ತು, ಸುರುಳಿ, ಕೊಂಡಿ, ಕೊಡಬೇಕಾಗುತ್ತದೆ."

ನಕ್ಕು ನಗಿಸುವುದು ವಿದೂಷಕ ಪರಿಪಾಠ, ನಗದೆ ನಗಿಸುವುದು ಚತುರರೀತಿ. ಕುಶಿಯವರದು ಎರಡನೆಯ ವಿಧಾನ. ಇವರು ತಮ್ಮ ಚತುರ ಸಂಮಿತ (ವಿದೂಷಕ ಸಂಮಿತದಿಂದಲ್ಲ)ದಿಂದ ಎಲ್ಲರ ತಲೆಗೂಗಿಸಬಲ್ಲರು. ಮುಖ ಅರಳಿಸಬಲ್ಲರು. ತಾವು ಒಳಗೊಳಗೇ ನಕ್ಕು ಇತರ ಕಣ್ಣೀರಿಳಿಸಲೂ ಬಲ್ಲರು.

'ವಿಚಾರದ ಉಳಿತಾಯವೇ ವಿನೋದ, ಭಾವನೆಯ ಉಳಿತಾಯ (Economy)ವೇ ಹಾಸ್ಯ' – ಎನ್ನುವುದೂ ಉಂಟು. ಕುಶಿಯವರ ಸಾಹಿತ್ಯ ಈ ಎರಡಕ್ಕೂ ಸಾಕಷ್ಟು ಉದಾಹರಣೆಗಳನ್ನು ಒದಗಿಸಬಲ್ಲುದು.

"ವಕ್ರೋಕ್ತಿ ಜೀವಿತ'ದ ಕುಶಿಯವರ ಹಾಸ್ಯದ ಯಶಸ್ಸು ಅವರ ಭಾಷಾ ಪ್ರಭುತ್ವದಿಂದ ಸಂಪನ್ನವಾದದ್ದು. ಕನ್ನಡ ಗದ್ಯವನ್ನು ಇಷ್ಟು ಸಲೀಲವಾಗಿ ಬಳಸುವುದು ಎಲ್ಲರಿಗೂ ಸಾಧ್ಯವಿಲ್ಲ. ಅವರ ಬರವಣಿಗೆಗಳಲ್ಲಿ ಮೂಡಿಬಂದ ಕೆಲವು-ನುಡಿ-ಮಿಂಚುಗಳನ್ನು ಇಲ್ಲಿ ಉಲ್ಲೇಖಿಸುವುದರ ಮೂಲಕ ಅವರ ವೈಚಾರಿಕ ಮನೋಲಹರಿಯನ್ನು ಭಾಷಾ ವೈಖರಿಯನ್ನು ಗುರುತಿಸಿಕೊಳ್ಳಬಹುದು.

ವಿದೇಹ ಪ್ರಯಾಣ, ಬಾಡಿಗೆ ತಲೆ, ಕುದುರೆಮುಖ ಯೋಜನೆ, ಬಾಯಿಶಕ್ತಿ-ಶಾಯಿಶಕ್ತಿ, ಅಗಣಿತ ಜೀವಿ – ಧೃತ-ರಾಷ್ಟ್ರೀಕರಣ, ಚಪ್ಪಾಳೇಗಾರಿಕೆ, ಬೆಲೆ–ಬೇಲೆ–ನಿವೃತ್ತಿ, ನಾಡಹಬ್ಬ - ನೋಡಹಬ್ಬ, ಬೆಲೇರಿಯಾ ಬಾಂಬು ವಿದ್ವಾನ್ ಸರ್ವತ್ರಂತೇ, ಜೂನಿಯರ್ ಕಾಲೇಜು, ಪುಸ್ತಕ ಹಬ್ಬ – ಬಂಜೆಗಬ್ಬ, ಬರಿಗೈರೋಗಿ, ಬರಿಮೈ ವೈದ್ಯ... ಪ್ರಾ. ಕುಶಿ. ಶಬ್ದಗಳಿಗೆ ಕಚಗುಳಿಯಿಟ್ಟು ತುಂಟಾಟ ನಡೆಸಿದ ಇಂತಹ ಉದಾಹರಣೆಗಳನ್ನು ಇನ್ನಷ್ಟು ಬೆಳೆಸಬಹುದು.

ಚತುರ ಬರಹಗಾರರಾದ ಪ್ರಾ। ಕು.ಶಿ. ಚತುರ್ಭಾಷಾ ವಿಶಾರದರೂ ಆಗಿರುವುದರೊಂದಿಗೆ ಯಾವುದೋ ಕಾವ್ಯದ, ಇನ್ನಾವುದೋ ಗ್ರಂಥದ ಹೇಳಿಕೆಗಳನ್ನೋ, ನುಡಿಗಟ್ಟುಗಳನ್ನೋ ತಲೇ ಲೇಖನಗಳಲ್ಲಿ ತುಂಬಿ ತಮ್ಮ ಬಹುಶ್ರುತತೆಯನ್ನು ಸತ್ಯಕತೆಯನ್ನು ಮೆರೆಯಬಲ್ಲರು.

"ಮಂಜೇಶ್ವರದಲ್ಲಿ ಇನ್ನು ಕನ್ನಡಿಗರಿಗೆ ಕೆಲಸವಿಲ್ಲ" ಎಂದು ಕವಿ ಬನ್ನಂಜೆಯವರು ಗೋವಿಂದ ಪೈಗಳ ಕುರಿತು ಚರಮ ಗೀತೆ ಹಾಡಿದ್ದಾರೆ, ಆ ಸಾಲನ್ನೇ ಉದ್ಧರಿಸಿ – ಮಂಜೇಶ್ವರದಲ್ಲಿ ಇನ್ನು ಕನ್ನಡಿಗರಿಗೆ ಕೆಲಸವಿಲ್ಲವೇ? ಎಂದು ಇವರು ಪ್ರಶ್ನಿಸಬಲ್ಲರು. ವಿಚಾರಿಸಬಲ್ಲರು. ಡಿ.ವಿ.ಜಿ.ಯವರ 'ಸಲ್ಲದಾತುರವಿದಕೆ' ಎಂಬ ಪಂಕ್ತಿಯನ್ನು ತಮ್ಮ ಲೇಖನದ ಶಿರೋನಾಮೆಯಾಗಿಸಬಲ್ಲರು. ಶಿಶುಸಾಹಿತ್ಯದ ಕಥೆಯೊಂದರ 'ಸಿಗಡಿಯಾಕೆ ಒಣಗಲಿಲ್ಲ?' ಎಂಬ ಪ್ರಶ್ನೆ ಇವರ ಲೇಖನದ ಶ್ರೇಷ್ಠ ಪ್ರಶ್ನೆಯೂ ಆಗಬಲ್ಲುದು. 'ತದ್ದೂರೇ, ತದಂತಿಕೇ', 'ಸಾ ವಿದ್ಯಾ ಯಾ ವಿಮುಕ್ತಯೇ' 'ಬಾಗಿಲನು ತೆರೆದು ಒಳಗೆ ಬಾ ಯಾತ್ರಿಕನೇ' – 'ಎಣ್ಣೆ ಹೊಯ್ಯಮ್ಮ ದೀಪಕ್ಕೆ' 'ಕಣ್ಣು ಕಾಣದ ಗಾವಿಲರು', 'ಮಾಡು ಸಿಕ್ಕದಲ್ಲಾ' 'ನೀನಾರಿಗಾದೆಯೋ ಎಲೆ ಮಾನವ?', 'ನಿನಗೆ ನೀನೇ ಗೆಳೆಯ ನಿನಗೆ ನೀನೇ' – ' 'ಸಂತೆಯಲ್ಲಿ ಸತ್ಯದಸಾಸಿವೆ' – ಇಂತಹ ಶೀರ್ಷಿಕೆಗಳು ಕುಶಿಯವರ ಉಲ್ಲೇಖನ ಪ್ರತಿಭೆಗೆ ಸಾಕ್ಷಿಗಳಾಗಿ ನಿಲ್ಲುತ್ತವೆ.

ಶಬ್ದಾರ್ಥ ಪ್ರಧಾನವಾದ ಸಾಹಿತ್ಯ ರಸಿಕ ಪ್ರಾ. ಕುಶಿ ಅರ್ಥಶಾಸ್ತ್ರದ ಪಂಡಿತರೂ ಹೌದು. ತಮ್ಮ 'ಅರ್ಥಶಾಸ್ತ್ರ' ದಲ್ಲಿ ವಸ್ತುಗಳ ವಿನಿಮಯದ ಕುರಿತು ಶಾಸ್ತ್ರೀಯ ವಿಚಾರಗಳನ್ನು ವಿವರಿಸುವಲ್ಲಿ ಪಂಜೆಯವರ ಮಕ್ಕಳ ಹಾಡಿನ 'ಕಾಳು ಕೊಟ್ಟು ಬಾಳು ತಂದೆ' ಎಂಬ ಪಂಕ್ತಿಯನ್ನು ಇವರು ಉಲ್ಲೇಖಿಸಬಲ್ಲರು. ಚಮಚಾಗಿರಿಯ ಈ ಕಾಲದಲ್ಲಿ 'ಚಮಚಾ'ದ ಉದಾಹರಣೆ ಕೊಟ್ಟು ಅರ್ಥಶಾಸ್ತ್ರದ ಪ್ರಕ್ರಿಯೆಗಳನ್ನು – ಹಾಸ್ಯ ಬೆರೆಸಿ ವಿಶ್ಲೇಷಿಸಬಲ್ಲರು. 'ಹೆಬ್ಬುಲಿ ಬ್ಯಾಂಕ್'ನೊಂದಿಗೆ 'ಬಬ್ಬುಲಿ ಬ್ಯಾಂಕ'ನ್ನು ಇವರು ಸ್ಥಾಪಿಸಬಲ್ಲರು. 'Swanpen' – ಇವರ ಕೈಯಲ್ಲಿ

ಸ್ಥಾನ ಪೆನ್ನಾಗುತ್ತದೆ. ಕ್ರಿಸ್ತ, ಮಹಮ್ಮದೀಯ ಮತಗಳಲ್ಲಿ 'ಬಂಡವಾಳ'ವು 'ಬಂಜೆ' ಎಂಬ ನಂಬಿಕೆಯಿದೆ. ಅದನ್ನು ಸಾಲಕೊಟ್ಟು ಬಡ್ಡಿ ಪಡೆಯುವುದು – ಪಾಪ – ಎಂದು ವಿವರಿಸುವ ಪಾದರಿಯೊಬ್ಬರಿಗೆ – 'ಬಂಜೆ'ಯಾದ 'ಪಾಪ' ಗಳಿಸುವುದು ಘೋರ ಪಾಪವಲ್ಲದೆ ಮತ್ತೇನು? ಎಂದು ಉದ್ಗರಿಸಿ ಓದುಗರ ನಗೆಯುಕ್ಕಿಸುತ್ತಾರೆ.

ಕೆಲವೊಮ್ಮೆ ಕುಶಿಯವರ ತೀಕ್ಷ್ಣವಾದ, ಅಮೂಲ್ಯವಾದ ವಿಚಾರಗಳು – ಅವರ ಹಾಸ್ಯ-ವಿನೋದಗಳಿಂದಾಗಿ ಮೊಂಡಾಗುವ ಅಪಾಯಕ್ಕೆ ಬಲಿಯಾಗುತ್ತಿವೆಯೇ? ಎಂಬ ಸಂದೇಹ ಮೂಡುವುದುಂಟು. ಬುದ್ಧಿಯನ್ನು ಕೆರಳಿಸಿ ಹೊರಟ ಕುಶಿ ತಮ್ಮ ಅತಿಯಾದ ಅತಿಶಯೋಕ್ತಿಯಿಂದ ನಗುವನ್ನು ಅರಳಿಸಿ – ವಿಚಾರದ ಗಾಂಭೀರ್ಯಕ್ಕೆ ಧಕ್ಕೆಯುಂಟು ಮಾಡುತ್ತಿದ್ದಾರೇನೋ ಎಂದು ಎನಿಸುವುದೂ ಉಂಟು. ಅವರ ಬೌದ್ಧಿಕ ಪ್ರಖರತೆ – ಶಾಬ್ದಿಕ ಚಮತ್ಕಾರಿತ ಕಸರತ್ತಿನಲ್ಲಿ ಕರಗಿ ಹೋಗುತ್ತಿದೆಯೇನೋ ಎನಿಸಿದರೂ ತಪ್ಪಿಲ್ಲ.

ಬಹುಶಃ ಸಹೃದಯ ವಾಚಕರನ್ನು ಚುಚ್ಚಿ ಎಚ್ಚರಿಸಿ ಲೋಕದ ವಿಸಂಗತಿಗಳ ಕಡೆಗೆ ಕಣ್ಣು ಹರಿಯಿಸುವಂತೆ ಮಾಡಿ ಪರಸ್ಪರ ನಕ್ಕು ತಮ್ಮನ್ನು ತಾವು ಸಂತೈಸಿಕೊಳ್ಳುವುದೇ 'ಲೋಕಾಭಿರಾಮ'ದ ಕುಶಿಯವರ ಬರವಣಿಗೆಗಳ ಉದ್ದೇಶವಾಗಿದ್ದರೆ ಅದರ ಸಾಧನೆಯಲ್ಲಿ ಅವರು ಸಂಪೂರ್ಣ ಸಫಲರಾಗಿದ್ದಾರೆನ್ನುವುದರಲ್ಲಿ ಸಂದೇಹವಿಲ್ಲ.

ಆದರೆ, ಕುಶಿಯವರ ಬದುಕಿನ ಇತರ ಆಯಾಮಗಳನ್ನು ಕಂಡರೆ, ಅವರು ನುಡಿದದ್ದಕ್ಕಿಂತಲೂ ನಡೆದದ್ದೇ ಹೆಚ್ಚು ಅಥವಾ ಎಲ್ಲರನ್ನು ಒಂದೆಡೆ ಸೇರಿಸಿ ಎಲ್ಲರಿಗೂ ಒಂದಲ್ಲ ಒಂದು ಹುಚ್ಚು ಹಿಡಿಸಿ ದುಡಿಸಿದ್ದೇ ಹೆಚ್ಚು. ಸಮರ್ಥ ಸಂಘಟಕರಾಗಿ ಕಾರ್ಯಕರ್ತರನ್ನು ಎಲ್ಲೆಲ್ಲಿಂದಲೋ ತಮ್ಮೆಡೆಗೆ ಸೆಳೆದ – ಇವರ 'ಕಿಂದರಿ'ಯಲ್ಲಿ ಇಷ್ಟು ಹಾಸ್ಯ ಸಾಮಗ್ರಿ ಇರುವುದು – ಇತಿ-ಹಾಸ್ಯಾಸ್ಪದ ಎನಿಸದೆ ಇರುವುದಿಲ್ಲ.

"ನೀವು ವಿಜ್ಞಾನದ ಬಗೆಗೆ ಬರೆದರೆ ಅದು ಸಾಹಿತ್ಯವಾಗುತ್ತದೆ. ಸಾಹಿತ್ಯ ಬರೆದರೆ ವಿನೋದವಾಗುತ್ತದೆ" ಎಂದೊಬ್ಬರು ಡಾ. ಬಿ.ಜಿ.ಎಲ್. ಸ್ವಾಮಿಯವರಿಗೆ ಅಂದಿದ್ದರಂತೆ. ಅದೇ ಮಾತನ್ನು ಸ್ವಲ್ಪ ಬದಲಾಯಿಸಿ 'ಪ್ರಾ। ಕುಶಿ ಅರ್ಥಶಾಸ್ತ್ರವನ್ನು ಬರೆದರೆ ಅದು ಸಾಹಿತ್ಯವಾಗುತ್ತದೆ. ಸಾಹಿತ್ಯ ಬರೆದರೂ ಅದು ವೈನೋದಿಕ ಅರ್ಥಶಾಸ್ತ್ರ ವಾಗುತ್ತದೆ' ಎಂದೆನ್ನಬಹುದೇನೋ!

ಪ್ರಾ। ಕುಶಿಯವರ ಖುಶಿತನದ ಲಹರಿಯಲ್ಲೇ ಈ ಲೇಖನವನ್ನು ಸಮಾರೋಪಗೊಳಿಸುವ ಧೈರ್ಯ ಮಾಡುವುದಾದರೆ – ಪ್ರಾ। ಕುಶಿ ಹೆಸರಿಗೆ 'ಹರಿದಾಸ'ರಾದರೂ – ಅವರು ಸದಾ 'ಹರಿಹಾಸ'ರು. ಅಂದಿನ ಹರಿದಾಸರ ಸಾಹಿತ್ಯ ಭಾವುಕ ದಾಸ್ಯ ಪ್ರಧಾನವಾಗಿದ್ದರೆ – ಇಂದಿನ ಪ್ರಾ। ಹರಿದಾಸ ಭಟ್ಟರ ಸಾಹಿತ್ಯ ನಿರಂತರ ಬೌದ್ಧಿಕ ಹಾಸ್ಯ ಪ್ರಧಾನ.

———

೪. ಯುಗವಾಣಿ

— ಟಿ. ಕೆ. ಇಂದುಬಾಯಿ

ಕು.ಶಿ. ಹರಿದಾಸ ಭಟ್ಟರ 'ಯುಗವಾಣಿ' ಕವನ ಸಂಕಲನ ಪ್ರಕಟವಾಗಿರುವುದು 1949ರಲ್ಲಿ. ಇದರಲ್ಲಿನ ಕವಿಯ 'ಮೊದಲ ಮಾತು'ಗಳನ್ನು ಗಮನಿಸಿದರೆ ಇದು ಅವರ ಮೊದಲ ಕವನ ಸಂಕಲನ ಇರಬಹುದೆನ್ನಿಸುತ್ತದೆ. ಸ್ವಾತಂತ್ರ್ಯದ ತತ್‌ಕ್ಷಣ ಹಸಿಬಿಸಿ ಇನ್ನೂ ಇರುವಾಗಲೇ ಪ್ರಕಟಗೊಂಡ ಈ ಕೃತಿ ಸಹಜವಾಗಿ ಅಂದಿನ ಉತ್ಕಟ ದೇಶಾಭಿಮಾನ, ಭಾವೈಕ್ಯತೆ, ದೇಶಕಟ್ಟಲು ಉದ್ದೇಶಿಸಿದ ಭ್ರಮಾತ್ಮಕ ಉದ್ವೇಗಗಳನ್ನು ಕುರಿತಂತೆ ಹಲವು ಕವನಗಳಲ್ಲಿ ಹರಡಿಕೊಂಡಿದೆ. ಅಲ್ಲದೆ ಕವಿ ಸಾಮ್ಯವಾದಕ್ಕೆ ಹೆಚ್ಚು ಒಲಿದಿರುವ ಕಾರಣ ಬಹುಪಾಲು ಕವನಗಳು ಸಾಮ್ಯವಾದವನ್ನು ಕುರಿತಂತಿವೆ.

ಈ ಸಂಕಲನದಲ್ಲಿ ಒಟ್ಟು ಮೂವತ್ತು ಕವನಗಳಿದ್ದು 'ದುಡಿಮೆ ನಮ್ಮ ದೇವರು, ಜಯಪ್ರಕಾಶ, ಜಯಹಿಂದ್ ಮೊರೆಯನಿಡು ಕಡಲೇ, ಇದು – ಅದು, ಯುಗವಾಣಿ ಸೊಗದ ದಾರಿ, ಸಾಮ್ಯಸಾರ' ಇತ್ಯಾದಿ ಕವನಗಳು ಸಾಮ್ಯವಾದವನ್ನು ಕುರಿತವುಗಳಾಗಿವೆ. 'ದುಡಿಮೆ ನಮ್ಮ ದೇವರು' ಕವನ ಶಿರೋನಾಮೆಯೇ ಸೂಚಿಸುವಂತೆ ದುಡಿಮೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತ ಸರಳವಾಗಿ ಸ್ವಾತಂತ್ರ್ಯೋತ್ತರ ಭಾವನೆಗಳನ್ನು ಭಾಷೆಯಲ್ಲಿ ಹಿಡಿದಿಡಲು ಪ್ರಯತ್ನಿಸಿದೆ. ಈ ಹೊಸ ದೇವರ ಚಿತ್ರ ಕೆಲವೆಡೆ ಶಕ್ತವಾಗಿಯೇ ಮೂಡಿ ಬಂದಿದೆ –

ಮೆಯ್ಯ ತೊಯ್ವ ಬಿಸಿಯ ಬೆಮರ
ಸೇಚೆವೆಮ್ಮ ದೇವಗೆ
ಕಾದಕಲ್ಲು ಉಸಿರು ಬಿಡುವ
ಹೊಗೆಯ ಧೂಪ ದೇವಗೆ
ಅಲ್ಪ ತೃಪ್ತ ದೇವರು
ದುಡಿಮೆ ನಮ್ಮ ದೇವರು.

ದುಡಿಮೆಯೇ ದೇವರಾಗಿ ನಾಡನ್ನು ಕಟ್ಟಬೇಕಾಗಿದ್ದ ಅಂದಿನ ಪರಿಸ್ಥಿತಿ ಇಂದೂ ಬದಲಾಗಿಲ್ಲ ಎಂಬ ವಾಸ್ತವಿಕ ತಿಳಿವಿನ ಹಿನ್ನೆಲೆಯಲ್ಲಿ ನೋಡಿದಾಗ ಕವನ ವ್ಯಕ್ತಪಡಿಸುವ ಆಶಯಕ್ಕೆ ಸಾರ್ವತ್ರಿಕತೆ ದೊರಕುತ್ತದೆ.

'ಜಯಪ್ರಕಾಶ, ಜಯಹಿಂದ!' ಕವನ ಜಯಪ್ರಕಾಶರನ್ನು ಕುರಿತ ಸ್ತುತಿಗೀತವಾಗಿದ್ದು;' 'ಬಾರೋ ಬಾರೋ ಹಿಂದೀ ಲೆನಿನ್, ಸಾರೋ ಹಿಂದೀ ಸಾಮ್ಯವ ನೀನ್' ಎಂದು ಆಹ್ವಾನಿಸುವಲ್ಲಿ ಕವಿಯ ಉದ್ದೇಶ ಸ್ಪಷ್ಟವಾಗಿದೆ. ಮೂರನೆಯ ಕವನ 'ಮೊರೆಯನಿಡು ಕಡಲೇ; ಇಲ್ಲಿಯೂ ಸಾಮ್ಯವಾದವು ಜಗತ್ತಿನ ಅಸಮತೆಯನು ನೀಗಿಸಿ ಜಯಭೇರಿ ಹೊಡೆಯುವ ಕನಸನ್ನು ಭಾಷೆಯಲ್ಲಿ ಹಿಡಿಯುವ ಪ್ರಯತ್ನವಿದೆ.

ಕ್ರಾಂತಿ ಬರದೆ ಶಾಂತಿ ಎಲ್ಲಿ
ಮನುಜ ಜಾತಿಗೆ?

ಎಂದು ಪ್ರಶ್ನಿಸುವ 'ಇದು – ಅದು' ಕವನ ಕೂಡ ಸಾಮ್ಯವಾದದಲ್ಲೇ ಪೂರ್ಣ ನಂಬಿಕೆಯುಳ್ಳದ್ದು. ಕವನ ಸಂಕಲನದ ಶೀರ್ಷಿಕೆಯನ್ನು ಹೊಂದಿದ್ದ 'ಯುಗವಾಣಿ' ಕವನ ಜಾತಿ ಪದ್ಧತಿಯ ಅನಿಷ್ಟತೆ, ಅದನ್ನು ತೊಡೆದು ಹಾಕುವ ಆಶಯಗಳನ್ನು ಕುರಿತದ್ದಾಗಿದೆ. ಕವಿ ಇದಕ್ಕೆ ಅಡಿ ಟಿಪ್ಪಣಿಗಳನ್ನು ನೀಡಿದ್ದಾರೆ – "ಬ್ರಾಹ್ಮಣ ಎಂದರೆ ಎಲ್ಲ ಸೋಮಾರಿ ಜನಗಳ ಪ್ರತಿನಿಧಿ ಎಂದೂ ಹೊಲೆಯನೆಂದರೆ ಗೆಯ್ಮೆಯವರ ಗುರಿಕಾರನೆಂದೂ ಇಲ್ಲಿ ಪರಿಗಣಿಸುವುದು" – ಹೀಗೆ ಟಿಪ್ಪಣಿ ಕೊಡುವುದು ಕವಿ ತನ್ನ ಕವನದ ಬಗ್ಗೆ ತೋರುವ ಅನಗತ್ಯ ಆತಂಕ ಎನಿಸುತ್ತದೆ. ಇದರಿಂದಾಗಿ ಕವನವನ್ನು ಓದುವ ಓದುಗ ಕವನ ತಾನಾಗಿ ಬಿಟ್ಟು ಕೊಡುವ ಅರ್ಥದೆಡೆ ನೋಡದೆ ಕವಿಯ ನಿರ್ದೇಶನದ ಮೇರೆಗೇ ಕವನವನ್ನು ನೋಡುವಂತಾಗಿ ಬಿಡುತ್ತದೆ. ಈ ಕವನದ ಕೊನೆಯ ಸಾಲುಗಳು –

ನಿಡುಗಾಲ ಉಳಿದಿದು
ವಿಧಿ ವೈಪರೀತ್ಯ

ನಿನ್ನ ಸೊಗದಿವಸಗಳು
ಬರುತಿಹವು ಸತ್ಯ

– ಎಂಬಲ್ಲಿ ಕಾಣುವ ಆಶಾವಾದಕ್ಕೆ ಕವನದೊಳಗೆ ಯಾವುದೇ ಆಧಾರವೂ ಕಾಣಿಸುವುದಿಲ್ಲ. ಇದೇ ಮಾತು "ಅಂತರ" ಕವನದ ಕೊನೆಯ ಸಾಲುಗಳಿಗೂ ಅನ್ವಯಿಸುತ್ತದೆ.

'ಅರಿವು' ಕವನ ಉಪದೇಶಾತ್ಮಕವಾಗಿದ್ದು ಸರ್ವರೂ ಸಮರೆಂಬುದನ್ನು ಸಾರಿದರೆ, 'ತುಳಿ !' ಕವನ ನಾಟಕೀಯವಾಗಿ 20ನೇ ಶತಮಾನದ ದಲಿತನನ್ನು ಕೆಣಕಿದರೆ ಆತ ವಿಲಯಾಗ್ನಿಯಾಗಿ ಎಲ್ಲವನ್ನೂ ಆಹುತಿ ತೆಗೆದು ಕೊಳ್ಳುತ್ತಾನೆ ಎಂದು ಸೂಚಿಸುತ್ತದೆ.

ತುಳಿ, ತುಳಿ ಮತ್ತು ತುಳಿ,
ಎತ್ತಿ ತುಳಿ, ಹತ್ತಿ ತುಳಿ,
ಕೆಣಕು ನಾಗ ಫಣಾಮಣಿ
ಶಿವನ ಹಣೆಯ ಮೂರನೆಯ ಮಣಿ
ವಿಲಯಾಗ್ನಿಗೆ ಒಂದೆ ಕಬಳ
ನಿನ್ನ ಸರ್ವಸ್ವತ್ತು ಸಬಳ !

ತುಳಿ ತುಳಿ ಎಂಬ ಮೊದಲ ಎರಡು ಸಾಲುಗಳು ಪ್ರತಿ ನುಡಿಯಲ್ಲೂ ಪುನರುಕ್ತಗೊಳ್ಳುತ್ತ ಬೇರೆ ಬೇರೆ ವಸ್ತುಗಳ ಮೇಲೆ ಬೀರುವ ಪರಿಣಾಮಗಳನ್ನು ಮೊದಲಿಗೆ ಹೇಳುತ್ತವೆ. ಕೊನೆಯ ನುಡಿಯಲ್ಲಿ ಹೀಗೆಯೆ ದಲಿತನನ್ನೂ ತುಳಿಯುತ್ತ ಹೋದರೆ ಏನಾಗುತ್ತದೆ ಎನ್ನುವುದನ್ನು ಕವಿ ಕೆಲವೇ ಮಾತುಗಳಲ್ಲಿ ಪರಿಣಾಮ ಕಾರಿಯಾಗಿ ಹೇಳಿದ್ದಾರೆ.

"ಸೊಗದ ಹಾದಿಯು ಸಾಮ್ಯ ವದುವೆಮ್ಮ ಗಮ್ಯ" ಎಂದು ಆರಂಭವಾಗುವ ಸೊಗದ ಹಾದಿ ಎಂಬ ಕವನ ಕೂಡ ಸಾಮ್ಯವಾದದ ಹಿರಿಮೆಯನ್ನು ಸಾರುವಂಥದು. ಸಮತೆಯನ್ನು ಸಮರ್ಥಿಸುವ ಮತ್ತೊಂದು ಸಾಮಾನ್ಯ ಕವನ "ಸಾಮ್ಯಸಾರ" ಸಿದ್ಧಾಂತವೊಂದು ಎಷ್ಟೇ ಮಹತ್ವದ್ದಾಗಿದ್ದರೂ ಅದನ್ನು ಕಾವ್ಯವಾಗಿಸುವಲ್ಲಿ ಕಲಾತ್ಮಕತೆ ಇಲ್ಲದಿದ್ದಾಗ ಅಂಥ ಕಾವ್ಯ ಕೇವಲ ಘೋಷಣೆಯಾಗಿ ಉಳಿದು ಬಿಡುತ್ತದೆ ಎಂಬುದಕ್ಕೆ ಇಲ್ಲಿ ಅನೇಕ ಕವನಗಳನ್ನು ಉದಾಹರಣೆಯಾಗಿ ಗಮನಿಸಬಹುದಾಗಿದೆ.

ಜಾತಿ ಬಂಧನಗಳನ್ನು ಮುರಿದು ನಿಲ್ಲುವ ವಿಚಾರಕ್ರಾಂತಿ, ಹೊಸ ನಾಡನ್ನು ಕಟ್ಟುವ ಕನಸು 'ಜಾತಿ ಬಂಧನದಾಚೆ' ಕವನದಲ್ಲಿ ಮೈ ಪಡೆದಿದೆ, ಇಲ್ಲಿ ಕವಿ

ಜಾತಿ ಬಂಧನಗಳಾಚೆ ನಡೆಯೋಣ ಬಾ
....
ಎದೆಗಾರಿಕೆಯ ತೋರಿ ಮೀರೋಣ ಬಾ
ಸೊದೆ ಹರಿವ ನಾಡನ್ನು ಕಟ್ಟೋಣ ಬಾ

ಎಂದು ಆಹ್ವಾನಿಸಿದರೆ, 'ಹಾದಿ ಹಲವು' ಎಂಬ ಕವನದಲ್ಲಿ –

ಹಾದಿ ಹಲವಾದರೂ ಧ್ಯೇಯವೊಂದೆಂಬುದನು
ನಾವೆಲ್ಲರರಿಯಬೇಕು
....
ಆಳು ಬಾಳೊಗೆದರೂ ಹೋಳು ಬಾಳಾಗಿರುವ
ನಾಡನ್ನು ಕಟ್ಟಬೇಕು

ಎಂದು ಎಚ್ಚರಿಸುತ್ತಾರೆ. 'ಜಾತಿಯೊಂದೇ' ಎಂಬ ಕವನದಲ್ಲಿ "ಜಗದಗಲ ಇಹುದು ಒಂದೇ ಜಾತಿ, ಆದಿ ಕಾಲದಿ ಬಂದ ಮನುಜ ಜಾತಿ" ಎಂದು ಘೋಷಿಸುತ್ತಾರೆ. ಹೀಗೆ ಸಾಮ್ಯವಾದ ದೇಶಭಕ್ತಿ, ಜಾತಿ ಬಂಧಗಳನ್ನು ಮೀರಿ ನಿಲ್ಲುವ ಪ್ರಗತಿಪರ ವಿಚಾರ ಧಾರೆಯನ್ನು ಪ್ರಕಟಿಸುವ ಈ ಮೇಲೆ ಹೇಳಿದ ಕವನಗಳಿಗಿಂತ ಭಿನ್ನವಾದ ಕವನ ಗಳೂ ಈ ಸಂಕಲನದಲ್ಲಿ ಸಾಕಷ್ಟಿವೆ, ನಿಷ್ಕಾಮ ಕರ್ಮ, ಸಾಜೂನು, ಶಿಲಜಾ, ಅಂದು ನಾವಾಡಿದ್ದು, ಸೀತೆಯ ಸಂತಸ, ಕಾರ್ಗಾಲದ ಸೋನೆ ಇತ್ಯಾದಿ ಕವನಗಳಲ್ಲಿ ಮೇಲೆ ಹೇಳಿದಂಥ ಘೋಷಣಾ ಚಟಗಳಿಲ್ಲದೆ ಕವನವಾಗಿಸುವ ಪ್ರಯತ್ನಗಳಿರುವುದನ್ನು ಕಾಣಬಹುದಾಗಿದೆ.

ಕಡಲ ತಡಿಯಲ್ಲಿಯೇ ಹುಟ್ಟಿ, ಬೆಳೆದ ಕವಿ ಕಡಲನ್ನು ಸಹಜವಾಗಿಯೇ ಪ್ರೀತಿಸಿ ಅದಕ್ಕೆ ತಮ್ಮ ಕಾವ್ಯ ದಲ್ಲಿ ಎಡೆ ಇತ್ತಿದ್ದಾರೆ – ಮೊರೆಯನಿಡು ಕಡಲೇ, ನಮ್ಮ ಕಡಲು ಇತ್ಯಾದಿ ಕವನಗಳಲ್ಲಿ. ಆದರೆ ಇಲ್ಲೆಲ್ಲ ಕಡಲಿನ ಪ್ರಸ್ತಾಪ ಬಂದರೂ, ಕಡಲಿನ ಸಹಜ ಭವ್ಯ ಚಿತ್ರವೇನೂ ಇಲ್ಲಿ ನಮಗೆ ಕಾಣಸಿಗುವುದಿಲ್ಲ. ಬದಲಿಗೆ ಅದು

ಬೇರೊಂದು ವಿಚಾರದ ಪ್ರತಿಪಾದನೆಗಾಗಿ ಅಥವಾ ಇನ್ನಾವುದಕ್ಕೋ ಸಂಕೇತ ಮಾತ್ರವಾಗಿ ಬಂದಿದೆ ಎನ್ನುವುದು ಇವೇ ಕವನಗಳನ್ನು ಗಮನಿಸಿದರೆ ತಿಳಿಯುತ್ತದೆ.

ಬಾನು ಹೇಗೆ ಮೂಲತಃ ಒಂದೇ ಇದೆಯೋ ಹಾಗೆಯೇ ಕಡಲೂ ಕೂಡ ಒಂದೇ. ಆದರೆ ಅವುಗಳನ್ನು 'ಇದು ನನತು, ಇದು ನಿನತು' ಎಂದು ವಿಭಾಗಿಸಿ ಕಚ್ಚಾಡುವ ಸಣ್ಣಬುದ್ಧಿ ಮಾತ್ರ ಮನುಷ್ಯನದು ಎನ್ನುವುದನ್ನು 'ನಮ್ಮ ಕಡಲು' ಕವನ ಹೇಳುತ್ತದೆ. 'ಮೊರೆಯ ನಿಡು ಕಡಲೇ' ಕವನದಲ್ಲಿ ಪ್ರಥಮಾರ್ಧದಲ್ಲಿ ಜಗತ್ತಿನ ಅನ್ಯಾಯ ಅಸಮತೆಗಳಿಗೆ ಸಾಕ್ಷಿಯಾಗುವ ಕಡಲು ಉತ್ತರಾರ್ಧದಲ್ಲಿ ಕವಿಯ ಬೇಡಿಕೆಯಂತೆ ಅಸಮತೆಯನ್ನು ತೊಡೆಯುವ ಶಕ್ತಿಯಾಗುತ್ತದೆ ಉಕ್ಕಿ ಹರಿದ ಕಡಲಿನಲ್ಲಿ ಸಿರಿವಂತರ ಭವನಗಳೆಲ್ಲ ಮುಳುಗಿ ಬಡವರ ಗುಡಿಸಲುಗಳು ತೇಲುತ್ತವೆ. ಕೊನೆಗೆ 'ಸಾಮ್ಯವಾದದ ಬಂಡ' ಉಳಿಯುತ್ತದೆ ಅಥವಾ ಸ್ಥಾಪಿತವಾಗುತ್ತದೆ ಎಂಬಲ್ಲಿಗೆ ಕವನ ಮುಗಿಯುತ್ತದೆ. ಇಲ್ಲಿ ಕಡಲು ಜನಕ್ರಾಂತಿಯ ಸಂಕೇಶಿವಾಗಿ ಬಂದಿದೆ ಎನ್ನಿಸುತ್ತದೆ. ಹೀಗಾಗಿ "ಮೊರೆಯ ನಿಡು ಕಡಲೇ ಭೋರ್ಗರೆದು ನೊರೆಕಾರ್ದು ಮೊರೆಯನಿಡು ಕಡಲೇ" ಇತ್ಯಾದಿ ಸಾಲುಗಳನ್ನು ಓದಿದ ಓದುಗ ಕಡಲಿನ ಒಂದು ವಾಸ್ತವ ಚಿತ್ರ ಈ ಸಂಕಲನದಲ್ಲಿ ಎಲ್ಲಿಯಾದರೂ ಇರಬಹುದೇನೋ ಎಂದು ಹುಡುಕಾಡಿದರೆ ಮಾತ್ರ ನಿರಾಶನಾಗಿ ಉಳಿಯಬೇಕಾಗುತ್ತದೆ. ಇದು ಕವಿ ತುಂಬ ಬಹುದಾಗಿದ್ದ ಒಂದು ಕೊರತೆ ಅನ್ನಿಸಿದ್ದರಿಂದ ಈ ಮಾತು ಬಂದದೆ ಅಷ್ಟೆ.

ಉಳಿದ ಕವನಗಳಲ್ಲಿ 'ವಿಲಕ್ಷಣ ಸಾಹಸ' ಎನ್ನುವುದು ಮಾಯಕೊವ್‌ಸ್ಕಿಯ A strange adventnre"ದ ರೂಪಾಂತರ ಎಂದು ಕವಿಯೇ ಹೇಳಿಕೊಂಡಿದ್ದಾರೆ. ಸೂರ್ಯನಂತೆಯೆ ಕವಿ ಕೂಡ ಜಗತ್ತಿಗೆ ಬೆಳಕು ಕೊಡುವವನು ಎಂಬ ನಂಬಿಕೆ ಈ ಕವನದ ಬೆನ್ನಿಗಿದೆ. 'ಹಂಬಲು' ಕವಿಯ ವೈಯಕ್ತಿಕ ಹಂಬಲಗಳ ಕೆಲವು ಎಳೆಗಳನ್ನು ಚಿತ್ರಿಸಿದರೆ, 'ಸೀತೆಯ ಸಂತಸ' ವನವಾಸದಲ್ಲಿ ಸುಖಿಸುತ್ತಿರುವ ಸೀತೆಯ ಅನ್ನಿಸಿಕೆಗಳಲ್ಲಿ ಮೈ ಪಡೆದಿದೆ. 'ಮೃತ್ಯುಂಜಯ ಗಾಂಧಿ'ಯಲ್ಲಿ ಗಾಂಧಿಯನ್ನು ಕುರಿತ ಅದೇ ಹೆಸರಿನ ಖಂಡ ಕಾವ್ಯದ ಒಂದು ಭಾಗವನ್ನು ಆರಿಸಿ ಕೊಡಲಾಗಿದೆ.

ಒಟ್ಟಿನಲ್ಲಿ ಇಡೀ ಸಂಕಲನವನ್ನು ಗಮನಿಸಿವಾಗ ಪ್ರಗತಿಶೀಲ ಚಳುವಳಿಯ ಕಾಲದಲ್ಲಿ ಪ್ರಕಟವಾದ ಈ ಸಂಕಲನದಲ್ಲಿ ಆ ಸಾಹಿತ್ಯದಲ್ಲಿ ಕಂಡು ಬರುವ ಅನೇಕ ಲಕ್ಷಣಗಳು ಕಾಣಸಿಗುತ್ತವೆ, ದೇಶಭಕ್ತಿ, ಆವೇಶ, ರೋಷ, ಭಾವಾತಿರೇಕ, ಘೋಷಣೆಗಳೇ ತುಂಬಿದ ಕವನಗಳು, ಸಾಹಿತ್ಯ ಸಾಮಾಜಿಕ ಕ್ರಾಂತಿಯನ್ನು ಸಾಧಿಸುವ ಶಕ್ತಿ ಎಂಬ ನಂಬಿಕೆ, ಸಾಮ್ಯವಾದದ ಬಗ್ಗೆ ಅತಿಯಾದ ಮೋಹ, ಇತ್ಯಾದಿಗಳು ಇಲ್ಲಿಯ ಅನೇಕ ಕವನಗಳಲ್ಲಿ ಕಾಣಸುತ್ತವೆ. ಈ ಗುಂಪಿಗೆ ಸೇರದ ಕೆಲವು ಕವನಗಳೂ ಇವೆ. ಅವುಗಳಲ್ಲಿ ಕವಿಯ ವೈಯಕ್ತಿಕ ಹಂಬಲ, ತುಡಿತಗಳು ಮೈ ಪಡೆದಿವೆ. ಉ.ದಾ.ಗೆ ಹಂಬಲು, ಅಂದು ನಾವಾಡಿದ್ದು ಇತ್ಯಾದಿ. ಸೀತೆಯ ಸಂತಸ, ಕಾರ್ಗಾಲದ ಸೋನೆ, ಸ್ಥೈರ್ಯ, ಸಾಬೂನು, ಶಿಲಜಾ, ಇತ್ಯಾದಿಗಳನ್ನು ವಸ್ತು ವೈವಿಧ್ಯದ ದೃಷ್ಟಿಯಿಂದ ಗಮನಿಸ ಬಹುದಾಗಿದೆ.

ಕವಿ ತಮ್ಮ 'ಮೊದಲ ಮಾತು'ಗಳಲ್ಲಿ, "ನಾನು ಕವಿ ಹೌದೆ ಅಲ್ಲವೆ ಎಂಬುದು ನನಗಿನ್ನೂ ಖಾತ್ರಿಯಾಗಿಲ್ಲ. ಆದರೆ ಅಹುದೆನ್ನುವ ಭ್ರಾಂತಿ ಎಂದಿನಿಂದಲೋ ಕಾಡಿಸುತ್ತಿದೆ. ಹುಣ್ಣಿಮೆ, ಅಮವಾಸ್ಯೆ ಅದು ಅತಿರೇಕವಾಗುವ ಪರ್ವಕಾಲ..." ಇತ್ಯಾದಿ ಮಾತುಗಳನ್ನು ಹೇಳಿದ್ದಾರೆ. ಈ ಮಾತುಗಳ ಹಿನ್ನೆಲೆಯಲ್ಲಿ ಈ ಸಂಕಲನವನ್ನು ನೋಡಿದಾಗ, ವಸ್ತುವೈವಿಧ್ಯದಿಂದ ಸಮಾಜ, ದೇಶದ ಬಗೆಗಿನ ಪ್ರಾಮಾಣಿಕ ಕಾಳಜಿಗಳಿಂದ, ಪ್ರಗತಿಪರ ವಿಚಾರಗಳಿಂದ ಕೆಲವು ಕವನಗಳು ನಮ್ಮ ಗಮನ ಸೆಳೆದರೂ; ಇಲ್ಲಿಯ ಬಹಳಷ್ಟು ಕವನಗಳು ಸಾಂದರ್ಭಿಕ ನೆಲೆಯಲ್ಲಿ ರಚಿತವಾಗಿದ್ದು ಇಲ್ಲಿಯ ಸೈದ್ಧಾಂತಿಕ ತಿಳಿವು ಅಥವಾ ಸ್ಪಂತದ ಕ್ಷಣಗಳು ಅವುಗಳ ಅಂತಃಸತ್ವದ ಜೊತೆಗೆ ಸರ್ವಕಾಲಿಕವಾಗಿಸುವ ನಿಶ್ಚಿತ ಪ್ರಜ್ಞೆಯ ಕಾವ್ಯ ಕರ್ಮವಾಗಿಲ್ಲ ಎನ್ನಿಸುತ್ತಿದೆ. ಹೀಗಾಗಿ 'ಮೊದಲ ಮಾತು' ವಿನಯದ ಮಾತಾಗಿ ಕಂಡರೂ ಆರಂಭದಲ್ಲಿಯೇ ಓದುಗನಿಗೆ ಕವನಗಳ ಮಿತಿಯನ್ನು ಸೂಚಿಸುವಂತೆ ಕಾಣುತ್ತದೆ. ಆದರೆ ಈ ಕೃತಿ ಕವಿಯ ಆರಂಭಕಾಲದ ಬರಹವಾಗಿರುವುದರಿಂದ ಅನಂತರದ ಇವರ ಕಾವ್ಯಸೃಷ್ಟಿಯನ್ನು ಗಮನಿಸಿ ಈ ಮಾತುಗಳನ್ನು ನಿರ್ವಿಷ್ಟಗೊಳಿಸುವ ಅಗತ್ಯವಿದೆ.

---

೫೫. ವರ್ತಮಾನ ಕಾಲದ ನಾಲ್ವರು ಮಹಾನುಭಾವರು

— ಅಕ್ಕಮಹಾದೇವಿ

ನಾಲ್ವರು ಮಹಾನುಭಾವರ ವ್ಯಕ್ತಿ ಚಿತ್ರಗಳನ್ನು ಲೇಖಕರು ಈ ಪುಟ್ಟ ಪುಸ್ತಕದಲ್ಲಿ ಕೊಟ್ಟಿದ್ದಾರೆ. ಇದರಲ್ಲಿಯ ಮೂರು ಲೇಖನಗಳು 'ಟೈಮ್' ಸಾಪ್ತಾಹಿಕದ ಹಳೆಯ ಸಂಚಿಕೆಗಳ ಆಧಾರದಿಂದ ಬರೆದೂಥವು. ಬರ್ನಾಡ್ ಶಾನ ಜೀವನ ಚಿತ್ರವು ಪೆಂಗ್ವಿನ್ ಮಾಲೆಯವರು ಹೊರಡಿಸಿದ ಒಂದು ಕೆಟಲಾಗಿನ ಆಧಾರದಿಂದ ಮೂಡಿಬಂದಂಥದು.

ತಮ್ಮ ತಮ್ಮ ಕ್ಷೇತ್ರಗಳಲ್ಲಿ ನಿರುಪಮ ಸೇವೆಯನ್ನು ಸಲ್ಲಿಸಿದ ವ್ಯಕ್ತಿಗಳು ನಮ್ಮ ಜೀವನಕ್ಕೆ ದಾರಿದೀಪ ಆಗಬಲ್ಲರು. ಅಂಥ ಮಹನೀಯರ ಜೀವನ ಚರಿತ್ರೆಯಲ್ಲಿ ಆಸಕ್ತಿಕರವಾದ ಘಟನೆಗಳ ಜೊತೆಗೆ ಅನುಸರಣೀಯ ಘಟನೆಗಳೂ ಇರುತ್ತವೆ. ಇಂಥ ಲೇಖನಗಳು ನಮಗೆ ಅಗತ್ಯವಾಗಿ ಬೇಕು.

ಸ್ಟಾಪೋರ್ಡ್ ಕ್ರಿಪ್ಸ್.

ಬ್ರಿಟನ್ನಿನ ಅತ್ಯಂತ ಪ್ರಭಾವಶಾಲೀ ವ್ಯಕ್ತಿಗಳ ಪೈಕಿ ಕ್ರಿಪ್ಸ್ ಒಬ್ಬ. ಎರಡನೆಯ ಪ್ರಪಂಚ ಯುದ್ಧದ ಪರಿಣಾಮಗಳಿಂದ ಅನೇಕ ಸಂಕಷ್ಟಗಳಿಗೆ ಒಳಗಾಗಿದ್ದ ಬ್ರಿಟಿಷ್ ಸಾಮ್ರಾಜ್ಯಕ್ಕೆ ಆಶಾದೀಪವಾದ ಕ್ರಿಪ್ಸ್‌ನ ಕಥೆಯನ್ನು ಹರಿದಾಸ ಭಟ್ಟರು ಈ ಲೇಖನದಲ್ಲಿ ನಿರೂಪಿಸಿದ್ದಾರೆ.

ಕ್ರಿಪ್ಸ್ ನಮಗೆ ತಿಳಿದಿರುವುದು ವಿಫಲವಾದ ರಾಯಭಾರವೊಂದರ ನಾಯಕನಾಗಿ ಮಾತ್ರ. "ಇಂಡಿಯಾಕ್ಕೆ ದೂತನಾಗಿ ಹೋದಾಗ ಅಯಶಸ್ವಿಯಾದುದು ಅವನ ತಪ್ಪಲ್ಲ; ಅವನ ಕೈಯನ್ನು ಕಟ್ಟಿದ ಚರ್ಚಿಲ್ಲನ ಟೋರೀ ಸರ್ಕಾರದ ತಪ್ಪು" ಎನ್ನುತ್ತಾರೆ ಲೇಖಕರು.

ಆದರೆ ಅವನ ಜೀವನವೆಲ್ಲ ಅನೇಕ ವಿಜಯಗಳ ಮಾಲೆಯಾಗಿದೆ. ಕ್ರಿಪ್ಸ್ ವಂಶದ ಒಂಬತ್ತು ತಲೆಮಾರುಗಳವರು ಪಾರ್ಲಿಮೆಂಟ್ ಸದಸ್ಯರಾಗಿ ಹಾಗೂ ಲಾಯರ್‌ಗಳಾಗಿ ಇದ್ದರು. ಎಳೆ ವಯಸ್ಸಿನಲ್ಲಿ ಕ್ರಿಪ್ಸ್ ವಿಜ್ಞಾನದೆಡೆಗೆ ತಿರುಗಿದರೂ ವಂಶಗುಣ ಅವನನ್ನು ಬಿಡಲಿಲ್ಲ. ಸಾರ್ವಜನಿಕ ರಂಗಕ್ಕೆ ಇಳಿದ ಮೇಲೆ ಅಚಿರ ಕಾಲದಲ್ಲೇ ಅವನಿಗೆ ಯಶಸ್ಸು ಲಭಿಸಿತು. ಅವನ ಭಾಷಣ ಕೇಳಿದ ಮತದಾರನೊಬ್ಬ "ಇವನ ಮಾತಿನ ಮೇಲಿಂದ ಗೆಳೆಯರಿಗೆ ಹೇಳುವುದಕ್ಕೆ ನಾಲ್ಕು ವಿಷಯ ಸಿಕ್ಕಂತಾಯಿತು" ಎಂದನಂತೆ. ಕಾನೂನು ಕ್ಷೇತ್ರದಲ್ಲೂ ಕ್ರಿಪ್ಸ್‌ಗೆ ಮಹತ್ವದ ಯಶಸ್ಸು ಲಭಿಸಿತು. 1920ರ ಸುಮಾರಿಗೆ ಇವನ ವಾರ್ಷಿಕ ಆದಾಯ ಒಂದೂವರೆ ಲಕ್ಷ ಪೌಂಡಿಗೆ ಮೀರಿತ್ತು.

ಮಾಸ್ಕೋಕ್ಕೆ ರಾಯಭಾರಿಯಾಗಿ ಹೋದಾಗ ಕ್ರಿಪ್ಸ್ ಗಳಿಸಿದ ಯಶಸ್ಸು ಗಮನಾರ್ಹವಾದುದು. ಆಂಗ್ಲೋ–ರಶ್ಯನ್ ಒಪ್ಪಂದವನ್ನು ಕಾರ್ಯರೂಪಕ್ಕೆ ತಂದದ್ದು ಅವನ ರಾಜಕೀಯ ಚಾತುರ್ಯಕ್ಕೆ ನಿದರ್ಶನ. ಕಾಮನ್ಸ್ ಸಭೆಯ ಮುಖಂಡನಾಗಿ, ವಿಮಾನ ಸೃಷ್ಟಿಯ ಮಂತ್ರಿಯಾಗಿ, ಆರ್ಥಿಕ ವಿಭಾಗದ ಸರ್ವಾಧಿಕಾರಿಯಾಗಿ ಕ್ರಿಪ್ಸ್ ಸಲ್ಲಿಸಿದ ಸೇವೆ ಪ್ರಶಂಸಾರ್ಹವಾಗಿದೆ.

ಆಂದ್ರೆ ಗ್ರೋಮಿಕೊ:

1909ರಲ್ಲಿ ಹುಟ್ಟಿದ ಗ್ರೊಮಿಕೊ ತನ್ನ ಮೂವತ್ತನೆಯ ವಯಸ್ಸಿನಿಂದಲೇ(1939) ಹೊರದೇಶಗಳಿಗೆ ಪರಿಚಿತನಾಗಿದ್ದಾನೆ.1939ರಲ್ಲಿ ಆತ ವಾಶಿಂಗ್‌ಟನ್ನಿನ ಸೋವಿಯತ್ ರಾಯಭಾರಿ ಖಾತೆಗೆ ಸೇರಿದ. ಅನಂತರ ವಿಶ್ವಸಂಸ್ಥೆಯ ಭದ್ರತಾಮಂಡಳಿಯಲ್ಲಿ ರಶ್ಯಾದ ಶಾಶ್ವತ ಪ್ರತಿನಿಧಿಯಾದ. ಆ ಹುದ್ದೆಯಲ್ಲಿ ಅವನು ಯಶಸ್ವಿಯಾದ. "ಗ್ರೋಮಿಕೊ ಒಂದು ಹೊಸ ಬಗೆಯ ರಾಜನೀತಿಜ್ಞ ಮಾತ್ರವಲ್ಲ, ನವನೂತನವಾದ ಮಾನವಕುಲವೊಂದರ ಪ್ರತಿನಿಧಿ" ಎಂದು ವಿಶ್ವಸಂಸ್ಥೆಯ ರಾಜನೀತಿಜ್ಞರು ಭಾವಿಸುತ್ತಿದ್ದರು.

ರಶ್ಯದಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಾಬಲ್ಯಕ್ಕೆ ಬಂದು 1917ರಲ್ಲಿ ಅಧಿಕಾರಕ್ಕೇರಿದಾಗ ಗ್ರೋಮಿಕೊ ಎಂಟು ವರ್ಷದ ಬಾಲಕ. ಅದರ ಜೊತೆಜೊತೆಯಲ್ಲೇ ಬೆಳೆಯುತ್ತಾ ಬಂದ ಗ್ರೋಮಿಕೊ ಪ್ರಪಂಚದ ಅಗ್ರಶ್ರೇಣಿ

ರಾಜಕಾರಣಿಗಳಲ್ಲಿ ಒಬ್ಬನೆಂದು ಹೆಸರು ಗಳಿಸಿದ್ದಾನೆ. ಈತ ಒಂದು ದಶಕದಲ್ಲೇ ತನ್ನ ಕಾರ್ಯಗಳಿಂದ ಹೇಗೆ ಅಭಿವೃದ್ಧಿ ಹೊಂದಿದ ಎಂಬುದನ್ನು ಈ ಲೇಖನ ತಿಳಿಸಿಕೊಡುತ್ತದೆ.

ಜಾರ್ಜ್ ಬರ್ನಾಡ್ ಶಾ:

ಈತ 1856ರಲ್ಲಿ ಡಬ್ಲಿನ್‌ನಲ್ಲಿ ಹುಟ್ಟಿದ. ಈತನ ತಂದೆ ಜಾರ್ಜ್ ಕಾರ್ರ್ ಶಾ. ತಾಯಿ ಎಲಿಜಬೆತ್. ಶಾಲೆಯಲ್ಲಿ ಶಾ ಅಂಥ ಪ್ರತಿಭಾವಂತನೇನೂ ಆಗಿರಲಿಲ್ಲ. ಇಂಥ ವ್ಯಕ್ತಿ ಮುಂದೆ ಸಾಹಿತ್ಯ ಕ್ಷೇತ್ರದಲ್ಲಿ ಹೇಗೆ ಮುಂದುವರಿದ ಎಂಬುದನ್ನು ಲೇಖಕರು ಈ ಲೇಖನದಲ್ಲಿ ಹೇಳಿದ್ದಾರೆ. ಶಾನ ಮಹೋನ್ನತ ವ್ಯಕ್ತಿತ್ವದ ಹಲವು ಮುಖಗಳನ್ನು ಸೊಗಸಾಗಿ ನಿರೂಪಿಸಿದ್ದಾರೆ. ಶಾನ ಸಾಮಾನ್ಯ ಜೀವನದ ಸೂಕ್ಷ್ಮ ವಿಚಾರಗಳಿಂದ ಹಿಡಿದು ಸಾಹಿತ್ಯ ಜೀವನದ ಸಾಧನೆಗಳವರೆಗಿನ ಅನೇಕ ರೀತಿಯ ವಿವರಣೆಗಳು ಇಲ್ಲಿವೆ. ಬಾಪೂಜಿ ಹತರಾದಾಗ ಶಾನಾ ಬಾಯಿಂದ "ಅಬ್ಬಾ ! ಮಹಾತ್ಮನಾಗಿರುವುದು ಎಂಥ ಅಪಾಯ !" ಎಂಬ ಉದ್ಗಾರ ಹೊಮ್ಮಿತಂತೆ !

ಹರಿದಾಸ ಭಟ್ಟರು ಶಾನನ್ನು ಕುರಿತು ಬರೆಯುವ ಹೊತ್ತಿಗೆ ಅವನಿಗೆ 93 ವರ್ಷ ವಯಸ್ಸಾಗಿತ್ತು. ಇಂಥ ಜ್ಞಾನ ವೃದ್ಧನ ಬಗೆಗೆ "ಎಂತೆಂತಹ ಪ್ರತಿಭಾವಂತರೂ ಕೊನೆಗಾಲ ಸಮೀಪಿಸಿದ ಹಾಗೆ ಎಡವಿ ಬೀಳುವುದುಂಟು. ಬೆಳಕು ಮಸುಕಾಗುವುದುಂಟು. ಕಾಲಪುರುಷನ ಮೌನಲೀಲೆಯಿಂದ ಸಾಣೆ ಹಿಡಿದ ಕತ್ತಿಗೂ ತುಕ್ಕು ಹಿಡಿದೀತು. ಆದರೆ ಶಾ ಇಂಥ ಸಾರ್ವಕಾಲಿಕ ತತ್ವಗಳಿಗೊಂದು ಅಪವಾದ" ಎಂದಿದ್ದಾರೆ ಭಟ್ಟರು.

ಆಲ್ಬರ್ಟ್ ಐನ್‌ಸ್ಟೀನ್;

ಆಧುನಿಕ ಪ್ರಪಂಚದ ಮಹತ್ವದ ಬದಲಾವಣೆಗಳಿಗೆ ಕಾರಣಕರ್ತರಾದ ಮಹನೀಯರಲ್ಲಿ ಐನ್‌ಸ್ಟೀನ್ ಒಬ್ಬ. ಆತನನ್ನು ಕುರಿತು "ಇಪ್ಪತ್ತನೆಯ ಶತಮಾನ ಯಾಂತ್ರಿಕ ಯುಗವಾದ್ದರಿಂದ ಅಂಥ ಏಕೈಕ ಪ್ರತಿಭಾವಂತ ವೈಜ್ಞಾನಿಕ ಕ್ಷೇತ್ರದಲ್ಲೇ ಪ್ರಾದುರ್ಭವಿಸಿದುದು ಸಹಜವೇ ಆಗಿದೆ" ಎಂದಿದ್ದಾರೆ ಲೇಖಕರು.

ಅಣುಬಾಂಬನ್ನು ಕುರಿತಂತೆ ಐನ್‌ಸ್ಟೀನ್ ನೇರವಾಗಿ ಪ್ರಯೋಗ ನಡೆಸದಿದ್ದರೂ ಒಂದು ವಿಧದಲ್ಲಿ ಅವನೇ ಅದಕ್ಕೆ ಮೂಲ ಕಾರಣವೆನ್ನಬೇಕು. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಬಾಂಬಿನ ಪ್ರಯೋಗ ಆರಂಭವಾಗಲು ಅವನ ಪ್ರೋತ್ಸಾಹವೇ ಕಾರಣ. ಐನ್‌ಸ್ಟೀನ್ ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಶಾಲಿ ವ್ಯಕ್ತಿ.

ವಿಜ್ಞಾನಿಗಳು ನ್ಯೂಟನ್ನನ ತತ್ತ್ವ ಸರ್ವಶಕ್ತವೆಂದು ನಂಬಿದ್ದರು. ಐನ್‌ಸ್ಟೀನ್ 'ವಿಶೇಷ ಸಾಪೇಕ್ಷತಾ ಸಿದ್ಧಾಂತ'' ಎಂಬ ಪುಸ್ತಕದಲ್ಲಿ (1905 ರಲ್ಲಿ) ನ್ಯೂಟನ್ನನ ಸ್ವತಂತ್ರ ಗಾತ್ರ ಮತ್ತು ಬಲದ ಕಲ್ಪನೆಯನ್ನು ವರ್ಜಿಸಿದ. ಗಣಿತರೀತ್ಯಾ ಈತ ಮುಂದುವರಿಸಿದ ಶೋಧದಿಂದ ಆಶ್ಚರ್ಯಕರವಾದ ಪರಿಣಾಮಗಳಾದವು. ಮೊದಮೊದಲು ಐನ್‌ಸ್ಟೀನ್‌ನ ವಾದವನ್ನು ಯಾರೂ ಒಪ್ಪಲಿಲ್ಲ. 1915ರಲ್ಲಿ ಅವನು 'ಸಾಮಾನ್ಯ ಸಾಪೇಕ್ಷತಾ ವಾದ' ವನ್ನು ಪ್ರಚುರಪಡಿಸಿದ. ಇದರಿಂದ ಅಚಿರ ಕಾಲದಲ್ಲೇ ಪ್ರಪಂಚದ ಅತ್ಯಂತ ಪ್ರಸಿದ್ಧ ವಿಜ್ಞಾನಿಯಾದ. ಇಂಥ ವ್ಯಕ್ತಿಯ ಸರಳ ವ್ಯಕ್ತಿತ್ವ, ಗಂಭೀರ ಯೋಚನಾ ಸರಣಿ ಇವೆರೆಡರ ಸಂಕೀರ್ಣತೆಯನ್ನು ಈ ಲೇಖನದಲ್ಲಿ ಆಸಕ್ತಿಕರವಾಗಿ ನಿರೂಪಿಸಿದ್ದಾರೆ.

ಮಹಾನುಭಾವರ ಜೀವನ, ವ್ಯಕ್ತಿತ್ವ ಮತ್ತು ಸಾಧನೆ ಯಾವಾಗಲೂ ಆಸಕ್ತಿಕರವಾಗಿಯೇ ಇರುತ್ತವೆ. ಒಂದೊಂದು ಮಹತ್ವದ ಸಾಧನೆಯ ಹಿಂದೆ ನಿರಂತರ ಕೃಷಿ, ಯೋಚನೆ, ಯೋಜನೆ ಇರುತ್ತವೆ. ಇಪ್ಪತ್ತನೆಯ ಶತಮಾನದ ನಾಲ್ವರು ಮಹಾನುಭಾವರ ಜೀವನಗಳನ್ನು ಕು. ಶಿ. ಹರಿದಾಸ ಭಟ್ಟರು ಸರಳ ಸುಂದರವಾಗಿ ನಿರೂಪಿಸಿದ್ದಾರೆ.

ಮನೆಯ ಹೊರಗಿನ ಮಹಾನುಜೀವಿಗಳು

ವ್ಯಕ್ತಿ ಚಿತ್ರಗಳನ್ನೊಳಗೊಂಡ ಇನ್ನೊಂದು ಚಿಕ್ಕ ಪುಸ್ತಕವಿದು. "ನಮ್ಮೀ ದುಃಖದ ಪ್ರಪಂಚದಲ್ಲಿ ಒಬ್ಬ ಮಹಾತ್ಮನಿದ್ದಾನೆ. " ಎಂದು ಐನ್‌ಸ್ಟೀನ್ ಹೇಳಿದ ಹಾಗೆ ಮಹಾತ್ಮರು ನಮ್ಮ ಜೀವನದಲ್ಲಿ ಆಸೆಯನ್ನೂ ಭರವಸೆಯನ್ನೂ ಆಸಕ್ತಿಯನ್ನೂ ತುಂಬುತ್ತಾರೆ.

ಆಲ್ಬರ್ಟ್ ಶ್ವಯಿಟ್ಸರ್:

ಐನ್‌ಸ್ಟೀನ್‌ನ ಮಾತುಗಳಿಗೆ ಸೂಕ್ತ ನಿದರ್ಶನವಾಗಿ ಶ್ವಯಿಟ್ಸರ್ ಇದ್ದಾನೆ. ಪ್ರಾಧ್ಯಾಪಕತನವನ್ನೂ ಸಾಹಿತ್ಯಕ ಕಾರ್ಯಗಳನ್ನೂ ಆರ್ಗನ್ ವಾದನವನ್ನೂ ಬಿಟ್ಟು ಆಫ್ರಿಕಾಖಂಡಕ್ಕೆ ವೈದ್ಯನಾಗಿ ಹೋದ ಈ ವಿನಯಶೀಲ ವ್ಯಕ್ತಿ "ಮದ್ದಿನ ವಿಷಯದಲ್ಲಿ ಮಾತ್ರ ಡಾಕ್ಟರಲ್ಲ, ತತ್ವಶಾಸ್ತ್ರದಲ್ಲಿಯೂ ಡಾಕ್ಟರ್, ಧರ್ಮಶಾಸ್ತ್ರದಲ್ಲಿಯೂ ಡಾಕ್ಟರ್, ಸಂಗೀತದಲ್ಲಿಯೂ ಡಾಕ್ಟರ್! ಇಂತು ನಾಲ್ಕು ಬಗೆಯ ಪಾಂಡಿತ್ಯವನ್ನು ಸಂಪಾದಿಸಿಯೂ ಅದರ ಭಾರದಿಂದ ಕುಗ್ಗದೆ ಮೋಡದಲ್ಲಿ ತೇಲುವ ಮಹಾಜೀವ ಆಲ್ಬರ್ಟ್ ಶ್ವಯಿಟ್ಸರ."

ಇಪ್ಪತ್ತೊಂದನೆಯ ವಯಸ್ಸಿನಿಂದ ಒಂಬತ್ತು ವರ್ಷಗಳ ಕಾಲ ವಿಜ್ಞಾನ, ಕಲೆ ಇವುಗಳ ಸೇವೆಯಲ್ಲಿ ಕಳೆಯುವುದೆಂದೂ, ಅನಂತರ ಮಾನವತೆಯ ಸೇವೆಯಲ್ಲಿ ದುಡಿಯಬೇಕೆಂದೂ ಆಲ್ಬರ್ಟ್ ತೆಗೆದುಕೊಂಡ ನಿಶ್ಚಯ ನಿರ್ಣಯ ಸರ್ವರಿಂದಲೂ ಪ್ರಶಂಸೆಗೆ ಒಳಗಾಗಬೇಕಾದಂಥದು. ಆರ್ಗನ್ ವಾದದ ಕಚೇರಿಗಳಿಂದಲೇ ಆತ ಹೇರಳ ಧನಾರ್ಜನೆ ಮಾಡಬಹುದಿತ್ತು. ಆದರೆ ಹಾಯಾಗಿರುವುದನ್ನು ಬಿಟ್ಟು ಕಗ್ಗಾಡಿನಲ್ಲಿ ದೇಹ ದಂಡಿಸಬೇಕಾದ ಆತನ ಮನೋಧಾರ್ಢ್ಯ ಅದೆಂಥಾದ್ದೊ! ನೋವು ಕಳೆಯುವುದು, ನೋವಿನಲ್ಲಿ ಪಾಲುಗಾರರಾಗುವುದು ಮಾನವನ ಕರ್ತವ್ಯವೆಂದು ಅವನು ಭಾವಿಸಿದ್ದ "ಕರುಣೆಯೇ ನೀತಿ ಅದೇ ಧರ್ಮ" ಎಂಬುದು ಅವನ ತತ್ವಶಾಸ್ತ್ರದ ಒಳಗುಟ್ಟು. "ಇಂಥ ಮಹಾತ್ಮನ ಬೆಲೆಯನ್ನು ಲೋಕ ತಿಳಿದುಕೊಂಡಿದೆಯಲ್ಲ ಎಂಬುದೊಂದೇ ಈ ದುಃಖದ ಮುಗಿಲಿನಲ್ಲಿ ಕಾಣುವ ಬೆಳ್ಳಿಯಂಚು" ಎನ್ನುತ್ತಾರೆ ಲೇಖಕರು.

ಒಪ್ಪೆನ್ ಹೀಮರ್:

ಪ್ರಕೃತ ಪುಸ್ತಕದಲ್ಲಿ ಸ್ಥಾನ ಪಡೆದ ಮಹಾವಿಜ್ಞಾನಿ ಒಪ್ಪೆನ್ ಹೀಮರ್. ಈತ ಅಮೇರಿಕ ಭೌತವಿಜ್ಞಾನ ಸಂಘದ ಅಧ್ಯಕ್ಷ. ಅಣುಬಾಂಬಿನ ಶೋಧನಾ ಸಮಿತಿಯ ನಿರ್ದೇಶಕ. ವಿಜ್ಞಾನದಲ್ಲಿ ಹೀಮರನಿಗೆ ಅಭಿರುಚಿ ಉಂಟಾದುದು ಒಂದು ವಿಶೇಷ ಘಟನೆಯಿಂದಾಗಿ. ಆಗ ಸ್ಟಸ್‌ಕ್ಲೊಕ್ ಈತನಿಗೆ ಪ್ರಯೋಗ ಶಾಲೆ ದೀಕ್ಷೆ ಕೊಡಿಸಿದ. ಹೀಮರ್ ಐದು ವರ್ಷದವನಿದ್ದಾಗ ಇವನ ತಾತ ಜರ್ಮನಿಯಲ್ಲಿ ಇವನಿಗೊಂದು ಖನಿಜ ತುಂಬಿದ್ದ ಪೆಟ್ಟಿಗೆಯನ್ನು ಉಡುಗೊರೆಯಿತ್ತನಂತೆ! ಮುಂದೆ ಖನಿಜ ಶಿಲೆಗಳನ್ನು ಹುಡುಕಿ ಹುಡುಕಿ ಕಾಲ ಕ್ರಮೇಣ ಈತನ ಭವನದಲ್ಲಿ ಪರದೇಶದ ಖನಿಜಗಳು ರಾಶಿ ಬಿದ್ದವಂತೆ!

ವಿದ್ಯಾರ್ಥಿ ಜೀವನದಿಂದಲೂ ಹೀಮರನಿಗೆ ಸಾಹಿತ್ಯಾಭಿಮಾನವಿತ್ತು. ಈತ ಸಂಸ್ಕೃತವನ್ನು ಎಂಟನೆಯ ಭಾಷೆಯಾಗಿ ಕಲಿತನಂತೆ! ಹಿಂದೂ ಪುರಾಣಗಳನ್ನು ಓದುತ್ತಿದ್ದನಂತೆ! ಇವನ ಅಧ್ಯಯನ ಕೊಠಡಿಯಲ್ಲಿ ಭಗವದ್ಗೀತೆಗೆ ಉನ್ನತ ಸ್ಥಾನವಿತ್ತೆಂದು ತಿಳಿಯುತ್ತದೆ.

ಸಾಮಾನ್ಯ ಜನಕ್ಕೆ ಒಪ್ಪೆನ್ ಹೀಮರ್ ಎಂದರೆ ಅಣುಬಾಂಬಿನ ಹಿರಿಹುದ್ದರಿ ಎಂದೇ ಮೊದಲು ನೆನಪಿಗೆ ಬರುತ್ತಾನೆ. ತಾವು ಶೋಧಿಸಿದ ಶಸ್ತ್ರ ಆಧುನಿಕ ಸಮರ ವಿಧಾನದ ಅಸುರೀ ವೃತ್ತಿಯನ್ನು ಬಯಲಿಗೆಳೆದದ್ದು, ಭೌತವಿಜ್ಞಾನಿಗಳಿಗೆ ನೀಚತಮ ಪಾಪದ ಪರಿಚಯವಾಗಿರುವುದು ಇವನಿಗೆ ವ್ಯಥೆಯನ್ನು ನೀಡಿತ್ತು. ಟೈಮ್ ಪತ್ರಿಕೆಯ ಲೇಖನವೊಂದರ ಆಧಾರದಿಂದ ಇಂಥ ಮಹಾನ್ ವ್ಯಕ್ತಿಯ ಬಹುಮುಖ ಪರಿಚಯವನ್ನು ಲೇಖಕರು ನೀಡಿದ್ದಾರೆ.

ವಿನ್‌ಸ್ಟನ್ ಚರ್ಚಿಲ್:

ಪ್ರಪಂಚದಾದ್ಯಂತ ಪ್ರಖ್ಯಾತರಾದ ರಾಜಕಾರಣಿಗಳಲ್ಲಿ ಚರ್ಚಿಲ್ ಒಬ್ಬ. ಈತನ ವ್ಯಕ್ತಿತ್ವವನ್ನು ಚೆನ್ನಾಗಿ ತಿಳಿಸಬಲ್ಲ ವಾಕ್ಯಗಳಿವು. "ಚರ್ಚಿಲರಲ್ಲಿ ಶ್ರೀಮಂತಿಕೆಯ ಗರ್ವ ಸರ್ವಾಧಿಕಾರದ ಆಡಂಬರವೂ, ಪ್ರಜಾ

ತಂತ್ರದ ಔದಾರ್ಯವೂ ಒಟ್ಟಾಗಿ ಸೇರಿಕೊಂಡಿವೆ. ಜ್ಞಾನವೂ ಉಂಟು. ಅರೆ ಮರಳುತನವೂ ಉಂಟು. ಆವೇಗದ ಅತಿರೇಕ ಒಮ್ಮೆ, ಶಾಂತ ನಿರೀಕ್ಷೆಯ ಅಭ್ಯಾಸಬಲ ಇನ್ನೊಮ್ಮೆ. ಒಮ್ಮೆ ಚಾಣಕ್ಯ ನೀತಿ, ಇನ್ನೊಮ್ಮೆ ಅಪಾರವಾದ ಮುತ್ಸದ್ದಿತನ"

ಎರಡನೆಯ ಪ್ರಪಂಚ ಯುದ್ಧಕ್ಕೆ ಮೊದಲು ಚರ್ಚಿಲ್ ಜನಪ್ರಿಯ ವ್ಯಕ್ತಿಯಾಗಿರಲಿಲ್ಲ. ಎಲ್ಲರನ್ನೂ ಹರಿತವಾದ ನಾಲಗೆ ಎಂಬ ಕತ್ತಿಯಿಂದ ಕೊಯ್ದು ನೋಯಿಸಿದ್ದ. ಈತನಿಗೆ 'ಉಪದ್ರವಿ' ಎಂಬ ಅಡ್ಡ ಹೆಸರಿತ್ತು. ಯುದ್ಧದ ಸಂಕಷ್ಟ ಕಾಲದಲ್ಲಿ ರಾಷ್ಟ್ರ ಈ ಯುದ್ಧ ವೀರನನ್ನು ಪಟ್ಟದಲ್ಲಿ ಕುಳ್ಳಿರಿಸಿತು. ಚರ್ಚಿಲನ ವೈಭವಯುತ ಜೀವನ ಕ್ರಮದ ಬಗ್ಗೆ ಅತಿಶಯೋಕ್ತಿಯಿಂದ ಕೂಡಿದ ಐತಿಹ್ಯಗಳಿವೆ.

ಕೆಲವು ಮಹಾನ್ ವ್ಯಕ್ತಿಗಳನ್ನು ಕುರಿತ ಇಂತಹ ಐತಿಹ್ಯಗಳನ್ನು ಮಾತ್ರವಲ್ಲದೆ ಅವರ ಅನುಭವಗಳನ್ನೂ ಸಾಧನೆಗಳನ್ನೂ ಕುರಿತು ಕು.ಶಿ. ಹರಿದಾಸ ಭಟ್ಟರು ಸೊಗಸಾಗಿ ಬರೆದಿದ್ದಾರೆ.

---

೬. ಕನ್ನಡ ಕಟ್ಟಿದವರು

— ಎಂ. ಎನ್. ಸುಮಿತ್ರಾ

ಪುಸ್ತಕದ ಹೆಸರೇ ಸೂಚಿಸಿ ಬಿಟ್ಟಿದೆ ಒಳಗಿರುವ ಹೂರಣ ಏನು ಅನ್ನುವುದನ್ನು. ಕನ್ನಡಕ್ಕಾಗಿ ಬಾಳಿದ ದುಡಿದ ಮಾಸ್ತಿ, ಡಿ. ವಿ. ಜಿ., ಬೇಂದ್ರೆ, ಕುವೆಂಪು. ಶಂಬಾ ಜೋಶಿ, ಪಿ. ಸೀ., ಶಿವರಾಮ ಕಾರಂತ, ಅನಕೃರ ಬಗ್ಗೆ ಲೇಖನಗಳಿವೆ. ಇವರೆಲ್ಲಾ ಕನ್ನಡದ ಧುರೀಣರು. ಕನ್ನಡಕ್ಕಾಗಿ ತನು, ಮನ, ಧನಗಳನ್ನು ತೇಯ್ದವರು.

ಮಾಸ್ತಿಯವರು ಕನ್ನಡದ ಆಸ್ತಿ, ಕನ್ನಡಕ್ಕಾಗಿ ಅವರು ಬಿಟ್ಟ ಸಾಹಿತ್ಯ ಆಸ್ತಿ ಅಮೂಲ್ಯ. ವಿಶ್ವವಿದ್ಯಾಲಯದ ಪದವಿಯ ಜೊತೆಗೆ ಜೀವನ ವಿಶ್ವವಿದ್ಯಾಲಯದಲ್ಲೂ ಪದವಿ ಪಡೆದುಕೊಂಡಿದ್ದವರು ಅವರು. ಅವರ ಸಾಹಿತ್ಯದಲ್ಲಿ ನಾವಿದನ್ನು ಕಾಣಬಹುದು. ನಮ್ಮ ಸುತ್ತ ಮುತ್ತ ಕಾಣ ಬರುವ ನೋವು – ನಲಿವು, ಕರುಣೆ – ಕಾಠಿಣ್ಯ, ಸ್ನೇಹ – ವೈರ, ಪ್ರೀತಿ – ದ್ವೇಷಗಳ ಮಾರ್ಮಿಕ ಚಿತ್ರಗಳನ್ನು ಮಾಸ್ತಿ ತಮ್ಮ ಸರಳವಾದರೂ ಮನೋಜ್ಞ ಶೈಲಿಯಲ್ಲಿ ಹೇಳಿದ್ದಾರೆ. ಚಿಕವೀರರಾಜೇಂದ್ರ ಕಾದಂಬರಿ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟಿತು. ಮಾಸ್ತಿಯವರು ಈಗಿಲ್ಲ. ಆದರೆ ಹರಿದಾಸ ಭಟ್ಟರು ಅವರ ವ್ಯಕ್ತಿತ್ವದ, ಬಹುಮುಖ ಪ್ರತಿಭೆಯ ಸಾಹಿತ್ಯ ಸೇವೆಯ ಅಂತಃ ಸತ್ವವನ್ನು ಸೆರೆಹಿಡಿದಿದ್ದಾರೆ.

'ಜ್ಞಾನ ಯೋಗಿ, ಕರ್ಮಯೋಗಿ' ಡಿ. ವಿ. ಜಿ. "ನಿನ್ನೆ – ಇಂದು – ನಾಳೆಗಳ ಸಮನ್ವಯ ಮಾಡಿಕೊಳ್ಳಬಲ್ಲ ಡಿ.ವಿ.ಜಿ. ವ್ಯಕ್ತಿತ್ವದ ಹರವು ಆಳಕ್ಕೆ ನಾಡಿನಲ್ಲಿಯೇ ಬೇರೆ ಉಪಮಾನವಿಲ್ಲ –" ಎಂದಿದ್ದಾರೆ ಲೇಖಕರು. ಎಷ್ಟು ಸತ್ಯವಾದ ಮಾತು! ತತ್ವಜ್ಞಾನಿ ಡಿ. ವಿ. ಜಿ. ರಚಿಸಿರುವ 'ಮಂಕುತಿಮ್ಮನ ಕಗ್ಗ' ಬದುಕಿನಾಳದಲ್ಲಿ ಮುಳುಗಿ ಆಯ್ದು ತಂದಿರುವ ಮುತ್ತು ರತ್ನಗಳಂತಿವೆ. ಪುಸ್ತಕವನ್ನು ಎಷ್ಟು ಸಲ ಓದಿದರೂ ಪದ್ಯಗಳಿಗೆ ಹೊಸ ಹೊಸ ಅರ್ಥಗಳು ನಮಗೆ ಸ್ಫುರಿಸುತ್ತವೆ. 'ಉಮರನ ಒಸಗೆ' ಭಾಷಾಂತರ ಕೃತಿ, "ಜೀವನ ದೇವರು ಕೊಟ್ಟ ವರ; ಜೀವನವನ್ನು ಅಂದಗೊಳಿಸುವುದೇ ನಾವು ದೇವರಿಗೆ ಸಲ್ಲಿಸುವ ಕೃತಜ್ಞತೆ –" ಎಂದಿರುವ ಡಿ. ವಿ. ಜಿ. ಹಾಗೆಯೇ ಬಾಳಲೆತ್ನಿಸಿದವರು. ಅವರ ಸಾಹಿತ್ಯ, ವ್ಯಕ್ತಿತ್ವ, ಸಾರ್ವಜನಿಕ ಸೇವೆ ಎಲ್ಲದರ ಪ್ರಸ್ತಾಪವನ್ನು ಲೇಖಕರು ಈ ಪುಟ್ಟ ಲೇಖನದಲ್ಲಿ ಸಮರ್ಪಕವಾಗಿ ಮಾಡಿದ್ದಾರೆ.

"ಎಷ್ಟೇ ಕಷ್ಟವಾದರೂ ಕರೆದಲ್ಲಿಗೆ ಹೋಗಿ ಕನ್ನಡದ ಸಂದೇಶವನ್ನು ಬೀರಿದ ಬೇಂದ್ರೆ ಕನ್ನಡಿಗರ ಹೃದಯ ಸಿಂಹಾಸನದ ಸಿದ್ಧಾರೂಢರು" – ಜ್ಞಾನಪೀಠ ಪ್ರಶಸ್ತಿ ವಿಜೇತ ಬೇಂದ್ರೆಯವರ ಬಗ್ಗೆ ಹರಿದಾಸ ಭಟ್ಟರ ಮಾತಿದು. ಸರಳ, ನಿರಾಡಂಬರ ಜೀವಿ ಬೇಂದ್ರೆ, ಬಡತನದ ಬೆಂಕಿಯಲ್ಲಿ ಕರಗಿ ಅಪ್ಪಟ ಚಿನ್ನವಾದ ವ್ಯಕ್ತಿತ್ವ ಅವರದು. ಸಾಹಿತ್ಯ ಒಂದೇ ಅವರ ಆಸಕ್ತಿಯ ಕೇಂದ್ರವಾಗಿರಲಿಲ್ಲ. ವಿಜ್ಞಾನ, ಆಧ್ಯಾತ್ಮಗಳೂ ಅವರ ಗಮನ ಸೆಳೆದಿದ್ದವು. 'ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ' ಬರೆದ ಕೈ 'ವಿಶ್ವಧಾರಣ ಸೂತ್ರ'ವನ್ನೂ ಬರೆಯಿತು. 'ಪದ ಇಲ್ದೆ ಹದ ಇಲ್ಲ' ಎನ್ನುವುದರ ಮರ್ಮ ತಿಳಿದಿದ್ದ ಬೇಂದ್ರೆ ಬರೆದುದು ಅಣಿಮುತ್ತಾಗದೆ ಮತ್ತೇನಾಗಲು ಸಾಧ್ಯ? ಇವರಿಗೆ ಜ್ಞಾನಪೀಠ ಪ್ರಶಸ್ತಿ ಬರಮಾಡಿಕೊಟ್ಟ ಕೃತಿ 'ನಾಕು ತಂತಿ' ಈ ಜಿಜ್ಞಾಸುವಿ. ಪರಿಚಯವನ್ನು ಲೇಖಕರು ಉನ್ನತೋನ್ನತ ಪದಗಳನ್ನು ಬಳಸಿ ಯುಕ್ತ ರೀತಿಯಲ್ಲಿ ಮಾಡಿಕೊಟ್ಟಿದ್ದಾರೆ.

ರಾಷ್ಟ್ರಕವಿ ಕುವೆಂಪುರವರನ್ನು ಲೇಖಕರು ವರ್ಣಿಸಿರುವುದು ಹೀಗೆ – "ಆರಡಿಗೆ ಹತ್ತಿರದ ಎತ್ತರ, ಮಾಟವಾಗಿ ಕೆತ್ತಿದ ಕೈ ಮೈ, ಆ ಚಂಚಲ ನೇತ್ರ ಕವಿಗೆಂದೇ ಬ್ರಹ್ಮ ಮಾಡಿಸಿದ ಹೊರಕಟ್ಟು. ಈ ನವುರಾದ ಹಂದರದೊಳಗೆ ಸ್ವರ್ಣ ಕಲಶದಲ್ಲಿದ್ದಂತೆ ಕವಿತ್ವದ ನಂದಾದೀಪ ಬೆಳಗುತ್ತಿದೆ. ರಸ ಋಷಿ, ಕನ್ನಡಕ್ಕೊಬ್ಬನೇ ವಾಲ್ಮೀಕಿ ವರಂ"! ಕನ್ನಡ ತಾಯಿ ಭುವನೇಶ್ವರಿಯ ಕೊರಳಿಗೆ ಜ್ಞಾನ ಪೀಠ ಪ್ರಶಸ್ತಿಯ ಅಲಂಕಾರ ಮಾಲೆಯನ್ನು ತೊಡಿಸಿದ ನಾಲ್ವರು ಪುತ್ರಶ್ರೀಗಳಲ್ಲಿ ಇವರೊಬ್ಬರು. 'ಶ್ರೀರಾಮಾಯಣದರ್ಶನಂ' ಮಹಾಕಾವ್ಯಕ್ಕೆ ಈ ಪ್ರಶಸ್ತಿ ಬಂದದ್ದು. ವ್ಯಾಸ, ವಾಲ್ಮೀಕಿ, ಡಾಂಟೆ, ಹೋಮರ್‌ರಂತಹ ವಿಶ್ವ ಸಾಹಿತಿಗಳ ಸಾಲಿನಲ್ಲಿ ನಿಲ್ಲಬಲ್ಲ ಹಿರಿಯ ಚೇತನ ಅವರದು. 'ಶ್ರೀ ಸಾಮಾನ್ಯ' – ಕುವೆಂಪು ಟಂಕಿಸಿದ ಪದ ಇದು ಸಾಮಾನ್ಯ ಜನತೆಯನ್ನು ನಿರ್ದೇಶಿಸುತ್ತದೆ. ಕನ್ನಡ ನಾಡು ಒಂದಾಗ ಬೇಕೆಂದು ಅವರು ಹಂಬಲಿಸಿದ್ದು ಸಾಹಿತಿಗಳ ದೃಷ್ಟಿಯಿಂದ, ಸ್ವಾರ್ಥ ರಾಜಕಾರಣಿಗಳ ದೃಷ್ಟಿಯಿಂದಲ್ಲ. ಕನ್ನಡ ಭಾಷೆ, ಸಾಹಿತ್ಯ ಬೆಳೆಯಬೇಕು, ವಿಜ್ಞಾನ ಕುರಿತು ಕನ್ನಡದಲ್ಲಿ ಪುಸ್ತಕಗಳು ಬರಬೇಕು.. ಅಗತ್ಯ ಕಂಡಾಗ ಇಂಗ್ಲೀಷ್ ಪಾರಿಭಾಷಿಕ ಪದಗಳನ್ನು ಕನ್ನಡಕ್ಕೆ ಆಮದು ಮಾಡಿಕೊಳ್ಳ

ವುದನ್ನು ಅವರು ಸ್ವಾಗತಿಸಿದರು. ಇದರಿಂದ ಭಾಷೆ ಬೆಳೆಯುತ್ತದೆ, ಪದ ಸಂಪತ್ತು ಶ್ರೀಮಂತವಾಗುತ್ತದೆ. ಎಂಬುದು ಅವರ ನಿಲುವು. ಕಾದಂಬರಿ ಸಣ್ಣ ಕಥೆಗಳ ಪ್ರಕಾರಕ್ಕೂ ಇವರ ಕೊಡುಗೆ ಸಂದಿದೆ. ಕನ್ನಡದ ಬಗ್ಗೆ ಅವರಿಗಿರುವ ಅಪಾರ ಕಳಕಳಿ, ಭಾಷಾ ಬೆಳವಣಿಗೆಗಾಗಿ ಅವರು ಮಾಡಿದ ಕೆಲಸ ಎಲ್ಲವರ ಸಮಗ್ರ ಚಿತ್ರಣವನ್ನು ಪರಿಣಾಮಕಾರೀ ಮಾತುಗಳಿಂದ ಲೇಖಕರು ಕೊಟ್ಟಿದ್ದಾರೆ.

'ದಾರ್ಶನಿಕ, ಮುಕ್ತ ವೈಚಾರಿಕ' ಸಾಹಿತಿ ಶಂಬಾ ಜೋಶಿ, ಅವರ ಕಣ್ಣಿನ ಹೊಳಪು ಚಿತ್ತ ದೀಧಿತಿಯ ಸಂಕೇತ ಶಂಬಾ ವಾದ ಸರಣಿಯ ಒಂದು ಬಿಂದು ವೈದಿಕ ಮೂಲ ಸಾಹಿತ್ಯದ ಅಧ್ಯಯನ ಮತ್ತು ಅನ್ವೇಷಣ ವಾದರೆ, ಇನ್ನೊಂದು ಬಿಂದು ಮೆಕಡೊನೆಲ್ ಇತ್ಯಾದಿ ಪಾಶ್ಚಾತ್ಯ ವಿದ್ವಾಂಸರ ವೈಜ್ಞಾನಿಕ ವಿಚಾರ ಪದ್ಧತಿ, ಈ ಎರಡನ್ನೂ ತಮ್ಮ ಹೃದಯದ ಅರ್ಧ ವೃತ್ತದಲ್ಲಿ ಮೈಗೂಡಿಸಿಕೊಂಡ ಶಂಬಾ ವ್ಯಕ್ತಿತ್ವ ಪ್ರಾಚ್ಯ ಮತ್ತು ಪಾಶ್ಚಾತ್ಯ ಆಲೋಚನೆಗಳ ಒಂದು ಕೂಡಲ ಸಂಗಮ; ಇಂಥ ವಿಶಿಷ್ಟ ನಿಜವಾಗಿಯೂ ಅಸಾಮಾನ್ಯ ವಿದ್ವತ್ತು ಅವರಿಗೆ ದಕ್ಕಲು ಅವರ ಏಕಾಂತ ಸಾಧನೆ ಕಾರಣ. ಸಂಶೋಧನೆಯ ಮೂಲ ಪ್ರತಿಮೆ, ವಿದ್ವತ್ತಿನ ಸೀಮಾ ಪುರುಷ ಶಂಬಾ ಸಾಧನ ಕೇರಿಯ ತಪೋನಂದನದಲ್ಲಿ ಸದ್ದಿಲ್ಲದೆ ಕನ್ನಡವನ್ನು ಅರ್ಥವತ್ತಾಗಿ ಕಟ್ಟಿದ ಕೆಚ್ಚೆದೆಯ ವೈಚಾರಿಕ,"

ಶಂಬಾರ ಆಶೆಗಳು ಎರಡು. 'ಅವರ ಪಾಂಡಿತ್ಯದ ಸವಿಯನ್ನು ಕನ್ನಡಿಗರಲ್ಲದೆ ಇತರ ಭಾರತೀಯರೂ ಸವಿಯುವಂತೆ ಏನಾದರೂ ಏರ್ಪಾಟು ಮಾಡಬೇಕೆಂಬುದು ಒಂದು. ಎರಡನೆಯದು ಕನ್ನಡ ನಾಡಿನ ಸ್ಥಳ ನಾಮಗಳ ಬಗ್ಗೆ ಸಂಶೋಧನೆಯನ್ನು ಆಯಾ ಪ್ರದೇಶದವರು ತಮ್ಮ ತಮ್ಮ ಸ್ಥಳಗಳ ಹೆಸರನ್ನು ಕುರಿತು ಕುತೂಹಲ ತಾಳಿ ಮಾಡಬೇಕಾದ ಕೆಲಸ ಎನ್ನುವುದು. ಒಟ್ಟು ಕೆಲಸ ಮುಗಿದಾಗ ಕನ್ನಡ ನಾಡಿನ ಮಾನವಿಕ ಭೂವಿವರ ಅನಾಯಾಸವಾಗಿ ನಮಗೆ ಲಭ್ಯವಾಗುವುದು'. ಎಂತಹ ಉನ್ನತ ಆಶಯಗಳು? ಇವು ಶಂಬಾರ ವ್ಯಕ್ತಿತ್ವದ ಔನ್ನತ್ಯವನ್ನು ಬಿಂಬಿಸುವಂಥವು. ಅವರು ಎಲೆಮರೆಯ ಕಾಯಿಯಂತೆ ಸದ್ದುಗದ್ದಲವಿಲ್ಲದೆ ವಿಚಾರ ಸಾಹಿತ್ಯ ಸೃಷ್ಟಿಸುತ್ತಿರುವ ಸಾಹಿತ್ಯ ಬ್ರಹ್ಮ. ಧಾರವಾಡದ ಜನರೇ ಅವರನ್ನೂ ಅವರ ಪಾಂಡಿತ್ಯವನ್ನೂ ಗುರುತಿಗಿಲ್ಲ. ಅವರಿಗೆ ಅಧಿಕಾರ. ಬಿರುದು ಸನ್ಮಾನ ಯಾವುದೂ ಇಲ್ಲ. ಇಂತಹ ಆಮಿಷಗಳಿಂದ ತುಂಬಾ ದೂರ ದಲ್ಲಿ ತಮ್ಮಷ್ಟಕ್ಕೆ ತಾವು ಉಳಿದುಕೊಂಡು ಕೆಲಸ ಮಾಡುತ್ತಿದ್ದಾರೆ.

ಮಹಾಭಾರತದ ವಿಸ್ತೃತ ರಂಗಭೂಮಿಯ ಸಾದೃಶ್ಯದಿಂದ ನಿಟ್ಟಿನಿಂದ ಅರ್ವಾಚೀನ ಸಾಹಿತ್ಯ ಪರಿವರ್ತನೆಗಳ ಮೌಲ್ಯಾಂಕವನ್ನು ಮಾಡಬಲ್ಲ ಪಾಂಡಿತ್ಯಮೈಗೂಡಿಸಿಕೊಂಡವರು ದೇಶದಲ್ಲೇ ವಿರಳ ರಾಗಿರುವಾಗ ವಿ.ಸೀ. ಅಂಥ ವಿಮರ್ಶಕರು ಕನ್ನಡ ನಾಡಿಗೆ ಮಾತ್ರವಲ್ಲ ಭಾರತಕ್ಕೆ ಭೂಷಣಪ್ರಾಯರು ಎನ್ನ ಬೇಕಾಗುತ್ತದೆ. ಸಂಗೀತ-ಚಿತ್ರ-ಶಿಲ್ಪ ಕಲೆಗಳಲ್ಲಿಯೂ ವಿ.ಸೀಗೆ ಪರಿಣತಿಯುಂಟು. ಕಾವ್ಯ, ನಾಟಕ, ಪ್ರವಾಸ ಸಾಹಿತ್ಯ, ಶಾಸ್ತ್ರಕೃತಿ, ವಿಮರ್ಶೆ-ಹೀಗೆ ಸಾಹಿತ್ಯದ ವಿವಿಧ ರಂಗಗಳಲ್ಲಿ ಕೈಯಾಡಿಸಿ, ನಾಡಿನ ಉದ್ದಗಲ ಕಾಲೋಡಿಸಿ, ಕನ್ನಡಿಗರ ಹೃದಯದಲ್ಲಿ ತಮ್ಮ ವಾಗ್ಮಿತೆಯ ದೆಸೆಯಿಂದ ಲಾಸ್ಯವಾಡುತ್ತಿರುವ ಕನ್ನಡ ವಿರ್ಮಶಕರಲ್ಲಿ 'ನ ಭೂತೋ ನ ಭವಿಷ್ಯತಿ' ಮಟ್ಟದಲ್ಲಿ ನಿಂತಿದ್ದಾರೆ'.

ನಯ, ವಿನಯ. ಸರಳತೆಗಳ ಸಾಕಾರ ಮೂರ್ತಿ ವಿ. ಸೀಯವರ ಈ ಮಾತು ಅವರ ಅಂತರಂಗಕ್ಕೆ ಹಿಡಿದ ಕನ್ನಡಿ –'ಖಾಸಗಿಯಾಗಿ ಒಂದು ಮಾತನ್ನು ಹೇಳಿಕೊಳ್ಳುತ್ತೇನೆ. ನನ್ನ ಬೆಳವಣಿಗೆ ಎಂದೂ ಅಷ್ಟೇನೂ ಹೇಳಿ ಕೊಳ್ಳುವಂಥಾದ್ದಾಗಿರಲಿಲ್ಲ. ಈ ನಮ್ಮ ಮಗು ಹುಟ್ಟುವವರಿಗೆಲ್ಲಾ ಅಣ್ಣ, ಬೆಳೆಯುವವರಿಗೆಲ್ಲಾ ತಮ್ಮ, ಹುಟ್ಟಿದವರೆಲ್ಲಾ ನನ್ನ ಅಣ್ಣಂದಿರಾಗಿ ಬೆಳೆಯಲಿ ಎಂಬುದು ನನ್ನ ಹಾರೈಕೆ." ವಿ. ಸೀಯವರ ವ್ಯಕ್ತಿತ್ವ ಲೇಖನ ದುದ್ದಕ್ಕೂ ಹರಿದು ಬಂದಿವೆ, ಅವರ ಪಾಂಡಿತ್ಯ, ಪಾಂಡಿತ್ಯಕ್ಕೆ ಒಪ್ಪುವಂತಹ ಭಾಷಾ ನೈಪುಣ್ಯ, ತಿಳಿದುದನ್ನು ಒಪ್ಪವಾಗಿ ಹಿತಮಿತವಾಗಿ ಓದುಗರ ಮನಸೆಳೆಯುವಂತೆ ಬರೆಯುವ ಕಲೆ– ಈ ತ್ರಿವೇಣಿ ಸಂಗಮ ಅವರ ಹೆಸರನ್ನು ಸಾಹಿತ್ಯಕ್ಷೇತ್ರದಲ್ಲಿ ಚಿರಸ್ಥಾಯಿಯಾಗಿಸಿದೆ.

"ಅವರು ಸಂಪಾದಿಸಿದ್ದು ನಿಜವಾದ ವಿದ್ಯೆ. ಮನುಷ್ಯನ ವ್ಯಕ್ತಿತ್ವಕ್ಕೆ ಬಿಡುಗಡೆಗೆ ಪೋಷಕವಾಗುವ ವಿದ್ಯೆ"– ಕಾರಂತರ ಬಗ್ಗೆ ಹೇಳಿದ್ದಾರೆ ವಿ. ಸೀ. ಲೇಖಕರು ಅವರ ಕಾದಂಬರಿಗಳ ಬಗ್ಗೆ ಹೀಗೆಂದಿದ್ದಾರೆ, 'ಅವರ ಮನೋರಂಗದ ಪ್ರಗತಿಯನ್ನು, ಸಂಚಾರಗಳನ್ನು ಪ್ರತಿನಿಧಿಸುವ, ಪ್ರತಿಫಲಿಸುವ ಕಲಾತ್ಮಕ ಕೃತಿಗಳು. ಸರ್ವತ್ರ ವ್ಯಾಪನೆಯುಳ್ಳ ಕಾರಂತರ ಲೇಖನ ಶಕ್ತಿ ಅಪಾರವಾದದ್ದು. ಚಿತ್ರ, ಸಂಗೀತ, ಶಿಲ್ಪ, ಯಕ್ಷಗಾನ ನೃತ್ಯ ಬ್ಯಾಲೆ, ಅಪೆರಾ– ಇಲ್ಲಿಯೂ ಕಾರಂತರ ಕಲಾವಿದ ದೃಷ್ಟಿಯು ಅಪೂರ್ವ ಸೃಷ್ಟಿಗೆ ಕಾರಣವಾಗಿವೆ. ಕನ್ನಡವೇ ಏಕೆ ಭಾರತೀಯ ಸಾಹಿತ್ಯಾಕಾಶದಲ್ಲಿಯೇ ಇದೊಂದು ವಿಲಕ್ಷಣ ನಕ್ಷತ್ರ'. ಕಾರಂತರ ಸಾಹಿತ್ಯ ಸೃಷ್ಟಿ ಕಾದಂಬರಿ ರಚನೆಗೆ ಸೀಮಿತವಾಗಿಲ್ಲ. ಬಾಲ ಪ್ರಪಂಚ, ವಿಜ್ಞಾನ ಪ್ರಪಂಚ ಮುಂತಾದ ವಿಶ್ವಕೋಶಗಳನ್ನೂ ಒಬ್ಬರೇ ಬರೆದು ತ್ರಿವಿಕ್ರಮನೆನಿಸಿದ್ದಾರೆ. ಯಕ್ಷಗಾನ ಅವರ ಮೆಚ್ಚಿನ ಕ್ಷೇತ್ರ. ಅದರಲ್ಲೂ ಅಪಾರ ಕೆಲಸ ಮಾಡಿದ್ದಾರೆ. 'ಮೂಕಜ್ಜಿಯ ಕನಸುಗಳು' ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿ.

"ಒಂದು ಮರದಲ್ಲಿ ನೂರು ಹಣ್ಣಾಗಬೇಕಾದರೆ, ಅದೆಷ್ಟೋ ಸಾವಿರ ಹೂ ಅರಳಬೇಕು" – ಇದು. ಅನಕೃರ ಸ್ವ – ಕೃತಿ ವಿಮರ್ಶೆ. 'ಕನ್ನಡದ ಗಡಿ ಚಳುವಳಿಗೆ ಇವರೇ ಮುಖಂಡರು. ಅವರ ಲೇಖನಿಯು ಗಂಡು ಗೊಡಲಿ ಕನ್ನಡಿಗರ ಭದ್ರತೆಗೆ ಸದಾ ಕಾವಲಿರುತ್ತದೆ. ಕನ್ನಡದ ಅಭಿಮಾನಿಗಳೆಲ್ಲರೂ ಒಂದೇ ಜಾತಿ, ಒಂದೇ ಕುಲ ಎಂದು ಅರಿತು ಆಚರಿಸಿದವರಲ್ಲಿಯೂ ಅನಕೃಗೆ ಆದ್ಯಸ್ಥಾನ. ಅವರ ನಾಲಿಗೆ ಲೇಖನಿ ಎಂದೆಂದೂ ಕನ್ನಡ ಭುವನೇಶ್ವರಿಯ ಸೇವೆಗೆ ಅರ್ಪಿತ'.

"ಕನ್ನಡ ಸಾಹಿತ್ಯದ ಕಹಳೆ ಕಡಲಾಚೆ ಹೋಗಬೇಕು. ಪ್ರಯತ್ನದಿಂದಲ್ಲ – ಪ್ರತಿಭೆಯಿಂದ. ಕನ್ನಡ ಸಂಸ್ಕೃತಿ ಭಾರತದ ಸಂಸ್ಕೃತಿಯಿಂದ ಬೇರೆಯಲ್ಲ. ಆ ಮಹಾತಾಯಿಯ ಪುಣ್ಯ ಪುತ್ರಿ ಕನ್ನಡ ತಾಯಿ. ಕನ್ನಡ ನಾಡಿನ ಹಿತದ ದೃಷ್ಟಿಯಿಂದ ಮಾತ್ರವಲ್ಲ – ಇಡೀ ಜಗತ್ತಿನ ಹಿತ ದೃಷ್ಟಿಯಿಂದ ಅವಶ್ಯಕ" – ಅನಕೃ ಉವಾಚ. ಈ ಮಾತಿನಲ್ಲಿ ಕನ್ನಡದ ಬಗೆಗಿದ್ದ ಅವರ ಅತೀವ ಅಭಿಮಾನ ಉಕ್ಕಿ ಹರಿದಿದೆ.

ಲೇಖಕರು ಈ ಹಿರಿಯ ಸಾಹಿತ್ಯ ಮೇರುಗಳ ಮನೆಗೇ ಹೋಗಿ ಅವರೊಡನೆ ಸ್ವಲ್ಪ ಸಮಯವಿದ್ದು, ಸಂಭಾಷಿಸಿ ಲೇಖನಗಳನ್ನು ಬರೆದಿದ್ದಾರೆ. ಜನ್ಮಸ್ಥಳ, ದಿನಾಂಕ, ವಿದ್ಯಾಭ್ಯಾಸ, ವೃತ್ತಿ ಮೊದಲಾಗಿ ಮಾಮೂಲು ವ್ಯಕ್ತಿ ಚಿತ್ರಕ್ಕಿಂತ ತೀರಾ ಭಿನ್ನ ರೀತಿಯಲ್ಲಿ ಲೇಖಕರು ನಮಗೆ ಸಾಹಿತ್ಯ ದಿಗ್ಗಜಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಪ್ರತಿ ಲೇಖನದ ಕೊನೆಯಲ್ಲೂ 'ಉಳಿಯುವ ಮಾತು' ಶೀರ್ಷಿಕೆಯಡಿ ಆಯಾ ಲೇಖಕರ ಗಮನಾರ್ಹ ನುಡಿ ಮುತ್ತುಗಳನ್ನು ಸೇರಿಸಿರುವುದೊಂದು ವಿಶೇಷ. ನಿಜವಾಗಿಯೂ ಅವು ಆಚಂದ್ರಾರ್ಕ ಉಳಿಯುವ ಮಾತುಗಳು. ಕಿರು ಹೊತ್ತಗೆಯಲ್ಲಿ ಆಯಾ ಸಾಹಿತಿಯ ಬಗ್ಗೆ ಬರೆಯುವಾಗ ಕಳಕಳಿ, ಸತ್ಯಕ್ಕೆ ಅಪಚಾರವೆಸಗದ ನಿಷ್ಠುರತೆ ಎದ್ದು ಕಾಣುತ್ತದೆ. ಭಾಷೆ ಜಲಪಾತದಂತೆ ಮೈದುಂಬಿ ಧುಮುಕಿದೆ.

೭. ಕು.ಶಿ. ಹರಿದಾಸ ಭಟ್ಟರ ಎರಡು ಸಂಗ್ರಹಣೀಯ ಕೃತಿಗಳು

— ವೆಂಕಟರಾಜ ಪುಣಿಂಚತ್ತಾಯ

— ೧ —

ಯಾವುದೇ ವಿಷಯದ ಕುರಿತಾದರೂ ಮನೋಜ್ಞವಾಗಿ ಮಾತಾಡಬಲ್ಲ – ವಿದ್ವತ್ಪೂರ್ಣವಾಗಿ ಬರೆಯಬಲ್ಲ ಪ್ರೊ॥ ಕು.ಶಿ. ಹರಿದಾಸ ಭಟ್ಟರ ಸಂಗ್ರಹಣೀಯ ಕೃತಿಗಳಲ್ಲೊಂದು 'ತುಳುತೊ ಬುಳೆ ನಿಲೆ ಬೆಲೆ' ಎಂಬ ಕಿರುಹೊತ್ತಗೆ. 1983ರಲ್ಲಿ ಬೆಂಗಳೂರಿನಲ್ಲಿ ಜರಗಿದ ಪ್ರಥಮ ತುಳು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವಾಗಿ ಪ್ರಕಟಗೊಂಡ ಇಪ್ಪತ್ತೈದು ಪುಟಗಳ ಈ ವಾಮನ ಕೃತಿಯಲ್ಲಿ ಸಮಗ್ರ ತುಳು ಸಾಹಿತ್ಯದ ತ್ರಿವಿಕ್ರಮ ಹೆಜ್ಜೆಗಳನ್ನು ಗುರುತಿಸುವ ಪ್ರಯತ್ನವನ್ನು ಅವರು ಮಾಡಿದ್ದಾರೆ.

ಉಡುಪಿ ಪರಿಸರದ ಸುಂದರವಾದ ಬಡಗು ತುಳು ಭಾಷೆಯಲ್ಲಿ ಬರೆದಿರುವ ಈ ಕಿರುಹೊತ್ತಗೆ ಸರಾಗವಾಗಿ ನಮ್ಮನ್ನು ಓದಿಸಿಕೊಂಡು ಹೋಗುತ್ತದೆ. ತನ್ನ ಬಿಚ್ಚು ನುಡಿಗಳಿಂದ ಓದುಗರ ಹೃದಯಕ್ಕೆ ಚುರುಕುಮಟ್ಟಿಸುವ ತಾನು ಹೇಳಬೇಕಾದ ಪ್ರೌಢ ವಿಷಯಗಳನ್ನು ಅಲ್ಲಲ್ಲಿ ತಿಳಿಹಾಸ್ಯದ ಬೆರಕೆಯೊಂದಿಗೆ, ಆದರೆ ಅಷ್ಟೇ ಗಂಭೀರವಾಗಿ ಹೇಳುವ ಅವರ ಕನ್ನಡನುಡಿಯ ಆಕರ್ಷಕ ಶೈಲಿಯ ಸೊಬಗನ್ನು ಈ ತುಳು ಬರವಣಿಗೆಯಲ್ಲಿಯೂ ಕಾಣಬಹುದು.

ಉಡುಪಿ ಮೊದಲಿನಿಂದಲೂ ತುಳು ಚಳವಳಿಗೆ ಹೆಸರಾದ ಊರು. ಇದಕ್ಕೆ ನೇತೃತ್ವವಹಿಸಿದವರು ದಿವಂಗತ ಯು.ಎಸ್. ಪಣಿಯಾಡಿಯವರು. ಅವರ ಜೊತೆಯಲ್ಲಿ ಸಹಕರಿಸಿದ ಸತ್ಯಮಿತ್ರ ಬಂಗೇರರು, ಶೀನಪ್ಪ ಹೆಗ್ಗಡೆಯವರು, ಮೋನಪ್ಪ ತಿಂಗಳಾಯರು, ನಾರಾಯಣ ಕಿಲ್ಲೆಯವರು ಮುಂತಾದವರು ಆ ಕಾಲದಲ್ಲಿ ಈ ಚಳುವಳಿಯನ್ನು ಹೇಗೆ ಬೆಳೆಸಿಕೊಂಡು ಬಂದರು – ಎಂದು ಪ್ರಸ್ತಾಪಿಸಿ, ತುಳುವಿನ ಬೆಳೆಯನ್ನೂ, ಬೆಲೆಯನ್ನೂ ಅದರ ನೆಲೆಯನ್ನೂ ಈ ಕೃತಿಯ ಮೂಲಕ ಪ್ರೊ. ಹರಿದಾಸ ಭಟ್ಟರು ನಮಗೆ ಪರಿಚಯ ಮಾಡಿಸುತ್ತಾರೆ.

ಹಾಗೆಯೇ ದ್ರಾವಿಡ ಭಾಷೆಗಳ ಸಾಲಿನಲ್ಲಿ ತುಳುವಿನ ಸ್ಥಾನಮಾನ, ಹಿರಿಮೆಗಳೇನು ಎಂಬುದನ್ನು ಭಾಷಾ ವೈಜ್ಞಾನಿಕ ದೃಷ್ಟಿಯಿಂದ ವಿವೇಚಿಸುತ್ತಾ "ದ್ರಾವಿಡ ಭಾಷೆಗಳಲ್ಲಿ ಉತ್ತರ ದ್ರಾವಿಡ, ಮಧ್ಯದ್ರಾವಿಡ, ದಕ್ಷಿಣ ದ್ರಾವಿಡ ಎಂದು ಮೂರು ವಿಭಾಗಗಳಿವೆ. ನಮ್ಮ ತುಳು ಭಾಷೆಯು ದಕ್ಷಿಣ ದ್ರಾವಿಡ ಭಾಷೆಗಳಾದ ತಮಿಳು, ಮಲೆಯಾಳ, ಕನ್ನಡ, ಕೋಟ, ತೋಡ, ಬಡಗ, ಕೊಡಗು ಪ್ರದೇಶಗಳಲ್ಲಿ ವ್ಯವಹಾರದಲ್ಲಿದ್ದರೂ, ಇದರಲ್ಲಿ ಮಧ್ಯ ದ್ರಾವಿಡದ ಕೆಲವು ಅಂಶಗಳು ಉಳಿದು ಕೊಂಡಿವೆ. ಮಧ್ಯದ್ರಾವಿಡವೆಂದರೆ ಕೊಲಾಮಿ, ಪಾರ್ಜಿ, ಕುವಿ, ಕುಯಿ ಮುಂತಾದ ಭಾಷೆಗಳು. ಇದಕ್ಕೆ ಏನು ಕಾರಣ? ಭಾಷೆಗಳಲ್ಲಿ ಮೂಲದಲ್ಲಿರುವ ಎಷ್ಟು ಅಂಶ ಉಳಿದಿವೆ – ಎಷ್ಟು ಬದಲಾವಣೆ ಆಗಿವೆ – ಎಂಬೀ ಆಧಾರದಲ್ಲಿ ಎರಡು ಭಾಷೆಗಳು ಒಂದರಿಂದ ಒಂದು ಯಾವಾಗ ಬೇರೆ ಆಗಿವೆ ಎಂದು ತಿಳಿಸುವ ಲೆಕ್ಸಿಕೋಸ್ಟೇಟಿಸ್ಟಿಕ್ಸ್ ಶಾಸ್ತ್ರದ ಮೂಲಕ ನಾವು ಯೋಚನೆ ಮಾಡಿದಾಗ, ತುಳುವು ಸಾಧಾರಣ ಕ್ರಿಸ್ತಪೂರ್ವ ಆರನೆಯ ಶತಮಾನದಲ್ಲಿ ಬೇರೆಯಾಗಿ ಸ್ವತಂತ್ರ ಭಾಷೆಯಾಯಿತು ಎಂದು ತಿಳಿದು ಬರುತ್ತದೆ... ದ್ರಾವಿಡ ಭಾಷೆಯನ್ನು ಮಾತಾಡುತ್ತಿದ್ದ ಜನರು ಮಧ್ಯ ದ್ರಾವಿಡ, ದಕ್ಷಿಣ ದ್ರಾವಿಡ ಎಂದು ಕವಲೊಡೆದು ಬರುವ ಮೊದಲೇ ತುಳು ಮಾತಾಡುವ ಜನಾಂಗವು ಕ್ರಿಸ್ತಪೂರ್ವ 6ನೆಯ ಶತಮಾನದಲ್ಲಿ ಪಶ್ಚಿಮ ಕರಾವಳಿಗೆ ಬಂದಿರಬಹುದು" ಎಂಬ ಚಾರಿತ್ರಿಕ ಆಶಯವನ್ನು ನಮ್ಮ ಮುಂದಿಡುತ್ತಾರೆ.

ತುಳುವಿನ ಬೆಳೆಯ ಬಗೆಗೆ ಹೇಳುತ್ತಾ "ಇದು ನಿಜಕ್ಕೂ ಸಮೃದ್ಧವಾದ ಭಾಷೆ. ಇತರ ಭಾಷೆಗಳಲ್ಲಿ ಇಲ್ಲದ ಕೆಲವು ಸಾಹಿತ್ಯ ಪ್ರಕಾರಗಳೂ ಇಲ್ಲಿವೆ. ಪಾಡ್ದನ ಸಂಧಿ ಉರಲ್ ಲೇಲೇ ಪದಗಳು, ಓಬೇಲೆ ಪದಗಳು ಇವೆಲ್ಲ ತುಳುವಿನದ್ದೇ ಸೊತ್ತಾಗಿ ಉಳಿದಿರುವ ವಿಶಿಷ್ಟ ಪ್ರಕಾರಗಳು. ಈ ಸಾಹಿತ್ಯ ಯಾವ ಶಿಷ್ಟ ಸಾಹಿತ್ಯಕ್ಕೂ ಕಡಿಮೆಯಲ್ಲ. ಭೂತಗಳ ಪ್ರತಾಪದ ಪಾಡ್ದನ, ಸಾಮಾಜಿಕ ಕತೆಗಳ ಪಾಡ್ದನ ಇತ್ಯಾದಿಗಳು ಯಾವುದೇ ಜನಪದ ಮಹಾಕಾವ್ಯ ಅಥವಾ ಖಂಡಕಾವ್ಯಗಳ ಸಾಲಿನಲ್ಲಿ ನಿಲ್ಲಲು ಯೋಗ್ಯವಾಗಿವೆ" ಎನ್ನುತ್ತಾರೆ.

"ತುಳುವಿನ ಬೆಳೆಗೆ ಕ್ರಿಶ್ಚಿಯನ್ ಮಿಶನರಿಗಳ ಕೊಡುಗೆ ಅಪಾರವಾದುದು. ಬ್ರಿಗೆಲ್, ಮ್ಯಾನರ್, ಬರ್ನೆಲ್ ಮುಂತಾದವರು ತುಳು ವ್ಯಾಕರಣ, ತುಳು ನಿಘಂಟು, ತುಳು ಜನಪದ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ

ಅಗ್ರಮಾನ್ಯವಾದ ಸೇವೆ ಸಲ್ಲಿಸಿದ್ದಾರೆ. ಆ ನಂತರ ನಮ್ಮವರೇ ಆದ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರು, ಬಡಕಬೈಲ್ ಪರಮೇಶ್ವರಯ್ಯ, ಪೊಳಲಿ ಶೀನಪ್ಪ ಹೆಗ್ಗಡೆ, ಎಸ್.ಎಸ್. ಕಿಲ್ಲೆ, ಮಾಧವ ತಿಂಗಳಾಯ, ಸತ್ಯಮಿತ್ರ ಬಂಗೇರ, ಎಂ. ವಿಠಲ ಹೆಗ್ಗಡೆ ಮುಂತಾದವರು ತುಳುವಿನ ಸೃಜನಶೀಲ ಸಾಹಿತ್ಯಕ್ಕೆ, ತುಳುವಿನ ಪುನರುಜ್ಜೀವನಕ್ಕೆ ಭದ್ರ ಪಂಚಾಂಗವನ್ನು ಹಾಕಿದರು. ಇದು 'ಮಿಶನರಿ ಯುಗ'ದ ಸಾಹಿತ್ಯ ಸೇವೆಯಾದರೆ, ಆ ನಂತರದ 'ಎರಡನೆಯ ಯುಗ'ದಲ್ಲಿ ತುಳು ಯಕ್ಷಗಾನ, ಕವಿತಾ ಸಂಗ್ರಹ, ಕಥೆ ನಾಟಕಗಳು, ಕಾದಂಬರಿಗಳು ಪ್ರಕಟವಾದುವು. ಮುಂದೆ ಎಂ.ಪಿ.ವಿ. ಶರ್ಮ, ದಾಮೋದರ ಪುಣಿಂಚತ್ತಾಯ, ನರ್ಕಳ ಮಾರಪ್ಪ ಶೆಟ್ಟಿ, ಮೋನಪ್ಪ ತಿಂಗಳಾಯ, ಯುಜ್. ನಾರಾಯಣ ರಾವ್, ಸೀತಾನದಿ ಗಣಪಯ್ಯ ಶೆಟ್ಟರು, ಮೂಲ್ಕಿ ನರಸಿಂಗ ರಾಯರು, ದೇರಂಬಳ ತ್ಯಾಂಪಣ್ಣ ಶೆಟ್ಟರು ಮುಂತಾದವರು ತುಳು ಸಾಹಿತ್ಯ ಪ್ರಕಾರವನ್ನು ಹಸನುಗೊಳಿಸಿದರೆ, ಇತ್ತೀಚೆಗೆ ಕೆದಮ್ಲೂರು ದೊಡ್ಡಣ್ಣ ಶೆಟ್ರಂಥಾ ಅನೇಕ ತುಳು ಸಾಹಿತಿಗಳು ತುಳು ನಾಟಕ ಸಾಹಿತ್ಯವನ್ನು ಬೆಳೆಸಿದರು. ತುಳು ಪತ್ರಿಕೆಗಳು ಪ್ರಾರಂಭವಾದುವು. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ತುಳುವಿನ ವೈಜ್ಞಾನಿಕ ಅಧ್ಯಯನಗಳು ನಡೆಯ ತೊಡಗಿದುವು" ಇವೇ ಮುಂತಾದ ಉಪಯುಕ್ತ ವಿಚಾರಗಳನ್ನು ಅಂಕೆ ಸಂಖ್ಯೆಗಳೊಂದಿಗೆ ಸವಿವರವಾಗಿ ಪ್ರಸ್ತಾಪಿಸುವ ಈ ಕಿರುಹೊತ್ತಗೆಯು, ಬರೇ ಲಿಖಿತ ಭಾಷಣವಾಗಿರದೆ, ಒಂದು ಒಳ್ಳೆಯ ಪರಾಮರ್ಶನ ಕೃತಿಯಾಗುವ ಅರ್ಹತೆ ಪಡೆದಿದೆ ಎಂದರೂ ತಪ್ಪಲ್ಲ.

ಕೊನೆಯ ಭಾಗದಲ್ಲಿ ತುಳು ನಿಘಂಟುವಿನ ಆವಶ್ಯಕತೆ, ಅದರ ಸ್ವರೂಪ, ಇತಿಮಿತಿಗಳ ಬಗ್ಗೆ ಹೇಳುತ್ತಾ, ಇದು ತುಳು ಸಾಹಿತ್ಯದ ಬೆಳವಣಿಗೆಯ 'ಮೂರನೆಯ ಯುಗ' ವೆಂದು ಗುರುತಿಸಿದ್ದಾರೆ. ರಶಿಯಾದ ಅಲ್ಪ ಸಂಖ್ಯಾತ ಭಾಷೆಗಳಿಗೆ ಅಲ್ಲಿನ ಸರಕಾರ ಕೊಡುವ ಪ್ರೋತ್ಸಾಹಗಳನ್ನು ನಮ್ಮ ಕಣ್ಣ ಮುಂದಿರಿಸುತ್ತಾ, ತುಳುವಿನ ಭಾವೀ ನೆಲೆಯನ್ನೂ, ಅದರ ಬೆಲೆಯನ್ನೂ, ಇನ್ನು ಆಗಬೇಕಾದ ಅದರ ಸಮಗ್ರ ಬೆಳೆಯನ್ನೂ ಬಹಳ ವಿವೇಚನಾತ್ಮಕವಾಗಿ ನಮ್ಮ ಗಮನಕ್ಕೆ ತರುತ್ತಾರೆ.

ಪ್ರೊ. ಹರಿದಾಸ ಭಟ್ಟರ ತುಳು ಬರವಣಿಗೆಯ ಸೊಗಸನ್ನು ತಿಳಿಯಲು ಅವರದೇ ಕೆಲವು ವಾಕ್ಯಗಳನ್ನು ಪರಿಶೀಲಿಸುವುದು ಒಳ್ಳೆಯದು. ಭಾಷೆಗಳ ಪರಸ್ಪರ ಸಂಬಂಧವನ್ನು ಪ್ರಸ್ತಾಪಿಸುತ್ತಾ ಅವರು ಒಂದೆಡೆ ಹೀಗೆ ಹೇಳುತ್ತಾರೆ.

"ತುದೆ ಉಂಡುದೇ – ಮಾತಾ ಕೈಕುಳು ಸೇರುಂಡನೇ ಅವು ತುದೆ; ವಾ ತುದೆಲಾ ತನ ಕಡೆಕ್ ಬರ್ಪಿ ಕೈನ್ ಬರಡಾಂದ್ ಪನ್ಪುಜಿ; ಕಡೇಕ್ ಮಾತ ತುದೆಕುಲುಲಾ ಕಡಲ್‌ಗೇ ಸೇರೋಡು, ಅಡೆಗ್ಲಾ ಮುಗಿಪ್ರಜ್ಜಿ ಭೂಮಿ ದೇವೀನ್ನಿ ಮಾತಾಯಿನೊ ಮಹಾತ್ಮೆ – ಕಡಲ್‌ದ ಉಪ್ಪು ನೀರ್ ಚಪ್ಪೆ ನೀರಾದ್ ಭೂಮಿಗ್ ಬೂರೋಡು, ಬೂರ್ದಿ ನೀರ್ ಉಜಿ ಆವೋಡು, ಉಜೀನೇ ಅರ್ಬಿ ಕೈ ಆವೊಡು. ಕಾಲುವೆ ಆವೊಡು. ಇಂಚಿ ಅರ್ಬಿಲು, ಕೈಕಾಲುವೆಳು. ಒಟ್ಟಾದ್ ಬೊಕ ತುದೆಕ್ ನೀರ್ ಜಂಜೋಡು. ಉಂದುವೇ ಪ್ರಕೃತಿದೊ ಕರ್ಮಚಕ್ರ. ಅವೇ ತರ ಭಾಷೆಲಾ; ತುಳುಡ್ದಾವರ ಕನ್ನಡ ಶ್ರೇಯಸ್ಸ್; ಕನ್ನಡ್ದಾವರ ಭಾರತದೊ ಬಹುಭಾಷಿ ಸರಸ್ವತಿನೊ ಶ್ರೇಯಸ್ಸ್; ರಾಷ್ಟ್ರದ ಶ್ರೇಯಸ್ಸ್, ಒಂಜೆನ್ ಬುಡ್ದು ಒಂಜಿಜ್ಜಿ"

ಹಾಗೆಯೇ ತುಳು ಜನಪದ ಸಾಹಿತ್ಯದ ಬಗ್ಗೆ ಹೇಳುತ್ತಾ ಅದು "... ಶೃಂಗಾರದ ತೀಪೆ, ಹಾಸ್ಯದ ಉಪ್ಪಡ್, ಸಮಾಜ ವಿಮರ್ಶೆದ ಖಾರ ಮಾತ ಸೇರ್‌ದ್, ಗಾದೆ ಒಗಟುಲೆನ ಒಗ್ಗರಣೆ ಕೊಟುದ್, ನೇಲ್ಯ ರಸಮಯ ಒಣಸ್ ಆದ್ ನಂಕ್ ತಿಕ್‌ದ್‌ಂಡ್" ಎಂದು ವರ್ಣಿಸುತ್ತಾರೆ.

ಯಾವುದೇ ಭಾಷೆಯನ್ನಾದರೂ ಸಮರ್ಥವಾಗಿ ವ್ಯಂಜಿಸಲು ತುಳು ಭಾಷೆಯು ಶಕ್ತವಾಗಿದೆಯೆಂಬುದಕ್ಕೆ ಶ್ರೀ ಪಾ.ವೆಂ. ಆಚಾರ್ಯರ ಒಂದು ನವ್ಯಾತಿನವ್ಯ ಸುಂದರ ಕವನವನ್ನು ಉದಾಹರಣೆಯಾಗಿ ಕೊಡುತ್ತಾರೆ.

ಹೀಗೆ 'ತುಳುತೊ ಬುಳೆ ನಿಲೆ ಬೆಳೆ'ಯೆಂಬ ಕಿರುಹೊತ್ತಗೆಯು ಒಂದು ಉತ್ತಮ ವಿಮರ್ಶಾತ್ಮಕ ಕೃತಿಯಾಗಿರುವ ಜೊತೆಗೆ ಒಂದು ಉಪಯುಕ್ತ ಪರಾಮರ್ಶನ ಕೃತಿಯೂ ಆಗಿದೆ ಎಂಬುದರಲ್ಲಿ ಸಂದೇಹವಿಲ್ಲ.

— ೨ —

ಪ್ರೊ. ಕು.ಶಿ. ಹರಿದಾಸ ಭಟ್ಟರ ಸಂಪಾದಕತ್ವದಲ್ಲಿ ಪ್ರಕಟವಾದ ಏಳು ವಿದ್ವತ್ಪೂರ್ಣ ಲೇಖನಗಳುಳ್ಳ ಒಂದು ಉತ್ತಮ ಸಂಕಲನ – 'ಸ್ವಾತಂತ್ರ್ಯ ಪೂರ್ವ ತುಳುಸಾಹಿತ್ಯ' 1982ರಲ್ಲಿ ಗಾಂಧೀ ಜಯಂತಿಯ ಪುಣ್ಯ ದಿನದಂದು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ವತಿಯಿಂದ ಜರಗಿದ 'ತುಳುವ ದಿನಾಚರಣೆ'ಯ ಸಂದರ್ಭದಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಮಂಡಿಸಲಾದ ಪ್ರಬಂಧಗಳ ಸಂಕಲನವಿದು. ಇದರ ಸಂಪಾದಕರಾದ ಪ್ರೊ.ಹರಿದಾಸ ಭಟ್ಟರೇ ಹೇಳುವಂತೆ "ತುಳು ಭಾಷೆಯ ಸಂಸ್ಕೃತಿಯ ಪುನರುಜ್ಜೀವನದ ಈ ಸಂಧಿಕಾಲದಲ್ಲಿ ಆಗಿಹೋದ 'ತುಳುವೈಭವ'ದ ಮೌಲ್ಯಾಂಕನ ಅಷ್ಟೇ ಮುಖ್ಯವಾದುದು. ನಾಳಿನ ತುಳುವಿನ ಸಾಹಿತ್ಯದ ಗೊತ್ತುಗುರಿಗಳನ್ನು

ನಿರ್ಧರಿಸಬೇಕಾದರೆ, ಭೂತಕಾಲದ ಸಾಹಿತ್ಯದ ಬೆಲೆ ಕಟ್ಟುವುದು ಅನಿವಾರ್ಯ. ಆ ನಿಟ್ಟಿನಲ್ಲಿ ತುಳು ಸಾಹಿತ್ಯದ ಮೊದಲ ಘಟ್ಟದ ಪರಿಚಯ – ಮೌಲ್ಯಾಂಕನವನ್ನು ವಿವಿಧ ವಿದ್ವಾಂಸರು ಇಲ್ಲಿ ನಡೆಸಿಕೊಟ್ಟಿದ್ದಾರೆ".

ಈ ಸಂಕಲನದಲ್ಲಿ ಡಾ. ಸೀ. ಹೊಸಬೆಟ್ಟು ಅವರು 'ಸ್ವಾತಂತ್ರ್ಯ ಪೂರ್ವದ ತುಳು ಸೃಜನಸಾಹಿತ್ಯ ಬಗ್ಗೆಯೂ ಶ್ರೀ ಪಾ.ವೆಂ. ಆಚಾರ್ಯರು 'ಪೊಳಲಿ ಶೀನಪ್ಪ ಹೆಗ್ಗಡೆಯವರ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳಪಾಂಡ್ಯ ರಾಯನ ಅಳಿಯಕಟ್ಟು' ಹಾಗೂ ತುಳು ಭಾಷೆಯ ಪ್ರಥಮ ಕಾದಂಬರಿಯೆನಿಸಿದ 'ಮಿತ್ಯ ನಾರಾಯಣ ಕತೆ' ಎಂಬ ಎರಡು ಕೃತಿಗಳ ಬಗ್ಗೆಯೂ ಮೌಲ್ಯ ಮಾಪನ ಮಾಡಿದ್ದಾರೆ. ಹಾಗೆಯೇ 1872ರಲ್ಲಿ ಪ್ರಕಟವಾದ ಬ್ರಿಗೆಲ್ಲರ ತುಳು ವ್ಯಾಕರಣ ಮತ್ತು 1932ರಲ್ಲಿ ಪ್ರಕಟವಾದ ಯಸ್. ಯು. ಪಣಿಯಾಡಿಯವರ ತುಳು ವ್ಯಾಕರಣ ಈಯೆರಡು ಗ್ರಂಥಗಳ ಕುರಿತು ಡಾ. ಯು.ಪಿ. ಉಪಾಧ್ಯಾಯರ ವಿಶ್ಲೇಷಣೆ, ಸ್ವಾತಂತ್ರ್ಯ ಪೂರ್ವದ ತುಳುನಾಡಿನ ಇತಿಹಾಸ ಗ್ರಂಥಗಳ ಬಗ್ಗೆ ಡಾ.ಕೆ. ಜಿ. ವಸಂತಮಾಧವರ ಲೇಖನ, 'ತುಳು ಪಾಡ್ದನಗಳಲ್ಲಿ ದುರಂತ ಪ್ರಣಯ'ದ ಕುರಿತು ಶ್ರೀ ಅಮೃತ ಸೋಮೇಶ್ವರರ ವಿವೇಚನೆ, 'ತುಳು ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ' ಎಂಬ ವಿಷಯದ ಕುರಿತು ದೇವರಾಜ ಬಂಗೇರರ ಲೇಖನ, 'ತುಳುವಿನಲ್ಲಿ ಸ್ವಾತಂತ್ರ್ಯ ಪೂರ್ವದ ಪ್ರಸಿದ್ಧ ರಚನೆಗಳು' ಎಂಬ ವಿಷಯದ ಕುರಿತು ಡಾ. ಬಿ.ಎ. ವಿವೇಕ ರೈಯವರ ವಿಮರ್ಶೆ – ಈ ಪ್ರಬಂಧಗಳು ಸಂಕಲನಕ್ಕೆ ಸಾರ್ಥಕತೆಯನ್ನು ತಂದಿವೆ. ಇದರ ಉಪಯುಕ್ತತೆಯ ಬಗ್ಗೆ ಮುನ್ನುಡಿಯಲ್ಲಿ ಪ್ರೊ. ಹರಿದಾಸ ಭಟ್ಟರೇ ಹೇಳಿದಂತೆ "ಈ ಶತಮಾನದ ಮೊದಲಲ್ಲಿ ಕನ್ನಡ ಸಾಹಿತ್ಯದ ವಿಮರ್ಶನ ಕ್ಷೇತ್ರದಲ್ಲಿ ಪ್ರೊ. ಬಿ.ಎಂ.ಶ್ರೀ, ಪ್ರೊ. ಎ.ಆರ್.ಕೃ, ಪ್ರೊ. ಟಿ.ಎಸ್. ವೆಂಕಣ್ಣಯ್ಯ ಮುಂತಾದವರು ನಡೆಸಿದ ಕೆಲಸ ಯಾವುದೋ ಅಂಥಾ ಕೆಲಸ ಈಗ ತುಳುವಿನಲ್ಲಿ ಆಗುತ್ತಿದೆ, ಆಗಬೇಕಾಗಿದೆ. ಶ್ರೀಮಂತ ಬಾಯ್ದೆರೆ ಸಾಹಿತ್ಯವನ್ನು ಮಾತ್ರ ಒಳಗೊಂಡಿದ್ದ ತುಳುವಿನಲ್ಲಿ ಸೃಜನ ಸಾಹಿತ್ಯ ಸಾಧ್ಯ ಎಂದು ತೋರಿಸಿಕೊಟ್ಟವರು ವಿದೇಶೀ ಪಾದ್ರಿಗಳು. ಮುಂದೆ ದೇಶೀಯರು ಸ್ವಾತಂತ್ರ್ಯ ಹೋರಾಟದ ಹುಮ್ಮಸ್ಸಿನಲ್ಲಿ ತುಳು ಭಾಷಾ ಕೈಂಕರ್ಯವನ್ನೇನೋ ನಡೆಸಿಕೊಂಡು ಬಂದರು. ಸ್ವಾತಂತ್ರ್ಯ ಬಂದೊಡನೆ ಸಾಮಾಜಿಕ ಆರ್ಥಿಕ ಉನ್ನತಿಯ ಆವೇಗದಲ್ಲಿ, ದೇಶದ ಸಂಸ್ಕೃತಿಯ ಅಂಗವಾಗಿರುವ ದೇಶೀಯ ಭಾಷೆಗಳ ಕುರಿತು ಹೆಚ್ಚಾಗಿ ಯೋಚನೆ ಮುಂದುವರಿಯಲಿಲ್ಲ. ಹೀಗಾಗಿ ತುಳು, ಕೊಡಗು ಮುಂತಾದ ಭಾಷೆಗಳು ಮೂಲೆಗುಂಪಾದುವು. ಓದಿದ ಜನರು ತಮ್ಮ ಮಾತೃಭಾಷೆಯಲ್ಲಿ ಮಾತನಾಡುವುದು ಪ್ರತಿಷ್ಠೆಗೆ ಕುಂದೆಂದು ಬಗೆದರು. ಇದೀಗ ಮತ್ತೆ ಸ್ವಭಾಷಾ ಮೋಹ ತಲೆಯೆತ್ತುತ್ತಿದೆ. ವಿದೇಶೀ ವಿದ್ವಾಂಸರು ತುಳು ಭಾಷೆ-ಸಂಸ್ಕೃತಿಯ ಕುರಿತು ಅಧ್ಯಯನ ಮಾಡಲು ಸಾಲುಗಟ್ಟಿ ಬರುವ ಹಿನ್ನೆಲೆಯಲ್ಲಿ ಊರಿನವರು ಮತ್ತೆ ಶಿಸ್ತುಬದ್ಧ ಅಧ್ಯಯನಕ್ಕೆ ತೊಡಗಿದ್ದಾರೆ. ಇದೊಂದು ಶುಭಲಕ್ಷಣ" ಎಂಬುದಂತೂ ಸತ್ಯವೆ.

1928ರಲ್ಲಿ ಯಸ್.ಯು. ಪಣಿಯಾಡಿಯವರು ಉಡುಪಿಯಲ್ಲಿ 'ತುಳುವ ಮಹಾಸಭೆ'ಯನ್ನು ಸ್ಥಾಪಿಸಿ, ಅನೇಕ ಉತ್ತಮ ಕೆಲಸಗಳನ್ನು ನಡೆಸಿದರೆ, ಮತ್ತೆ ಅದೇ ಸತ್ಪರಂಪರೆಯನ್ನು ಮುಂದುವರಿಸಿಕೊಂಡು ಪ್ರೊ.ಕು.ಶಿ. ಹರಿದಾಸ ಭಟ್ಟರು ತುಳುವಿನ ಭಾಷಾ ಸಮೃದ್ಧಿಯನ್ನು ದೇಶ ವಿದೇಶಗಳ ಪರ್ಯಂತ ತಿಳಿಯಪಡಿಸುವ ಸಾರ್ಥಕ ಕೆಲಸವನ್ನು ನಿರ್ವಹಿಸುತ್ತಿದ್ದಾರೆ – ಎಂಬುದು ಭಾಷಾವಿಜ್ಞಾನಿಗಳಿಗೆಲ್ಲ ಹೆಮ್ಮೆಯ ವಿಷಯ. ತುಳುವರಿಗಂತೂ ಇದೊಂದು ಆತ್ಮೀಯವಾದ ಸಂಗತಿ. ಶ್ರೀ ಹರಿದಾಸ ಭಟ್ಟರ ಈ ನಿಸ್ವಾರ್ಥ ಸಾಹಿತ್ಯ ಸೇವೆಗೆ ಎಲ್ಲ ವಿದ್ವಾಂಸರೂ ಸಹೃದಯರೂ ತುಂಬುಹೃದಯದ ಅಭಿನಂದನೆ ಸಲ್ಲಿಸಲೇಬೇಕು.

೮. ಯಕ್ಷಗಾನದಲ್ಲಿ ಔಚಿತ್ಯಪ್ರಜ್ಞೆ

— ಅಮೃತ ಸೋಮೇಶ್ವರ

ಒಂದು ಕಲೆಯ ಸರ್ವತೋಮುಖ ವಿಕಾಸಕ್ಕೆ ಅನೇಕ ಸ್ತರಗಳಲ್ಲಿ ನಿರಂತರವಾಗಿ ವಿವಿಧ ರೀತಿಯ ಉತ್ಪಾದಕ, ಪ್ರಚೋದಕ, ಪ್ರೋತ್ಸಾಹಕ, ಶೋಧಕ ಕ್ರಿಯೆಗಳು ನಡೆಯುತ್ತಿರಬೇಕಾಗುತ್ತದೆ. ಯಾವುದೇ ಸಾಹಿತ್ಯ ಅಥವಾ ಕಲಾಪ್ರಕಾರದ ಬೆಳವಣಿಗೆಯಲ್ಲಿ ಅದರ ಸೃಷ್ಟಿಕಾರನಂತೆಯೇ ಹೃದಯಗ್ರಾಹಕ ರಸಿಕನ ಪಾತ್ರವೂ ಹಿರಿದೇ ಆಗಿದೆ. ಈ ಸಹೃದಯ ರಸಿಕತೆಯು ಗುಣಗ್ರಹಣ ಮಾಡುವಂತೆಯೇ ಗುಣಸಾಹಿತ್ಯದ ಅಥವಾ ಕಲಾವಿರೂಪದ ವಿಮರ್ಶೆಯನ್ನು ಮಾಡಬಲ್ಲುದು; ಮಾಡುತ್ತ ಬಂದಿದೆ. ವಸ್ತುತಃ ಆಯಾ ಕಲೆಯ ಮೇಲಿನ ಪ್ರೀತಿ, ಅಭಿಮಾನಗಳೇ ಇಂಥ ವಿಮರ್ಶೆಗೆ ಕಾರಣ. ನ್ಯಾಯೋಚಿತ ಹಾಗೂ ಕಾಲೋಚಿತ ವಿಮರ್ಶೆಯ ಎಚ್ಚರದ ಕಣ್ಕಾಪು ಇಲ್ಲವಾದರೆ ಯಾವುದೇ ಕಲೆ ಕೇವಲ ಸ್ವಚ್ಛಂದವಾಗಿ ಯದ್ವಾತದ್ವಾ ಬೆಳೆದು ಬಿಡುವ ಸಾಧ್ಯತೆಯುಂಟು.

ಜನಪದ ಮೂಲದಿಂದ ಮೈವಡೆದು ಮೂಡಿದ ಯಕ್ಷಗಾನದಂಥ ಪರಿಪೂರ್ಣ ರಂಗಭೂಮಿಗೆ ಶತಮಾನಗಳ ಪರಂಪರೆ ಇರುವುದಾದರೂ, ಇತ್ತೀಚೆಗಿನ ವರ್ಷಗಳಲ್ಲಿ ಮಾತ್ರವೇ ಈ ಕಲೆಯ ಸುತ್ತ ವಿಮರ್ಶೆಯ ಕಣ್ಣುಗಳು ವಿಶೇಷವಾಗಿ ತಿರುಗಲಾರಂಭವಾದುದಾಗಿದೆ. ಯಕ್ಷಗಾನವು ಈ ಶತಮಾನದಲ್ಲಿ (ಮುಖ್ಯವಾಗಿ ಉತ್ತರಾರ್ಧದಲ್ಲಿ) ಅನೇಕ ಅವಸ್ಥಾಂತರಗಳನ್ನು ಹೊಂದಿದೆ; ಹೊಂದುತ್ತಿದೆ. ವೇಗವಾದ ಈ ಬದಲಾವಣೆಗಳನ್ನು ಲಕ್ಷಿಸಿ, ಯಕ್ಷಗಾನದ ಒಳ್ಳೆಯ ಅಂಶಗಳೆಲ್ಲಿ ನಾಶವಾದೀತೇನೊ ಎಂದು ಕೆಲವರು ಶಂಕಿಸಲಾರಂಭಿಸಿದ್ದು ಸಹಜವೇ. ಆದರೆ, ಕರಾವಳಿಯ ಜಿಲ್ಲೆಗಳುದ್ದಕ್ಕೂ ಅಲ್ಲಲ್ಲಿ ಸಾಂಪ್ರದಾಯಿಕ ಯಕ್ಷಗಾನದ ತರಬೇತು ಸಂಸ್ಥೆಗಳು, ಶಿಬಿರಗಳು, ವಿಚಾರಗೋಷ್ಠಿಗಳು, ಅನೇಕ ಹವ್ಯಾಸಿ ಪ್ರಯೋಗಗಳು, ಕಲಾವಿದರ ಸತ್ಕಾರಗಳು, ಈ ಕಲೆಯ ಕುರಿತಾದ ಲೇಖನ, ಗ್ರಂಥ ಪ್ರಕಾಶನಗಳು, ಹೊಸ ಹೊಸ ಯಕ್ಷಗಾನ ಮೇಳಗಳ ಆವಿರ್ಭಾವ ಇತ್ಯಾದಿ, ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ನಡೆಯುತ್ತಿರುವುದನ್ನು ಗಮನಿಸಿದರೆ, ಇದು ಯಕ್ಷಗಾನ ಕಲೆಯ ಒಂದು ಬಗೆಯ ಪುನರುಜ್ಜೀವನ ಯುಗವೆಂದರೂ ಸಲ್ಲುವುದು. ಇಂಥ ಸಂಧಿಕಾಲದಲ್ಲಿ ಅನೇಕ ಗೊಂದಲಗಳು ಕಾಣಿಸಿಕೊಳ್ಳುವುದೂ ಸಹಜವೇ. ಇಂಥ ವೇಳೆ ವಿಮರ್ಶೆಯ ದೀವಟಿಗೆಯ ಬೆಳಕು ಹೆಚ್ಚು ಅಗತ್ಯ.

ಇಂಥ ತಿಳಿವಿನ ದೀವಟಿಗೆಯನ್ನು ಎತ್ತಿ ಹಿಡಿದು ಬೆಳಕು ಹಾಯಿಸಿದವರಲ್ಲಿ ಅಗ್ರಗಣ್ಯರು ಡಾ. ಕಾರಂತರೆಂಬುದು ಸರ್ವವಿದಿತ. ಅವರ 'ಪರಮಗುರುತ್ವ'ವನ್ನು ಪ್ರಾಂಜಲವಾಗಿ ಒಪ್ಪಿಕೊಂಡ ಮುಖ್ಯರಲ್ಲಿ ಪ್ರೊ. ಕು.ಶಿ. ಯವರೂ ಒಬ್ಬರು. ಡಾ. ಕಾರಂತರ ಮೊದಮೊದಲ ಯಕ್ಷಗಾನ ಜೈತ್ರಯಾತ್ರೆಗಳಲ್ಲಿ ಸಹಯಾತ್ರಿಗಳಾಗಿ, ಮುಂದೆ ತಾವೇ ತಂಡದ ನೇತಾರರಾಗಿ ಯಕ್ಷಗಾನವನ್ನು ಜಗದಗಲ ಮೆರೆಸಿದ ಹೊಂತಕಾರಿ ಇವರು. ಉಡುಪಿಯ ಯಕ್ಷಗಾನ ಕೇಂದ್ರದ ರೂವಾರಿಗಳಲ್ಲಿ ಪ್ರಮುಖರಾಗಿ, ಅನೇಕ ಯಕ್ಷಗಾನ ಸಂಬಂಧಿ ಕಾರ್ಯಕ್ರಮಗಳ ಸಂಯೋಜಕರಾಗಿ, 'ಪ್ರಸಂಗ'ವೆಂಬ ಆಂಗ್ಲ ನಿಯತಕಾಲಿಕೆಯ ಪ್ರೇರಕ ಶಕ್ತಿಯಾಗಿ, 'ಒಡ್ಡೋಲಗ', 'ಸಮಗ್ರ ಯಕ್ಷಗಾನ' ಮುಂತಾದ ವಿಶಿಷ್ಟ ಸಂಪುಟಗಳ ಸಂಪಾದಕರಾಗಿ, ಉಡುಪಿಯ ರಾ. ಗೋ. ಪೈ. ಸಂಶೋಧನ ಕೇಂದ್ರ ಹಾಗೂ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರಗಳ ಮೂಲಕ ಯಕ್ಷಗಾನಕ್ಕೆ ಸಂಬಂಧಪಟ್ಟ ಹಲವು ಅಧ್ಯಯನ ಕೃತಿಗಳು ಪ್ರಕಟವಾಗುವುದಕ್ಕೆ ಪ್ರಚೋದಕವಾಗಿ, ಸ್ವತಃ ಸಾಕಷ್ಟು ವಿಮರ್ಶನಾತ್ಮಕ ಬರಹಗಳನ್ನೂ, ಭಾಷಣಗಳನ್ನೂ ಈ ವಿಚಾರದಲ್ಲಿ ಪ್ರಸ್ತುತಪಡಿಸಿದವರಾಗಿ, ಯಕ್ಷಗಾನ ಕಲೆಯ ಬಹುಮುಖವಾದ ಬೆಳವಣಿಗೆಗಾಗಿ ದುಡಿದ ಹಿರಿಯ ಚೇತನ ಇವರದು. ಇಂಥ ಬಹುಶ್ರುತ ಅಭಿಜ್ಞರು ವ್ಯಕ್ತಗೊಳಿಸುವ ಅಭಿಪ್ರಾಯಕ್ಕೆ ಸಹಜವಾಗಿಯೇ ಮೌಲ್ಯವಿರುತ್ತದೆ.

---

1. ಈ ಭಾಷಣವು ಮೊದಲು ಪುಟ್ಟ ಪುಸ್ತಿಕೆಯಾಗಿ ಅಚ್ಚಾಗಿ, ಆ ಬಳಿಕ ಪ್ರೊ. ಕು. ಶಿ.ಯವರಿಂದ ಸಂಪಾದಿತವಾಗಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಿಂದ ಪ್ರಕಟವಾದ ಸಮಗ್ರ ಯಕ್ಷಗಾನ ಎಂಬ ಲೇಖನದಲ್ಲಿ ಸೇರ್ಪಡೆಗೊಂಡಿದೆ – 1988.

ಪ್ರೊ. ಕು.ಶಿ. ಹರಿದಾಸ ಭಟ್ಟರ, "ಯಕ್ಷಗಾನದಲ್ಲಿ ಔಚಿತ್ಯಪ್ರಜ್ಞೆ" ಎಂಬುದು ಯಕ್ಷಗಾನದ ಸ್ಥಿತಿಗತಿಗಳ ಬಗೆಗೆ ಕ್ಷ-ಕಿರಣ ಬೀರುವ ಒಂದು ವಿಚಕ್ಷಣ ಲೇಖನ. ಇದು, ಕಾಸರಗೋಡು ಕನ್ನಡಿಗರ ಸಮ್ಮೇಳನದ ಅಂಗವಾಗಿ ಜರಗಿದ ಯಕ್ಷಗಾನ ಗೋಷ್ಠಿಯ ಅಧ್ಯಕ್ಷ ಭಾಷಣ.

ಜೀವನಕ್ಕೆ ಸಂಬಂಧಪಟ್ಟ ಸರ್ವವಿಚಾರಗಳಲ್ಲೂ ಸಂಸ್ಕಾರವನ್ನೂ, ಸುಸಂಬದ್ಧತೆಯನ್ನೂ, ಸೌಂದರ್ಯವನ್ನೂ ಕಾಪಾಡುತ್ತ ಬರುವ ವಿಶಿಷ್ಟ ತತ್ವವೆಂದರೆ ಔಚಿತ್ಯ ಪ್ರಜ್ಞೆ. ಈ ಮೌಲ್ಯದ ಸುತ್ತ ಅರಳಿಕೊಂಡ ವಿಚಾರ ಸರಣಿ ಇದು. ಭಾಷಣದ ಧಾಟಿಯಲ್ಲಿರುವುದರಿಂದ ಆ ತಕ್ಕ ಮಿತಿಯೂ ಇದಕ್ಕಿದೆಯೆಂಬುದನ್ನು ಗ್ರಹಿಸಬೇಕು.

ಪ್ರಾರಂಭದಲ್ಲಿ ಎಲ್ಲ ತಿಟ್ಟು, ಪಾಯಗಳ ಕಲಾಕಾರರಿಗೆ ನಮನ ಸಲ್ಲಿಸುವುದರೊಂದಿಗೆ, ಯಕ್ಷಗಾನಕ್ಕೆ ವಿಶ್ವವೇದಿಕೆ ಕಲ್ಪಿಸಿಕೊಟ್ಟ ಡಾ. ಶಿವರಾಮ ಕಾರಂತರನ್ನು ಮುದದಿಂದ ಕೊಂಡಾಡಿ ಮುಂದುವರಿಯುತ್ತಾರೆ. ಯಕ್ಷಗಾನದ ಮೂಲದ ಬಗೆಗೆ ವಿದ್ವಾಂಸರಿಂದ ಮಂಡಿತವಾದ ಕೆಲವು ವಾದಗಳನ್ನು ಉಲ್ಲೇಖಿಸಿ ಈ ಕುರಿತು ಇದಮಿತ್ಥಂ ಎಂದು ಹೇಳಲು ಸಾಧ್ಯವಾಗಿಲ್ಲವೆಂದು ಸಕಾರಣವಾಗಿಯೇ ಹೇಳುತ್ತಾರೆ. ಸುಖದುಃಖಗಳನ್ನು ಸಂಸ್ಕೃತದ ಪರಿಜ್ಞಾನವಿಲ್ಲದೆ ತೋಡಿಕೊಳ್ಳುವುದು, ಕಲಾತ್ಮಕವಾದ ರೀತಿಯಲ್ಲಿ ಪ್ರಕಟಿಸುವುದು ಆದಿವಾಸಿ ಜನಾಂಗಕ್ಕೂ ಸಾಧ್ಯವಿರುವಾಗ, ಯಕ್ಷಗಾನದ ಮೂಲವನ್ನು ಹುಡುಕಲು ಅಷ್ಟು ದೂರ ಹೋಗುವುದು ವೃಥಾ ಪ್ರಯಾಸವೆಂದು ನನಗನಿಸುತ್ತದೆ. ಬೇಕಾದರೆ ಭರತನಾಟ್ಯಕ್ಕೆ ಭರತನನ್ನು ಪೂರ್ತಿ ಹೊಣೆಗಾರನಾಗಿ ಮಾಡಿ ಯಕ್ಷಗಾನವನ್ನು ನಾವು ನಮ್ಮ ಸ್ವಂತಕ್ಕೆ ಇಟ್ಟುಕೊಂಡು ನಮ್ಮ ರಾಜ್ಯದ ಎಲ್ಲೆಯೊಳಗೇ ದೀಪಟಿಗೆ ಹಿಡಿದು ಹೊರಡುವುದು ಒಳ್ಳೆಯದು ಎಂದು ಸಂಶೋಧಕರಿಗೆ ಕಿವಿಮಾತು ಹೇಳುತ್ತ ಜನಪದ ಕಲ್ಪನಾ ವಿಲಾಸದ ಮೂಲದೆಡೆಗೆ ಕೈಬೆರಳು ತೋರಿದ್ದಾರೆ.

ಮುಂದೆ, ಯಕ್ಷಗಾನ ಸ್ವರೂಪ–ಸ್ವಧರ್ಮಗಳ ಕುರಿತು ವಿವೇಚಿಸುತ್ತ, ಇಂಥ ಕಲೆಯಲ್ಲಿ ಅನೇಕ ಮನೋ ಧರ್ಮಗಳು ಮೇಳವಿಸಿ ಅದ್ಭುತವಾದ ಒಂದು ಕಲ್ಪನಾಲೋಕವನ್ನು ಸೃಷ್ಟಿಸುತ್ತವೆಂದೂ, ಒಂದು ಪರಂಪರೆಯ ಚೌಕಟ್ಟಿನಲ್ಲಿ ಮೂಲ ಸಂಪ್ರದಾಯ ಬೆಳೆಯಿತೆಂದೂ ಹೇಳುತ್ತಾರೆ. ಜನತಾ ಜನಾರ್ದನರೇ ಇದರ ಮಹಾಪೋಷಕ ರಾಗಿದ್ದರೂ ಅವರಿಗೆ ಬೇಕಾಗಿಯೋ ಬೇಡವಾಗಿಯೋ ಕಲೆಯಲ್ಲಿ ವರ್ಣಸಂಕರ ತಲೆಹಾಕಿ, "ಬೇಡಿಕೆ–ಪೂರೈಕೆ ತತ್ವದ ಮೇಲೆ ನಿರ್ವಹಿಸುವ ಇತರ ವ್ಯಾಪಾರಗಳಂತೆ ಕಲೆಯೂ ಒಂದು ವ್ಯಾಪಾರವಾಗಿ ಬಿಟ್ಟರೆ, ಯಕ್ಷಗಾನ ತನ್ನ ಸಂಪ್ರದಾಯದ ಸುರಕ್ಷಿತ ರೇವನ್ನು ಬಿಟ್ಟು ಮಹಾಸಾಗರದ ಜಂಝಾವಾತಕ್ಕೂ, ಅರೆಬಂಡೆಗಳಿಗೂ ಸುಳಿಗುಂಡಿ ಗಳಿಗೂ ಸಿಲುಕಿ ತಲ್ಲಣಿಸುವುದು ಖಂಡಿತ" ಎನ್ನುತ್ತ ಲೇಖಕರು ಕಲಾವಿಮರ್ಶಕರ ಕರ್ತವ್ಯದ ಕುರಿತು ಕರೆಗಂಟೆ ಬಾರಿಸುತ್ತಾರೆ. "ಕಲೆಯ ಆಧುನೀಕರಣ ಅದರ ಸ್ವಧರ್ಮವನ್ನು ಉಲ್ಲಂಘಿಸಿ ನಡೆದಾಗ ಕಲೆಗೆ ಅಪಚಾರವಾಗುತ್ತದೆ" ಎಂಬುದನ್ನು ಮನರಂಜನೆ ಬಯಸುವ ಜನಸಾಮಾನ್ಯರು ಅರಿಯದಿದ್ದರೂ, ವಿಮರ್ಶಕರಾದವರು ತಮ್ಮ ಎಚ್ಚರ್ನುಡಿ ನುಡಿಯಲೇ ಬೇಕಾಗುತ್ತದೆ. ಈ ಮಾತು ತುಂಬಾ ಸಮಯೋಚಿತ. ಕಲೆಯ ಸ್ವಧರ್ಮವನ್ನು ಅದರ ಸೀಮಾರೇಖೆ ಯನ್ನು ಗುರುತಿಸಿ ಹೇಳುವುದು ಸುಲಭಸಾಧ್ಯವಲ್ಲವಾದರೂ ಇಂಥ ಪ್ರಯತ್ನವನ್ನು ಡಾ. ಕಾರಂತರಂಥವರು ಮಾಡಿದಾಗ ಅದರ ಪರಿಣಾಮ ಯಕ್ಷಗಾನ ಕಲಾಲೋಕದ ಮೇಲೆ ಪ್ರತ್ಯಕ್ಷವಾಗಿಯೇ ಪರೋಕ್ಷವಾಗಿಯೇ ಉಂಟಾದುದನ್ನು ಗಮನಿಸದಿರಲಾಗುವುದಿಲ್ಲ.

ಯಕ್ಷಗಾನಕ್ಕೆ ಪ್ರಕೃತ ಒದಗಿದ ವ್ಯಾಪಾರೀ ಹಾಗೂ ಮನರಂಜಕ ಸ್ವರೂಪವನ್ನು ಲೇಖಕರು ವಸ್ತುನಿಷ್ಠವಾಗಿ ಸಮೀಕ್ಷಿಸುತ್ತಾರೆ. ಇಲ್ಲಿ ಕಲಾವಿದರನ್ನಾಗಲೀ, ಬಂಡವಾಳ ಹೂಡಿದ ಮೇಳದ ಯಜಮಾನರನ್ನಾಗಲೀ ಅನವಶ್ಯಕ ವಾದ ಹಗುರ ಮಾತುಗಳಿಂದ ಕಟಕಿಯಾಡದೆ, "ಟೆಂಟು ಮೇಳಗಳು ಟಿಕೇಟು ಆಟಗಳನ್ನು ಶಿಸ್ತುಪೂರ್ಣವಾಗಿ ಪೂರ್ವಯೋಜನೆಯಂತೆ ಸಜಾಹೀರಾತು ಆಡುವುದನ್ನು ನೋಡಿದರೆ ಸಂತೋಷವಾಗುತ್ತದೆ" ಎನ್ನುತ್ತಾರೆ. ಎಂದರೆ, ಯಕ್ಷಗಾನದ ಆರ್ಥಿಕ ಆಯಾಮದ ಕುರಿತು ಸಮಾಧಾನ ತಾಳುತ್ತಾರೆ. ಕರ್ನಾಟಕ ಯಕ್ಷಗಾನ ನಾಟಕ ಸಭೆಯ "ಪಂಜುರ್ಲಿ ಪ್ರತಾಪ"ವನ್ನು ಅದರ ತುಳು ಕನ್ನಡ ಉಭಯ ಭಾಷಾ ಪಾಂಡಿತ್ಯಕ್ಕೂ, ತುಳು ಧಾಟಿಯ ಗಂಡಸುಗಾರಿಕೆಗೂ ಸಂಭಾಷಣೆಯ ಸ್ವಾರಸ್ಯಕ್ಕೂ, ಮಿಜಾರು ಅಣ್ಣಪ್ಪನವರ ಹಾಸ್ಯಗಾರ ಪಾತ್ರಕ್ಕೂ ಮನಸ್ಸಿನಲ್ಲಿ ಶಹಭಾಸ್ ಎಂದಿದ್ದೇನೆ"–ಎನ್ನುವ ಲೇಖಕರ ಸಹನೆ, ರಸಿಕತೆ, ಕುತೂಹಲ, ಔದಾರ್ಯ ಅನೇಕ ಯಕ್ಷಗಾನ ವಿಮರ್ಶಕರಿಗಿಲ್ಲ. ನಮ್ಮ ಅನೇಕ ವಿಮರ್ಶಕರು ಪ್ರಯೋಗಗಳನ್ನು ನೋಡದೆ ವಿಮರ್ಶೆಯ ಕುಡಾರವನ್ನು ಮಸೆಯುವವರಾಗಿದ್ದಾರೆ. ಹಾಗೆಂದು ಕು.ಶಿ.ಯವರು ಈ ನವೀನ ಪ್ರಯೋಗಗಳನ್ನು ಕಲೆಯ ಫಲಗಳೆಂದು ಕರೆಯಲು ಉತ್ಸಾಹವಿದೆ, ಈ ಪರಿಸ್ಥಿತಿ ಹೇಗಾಯಿತೆಂದು ವಿಶ್ಲೇಶಿಸುತ್ತಾರೆ. "ಇದರ ಪೂರ್ತಿ ಶ್ರೇಯಸ್ಸು– ರುಚಿ ಶುಚಿ ಎರಡೂ ಇಲ್ಲದ ರಸಿಕರದು ಮತ್ತು ಇದು ನಮಗಲ್ಲ ಎಂದು ಇನ್ನೂ ತಾತ್ಸಾರಭಾವದಿಂದ ಇರುವ ನಮ್ಮ ವಿದ್ಯಾವಂತ ವರ್ಗದ್ದು" ಎಂಬ ಇವರ ತೀರ್ಮಾನ ಯಥಾರ್ಥವಾದದ್ದು". "ಮೃತಪೆಟ್ಟಿಗೆಯ ಮುಖಾಂತರ ಕಲೆಯ ಶ್ರೇಷ್ಠತ್ವದ ಹೊಲಬಾಗುವುದಿಲ್ಲ" ಎಂಬುದು ಕಲಾಲೋಕದ ಸತ್ಯ.

ಯಕ್ಷಗಾನ ಪ್ರಪಂಚದಲ್ಲಾದ ರೂಪಾಂತರ, ರಂಗಾಂತರ, ವೇಷಾಂತರ, ಸಂಗೀತಾಂತರ, ಪ್ರಸಂಗಾಂತರ,

ಭಾಷಾಂತರಗಳನ್ನು ಇತರ ಅವಾಂತರಗಳನ್ನು ಲೇಖಕರು ಸೂಚಿಸಿ ಇವುಗಳಲ್ಲಿ ಔಚಿತ್ಯ ಎಷ್ಟು ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಪ್ರತಿಯೊಂದು ಎಳೆಯನ್ನು ಬಿಡಿಬಿಡಿಯಾಗಿ ಪರಾಮರ್ಶಿಸದಿದ್ದರೂ, ಸೂಚಿತ ವಿಚಾರಗಳು ಆಲೋಚನೆಗೆ, ಆಲೋಢನೆಗೆ ಹಚ್ಚುವಂತಿವೆ.

ಯಕ್ಷಗಾನ ವೇಷಭೂಷಣಗಳು ಯಾವುದೇ ಶಿಲ್ಪ ಅಥವಾ ಚಿತ್ರಕಲೆಯ ಅನುಕರಣವಲ್ಲವೆಂದೂ ಅದು ಅನಾಮಧೇಯ ಗುಡಿಗಾರ ಕಲಾವಿದನೊಬ್ಬನ ಕಾಣಿಕೆಯೆಂದೂ ಡಾ. ಕಾರಂತರೆನ್ನುವ ಮಾತನ್ನು ಲೇಖಕರು ಅನುಮೋದಿಸುತ್ತಾರೆ. ಆದರೆ ಈ ದಿಶೆಯಲ್ಲಿ ತುಳುನಾಡಿನ ಹಾಗೂ ಕೇರಳದ ಭೂತಾರಾಧನಾ ರಂಗಭೂಮಿಯಿಂದ ಯಕ್ಷಗಾನವು ಪಡೆದಿರಬಹುದಾದ ಮೂಲಾಂಶಗಳನ್ನು ಡಾ. ಕಾರಂತರಾಗಲೀ ಇತರರಾಗಲೀ ಪರಿಶೀಲಿಸಿದಂತಿಲ್ಲ.

ಉಡುಪಿಯ ಯಕ್ಷಗಾನ ಕೇಂದ್ರವು ಸ್ಥಾಪಿತವಾದ ಹಿನ್ನೆಲೆಯನ್ನು ಲೇಖನದ ಮುಂದಿನ ಭಾಗವು ವಿವರಿಸುತ್ತದೆ. ಅದರ ವ್ಯಾಪ್ತಿ, ಉದ್ದೇಶ, ಶಿಕ್ಷಣ ಪದ್ಧತಿ ಇತ್ಯಾದಿಗಳ ವಿವರ ಬಂದಿದೆಯಲ್ಲದೆ, ಸರಿಯಾದ ವಿದ್ಯಾರ್ಥಿಗಳನ್ನು ದೊರಕಿಸಿಕೊಳ್ಳುವ ಸಮಸ್ಯೆ ಶಿಕ್ಷಣ ಪಡೆದಾಗ ಮೇಲಿನ ಸಮಸ್ಯೆಗಳೂ ಚರ್ಚಿತವಾಗಿವೆ. ದೇಶವಿದೇಶಗಳ ರಂಗಭೂಮಿಗಳನ್ನು ಅವುಗಳ ಸಮಸ್ಯೆಗಳನ್ನೂ ಬಲ್ಲ ಲೇಖಕರು, "ಇಂಗ್ಲೆಂಡಿನಲ್ಲಿಯೂ – ಎಲ್ಲಿ ಮನಸ್ಸು ಅಳುಕಿರದೇ ಎಲ್ಲಿ ತಲೆಬಾಗಿರದೋ, ಎಲ್ಲಿ ರಂಗಭೂಮಿಯ ಸಂಪ್ರದಾಯ ಅವಿಚ್ಛಿನ್ನವಾಗಿ ನೆಲೆನಿಂತಿದೆ ಎನ್ನುತ್ತೇವೋ ಅಂಥಲ್ಲಿ ವ್ಯವಸಾಯಿಗಳ ಗೋಳು ತಾಪತ್ರಯ ತಪ್ಪಿದ್ದಲ್ಲ ಎನ್ನುವಾಗ ನಾವು ಅತೃಪ್ತಿಗೊಳ್ಳಬಾರದು" ಎಂದು ವಾಸ್ತವದ ನೆಲೆಯಲ್ಲಿ ನಿಂತು ಯೋಚಿಸುತ್ತಾರೆ. ನಿರಾಶಾವಾದಿಯೋ ಜಡಸಂಪ್ರದಾಯವಾದಿಯೋ ಆಗದೆ, ನವ್ಯ ರಂಗಭೂಮಿಯ ಪ್ರಯೋಗಶೀಲ ನಿರ್ದೇಶಕರು ಯಕ್ಷಗಾನ ಅಂಗಾಂಶಗಳನ್ನು ತಮ್ಮ ಸೃಷ್ಟಿಕ್ರಿಯೆಗೆ ಕಸಿ ಕಟ್ಟುವುದನ್ನು ಮೆಚ್ಚುತ್ತಾರೆ. ಕರ್ನಾಟಕದಲ್ಲಿ ರಂಗಭೂಮಿ ಎಂದೊಂದು ಉಳಿದಿರುವುದಾದರೆ ಅದು ಯಕ್ಷಗಾನಕ್ಕೆ ಮಾತ್ರ, ಇದರಲ್ಲಿ ಮಾತ್ರ ರಂಗಗಂಧ (ಸ್ಟೇಜ್‌ಸ್ಮೆಲ್) ಹೊರಡುತ್ತಿದೆ" – ಎಂದು ಭಾರತದ ಪ್ರಸಿದ್ಧ ಕಲಾವಿದ ನಿರ್ದೇಶಕ ಬಿ.ವಿ. ಕಾರಂತರು ಹೇಳಿದುದನ್ನು ಅಭಿಮಾನದಿಂದ ನೆನೆಯುತ್ತಾರೆ. ಯಕ್ಷಗಾನವು ಸೀಮೋಲ್ಲಂಘನ ಮಾಡುವ ಹಂತವನ್ನು (ಟೇಕ್ ಆಫ್ ಸ್ಟೇಜ್) ಮುಟ್ಟಿದುದನ್ನು ಹೆಮ್ಮೆಯಿಂದ ಸ್ಮರಿಸುತ್ತ ಜೊತೆಗೆ ಅದರ ಬಂದಣಿಕೆಗಳನ್ನು ಕಳೆದೊಗೆದು, ಮೂಲ ಸತ್ವ, ಸ್ವತ್ವಗಳನ್ನು ಬೆಳೆಸಿಕೊಳ್ಳುವ ದಿಶೆಯಲ್ಲಿ ಜಾಗೃತರಾಗುವಂತೆ ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರತಿಯೊಂದು ವರ್ಗಕ್ಕೂ ಸೂತ್ರ ರೂಪವಾದ ಕಿವಿಮಾತನ್ನು ಹೇಳಿ ಈ ಲೇಖನವನ್ನು ಪರಿಣಾಮಕಾರಿಯಾಗಿ ಕೊನೆಗಾಣಿಸಿದ್ದಾರೆ. ಹಾಗೆ ಕೊನೆಗಾಣಿಸುವಾಗ ಯಕ್ಷಗಾನವೇ ಜೀವನದ ಗುರಿಯಾಗಿ ನಾಲ್ಕು ಜನ ತರುಣರು ಇದನ್ನು ಜಾಗತಿಕ ಕಲೆಯೆಂಬ ನಿಟ್ಟಿನಲ್ಲಿ ತಿರುಗಿ ನೋಡುವಂತೆ ಪ್ರೇರಣೆ ಒದಗಲಿ" ಎಂದು ಕಳಕಳಿಯಿಂದ ಹಾರಯಿಸಿದ್ದಾರೆ. ಇಂಥ ನಿಷ್ಠೆ, ಪ್ರವೃತ್ತಿ ಇಲ್ಲವಾದರೆ ಯಾವುದೇ ಕಲೆ ಬೆಳೆಯಲಾರದು; ಬೆಳಗಲಾರದು. ಪ್ರೊ. ಕು.ಶಿ.ಯವರು ದೇಶವಿದೇಶಗಳ ಅನೇಕ ಕಲಾಪ್ರಕಾರಗಳನ್ನು ಕಂಡವರು. ಅವುಗಳ ನಡುವೆ ಯಕ್ಷಗಾನದ ಬೆಲೆಯನ್ನು ಕಟ್ಟಬಲ್ಲ ಕಾಣ್ಕೆಯಿದ್ದವರು. ಅವರು ಇದನ್ನು ಜಾಗತಿಕ ಕಲೆಯೆಂದು ಕರೆದಿರುವುದು ಕೇವಲ ಭಾವಾವೇಶದಿಂದ ಅಲ್ಲ; ಏಕೆಂದರೆ ಜಗತ್ತಿನ ಅನೇಕ ಕಲಾತಜ್ಞರು ಇದನ್ನು ಹಾಗೆಂದು ಒಪ್ಪಿದ್ದಾರೆ.

ಈ ಹಿರಿಯ ಕಲಾಸಂಪತ್ತಿನ ಪ್ರಜ್ಞೆ ನಮ್ಮಲ್ಲಿ ಗಾಢವಾಗಿ ಸ್ಫುರಿಸಿ, ಇದರ ಸ್ವತ್ವವನ್ನು ಉಳಿಸಿ ಬೆಳೆಸುವ ಪ್ರಯತ್ನಶೀಲತೆ ನಮ್ಮಲ್ಲಿ ಒಡಮೂಡಿಸುವಲ್ಲಿ "ಔಚಿತ್ಯ ಪ್ರಜ್ಞೆ"ಯಂಥ ಲೇಖನಗಳು ತುಂಬ ಅಗತ್ಯ ಮತ್ತು ಸಕಾಲಿಕ.

೯. ನಡುಹಗಲಲ್ಲಿ ಕಗ್ಗತ್ತಲೆ

— ಎಂ. ಎಸ್. ಸುಮಿತ್ರಾ

ಹರಿದಾಸ ಭಟ್ಟರು ಅನುವಾದಿಸಿರುವ ಕೃತಿ. ಮೂಲ ಲೇಖಕ ಆರ್ಥರ್ ಕೊಸ್ಲರ್. ಕೊಸ್ಲರ್ ಈ ಶತಮಾನದ ಖ್ಯಾತಿವೆತ್ತ ಲೇಖಕರಲ್ಲೊಬ್ಬರು; ಪತ್ರಿಕೋದ್ಯಮಿ ಕೂಡಾ. ಪ್ಯಾಲೆಸ್ಟೈನಿನಲ್ಲಿ ಕೃಷಿಕನಾಗಿ, ಹಿಟ್ಲರನ ಸರ್ವಾಧಿಕಾರ ಕಾಲದಲ್ಲಿ ಜರ್ಮನಿಯ ಸೆರೆಮನೆಯಲ್ಲಿ ಕೈದಿಯಾಗಿದ್ದು, ರಷ್ಯದ ಅತಿಥಿಯಾಗಿ ಅಲ್ಲಿ ಸುತ್ತಾಡಿ, ಅಪಾರ ಅನುಭವಗಳಿಸಿದವರು. ಹಲವು ಕಾದಂಬರಿಗಳು, ಆತ್ಮಕಥೆಯನ್ನು ಬರೆದಿದ್ದಾರೆ.

ನಿರಾಪರಾಧಿ ವ್ಯಕ್ತಿಯೊಬ್ಬ ಜೈಲಿನಲ್ಲಿ ಏಕಾಂತ ವಾಸಕ್ಕೆ ಗುರಿಯಾಗಿ. ಹಂತಕರಿಂದ ಸಾವಿಗೀಡಾಗುವ ಹೃದಯಸ್ಪರ್ಶಿ ಕಥೆ 'ನಡುಹಗಲಲ್ಲಿ ಕಗ್ಗತ್ತಲೆ.' ಕಥಾನಾಯಕ ರುಬಷೋವ್ ಕ್ರಾಂತಿವೀರ. ಅವನು ಸೆರೆಸಿಕ್ಕುವ ನಿರೀಕ್ಷೆಯಿಂದ ನಿದ್ದೆಯಲ್ಲೂ ಚಡಪಡಿಸುವುದು ಕುತೂಹಲಕರವಾಗಿದೆ. ಆ ಕಾಲದ ಸೆರೆಮನೆಯ ಚಿತ್ರ ರುಬಷೋವ್ ಕೈದಿಯಾಗಿ ಆನಂತರ ನಿರೂಪಿತವಾಗಿದೆ. ಜೈಲಿನಲ್ಲಿ ಕೊಡುವ ಶಿಕ್ಷೆಗಳ ನಿಕಟ ಪರಿಚಯ ಅವನಿಗೆ ಆಗಿತ್ತೆಂಬುದು ಕೈದಿಗಳ ಚೀರಾಟ ಕೇಳಿಯೇ ಶಿಕ್ಷೆ ಯಾವುದೆಂಬುದನ್ನು ಸರಿಯಾಗಿ ಊಹಿಸುತ್ತಿದ್ದುದರಿಂದ ನಾವು ತಿಳಿಯಬಹುದು. ರುಬಷೋವ್ ವ್ಯಕ್ತಿತ್ವದ ಪರಿಚಯ 'ಕ್ರಾಂತಿಯ ಯಶಸ್ಸಿಗೋಸ್ಕರ ಬೇಕಾದಷ್ಟು ಬಲಿಕೊಡಲು ರುಬಷೋವ್ ಹಿಂಜರಿಯಲಾರನು' (ಪುಟ – 67); 'ರುಬಷೋವ್‌ನ ಯೋಗ್ಯತೆ, ಕೀರ್ತಿ ದೊಡ್ಡದು, ಪ್ರಖ್ಯಾತ ಶಾಸನಕ್ಕೂ, ಅಧಿಪತ್ಯಕ್ಕೂ ವಿರುದ್ಧವಾಗಿ ವರ್ತಿಸಿದ, 'ರುಬಷೋವ್ ಶರಣು ಬರುವುದು ಅಂಜುಬುರುಕುತನದಿಂದಲ್ಲ, ತರ್ಕ ಪ್ರಾಮಾಣ್ಯದಿಂದ ಎಂಬುದನ್ನು ನೀನೇ ನೋಡುವಿಯಂತೆ. ಕಠೋರತೆಯಿಂದ ಅವನ ಮೇಲೆ ಯಾವ ಪರಿಣಾಮವೂ ಆಗದು. ಬಡಿದಷ್ಟೂ ಗಟ್ಟಿಯಾಗುವ ಜಾತಿಯ ಪದಾರ್ಥ ಅದು' (ಪುಟ – 130) ಮೊದಲಾದ ಮಾತುಗಳಿಂದ ಓದುಗರಿಗೆ ಸುವ್ಯಕ್ತ.

'ಧರಣೀ ತಲದ ಪತಿತರೆ ಜಾಗ್ರತರಾಗಿ'; 'ಇತಿಹಾಸದ ಮಹಾಪರ್ವತದಲ್ಲಿ, ವ್ಯಕ್ತಿಯು ಅಣುರೇಣುವಿನಂತೆ ನಿಕೃಷ್ಟ'; 'ಸತ್ಯಕ್ಕಿಂತಲೂ ಅಸತ್ಯವೇ ಪ್ರಯೋಜನಕಾರಿ ಎಂದು ಇತಿಹಾಸವು ನಮಗೆ ಪಾಠ ಕಲಿಸಿದೆ' – ಮುಂತಾದ ವಾಕ್ಯಗಳು ಆ ಪರ್ವ ಕಾಲದ ರಾಜಕೀಯ ಪರಿಸ್ಥಿತಿ ಹೇಗಿತ್ತೆಂಬುದನ್ನು ಮನದಟ್ಟು ಮಾಡಿಕೊಡುತ್ತವೆ. ರಿಚರ್ಡ್, ಕುಂಟಲೋವಿ, ಐವನೋವ, ಗ್ಲೆಟ್‌ಕಿನ್, ಅರ್ಲೋವ, ಮೈಕೇಲ್ ಬೊಗ್ರೋವ್, ವಾಸ್ಸಿಲಿ ಇತ್ಯಾದಿ ಪಾತ್ರಗಳು ರುಬಷೋವ್‌ನ ಸುತ್ತಾ ಸುಳಿದಾಡಿವೆ. ಅವನ ಪಾತ್ರಪೋಷಣೆಗೆ, ಅವನನ್ನು ಅರ್ಥ ಮಾಡಿಕೊಳ್ಳುವುದಕ್ಕೆ ನೆರವಾಗಿವೆ.

ಮೂರು ವಿಚಾರಣೆಗಳು ನಡೆದು, ರುಬಷೋವ್ ಮೇಲೆ 'ಕ್ರಾಂತಿ ವಿರೋಧಕ ಮನೋವೃತ್ತಿ', 'ಶತ್ರು ರಾಷ್ಟ್ರದೊಡನೆ ಗುಪ್ತ ಸಂಧಾನ' ಎಂಬೆರಡು ಆರೋಪಗಳನ್ನು ಹೊರಿಸಲಾಯಿತು. "ಸಮಯಕ್ಕೆ ಸರಿಯಾಗಿ ನಿನ್ನನ್ನು ಕೈದು ಮಾಡಿದ್ದುರಿಂದ ಪರಿಣಾಮವಾಗಲಿಲ್ಲ, ಇಲ್ಲವಾದರೆ ಬೇಕಾದಷ್ಟು ಆಗುತ್ತಿತ್ತು." ಗ್ಲೆಟ್‌ಕಿನ್ ಎಂಬುವವನು ಆಡಿದ ಮಾತಿದು. ಅದಕ್ಕೆ ರುಬಷೋವ್‌ನ ಉತ್ತರ – "ನಾನು ಕ್ರಾಂತಿ ವಿರೋಧಕ ಮನೋವೃತ್ತಿಯಿಂದ ಕೆಲಸ ಮಾಡಿದ್ದೂ ಇಲ್ಲ, ಶತ್ರುರಾಷ್ಟ್ರದ ಚಾಕರಿ ಮಾಡಿದ್ದೂ ಇಲ್ಲ. ನನ್ನ ಅಭಿಪ್ರಾಯ ಮತ್ತು ಆತ್ಮಸಾಕ್ಷಿಗೆ ಅನುಸಾರವಾಗಿ ನಾನು ಯೋಚಿಸಿದ್ದೇನೆ, ಮಾಡಿದ ಕೆಲಸ ಮಾಡಿದ್ದೇನೆ." ಆದರೂ "ಅಪರಾಧವನ್ನು ಒಪ್ಪಿಕೊಳ್ಳುತ್ತೀಯಾ?" ಎಂದು ಕೇಳಿದಾಗ ರುಬಷೋವ್ "ಹೌದು" ಎಂದು ಬಿಟ್ಟ. ಆರೋಪಿಗೆ ಕೊನೆಯ ಮಾತು ಹೇಳಲು ಅವಕಾಶ ಕೊಟ್ಟಾಗ "ನನ್ನ ಕೊನೆಯ ಗಳಿಗೆಯ ಹೊಸಲಲ್ಲಿ ನಿಂತು ನಾನು ನನ್ನ ದೇಶಕ್ಕೂ ಜನತೆಗೂ ನನ್ನ ವಿನೀತ ವಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಕೆಲಸ ಮುಗಿಯಿತು, ನಾನು ಸುಂಕವನ್ನು ಕೊಟ್ಟಾಯಿತು. ಋಣ ಸಂದಾಯ ಮಾಡಿ ಆಯಿತು. ಇತಿಹಾಸದ ಹತ್ತಿರ ನನ್ನ ಯಾವ ಲೆಕ್ಕವೂ ಬಾಕಿ ಉಳಿದಿಲ್ಲ" ಎಂದ ರುಬಷೋವ್ ಮರಣದಂಡನೆಗೆ ಗುರಿಯಾದ.

ಅನುವಾದ ಅಚ್ಚುಕಟ್ಟಾಗಿ ಮೂಡಿ ಬಂದಿದೆ. 402ನೇ ನಂಬರಿನ ಕೋಣೆಯಲ್ಲಿರುವ ಕೈದಿಯ ಜೊತೆ ರುಬಷೋವ್ ಗೋಡೆಯ ಮೇಲೆ ಕುಟ್ಟುವ ಸಂಜ್ಞಾ ಭಾಷೆಯ ಮೂಲಕ ಸಂಭಾಷಿಸುವುದು ರೋಚಕವಾಗಿ ಪಡಿಮೂಡಿದೆ. ಷೋಫರ್ (ಪುಟ – 10) ಆಂಗ್ಲ ಪದವನ್ನೇ ಬಳಸುವ ಬದಲು ಕನ್ನಡದ ಪದ 'ಚಾಲಕ' ಹಾಕಬಹುದಿತ್ತು ಎನಿಸಿತು. ಸೆರೆಮನೆಯ ಕಿರಿದಾದ ಕೋಣೆಯಲ್ಲಿ ಏಕಾಂಗಿಯಾಗಿ ಕುಳಿತು, ಸಾವಿನ ದಿನವನ್ನು

ಇದಿರು ನೋಡುತ್ತಾ ಇರುವುದು ಎಂಥಾ ಭಯಂಕರ ಸ್ಥಿತಿ ಎನ್ನುವುದು ರುಬಶೋವ್‌ನ ನಡವಳಿಕೆಗಳಿಂದ ಚೆನ್ನಾಗಿ ಮನವರಿಕೆಯಾಗುತ್ತದೆ.

ಕನ್ನಡ ಸಾರಸ್ವತ ಲೋಕದಲ್ಲಿ ಪರಿಚಿತ ಹೆಸರು ಕು. ಶಿ. ಹರಿದಾಸ ಭಟ್ಟರದು. ಅರ್ಥಶಾಸ್ತ್ರದ ಎಂ. ಎ. ಪದವೀಧರರು. ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ಸ್ಥಾಪನೆಗಾಗಿ ಮನಮುಟ್ಟಿ ಶ್ರಮಿಸಿದವರು. ಆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದು, ಅದರ ಅಭಿವೃದ್ಧಿಗಾಗಿ ದುಡಿದರು. ಕನ್ನಡ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ. ಕವನ, ಜೀವನ ಚಿತ್ರ, ಗ್ರಂಥ ಸಂಪಾದನೆ, ಅನುವಾದ – ಹೀಗೆ ಇವರು ಕೈಯಾಡಿಸಿರುವ ಕ್ಷೇತ್ರಗಳು ಹಲವು. ಐವತ್ತಕ್ಕೂ ಹೆಚ್ಚು ಕೃತಿಗಳು ಇವರ ಕೊಡುಗೆ.

೧೦. ಕನ್ನಡ ಫಂಟಮಾರಾ

— ಜಿ. ರಾಜಶೇಖರ್

ಒಂದು ಭಾಷೆಯ ಸಾಹಿತ್ಯ ಕೃತಿ ಇನ್ನೊಂದು ಭಾಷೆಗೆ ಯಾಕೆ ಅನುವಾದವಾಗುತ್ತದೆ? ಅನುವಾದದ ಮುಖಾಂತರ ಸಂಸ್ಕೃತಿಯ ಪರಿಚಯವಾಗುತ್ತದೆ; ಅಂತಹ ಪರಿಚಯ ನಮ್ಮನ್ನು ನಾವೇ ಅರಿತುಕೊಳ್ಳುವ ಸೂಕ್ಷ್ಮಜ್ಞತೆಯನ್ನು ಬೆಳೆಸಬಲ್ಲುದು ಎನ್ನುವುದು ಸಾಮಾನ್ಯವಾದ ಉತ್ತರ. ಒಂದು ಸರ್ವಸಾಮಾನ್ಯ ಹೇಳಿಕೆಯಾಗಿ ಅದು ನಿಜವಾದರೂ ಅಷ್ಟೇ ನಿಜವಲ್ಲ. ಕನ್ನಡದ್ದೇ ಉದಾಹರಣೆ ತೆಗೆದುಕೊಂಡರೆ, 19ನೆಯ ಶತಮಾನದವರೆಗಿನ ಕನ್ನಡದ ಹೆಚ್ಚಿನ ಕೃತಿಗಳು ಸಂಸ್ಕೃತಕ್ಕೆ ಋಣಿಯಾಗಿವೆ. ಇವು ಸಂಸ್ಕೃತದ ನೇರ ಅನುವಾದಗಳಲ್ಲದಿದ್ದರೂ, ಪ್ರೇರಣೆ, ಸ್ಫೂರ್ತಿ, ಭಾವಾನುವಾದ, ಮೂಲದ ಚೌಕಟ್ಟಿಗೆ ಸ್ವಂತದ್ದನ್ನೂ ಸೇರಿಸುವುದು – ಹೀಗೆ ಅನುವಾದದ ಅಂಶಗಳನ್ನು ಹೊಂದಿರುವ ಕೃತಿಗಳು. ಈ ಪ್ರಕ್ರಿಯೆಗೆ – ಅದಕ್ಕೆ ಬೇಕಾದ ಹೆಸರು ಕೂಡಿ – ಸಾಹಿತ್ಯಾಭಿರುಚಿಯ ಜೊತೆಗೆ ಧರ್ಮದ ಮತ್ತು ಸತ್ತೆಯ ಉದ್ದೇಶಗಳೂ ಇದ್ದವು. ಇಪ್ಪತ್ತನೆಯ ಶತಮಾನದ ಕನ್ನಡದ ಸಾಹಿತ್ಯದ ಪ್ರಕಾರಗಳಂತೂ ಇಂಗ್ಲೀಷಿನಿಂದಲೇ ಬಂದವು. ಆಧುನಿಕ ಕನ್ನಡದ ಅನುವಾದಿತ ಕೃತಿಗಳಲ್ಲಿ ಹೆಚ್ಚಿನವು ಇಂಗ್ಲೀಷ್ ಕೃತಿಗಳ ಅನುವಾದಗಳು; ಇತರ ಭಾಷೆಗಳ ಕೃತಿಗಳ ಅನುವಾದಗಳಾದರೂ ಇಂಗ್ಲೀಷಿನ ಮೂಲಕವೇ ಕನ್ನಡಕ್ಕೆ ಬಂದಂತಹವು. ಇನ್ನೊಂದು ಸಂಸ್ಕೃತಿಯ ಪರಿಚಯದ ತವಕವೊಂದೇ ಅನುವಾದಕ್ಕೆ ಪ್ರೇರಣೆ ಆಗಿದ್ದಿದ್ದರೆ, ಜಗತ್ತಿನ ಎಲ್ಲ ಭಾಷೆಗಳಿಂದಲೂ ಉತ್ತಮ ಸಾಹಿತ್ಯ ಕೃತಿಗಳು ಕನ್ನಡಕ್ಕೆ ಅನುವಾದವಾಗಬೇಕಿತ್ತು; ಕಡೆಯ ಪಕ್ಷ ನಮ್ಮ ಸೋದರ ಭಾಷೆಗಳು ಮತ್ತು ನಮ್ಮ ನೆರೆಹೊರೆಯ ದೇಶಗಳ ಉತ್ತಮ ಕೃತಿಗಳಾದರೂ ನಮಗೆ ಅನುವಾದಗಳಲ್ಲಿ ಲಭ್ಯವಾಗಬೇಕಿತ್ತು. ಹಾಗೆಯೇ ಕನ್ನಡದ ಕೃತಿಗಳೂ ಇತರ ಭಾಷೆಗಳಿಗೆ ಅನುವಾದಗೊಳ್ಳಬೇಕಿತ್ತು. ಆದರೆ ಕನ್ನಡದ ಅನುವಾದಿತ ಸಾಹಿತ್ಯವೆಂದರೆ ಬಹುಮಟ್ಟಿಗೆ ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಗೊಂಡ ಸಾಹಿತ್ಯವಷ್ಟೇ ಆಗಿದೆ. ಜೊತೆಗೆ ಈ ಪ್ರಕ್ರಿಯೆ ಎಂದೂ ಕೊಡಾ ಕೊಂಡುಕೊಳ್ಳುವಿಕೆಯ ಸಂಬಂಧವಾಗದೆ, ಮೊದಲು ಸಂಸ್ಕೃತದಿಂದ, ಈಗ ಇಂಗ್ಲೀಷಿನಿಂದ ಮೂಲ ಮಾದರಿಗಳನ್ನು ಪಡೆಯುವ ಏಕಮುಖಿಗತಿಯುಳ್ಳದ್ದೂ ಆಗಿದೆ.

ನವೋದಯ ಕನ್ನಡ ಕಾವ್ಯದ ಆದ್ಯ ಪ್ರವರ್ತಕರಲ್ಲಿ ಬಿ. ಎಂ. ಶ್ರೀಯವರು ಪ್ರಮುಖರು. ಅವರ "ಇಂಗ್ಲಿಷ್ ಗೀತೆಗಳು" ಆಧುನಿಕ ಕನ್ನಡದ ಮಹತ್ವದ ಕೃತಿಗಳಲ್ಲಿ ಒಂದು. ಹೆಸರೇ ಹೇಳುವಂತೆ, ಅದು ಇಂಗ್ಲಿಷ್ ಕವಿತೆಗಳ ಅನುವಾದ. ಆದರೆ 19ನೆಯ ಶತಮಾನದ ಯುರೋಪಿನ ಚರಿತ್ರೆಯ ಆಕಸ್ಮಿಕ ತಿರುವುಗಳಲ್ಲಿ ತುಸು ಹೆಚ್ಚು ಕಡಿಮೆಯಾಗಿ, ಭಾರತ ಇಂಗ್ಲೆಂಡಿನ ಬದಲು ಫ್ರಾನ್ಸ್‌ನ ವಸಾಹತು ಆಗಿದ್ದರೆ, ಶ್ರೀಯವರ ಅನುವಾದ "ಇಂಗ್ಲಿಷ್ ಗೀತೆಗಳು" ಬದಲು "ಫ್ರೆಂಚ್ ಗೀತೆಗಳು" ಆಗುತ್ತಿತ್ತು ಅಲ್ಲವೆ? ಕನ್ನಡಕ್ಕಾಗಿ ತುಂಬ ದುಡಿದ ಈ ಹಿರಿಯರ ಬಗ್ಗೆ ನಾನು ಕುಚೋದ್ಯದಲ್ಲಿ ಇದನ್ನು ಹೇಳುತ್ತಿಲ್ಲ. ಅನುವಾದ ಮತ್ತು ಪ್ರೇರಣೆಗಳ ಮಟ್ಟಿಗೆ ಚರಿತ್ರೆ, ಕನ್ನಡದಂತಹ ಭಾಷೆಗಳಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ಇಂಗ್ಲಿಷ್ ಇಂದು ಜಗತ್ತಿನ ಎಲ್ಲೆಡೆ ವ್ಯಾಪಿಸಿರುವ ಭಾಷೆ; ಅದರ ಜ್ಞಾನ ಭಂಡಾರವೂ ಹಿರಿದಾದದ್ದು; ಕನ್ನಡಕ್ಕೆ ಅನುವಾದವಾಗಿರುವ ಮತ್ತು ನಮ್ಮ ಗೌರವ ಪಡೆದುಕೊಂಡಿರುವ ಇಂಗ್ಲಿಷಿನ ಕೃತಿಗಳು ವಿಶ್ವಸಾಹಿತ್ಯದ ಶ್ರೇಷ್ಠಕೃತಿಗಳು ಎಂಬ ಸತ್ಯಗಳನ್ನು ಅಲ್ಲಗಳೆಯದೆಯೂ ನಾವು ಈ ಅಂಶವನ್ನು ಗಮನದಲ್ಲಿಡಬೇಕು.

ಇತಾಲಿಯನ್ ಲೇಖಕ ಇಗ್ನೇಸಿಯೋ ಸಿಲೋನೆಯ 'ಫಂಟಮಾರಾ' ಕಾದಂಬರಿಯ ಕನ್ನಡ ಅನುವಾದ ಈ ಹಿನ್ನೆಲೆಯಲ್ಲಿ ಮಹತ್ವದ್ದಾಗಿದೆ. ಕು. ಶಿ. ಹರಿದಾಸ ಭಟ್ಟರು ಮಾಡಿದ ಈ ಅನುವಾದ 1950 ರಲ್ಲಿ ಪ್ರಕಟವಾಯಿತು. ಹರಿದಾಸ ಭಟ್ಟರು. ಆ ವೇಳೆಗಾಗಲೇ ಒಬ್ಬ ಸಮರ್ಥ ಗದ್ಯ ಲೇಖಕ ಮತ್ತು ಅನುವಾದಕನೆಂದು ಹೆಸರು ಮಾಡಿದ್ದರು. 'ಫಂಟಮಾರಾ'ದ ಅನುವಾದವನ್ನು ಅವರು ಅದರ ಇಟಾಲಿಯನ್ ಮೂಲ ಮತ್ತು ಇಂಗ್ಲಿಷ್ ಅನುವಾದ ಎರಡನ್ನೂ ಎದುರುಗಿಟ್ಟುಕೊಂಡು ಮಾಡಿದ್ದರು. ಅವರ ಅನುವಾದದ ಗದ್ಯ ಶೈಲಿ, ವಾಕ್ಯ ರಚನೆ, ಸಂಭಾಷಣೆ ಮತ್ತು ನುಡಿಕಟ್ಟುಗಳು ಅಪ್ಪಟ ಕನ್ನಡವು. ಕಾದಂಬರಿಯನ್ನು ಓದುತ್ತಿದ್ದರೆ ಅದು ಅನುವಾದ ಎಂದು ಅನ್ನಿಸುವುದೇ ಇಲ್ಲ. ಹಾಗೆಂದು ಅನುವಾದದ ವಾಕ್ಯಗಳನ್ನು ಇಂಗ್ಲಿಷ್ ಆವೃತ್ತಿಯ ಜೊತೆ ಹೋಲಿಸಿದರೆ, ಹರಿದಾಸ ಭಟ್ಟರು ಪ್ರತಿಯೊಂದು ವಾಕ್ಯ ಮತ್ತು ವಿವರಗಳಲ್ಲೂ ಮೂಲಕ್ಕೆ ಅತ್ಯಂತ

ನಿಷ್ಠರಾಗಿರುವುದು ಕಂಡುಬರುತ್ತದೆ. ಕಥಾನಕವನ್ನು ಕನ್ನಡದ ಜಾಯಮಾನಕ್ಕೆ ಹೊಂದಿಸಿಕೊಳ್ಳಲೆಂದು ಅವರು ಸುಲಭದ ಸ್ವಾತಂತ್ರ್ಯವನ್ನು ವಹಿಸಿಲ್ಲ. ಮೂಲಕ್ಕೆ ನಿಷ್ಠನಾಗಿದ್ದೂ, ತನ್ನದೇ ಭಾಷೆಯ ಕೃತಿ ಎಂಬಂತೆ, ಅನುವಾದಿಸುವ ಕಷ್ಟ ಸಾಧ್ಯವಾದ ಕೆಲಸವನ್ನು ಹರಿದಾಸ ಭಟ್ಟರು ಮಾಡಿದ್ದಾರೆ. ಇವತ್ತಿಗೂ ಇದು ಕನ್ನಡದ ಶ್ರೇಷ್ಠ ಅನುವಾದಗಳಲ್ಲಿ ಒಂದಾಗಿದೆ.

'ಫಂಟಮಾರಾ' ದಕ್ಷಿಣ ಇಟಲಿಯ ಕುಗ್ರಾಮವೊಂದರ ಕಥೆ. ದಕ್ಷಿಣ ಇಟಲಿ ಕೃಷಿ ಪ್ರಧಾನವಾಗಿದ್ದು ಹಿಂದುಳಿದ ಪ್ರದೇಶ ಎಂದು ಪರಿಗಣಿಸಲ್ಪಟ್ಟಿದೆ. ಅಲ್ಲಿನ ಬಹುತೇಕ ಜನ ಬಡ ರೈತರು; ಹೆಚ್ಚಿನವರು ಅನಕ್ಷರಸ್ಥರು. ಬಹುಷಃ ಈ ಕಾರಣಕ್ಕೇನೇ ಅಲ್ಲಿ ಕ್ಯಾಥೋಲಿಕ್ ಚರ್ಚ್‌ನ ಪ್ರಭಾವವೂ ಜಾಸ್ತಿ. ಸಿಲೋನೆ ಆ ಪ್ರದೇಶದ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದವನು. ಅವನ ಎಲ್ಲ ಕಾದಂಬರಿಗಳೂ, ಅವನೇ ಒಂದೆಡೆ ಹೇಳಿಕೊಂಡಿರುವಂತೆ, ಅವನು ಹುಟ್ಟಿದ ಹಳ್ಳಿ ಮತ್ತು ಆ ಪ್ರದೇಶದ ಬದುಕಿನ ಚಿತ್ರಣಗಳಷ್ಟೇ ಆಗಿವೆ. ಸಿಲೋನೆ ಬಹಳ ಎಳೆಯ ಪ್ರಾಯದಿಂದಲೂ ಸಮಾಜವಾದೀ ತತ್ತ್ವಗಳ ಕಡೆಗೆ ಆಕರ್ಷಿತನಾದವನು. ಚರ್ಚ್‌ನ ಶಾಲೆಯೊಂದರಲ್ಲಿ ಆತ ಶಿಕ್ಷಣ ಪಡೆದಿದ್ದ; ತನ್ನ ಹಳ್ಳಿಯ ಚರ್ಚ್, ಯಾವಾಗಲೂ ಭೂಮಾಲಕರು ಮತ್ತು ಸಿರಿವಂತರ ಜೊತೆಗೇ ಶಾಮೀಲಾಗುತ್ತಿದ್ದುದನ್ನು ಆತ ಚಿಕ್ಕ ವಯಸ್ಸಿನಲ್ಲಿಯೇ ಗುರುತಿಸಿದ್ದ. 'ಫಂಟಮಾರಾ' ಕಾದಂಬರಿಯಲ್ಲಿಯೂ ಸಿಲೋನೆ ಹಳ್ಳಿಯ ಬಡ ರೈತರ ಪರದಾಟ, ಅವರ ಸಾಲದ ಹೊರೆ, ಬೆಳೆದ ಫಸಲಿಗೆ ಕಡಿಮೆ ದರ, ಅವರ ದುಡಿಮೆಗೆ ಕಡಿಮೆ ಸಂಬಳ, ಪಟ್ಟಣಗಳ ವಕೀಲರು ಮತ್ತು ಅಧಿಕಾರಿಗಳು ರೈತರನ್ನು ಸದಾ ವಂಚಿಸುವುದು. ಪಾದ್ರಿಗಳು ಪುಢಾರಿಗಳು ಈ ರೈತರಿಗೆ ಮಾಡುವ ವಿಶ್ವಾಸದ್ರೋಹ ಮುಂತಾದ ಸಂಗತಿಗಳನ್ನು – ಸಮಾಜವಾದಿ ಲೇಖಕನಿಗೆ ಮಾತ್ರ ಕಾಣಿಸುವ ಸಂಗತಿಗಳನ್ನು ಚಿತ್ರಿಸುತ್ತಾನೆ. ಅದರ ಜೊತೆಗೆ, ಸಿಲೋನೆಯ ಕಾದಂಬರಿಯಲ್ಲಿ ಈ ಬಡ ರೈತರ ಕುಟುಂಬ ಜೀವನದ ಪಡಿಪಾಟಲುಗಳು, ಜಗಳಗಳು, ಚಾಡಿ, ಪ್ರೇಮ, ಹಾದರ, ಅವರ ಸಣ್ಣತನಗಳು, ಜಾನಪದದ ರೂಪ ಪಡೆದ ಅವರ ಕ್ರಿಶ್ಚಿಯನ್ ಶ್ರದ್ಧೆ ಮುಂತಾದ ಸೂಕ್ಷ್ಮಜ್ಞನೊಬ್ಬ ಮಾತ್ರ ಗುರುತಿಸಬಲ್ಲ ವಿವರಗಳು ಕೂಡಾ ಮುಖ್ಯ ಸ್ಥಾನ ಪಡೆದುಕೊಳ್ಳುತ್ತವೆ. ಇದರಿಂದಾಗಿ ಅವನ ಕಾದಂಬರಿ ಬರಿಯ ಹೇಳಿಕೆಗಳ ಅಥವಾ ಮಾಹಿತಿಗಳ ಸಂಗ್ರಹವಾಗದೆ, ಆಳವಾದ ಮಾನವೀಯ ಸಂವೇದನೆಯ ಕಥಾನಕವಾಗುತ್ತದೆ.

'ಫಂಟಮಾರಾ'ದ ಮುನ್ನುಡಿಯಲ್ಲಿ ಸಿಲೋನೆ ಹೀಗೆ ಬರೆಯುತ್ತಾನೆ. "ಬದುಕಿನಲ್ಲಿ ಮುಖ್ಯವಾದ ಸಂಗತಿಗಳು – ಹುಟ್ಟು, ಸಾವು, ಸಂಕಟ ಮತ್ತು ಪ್ರೀತಿ ಎಲ್ಲರಿಗೂ ಒಂದೇ. ಹಾಗೆಂದು ಜನ ಅವುಗಳ ಬಗ್ಗೆ ಮಾತಾಡಿಕೊಳ್ಳುವುದನ್ನೇನೂ ನಿಲ್ಲಿಸುವುದಿಲ್ಲ" ಸಿಲೋನೆ ಕಾದಂಬರಿಯಲ್ಲಿ ತನಗೆ ಚೆನ್ನಾಗಿ ಗೊತ್ತಿದ್ದ ತನ್ನ ಬಾಲ್ಯದ ಹಳ್ಳಿಯನ್ನು ವರ್ಣಿಸಿದ್ದ. ಆ ಹಳ್ಳಿಯ ಜನ ನಿತ್ಯ ತಿನ್ನುವ ಕರಿ ಬ್ರೆಡ್ಡಿನ ಧಾನ್ಯದಿಂದ ಹಿಡಿದು, ಜಗಳದಲ್ಲಿ ಅವರು ಉಪಯೋಗಿಸುವ ಬೈಗುಳ ಮತ್ತು ಆಣೆ ಭಾಷೆಯ ಶಬ್ದಗಳವರೆಗೆ, ಆ ಕಾದಂಬರಿಯ ಎಲ್ಲ ವಿವರಗಳೂ ದಕ್ಷಿಣ ಇಟಲಿಯ ಆ ಪ್ರದೇಶಕ್ಕೆ ವಿಶಿಷ್ಟವಾದವುಗಳು. ಕಾರಂತರ ಕಾದಂಬರಿಗಳ ಕಡಲತೀರದ ಹಳ್ಳಿಗಳು ಮತ್ತು ಕುವೆಂಪು ಕಾದಂಬರಿಗಳ ಮಲೆನಾಡಿನ ಹಳ್ಳಿಗಳ ಹಾಗೆ ಈ ಕಾದಂಬರಿಯ ಹಳ್ಳಿಯ ಚಿತ್ರಣವೂ ತನ್ನ ವಿವರಗಳಲ್ಲಿ ದಟ್ಟವಾದದ್ದು ಮತ್ತು ಅನನ್ಯವಾದದ್ದು. ವಿವರಗಳ ಈ ಅನನ್ಯತೆಯನ್ನು, ಪ್ರದೇಶ ನಿಷ್ಠತೆಯನ್ನೂ ಸಿಲೋನೆ, ತನ್ನ ಮುನ್ನುಡಿಯಲ್ಲಿ ಹೀಗೆ ವಿವರಿಸುತ್ತಾನೆ,"ಬಡ ರೈತರು, ನೆಲವನ್ನು ಉತ್ತಿ ಬಿತ್ತಿ ಬೆಳೆ ತೆಗೆದೂ ಸದಾ ಹಸಿದಿರುವ ರೈತರು ಜಗತ್ತಿನ ಎಲ್ಲೆಡೆ ಇದ್ದಾರೆ. ಆದರೆ ಒಂದೇ ತರದ ಇಬ್ಬರನ್ನು ನೀವು ಎಲ್ಲಿಯೂ ಕಾಣಲಾರಿರಿ."

'ಮರಳಿ ಮಣ್ಣಿಗೆ' ಮತ್ತು 'ಕಾನೂರು ಹೆಗ್ಗಡಿತಿ' ಕಾದಂಬರಿಗಳ ಹಾಗೆ 'ಫಂಟಮಾರಾ' ಕೂಡಾ ಅನನ್ಯವಾದ ಪ್ರಾದೇಶಿಕ ವಿವರಗಳಿಂದಲೇ ವ್ಯಕ್ತಿಗಳ ಬಾಳನ್ನೂ, ಸಮಾಜದ ಸ್ಥಿತಿಯನ್ನೂ ಚಿತ್ರಿಸುವ ಕಾದಂಬರಿ. ಆದರೆ ಕನ್ನಡದ ಈ ಕಾದಂಬರಿಗಳಿಗೆ ಇಲ್ಲದ ಒಂದು ವಿಲಕ್ಷಣತೆ 'ಫಂಟಮಾರಾ'ಕ್ಕಿದೆ. ಕಾರಂತರ ಕಾದಂಬರಿಯ ಕೋಟದಲ್ಲಾಗಲೀ, ಪುಟ್ಟಪ್ಪನವರ ಕಾನೂರಿನಲ್ಲಾಗಲೀ ರಾಜಕೀಯ ಪ್ರಭುತ್ವ ಮನೆಯ ಒಳಗೇ ಬಂದು ಸ್ಥಾಪಿತವಾಗಿ, ಪ್ರತಿಕ್ಷಣವೂ ಎದುರಾಗುವ ಅನಿಷ್ಟವಾಗಿಲ್ಲ. ಈ ಹಳ್ಳಿಗಳ ಬದುಕಿಗೂ ರಾಜಕೀಯ ವ್ಯವಸ್ಥೆಗೂ ಸಂಬಂಧವಿದ್ದರೂ, ವ್ಯವಸ್ಥೆ ಇಲ್ಲಿನ ಜನರ ಅಂತರಂಗವನ್ನೇ ಆಕ್ರಮಿಸುವಂತಹದ್ದಲ್ಲ. ಪ್ರಭುತ್ವ ಆಚೆ ನೂಕಲಾರದ ಆಸಕ್ತಿಗಳು ಮತ್ತು ವ್ಯಸನಗಳು ಈ ಪಾತ್ರಗಳಿಗೆ ಇವೆ. ಆದರೆ 'ಫಂಟಮಾರಾ'ದ ಸ್ಥಿತಿ ಇದಕ್ಕೆ ತದ್ವಿರುದ್ಧವಾದದ್ದು. ಕಾದಂಬರಿಯ ಕಾಲ, ಇಟಲಿಯಲ್ಲಿ ಫ್ಯಾಸಿಸ್ಟರು ಅಧಿಕಾರದಲ್ಲಿದ್ದ ಅವಧಿ. ಕಮ್ಯೂನಿಸ್ಟ್ ಟ್ರೇಡ್ ಯೂನಿಯನ್ನುಗಳನ್ನು ಮತ್ತು ಸಮಾಜವಾದೀ ಸಂಘಟನೆಗಳನ್ನು, ದುಂಡಾವರ್ತಿಯಿಂದ ನಾಶಪಡಿಸುವ ಕೆಲಸಗಳಿಂದ ಇಟಲಿಯಲ್ಲಿ ತಮ್ಮ ಚಟುವಟಿಕೆ ಪ್ರಾರಂಭಿಸಿದ ಫ್ಯಾಸಿಸ್ಟರು ಕ್ರಮೇಣ, ಜನಜೀವನದ ಎಲ್ಲ ರಂಗಗಳಲ್ಲೂ ತಮ್ಮ ಯಜಮಾನಿಕೆ ಸ್ಥಾಪಿಸಿದರು. ಮುಸ್ಸೋಲಿನಿ ಅಧಿಕಾರಕ್ಕೆ ಬಂದ ಮೇಲಂತೂ ಫ್ಯಾಸಿಸ್ಟ್ ಸರಕಾರದ ಹದ್ದುಗಣ್ಣಿನಿಂದ ಯಾವ ಪ್ರಜೆಯೂ ತಪ್ಪಿಸಿಕೊಳ್ಳಲಾರದ ಸ್ಥಿತಿ ಬಂದಿತು. ಫ್ಯಾಸಿಸ್ಟ್ ಪಕ್ಷದ ಕರಿ ಅಂಗಿಯ ಸಮವಸ್ತ್ರದ ಗೂಂಡಾಗಳು ಹಳ್ಳಿಗಳಲ್ಲೂ ದಾಂಧಲೆ ನಡೆಸಲು ಆರಂಭಿಸಿದರು. ಬಂಡವಾಳಶಾಹಿಗಳು, ಭೂಮಾಲಕರು ಮತ್ತು ಕ್ರಿಶ್ಚಿಯನ್ ಧರ್ಮಗುರುಗಳ ಬೆಂಬಲ ಪಡೆದಿದ್ದ ಫ್ಯಾಸಿಸಂ ದೇಶ ಪ್ರೇಮ, ದೇಶ ರಕ್ಷಣೆಗಳ ಹೆಸರಿನಲ್ಲಿ ಎಲ್ಲ ಪ್ರಜೆಗಳನ್ನು ತನ್ನ

ಅಂಕಿತದಲ್ಲಿಟ್ಟುಕೊಳ್ಳಬಯಸಿದ ಸರ್ವಾಧಿಕಾರೀ ಸರಕಾರವೊಂದನ್ನು ಸ್ಥಾಪಿಸಿತು. ಕಮ್ಯೂನಿಷ್ಟರು ಸಮಾಜವಾದಿಗಳು, ಟ್ರೇಡ್ ಯೂನಿಯನ್ ಕಾರ್ಯಕರ್ತರು ದೇಶದ್ರೋಹಿಗಳು ಎಂದು ಪರಿಗಣಿಸಲ್ಪಟ್ಟರು. ಕೊಲೆ, ಬಂಧನ, ಸಜೀವ ಹಿಂಸೆ, ಗಡೀಪಾರು – ಇವು ಯಾವ ಕ್ಷಣದಲ್ಲಿ ಯಾರ ಮೇಲೆ ಎರಗೀತು ಎಂದು ಹೇಳಲಾರದ ಭಯ ಆತಂಕಗಳ ಸ್ಥಿತಿ ಇಡೀ ದೇಶವನ್ನೇ ಆವರಿಸಿತ್ತು. ಇಟಲಿ ಮಾತ್ರವಲ್ಲ, ಇಡೀ ಯುರೋಪ್ ಖಂಡದಲ್ಲೇ ಬಲಪಂಥೀಯ ಸರ್ವಾಧಿಕಾರದ ಕರಿ ನೆರಳು ವ್ಯಾಪಿಸಿತ್ತು. ಜರ್ಮನಿಯಲ್ಲಿ ಹಿಟ್ಲರ್, ಸ್ಪೇನ್‌ನಲ್ಲಿ ಫ್ರಾಂಕೋ, ಇಟಲಿಯ ಫ್ಯಾಸಿಸ್ಟರ ದಬ್ಬಾಳಿಕೆಯ ಕ್ರಮಗಳನ್ನು ತಾವೂ ತಮ್ಮ ದೇಶಗಳಲ್ಲಿ ಅನುಸರಿಸಿದ್ದರು. ಈ ನಾಯಕರು ಯುರೋಪ್ ಖಂಡವನ್ನು ಎರಡನೆಯ ಮಹಾಯುದ್ಧಕ್ಕೆ ಅಣಿಗೊಳಿಸಿದ್ದರು.

ಸಿಲೋನೆಯ ಕಾದಂಬರಿ, ಇಟಲಿಯ ಫಂಟಮಾರಾ ಎಂಬ ಹೆಸರಿನ ಬಡಹಳ್ಳಿಯ ಜನ, ಈ ರಾಜಕೀಯ ವಿದ್ಯಮಾನಗಳನ್ನು ಹೇಗೆ ಎದುರಿಸಿದರು ಎಂಬುದರ ಕಥಾನಕವಾಗಿದೆ. ಈ ಹಳ್ಳಿಯ ರೈತರು ಮೊದಮೊದಲು ಫ್ಯಾಸಿಸ್ಟರ ದೌರ್ಜನ್ಯಗಳನ್ನು ಮೂಕವಾಗಿ ಅನುಭವಿಸುತ್ತಾರೆ. ಆದರೆ ಈ ಅನುಭವದಿಂದ ಅವರು ಅನೇಕ ಸಂಗತಿಗಳನ್ನು ಅರಿತುಕೊಳ್ಳುತ್ತಾರೆ. ತಾವು ಗಾಢವಾಗಿ ನಂಬಿದ್ದ ಚರ್ಚ್ ತಮ್ಮ ಕಡೆ ಇಲ್ಲ; ತಮ್ಮ ಮತಗಳನ್ನು ಪಡೆದು ಚುನಾಯಿತರಾಗಿದ್ದ ಪುಢಾರಿಗಳು ಹಗಲು ದರೋಡೆಯವರು. ಪಟ್ಟಣದ ನಾಗರಿಕರಿಗೆ ನಾವು ತಮಾಷೆಯ ವಸ್ತುಗಳು, ತಮ್ಮ ದುಡಿಮೆಗೆ ಯೋಗ್ಯ ಸಂಬಳ ಕೇಳುವುದು ದೇಶದ್ರೋಹ; ತಮ್ಮ ಹೊಲದ ನೀರು ಶ್ರೀಮಂತರ ತೋಟಗಳತ್ತ ಹರಿದರೆ, ಲೇವಾದೇವಿಯವರು ತಮ್ಮ ಸಾಲಕ್ಕೆ ವಿಪರೀತ ಬಡ್ಡಿದರ ಹಾಕಿದರೆ, ಕರಿ ಅಂಗಿಯವರು ತಮ್ಮ ಹೆಂಗಸರ ಮಾನ ಕೆಡಿಸಿದರೆ, ಅವುಗಳನ್ನು ಪ್ರಶ್ನಿಸುವುದು ಕ್ರಿಮಿನಲ್ ಅಪರಾಧ ಇವೇ ಮುಂತಾದ ಕಠೋರ ವಾಸ್ತವಗಳನ್ನು ರೈತರು ಈಗ ಮನಗಾಣುತ್ತಾರೆ. ತಮ್ಮ ಜೀವನದಲ್ಲಿಯೇ ಮೊದಲ ಬಾರಿಗೆ ಈ ರೈತರು ಎಲ್ಲ ಆಸರೆಗಳನ್ನು ಕಳೆದುಕೊಂಡು ಅನಾಥ ಭಾವವನ್ನು ಅನುಭವಿಸುತ್ತಾರೆ. ಆದರೆ ಈ ಅಸಹಾಯಕತೆಯೇ ಅವರ ಶಕ್ತಿಯೂ ಆಗುತ್ತದೆ. ರೈತರು ಕಂಗಾಲಾಗಿ ಕೂರದೆ, ಫ್ಯಾಸಿಸ್ಟರ ವಿರುದ್ಧ ಹೋರಾಡುವ ನಿಶ್ಚಯ ಮಾಡುತ್ತಾರೆ. ಈಗ ಅವರಿಗೆ ಕಳೆದುಕೊಳ್ಳಲು ಏನೂ ಉಳಿದಿಲ್ಲ. ಮೊದಲು ತಮ್ಮ ಹಳ್ಳಿಯ ಚರ್ಚಿಗೆ ಒಬ್ಬ ಪೂರ್ಣಾವಧಿಯ ಪಾದ್ರಿ ಬೇಕು ಎಂದು ಅರ್ಜಿ ಹಾಕುತ್ತಿದ್ದ ರೈತರು ಈಗ ಫ್ಯಾಸಿಸ್ಟ್ ಆಡಳಿತದ ವಿರುದ್ಧ ಒಂದು ಭೂಗತ ಪತ್ರಿಕೆ ಹೊರಡಿಸುವ ನಿರ್ಧಾರ ಮಾಡುತ್ತಾರೆ.

ಸಿಲೋನೆಯ ಕಾದಂಬರಿ ಮೊದಲ ಬಾರಿಗೆ 1933ರಲ್ಲಿ ಅದರ ಜರ್ಮನ್ ಅನುವಾದದಲ್ಲಿ ಪ್ರಕಟವಾಯಿತು. ಕಾದಂಬರಿಯ ಮೂಲ ಇಟಾಲಿಯನ್ ಆವೃತ್ತಿ ಫ್ಯಾಸಿಸ್ಟರು ಅಧಿಕಾರದಲ್ಲಿ ಇರುವವರೆಗೆ ಪ್ರಕಟವಾಗುವುದು ಸಾಧ್ಯವೇ ಇರಲಿಲ್ಲ. 1947ರಲ್ಲಿ ಅದು ಇಟಲಿಯಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು. ಸಿಲೋನೆಯ ಕಾದಂಬರಿಯ ಬಗ್ಗೆ ಫ್ಯಾಸಿಸ್ಟರಿಗಿದ್ದ ಭಯ ಸಕಾರಣವಾದದ್ದೇ ಆಗಿತ್ತು. ಅದು, ಅವರ ದುಷ್ಟತನದ ಯಥಾವತ್ತಾದ ಚಿತ್ರಣ ಮಾತ್ರ ಆಗಿರಲಿಲ್ಲ; ಅವರ ದುರಾಡಳಿತದ ವಿರುದ್ಧ ಜನ ದಂಗೆ ಏಳುವಂತೆ ಪ್ರಚೋದಿಸುವಂತಹದ್ದೂ ಆಗಿತ್ತು. ಪಿಕಾಸೋನ ವರ್ಣಚಿತ್ರ 'ಗೆರ್ನಿಕಾ'ದಂತೆ ಸಿಲೋನೆಯ 'ಫಂಟಮಾರಾ' ಕೂಡಾ ಫ್ಯಾಸಿಸ್ಟರ ಕ್ರೌರ್ಯದ ಪ್ರತಿಮೆ ಮತ್ತು ಅದಕ್ಕೆ ತುತ್ತಾದ ಮುಗ್ಧರ ಸ್ಮಾರಕ – ಎರಡೂ ಆಗಿತ್ತು. 1938ರಲ್ಲಿ ತನ್ನ ಕಾದಂಬರಿಯ ಇಂಗ್ಲಿಷ್ ಅನುವಾದದ ಪರಿಷ್ಕೃತ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ಸಿಲೋನೆ, ತಾನು ಕಾದಂಬರಿಯನ್ನು ಬರೆದ ಸನ್ನಿವೇಶವನ್ನು ಹೀಗೆ ವಿವರಿಸುತ್ತಾನೆ: "ಫ್ಯಾಸಿಸ್ಟ್ ಪೊಲೀಸರಿಂದ ತಲೆಮರೆಸಿಕೊಂಡು ದೇಶಭ್ರಷ್ಟನಾಗಿ ಸುಳ್ಳು ಹೆಸರೊಂದನ್ನು ಇಟ್ಟುಕೊಂಡು ಸ್ವಿಟ್ಸರ್ಲೆಂಡಿನಲ್ಲಿ ವಾಸಿಸುತ್ತಿದ್ದಾಗ ನಾನು ಈ ಕಾದಂಬರಿಯನ್ನು ಬರೆದೆ. ಅಲ್ಲಿ ನಾನು ಒಂಟಿಯಾಗಿದ್ದುದರಿಂದ ಬರವಣಿಗೆ ನನಗೆ ಒಂಟಿತನದ ವಿರುದ್ಧ ಏಕೈಕ ರಕ್ಷಣೆಯಾಗಿತ್ತು. ಡಾಕ್ಟರರು ಬೇರೆ ನಾನು ಹೆಚ್ಚು ಕಾಲ ಬದುಕುವುದಿಲ್ಲ ಎಂದಿದ್ದರು. ಬಣ್ಣಿಸಲಾರದ ಆತಂಕ ಉದ್ವೇಗಗಳಲ್ಲಿ ನನ್ನ ಶಕ್ತಿಯನ್ನೆಲ್ಲ ಬಳಸಿಕೊಂಡು, ನಾನು ಹುಟ್ಟಿ ಬೆಳೆದ ನನ್ನ ಜಿಲ್ಲೆಯ ಈ ಕಥೆ ಬರೆದೆ. ಸಾಯುವುದೇ ಆದರೆ, ಈ ರೀತಿ ನನ್ನ ಜನರ ನಡುವೆ ಸಾಯುವ ನಿಶ್ಚಯ ನನ್ನದಾಗಿತ್ತು".

ಆದರೆ ಮಹಾಯುದ್ಧಕ್ಕೆ ಮೊದಲು, ಫ್ಯಾಸಿಸ್ಟ್ ಇಟಲಿ ಮಾತ್ರವಲ್ಲ 'ಲಿಬರಲ್ ಮಾನವತಾವಾದಿ ಪ್ರಜಾಪ್ರಭುತ್ವ'ದ ಸರಕಾರವಿದ್ದ ಇಂಗ್ಲೆಂಡ್ ಕೂಡಾ ಸಿಲೋನೆಯನ್ನು ದೂರವಿಟ್ಟಿತ್ತು; 'ಫಂಟಮಾರಾ'ದ ತೀರ ಇತ್ತೀಚೆಗಿನ (1985) ಇಂಗ್ಲಿಷ್ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ಇಂಗ್ಲೆಂಡಿನ ಲೇಬರ್ ಪಕ್ಷದ ಹಿರಿಯ ನಾಯಕ ಮೈಕೆಲ್‌ಫುಟ್, ಇಟಲಿಯಿಂದ ತಲೆತಪ್ಪಿಸಿಕೊಂಡು ಬಂದಿದ್ದ ಸಿಲೋನೆಗೆ ಇಂಗ್ಲೆಂಡ್ ಸರಕಾರ ತನ್ನ ದೇಶದೊಳಗೆ ಪ್ರವೇಶ ನಿಷೇಧಿಸಿದ್ದನ್ನು ಬಹಿರಂಗ ಪಡಿಸಿದ್ದಾರೆ. ಚರ್ಚಿಲ್, ಫ್ಯಾಸಿಸ್ಟರ ಕಮ್ಯೂನಿಸ್ಟ್ ದಮನದ ಕಾರ್ಯಕ್ರಮವನ್ನು ಮೆಚ್ಚಿ, ಅದು 'ಯುರೋಪಿಯನ್ ಸಂಸ್ಕೃತಿಯ ರಕ್ಷಣಾ ಕವಚ' ಎಂದು ಹೊಗಳಿದ್ದನ್ನೂ, ಇಂಗ್ಲೆಂಡಿನ ಮುಖ್ಯ ಪತ್ರಿಕೆಗಳಾದ ಡೇಲಿಮೈಲ್ ಮತ್ತು ಟೈಮ್ಸ್, ಫ್ಯಾಸಿಸಂನ್ನು ಸದಾ ಸಮರ್ಥಿಸಿ ಬರೆಯುತ್ತಿದ್ದುದನ್ನೂ ಮೈಕೆಲ್‌ಫುಟ್ ತನ್ನ ಮುನ್ನುಡಿಯಲ್ಲಿ ಎತ್ತಿ ಹೇಳಿದ್ದಾರೆ. ಸಿಲೋನೆ ಬರಿಯ ಲೇಖಕನಷ್ಟೇ ಆಗಿರಲಿಲ್ಲ; ಒಬ್ಬ ರಾಜಕೀಯ ಕಾರ್ಯಕರ್ತನೂ ಆಗಿದ್ದ. ಮೂವತ್ತರ ದಶಕದ ಇಟಾಲಿಯನ್ ಕಮ್ಯೂನಿಸ್ಟ್

ಚಳುವಳಿಯ ನಾಯಕರಲ್ಲಿ ಒಬ್ಬನಾಗಿದ್ದ ಸಿಲೋನೆ ಇಟಲಿಯ ಫ್ಯಾಸಿಸ್ಟರಿಗೆ ಮಾತ್ರವಲ್ಲ, ಚರ್ಚಿಲ್ ಮತ್ತು ಲಂಡನ್ ಟೈಮ್ಸ್ ಪ್ರತಿನಿಧಿಸುವ ಬೂರ್ಜ್ವಾ ವ್ಯವಸ್ಥೆಗೂ ಅಪಾಯಕಾರಿಯಾಗಿದ್ದ.

ಬರವಣಿಗೆ ಎಂದರೆ 'ತನ್ನ ಕಾಲದ ಬಗ್ಗೆ ಸಾಕ್ಷಿ ಹೇಳುವುದು' ಎಂದು ಭಾವಿಸಿದ್ದ ಸಿಲೋನೆಯ ಹೋರಾಟದ ಬದುಕು ಇಷ್ಟಕ್ಕೇ ಮುಗಿಯುವುದಿಲ್ಲ. ಫಂಟಮಾರಾ ಬರೆದ ಮೇಲೂ ಅನೇಕ ವರ್ಷ, ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತನಾಗಿದ್ದ ಸಿಲೋನೆ ಆ ಪಕ್ಷಕ್ಕೆ ವಿದಾಯ ಹೇಳಿದ ಬಗೆಯಂತೂ ನಮ್ಮ ಕಾಲದ ರಾಜನೈತಿಕ ಧರ್ಮ ಸಂಕಟಗಳಿಗೆ ಬರೆದ ವ್ಯಾಖ್ಯೆಯಂತಿದೆ. ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಮೇಲೆ ಸ್ಟಾಲಿನ್‌ನ ಯಜಮಾನಿಕೆಯ ಧೋರಣೆಗಳನ್ನು ಹಾಗೂ ರಷ್ಯದ ಒಳಗೆ ಅವನು ಆಡಳಿತ ನಡೆಸುತ್ತಿದ್ದ ರೀತಿಯನ್ನು ಪ್ರಶ್ನಿಸಿ ಸಿಲೋನೆ ಪಕ್ಷಕ್ಕೆ ರಾಜೀನಾಮೆ ನೀಡಿದ್ದ. ಸ್ಟಾಲಿನ್‌ನಂತಹವರ ನಾಯಕತ್ವದಲ್ಲಿ ಕಮ್ಯೂನಿಸಂ ಒಂದು ಚಳುವಳಿ ಆಗಿ ಉಳಿದಿಲ್ಲ; ಅದು ಸ್ವತಃ ತಾನೇ ಒಂದು 'ವ್ಯವಸ್ಥೆ'ಯಾಗಿ ಬಿಟ್ಟಿದೆ ಎಂದು ಸಿಲೋನೆ ಭಾವಿಸಿದ್ದ. ಕಮ್ಯೂನಿಸ್ಟ್ ಪಕ್ಷಕ್ಕೆ ರಾಜೀನಾಮೆ ಕೊಡುವುದು, ಅವನ ಬದುಕಿನ ಅತ್ಯಂತ ನೋವಿನ ನಿರ್ಣಯವಾಗಿತ್ತು. ಈ ಬಗ್ಗೆ ಆತ ಹೇಳುತ್ತಾನೆ, "ನಾನು ಕಮ್ಯೂನಿಸ್ಟ್ ಪಕ್ಷ ಬಿಟ್ಟ ದಿನ ನನ್ನ ಬದುಕಿನ ಅತ್ಯಂತ ಸಂಕಟದ ದಿನವಾಗಿತ್ತು. ಇದ್ದಕ್ಕಿದ್ದಂತೆ ನನ್ನ ಯೌವನವನ್ನು ಕಳೆದುಕೊಂಡೆ ಎಂದು ನನಗೆ ಅನ್ನಿಸತೊಡಗಿತು. ಆ ದಿನ ಸಾವಿನ ಸೂತಕದ ದಿನದಂತೆ ಇತ್ತು... ಆದರೆ ಕಮ್ಯೂನಿಸ್ಟ್ ಪಕ್ಷ ಬಿಟ್ಟ ಮೇಲೂ ಸಮಾಜವಾದದಲ್ಲಿ ನನ್ನ ನಂಬಿಕೆ ಮೊದಲಿಗಿಂತಲೂ ಜೀವಂತವಾಗಿದೆ". ಸಿಲೋನೆ ತನ್ನ ಬದುಕಿನ ಈ ಮಹತ್ವದ ಘಟನೆಯ ಬಗ್ಗೆ ಬರೆದ ಲೇಖನ ಲೋಕ ಪ್ರಸಿದ್ಧವಾಗಿದೆ. ಖ್ಯಾತ ಇಂಗ್ಲೀಷ್ ಕವಿ ಸ್ಟೀಫನ್ ಸ್ಪೆಂಡರ್ ಸಂಪಾದಿಸಿದ "The God that failed (ಮೊದಲ ಮುದ್ರಣ - 1950) ಸಂಕಲನದ ಆರು ಪ್ರಬಂಧಗಳಲ್ಲಿ ಸಿಲೋನೆಯ ಈ ವೃತ್ತಾಂತವೂ ಸೇರಿದೆ. ಆ ಪುಸ್ತಕದ ಎಲ್ಲ ಪ್ರಬಂಧಗಳೂ. ಆಯಾ ಲೇಖಕರು ಕಮ್ಯೂನಿಷ್ಟ್ ಪಕ್ಷದ ಜೊತೆ ತಮಗಿದ್ದ ಒಡನಾಟವನ್ನು ಕಡಿದುಕೊಂಡದ್ದರ ವಿವರಣೆಗಳು. ಅವುಗಳಲ್ಲೆಲ್ಲ, ಸಿಲೋನೆಯದ್ದೇ ಅತ್ಯಂತ ಹೃದಯಸ್ಪರ್ಶಿಯಾದ ಲೇಖನ. ಕಮ್ಯೂನಿಷ್ಟರು ವಿರೋಧಿಸುವ ಫ್ಯಾಸಿಸಂ, ಬಂಡವಾಳ ಶಾಹಿ, ಜನಾಂಗ ದ್ವೇಷದ ರಾಜಕಾರಣ, ಚರ್ಚು ಮುಂತಾದವುಗಳ 'ವ್ಯವಸ್ಥೆಯ ಕ್ರೌರ್ಯದ ಪ್ರತ್ಯಕ್ಷಾನುಭವವಿದ್ದ ಸಿಲೋನೆಗೆ. ಆ ಪಕ್ಷ ಬಿಡಬೇಕಾಗಿ ಬಂದದ್ದರ ಬಗ್ಗೆ ಅಪಾರ ವ್ಯಥೆ ಇದ್ದಿತು.

ಒಂದು ಕಾಲಕ್ಕೆ ಕಮ್ಯೂನಿಷ್ಟರಾಗಿದ್ದು ನಂತರ ಅದನ್ನು ತೊರೆದವರದ್ದು ಒಂದು ಅಂತರಾಷ್ಟ್ರೀಯ ಜಾತಿ ಎನ್ನುವಷ್ಟರ ಮಟ್ಟಿಗೆ ಅವರಲ್ಲಿ ಎದ್ದು ಕಾಣುವ ಕೆಲವು ಲಕ್ಷಣಗಳಿವೆ. ಕಮ್ಯೂನಿಷ್ಟ್ ಪಕ್ಷದ ವ್ಯವಸ್ಥೆಯನ್ನು ಟೀಕಿಸುವುದರ ಜೊತೆಗೆ ಕಮ್ಯೂನಿಸಂ ಎತ್ತಿ ಹಿಡಿಯುವ ಮೌಲ್ಯಗಳನ್ನು ವಿರೋಧಿಸುವುದು, ಸೋವಿಯತ್ ರಷ್ಯವನ್ನು ಹೀಗಳೆಯುವಾಗ, ಅಮೇರಿಕ ಮತ್ತು ಯೂರೋಪ್‌ನ ಪಾಪಗಳನ್ನೆಲ್ಲ ಮರೆಮಾಚುವುದು, ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಬಂಡವಾಳಶಾಹಿಯ ಲಾಭ ಬಡುಕತನವನ್ನು ಸಮರ್ಥಿಸುವುದು, ಧರ್ಮ ಗುರುಗಳು ನಂಬಿಕೆಯ ಸ್ವಾತಂತ್ರ್ಯದ ರಕ್ಷಕರು ಎಂದು ವಾದಿಸುವುದು, ವಿಯೆಟ್ನಾಂ. ದಕ್ಷಿಣ ಆಫ್ರಿಕಾ, ಚಿಲಿ, ನಿಕರಗುವ, ಎಲ್ ಸಾಲ್ವೆಡೋರ್. ಇಸ್ರೇಲಿಗಳ ಬಗ್ಗೆ 'ರಾಜತಾಂತ್ರಿಕ ಮೌನ' ವಹಿಸುವುದು. ಎಲ್ಲ ಬಲ ಪಂಥೀಯ ಸರ್ವಾಧಿಕಾರೀ ಸತ್ತೆಗಳನ್ನು ಕ್ಷಮೆಯಾಚನೆಯ ಧ್ವನಿಯಲ್ಲಿ ಸಮರ್ಥಿಸುವುದು – ಈ ಜಾತಿಯ ಮುಖ್ಯ ಚಹರೆಗಳು. ಈ ಮಾಜೀ ಕಮ್ಯೂನಿಷ್ಟ್ ಬುದ್ಧಿ ಜೀವಿಗಳ ಪೈಕಿ ಕೆಲವರು ಅಮಾಯಕವಾಗಿ, ಇನ್ನು ಕೆಲವರು ತಾವು ಪಡೆದ ಡಾಲರುಗಳ ಋಣ ತೀರಿಸಲು, ಅಮೇರಿಕದ ಪ್ರಚಾರ ವ್ಯವಸ್ಥೆಯ ಕೈಗೊಂಬೆಗಳಾದರು. "The God that failed" ಪುಸ್ತಕ ಸಂಪಾದಿಸಿದ ಸ್ಟೀಫನ್ ಸ್ಪೆಂಡರ್‌ನ ಅವಸ್ಥೆಯಂತೂ ಇನ್ನೂ ಕರುಣಾಜನಕವಾಗಿದೆ. ಆತ ಸಂಪಾದಕನಾಗಿದ್ದ ತ್ರೈಮಾಸಿಕ, 'Encounter' ಪತ್ರಿಕೆಗೆ ಗುಪ್ತವಾಗಿ C. I. A. ಹಣ ಬರುತ್ತಿತ್ತು. ಸ್ವತಃ ಸ್ಪೆಂಡರ್‌ಗೇ ಬಹುಕಾಲ ಇದು ಗೊತ್ತಿರಲಿಲ್ಲ. ಇದು ಬಹಿರಂಗವಾದ ಮೇಲೆ ಸ್ಪೆಂಡರ್ ನಾಚಿಕೆಯಲ್ಲಿ ಪತ್ರಿಕೆಯ ಸಂಪಾದಕತ್ವಕೆ ರಾಜೀನಾಮೆ ಕೊಟ್ಟ.

ಆದರೆ ಸಿಲೋನೆಗೆ ಮಾತ್ರ ಈ ಮಾಜಿ ಕಮ್ಯೂನಿಸ್ಟರ ಯಾವ ಮಾನಸಿಕ ರೋಗವೂ ತಟ್ಟಲಿಲ್ಲ. ತನ್ನ ಬದುಕಿನ ಕೊನೆಯ ಕ್ಷಣದವರೆಗೂ ಆತ ಸಮಾಜವಾದದಲ್ಲಿ ನಂಬಿಕೆ ಕಳೆದುಕೊಂಡಿರಲಿಲ್ಲ. ಬಂಡವಾಳ ಶಾಹೀ ವ್ಯವಸ್ಥೆಯ ಅಸಮಾನತೆ, ಯುದ್ಧಖೋರತೆ, ಧಾರ್ಮಿಕ ಸೋಗಲಾಡಿತನ, ಸಾಂಸ್ಕೃತಿಕ ಅಶ್ಲೀಲತೆಗಳನ್ನು ಆತ ಮೊದಲಿನಷ್ಟೇ ಉಗ್ರವಾಗಿ ವಿರೋಧಿಸುತ್ತಿದ್ದ. ಕಮ್ಯೂನಿಷ್ಟ್ ಪಕ್ಷ ಬಿಟ್ಟು ಹೊರ ಬಂದ ಮೇಲೂ ಸಿಲೋನೆ, ಇಟಾಲಿಯನ್ ಸಮಾಜದ ಆರೋಗ್ಯವನ್ನು ಇಟಾಲಿಯನ್ ಕಮ್ಯೂನಿಷ್ಟ್ ಪಕ್ಷದ ಮುಖಾಂತರವೇ ಪರಿಭಾವಿಸುತ್ತಿದ್ದುದು ಅರ್ಥಪೂರ್ಣವಾಗಿದೆ. ತನ್ನ ಕೊನೆಯ ದಿನಗಳಲ್ಲಿ ಆತ ಬರೆದ ಒಂದು ಲೇಖನದಲ್ಲಿ (ಅದು ಪ್ರಕಟವಾದ್ದದ್ದೂ Encounter ನಲ್ಲಿಯೇ) ಸಮಕಾಲೀನ ಇಟಾಲಿಯನ್ ಸಮಾಜ ದುಡ್ಡು, ಬಳಕೆಯ ವಸ್ತುಗಳು ಮತ್ತು ಐಂದ್ರಿಯಕ ಸುಖಗಳನ್ನೇ ತನ್ನ ಏಕೈಕ ಉದ್ದೇಶವನ್ನಾಗಿ ಮಾಡಿಕೊಂಡಿದೆ. ಇಟಾಲಿಯನ್ ಕಮ್ಯೂನಿಸ್ಟ್ ಪಕ್ಷ ಕೂಡಾ ಮೊದಲಿನಂತಿಲ್ಲ. ತನ್ನ ಯೌವನದ ಕಾಲದಲ್ಲಿ ಪಕ್ಷಕ್ಕಾಗಿ ಎಲ್ಲವನ್ನೂ

ತ್ಯಾಗ ಮಾಡಬಲ್ಲ ಯುವಕರಿದ್ದರು. ಈಗ ಅಂತಹ ಯುವಕರೇ ಕಾಣಿಸುವುದಿಲ್ಲ. ಕಮ್ಯೂನಿಸ್ಟ್ ಪಕ್ಷ ಕೂಡಾ ವೇತನ ಕೊಟ್ಟು ಕಾರ್ಯಕರ್ತರನ್ನು ನೇಮಿಸಿ ಕೊಳ್ಳಬೇಕಾಗಿದೆ ಎಂದು ಬರೆದಿದ್ದ.

1950ರಲ್ಲಿ 'ಫಂಟಮಾರಾ'ದ ಕನ್ನಡ ಅನುವಾದ ಪ್ರಕಟವಾದಾಗ, ದೇಶದಲ್ಲಿ ಬ್ರಿಟೀಷ್ ಆಳ್ವಿಕೆ ಕೊನೆಗೊಂಡು ಮೂರು ವರ್ಷಗಳಷ್ಟೇ ಆಗಿದ್ದಿತು. ರಾಜಕೀಯ ಸ್ವಾತಂತ್ರ್ಯ ಮತ್ತು ನೆಹರೂ ಸಮಾಜವಾದಗಳ ಬಗ್ಗೆ ಜನಕ್ಕೆ ಇನ್ನೂ ಭ್ರಮನಿರಸನವಾಗಿರಲಿಲ್ಲ. ಅಂತಹ ಸಂಭ್ರಮ ಕಾಲದಲ್ಲೇ, ಕು. ಶಿ. ಹರಿದಾಸ ಭಟ್ಟರು ಸಮಾಜವಾದೀ ಲೇಖಕನೊಬ್ಬನ ರೈತ ಹೋರಾಟದ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದು ಗಮನಾರ್ಹವಾಗಿದೆ. ತಮ್ಮ ಅನುವಾದದ ಮುನ್ನುಡಿಯಲ್ಲಿ ಹರಿದಾಸ ಭಟ್ಟರು ಬರೆದರು: "ನನ್ನ ಅನುವಾದದ ಬಗೆಗೆ ನಾನು ಕ್ಷಮಾಯಾಚನೆ ಮಾಡಲಾರೆ. ದೇಶ ದೇಶಗಳ ವಿವಿಧ ಭಾಷೆಗಳನ್ನು ಕಲಿತ ಪಂಡಿತರು ಆಯಾ ಭಾಷೆಗಳ ಅಮರ ಕೃತಿಗಳನ್ನು ಅಲ್ಲಿಂದಲೇ ಕನ್ನಡಕ್ಕೆ ಆಮದು ಮಾಡುವ ಶುಭ ಮುಹೂರ್ತ ಉದಯವಾಗುವ ತನಕ ಯೂರೋಪಿನ ಒಂದೆರಡೇ ಭಾಷೆಗಳನ್ನು ಬಲ್ಲ ನನ್ನಂತಹವರು ಮಾಡಬೇಕಾದ ಕೆಲಸ ಹೇರಳವಾಗಿದೆ. ಕಾರಂತ, ಅನಕೃ, ಅವರ ಕಾದಂಬರಿಗಳೇ ಕನ್ನಡದ ಪರಮಾವಧಿಯಾಗಲಾರವು, ಅದೇ ನಮ್ಮ ಮಾನವಾಗಿ ಬಹುಕಾಲ ಉಳಿಯದಾರದು. 'ಫಂಟಮಾರಾ'ದ ಬಗ್ಗೆ ಬರೆಯುತ್ತ ಅನುವಾದಕರು ಕಾರಂತರು ಮತ್ತು ಅನಕೃರವರನ್ನು ಪ್ರಸ್ತಾಪಿಸಿದ್ದು ಕೂಡಾ ತುಂಬಾ ಸಂದರ್ಭೋಚಿತವಾಗಿದೆ. ಸಿಲೋನೆಯ ಕಾದಂಬರಿಯ ಗ್ರಾಮೀಣ ಬದುಕಿನ ಚಿತ್ರಣವನ್ನು ಮತ್ತು ಅವನ ರಾಜಕೀಯ ಬದ್ಧತೆಯನ್ನು ಕಾರಂತ, ಅ.ನ.ಕೃ.ರ ಕಾದಂಬರಿಗಳ ಜೊತೆ ಹೋಲಿಸುವುದು ಈಗಲೂ ಉಪಯುಕ್ತವಾಗುತ್ತದೆ 'ಫಂಟಮಾರಾ'ದ ಕನ್ನಡ ಅನುವಾದ ಪ್ರಕಟವಾದ ಮೊದಲಿಗೆ ಅದನ್ನು ಕನ್ನಡದ ಓದುಗರು ಹೇಗೆ ಸ್ವಾಗತಿಸಿದರೋ ತಿಳಿಯದು. ಮುದ್ರಿತವಾದ ಪುಸ್ತಕದ ಸಾವಿರ ಪ್ರತಿಗಳು ಮಾರಾಟವಾಗುವುದಕ್ಕೆ ಹತ್ತಾರು ವರ್ಷಗಳೇ ಬೇಕಾಗುವ ಕನ್ನಡದ ದರಿದ್ರ ಸ್ಥಿತಿಯಲ್ಲಿ ಓದುಗರ ಆಸಕ್ತಿ ನಿರಾಸಕ್ತಿಗಳನ್ನು ಗುರುತಿಸುವುದಾದರೂ ಹೇಗೆ? ಅದು ಹೇಗೂ ಇರಲಿ, ಈಗ ಏಳೆಂಟು ವರ್ಷದ ಕೆಳಗಿನವರೆಗೂ ಕನ್ನಡ ಫಂಟಮಾರಾದ ಸುಮಾರು 50 ಪ್ರತಿಗಳು ಉಡುಪಿಯಲ್ಲಿದ್ದು, ಅದರ ಪ್ರಕಾಶಕರ ಮಳಿಗೆಯಲ್ಲಿ ದೂಳು ಕವಚಿಕೊಂಡು ಬಿದ್ದಿದ್ದವು. 'ಸಮುದಾಯ' ತಂಡದವರು ರಾಜ್ಯದಲ್ಲಿ ಜಾಥಾ ನಡೆಸಿದಾಗ. ಈ ಪುಸ್ತಕಗಳನ್ನು ತಮ್ಮೊಡನೆ ಒಯ್ದು ಅಲ್ಲಲ್ಲಿ ಮಾರಿದರು. (ಈ ತಂಡದವರು ಮಾರಾಟ ಮಾಡಿದ ಇನ್ನೊಂದು ಪುಸ್ತಕವೂ ಇಂಗ್ಲೀಷೇತರ ಕೃತಿಯೊಂದರ ಅನುವಾದ – ಗೋರ್ಕಿಯ ಕಾದಂಬರಿಯ ನಿರಂಜನರ ಅನುವಾದ 'ತಾಯಿ'). 'ಫಂಟಮಾರಾ' ಕನ್ನಡದಲ್ಲಿ ಪ್ರಕಟವಾದ ವರ್ಷ ಮತ್ತು 'ಸಮುದಾಯ'ದ ಜಾಥಾ ನಡುವೆ ಮೂರು ದಶಕಗಳೇ ಕಳೆದು ಹೋಗಿದ್ದವು. ಈ ಅವಧಿಯಲ್ಲಿ ನಮ್ಮ ಬದುಕು ಮತ್ತು ಸಾಹಿತ್ಯ ಎರಡರಲ್ಲೂ ತೀವ್ರ ಬದಲಾವಣೆಗಳಾಗಿದ್ದವು, ಮೊದಲು ಇದ್ದ ಹೊಸ ನಾಡೊಂದನ್ನು ಕಟ್ಟುವ ಉತ್ಸಾಹದ ಬದಲಿಗೆ ಈಗ ಯಾವ ರಾಜಕೀಯ ತತ್ವವೂ ಮನುಷ್ಯನ ಮೂಲಭೂತ ಸ್ಥಿತಿಯನ್ನು ಬದಲಾಯಿಸಲಾರದು ಎಂಬ ಹತಾಶೆ ಎಲ್ಲೆಡೆ ಕಾಣಿಸುತ್ತಿತ್ತು. ಈ ಹತಾಶೆಗೆ ತೀವ್ರ ಪ್ರತಿಕ್ರಿಯೆಯಾಗಿ ಕನ್ನಡದಲ್ಲಿ ಬಂಡಾಯ ದಲಿತ ಸಂಘಟನೆಗಳು ಮತ್ತು ಸಮುದಾಯದಂತಹ ನಾಟಕ ತಂಡಗಳು ಹುಟ್ಟಿಕೊಂಡವು. ಈ ಸಾಂಸ್ಕೃತಿಕ ವಾತಾವರಣದಲ್ಲಿ, 'ಫಂಟಮಾರಾ' ಕನ್ನಡದ ಅನೇಕ ತರುಣರಿಗೆ ಪ್ರಿಯವಾದ ಪುಸ್ತಕವಾಯಿತು. ಸಮುದಾಯ ಜಾಥಾ ಸಮಯದಲ್ಲಿಯೇ ಮೊದಲ ಬಾರಿಗೆ, ಕನ್ನಡ ಅನುವಾದದಲ್ಲಿ ಈ ಕಾದಂಬರಿ ಓದಿದ ಗೆಳೆಯ ಬಿದಿರಹಳ್ಳಿ ನರಸಿಂಹಮೂರ್ತಿ ಅದನ್ನು 'ನಾಟಕ ಮಾಡುವೆ' ಎಂದು ಉತ್ಸಾಹದಲ್ಲಿ ನನಗೆ ಪತ್ರ ಬರೆದಿದ್ದರು. ಅವರು ನಾಟಕ ಬರೆದರೋ ಬಿಟ್ಟರೋ ಗೊತ್ತಿಲ್ಲ. ಆದರೆ ಪ್ರಕಟವಾದ 50 ವರ್ಷಗಳ ನಂತರ ಇಟಾಲಿಯನ್ ಗ್ರಾಮೀಣ ಬದುಕಿನ ಕಾದಂಬರಿ ಒಂದರ ಅನುವಾದ ಕನ್ನಡದ ಅನೇಕ ತರುಣರಲ್ಲಿ ಇಂತಹ ಉತ್ಸಾಹ ಅಭಿಮಾನಗಳನ್ನು ಹುಟ್ಟಿಸಿತು ಎನ್ನುವುದು ಕಾದಂಬರಿಯ ಸತ್ವ ಮತ್ತು ಅನುವಾದದ ಗುಣಮಟ್ಟ ಎರಡಕ್ಕೂ ಉದಾಹರಣೆಯಾಗಿದೆ.

೧೧. ಫಂಟಮಾರಾ

— ಕೃಷ್ಣವೇಣಿ

"ಫಂಟಮಾರಾ" ಇಗ್ನೇಜಿಯೋ ಸಿಲೋನೆ ಬರೆದ ಅದೇ ಹೆಸರಿನ ಇಟಾಲಿಯನ್ ಕಾದಂಬರಿಯ ಕನ್ನಡ ಅನುವಾದ. ಸುಮಾರು ಮೂರು ದಶಕಗಳ ಹಿಂದೆಯೇ ಉಡುಪಿಯ 'ಅಂತರಂಗ ಕಾರ್ಯಾಲಯ'ದಿಂದ ಪ್ರಕಟವಾಗಿದೆ. ಮೊದಲು 'ಅಂತರಂಗದಲ್ಲಿ' ಧಾರಾವಾಹಿಯಾಗಿ ಪ್ರಕಟವಾಗಿದ್ದು ನಂತರ ಪುಸ್ತಕ ರೂಪವನ್ನು ಪಡೆದಿದೆ. ಸಿಲೋನೆಯುವರು ತಮ್ಮ ಕೃತಿಯಲ್ಲಿ ಮಾಡಿದ ತಿದ್ದುಪಡಿಯನ್ನು 'ಮರಳಿ ಫಂಟಮಾರಾ' ಎಂಬ ಅನುಬಂಧದೊಡನೆ ಇದರಲ್ಲಿ ಸೇರಿಸಲಾಗಿದೆ, ಪ್ರಸ್ತುತ ಕೃತಿಯಲ್ಲಿ 'ಫಂಟಮಾರಾ'ದಲ್ಲಿ ಇಪ್ಪತ್ತನೆಯ ಶತಮಾನದಲ್ಲಿ ಇಟಲಿಯ ಹಳ್ಳಿಯೊಂದರ ಜೀವನದ ಮೇಲೆ ಫಾಸಿಜಂ ನಡೆಯಿಸಿದ ದೌರ್ಜನ್ಯದ ಚಿತ್ರಣವಿದೆ. ಫಾಸಿಸ್ಟರು ಇಟಲಿಯಲ್ಲಿ ಪಟ್ಟಕ್ಕೆ ಬಂದಾಗ ಅಲ್ಲಿಯ ಹಳ್ಳಿಗಳಲ್ಲಿ ಭೀಕರವಾದ ಬರಗಾಲ ತಾಂಡವವಾಡುತ್ತಿತ್ತು. ಹಳ್ಳಿಯ ರೈತರ ಅಜ್ಞಾನದ ಲಾಭವನ್ನು ಪಡೆದ ಫಾಸಿಸ್ಟರು ಅವಿಲ್ಲಿಯ ರೈತರನ್ನು ಹಿಂಸೆಗೆ ಒಳಪಡಿಸುತ್ತಾರೆ. ಫಾಸಿಸಂನ ಪಾಶವೀಶಕ್ತಿಗೆ ತಲೆತಗ್ಗಿಸದೆ ಅದರ ವಿರುದ್ಧ ಹೋರಾಡಿ ಸೋತರೂ ಅಂತಃಸತ್ವವನ್ನುಳಿಸಿಕೊಂಡು ಅಜೇಯರಾದ ವ್ಯಕ್ತಿಗಳ ಚಿತ್ರಣ ಇದರಲ್ಲಿದೆ. ಸಿನಾರ್ ಸಿಲೋನೆ ತಮ್ಮ ನಿರ್ವಸನ ಕಾಲದಲ್ಲಿ ಇಟಲಿಯಿಂದ ಹೊರಗೆ ಸ್ವಿಝರ್ಲೆಂಡಿನ ಒಂದು ಗ್ರಾಮಾಂತರದಲ್ಲಿ ಇದನ್ನು ಬರೆದಂತೆ ಅನುವಾದಕ ಕು. ಶಿ. ಹರಿದಾಸ ಭಟ್ಟರು ತಿಳಿಸಿದ್ದಾರೆ. ಹಳ್ಳಿಯ ಹೆಸರೂ, ಘಟನೆಗಳ ಸೃಷ್ಟಿ ಎಲ್ಲವೂ ಕಾಲ್ಪನಿಕ ಎಂದೂ ಹೇಳಿದ್ದಾರೆ ಲೇಖಕರು. 'ಅವಮಾನದೆದುರು, ಅನ್ಯಾಯದೆದುರು ಯಾರೂ ತಗ್ಗಿ ನಡೆಯಬಾರದು' ಎಂಬುದು ಲೇಖಕ ಸಿಲೋನೆಯವರ ಮತ. ಅದರಂತೆ ತುಳಿತಕ್ಕೆ ಒಳಗಾದ ರೈತ ಜನಾಂಗವನ್ನು ಹುರಿದುಂಬಿಸುವುದಕ್ಕಾಗಿ ಮಾನವವಾದವನ್ನು ಎತ್ತಿ ಹಿಡಿಯುವುದಕ್ಕಾಗಿ ಕೃತಿಯನ್ನು ರಚಿಸಿದಂತೆ ತಿಳಿದು ಬರುತ್ತದೆ.

ಕಾದಂಬರಿಯ ಕೊನೆಯ ಭಾಗದಲ್ಲಿ ಪ್ರಸ್ತುತ ಕಾದಂಬರಿ ರೂಪುಗೊಂಡ ಬಗೆಯನ್ನು ತಿಳಿಸುತ್ತಾ ಲೇಖಕರು "1930ರ ಸುಮಾರಕ್ಕೆ ಸ್ವಿಝರ್ಲೆಂಡಿನ ಒಂದು ಬೆಟ್ಟದ ಹಳ್ಳಿಯಲ್ಲಿ ನಾನು ನೆಲೆಸಿದಾಗ ಇನ್ನು ಹೆಚ್ಚು ಸಮಯ ಬದುಕುವುದು ಅಶಕ್ಯ ಎಂದು ಭಾವಿಸಿ ಒಂದು ಕತೆಯನ್ನು ಬರೆಯಲು ಆರಂಭಿಸಿದೆ. ಅದಕ್ಕೆ 'ಫಂಟಮಾರಾ' ಎಂದು ಹೆಸರಿಟ್ಟೆ. ನನ್ನ ನೆನಪಿನಿಂದಲೂ ಕನಸಿನಿಂದಲೂ ಒಂದು ಹಳ್ಳಿಯನ್ನು ನಿರ್ಮಾಣ ಮಾಡಿ ಅದರಲ್ಲೇ ವಾಸ ಮಾಡಿದೆ. ಅದೇ ಒಂದು ಸಾದಾ ಸರಳ ಕತೆಯಾಗಿ ಪರಿಣಮಿಸಿತು" ಎಂದು ಹೇಳಿದ್ದಾರೆ. ಪ್ರಸ್ತುತ ಕತೆಯನ್ನು ಅನೇಕರು ಮೆಚ್ಚಿದುದಾಗಿಯೂ 'ಫಂಟಮಾರಾ' ಎಂಬ ಹೆಸರು ದಕ್ಷಿಣ ಇಟಲಿಯ ಎಷ್ಟೋ ಹಳ್ಳಿಗಳಿಗೆ ಅನ್ವಯವಾಗುತ್ತಿದ್ದು ಕಾದಂಬರಿಯಲ್ಲಿ ವರ್ಣಿತವಾಗಿರುವ ಘಟನೆಗಳು ನಡೆದುವೆಂದು ತಿಳಿದು ಬಂದುದಾಗಿಯೂ ಹೇಳಿಕೊಂಡಿದ್ದಾರೆ.

ಫಂಟಮಾರಾದ ರೈತರು ಫಾಸಿಸ್ಟರೊಂದಿಗೆ ಹೋರಾಟ ನಡೆಸಿದ ವಿವರಗಳ ಸರಮಾಲೆಯೇ ಪ್ರಸ್ತುತ ಕೃತಿ. ರೈತರ ಅಜ್ಞಾನ ಹೇಗೆ ರೈತರನ್ನು ಮೋಸಗೊಳಿಸುವಲ್ಲಿ ಫ್ಯಾಸಿಸ್ಟರಿಗೆ ಸಹಾಯವಾಯಿತು ಎಂಬ ವಿಚಾರ ಅತ್ಯಂತ ಮರ್ಮಸ್ಪರ್ಶಿಯಾಗಿ ಮೂಡಿ ಬಂದಿದೆ. ಬಡ ರೈತರು ಶ್ರೀಮಂತರಾಗಬೇಕೆಂಬ ಹಂಬಲದಿಂದ ಪಟ್ಟಣಗಳಿಗೆ ಹೋಗಿ ಅಲ್ಲಿ ಅವರು ಪಡುವ ಪಾಡನ್ನೂ ವರ್ಣಿಸಿದೆ. ರೈತರ ಅಜ್ಞಾನವೇ ಫಾಸಿಸ್ಟರಿಗೆ ವರವಾಗಿ ಪರಿಣಮಿಸುತ್ತದೆ. ಆದರೆ ಫಂಟಮಾರಾ ರೈತರು ಫಾಸಿಸ್ಟರನ್ನು ವಿರೋಧಿಸಿ ಕೊನೆ ಉಸಿರಿರುವ ವರೆಗೂ ಹೋರಾಟ ನಡೆಸುತ್ತಾರೆ. ಈ ಹೋರಾಟದಲ್ಲಿ ಮಹಿಳೆಯರೂ ಭಾಗಿಗಳಾಗುತ್ತಾರೆ. ಹಾಗೆ ಹೋರಾಡುವಾಗ ಅನ್ಯಾಯಕ್ಕೆ ಅತ್ಯಾಚಾರಕ್ಕೆ ಒಳಗಾಗುತ್ತಾರೆ. ಅನೇಕ ವಿಪತ್ಪರಂಪರೆಯನ್ನು ಎದುರಿಸುತ್ತಾರೆ. ನಿರಾಹಾರವಿಲ್ಲದೆ ಪರಿತಪಿಸುವ ಪ್ರಸಂಗವೂ ಉಂಟಾಗುತ್ತದೆ. ಕೊನೆಗೂ ಅವರ ಹೋರಾಟ ಪ್ರವಾಹದ ವಿರುದ್ಧ ಹೋರಾಟವಷ್ಟೇ ಆಗುತ್ತದೆ. ದೀನರು ಇನ್ನೂ ದೀನಾವಸ್ಥೆಗಿಳಿಯುತ್ತಾರೆಯೇ ವಿನಾ ಪರಿಸ್ಥಿತಿಯಂತೂ ಸುಧಾರಿಸುವುದಿಲ್ಲ. ಹೋರಾಡುವಾಗ ಅವರಲ್ಲಿ ಕಂಡು ಬರುವ ಒಗ್ಗಟ್ಟು ಮೆಚ್ಚುವಂತಹುದು.

ಒಂದು ವ್ಯವಸ್ಥೆಯ ವಿರುದ್ಧ ಹೋರಾಟದ ಚಿತ್ರಣವೇ ಕಾದಂಬರಿಯ ಪ್ರಮುಖ ಉದ್ದೇಶವಾಗಿರುವುದರಿಂದ ಬಂಧದಲ್ಲಿ ಬಿಗಿ ಕಂಡು ಬರುವುದಿಲ್ಲ. ಹಲವು ಹತ್ತು ಪಾತ್ರಗಳ ಚಿತ್ರಣ ಇದರಲ್ಲಿದೆ. ಸ್ವತಃ ಪಾತ್ರಗಳೇ (ಲೇಖಕ, ಆತನ ಹೆಂಡತಿ ಮತ್ತು ಮಗ) ತಾವು ಕಂಡ ಘಟನೆಗಳನ್ನು ನಿರೂಪಿಸುತ್ತಾ ಹೋಗುವುದೂ.

ಒಬ್ಬನ ನಂತರ ಮತ್ತೊಬ್ಬರು ಘಟನೆಗಳನ್ನು ವರ್ಣಿಸಿರುವುದೂ ಕಾದಂಬರಿಯ ವಿಶೇಷತೆ. ಕಾದಂಬರಿಯಲ್ಲಿ ಅಲ್ಲಲ್ಲಿ ಮನಮುಟ್ಟುವ, ತಲಸ್ಪರ್ಶಿಯಾದ ಚಿತ್ರಣಗಳು ಬಂದಿವೆ. ಕೆಲವೆಡೆ ಬಂದಿರುವ ವರ್ಣನೆಗಳು ಬಿಡಿ ಬಿಡಿಯಾಗಿ ನಿಲ್ಲುತ್ತವೆ. ಬಹುಶಃ ಇದು ಮೂಲ ಕಾದಂಬರಿಯ ಕೊರತೆಯೂ ಆಗಿರಬಹುದಾದ ಸಾಧ್ಯತೆ ಇದೆ.

ಭಟ್ಟರು ಮುನ್ನುಡಿಯಲ್ಲಿ ಹೇಳಿರುವ "ನನ್ನ ಅನುವಾದದ ಬಗೆಗೆ ನಾನು ಕ್ಷಮಾಯಾಚನೆ ಮಾಡಲಾರೆ. ದೇಶವಿದೇಶಗಳ ವಿವಿಧ ಭಾಷೆಗಳನ್ನು ಕಲಿತ ಪಂಡಿತರು ಆಯಾ ಭಾಷೆಗಳ ಅಮರ ಕೃತಿಗಳನ್ನು ಅಲ್ಲಿಂದಲೇ ಕನ್ನಡಕ್ಕೆ ಆಮದು ಮಾಡುವ ಶುಭಮುಹೂರ್ತ ಉದಯವಾಗುವತನಕ, ಯೂರೋಪಿನ ಒಂದೆರಡೇ ಭಾಷೆಗಳನ್ನು ಬಲ್ಲ ನನ್ನಂತಹವರು ಮಾಡಬೇಕಾದ ಕೆಲಸ ಹೇರಳವಾಗಿದೆ. ಕಾರಂತ, ಅನಕೃ ಅವರ ಕಾದಂಬರಿಗಳೇ ಕನ್ನಡದ ಪರಮಾವಧಿಯಾಗಲಾರವು. ಅವೇ ನಮ್ಮ ಮಾನ (Standard) ವಾಗಿ ಬಹುಕಾಲ ಉಳಿಯಲಾರವು; ಉಳಿಯಬಾರದು..." ಮಾತುಗಳು ಅಷ್ಟು ಸಮಂಜಸವೆನಿಸದು. ಬೇರೆ ಬೇರೆ ಭಾಷೆಗಳ ಅತ್ಯುತ್ತಮ ಕೃತಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಬೇಕೆಂಬ ಭಟ್ಟರ ಅಭಿಪ್ರಾಯವನ್ನು ಎಲ್ಲರೂ ಒಪ್ಪುವಂತಹದೇ. ಆದರೆ ಕನ್ನಡದ ಕೃತಿಗಳು Standard ಆಗಿ ಉಳಿಯಬಾರದು ಎಂಬ ಮಾತು .ಒಪ್ಪತಕ್ಕದ್ದಲ್ಲ. ಕೃತಿಯ ಪ್ರಾರಂಭದಲ್ಲಿ ಭಟ್ಟರು ಸಿಲೋನೆಯವರ ಪರಿಚಯಾತ್ಮಕ ಟಿಪ್ಪಣಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಸಿಲೋನೆಯವರು ಬರೆದ 'God that failed' ಎಂಬ ನಿಬಂಧ ಸಂಗ್ರಹವನ್ನು ಇತ್ತೀಚೆಗೆ ಪ್ರಕಟಿಸಿರುವುದಾಗಿ ಹೇಳಿದ್ದಾರೆ. ಅದನ್ನು 'ಕೆಲಸಕ್ಕೆ ಬಾರದ ದೇವರು' ಎಂದು ಅನುವಾದ ಮಾಡಿದ್ದಾರೆ. ಈ ಅನುವಾದ ಸರಿಯಲ್ಲ. 'ವಿಫಲನಾದ ದೇವರು' ಎಂದು ಅನುವಾದಿಸುವುದು ಸೂಕ್ತ.

ಇಟಾಲಿಯನ್ ಕಾದಂಬರಿಯೊಂದನ್ನು ಕನ್ನಡಕ್ಕೆ ಅನುವಾದಿಸಿ ಕಾದಂಬರಿಯ ಕ್ಷೇತ್ರಕ್ಕೆ ಉತ್ತಮವಾದ ಕೊಡುಗೆಯನ್ನು ಸಲ್ಲಿಸಿರುವುದಕ್ಕಾಗಿ ಭಟ್ಟರು ಅಭಿನಂದನಾರ್ಹರಾಗಿದ್ದಾರೆ. ಯೂರೋಪಿನ ಕೆಲವು ಭಾಷೆಗಳ ಪರಿಚಯವುಳ್ಳ ಇವರು ಅಲ್ಲಿಯ ಒಳ್ಳೆಯ ಕೃತಿಗಳನ್ನು ಕನ್ನಡಕ್ಕೆ ತಂದು ಕನ್ನಡ ಸಾಹಿತ್ಯವನ್ನು ಇನ್ನಷ್ಟು ಶ್ರೀಮಂತಗೊಳಿಸಲಿ ಎಂದು ಆಶಿಸೋಣ.

೧೨. ಸ್ವಾತಂತ್ರ್ಯ ಮತ್ತು ಸಂಸ್ಕೃತಿ

— ಎಚ್. ಎಂ. ನಾಗರಾಜ ರಾವ್

ಐದು ದಶಕಗಳ ಹಿಂದೆ ಜಾನ್‌ಡ್ಯೂಯಿ ರಚಿಸಿದ 'ಫ್ರೀಡಂ ಎಂಡ್ ಕಲ್ಚರ್' ಎಂಬ ಕೃತಿಯ ಅನುವಾದ ವಿದು. ಮೂರು ದಶಕಗಳ ಹಿಂದೆಯೇ ಪ್ರಕಟವಾಗಿದೆ. ಕನ್ನಡ ಸಾರಸ್ವತ ಲೋಕದ ಶ್ರೀಮಂತಿಕೆಗೆ ಅನುವಾದ ಕ್ಷೇತ್ರದ ಕಾಣಿಕೆ ಗಣನೀಯ ಎನ್ನುವುದು ಸುವಿದಿತ ಸಂಗತಿ. ಸಂಖ್ಯಾದೃಷ್ಟಿಯಿಂದ ಕಥೆ ಕಾದಂಬರಿಗಳೇ ಸ್ವಾಭಾವಿಕವಾಗಿಯೇ ಹೆಚ್ಚಿದ್ದರೂ ಗಟ್ಟಿ ಸತ್ವದ ವೈಚಾರಿಕ ಕೃತಿಗಳೂ ಅಪರೂಪವಾಗಿಯಾದರೂ ಅನು ವಾದಿತವಾಗಿರುವುದುಂಟು. ಕು. ಶಿ. ಹರಿದಾಸ ಭಟ್ಟರು ಅನುವಾದಿಸಿದ 'ಸ್ವಾತಂತ್ರ್ಯ ಮತ್ತು ಸಂಸ್ಕೃತಿ' ವಿಷಯದ ಗಹನತೆ ಹಾಗೂ ಭಾಷಾ ಗಾಂಭೀರ್ಯಗಳ ದೃಷ್ಟಿಯಿಂದ ಗಮನಿಸಬೇಕಾದ ಮಹತ್ವದ ಕೃತಿಗಳಲ್ಲೊಂದು.

ಶುದ್ಧ ವೈಚಾರಿಕ ಕೃತಿಗಳು ದ್ರಾಕ್ಷಾ ಪಾಕದಂತಿರುವುದಿಲ್ಲ, ನಾರಿಕೇಳ ಪಾಕದಂತಿರುತ್ತವೆ. ಅಂಥ ಗಂಭೀರ ಕೃತಿಗಳ ಸತ್ವ, ಶೈಲಿ ಹಾಗೂ ಕೃತಿಕಾರರ 'ಹೃದಯ'ವರಿತು ಅನುವಾದಿಸುವುದು ಸುಲಭವಲ್ಲ. ಮೂಲ ಹಾಗೂ ಉದ್ದಿಷ್ಟ ಭಾಷೆಗಳಲ್ಲಿ ಹೆಚ್ಚಿನ ಪಾಂಡಿತ್ಯ ಪರಿಶ್ರಮವೂ ಇದಕ್ಕೆ ಅವಶ್ಯವಾಗಿರುತ್ತದೆ. "ಕನ್ನಡದ ನುಡಿಗಟ್ಟಿನಲ್ಲಿ ಆಧುನಿಕ ಪ್ರಜಾತಂತ್ರದ ಅದರಲ್ಲೂ ಅದರ ಮನೋವೈಜ್ಞಾನಿಕ ಭೂಮಿಕೆಯನ್ನು ಉಲ್ಲೇಖಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ. ಕನ್ನಡ ಭಾಷೆಯ ಸ್ವಧರ್ಮಕ್ಕೂ, ಡ್ಯೂಯಿಯವರ ವಿಚಾರದ ಗಹನತೆಗೂ ಎಲ್ಲಿಯೂ ಅಪಚಾರವೆಸಗಕೂಡದೆಂದು ನಾನು ಸಾಕಷ್ಟು ಜಾಗ್ರತೆ ವಹಿಸಿದ್ದೇನೆಂದು ನನ್ನ ನಂಬಿಕೆ" ಎಂದು ವಿನಮ್ರವಾಗಿ ಭಟ್ಟರು ತಿಳಿಸುತ್ತಾರೆ. ಅನುವಾದ ಸಾರ್ಥಕವೆನ್ನಿಸುವುದಾದರೂ ಈ 'ಜಾಗ್ರತೆ' ಕೃತಿಯುದ್ದಕ್ಕೂ ಸಹವರ್ತಿಯಾಗಿದ್ದಾಗಲೇ !

ಮೂಲ ಲೇಖಕ ಜಾನ್ ಡ್ಯೂಯಿ (1859 – 1952) "ಅಮೇರಿಕದ ಪ್ರಖ್ಯಾತ ದಾರ್ಶನಿಕ. ಮನೋ ಶಾಸ್ತ್ರಜ್ಞ ಮತ್ತು ಶಿಕ್ಷಣ ಶಾಸ್ತ್ರಜ್ಞರು. ಪದಾರ್ಥ ವಿಜ್ಞಾನದಲ್ಲಿ ಪ್ರಯೋಗಗಳನ್ನು ಬಳಸುವ ರೀತಿಯಲ್ಲಿಯೇ ಮನಶಾಸ್ತ್ರ ಮತ್ತು ಶಿಕ್ಷಣದಲ್ಲಿಯೂ ಪ್ರಯೋಗ ಪದ್ಧತಿ ಮತ್ತು ವಿಶ್ಲೇಷಣಾ ವಿಧಾನಗಳನ್ನು ಉಪಯೋಗಿಸು ವುದು ಅಗತ್ಯವೆಂದು ವಾದಿಸಿದ ದಾರ್ಶನಿಕರಲ್ಲಿ ಡ್ಯೂಯಿ ಮೊದಲಿಗರು." ಹಲವು ಶಾಸ್ತ್ರಗಳಲ್ಲಿ ಆಳವಾದ ಜ್ಞಾನ ಹೊಂದಿದ್ದ ಡ್ಯೂಯಿ ಅವರ "ಭಾಷೆ ತುಂಬ ಬಿಗಿ, ಪಾರಿಭಾಷಿಕ ಪ್ರೌಢ ಪದಗಳಿಂದ ಅರ್ಥಗರ್ಭಿತ ವಾದ" ಇವರ ಕೃತಿಗಳ ಸಾರವನ್ನು ಮೇಲಿಂದ ಮೇಲೆ ಓದಿ ಅರಿತುಕೊಳ್ಳ ಬೇಕಾಗುತ್ತದೆ. ಅನುವಾದಿಸುವ ಮಾತಿರಲಿ, ಕೃತಿಯಲ್ಲಿನ ವಿಚಾರದ 'ಕೊಂಡಿ'ಗಳನ್ನು ಗುರುತಿಸಿಕೊಂಡು ಅರ್ಥಮಾಡಿಕೊಳ್ಳುವುದಕ್ಕೂ ತುಂಬ ಪರಿಶ್ರಮ ಬೇಕಾಗುತ್ತದೆ. ನಿಜವಾಗಿ ಹೇಳಬೇಕೆಂದರೆ ಡ್ಯೂಯಿಯವರ ಬರಹ ಒಂದು 'ವಿಚಾರ ಚಕ್ರವ್ಯೂಹ' ಎಂದೆನಿಸಿ ಬಿಡುತ್ತದೆ.

ಅಮೇರಿಕದ ಪ್ರಜಾತಂತ್ರ ಪ್ರಯೋಗ ಇತರ ಎಷ್ಟೋ ದೇಶಗಳಿಗೆ ನಿದರ್ಶನ, ಸ್ಫೂರ್ತಿ. "ಹೀಗಿರುವಾಗ ಆದರ್ಶವೆಂದು ನಾವು ನಮ್ಮ ದೇಶಗಳಲ್ಲಿ ಒಪ್ಪಿಕೊಂಡಿರುವ ವಾದ, ರಾಜಕೀಯ ಪದ್ಧತಿ ಮತ್ತು ಜೀವನ ಮಾರ್ಗ ದಲ್ಲಿರುವ ಹುಳುಕುಗಳನ್ನು, ಅದು ಹಿಟ್ಲರ್ ಶಾಹಿಯ ಮತ್ತು ಸಾಮ್ಯವಾದಿ ಶಾಹಿಯ ಅನಂತರದ ಪ್ರಪಂಚದಲ್ಲಿ ಇದಿರಿಸ ಬೇಕಾದ ದುಷ್ಟ ಶಕ್ತಿಗಳ ದೆಸೆಯಿಂದ ಪರಿಣತವಾದ ಬಗೆಯನ್ನು, ಅಲ್ಲದೆ ಆರಂಭ ಕಾಲಕ್ಕಿಂತ ಇಂದಿನ ವರೆಗೆ ಬದಲಾವಣೆ ಹೊಂದುತ್ತಿರುವ ಸನ್ನಿವೇಶದಲ್ಲಿ ಅದರ ಆಂತರಿಕ ದೌರ್ಬಲ್ಯವನ್ನು ಬಹಳ ವಿವೇಚನಾ ಪೂರ್ವಕವಾಗಿ ವಿಶ್ಲೇಷಿಸುವ 'ಸ್ವಾತಂತ್ರ್ಯ ಮತ್ತು ಸಂಸ್ಕೃತಿ' ಪ್ರಜಾತಂತ್ರದ ಹೊಸಲಲ್ಲಿ ಇದೀಗ ಕಾಲಿಟ್ಟಿರುವ ಭಾರತೀಯರಿಗೆ ಮಾರ್ಗಸೂಚಕವಾದ ಉದ್ಗ್ರಂಥವೆನ್ನುವುದರಲ್ಲಿ ಸಂದೇಹವಿಲ್ಲ." ಎಂದು ಅನುವಾದಕರು ತಿಳಿಸುತ್ತಾರೆ. ಎಂದೋ ಹೇಳಿದ ಮಾತುಗಳು ಅಭಿಪ್ರಾಯಗಳು ಭಾರತದಲ್ಲಿನ ಇಂದಿನ ಸನ್ನಿವೇಶಗಳಲ್ಲಿ ಅತ್ಯಂತ ಸೂಕ್ತವಾಗಿ ಅನ್ವಯವಾಗುವುದನ್ನು ಗಮನಿಸಿದಾಗ, ಲೇಖಕನ ಆಲೋಚನಾ ಶಕ್ತಿಗೆ ಬೆರಗಾಗುತ್ತೇವೆ. ಈ ಕೃತಿಯ ಸ್ಥೂಲ ಪರಿಚಯವನ್ನು ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಪ್ರಸ್ತುತ ಗ್ರಂಥದಲ್ಲಿ ಸ್ವಾತಂತ್ರ್ಯದ ಸಮಸ್ಯೆ (ಪುಟ 1 – 23), ಸಂಸ್ಕೃತಿ ಮತ್ತು ಮನುಷ್ಯ ಸ್ವಭಾವ (24 – 50); ಅಮೇರಿಕದ ಹಿನ್ನೆಲೆ (77 – 108) ಹಾಗೂ ಪ್ರಜಾತಂತ್ರ ಮತ್ತು ಅಮೇರಿಕ (165 – 188)

ವಿಜ್ಞಾನ ಮತ್ತು ಸ್ವತಂತ್ರ ಸಂಸ್ಕೃತಿ (139 – 164) ಎಂಬ ಏಳು ಅಧ್ಯಾಯಗಳಿವೆ. ಮನೋವಿಜ್ಞಾನ ದರ್ಶನ ಶಾಸ್ತ್ರ, ರಾಜನೀತಿ, ಶಿಕ್ಷಣಶಾಸ್ತ್ರ, ಅರ್ಥಶಾಸ್ತ್ರ, ಪತ್ರಿಕೋದ್ಯಮ, ಮುಂತಾದ ಹಲವು ವಿಷಯಗಳನ್ನು ಸಮನಯ್ವಗೊಳಿಸಿದ ಹಾಗೂ ವಸ್ತುನಿಷ್ಠ ಮತ್ತು ವೈಜ್ಞಾನಿಕ ವಿಶ್ಲೇಷಣೆಯುಳ್ಳ ಈ ಗಂಭೀರ ಕೃತಿಯಲ್ಲಿ ಕೊಟ್ಟಿರುವ ಶೀರ್ಷಿಕೆಗಳಿಗಷ್ಟೇ ವಿಷಯ ನಿರೂಪಣೆ ಸೀಮಿತವಾಗಿಲ್ಲ.

ಇಲ್ಲಿ ವಿವೇಚಿಸಲಾದ ಸ್ವಾತಂತ್ರ್ಯ ಕುರಿತ ಸಮಸ್ಯೆಗಳು ಪ್ರಜಾಪ್ರಭುತ್ವವಿರುವ ಎಲ್ಲ ದೇಶಗಳಿಗೂ ಅನ್ವಯವಾಗುವಂಥವು. ಸ್ವಾತಂತ್ರ್ಯದ ಅಪೇಕ್ಷೆ ಮನುಷ್ಯ ಸ್ವಭಾವದಲ್ಲಿಯೇ ಅಡಗಿರುವುದೇ ಅಥವಾ ವಿಶೇಷ ಪರಿಸ್ಥಿತಿಯಿಂದ ಉತ್ಪನ್ನವಾಗುವುದೇ? ಅದು ನಮ್ಮ ಲಕ್ಷ್ಯವೋ ಅಥವಾ ಇತರ ವಿಷಯಗಳ ಸಾಧನೆಗೆ ಉಪಕರಣವೋ? ಸ್ವಾತಂತ್ರ್ಯೋತ್ತರ ಭಾರತದಲ್ಲಿರುವ ನಮಗೆ ಇಲ್ಲಿನ ಈ ಕೆಲವು ಪ್ರಶ್ನೆಗಳು ಕೇಳಿಕೊಳ್ಳಬೇಕಾಗಿದೆ: ಸ್ವಾತಂತ್ರ್ಯವನ್ನು ಪಡೆದ ಮೇಲೆ ಹೊಣೆಗಾರಿಕೆಯುಂಟೇ ಇಲ್ಲವೆ? ಅನ್ನ ವಸತಿ ಬಟ್ಟೆ ಬರೆ ಸುಖವಾಗಿ ದಿನ ತೆಗೆಯುವುದೇ ಮುಂತಾದ ಜೀವನ ಭದ್ರತಾ ಮಾರ್ಗದಷ್ಟು ಸ್ವಾತಂತ್ರ್ಯವೂ ಅದರಿಂದ ಉತ್ಪನ್ನವಾಗುವ ಫಲಗಳೂ ಮುಖ್ಯವೆಂದು ನಮಗೆ ಕಾಣುತ್ತವೆಯೆ? ಪೂರ್ವಿಕರ ಬಲಿದಾನದ ಫಲವಾಗಿ ಸ್ವಾತಂತ್ರ್ಯ ಅನುಭವಿಸುತ್ತಿರುವ ನಮ್ಮಲ್ಲಿ ಕೆಲವರಿಗಾದರೂ ಈ ಪಶ್ನೆ ಕಾಡಬಹುದೇನೋ; ನಮ್ಮ ದೇಶದ ಜನ ನಾವು ನಂಬಿರುವಷ್ಟು ಪ್ರಮಾಣದಲ್ಲಿ ಸ್ವಾತಂತ್ರ್ಯಕೋಸ್ಕರ ಕಾತರಿಸಿದ್ದುಂಟೆ?

ರಾಜಕೀಯ ಸ್ವಾತಂತ್ರ್ಯ ಲಭಿಸಿದರೆ ಉಳಿದೆಲ್ಲ ತೆರನ ಸಾಂಸ್ಕೃತಿಕ ಸ್ವಾತಂತ್ರ್ಯ ಲಭಿಸುವುದೆಂಬ ಭ್ರಮೆ ಈಗ ಹರಿದಿದೆ. ದಬ್ಬಾಳಿಕೆಯಿಂದ ಬಿಡುಗಡೆ ಹೊಂದುವದಷ್ಟೇ ಸ್ವಾತಂತ್ರ್ಯವಲ್ಲ, ಈ ತೆರನ ಬಿಡುಗಡೆ ಬೇರಾವುದೋ ಒಂದರ ಕಡೆಗೆ ನಮ್ಮನ್ನು ಒಯ್ಯುವ ಸೇತುವೆಯಾಗ ಬೇಕು. ಆದರೆ ಸ್ವಾತಂತ್ರ್ಯದ ಸತ್ಫಲವನ್ನು ಅನುಭವಿಸಲು ಅಸಕ್ತರಾದ ಜನತೆ ಸ್ವಾತಂತ್ರ್ಯ ಪ್ರಾಪ್ತಿಯಾದ ಕೂಡಲೇ ಸ್ವಾತಂತ್ರ್ಯ ಪ್ರೇಮವನ್ನು ಮೂಲೆಪಾಲು ಮಾಡಿದ್ದನ್ನು ಕಾಣುತ್ತೇವೆ. "ವಾಗ್ಮಿಯು ಮಾತನಾಡುವಾಗ ದಬ್ಬಾಳಿಕೆಯ ವಿರುದ್ಧ ಕತ್ತಿ ಎತ್ತಿದ ವೀರನಂತೆ ತೋರುವನಾದರೂ ವಾಸ್ತವವಾಗಿ ಅವನು ಇನ್ನೊಂದು ತೆರನಾದ ದಬ್ಬಾಳಿಕೆಯನ್ನು ಸ್ಥಾಪಿಸುವವರ ಕೈವಾರಿಯಾಗಿರುತ್ತಾನೆ" ಎಂಬ ಡ್ಯೂಯಿಯ ವಾಣಿ ನಮಗೀಗ ಎಷ್ಟೋ ನಿಜವೆನ್ನಿಸುತ್ತಿದೆ !

ಡ್ಯೂಯಿಯ ಈ ಕೆಳಕಂಡ ಮಾತುಗಳು ಸ್ವವಿವರಣಾತ್ಮಕವಾಗಿರುವುದರಿಂದ ಅವನ್ನು ಯಥಾವತ್ತಾಗಿ ಉಲ್ಲೇಖಿಸಿದೆ:

- 'ಭದ್ರತೆ' ಎಂಬ ಶಬ್ದದಲ್ಲಿ ಯಾವ ಯಾವ ಯಾರ ಯಾರ ಹಿತಸ್ವಾರ್ಥಗಳು ಅಡಗಿವೆಯೋ ಯಾರು ಬಲ್ಲರು? (62)
- ವಿಚಾರದಲ್ಲಿರಬಹುದಾದ ಬಿರುಕುಗಳನ್ನೂ ಅಸಾಂಗತ್ಯವನ್ನೂ ಮುಚ್ಚಲು ಆಪತ್ಕಾಲವನ್ನು ಎಂದು ಬೇಕಾದರೂ ಮುಂದೆ ಮಾಡಬಹುದು; ಆಪತ್ಕಾಲದ ವ್ಯಾಖ್ಯೆಯನ್ನು ಮಾಡುವುದರಲ್ಲಿ ಪರಿಸ್ಥಿತಿಯನ್ನು ದೂರುವುದರಲ್ಲಿ ನಿರಂಕುಶ ಪಂಥಗಳಿಗೆ ಮಿತಿಯೇ ತಿಳಿಯದು. (88)
- ನಮ್ಮ ಪ್ರಜಾತಂತ್ರದಲ್ಲಿ ಪ್ರಜಾತಂತ್ರದ ಅರ್ಥದ ಬದಲು ಕೇವಲ ಆಕಾರ ಮಾತ್ರ ಇರುವುದು ನಮ್ಮ ಗಮನಕ್ಕೆ ಬರುತ್ತದೆ (100)
- ಪ್ರಜಾತಂತ್ರದ ಆದರ್ಶಕ್ಕೆ ನಮ್ಮಲ್ಲಿ ಹಿಡಿವಿರುವ ಗ್ರಹಣವೂ ನೈತಿಕ ಕಾರಣಗಳಿಂದಾಗಿಯೇ ಇರುವುದು. (173)

ಈ ಪಟ್ಟಿಯನ್ನು ಹೀಗೇ ಬೆಳೆಸಬಹುದು. ಎಲ್ಲಿಯೋ ಎಂದೋ ಹೇಳಿದ ಮಾತೊಂದು ಇಂದು ಇಲ್ಲಿ ನಿಜವಾಗಿ ಪರಿಣಮಿಸಿರುವುದಕ್ಕೆ ಉದಾಹರಣೆ:

- ಪ್ರಜಾತಂತ್ರವನ್ನುಳಿಸಿಕೊಳ್ಳಲು ಬೇಕಾಗುವ ಮನೋವೃತ್ತಿಗೂ ಧರ್ಮವು ಉತ್ತೇಜಿಸುವ ಅಭ್ಯಾಸಗಳಿಗೂ ಇರುವ ವೈಷಮ್ಯವು ನಾವು ಎಣಿಸುವುದಕ್ಕಿಂತ ಗಂಭೀರವಾಗಿದೆ. (161)

ಡ್ಯೂಯಿ ವಸ್ತುನಿಷ್ಠವಾಗಿ ಅಮೆರಿಕದ ಪ್ರಜಾಪ್ರಭುತ್ವವನ್ನು ವಿಶ್ಲೇಷಿಸುತ್ತಾ ಜಾಮೂಪಾಲನ ಕಣ್ಕಟ್ಟು ವಿದ್ಯೆ ನಿಜವೆಂದು ಭ್ರಮೆ ಮೂಡಿಸುವಂತೆ ಪ್ರಜಾಪ್ರಭುತ್ವದಲ್ಲಿ ಸಹ ಸ್ವಾತಂತ್ರ್ಯಕ್ಕೆ ವಿರುದ್ಧವಾದುದು ನಡೆಯುವುದುಂಟೆಂದು ತಿಳಿಸುತ್ತಾರೆ. ಅಮೇರಿಕದ 'ಅಂತರಿಕ ದೌರ್ಬಲ್ಯ'ವಾದ ವರ್ಣಭೇದ ನೀತಿಯನ್ನು ಉಲ್ಲೇಖಿಸಿ ತಮ್ಮ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾರೆ.

ನೈತಿಕ ಮತ್ತು ಬೌದ್ಧಿಕ ಸಾಮರಸ್ಯವೇರ್ಪಡದೇ ಹೋದರೆ ಪ್ರಜಾಪ್ರಭುತ್ವದ ಪ್ರತಿಷ್ಠೆಯಾಗದು ಎನ್ನುವುದು ಡ್ಯೂಯಿಯ ನಿಲುವು. ನಡೆ ನುಡಿಯ ಅಂತರ ಯಾರಲ್ಲಿದ್ದರೂ ಪ್ರಜಾಪ್ರಭುತ್ವದ ಪೋಷಣೆಗೆ ಆತಂಕವುಂಟು. ಆದ್ದರಿಂದ ಪ್ರಜಾಪ್ರಭುತ್ವದ ಇರುವಿನ ಉಳಿವಿನ ಹೋರಾಟ ನಡೆಯಬೇಕಾದ್ದು ನಮ್ಮೆಲ್ಲರ 'ಹೃದಯ ಕುರುಕ್ಷೇತ್ರ'ಗಳಲ್ಲಿಯೇ. ಆದ್ದರಿಂದ "ಪ್ರಜಾತಂತ್ರ ಒಂದು ವೈಯುಕ್ತಿಕ ಜೀವನ ಮಾರ್ಗ; ಅದರಲ್ಲಿ ವೈಯಕ್ತಿಕ ಆಚರಣೆಗೆ ಬೇಕಾದ ನೈತಿಕ ಮಾರ್ಗವಿದೆ." ಆದರೆ ಅದನ್ನು ಪ್ರತಿಯೊಬ್ಬನೂ ಅರಿಯುವಂತೆ

ಮಾಡುವುದೇನು? ಈ ಲೇಖಕನೇ ಹೇಳುವಂತೆ "ಆದರ್ಶವೆಂಬ ಶಬ್ದವನ್ನು ಪ್ರಯೋಗಿಸಲು ನಮಗೆ ನಾಚಿಕೆ" ಎನ್ನುವಂಥ ಹಂತವನ್ನು ತಲುಪಿದ್ದೇವೆ'

ಡ್ಯೂಯಿ ಸಂಸ್ಕೃತಿಯ ಪರಿಭಾಷೆ ಕೊಡುವುದು ಹೀಗೆ "ಮನುಷ್ಯರ ಪರಸ್ಪರ ಸಂಪರ್ಕ, ಒಡನಾಟ ಮತ್ತು ಸಹಜೀವನವು ಯಾವ ಶರತ್ತುಗಳ ಮೇಲಿಂದ ನಡೆಯುವುದೋ ಆ ಪರಿಸ್ಥಿತಿಯ ಜಟಿಲವ್ಯೂಹಕ್ಕೆ ಸಂಗ್ರಹವಾಗಿ "ಸಂಸ್ಕೃತಿ" ಎಂಬ ಹೆಸರು ಸಲ್ಲುವುದು." ಮನುಷ್ಯ ಸ್ವಭಾವದ ಮುಖ್ಯ ಪ್ರೇರಣೆಗಳನ್ನು ಕುರಿತ ಅವರ ವಿಶ್ಲೇಷಣೆ ಹೆಚ್ಚು ವೈಜ್ಞಾನಿಕವಾದುದು. ಶಕ್ತಿ ರಾಜಕೀಯ ಮುಖ್ಯವಾದೆಡೆ 'ಶಕ್ತಿಯ ಒತ್ತಿಲಿ ಕುಣಿತವೇ ರಾಜಕೀಯ'ವಾದುದನ್ನು ಮತ್ತು ಇಂಗ್ಲೆಂಡಿನಲ್ಲಿ ಔದ್ಯಮಿಕ ಕ್ರಾಂತಿಯ ತರುವಾಯ ಹಣಕಾಸಿಗೆ ಪ್ರಾಧಾನ್ಯ ಹೆಚ್ಚಿ ಅಲ್ಲಿ ಸ್ವಾರ್ಥ ಮತ್ತು ಸ್ವಹಿತ ರಕ್ಷಣೆಯೇ ಮನುಷ್ಯ ಸ್ವಭಾವದ ಮುಖ್ಯ ಪ್ರೇರಣೆಯಾದುದನ್ನು ಅವರು ಗುರುತಿಸುತ್ತಾರೆ. ಹಾಗೆಯೇ ಗ್ರಾಮೀಣ ಸಂಸ್ಕೃತಿಯ ಮೇಲೆ ನಗರ ಸಂಸ್ಕೃತಿ ಆಕ್ರಮಣ ಮಾಡುತ್ತಿರುವುದನ್ನು ಮತ್ತು ಇಂದಿನ ಸಂಸ್ಕೃತಿಯ ರೂಪಣದಲ್ಲಿ ವಾಣಿಜ್ಯ ಮತ್ತು ಉದ್ದಿಮೆಯ ಪಾತ್ರ ಅಪಾರವಾಗಿರುವುದನ್ನು ಅವರು ಗಮನಿಸುತ್ತಾರೆ. "ಆಧುನಿಕ ಸಂಸ್ಕೃತಿಯಲ್ಲಿ ಉಂಟಾದ ಬಿರುಕು ಎಷ್ಟು ಗಹನವಾದದ್ದೆಂದರೆ ಅದರಲ್ಲಿ ಪ್ರಜಾತಂತ್ರವೊಂದೇ ಅಲ್ಲ ಮಾನವ ನಾಗರಿಕತೆಯ ಸರ್ವ ಮೌಲ್ಯಗಳೂ ನಾಶವಾಗುವ ಸಂಭವವಿದೆ" ಎನ್ನುವಾಗ ಜೀವನ ಮೌಲ್ಯಗಳ ಬಗೆಗಿನ ಅವರ ಕಳಕಳಿ ತಟ್ಟುತ್ತದೆ.

ವಿಜ್ಞಾನದ ಬಗ್ಗೆ ಅವರ ದೃಷ್ಟಿಕೋನವು ಹೀಗೆಯೇ. ವಿಜ್ಞಾನದ ಫಲಗಳನ್ನು ಮಾನವ ಬದುಕಿನ ವಿನಾಶಕ್ಕೆ ಬಳಸುತ್ತಿರುವುದರ ಬಗೆಗೆ ಅವರಿಗೆ ವಿಷಾದವಿದೆ. ರಸಾಯನ ಶಾಸ್ತ್ರಜ್ಞ ಸೊಡ್ಡಿ ಅವರ ಈ ಮಾತನ್ನು ಡ್ಯೂಯಿ ಉಲ್ಲೇಖಿಸುತ್ತಾರೆ. "ಕೋಟ್ಯಾಧೀಶರು ಮತ್ತು ಹೊಲಸು ನಾರು ಕೇರಿಗಳನ್ನು, ಭೀಕರ ಶಸ್ತ್ರಾಸ್ತ್ರ ಮತ್ತು ಯುದ್ಧೋತ್ಪಾತಗಳನ್ನೂ ಹರಡುವ ಹಂದಿಗಳ ಮುಂದೆ ನಾವು ವಿಜ್ಞಾನದ ಅಣಿಮುತ್ತುಗಳನ್ನು ಚೆಲ್ಲಿದಂತಾಗಿದೆ". ಸಾಮೂಹಿಕ ಹತ್ಯಾಕಾಂಡಕ್ಕೆ ವಿಜ್ಞಾನವನ್ನು ಬಳಸುವ ಯುದ್ಧವು ಗಾಯಗೊಂಡವರನ್ನು ಗುಣಪಡಿಸುವುದಕ್ಕೂ ಜೀವಗಳನ್ನುಳಿಸುವುದಕ್ಕೂ ಇದೇ ವಿಜ್ಞಾನವನ್ನು ಉಪಯೋಗಿಸುತ್ತಿದೆ. ಹಾಗೆ ನೋಡಿದರೆ ಮನುಷ್ಯನಲ್ಲಿಯೇ ಇಂಥ ದ್ವಂದ್ವ ಮನೆಮಾಡಿಕೊಂಡಿದೆ: "ಕೆಲವು ಸಾಂಸ್ಕೃತಿಕ ಪರಿಸ್ಥಿತಿಗಳು ಪ್ರತ್ಯೇಕತೆ ನಾನಾತ್ವವನ್ನು ಪ್ರಚೋದಿಸುವ ಆಂತರಂಗಿಕ ಲಕ್ಷಣಗಳನ್ನು ಉಂಟುಗೊಳಿಸುವವು. ಇನ್ನು ಕೆಲವು ಇರುವೆಗೂಡು ಮತ್ತು ಜೇನುಗೂಡಿನಲ್ಲಿರುವಂಥ ಐಕ್ಯ ಬಂಧ್ಯಿಯನ್ನು ಪ್ರೇರಿಸುವವು." ಇವೆರಡೂ ಒಂದಕ್ಕೊಂದು ಪೋಷಕವಾಗುವಂತೆ ನೋಡಿಕೊಳ್ಳುವುದರಲ್ಲಿಯೇ ನಮ್ಮ ನೈಜ ಸಮಸ್ಯೆ ಇರುವುದು. ಇಂದು ವಿಜ್ಞಾನದಿಂದ ಕೆಲವಾರು ಒಳ್ಳೆಯ ನಂಬಿಕೆಗಳೂ ಬುಡಮೇಲಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. "ವಿಜ್ಞಾನವೂ ಸ್ವಾತಂತ್ರ್ಯವೂ ಕೈ ಕೈ ಹಿಡಿದು ಮುಂದುವರಿದು ಅವಿರತ ಮನುಷ್ಯ ಪರಿಪೂರ್ಣತೆಯನ್ನು ಸಾಧಿಸುವುವೆಂಬ ಅಂದಿನ ಆಶಾವಾದವು ಈಗ ಹಿಮ್ಮೊಗವಾಗಿದೆ" ಎನ್ನುವಲ್ಲಿ ಲೇಖಕರ ನಿರಾಶೆ ಎದ್ದು ಕಾಣುತ್ತದೆ. ತಮ್ಮ ಅಭಿಪ್ರಾಯ ಪುಷ್ಟಿಗೆ ಬಟ್ರೇಂಡ್‌ರಸೆಲ್ಲರ ಹೇಳಿಕೆಗಳನ್ನೂ ಅವರು ಉಲ್ಲೇಖಿಸುತ್ತಾರೆ.

ಶಿಕ್ಷಣದ ಬಗ್ಗೆ ಡ್ಯೂಯಿ ಕಟುವಾಗಿ ಟೀಕಿಸುತ್ತಾರೆ, "ಮೌಲಿಕವಾದ ಆಸಕ್ತಿ ಮತ್ತು ಪ್ರಯೋಗಶೀಲತೆಯನ್ನು ವಿದ್ಯಾರ್ಥಿಯಲ್ಲಿ ಹ್ರಾಸಗೊಳಿಸಿ ಅವನ ತಲೆಯನ್ನು ಒಂದಕ್ಕೊಂದು ಸಂಬಂಧವಿಲ್ಲದ ವಿಚಾರಗಳ ಗಡಣದಿಂದ ತುಂಬಿಸಿ ಅವಿದ್ಯಾವಂತನೆ ಎಷ್ಟೋ ವಾಸಿ ಎಂದು ನಮಗೆ ತೋರುವಂಥ ಶಿಕ್ಷಣ ಕ್ರಮವನ್ನು ನಮ್ಮ ವಿದ್ಯಾಲಯಗಳು ಪ್ರಚಾರಿಸುತ್ತವೆ." ವಿಜ್ಞಾನದ ಫಲವಾಗಿ ಮನುಷ್ಯ ನಿಸರ್ಗದ ಭೌತಶಕ್ತಿಗಳ ಮೇಲೆ ಅಪಾರ ಪ್ರಭುತ್ವ ಸಾಧಿಸಿದ್ದಾನೆ, ನಿಜ. ಆದರೂ ಈ ಪ್ರಭುತ್ವವನ್ನು 'ಮನುಷ್ಯರ ಮೇಲೆ ಮನುಷ್ಯರು' ಸವಾರಿ ಮಾಡದಂಥ ಪರಿಸ್ಥಿತಿಯ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಬೇಕು ಎನ್ನುವುದಕ್ಕಿಂತ ಮಿಗಿಲಾದ ನೈತಿಕ ಆದರ್ಶ ಬೇರೊಂದಿರಲಾರದು. ಶಿಕ್ಷಣ ಕ್ರಮದ ವೈಫಲ್ಯಕ್ಕೆ ಡ್ಯೂಯಿ ಜರ್ಮನಿಯನ್ನು ಉದಾಹರಿಸುತ್ತಾರೆ.

ರಾಜನೀತಿ ಹಾಗೂ ಅರ್ಥನೀತಿ ಸಹ ಪ್ರಸ್ತುತ ಗ್ರಂಥದಲ್ಲಿ ಹಾಸುಹೊಕ್ಕಾಗಿದೆ. ಕೆಲವೊಮ್ಮೆ ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಿದಾಗ 'ಮೂಲಭೂತ ಆರ್ಥಿಕ ಪರಿಸ್ಥಿತಿ ಕೈಮೀರಿ ಹೋಗಿದೆ' ಎನ್ನಿಸುತ್ತದೆ. ಡ್ಯೂಯಿಯವರ "ಒಂದು ರಾಜಕೀಯ ಪಕ್ಷದಿಂದ ಇನ್ನೊಂದಕ್ಕೆ ಒಂದು ಧೋರಣೆಯಿಂದ ಮತ್ತೊಂದಕ್ಕೆ ಒಲಿದರೂ ಕೂಡ ಆರ್ಥಿಕ ಸ್ಥಿತಿಯು ಸುಧಾರಿಸದಿರುವುದನ್ನು ನೋಡಿ ಪಕ್ಷ ಮತ್ತು ಧೋರಣೆಯ ವಿಷಯದಲ್ಲೇ ಜುಗುಪ್ಸೆ ಬರುವಂತಾಗುವುದು ಸಹಜ" ಎಂಬ ಮಾತು ನಮಗೆ ಎಷ್ಟೊಂದು ಸಮಂಜಸವೆನ್ನಿಸುತ್ತದೆ! ಹಾಗೆಯೇ ಈ ಮಾತುಗಳನ್ನು ನೋಡಿ: "ಒಂದಾನೊಂದು ಕಾಲದಲ್ಲಿ ದೈವತ್ವವು ರಾಜರ ಸುತ್ತ ನಲಿದಾಡುತಿತ್ತು.ಸಾಮೂಹಿಕ ಚಟುವಟಿಕೆಯ ಜ್ಯೇಷ್ಠತೆಯನ್ನು ಸಾರುತ್ತ ವ್ಯಕ್ತಿಪೂಜೆಯನ್ನು ಖಂಡಿಸಿದ ಸ್ಥಳದಲ್ಲಿ ಇಂದು ನಾಯಕಪೂಜೆಯು ಭಾರಿ ಉತ್ಸಾಹದಿಂದ ನಡೆಯುತ್ತಿದೆ".

ಪ್ರಪಂಚದ ಇತಿಹಾಸವನ್ನು ಅವಲೋಕಿಸಿದಾಗ ಸ್ವಾತಂತ್ರ್ಯಕ್ಕೆ ಅರ್ಥವನ್ನೀವ ಹಿನ್ನೆಲೆ ದೆ ಶದಿಂದ ದೇಶಕ್ಕೆ ಕಾಲದಿಂದ ಕಾಲಕ್ಕೆ ಬದಲಾಗಿರುವುದನ್ನು ಕಾಣುತ್ತೇವೆ, ಇದಕ್ಕೆ ಕೆಲವು ಉದಾಹರಣೆಗಳನ್ನು ಕೂಡಾ ಡ್ಯೂಯಿ

ಕೊಡುತ್ತಾರೆ. ಅವರ ಮನೋವೈಜ್ಞಾನಿಕ ವಿಶ್ಲೇಷಣೆಯನ್ನಿಲ್ಲಿ ಗಮನಿಸ ಬಹುದು: "ಶತ್ರುಗಳಿದ್ದಾರೆಂದು ಇರುವ ಶತ್ರುಗಳನ್ನೋ ಇಲ್ಲದ ಶತ್ರುಗಳನ್ನೋ ತೋರಿಸುವುದರಿಂದ ಸಮಾಜದಲ್ಲಿ ಬಲು ಬೇಗನೆ ಐಕ್ಯವನ್ನು ತರಬಹುದೆಂದು ಇತಿಹಾಸದಿಂದ ಕಲಿಯಬಹುದು. ಅಧಿಕಾರವನ್ನು ಭದ್ರಗೊಳಿಸುವ ಇಚ್ಛೆಯುಳ್ಳ ರಾಜಕೀಯ ಸ್ತರೂ ತಾವಿಲ್ಲದೆ ಹೋದರೆ ಶತ್ರುಗಳ ಬಾಯಿಗೆ ದೇಶವು ತುತ್ತಾದೀತೆಂಬ ಬೆದರಿಕೆಯನ್ನು ಹಾಕುತ್ತಾರೆ." ಇಂಥ ಭಾವನೆ ಜನಜನಿತವಾಗಿ ಬೆಳೆದು ಬೇರೂರಲು ಅವರ ಎಲ್ಲ ಪ್ರಚಾರ ಮಾಧ್ಯಮಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ಶೋಷಕರೇ ಶೋಷಿತ ವರ್ಗದ ವಕ್ತಾರರಂತೆ ವರ್ತಿಸ ತೊಡಗುತ್ತಾರೆ !

ಪತ್ರಿಕೆಗಳು ಜನಜಾಗೃತಿಯಲ್ಲಿ ಪರಿಣಾಮಕಾರಿ ಪಾತ್ರವಹಿಸಬಹುದಾದರೂ ಅವು ಹಾಗೆ ಮಾಡುತ್ತಿಲ್ಲ ವೆಂಬ ಆಕ್ರೋಶ ಅವರದು. ರೆಡಿಮೇಡ್ ತಿಂಡಿತೀರ್ಥ ಬಟ್ಟೆಬರೆಗಳಂತೆ ರೆಡಿಮೇಡ್ ಬೌದ್ಧಿಕ ಸರಕು ಮನುಷ್ಯನನ್ನು ಆವರಿಸಿದೆ. ಜನರಲ್ಲಿ ಕೌತುಕ ಹುಟ್ಟಿಸುವ ವಿಷಯಗಳಿಗೆ ಪತ್ರಿಕೆಗಳು ಆದ್ಯತೆ ನೀಡುತ್ತವೆ. "ಭಾವೋದ್ರೇಕಕಾರಿ (Sensational) ಕೌತುಕಶಾಲಿ ವರ್ತಮಾನವೆಂದರೇನು ಎಂಬುದನ್ನು ತಿಳಿಯಲು ಮನೋವಿಜ್ಞಾನದ ಪುಸ್ತಕಗಳಿಗಿಂತ ವರ್ತಮಾನ ಪತ್ರದ ಸುದ್ದಿಗಳನ್ನು ಓದುವುದು ಹೆಚ್ಚು ಉಪಯೋಗಕರ" ಎಂದು ಅವರು ತೀಕ್ಷ್ಣವಾಗಿ ಟೀಕಿಸುತ್ತಾರೆ. ಮನುಷ್ಯರ ವಿವೇಚನೆಯನ್ನು ಅಪೇಕ್ಷಿಸುವ ಅಥವಾ ವಿವೇಚನೆಗೆ ಅರ್ಹವಾದ ವರ್ತಮಾನ ವಿದ್ಯಮಾನಗಳನ್ನು ಪತ್ರಿಕೆಗಳು ಆರಿಸಿಕೊಳ್ಳಬೇಕು.

ಡ್ಯೂಯಿ ಅವರ ಬರಹದಲ್ಲಿ ಪ್ಲೇಟೋ, ಅರಿಸ್ಟಾಟಲ್, ಕಾಂಟ್, ಹೆಗೆಲ್, ಹ್ಯೂಮ್, ಲಾಕ್, ರಸೆಲ್, ಮಾರ್ಕ್ಸ್ ಮುಂತಾದ ಹಲವಾರು ವಿದ್ವಾಂಸರ ಚಿಂತನ – ಮಂಥನಗಳು ಪರಿಶೀಲನೆಗೊಳಪಟ್ಟಿವೆ. ಶಿಕ್ಷಣ, ನಿರುದ್ಯೋಗ, ಅರ್ಥನೀತಿ, ವರ್ಗಸಂಘರ್ಷ, ಔದ್ಯೋಗೀಕರಣ, ಕೃಷಿ ಉತ್ಪಾದನೆ ಮತ್ತು ವಿತರಣೆ, ಸಹಕಾರ ಮತ್ತು ಸಮಾನತೆ, ಮುಂತಾದ ಹತ್ತಾರು ಸಮಸ್ಯೆಗಳು ವಿಶದ ಚರ್ಚೆಗೊಳಗಾಗಿವೆ. ಇಂಥ ಒಂದು ವೈಚಾರಿಕ ಮಹತ್ವದ ಕೃತಿಯ ಅನುವಾದ ಗಳಿಸಬೇಕಾದಷ್ಟು ಪ್ರಸಿದ್ಧಿಯನ್ನು ಗಳಿಸದಿದ್ದುದು ದುರ್ದೈವದ ಮಾತು. ಬಹುಶಃ ವಿಷಯದ ಗಹನತೆ ಹಾಗೂ ಸಂವಹನದ ಕ್ಲಿಷ್ಟತೆಯೂ ಇದಕ್ಕೆ ಕಾರಣವಾಗಿರಬಹುದೇನೋ. ಭಟ್ಟರ ಅನುವಾದ ಸಾಕಷ್ಟು ಸರಾಗವಾಗಿ ಓದಿಸಿಕೊಳ್ಳುತ್ತದೆ. ಅಸಾಮಾಜಿಕ, ಆನುಕೂಲ್ಯ, ಕೈವಾರಿ, ನಾನಾತ್ವ, ವಿಪರಿಣಾಮ, ಹದಿನಾರಾಣೆ ಸತ್ಯ, ಜಿಡುಕು, ಈಪ್ಸಿತ ಮುಂತಾದ ಶಬ್ದಗಳನ್ನು ಪ್ರಯೋಗಿಸಿರುವುದು ಹಿತವಾಗಿದೆ. ಅವರ ಅನುವಾದ ಕನ್ನಡ ಭಾಷೆಯ ಜಾಯಮಾನಕ್ಕೆ ಹೊಂದಿಕೊಳ್ಳುತ್ತದೆ. ಅನುವಾದ ಕಾರ್ಯಕ್ಕಾಗಿ ಅವರು ಅಭಿನಂದನಾರ್ಹರು.

ಆಧಾರ :

(1) **ಸ್ವಾತಂತ್ರ್ಯ ಮತ್ತು ಸಂಸ್ಕೃತಿ**

(2) **ಕನ್ನಡ ವಿಶ್ವಕೋಶ, ಸಂಪುಟ 9**

೧೩. ಅಮೇರಿಕದ ಆರು ಕಥೆಗಳು

— ಕೃಷ್ಣವೇಣಿ

'ಅಮೇರಿಕದ ಆರು ಕತೆಗಳು' ಎಂಬ ಕೃತಿ ಅದರ ಹೆಸರೇ ತಿಳಿಸುವಂತೆ ಅಮೇರಿಕದ ಪ್ರಖ್ಯಾತ ಕಥೆಗಾರರ ಆರು ಕಥೆಗಳನ್ನೊಳಗೊಂಡ ಒಂದು ಕಥಾ ಸಂಕಲನ. ಇದರಲ್ಲಿ ಐದು ಜನ ಲೇಖಕರು ಹಾಗೂ ಒಬ್ಬ ಲೇಖಕಿ ಬರೆದಿರುವ ಅಮೇರಿಕನ್ ಸಣ್ಣ ಕಥೆಗಳನ್ನು ಅನುವಾದಿಸಲಾಗಿದೆ. "ಇದರಲ್ಲಿ ಅಡಕವಾಗಿರುವ ಕಥೆಗಾರರಲ್ಲಿ ಹಲವರು ಅಮೇರಿಕನ್ ಸಾಹಿತ್ಯದಲ್ಲಿ ಸರ್ವೋತ್ತಮ ಸ್ಥಾನವನ್ನು ಪಡೆದಿರುವವರು.. ವಿಲ್ಲಿಯಂ ಫಾಕ್‌ನೇರ್ ಅಂಥ ನೊಬೇಲ್ ಪಾರಿತೋಷಕ ವಿಜೇತರನ್ನು ಇಲ್ಲಿ ಕಾಣಬಹುದು" ಎಂದು ಈ ಕಥೆಗಳ ಅನುವಾದಕ ಕು. ಶಿ. ಹರಿದಾಸ ಭಟ್ಟರು ಹೇಳಿದ್ದಾರೆ. ಬೇರೆ ಬೇರೆ ಕಾಲಗಳಲ್ಲಿ ಅನುವಾದಗೊಂಡಿರುವ ಈ ಕಥೆಗಳು ಈ ಮೊದಲು ಎಲ್ಲಿ ಪ್ರಕಟವಾಗಿತ್ತು ಎಂಬುದು ತಿಳಿದು ಬರುವುದಿಲ್ಲ. 'ಹಳ್ಳ' ಕಥೆಯೊಂದರ ಹೊರತು ಉಳಿದ ಐದು ಕಥೆಗಳೂ ಪುನರ್ಮುದ್ರಿತಗೊಂಡಿವೆ. ಪ್ರಸ್ತುತ ಕೃತಿ ಉಡುಪಿಯ 'ನವಯುಗ ಎಂಟರ್ ಪ್ರೈಸಸ್ ಲಿಮಿಟೆಡ್' ಮುಖಾಂತರ ಸುಮಾರು 26 ವರ್ಷಗಳಷ್ಟು ಹಿಂದೆಯೇ ಪ್ರಕಟವಾಗಿದೆ.

ಪ್ರಸ್ತುತ ಕೃತಿಯಲ್ಲಿ ನಾಥನ್ ಆಶ್, ಲೂಯಿಬ್ರೋಮ್ ಫೀಲ್ಡ್, ವಿಲ್ಲಿಯಂ ಫಾಕ್ ನೇರ್, ಎಡ್ನಾ ಫರ್ಬರ್, ಮೇರಿ ಇ. ವಿಲ್ಕಿನ್ಸ್ ಫ್ರಿಮ್ಯಾನ್, ಜಾನ್ ಸ್ಟೀನ್ ಬೆಕ್ - ಇವರುಗಳು ಬರೆದ ಒಳನಾಡಿನ ಪಡುಗಡಲು, ಹಳ್ಳ, ಇಬ್ಬರು ಸೈನಿಕರು, ರೈತ, ನ್ಯೂ ಇಂಗ್ಲೆಂಡ್ ಸನ್ಯಾಸಿನಿ, ಜ್ಯೂನಿಯಸ್ ಮಾಲ್ಟ್ ಬೀ ಎಂಬ ಶಿರೋನಾಮೆ ಪಡೆದ ಕಥೆಗಳು ಈ ಸಂಕಲನದಲ್ಲಿವೆ. ಪ್ರತಿ ಕಥೆಯ ಆರಂಭದಲ್ಲೂ ಮೂಲ ಲೇಖಕರ ಕಿರು ಪರಿಚಯ ಇದೆ. ಈ ಕಥೆಗಳ ಸ್ಥೂಲ ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

1902ರಲ್ಲಿ ಪೋಲೇಂಡ್ ದೇಶದ ವಾರ್ಸಾ ನಗರದಲ್ಲಿ ಜನ್ಮವೆತ್ತಿದ ನಾಥನ್ ಆಶ್ 'ಒಳನಾಡಿನ ಪಡುಗಡಲು' ಕಥೆಯ ಲೇಖಕರು. ಇವರು ಕಾದಂಬರಿಕಾರ ಶೊಲೆಮ್ ಆಶ್ ಅವರ ಪುತ್ರ. ಈ ಕಥೆಯಲ್ಲಿ ಒಂದು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ವಿವಿಧ ವ್ಯಕ್ತಿಗಳ ಸ್ವಭಾವವನ್ನು ಪರಿಚಯ ಮಾಡಿಕೊಡಲಾಗಿದೆ. ಬಸ್ಸಿನಲ್ಲಿ ಪಯಣಿಸುತ್ತಿದ್ದ ವ್ಯಕ್ತಿಗಳು ತಮ್ಮ ತಮ್ಮದೇ ಆದ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ ಬಿದ್ದಿದ್ದು ಅವುಗಳ ನಿವಾರಣೆಯನ್ನು ಕುರಿತು ಚಿಂತಿಸುತ್ತಾ ತಮ್ಮದೇ ಆದ ಲೋಕದಲ್ಲಿ ಸಂಚರಿಸುತ್ತಿದ್ದುದರ ನಿರೂಪಣೆ ಸೊಗಸಾಗಿ ಮೂಡಿಬಂದಿದೆ. ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದು ಕಾಣದ ಯಾರೋ ಒಬ್ಬಾಕೆಯನ್ನು ಮದುವೆಯಾದ ಸುಪುತ್ರನಿಗೆ ಬುದ್ಧಿ ಹೇಳಲು ಹೊರಟ ಮಿಸ್ಟರ್ ಪರ್ಸೆಲ್, ಅಧ್ಯಾಪಕಳಾಗಿದ್ದು ಕೆಲಸದಿಂದ ನಿವೃತ್ತಳಾದ ಮಿಸ್ ಬಾಮಾ, ನರ್ತನ ಶಾಲೆಯಲ್ಲಿ ಶಿಷ್ಯವೇತನ ದೊರೆತ ಸಂಭ್ರಮದಲ್ಲಿದ್ದ ಲಾರಾ ಹಾಗೂ ಆಕೆಯ ತಾಯಿ ಆರ್ಥರ್ ಬೆರ್ರಿಮನ್, ಆಕಸ್ಮಿಕವಾಗಿ ದೊರೆತ ಹಣವನ್ನು ಖರ್ಚು ಮಾಡುವ ಉದ್ದೇಶದಿಂದಲೇ ಹೊರಟ ಪೀಟ್ ಡಾಲಿ – ಮೊದಲಾದ ವ್ಯಕ್ತಿಗಳು ಅದರಲ್ಲಿದ್ದರು. ಭಿನ್ನ ಭಿನ್ನಉದ್ದೇಶ, ಗುರಿಗಳನ್ನಿಟ್ಟು ಕೊಂಡು ಪ್ರಯಾಣಿಸುತ್ತಿದ್ದ ಈ ಪ್ರಯಾಣಿಕರು ಸಹ ಪ್ರಯಾಣಿಕರೊಂದಿಗೆ ಸಹಕರಿಸಿದ ರೀತಿ, ನೀಡಿದ ಸಹಾಯ ಹಸ್ತದ ವಿವರಣೆಯೂ ಇಲ್ಲಿ ಬಂದಿದೆ. ಬಸ್ಸು ಕಣಿವೆಗಳ ಮಾರ್ಗವಾಗಿ ಹೋಗುತ್ತಿದ್ದಾಗ ಅಲ್ಲಿ ಕಂಡು ಬಂದ ಪ್ರಕೃತಿಯ ಸುಂದರ ಚಿತ್ರಣ ಇಲ್ಲಿದೆ.

'ಹಳ್ಳ' ಕಥೆಯ ಲೇಖಕ ಲೂಯಿ ಬ್ರೋಮ್ ಫೀಲ್ಡ್ ಓಹಿಯೋ ರಾಜ್ಯದ ಮ್ಯಾನ್ಸ್‌ಫೀಲ್ಡ್‌ನಲ್ಲಿ ಕ್ರಿ. ಶ. 1896ರಲ್ಲಿ ಜನಿಸಿದರು. ಇವರ 'ಶರತ್ಕಾಲದ ಆರಂಭ' (Early Autumn) ಎಂಬ ಕಾದಂಬರಿಗೆ ಅಮೆರಿಕದ ಪುಲಿಟ್ಜರ್ ಬಹುಮಾನ ಸಂದಿದೆ. ಅಲ್ಲದೆ ಇವರು ಸಲ್ಲಿಸಿದ ಸಾಹಿತ್ಯ ಸೇವೆಗಾಗಿ 'ಲೀಜನ್ ಆಫ್ ಆನರ್' ಎಂಬ ಅತ್ಯುಚ್ಚ ಪ್ರಶಸ್ತಿಯೂ ದೊರೆತಿದೆ. ಇವರ ಪಲವು ಕೃತಿಗಳು ಚಲನ ಚಿತ್ರಗಳಾಗಿ ರೂಪುಗೊಂಡಿವೆ. 'ಟಾಮ್' ಎಂಬ ಸಾಹಸಿ ವೈಮಾನಿಕನ ಸುತ್ತ ಹೆಣೆದಿರುವ ಕಥೆಯೇ 'ಹಳ್ಳ'. ಏಕ್ಸೆಲ್ ಪೀಟರ್ಸನ್ ಈತನ ತಂದೆ. ಆ್ಯನಿ ವಾಲೆಸ್ ತಾಯಿ, ಸೆಲ್ಲಿ ಟಾಮ್‌ನ ಪತ್ನಿ. ಪ್ರೆಯರಿ ಪ್ರಾಂತದಲ್ಲಿದ್ದ ಚಿಕ್ಕ ಹಳ್ಳ ಟಾಮ್‌ನ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಕಡಲನ್ನು ಕಾಣದ ಈತ ತನ್ನ ಊರಿನ ಹಳ್ಳವನ್ನೇ ಮಹಾಸಾಗರವೆಂದು ಭಾವಿಸಿದ್ದನೆಂಬುದು ತನ್ನ ಸ್ನೇಹಿತ ಜಿಮ್ಮಿಗೆ ಹೇಳುವ "ನಾನು ಚಿಕ್ಕವನಾಗಿದ್ದಾಗ ನನಗೆ ಅದೇ ದೊಡ್ಡ ಸಾಗರವಾಗಿತ್ತು. ಅದರಲ್ಲಿ ಈಸುವುದು, ಅದರ ಮೇಲೆ ದೋಣಿಗಳನ್ನು ತೇಲಿಬಿಡುವುದು ಎಂದರೆ

ನನಗೆ ಬಲು ಇಷ್ಟ... ನನ್ನ ಕಾಗದದ ದೋಣಿಗಳೇ ಸಾಗರ ಸಂಚಾರದ ಮಹಾ ನೌಕೆಗಳಾಗಿದ್ದವು..." ಎಂಬ ಮಾತುಗಳಿಂದ ವ್ಯಕ್ತವಾಗುತ್ತದೆ. ಸೆಲ್ಲಿಯನ್ನು ತನ್ನ ಬಾಳ ಸಂಗಾತಿಯಾಗಿ ಸ್ವೀಕರಿಸುವ ಭಾವ ಮೊಳೆತುದೂ ಆ ಹಳ್ಳದ ಬಳಿಯೇ ಎಂಬುದು "ತನ್ನ ಮತ್ತು ಸೆಲ್ಲಿಯ ಜೀವನದ ಒಂದು ಅಂಗವಾದ ಆ ಹಳ್ಳದ ಬುಡದಲ್ಲಿ ನಿರೀಹವಾಗಿ ಆಟವಾಡುತ್ತ ಆಡುತ್ತ ಒಂದು ದಿನ ಸರಳ ಸ್ನೇಹಕ್ಕೂ ಗಂಡು ಹೆಣ್ಣಿನ ಒಲವಿಗೂ ವ್ಯತ್ಯಾಸ ವೇನೆಂಬುದನ್ನು ಅವನ ಮೈ ಅವನಿಗೆ ಹೇಳಿ ಕೊಟ್ಟಿತ್ತು. ಆ ಪ್ರಥಮ ಪ್ರೇಮವು ಮೊಳೆತಾಗ ಅದರಲ್ಲಿ ಹಳ್ಳಕ್ಕೆ ಒಂದು ಸ್ಥಾನವಿತ್ತು" ಈ ವಾಕ್ಯಗಳಿಂದ ತಿಳಿದು ಬರುತ್ತದೆ. ಟಾಮ್ ವೈಮಾನಿಕ ತರಬೇತಿಗೆ ಹೋಗುವ ಮೊದಲು ಸೆಲ್ಲಿಯೊಡನೆ ವಿವಾಹದ ಪ್ರಸ್ತಾಪ ಮಾಡಿದ್ದೂ ಆ ಹಳ್ಳದ ದಂಡೆಯಲ್ಲೇ. ಹಳ್ಳದ ಬಗೆಗೆ ಆತನಿಗಿದ್ದ ಅಭಿಮಾನ ಅಪಾರ, ಒಲುಮೆ ಕೂಡಾ ಅನಿರ್ವಚನೀಯವಾದುದು. ಟಾಮ್‌ನಂತೆಯೇ ಅವನ ತಾಯಿ ಆ್ಯನಿ ವಾಲೇಸಳ ಜೀವನದಲ್ಲೂ ಈ ಹಳ್ಳಕ್ಕೆ ಮಹತ್ವದ ಸ್ಥಾನವಿತ್ತು. ಆಕೆ ಅದರ ದಂಡೆಯಲ್ಲಿ ಕುಳಿತು ತನ್ನೆಲ್ಲ ಕಷ್ಟ ಗಳನ್ನೂ, ವಿಮನಸ್ಕತೆಯನ್ನೂ, ಜೀವನದ ಏರು ಪೇರುಗಳನ್ನೂ ಮರೆಯುತ್ತಿದ್ದಳು. ಅಲ್ಲಿಗೆ ಬರುತ್ತಿದ್ದ ವಿಧ ವಿಧವಾದ ಹಕ್ಕಿಗಳಿಗೆ ಧಾನ್ಯಗಳನ್ನು ಚೆಲ್ಲಿ ಅವುಗಳ ಕ್ರೀಡೆಯನ್ನು ನೋಡಿ ಆನಂದವನ್ನು ಅನುಭವಿಸು ತ್ತಿದ್ದಳು. ಹೀಗೆ ಈ ಮೂವರೂ ಆ ಹಳ್ಳವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವೆಂದೇ ಭಾವಿಸಿದ್ದರು. ಆದರೆ ಟಾಮ್‌ನ ತಂದೆ ಪೀಟರ್ಸನ್‌ಈ ಹಳ್ಳವನ್ನು ಬತ್ತಿಸಿ ಬೇಸಾಯ ಮಾಡುವ ಯೋಚನೆಯಲ್ಲಿದ್ದ. ಒಮ್ಮೆ ಆ್ಯನಿ ಗರ್ಭಿಣಿ ಸೊಸೆಯನ್ನು ತನ್ನ ತವರೂರಾದ ಅಯೋವಾ ರಾಜ್ಯಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಮರಳಿ ಬರುವ ಹೊತ್ತಿಗೆ ಹಳ್ಳವಿದ್ದ ಜಾಗದಲ್ಲಿ ಟ್ರಾಕ್ಟರುಗಳು ಉರುಳಿದ್ದ ದಾರುಣ ದೃಶ್ಯವನ್ನು ಕಂಡು ಕಂಬನಿ ದುಂಬಿದಳು.

ತಾಯಿಯ ಪತ್ರದಿಂದ ಟಾಮ್ ತನ್ನ ತಂದೆ ಹಳ್ಳ ಬತ್ತಿಸಿದ ವಿಷಯ ತಿಳಿದು ಖೇದಗೊಂಡ. ಯುದ್ಧ ಮುಗಿದು ಹಿಂತಿರುಗಿದ ಮೇಲೆ ತನ್ನ ತಾಯಿ ಹೆಂಡತಿಯನ್ನು ಅಯೋವಾ ರಾಜ್ಯಕ್ಕೆ ಕರೆದುಕೊಂಡು ಹೋಗಲು ನಿರ್ಧರಿಸಿ ಪತ್ರ ಮುಖೇನ ಅವರಿಗೆ ಆಶ್ವಾಸನೆಯನ್ನು ನೀಡಿದ. ಆದರೆ ತಾನೊಂದು ಬಗೆದರೆ ದೈವವೊಂದು ಬಗೆ ಯಿತು. ಟಾಮ್‌ನ ಆಸೆ ನೆರವೇರಲು ದೈವ ಅವಕಾಶ ನೀಡಲಿಲ್ಲ. ಸೆಲ್ಲಿಗೆ ಗಂಡು ಮಗುವಾದ ವಿಷಯ ಟಾಮ್‌ಗೆ ಆ ಕೂಡಲೆ ತಿಳಿಸಲಾಯಿತು. ಮಗು ಜನಿಸಿದ ಐದನೇ ದಿನ ಇದ್ದಕ್ಕಿದ್ದಂತೆ ಹಳ್ಳ ಮೊದಲಿದ್ದ ಸ್ಥಳ ದಲ್ಲೇ ಮರುಸೃಷ್ಟಿಯನ್ನು ಪಡೆಯಿತು. ಆ್ಯನಿಗೆ ಮೊದಲು ನಂಬಲಾಗದಿದ್ದರೂ ಕಣ್ಣಿಂದ ಕಂಡ ಮೇಲೆ ನಂಬಲೇ ಬೇಕಾಯಿತು. ಅಂದು ಎಲ್ಲರೂ ಟಾಮ್‌ನನ್ನು ನೆನಸಿಕೊಂಡರು. ಆ ದಿನವೇ ಟಾಮ್‌ನ ಜೀವನದ ಕೊನೆಯ ದಿನವಾಗಿತ್ತು. ಆ್ಯನಿ ಮತ್ತು ಸೆಲ್ಲಿ ಆ ಹಳ್ಳದ ದಂಡೆಯಲ್ಲಿ ಕೆಲಸ ಮಾಡುತ್ತಿದ್ದಾಗಲೇ ಟಾಮ್ ನಿಧನದ ಸುದ್ಧಿ ಯನ್ನೊಳಗೊಂಡ ಪತ್ರ ಕೈ ಸೇರಿತು. ಪತ್ರ ನೋಡಿದ ಕೂಡಲೇ ಅತ್ತೆ ಸೊಸೆಯರಿಬ್ಬರೂ ಅದರಲ್ಲಿದ್ದಿರಬಹು ದಾದ ಸುದ್ಧಿಯನ್ನು ಊಹಿಸಿದರು. ಆದರೆ ಯಾರೂ ಮಾತನ್ನಾಡುವ ಸ್ಥಿತಿಯಲ್ಲಿರಲಿಲ್ಲ. ಕೊನೆಗೆ ಆ್ಯನಿಯೇ ಸೊಸೆಯನ್ನು ಕುರಿತು "ಸೆಲ್ಲಿ, ಇದು ನಡೆದದ್ದು ಸೆಪ್ಟಂಬರ್ ಹದಿನಾರನೇ ತಾರೀಖು, ಹಳ್ಳದಲ್ಲಿ ಮರಳಿ ನೀರು ತುಂಬಿದ್ದೂ ಅದೇ ರಾತ್ರಿ" ಎಂದು ಶಾಂತ ಮನಸ್ಸಿನಿಂದ ನುಡಿಯುತ್ತಾಳೆ. ಹೀಗೆ ಕಥೆಯ ಪ್ರಾರಂಭದಿಂದ ಅಂತ್ಯದ ವರೆಗೂ 'ಹಳ್ಳ' ಒಂದು ಸಂಕೇತವಾಗಿ ನಿಲ್ಲುತ್ತದೆ.

ಕಥೆಯ ಪ್ರಾರಂಭದಲ್ಲಿಯೇ ಟಾಮ್‌ನ ಅಂತ್ಯದ ಸೂಚನೆ "...ಮಿತ್ರನು ನೀರಿಗೆ ಹಾರಿದಾಗ ಉರಿಯುವ ಬೆಂಕಿಗೆ ಹಾರಿದಂತೆ ಕಂಡಿತು. ಧುಮುಕಾಟವೇನು ಬೆಂಕಿಯ ಜಾಜ್ವಲ್ಯ ಮಾನವಾದ ನಾಲಗೆಯಂತೆಯೂ ನೀರಿನ ಪ್ರತಿಯೊಂದು ಬಿಂದುವು ಮನೋರಮವಾದ ಮರಕತದಂತೆಯೂ ಕಂಗೊಳಿಸಿದವು....... ಸ್ವರ್ಗದ ಬಾಗಿಲನ್ನು ತಲುಪುವ ಮನುಷ್ಯರು ಇದೇ ರೀತಿ ಕಂಗೊಳಿಸುತ್ತಿರಬೇಕಲ್ಲ." – ಎಂಬ ಜಿಮ್ಮಿಯ ಮನಸ್ಸಿನಲ್ಲಿ ಮೂಡಿದ ಭಾವನೆಗಳಲ್ಲಿ ವ್ಯಕ್ತವಾಗುತ್ತದೆ.

'ಇಬ್ಬರು ಸೈನಿಕರು' ಬರೆದ ವಿಲ್ಲಿಯಂ ಫಾಕ್‌ನೇರ್ ಕ್ರಿ. ಶ. 1897ರಲ್ಲಿ ಅಲ್ಬೆನಿಯಲ್ಲಿ ಜನಿಸಿದರು. 1937ರಲ್ಲಿ ಇವರಿಗೆ ಓ ಹೆನ್ರಿ ಸ್ಮಾರಕ ಪ್ರಶಸ್ತಿ ದೊರೆತಿದೆ. ಕಾದಂಬರಿ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಗಾಗಿ ಕ್ರಿ.ಶ. 1949ರಲ್ಲಿ ನೊಬೆಲ್ ಪಾರಿತೋಷಕವನ್ನೂ ಪಡೆದ ಕೀರ್ತಿಗೆ ಪಾತ್ರರಾಗಿದ್ದಾರೆ. ಈ ಕಥೆಯಲ್ಲಿ ಲೇಖಕರೇ ಪಾತ್ರವಾಗಿ ಚಿತ್ರಿತರಾಗಿದ್ದಾರೆ. ಅವರೇ ಕಥೆಯ ನಾಯಕನ ತಮ್ಮ. ಲೇಖಕ ಹಾಗೂ ಪೀಟ್ ಇಬ್ಬರು ಅಣ್ಣ – ತಮ್ಮಂದಿರು. ಜಪಾನಿನವರು ಪರ್ಲ್ ಹಾರ್ಬರ್ ಮೇಲೆ ಯುದ್ಧಕ್ಕೆ ತೊಡಗಿದ ವಿಷಯವನ್ನು ರೇಡಿಯೋ ಮುಖಾಂತರ ಕೇಳಿದ ಪೀಟ್ ತಾನು ಯುದ್ಧಕ್ಕೆ ಹೋಗಲು ನಿರ್ಧರಿಸಿ ತಮ್ಮನಿಗೆ ಮನೆಯ ಜವಾಬ್ದಾರಿಯನ್ನು ನಿರ್ವಹಿಸುವಂತೆ ಹೇಳುತ್ತಾನೆ. ಅದರಂತೆ ತನ್ನ ತಂದೆ – ತಾಯಿಯರ ಮನವೊಲಿಸಿ ಮೆಂಫಿಸ್ ನಗರಕ್ಕೆ ಹೊರಡುತ್ತಾನೆ. ಪೀಟ್‌ನನ್ನು ಅಗಲಿರಲು ಸಾಧ್ಯವಾಗದ ತಮ್ಮ ಮನೆಯಲ್ಲಿ ಯಾರಿಗೂ ಹೇಳದೆ ಆತನನ್ನು ಅರಸಿಕೊಂಡು ಮೆಂಫಿಸ್‌ಗೆ ತೆರಳುತ್ತಾನೆ. ಹಾಗೆ ಅವನು ಹೊರಟಾಗ ಅವನಿಗೆ ನಾನಾರೀತಿಯ ಅನುಭವ ಗಳಾಗುತ್ತವೆ. ಕೊನೆಗೂ ಪೀಟ್‌ನನ್ನು ಪತ್ತೆ ಮಾಡುವಲ್ಲಿ ಸಫಲನಾದರೂ ಉದ್ದೇಶ ನೆರವೇರುವುದಿಲ್ಲ.

ಅಣ್ಣ ಆತನನ್ನು ಯುದ್ಧಕ್ಕೆ ಕರೆದುಕೊಂಡು ಹೋಗಲು ಒಪ್ಪದೆ ಜಮೀನನ್ನು. ತಾಯಿಯನ್ನು ನೋಡಿ ಕೊಳ್ಳುವಂತೆ ಅವನ ಮನವೊಲಿಸಿ ತನ್ನ ಲೆಫ್ಟಿನೆಂಟ್‌ಗೆ ವಿಷಯ ತಿಳಿಸಿ ತಮ್ಮನನ್ನು ಕ್ಷೇಮವಾಗಿ ಊರಿಗೆ ಕಳು ಹಿಸುವ ವ್ಯವಸ್ಥೆ ಮಾಡುತ್ತಾನೆ. ಹೀಗೆ ಸೈನಿಕನಾಗ ಬಯಸಿದ ತಮ್ಮ ಬಂದ ದಾರಿಗೆ ಸುಂಕವಿಲ್ಲದಂತೆ ಹಿಂತಿರುಗಬೇಕಾಗಿ ಬಂದುದೇ ಇಲ್ಲಿನ ಕಥಾವಸ್ತು.

ಹಳ್ಳಿಯಿಂದ ಪಟ್ಟಣಕ್ಕೆ ಬಂದ ಪೀಟ್‌ನ ತಮ್ಮ ಅಲ್ಲಿಯ ವೈಭವದ ಜೀವನವನ್ನು ಕಂಡು ಮೂಕವಿಸ್ಮಿತ ನಾಗಿದ್ದಾನೆ. ಕೋಣೆಯೊಂದರೊಳಗೆ ಅವನಿಗಾದ ಅನುಭವವನ್ನು ಅವನ ಮಾತುಗಳಲ್ಲೇ ಕೇಳಬಹುದು: "ಒಂದು ಸಣ್ಣ ಕೋಣೆಗೆ ಹೋದರೆ ಅಲ್ಲಿ ಒಬ್ಬ ಸಮವಸ್ತ್ರಧರಿಸಿದ ಆಳು ನಾವು ಹೋದ ಕೂಡಲೇ ಬಾಗಿಲು ಹಾಕಿದ. 'ಏನಾ ಇದೇನು' ಎಂದು ನಾನು ನನ್ನ ನಡುಗುವ ಕಾಲನ್ನು ಗಟ್ಟಿಯಾಗಿರಿಸಿದೆ. ಆಮೇಲೆ ಎಲ್ಲವೂ ಸರಿಹೋಯಿತು. ಇಡೀ ಕೋಣೆಯೇ ಮೇಲಕ್ಕೆ ಸರಿಯುತ್ತಿತ್ತು. ಕೊನೆಗೊಮ್ಮೆ ಒಂದು ಕಡೆ ಗಪಕ್ಕನೆ ನಿಂತಿತು."

ಆ ನಗರದ ವಾಹನ ಸಂಚಾರವೂ ಆವನನ್ನು ಅಚ್ಚರಿಯಲ್ಲಿ ಮುಳುಗಿಸಿತೆಂಬುದು ಅವನ ಈ ಕೆಳಗಿನ ಮಾತುಗಳಿಂದ ವಿದಿತವಾಗುತ್ತದೆ. "ನಾವು ಹೊರಟು ಬೇರೆ ಕಾರುಗಳ ನಡುವೆ ಸಿಕ್ಕಿಕೊಂಡೆವು. ಒಮ್ಮೊಮ್ಮೆ ನಾವು ಬಸ್ಸಿನ ಅಡಿಯಲ್ಲೂ ಹೋಗುತ್ತಿದ್ದೆವು. ಜನ ನಮ್ಮ ಕಾರನ್ನು ಮುಟ್ಟಿಕೊಂಡೇ ನಡೆಯುತ್ತಿದ್ದರು. ಅವರ ಪರಿಚಯುವಾದರೂ ಇದ್ದರೆ ಕಾರಿನೊಳಗೆ ಕೂತಲ್ಲಿಂದಲೇ ಅವರನ್ನು ಮಾತಾಡಿಸಬಹುದಿತ್ತು" ಇತ್ಯಾದಿ. ಹೀಗೆ ಇನ್ನೂ ಕೆಲವು ಘಟನೆಗಳನ್ನು ಹಳ್ಳಿ ಹಾಗೂ ಪಟ್ಟಣ ಜೀವನದ ತಾರತಮ್ಯವನ್ನು ಸುಂದರ ವಾಗಿ ನಿರೂಪಿಸುತ್ತದೆ – ಈ ಕಥೆ.

'ರೈತ' ಬರೆದಿರುವ ಎಡ್ನಾ ಫರ್ಬರ್ ಕ್ರಿ.ಶ. 1887ರಲ್ಲಿ ಮಿಚಿಗನ್ ರಾಜ್ಯದ ಕಾಲಮಜೂ ಎಂಬಲ್ಲಿ ಜನಿಸಿದರು. ಇವರು ನಾಟಕಕರ್ತರಾಗಿಯೂ ಖ್ಯಾತಿ ಪಡೆದಿದ್ದರು. ಇವರ ಕೆಲವು ಕಾದಂಬರಿಗಳು ಚಲನಚಿತ್ರ ಗಳಾಗಿವೆ. ಪ್ರಸ್ತುತ ಕಥೆ 'ರೈತ'ದಲ್ಲಿ ಹುಟ್ಟು ಬೇಸಾಯಗಾರನಾದ ಬೆನ್ ಪತ್ನಿಯ ಬಲವಂತಕ್ಕೆ ಕಟ್ಟುಬಿದ್ದು ಚಿಕಾಗೋ ನಗರಕ್ಕೆ ಬಂದು ನೆಲಸಿ ಪಟ್ಟಣದ ಜೀವನಕ್ಕೆ ಹೊಂದಿಕೊಳ್ಳಲಾಗದೆ ತೊಳಲಾಡಿದ ಚಿತ್ರ ಇದೆ. ಬೆನ್ ವೆಸ್ಟರ್ ವೆಲ್ ಎಂಬ ರೈತ ಇಲ್ಲಿನೋಯ್ಸ್ ರಾಜ್ಯದಲ್ಲಿ ಬೇಸಾಯಗಾರನಾಗಿದ್ದು ಒಳ್ಳೆಯ ಹೆಸರನ್ನು ಪಡೆ ದಿದ್ದ. ಈತ ಡಚ್ ವಂಶಾವಳಿಗೆ ಸೇರಿದವನಾಗಿದ್ದರೂ ಈತನ ಹಿರಿಯರು ಅಮೆರಿಕದ ಇಲ್ಲಿನೋಯ್ಸ್‌ನಲ್ಲಿ ಬಹು ಕಾಲದಿಂದ ನೆಲಸಿದ್ದರು. ಮೊದಲು ಎಮ್ಮಾ ಬೈರ್ಸ್‌ಳಲ್ಲಿ ಆಕರ್ಷಿತನಾಗಿದ್ದರೂ ಆತ ವಿವಾಹವಾದದ್ದು ಬೆಲ್ಲಾ ಹಕ್ಕಿನ್ಸಳನ್ನು. ಅವರಿಬ್ಬರ ಪ್ರಥಮ ಭೇಟಿಯ ಸಂದರ್ಭವನ್ನು ಲೇಖಕರು "ಬೆಲ್ಲಾ ನಾಯಿಯನ್ನು ಕಂಡು ಚಿಟ್ಟೆಂದು ಕಿರಿಚಿ, ಬೆನ್‌ನನ್ನು ಗಟ್ಟಿಯಾಗಿ ಅವಚಿಕೊಂಡಳು. ಅದುವರೆಗೆ ಒಂದು ಗಿಡವನ್ನು ನೋಯಿಸದ ಬೆನ್ ಕೈಯಲ್ಲಿನ ಛಡಿಯಿಂದ ನಾಯಿಗೆ ಫಳೀರನೆ ಬೀಸಿದನು. ಕುಯ್ಯೋ ಮುರ್ರೋ ಎಂದು ನಾಯಿ ದೇಹ ವನ್ನು ಕುಗ್ಗಿಸಿಕೊಂಡು ಅನಿರೀಕ್ಷಿತ ಆಘಾತದಿಂದ ತತ್ತರಿಸಿತು.... ಆಕೆಯ ನಿಸ್ಸಹಾಯಕತೆ ಮತ್ತು ಅತಿಶಯ ವಾದ ಸ್ತ್ರೀತ್ವವು ಅವನ ಗಂಡಸುತನವನ್ನು ಪೂರ್ತಿಯಾಗಿ ಆಕರ್ಷಿಸಿದವು" ಎಂದು ಅತ್ಯಂತ ಸಹಜವಾಗಿ ನಿರೂ ಪಿಸಿದ್ದಾರೆ. ಬೆನ್ ಹಾಗೂ ಬೆಲ್ಲಾಗೆ ಮಿನ್ನೀ ಎಂಬ ಹೆಣ್ಣು ಮಗು, ಜಾನ್, ಡೈಕ್ ಎಂಬ ಗಂಡು ಮಕ್ಕಳಿದ್ದರು. ಜಾನ್ ಚಿಕ್ಕವನಾಗಿದ್ದಾಗಲೇ ಅಸುನೀಗಿದ. ಮಿನ್ನಿ ಚಿಕಾಗೋ ಪಟ್ಟಣಕ್ಕೆ ಓಡಿ ಹೋಗಿ ವಿಲಾಸಿಯೂ ಲಫಂಗನೂ ಆದ ಕಾರ್ಮಿಕನನ್ನು ವಿವಾಹವಾಗಿದ್ದಳು. ಡೈಕ್ ತಂದೆಯ ಗುಣಗಳನ್ನು ಪಡೆದಿದ್ದರೆ ಮಿನ್ನಿ ತಾಯಿಯ ಸ್ವಭಾವ – ಗುಣಗಳನ್ನು ಹೊಂದಿದ್ದಳು. ಡೈಕ್ ರೈತ ಯುವಕರ ಜೊತೆ ಯುದ್ಧ ಭೂಮಿಗೆ ತೆರಳಬೇಕಾಯಿತು. ಮಗನೂ ಯುದ್ಧಕ್ಕೆ ತೆರಳಿದ ಮೇಲೆ ಬೆಲ್ಲಾಗೆ ಹಳ್ಳಿಯಲ್ಲಿರುವ ಇಚ್ಛೆ ಉಳಿಯಲಿಲ್ಲ. ಆಕೆಯ ದೃಷ್ಟಿ ನಗರಾಭಿ ಮುಖವಾಗಿದ್ದು ಬೆನ್‌ನ ಮನಪರಿವರ್ತನೆ ಮಾಡುವಲ್ಲಿ ಯಶಸ್ವಿಯಾದ ರೀತಿಯನ್ನು "ಅವನು ಉತ್ತಮ ಲೋಹ, ಆಕೆ ನೀಚ, ಒರಟು ಲೋಹ, ಆಕೆ ಅವನನ್ನು ಬಡಿದು ಬಡಿದು ಬಗ್ಗಿಸಿದಳು – ಬಂಗಾರವನ್ನು ಕಬ್ಬಿಣವು ಬಗ್ಗಿಸಿದಂತೆ" ಎಂಬ ಮಾತುಗಳಲ್ಲಿ ಸಮರ್ಥವಾಗಿ ವರ್ಣಿಸಿದ್ದಾರೆ. ಕೊನೆಗೆ ಬೆಲ್ಲಾಳ ಬಲವಂತಕ್ಕೆ ಬೆನ್ ಚಿಕಾಗೋ ನಗರಕ್ಕೆ ವಲಸೆ ಬಂದ. ಹಾಗೆ ಬಂದ ಅವನ ಮಾನಸಿಕ ತೊಳಲಾಟ ಹೇಳಲಸದಳ.

ಒಮ್ಮೆ ಚಿಕಾಗೋವಿನ ಪೇಟೆ ಬೀದಿಗೆ ಹೋದಾಗ ಬೈರ್ಸ್‌ಳನ್ನು ಭೇಟಿ ಮಾಡುತ್ತಾನೆ. ಬೆನ್‌ನ ಪರಿಸ್ಥಿತಿ ಯನ್ನು ಗಮನಿಸಿದ ಬೈರ್ಸ್ ವ್ಯಥಿತಳಾಗುತ್ತಾಳೆ. ಮರಳಿ ಬೇಸಾಯ ಕಾರ್ಯವನ್ನು ಕೈಗೊಳ್ಳುವಂತೆ ಪ್ರೇರೇಪಿಸು ತ್ತಾಳೆ. ಆ ದಿಸೆಯಲ್ಲಿ ಆತನನ್ನು ಹುರಿದುಂಬಿಸುತ್ತಾಳೆ. ಅದೇ ಗುಂಗಿನಲ್ಲಿ ಮನೆಗೆ ಮರಳುವ ವೇಳೆಗೆ ಡೈಕ್ ಯುದ್ಧ ಮುಗಿಸಿ ಹಿಂದಿರುಗುತ್ತಾನೆ. ಅವನನ್ನು ಕಂಡ ಕೂಡಲೇ ಅವನಿಗೆ ತಾರುಣ್ಯ ಮರಳಿದ ಭಾವನೆ ಉಂಟಾ ಗುತ್ತದೆ. ತಂದೆ ಮಗ ಇಬ್ಬರೂ ಬೇಸಾಯದ ಕಸುಬಿಗೇ ಹಿಂತಿರುಗುವಾಗ 'ಬೇಸಾಯಕ್ಕಿಂತ ದೊಡ್ಡ ಕಸುಬೇ ಪ್ರಪಂಚದಲ್ಲಿಲ್ಲ'ವೆಂದು ದೃಢವಾಗಿ ಹೇಳುವಲ್ಲಿ ಬೇಸಾಯದ ಬಗೆಗೆ ಆತನಿಗಿದ್ದ ಒಲವಿನ ಪರಿಚಯುವಾಗುತ್ತದೆ. ಬೆನ್‌ನ ವ್ಯಕ್ತಿತ್ವ "ನಾಗರಿಕರ ಒನಪು. ನವುರು ಅವನಲಿಲ್ಲದೇ ಹೋದರೂ ಅವನು ನೈಸರ್ಗಿಕ ಸನ್ನಿವೇಶದೊಡನೆ ಆತ ಹೂ ಹಕ್ಕಿಗಳಂತೆ ಹಾಸುಹೊಕ್ಕಾಗಿ ಬಳೆದಿದ್ದನು. ನಿಸರ್ಗ ಸಹಜವಾದ ಒಂದು ಗುಡ್ಡಕ್ಕೂ, ಗೋಲ್ಡ್

ಆಟದ ಗುಡ್ಡಕ್ಕೂ ಆಕಾರ ವಸ್ತು ಒಂದೇ ಆದರೂ ... ಇರುವ ವ್ಯತ್ಯಾಸವೇ ಈ ರೈತನಿಗೂ ನಾಗರಿಕನಿಗೂ ಇರುವ ಅಂತರವಾಗಿತ್ತು" ಎಂಬ ಮಾತುಗಳಿಂದಲೂ "ಗ್ರಂಥ ಮತ್ತು ಅನುಭವದಿಂದ ಬೇರೆಯವರು ಭೂಮಿ-ಬೀಜಗಳ ಸಂಬಂಧವನ್ನು ಕಲಿಯಬೇಕಾಗಿದ್ದರೆ ಬೆನ್‌ಗೆ ಆ ವಿದ್ಯೆ ವಾಸನಾರೂಪದ ವರದಾನವಾಗಿತ್ತು. ಆತನ ಪ್ರಾಂತ್ಯದಲ್ಲಿ ಬೆನ್ ಕಲ್ಲಿನಲ್ಲಿ ಹೂವರಳಿಸುವಷ್ಟು ಹುಷಾರಿ ರೈತನೆಂದು ಪ್ರಸಿದ್ಧಿ" ಪಡೆದಿದ್ದ ಎಂಬ ಮಾತುಗಳಿಂದ ಪ್ರತಿಬಿಂಬಿತವಾಗಿದೆ.

ಒಲಿದು ಬಂದ ಬೆಲ್ಲಳನ್ನು ವಿವಾಹವಾದ ಕೆಲವೇ ದಿನಗಳಲ್ಲಿ ಬೆನ್‌ನ ಭ್ರಮನಿರಸನವಾದುದು "ತಾನು ಸ್ವಯಂ ವರಿಸಿದ ಕೋಮಲಾಂಗಿ, ಸುಂದರಿ ಎಂಥ ಹಟಮಾರಿ ಚಂಡಿ ಎಂದು ಬೆನ್‌ಗೆ ಮೊದಲಸಾರಿ ತಿಳಿದಾಗ ಆತ ಅದನ್ನು ನಂಬಲೊಲ್ಲ. ಅವನಿಗೆ ವೈಯಕ್ತಿಕ ನೈರ್ಮಲ್ಯ, ಸ್ನಾನ, ನಿತ್ಯ ಆಹ್ನಿಕಗಳಾದರೆ ಬೆಲ್ಲಾಗೆ ಸ್ನಾನ ಮಾಡುವ ಅಭ್ಯಾಸವೇ ಇರಲಿಲ್ಲ. ಅವಳ ಸೌಂದರ್ಯಕ್ಕೆ ಅವಳ ಕಣ್ಣಿನ ತೀಕ್ಷ್ಣತೆಗೆ ಮತ್ತು ಚರ್ಮದ ಸೌಷ್ಠವ ಕಾರಣವಲ್ಲದೆ ಅವಳ ವರ್ತನೆ ಅಲ್ಲವೆಂಬುದು ಬೆನ್‌ಗೆ ಶೀಘ್ರವಾಗಿ ಗೊತ್ತಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಅವಳ ಬತ್ತಳಿಕೆಯಲ್ಲಿರುವ ವಾಗ್ಬಾಣಗಳ ಕಲ್ಪನೆಯೇ ಬೆನ್‌ಗಿಲ್ಲ. ಶರಾಬು ಕುಡಿಯುವ ಹೋಟೆಲ್ ಗಿರಾಕಿಗಳ ನಿಘಂಟು ಆಕೆಗೆ ಕಂಠಪಾಠವಾಗಿತ್ತು. " - ಈ ಹೇಳಿಕೆಗಳಿಂದ ತಿಳಿದು ಬರುತ್ತದೆ.

ತಾಯಿ - ಮಗಳಾದ ಬೆಲ್ಲಾ ಹಾಗೂ ಮಿನ್ನಿಯ ಸ್ವಭಾವ ಚಿತ್ರ ಅತ್ಯಂತ ಸಹಜವಾಗಿ ಮೂಡಿಬಂದಿದೆ (ಪು. 107, 108, 109). ಚಿಕಾಗೋ ಪಟ್ಟಣದ ಪೇಟೆಯಲ್ಲಿ ಸಂಚರಿಸಿದ ಬೆನ್‌ಗೆ ಅಲ್ಲಿ ರಾಶಿ - ರಾಶಿಯಾಗಿ ಬಿದ್ದಿದ್ದ ಕಡೆ ಗಮನಸರಿಯುತ್ತದೆ. ಅಲ್ಲಿ ಹರಡಿದ್ದ ಕಾಲಿಫ್ಲವರ್‌ನಲ್ಲಿ ಮದುವಣಗಿತ್ತಿಯು ಕೈಗೆ ಕೊಡುವ ಪುಷ್ಪ ಗುಚ್ಛದ ಸೊಬಗನ್ನು ಕ್ಯಾಬೇಜ್‌ನಲ್ಲಿ ವಜ್ರದ ಹೊಳಪನ್ನು ಕಾಣುತ್ತಾನೆ.

'ನ್ಯೂ - ಇಂಗ್ಲೆಂಡ್ ಸನ್ಯಾಸಿನಿ' ಬರೆದ ಲೇಖಕಿ ಮೇರಿ ಇ. ವಿಲ್‌ಕಿನ್ಸ್ ಫ್ರೀಮ್ಯಾನ್ ಮೆಸ್ಸಚುಸೆಟ್ಸ್ ರಾಜ್ಯದ ರಾಂಡೊಲ್ಫ್‌ನಲ್ಲಿ ಕ್ರಿ.ಶ. 1853ರಲ್ಲಿ ಜನಿಸಿದ್ದು ಕ್ರಿ.ಶ. 1930ರಲ್ಲಿ ಮೃತಿ ಹೊಂದಿದ್ದಾರೆ. ಈಕೆ ಸಣ್ಣ ಕತೆಗಳ ನ್ನಲ್ಲದೆ ಹನ್ನೆರಡು ಕಾದಂಬರಿಗಳನ್ನೂ, ಒಂದು ನಾಟಕವನ್ನೂ, ಕವನ ಸಂಕಲನಗಳನ್ನೂ ಬರೆದಿದ್ದಾರೆ. ನ್ಯೂ ಇಂಗ್ಲೆಂಡಿನ ಸಾಮಾನ್ಯ ಜನರ ಜೀವನವನ್ನು ಚಿತ್ರಿಸುವುದರಲ್ಲಿ ನಿಷ್ಣಾತೆಯೆಂದು ಹೆಸರು ಪಡೆದಿರುವ ಈಕೆ ಪ್ರಸ್ತುತ ಕಥೆಯಲ್ಲಿ ಒಬ್ಬ ಸಾಮಾನ್ಯ ಹೆಂಗಸಿನ ಜೀವನ ಚಿತ್ರಣವನ್ನು ಕೊಟ್ಟಿದ್ದಾರೆ.

ನಯನಾಜೂಕಿನ ಗುಣವುಳ್ಳ ಲೂಯಿಸಾ ಎಲ್ಲಿಸಳು ಕಾರ್ಯಚತುರೆ. ಎಲ್ಲದರಲ್ಲಿಯೂ ಅಚ್ಚುಕಟ್ಟನ್ನು ಬಯಸುವವಳು. ತನ್ನ ತಾಯಿಯ ಅಪೇಕ್ಷೆಯ ಮೇರೆಗೆ ಆಕೆಯ ಗುಣ - ಸ್ವಭಾವಗಳಿಗೆ ವಿರುದ್ಧವಾದ ಗುಣಗಳನ್ನು ಪಡೆದಿದ್ದ ಜೋಡಗೆಟ್‌ನನ್ನು ವಿವಾಹವಾಗಲು ಹದಿನಾಲ್ಕು ವರ್ಷಗಳಿಂದ ಕಾದಿದ್ದಳು. ತನ್ನ ಅಣ್ಣ - ತಾಯಿಯರನ್ನು ಕಳೆದುಕೊಂಡು ಏಕಾಂಗಿಯಾದ ಆಕೆ ನೆಚ್ಚಿನ ಬಂಟ ಸೀಸರ್ ಎಂಬ ನಾಯಿಯೊಡನೆ ಜೋಡಗೆಟ್‌ನ ನಿರೀಕ್ಷೆಯಲ್ಲಿ ಕಾಲತಳ್ಳುತ್ತಿದ್ದಳು. ಲೂಯಿಸಾಳನ್ನು ವಿವಾಹವಾಗುವ ಮೊದಲು ಹಣ ಸಂಗ್ರ ಹಣೆಯ ಉದ್ದೇಶದಿಂದ ಜೋ ಆಸ್ಟ್ರೇಲಿಯಾಕ್ಕೆ ತೆರಳಿದ್ದನು. ಹದಿನಾಲ್ಕು ವರ್ಷಗಳ ನಂತರ ಜೋ ಹಿಂತಿರುಗಿದ ಕೂಡಲೇ ತನ್ನ ಪ್ರೇಯಸಿ ಲೂಯಿಸಾಳನ್ನು ನೋಡಲು ಬಂದಾಗಿನ ಪ್ರಸಂಗವನ್ನು ವರ್ಣಿಸುತ್ತಾ "ಪಿಂಗಾಣಿಯ ಅಂಗಡಿಯಿಂದ ಹೊರಬಂದ ಕರಡಿ ಸುಖವಾಗಿ ಉಸಿರೆಳೆಯುವಂತೆ ಆ ಮನೆಯಿಂದ ಹೊರಬಿದ್ದ ಜೋಡಗೆಟ್ ....ಲೂಯಿಸಾ ಕೂಡ ಪಿಂಗಾಣಿಯ ಅಂಗಡಿಕಾರನು ಕರಡಿಯು ಹೋದ ಮೇಲೆ ಸಮಾಧಾನ ಪಡುವಂತೆ ಉಸುರ್ಗರೆದಳು." ಎಂಬ ಲೇಖಕಿಯ ಮಾತು ಅವರಿಬ್ಬರ ಸ್ವಭಾವವನ್ನು ಸಮರ್ಥವಾಗಿ ಪರಿ ಚಯಿಸಿದೆ.

ಮದುವೆ ಇನ್ನೊಂದು ವಾರವಿರುವಾಗ ಒಂದು ದಿನ ಹುಣ್ಣಿಮೆಯ ಇರುಳಿನಲ್ಲಿ ತಿರುಗಾಡಲು ಲೂಯಿಸ ಮನೆಯಿಂದ ಹೊರಟಳು. ಅಲ್ಲಿ ಒಂದೆಡೆಯಲ್ಲಿ ಜೋ ಹಾಗೂ ಅತಿ ಚೆಲುವೆ ಎಂದು ಪ್ರಸಿದ್ಧಳಾಗಿದ್ದ ಲಿಲಿಡೈರ್‌ರ ಸಂಭಾಷಣೆಯನ್ನು ಆಲಿಸಿ ಸ್ವಲ್ಪಮಟ್ಟಿಗೆ ವಿಚಲಿತಳಾದಳು. ಆ ಕೂಡಲೇ ಜೋನೊಡನೆ ವಿವಾಹವಾಗುವ ಯೋಚನೆಯನ್ನೂ ಕೈಬಿಟ್ಟಳು. ಮರುದಿನ ಜೋ ಬಂದಾಗ ತನ್ನೆಲ್ಲ ಭಾವನೆಗಳನ್ನು ಅಡಗಿಸಿಟ್ಟು "ಇಷ್ಟೊಂದು ವರ್ಷ ಕಳೆದ ಮೇಲೆ ಒಂದು ರೀತಿಯಾಗಿ ಜೀವನ ಮಾಡುವುದು ಅಭ್ಯಾಸವಾದ ಮೇಲೆ ಅದನ್ನು ಬದಲಾಯಿಸು ವುದು ತನಗೆ ಹಿತವಾಗಿ ಕಾಣಿಸುವುದಿಲ್ಲ"ವೆಂದು ಸರಳವಾಗಿ ಹೇಳಿ ಕಳುಹಿಸಿದಳು. ಆ ಕ್ಷಣದಲ್ಲಿ ಆಕೆ ಕಳವಳಕ್ಕೊಳ ಗಾದರೂ ಮರುದಿನ ಬೆಳಗಿನ ಹೊತ್ತಿಗೆ "ತನ್ನ ಸಾಮ್ರಾಜ್ಯವು ಎಲ್ಲಿ ಕಸಿಯಲ್ಪಡುವುದೋ ಎಂದು ಭೀತಳಾದ ಒಬ್ಬ ರಾಣಿ ಸಾಮ್ರಾಜ್ಯವು ತನ್ನ ಕೈಯಲ್ಲೇ ಭದ್ರವಾಗಿರುವುದನ್ನರಿತಾಗ ಎಷ್ಟು ಸಂತೋಷ ಪಡುವಳೋ ಅಷ್ಟು ಸಂತೋಷವಾಯಿತು" ಎಂದು ನಿಶ್ಚಿಂತಳಾಗುತ್ತಾಳೆ. ಆಕೆಯ ಈ ಅನಿಸಿಕೆ ಆಕೆಯ ಮಾನಸಿಕ ಸ್ಥೈರ್ಯ ವನ್ನು ಪರಿಚಯಿಸುತ್ತದೆ. ಶಾಂತತೆ, ಗಾಂಭೀರ್ಯ ಅವಳ ಜನ್ಮಸಿದ್ಧ ಹಕ್ಕಾಗಿದ್ದಂತೆ ಅವಳ ಭವಿಷ್ಯ ಒಂದು ದಿನವನ್ನು ಇನ್ನೊಂದು ದಿನಕ್ಕೆ ಪೋಣಿಸಿ ಮಾಡಿದ ಜಪಸರದಂತೆ, ನಿರ್ದುಷ್ಟವೂ ನಿರೀಹವೂ ಆದ ಮಣಿಗಳ ಸುಂದರ ಮಾಲೆಯಂತೆ ಗೋಚರಿಸಿತು " ಎಂಬ ಮಾತು ಆಕೆಯ ವ್ಯಕ್ತಿತ್ವದ ಔಚಿತ್ಯವನ್ನು ಎತ್ತಿ ತೋರಿಸಿದೆ.

ಅನಪೇಕ್ಷಿತ ಘಟನೆ ಘಟಿಸದಿದ್ದುದಕ್ಕೆ ಮನದಲ್ಲೇ ದೇವರನ್ನು ವಂದಿಸಿದಳಂತೆ. ಪ್ರಸ್ತುತ ಕಥೆಯಲ್ಲಿ ಅವಳ ಮಾನಸಿಕ ತುಮುಲದ ಚಿತ್ರಣ ಅತ್ಯಂತ ಸುಂದರವಾಗಿ ಒಡಮೂಡಿದೆ.

ಕ್ರಿ.ಶ. 1903ರಲ್ಲಿ ಕ್ಯಾಲಿಫೋರ್ನಿಯಾದ ಸೆಲಿನಿಸ್ ನಗರದಲ್ಲಿ ಜನಿಸಿದ ಜಾನ್ ಸ್ಟೀನ್‌ಬೆಕ್ ಅವರು 'ಜೂನಿಯಸ್ ಮಾಲ್ಟ್‌ಬೀ' ಕಥೆಯ ಲೇಖಕರು. ಇವರ ಕಾರ್ಯಕ್ಷೇತ್ರ ಬಹುಮುಖಿಯಾದುದು. ಪ್ರಸ್ತುತ ಕಥೆ ಮಾಲ್ಟ್‌ಬೀಯ ಜೀವನ ಚಿತ್ರಣವನ್ನು ಒಳಗೊಂಡಿದೆ. ಸುಶಿಕ್ಷಿತ ಯುವಕ ಮಾಲ್ಟ್‌ಬೀ ಸಾಹಿತ್ಯ ಕೃತಿಗಳನ್ನು ಓದುವುದರಲ್ಲಿ ಆಸಕ್ತಿ ಉಳ್ಳವನು. ಏಕಾಂಕಿಯಾಗಿದ್ದ ಈತ ಸ್ಯಾನ್‌ಫ್ರಾನ್ಸಿಸ್ಕೋ ನಗರದ ಕಚೇರಿಯೊಂದರಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದನು. ಅನಾರೋಗ್ಯದ ನಿಮಿತ್ತ ಮಾಲ್ಟ್‌ಬೀಗೆ ಸ್ವರ್ಗಸೀಮೆ(ಪ್ಯಾಶ್ಚರ್ಸ್ ಆಫ್ ಹೆವನ್)ಗೆ ಹೋಗಲು ಸಲಹೆ ನೀಡಲಾಯಿತು. ಅದರಂತೆ ಆತ ಸ್ವರ್ಗಸೀಮೆಗೆ ಹೋಗಿ ಅಲ್ಲಿ ಇಬ್ಬರು ಮಕ್ಕಳಿದ್ದ ವಿಧವೆ ಶ್ರೀಮತಿ ಕ್ವೇಕರ ಮನೆಯಲ್ಲಿ ಬಿಡಾರ ಹೂಡಿದನು. ಕಾಲಾನಂತರದಲ್ಲಿ ಆತನ ಕಾಯಿಲೆ ಗುಣವಾಯಿತು. ಕ್ವೇಕರಳನ್ನು ವಿವಾಹವಾದನು. ಆದರೆ ಈ ವೇಳೆಗಾಗಲೇ ಮಾಲ್ಟ್‌ಬೀ ಅತ್ಯಂತ ಸೋಮಾರಿತನವನ್ನು ಮೈಗೂಡಿಸಿಕೊಂಡಿದ್ದನು. ಅವನನ್ನು ಕೆಲಸಕ್ಕೆ ತೊಡಗಿಸಲು ಕ್ವೇಕರಳು ಮಾಡಿದ ಪ್ರಯತ್ನವೆಲ್ಲಾ ವಿಫಲವಾಯಿತು.

ಸ್ವರ್ಗಸೀಮೆಯು ಬರಗಾಲ ಪೀಡಿತ ಪ್ರದೇಶವಾಗಿ ಪರಿಣಮಿಸಿತು. ಕೆಲವು ವರ್ಷಗಳ ಬಳಿಕ ಕ್ವೇಕರಳ ಎರಡು ಮಕ್ಕಳೂ ಆಕೆಯೂ ಮರಣಹೊಂದಿದರು. ಆದರೆ ಮಾಲ್ಟ್‌ಬೀಯ ಮಗು ರಾಬರ್ಟ್ ಉಳಿದುಕೊಂಡಿತು. ಮಗುವನ್ನು ಸಾಕುವ ಹೊಣೆ ಆತನ ಪಾಲಿಗೆ ಬಂತು. ಮಗುವಿಗೆ ಹಾಲಿನ ವ್ಯವಸ್ಥೆಗಾಗಿ ಆಡನ್ನು ಕೊಂಡ ಕೊಂಡ ಕತೆ ಸ್ವಾರಸ್ಯವಾಗಿರುವುದಲ್ಲದೆ ಆತನ ಮೌಢ್ಯವೂ ಅದರಲ್ಲಿ ವ್ಯಕ್ತವಾಗಿದೆ.(ಪು. 145). ಮಗು ಬೆಳೆದಂತೆ ಆತನ ಜೀವನಗತಿಯೂ ಬದಲಾವಣೆ ಹೊಂದುತ್ತದೆ. ಕೊನೆಗೆ ರಾಬರ್ಟ್‌ನ ಶ್ರೇಯೋಭಿವೃದ್ಧಿಗಾಗಿ ಆ ಹುಲ್ಲುಗಾವಲನ್ನು ತೊರೆದು ಮರಳಿ ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೇ ಮರಳುತ್ತಾನೆ.

ಈ ಕೃತಿಯ ಎಲ್ಲ ಕಥೆಗಳಲ್ಲೂ ಲೇಖಕರೇ ಹೇಳಿರುವಂತೆ ಅಮೆರಿಕದ ಗ್ರಾಮ ಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿದೆ. ಎಲ್ಲ ಕಥೆಗಳಲ್ಲೂ ಪ್ರಕೃತಿ ಚಿತ್ರಣ ಮೇಲು ಕೈಯನ್ನು ಪಡೆದಿದೆ. ಒಟ್ಟಿನಲ್ಲಿ ಇಲ್ಲಿನ ಕಥೆಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯ 'ಒಳನಾಡಿನ ಪಡುಗಡಲು' ಎಂಬ ಕಥೆಯನ್ನು ಸಣ್ಣ ಕಥೆ ಎನ್ನುವುದಕ್ಕಿಂತ ಒಂದು ಪ್ರಬಂಧವೆಂದು ಗುರುತಿಸಬಹುದಾಗಿದೆ. 'ಹಳ್ಳ' ಹಾಗೂ 'ಇಬ್ಬರು ಸೈನಿಕರು' ಕಥೆಗಳು ಅಲ್ಲಿನ ಸೈನಿಕರ ಜೀವನವನ್ನು ಕುರಿತದ್ದಾಗಿದೆ. ಕೊನೆಯ ಎರಡು ಕಥೆ 'ನ್ಯೂ ಇಂಗ್ಲೆಂಡ್ ಸನ್ಯಾಸಿನಿ' ಹಾಗೂ 'ಜೂನಿಯಸ್ ಮಾಲ್ಟ್‌ಬಿ' ವ್ಯಕ್ತಿಚಿತ್ರಣಗಳನ್ನೊಳಗೊಂಡಿದೆ. 'ರೈತ' ಎಂಬ ಕಥೆ ಮಾತ್ರ ಇವೆಲ್ಲವುಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ದೀರ್ಘವಾದ ಈ ಕಥೆ ಯಾವುದೇ ದೇಶದ ಯಾವುದೇ ರೈತನ ಕಥೆಯಾಗಬಹುದಾದ ಸಾಧ್ಯತೆಯಿದೆ. 'ಹಳ್ಳ' ಹಾಗೂ 'ರೈತ' ಕಥೆಗಳು ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತವೆ. ಓದುಗನ ಮನಸ್ಸನ್ನು ಕಲಕುತ್ತವೆ. ಅಲ್ಲಿ ಬರುವ ಘಟನೆಗಳು, ಮೂಡಿಬಂದಿರುವ ಚಿತ್ರಣಗಳು ಅತ್ಯಂತ ಸಹಜವಾಗಿವೆ. 'ಹಳ್ಳ' ಕಥೆಯಲ್ಲಿ ಪ್ರೈಯರಿ ಪ್ರಾಂತದಲ್ಲಿ ಟಾಮ್‌ನ ಮನೆಯ ಸಮೀಪದಲ್ಲಿದ್ದ ಹಳ್ಳವೇ ಕಥೆಯಲ್ಲಿ ಕೇಂದ್ರವಾಗಿದೆ. ಸಂಪೂರ್ಣವಾಗಿ ಬತ್ತಿಸಲ್ಪಟ್ಟಿದ್ದ ಆ ಹಳ್ಳ ಟಾಮ್ ಮೃತ ಹೊಂದಿದ ದಿನವೇ ಅವನ ಜೀವನ ಸೂತ್ರದಂತಿದ್ದುದರ ಸಂಕೇತವಾಗಿ ಮರುಹುಟ್ಟನ್ನು ಪಡೆಯುತ್ತದೆ. ಆದರೆ ಕಥೆಯ ಪ್ರಾರಂಭದಲ್ಲಿಯೇ ಅವನ ಮರಣದ ಸೂಚನೆಯೂ ದೊರೆಯುವುದು ಅಷ್ಟು ಹಿತವೆನಿಸುವುದಿಲ್ಲ. ಕಥೆಯ ಅಂತ್ಯ ಪ್ರಾರಂಭದಲ್ಲಿಯೇ ತಿಳಿದು ಬಂದಾಗ ಕಥೆಯನ್ನು ಓದುವ ಕುತೂಹಲ ಕುಂದುತ್ತದೆ. ಆ ದೃಷ್ಟಿಯಿಂದ ಓದುಗರನ್ನು ಸ್ವಲ್ಪ ಮಟ್ಟಿಗೆ ನಿರಾಸೆಗೊಳಿಸುತ್ತದೆ ಎನ್ನಬಹುದು. ಏಕೆಂದರೆ ಪ್ರಾರಂಭದಲ್ಲಿಯೇ ಕಥೆಯ ಅಂತ್ಯವೂ ಸೂಚಿತವಾದರೆ ಕಥೆಯ ಸ್ವಾರಸ್ಯವನ್ನು ಕಾಯ್ದಿಡುವಲ್ಲಿ ಸೋಲುತ್ತದೆ.

ಹುಟ್ಟಿನಿಂದ ರೈತನಾದ ಬೆನ್‌ನ ಜೀವನ ಚಿತ್ರಣ ಸುಂದರವಾಗಿ ಮೂಡಿಬಂದಿದೆ. ಚಂಡಿಯಂತಹ ಹೆಂಡತಿಯೊಡನೆ ಚಿಕಾಗೋ ನಗರದಲ್ಲಿ ಜೀವನ ದೂಡಬೇಕಾಗಿ ಬಂದ ಆತನ ಮಾನಸಿಕ ವ್ಯಥೆ ವರ್ಣನಾತೀತ. ಕೈತುಂಬ ಕೆಲಸವಿದ್ದ ರೈತನೊಬ್ಬ ನಗರದಲ್ಲಿ ಅಲಸಿ ಜೀವನವನ್ನು ರೂಢಿಸಿಕೊಳ್ಳಲು ಹೆಣಗುತ್ತಿದ್ದ ರೀತಿ ಮಾರ್ಮಿಕವಾಗಿ ಚಿತ್ರಿತವಾಗಿದೆ.

ಇಲ್ಲಿನ ಎಲ್ಲ ಕಥೆಗಳಲ್ಲೂ ಆಯಾ ದೇಶದ ಪ್ರಕೃತಿ ಚಿತ್ರಣಕ್ಕೆ ಸಾಕಷ್ಟು ಇಂಬು ದೊರೆತಿವೆ. ಕೆಲವೊಮ್ಮೆ ಕಥೆಯ ಬಂಧದಲ್ಲಿ ಸ್ವಲ್ಪಮಟ್ಟಿನ ಶಿಥಿಲತೆ ಕಂಡುಬರುತ್ತದೆ. ಇದು ಬಹುಶಃ ಮೂಲಕಥೆಯಲ್ಲಿನ ಕೊರತೆಯೂ ಇದ್ದಿರಬಹುದಾದ ಸಾಧ್ಯತೆ ಇದೆ. ಇಲ್ಲಿನ ಯಾವ ಕಥೆಗಳಿಗೂ ಮೂಲ ಹೆಸರುಗಳನ್ನು ಅನುವಾದಕರು ಕೊಡದಿರುವುದು ಒಂದು ಕೊರತೆ ಎಂದೆನಿಸುತ್ತದೆ. ಸರಿಯುವ ಕೋಣೆ (ಪು. 87), ಕಾರ್ಯಜೀರ್ಣ (ಪು. 91), ಪಯಣ ಹುಡುಗಿ (ಪು .98)ಗ್ರಾಮಾಯಣ ವಾಚನ (ಪು. 99) ಮುಂತಾದ ಪದ ಪ್ರಯೋಗ ಅತ್ಯಂತ ಸಹಜವಾಗಿ ಬಳಕೆ

ಯಾಗಿದೆ. ಜನ್ಮಾಪಿ (ಪು. 96), ಕಂಡಿತ (ಪು. 99) ಕಟ್ಟಕೊನೆ (ಪು. 118) ಅಂತಹ ಪದಗಳ ಬಳಕೆ ಅಷ್ಟು ಸಮಂಜಸವೆನಿಸದು.

ಕಥೆಯಲ್ಲಿ ಬರುವ ಒಂದೇ ಹೆಸರಿನ ಬೇರೆ ಬೇರೆ ರೂಪಗಳು ಓದುಗರನ್ನು ಸ್ವಲ್ಪಮಟ್ಟಿನ ಗೊಂದಲಕ್ಕೊಳಗುಮಾಡುತ್ತದೆ. ಉದಾ : ಹೊರೇಸ್ ಕಾಯ್ (ಪು. 5) ಮಿಸ್ಟರ್ ಕೊಯ್ (ಪು. 23, 24)). ಪ್ಯಾಟ್ ಹಂಬರ್ಟ್ ಎಂಬ ಹೆಸರಿನ ರೂಪ ಪ್ಯಾಟ್ ಹಂರ್ಬಟ್ (ಪು. 164) ಎಂದಾಗಿದೆ.

ಅಮೆರಿಕದ ಪ್ರಖ್ಯಾತ ಸಾಹಿತಿಗಳ ಆರು ಸಣ್ಣ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿ ಸಣ್ಣಕತೆಗಳ ಕ್ಷೇತ್ರಕ್ಕೆ ಮಹತ್ವಪೂರ್ಣವಾದ ಕೊಡುಗೆಯನ್ನು ಕೊಟ್ಟಿದ್ದಾರೆ ಭಟ್ಟರು. ಅವರ ಈ ಪ್ರಯತ್ನ ಮೆಚ್ಚುವಂತಹದು. ಅವರು ಅನುವಾದಿಸಿರುವ ಈ ಕಥೆಗಳಲ್ಲಿ ಬರುವ ಕೆಲವು ಪಾತ್ರಗಳನ್ನು ನಮ್ಮ ಸುತ್ತಮುತ್ತಲಿನ ಪರಿಸರದಲ್ಲೂ ಗುರುತಿಸಬಹುದಾಗಿದೆ. ಇನ್ನು ಕೆಲವು ನಮಗೆ ಪರಿಚಿತವಲ್ಲದ ಚಿತ್ರಗಳನ್ನೂ ಕೊಟ್ಟಿದ್ದಾರೆ. ಮುಂದೆಯೂ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತಂದು ಆ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸೇವೆ ಸಲ್ಲುವಂತಾಗಲಿ.

———

೧೪. "ನಿ - ವೇದನೆ"ಯನ್ನು ಕುರಿತು

— ಬಿ. ಶಾಮಸುಂದರ

ಕು. ಶಿ. ಹರಿದಾಸ ಭಟ್ಟರು ಕನ್ನಡ ನಾಡಿನ ಕೆಲವೇ ಪ್ರಸಿದ್ಧ ಅಂಕಣಕಾರರಲ್ಲಿ ಒಬ್ಬರಾಗಿದ್ದಾರೆ. ಉದಯವಾಣಿ ದಿನಪತ್ರಿಕೆಯಲ್ಲಿ 'ಲೋಕಾಭಿರಾಮ' ಅಂಕಣದಲ್ಲಿ ಅವರು ಬರೆಯದ, ಮುಟ್ಟದ ವಿಷಯಗಳಿಲ್ಲ ಅಷ್ಟು ವಷ್ಟು ವ್ಯಾಪಕವಾಗಿ ಬರೆದಿದ್ದಾರೆ. ತಮ್ಮ ಅಂಕಣ ಬರಹದ ವಿಚಾರ ಕುರಿತು ಅವರೇ ಈ ಕೆಳಕಂಡಂತೆ ಹೇಳಿಕೊಂಡಿದ್ದಾರೆ. "ನನ್ನ ಆಸಕ್ತಿ ಕೇವಲ ಸಾಹಿತ್ಯ ಒಂದೇ ಅಲ್ಲವಾದ್ದರಿಂದ ಸಾಮಾಜಿಕ, ಆರ್ಥಿಕ ವಿಷಯಗಳಲ್ಲಿಯೂ ನಾನು ಹರಟುವ ಯೋಚನೆ ಮಾಡಿದ್ದೇನೆ. ಶನಿವಾರದ ಸಂಚಿಕೆಯಲ್ಲಿ ಅನಿಯತ ಕಾಲಿಕವಾಗಿ ಬರುವ ನನ್ನ 'ಲೋಕಾಭಿರಾಮ'ದ ಕುರಿತು ನನ್ನ ವಾಚಕರು ಮರುದಿನ ಭಾನುವಾರದ ತನಕವಾದರೂ ನೆನಪಿಸಿಕೊಳ್ಳಬೇಕೆಂಬುದು ನನ್ನ ಹಂಬಲ" ಎಂದು ಮುಂದೆ "'ಲೋಕಾಭಿರಾಮ'ದ ವಿಷಯ ವ್ಯಾಪ್ತಿಯ ಬಗ್ಗೆ ಮೊದಲೇ ಸೂಚಿಸಿದೆ. ಹೊರದೇಶದ ರಾಜಕೀಯ ಮತ್ತು ಐತಿಹಾಸಿಕ ಚಲನವಲನಗಳನ್ನು ಸಾಕಷ್ಟು ಅಭ್ಯಾಸ ಮಾಡಿರುವುದರಿಂದ ನನ್ನ ನಾಡಿನ ರಾಜಕೀಯದ ರಾಡಿ ಬಗ್ಗೆ ನನಗೇ ತೀರಾ ಜಿಗುಪ್ಸೆ. ಒಂದು ವಿಧವಾದ ಅಸಹಾಯಕತೆ, ಕಳವಳ, ಆಗೊಮ್ಮೆ ಈಗೊಮ್ಮೆ ನನ್ನ ಆಪ್ತೇಷ್ಟರ ಹತ್ತಿರ ತೋಡಿಕೊಳ್ಳುವುದನ್ನು ಇನ್ನು ಬಹಿರಂಗವಾಗಿಯೇ ಮಾಡಬಲ್ಲೆ. ಆರ್ಥಿಕ ವಿಷಯ ಪದ್ಧತಿಗಳ ಕುರಿತು ನನ್ನ ಮುಖ್ಯ ಅಧ್ಯಯನ ನಡೆಯಿತು ಎಂಬುವದರಿಂದ ಅದೂ ನನ್ನ ಆಹಾರವಾಗುವುದು. ಕನ್ನಡ ಸಾಹಿತ್ಯದ ಮೇಲೆ ನಾನು ಅಧಿಕೃತವಾಗಿ ಆಡಬಲ್ಲೆ, ವಿಮರ್ಶಿಸಬಲ್ಲೆ ಎಂಬ ಹಮ್ಮು ನನಗಿಲ್ಲ. ಆದರೆ ಪೂರ್ವಕವಿ ವ್ಯಾಸಂಗ, ಅರ್ವಾಚೀನ ಸಾಹಿತಿ ಸಂಗದಿಂದ ಲೋಕಾಭಿರಾಮವಾಗಿ ಮಾತನಾಡುವಷ್ಟು ಪಾಂಡಿತ್ಯ ನನ್ನಲ್ಲಿರಬಹುದೆಂಬ ಸಂದೇಹದಿಂದ ಮೆಲ್ಲಮೆಲ್ಲನೆ ಆ ಕ್ಷೇತ್ರದಲ್ಲಿ ಕಾಲಿಡುತ್ತೇನೆ. ಪಾಶ್ಚಾತ್ಯ ಪತ್ರಿಕೆಗಳಲ್ಲಿ ಬರೆವ ಕಲಮುಗಾರರಿಗೂ ನಮಗೂ ಒಂದು ಮುಖ್ಯ ಭೇದವನ್ನು ನಾನು ಗಮನಿಸಿದ್ದೇನೆ. ಅವರು ವಿಶ್ವ ಸಂಚಾರಿಗಳು – ನಮ್ಮಂತೆ 'ಸ್ಥಾಣುರಚಲೋಯಂ ಸನಾತನಃ' ಎಂಬ ಹೆಗ್ಗಳಿಕೆಯವರಲ್ಲ. ಅವರು ವಿಷಯಗಳ ಆತುರದಿಂದ ಉತ್ತರ ಧ್ರುವದಿಂದ ದಕ್ಷಿಣ ಧ್ರುವದ ತನಕ ಅಲೆಯುವರು. ನಾವು ಕೂತಲ್ಲೇ 'ದಿವ್ಯದೃಷ್ಟಿ'ಯಿಂದ ಲೋಕವನ್ನು ಅಳೆಯುವವರು. ಇನ್ನೂ ಹೆಚ್ಚೆಂದರೆ ಭತ್ಯೆಕೊಟ್ಟು ಕರೆಸಿದರೆ ನಮ್ಮ ಆರೋಗ್ಯ ಸರಿಯಾಗಿದ್ದು ತಂತಿ ಕಛೇರಿ ದೂರವಾಗಿದ್ದರೆ ಮಾತ್ರ ಊರು ಬಿಡುವ ಅಸಾಮಿಗಳು, ಆದರೆ ನಮ್ಮ ದೇಶದ ಪೂರ್ತಿ ಕಾಲದ ಪತ್ರಿಕೋದ್ಯಮಿಗಳೇ ಕುರ್ಚಿಯಲ್ಲಿ ಬೇರಿಳಿಸುವುದನ್ನು ಕಂಡ ನಾನು ನನ್ನಂಥ ಒಪ್ಪೊತ್ತಿನ ಪತ್ರಿಕೋದ್ಯಮಿಗಳ ಬಗ್ಗೆ ಕ್ಷಮಾಯಾಚನೆ ಮಾಡಬೇಕಾಗಿಲ್ಲ" ಎಂದು ತಮ್ಮ ಲೋಕಾಭಿರಾಮದ ಪ್ರಥಮ ಲೇಖನ ಸ್ವಗತದಲ್ಲಿ ಹೇಳಿದ್ದಾರೆ. ಕು. ಶಿ. ಹರಿದಾಸ ಭಟ್ಟರು ತಮ್ಮ ಅಂಕಣ ಬರಹ ಹೇಗೆ ಪ್ರಾರಂಭವಾಯಿತೆಂಬುದನ್ನೂ ಶನಿವಾರ ತಮ್ಮ ಅಂಕಣದ ದಿನವಾಗಿ ಆಯ್ದುಕೊಂಡದಕ್ಕೆ ಕಾರಣ ಸಹ ಸರಳವಾಗಿ ಹೇಳಿಕೊಂಡಿದ್ದಾರೆ. ಇನ್ನು ಅವರ ಪಾಂಡಿತ್ಯ ಮತ್ತು ಅಂಕಣ ಬರಹದ ವಿಷಯ ಸಹ ನಾವು ಪ್ರತ್ಯೇಕವಾಗಿ ಇಲ್ಲಿ ಹೇಳಬೇಕಾಗಿಲ್ಲ ಕಾರಣ ಅಂಕಣಕಾರರಾಗಲು ಅವರಿಗೆ ಇರುವ ವಿದ್ಯಾರ್ಹತೆ, ಅನುಭವ, ಸಂಪರ್ಕ ಸಾಧನ, ವಿಷಯ ಮುಂತಾದವುಗಳನ್ನೆಲ್ಲ, ಅವರೇ ಹೇಳಿ ಬಿಟ್ಟಿದ್ದಾರೆ. ಇದರ ವಿಷಯವಾಗಿ ನಾವು ಹೇಳಿದ್ದನ್ನೇ ಹೇಳಿ ಒಗ್ಗರಣೆ ಹಾಕಬೇಕಾಗಿಲ್ಲ. ಆದರೆ ನನಗೆ ಮುಖ್ಯವೆನಿಸಿದ್ದು ಹಾಗೂ ನನಗೆ ನೇರವಾಗಿ ತಟ್ಟಿದ್ದು ಅವರ 'ನಿ – ವೇದನೆ'. ಆದರಿಂದ ನನಗಾದ ಲಾಭ ಕುರಿತು ಎರಡು ಮಾತು ಹೇಳುತ್ತೇನೆ.

ಬರಹಗಾರರನ್ನೆಲ್ಲ ಒಂದುಗೂಡಿಸಬೇಕು. ಪರಸ್ಪರ ಅರಿವು, ಹಿತಚಿಂತನಕ್ಕೆ ಮಾರ್ಗ ಮಾಡಿಕೊಡಬೇಕು ಎಂಬ ಆಸೆ ಹೊತ್ತು ಕೆಲವು ಬರಹಗಾರರನ್ನು ಸೇರಿಸಿ ಅವರೊಡನೆ ಚರ್ಚಿಸಿ ಜಿಲ್ಲಾ ಲೇಖಕರ ಸಂಘ ಮೈಸೂರು ಎಂಬುದನ್ನು ಪ್ರಾರಂಭಿಸಿ ಮುಂದೆ ಬಹು ಜನಾಭಿಪ್ರಾಯದಂತೆ ಅದನ್ನು ಕನ್ನಡ ಬರಹಗಾರರ ಬಳಗ, ಮೈಸೂರು ಎಂದು ನೋಂದಣಿ ಮಾಡಿಸಬೇಕೆಂಬ ತೀರ್ಮಾನಕ್ಕೆ ಬರುವ ವೇಳೆಗೆ ನನಗೆ ಸಾಕು ಎನಿಸಿಬಿಟ್ಟಿತ್ತು. ಅಧ್ಯಕ್ಷ ಎಂದು ನನ್ನನ್ನು ಕರೆದ ಮಂದಿ ನಮ್ಮ ಲೇಖಕರ ಈ ಬಳಗದ ಕೆಲಸ ಕಾರ್ಯವೆಲ್ಲ ಅಧ್ಯಕ್ಷನ ಹಣೆಗೆ ಕಟ್ಟಿದ್ದು ಎಂದು ತಿಳಿದು ಬಿಟ್ಟು ಸುಮ್ಮನಾದಾಗ ಕಾರ್ಯದರ್ಶಿ ಮತ್ತು ಇತರೇ ಕೆಲವೇ ಮಂದಿಯನ್ನು ಕಟ್ಟಿಕೊಂಡು ಹೋಗುವ ಪಾಡು ನನಗೆ ಬಂದು ಬೇಸರ ಬಂದಿದ್ದಾಗ, ನನ್ನ ಉತ್ಸಾಹ ಕುಗ್ಗುತಿದ್ದಾಗ ಅದೇ ಸಮಯ

ದಲ್ಲಿ ಈ ಲೇಖನ ಬರೆಯಲು ನಾನು ಕು. ಶಿ. ಯವರ ಪುಸ್ತಕಗಳನ್ನು ಮತ್ತೊಮ್ಮೆ ನೋಡಬೇಕೆನಿಸಿತು. ಆಗ ಶಿವರಾಮ ಕಾರಂತ ಅಭಿನಂದನ ಸ್ಮೃತಿ ಸಂಚಯದಲ್ಲಿನ ಇವರ 'ನಿ – ವೇದನೆ' – ಓದಿದೆ. ಇದರಿಂದ ನನ್ನ ವೇದನೆ ಕಡಿಮೆಯಾಗಿ ಬತ್ತುತ್ತಿದ್ದ ಉತ್ಸಾಹ ಮತ್ತೆ ನೀರ ಚಿಲುಮೆಯಂತೆ ಪುಟಿದು ಬರಹಗಾರರ ಬಳಗದ ಕೆಲಸ ಕಾರ್ಯಗಳನ್ನು ಮತ್ತಷ್ಟು ತ್ವರಿತವಾಗಿ ಮಾಡುವಂತೆ ಆಯ್ತು. ಅಂದರೆ ಆ ಲೇಖನದಲ್ಲಿ ಅವರ 'ನಿ – ವೇದನೆ'ಯಲ್ಲಿ ಇದ್ದುದಾದರೂ ಏನು ಅನ್ನುವುದನ್ನು ಕುರಿತು ಸಂಕ್ಷಿಪ್ತವಾಗಿ ಹೇಳುತ್ತೇನೆ.

ಉಡುಪಿಯ ಸಾಂಸ್ಕೃತಿಕ ಚಟುವಟಿಕೆಯನ್ನು ಕುರಿತು ಹೇಳುವುದರೊಂದಿಗೆ ಪ್ರಾರಂಭಿಸಿರುವ ಕು. ಶಿ. ಯವರು ಆಗಿನ ಕಾಲದ ಸಾಹಿತ್ಯ ಚಟುವಟಿಕೆ ಮತ್ತು ಕೆಲವು ಹಿರಿಯ ಸಾಹಿತಿಗಳ ಬಗ್ಗೆ ಪರಿಚಯಿಸುತ್ತ ನಡೆದು ಸಂಪ್ರದಾಯ ಶರಣ ಕೃತಿಗಳನ್ನು ಪ್ರಸಿದ್ಧಿಸಿದ, ತುಳು ಭಾಷೆಯ ಅಭಿವೃದ್ಧಿಗಾಗಿ ದುಡಿದ, ಸಂಘ ಸಂಸ್ಥೆಗಳನ್ನು ಕಟ್ಟಿದ ಶ್ರೀನಿವಾಸ ಪಣಿಯಾಡಿ ಅವರು ಆರ್ಥಿಕ ಸಂಕಷ್ಟದಿಂದಾಗಿ ಊರನ್ನೇ ಬಿಟ್ಟು ಹೋದ ಪ್ರಸಂಗ, ಊರಲ್ಲಿ ವ್ಯಾಪಾರಿ ಮನೋವೃತ್ತಿ ಬೆಳೆಯದಿದ್ದಾಗಿನ ಶುದ್ಧ ಮನಸ್ಸಿನ, ಸುಸಂಸ್ಕೃತ ಚಟುವಟಿಕೆ ಬಗ್ಗೆ ನಮಗೆ ತಿಳಿಸುತ್ತಾರೆ.

ಉಡುಪಿ ಹೊರಗಿನವರಿಗೆ ಒಂದು ಸಂಪ್ರದಾಯದ ಕೋಟೆ ಎಂದು ಕಂಡರೂ ನಿಜಸ್ಥಿತಿಯಲ್ಲಿ ಅದು ಆ ರೀತಿ ಇರಲಿಲ್ಲ. ಅಷ್ಟ ಮಠಗಳಲ್ಲಿ ನಡೆಯುವ ಅನ್ಯಾಯ ಕುರಿತ ಟೀಕೆಗಳು ನಡೆಯುತ್ತಿದ್ದವು – ಎಂದು ಹೇಳುತ್ತಾರೆ. ಅಸಹಕಾರ ಚಳುವಳಿಯ ಸಂದೇಶವನ್ನು ಗುಪ್ತವಾಗಿ ಉಡುಪಿಯಿಂದ ಮಂಗಳೂರು ವರೆಗೆ ಪ್ರಚಾರ ಮಾಡುತ್ತಿದ್ದ ಕಲ್ಲಚ್ಚಿನ ಪತ್ರಿಕೆ "ಸತ್ಯಾಗ್ರಹಿ"ಯ ವಿಚಾರ ಮತ್ತು ಎ. ಬಿ. ಶೆಟ್ಟರು ಸ್ಥಾಪಿಸಿದ, ಕೆ. ಕೆ. ಶೆಟ್ಟರ ಸಂಪಾದಕತ್ವದಲ್ಲಿ ಬಂದ ನವಯುಗ ಪತ್ರಿಕೆ ವಿಚಾರವನ್ನು ಶ್ರೀಕೃಷ್ಣ ಸಂದೇಶ – ಪತ್ರಿಕೆಯಲ್ಲಿ ಕಾರಂತರ ವಿಜಾತೀಯ ವಿವಾಹವನ್ನು ಟೀಕಿಸಿ ಬರೆದ ಮುದ್ರಾಡಿ ಜನಾರ್ದನ ಆಚಾರ್ಯರು–ಮುಂದೆ ಕೋರ್ಟು ಹತ್ತಿ ಜೈಲಿಗೆ ಹೋಗಿ ಬಂದ ವಿಷಯವನ್ನೂ ದಾಖಲುಮಾಡಿದ್ದಾರೆ. ಉಡುಪಿ ವಸ್ತುಸ್ಥಿತಿಯನ್ನು ನಿರ್ಭೀತ, ಮುಕ್ತ ಮನಸ್ಸಿನಿಂದ ಇದಿರಿಸುವ ಛಲ ಉಳ್ಳವರ ತವರೂರು ಎಂದು ಒಟ್ಟಾರೆ ಕರೆದಿದ್ದಾರೆ. – ಹಾಗೇ 'ಇಲ್ಲಿನ ವಿಫಲ ಮಠೀಯ ಸಂಪತ್ತು ಯಾವ ಪುರುಷಾರ್ಥಕ್ಕೂ ಬಾರದೇ ಹೋಯಿತೆಂದು ವಿವೇಕಿಗಳಿಗೆ ಅನಿಸಿದರೆ ಅದರಲ್ಲಿ ತಪ್ಪಿಲ್ಲ' ಎಂದು ಕೆಲವು ಉದಾಹರಣೆ ಸಹಿತ ಹೇಳಿದ್ದಾರೆ – ಉಡುಪಿಯಿಂದ ಕುಂದಾಪುರದವರೆಗೆ ಕನ್ನಡದ ಅಭಿಮಾನಿಗಳಿಗೆ ಸಾಹಿತ್ಯದ ರಸದೌತಣ ದೊರೆಯುವಂತೆ ಅನೇಕ ಹಿರಿಯ ಸಾಹಿತಿಗಳನ್ನು ಕರೆಸಿ ಕಾರ್ಯಕ್ರಮ ಏರ್ಪಡಿಸುತ್ತಿದ್ದ ದಿ. ನಿಡಂಬೂರು ರಾಜಗೋಪಾಲ ಕೃಷ್ಣರಾಯರು, ಅವರ ಸಂಪಾದನೆಯ ಕೃಷ್ಣಸೂಕ್ತಿಯಲ್ಲಿ, ಉಡುಪಿಯಲ್ಲಿ 1943ರ ಸುಮಾರಿನಲ್ಲಿ ಸ್ಥಾಪಿಸಿದ ಕರ್ನಾಟಕ ಸಂಘ ಅದರ ಕೆಲಸ ಕಾರ್ಯಗಳ ಬಗ್ಗೆ ಪರಿಚಯಿಸುತ್ತಾರೆ.

ಕು. ಶಿ. ಯವರು ತಮ್ಮ 18ರ ವಯಸ್ಸಿನಲ್ಲೇ ಪ್ರಾಥಮಿಕ ಶಾಲೆಯ ಉಪಾಧ್ಯಾಯರಾದ ವಿಚಾರ, ಓರಗೆಯವರಂತೆ ತಾವೂ ಡಿಗ್ರಿ ಪಡೆಯ ಬೇಕೆಂಬ ಹಂಬಲ, ಮುಂದೆ ಶಿವರಾಮ ಕಾರಂತರು ಪಾಠ ಹೇಳುತ್ತಿದ್ದ 'ಕನ್ನಡ ಜಾಣ' ತರಗತಿಗೆ ಸೇರಿ ಉತ್ತೀರ್ಣರಾದದ್ದು, ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿದ್ವಾಂಸ ಪರೀಕ್ಷೆ ತೇರ್ಗಡೆ, ಇಂಟರ್ ಪರೀಕ್ಷೆಯಲ್ಲಿ ರ್‍ಯಾಂಕ್ ಗಿಟ್ಟಿಸಿದ್ದು, ಮದರಾಸಿನ ಕ್ರಿಶ್ಚನ್ ಕಾಲೇಜಿನಲ್ಲಿ ಓದು, ಸೇವ ನಮಿರಾಜ ಮಲ್ಲರ ಸಂಪರ್ಕದಿಂದ ಬರೆಯುವ ಗೀಳು ಹುಟ್ಟಿದ್ದು, ಇತ್ಯಾದಿ. ಅರ್ಥಶಾಸ್ತ್ರ ಓದಿದರೂ ಸಾಹಿತ್ಯದ ಕಡೆಗೇ ಇದ್ದ ಹೆಚ್ಚಿನ ಒಲವು, 1950ರ ಹೊತ್ತಿಗೆ ಉಡುಪಿಗೆ ಬಂದು ಕಾಲೇಜಿನಲ್ಲಿ ಪ್ರಾಧ್ಯಾಪಕ ನಾಗಿ ಸೇರಿದ್ದು, ಮತ್ತು ಉಡುಪಿಯ ಕರ್ನಾಟಕ ಸಂಘದ ಕಾರ್ಯದರ್ಶಿಗಳಾದದ್ದು ಇತ್ಯಾದಿಯಾಗಿ ನಮಗೆ ಅವರ ಜೀವನದ ಒಂದು ಪಕ್ಷಿನೋಟ ಕಾಣಸಿಗುತ್ತದೆ.

ಕು. ಶಿ. ಯವರ ನಿ – ವೇದನೆ ನನ್ನ ವೇದನೆಯನ್ನು ಸಾಂತ್ವನಗೊಳಿಸಿತು ಎಂದು ಮೊದಲೇ ಹೇಳಿದ್ದೇನೆ. ಕು. ಶಿ. ಹರಿದಾಸ ಭಟ್ಟರೇ ಹೇಳಿಕೊಂಡಿರುವ ಆ ಭಾಗ ಈ ರೀತಿಯಿದೆ – "ನನ್ನ ಕನ್ನಡ ಸಂಘಟನೆಯ ಮೊದಲ ವರ್ಷದ ಅನುಭವ ಎಲ್ಲಾ ಸಾರ್ವಜನಿಕ/ಕಾರ್ಯಕರ್ತರಿಗೆ ಆಗುವಂಥದೇ ಆಯಿತು. ಸಿಹಿ – ಕಹಿ ನೆಳಲು ಬೆಳಕು, ನಾಡ ಹಬ್ಬದ ಕಾರ್ಯಕ್ರಮಕ್ಕೆ ಧನಸಂಗ್ರಹ ಮಾಡುವಾಗ ಊರಿನ ಹಿರಿಯರ, ಮಹನೀಯರ ಕಟೂಕ್ತಿ ವೈದ್ಯರ ಸೂಜಿಯಂತೆ ಚುಚ್ಚುತ್ತಿತ್ತು. ನನ್ನ ಜತೆ ನಿ. ರಾಜಗೋಪಾಲರಾಯರ ಅಭಿಮಾನಿಗಳಾದ ಒಬ್ಬ ಜನಪ್ರಿಯ ವೈದ್ಯ ಡಾ. ಐತಾಳರೇ ಬಂದರೂ ಅವರಿಗೂ ಜನ ಅನ್ನುವ ಮಾತು ಕೇಳಿ ಕನ್ನಡದ ಕೆಲಸ ಗಾರರಿಗೆ ಮೊದಲ ಅರ್ಹತೆ ಕಿವಿ ಕಿವುಡಾಗಿರಬೇಕು ಅನಿಸಿತ್ತು. ಒಬ್ಬ ಮಹನೀಯರು ನಾವು ಬಂದು ಇರಾದೆ ತಿಳಿದ ಮೇಲೆ ಮೇಜಿನ ಮೇಲಿಟ್ಟ ಕಾಲನ್ನು ಹಿಂತೆಗೆಯದೆ ಅವರ ಪವಿತ್ರ ಪಾದಗಳನ್ನಷ್ಟು ತೋರಿಸಿದರು. ಪುಣ್ಯಕ್ಕೆ ಮನೆಯ ಹಜಾರದಲ್ಲಿ ಅವರು ಕೂತಿದ್ದರಿಂದ ಕಾಲುಗಳಿಗೆ ಇರಬೇಕಾದ "ರಕ್ಷೆ"ಯ ದರ್ಶನ ನಮಗಾಗ ಲಿಲ್ಲ"... ಇತ್ಯಾದಿ. ಮುಂದೆ ಕು. ಶಿ. ಯವರು ಕಾರಂತರಿಗೆ ಈ ವಿಚಾರದಲ್ಲಿ ಪತ್ರ ಬರೆದಾಗ ಕಾರಂತರು ಕೊಟ್ಟ ಉತ್ತರ ಈ ರೀತಿ ಇದೆ – 'ಸಂಘದ ಕೆಲಸ' ಎಂದರೆ ಇರುವುದೇ ಹೀಗೆ – ಯಾರಾದರೂ ಕತ್ತೆ ಚಾಕರಿಮಾಡು

ತ್ತಿರಬೇಕು, ಅನಿಸಿಕೊಳ್ಳಲೇಬೇಕು' ಎಂದು; ಇದರಿಂದ ಬೇಸರಗೊಂಡಿದ್ದ ನಾನು ಬೇಸರ ಬರಿಸುವ ಜನರ ಜೊತೆಯೂ ಸರಸವಾಗಿರಲು ಕಲಿತೆ. ನಮ್ಮ ಕನ್ನಡ ಬರಹಗಾರರ ಬಳಗ ಕಟ್ಟುವ ಕೆಲಸ ಮುಂದುವರಿಸಿದ್ದೇನೆ. ಇಷ್ಟೇ ಅಲ್ಲ ಸಂಘದ ಕಾರ್ಯ ಚಟುವಟಿಕೆಗಳಲ್ಲಿ, ಕಾರ್ಯಕ್ರಮಕ್ಕೆ ಬರುವವರು ಕೈಕೊಟ್ಟಾಗ ಕು. ಶಿ. ಯವರೇ ಭಾಷಣಕಾರರು ಆಗಿ ನಗೆಪಾಟಲಿಗೆ ಈಡಾದದ್ದು, ಒಂದು ಸಾರಿಯಂತೂ ಕು. ಶಿ. ಯವರೇ 'ಪ್ರಾರ್ಥನೆಯಿಂದ ಹಿಡಿದು, ಭಾಷಣ, ವಂದನಾರ್ಪಣೆ ಎಲ್ಲವನ್ನೂ ಸಾಕಲ್ಯವಾಗಿ ಮಾಡಬೇಕಾದ ವಿಕಟ ಸನ್ನಿವೇಶ" ವನ್ನು ಎದುರಿಸಿದ್ದಾರೆ. ಒಬ್ಬ ನಿಷ್ಠಾವಂತ ಕಾರ್ಯಕರ್ತರಿಗೆ, ಏನಾದರೊಂದು ಒಳ್ಳೆಯ ಕಾರ್ಯ ಮಾಡುವ ಮಂದಿಗೆ ನಮ್ಮ ಜನ ಯಾವ ರೀತಿ ನಡೆಸಿಕೊಳ್ಳುತ್ತಾರೆ ಎಂಬುದಕ್ಕೆ ಇದಕ್ಕಿಂತ ಒಳ್ಳೆಯ ಉದಾಹರಣೆ ಯಾವುದಿದೆ. ಒಬ್ಬರ ಜೀವನ, ಅವರ ಕಾರ್ಯ ಚಟುವಟಿಕೆ ಮತ್ತೊಬ್ಬರಿಗೆ ಸ್ಫೂರ್ತಿಯಾಗಬೇಕಲ್ಲವೆ – ಅದೇ ಕು. ಶಿ. ಯವರಿಂದ ನನಗೆ ಆದದ್ದು. ಕನ್ನಡ ಸಂಘಕ್ಕೆ ಅವರು ದುಡಿದದ್ದು, ಅವರ ಅನುಭವ ನಮ್ಮಂತಹ ಮಂದಿಗೆ ಒಂದು ಪಾಠದಂತಿದೆ. 1960. ಡಿಸೆಂಬರಿನಲ್ಲಿ ಮಣಿಪಾಲದಲ್ಲಿ ನಡೆದ 42ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅವರ ವಿವರಣೆ ನಮ್ಮ ಕಣ್ಣಮುಂದೆ ಹಾದು ಹೋಗುವ ಚಿತ್ರವಾಗುತ್ತದೆ. ಇದರ ಸಮ್ಮೇಳನಾಧ್ಯಕ್ಷ ದಿ. ಅ.ನ. ಕೃಷ್ಣ ರಾಯರು, ಆಗಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ದಿ. ಪಂಡಿತ ರತ್ನ, ಬಿ. ಶಿವಮೂರ್ತಿಶಾಸ್ತ್ರಿಯವರು. ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರು ಡಾ. ಮಾಧವ ಪೈ. ಅಂತಹ ಭಾರಿ ಸಮ್ಮೇಳನದಲ್ಲಿ ದುಡಿದ ಕು. ಶಿ. ಹರಿದಾಸ ಭಟ್ಟರು ಅನುಭವಿಸಿದ ಬವಣೆ ಎಲ್ಲರಿಗೂ ಆಗಲು ಸಾಧ್ಯವಿಲ್ಲ.ಒಳ್ಳೇ ಕೆಲಸ ಮಾಡುವ ಮಂದಿಗೆ ಮಾತ್ರ ಈ ನೋವು ಬರುವಂತಹುದು. ಕು. ಶಿ. ಯವರು ಸಮ್ಮೇಳನ ಮುಗಿದ ಮೇಲೆ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಅವರು 15 ದಿನ ಮದರಾಸಿನಲ್ಲಿ ಅಜ್ಞಾತವಾಸ ಮಾಡಬೇಕಾಯಿತು. ಸಾಹಿತಿಗಳನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದು ಕಟ್ಟೀಮನಿಯವರ ಕೋಪಕ್ಕೆ ಎದುರಾಗ ಬೇಕಾಯಿತು. ಹಾಗೇ ದಿ. ಬೀಚಿಯವರಿಂದ 'ಕುರಿದಾಸ' ಅನಿಸಿಕೊಳ್ಳಬೇಕಾಯಿತು. ಕು. ಶಿ. ಯವರು "ಇದಾವುದೂ ನನಗೆ ಸಲ್ಲದ ಬಿರುದು. ಪ್ರಾಮಾಣಿಕವಾಗಿ ದುಡಿದ ನನಗೆ ಈ ಟೀಕೆಗಳು ಅಮೃತಪ್ರಾಯವಾದುವು. ನಡೆದ ವಿಷಮ ಸನ್ನಿವೇಶಗಳು ಕ್ಷಣಿಕ ವಿಪ್ಲವವನ್ನುಂಟು ಮಾಡಿದರೂ ಆರೋಗ್ಯ ಸಂವರ್ಧನೆಗೆ ನೆರವಾದವು. ಸಾರ್ವಜನಿಕ ಕಾರ್ಯಕರ್ತನ ಮನಸ್ಸು ದೃಢವಾಗಬೇಕಾದರೆ, ಸ್ನೇಹಿತರ ಶಾಭಾಸಗಿರಿಗಿಂತ ಇಂಥ ಟೀಕಾಕಾರರ ವಾಗ್ಬಾಣಗಳು ಹೆಚ್ಚು ಪ್ರಯೋಜಕವೆಂಬ ತೀರ್ಮಾನಕ್ಕೆ ನಾನು ಬಂದೆ" ಎಂದಿದ್ದಾರೆ. ಇದು ಸಾರ್ವಜನಿಕ ಕೆಲಸ ಮಾಡು ವವರಿಗೆಲ್ಲಾ ಅನುಭವಾಮೃತದಂತಿದೆ. ಹೆದರಿದ್ದ, ಬೇಸರಿಸಿಕೊಂಡಿದ್ದ ನನಗೆ ಈಗ ಹೊಸ ಚೇತನ ಬಂದಂತಾಗಿದೆ. ಜನ ಏನೆಂದರೂ ಸರಿ ಕನ್ನಡ ಬರಹಗಾರರ ಬಳಗವನ್ನು ಕಟ್ಟಿ ಬೆಳೆಸಲೇ ಬೇಕೆಂದು ನಿರ್ಧರಿಸಿದ್ದೇನೆ. ಈ ನಿರ್ಧಾರಕ್ಕೆ ಕು. ಶಿ. ಹರಿದಾಸ ಭಟ್ಟರ ಅನುಭವ ಸಾರವೇ ಸ್ಫೂರ್ತಿ ನೀಡಿದ್ದು. ಈ ಘಟನೆ ನನಗೆ ಒಂದು ರೀತಿ ಆಶ್ಚರ್ಯ ತರಿಸಿದೆ. ಏಕೆಂದರೆ ನನಗಿದ್ದ ಮನಸ್ಥಿತಿಯ ಸಮಯದಲ್ಲಿ ಕು. ಶಿ. ಹರಿದಾಸ ಭಟ್ಟರ ನಿ – ವೇದನೆ ಯಿಂದ ನನ್ನ ವೇದನೆ ಕಳೆದದ್ದು.

೧೫. ಭಾಗ್ಯದ ಬಾಗಿಲು - ಒಂದು ಬೆಳ್ಳಿಹಬ್ಬದ ಕಥೆ.

— ಡಾ॥ ರಾಮಕೃಷ್ಣ ಜೋಶಿ

'ಭಾಗ್ಯದ ಬಾಗಿಲು' ಒಂದು ವಿಶಿಷ್ಟ ಗ್ರಂಥ. ಸಂಪಾದಕರು ತಿಳಿಸಿದಂತೆ ಇದು ಒಂದು ಬೆಳ್ಳಿಹಬ್ಬದ ಕಥೆ. ಇಡೀ ಪುಸ್ತಕ ತಿರುವಿ ಹಾಕಿದಾಗ ಇದು ಕೇವಲ ಬೆಳ್ಳಿಹಬ್ಬದ ಕಥೆಯಲ್ಲ; ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು ನಡೆದು ಬಂದ ದಾರಿಯ ಹೆಜ್ಜೆ ಗುರುತುಗಳ ದಾಖಲೆ. ಇಪ್ಪತ್ತೈದು ವರ್ಷಗಳ ಹಿಂದೆ (1949) ಕೇವಲ ನೂರು ವಿದ್ಯಾರ್ಥಿಗಳಿಂದ ಚಿಕ್ಕದಾದ ಕಟ್ಟಡವೊಂದರಲ್ಲಿ ಪ್ರಾರಂಭವಾಗಿ, ಇಂದು ಐವತ್ತು ಎಕರೆ ಜಾಗದಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಸುಮಾರು ಮುಕ್ಕಾಲು ಮೈಲಿ ಹಬ್ಬಿದ ಸಗರಿ ಗುಡ್ಡದಲ್ಲಿ ಎಲ್ಲಿಯೂ ಖಾಲಿ ಜಾಗವೇ ಇಲ್ಲದಂತೆ ಮೂರು ಅಧ್ಯಯನ ಭವನಗಳೂ, ಎರಡು ಹಾಸ್ಟೆಲ್ಲುಗಳು, ಮೂರು ನಾಟಕ ಗೃಹಗಳು, ಮೂರು ಗ್ರಂಥಾಲಯ ಸನ್ನಿವೇಶಗಳು, ಹದಿನೇಳು ಪ್ರಾಧ್ಯಾಪಕರ ನಿವಾಸಗಳು, ವಿಸ್ತಾರವಾದ ಎರಡು ಆಟದ ಬಯಲುಗಳನ್ನು ಹೊಂದಿ ಪ್ರಚ್ಛನ್ನ ವಿಶ್ವವಿದ್ಯಾನಿಲಯವಾಗಿ ರೂಪುಗೊಂಡು ವಿದ್ಯಾರ್ಥಿಗಳಿಗೆ ಭಾಗ್ಯದ ಬಾಗಿಲೇ ಆಗಿ ಬೆಳೆದು ನಿಂತಿರುವ ವಿದ್ಯಾಸಂಸ್ಥೆಯೊಂದರ ಬದುಕಿನ ಚರಿತ್ರೆ, ಮುಂದಿನ ಜನಾಂಗಕ್ಕೆ ಇತಿಹಾಸವಾಗಬಲ್ಲ ಪುಸ್ತಕ ಇದಾಗಿದೆ. 1974ರ ಫೆಬ್ರವರಿ 7ರಿಂದ 11ರವರೆಗಿನ ಐದು ದಿನಗಳ ಕಾಲ ನಡೆದ ಜ್ಞಾನ, ಕ್ರಿಯಾ, ಸಂಸ್ಕೃತಿಪೋಷಕವಾದ ಬೆಳ್ಳಿಹಬ್ಬದ ವರದಿ. ಕಾಲೇಜಿನ ರೋಮಾಂಚಕ ಚರಿತ್ರೆ ಇಲ್ಲಿದೆ.

ಈ ಪುಸ್ತಕದ ಪ್ರಾರಂಭದಲ್ಲಿ 'ತೆರೆಯುವ ಮೊದಲು' ಎಂಬ ಶೀರ್ಷಿಕೆಯ ಅಡಿ, ಕು. ಶಿ. ಹರಿದಾಸ ಭಟ್ಟರು ಕಾಲೇಜು ನಡೆದು ಬಂದ ದಾರಿ ಮತ್ತು ಬೆಳ್ಳಿಹಬ್ಬದ ಧ್ಯೇಯ, ಧೋರಣೆ, ವಿಧಿ, ವಿಧಾನ, ಸಾಫಲ್ಯ ಇವುಗಳನ್ನು ಕುರಿತಂತೆ ಸವಿಸ್ತಾರವಾದ ವರದಿಯೊಂದನ್ನು ನೀಡಿ ಹೆಬ್ಬಾಗಿಲಲ್ಲಿಯೇ ನಮ್ಮನ್ನು ಸ್ವಾಗತಿಸುತ್ತಾರೆ. ಕಾಲೇಜು ಪ್ರಾರಂಭವಾದ ಮರುವರ್ಷವೇ ಅಲ್ಲಿ ಅಧ್ಯಾಪಕರಾಗಿ (1950) ಸೇರಿದ ಅವರು 1964ರಿಂದ ಪ್ರಾಂಶುಪಾಲರಾಗಿ ಸರ್ವಾಂಗೀಣ ಭಾರ ಹೊತ್ತು ಇಂದಿನ ಭವ್ಯ ಸ್ವರೂಪವನ್ನು ತಂದಿತ್ತವರು. ಅವರೇ ಬೆಳ್ಳಿಹಬ್ಬದ ರೂವಾರಿಗಳೂ ಕೂಡಾ. ಈ ಉತ್ಸವ ಕೇವಲ ಮಾಮೂಲೀ ಉತ್ಸವವಾಗದೆ; ಬಹಿರಂಗ ಶ್ರೀಮಂತಿಕೆಯನ್ನು ಹೆಚ್ಚಿಸಿದ ಸಂಸ್ಥೆಯ ಹಿತೈಷಿಗಳ, ಅಂತರಂಗ ಶ್ರೀಮಂತಿಕೆಯನ್ನು ಹೆಚ್ಚಿಸಿದ ಮಾಜೀ ಪ್ರಿನ್ಸಿಪಾಲ ಮತ್ತು ಅಧ್ಯಾಪಕರ ಆಗಮನ, ಸಾಹಿತಿಗಳ ಶಿಕ್ಷಣವೇತ್ತರ ಸಮಾಗಮ. ಅಲ್ಲಿ ಅವರು ಯಾರು? ಅವರೇನು ಮಾಡಿದರು? ಏನು ಆಡಿದರು? ಎಂಬೆಲ್ಲ ವಿಷಯಗಳ ವಿಸ್ತೃತ ವರದಿಯೇ ಈ ಪುಸ್ತಕ.

ಕರಾವಳಿಯ ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಭವಿತವ್ಯ, ಸಾಹಿತ್ಯ ಮತ್ತು ಸಾಮಾಜಿಕ ಕ್ರಾಂತಿ, ಜಾನಪದ ಅಧ್ಯಯನ, ಆಧುನಿಕ ಕನ್ನಡ ರಂಗಭೂಮಿ ಎಂಬ ನಾಲ್ಕು ವಿಷಯಗಳನ್ನು ಕುರಿತಂತೆ ನಡೆದ ಚರ್ಚಾಗೋಷ್ಠಿಗಳ ಉದ್ಘಾಟನಾ ಭಾಷಣ, ಪ್ರಬಂಧಗಳು, ಅಧ್ಯಕ್ಷರ ಭಾಷಣಗಳು, ಪ್ರಶ್ನೋತ್ತರಗಳು ಈ ಪುಸ್ತಕದಲ್ಲಿ ಸೇರಿ ಇದೊಂದು ಆಕರ ಗ್ರಂಥದ ಸ್ಥಾನವನ್ನು ಪಡೆದುಕೊಂಡಿದೆ. ಗೋಷ್ಠಿಗಳಲ್ಲಿನ ಅಚ್ಚುಕಟ್ಟುತನ ವಿಷಯದ ಮೇಲೆ ಸಂಪೂರ್ಣ ಪ್ರಭುತ್ವವಿದ್ದು, ಚರ್ಚೆ ಅತ್ತಿತ್ತ ಹೊರಳಿದರೆ ತಹಬಂದಿಗೆ ತರಬಲ್ಲ ಸಮರ್ಥ ಅಧ್ಯಕ್ಷರ ಆಯ್ಕೆ, ವಿದ್ವತ್ಪೂರ್ಣ ಪ್ರಬಂಧಗಳ ಮಂಡನೆ, ಮುಕ್ತ ಚರ್ಚೆಗೆ ಅವಕಾಶ, ಇವನ್ನೆಲ್ಲಾ ಗಮನಿಸಿದಾಗ ಕು.ಶಿ. ಹರಿದಾಸ ಭಟ್ಟರ ಕ್ರಮ, ಕ್ಷಮತೆ, ಧೋರಣೆಗಳ ಪರಿಚಯವಾಗುತ್ತದೆ. ಅಷ್ಟೇ ಅಲ್ಲ ಇತರರಿಗೆ ಅನುಕರಣೀಯವೂ ಆಗುತ್ತದೆ.

... ಖಾಸಗಿ ಸಾಹಸದಿಂದಾಗಿ ಕರಾವಳಿ ಜಿಲ್ಲೆಗಳಲ್ಲಿ ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ರಾಂತಿ ನಡೆದಿದೆ. ಶಿಕ್ಷಣ ಮತ್ತು ಉದ್ಯೋಗಗಳನ್ನು ಪರಸ್ಪರ ಸಂಘಟಿಸುವ ಪ್ರಯತ್ನವೂ ನಡೆದಿದೆ. ಅದರ ಭವಿಷ್ಯವನ್ನು ಚರ್ಚಿಸುವ ವಿಚಾರ ಸಂಕೀರ್ಣದಲ್ಲಿ ಉದ್ಘಾಟಕರು ಡಿ. ವಿ. ಅರಸ್ ಅವರು. ಮೊದಲ ಪ್ರಬಂಧ 'ಕರಾವಳಿ ಕರ್ನಾಟಕದಲ್ಲಿ ಶಿಕ್ಷಣ, ಆರ್ಥಿಕ ಸ್ಥಿತಿ ಮತ್ತು ಉದ್ಯೋಗವಕಾಶ'ಗಳನ್ನು ಕುರಿತಂತ ಡಾ. ಎನ್. ಆರ್. ರಾವ್ ಅವರದು. ಇಂದಿನ ಶಿಕ್ಷಣ ವೃತ್ತಿಪರವಾಗಿಲ್ಲ; ಎಂಬ ಕುಂದನ್ನು ಎತ್ತಿ ತೋರಿಸಿ ಶೈಕ್ಷಣಿಕ ಪ್ರಗತಿ ಹಾಗೂ ಉದ್ಯೋಗಾವಕಾಶಗಳ ವಿಶ್ಲೇಷಣೆ ನಡೆಸಿದ್ದಾರೆ. ಡಾ. ಎನ್. ಕೆ. ತಿಂಗಳಾಯರು 'ಶಿಕ್ಷಿತರ ನಿರುದ್ಯೋಗ; ಒಂದು ಪರಿಹಾರ ಯೋಜನೆ' ಎಂಬ ತಮ್ಮ ಪ್ರಬಂಧದಲ್ಲಿ, ಅದಮ್ಯ ಸಂಘಟನಾ ಶಕ್ತಿಯಿರುವ ಯುವಜನರ ಮನೋವೃತ್ತಿ

ಒದಗಬೇಕು. ಅವರಿಗೆ ಸಾಹಸ ಬುದ್ಧಿಯ ಶಿಕ್ಷಣ ದೊರಕಬೇಕು. ಈ ಎರಡೂ ಪ್ರಬಂಧಗಳು ಉಪಯುಕ್ತ ಸಲಹೆಗಳು ಮತ್ತು ಅಂಕೆ ಸಂಖ್ಯೆಗಳಿಂದ ಕೂಡಿ ಸಾಕಷ್ಟು ಕುತೂಹಲಕಾರಿಯಾಗಿವೆ. ಕೆ. ಸೂರ್ಯನಾರಾಯಣ ಅಡಿಗರ ವಿದ್ವತ್ಪೂರ್ಣ ಭಾಷಣದಲ್ಲಿ ಅನೇಕ ಸುಧಾರಣೆಗಳೂ ಮತ್ತು ಪರಿಹಾರಗಳೂ ಸೂಚಿತವಾಗಿದೆ.

ಕರ್ನಾಟಕದಲ್ಲಿ ಜಾನಪದ ಅಧ್ಯಯನ ವಿಚಾರ ಸಂಕಿರಣದ ಉದ್ಘಾಟಕರು ಜಾನಪದ ವಿಷಯಗಳ ಮೇಲೆ ಅನುಭವ ದೃಷ್ಟಿಯಿಂದ ಮಾತನಾಡಲು ಅತ್ಯಂತ ಸಮರ್ಥರಾದ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು. ಅವರ ಸ್ವಾರಸ್ಯ ಪೂರ್ಣ ಭಾಷಣದ ನಂತರ ಕೆಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಶ್ರೀಮತಿ ಹೆಲ್‌ಸ್ಟೀನ್ ಅವರು. ಜಾನಪದ ಗೊಂಬೆಯಾಟ ಸಂಧಿಕಾಲದಲ್ಲಿ ಎಂಬ ಪ್ರಬಂಧ ಮಂಡಿಸಿದರು. ಜಾನಪದ ಸಂಸ್ಕೃತಿಯ ಬಗ್ಗೆ ಅಮೇರಿಕಾದಲ್ಲಿ ವಿಶೇಷ ಅಧ್ಯಯನ ನಡೆಸಿದ ಅವರು ಕರಾವಳಿ ಜಿಲ್ಲೆಗೆ ಬಂದು ನೆರಳು ನಾಟಕ, ಯಕ್ಷಗಾನ ಗೊಂಬೆಯಾಟದ ವಿಷಯ ವಿಚಾರಾತ್ಮಕವಾಗಿ ಅಧ್ಯಯನ ನಡೆಸುತ್ತಿದ್ದರು. ಅವರ ಪ್ರಬಂಧದಲ್ಲಿ ಕರ್ನಾಟಕದ ಅನೇಕ ವೈವಿಧ್ಯಮಯ ಗೊಂಬೆಯಾಟಗಳ ಪ್ರಸ್ತಾಪವಿರದೆ ಕೇವಲ ದಕ್ಷಿಣ ಕನ್ನಡದ ಯಕ್ಷಗಾನ ಗೊಂಬೆಯಾಟ ಮತ್ತು ಕೇರಳದ ನೆರಳು ನಾಟಕದ ಪ್ರಸ್ತಾಪ ಮಾತ್ರವಿದೆ. 'ದಕ್ಷಿಣ ಕನ್ನಡ ಜಿಲ್ಲೆಯ ಜಾನಪದ ಸ್ವರೂಪ' ಎಂಬ ಡಾ. ಗುರುರಾಜ ಭಟ್ಟರ ಪ್ರಬಂಧ; ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಜಾನಪದ ಸಾಹಿತ್ಯ ಪ್ರಕಾರಗಳನ್ನೂ ಪರಿಚಯ ಮಾಡಿಕೊಡುವ ಮೊದಲ ಪ್ರಯತ್ನ. ಪ್ರೊ. ದೇಜಗೌ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಜಾನಪದ ಪ್ರಜ್ಞೆಯನ್ನು ಕುರಿತು ಮನನೀಯವಾಗಿ ಮಾತನಾಡಿದ್ದಾರೆ. ಈ ಗೋಷ್ಠಿಯ ಚರ್ಚೆಗಳ ವಿವರಗಳನ್ನೂ ಯಥಾವತ್ತಾಗಿ ಈ ಪುಸ್ತಕದಲ್ಲಿ ಅಚ್ಚು ಹಾಕಿದ್ದು ಅಧ್ಯಯನ ದೃಷ್ಟಿಯಿಂದ ತುಂಬ ಉಪಯುಕ್ತವಾಗಿದೆ.

ಸಾಮಾಜಿಕ ಕ್ರಾಂತಿ ಮತ್ತು ಕನ್ನಡ ಸಾಹಿತ್ಯ ಎಂಬ ಮೂರನೆಯ ಗೋಷ್ಠಿಯ ಉದ್ಘಾಟಕರು ಡಾ. ಹಾ. ಮಾ. ನಾಯಕರು. ಡಾ. ಎಸ್. ಎಲ್. ಭೈರಪ್ಪನವರು 'ಸಾಮಾಜಿಕ ಕ್ರಾಂತಿ ಮತ್ತು ಕನ್ನಡ ಸಾಹಿತ್ಯ: ವಿಷಯ ವಿಶ್ಲೇಷಣೆ' ಎಂಬ ತಮ್ಮ ಪ್ರಬಂಧದಲ್ಲಿ ಸಾಹಿತ್ಯ ಮತ್ತು ಕ್ರಾಂತಿ ಇವುಗಳಿಗೆ ಇರುವಂಥ ಸಂಬಂಧ ಯಾವುದು ಎಂಬುದನ್ನು ವಿವರಿಸಿ, ಸಾಹಿತ್ಯ ಕ್ರಾಂತಿಯನ್ನು ನೇರವಾಗಿ ಮಾಡುವಂಥದಲ್ಲ; ನಿಧಾನ ಗತಿಯ ಕ್ರಾಂತಿ ಎಂಬ ಅಭಿಪ್ರಾಯ ಮೂಡಿಸಿ ವಿದ್ವತ್ಪೂರ್ಣ ಚರ್ಚೆಗೆ ಅವಕಾಶ ಮಾಡಿಕೊಟ್ಟರು. ಕನ್ನಡ ಸಾಹಿತ್ಯ – ಸಾಮಾಜಿಕ ಕ್ರಾಂತಿ ಎಂಬ ಪ್ರಬಂಧದಲ್ಲಿ ಶ್ರೀ ಕೃಷ್ಣ ಆಲನಹಳ್ಳಿಯವರು ಕ್ರಾಂತಿ ಆಗಬೇಕಾದರೆ ಸಾಹಿತ್ಯದ ಮೂಲಕವೇ ಆದರೆ ತೊಂದರೆ ಏನು? ಎಂದು ಕೇಳುತ್ತ ದೇಶದಲ್ಲಿ ನಡೆದ ಅನೇಕ ದುರಂತಗಳನ್ನು ಮುಂದಿಟ್ಟು ದೇವರ ಕಲ್ಪನೆಯನ್ನು ನಿರ್ನಾಮ ಮಾಡದೆ ಸಾಮಾಜಿಕ ಕ್ರಾಂತಿಯಾಗದು ಎಂದು ಮಂಡಿಸಿದರು. ಈ ಪ್ರಬಂಧಗಳ ಮೇಲೆ 21 ಜನ ಆಹ್ವಾನಿತ ವಿದ್ವಾಂಸರ ಅಭಿಪ್ರಾಯ, ಹಾಮಾನಾ ಅವರ ಸಮನ್ವಯ ದೃಷ್ಟಿ ಇಷ್ಟ ಒಂದೊಂದು ಉಪಯುಕ್ತ ಲೇಖನಗಳಾಗಿವೆ.

'ಕನ್ನಡ ರಂಗಭೂಮಿಯ ಆಧುನಿಕ ಪ್ರವೃತ್ತಿಗಳು' ಗೋಷ್ಠಿಯ ಉದ್ಘಾಟಕರು ಡಾ. ಕೆ. ಶಿವರಾಮ ಕಾರಂತರು ತಮ್ಮ ಭಾಷಣದಲ್ಲಿ ಪ್ರವೃತ್ತಿಯೋ ಪರಂಪರೆಯೋ ಇನ್ನೂ ಇಲ್ಲ ಎನ್ನುತ್ತಾ ತಾವು ನಡೆಸಿದ ವಿವಿಧ ಪ್ರಯೋಗಗಳನ್ನು ವಿಚಾರಪೂರ್ಣವಾಗಿ ಮಂಡಿಸಿದ್ದಾರೆ. ಕನ್ನಡ ರಂಗಭೂಮಿಯ ಆಧುನಿಕ ಪ್ರವೃತ್ತಿಗಳು ಎಂಬ ವಿಷಯದ ಮೇಲೆ ಚಂದ್ರಶೇಖರ ಪಾಟೀಲರು, ಕನ್ನಡ ರಂಗಭೂಮಿಯ ಆಧುನಿಕ ಪ್ರವೃತ್ತಿಗಳನ್ನು ಕುರಿತು ಕೆ. ವಿ. ಸುಬ್ಬಣ್ಣನವರು, ಸಿಂಧುವಳ್ಳಿ ಅನಂತ ಮೂರ್ತಿಯವರು; ಹವ್ಯಾಸಿ ರಂಗಭೂಮಿ ಮೈಸೂರು ನಗರ ಎಂಬ ವಿಷಯದ ಮೇಲೆ ಆರ್. ನಾಗೇಶ್ ಅವರು, ಬೆಂಗಳೂರಿನ ನಾಟಕ ರಂಗವನ್ನು ಕುರಿತು ಮಕ್ಕಳ ನಾಟಕ ಪ್ರಯೋಗ ಕುರಿತು ಬಿ. ವಿ. ವೈಕುಂಠರಾಜು ಅವರು, ಅನುಭವ ಮತ್ತು ವಿದ್ವತ್ಪೂರ್ಣ ಪ್ರಬಂಧ ಮಂಡಿಸಿದರು.

ಒಟ್ಟಿನಲ್ಲಿ ವೈಚಾರಿಕ ಕ್ರಾಂತಿಗೆ ಬಹುದೊಡ್ಡ ಕೊಡುಗೆಯಾಗಿ ನಾಡಿನ ಶೈಕ್ಷಣಿಕ ಕ್ಷೇತ್ರದಲ್ಲೇ ಅಪೂರ್ವವೆನಿಸಬಹುದಾದ ಗೋಷ್ಠಿಗಳು, ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ ವಿದ್ವಾಂಸರುಗಳು ಮತ್ತು ಅವರ ಅಮೂಲ್ಯ ಅಭಿಪ್ರಾಯ, ಈ ಎಲ್ಲವುಗಳನ್ನೂ ಕ್ರಮಬದ್ಧವಾಗಿ ಕ್ರೋಢೀಕರಿಸಿ ಪ್ರಕಟಿಸಿದ ಕು. ಶಿ. ಹರಿದಾಸ ಭಟ್ಟರ ದೂರದೃಷ್ಟಿ, ಸ್ಥಿರ ಪ್ರಯತ್ನ ಸ್ತುತ್ಯಾರ್ಹವಾದುದು. ಈ ಪುಸ್ತಕ ಭೌದ್ಧಿಕ ರಸದೌತಣವನ್ನು ನೀಡುವಂಥದ್ದಾಗಿದೆ.

---

೧೬. ಮಾರ್ಗದರ್ಶಿ ಕಾರಂತ ಅರುವತ್ತು

— ಚಂದ್ರಮತಿ ಸೋಂದಾ

ಕನ್ನಡ ಸಾರಸ್ವತ ಲೋಕದಲ್ಲಿ ಕು.ಶಿ. ಎಂದೇ ಪೆಸರಾಗಿರುವ ಶ್ರೀ ಕು.ಶಿ. ಹರಿದಾಸ ಭಟ್ಟರು ಒಳ್ಳೆಯ ವಾಗ್ಮಿ; ಉತ್ತಮ ಲೇಖಕರು ಹಾಗೂ ಅತ್ಯುತ್ತಮ ಸಂಘಟಕರು. ಮೂರ್ನಾಲ್ಕು ದಶಕಗಳಿಂದ ಶ್ರೀ ಶಿವರಾಮ ಕಾರಂತರೊಂದಿಗೆ ಒಡನಾಡಿರುವ ಭಟ್ಟರು ಅವರ 'ಒಳಗು', 'ಹೊರಗು'ಗಳನ್ನು ಚೆನ್ನಾಗಿ ಅರಿತವರು. ಹೀಗೆ ಕಾರಂತರನ್ನು ಬಲ್ಲ ಕು.ಶಿ.ಯವರು ನಾಡಿನ ಗಣ್ಯರು ಕಾರಂತರನ್ನು ಹೇಗೆ ಕಂಡಿದ್ದಾರೆ; ಹೇಗೆ ಅರ್ಥೈಸಿದ್ದಾರೆ ಎಂಬುದನ್ನು ಸಹೃದಯರಿಗೆ 'ಕಾಣಿಸಲು' ಈ ಮೂಲಕ ಪ್ರಯತ್ನಿಸಿದ್ದಾರೆ. ಅದಕ್ಕಾಗಿ ನಾನಾ ಕ್ಷೇತ್ರಗಳಲ್ಲಿರುವ ಕಾರಂತರ ಹಿರಿಯ-ಕಿರಿಯ ಸಮಕಾಲೀನರ ಅಭಿಪ್ರಾಯ, ಅನಿಸಿಕೆಗಳನ್ನು ಸಂಕಲಿಸಿ ನಾಡಿನ ಜನತೆಗೆ ಶಿವರಾಮ ಕಾರಂತರ ವಿಶಿಷ್ಟತೆಯನ್ನು ಪರಿಚಯಿಸುವ ಅಪೂರ್ವ ಪುಸ್ತಕ 'ಕಾರಂತ ಅರುವತ್ತು'.

'ಕಾರಂತ ಅರುವತ್ತು' ಕಾರಂತರಿಗೆ ಅರುವತ್ತು ವರ್ಷವಾದಾಗ ಅವರ ಸಾಧನೆಯನ್ನು ಹಾಗೂ ಅವರ ಬಹುಮುಖ ವ್ಯಕ್ತಿತ್ವವನ್ನು ಗುರುತಿಸಿದ, ನಾಡಿನ ಮಹನೀಯರ ಬರವಣಿಗೆಯನ್ನೊಳಗೊಂಡ ಪುಸ್ತಕ. ಕಾದಂಬರಿ, ಗೀತನಾಟಕ, ಕವಿತೆ, ಯಕ್ಷಗಾನ, ಪತ್ರಿಕೋದ್ಯಮ, ವಿಜ್ಞಾನ ಸಾಹಿತ್ಯ, ಶಬ್ದಕೋಶ, ಶಿಕ್ಷಣ, ಕಲೆ, ಸಮಾಜ ಸುಧಾರಣೆ – ಹೀಗೆ ಕಾರಂತರು ಹಲವು ಹನ್ನೊಂದು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ; ಮಾಡುತ್ತಿದ್ದಾರೆ. ವರಕವಿ ದ.ರಾ. ಬೇಂದ್ರೆಯವರು ಹೇಳಿದಂತೆ 'ಅವರು ಕೃತಿ ವೀರರು. ಒಂದೊಂದರಲ್ಲಿಯೂ ಕಾರಂತರ ಮುದ್ರೆ ಭದ್ರವಾದುದು'. ಈ ಕ್ಷೇತ್ರಗಳಲ್ಲದೆ ಇತ್ತೀಚೆಗೆ ಅವರು ಪರಿಸರ ರಕ್ಷಣೆಯ ಬಗೆಗೂ ಅತೀವ ಕಾಳಜಿಯಿಂದ ಹೋರಾಡುತ್ತಿದ್ದಾರೆ.

ಶ್ರೀಮಂತ ಕಲೆಯಾದ ಯಕ್ಷಗಾನ ನೂರಾರು ವರ್ಷಗಳಿಂದ ಪ್ರಚಲಿತವಾಗಿದ್ದರೂ ಅದು ಅ-ಶಿಷ್ಟರ ಕಲೆಯೆಂದೇ ಪರಿಗಣಿಸಲ್ಪಟ್ಟಿತ್ತು. ಕಾರಂತರು, ಚಿಕ್ಕಂದಿನಿಂದಲೂ ತಮಗೆ ಪ್ರಿಯವಾಗಿದ್ದ ಈ ಕಲೆಯಲ್ಲಿ, ನಡೆಸಿದ ಪ್ರಯೋಗಗಳಿಂದ ಅದಕ್ಕೊಂದು ವ್ಯಾಪ್ತಿ ಹಾಗೂ ಹೊಸ ಆಯಾಮ ದೊರಕುವಂತಾಯಿತು. ವಿದ್ಯಾವಂತರೂ ಕೂಡ ಆ ಕಡೆ ಆಕರ್ಷಿತರಾಗಿ, ಈ ಕಲೆ ದೇಶ-ವಿದೇಶಗಳಲ್ಲೂ ಪ್ರದರ್ಶನಗೊಂಡು ಕಲೆಯ ಹಿರಿಮೆಗೆ ಇನ್ನಷ್ಟು ಕೋಡು ಮೂಡುವಂತಾಯಿತು. ಕಾರಂತರು ಮೆಟ್ರಿಕ್ ವಿದ್ಯಾರ್ಥಿಯಾಗಿದ್ದಾಗಿನಿಂದ ಅವರನ್ನು ಬಲ್ಲ, ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದ ಆಲೂರು ವೆಂಕಟರಾಯರು ಅರ್ಥೈಸಿದಂತೆ, 'ಯಕ್ಷಗಾನದಲ್ಲಿ ಕೇವಲ ನೃತ್ಯ ಮತ್ತು ಹಾವ-ಭಾವದಿಂದ ಭಾವನೆಗಳನ್ನು ವ್ಯಕ್ತ ಮಾಡುವ ಪ್ರಯತ್ನ'ದಲ್ಲಿ ಕಾರಂತರು ತಕ್ಕಮಟ್ಟಿನ ಯಶಸ್ಸನ್ನು ಕಂಡಿದ್ದಾರೆ. 'ಅವರ ಕ್ರಾಂತಿಯ ಮೂಲಕವೇ ಯಕ್ಷಗಾನದ ಕೀರ್ತಿ ಸ್ವೀಡನ್ನಿನವರೆಗೆ ಹೋಯಿತು'.

ಆಧುನಿಕ ಕನ್ನಡ ಸಾಹಿತ್ಯಕ್ಕೆ ಗೀತನಾಟಕ ಎಂಬ ಸಾಹಿತ್ಯ ಪ್ರಕಾರವನ್ನು ನೀಡಿದವರಲ್ಲಿ ಒಬ್ಬರಾದ (ಇನ್ನೊಬ್ಬರು ಪು.ತಿ.ನ.) ಕಾರಂತರು ಈ ಕ್ಷೇತ್ರದಲ್ಲಿ ಮಾಡಿದ ಪ್ರಯೋಗಗಳು ಗಮನಾರ್ಹ. ನಾಡಿನ ಉದ್ಧಾಮ ಪಂಡಿತರೂ, ಹಿರಿಯ ದಾರ್ಶನಿಕರೂ ಆದ ಶಂ.ಬಾ. ಜೋಶಿಯವರ ಅಭಿಪ್ರಾಯದಂತೆ 'ಗೀತ ನಾಟಕಗಳಲ್ಲಿ ಅವರನ್ನು ಮೀರಿಸಿದವರಿಲ್ಲ. ನಾಟಕಗಳನ್ನು ರಚಿಸುವ ಪ್ರತಿಭೆ, ಸಾಗ್ರ ಸಂಗೀತದಲ್ಲಿ ನೃತ್ಯ ಗೀತಗಳೊಡನೆ ಅದನ್ನು ಅಭಿನಯಿಸಿ ತೋರುವಲ್ಲೂ ಅಷ್ಟೇ ದಕ್ಷವಾಗಿರುವುದು ಅಪೂರ್ವವಾಗಿದೆ'.

ಲಲಿತ ಪ್ರಬಂಧಕಾರರು, ಉತ್ತಮ ಅನುವಾದಕರು ಮತ್ತು ವಿಮರ್ಶಕರೂ ಆದ ಎ.ಎನ್. ಮೂರ್ತಿ ರಾಯರು ಕಂಡದ್ದು ಸಮಾಜದ ವಿಮರ್ಶಕರಾದ ಕಾರಂತರನ್ನು. 'ಜೀವನದಲ್ಲಿ ಕಾಣುವ ಸಣ್ಣತನ, ಕೇಡಿತನ, ಕ್ರೌರ್ಯ, ರಾಜಕೀಯದಲ್ಲಿ ಸೇರಿರುವ ವಂಚನೆ, ಅಧಿಕಾರದಾಹ, ಪ್ರತಿಷ್ಠಾಪೂಜೆ ಇತ್ಯಾದಿಗಳ ಮೇಲೆ ತೀಕ್ಷ್ಣವಾದ ಅಸ್ತ್ರಗಳನ್ನು ಪ್ರಯೋಗಿಸುವ ಕಾರಂತರನ್ನು'. ಕಾರಂತರ ವಿವಿಧ ಕ್ಷೇತ್ರಗಳ ಸಾಧನೆಯನ್ನು, ಅವರ ಪ್ರಯೋಗಗಳನ್ನೂ ಕಂಡ ಮೂರ್ತಿರಾಯರಿಗೆ, 'ಇವರ ಗುರಿ ಸಾಹಿತ್ಯ ದೃಷ್ಟಿಗಿಂತ ಹೆಚ್ಚಾಗಿ ಜೀವನೋದ್ಧಾರ' ಎನ್ನಿಸಿದೆ.

ಕಾರಂತರು ಸಮಕಾಲೀನ ಸಮಾಜದಲ್ಲಿರುವ ಜಾತೀಯತೆಯನ್ನು ಹೇಗೆ ಕಂಡಿದ್ದಾರೆ ಎಂಬುದನ್ನು ನ್ಯಾಯವಾದಿಗಳಾದ ಕೋ. ಚೆನ್ನಬಸಪ್ಪನವರ ಮಾತಿನಲ್ಲಿಯೇ ಹೇಳುವುದಾದರೆ, 'ಅನಂತ ಜೀವರಾಶಿಗಳಲ್ಲಿ ದೇವಾಂಶವನ್ನೇ ಕಂಡವರು. ಹೊಲೆಯ, ಮಾದಿಗ, ಮ್ಲೇಚ್ಛ ಎಂಬುದು ನಮ್ಮ ಮನದ ಮೈಲಿಗೆ ಎಂಬುದನ್ನು ಕಂಡಿದ್ದಾರೆ. ನಡೆ-ನುಡಿಗಳಲ್ಲಿ ಅಂತರವಿಲ್ಲದೆ ಎರಡರ ಸಾಂಗತ್ಯವನ್ನೂ ಅಳವಡಿಸಿಕೊಂಡ ಬದುಕು ಪ್ರಾಚೀನ

ಭಾರತೀಯರದ್ದಾಗಿತ್ತು. ಆದರೆ ಅರ್ವಾಚೀನರು, ಅದರಲ್ಲೂ ಬರಹಗಾರರು, ಸಾಹಿತ್ಯ ಹಾಗೂ ಬದುಕನ್ನು ಬೇರೆಬೇರೆಯಾಗಿ ಕಂಡವರೇ ವಿನಾ ಕಾರಂತರಂತೆ ನುಡಿಯನ್ನನುಸರಿಸಿ ನಡೆದವರು ತೀರ ವಿರಳ. ಈ ಕಾರಣದಿಂದಲೇ ಶಂ.ಭಾ. ಅವರಿಗೆ ಕಾರಂತರು ಕಾಣಿಸಿದ್ದು ಹೀಗೆ: 'ನಡೆ-ನುಡಿಗಳಲ್ಲಿ ತೀರ ಕಡಿಮೆ ಅಂತರವನ್ನಿರಿಸಿರುವ ಸತತ ಪ್ರಯತ್ನದ ಶ್ರೀ ಕಾರಂತರು ನಮ್ಮ ನಾಡಿನ ಭಾವೈಕ್ಯದ ಪ್ರತ್ಯಕ್ಷ ಮೂರ್ತಿಯೆಂದೇ ಹೇಳಬೇಕು'. ಅವರು ಜೀವನದಲ್ಲಿ ಎಷ್ಟೋ ಕಷ್ಟಸುಖಗಳನ್ನು ಮಾನ-ಅವಮಾನಗಳನ್ನು ಕಂಡೂ ಕೂಡ 'ಜೀವನ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ'. ಇದನ್ನು ಅರಿತೇ ಕಾದಂಬರಿಕಾರರೂ ವಿಮರ್ಶಕರೂ ಆದ ವಿ.ಎಂ. ಇನಾಮದಾರರು. 'Life to him, is supreme value, man's greatest previlege and opportunity' ಎಂದಿದ್ದಾರೆ. ಬದುಕನ್ನು ಹೀಗೆ ದೊಡ್ಡದು ಎಂದು ಭಾವಿಸಿದ್ದರಿಂದಲೇ Karanth will not value any activity which is unrelated to living ಎಂಬ ಪ್ರಶಂಸೆಗೆ ಪಾತ್ರರಾದದ್ದು.

ಶಿವರಾಮ ಕಾರಂತರು ಬಾಳನ್ನು ಇಷ್ಟು ಗೌರವಿಸುವುದು, ಪ್ರೀತಿಸುವುದು. ಅವರು ಎಲ್ಲ ಕಡೆ ಯಶಸ್ಸನ್ನು ಪಡೆದಿದ್ದಾರೆ ಎಂತಲ್ಲ. ಸೋಲನ್ನೂ ಕೂಡ ಅವರು ನಿರ್ಲಿಪ್ತತೆಯಿಂದಲೇ ಸ್ವೀಕರಿಸುತ್ತಾರೆ. ಅದಕ್ಕೆ ಕಾರಣ ಹುಡುಕುತ್ತಾರೆ. Failure says Karanth is inevitable in a society where general ignorance ensures success to hypocritticalhirsting for power and wealth ಎಂದು ಈ ಕಾಲದ ಸಾಮಾಜಿಕ ಪರಿಸ್ಥಿತಿಯ ಬಗ್ಗೆ ಚಿಂತಿಸುತ್ತಾರೆ. ಈ ನಡುವೆಯೂ ಕೂಡ ಬರಹಗಾರ ಬಡೆಕ್ಕಿಲ ಕೃಷ್ಣ ಭಟ್ಟರು ಹೇಳಿದಂತೆ, 'ಕಾರಂತರು ಬಾಳನ್ನು ರೂಪಿಸಿಕೊಂಡ ರೀತಿ, ಬದುಕನ್ನು ಬೆಳೆಸಿಕೊಂಡ ಬಗೆ. ಸುತ್ತಲಿನ ಬದುಕಿನ ಬಗ್ಗೆ ತೋರಿಸಿದ ಆತ್ಮೀಯ, ಅನುಕಂಪದೃಷ್ಟಿ, ಅನ್ಯಾದೃಶ ವ್ಯಕ್ತಿತ್ವ' – ಇವು ಸುತ್ತಲಿನ ಜನಕ್ಕೆ ಅವರ ಬಗೆಗೆ ಬೆರಗನ್ನು ಹುಟ್ಟಿಸಿದೆ; ಆದರ್ಶಪ್ರಾಯವಾಗಿದೆ.

ತಮ್ಮ ದೇಶಸೇವೆ. ಸಾಹಿತ್ಯ ಸೇವೆ, ಸಮಾಜ ಸೇವೆಗಳಿಂದ ವೈಯಕ್ತಿಕ ಸ್ಥಾನಮಾನಗಳನ್ನು, ಅಧಿಕಾರವನ್ನು ಪಡೆಚ್ಚಿಸಿಕೊಳ್ಳುವ ಸ್ವಾರ್ಥೀನವೃತ್ತಿ ಎಲ್ಲೆಲ್ಲೂ ಕಾಣುತ್ತಿರುವ ಕಾಲದಲ್ಲಿ ಬದುಕಿದ್ದೂ ಕೂಡ ಕಾರಂತರು ಅದಕ್ಕಾಗಿ ಹಾತೊರೆದವರಲ್ಲ. (ತುರ್ತು ಪರಿಸ್ಥಿತಿ ಕಾಲದಲ್ಲಿ ಅದನ್ನು ವಿರೋಧಿಸಿ ತಮ್ಮ ಪ್ರಶಸ್ತಿಯನ್ನು ಸರಕಾರಕ್ಕೆ ವಾಪಸ್ಸು ಮಾಡಿರುವುದನ್ನು ನೆನಪಿಸಿಕೊಳ್ಳಬಹುದು).

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮಕ್ಕಳ ಸಾಹಿತ್ಯ ತೀರ ಕಡೆಗಣಿಸಲ್ಪಟ್ಟ ಪ್ರಕಾರ ಎಂಬುದನ್ನು ಮನಗಂಡು, ಕಾರಂತರು ಮಕ್ಕಳಿಗಾಗಿ 'ಅದ್ಭುತ ಜಗತ್ತು' ಬರೆದರು. ಈ ಕೃತಿಯು ಕೆಲಸ ಸಂಸ್ಥೆಗಳು ನಡೆಸುವಂತಹದು. ಆದರೆ ಕಾರಂತರು ಏಕಾಂಗವೀರರಾಗಿ ಅದನ್ನು ಹೊರತಂದಿದ್ದಾರೆ. ಮಕ್ಕಳಿಗಾಗಿಯೇ 'ಬಾಲವನ' ನಿರ್ಮಿಸಿದರು. ಅವರ ಇನ್ನೊಂದು ಗಮನೀಯ ಕೆಲಸ 'ಯಕ್ಷಗಾನ' ಕೃತಿಯ ರಚನೆ. ಇದು ಯಕ್ಷಗಾನದ ವಿವಿಧ ಅಂಗಗಳನ್ನು ಕುರಿತು ಸಂಶೋಧನಾತ್ಮಕವಾಗಿ ಬರೆದ ಪುಸ್ತಕ. ಸಂಶೋಧಕರೂ, ಲೇಖಕರೂ ಆಗಿದ್ದ ರಾಷ್ಟ್ರಕವಿ ಗೋವಿಂದ ಪೈ ತಿಳಿಸಿರುವಂತೆ 'ಕನ್ನಡ ಸಾಹಿತ್ಯದಲ್ಲಿ ಅವರು ಕೈಯಿಕ್ಕದ ವಿಷಯವಿಲ್ಲ'. ಈ ಒಂದೊಂದರಲ್ಲೂ ಅವರ ಪರಿಶ್ರಮವಿದೆ. ಒಂದು ದೃಷ್ಟಿಯಲ್ಲಿ ಅವರನ್ನು 'ಸ್ವಸಾಮರ್ಥ್ಯವನ್ನೇ ಅವಲಂಬಿಸಿ ಕಲೆಯ ನಾನಾ ಮುಖಗಳಲ್ಲಿ ವಿವಿಧ ಪ್ರಯೋಗಗಳನ್ನೆಸಗಿದ ಸ್ವಯಂಭು' ಎನ್ನಬಹುದು. ಕಾರಂತರು ಯಾವುದೇ ಕೆಲಸವನ್ನು – ಅದು ಬರವಣಿಗೆಯ ಕೆಲಸವಿರಲಿ, ನಾಟಕದ ನಿರ್ದೇಶನವಿರಲಿ, ನೃತ್ಯ ಕಲಿಸುವಿಕೆಯಾಗಲಿ, ಪರಿಸರ ಮಾಲಿನ್ಯದ ವಿರುದ್ಧದ ಹೋರಾಟವಾಗಲಿ – ಯಾರ ಬೇಕು ಬೇಡಗಳಿಗಾಗಲಿ, ಮರ್ಜಿಗಳಿಗಾಗಲಿ ಕಾಯದೆ. ತಲೆಬಾಗದೆ ಪಟ್ಟು ಹಿಡಿದು ಸಾಧಿಸುವುದೇ ಅವರ ವೈಶಿಷ್ಟ್ಯ. ವಿ.ಜಿ. ಕುಲಕರ್ಣಿಯವರು ಕಂಡಂತೆ, 'ಪ್ರಾಮಾಣಿಕತೆ, ಸಾಹಸ, ಧೈರ್ಯ, ದೀರ್ಘ ಪರಿಶ್ರಮ, ನಾನಾ ವಿಷಯ ಜಿಜ್ಞಾಸೆ, ಸೂಕ್ಷ್ಮ ನಿರೀಕ್ಷಣಶಕ್ತಿ. ಮಾನವ ಸ್ವಭಾವದ ಪರಿಜ್ಞಾನ. ಸ್ಪಷ್ಟವಾದಿತ್ವ' – ಇವು ಅವರ ಗುಣಗಳಂತೆ ಅವರ ಕೃತಿಗಳಲ್ಲೂ ಕಾಣುವಂಥವು.

ಕಾರಂತರು ಬರೆಯಲು ಪ್ರಾರಂಭಿಸಿದಂದಿನಿಂದ ಇಂದಿನವರೆಗೆ ಕನ್ನಡ ಸಾಹಿತ್ಯವಾಹಿನಿ ಮುಖ್ಯವಾಗಿ ಮೂರು ಮಜಲುಗಳನ್ನು – ನವೋದಯ, ಪ್ರಗತಿಶೀಲ, ನವ್ಯ – ದಾಟಿ ಈಗ ನಾಲ್ಕನೆಯದರಲ್ಲಿ ಪ್ರವಹಿಸುತ್ತಿದೆ. ಆದರೆ ಕಾರಂತರು ಈ ಯಾವುದೇ ಸಾಹಿತ್ಯಿಕ ಚಳವಳಿಯ ತೆಕ್ಕೆಗೂ ಸಿಕ್ಕದೆ, 'ಅವರದೇ' ಆದ ರೀತಿಯಲ್ಲಿ ಬೆಳೆಯುತ್ತ, ಬರೆಯುತ್ತಿದ್ದಾರೆ.

ಅವರ ಈ ಬಗೆಯ ಅದ್ಭುತ ಕೆಲಸ-ಕಾರ್ಯಗಳನ್ನು ಕಂಡಾಗ ದ.ಬಾ. ಕುಲಕರ್ಣಿಯವರಂತೆ – 'ನಿತ್ಯ ಬೆಳೆಯುವ ಜೀವ, ಸದಾ ಚಲಿಸುವ ಚೇತನ, ನಮ್ಮ ನಿರೀಕ್ಷೆಗೆ ಎಟುಕದ ಗತಿಯಲ್ಲಿ ಸಂಚರಿಸುತ್ತಿರುವಾಗ ಇವರನ್ನು ನಾನು ಬಲ್ಲೆ ಎಂದು ಹೇಗೆ ಹೇಳುವುದು' ಎನಿಸುತ್ತದೆ.

ಹೀಗೆ ತನ್ನನ್ನು ಸದಾ ಕೆಲಸ-ಕಾರ್ಯಗಳಲ್ಲಿ ತೊಡಗಿಸಿಕೊಂಡ, ಮಾನವೀಯತೆಯಲ್ಲಿ ವಿಶ್ವಾಸವುಳ್ಳ, ಬದುಕನ್ನು ಪ್ರೀತಿಯಿಂದ ಕಾಣುವ, ಬಾಳಲ್ಲಿ ಉತ್ಸಾಹವನ್ನು ಕಳೆದುಕೊಳ್ಳದ ಮಹಾಚೇತನವೊಂದರ ಬಹುಶ್ರುತತ್ವವನ್ನು ನಾಡಿನ ಜನತೆಗೆ ಶ್ರೀ ಕು.ಶಿ. ಹರಿದಾಸ ಭಟ್ಟರು ಪರಿಚಯಿಸಲು ಕೈಗೊಂಡ ಈ ಕಾರ್ಯ ಸಾರ್ಥಕ

ವಾಗಿದೆ. ಕಾರಂತರನ್ನು ಬಲ್ಲ, ಒಡನಾಡಿದ, ಅರಿತ, ಅರ್ಥೈಸಿಕೊಂಡ ಹಲವಾರು ಗಣ್ಯರ ಬರಹಗಳನ್ನು ಕಲೆಹಾಕಿ, ಸಂಕಲಿಸಿರುವ ಭಟ್ಟರ ಪ್ರಯತ್ನ ಸ್ತುತ್ಯರ್ಹ. ಇದರೊಂದಿಗೆ ಶ್ರೀ ಶ್ರೀನಿವಾಸ ಹಾವನೂರರು ಕಾರಂತರ ಪ್ರಕಟಿತ, ಅಪ್ರಕಟಿತ ಕೃತಿಗಳ ಪಟ್ಟಿಯನ್ನು ವೈಜ್ಞಾನಿಕ ರೀತಿಯಲ್ಲಿ ಒದಗಿಸಿರುವುದು, ಕಾರಂತರ ಕೃತಿಗಳನ್ನು ಅಧ್ಯಯನ ಮಾಡುವವರಿಗೆ ತುಂಬ ಉಪಕಾರಿಯಾಗಿದೆ. ಅವರ ಕೃತಿಗಳ ಸೂಚಿಯನ್ನು ಕೊಟ್ಟಂತೆ ಕಾರಂತರ ವೈಯಕ್ತಿಕ ಬದುಕಿನ ಪ್ರಮುಖ ಘಟನಾವಳಿಗಳನ್ನು ಗುರುತಿಸಿ ಸೇರಿಸಿದ್ದಲ್ಲಿ (ಕು.ಶಿ.ಯವರಿಗೆ ಸಾಧ್ಯವಾದುದೇ ಆಗಿತ್ತು) ಈ ಪುಸ್ತಕ ಕಾರಂತರ ಬದುಕು ಹಾಗೂ ಕೃತಿಗಳನ್ನು ಗುರುತಿಸಿದ ಸಮಗ್ರವಾದ ಗ್ರಂಥವಾಗುತ್ತಿತ್ತು. ಆದಾಗ್ಯೂ ಕೂಡ ಈ ಪುಸ್ತಕ ನಾಡಿನ ಜನತೆಗೆ ಕಾರಂತರನ್ನು ಅರ್ಥಮಾಡಿಕೊಳ್ಳುವಲ್ಲಿ ಉತ್ತಮ ಮಾರ್ಗದರ್ಶಿ.

೧೭. ಕಾರಂತ ಅರುವತ್ತು - ಸವಿನೆನಪು

— ಡಾ. ಉಪ್ಪಂಗಳ ರಾಮ ಭಟ್ಟ

"ಅರುವತ್ತು ತುಂಬಿದ ಕೋಟ ಶಿವರಾಮ ಕಾರಂತರಿಗೆ ಅವರು ಹುಟ್ಟಿದ ಸ್ಥಳದ ನಾಗರಿಕರು ಅರ್ಪಿಸುವ ಗೌರವದ ಕಾಣಿಕೆ" 'ಕಾರಂತ ಅರುವತ್ತು' ಎಂಬುದಾಗಿ ಸಂಪಾದಕ ಪ್ರೊ. ಕು.ಶಿ. ಹರಿದಾಸ ಭಟ್ಟರು ಮೊದಲಲ್ಲೇ ಹೇಳಿಕೊಂಡಿದ್ದಾರೆ. ಇದು ಬರೇ ಸವಿನೆನಪು– ಕಾರಂತರನ್ನು ಹತ್ತಿರದಿಂದ ಬಲ್ಲ, ಬೇರೆ ಬೇರೆ ರೀತಿಯಲ್ಲಿ ಅವರ ಒಡನಾಡಿದ ಅವರನ್ನು ಅರಿತ ಬೆರೆತ ನುರಿತ ಅವರ ಹಿರಿಯ. ಸಮಾನ ಮತ್ತು ಕಿರಿಯ ಲೇಖಕರ,– ಅವರ ಕುರಿತಾದ ನೆನಪಿನ ಬರಹಗಳು. ಕಾರಂತರ ವ್ಯಕ್ತಿತ್ವ, ಉನ್ನತಿ, ಗುಣ. ನಡತೆ, ಸಾಧನೆ. ಸಿದ್ಧಿ. ಕಷ್ಟ ನಷ್ಟ. ಸುಖ ದುಃಖಾದಿ ಹತ್ತು ಹಲವು ವಿಷಯಗಳ ನೆನಪಿನ ಸಂಗ್ರಹ ಇದು. ಇದರಲ್ಲಿ ಕಾರಂತರ ಕೃತಿಗಳ ಪರಿಚಯ. ವಿವೇಚನೆ ಮುಖ್ಯವಾಗಿ ಇಲ್ಲ. ಎಂತಲೇ ಪ್ರೊ. ಹರಿದಾಸ ಭಟ್ಟರಿಗೆ ಇದು ತೃಪ್ತಿ ನೀಡಲಿಲ್ಲ. ಅಖಿಲ ಭಾರತ ಮಟ್ಟದ ಕನ್ನಡ ಲೇಖಕನೊಬ್ಬನಿಗೆ ಇದು ಏನೇನೂ ಸಾಲದು ಎಂದು ಕೊಂಡು ಅವರು ಮತ್ತೆ 'ಕಾರಂತ ಪ್ರಪಂಚ' (1969) ಎಂಬ ಬೃಹದ್ಗಾತ್ರದ ಸಮಗ್ರವಾದ ಅಭಿನಂದನ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿ, ಕೃತಾರ್ಥರಾದರು. 'ಕಾರಂತ ಅರುವತ್ತು' ಹುಟ್ಟುಹಬ್ಬದ ಸಂದರ್ಭದಲ್ಲಿ 'ನೆಪ ಮಾತ್ರಕ್ಕೆ' ಎಂದು ಒಪ್ಪಿಕೊಂಡು 'ಭಾರತೀಯ ಕೃತುಶಕ್ತಿಯ ಮೂರ್ತರೂಪವೆನಿಸಿದ ಮಹಾಚೇತನಕ್ಕೆ ಸಲ್ಲಬೇಕಾದ ಕಾಣಿಕೆ' ಎಂದು 'ಕಾರಂತ ಪ್ರಪಂಚ'ವನ್ನು ಸಮರ್ಪಿಸಿದ್ದಾರೆ. ಅದೇ 'ನೆನಪು'ಗಳಲ್ಲಿ ಕೆಲವು ಇದರಲ್ಲೂ ಬಂದಿವೆ.

ಪ್ರೊ. ಕು. ಶಿ. ಹರಿದಾಸ ಭಟ್ಟರು ಕಾರಂತರನ್ನು ಹತ್ತಿರದಿಂದ ಬಲ್ಲ ಅವರ ಅಭಿಮಾನಿ. ಮಿತ್ರ, ಬಂಧು, ಎಲ್ಲ; ಪ್ರೊ. ಭಟ್ಟರ ಸಾಧನೆ ಸಿದ್ಧಿಗಳ ಸ್ಫೂರ್ತಿಯ ಸೆಲೆಯ ಅಂಶ ಕಾರಂತರಿಂದಲೇ ಬಂದಿದ್ದರೂ ಆಶ್ಚರ್ಯವಿಲ್ಲ. ಅಂತೆಯೇ ಕಾರಂತರಂತಹ ಮಹಾಚೇತನವನ್ನು ಪರಿಚಯಿಸಿ ಅವರಿಗೆ ಕೃತಜ್ಞತೆ ಅರ್ಪಿಸುವ ಯೋಚನೆ ಮೊದಲು ಮೊಳೆತದ್ದೂ ಅವರಲ್ಲೇ. ಕಲ್ಪವೃಕ್ಷದ ಕಾಯಿಯೇ ಆದರೂ ಮರೆಯಲ್ಲಿದ್ದರೆ ಯಾರಿಗೆ ಉಪಯೋಗ? ಅದರ ಅಸ್ತಿತ್ವ ಅರಿಯುವಂತಾದರಲ್ಲವೆ ಸಾರ್ಥಕತೆ? ಕನ್ನಡದ ಒಂದು ಅಪೂರ್ವ ಪ್ರತಿಭೆಯ ದಿಕ್ಕನ್ನು ಅರುವತ್ತರ ನೆನಪು (1962) ಮತ್ತು ಅಭಿನಂದನ ಗ್ರಂಥಗಳ ಮೂಲಕ ಜಗತ್ತಿಗೇ ತೋರಿಸಿಕೊಟ್ಟು ಪ್ರೊ. ಕು. ಶಿ. ಹರಿದಾಸ ಭಟ್ಟರು ಜಗತ್ತಿಗೇ ಉಪಕಾರ ಮಾಡಿದ್ದಾರೆ. ಅದು ಕಾರಂತರಿಗೆ ಮಾಡಿದ ಉಪಕಾರವಲ್ಲ. ಇದರಿಂದ ಪ್ರಯೋಜನ ಪಡೆದಿರುವುದು ಕನ್ನಡದ ಜನತೆ. ಇದರ ನಂತರ ಕಾರಂತರ ಸಾಧನೆ ಯಶಸ್ಸು ಇನ್ನಷ್ಟು ಸ್ಫುಟಗೊಂಡು ಜಗದ್ವಿಖ್ಯಾತವಾದದ್ದು ಸ್ಪಷ್ಟ. ಒಬ್ಬ ನಿಜವಾದ ಅಭಿಮಾನಿ ಸಾಹಿತ್ಯ ಸೇವಕ ಮಾಡುವ ಕ್ರಿಯಾತ್ಮಕ ಸೇವೆಯನ್ನು ಪ್ರೊ. ಭಟ್ಟರು ಮಾಡಿ ಕೃತಾರ್ಥರಾಗಿದ್ದಾರೆ.

ಪುಸ್ತಕ ಸಂಪಾದನೆ, ಪುಸ್ತಕ ರಚನೆಗಿಂತ ಕ್ಲೇಶಕರ. ತಾನೇ ಬರೆಯುವುದಕ್ಕೆ ತನಗೇ ಮಾತ್ರ ಮನಸ್ಸಿದ್ದರೆ ಆಯಿತು. ಹತ್ತು ಹಲವರನ್ನು ಒಟ್ಟು ಹಾಕಿ ಕೆಲಸ ಕೈಗೂಡಿಸುವುದೆಂದರೆ ಸಾಮಾನ್ಯರಿಗೆ ಅಸಾಧ್ಯ. ಅದು ಹರಿದಾಸ ಭಟ್ಟರಂತಹವರಿಗೆ ಸುಲಭ ಸಾಧ್ಯ. ಕಾರಂತನ್ನರಿತ ಹಿರಿಯ ಕಿರಿಯ ದಿಗ್ಗಜಗಳನ್ನು ಅರಿತು ಸಂಪರ್ಕಿಸಿ ಹನಿಹನಿ ಕೂಡಿಸಿ ಹಳ್ಳ ಹರಿಸಬೇಕು. 'ಕಾರಂತರು' ಅಂದರೆ ಕೇಳುವ ಮೊದಲೇ ಒಪ್ಪಿಕೊಂಡು ತಮ್ಮ ನೆನಪಿನ ಕೋಶದಲ್ಲಿ ಸುಪ್ತವಾದ ಮರೆಯಲಾಗದ, ಪುಟನೆಗೆಯುವ ನೆನಪುಗಳನ್ನು ಯಾರೂ ಮುಂದೆ ಚಾಚದೆ ಇರಲಾರರು ಎನ್ನಿ. ಕನ್ನಡ ನಾಡಿನಲ್ಲಿ ಕಾರಂತರ ಸಂಪರ್ಕವಿಲ್ಲದ ಹಿರಿಯ ಕನ್ನಡ ದಿಗ್ಗಜಗಳಾರೂ ಇಲ್ಲ. ಇಪ್ಪತ್ತನೇ ಶತಮಾನದ ಹೊಸಗನ್ನಡ ಸಾಹಿತ್ಯದ ಮಹಾನ್ ವ್ಯಕ್ತಿಗಳೆಲ್ಲ ಕಾರಂತರ ಸಮಕಾಲೀನರು. ಪರಿಚಿತರು. ಆತ್ಮೀಯರು. ಇಂತಹವರು ಹಲವರಿರುವಾಗ ಆಯ್ಕೆಯೂ ಸಂಪಾದಕನಿಗೊಂದು ಸಮಸ್ಯೆಯೇ. ಉದ್ದಾಮ ಸಾಹಿತಿಗಳಲ್ಲಿ ಎಲ್ಲಾ ಪ್ರಕಾರದವರನ್ನೂ ಒಳಗೊಳ್ಳುವಂತೆ ಹಿರಿಯ ಕಿರಿಯ ಸವಿನೆನಪುಗಳ ಹನಿಗಳನ್ನಿಲ್ಲಿ ಒಂದುಗೂಡಿಸಲಾಗಿದೆ. ಆಲೂರು ವೆಂಕಟರಾಯರಂತಹ ಹಿರಿಯರಿಂದ ತೊಡಗಿ ಅಖಿಲ ಕರ್ನಾಟಕದ ವಿದ್ವಾಂಸರು ಇಲ್ಲಿ ಕೂಡಿದ್ದಾರೆ. ಹದಿನೆಂಟು ಮಂದಿ ಕನ್ನಡದಲ್ಲಿ, ಐದು ಮಂದಿ ಇಂಗ್ಲೀಷ್‌ನಲ್ಲಿ ನೀಡಿದ ನುಡಿಮುತ್ತುಗಳನ್ನು ಕ್ರಮವರಿತು ಸಂಪಾದಕರು ಪೋಣಿಸಿದ್ದಾರೆ. ಡಾ. ಶ್ರೀನಿವಾಸ ಹಾವನೂರರು ಕಾರಂತರ ಕೃತಿ ಸೂಚಿಯನ್ನು ಕೊಟ್ಟಿರುವುದು ಅತ್ಯಂತ ಉಪಯುಕ್ತ.

ಕನ್ನಡದ ಹಿರಿಯ ಭೀಷ್ಮ ಆಲೂರು ವೆಂಕಟರಾಯರು "ಅವರು ಈಗ ಕೈಗೊಂಡಿರುವ ಕಾರ್ಯವಂತೂ ಅವರನ್ನು ಹಿಂದೂಸ್ಥಾನದಲ್ಲೇ ಪ್ರಸಿದ್ಧರನ್ನಾಗಿ ಮಾಡುವ ಸಂಭವವಿದೆ " ಎಂದು ನುಡಿದ ಭವಿಷ್ಯ ಮತ್ತೆ ಕೆಲವೇ ವರ್ಷಗಳಲ್ಲಿ ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿ ಸಿದ್ಧಿಸುವುದರ ಮೂಲಕ ಸತ್ಯವಾದುದು ಅವರ ತುಂಬು ಆಶೀರ್ವಾದದ ಫಲದಂತಾಗಿದೆ. ಕಾರಂತರು ಮೈಸೂರು ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದಾಗ ಆಲೂರರಿಗೆ ಬರೆದ ಪತ್ರದಲ್ಲಿ "ನೀವು ಹಚ್ಚಿದ ಪಂಜನ್ನು ಹಿಡಿದುಕೊಂಡು ಹೋಗುತ್ತೇನೆ" ಎಂದು ನೀಡಿದ ಭರವಸೆಯನ್ನು ಅವರು ಸತ್ಯವಾಗಿಸಿದರು – "ನಹಿ ಸಿದ್ಧ ವಾಕ್ಯಾನುನ್ಯುತ್ಕ್ರಮ್ಯ ಗಚ್ಛತಿ ವಿಧಿ: ಸುಪರೀಕ್ಷಿತಾಸಿ" ಚೆನ್ನಾಗಿ ಪರೀಕ್ಷಿಸಿ ನುಡಿದ ಸಿದ್ಧರ ಮಾತುಗಳನ್ನು ವಿಧಿಯೂ ಮೀರದು. – ಎಂಬ ಮಾತು ಇಲ್ಲಿ ಪುಟಗೊಂಡಿದೆ.

"ಕನ್ನಡ ಸಾಹಿತ್ಯದಲ್ಲಿ ಏನಿದೆಯೋ ಅದೆಲ್ಲಾ ಕಾರಂತರು" ಎಂದು ಮಂಜೇಶ್ವರ ಗೋವಿಂದ ಪೈಗಳು ಮೆಚ್ಚಿ ಆಡಿದ ಮಾತು ಬರೀ ಹೊಗಳಿಕೆಯಲ್ಲ. ಕಾರಂತರ ಸಾಹಿತ್ಯದ ವೈಶಾಲ್ಯವನ್ನು ಒಪ್ಪಿಕೊಂಡ ಮಾತು. ಕಾರಂತರ ಭೂಮತ್ವ, ಸಾಹಿತ್ಯದ ವಿಷಯ ವೈವಿಧ್ಯವನ್ನು ಹಿರಿಯ ಸಂಶೋಧಕ ಶಂ. ಬಾ. ಜೋಶಿ, ವರಕವಿ ಬೇಂದ್ರೆ ಮೊದಲಾದವರೆಲ್ಲರೂ ಒಪ್ಪಿಕೊಂಡಿದ್ದಾರೆ. ಮೆಚ್ಚಿದ್ದಾರೆ. ಕಾರಂತರೊಂದು 'ಆಶ್ಚರ್ಯ' ಎಂದು ಪ್ರತಿಪಾದಿಸಿದ್ದಾರೆ ಜೋಷಿಯವರು. ಕನ್ನಡದ ಹಿರಿಯಣ್ಣ ಮಾಸ್ತಿಯವರು "ಕಡಲತಡಿಯ ಭಾರ್ಗವ" ಎಂದು ಕಾರಂತರಿಗೆ ನೀಡಿದ ಬಿರುದನ್ನು ಒಡಕ್ಕಿಲ ಕೃಷ್ಣಭಟ್ಟರು ನೆನಪಿಸಿದ್ದಾರೆ. ಈ ನುಡಿ ಕಾರಂತರ ಹೆಸರಿನೊಂದಿಗೆ ಶಾಶ್ವತವಾಗಿ ಸೇರಿಕೊಂಡಿದ್ದನ್ನು ನೋಡಿದರೆ ಹಿರಿಯರ ನುಡಿಯ ಮೋಡಿ, ಮಂತ್ರಶಕ್ತಿ ಬೆರಗು ಹುಟ್ಟಿಸುತ್ತದೆ. ಇದರಿಂದಾಗಿ ಮಾಸ್ತಿಯವರ ನೆನಪಿನ ಸ್ವಾತಿಬಿಂದು ಇಲ್ಲಿ ನೇರವಾಗಿ ಸೇರದಿದ್ದರೂ ಕೊರತೆಯಿಲ್ಲ. ಕೃಷ್ಣ ಭಟ್ಟರು ಕಾರಂತರ ನಾಟಕಾಭ್ಯಾಸದ ವೈಖರಿಯ ಸ್ವಾನುಭವವನ್ನು ಕೊಟ್ಟಿದ್ದಾರೆ. ಇಂದಿಗೂ ಈ ಮುಪ್ಪಿನಲ್ಲೂ ಕುಣಿದಾಡುವ ಕಾರಂತರನ್ನು ಕಂಡರೆ ನಮಗೆ ಭಟ್ಟರ ಹೇಳಿಕೆಯ ವಾಸ್ತವಿಕತೆ ಅರಿವಾಗುತ್ತದೆ.

ಹೆಚ್ಚಿನವರು ಕಾರಂತರ ಆಸಕ್ತಿಯ ವೈಶಾಲ್ಯ, ವೈವಿಧ್ಯ, ನಿರಂತರ ಸಾಧನೆ, ಪ್ರಾಮಾಣಿಕತೆ, ಪ್ರಯೋಗಶೀಲತೆ, ನಿಸರ್ಗಪ್ರೇಮ, ಸೂಕ್ಷ್ಮ ನಿರೀಕ್ಷಣೆ, ನಿರ್ಭೀತಿ ಮೊದಲಾದ ಉತ್ತಮೋತ್ತಮ ಗುಣಗಳನ್ನು ಎತ್ತಿ ಆಡಿದ್ದಾರೆ. ಕಾರಂತರ ಸಿಡುಕು, ಕಟು ಸತ್ಯವಾದಿತ್ವವನ್ನು ಗಮನಿಸಿ ರಾ.ಯ. ಧಾರವಾಡಕರ. ಬೇಂದ್ರೆಯವರು 'ಖಾರಂತ' ಎಂದು ಲೇವಡಿ ಮಾಡಿದ್ದಿದೆ. ಧಾರವಾಡಕರು 'ಕಾರಂತ'ವನ್ನು ಇಂಗ್ಲೀಷ್ ಉಚ್ಚಾರಣೆಯಲ್ಲಿ "ಕರೆಂಟ್" ಮಾಡಿ ಅವರ ಸತ್ವದ ತೀವ್ರತೆಯನ್ನು ಮೆಚ್ಚಿದ್ದಾರೆ. ಸಿ. ಪಿ. ಲಿಂಗಣ್ಣನವರು ಕಾರಂತರನ್ನು ಮಾತಿನಲ್ಲಿ "ಸುತ್ತಲೂ ಲತ್ತೆ ಕೊಡುವ ಕತ್ತೆ" ಎಂದು ವಿನೋದವಾಗಿ ಬೈದರೂ ಅವರ ಹೃದಯ ಹೂವಿನಂತೆ ಮೃದು ಎಂಬುದನ್ನು ಗಮನಿಸಿದ್ದಾರೆ. ಕಾರಂತರ ಸ್ಥಿತಪ್ರಜ್ಞತೆಗೆ ಕೋ. ಚೆನ್ನಬಸಪ್ಪನವರು ಕೊಡುವ ಒಂದು ನಿದರ್ಶನ – ಕಾರಂತರ ಮಗ ಹರ್ಷ ತೀರಿಕೊಂಡಾಗ ಸಂತಾಪ ಸೂಚಿಸಿ ಬರೆದ ಪತ್ರಕ್ಕೆ ಅವರು ಕೊಟ್ಟ ಉತ್ತರ "ಬಂದಿರುವ ವಿಪತ್ತು ಘನತರವಾದರೂ ಅನೇಕಾನೇಕ ತಂದೆ ತಾಯಿಗಳಿಗೆ ಬಂದುದೇ ನಮಗೂ ಬಂತು" ತಮಗೆ ಸಮಾಧಾನ ಹೇಳಿದವನಿಗೇ ಸಮಾಧಾನ ಹೇಳುವಷ್ಟು ಸ್ಥಿತಪ್ರಜ್ಞತೆ; ಇತ್ತೀಚೆಗೆ, ಕೆಲ ತಿಂಗಳ ಹಿಂದೆ ಅವರ ಹೆಂಡತಿ ತೀರಿಕೊಂಡಾಗಲೂ ಕಾರಂತರು ವಿಚಲಿತರಾಗಲಿಲ್ಲ. ಅವರ ಪೂರ್ವ ನಿಶ್ಚಿತ ಕಾರ್ಯಕ್ರಮಗಳಲ್ಲೆಲ್ಲ ಎಂದಿನಂತೆ ಅವರು ನಿರ್ಲಿಪ್ತತೆಯಿಂದ ಪಾಲ್ಗೊಂಡಿದ್ದರು. ಇದನ್ನೇ ಎಚ್. ವೈ. ಶಾರದಾ ಪ್ರಸಾದ್ ಅವರು – " He is part of all; he is apart from all " ಎಂಬ ಸೂತ್ರಬದ್ಧ ನುಡಿಯಲ್ಲಿ ಹೇಳಿದ್ದಾರೆ. ಎ. ಎನ್. ಮೂರ್ತಿಯವರು 'ಮರಳಿ ಮಣ್ಣಿಗೆ' ಕಾದಂಬರಿಯ ಕುರಿತ ನಾಲ್ಕು ಮೆಚ್ಚಿಗೆಯ ಮಾತನ್ನು ಸೇರಿಸಿದ್ದಾರೆ. ವಿ. ಎಂ. ಇನಾಂದಾರರು ಕಾರಂತರ ಪ್ರಸಿದ್ಧ ಕೃತಿಗಳ ಬೆಳಕಿನಲ್ಲಿ ಅವರ ವ್ಯಕ್ತಿತ್ವದ ಭವ್ಯತೆಯನ್ನು ಮನಗಂಡು ಬಾಳ್ವೆಯೇ ಬೆಳಕು (ಲೈಫ್ ಈಸ್ ಲೈಟ್) ಎಂಬುದು ಕಾರಂತರ ಸಂದೇಶ, ಜೀವನದ ಹೋರಾಟ ಕಷ್ಟಗಳು ಅವರ ತಾಳ್ಮೆ ತ್ಯಾಗ ಮಾನವೀಯತೆಗಳನ್ನು ಹೆಚ್ಚಿಸಿವೆ ಎಂದಿದ್ದಾರೆ. ಡಾ. ಶ್ರೀನಿವಾಸ ಹಾವನೂರರು ಕಾರಂತರು 1924ರಿಂದ 1962ರ ವರೆಗೆ ಬರೆದ ಕೃತಿಗಳನ್ನು ಲಲಿತ ಸಾಹಿತ್ಯ, ವಿಚಾರ ಸಾಹಿತ್ಯ, ಸಹಾಯಕ ಸಾಹಿತ್ಯ ಎಂಬ ಮೂರು ವಿಭಾಗಗಳಲ್ಲಿ ಆಕಾರಾದಿಯಾಗಿ ಪುಟ್ಟ ಪರಿಚಯದೊಂದಿಗೆ ಪೋಣಿಸಿ ಕೊಟ್ಟಿರುವುದು ಶ್ಲಾಘನೀಯ. 'ರಾಷ್ಟ್ರ ಗೀತ ಸುಧಾಕರ' (1924) ಎಂಬ ಏಕೈಕ ಕವನ ಸಂಕಲನವನ್ನು ಅವರು ಪ್ರಕಟಿಸಿದರೆಂಬುದು ಗಮನಾರ್ಹ. ಕಾರಂತರ ಯಾವುದೋ ಕೃತಿಗಳಿಂದಲೋ ಮಾತುಗಳಿಂದಲೋ ಹೆಕ್ಕಿ ಜೋಡಿಸಿದ "ಉಳಿಯುವ ಮಾತುಗಳು" ಎಂದಿಗೂ ನೆನಪಿನಲ್ಲಿ ಉಳಿಯುವವು, ಉಳಿಯಬೇಕಾದವು. ಉದಾ: – "ಅಹುದು, ಈ ಪ್ರಪಂಚದಲ್ಲಿಯೂ, ಮನುಷ್ಯನಲ್ಲಿಯೂ ತಿಳಿದುದಕ್ಕಿಂತ ತಿಳಿಯದ್ದೇ ಬಹಳ. ನಮಗೆ ತಿಳಿಯದ್ದು ನಮ್ಮಲ್ಲೇ ಎಷ್ಟಿದೆಯೋ ಏನೋ" ಕಾರಂತರ ಜೀವನಕ್ಕೆ ಸಂಬಂಧಿಸಿದ ಹಲವು ಭಾವಚಿತ್ರಗಳೂ ಈ ಗ್ರಂಥದ ಬೆಲೆಯನ್ನು ಹೆಚ್ಚಿಸಿವೆ. ಸಾಹಿತ್ಯ ಅಕಾಡಮಿ ಬಹುಮಾನ, ಸ್ವಿಟ್ಸರ್ಲೆಂಡಿನ ಪದಕ ಪಡೆಯುವುದು, ಡಾ. ಬಾ. ಕೆ. ದಂಪತಿಗಳು ಮೊದಲಾದವು ಗಮನಾರ್ಹ. ಇಡೀ ಪುಸ್ತಕ (67 ಪುಟಗಳು) ಆರ್ಟ್ ಪೇಪರಿನಲ್ಲಿ ಸುಂದರ

ಮುದ್ರಣ ದೋಷದಿಂದ ದೂರವಾಗಿ ಆಕರ್ಷಕ. ಇದು ಒಂದು ರೀತಿಯಲ್ಲಿ ಕಾರಂತರಿಗೆ ಆತ್ಮೀಯವಾದ ಕನ್ನಡದ ಹಿರಿಯಸಾಹಿತ್ಯ ಕಲಾವಿದರು ನುಡಿಯಲ್ಲಿ ಹಿಡಿಸಿದ ಕಾರಂತರ ವರ್ಣ(ಅಕ್ಷರ)ಚಿತ್ರ. ಒಬ್ಬನ ಕುರಿತು ಹಲವರು ಹಲವು ರೀತಿಯಲ್ಲಿ ಹೇಳುವುದು ಅಲಂಕಾರ ಶಾಸ್ತ್ರದಲ್ಲಿ 'ಉಲ್ಲೇಖ'ವೆಂಬ ಅಲಂಕಾರವಂತೆ, ಬಹು ಜನರ ಅಂತೆಯೇ ಬಹುವಿಧದ ಸವಿನೆನಪುಗಳಿಂದ ಈ ಕೃತಿಯೂ ಉಲ್ಲೇಖವೆನಿಸೀತು.

---

೧೮. ಅಭಿನಂದನ

— ಜಿ. ಎಸ್. ಭಟ್ಟ

ಕಡಲ ತೀರದ ಭಾರ್ಗವ ಡಾ. ಶಿವರಾಮ ಕಾರಂತ ಅವರ ಅಭಿನಂದನ ಸಮಾರಂಭ ಉಡುಪಿಯಲ್ಲಿ ಜರುಗಿದಾಗ (1969) ಕಾರಂತ ಅಭಿನಂದನ ಸಮಿತಿ ಪ್ರಕಟಿಸಿದ ನೆನಪಿನ ಸಂಚಿಕೆ 'ಅಭಿನಂದನ'. ಈ ನೆನಪಿನ ಸಂಚಿಕೆಯ ಪ್ರಧಾನ ಸಂಪಾದಕರು ಕು. ಶಿ. ಹರಿದಾಸ ಭಟ್ಟರು. ಸಂಘಟನಾ ಚತುರರೂ ಶಿಕ್ಷಣ ತಜ್ಞರೂ ಆದ ಹರಿದಾಸ ಭಟ್ಟರು ಕಾರಂತರ ಆತ್ಮೀಯ ಸ್ನೇಹಿತರು. ನಾಡಿನಾದ್ಯಂತ ಚಿರಪರಿಚಿತರಾಗಿರುವ ಭಟ್ಟರ ಸಂಘಟನಾ ಚಾತುರ್ಯಕ್ಕೆ ಕಾರಂತ ಪ್ರಪಂಚ ಹೆಬ್ಬೊತ್ತಿಗೆಯಂತೆ 'ಅಭಿನಂದನ' ಕಿರು ಹೊತ್ತಿಗೆಯೂ ಸಾಕ್ಷಿ. ಪ್ರಧಾನ ಸಂಪಾದಕರು ಮೊದಲ ಮಾತಿನಲ್ಲಿ ಹೇಳಿರುವಂತೆ 'ಕಾರಂತ ಪ್ರಪಂಚ'ದಲ್ಲಿ ತುಂಬಲಾಗದೆ ತುಳುಕಿನಿಂತ ಕೆಲವು ಕೃತಿಗಳು 'ಅಭಿನಂದನ'ದಲ್ಲಿ ರೂಪು ತಾಳಿವೆ. ಆ ಪ್ರಪಂಚ ಪರ್ಯಟನೆ ಮಾಡಿಸಿ ಅದರ ಒಂದು ಹೊರ ನೋಟವನ್ನು ತೋರುವ ಪ್ರಯತ್ನವೂ ಇಲ್ಲೇ ನಡೆದಿದೆ. ಕಾರಂತ ಪ್ರಪಂಚ ಅಭಿನಂದನ ಗ್ರಂಥದಲ್ಲಿ ಪ್ರಕಟವಾಗಿರುವ ಲೇಖನಗಳ ಯಾದಿಯೊಂದಿಗೆ ಕಾರಂತರಿಗೆ ಸಂದಿರುವ ಗೌರವ ಪ್ರಶಸ್ತಿಗಳ ಯಾದಿ ನೀಡಲಾಗಿದೆ. ಶೇಖರ ಇಡ್ಯ ಅವರು ತುಂಬ ಶ್ರಮವಹಿಸಿ ಸಿದ್ಧಪಡಿಸಿರುವ ಕಾರಂತ ಕೃತಿ ಸೂಚಿ ಅತ್ಯಂತ ಉಪಯುಕ್ತವಾದ್ದಾಗಿದೆ. ಈ ಪಟ್ಟಿಯಲ್ಲಿ ಕಾರಂತರ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳ ಯಾದಿ ಇರುವುದರಿಂದ ಕಾರಂತರ ಕೃತಿಗಳನ್ನು ಕುರಿತಂತೆ ಸಂಶೋಧನೆಗಳನ್ನು ನಡೆಸುವವರಿಗೆ ಸಹಾಯವಾಗಬಲ್ಲುದು. ಈ ಸಂಚಿಕೆಯಲ್ಲಿ ಎರಡು ಆಂಗ್ಲ ಬರಹಗಳೂ ಮೂರು ಕನ್ನಡ ಬರಹಗಳೂ ಅಚ್ಚಾಗಿವೆ.

'ರೀಬರ್ತ್ ಆಫ್ ಯಕ್ಷಗಾನ' (ಯಕ್ಷಗಾನದ ಮರುಹುಟ್ಟು) ಇದು ಬ್ರಹ್ಮಾವರದಲ್ಲಿ 1958 ಸೆಪ್ಟೆಂಬರ್ 27ರಿಂದ 30ರ ವರೆಗೆ ನಡೆದ ವಿಚಾರ ಗೋಷ್ಠಿಯ ಅವಲೋಕನ. ಮಂಗಳೂರಿನಿಂದ ಬ್ರಹ್ಮಾವರಕ್ಕೆ ಪಯಣಿಸಿ ಯಕ್ಷರಂಗದ ರಸಾನುಭವದಿಂದ ಬರೆದ ಸಮೀಕ್ಷಾ ಲೇಖನವಿದು. ಹಿಂದಿನ ಗೋಷ್ಠಿಗಳೆಲ್ಲ ಯಕ್ಷಗಾನದ ವೈಭವೀಕರಣದತ್ತ ನಡೆದರೆ ಇದು ಪ್ರಾಯೋಗಿಕವಾಗಿ ಯಕ್ಷಗಾನ ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿತು. 'ಯಕ್ಷಗಾನ ಸಂಗೀತ ಮತ್ತು ರಸಭಾವಗಳಿಗೆ ಅದರ ಸಂಬಂಧ' ಇದು ಗೋಷ್ಠಿಯ ವಿಷಯ. ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಮರೆತು ಸೇರಿದ್ದ ವಿದ್ವಾಂಸರು ಮುಕ್ತ ಮನಸ್ಸಿನಿಂದ ಚರ್ಚಿಸಿದರು. ಆನಂತರ ಹಿರಿಯ ಭಾಗವತರೊಡನೆ ಲೇಖಕರು ನಡೆಸಿದ ಚರ್ಚೆಗಳ ವಿವರಗಳಿವೆ. ಸಂಗೀತ ನಾಟಕ ಅಕಾಡೆಮಿಯ ಪ್ರತಿನಿಧಿಯಾಗಿ ಚರ್ಚೆಯಲ್ಲಿ ಪಾಲ್ಗೊಂಡ ಗೋವಿಂದ ವಿದ್ಯಾರ್ಥಿ ಯಕ್ಷಗಾನ ಕುರಿತಂತೆ ತಮ್ಮ ಅನಿಸಿಕೆಗಳನ್ನು ಬರೆದಿದ್ದಾರೆ.

ಎರಡನೆಯ ಬರಹ 'ಎ ಸ್ಟೂಡೆಂಟ್ ಆಫ್ ಲೈಫ್' – ಇದು ಎಂ. ಗಣೇಶ ಭಟ್ಟ ಅವರ ಲೇಖನ. ಕಾರಂತರೊಂದಿಗಿನ ತಮ್ಮ ಪರಿಚಯ ಸುಮಾರು ಎರಡು ದಶಕಗಳಿಂದಲೂ ಇದೆ ಎಂದು ಅವರು ಹೇಳಿಕೊಂಡಿದ್ದಾರೆ. ಕಾರಂತರನ್ನು ಕಂಡರೆ ಗೌರವ ಮಾತ್ರವಲ್ಲ ಭಯವೂ ಇದೆ. ಕಾರಂತರು ಹಠಮಾರಿ ಎನ್ನಲಾಗುತ್ತಿದೆ. ಆದರೆ ತಮ್ಮ ಅನುಭವದಲ್ಲಿ ಇದು ಸುಳ್ಳೆಂದು ಭಟ್ಟರು ಬರೆದಿದ್ದಾರೆ. ಕಾರಂತರ ಮಗ ನಿಧನವಾದಾಗ ಅವರು ತೋರಿದ ಮಾನಸಿಕ ಸಮತೋಲ, ಕರ್ಮಯೋಗಿ ಕಾರಂತರ ಜೀವನದ ವಿವಿಧ ಮುಖಗಳನ್ನು ಬಣ್ಣಿಸಲಾಗಿದೆ. ಕಾರಂತರೊಂದಿಗೆ ಕೆಲವು ಕ್ಷಣ ಕಳೆಯುವುದೂ ಒಂದು ಅಪೂರ್ವ ಅನುಭವವೆಂದು ಹೇಳಿದ್ದಾರೆ. ಅವರ ಜೀವನವೇ ಜನತೆಗೆ ಮಾರ್ಗದರ್ಶನ. ತಮ್ಮ ಜೀವನಕ್ಕೆ ಪ್ರೋತ್ಸಾಹದ ಚಿಲುಮೆ ಕಾರಂತರು ಎಂದು ಲೇಖನ ಮುಗಿಸಿದ್ದಾರೆ.

ಈ ಸಂಚಿಕೆಯಲ್ಲಿ ನಾಲ್ಕು ಕನ್ನಡ ಬರಹಗಳಿವೆ. ಪ್ರೊ. ಎಂ. ಮರಿಯ ಭಟ್ಟ. ನಿರಂಜನ, ಸಂತೋಷ ಕುಮಾರ್ ಗುಲ್ವಾಡಿ, ಡಾ. ಎಚ್. ಕೆ. ರಂಗನಾಥ – ಇವರೇ ಆ ಲೇಖಕರು. 'ಕಡುಗಲಿ ಕಾರಂತರು' ಲೇಖನದಲ್ಲಿ ಮರಿಯಪ್ಪ ಭಟ್ಟರು ಕಂಡುಕೊಂಡಿದ್ದು 'ಹುಚ್ಚು ಮನಸ್ಸಿನ ಹತ್ತು ಮುಖಗಳನ್ನಲ್ಲ. ಬಿಚ್ಚುಮನಸ್ಸಿನ ನೂರಾರು ಮುಖಗಳನ್ನು'. 1924ರಿಂದಲೂ ಕಾರಂತರ ಪರಿಚಯವಿದ್ದ ಭಟ್ಟರ ಲೇಖನ ಅತ್ಯಂತ ಆತ್ಮೀಯವಾದ್ದಾಗಿದೆ. ಕಾರಂತರು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಪರಿಚಯವಿದ್ದ ಭಟ್ಟರು ಕಾರಂತರ ಅಂದಿನ ತೇಜಸ್ಸು – ಯಾವುದನ್ನೂ ಸುಲಭವಾಗಿ ಒಪ್ಪದ ಸ್ವಭಾವ ಇವುಗಳನು ಬಣ್ಣಿಸಿದ್ದಾರೆ. ಪುಸ್ತಕಗಳನ್ನು ಕೊಂಡು

ಓದುವ ಕಾರಂತರ ಸ್ವಭಾವ. ದೇಶದ ಸ್ವಾತಂತ್ರ್ಯಕ್ಕಾಗಿ ಅವರು ಕಾಲೇಜು ತ್ಯಜಿಸಿದ್ದು, ಮಕ್ಕಳ ಜ್ಞಾನ ದಾಹ ಇಂಗಿಸಲು ಅವರು ರಚಿಸಿದ 'ಬಾಲ ಪ್ರಪಂಚ' ಇವುಗಳನ್ನು ಸರಳವಾಗಿ ನಿರೂಪಿಸಲಾಗಿದೆ. 'ಅವರ ಕೊಡುಗೆ ಅಮೂಲ್ಯ. ಅವರನ್ನು ಪಡೆದ ನಾಡು ಧನ್ಯ' ಎಂದು ಲೇಖನದ ಕೊನೆಯಲ್ಲಿ ಹೇಳಿರುವುದು ಸ್ತುತ್ಯರ್ಹವಾದ ಮಾತು.

'ಒಂದೂರಿನಲ್ಲಿ ಕಾರಂತರು ಇಂತ' ಲೇಖನದಲ್ಲಿ ನಿರಂಜನರು ಕಾರಂತರ ಜೀವನ ಮತ್ತು ತಮ್ಮ ಕೆಲವು ನೆನಪುಗಳನ್ನು ಕಿರುಗತೆಯಂತೆ ಬರೆದಿದ್ದಾರೆ. "ಬಾಲವನವೊಂದು ಧರ್ಮಶಾಲೆ. ಅವರ ಪುತ್ತೂರು ಸಾರಸ್ವತ ಜೇನುತೊಟ್ಟಿ." ಎಂದು ಕರೆದಿರುವ ನಿರಂಜನರು ಕಾರಂತರ ಬಾಲವನದಲ್ಲಿ ಅಂದು ಇದ್ದ ಪಕ್ಷಿ ಪ್ರಾಣಿಗಳ ವಿವರಗಳನ್ನು ನೀಡಿದ್ದಾರೆ. "ನಾಡಿನ ಸರ್ವೋದಯ ವೇಳೆಯಲ್ಲಿ ಕಾರಂತರು ಹೇಮಂತನಾದುದು ವಸಂತನಾದುದು ಕಹಿಸಿಹಿ ಅನುಭವಗಳ ಅಕ್ಷಯ ಪಾತ್ರೆಯನ್ನು ದೊರಕಿಸಿಕೊಂಡ ನಳರಾದರು. ಜ್ಞಾನದ ಅಡುಗೆ ತಾವೂ ಉಂಡರು, ಇತರ ಎಲ್ಲರಿಗೂ ಊಣ ಬಡಿಸಿದರು. ತಾವು ನೋಡ ನೋಡುತ್ತಿದ್ದಂತೆಯೇ ಮನೆ ಮಾತಾದರು. ಅವಸ್ಥಾಂತರಗಳನ್ನು ದಾಟುವ ವೇಳೆಗೆ ದಂತಕಥೆಯಾದರು. ಚಲಿಸುವ ವಿಶ್ವಕೋಶ ಕಾರಂತರು. ಮುಂದಿನ ಪೀಳಿಗೆಗೆ ನಾವು ಹೇಳಬೇಕಾಗಬಹುದು – ಒಂದೂರಿನಲ್ಲಿ ಕಾರಂತರು ಇದ್ದರು... ಎಂದು."

ಮೂರನೆಯ ಲೇಖನ 'ಕಾರಂತ – ಹೆಬ್ಬಾರ ಮೈತ್ರಿ'. ಕಲಾವಿದ ಕೆ. ಕೆ. ಹೆಬ್ಬಾರ್ ಕಾರಂತರ ಮಿತ್ರರು. ಒಬ್ಬರು ಕಲಾವಿದರು ಇನ್ನೊಬ್ಬರು ಸಾಹಿತಿ. ಇವರಿಬ್ಬರೂ ಸಮಕಾಲೀನ ಮೇಧಾವಿಗಳು. ಕಾರಂತರನ್ನು ಕುರಿತಂತೆ ಹೆಬ್ಬಾರರ ವಿಚಾರಗಳೇನೆಂಬುದು ಈ ಸಂದರ್ಶನ ಲೇಖನದಲ್ಲಿ ವ್ಯಕ್ತಪಟ್ಟಿದೆ. ಹೆಬ್ಬಾರರನ್ನು ಸಂದರ್ಶಿಸಿದವರು ಸಂತೋಷಕುಮಾರ ಗುಲ್ವಾಡಿ. 'ಕಾರಂತರ ಬಗ್ಗೆ ಹೇಳಬೇಕಾದ್ದನ್ನೆಲ್ಲ ತಮ್ಮ ಚಿತ್ರದಲ್ಲೇ ಹೇಳಿರುವಾಗ ಇನ್ನೊಂದು ಸಂದರ್ಶನವೇಕೆ? ಎಂಬುದು ಹೆಬ್ಬಾರರ ನಿಲುವು. ಆದರೂ ಸಂದರ್ಶನಕ್ಕೆ ಒಪ್ಪಿಗೆ ನೀಡಿ ಕಾರಂತರನ್ನು ಕುರಿತಂತೆ ಬಿಚ್ಚು ಮನಸ್ಸಿನಿಂದ ಮಾತನಾಡಿದ್ದಾರೆ ಹೆಬ್ಬಾರ್. ಅವರು ಕಾರಂತರಲ್ಲಿ ಕಂಡಿರುವುದು ಓರ್ವ ಪರಿಪೂರ್ಣ ಮಾನವನನ್ನು. ಅದುವೇ ಅವರನ್ನು ಕಾರಂತರೆಡೆಗೆ ಆಕರ್ಷಿಸಿದ್ದು. ಕಾರಂತರಲ್ಲಿ ರಕ್ತಗತವಾಗಿರುವ ಗಾಂಧೀ ತತ್ವಗಳ ಅನುಷ್ಠಾನ, ಹೆಬ್ಬಾರರಿಗೆ ಅವರಲ್ಲಿ ಆತ್ಮೀಯತೆ ಮೂಡಲು ಇನ್ನೊಂದು ಕಾರಣ. ಕಾರಂತರನ್ನು 'ಕ್ರಾಂತಿಕಾರಿ' ಎಂದು ಬಣ್ಣಿಸಿದ ಹೆಬ್ಬಾರರು ಸ್ವಾರ್ಥದ ಲೇಪ ಇಲ್ಲದೇ ಹೋರಾಡಿದ ಅವರಲ್ಲಿ ವ್ಯಾಪಾರೀ ದೃಷ್ಟಿಯನ್ನು ಎಂದೂ ಕಂಡಿದ್ದಿಲ್ಲ. ಯಕ್ಷಗಾನವನ್ನು ಅಂತಾರಾಷ್ಟ್ರೀಯ ಮಟ್ಟದ ಪ್ರೇಕ್ಷಕರೆದುರು ತಂದು ನಿಲ್ಲಿಸಿದ ಶ್ರೇಯಸ್ಸೂ ಕಾರಂತರದು. 'ಕಾರಂತರಂತಹ ನಾಲ್ಕು ಮಂದಿ ಇದ್ದಿದ್ದರೆ ಕರ್ನಾಟಕದ ಸ್ವರೂಪವೇ ಬೇರೆಯಾಗುತ್ತಿತ್ತೆಂಬ ಹೆಬ್ಬಾರರ ಮಾತಿನಿಂದ ಸಂದರ್ಶನ ಕೊನೆಗೊಂಡಿದೆ.

ಎಚ್. ಕೆ. ರಂಗನಾಥ ಅವರು 'ಕಾರಂತ ದರ್ಶನ' ಬರೆದಿದ್ದಾರೆ. ಕಾರಂತರು ನಿರ್ದೇಶಿಸಿದ ಗೀತ ನಾಟಕಗಳಲ್ಲಿ ಅಭಿನಯಿಸುವ ಅಪೂರ್ವ ಅವಕಾಶ ಪಡೆದ ಲೇಖಕರು ಅಂದಿನ ರಸ ಸನ್ನಿವೇಶಗಳನ್ನು ನೆನಪು ಮಾಡಿಕೊಂಡಿದ್ದಾರೆ. "ನಾಟಕ ಅಭ್ಯಾಸದ ಕಾಲದಲ್ಲಿ ಅತ್ತಿತ್ತ ತಿರುಗುವಂತೆ ಆಗುತ್ತಿರಲ್ಲಿಲ್ಲ. ಕಾರ್ಖಾನೆಯ ಕೆಲಸದಂತೆ ನಿರ್ದಿಷ್ಟವಾಗಿ ಮೂರು ದಿನ ಅಭ್ಯಾಸದಲ್ಲಿ ಒಬ್ಬೊಬ್ಬರೂ ತಮ್ಮ ಪಾತ್ರವನ್ನು ಮೈಯುಂಡಂತಾಯಿತು' ಎಂದು ಬಣ್ಣಿಸಿದ ಲೇಖಕರು ಕೊನೆಯ ರಿಹರ್ಸಲ್ ಇಲ್ಲದೇ ನೇರವಾಗಿ ರಂಗಮಂದಿರಕ್ಕೆ ಬರುವಂತೆ ಸೂಚನೆ ನೀಡಿದ ಕಾರಂತರ ಆತ್ಮವಿಶ್ವಾಸ ಆಶ್ಚರ್ಯವನ್ನುಂಟು ಮಾಡುವಂತಹುದು. ಧಾರವಾಡ ಆಕಾಶವಾಣಿಗೆ ಒಂದು ನಾಟಕ ನಿರ್ದೇಶಿಸಿದ್ದು, ಮಕ್ಕಳೊಡನೆ ಮಗುವಾಗಿಯೇ ಆಡುವ ಕಾರಂತರು ಮೊದಲಾದ ಹಲವು ರಸ ನಿಮಿಷಗಳನ್ನು ಅನುಭವಿಸಿದ ರಂಗನಾಥ ಅವರು ಅವನ್ನು ನಮ್ಮ ಮುಂದಿರಿಸಿದ್ದಾರೆ.

ಸಂಚಿಕೆಯ ಕೊನೆಯಲ್ಲಿ ಕಾರಂತರ ಜೀವನ ಪರಿಚಯ ನೀಡಲಾಗಿದೆ. ಕಾರಂತರು ಹುಟ್ಟಿದ ದಿನಾಂಕ, ಅವರ ಕುಟುಂಬ, ಅವರ ಅಚ್ಚುಮೆಚ್ಚಿನ ವ್ಯಕ್ತಿಗಳು, ಹವ್ಯಾಸ, ಆಸಕ್ತಿ, ವಿದೇಶ ಪರ್ಯಟನ, ಪ್ರಯೋಗಗಳು ಮೊದಲಾದವುಗಳನ್ನು ಕುರಿತಂತೆ ನೀಡಿದ ಮಾಹಿತಿ ಉಪಯುಕ್ತವಾಗಿದೆ. ಇಂಥ 'ಅಭಿನಂದನ' ಸಂಚಿಕೆಯನ್ನು ಸಮರ್ಥ ರೀತಿಯಲ್ಲಿ ಸಂಪಾದಿಸಿದ ಕು. ಶಿ. ಹರಿದಾಸ ಭಟ್ಟರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

೧೯. ಸಗರಿ

— ಸೀತಾರಾಮ ಜಾಗೀರ್‌ದಾರ್

ಮಹೋತ್ಸವದ ಸವಿನೆನಪಿಗಾಗಿ ಸ್ಮರಣ ಸಂಪುಟಗಳನ್ನು ಪ್ರಕಟಿಸುವುದು ಲೋಕರೂಢಿ. ಉಡುಪಿಯ ಎಂ. ಜಿ. ಎಂ. ಕಾಲೇಜು, ತನ್ನ ರಜತ ಮಹೋತ್ಸವದ ಸವಿನೆನಪಿಗೆ ಪ್ರಕಟಿಸಿದ ಪ್ರಕಟಣೆ: **ಸಗರಿ**. 'ಸಗರಿ' ಈ ಮೂರಕ್ಷರದ ಪುಸ್ತಕ ಕೈಗೆತ್ತಿಕೊಂಡರೇ ಎಂ. ಜಿ. ಎಂ. ಸಂಸ್ಥೆ ಇರುವ ನೆಲವನ್ನು ಬಲ್ಲ ಯಾರಿಗೂ ಆ ನೆಲದ ಹೆಸರು – ಆ ವಾತಾವರಣ – ಆ ನವೀನ ಸರಸ್ವತಿಯ ದೇವಾಗಾರ. ಎಲ್ಲವೂ ಷೋಕೇಸಿನ ಅಂದಚೆಂದಗಳು ಮುಂದೆ ನಿಂತಂತೆ, ಮನೋಯವನಿಕೆಯ ಮೇಲೆ ಟೀವೀ ಚಿತ್ರಗಳೂ ಮೂಡಿ ನಿಲ್ಲುತ್ತವೆ. ! ಸಗರಿ 1949ಕ್ಕೂ ಮುಂಚೆ ಒಂದು ಹುಲು ಮೊರಡಿ: ಈಗ 'ನಾಡಿನ ಉಜ್ವಲ ದೊಂದಿ, ಜ್ಞಾನದೇಗುಲದ ಗರ್ಭಗುಡಿ ಸಗರಿಯು ವಿದ್ಯೆಯ ಮೇರುಗಿರಿ'. ಹಲವರ ಕನಸುಗಳು ನನಸಾಗಿ ನಿಂತ ನೆಲ. ರವೀಂದ್ರರ ವಿಶ್ವಭಾರತಿಗಿರುವ "ಯತ್ರ ವಿಶ್ವಂ ಭವತಿ ಏಕನೀಡಂ" (ಎಲ್ಲಿ ವಿಶ್ವವೇ ಒಂದುಗೂಡಾಗುತ್ತದೆ!) ಎಂಬ ಪ್ರತಿಜ್ಞಾ ವಾಕ್ಯದಂತೆ ಸಗರಿಯಲ್ಲಿ ತಲೆಯೆತ್ತಿ ನಿಂತ ಈ ಎಂ. ಜಿ. ಎಂ. ಸಂಸ್ಥೆಗೂ "ಸತ್ವಾತ್ ಸಂಜಾಯತೇ ಜ್ಞಾನಂ" (ಜ್ಞಾನದ ಉಗಮವಾಗುವುದು ಸತ್ವದಿಂದ) ಎಂಬ ಪ್ರತಿಜ್ಞಾ ವಾಕ್ಯವಿದೆ. ಈ ಪ್ರತಿಜ್ಞೆಯನ್ನು ನಾವು ಪ್ರಸ್ತುತ 'ಸಗರಿ' ಸ್ಮರಣ ಸಂಪುಟದಲ್ಲೂ ಕಾಣಬಹುದು. 'ಸಗರಿ' ಸತ್ವಯುತವಾಗಿ ಹೊರಬಂದಿದೆ. ಇದಕ್ಕೆ ಕಾರಣ ಅದರ ಪ್ರಧಾನ ಸಂಪಾದಕ ಹಾಗೂ ಸಂಪಾದಕ ವರ್ಗ. ಪ್ರೊ.। ಕು. ಶಿ. ಹರಿದಾಸ ಭಟ್ಟ ಎಂದರೆ ಸತ್ವಯುತ ದುಡಿಮೆಗೊಂದು ಪ್ರತೀಕ; ಹಲವು ಹವ್ಯಾಸಗಳು ಅವರ ಆಡುಂಬೊಲ. ಸ್ವತಃ ಹಲವು ಕೃತಿಗಳನ್ನು ಅವರು ರಚಿಸಿದ್ದಾರೆ ಮತ್ತೆ ಹಲವರಿಗೆ ಬರೆಯುವಂತೆ ಮಾಡಿದ್ದಾರೆ. ಇಲ್ಲಿ ಸಗರಿಯಲ್ಲಿ. 'ಕವಿ ಕಂಡ ಗಾಂಧಿ', 'ನಮ್ಮ ಚಿಂತನ' 'ನಮ್ಮ ಉಡುಪಿ', 'ನಮ್ಮ ಕಾಲೇಜು,' 'ನಮ್ಮ ಗುರುಕುಲ' 'ನಮ್ಮ ಯುವ ಪ್ರತಿಭೆ' 'ನಮ್ಮೊಜರ ಹಿತವಚನ' 'ನಮ್ಮ ಚಿತ್ರಕಥೆ' ಎಂಬ ಗುಚ್ಛಗಳಲ್ಲಿ "ಎಂ. ಜಿ. ಎಂ." ಇದರ ಬಗೆಗೆ ಸಂಬಂಧಿಸಿದಂತೆ ಹಲವು ಬರಹಗಳನ್ನು ಸೇರಿಸಿದ್ದಾರೆ. ಬೆಳ್ಳಿಹಬ್ಬದ ನೆನಪಿನ ಬಳ್ಳಿಯನ್ನು ನೆಟ್ಟಿದ್ದಾರೆ.

ಎಂ. ಜಿ. ಎಂ. ಎಂದರೆ ಮಹಾತ್ಮಾ ಗಾಂಧಿ ಮೆಮೋರಿಯಲ್ (ಮಹಾತ್ಮಾ ಗಾಂಧಿ ಸ್ಮಾರಕ) ಅಂತೆಯೇ ಮೊದಲನೆಯ ಗುಚ್ಛ ಗಾಂಧೀಜಿಯವರನ್ನು ಕುರಿತದ್ದಾಗಿದೆ. 'ಕವಿಗಳು ಕಂಡ ಗಾಂಧೀಜಿ' ಚಿತ್ರ ಇಲ್ಲಿ ನಮಗೆ ದೊರೆಯುತ್ತದೆ. ಮೂರು ಮರ ನೂರು ಸ್ವರ ಎಂದಂತೆ ನಮ್ಮ ಕವಿಗಳು ಒಂದೊಂದು ರೀತಿಯಲ್ಲಿ ತಮ್ಮ ವಿಚಾರ ಲಹರಿಯನ್ನು ಇಲ್ಲಿ ಗಾಂಧೀಜಿ ಸುತ್ತಮುತ್ತ ಹರಿಬಿಟ್ಟಿದ್ದಾರೆ. ಕೆ. ಎಸ್. ಎನ್.; ಬನ್ನಂಜೆ ಗೋವಿಂದಾಚಾರ್ಯ, ಕಯ್ಯಾರ ಕಿಞ್ಞಣ್ಣ ರೈ, ಲಕ್ಷ್ಮೀನಾರಾಯಣ ಭಟ್ಟ, ಕೆ. ವಿ. ತಿರುಮಲೇಶ, ನಿಸಾರ್ ಅಹಮದ್, ಜಿ. ಎಸ್. ಸಿದ್ದಲಿಂಗಯ್ಯ, ಗುಂಡ್ಮಿ ಚಂದ್ರಶೇಖರ ಐತಾಳ, ಬೈಕಂಪಾಡಿ, ಸುಬ್ಬಣ್ಣ ಎಕ್ಕುಂಡಿ, ಸಿ.ಪಿ.ಕೆ., ವೇಣುಗೋಪಾಲ ಸೊರಬ, ಸುಬ್ರಾಯ ಚೊಕ್ಕಾಡಿ,ಇತ್ಯಾದಿ ನವೋದಯ, ನವ್ಯ ಕವಿಗಳ ಈ ಗುಚ್ಛದ ಕೇಂದ್ರ 'ಬಿಂದು–ಗಾಂಧಿ. ಯಾವುದೇ ವಿಭೂತಿ ಸತ್ವ ಒಂದು ಉದ್ದೇಶಕ್ಕೆ ಅವತರಿಸುತ್ತದೆ. ಎಲ್ಲರ ಚೈತನ್ಯವೇ ಆ ರೂಪು. ಉದ್ದೇಶ ತೀರಿದ ಕೂಡಲೆ ಅದು ಮಾಯವಾಗುತ್ತದೆ. ಹಾಗೆಯೇ ಗಾಂಧೀಜಿ ಕೂಡ, ಸ್ವಾತಂತ್ರ್ಯ ಸಾಧನೆಗೆ ಸ್ವರೂಪ ಪಡೆದ ಸರ್ವರ ಚೈತನ್ಯ. ಸ್ವಾತಂತ್ರ್ಯ ಬಂತು – ಈ ಮಹಾನ್ ರೂಪು – ಅನತಿ ಕಾಲದಲ್ಲೇ ಇತ್ತೋ ಇಲ್ಲವೋ ಎನ್ನುವಂತಾಯಿತು. ಮಹಾಚೈತನ್ಯ ಮಾತ್ರ ಏನೆಲ್ಲವನ್ನೂ ಎದುರಿಸಿ ಸಾಧುಮಾರ್ಗದಲ್ಲಿ ನಡೆಯಬಹುದು. ಮಿಕ್ಕವರ ಇರವು ಏನೆಲ್ಲಕ್ಕೂ ಮಣಿದು ಮಾಡಬಾರದ್ದನ್ನೆಲ್ಲ ಮಾಡಿ ಬದುಕುವುದು. ಭಾರತದಲ್ಲಿ ಇಂದು (ಸ್ವಾತಂತ್ರ್ಯ ಪಡೆದ ಅನಂತರ) ಎದುರಿಸುತ್ತಿರುವ ಸಮಸ್ಯೆಗಳು ಗಾಂಧೀಜಿ ಮೊದಲು ಎಂದೂ ಯೋಚಿಸಿದುದು ಕಂಡುಬರುವುದಿಲ್ಲ. ನಮ್ಮ ಜನತೆ ಏನೆಲ್ಲಾ ಕೆಟ್ಟ ಮಾರ್ಗಗಳನ್ನು ಅನುಸರಿಸಬಹುದೆಂಬುದರತ್ತ ಕಿಂಚಿತ್ ಯೋಚಿಸಿದ್ದರೆ ಗಾಂಧಿಮಾರ್ಗ ಗಟ್ಟಿಯಾಗಿ ಉಳಿಯುತ್ತಿತ್ತು. ಅಂತೆಯೇ ಕೆ. ಎಸ್. ಎನ್. ಅವರ ನುಡಿ: [illegible]

ಅಂದಿನಿಂದೀವರೆಗೆ ನಮ್ಮ ಹಾದಿಯ ಮೇಲೆ
ದೂರ ದೂರದ ದೀಪ ನಿನ್ನ ನೆನಪು;

ನೀಲಿಯಾಕಾಶದಲಿ ನಕ್ಷತ್ರ ಮಾಲೆಯಲಿ
ತೆರೆದ ಸಾವಿರ ಕಣ್ಣು ನಿನ್ನ ನೆನಪು.

ಗಾಂಧೀಜಿಯನ್ನು ಕಂಡ ಕೆಲವರಿಗಾದರೂ ಗೊತ್ತು 'ಸೇಂದಿ' ನಿರಾಕರಣೆ ಅಂದಿನ ನಡವಳಿಯ ಅವಶ್ಯ ಗುಣವಾಗಿತ್ತು. ಆದರೆ ಇಂದು?

ಗಾಂಧೀಪುರ (ಭಾರತ ದೇಶ) ದ ಗಾಂಧೀಜಯಂತಿ
ಆಚರಿಸದಿದ್ದರೆ ಇನ್ನಾರು ಆಚರಿಸಬೇಕು?
ನಮ್ಮಲ್ಲಿ ಸೇಂದಿಯ ಅಂಗಡಿಯೂ ಉಂಟು;
ನಾವು ಗಾಂಧಿ ಜಯಂತಿಯನ್ನೂ ಆಚರಿಸುತ್ತೇವೆ.
ಗಾಂಧಿ ಜಯಂತಿಯಂದು
ಗಾಂಧೀಪುರದ ಸೇಂದೀ ಅಂಗಡಿಯಲ್ಲಿ
ವಿಪರೀತ ವ್ಯಾಪಾರ !
ಪುರಾಣ ಪ್ರಸಿದ್ಧ ಗಾಂಧೀಪುರದ,
ಪುರಾಣ ಪ್ರಸಿದ್ಧ ದೇವಾಲಯದ,
ಪಕ್ಕದಲ್ಲಿರುವ
ಸೇಂದಿ ಅಂಗಡಿಯ ಕಂತ್ರಾಟದಾರನೆ
ಗಾಂಧೀಜಯಂತಿಯ ಸಭೆಯ ನಿರ್ವಾಹಕ
ನಮ್ಮೂರ ಧರ್ಮಭೂಷಣ
ಅಪ್ಪಟ ದೇಶಭಕ್ತ
ದಾನದಲ್ಲಿ ಧರ್ಮರಾಯ
ಒಳ್ಳೆಯ ಸಾಹಿತಿಗಳನ್ನು ತರಿಸಿ
ಸೇಂದಿ ಕುಡಿಸಿ ಭಾಷಣ ಮಾಡಿಸುತ್ತಾನೆ.
ಜನರು ಅಂದು ಲೆಕ್ಕಕ್ಕಿಂತ ಸ್ವಲ್ಪ
ಹೆಚ್ಚೇ ಕುಡಿದು ಸಭೆಯಲ್ಲಿ ನೆರೆದು
ಪ್ರಚಂಡವಾಗಿ ಚಪ್ಪಾಳೆ ಕುಟ್ಟುತ್ತಾರೆ.

ಇದು ಸ್ವತಂತ್ರ ಭಾರತದ ಚಿತ್ರ – ಬನ್ನಂಜೆಯವರು ಬಿಡಿಸಿದ್ದಾರೆ.

ಕಯ್ಯಾರ ಕಿಞ್ಞಣ್ಣ ರೈ 'ತ್ರಿಕಾಲಾತೀತ' ಎಂಬ ಚಿತ್ರವನ್ನು ಗಾಂಧಿ ಬಗ್ಗೆ ನಮ್ಮ ಮುಂದೆ ಇಟ್ಟಿದ್ದಾರೆ. ಗಾಂಧೀಜಿಯವರ ಕಾಲದಲ್ಲಿ ಜನತೆ ನಡೆಸಿದ ಆ ಗಾಂಧೀ ನೇತೃತ್ವದ ಚಳುವಳಿಯ ಚಿತ್ರವನ್ನು, ಅನಂತರ ಸ್ವತಂತ್ರ ಭಾರತದಲ್ಲಿ ನಡೆದ ರೀತಿಯನ್ನು –

ನಡುಬೀದಿ ನಿಲ್ಲಿಸಿದ
ಕಲ್ಲಿನ ಮಹಾ ಶಿಲ್ಪಿ – ಆ ಮಹಾತ್ಮನ ಪ್ರತಿಮೆ –
ಆ ದರಿದ್ರ ನಾರಾಯಣ ನಿಜರೂಪ – ಬೆರಗಾಗಿ
ನಿಂತು ನೋಡುತಲಿತ್ತು ! ಕಂಬನಿಯ ಸುರಿಸುತ್ತ
ಬಡತನವ ಬಡಿದಟ್ಟುತಿಹ ಮಹತ್ಸಾಧನೆಗೆ
ಮೂಕಸಾಕ್ಷಿಯದಾಯ್ತು ! ಪ್ರತಿಮೆ ಕಂಪಿಸುತ್ತಿತ್ತು !
ಬೆಳ್ಳಿ ಹಬ್ಬದ ನೋಟ ಕಲ್ಲನ್ನು ಕರಗಿಸಿತು !

ಆದರೂ ರೈ ಆಶಾವಾದಿಗಳಾಗಿದ್ದಾರೆ; ಆದರ್ಶವಾದಿಗಳಾದ ಅವರು ಸ್ವಲ್ಪದರಲ್ಲೇ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯನ್ನು ನಿರೂಪಿಸಿ ಆ ನೇತಾರನ, 'ಊರುಗೋಲಾಧಾರವಾಗಿ ನಡೆದವನು ಮುಂದೆ'; ಮುನ್ನಡೆಸುತಿಹನು ಜನಗಣವ ಮಾಂತ್ರಿಕನಂತೆ' ಎಂಬ ಚಳುವಳಿಯ ಚಿತ್ರದೊಂದಿಗೆ ಆತನ ಸಮಾಜ ಸೇವೆ ನೌಕಾಲಿಯಲ್ಲಿ ಏಕಾಕಿಯಾಗಿ ಹಿಂದೂ ಮುಸ್ಲಿಮ್ ಜನರು ಸ್ನೇಹ ಸೌಹಾರ್ದತೆಗಳಿಂದ ಬಾಳಿ ಬದುಕಲು ಪಟ್ಟ ಪರಿಶ್ರಮ, ಗುಂಡೇಟಿನಿಂದ ಸಾವು ಮತ್ತೆ ಸ್ವಾತಂತ್ರ್ಯ ಬಂದ ಅನಂತರ 25 ವರ್ಷಗಳಲ್ಲಿ ಯಾವ ಬಗೆಯ ಪ್ರಗತಿಯೂ ಮಾನವನ ಬೆಳವಣಿಗೆಯಲ್ಲಿ ಆಗಿಲ್ಲವೆಂಬುದನ್ನು ಕಂಡೂ –

ಮರಳಿ ಹೊಸ ಸೃಷ್ಟಿ
ಸರ್ವರು ಸಮಸಮಾನರೆನೆ
ಸರ್ವೋದಯವ ಸಾರುತಿಹ ವಿನೂತನ ಸೃಷ್ಟಿ,
ಸರ್ವರಿಗೂ ಸಂತುಷ್ಟಿ; ಕುರುಡಿಗಂಜನ ದೃಷ್ಟಿ.

– ಎಂದು ಆದರ್ಶವನ್ನು ಮೆರೆದಿದ್ದಾರೆ. ಲಕ್ಷ್ಮೀನಾರಾಯಣ ಭಟ್ಟರಿಗೆ ಗಾಂಧೀ ಒಂದು 'ಬೆಟ್ಟದ ನೆತ್ತಿ'. ಆರೋಹಣ ಗಿರಿಯ ತುದಿಯನ್ನು ಮುಟ್ಟುವವರು ಎಷ್ಟು ಜನ? ಅವರು ಬದುಕಿದ್ದಾಗ ಬೆನ್ನು ಹತ್ತಿದವರೆ ಮುಂದೆ ಅವರ ಅವಸಾನವಾದ ನಂತರ ಅಡ್ಡದಾರಿಗೆ ಬಿದ್ದರು. ಅಂತೆಯೇ –

ಗಾಂಧಿ ಬರಿ ಮಿಂಚು, ಮಿಂಚಿನಂತೆ ಧಗೆ
ಬಂಡೆಗಳಿಗೆ
ಗಾಂಧಿ ಸಂಜೆ ಬಗೆ, ಒಂದೆ ಕ್ಷಣದ ನಗೆ
ಮತ್ತೆ ಇರುಳಿಗೆ !

ಕೆ. ವಿ. ತಿರುಮಲೇಶರಿಗೆ, ಅವರ ಒಳಗಿನ ಕವಿ ಹಾಗೂ ಗಾಂಧಿ – ಒಂದು ದ್ವಂದ್ವ:

ನಿನಗೆ ಮನುಷ್ಯರ ಹಿಂದಿನ ದೇವರು ಬೇಕು
ನನಗೆ ದೇವರ ಮುಂದಿನ ಮನುಷ್ಯರು ಸಾಕು.

ಕೆ. ಎಸ್. ನಿಸಾರ್ ಅಹಮದ್ ಅವರು ಗಾಂಧಿ ಆಗ, ಈಗ, ಮುಂದೆ ಎಂಬ ಮೂರು ಚಿತ್ರಗಳನ್ನು ಕಂಡಿದ್ದಾರೆ. "ಗಾಂಧೀಜಿ ಆಗ. ಈಗ. ಮುಂದೆ" ಎಂಬ ಕವನದಲ್ಲಿ 'ಗಾಂಧಿ ಜೊತೆ ತಕಲಿ' 'ರಾಮರಾಜ್ಯದ ದೃಷ್ಟಾರ' – ಆಗ, 'ನನ್ನ ಸೇವೆ ಅಲಕ್ಷಿಸಿ ಬೊಮ್ಮಾ ಬೋವಿಗೆ ಬಡ್ತಿ ಕೊಟ್ಟಾಗ' ಗಾಂಧಿಯ ಬಗ್ಗೆ ತಿರಸ್ಕಾರದ ದೃಷ್ಟಿ, ನೋವಿನೆದುರು – ಈಗ. ಮತ್ತೆ ಮುಂದೆ ಮಗನ ಪರಿಭಾಷೆಯ ಧ್ವನಿ ಭರಿತ ಮಾತಿನ ರೀತಿ:

ಮಗನ ಪರಿಭಾಷೆ ಹೊಸ ಧ್ವನ್ಯರ್ಥದಿಂದ ಸಂಪದ್ಭರಿತ;
ಜಾಲಿನೋಟು "ಗಾಂಧಿನೋಟು", ಕಳ್ಳೆಕಾಯಿ "ಗಾಂಧಿ ಬಾದಾಮಿ"
ಕೈಕೈ ಹತ್ತದ ಬೀದಿಯ ಬಾಯಿ ಬೊಬ್ಬೆ "ಬರೀ
ಗಾಂಧಿಗೂಟ", ಹರಿಜನ "ಗಾಂಧಿ ಬ್ರಾಹ್ಮಣ"
ಎಲ್ಲರಿಗೂ ಗೊತ್ತೇ ಇದೆ ಥರ್ಡ್ ಕ್ಲಾಸ್ "ಗಾಂಧೀಕ್ಲಾಸು" !

ಜಿ. ಎಸ್ ಸಿದ್ದಲಿಂಗಯ್ಯನವರಿಗೆ ಗಾಂಧಿಯ ನೆನಪು "ಬಿಸಿಯ ತುಪ್ಪ" ಅತ್ತ ನುಂಗಲೂ ಬಾರದ ಇತ್ತ ಬಿಡಲೂ ಬಾರದ ಶ್ರೇಷ್ಠ ರುಚಿಕಟ್ಟಾದ ವಸ್ತು. 'ಈ ಮುದುಕ'.

ಮುಳ್ಳಿನ ಕಿರೀಟ ಶಿಲುಬೆ
ಹೆಮ್ಲಾಕಿನ ಬಟ್ಟಲು ಲಾಠಿ ಗುಂಡು ಫಿರಂಗಿಗಳು
ಹೆಜ್ಜೆ ಹೆಜ್ಜೆಗೆದುರಾಗುವ ದಾರಿಯಲ್ಲಿ
ವಿಹಾರಕ್ಕೆ ಹೊರಟಂತೆಯೇ ಹೊರಟ.

* * *

ಅವನ ದೊಡ್ಡಸ್ತಿಕೆಯೆಲ್ಲ ನಗು ನಗುತ್ತಲೆ
ಬೇರುಗಳನ್ನೆಲ್ಲ ಹಿಡಿದಲುಗಿಸುತ್ತದೆ.

* * *

ಅಲ್ಲಿ ಕನಸುಗಳೆಲ್ಲ ಗರಿಸುಟ್ಟು ಸತ್ತು ಬೀಳುತ್ತವೆ
ಅವನ ನೆನಪು ದೊಂದಿಯಿದ್ದಂತೆ
ಬೇಡವೆನ್ನಲೂ ಆರೆ, ಬಿಡಲೂ ಆರೆ.

ಗುಂಡ್ಮಿ ಚಂದ್ರ ಶೇಖರ ಐತಾಳರಿಗೆ "ಸತ್ತು ಬದುಕಿದ ಸತ್ಯ; ಸೋತ ಮೃತ್ಯು, ಸತ್ಯಾಗ್ರಹ ಸರ್ವೋದಯಗಳ ಬಿತ್ತು !" – ಗಾಂಧಿ. ಬೈಕಂಪಾಡಿಯವರಿಗೆ ಗಾಂಧಿ –

ಇದ್ದದನ್ನೆಲ್ಲ ಆಗಸದ ಅಡಿಯಲ್ಲಿ ತೆರೆದಿಟ್ಟು
ತಾರೆಗಳ
ತೆರೆದ ಕಣ್ಣಿನ ಕೆಳಗೆ ಮಲಗಿಕೊಳ್ಳುತ್ತಿದ್ದ ಮುಗ್ಧ
ಮಂದಹಾಸದ ಮುದುಕ !

ಎಂತ ಪಾರಂಪರ್ಯ ಹತ್ತಾರು ತಲೆಮಾರುಗಳಿಂದ ಹುಟ್ಟಿ ಬೆಳೆದು ಬಂದ 'ಅಸ್ಪೃಶ್ಯ'ತೆಯ ಅರ್ಬುದ ಹುಣ್ಣನ್ನು ಕತ್ತರಿಸಲು ಕೈಕಟ್ಟಿ, ನಡುಕಟ್ಟಿ, ನಿಂತ ಸರ್ಜನ್ (Surgeon). 'ಮಹಾತ್ಮ' ಕವಿತೆಯಲ್ಲಿ ಸುಬ್ಬಣ್ಣ ಏಕ್ಕುಂಡಿ ಯವರಿಗೆ ಗಾಂಧಿ:

ಮನೆಯ ಅಂಗಳದಲ್ಲಿ
ಕರುಣೆಯ ಸಸಿ ನೆಟ್ಟವನು
ಒಂದು ನೂಲಿನ ಎಳೆಯ
ತುದಿಯಿಂದ ಸ್ವಾತಂತ್ರ್ಯ
ತೂಗಿ ಬಿಟ್ಟವನು.
ಬಕ್ಕತಲೆ ಒಳಿತಲ್ಲವೆಂದು
ದೇಶಕ್ಕೊಂದು
ಟೊಪ್ಪಿಗೆಯ ಕೊಟ್ಟವನು
ಕುದಿವ ಎದೆಯೊಳಗೊಮ್ಮೆ
ಕತ್ತಲೆಯು ಕವಿದಾಗ
ಎಡವಿ ಬೀಳದ ಹಾಗೆ
ಗುಡಿಸಲಿನ ಮುಂದೊಂದು
ದೀಪ ಹಚ್ಚಿಟ್ಟವನು.

ಸತ್ಯ, ಅಹಿಂಸೆ, ಸ್ವಾತಂತ್ರ್ಯಗಳಿಗಾಗಿ ಬಂದ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದ. ಜೇಲಿನಲ್ಲಿ ಕಾಲ ಕಳೆದ ಉಂಡುದಕ್ಕಿಂತ ಉಪವಾಸವೇ ಹೆಚ್ಚು ಇದ್ದ ವ್ಯಕ್ತಿ. ಅವರ ನಡೆ ಶುದ್ಧ. ನುಡಿ ಶುದ್ಧ.

ಗಾಂಧೀಜಿಯವರನ್ನು ಕುರಿತಂತೆ ಪ್ರೊ। ಸಿ.ಪಿ.ಕೆ. ಅವರ ಎರಡು ಕವಿತೆಗಳು 'ಗಾಂಧೀಜಿ'ಗೆ ಮತ್ತು 'ಅಂದು–ಇಂದು' ಇಲ್ಲಿವೆ. ಗಾಂಧೀಜಿ ಯುಗ ಯುಗಗಳ ಸಾರ ಸಾಕಾರ. ಬಾಗಿದ ಬೆನ್ನನ್ನು ನೆಟ್ಟಗಾಗಿಸಿದ ಧರ್ಮವೀರ. ಮಾನವತೆಗೆ ಮಾನ ತಂದ ಮಹಿಮ.

ಕೊಡಲಿ ಕೋದಂಡ ಚಕ್ರಗಳನ್ನು ಹಿಡಿಯದೆ,
ಕಂಬವನ್ನೊಡೆದು ಮೂಡಿ ವಿಜೃಂಭಿಸದೆ
ಭೂಮ್ಯಾಕಾಶಗಳನ್ನು ಹೆಜ್ಜೆಗಳಿಂದ ಮುಚ್ಚದೆ
ನಟ್ಟಿರುಳಿನಲ್ಲಿ ಮಡದಿ ಮಕ್ಕಳನ್ನು ಬಿಟ್ಟೋಡದೆ
ಅವರೆಲ್ಲರ ಹೆಗಲೇರಿ, ತಲೆಮೆಟ್ಟದೆ
ಮಾನವತೆಗೆ ಮಾನ ತಂದ ಮಹಿಮ ನೀನು;
ಮರ್ತ್ಯಕ್ಕೆ ಕೋಡು ಮೂಡಿಸಿದ ಮೋಡಿಕಾರ ನೀನು !

'ಅಂದು – ಇಂದು' ಕವಿತೆಯಲ್ಲಿ 'ಅಂದು – ಇಂದು – ಮುಂದು' ಈ ಮೂರರ ಯೋಚನೆಯಿದೆ, ಗುರಿಯಿದೆ.

ಅಂದು ಗಾಂಧಿಯೆಂಬುದೊಂದು ಚಂಡ ಮಹಾಮಂತ್ರ
ಇಂದು ಎಲ್ಲ ಕಡೆಗಳಲ್ಲಿ ಅದು ಕೇವಲ ತಂತ್ರ !
ಅಂದಿಗೆ ಅದು ಹಿರಿಯ ಉಸಿರು;
ಇಂದು ಬರಿಯದೊಂದು ಹೆಸರು !

'ಅಂದು – ಇಂದು – ಮುಂದು' ಈ ತ್ರಿಕೋಣವೇ ವೇಣುಗೋಪಾಲ ಸೊರಬರ ಕವಿತೆಯ ವಸ್ತು. 'ಮುಂದು' ಇದಕ್ಕೆ ಪ್ರತಿಯಾಗಿ 'ಎಂದು?' ಬಂದಿದೆ ಅಷ್ಟೇ?

ಗಾಂಧೀಜಿ ಅರ್ಥವಾಗುತ್ತಾನೆ –
ವಜ್ರಕ್ಕೆ ಸಾಣೆ ಕೊಟ್ಟು
ಬಂಗಾರ ಸುಟ್ಟು ಸುಟ್ಟು
ಬೆಳೆದವನು ಅಂತ
ಪಾಪ ಪುಣ್ಯಗಳ

ಸತ್ಯ ಅಹಿಂಸೆಗಳ
ಚೌಕಟ್ಟಿಗೆ ಹೊಂದಿಕೊಂಡು
ಬೆಳೆಸಿದವನು ಅಂತ.

ಈಗ 'ಗಾಂಧೀವಾದ' ತಿರುವುಮುರುವು ಆದುದನ್ನು ಕಂಡ ಚೊಕ್ಕಾಡಿ ಈ ಲೋಕವನ್ನು ಕಂಡು ಮರುಗಿದ್ದಾರೆ. ಅನಂತದಲ್ಲಿ ವಿಲೀನವಾದ ಗಾಂಧೀಜಿಗೆ ಅಂತ್ಯದ ಬಗ್ಗೆ ಪ್ರಶ್ನೆ ಹಾಕಿದ್ದಾರೆ – 'ಮಾತು ಕತೆ' ಬರೆದು. ಅವರ ಪ್ರಶ್ನೆಗಳು 'ಸಂತ, ಪವಾಡ ಪುರುಷ' ಆದ ಗಾಂಧೀಜಿಗೆ ಹೀಗಿವೆ:

ಹೀಗೇಕಾಯಿತು ಬಾಪೂ?
ಅಮೂರ್ತ ಮೌಲ್ಯಗಳಿಗಷ್ಟೇ ನೀನು ಹೋರಾಡಿದೆಯಾ?
ಸದ್ಯ ಸ್ಥಿತಿಯ ಮುತ್ಸದ್ದಿತನವನ್ನು ನೀನು ತಿರಸ್ಕರಿಸಿದೆಯಾ?
ಅಥವಾ ನಿನ್ನಂಥವರ ಕೊನೆಯೇ ಹೀಗೆಯೇ?
ನಿನ್ನಿನ ಯೋಗಿ ಇಂದು ತದ್ಭವಿಸಿ ನಾಳಿನ ಜಗತ್ತಿನಲ್ಲಿ
ಬರೇ ಜೋಗಿಯಾಗಿ ಉಳಿಯುವ ಈ ಕ್ರಮದ
ಅರ್ಥವೇನು ಬಾಪೂ?
ಅಥವಾ ಈ ಕ್ರಮವೇ ಈ ಬದುಕಿನ ಅರ್ಥವೇ ಬಾಪೂ?
ಇಲ್ಲಿ ಸಂಭವಿಸುವ ನೀನು ನಾನು ಇವರು
ಬೇರ್ಪಡಿಸಲಾಗದೆ ಇದ್ದೂ
ಒಬ್ಬರಿಗೊಬ್ಬರು ಸಂಧಿಸದಿರುವುದೇ ಇಲ್ಲಿ ನಿತ್ಯವೇ?
ಬಾಪೂ,
ಪ್ರಭಾವಗಳೆಲ್ಲ ಇಲ್ಲಿ ಮಣ್ಣಾಗುತ್ತವೆಯೇ?
ಈ ಮಣ್ಣಿನ ಗುಣ ಯಾವುದು?

ಈ ಎಲ್ಲಾ ಪ್ರಶ್ನೆಗಳಿಗೂ ಈ ಕವನಗುಚ್ಛದಲ್ಲೇ ಬಂದಿರುವ ಪ್ರೊ| ಸಿ.ಪಿ.ಕೆ. ಅವರ ಪದ್ಯವೊಂದರಲ್ಲಿ ಉತ್ತರವಿದೆ:

ರಾಮ ಕೃಷ್ಣ ಬುದ್ಧ ಗಾಂಧಿ –
ಯಾರೇ ಬರಲಿ ನಮ್ಮ ಹಾದಿ
ಇದು ಅನಾದಿ ಶಾಶ್ವತ !
ದೇವರು ಅವತಾರವೆತ್ತಿ ರಕ್ಕಸರನು ಕೊಲ್ಲಬಹುದು;
ದನುಜನಾದ ಮನುಜ ಮಾತ್ರ ಎಂದಿಗೂ ಅನಾಹತ !

ಅನಾಹತ !! ಅನಾಹೂತ !!! ನಾಯಿಯ ಬಾಲ !!!!

"ನಮ್ಮ ಚಿಂತನ"ದಲ್ಲಿ ಪೇಜಾವರ ಶ್ರೀಗಳು 'ಗಾಂಧೀಜಿ ಮತ್ತು ಧರ್ಮ' ಕುರಿತಂತೆ ಪ್ರವಚನ ಮಾಡಿದ್ದಾರೆ. ಅದು ಮೇಲಿನ ಕವಿತಾ ಪ್ರಪಂಚಕ್ಕೆ ಪೂರಕವಾಗಿದೆ.

ಸಿ. ಶ್ರೀಶ ಬಲ್ಲಾಳ ಅವರು ಬೇಂದ್ರೆಯವರ "ಮಾನವ ಭವಿಷ್ಯ ದರ್ಶನ" ಎಂಬ ಪ್ರಬಂಧವನ್ನು ಮಂಡಿಸಿದ್ದಾರೆ. ಶ್ರೀಯುತರು ಬೇಂದ್ರೆಯವರ ಕಾವ್ಯ ಸಮುದಾಯದಿಂದ ತಮ್ಮ ಪ್ರಬಂಧಕ್ಕೆ ಬೇಕಾಗುವ ಸಾಮಗ್ರಿಯನ್ನು ಹೆಕ್ಕಿ ತೆಗೆದಿದ್ದಾರೆ. ಬೇಂದ್ರೆಯವರ ಕಾವ್ಯ ರಾಶಿಯನ್ನು ಮೇರು ಮಂದರಗಳನ್ನು, ಕಂಡವರು ಮತ್ತೊಮ್ಮೆ ಇಲ್ಲಿ ಓದಿ "ನೆನಪು ಕಹಿಯಲ್ಲ; ಅದರ ಅನುಭವವೆ ಸವಿಯು" ಎಂದು ಸವಿಯೂಟ ಉಣಬಹುದು.

'ನಮ್ಮ ಉಡುಪಿ' ವಿಭಾಗದಲ್ಲಿ ಉಡುಪಿ ಊರಿನ ಸುತ್ತಮುತ್ತ ತಮ್ಮ ವಿಚಾರಗಳನ್ನು ಪಾ. ವೆಂ. ಆಚಾರ್ಯ, ಇಬ್ರಾಹಿಂ ಅಲ್ಲಾಜಿ, ಎ.ಜೆ. ಅಲ್ಸೆ, ಬಿ.ವಿ. ಕೆದಿಲಾಯ, ಶೇಖರ ಇಡ್ಯ, ಎಂ. ವಿ. ಕಾಮತ್, ಎಂ. ಕೃಷ್ಣರಾಜ್, ಬನ್ನಂಜೆ ಗೋವಿಂದಾಚಾರ್ಯ ಮತ್ತು ಬನ್ನಂಜೆ ರಾಮಾಚಾರ್ಯರು ಇಲ್ಲಿ ಮಂಡಿಸಿದ್ದಾರೆ. ಸಾಂಸ್ಕೃತಿಕ, ಸಾಹಿತ್ಯಿಕ, ರಾಜಕೀಯ ಮತ್ತು ಔದ್ಯಮಿಕ ಬೆಳವಣಿಗೆಯ ಚಿತ್ರ ಇಲ್ಲಿ ದೊರೆಯುತ್ತದೆ. ಹಲವು ದಶಕಗಳ ಹಿಂದಿನ ಉಡುಪಿ ಮತ್ತು ಈಗಿನ ಉಡುಪಿ – ಇವುಗಳ ಅಧ್ಯಯನಕ್ಕೆ ಇದೊಂದು ಒಳ್ಳೆಯ ಆಕರ. 'ಪಡವಣ ಕಡಲಿನ' ಮೀನಿನ ಮಡಲಿನ ಕಡಲ ಕಿನಾರೆ, ಕೃಷ್ಣನ ಒಡಲಿನ ಪೂಜೆಯ ಪೀಠಗಳ ವಿವರಣೆ, ವಿಹಂಗಮ ದೃಷ್ಟಿಯ ಸೃಷ್ಟಿ, ಇಲ್ಲಿದೆ.

'ನಮ್ಮ ಕಾಲೇಜು' ಈ ವಿಭಾಗದಲ್ಲಿ ಎಂ. ಜಿ. ಎಂ. ಕಾಲೇಜನ್ನು ಕುರಿತಂತೆ 12 ಲೇಖನಗಳಿವೆ ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು, ಹಳೆಯ ವಿದ್ಯಾರ್ಥಿಗಳು ತಮ್ಮ ನೆನಪಿನ ನೂರು ನೂರು ಸಂದರ್ಭಗಳಲ್ಲಿ ಕೆಲವನ್ನು ಆಯ್ದು ಇಲ್ಲಿ ಹವಣಿಸಿದ್ದಾರೆ. ಪ್ರೊ|. ಎಚ್. ಸುಂದರರಾವ್, ಪ್ರೊ| ಕು. ಶಿ. ಹರಿದಾಸ ಭಟ್ಟ, ಡಾ| ಶಿವರಾಮ ಕಾರಂತ ಮೊದಲಾದವರ ಪಕ್ವ ಬರವಣಿಗೆ ಇಲ್ಲಿದೆ. ಯಕ್ಷಗಾನ ಲೋಕಕ್ಕೆ ಇಳಿದ ಅಮೇರಿಕೆಯ ಪ್ರಥಮ ಮಹಿಳೆ ಮಾರ್ಥಾ ಏಷ್ಟನ್ ಅವರ ಒಂದು ಲೇಖನವೂ ಈ ಮಾಲಿಕೆಯಲ್ಲಿದೆ. ನಗರಿಯ ಹುಟ್ಟು ಮೊರಡಿಯಲ್ಲಿ ಪೈಸವಿಲುಗಳು ಆಡಿವೆ! ನೀಡನ್ನು ಕಟ್ಟಿವೆ ಎಂಬುದು ಇಲ್ಲಿ ಗೊತ್ತಾಗುತ್ತದೆ.

'ನಮ್ಮ ಗುರುಕುಲ' ವಿಭಾಗದಲ್ಲಿ 'ಸುಂದರರಾಯರು', 'ಶಿವಾನಂದ ಕಾಮತ್', 'ಎಂ. ಕೆ. ಗಂಗಾಧರ ಪಾಕ್ಕರ್', 'ಗೋಪಾಲಕೃಷ್ಣ ಭಟ್ಟ', 'ಡಾ| ಕೆ.ಜಿ. ರಾಮಕೃಷ್ಣ ರಾವ್', 'ಅಯ್ಯಂಗಾರ್' (ಬಿ. ನಾರಾಯಣ ಅಯ್ಯಂಗಾರ್ – ಕನ್ನಡ ಪ್ರಾಧ್ಯಾಪಕ) ಇವರನ್ನು ಕುರಿತಂತೆ ಲೇಖನಗಳಿವೆ.

'ನಮ್ಮ ಯುವಪ್ರತಿಭೆ' ವಿಭಾಗದಲ್ಲಿ ರಜತಮಹೋತ್ಸವ ಕಾಲದಲ್ಲಿ ಓದುತ್ತಿದ್ದ ಎಂ. ಜಿ. ಎಂ. ಸಂಸ್ಥೆಯ ವಿದ್ಯಾರ್ಥಿಗಳ ಲೇಖನಗಳಿವೆ. ಯುವ ಪ್ರತಿಭೆ ನಿಜವಾಗಿಯೂ ಹೊಸ ಕಾಲದ ಮುಂಗಾರಿನ ಮಿಂಚಾಗಿದೆ. ಇಲ್ಲಿ ಕವಿತೆಯಿದೆ. ವಿಮರ್ಶೆಯಿದೆ. ಲಘು ಬರಹವಿದೆ, ಬರೆದವರು ಎಳೆಯರಾದರೂ ಅವರ ವಿಚಾರ ವಿಮರ್ಶೆ ಎಳಸಲ್ಲ.

'ನಗರಿ' ಸಾರ್ಥಕ ಬರಹಗಳನ್ನು ಒಳಗೊಂಡಿರುವುದರಿಂದ ಅದರ ಸಂಪಾದಕರ ಕೆಲಸ ಮಹತ್ವದ ಸಂಪಾದನಾ ಕಾರ್ಯವಾಗಿದೆ.

೨೦. 'ಶಿಕ್ಷಣ ಮತ್ತು ಜೀವನ'

— ಎಸ್. ಎಸ್. ಶಾರದಾಪ್ರಸಾದ್

ಪ್ರೊ. ಕು. ಶಿ. ಹರಿದಾಸ ಭಟ್ಟ ಮತ್ತು ಎನ್. ತಿರುಮಲೇಶ್ವರ ಭಟ್ಟ ಅವರು ಸಂಪಾದಿಸಿ ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು ತನ್ನ ಬೆಳ್ಳಿಹಬ್ಬದ ಪ್ರಕಟಣೆಯಾಗಿ ಹೊರತಂದಿರುವ ವಿಚಾರ ಸಂಕಲನ 'ಶಿಕ್ಷಣ ಮತ್ತು ಜೀವನ' (1974) ಐವತ್ತೆಂಟು ಪುಟಗಳ ಕಿರುಕೃತಿ. 10 ಪಾಯಿಂಟ್ ಅಕ್ಷರಗಳಲ್ಲಿ ಅಚುಕಟ್ಟಾದ ಸುಂದರ ಮುದ್ರಣ ಈ ಕೃತಿಯ ವೈಶಿಷ್ಟ್ಯ. ಡಾ. ದ.ರಾ. ಬೇಂದ್ರೆ. ಡಾ. ಶಿವರಾಮ ಕಾರಂತ, ಡಾ. ಟಿ. ಎಂ. ಎ. ಪೈ, ಕು. ಶಿ. ಹರಿದಾಸ ಭಟ್ಟ, ಡಾ. ವಿ. ಕೃಷ್ಣರಾವ್ ಮತ್ತು ಶ್ರೀ ಟಿ. ಎ. ಪೈ-ಈ ವಿಚಾರ ಸಂಕಲನದ ಪಾಲುದಾರರಾಗಿದ್ದಾರೆ. ಟಿ. ಎಂ. ಎ. ಪೈಯವರ ಲೇಖನವನ್ನು 'ವಕ್ವಾಡಿ'ಯವರು ಡಾ. ಕೃಷ್ಣರಾಯರ ಲೇಖನವನ್ನು ಮುರಲೀಧರ ಉಪಾಧ್ಯರು ಅನುವಾದಿಸಿದ್ದಾರೆ. ಬೇಂದ್ರೆಯವರನ್ನು ಹೊರತುಪಡಿಸಿ ಉಳಿದವರೆಲ್ಲ ದಕ್ಷಿಣ ಕನ್ನಡ ಜಿಲ್ಲೆಯವರೇ ಎಂಬುದು ಗಮನಾರ್ಹವಾದ ಅಂಶವೇ. ಟಿ. ಎ. ಪೈ ಅವರದು ಸಂದರ್ಶನ ರೂಪದಲ್ಲಿದೆ.

ಬೇಂದ್ರೆ ಮಾಸ್ತರರ 'ಶಿಕ್ಷಣ ಮತ್ತು ಸಂಸ್ಕೃತಿ' ಅಕಾಡಮಿ ಬೆಳ್ಳಿ ಹಬ್ಬದ ಸ್ಮಾರಕ ಉಪನ್ಯಾಸದ ಸಾರಾಂಶವಾಗಿದೆ. "ಶಿಕ್ಷಣ ಮತ್ತು ಸಂಸ್ಕೃತಿ – ಇವು ಒಂದೇ ನಾಣ್ಯದ ಎರಡು ಮಗ್ಗುಲುಗಳು ಎಂಬುದನ್ನು ಗುರುತಿಸಿರುವ ಅವರು "ಅಭ್ಯಾಸದಿಂದ ಬರುವುದು ಶಿಕ್ಷಣ. ಸಹಜತೆಯಿಂದ ಬರುವುದು ಸಂಸ್ಕೃತಿ. ಬದುಕು – ಬಾಳು ಒಂದೇ ಅಲ್ಲ. ಬದುಕು ವೃದ್ಧಿ. ಬಾಳು ಸ್ಥಿತಿ. ಶಿಕ್ಷಣದ ಗುರಿ ಮಾನವನಲ್ಲಿರುವ ಸಹಜ ಗುಣಗಳು ಅಭಿವ್ಯಕ್ತಗೊಳ್ಳುವಂತೆ. ಸಾಮರ್ಥ್ಯ ಪಡೆಯುವಂತೆ ಮಾಡುವುದು" ಎನ್ನುತ್ತಾರೆ. ಮಲದೋಷಗಳನ್ನು ತೊಳೆದುಕೊಂಡು ಅಮಲರಾಗುವುದು ಹೇಗೆ? ದೋಷರಹಿತರಾಗುವುದು ಹೇಗೆ ಎಂಬುದನ್ನು ಶಿಕ್ಷಣ ಕಲಿಸುತ್ತದೆ. ಶಿಕ್ಷಣದಿಂದ ಪ್ರಯೋಜನವೇನು? ವ್ಯಕ್ತಿಯ ರಾಜಸಿಕ. ತಾಮಸಿಕ ಬುದ್ಧಿ ಬಲಗೊಂಡರೆ. ಸಂಸ್ಕೃತಿಯಿಂದ ಮನುಷ್ಯನ ಸಾತ್ವಿಕ ಬುದ್ಧಿ ಪ್ರಕಾಶಿಸುತ್ತದೆ ಎನ್ನುತ್ತಾರೆ. ವಿವಿಧ ಶಿಕ್ಷಣ ಪದ್ಧತಿಗಳ ಬಗ್ಗೆ ಪರಿಶೀಲನೆ ನಡೆದಿದೆ. ಪ್ರಾಂತೀಯ ಭಾಷೆ ಶಿಕ್ಷಣ ಮಾಧ್ಯಮವಾಗಬೇಕಾದುದರ ಅಗತ್ಯ ಎತ್ತಿ ಹಿಡಿಯಲಾಗಿದೆ. ಬಹುಭಾಷಾ ಕಲಿಕೆಗೆ ಅವಕಾಶ ಲಭಿಸಬೇಕು. ವ್ಯಕ್ತಿ–ವ್ಯಕ್ತಿಯ ನಡುವಣ ಭೇದಗಳನ್ನು ತೊಲಗಿಸುವಂಥ ವಿದ್ಯೆ ಬೇಕು. ಎಂದು ಸೂಚಿಸಿರುವರು. ಶಿಕ್ಷಣದ ಬಗ್ಗೆ ಶ್ರೀಮಾತೆಯವರ ವಿಚಾರದ ಪ್ರಸ್ತಾಪವಿದೆ. ಶಿಕ್ಷಣದ ಬಗ್ಗೆ ಛಾಂದೋಗ್ಯ ಉಪನಿಷತ್ತಿನಲ್ಲಿ ಸನತ್ಕುಮಾರ ನಾರದ ಸಂವಾದದ ಉದಾಹರಣೆಯಿದೆ. ಸಂಸ್ಕೃತಿಯನ್ನು ಧಿಕ್ಕರಿಸುವ ಪ್ರವೃತ್ತಿ ಸಲ್ಲದು ಎಂಬ ಎಚ್ಚರಿಕೆಯ ನುಡಿಯಿದೆ. ಮೃತ್ಯುವನ್ನು ದಾಟಿ ಅಮೃತತ್ವದ ಕಡೆಗೆ ಹೋಗುವುದು ಸಂಸ್ಕೃತಿಯ ವಿದ್ಯೆಯ ಲಕ್ಷಣ. ಬೇಂದ್ರೆಯವರ ಚಿಂತನೆಯ ಮೇಲೆ ಅರವಿಂದರ ಪ್ರಭಾವ ಉಪನ್ಯಾಸದುದ್ದಕ್ಕೂ ಎದ್ದು ಕಾಣುತ್ತದೆ. ಶಿಕ್ಷಣ ಮತ್ತು ಸಂಸ್ಕೃತಿ – ಇವು ಮಾನವೈಕ್ಯ ಸಾಧನೆಗೆ ಸಿದ್ಧರನ್ನಾಗಿ ಮಾಡಲಿ ಎಂಬ ಹಾರೈಕೆಯಿದೆ.

ಡಾ. ಕೆ. ಶಿವರಾಮ ಕಾರಂತರ 'ಶಿಕ್ಷಣ ಪದ್ಧತಿ ಸಾರ್ಥಕವಾಗಲಿ' ಲೇಖನ ಕಾರಂತರ ವಿಶಿಷ್ಟ ಶೈಲಿಯಲ್ಲಿ ಮೂಡಿಬಂದಿದೆ. ಉದ್ದೇಶ. ಉದ್ದೇಶಕ್ಕೆ ತಕ್ಕ ಹಾಗೆ, ಶಿಕ್ಷಣದ ಹೊಣೆಯ ಮಿತಿ. ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಮತ್ತು ಹೈಸ್ಕೂಲು ಶಿಕ್ಷಣ, ಅಭಿರುಚಿ – ವಿವೇಚನೆ ವಿವರ ಮತ್ತು ವಿಸ್ತಾರ –ಎಂಬ ಏಳು ಉಪಶೀರ್ಷಿಕೆಗಳಲ್ಲಿ ಚಿಂತನೆ ಸಾಗಿದೆ. ಶಿಕ್ಷಣಕ್ಕೆ ಸ್ಪಷ್ಟ ಗುರಿಗಳಿರಬೇಕು. ಗುರಿಗಳನ್ನು ಶಿಕ್ಷಣ ತಜ್ಞರು ಗುರುತಿಸಬೇಕು. ಹಿಂದಿನ – ಇಂದಿನ ಶಿಕ್ಷಣ ಗುರಿಗಳು ಭಿನ್ನವಾಗಿವೆ. ಜ್ಞಾನದಿಗಂತ ವಿಸ್ತರಿಸಿದೆ. ಹಾಗಾಗಿ ಜೀವನ ದಾರಿಗಳೂ ಹೆಚ್ಚಿವೆ. ಸಮರ್ಥ ಪ್ರಜೆಗಳನ್ನಾಗಿ. ಸತ್ಪ್ರಜೆಗಳನ್ನಾಗಿ ಮಾಡುವುದು ಶಿಕ್ಷಣದ ಕೆಲಸ. ವ್ಯಕ್ತಿಗೆ ವೃತ್ತಿ ಶಿಕ್ಷಣ ಒಂದು ಮುಖವಾದರೆ ಸಾಮಾಜಿಕ ತಿಳುವಳಿಕೆ ಮತ್ತೊಂದು ಮುಖವಾಗಿದೆ. ವ್ಯಕ್ತಿಯು ಸಮಾಜ ಮತ್ತು ದೇಶದೊಡನೆ ಹೊಂದಿಕೊಳ್ಳುವುದಕ್ಕೆ ಸತ್‌ಶೀಲರನ್ನು ರೂಪಿಸಬೇಕು. ಇಂಥ ಶಿಕ್ಷಣ ಎಲ್ಲರಿಗೂ ದೊರೆಯಬೇಕು. ವೃತ್ತಿಗೆ ಬೇಕಾದ ಬುದ್ಧಿಶಕ್ತಿ ಅಭಿರುಚಿಗಳು ವ್ಯಕ್ತಿಯಲ್ಲಿವೆಯೇ ಎಂಬುದನ್ನು ಗುರುತಿಸಬೇಕು. ಇದಕ್ಕೆ ಕಾಲಾವಕಾಶ ಅಗತ್ಯ. ಸಾರ್ವಜನಿಕ ಹಣ ವ್ಯಯಿಸಿ ಶಿಕ್ಷಣ ನೀಡುವ ಸಂದರ್ಭದಲ್ಲಿ ಶಿಕ್ಷಣದ ಸಾರ್ಥಕ್ಯದ ಬಗ್ಗೆ ಚಿಂತಿಸುವುದು ಅಗತ್ಯ. ಮಕ್ಕಳ ಮಾನಸಿಕ ಸಾಮರ್ಥ್ಯ ಗುರುತಿಸಿ. ಅದರ ವಿಕಾಸಕ್ಕೆ ನೆರವಾಗುವ ಶಿಕ್ಷಣ ಅಗತ್ಯ.

ವೈಯಕ್ತಿಕ ಅಗತ್ಯಗಳಿಗೆ ಶಿಕ್ಷಣ ನೀಡುವುದು ಸಾಧ್ಯವಿಲ್ಲ. ಹಾಗಾಗಿ ಸಮುದಾಯದಲ್ಲಿನ ಸರ್ವ ಸಾಮಾನ್ಯ ಲಕ್ಷಣಗಳನ್ನು ಅರಿಯಬೇಕು. ವಿವಿಧ ಹಂತಗಳಿಗೆ ವಿವಿಧ ಗುರಿಗಳಿರಬೇಕು. ಶಿಕ್ಷಣದಲ್ಲಿ ಒತ್ತಾಯ ಸಲ್ಲದು. ಅದು ಶಿಕ್ಷೆಯಾಗುತ್ತದೆ. ವಿದ್ಯಾರ್ಥಿಗಳ ಮನವೊಲಿಸಿಕೊಳ್ಳುವಲ್ಲಿ ಶಿಕ್ಷಣದ ಯಶಸ್ಸಿದೆ. ವ್ಯಕ್ತಿ ವಿಕಾಸವಾಗಬೇಕು. ವಿಚಾರಶೀಲತೆ ಬೆಳೆಯಬೇಕು. ಶಿಕ್ಷಣ ಕ್ರಮಗಳನ್ನು ವಿದೇಶಗಳಿಂದ ಅನಾಮತ್ತಾಗಿ ಎತ್ತಿ ಕೊಳ್ಳುವುದು ಸಲ್ಲದು. ನಮ್ಮ ಪರಿಸರ, ಸಮಾಜಕ್ಕೆ ಅಗತ್ಯವಾದ ಕ್ರಮಗಳಿರಬೇಕು.

ವಿದ್ಯಾರ್ಥಿಗಳು ಶಾಲೆಗಿಂತ ಹೊರಗೇ ಹೆಚ್ಚು ಸಮಯ ಕಳೆಯುವರು. ಶೀಲ, ನಡತೆ, ನಡವಳಿಕೆಗಳು ಒತ್ತಾಯದಿಂದ ಬರುವುದಲ್ಲ: ಅವು ಅನುಕರಣೆಯಿಂದ ಬರುವುದರಿಂದ ಈ ಗುಣಗಳ ಸಂವರ್ಧನೆಯಲ್ಲಿ ಉಪಾಧ್ಯಾಯರಿಗಿಂತ ಸಮಾಜದ ಪಾತ್ರವೇ ಪ್ರಧಾನ.

ಪ್ರಾಥಮಿಕ ಹಂತದಲ್ಲಿ ಪ್ರಚೋದನೆಗೆ ಪ್ರಥಮ ಸ್ಥಾನ. ಬೋಧನೆಗೆ ಎರಡನೆಯ ಸ್ಥಾನ. ಈ ಮಿತಿ ಅರಿಯದಿದ್ದಲ್ಲಿ ಶಿಕ್ಷಣ ನೀರಸ. ನಿಷ್ಪ್ರಯೋಜನಕಾರಿಯಾಗುತ್ತದೆ. ಮಕ್ಕಳಲ್ಲಿ ಕುತೂಹಲ ಕೆರಳಿಸುವಂತೆ ಪ್ರೇರಿಸಬೇಕು. ಆಸಕ್ತಿ ಬೆಳೆಯಬೇಕು. ಅವರಿಗೆ ಹೇಳುವ ವಿಷಯಗಳು ಅವರ ಮನಸ್ಸು ಮತ್ತು ಅನುಭವದ ಎಟುಕಿಗೆ ಸಿಲುಕುವಂತಿರಬೇಕು. ಗ್ರಹಣಶಕ್ತಿಗೆ ನಿಲುಕದ ವಿಷಯದಿಂದ ನಿರುತ್ಸಾಹ ಮೂಡುತ್ತದೆ. ಮಕ್ಕಳ ಮನಸ್ಸಿನ ಪರಿಚಯವಿಲ್ಲದ ಪ್ರಾಥಮಿಕ ಶಿಕ್ಷಕರನ್ನು ತಿದ್ದಬೇಕಾಗಿದೆ.

ಮುಂದಿನ ಮಾಧ್ಯಮಿಕ ಮತ್ತು ಹೈಸ್ಕೂಲು ಶಿಕ್ಷಣದಲ್ಲಿ ಅವರ ಅಭಿರುಚಿ, ಬುದ್ಧಿಶಕ್ತಿ ಬೆಳೆಯಬೇಕಾದರೆ ಪ್ರಚೋದನೆ ಅಗತ್ಯ. ಇದಕ್ಕೆ ಆಕರ್ಷಕ ಗ್ರಂಥಗಳು. ಆಕರ್ಷಕ ಶಿಕ್ಷಣ ವಿಧಾನ. ಭಯಗೊಳಿಸದಿರುವ ಪರೀಕ್ಷಾ ವಿಧಾನಗಳು ಅಗತ್ಯ. ಇಂದು ಅವರಿಗೆ ದೊರೆಯುತ್ತಿರುವ ಪಠ್ಯ ಪುಸ್ತಕಗಳು ಸರಿಯಾಗಿಲ್ಲ. ಪಠ್ಯ ಪುಸ್ತಕಗಳ ರಾಷ್ಟ್ರೀಕರಣವೂ ಅದಕ್ಕೆ ಕಾರಣವೇ! ಶಿಕ್ಷಣ ಆಕರ್ಷಕವಾಗಿಲ್ಲದಿರುವುದರಿಂದ ಅವರಲ್ಲಿ ಅಶಿಸ್ತು ಮೂಡುತ್ತಿದೆ. ಶಿಸ್ತು ಪ್ರೀತಿಯಿಂದ ಒಲಿದು ಕಲಿತ ಧರ್ಮವಾಗಬೇಕು. ಪ್ರಯೋಜನ ತಿಳಿದು ಮಾಡುವ ಕೆಲಸವಾಗಬೇಕು.

ಶಿಕ್ಷಣದ ವಿಷಯಗಳಲ್ಲಿ ಅಭಿರುಚಿಯನ್ನು ಹುಟ್ಟಿಸಿದಾಗ ಮಾತ್ರ ಸಾರ್ಥಕ್ಯ. ಇಲ್ಲದಿದ್ದರೆ ವ್ಯಕ್ತಿಯಲ್ಲಿ ನಿರಾಶೆ ಮೂಡುತ್ತದೆ. ಕಲಿತ ವಿದ್ಯೆಗೂ ಭವಿಷ್ಯ ಜೀವನಕ್ಕೂ ಸಂಬಂಧವಿಲ್ಲದಾಗುತ್ತದೆ. ಮನಸ್ಸು ವಿಕಾಸಗೊಳ್ಳಬೇಕಾದರೆ ವಿವೇಚನಾಶಕ್ತಿಯೂ ವಿಕಾಸಗೊಳ್ಳಬೇಕು. ಸಮಸ್ತ ಸಮಸ್ಯೆಗಳನ್ನು ಎದುರಿಸಬಲ್ಲ ಸಾಮರ್ಥ್ಯ ಬರುತ್ತದೆ. ಪಠ್ಯಕ್ರಮ ಬದಲಾಗಬೇಕು. ಈ ದಿಸೆಯಲ್ಲಿ ಶಿಕ್ಷಣ ಕ್ರಮ ಪ್ರಯತ್ನಿಸಬೇಕು.

ಅಂಕೆ ಸಂಖ್ಯೆಗಳ ವಿಪುಲತೆ ಎಂದೂ ಶಿಕ್ಷಣದ ಸಾರ್ಥಕತೆಯ ಸೂಚನೆಯಾಗಲಾರದು – ಎಂಬ ಎಚ್ಚರಿಕೆಯ ಮಾತಿನಿಂದ ಕೊನೆಗೊಂಡಿದೆ.

ಕಾರಂತರ ತಮ್ಮ ವಿಪುಲ ಅನುಭವದಿಂದಾಗಿ ಒಂದೇ ನೋಟದಲ್ಲಿ ಇಷ್ಟೆಲ್ಲ ಅಂಶಗಳನ್ನು ಗಮನಿಸುವುದು ಸಾಧ್ಯವಾಗಿದೆ.

ಡಾ. ಟಿ. ಮಾಧವ ಪೈಯವರ 'ಪ್ರಾಥಮಿಕ ಶಿಕ್ಷಣ ಸುಧಾರಣೆಯ ಮೂರು ಸೂತ್ರಗಳು' ಲೇಖನವನ್ನು "ವಕ್ವಾಡಿ"ಯವರು ಕನ್ನಡಿಸಿರುವರು. ಈ ಲೇಖನದ ಅಭಿಪ್ರಾಯಗಳನ್ನು 1963ರಲ್ಲಿ ಭಾರತ ಸರಕಾರದ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ 'ಪ್ರಾಥಮಿಕ ಶಿಕ್ಷಣ ಶಾಶ್ವತ ಸಲಹಾ ಮಂಡಳಿ'ಯ ಪ್ರಶ್ನಾವಳಿಗೆ ಡಾ. ತೋನ್ಸೆ ಮಾಧವ ಪೈಗಳವರು ನೀಡಿದ ಉತ್ತರ ಮಾಲಿಕೆಯ ಆಧಾರದಿಂದ ಸಂಗ್ರಹಿಸಲಾಗಿದೆ. ಅವರ ವೈದ್ಯ ದೃಷ್ಟಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದ ಎಲ್ಲ ಕುತ್ತಗಳ 'ನಿದಾನ' ಮಾಡಿದೆಯಷ್ಟೇ ಅಲ್ಲದೆ ಅವುಗಳಿಗೆ ಚಿಕಿತ್ಸೆಯನ್ನೂ ಸೂಚಿಸಿರುವುದು ವಿಶಿಷ್ಟಾಂಶವಾಗಿದೆ. 'ಯಾರಿಗಾಗಿ ಈ ಪ್ರಾಥಮಿಕ ಶಿಕ್ಷಣ ಮತ್ತು ಅದರ ಸ್ವರೂಪವೇನು?' 'ಅಧ್ಯಾಪಕ ವರ್ಗ' 'ಪ್ರಾಥಮಿಕ ಶಿಕ್ಷಣದ ಅರ್ಥ ವ್ಯವಸ್ಥೆ' – ಈ ಮುಮ್ಮುಖಿಗಳಲ್ಲಿ ಅವರ ಗಮನ ತೀವ್ರವಾಗಿ ಹರಿದಿದೆ. ಈ ಕಾರ್ಯ ಯಶಸ್ವಿಯಾಗಲು ಸಂಪನ್ಮೂಲಗಳ ಸಂಗ್ರಹಣೆ ಹೇಗೆ ಆಗಬೇಕು ಎಂಬುದನ್ನು ಸೂಚಿಸಿರುವುದು ಗಮನಾರ್ಹ ಅಂಶವಾಗಿದೆ. ಅರ್ಥ ವ್ಯವಸ್ಥೆಯ ಬಗ್ಗೆ ಅರ್ಥಪೂರ್ಣ ಚಿಂತನೆ ನಡೆದಿರುವುದು ವಿಶೇಷ. ಅಧ್ಯಾಪಕರ ಬಗ್ಗೆ, ಅವರ ತರಬೇತಿ, ಆಯ್ಕೆಯ ಬಗ್ಗೆ, ಮೇಲ್ವಿಚಾರಣಾಧಿಕಾರಿಗಳ ಆಯ್ಕೆಯ ಬಗ್ಗೆ ಅವರು ಸೂಚಿಸಿರುವ ಅಂಶಗಳು ಗಮನಾರ್ಹವಾಗಿವೆ.

ಕು.ಶಿ. ಹರಿದಾಸ ಭಟ್ಟರ 'ಶಿಕ್ಷಣದಲ್ಲಿ ಕರಾವಳಿ ಜಿಲ್ಲೆ ಮುಂದಿರುವುದೇಕೆ?' ಕಸ್ತೂರಿಗಾಗಿ ಸಿದ್ಧವಾದ ಲೇಖನ. ವಿಪುಲ ಅಂಕೆ – ಅಂಶಗಳನ್ನು ಆಧಾರವಾಗಿಟ್ಟುಕೊಂಡು ಸಮರ್ಥನೆ ನಡೆಸುವ ಯತ್ನ ಸಾಗಿದೆ. ಬುದ್ಧಿವಂತಿಕೆ ಯಾವುದೇ ಜಿಲ್ಲೆಯ ಸ್ವತ್ತಲ್ಲ ಆದರೂ ಸಂಖ್ಯಾಶಾಸ್ತ್ರ (ಅಂಕಿ-ಸಂಖ್ಯೆಗಳನ್ನು ಅನ್ವಯಿಸಿದಾಗ ಚಮತ್ಕಾರಗಳನ್ನು ಸಾಧಿಸಬಹುದು ಎಂಬುದನ್ನೂ ಬಲ್ಲ) ಬಳಸಿ ಲೇಖಕರು ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಈ ಯಶಸ್ಸಿಗೆ ಕಾರಣಗಳು ಸಂಸ್ಥೆ, ಸಂಘಟನೆ, ಶಿಸ್ತು, ಪಾಠ ಹೇಳುವ ಉಪಾಧ್ಯಾಯರು, ಹಠವುಳ್ಳ ವಿದ್ಯಾರ್ಥಿಗಳು, ಪಡುವಲದ ಗಾಳಿ ಎಂಬುದನ್ನು ಗುರುತಿಸಿದ್ದಾರೆ. (ಒಂದು ಕಾಲಕ್ಕೆ ನಿಜವಾಗಿದ್ದ ಸ್ಥಿತಿ ಈಗ ಬದಲಾಗಿದೆ ಎಂಬುದು

ಇತ್ತೀಚಿನ ಎಸ್.ಎಸ್.ಎಲ್.ಸಿ., ಪಿಯುಸಿ ಪರೀಕ್ಷೆಗಳ ಫಲಿತಾಂಶಗಳಿಂದ ಖಚಿತಗೊಂಡಿದೆ!) ಎಸ್‌ಎಸ್‌ಎಲ್‌ಸಿ, ಪಿಯುಸಿ, ಬಿಎ, ಬಿಎಸ್‌ಸಿ ಪರೀಕ್ಷೆಗಳ ಫಲಿತಾಂಶಗಳು ಪ್ರಥಮ ಸ್ಥಾನಗಳು ದ.ಕ. ಜಿಲ್ಲೆಗೆ ಲಭಿಸಿವೆ ಎಂಬ ಅಂಶವನ್ನು ಗಮನಿಸುವ ಲೇಖಕರು ಇದಕ್ಕೆ ನಗರೀಕರಣದ ಪ್ರಭಾವವಿಲ್ಲದಿರುವುದೂ ಒಂದು ಕಾರಣವೇ ಎಂಬುದನ್ನು ಪರಿಶೀಲಿಸಬಹುದಿತ್ತು. "ಪರೀಕ್ಷೆ ಪಾಸಾಗುವ ಚಾತುರ್ಯ... ಸಿದ್ಧಿಯಾಗಿದೆ" ಎಂದು ಅಂಗೀಕರಿಸಿರುವುದರಿಂದ ಪರೀಕ್ಷಾ ದೃಷ್ಟಿಯಿಂದ ಬುದ್ಧಿವಂತರು ಹೆಚ್ಚಾಗಿರುವರು ಎಂದಂತಾಯಿತು.

ಪ್ರಾಥಮಿಕ ಮತ್ತು ಹೈಸ್ಕೂಲು ಮಟ್ಟಗಳಲ್ಲಿ ಶಿಸ್ತುಬದ್ಧತೆ, ಮಿಶನರಿಗಳ ಪ್ರಭಾವ ಒಂದು ಅಂಶವಾದರೆ ಶಿಕ್ಷಕರೆಲ್ಲ ತರಪೇತು ಪಡೆದವರಾಗಿರುವುದೂ ಮತ್ತೊಂದು ಅಂಶ. ಮಿಶನರಿಗಳ ಪ್ರಯತ್ನದಿಂದ ಪಠ್ಯ-ಉಪಪಠ್ಯಗಳು, ನಿಘಂಟು–ನಕಾಶೆಗಳು ಬಹುಹಿಂದಿನಿಂದ ಲಭಿಸಿತು. ಈ ಹಂತದಲ್ಲಿ ಸರ್ಕಾರದ ಹಸ್ತಕ್ಷೇಪ ನಡೆಯುದಿದ್ದುದು ಗಮನಾರ್ಹ ಅಂಶವೇ. ಹಾಗಾಗಿ ಸ್ಥಳೀಯರ ಪಾತ್ರ, ಆಡಳಿತವರ್ಗದ ಹಸ್ತಕ್ಷೇಪವಿಲ್ಲದುದು, ನಿಯಮಾನುಸಾರ ಕರ್ತವ್ಯಪಾಲನೆ, ಆಡಳಿತ ನಿರ್ವಹಣೆ – ಗಮನಾರ್ಹವಾದ ಅಂಶಗಳಾದುವು. ಗಮನಾರ್ಹ ಬೆಳವಣಿಗೆ. ಸ್ಥಾನೀಯ ಶಿಕ್ಷಕರ ಆಸಕ್ತಿ, ಮನೆಪಾಠದ ಅಭ್ಯಾಸವಿಲ್ಲದುದು ಪ್ರಮುಖ ಕಾರಣಗಳಾಗಿವೆ.

ಇದರಲ್ಲಿ ವಿದ್ಯಾರ್ಥಿಗಳ ಪಾತ್ರವೇನು? ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಆಸಕ್ತಿ. ಅವರಿಗೆ ಮನೆಯ ವಾತಾವರಣ ಸ್ಫೂರ್ತಿದಾಯಕ, ಪ್ರೇರಕ. ಇತರರನ್ನು ಕಂಡಾಗ ಮೂಡುವ ಆಸೆ ಇವು ಅವರ ಪ್ರಗತಿಗೆ ಕಾರಣಗಳಾಗುತ್ತವೆ. ಸಾಮಾಜಿಕ ಪರಿಸರ, ಆರ್ಥಿಕ ಹಿನ್ನೆಲೆ, ಆದರ್ಶ ಪ್ರೇರಕ ಶಕ್ತಿಗಳಾದರೆ ವಿಧೇಯತೆ, ಉದ್ಯೋಗಶೀಲತೆ ಸಾಧನೆಯ ಮಾರ್ಗಗಳಾಗಿ ಪರಿಣಮಿಸುತ್ತಿವೆ.

ಪಡುವಲದ ಗಾಳಿಯ ಪ್ರಭಾವ ಹಿಂದಿನಿಂದ ಇದೆ ಎಂದಾದರೂ ಅದು ಇತರ ಕಡೆಗಳಲ್ಲಿ ಪ್ರಭಾವ ಬೀರಿದಂತೆ ಇಲ್ಲೂ ಬೀರಿದ್ದಲ್ಲಿ ಕಷ್ಟ. ಸಂಪನ್ಮಂಡಲದ ಅಭಿವೃದ್ಧಿ ವಿಕೇಂದ್ರೀಕೃತವಾಗಿಯೇ ಸಾಗಿದರೆ ಹಿರಿಮೆ-ಗರಿಮೆ ಉಳಿಯುವುದು. ಇಲ್ಲವಾದರೆ ಸಂಪತ್ತು ಮಡುಗಟ್ಟಿ ಕೆಲವೇ ಜನರ ಸೊತ್ತಾಗಿ ಕೊಳಚೆಯಾದರೆ ಅದರಿಂದ ಆಗಬಹುದಾದ ಅನಾಹುತಗಳ ಬಗ್ಗೆ ಮುನ್ನೆಚ್ಚರಿಕೆಯ ಮಾತಿನೊಡನೆ ಲೇಖನ ಮುಕ್ತಾಯವಾಗುತ್ತದೆ.

ಲೇಖನದ ಉದ್ದಕ್ಕೂ ಕುಶಿಯವರ ವಿಶ್ಲೇಷಣೆ ಅರ್ಥಶಾಸ್ತ್ರ–ಅಧ್ಯಾಪಕ–ಶಿಕ್ಷಣವೇತ್ತ ಈ ಮೂರು ದೃಷ್ಟಿಗಳಿಂದಲೂ ಸಾಗಿದೆ. ಅಂತೆಯೇ ವಿದ್ಯಾರ್ಥಿಗಳ ಪೋಷಕರ (ಎಲ್ಲ ಕಡೆಗಳಲ್ಲಿಯ) ಕಣ್ತೆರೆಸುವಂತಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಹೆಸರಾಂತ ಡಾ॥ ಎ. ಕೃಷ್ಣರಾವ್‌ರ "ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆ"ಯನ್ನು ಮುರಲೀಧರ ಉಪಾಧ್ಯರು ಕನ್ನಡಿಸಿರುವರು. ಈ ಕಿರುಲೇಖನದಲ್ಲಿ ವಿಶ್ವವಿದ್ಯಾನಿಲಯದ ಉದ್ದೇಶ, ಗುರಿಗಳೇನು? ಪಾಠಪಟ್ಟಿ ಮತ್ತು ಅಧ್ಯಯನ ಕ್ರಮ, ಗ್ರಂಥಾಲಯಗಳು ಮತ್ತು ಅವುಗಳ ಮಹತ್ವ, ವಿಶ್ವವಿದ್ಯಾನಿಲಯಗಳು ಮತ್ತು ಸಂಶೋಧನೆ, ಪರೀಕ್ಷೆಗಳು, ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಆಯ್ಕೆ ಮತ್ತು ಉನ್ನತ ವಿದ್ಯಾಭ್ಯಾಸ, ವಿಶ್ವವಿದ್ಯಾನಿಲಯ ಮತ್ತು ಸಮಾಜ, ಸ್ವಯಂ ಆಡಳಿತದ ಕಾಲೇಜುಗಳು, ಕೊಠಾರಿ ಆಯೋಗದ ವರದಿಯ ಸಲಹೆಗಳು ಎಂಬ ವಿವಿಧ ದೃಷ್ಟಿಕೋನಗಳಿಂದ ವಿಷಯ ಮಂಡನೆ ಸಾಗಿದೆ. ಸಾರಾಂಶರೂಪದಲ್ಲಿ ನವಸೂತ್ರಗಳನ್ನು ನೀಡಲಾಗಿದೆ. ವಿಶ್ವವಿದ್ಯಾನಿಲಯ ಆಡಳಿತೋದ್ದೇಶ ಸಾಧನೆಗೆ ಪ್ರಸಕ್ತ ವ್ಯವಸ್ಥೆಯ ಪುನರ್ವಿಮರ್ಶೆ ಅಗತ್ಯ. ವಿಶ್ವವಿದ್ಯಾನಿಲಯವನ್ನು ವ್ಯಾಪಾರ ನಡೆಸುವಂತೆ ನಡೆಸುವುದು ಸಾಧ್ಯವಿಲ್ಲ. ಆಡಳಿತವರ್ಗ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಸೇವೆ ತನ್ನ ಕರ್ತವ್ಯವೆಂದೇ ಭಾವಿಸಬೇಕು. ಪಾಠ ಕ್ರಮ ಸಿದ್ಧಪಡಿಸುವಾಗ ಆರ್ಥಿಕತತ್ವ ಮತ್ತು ವಿದ್ಯಾರ್ಥಿ ಸುಸಂಸ್ಕೃತರಾಗಬೇಕು ಎಂಬ ಉದ್ದೇಶವಿರಬೇಕು. ಗ್ರಂಥಾಲಯಗಳು ವಿದ್ಯಾರ್ಥಿ ತಾನೇ ಕಲಿಯಲು ಪ್ರೇರಕವಾಗಬೇಕು. ಅವುಗಳ ಗುಣಮಟ್ಟ ಸುಧಾರಣೆಯಾಗುವ ಅಗತ್ಯವಿದೆ. ಈಗಿನ ಗ್ರಂಥಾಲಯಗಳ ಸೇವಾವಧಿಯನ್ನು ವಿಸ್ತರಿಸಬೇಕು. ಅಧ್ಯಾಪಕ ವರ್ಗದವರಲ್ಲಿ ಸಂಶೋಧನಾ ಪ್ರಜ್ಞೆ ಸತತವಾಗಿರುವುದು ಅಗತ್ಯವಾಗಿದೆ. ಕಲಿಸುವಿಕೆ, ಸಂಶೋಧನೆಯಲ್ಲಿ ಸಮತೋಲನವಿರಬೇಕು. ಪರೀಕ್ಷೆಗಳು ನಡೆದ ನಂತರ ಶೀಘ್ರವಾಗಿ ಫಲಿತಾಂಶ ಪ್ರಕಟಣೆ ಅಗತ್ಯ. ಈ ದಿಸೆಯಲ್ಲಿ ಕಂಪ್ಯೂಟರ್‌ಗಳ ಬಳಕೆಗೆ ಸೂಚನೆಯೂ ಇದೆ. ಪರೀಕ್ಷಾ ವಿಧಾನದಲ್ಲಿ ಸುಧಾರಣೆ ಅಗತ್ಯ. ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಯಲ್ಲಿ – ಪಾಠೇತರ ಚಟುವಟಿಕೆಗಳು ಮೊದಲಾದುವು, ಪಾಠಪಟ್ಟಿ ತಯಾರಿಕೆ–ತಾವೂ ಭಾಗವಹಿಸುತ್ತಿದ್ದೇವೆ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡಬೇಕು. ಉನ್ನತ ಶಿಕ್ಷಣದ ಆಯ್ಕೆ ವಿಧಾನಗಳು ಸುಧಾರಣೆಯಾಗಬೇಕಾಗಿದೆ. ಅರ್ಹತೆಯಿದ್ದವರಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಲಭಿಸಬೇಕು. ವಿಶ್ವವಿದ್ಯಾನಿಲಯ ತಾನು ನೆರವು ಪಡೆಯುವ ಸಮಾಜಕ್ಕೂ ತನ್ನಿಂದಾದಷ್ಟು ಸೇವೆ ಸಲ್ಲಿಸಬೇಕು. ವಿಶ್ವವಿದ್ಯಾನಿಲಯದಲ್ಲಿ ಅಧಿಕಾರ ಕೇಂದ್ರೀಕರಣವಾಗಬಾರದು. ಅದು ತನ್ನ ಘಟಕ ಕಾಲೇಜುಗಳಿಗೆ ಸ್ವಾಯತ್ತತೆ ನೀಡುವುದು ಅಗತ್ಯವಿದೆ ಎಂಬ ಅಂಶಗಳನ್ನು ಈ ಲೇಖನದಲ್ಲಿ ಸೂಚಿಸಲಾಗಿದೆ.

ಶ್ರೀ ಟಿ. ಎ. ಪೈಗಳೊಡನೆ ಸಂದರ್ಶನ "ದಕ್ಷಿಣ ಕನ್ನಡ ಜಿಲ್ಲೆಯ ಉನ್ನತ ಶಿಕ್ಷಣದ ಭವಿಷ್ಯ" ಎಂಬ ಶೀರ್ಷಿಕೆಯಲ್ಲಿ ಈ ಕಿರುಕೃತಿಯ ಕೊನೆಯ ಲೇಖನವಾಗಿ ಮೂಡಿಬಂದಿದೆ. ಉತ್ತರಗಳ ರೂಪದಲ್ಲಿ ಪೈಯವರು

ತಮ್ಮ ಅನಿಸಿಕೆಗಳನ್ನು ತಿಳಿಸಿರುವರು. ತಮ್ಮ ಜಿಲ್ಲೆಯಲ್ಲಿ ಶಿಕ್ಷಣ ಪಡೆದು. ಅದರ ಲಾಭವನ್ನು ಹೊರಗೆ ನೀಡುವುದು ಉಚಿತವೇ ಎನ್ನುವ ಅವರ ಅನಿಸಿಕೆಯಲ್ಲಿ ವಿದ್ಯಾವಂತರಿಗೂ ಅವಿದ್ಯಾವಂತ ಸಮುದಾಯಕ್ಕೂ ಅಂತರವನ್ನುಂಟು ಮಾಡುವುದು ಸಾಮಾಜಿಕ ಆರೋಗ್ಯಕ್ಕೆ ಹಿತಕರವೇ ಎಂಬ ಕಳಕಳಿಯೂ ಇದೆ. ಶಿಕ್ಷಣ, ಜೀವನಗಳಿಗೆ ಪರಸ್ಪರ ಸಂಬಂಧ ಇರಬೇಕು ಎನ್ನುವ ಅವರಿಗೆ ಶಿಕ್ಷಣದ ಗುಣವೃದ್ಧಿಯಾಗದಿರುವುದರ ಬಗ್ಗೆ ಬೇಸರವಿದೆ. ಪದವಿಗೂ ಕಾರ್ಯದಕ್ಷತೆಗೂ ಸಂಬಂಧವಿಲ್ಲ. ಉನ್ನತ ವಿದ್ಯಾಭ್ಯಾಸದ ಬೆನ್ನತ್ತಿದ ಬಹುಪಾಲು ಮಂದಿಗೆ ಜ್ಞಾನದ ಜ್ಯೋತಿ ಉದ್ಯೋಗರಹಿತವಾದ ನಿರಾಶೆಯ ವಾತಾವರಣದಲ್ಲಿ ಕರಟಹೋಗುತ್ತಿದೆ ಎಂಬ ಕಟುಸತ್ಯವೂ ಅವರಿಂದ ಹೊರಬಿದ್ದಿದೆ. ಕಾಲೇಜುಗಳ ಆರ್ಥಿಕ ತಾಪತ್ರಯದ ಬಗ್ಗೆ ವಿಶ್ಲೇಷಿಸುವಾಗ ಕಟ್ಟಡ, ಪ್ರಯೋಗಶಾಲೆಗಳಿಗಾಗಿ ಹಣ ಕೂಡಿಸುವುದು ಮಾತ್ರವಲ್ಲದೆ, ಅನಿರೀಕ್ಷಿತ ವೆಚ್ಚಗಳಿಗಾಗಿ ಒಂದು ನಿಧಿ ನಿರ್ಮಿಸುವ ವ್ಯವಸ್ಥೆ ಈಗ ಇಲ್ಲವಾಗಿರುವುದು ಅವರಿಗೆ ಆತಂಕದ ವಿಷಯವಾಗಿ ತೋರುತ್ತದೆ. ಆರ್ಥಿಕ ತಾಪತ್ರಯವಿರುವ ಸಂಸ್ಥೆಗಳ ರಾಷ್ಟ್ರೀಕರಣದಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ ಎಂಬುದನ್ನು ಸೂಚಿಸಿ, ಅದೇ ದನಿಯಲ್ಲಿ ಇದರಿಂದ ಶ್ರೀಸಾಮಾನ್ಯನಿಗೆ ಹೊರೆಯಾಗುತ್ತದೆ ಎಂದೂ ಎಚ್ಚರಿಸುತ್ತಾರೆ. ಉನ್ನತ ಶಿಕ್ಷಣ ಕೊಡಬೇಕಾದುದು ರಾಷ್ಟ್ರದ ಹೊಣೆಗಾರಿಕೆಯಲ್ಲವೆ ಎಂಬ ಪ್ರಶ್ನೆಗೆ ಉತ್ತರಿಸುವ ಸಂದರ್ಭದಲ್ಲಿ ಇತ್ಯಾತ್ಮಕವಾಗಿ ಉತ್ತರಿಸುವ ಅವರ ಮಾತಿನಲ್ಲಿ 'ಯೋಗ್ಯರಿಗೆ ಮಾತ್ರ' ಎಂಬ ಎಚ್ಚರಿಕೆಯ ಸೂಚನೆಯೂ ಸೇರಿದೆ. ಉನ್ನತ ಶಿಕ್ಷಣ ಪಡೆದವನ ಗುರಿ ದೇಶಾಂತರವಾಗಬಾರದು. ಹಾಗಾದಾಗ ನಮ್ಮ ಖರ್ಚಿನಲ್ಲಿ ಹೊರಗಿನವರಿಗೆ ಲಾಭವಾಗುತ್ತದೆ. ಶಾಲೆಗಳನ್ನು ಸೇರಿದವರು ಶಿಕ್ಷಣ ಪೂರೈಸದಿರುವ ಸಮಸ್ಯೆಯಿದೆ. ಬಡವರ ಮಕ್ಕಳು ಶಾಲೆಗೆ ಹೋಗದಿರಲು ಸಾಮಾಜಿಕ ಕಾರಣಗಳಿವೆ. ಬಡವರು ಬಡವರು ಹಾಗೂ ಅವಿದ್ಯಾವಂತರಾಗಿಯೇ ಮುಂದುವರಿಯುತ್ತಿರುವ ಪರಿಸ್ಥಿತಿ ತಪ್ಪಬೇಕು ಎಂಬ ಕಳಕಳಿ ಅವರಿಂದ ವ್ಯಕ್ತವಾಗಿದೆ.

ದ.ಕ. ಜಿಲ್ಲೆಯ ಶಿಕ್ಷಣದ ಭವಿಷ್ಯದ ಬಗ್ಗೆ ಮಾತನಾಡುವಾಗ ಮಿಶನರಿಗಳು, ಖಾಸಗಿಯವರು, ಉದಾರಾಂತಃಕರಣದ ಸಾರ್ವಜನಿಕ ಮುಂದಾಳುಗಳ ಸೇವೆಯನ್ನು ಕೃತಜ್ಞತೆಯಿಂದ ನೆನೆಯುವ ಅವರು ಎಲ್ಲ ಜಾತಿಗಳಲ್ಲಿ ಬುದ್ಧಿವಂತರಿದ್ದು, ಅವರಿಗೆ ಅವಶ್ಯವಾಗಿ ಅನುಕೂಲ ಕಲ್ಪಿಸಬೇಕಾದುದು ಆದ್ಯ ಕರ್ತವ್ಯ ಎಂಬ ಕರ್ತವ್ಯಪ್ರಜ್ಞೆಯನ್ನು ಪ್ರದರ್ಶಿಸುವರು. ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳಿಗೆ ಚಳವಳಿ ಮುಖಾಂತರ ಪರಿಹಾರ ಸಾಧ್ಯವೇ ಎಂದರೆ ಶಿಕ್ಷಣ, ಶಿಸ್ತು ಇವು ಎರಡೂ ಒಂದೇ ನಾಣ್ಯದ ಎರಡು ಮುಖಗಳು, ನಮ್ಮವರು ಯಶಸ್ಸು ಗಳಿಸಿ, ಇತರರು ವಿಫಲರಾಗಲು ಕಾರಣ ಶಿಸ್ತೇ ಆಗಿದೆ. ಸತ್ಪ್ರಜೆಗಳನ್ನು ನಿರ್ಮಾಣ ಮಾಡಬೇಕು. ವಿದ್ಯಾಸಂಸ್ಥೆ ಖಾಸಗಿ ಸ್ವತ್ತಲ್ಲ. ಅದು ಸಮಾಜದ ಆಸ್ತಿ. ಸಮಾಜ ಅದಕ್ಕೆ ನಿರಂತರವಾಗಿ ತನ್ನ ಶಕ್ತಿಯನ್ನು ಧಾರೆಯೆರೆಯಬೇಕು ಎಂಬ ಸೂಚನೆಯೊಂದಿಗೆ ಸಂದರ್ಶನ ಪೂರೈಸಿದೆ.

ಒಟ್ಟಿನಲ್ಲಿ ಜೀವನ, ಶಿಕ್ಷಣದ ಬಗ್ಗೆ ಸಮಕಾಲೀನ ಚಿಂತನಶೀಲರು, ಅಭಿವ್ಯಕ್ತ ಪಡಿಸಿರುವ ಅಂಶಗಳ ಸಮರ್ಥ ಸಂಕಲನ 'ಜೀವನ ಮತ್ತು ಶಿಕ್ಷಣ'ವಾಗಿದೆ. ಐತಿಹಾಸಿಕ ಮೌಲ್ಯಗಳನ್ನೂ ಪಡೆದಿರುವ ಈ ಕೃತಿಯನ್ನು ಪೋಷಕರು, ಶಿಕ್ಷಕರು, ಉಪಾಧ್ಯಾಯ ಶಿಕ್ಷಕರು, ಶೈಕ್ಷಣಿಕ ಆಡಳಿತ ಕ್ಷೇತ್ರದಲ್ಲಿನ ಭಾಗಿಗಳು ಅವಲೋಕಿಸುವುದು ಅಗತ್ಯ. ಈ ಕೃತಿಯನ್ನು ಸಮರ್ಥವಾಗಿ ಸಂಪಾದಿಸಿರುವ ಎನ್. ತಿರುಮಲೇಶ್ವರ ಭಟ್ಟ ಮತ್ತು ಪ್ರೊ॥ ಕು.ಶಿ. ಹರಿದಾಸ ಭಟ್ಟರು ಅಭಿನಂದನಾರ್ಹರು.

———

೨೧. "ಅಂಜಲಿ" (ANJALI)

— ಟಿ. ಎನ್. ನಾಗರತ್ನ

ಭಾರತದ ವಿವಿಧ ಭಾಗಗಳಲ್ಲಿ ಕಾಲಕಾಲಕ್ಕೆ ಭಕ್ತಚೇತನಗಳು ಹುಟ್ಟಿ ತಮ್ಮ ಭಕ್ತಸಾಹಿತ್ಯದಿಂದ ಲೋಕ ಕಲ್ಯಾಣಕ್ಕೆ ಕಾರಣರಾಗಿದ್ದಾರೆ. ಅಂತಹ ಮಹನೀಯರ ಜೀವನ, ಸಾಹಿತ್ಯಗಳು ಎಲ್ಲ ಕಾಲಕ್ಕೂ ಎಲ್ಲ ದೇಶಕ್ಕೂ ಅನುಕರಣೀಯ. ಪರಿಶುದ್ಧ ಚಾರಿತ್ರ್ಯವನ್ನು ಸಂತರು ತಮ್ಮ ನಡತೆಯಂತೆಯೇ ನುಡಿದರು; ನುಡಿದಂತೆಯೇ ನಡೆದರು. ತಮ್ಮ ವೈಯಕ್ತಿಕ ಆತ್ಮೋದ್ಧಾರದೊಂದಿಗೆ ಸಮಷ್ಟಿಯ ಉದ್ಧಾರದ ಕಡೆಗೂ ಅವರ ಗಮನ ವಿತ್ತು, ಕಳಕಳಿಯಿತ್ತು. ತಮ್ಮ ನಡೆನುಡಿಗಳಿಂದ ಸಮಾಜದ ಮೇಲೆ ತೀವ್ರ ಪ್ರಭಾವವನ್ನು ಬೀರಿದ ವಿಶ್ವಮಾನವ ರವರು. ಸಾಮಾಜಿಕ ಅವಶ್ಯಕತೆಗಳನ್ನು. ಕೊರತೆಗಳನ್ನು ತುಂಬಿಕೊಡುವತ್ತಲೇ ಸಂತರ ಗಮನ. ಸಾಮಾನ್ಯ ಜನರ ನೈತಿಕ ಅಧಃಪತನವೇ ಹಲವು ಸಮಸ್ಯೆಗಳ ಮೂಲವೆಂಬುದನ್ನು ಅವರು ಬಲ್ಲವರಾಗಿದ್ದರು. 'ಜನರ ಸೇವೆಯೇ ಜನಾರ್ದನ ಸೇವೆ' ಎಂಬುದೇ ಎಲ್ಲ ಸಂತರ ನಂಬಿಕೆ. ಮನುಷ್ಯನ ಚಪಲತೆ. ಚಂಚಲತೆಯೇ ಮೊದಲಾದ ದೌರ್ಬಲ್ಯಗಳನ್ನು ಬಲ್ಲ ಸಂತರು ಅವುಗಳನ್ನು ಗುರುತಿಸಿ ತಿಳಿಯ ಹೇಳುವುದಷ್ಟೇ ಅಲ್ಲದೆ ಅವುಗಳನ್ನು ಮೆಟ್ಟಿನಿಲ್ಲುವ ದಾರಿಯನ್ನು ತೋರಿಸಿದರು. ತಾವು ಸ್ವತಃ ಅನುಭವಿಸಿ ಬಳಲಿದ ರಾಗ, ದ್ವೇಷಾದಿಗಳನ್ನು ಅವು ಮನುಷ್ಯನನ್ನು ಹೇಗೆ ಆಕ್ರಮಿಸಿ ಅಧೋಗತಿಗೆ ಇಳಿಸುತ್ತವೆಂಬುದನ್ನು ಮತ್ತೆ ಮತ್ತೆ ಒತ್ತಿ ಹೇಳುವ ಮೂಲಕ ಜನಸಾಮಾನ್ಯರಲ್ಲಿ ಆ ಬಗ್ಗೆ ಎಚ್ಚರ ಮೂಡಲು ಕಾರಣರಾದರು. ಶಂಕೆ. ಸಂಕಟ. ನಿರಾಸೆ, ನೋವುಗಳಿಂದ ನರಳುವ ಆತ್ಮಗಳಿಗೆ ಭಗವಂತನ ಅಲಂಬನೆಯನ್ನು ಸೂಚಿಸಿದರು, ಭಗವಂತನನ್ನು ಹೇಗೆ ಆಶ್ರಯಿಸಬೇಕು, ಹೇಗೆ ಅವನನ್ನು ಒಲಿಸಿಕೊಂಡು ಪ್ರಾಪಂಚಿಕ ಸಂಕಟಗಳಿಂದ ಬಿಡುಗಡೆ ಹೊಂದಬೇಕು ಎಂಬುದನ್ನು ಅಜಾಮಿಳ, ದ್ರೌಪದಿ, ಧ್ರುವ, ಮೊದಲಾದ ಅನೇಕ ಪುರಾಣ ಪಾತ್ರಗಳ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದರು. ಆತ್ಮಜ್ಞಾನದ ಅಗತ್ಯವನ್ನು ಒತ್ತಿ ಹೇಳಿದರು. ಇಷ್ಟೆಲ್ಲ ಪರಿಹಾರೋಪಾಯ ಗಳನ್ನು ಸೂಚಿಸಿರುವ ಸಂತರ ಜೀವನ ಕೃತಿಗಳು ಪ್ರಾತಃಸ್ಮರಣೀಯವಾದವು. ಮನಸ್ಸನ್ನು ಒಂದು ಉದ್ದೇಶ ದಲ್ಲಿ ತೊಡಗಿಸುವ, ಶಿಸ್ತು ಪ್ರಾಮಾಣಿಕತೆಗಳ ಮುಖೇನ ಮಾನಸಿಕ ಹಾಗೂ ದೈಹಿಕ ಪರಿಶುದ್ಧತೆಗಳನ್ನು ಬೆಳೆಸುವ ಸಂತರ ಗುರುತರ ನುಡಿಮುತ್ತುಗಳು ಸರ್ವರಿಗೂ ಮಾರ್ಗದರ್ಶಕವಾಗಿವೆ.

ಇಂತಹ ಮಾರ್ಗದರ್ಶನ ನಮ್ಮ ಯುವಜನತೆಗೆ ದೊರೆಯಲು ಮನಸ್ಸಿಗೆ ಶಾಂತಿ ದೊರೆತು ಮಾನವ ಕಲ್ಯಾಣದತ್ತ ಮನಸ್ಸು ಶ್ರಮಿಸುವಂತಾಗಲಿ ಎನ್ನುವ ಆಶಯದೊಂದಿಗೆ ಪ್ರಸ್ತುತ ಪುಸ್ತಕವನ್ನು ಸಂಪಾದಿಸ ಲಾಗಿದೆ. ಸಂಪಾದಕರು; ಪ್ರೊ. ಕು. ಶಿ. ಹರಿದಾಸ ಭಟ್ಟರು. ಡಾ. ಕೆ. ಬಿ. ರಾಮಕೃಷ್ಣ ರಾಯರು, ಶ್ರೀ ಎ. ಕೃಷ್ಣ ರಾಯರು ಮತ್ತು ಶ್ರೀ ಟಿ. ಆರ್. ಎ. ಪೈಗಳವರು. ಭಾರತದ ವಿವಿಧ ಕೋಮಿನ, ವಿವಿಧ ಸ್ಥಳಗಳ. ವಿಭಿನ್ನ ಕಾಲಮಾನಕ್ಕೆ ಸಲ್ಲುವ ಸಂತರು. ಸಾಧಕರು ಹಾಗೂ ಅನುಭಾವಿಗಳ ಸಂಕ್ಷಿಪ್ತ ಜೀವನ ಪರಿಚಯ ಹಾಗೂ ಪ್ರಾರ್ಥನೆ – ಭಕ್ತಿಗಳ ಬಗ್ಗೆ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಂಗ್ಲೀಷ್ ಭಾಷೆಯಲ್ಲಿ. ಲೇಖನಗಳ ಮೂಲಕ ಕ್ರೋಢೀಕರಿಸಿರುವುದೇ "ಅಂಜಲಿ."

ಸ್ವಾಮಿ ವೀರೇಶ್ವರಾನಂದರ ಮೌಲಿಕ ಮುನ್ನುಡಿಯೊಂದಿಗೆ ಪುಸ್ತಕ ಪ್ರಾರಂಭವಾಗುತ್ತದೆ. ಅವರು ಭಕ್ತರು ಭಗವಂತನನ್ನು ಕಂಡ ಸಗುಣ, ಸಾಕಾರ, ನಿರ್ಗುಣ ಇತ್ಯಾದಿ ದೃಷ್ಟಿಕೋನಗಳು ಆ ಭಿನ್ನತೆಯಲ್ಲೂ ಕಾಣುವ ಕಾಣುವ ಭಕ್ತಿಭಾವದ ಏಕತೆಯನ್ನು ಎತ್ತಿ ಹೇಳಿದ್ದಾರೆ. ಸಂತರ. ದಾರ್ಶನಿಕರ ಆಧ್ಯಾತ್ಮಿಕ ಹೋರಾಟದ ಪರಿಚಯ ವ್ಯಕ್ತಿಯ ಉತ್ತಮ ಚಾರಿತ್ರ್ಯವನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತದೆನ್ನುವ ಅಭಿಪ್ರಾಯ ಅವರದು.

ಮುಂದೆ, ಸಂಪಾದಕರು ಪೀಠಿಕೆಯಲ್ಲಿ ತಮ್ಮ ಉದ್ದೇಶವನ್ನು ಸ್ಪಷ್ಟಪಡಿಸುತ್ತಾ ಜೀವನದಲ್ಲಿ ಯಾವನಿಗೆ ಶ್ರದ್ಧೆ, ಆಂತರಿಕ ಶಿಸ್ತುಗಳಿರುವುದಿಲ್ಲವೋ ಅಂತಹವನ ಬಾಳು ಮೂರಾಬಟ್ಟೆಯೆನ್ನುವುದನ್ನು ಅನೇಕ ವಿಚಾರ ವಂತರ ಮಾತುಗಳನ್ನು ಉದಾಹರಿಸಿ ಸ್ಪಷ್ಟಪಡಿಸಿದ್ದಾರೆ. ದೈಹಿಕ ಆಹಾರದಂತೆಯೇ ಮಾನಸಿಕ ಆಹಾರ ತೆಗೆದುಕೊಳ್ಳುವುದರಲ್ಲೂ ಜಾಗ್ರತೆ ಅಗತ್ಯವೆಂಬುದನ್ನು ಒತ್ತಿ ಹೇಳುತ್ತಾರೆ. ಅಂತಹ ಎಚ್ಚರವನ್ನು ಮೂಡಿಸುವಲ್ಲಿ ಈ ಗ್ರಂಥದಲ್ಲಿರುವ ಸಂತರ. ದ್ರಷ್ಟಾರರ. ವಿವೇಕಿಗಳ ಜೀವನ ಮತ್ತು ಉಪದೇಶಗಳು

ಸಹಕಾರಿಯಾಗುವ ಆಶಯ ಸಂಪಾದಕರದು. ವ್ಯಕ್ತಿ ತಾನು ಇರುವ ಪರಿಸರ, ಮಾಡುವ ವಿಚಾರಗಳಿಂದ ತನ್ನ ನಡತೆಯನ್ನು ರೂಪಿಸಿಕೊಳ್ಳುತ್ತಾನೆ, ತನ್ನ ಅಧ್ಯಯನಶೀಲತೆಯಿಂದ ಪೋಷಿಸಿಕೊಳ್ಳುತ್ತಾನೆಂಬುದು ಸರ್ವ ವಿದಿತ.

ಡಿ. ಪಿ. ನಾಗರಾಜರಾಯರು ತಮ್ಮ ಪ್ರಸ್ತಾವನೆಯಲ್ಲಿ 'ಭಾರತೀಯ ಸಮಾಜದ ಬಾಹ್ಯ ಬೆಳವಣಿಗೆಯ ಅಸಮಾನತೆಗಳನ್ನು ತಡೆಹಿಡಿದವರು ಈ ಸಂತರು. ಜನರ ಆಡು ಭಾಷೆಯ ಮೂಲಕವೇ ಅವರಲ್ಲಿ ನೈತಿಕ ಮೌಲ್ಯಗಳನ್ನು, ಧಾರ್ಮಿಕ ಸತ್ಯಗಳನ್ನು ಚಿತ್ತರಿಸಿದರು. ಪ್ರಾರ್ಥನೆ ಮತ್ತು ಭಕ್ತಿಗಳೇ ಅವರು ನಮಗಿತ್ತಿರುವ ಮಹಾಮಂತ್ರ...ಭಾರತೀಯ ತತ್ವಶಾಸ್ತ್ರ. ಸಂಸ್ಕೃತಿ ಮತ್ತು ಧರ್ಮಗಳಿಗೆ ಈ ಪುಸ್ತಕ ಪ್ರವೇಶವನ್ನೊದಗಿಸಿ ಕೊಡುತ್ತದೆ' ಇತ್ಯಾದಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಾರೆ ಈ ಮೂರೂ ಭಾಗಗಳಿಂದ ಪುಸ್ತಕದ ಅಭ್ಯಾಸಕ್ಕೆ ಒಂದು ಒಳ್ಳೆಯ ಹಿನ್ನೆಲೆ ದೊರತಿದೆ. ಪುಸ್ತಕದ ವಸ್ತು, ಅದರ ಅಗತ್ಯ, ಫಲಾಫಲಗಳ ಬಗ್ಗೆ ಒಂದು ಮುನ್ನೋಟ ಸಿಕ್ಕುತ್ತದೆ.

ಸಂತರ ಜೀವನ – ಚಿತ್ರಣದಲ್ಲಿ ಶ್ರೀ ರಾಮಕೃಷ್ಣರನ್ನು ಕುರಿತದ್ದು ಮೊದಲ ಲೇಖನ. ಒಟ್ಟು ನಲವತ್ತು ಭಕ್ತ ಚೇತನಗಳ ಪರಿಚಯ ನಮಗೆ ಈ ಭಾಗದಲ್ಲಿ ಆಗುತ್ತದೆ. ಪ್ರಾಚೀನ ವೈಷ್ಣವ ಭಕ್ತೆ ಆಂಡಾಳರಿಂದ ಹಿಡಿದು ಶಂಕರ ಮಧ್ವ ರಾಮಾನುಜ ಈ ಆಚಾರ್ಯತ್ರಯರನ್ನು ಒಳಗೊಂಡಂತೆ, ಈ ಶತಮಾನದ ಸ್ವಾಮಿ ರಾಮ ತೀರ್ಥರವರೆಗೆ ಇಲ್ಲಿ ಸೇರಿದ್ದಾರೆ. ಮೊದಲ ಆರು ಲೇಖನಗಳು ಶ್ರೀರಾಮಕೃಷ್ಣರು ಹಾಗೂ ಅವರ ಶಿಷ್ಯರನ್ನೇ ಕುರಿತದ್ದಾದುದರಿಂದ ಅವರ ತತ್ವಗಳನ್ನೇ ಚಿತ್ತರಿಸುತ್ತವೆ. 'ಭಕ್ತಿ' ಎಂದರೆ ದೈಹಿಕವಾಗಿ, ಮಾನಸಿಕವಾಗಿ, ವಾಚಿ ಕವಾಗಿ ಭಗವಂತನನ್ನಾರಾಧಿಸುವುದು. ಭಕ್ತನ ಹೃದಯವೇ ಭಗವಂತನ ನೆಲೆ. ಸರ್ವಸಮರ್ಪಣ ಭಾವದಿಂದ ಭಗವಂತನ ದಾಸನಾಗಬೇಕು. ಭಗವಂತ ಪರಿಪೂರ್ಣ. ಭಕ್ತ ಕೇವಲ ಅವನ ಅಂಶ. ನಿಜವಾದ ಭಕ್ತ ಯಾವಾಗಲೂ ಭಗವಂತನ ಕೃಪೆಗಾಗಿ ಹಾತೊರೆಯುತ್ತಿರುತ್ತಾನೆ. ಭಗವತ್ಕೃಪೆಯನ್ನು ಪಡೆಯಲು ಪ್ರಾರ್ಥನೆಯೇ ಕೀಲಿಕೈ. ಪ್ರತಿಯೊಂದು ಜೀವಿಯ ಗುರಿ ಮೋಕ್ಷಸಾಧನೆ. ಅದನ್ನು ಪಡೆವಲ್ಲಿ ಪ್ರಾರ್ಥನೆ ಭಕ್ತಿಗಳೇ ಆಲಂಬನೆಗಳು. ಭಕ್ತನಿಗೆ ಮನಶ್ಶುದ್ಧಿ ಅತ್ಯಗತ್ಯ. ನಿಷ್ಕಾಮಕರ್ಮ ಮನಶ್ಶುದ್ಧಿಯನ್ನು ತಂದುಕೊಡಲು ಸಹಕಾರಿ. ಕರ್ತವ್ಯದ ಬಗ್ಗೆ ಎಚ್ಚರವಿರಲಿ' – ಇವು ಶ್ರೀ ರಾಮಕೃಷ್ಣರು, ಶಾರದಾಮಾತೆಯವರು, ವಿವೇಕಾನಂದರು, ಸ್ವಾಮಿ ಬ್ರಹ್ಮಾ ನಂದರು, ಸ್ವಾಮಿ ಶಿವಾನಂದರು ಹಾಗೂ ಸ್ವಾಮಿ ರಾಮಕೃಷ್ಣಾನಂದರ ಮೂಲ ವಿಚಾರಧಾರೆ. 'ಪ್ರಕೃತಿಯನ್ನು, ಅಜ್ಞಾನವನ್ನು, ಮಾಯೆಯನ್ನು ಎದುರಿಸಿ; ಪಲಾಯನ ಮಾಡಬೇಡಿ' ಎಂದು ಸ್ವಾಮಿ ವಿವೇಕಾನಂದರು ಕರೆಕೊಟ್ಟರೆ, 'ಮೃತ್ಯು ಅಡರುವ ಮುನ್ನ ಭಗವಂತನಲ್ಲಿ ಮನಸ್ಸನ್ನು ತೊಡಗಿಸಿ ಪ್ರಾಪಂಚಿಕ ಭೋಗಲಾಲಸೆ ಗಳನ್ನು ಹೊಡೆದಟ್ಟಿ' ಎನ್ನುತ್ತಾರೆ, ಶ್ರೀಮಾತೆ ಶಾರದಾದೇವಿ. 'ಪರಿಶುದ್ಧ ಹೃದಯರಾಗಿ, ಪ್ರಾರ್ಥನೆ ಸಲ್ಲಿಸಿ, ಅವನು ಖಂಡಿತ ದರ್ಶನ ನೀಡುತ್ತಾನೆ' – ಇದು ಪ್ರೀತಿಯ 'ಮಹಾರಾಜ್', ಬ್ರಹ್ಮಾನಂದರ ಭರವಸೆ. ಸ್ವಾಮಿ ರಾಮಕೃಷ್ಣಾನಂದರ ಪ್ರಕಾರ 'ಭಕ್ತಿ ಮತ್ತು ಪ್ರಾರ್ಥನೆಗಳು ಭಗವಂತನ ಸಾಕ್ಷಾತ್ಕಾರಕ್ಕೆ ಸುಲಭವೂ ಉತ್ಕರ್ಷ ವೂ ಅನುಕೂಲವೂ ಆದ ಮಾರ್ಗ'. ತ್ಯಾಗ ಮತ್ತು ಸೇವೆಗಳ ಪ್ರತೀಕವೇ ಸ್ವಾಮಿ ಶಿವಾನಂದರು; 'ಮಹಾ ಪುರುಷಜೀ' ಎಂದು ಖ್ಯಾತರಾದವರು.

ಶ್ರೀ ಅರವಿಂದರ ಪ್ರಕಾರ 'ವಿಶ್ವವೇ ದೇವರ ಪ್ರಕಾಶನ', ಎಲ್ಲರೂ ದೇವರ ಅಂಶ. ಮನುಷ್ಯ ಈ ಸತ್ಯ ವರಿತು, ದೇವರಲ್ಲಿ ಸಂಪೂರ್ಣ ಶರಣಾಗತನಾಗಿ ಬಾಳಬೇಕು. ಪ್ರಾರ್ಥನೆಯೇ ಮಾನವ – ದೇವರ ಸಂಬಂಧ ಸೇತು. ಶ್ರದ್ಧೆಯೇ ಭಕ್ತಿ.

ಅರುಣಾಚಲದ ಭಗವಾನ್ ಶ್ರೀರಮಣರು ಹೇಳುವಂತೆ 'ಅಹಂ' ಎಂಬುದೇ ಎಲ್ಲ ಸಮಸ್ಯೆಗಳ ಮೂಲ. ಅದು ಅಳಿದರೆ ಅಖಂಡ ತತ್ವದ ಸಾಕ್ಷಾತ್ಕಾರ. ದೇಹ ಮತ್ತು ಮನಸ್ಸುಗಳ ಪರಿಶುದ್ಧತೆಯಿಂದ ಆತ್ಮ ಸ್ವರೂಪದ ಅರಿವಾಗುತ್ತದೆ. ಅನಂತ ಆನಂದ ಪ್ರಾಪ್ತವಾಗುತ್ತದೆ. ಇದೇ ಮುಕ್ತಿ 'ಭಗವಂತನ ಸಾಕ್ಷಾತ್ಕಾರ' ಮತ್ತು 'ಸಾಧಕರಿಗೆ ಸಹಕಾರ'. ಇವೆರಡೂ ಜಮಖಂಡಿಯ ಶ್ರೀ ಗುರುದೇವ ರಾನಡೆಯವರು ಕಂಡು ಕೊಂಡ ತತ್ವಗಳು. ಭಗವಂತನನ್ನು ಕುರಿತ ತೀವ್ರ ಹಂಬಲ, ಭಕ್ತಿ ಧ್ಯಾನಗಳ ದೃಢತೆಗಳು ಸಾಧಕನಿಗೆ ಅತ್ಯಗತ್ಯ ವೆನ್ನುತ್ತಾರೆ, ಶ್ರೀರಾನಡೆಯವರು.

ವೃತ್ತಿಯಲ್ಲಿ ವೈದ್ಯರೂ ಪ್ರವೃತ್ತಿಯಲ್ಲಿ ಭಕ್ತರೂ, 'ದಿವ್ಯ ಜೀವನ ಸಂಘ' ಹಾಗೂ 'ಯೋಗ ವೇದಾಂತ ಫಾರೆಸ್ಟ್ ಅಕಾಡೆಮಿ'ಯ ಸ್ಥಾಪಕರೂ ಆದ ಸ್ವಾಮಿ ಶಿವಾನಂದಸರಸ್ವತಿಯವರಿಗೆ ಆತ್ಮದ ಅರಿವು ಮುಖ್ಯ. ಭಕ್ತನ ಮೊರೆಯೇ ಪ್ರಾರ್ಥನೆ–ಅಂದರೆ ಏಕಾಗ್ರ ಮನಸ್ಸಿನಿಂದ ಭಗವಂತನಲ್ಲಿ ಒಂದಾಗುವಿಕೆ. ಪ್ರಾರ್ಥನೆ ಧರ್ಮದ ಹೃದಯಸಾರ. ಆದ್ದರಿಂದ 'ಬದುಕೇ ಒಂದು ದೀರ್ಘ ಪ್ರಾರ್ಥನೆಯಾಗಬೇಕು.' ಭಕ್ತಿ ಎನ್ನುವುದು ಗಾಢವಾದ ಅನುರಾಗ; ನಿಸ್ವಾರ್ಥಪ್ರೇಮ; ಶ್ರದ್ಧೆಯ ಅವಿರತಧಾರೆ. ಸಮರ್ಪಣೆ ನಂಬಿಕೆಗಳೇ ಭಕ್ತಿಗೆ ಮೂಲ ಎನ್ನುವರು.

ವಜ್ರೇಶ್ವರಿಯ ಸಂತ ನಿತ್ಯಾನಂದರ ಪ್ರಕಾರ ಎಲ್ಲರಲ್ಲೂ ತನ್ನನ್ನು ಕಾಣುವುದೇ ಮುಕ್ತಿ. ಭಕ್ತಿಯಿಂದ ಮಾತ್ರ ಬ್ರಹ್ಮವಿದ್ಯೆ ಸಾಧ್ಯ. ಶಾಂತಿ ಗಳಿಕೆಗಾಗಿ ಭಗವಂತನಿಗೆ ನಮ್ಮ ಮನಃಪೂರ್ವಕ ಭಕ್ತಿ ಪ್ರೇಮಗಳನ್ನು ಸಲ್ಲಿಸಬೇಕು. ಅದೇ ಪ್ರಾಮಾಣಿಕ ಪ್ರಾರ್ಥನೆ. ಆಸೆಯನ್ನು ಳಿಯುವುದೇ ಮುಕ್ತಿ. ಪರರ ಒಳಿತಿಗಾಗಿ ಕರ್ತವ್ಯ ಶ್ರದ್ಧೆ. ಶಿಸ್ತಿನ ಅರಿವು ಅತೀ ಮುಖ್ಯ.

ಮಹಾತ್ಮಗಾಂಧಿಯವರಿಗೆ ದೈಹಿಕ, ಮಾನಸಿಕ ದೌರ್ಬಲ್ಯಗಳಿಗೆಲ್ಲ ಭಗವಂತನ ಪ್ರಾರ್ಥನೆ ಒಂದು ಸಿದ್ಧೌಷಧ; ಒಂದು ಬಲವಾದ ಆಸರೆ. ಆತ್ಮದ ಉಸಿರೇ ಭಗವನ್ನಾಮಸ್ಮರಣೆ. ಮಾನವ ಕುಟುಂಬದ ಸೇವೆ ಮೋಕ್ಷಕ್ಕೆ ಸಾಧನ. ಸಕಲ ಮಾನವೀಯ ಕ್ಷೇತ್ರಗಳ ಸೇವೆಯಲ್ಲಿ ತೊಡಗಿ ಆತ್ಮಜ್ಞಾನವಿಕಾಸ, ಸಾಮಾಜಿಕ ಮೇಲ್ಮೆಗಳೆರಡನ್ನೂ ಸಾಧಿಸಬೇಕು. ವೈಯಕ್ತಿಕ ಮೋಕ್ಷದ ಆತಂಕದೊಂದಿಗೇ ಸಾಮಾಜಿಕ ಮೇಲ್ಮೆಯ ಕಳಕಳಿಯೂ ಇರಬೇಕು.

ಬ್ರಹ್ಮ-ಆತ್ಮರ ಏಕತೆಯೇ ಶಂಕರಾಚಾರ್ಯರ ದರ್ಶನ. ಈ ಅರಿವಿಗೆ ಜ್ಞಾನವೇ ಮಾರ್ಗ. ಅದಕ್ಕೆ ಚಿತ್ತಶುದ್ಧಿ ಅತ್ಯಗತ್ಯ. ಚಿತ್ತಶುದ್ಧಿಗೆ ಭಕ್ತಿ. ಕರ್ಮ, ವೈರಾಗ್ಯಪಥದ ಅವಲಂಬನೆ ಬೇಕು. ಭಗವಂತನ ಪಾದಗಳಲ್ಲಿ ಭಕ್ತನ ಮನಸ್ಸಿನ ತಲ್ಲೀನತೆಯೇ ಭಕ್ತಿ. ಫಲ-ಶಾಂತಿ ಮತ್ತು ಆನಂದ. ರಾಮಾನುಜಾಚಾರ್ಯರ ಪ್ರಕಾರ ಜೀವಾತ್ಮರು ಭಗವಂತನಿಂದ ಭಿನ್ನರು. ಭಗವಂತನಲ್ಲಿ ಪ್ರಪತ್ತಿ ಅಥವಾ ಸಂಪೂರ್ಣ ಶರಣಾಗತಿಯೆ ಮೋಕ್ಷಕ್ಕೆ ಸಾಧನ. ಭಕ್ತಿಯಿಂದ ಭಗವಂತನನ್ನು ಕುರಿತ ಈ ಅರಿವು ಉಂಟಾಗುತ್ತದೆ. ಭಗವಂತನಲ್ಲಿ ಪ್ರೀತಿಪೂರ್ವಕವಾದ ಧ್ಯಾನವೇ ಭಕ್ತಿ. ಭಗವಂತನನ್ನು ಕುರಿತ ನಿರಂತರ ಚಿಂತನೆಯೇ ಭಕ್ತಿ. ನಿತ್ಯಾನಂದವೇ ಭಕ್ತಿಯ ಗುರಿ. ರಾಮಾನುಜರ ಶಿಷ್ಯರಾದ ಶ್ರೀ ವೇದಾಂತದೇಶಿಕರದೂ ಇದೇ ನಿಲುವು. ಭಗವದನುಗ್ರಹಕ್ಕೆ, ಪ್ರಾಪಂಚಿಕ ಸುಖಗಳಿಂದ ಬಿಡುಗಡೆಗೆ ಪ್ರಾರ್ಥನೆ ಒಂದು ಸಿದ್ಧೌಷಧ. ಭಗವಂತನೊಡನೆ ಸೇರಬೇಕೆನ್ನುವ ಉತ್ಕಟ ಹಂಬಲವೇ ಭಕ್ತಿ.

ರಾಮಾನುಜರಿಗಿಂತ ಹಿಂದಿನ ವೈಷ್ಣವ ಸಂತರಲ್ಲಿ ಆಂಡಾಳ್ ಒಬ್ಬಳು. ಮಧುರಭಕ್ತಿಯ ಸಾಧಕಿ. ಭಗವಂತನ ದಯೆಗಾಗಿ ಅವನ ಸಾನ್ನಿಧ್ಯ, ಸೇವೆ, ಸಾಕ್ಷಾತ್ಕಾರದ ಆನಂದಗಳಿಗಾಗಿ ಆಕೆಯ ಪ್ರಾರ್ಥನೆ. ಸಮರ್ಪಣಭಾವಕ್ಕೆ ಒತ್ತುಕೊಡುವ ಇನ್ನೊಂದು ಭಕ್ತಚೇತನ ಗುಜರಾತಿನ ನರಸಿಂಹ ಭಗತ್. ಸದಾಚಾರ ಸಂಪನ್ನನೇ ಭಕ್ತ; ಅಂತಹ ಭಕ್ತನ ದರ್ಶನವೇ ಮಹಾಭಾಗ್ಯವೆನ್ನುತ್ತಾರವರು.

ಭಗವಂತನ ಕೃಪೆ, ಕರುಣೆಗಳಿಗೆ ಹಾತೊರೆದ ಮತ್ತೊಂದು ಜೀವ ಬಂಗಾಲದ ಚೈತನ್ಯಪ್ರಭು. ಕೃಷ್ಣನಲ್ಲಿ ನಂಬಿಕೆಯೇ ಭಕ್ತಿ. ಪ್ರೇಮದ ಮೂಲಕವೇ ಅವನ ಸಾಕ್ಷಾತ್ಕಾರ ಸಾಧ್ಯ. ಅಹಂ ಅಳಿಯಬೇಕು. ನಮ್ರತೆ, ತಾಳ್ಮೆಗಳು ಬಲಿಯಬೇಕು. 'ಸರ್ವೇಶ್ವರನ ಭಕ್ತಿ-ಭಜನೆಗಳಿಂದಲೇ ಮಾನವಜನ್ಮದ ಸಾರ್ಥಕತೆ' – ಎನ್ನುತ್ತಾರೆ, ಗುಜರಾತಿನ ಸಂತ ಶ್ರೀಧರ ಸ್ವಾಮಿಗಳು. ದೇವರೊಡನೆ ಸಂಬಂಧ ಕಲ್ಪಿಸುವ ಸಮರ್ಥ ಮಾಧ್ಯಮ ಪ್ರಾರ್ಥನೆ. 'ಭಕ್ತಿ ಭಕ್ತನ ಮನೋಗತಿ'. 'ಭಗವದ್ ರತಿ'ಯೇ ಭಕ್ತಿಯ ಫಲವೆನ್ನುವರು ಬಾಂಗ್ಲಾದೇಶದ ಶ್ರೀ ಮಧುಸೂಧನ ಸರಸ್ವತಿಗಳು. ಭಗವದ್ರತಿಯೇ ಮಾನವನ ಪರಮ ಗುರಿ.

ಮಾನವ ತನ್ನ ವಿಚಾರ, ವಾಕ್ಕು ಮತ್ತು ಕೃತಿಗಳನ್ನು ಭಗವದರ್ಪಣೆ ಮಾಡುವುದೇ ಭಕ್ತಿಮಾರ್ಗ. ಶುದ್ಧ ಚಾರಿತ್ರ್ಯ, ಪ್ರಾರ್ಥನಾ ಪ್ರಾಮಾಣಿಕತೆಗಳೇ ಭಕ್ತಿಮಾರ್ಗದ ಬಂಡವಾಳ. ವೈಯಕ್ತಿಕ ಸ್ವಾರ್ಥಪರ ಆಸೆಗಳನ್ನು ತ್ಯಜಿಸಬೇಕು. ಜಾತಿ ಮತ ಪಂಥಗಳಿಗಿಂತ ಭಕ್ತಿಮುಖ್ಯ. 'ಪರಸೇವೆಯೇ ಪರಮಾತ್ಮನ ಸೇವೆ. ಭಕ್ತನ ಪ್ರಾರ್ಥನೆಗೆ ಮುಕ್ತಿಯೇ ಅಂತ್ಯ' – ಇದು ಕರ್ನಾಟಕದ ಸಂತ ಕನಕದಾಸರ ವಿಚಾರಸರಣಿ. ಪುಣೆಯ ಬಳಿಯ ಆಳಂದಿಯಲ್ಲಿ ಜನಿಸಿದ ಸಂತ ಜ್ಞಾನೇಶ್ವರರ ಪ್ರಕಾರ ಪ್ರಾರ್ಥನೆಯೇ ತಪಸ್ಸು. ಭಕ್ತಿಮಾರ್ಗ ಇತರ ಮಾರ್ಗಗಳಿಗಿಂತ ಭಿನ್ನ ಹಾಗೂ ಸತ್ವಯುತ. ಜಗತ್ತಿನ ದುಃಖ ಪರಿಹಾರಕ್ಕೆ ಪ್ರಾರ್ಥನೆ ಒಂದು ಮಾಧ್ಯಮ. 'ಭಕ್ತಿಯ ಅತ್ಯುನ್ನತ ಸ್ಥಿತಿಯಲ್ಲಿ ಭಕ್ತ ಭಗವಂತನೊಂದಿಗೆ ಒಂದಾಗುತ್ತಾನೆ'. ಭಕ್ತನಿಗೆ ಎಲ್ಲ ಜೀವಿಗಳೂ ಸಮಾನರು. 'ದೇವರ ನಾಮಸ್ಮರಣೆ ಮನುಷ್ಯನ ನೆಮ್ಮದಿಗೆ ಹಾದಿ ಮಾಡಿಕೊಡುತ್ತದೆ'ನ್ನುತ್ತಾರೆ ಸಂತ ತುಕಾರಾಮರು. ಲೋಕ ಕಲ್ಯಾಣವೇ ಭಕ್ತರ ಚಿಂತೆ. ನಾಮಜಪವೇ ಮುಕ್ತಿಗೊಯ್ಯುವ ದಾರಿ. ಚಿನ್ನ, ಮಣ್ಣು ಎರಡೂ ಭಕ್ತನ ದೃಷ್ಟಿಯಲ್ಲಿ ಒಂದೇ.

ಮಾನವನ ಎಲ್ಲ ಅಸುಖಗಳಿಗೆ ದೈವ ವಿರಹವೇ ಕಾರಣ ಎಂದು ಗುರುತಿಸಿದ್ದಾರೆ, ಔರಂಗಾಬಾದಿನ ಸಮರ್ಥ ರಾಮದಾಸರು. ಭಗವದ್ಕೃಪೆಗಳಿಸುವತ್ತ ನಮ್ಮೆಲ್ಲ ಶಕ್ತಿಗಳೂ ಕೇಂದ್ರೀಕೃತವಾಗಬೇಕು. ಅವನ ಚರಣಕಮಲಗಳ ಆಶ್ರಯದಲ್ಲೇ ಮುಕ್ತಿ ಲಭಿಸುವುದು. ಸಂಪೂರ್ಣ ಶರಣಾಗತಿಯೊಂದೇ ಮುಕ್ತಿಯ ಸಾಧನ. ಆಗ್ರಾದ ಸೂರದಾಸರ ಪ್ರಕಾರ ನಮ್ಮ ದೌರ್ಬಲ್ಯಗಳ, ಚಾಪಲ್ಯಗಳ, ಇತಿಮಿತಿಗಳ ಅರಿವು ನಮ್ಮನ್ನು ಭಕ್ತಿಯ ಹಾದಿಗೆ ಹಚ್ಚುತ್ತದೆ. ದೈವಶಕ್ತಿಯ ಬಗೆಗಿನ ಪೂರ್ಣ ನಂಬಿಕೆ ಹಾಗೂ ಭಕ್ತಿ ಮಾತ್ರವೇ ಶಾಶ್ವತ ಶಾಂತಿಗೆ ಸಾಧನ.

ಭಗವಂತನ ಏಕತೆ, ಸರ್ವಮಾನವರ ಭ್ರಾತೃತ್ವ – ಇವು ಸಂತ ಗುರುನಾನಕರ ಬೋಧನೆಗಳು. ಭಗವಂತನ ಕರುಣೆಗಾಗಿ ಪ್ರಾರ್ಥನೆ ಮಾಡಬೇಕು. ನಡೆನುಡಿಗಳಲ್ಲಿನ ಸಾಮರಸ್ಯ, ಪರಿಶುದ್ಧ ಜೀವನ ಮಾನವನ ಅತ್ಯುನ್ನತ ಗುರಿ. ಜೋಧಪುರದ ಮೀರಾ ಮತ್ತೊಬ್ಬ ಮಧುರಭಕ್ತಿಯ ಸಾಧಕಳು ಸಂಪೂರ್ಣ ಶರಣಾಗತಿಯಿಂದ ಭಗವದ್ಕೃಪೆಯನ್ನು ಗಳಿಸಿಕೊಂಡವಳು. ಮನುಷ್ಯ ಮನುಷ್ಯನಾಗಿ ಬಾಳಬೇಕೆಂಬುದು ಅಕ್ಕಮಹಾದೇವಿಯ ಕರೆ.

ಬಸವಣ್ಣನವರ ಲೌಕಿಕ, ಆಧ್ಯಾತ್ಮಿಕ, ಆರ್ಥಿಕ, ಸಾಮಾಜಿಕ ಕ್ರಾಂತಿಯಲ್ಲಿ ತನ್ನನ್ನು ತೊಡಗಿಸಿಕೊಂಡ ಮಹಾಚೇತನ ಅಕ್ಕ. ಭಕ್ತಿಯ ಮೂಲಕ ಮಾನವ-ದೇವರ ಸಂಬಂಧ, ಬದುಕಿನ ಗುರಿ, ಸದಾಚಾರಗಳನ್ನು ಕುರಿತು ಹೇಳಿದ್ದಾಳೆ.

ಮಾನವೀಯತೆ, ನೀತಿಸಂಹಿತೆ, ಸದಾಚಾರಗಳಿಗೆ ಒತ್ತುಕೊಟ್ಟಂತಹ ಇನ್ನೊಂದು ಹಿರಿಯ ಚೇತನ ಕರ್ನಾಟಕದ ಪುರಂದರದಾಸರು. ಅಚಲವಾದ ಭಕ್ತಿಯೇ ಅವರಿಗೆ ಮುಖ್ಯ. 'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ' – ಇದು ಭಗವಂತನಲ್ಲಿ ಅವರ ಶ್ರದ್ಧೆ. ಆಸ್ತಿವಂತನು ಎಂದಿಗೂ ಧಾರ್ಮಿಕನಾಗಲಾರ: ಮನಸ್ಸು, ಶರೀರಗಳು ಸದಾ ಮಡಿಯಾಗಿರಬೇಕು – ಇದು ಅವರ ನಂಬಿಕೆ.

ಭಗವದ್ಭಕ್ತಿಯನ್ನು ದೇಶಭಕ್ತಿಯಾಗಿ ಪರಿಭಾಷಿಸಿದ ಸಂತರು ಪಂಜಾಬಿನ ಸ್ವಾಮಿ ರಾಮತೀರ್ಥರು. ವ್ಯಕ್ತಿ ಸಮಷ್ಟಿಯಲ್ಲಿ ಒಂದು. ವ್ಯಕ್ತಿಯನ್ನು ದೇಶದಿಂದ ಬೇರೆಗೊಳಿಸಬಾರದು - ಇದು ಅವರ ತತ್ತ್ವ. ಒಬ್ಬ ಮಾನವನ ಶರೀರದ ನರನರಗಳಲ್ಲಿಯೂ ಸಮಸ್ತ ದೇಶವೂ ಒಂದೇ ಎಂಬ ಭಾವನೆಯು ಮಿಡಿದಹೊರತು ಸರ್ವಾಂತರ್ಯಾಮಿಯಾದ ದೇವರೊಂದಿಗೆ ಅವನು ಎಂದೆಂದಿಗೂ ಸಾಯುಜ್ಯವನ್ನು ಪಡೆಯಲಾರ – ಇದು ಅವರ ಕಾಣ್ಕೆ.

ಮನುಷ್ಯನ ಶಾಶ್ವತ ಆನಂದ ಯಾವುದೇ ವಸ್ತುವನ್ನು ಪಡೆಯುವುದರಲ್ಲಿಲ್ಲ; ತನಗಿಂತ ಉನ್ನತವಾದುದಕ್ಕೆ ತನ್ನನ್ನೇ ಅರ್ಪಿಸಿಕೊಳ್ಳುವುದರಲ್ಲಿದೆ. ಅದು ತನ್ನ ದೇಶವಾಗಿರಬಹುದು, ಭಗವಂತನಾಗಿರಬಹುದು – ಇದು ರವೀಂದ್ರನಾಥ ಠಾಕೂರರ ದರ್ಶನ. ಪ್ರೇಮದಿಂದ ಭಗವಂತನನ್ನರಿಯಬಹುದು. ದೇಹವೇ ದೇವಮಂದಿರ. ಅದನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು.

ಉತ್ತರ ಭಾರತದ ಸಂತ ಕಬೀರರಿಗೆ ಭಕ್ತ ಭಗವಂತನಿಗಿಂತ ದೊಡ್ಡವನು. ಐಹಿಕ ಸುಖೋಪಭೋಗಗಳ ನಶ್ವರತೆ ಮನವರಿಕೆಯಾದರೆ ಮಾತ್ರ ಭಗವದ್ಭಕ್ತಿ ಹುಟ್ಟಿ ಬೆಳೆಯುವುದು. ಭಕ್ತಿ ಸಾಧನೆಗೆ ಪರಿಶುದ್ಧ ಮನಸ್ಸು ಅತ್ಯಗತ್ಯ. ಅಹಂಕಾರ ನಿರಸನವಾದರೇ ಭಕ್ತಿ ಸಾಧ್ಯ. ಇವರ ಪ್ರಕಾರ ಬ್ರಹ್ಮೈಕ್ಯವೇ ಜೀವನಗುರಿ.

ಭಕ್ತಿ ಪ್ರೇಮಗಳ ಪ್ರಾರ್ಥನಾರೂಪವಾದ ಕೀರ್ತನೆ ನಮ್ಮನ್ನು ಭಗವಂತನತ್ತ ಕೊಂಡೊಯ್ಯಬಲ್ಲುದು ಎಂದು ನಂಬಿದವರು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳು. ಶ್ರದ್ಧೆ, ಭಕ್ತಿಗಳಲ್ಲಿ ಅಪಾರ ನಂಬಿಕೆ ಅವರದು. ಭಗವಂತನಲ್ಲಿ ಸಂಪೂರ್ಣ ಶರಣಾಗಿ ಅವನ ಕರುಣೆಯನ್ನು ಕೋರಿ ಪಡೆದವರಿವರು. ದೇವರನ್ನು ಒಲಿಸುವುದೇ ಜೀವನ ಗುರಿಯಾಗಬೇಕು; ಅದೇ ಭಕ್ತಿಮಾರ್ಗ.

ದ್ವೈತತತ್ತ್ವ ಪ್ರತಿಪಾದಕರಾದ ಮಧ್ವಾಚಾರ್ಯರು ಭಕ್ತಿಗೆ ಪರಮೋಚ್ಚ ಸ್ಥಾನವನ್ನಿತ್ತಿದ್ದಾರೆ. ಸಂಸಾರದಿಂದ ಬಿಡುಗಡೆ ಪಡೆಯಬಯಸುವ ಜೀವರಿಗೆ ಭಕ್ತಿಯೇ ಸಾಧನ. ಭಕ್ತಿಯನ್ನೂ ಕರ್ಮನಿಷ್ಠೆಯನ್ನೂ ಜೊತೆಜೊತೆಯಾಗಿ ಸಾಧಿಸಬೇಕೆನ್ನುತ್ತಾರೆ. ಭಕ್ತಿಯೆಂದರೆ ದೃಢವಾದ ಸ್ನೇಹ. ಐಹಿಕ ಹಾಗೂ ಪಾರಲೌಕಿಕ ಜೀವನಗಳೆರಡರಲ್ಲೂ ಭಕ್ತಿ ಅನಿವಾರ್ಯ. ಅದೇ ಸುಖಶಾಂತಿಗಳ ಮೂಲ.

ಮನಸ್ಸನ್ನು ಹಿಡಿತದಲ್ಲಿಡಲು, ಪರಿಶುದ್ಧವಾಗಿಡಲು ಭಕ್ತಿ ಅಗತ್ಯವೆಂಬುದು ಉತ್ತರ ಭಾರತದ ಸಂತ ತುಲಸೀದಾಸರ ಭಾವನೆ, ಭಕ್ತಿ ಸಾಧನೆಯಿಂದ ಮನಶ್ಶಾಂತಿ ಸಾಧ್ಯ. 'ವ್ಯಕ್ತಿಗತ ಜೀವನದಲ್ಲಿ ನೈತಿಕತೆಯನ್ನು ರೂಪಿಸಲು ಭಕ್ತಿ ಸಹಾಯಕವಾಗುತ್ತದೆ'. ಪರಮಾತ್ಮನ ಸಾನ್ನಿಧ್ಯ ಭಕ್ತಿಯಿಂದ ಮಾತ್ರ ಲಭ್ಯ - ಇದು ಅವರ ವಿಚಾರಸರಣಿ.

'ಸಹೋದರಂ ಸರ್ವತ್ರ' – ಇದು ಸಂತ ನಾರಾಯಣ ಗುರುಗಳ ಸಿದ್ಧಿ. 'ಮಾನವ ಕುಲವೊಂದೇ ಮಾನವ ಮತವೊಂದೇ' ಎಂಬುದು ಅವರ ಸಂದೇಶ. ಪ್ರಸಾದ, ಕರುಣೆ, ಪ್ರೇಮಗಳೇ ಮೂಲಮಂತ್ರಗಳೆನ್ನುವ ಅವರು ಭಗವತ್ಕೃಪೆಯನ್ನು ಯಾಚಿಸಿದ್ದಾರೆ. ಸರ್ವ ಸಮರ್ಪಣ ಭಾವವೇ ಭಕ್ತಿಯ ಮೊದಲ ಮೆಟ್ಟಿಲು: ಇಡೀ ಬದುಕನ್ನೇ ಭಗವಂತನ ಪೂಜೆಯಾಗಿ ಪರಿಭಾವಿಸಿದಲ್ಲಿ ಭಗವತ್ಕೃಪೆ ದೊರಕುತ್ತದೆನ್ನುತ್ತಾರೆ, ಮಾನ್ವಿಯ ಜಗನ್ನಾಥದಾಸರು. ಜಯತೀರ್ಥರ ಪ್ರಕಾರ ಭಗವಂತನತ್ತ ಹರಿಯುವ ನಿರಂತರ ಪ್ರೇಮ ಪ್ರವಾಹವೇ ಭಕ್ತಿ. ಭಕ್ತಿಜ್ಞಾನಗಳೆರಡೂ ಪರಸ್ಪರಾವಲಂಬಿಗಳು. ಭಕ್ತಿ ಸಾಧನೆಯಲ್ಲಿ ಪಂಚಭೇದಗಳ ಅರಿವು ಮುಖ್ಯ.

ಭಗವದ್ವಿಷಯಕ ಪ್ರೇಮವೇ ಭಕ್ತಿ; ಅದು ಭಗವಂತನ ಕರುಣೆಗೆ ಹಂಬಲಿಸುವ ಪ್ರತಿಯೊಂದು ಆತ್ಮದ ಆಂತರಿಕ ಗುಣ. ನಾಮ ಸಂಕೀರ್ತನೆಯೇ ಈ ಭಕ್ತಿಯ ಸೋಪಾನವೆನ್ನುತ್ತಾರೆ, ಸೋದೆಯ ಶ್ರೀ ವಾದಿರಾಜ ಸ್ವಾಮಿಗಳು.

ಬಸವಣ್ಣನವರಿಗೆ ಭಗವಂತನೇ ಅಂತಿಮ ಸತ್ಯ. ನಮ್ಮ ಭಕ್ತಿ ಚೊಕ್ಕವಾಗಿದ್ದಲ್ಲಿ ಅವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಭಕ್ತಿಗೆ ಮನಸ್ಸು, ಶ್ರದ್ಧೆಗಳು ಅತ್ಯಗತ್ಯ. ಪ್ರಾರ್ಥನೆ ಸಿದ್ಧಿಯೆಡೆಗೊಯ್ಯುವ ಸಾಧನ. ಪರಮಪುರುಷನನ್ನು ಪಡೆಯಲು ಭಕ್ತಿಯೊಂದೇ ದಾರಿ.

ಭಾರತದ ಸಂತರ ಈ ಕ್ರೋಢೀಕೃತ ಅಭಿಪ್ರಾಯಗಳನ್ನು ಗಮನಿಸಿದಾಗ ದೇಶಕಾಲಗಳ ವ್ಯತ್ಯಾಸವಿದ್ದರೂ ಭಾಷೆ ಪ್ರಕಾರಗಳಲ್ಲಿ ಭಿನ್ನತೆಯಿದ್ದರೂ ಮೂಲಭೂತವಾದ ಪ್ರೇರಕಶಕ್ತಿ ಭಕ್ತಿಯೊಂದೇ ಎಂಬುದನ್ನು ಮನಗಾಣಬಹುದು. ಸರ್ವಸಮರ್ಪಣಭಾವ; ಅಂತರಂಗ ಬಹಿರಂಗ ಶುದ್ಧಿಗಳು, ನಡೆನುಡಿಗಳಲ್ಲಿ ಏಕತೆ, ಶ್ರದ್ಧೆ, ಶಿಸ್ತು –ಈ

ಗುಣಗಳು ಸರ್ವ ಸಂತರಿಗೂ ಅಪೇಕ್ಷಣೀಯ. ಭಗವತ್ಪ್ರಸಾದ, ಭಗವದನುಗ್ರಹಗಳ ಹಂಬಲ ಎಲ್ಲರಲ್ಲಿಯೂ ಇದೆ. ತ್ಯಾಗ, ವೈರಾಗ್ಯ ಮನೋಭಾವಗಳನ್ನು ಇವರೆಲ್ಲರೂ ಒಂದಿಲ್ಲೊಂದು ರೀತಿಯಲ್ಲಿ ಬೋಧಿಸಿದ್ದಾರೆ. 'ಸರ್ವೇಜನಾಃ ಸುಖಿನೋ ಭವಂತು' ಎಂಬುದೇ ಈ ಎಲ್ಲ ಸಂತರ ಸಾಮಾಜಿಕ ಕಳಕಳಿಯ ಮೂಲಮಂತ್ರ. ಋಜುತ್ವ, ಕರ್ತವ್ಯ ನಿಷ್ಠೆ, ನಮ್ರತೆ, ತಾಳ್ಮೆ, ನಿಸ್ವಾರ್ಥತೆ, ಸಂಯಮ ಇತ್ಯಾದಿ ಸದ್ಗುಣಗಳು ಭಕ್ತನಾದವನಿಗೆ ಅತ್ಯಗತ್ಯವೆಂಬುದು ಸಂತರೆಲ್ಲರ ಏಕಾಭಿಪ್ರಾಯ. ಈ ಸದ್ಗುಣಗಳು ಅವರನ್ನು ಸದಾಚಾರಸಂಪನ್ನರಾಗಿ ಮಾಡಿ ಪರಿಶುದ್ಧ ಬಾಳ್ವೆಗೆ ದಾರಿ ಮಾಡಿಕೊಡುತ್ತವೆ. ಮನಸ್ಸು ವಿಶಾಲವಾಗುತ್ತದೆ; ಶಾಂತಿ ಸಮಾಧಾನಗಳು ದೊರಕುತ್ತವೆ.

ಪುಸ್ತಕದ ಪೀಠಿಕೆಯಲ್ಲಿ 'ಪುಸ್ತಕದ ಲೇಖನಗಳು ಚಿಕ್ಕವಾಗಿರುವುದರಿಂದ ಪ್ರತಿದಿನ ರಾತ್ರಿ ಮಲಗುವ ಮುನ್ನ ಒಂದೋ ಎರಡೋ ಲೇಖನಗಳನ್ನೋದಿದರೆ ಮನಸ್ಸಿನ ಮೇಲೆ ಸುಖಕರವಾದ ಪರಿಣಾಮವುಂಟಾಗುತ್ತದೆ. ಅಷ್ಟಾದರೆ ನಾವು ಪಟ್ಟ ಶ್ರಮ ಸಾರ್ಥಕ' ಎನ್ನುತ್ತಾರೆ, ಸಂಪಾದಕರು. ನಿಜವಾಗಿಯೂ ಅವರ ಶ್ರಮ ಸಾರ್ಥಕವಾಗಿದೆ. ಸಾತ್ವಿಕ ಚೇತನಗಳ ಸನ್ನಡತೆ, ಸೂಕ್ತಿಗಳನ್ನೂ ಅವರ ಆತಂಕ ಕಳಕಳಿಗಳನ್ನೂ ಹೀಗೆ ಕ್ರೋಢೀಕರಿಸಿ ಓದಿದಾಗ ಮನಸ್ಸಿನ ಮೇಲೆ ಅದರ ಪರಿಣಾಮ ಅಗಾಧ. ಕೊನೆಯಪಕ್ಷ ನಮಗೆ ಒಳ್ಳೆಯ ಬಾಳನ್ನು ಬಾಳಬೇಕೆಂಬ ಬಯಕೆಯಾದರೂ ಬಂದೀತು. ಈ ದೃಷ್ಟಿಯಿಂದ 'ಅಂಜಲಿ'ಯ ಪ್ರಸ್ತುತತೆ ಚಿರಂತನವಾದುದು. ಭಕ್ತಿಯ ಸಂಕೇತವೇ ಗ್ರಂಥದ ಶೀರ್ಷಿಕೆಯಾಗಿ ಬಂದಿರುವುದು ಸಂಪಾದಕರ ಪ್ರತಿಭೆಗೆ ನಿದರ್ಶನ.

ಆದರೆ, ನಲವತ್ತು ಲೇಖಕರಿಂದ ಬರೆಸಲಾಗಿರುವ ಇಲ್ಲಿಯ ಲೇಖನಗಳ ಜೋಡಣೆಯಲ್ಲಿ ಯಾವುದೇ ಒಂದು ವ್ಯವಸ್ಥಿತ ಕ್ರಮವಿದ್ದಂತಿಲ್ಲ. ಕಾಲಾನುಕ್ರಮವಾಗಿ ಅಥವಾ ಪ್ರಾದೇಶಿಕತೆಗನುಗುಣವಾಗಿ ಕೊನೇಪಕ್ಷ ಸೈದ್ಧಾಂತಿಕ ಬೆಳವಣಿಗೆಯ ದೃಷ್ಟಿಯಿಂದಲಾದರೂ ಜೋಡಿಸಬಹುದಾಗಿತ್ತು. ಇಂತಹ ಪುಸ್ತಕಕ್ಕೆ ಇದೊಂದು ಕೊರತೆಯೇ ಆಗಿದೆ, ಇರಲಿ. ಒಂದೊಂದು ಲೇಖನದಲ್ಲಿಯೂ 'ಕರಿಯನ್ನು ಕನ್ನಡಿಯಲ್ಲಿ ಹಿಡಿದು ತೋರಿಸುವ' ಲೇಖಕರ ಹಾಗೂ ಸಂಪಾದಕರ ಸಾಧನೆ, ಸಿದ್ಧಿಗಳು ಶ್ಲಾಘನೀಯ. ಈ ಗ್ರಂಥವನ್ನು ಇಡಿಯಾಗಿ ಕನ್ನಡಕ್ಕೆ ಭಾಷಾಂತರಿಸಿ ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀಭವನ ಅಚ್ಚು ಮಾಡಿರುವುದು ಪುಸ್ತಕದ ಘನತೆಗೆ, ಸತ್ವಕ್ಕೆ ಸಾಕ್ಷಿ.

---

೨೨. "ಗೋವಿಂದ ಪೈ ಬರೆದ ಪತ್ರಗಳು"

— ಸೀತಾರಾಮ ಜಾಗೀರ್‌ದಾರ್

ಇದು ಸರ್ವೋದಯ ಪ್ರಚಾರ ಪುಸ್ತಕ ಮಾಲೆಯು ಪ್ರಕಟಿಸಿದ ಕೃತಿ. ಮೂಲತಃ ಈ ಪತ್ರಗಳನ್ನು ಕುಂದಾಪುರದ ಭಂಡಾರ್ಕರ್ ಕಾಲೇಜಿನವರು ಪ್ರಕಟಿಸಿದ ಸ್ಮಾರಕ ಗ್ರಂಥ 'ಬೀಡಿಗೆ' ಇದರಲ್ಲಿ ಪ್ರೊ. ಕು. ಶಿ. ಹರಿದಾಸ ಭಟ್ಟರು ಸಂಗ್ರಹಿಸಿ ಬೆಳಕಿಗೆ ತಂದರು. ಕನ್ನಡದಲ್ಲಿ ಪತ್ರ ಸಾಹಿತ್ಯ ಈಗ ಸಾಕಷ್ಟು ಬೆಳೆದ ಪ್ರಕಾರ. ಪ್ರೊ. ಎ. ಎನ್. ಮೂರ್ತಿರಾಯರ "ಚಿತ್ರಗಳು – ಪತ್ರಗಳು" ಕೃತಿಗೆ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಕೂಡಾ ದೊರೆತಿದೆ. ವಿ. ಕೃ. ಗೋಕಾಕರ 'ಜೀವನ ಪಾಠಗಳು' (ವನಮಾಲಿಯ ಪತ್ರಗಳು) ಮುಂತಾಗಿ ಹಲವು ಬಗೆಯ ಪತ್ರ ಸಂಕಲನಗಳು ನಮ್ಮ ಕನ್ನಡದಲ್ಲಿ ಇವೆ. ಆ ಸಾಹಿತ್ಯಕ್ಕೆ ಪ್ರಸ್ತುತ "ಗೋವಿಂದ ಪೈ ಬರೆದ ಪತ್ರಗಳು" ಕೃತಿ ಒಂದು ಅಮೂಲ್ಯ ಸೇರ್ಪಡೆ. ಇದರ ಓರೆಕೋರೆಗಳ ಅರಿವು ಸ್ವತಃ ಪತ್ರಗಳನ್ನು ಸಂಗ್ರಹಿಸಿ ಪ್ರಕಟಿಸಿದ ಪ್ರೊ। ಕು. ಶಿ. ಹರಿದಾಸ ಭಟ್ಟರಿಗಿದೆ. ಆದುದರಿಂದ ಆ ಬಗೆಗೆ ಬರೆಯುವುದು ಅನವಶ್ಯಕ. ಪ್ರೊ। ಭಟ್ಟರು ಇವುಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಿಲ್ಲವೆಂದರೆ ಇವುಗಳನ್ನು ಸಹ ನೋಡುವ ಭಾಗ್ಯ ನಮಗಿರುತ್ತಿದ್ದಿಲ್ಲ. ಕಾರಣ ಇದಕ್ಕಾಗಿ ಪ್ರೊ। ಹರಿದಾಸ ಭಟ್ಟರನ್ನು ಕನ್ನಡ ಸಾರಸ್ವತಲೋಕ ಅಭಿನಂದಿಸಲೇ ಬೇಕು.

ಈ ಕೃತಿಯಲ್ಲಿ ಪೈಗಳ 50 ಪತ್ರಗಳಿವೆ. ಇವುಗಳಲ್ಲಿ 45 ಕನ್ನಡ ಹಾಗೂ 5 ಇಂಗ್ಲೀಷ್ ಭಾಷೆಗಳಲ್ಲಿವೆ. ಡಿ। ಎಸ್. ರಾಧಾಕೃಷ್ಣರ ಸಹಪಾಠಿಗಳಾದ ಅವರ ಇಂಗ್ಲೀಷ್ ಭಾಷೆಯೂ ಡಿಗ್ರಿಗಳನ್ನೇನೂ ಪಾಸಾಗದಿದ್ದರೂ ಸೊಗಸಾಗಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ಡಿ। ಗೋವಿಂದ ಪೈ ಅವರು ಹೊಸಗನ್ನಡ ಸಾಹಿತ್ಯವನ್ನು ಕಸಿಮಾಡಿ ಬೆಳೆಸಿದ ಆಚಾರ್ಯ ಪುರುಷರಲ್ಲೊಬ್ಬರು. ಹೀಗಾಗಿ ನಾಡಿನ ಅನೇಕ ಕಡೆಗಳಿಂದ ಅವರಿಗೆ ಆಹ್ವಾನಗಳು ಆಶೀರ್ವಾದ ಬಯಸಿ ಬೇಡಿಕೆಗಳು ಬರುತ್ತಿದ್ದವು. ಅವರದು ಮುಕ್ತ ಮನಸ್ಸು. ಪರರ ಸ್ತುತಿಮಾಡುವುದು, ಹೊಗಳುವುದು, ಪ್ರಶಂಸಿಸಿ ಪತ್ರ ಬರೆಯುವುದು – ಅದರಲ್ಲೂ ಒಂದು ಕಟ್ಟುನಿಟ್ಟು: ಅಚ್ಚುಕಟ್ಟು. ಗುರು ಹಿರಿಯರನ್ನು ಗೌರವಿಸುವುದೆಂದರೆ ಅದೊಂದು ಬಗೆಯ ಆರಾಧನೆ (ಪ. 5) ಅವರಿಗೆ.

ಗೋವಿಂದ ಪೈಗಳಿಗೆ ಅಕ್ಷರಿಕೆಯಲ್ಲಿ (Spelling) ದೋಷ ಇರಬಾರದು. ಅದು ಬರಹದಲ್ಲೂ ಇರಬಾರದು. ಅಚ್ಚಿನಲ್ಲೂ ಇರಬಾರದು. ಕಿರಿಯ ಸಾಹಿತಿಗಳು ಕಳಿಸಿಕೊಟ್ಟ ಕೃತಿಗಳನ್ನು ಓದಿ ತಿದ್ದಿ ತೀಡಿ ಹರಸಿ ಪತ್ರಗಳನ್ನು ಬರೆಯುತ್ತಿದ್ದರು. ಈ ಸಂಬಂಧದಲ್ಲಿ ಪೈಗಳು ಬೆಳಗಾವಿಯ ಬೈಲಹೊಂಗಲದ ಶ್ರೀ ಕ. ಮ. ಶಿ. ಚಂದ್ರಶೇಖರಯ್ಯನವರಿಗೆ ಬರೆದ ಪತ್ರವನ್ನು ನೋಡಬಹುದು. (ಪ. 27).

ಉದಾರಚರಿತರಾದ, ವಸುಧೆಯೆ ಕುಟುಂಬರಾದ, ಗೋವಿಂದ ಪೈಗಳಿಗೆ ಕನ್ನಡ ನಾಡೆಲ್ಲ ನಂಟರು. ಅವರ ಕಣ್ಣಿಗೆ ಕಿರಿಯರೂ ಅಷ್ಟೇ, ಹಿರಿಯರೂ ಅಷ್ಟೆ; ಯಾರ ಬಗ್ಗೆಯೂ ತುಚ್ಛ ದೃಷ್ಟಿ ಇದ್ದಿಲ್ಲ. ತಪ್ಪುಗಳನ್ನು ತಿದ್ದಿ ತೀಡಿ 'ಇನ್ನೂ ಮೇಲಾದ ಕೃತಿ ಬರಲಿ' ಎಂದೋ 'ಇಂತಹದೊಂದು ಗ್ರಂಥವನ್ನು ಕನ್ನಡಕ್ಕೆ ಇತ್ತಿರುವ ಬಗ್ಗೆ ನಿಮ್ಮನ್ನು ಅಭಿನಂದಿಸುತ್ತೇನೆ' ಎಂದೋ 'ನಿಮ್ಮ ಪುಸ್ತಕವನ್ನು ಓದಿ ನೋಡಿದೆ. ನಾಟಕಗಳೆಲ್ಲ, ಒಂದಕ್ಕಿಂತ ಒಂದು ಚಲೋದಾಗಿವೆ' ಎಂದೋ ಒಟ್ಟಾರೆ ಸದಭಿಪ್ರಾಯದ ನುಡಿಗಳನ್ನು ಬರೆಯುತ್ತಿದ್ದುದಾಗಿ ಕಂಡು ಬರುತ್ತದೆ. ಮುಗುಳಿನಲ್ಲೇ ಮುರಿದು ಹಾಕು (Nip at the bud) ಎಂಬ ಜಾಯಮಾನ ಅವರದಲ್ಲ. ನ್ಯೂನತೆಗಳನ್ನು ಸವರಿ ಸಸಿ ಬೆಳೆಸಿದವರು ಅವರು.

ಪ್ರಶಂಸೆ ಮಾಡುವ ದಿವಂಗತ ಪೈಗಳ ಮನಸ್ಸು ಅಷ್ಟೇ ದಾಕ್ಷಿಣ್ಯ ಪ್ರವೃತ್ತಿಯದಾಗಿತ್ತೆಂಬುದು ಅವರ ಪತ್ರಗಳಲ್ಲಿ ಕಂಡು ಬರುತ್ತದೆ. ಅಧ್ಯಕ್ಷ ಪದವೋ ಗ್ರಂಥಾರ್ಪಣವೋ, ಮಾನಪತ್ರ, ಸಮರ್ಪಣವೋ ಯಾವುದೇ ಇರಲಿ ಅವರು ಅದನ್ನು ತಪ್ಪಿಸಿಕೊಳ್ಳಲು ಇಷ್ಟಪಡುತ್ತಿದ್ದರು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನೂ ಅವರು ಸುಲಭದಲ್ಲಿ ಒಪ್ಪಲಿಲ್ಲ.

ಕನ್ನಡನಾಡು ಎಂದರೆ ಪೈಯವರಿಗೆ ಪಂಚಪ್ರಾಣ. ಅವರಿದ್ದ ಮಂಜೇಶ್ವರವನ್ನು ಹೊಂದಿದ ಕಾಸರಗೋಡು ತಾಲೂಕು 1-11-56ರಂದು ಕೇರಳ ರಾಜ್ಯಕ್ಕೆ ಹೋದಾಗ ಅವರಿಗೆ ಆದ ನೋವು ವರ್ಣನಾತೀತ. ಅವರ ಪಾಲಿಗೆ ಅದೊಂದು "ಘೋರವಾದ ಮಹಾದುರ್ದಿನ!!!" 'ಕೇರಳಕ್ಕೆ ಆಹುತಿಯಾಯಿತು' ಎಂದು ಮುಂತಾಗಿ

ಬರೆದರು. ಅಷ್ಟೇ ಅಲ್ಲ "Manjeshwar S. Kanara Mysore State" ಎಂದು ಬರೆದಾದರೂ ತಮ್ಮ ಛಲವನ್ನು ಮೆರೆದರು. (ಪ.49)

ಪ್ರೊ॥ ಕು.ಶಿ. ಹರಿದಾಸ ಭಟ್ಟರ ಈ ಕಿರುಸಂಗ್ರಹ ದಿವಂಗತ ಗೋವಿಂದ ಪೈ ಎಂಬ ದಿವ್ಯಚೇತನದ ಚರಿತ್ರೆಯನ್ನು ಅರಿತುಕೊಳ್ಳುವಲ್ಲಿ, ಆ ವ್ಯಕ್ತಿಯ ಅಂತರಾತ್ಮವನ್ನು ಅರ್ಥಮಾಡಿಕೊಳ್ಳುವಲ್ಲಿ ಒಂದು ಕೈಮರ ವಾಗಿದೆಯೆಂದರೆ ತಪ್ಪಲ್ಲ. ಪೈಗಳದು ಜಾಂಬಳಿ ರೇಖೆ, ಭಟ್ಟರದು ಜಲಚಿಪ್ಪೆಯ ಅಳಿಯದ ಜಲರೇಖೆ.

೨೩. ಸ್ವಾತಂತ್ರ್ಯಪೂರ್ವ ತುಳು ಸಾಹಿತ್ಯ

— ಆರ್. ರಾಮಕೃಷ್ಣ

ದಕ್ಷಿಣ ದ್ರಾವಿಡ ಭಾಷಾವರ್ಗಕ್ಕೆ ಸೇರಿರುವ ಭಾಷೆಗಳ ಪೈಕಿ ತುಳು ಭಾಷೆಯೂ ಒಂದು. ಲಿಪಿ ಕೊರತೆ, ಸಂವಹನ ಸಮಸ್ಯೆ, ಜನಪ್ರಿಯತೆಯ ದೃಷ್ಟಿ ಮುಂತಾದ ಕಾರಣಗಳಿಂದ ಅನೇಕ ಶತಮಾನಗಳ ಪರ್ಯಂತ ಕೇವಲ ಆಡುಭಾಷೆಯಾಗಿಯೇ ಉಳಿದುಬಂದ ತುಳು ಭಾಷೆಯ ಮಹತ್ವವನ್ನೂ ಅಗತ್ಯವನ್ನೂ ಮೊತ್ತಮೊದಲಿಗೆ ಕಂಡುಕೊಂಡವರು ಕ್ರೈಸ್ತ ಮಿಶನರಿಗಳು. 1834ರ ವೇಳೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಬಂದ ಕ್ರೈಸ್ತ ಮಿಶನರಿಗಳು ತಮ್ಮ ಮತ ಪ್ರಚಾರ ಮಾಡಲು ಕನ್ನಡ ಲಿಪಿಯನ್ನು ಬಳಸಿಕೊಂಡು ತುಳು ಭಾಷೆಯಲ್ಲಿ ಅನೇಕ ಪುಸ್ತಕಗಳನ್ನು ಬರೆದು, ಅಚ್ಚು ಹಾಕಿಸಿ ತುಳು ಲಿಖಿತ ಸಾಹಿತ್ಯಕ್ಕೆ ಶುಭನಾಂದಿ ಹಾಕಿದರು. ತರುವಾಯದ ದಿನಗಳಲ್ಲಿ ತುಳುವಿನಲ್ಲಿ ಗ್ರಂಥಸ್ಥ ಸಾಹಿತ್ಯ ನಿರ್ಮಾಣವಾಗತೊಡಗಿತು. ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಬಳಿಕ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯ ಆವೇಗದಲ್ಲಿ ದೇಶೀಯ ಭಾಷೆಗಳ ಕಡೆಗೆ ಗಮನಹರಿಯಲಿಲ್ಲ. ಆಧುನಿಕ ಶಿಕ್ಷಣ ಪಡೆದ ಜನ, ತಮ್ಮ ತಾಯ್ನುಡಿಯಲ್ಲಿ ಮಾತಾಡುವುದು ಬರೆಯುವುದು ತಮ್ಮ ಪ್ರತಿಷ್ಠೆಗೆ ಕುಂದನ್ನು ತರಬಹುದೆಂದು ಶಂಕಿಸಿದ ಕಾರಣ ಈ ಭಾಷೆಗಳಲ್ಲಿ ಸಾಹಿತ್ಯ ರಚನೆ ಸಾಧ್ಯವಾಗಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ತಾಯ್ನುಡಿಯ ಮೋಹ ಆವರಿಸುತ್ತಿರುವುದರಿಂದ ತಮ್ಮ ನುಡಿಯ ನಡೆಯ ಶಾಸ್ತ್ರೀಯ ಅಧ್ಯಯನಕ್ಕೆ ತೊಡಗುತ್ತಿರುವುದು ಸಂತಸದ ಸಂಗತಿ. ತುಳು ಭಾಷೆಯ ಸಂಸ್ಕೃತಿಯ ಪುನರುಜ್ಜೀವನದ ಈ ಸಂಧಿಕಾಲದಲ್ಲಿ ಗತಿಸಿದ ತುಳು ವೈಭವದ ಮೌಲ್ಯಮಾಪನ ಅವಶ್ಯಕವಾಗಿ ನಡೆಯಬೇಕಾದ ಕಾರ್ಯ. ಮುಂದಿನ ತುಳು ಭಾಷೆ ಸಾಹಿತ್ಯಗಳ ಗೊತ್ತುಗುರಿಗಳನ್ನು ನಿರ್ಧರಿಸುವ ಸಲುವಾಗಿ ಅದರ ಪ್ರಾಚೀನ ಸಾಹಿತ್ಯದ ಕಡೆಗೆ ಹೊರಳುವುದು ಅನಿವಾರ್ಯ.

ಪ್ರಸ್ತುತ ಪುಸ್ತಕ ತುಳುವ ದಿನಾಚರಣೆಯ (1981) ಸಂದರ್ಭದಲ್ಲಿ ಜರಗಿದ 'ಸ್ವಾತಂತ್ರ್ಯ ಪೂರ್ವ ತುಳು ರಚನೆಗಳು' ಎಂಬ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ (1982). ಇದರಲ್ಲಿ ತುಳುನಾಡು, ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಏಳು ಪ್ರಬಂಧಗಳಿವೆ. ಇವು ತುಳುಭಾಷೆ ಸಾಹಿತ್ಯಗಳ ಗತವೈಭವದ ಚಿತ್ರವನ್ನು ನೀಡುತ್ತವೆ. ಇವುಗಳ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

1. ಸ್ವಾತಂತ್ರ್ಯ ಪೂರ್ವದ ತುಳು ಸೃಜನ ಸಾಹಿತ್ಯ (ಡಾ॥ ಹೊಸಬೆಟ್ಟು ಸೀತಾರಾಮಾಚಾರ್ಯ) : ಈ ಲೇಖನದಲ್ಲಿ ತುಳು ನುಡಿಯ ಸ್ಥಿತಿ-ಗತಿ, ಸ್ವಾತಂತ್ರ್ಯಪೂರ್ವದ ತುಳು ಸಾಹಿತ್ಯಕೃಷಿ, ತುಳುವ ಸಾಹಿತ್ಯಮಾಲೆ – ಇವನ್ನು ಸಮರ್ಥವಾಗಿ ಪರಿಚಯಿಸಲಾಗಿದೆ. ಯಾವುದೇ ನುಡಿಯ ಸೇವೆ, ಬೆಳವಣಿಗೆ ಬರಿಯ ಮಮಕಾರದಿಂದಲೇ ನಡೆಯಲಾರದು. ವಸ್ತುನಿಷ್ಠವಾದ ಬಲವುಳ್ಳ ಯಾರಿಂದಲೂ ಚೆನ್ನಾಗಿ ನಡೆಯಬಲ್ಲುದು ಎನ್ನುವುದಕ್ಕೆ ತುಳು ಭಾಷಾಸಾಹಿತ್ಯ ವ್ಯವಸಾಯವೂ ಒಂದು ಉದಾಹರಣೆಯಾಗಿದೆ.

2. ಪೊಳಲಿ ಶೀನಪ್ಪ ಹೆಗ್ಗಡೆ ಅವರ ಎರಡು ಪುಸ್ತಕಗಳು (ಪಾ.ವೆಂ. ಆಚಾರ್ಯ) : ತುಳುನಾಡಿನ ಮತ್ತು ತುಳು ಸಾಹಿತ್ಯದ ಇತಿಹಾಸದಲ್ಲಿ ಸ್ಮರಣೀಯ ಹೆಸರೆಂದರೆ ದಿವಂಗತ ನಂದೊಳಿಕೆ ಅಮುಣಂಜೆಗುತ್ತು ಶೀನಪ್ಪ ಹೆಗ್ಗಡೆಯವರದು. ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಸಂಸ್ಕೃತಿಗಳ ಬಗ್ಗೆ ಕನ್ನಡದಲ್ಲಿಯೂ ತುಳುವಿನಲ್ಲಿಯೂ ಹೆಗ್ಗಡೆಯವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಮುಖ್ಯವಾಗಿ ತುಳುವಿನಲ್ಲಿ ಉತ್ತಮ ಸಾಹಿತ್ಯವನ್ನು ರಚಿಸಿ ಪ್ರಸಿದ್ಧಿ ಪಡೆದರು. ಶ್ರೀಯುತರು ಕನ್ನಡದಲ್ಲಿ ಬರೆದ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ', 'ಭೂತಾಳ ಪಾಂಡ್ಯರಾಯನ ಅಳಿಯಕಟ್ಟು' ಮತ್ತು ತುಳುಭಾಷೆಯ ಪ್ರಥಮ ಕಾದಂಬರಿ ಎನಿಸುವ 'ಮಿತ್ಯನಾರಾಯಣ ಕತೆ' – ಈ ಕೃತಿಗಳನ್ನು ಕುರಿತು ಲೇಖಕರು ವಿವೇಚಿಸಿದ್ದಾರೆ. ಹೆಗ್ಗಡೆಯವರು ತಮ್ಮ ಪುಸ್ತಕಗಳಲ್ಲಿ ಬಳಸಿರುವ ತುಳು ಪೊಳಲಿಯ ಸುತ್ತಣದ ನಡುನಾಡ ತುಳು. ಹೊರಗಿನ ಪ್ರಭಾವಗಳಿಗೆ ಹೆಚ್ಚು ಗುರಿಯಾಗದ ತಿರುಳುತುಳು. ಸಂಭಾಷಣೆಗಳಲ್ಲಿ ಲೇಖಕರು ತುಳುವಿನ ಬೇರೆ ಬೇರೆ ಪ್ರಾದೇಶಿಕ ಮತ್ತು ಜಾತೀಯ ಪ್ರಕಾರಗಳನ್ನು ಸಮರ್ಥವಾಗಿ ಬಳಸಿದ್ದಾರೆ. ಪೊಳಲಿ ತುಳುವಿನಲ್ಲಿರುವ ಸೂಕ್ಷ್ಮ ಶೈಲಿಭೇದಗಳಲ್ಲದೆ, ಆಗ್ನೇಯದ ತುಳುನಾಡಿನ ಹಕಾರಪ್ರಧಾನ ತುಳು, ವಿಶ್ವಕರ್ಮರ ತುಳು ಇಂಥ ಪ್ರಭೇದಗಳ ಪರಿಚಯವೂ ಎಲ್ಲ ಸ್ವಾಭಾವಿಕ ಸೊಗಡಿನೊಂದಿಗೆ ಕೃತಿಗಳಲ್ಲಿ ಪ್ರಯೋಗವಾಗಿದೆ. ನಡುನಡುವೆ ಬರುವ ನುಡಿಗಟ್ಟುಗಳು, ಗಾದೆಗಳು ಭಾಷೆಗೆ ಒಂದು ಅನುಪಮವಾದ ಅಥೆಂಟಿಸಿಟಿಯನ್ನು ಕೊಡುತ್ತವೆ.

3. ತುಳುವಿನ ಎರಡು ವ್ಯಾಕರಣ ಗ್ರಂಥಗಳು (ಡಾ॥ ಯು. ಪಿ. ಉಪಾಧ್ಯಾಯ) : ಈ ಲೇಖನದಲ್ಲಿ ಬ್ರಿಗೆಲ್ಲರ ತುಳು ವ್ಯಾಕರಣ-ಗ್ರ್ಯಾಮರ್ ಆಫ್ ದಿ ತುಳು ಲ್ಯಾಂಗ್ವೇಜ್ (1872) ಮತ್ತು ಎಸ್.ಯು. ಪಣಿಯಾಡಿ ಯವರ 'ತುಳು ವ್ಯಾಕರಣ' (1932) ಎಂಬ ಎರಡು ವ್ಯಾಕರಣ ಪುಸ್ತಕಗಳನ್ನು ಪರಿಚಯಿಸಲಾಗಿದೆ. ಅಲ್ಲದೇ ಈ ಎರಡೂ ಪುಸ್ತಕಗಳಲ್ಲಿಯ ಸಣ್ಣ ಪುಟ್ಟ ದೋಷಗಳನ್ನೂ ತಿಳಿಸಲಾಗಿದೆ. ಬ್ರಿಗೆಲ್ಲರು ಧಾತು ರೂಪಾವಳಿ ಹಾಗೂ ವಾಕ್ಯರಚನಾ ಪದ್ಧತಿಗಳ ನಿರೂಪಣೆಯಲ್ಲಿ ತಮ್ಮ ಜಾಣ್ಮೆ ತೋರಿಸಿದ್ದಾರೆ. ಪಣಿಯಾಡಿಯವರು ಧ್ವನಿ, ಸಂಧಿ, ಸಮಾಸ, ವಿಭಕ್ತಿಗಳ ನಿರೂಪಣೆ ಹಾಗೂ ಪ್ರಕೃತಿ ಪ್ರತ್ಯಯಗಳು ಸೇರುವಾಗ ನಡೆಯುವ ಮಾರ್ಪಾಡುಗಳ ಖಚಿತ ವಿಶ್ಲೇಷಣೆ ಮುಂತಾದ ವಿಚಾರಗಳಲ್ಲಿ ತಮ್ಮ ನೈಪುಣ್ಯ ತೋರಿಸಿದ್ದಾರೆ.

4. ಸ್ವಾತಂತ್ರ್ಯಪೂರ್ವ ತುಳುನಾಡಿನ ಇತಿಹಾಸ ಗ್ರಂಥಗಳು (ಡಾ॥ ಕೆ. ಜಿ. ವಸಂತಮಾಧವ): ಇದರಲ್ಲಿ ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟವಾದ ಕೆಲವು ಕೃತಿಗಳ ವೈಶಿಷ್ಟ್ಯವನ್ನು ತಿಳಿಸಿ ಅವುಗಳ ಸೂಕ್ಷ್ಮ ವಿಮರ್ಶೆಯನ್ನು ಮಾಡಲಾಗಿದೆ. ಪೊಳಲಿ ಶೀನಪ್ಪ ಹೆಗ್ಗಡೆಯವರ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ, ಭೂತಾಳಪಾಂಡ್ಯರಾಯನ ಅಳಿಯಕಟ್ಟು (1915); ಗಣಪತಿರಾವ್ ಐಗಳವರ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ (1922); ಮಂಜೇಶ್ವರ, ಚರಿತ್ರೆ ಮತ್ತು ಕಥೆಗಳು (1924); ಎಮ್. ಬಾಬು ಅವರ ಬಾರಕೂರು ಚರಿತ್ರೆ ಮತ್ತು ಕಥೆಗಳು; ಗೋವಿಂದ ಪೈ ಅವರ ವೇಣೂರಿನ ಶಿಲಾಶಾಸನಗಳು (1926); ಕೆ. ಶ್ರೀನಿವಾಸ ಕಣಿಯವರ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರಸಾರ (1927); ಫಾದರ್ ಹೆರಾಸರ ಅರವೀಡು ವಂಶ (1927); ಡಾ॥ ಜಿ.ಎಂ. ಮೋರೆಯಸ್ ಅವರ ಮಂಗಳೂರು (1927); ಶಾಸನ ಇಲಾಖೆಯ ತಜ್ಞರಾದ ಕೆ.ವಿ. ಸುಬ್ರಹ್ಮಣ್ಯಮ್ ಅವರ 'ಸೌತ್ ಇಂಡಿಯಾ ಇನ್‌ಸ್ಕ್ರಿಪ್ಷನ್ಸ್ – 7 (ಸಂಪಾದಿತ ಕೃತಿ)' (1932); ಡಾ॥ ಭಾಸ್ಕರ ಆನಂದ ಸಾಲೆತ್ತೂರ್ ಅವರ 'ಪ್ರಾಚೀನ ಕರ್ನಾಟಕ (ತುಳುವ ಚರಿತ್ರೆ–1936), ವಿಜಯನಗರದ ಮಧ್ಯಕಾಲೀನ ಜೈನಧರ್ಮ (1938); ಲೋಕನಾಥ ಶಾಸ್ತ್ರಿಯವರ ಮೂಡಬಿದ್ರೆ ಮತ್ತು ವೇಣೂರಿನ ಚರಿತ್ರೆ (1937, 1939) ಪ್ರಮುಖವಾದವು. 1940ರ ದಶಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅನೇಕ ಶಾಸನಗಳು ಬೆಳಕಿಗೆ ಬಂದವು. ಆದರೆ ಇತಿಹಾಸ ಸಂಶೋಧನೆಯಲ್ಲಿ ಹೆಚ್ಚಿನ ಪ್ರಗತಿಯಾಗಲಿಲ್ಲ.

5. ತುಳು ಪಾಡ್ದನಗಳಲ್ಲಿ ದುರಂತ ಪ್ರಣಯ (ಅಮೃತ ಸೋಮೇಶ್ವರ) : ತುಳು ಜನಪದ ಸಾಹಿತ್ಯದಲ್ಲಿ ಪ್ರಣಯದ ಅಸಂಖ್ಯ ಮುಖಗಳನ್ನು ಕಾಣಬಹುದು. ಸುಖಾಂತವಾದ ಒಲವಿನ ಒಗ್ಗಿನ ಕಥೆಗಳು ಇರುವಂತೆಯೇ ದುರಂತ ಗರ್ಭಿತ ಜಟಿಲ ಪ್ರಣಯ ಕಥೆಗಳೂ ಇವೆ. ಕುತೂಹಲದ ಅಂಶವೆಂದರೆ, ಆರಾಧಕರಿಗೆ ಅಭಯವನ್ನೂ ಆರಾಮವನ್ನೂ ಅನುಗ್ರಹಿಸುವ ಅನೇಕ ದೈವಗಳ ಪಾಡ್ದನಗಳಲ್ಲಿ ಮನಸ್ಸು ಕಲಕುವ ದುರಂತ ಘಟನೆಗಳು ಹಾಸುಹೊಕ್ಕಾಗಿವೆ. ಇಂಥ ದುರಂತಗಳಿಗೆ ಪ್ರಣಯ ಕಲಾಪವೇ ಮೂಲಕಾರಣ. ಮುಕಾಂಬಿ ಗುಳಿಗನ ಪಾಡ್ದನ, ಜುಮಾದಿ ದೈವದ ಪಾಡ್ದನ ಮುಂತಾದವನ್ನು ಲೇಖಕರು ಪರಿಚಯಿಸಿದ್ದಾರೆ. ದುರಂತ ಗರ್ಭಿತವಾದ ಪ್ರಣಯ ಕಥೆಗಳನ್ನು ಪಾಡ್ದನ ಕವಿಗಳು ಕೇವಲ ಚಪಲಕ್ಕೆಂದು ಬಣ್ಣಿಸಿದ ಹಾಗೆ ತೋರುವುದಿಲ್ಲ. ದುರಂತ ವಸ್ತುಗಳನ್ನು ಅವರು ಗಂಭೀರವಾಗಿ ಪರಿಗಣಿಸಿದಂತಿದೆ. ಅವರು ನಂಬಿದ ನೀತಿಯ ಚೌಕಟ್ಟಿನ ಹೊರ ಚಟುವಟಿಕೆಗಳನ್ನು ಅವರೆಂದಿಗೂ ಕ್ಷಮಿಸುವುದಿಲ್ಲ. ಅಕಾಲಿಕ, ವಿಕೃತ ಚಾಪಲ್ಯವನ್ನು ಅವರು ತೀಕ್ಷ್ಣವಾಗಿ ಖಂಡಿಸಿದ್ದಾರೆ. ಆದರೂ ಹಗುರವಾದ ಪ್ರೇಮಾಲಾಪಗಳನ್ನು ಜನಪದ ಕವಿಗಳು ಬಣ್ಣಿಸಿ ಹಾಡಿದ್ದಾರೆ. ಆದರೆ ಅವೆಲ್ಲ ಅವರ ನೀತಿ ಕಲ್ಪನೆಯ ಚೌಕಟ್ಟಿನೊಳಗೇ ಇರುವಂಥವು.

6. ತುಳು ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆ (ದೇವರಾಜ ಬಂಗೇರ) : ಸ್ವಾತಂತ್ರ್ಯಪೂರ್ವದಲ್ಲಿ ತುಳು ಸಾಹಿತ್ಯಕ್ಕೆ ಕ್ರೈಸ್ತರ ಕೊಡುಗೆಯನ್ನು ಕುರಿತು ಈ ಲೇಖನದಲ್ಲಿ ಸಮೀಕ್ಷಿಸಲಾಗಿದೆ. 19ನೆಯ ಮತ್ತು 20ನೆಯ ಶತಮಾನಗಳ ನಡುವೆ ಕ್ರೈಸ್ತರು ತುಳು ಸಾಹಿತ್ಯಕ್ಕೆ ನೀಡಿದ ಪ್ರಮುಖ ಕೊಡುಗೆಗಳಿವು : ತುಳು ಬೈಬಲ್ (ಹೊಸ ಒಡಂಬಡಿಕೆ) 27 ಪುಸ್ತಕಗಳು, ಕೀರ್ತನೆಗಳು (ಹಳೆ ಒಡಂಬಡಿಕೆ), ಉತ್ಪತ್ತಿ (ಹಳೆ ಒಡಂಬಡಿಕೆ), ತುಳುವಿನಲ್ಲಿ ಬೋಧನೆ, ತುಳು ಬೈಬಲ್ ಕಥೆಗಳು, ತುಳು ಸಂಗೀತಗಳು (210), ತುಳು-ಇಂಗ್ಲಿಷ್ ನಿಘಂಟು, ತುಳು ಪ್ರಾರ್ಥನೆಗಳು, ರತ್ನಮಾಲೆ – ತುಳು, ಐನೂರು ಗಾದೆಗಳು, ಮನೆಯ ಆದರ್ಶಗಳು, ಲೂಥರನ ಬೋಧನೆಗಳು, ತುಳು ವ್ಯಾಕರಣ ಇತ್ಯಾದಿ.

ಬ್ರದರ್ ಕೇಮರರ್ ಮತ್ತು ಬ್ರದರ್ ಅಮ್ಮನ್ ಎಂಬವರು ಬೈಬಲನ್ನು ತುಳು ಭಾಷೆಗೆ ಭಾಷಾಂತರಿಸಿದವರ ಪೈಕಿ ಮೊತ್ತಮೊದಲಿಗರು. ಅವರ ಹಲವು ವರ್ಷಗಳ ಶ್ರಮವು 1855ರಲ್ಲಿ ಉಂಟಾದ ಬೆಂಕಿಯ ಆಕಸ್ಮಿಕದಿಂದ ನಾಶವಾದರೂ 1858–59ರಲ್ಲಿ ಅದನ್ನು ಪುನರುಜ್ಜೀವನಗೊಳಿಸಿದರು. ಹೊಸ ಒಡಂಬಡಿಕೆಯ 27 ಪುಸ್ತಕಗಳನ್ನು ಭಾಷಾಂತರಿಸಿದರು. 1863ರಲ್ಲಿ ಕೀರ್ತನೆ ಎಂಬ ಹಳೆ ಒಡಂಬಡಿಕೆಯ ಜ್ಞಾನ ಸಾಹಿತ್ಯವನ್ನು ಅನುವಾದಿಸಲಾಯಿತು. 1881, 1882, 1884, 1890ರಲ್ಲಿ ತುಳು ಬೈಬಲಿನ ಪುನರ್‌ವಿಮರ್ಶೆ ಮಾಡಲು ಮೂರು ಬೇರೆ ಬೇರೆ ಸಭೆಗಳನ್ನು ಏರ್ಪಡಿಸಿ ತುಳು ಭಾಷೆ ಸಾಹಿತ್ಯಗಳ ಬೆಳವಣಿಗೆಯನ್ನು ಕುರಿತು ಚರ್ಚಿಸ

ಬಾಯಿತು. ಈ ಸಂದರ್ಭದಲ್ಲೇ ಹಳೆ ಒಡಂಬಡಿಕೆಯ ಅಧಿಕೃತವಾದ ಅನುವಾದ 'ಅತ್ತ ಕ್ಕೈ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. 1858ರಲ್ಲಿ ಜೆ. ಕಾಮರರ್ ತುಳು ನಿಘಂಟು ರಚನೆಯ ಕೆಲಸವನ್ನು ಕೈಗೊಂಡರು. ಈ ಕಾರ್ಯವನ್ನು ಎ. ಮೆನ್ನರ್ ಅವರು ಮುಂದುವರಿಸಿ 1885ರ ಹೊತ್ತಿಗೆ ತುಳು–ಇಂಗ್ಲಿಷ್, ಇಂಗ್ಲಿಷ್–ತುಳು ನಿಘಂಟಿನ ಸಂಪಾದನ ಕಾರ್ಯವನ್ನು ಪೂರ್ಣಗೊಳಿಸಿದರು. 1886ರಲ್ಲಿ ಮೆನ್ನರ್ ಅವರ ತುಳು–ಇಂಗ್ಲಿಷ್ ನಿಘಂಟು ಪ್ರಕಟವಾಯಿತು. ಅಮ್ಮನ್, ಕೇಮರರ್, ಮೆನ್ನರ್, ಬುಸ್ಲ್ ಮೊದಲಾದವರು 1864ರಲ್ಲಿ 120 ತುಳು ಸಂಗೀತಗಳನ್ನು ರಚಿಸಿದರು. 1878, 1891ರಲ್ಲಿ 219 ಸಂಗೀತ ರಚನೆಗಳಾದವು. ಪ್ರತಿಯೊಂದು ಸಂಗೀತವೂ ಅದರ ಸ್ವರ ಧಾಟಿಯ ಮೇಲೆ (ಎಮ್.ಟಿ) ಮಂಗಳೂರು ಟ್ಯೂನ್ ಆಧಾರಗೊಂಡಿದೆ. 175ನೆಯ ತುಳು ಸಂಗೀತವು ಇಂಗ್ಲೀಷಿನ 'ಲೀಡ್ ಕೈಂಡ್ಲೀ ಲೈಟ್' ಎಂಬ ಗೀತೆಯ ಅನುವಾದ. 'ಪ್ರಕಾಶ ಕೊರ್ಲೆ ಯೆನ್ನ ನಡಪಾಲ ಸ್ವಾಮಿಯೇ' – ಇದು ಕತ್ತಲೆಯಲ್ಲಿ ಮಾನವರಿಗೆ ಬೆಳಕನ್ನು ನೀಡುವಂಥದಾಗಿದೆ. 'ಭೂಲೋಕದ ದಾಬು (194)', 'ಪ್ರೀತಿ ಟಿಳು ತೋಜುಂಡಾ (233)' ಮೊದಲಾದ ತುಳು ಸಂಗೀತಗಳನ್ನು ಕೇಳುವಾಗಲೇ ಅವುಗಳಲ್ಲಿ ಅಡಗಿರುವ ಸಾಹಿತ್ಯಿಕ ಮೌಲ್ಯದ ಅರಿವಾಗುತ್ತದೆ.

7. ತುಳುವಿನಲ್ಲಿ ಸ್ವಾತಂತ್ರ್ಯ ಪೂರ್ವದ ಪ್ರಸಿದ್ಧ ರಚನೆಗಳು (ಡಾ॥ ಬಿ. ಎ. ವಿವೇಕ ರೈ): ಪ್ರಸ್ತುತ ಸಂಕಲನದ ದೀರ್ಘ ಪ್ರಬಂಧವಿದು. ಇದರಲ್ಲಿ ಸ್ವಾತಂತ್ರ್ಯಪೂರ್ವ ತುಳು ಸಾಹಿತ್ಯಿಕ ರಚನೆಗಳನ್ನು ಕುರಿತು ಸಮೀಕ್ಷಿಸಲಾಗಿದೆ. ಗಾಸ್ಪೆಲ್ ಆಫ್ ಸೈಂಟ್ ಮ್ಯಾಥ್ಯೂ ಎಂಬುದರ ತುಳು ಭಾಷಾಂತರವೇ ಮಿಷನರಿಗಳ ಅನುವಾದ ಸಾಹಿತ್ಯ ರಚನೆಯಲ್ಲಿ ಆರಂಭದ ಗ್ರಂಥ (1842). ಹೊಸ ಒಡಂಬಡಿಕೆಯ ತುಳು ಭಾಷಾಂತರ 1847ರಲ್ಲಿ ಪೂರ್ಣಗೊಂಡು 1858ರಲ್ಲಿ ಹೊಸ ಮುದ್ರಣ ಕಂಡಿತು. ಈ ಘಟ್ಟದ ಹೆಚ್ಚು ರಚನೆಗಳು ಕ್ರೈಸ್ತ ಧಾರ್ಮಿಕ ಗ್ರಂಥಗಳ ಅನುವಾದಗಳು. ಇವುಗಳ ಜೊತೆಗೆ ಪ್ರಕಟವಾದ ತುಳು ಭಾಷಾ ಕಲಿಕೆಯ ಕೆಲವು ಕೃತಿಗಳು ಮುಖ್ಯವಾಗಿವೆ. ಅವು: ಫಸ್ಟ್ ಬುಕ್ ಆಫ್ ಲೆಸನ್ಸ್ ಇನ್ ತುಳು (1862), ಫಸ್ಟ್ ಬುಕ್ ಇನ್ ತುಳು (1890), ಎ ಕನ್ನಡ ಗೈಡ್ ಟು ತುಳು–ಇಂಗ್ಲಿಷ್ ಕಾನ್‌ವರ್ಸೇಷನ್ (1915). ಇವಕ್ಕಿಂತಲೂ ಮುಖ್ಯವಾಗಿ ಮಿಷನರಿಗಳ ತುಳು ಭಾಷಾಸೇವೆ ಎಲ್ಲ ಕಾಲಕ್ಕೂ ಗಮನೀಯವಾದುದು. ಸಂಶೋಧನಾ ರಂಗದಲ್ಲಿ, ವ್ಯಾಕರಣ, ನಿಘಂಟು ಮತ್ತು ಜನಪದ ಸಾಹಿತ್ಯ ಸಂಗ್ರಹದ ಕ್ಷೇತ್ರಗಳಲ್ಲಿ ಆ ಕಾಲದ ರಚನೆಗಳು ಅಮೂಲ್ಯವಾದವು. ಕ್ರೈಸ್ತ ಮಿಷನರಿಗಳ ತುಳು ಕೃತಿಗಳ ಹೆಚ್ಚಿನ ಪ್ರಕಟಣೆಗಳು ಪುನರ್‌ಮುದ್ರಣಗಳನ್ನೊಳಗೊಂಡು ಸುಮಾರು 1925–30ರ ಹೊತ್ತಿಗೆ ಕೊನೆಗೊಳ್ಳುತ್ತದೆ.

ಬಾಯಾರು ಸಂಕಯ್ಯ ಭಾಗವತರ ತುಳು ಬಾಸೆಟ್ ಪಂಚವಟಿ ರಾಮಾಯಣ – ವಾಲಿ ಸುಗ್ರೀವರ ಕಾಳಗೊ ಎಂಬುದು ತುಳುವಿನ ಮೊತ್ತಮೊದಲ ಉಪಲಬ್ಧ ಯಕ್ಷಗಾನ ಕೃತಿ (1887). ಕನ್ನಡದ ಪಂಚವಟಿ – ವಾಲಿಸಂಹಾರ ಯಕ್ಷಗಾನ ಪ್ರಸಂಗವನ್ನು ಆಧಾರವಾಗಿಟ್ಟುಕೊಂಡು ಬರೆದ ಈ ಯಕ್ಷಗಾನ ಪ್ರಸಂಗದಲ್ಲಿ ಕಥೆಯು ಶೂರ್ಪನಖಿಯ ಮುಖಭಂಗದ ತರುವಾಯ ಆರಂಭವಾಗಿ ಸುಗ್ರೀವ ಪಟ್ಟಾಭಿಷೇಕದವರೆಗೆ ವಿವರವಾಗಿ ನಿರೂಪಿತವಾಗಿದ್ದು ಅನಂತರದ ರಾಮಾಯಣದ ಕಥೆ ಸಂಕ್ಷೇಪವಾಗಿ ಮೂಡಿಬಂದಿದೆ. ತುಳು ಭಾಷೆಯ ದೇಸಿ ನುಡಿಗಟ್ಟುಗಳು, ಕಾವ್ಯಮಯ ಶೈಲಿ, ಸಂಭಾಷಣೆಯ ಸೊಗಸು – ಇವುಗಳಿಂದ ತುಳು ಪಂಚವಟಿ ವಿಶಿಷ್ಟವಾಗಿದೆ. ಎಮ್. ಆರ್. ಸುಬ್ರಹ್ಮಣ್ಯ ಶಾಸ್ತ್ರಿಯವರ ತುಳು ಕನ್ಯೋಪದೇಶ 1916ರಲ್ಲಿ ಪ್ರಕಟವಾಯಿತು. ಸ್ತ್ರೀಯರಲ್ಲಿ ವಿದ್ಯಾಭಿರುಚಿಯುಂಟಾಗಲು ಮತ್ತು ತುಳುವರು ಸ್ವಭಾಷೆಯ ಮೇಲೆ ಅಭಿಮಾನವಿಡಲು ಪ್ರೋತ್ಸಾಹಿಸಲು ಪ್ರೇರಣೆಯನ್ನೊದಗಿಸುವ ಕೃತಿ. 88 ಶ್ಲೋಕಗಳಲ್ಲಿ ಬ್ರಾಹ್ಮಣ ತುಳು ಪ್ರಭೇದಗಳಲ್ಲಿ ಹೆಣ್ಣು ಮಕ್ಕಳಿಗೆ ಉಪದೇಶ ಮಾಡುವ ರೂಪದಲ್ಲಿ ಪದ್ಯಗಳನ್ನು ರಚಿಸಲಾಗಿದೆ.

ಉಡುಪಿಯ ತುಳುವ ಸಾಹಿತ್ಯಮಾಲೆಯ ಮೂಲಕ 1928ರ ತರುವಾಯ ತುಳು ಸಾಹಿತ್ಯ ರಚನೆಯು ಚಳವಳಿಯ ರೂಪದಲ್ಲಿ ನಡೆಯಿತು. ತುಳುವ ಸಾಹಿತ್ಯ ಮಾಲೆಯಲ್ಲಿ 1929–1936ರ ಅವಧಿಯಲ್ಲಿ ಒಟ್ಟು ಹನ್ನೊಂದು ಗ್ರಂಥಗಳು ಪ್ರಕಟವಾಗಿವೆ. 1 'ಕಟ್ಟುರಾಜಿ' ಪರ್ಸಂಗೊ, ಬಡಕಯ್ಯಿಲ್ ಪರಮೇಶ್ವರಯ್ಯ (1929), 2 'ತುಳುವಾಲ ಬಲಿಯೇಂದ್ರೆ', ಸಂದೊಳ್ಗಿ ಶೀನಪ್ಪ ಹೆಗ್ಗಡೆ (1929), 3 'ಅಳಿಯ ಸಂತಾನ ಕಟ್ಟ್‌ದ ಗುಟ್ಟು' ಸತ್ಯಮಿತ್ರ ಬಂಗೇರೆ (1930), 4 'ತುಳು ವ್ಯಾಕರಣ', ಎಸ್. ಯು. ಪಣಿಯಾಡಿ (1932), 5 'ಕಾಸಿಗೆ', ಕೆ.ಬಿ. ನಾರಾಯಣ ಶೆಟ್ಟಿ (ಕಿಲ್ಲೆ) (1932), 6 'ಮದ್‌ಮಾಳತ್ತ್ – ಮದ್‌ಮಾಯೆ', ಎಮ್. ವಿಠಲ ಹೆಗ್ಗಡೆ (1933), 7 'ಜನಮರ್ಲ್', ಮಾಧವ ತಿಂಗಳಾಯ (1933), 8 'ಬಂಗಾರ್ದಂಗಿದ ಕತೆ' 9 'ತುಳು ಪದ್ಯ ಮಾಲಿಕೆ', ಗಂಗಾಧರ ರಾಮಚಂದ್ರ, 10 'ಮಿತ್ಯನಾರಾಯಣ ಕತೆ', ಎ. ಎನ್. ಶೀನಪ್ಪ ಹೆಗ್ಗಡೆ (1935), 11 'ಸತೀ ಕಮಲೆ', ಎಸ್.ಯು. ಪಣಿಯಾಡಿ (1936). ಇವುಗಳ ಜೊತೆಗೆ ಎಸ್.ಯು. ಪಣಿಯಾಡಿಯವರು ಸಂಪಾದಿಸಿದ 'ತುಳುವ ಮಹಾಸಭೆತೊ ವಾರ್ಷಿಕ'ವನ್ನು (1929) ಸೇರಿಸಿದರೆ ಒಟ್ಟು ಹನ್ನೆರಡು ಕೃತಿಗಳಾಗುತ್ತವೆ.

ಸತೀ ಕಮಲೆ ಕಾದಂಬರಿಯ ರಕ್ಷಾಪುಟದಲ್ಲಿ ಹನ್ನೆರಡು ಪುಸ್ತಕಗಳ ಪಟ್ಟಿ ಇದೆ. ಇವು ಹಸ್ತಪ್ರತಿಯಲ್ಲಿ ಸಿದ್ಧವಾಗಿದ್ದವುಗಳಾಗಿರಬಹುದು.

ತುಳುವ ಸಾಹಿತ್ಯ ಮಾಲೆಯ ಪ್ರಕಟಣೆಗಳಲ್ಲದೆ ಅದೇ ಕಾಲದಲ್ಲಿ ಪ್ರಕಟಗೊಂಡಿರುವ ಹಲವಾರು ತುಳು ಕೃತಿಗಳಿವೆ. ಈ ಪೈಕಿ ಶರ್ಮರ 'ಕನ್ನಡಕೊ' ಎಂಬ ಪದ್ಯ ಪುಸ್ತಕ, ನರ್ಕಳ ಮಾರಪ್ಪ ಶೆಟ್ಟರ 'ಅಮಲ್ ದೆಪ್ಪಡೆ' (1929), ಪೊರ್ಲಕಂಟ್ (1930) ಕವನ ಸಂಕಲನಗಳು, ಮೋನಪ್ಪ ತಿಂಗಳಾಯರ 'ತುಳು ಪದ್ಯಾವಳಿ' (1930), ಮೂಲ್ಕಿ ನರಸಿಂಗರಾವ್ ಅವರ ಗೀತೆಮಲ್ಲಿಗೆ ಅನ್ಪೀ ತುಳು ಕಾವ್ಯ ಭಗವದ್ಗೀತೆ (1934). ದೇರಂಬಳ ತ್ಯಾಂಪಣ್ಣ ಶೆಟ್ಟಿಯವರ ಪಂಚವಟಿ ವಾಲಿಸಂಹಾರ (1938) ಪ್ರಮುಖವಾದವು.

ತುಳು ಭಾಷೆಯ ಮೊತ್ತಮೊದಲ ಪತ್ರಿಕೆ ನವಯುಗ ತುಳು ಸಂಚಿಕೆ. ಉಡುಪಿಯ ನವಯುಗ ಪತ್ರಿಕೆ 1936ರಿಂದ ಸುಮಾರು ಮೂರು ವರ್ಷಗಳ ಕಾಲ, ತಿಂಗಳಿಗೆ ಒಂದರಂತೆ ತುಳು ಸಂಚಿಕೆಯನ್ನು ಪುರವಣಿಯಾಗಿ ಪ್ರಕಟಿಸಿತು. ಈ ಪುರವಣಿಗಳಲ್ಲಿ ತುಳು ಕವಿತೆ, ಕತೆ, ಭಾಷೆ. ಸಂಸ್ಕೃತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಲೇಖನಗಳು ಪ್ರಕಟವಾಗಿವೆ. 1942ರಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದ ಅಂದೇಸ್ವಾಮಿ. ದೇವೆರ್. ಜೈನೆರ್. ತುಳು ನಿತ್ಯವಿಧಿ – ಸಂಧ್ಯಾವಂದನೆ, ದೇವೆರ್ ಪೂಜೆ ಎಂಬ ನಾಲ್ಕು ಕಿರುಪುಸ್ತಕಗಳು ಪ್ರಕಟವಾಗಿವೆ. ಕೊರಂಗ್ರಪಾಡಿಯ ಕೆ.ಪಿ. ನಾರಾಯಣ ತಂತ್ರಿಯವರು 'ಒಡಿಪುದ ಶ್ರೀ ಕೃಷ್ಣಾಪುರ ಮಠದ ಶ್ರೀ ಶ್ರೀ ವಿದ್ಯಾರತ್ನ ತೀರ್ಥೆರೆ ಚರಿತ್ರೆದ ತುಳು ಲಾವಣೆ'ಯನ್ನು ರಚಿಸಿದ್ದಾರೆ (1942). ಮಠದ ಸ್ವಾಮಿಗಳನ್ನು ತುಳುವಿನಲ್ಲಿ ಸಂಸ್ತುತಿಸುವ ಲಾವಣಿಯಿದು.

ಸ್ವಾತಂತ್ರ್ಯ ಪೂರ್ವದಲ್ಲಿಯ ತುಳು ಭಾಷೆಯಲ್ಲಿ ಸೃಜನ ಸಾಹಿತ್ಯ, ಅನುವಾದ, ಸಂಶೋಧನೆ, ಇತಿಹಾಸ, ಜನಪದ ಸಾಹಿತ್ಯ ಸಂಗ್ರಹ – ಮುಂತಾದ ಪ್ರಕಾರಗಳಲ್ಲಿ ಆಗಿರುವ ಕಾರ್ಯ ಗಣನೀಯವಾದುದು. ಆಗಿನ ಅನೇಕ ಉತ್ತಮ ಕೃತಿಗಳು ಈಗಿನ ಲೇಖಕರಿಗೆ ಪ್ರೇರಕವಾಗಿವೆ. ಈಗಿನ ಸನ್ನಿವೇಶಗಳಲ್ಲಿ ಸೃಜನಗೊಳ್ಳುವ ತುಳು ಕೃತಿಗಳಲ್ಲಿ ಕಾಲದೊಂದಿಗೆ ಲಯ ಹೊಂದದೆ ಮುಂದಿನ ದಿನಗಳಲ್ಲೂ ಉಳಿಯಬಲ್ಲವು ಎಷ್ಟು? ಎಂಬ ಪ್ರಶ್ನೆ ವಿದ್ವಾಂಸರನ್ನು ಕಾಡುತ್ತಿದೆ. 'ಸ್ವಾತಂತ್ರ್ಯಾನಂತರದ ಪ್ರಸಿದ್ಧವಾದ ತುಳು ರಚನೆಗಳು' – ಎಂಬ ವಿಚಾರಗೋಷ್ಠಿ ಮುಂದೊಂದು ದಿನ ನಡೆದಾಗ ಕೈಬೆರಳು ಮಡಚಲು ಎಷ್ಟು ಸಿಕ್ಕಾವು ಎನ್ನುವುದರ ಮೇಲೆ ತುಳು ನುಡಿಯ ಸಾಹಿತ್ಯ ಕೀರ್ತಿಶೇಷವೋ ಅಥವಾ ಜೀವಂತ ವಿಶೇಷವೋ ಎನ್ನುವುದು ನಿರ್ಣಯವಾದೀತು' ಎಂಬುದಾಗಿ ಅನೇಕ ಮಂದಿ ತುಳು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

———

೨೪. ಕಲ್ಲರಳಿ ಹೂವಾಯಿತು

ಒಂದು ವಿಶ್ಲೇಷಣೆ

— ಆರ್. ರಾಮಕೃಷ್ಣ

ಡಾ॥ ತೋನ್ಸೆ ಮಾಧವ ಅನಂತ ಪೈ ಅವರ ವಿಲಕ್ಷಣ ವ್ಯಕ್ತಿತ್ವವನ್ನು ಕುರಿತ ವಿಶಿಷ್ಟ ಲೇಖನ (1977. ಏಪ್ರಿಲ್ 30). ಪೈಯವರು ತಮ್ಮ ಎಂಬತ್ತನೆಯ ವರುಷಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಮೂಡಿಬಂದ ಬರಹವಿದು. ಇದರಲ್ಲಿ ಪೈ ಅವರ ಅಪೂರ್ವ ವ್ಯಕ್ತಿತ್ವ. ಸಾಧನೆಗಳನ್ನು ಲೇಖಕರು ಸಮರ್ಥವಾಗಿ ಸೆರೆಹಿಡಿದಿದ್ದಾರೆ. ವಿಶ್ಲೇಷಿಸಿದ್ದಾರೆ.

ಪೈ ಅವರು ಕರ್ನಾಟಕದ ಕಡುಗಲಿ. ಎಂಥ ಸಮಸ್ಯೆಗಾದರೂ ಹಠಾತ್ತನೆ ಪರಿಹಾರ ಸೂಚಿಸಬಲ್ಲ ನಿಶಿತಮತಿ, ಮಾತಿನಲ್ಲಾಡಿದ್ದನ್ನು ಮರುಕ್ಷಣವೆಂಬಂತೆ ಕೃತಿಗಿಳಿಸಬಲ್ಲ ಧೃತಿ. ಜೀವಿತ ಕಾಲದಲ್ಲೇ ತನ್ನ ಯೋಜನೆಗಳ ಯಶಸ್ಸನ್ನು ಕಣ್ಣಾರೆ ಕಾಣುವ ಭಾಗ್ಯ – ಈ ಮೂರನ್ನೂ ಪೈ ಅವರು ಪಡೆದು ಬಂದವರಿರಬೇಕು. ದಾರಿದ್ರ್ಯ. ಅಜ್ಞಾನ, ಅಸ್ವಾಸ್ಥ್ಯ ಈ ಮೂರು ರಾಷ್ಟ್ರೀಯ ರುಜಿನಗಳ ಮೇಲೆ ತಾನು ಸಾರಿದ ಸಮರದಲ್ಲಿ ತಾನೇ ಮುಂಚೂಣಿಯಲ್ಲಿ ನಿಂತು ಎರಗಿದ ನಂಜಿನ ಬಾಣಗಳನ್ನು ತಾನೇ ನುಂಗಿ ಯಾವ ಸೋಲಿಗೂ ಅಂಜದೆ ಹೆಜ್ಜೆಯಿಕ್ಕಿ ಗುರಿ ಮುಟ್ಟಿದ ಧನ್ಯ ಜೀವಿ.

ಇಂದಿನ ಮಣಿಪಾಲ ಕಲ್ಲರಳಿ ಹೂವಾದದ್ದು. ಉಡುಪಿಗೆ ಮೂರು ಮೈಲು ದೂರದ ಕರಿಗಲ್ಲಿನ ಗುಡ್ಡದ ನಡುವೆ ಒಂದು ಮಡಗ, ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುವ ಈ ಕೆರೆಯಿಂದಲೇ ಮಣಿಪಾಲಕ್ಕೆ ಆ ಹೆಸರು ಬಂದಿದೆ. ಮಣ್ಣ್‌ದ ಪಳ್ಳ – ಮಣ್ಣಿನ ಹಳ್ಳ – ಸಂಸ್ಕೃತೀಕರಣಗೊಂಡು ಮಣಿಪಾಲ ವಾಗಿದೆ. ನಲವತ್ತು ವರ್ಷಗಳ ಹಿಂದೆ ಅದೊಂದು ನಿರ್ಜನಸ್ಥಳ. ಸಾಲ ಸಂದಾಯಕ್ಕೆ ಪಡೆದ 8–10 ಎಕರೆ ಭೂಮಿಯಲ್ಲಿ ಪೈ ಮನೆ ಕಟ್ಟುವ ಸಾಹಸ ಮಾಡಿದರು. ಹಸಿರು ಕ್ರಾಂತಿಯ ಸುದ್ದಿ ಕೇಳುವ 40 ವರ್ಷ ಪೂರ್ವದಲ್ಲಿ 'ಮಿಶ್ರಕೃಷಿ' ಆರಂಭಿಸಿದರು. ನೇಯ್ಗೆ ಉದ್ಯಮ ತಂದರು. ಹಂಚಿನ ಕಾರ್ಖಾನೆ ನೆಟ್ಟರು. ಸೆನಟೋರಿಯಮ್ ವಿರಚಿಸಿದರು.

ಪ್ರಾಥಮಿಕ ಶಾಲೆಯಿಂದ ಮೊದಲ್ಗೊಂಡು ಮೆಡಿಕಲ್ ಕಾಲೇಜಿನವರೆಗಿನ ಪ್ರತಿಯೊಂದು ಶಿಕ್ಷಣ ಸಂಸ್ಥೆಯ ಬೀಜಾರೋಪ ಮಾಡಿದಾಗಲೂ ಪೈ ಅವರಿಗೆ ಹುಚ್ಚು ಎಂಬ ಬಿರುದು ದೊರೆಯದಿರಲಿಲ್ಲ. ಹತ್ತಿರದವರು ದೂರದವರು ಎಲ್ಲರೂ ಪ್ರತಿಯೊಂದು ಪೈ ಯೋಜನೆಗೂ ಹುಚ್ಚಿನ ಪಟ್ಟಿ ಕಟ್ಟಿ ಯೋಜನೆ ಯಶಸ್ವಿಯಾದ ಬಳಿಕ ಪೈ ಅವರನ್ನು 'ಮಣಿಪಾಲದ ಮಾಂತ್ರಿಕ'ನೆಂದು ಪ್ರಶಂಸಿಸಿದರು.

ಪೈ ಅವರ ವ್ಯವಹಾರಿಕತೆ, ಪ್ರತ್ಯಕ್ಷ ಪ್ರಮಾಣಶಕ್ತಿ. ಅಂಕೆ ಸಂಖ್ಯೆಗಳ ಮೇಲಿನ ಅನುರಕ್ತಿ ಇವು ಒಂದು ಪಾತಳಿ. ವಿಲಕ್ಷಣವಾದ ಪ್ರತಿಭೆ, ಕಲ್ಪಕ ಶಕ್ತಿ ಅಥವಾ ಸೃಷ್ಟಿಶಕ್ತಿ ಮತ್ತೊಂದು ಪಾತಳಿ. ಬಡ ಮಧ್ಯಮವರ್ಗದಲ್ಲಿ ಹುಟ್ಟಿದ ಅವರಿಗೆ ತಾನೊಬ್ಬ ಸಮಾಜದ ಧುರೀಣನಾಗುವ ಕಲ್ಪನೆಯೂ ಹಿಂದೆ ಇತ್ತೋ ಇಲ್ಲವೋ. ಆದರೆ ಬೇರೆ ಯಾರೂ ಮಾಡಲಾರದ್ದನ್ನು ತಾನು ಸಾಧಿಸಬೇಕೆಂಬ ಅದಮ್ಯ ಹಂಬಲ. ಆದ್ದರಿಂದ ಹಳ್ಳಿಯ ಪರಿಸ್ಥಿತಿಗೆ ಅನುಗುಣವಾಗಿ ಪಿಗ್ಮಿ ಯೋಜನೆ ಆರಂಭಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಗಳಲ್ಲಿ ಸಿಂಡಿಕೇಟಿನ ಗ್ರಾಮೀಣ ಶಾಖೆಗಳನ್ನು ತೆರೆದರು. ಯೂನಿಟ್ ಟ್ರಸ್ಟ್‌ಗೆ ರಿಸರ್ವ್‌ಬ್ಯಾಂಕಿನ ಆಶೀರ್ವಾದ ದೊರಕುವುದಕ್ಕೆ ನಾಲ್ಕು ವರ್ಷ ಪೂರ್ವದಲ್ಲಿ ಪೈ ಅವರು ತಮ್ಮ ಬ್ಯಾಂಕಿನಲ್ಲಿ 'ಇನ್ವೆಸ್ಟರ್ಸ್' ಏಜೆನ್ಸಿ ಸ್ಥಾಪಿಸಿದರು. ಪ್ರಾದೇಶಿಕ ಬ್ಯಾಂಕುಗಳ ರೂಪರೇಷೆ, ತಜ್ಞರಿಗೆ ಹೊಳೆಯುವ ಮೂವತ್ತು ವರ್ಷ ಪೂರ್ವದಲ್ಲಿಯೇ ಸಿಂಡಿಕೇಟಿನ ಅನುಷಂಗಿಕವಾಗಿ ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಅಪೆಕ್ಸ್ ಬ್ಯಾಂಕುಗಳನ್ನು ತೆರೆದು ಪ್ರಾದೇಶಿಕ ಅಭಿವೃದ್ಧಿಯ ಹಂಚಿಕೆ ಹಾಕಿದರು. ಕಾಲೇಜು ಕಟ್ಟಲು ಮಹಾಜನತೆಯಿಂದಲೇ ದೇಣಿಗೆ ತೆಗೆದರು. ವ್ಯವಹಾರ ಯೋಗ್ಯವೂ, ಶೀಘ್ರ ಪರಿಣಾಮಕಾರಿಯೂ ಆದ ಸಿದ್ಧಪಥಗಳನ್ನು ಪೈ ಅವರು ಪುಂಖಾನುಪುಂಖವಾಗಿ ಸೃಜಿಸಬಲ್ಲರು. ಸಮಸ್ಯೆ ಯಾವುದೇ ಕ್ಷೇತ್ರದ್ದಿರಲಿ. ಅದಕ್ಕೊಂದು ಪರಿಹಾರವಿದೆ. ಸಮಸ್ಯೆ ಹೆಚ್ಚಿನವರಿಗೆ ಅಡ್ಡಬಂಡೆ – ಪೈ ಅವರಿಗೆ ಹಾಗಲ್ಲ. ಅದು ಅವರಿಗೊಂದು ಹುಲುಸಾದ ಕೃಷಿ ಕ್ಷೇತ್ರ. ಅವರ ಪ್ರತಿಭೆಗೆ ಸದವಕಾಶ, ಗುರಿ ನಿಶ್ಚಿತ. ಪರಿಹಾರವೂ ನಿರ್ದಿಷ್ಟ.

ಅದಕ್ಕನುಗುಣವಾದ ಕಾರ್ಯಕ್ರಮವೂ ಪೂರ್ವನಿರ್ಧಾರಿತ. ಒಮ್ಮೆ ಮನೋನಿಷ್ಕರ್ಷೆ ಮಾಡಿದ ವಿಷಯದಲ್ಲಿ ಮತ್ತೆ ಪುನರ್ ವಿಮರ್ಶೆ ಇಲ್ಲ.

ಪೈ ಅವರು ಪುಸ್ತಕಗಳ ಹತ್ತಿರ ಹೋಗುವವರಲ್ಲ. ವಿಚಾರಗಳಿಗಾಗಿ ಅವರದು ಮುಕ್ತ ಚಿಂತನಕ್ರಮ. ಲೋಕಾನುಭವವೇ ಅದಕ್ಕೆ ಸ್ಫೂರ್ತಿ, ಮಿತಿ. ಹಿಂದೆ ಯಾರೂ ಅನುಯಾಯಿಗಳಿಲ್ಲದಿದ್ದರೆ ಏಕಾಕಿಯಾಗಿ ಅವರು ಸಾಹಸ ಮಾಡಲು ಹಿಂಜರಿಯಲಿಲ್ಲ. 'ಒಳ್ಳೆಯ ಮಾತು ನಿಮ್ಮ ನಾಲಗೆಗೆ ಬಂದರೆ, ಆಡಲು ಹಿಂಜರಿಯಬೇಡಿ – ಮಾತಾಡುತ್ತಾ ಹೋಗಿ, ಒಂದಲ್ಲ ಒಂದು ದಿನ ಮಾತೇ ಕೃತಿಯಾಗುತ್ತದೆ' ಎಂಬುದಾಗಿ ಮಾತಿನ ಮಹತ್ವ ಬಣ್ಣಿಸಿದ್ದಾರೆ. ತಮ್ಮ ಮಾತನ್ನಂತೂ ಕೃತಿ ಮಾಡಿ ತೋರಿಸಿದ್ದಾರೆ. ಪರನಿಂದೆ ಅವರಿಗಾಗದು. ಅವರು ಅದಕ್ಕೆ ಕಿವಿಗೊಡುವುದಿಲ್ಲ. ನಿಂದಕರಿಗೆ ದೂರದಲ್ಲೇ ವಂದನೆ. ಬರಿದೆ ಟೀಕೆಯಿಂದ ಯಾವ ದೇಶಕಾರ್ಯವೂ ಜರಗುವುದಿಲ್ಲವೆಂಬುದು ಅವರ ನಿಶ್ಚಲ ವಿಶ್ವಾಸ. ಆದ್ದರಿಂದ ತನ್ನ ಯೋಜನೆಗಳ ಮೇಲೆ ನಂಬಿಕೆಯುಳ್ಳವರು ತನ್ನ ಹತ್ತಿರ ಇರಲಿ – ಉಳಿದವರು ದೂರ ಸರಿದರೆ ಆತಂಕವಿಲ್ಲ. ಎಲ್ಲವನ್ನೂ ಶಾಂತಚಿತ್ತರಾಗಿ ನಿರ್ವಹಿಸುವ ಸ್ಥಿತಪ್ರಜ್ಞತ್ವ ಅವರಿಗಿದೆ.

ತಮಗೆ ಬೇಕಾದ ಕೆಲಸಕ್ಕೆ, ಗುರಿ ಮುಟ್ಟುವುದಕ್ಕೆ ತಮ್ಮ ಸ್ವಾಭಿಮಾನವನ್ನು ಒತ್ತಿ ಹಿಡಿದು ಯಾರ ಮನ ಒಲಿಸುವುದಕ್ಕೂ ಪೈ ಅವರು ಸಿದ್ಧರಿದ್ದರು. ಲಕ್ಷ್ಯದ ಸಾಧನೆಗೆ ಏಕಾಗ್ರಚಿತ್ತದಿಂದ ದುಡಿದು ಮೆಡಿಕಲ್ ಕಾಲೇಜ್ ಕಟ್ಟಿದರು. ಈ ಕಾಲೇಜನ್ನು ಕಟ್ಟಿ ಬೆಳೆಸುವಲ್ಲಿ ಅವರು ಪಟ್ಟ ಪರಿಶ್ರಮ, ದೊಡ್ಡವರನ್ನು ಭೇಟಿಯಾಗಿ ಅವರ ಮನ ಒಲಿಸಿದ ಕ್ರಮ ಅವರ ಛಲವಾದಿತ್ವಕ್ಕೆ ಸಾಕ್ಷಿ.

ಪೈ ಅವರ ಸರ್ವ ಸಂಸ್ಕಾರಗಳನ್ನೂ ಯೋಜನೆಗಳನ್ನೂ ಆಪತ್ತುಗಳಿಂದ ಪಾರು ಮಾಡಿದ ಶ್ರೇಯಸ್ಸು, ಪೈ ಪ್ರಯೋಗಗಳ ಮೂಲದಲ್ಲಿರುವ ಎರಡು ಪ್ರಬಲ ತತ್ವಗಳಿಗೆ ಸಲ್ಲುತ್ತದೆ. ಒಂದು – ಪ್ರಾಮಾಣಿಕತೆ, ಎರಡು – ಪರಪ್ರಯೋಜನ. ಉಡುಪಿಯಂಥ ಪುಟ್ಟ ಪೇಟೆಯನ್ನು ಅಂತಾರಾಷ್ಟ್ರೀಯ ಪ್ರಸಿದ್ಧಿಗೇರಿಸಿ ಹತ್ತಾರು ಬಗೆಯ ನಿರ್ಮಾಣ ಕಾರ್ಯಗಳಲ್ಲಿ ತೊಡಗಿ, ದೇಶದ ಎಲ್ಲ ಸಮಸ್ಯೆಗಳಿಗೂ ಸ್ವಂತಿಕೆಯ ಪರಿಹಾರ ಮಾರ್ಗಗಳನ್ನು ಪರಿಶೋಧಿಸಿ, ತಾವೇ ಅದನ್ನು ಕಾರ್ಯಗತಗೊಳಿಸಿ, ಅದರ ಸಾರ್ಥಕತೆಯನ್ನು ಕಂಡ ಪೈ ಅವರ ವ್ಯಕ್ತಿತ್ವ ಅಸಾಧಾರಣವಾದದ್ದು. ಕೇವಲ ವಸ್ತುಸ್ಥಿತಿಯ ಅಧ್ಯಯನ, ಅಳವು ಮತ್ತು ಸಾಧ್ಯತೆಗಳ ಹದ್ದುಬಸ್ತಿನೊಳಗೆ ಅಪೂರ್ವ ಸಿದ್ಧಿಗಳ ಸರಮಾಲೆಯನ್ನು ನಿಲ್ಲಿಸಿದ ಪೈ ಅವರ ಕ್ರತುಶಕ್ತಿಗೆ ಎಣೆ ಇಲ್ಲ. ಇಂಥವರು ನೂರು ಕಾಲ ಬದುಕಬೇಕು, ದೇಶದಲ್ಲಿ ನೂರು ಮಂದಿ ಇರಬೇಕು ಎಂದು ಹಾರೈಸುವುದು ನಮ್ಮೆಲ್ಲರ ಕರ್ತವ್ಯ.

---

೨೫. ಒಂದಿಷ್ಟು ಲೋಕಾಭಿರಾಮ

— ಬನ್ನಂಜೆ ಗೋವಿಂದಾಚಾರ್ಯ

'ಲೋಕಾಭಿರಾಮ'ದ ಮೂರು ಸಂಪುಟಗಳು ನನ್ನ ಮುಂದಿವೆ. ನಾನು ಅದರ ಹಾಳೆಗಳನ್ನು ಮಗುಚುತ್ತ ಅಲ್ಲಿ ಅಕ್ಷರಗಳ ಬದಲು ಹರಿದಾಸ ಭಟ್ಟರನ್ನೇ ಕಾಣುತ್ತೇನೆ. ಭಟ್ಟರ ಜತೆಗೆಯೇ ನಾನು ಮಾತನಾಡುತ್ತಿದ್ದೇನೆ ಎಂಬಂಥ ಅನಿಸಿಕೆ.

ತುಂಬ ಚುರುಕಾದ ಕಣ್ಣು ಮತ್ತು ಕಿವಿ; ತುಂಬ ಮೊನಚಾದ ಬುದ್ಧಿ ಮತ್ತು ನಾಲಿಗೆ. ನೋಯಿಸದೆ ಛೇಡಿಸುವ, ಛೇಡಿಸುತ್ತಲೇ ನಗಿಸುವ, ನಗಿಸುತ್ತಲೇ ಚುಚ್ಚುವ, ಚುಚ್ಚುತ್ತಲೇ ನಮ್ಮನ್ನು ಆಳವಾಗಿ ಚಿಂತನೆಗೆ ಹಚ್ಚುವ ಮಾತುಗಾರಿಕೆಯ ಮೋಡಿ. ಎಲ್ಲವನ್ನೂ ಲೇವಡಿಸುತ್ತಲೇ ನಮ್ಮ ಮುಖವಾಡಗಳನ್ನು ಕಳಚಿ, ನಮ್ಮನ್ನು ಬತ್ತಲುಗೊಳಿಸಿ ನಮ್ಮ ಮೋರೆಗೇ ಕನ್ನಡಿ ಹಿಡಿಯುವ ಕಿಲಾಡಿತನ. ಎಲ್ಲವನ್ನೂ ಪ್ರೀತಿಯಿಂದ ಬಾಚಿಕೊಳ್ಳುವ ಹೃದಯವಂತಿಕೆ. ಕಹಿಯನ್ನೆಲ್ಲ ನಗುವ, ನಗುತ್ತಲೇ ನಗಿಸುವ ಸ್ಥಿತಪ್ರಜ್ಞೆ. ಸಮಾಜದ ಓರೆಕೋರೆಗಳನ್ನು ಕಂಡಾಗ ಕ್ಲಾಸಿನಲ್ಲಿ ಕೊನೆಯ ಬೆಂಚಿನ ತುಂಟ ಹುಡುಗನನ್ನು ಕಂಡಂತೆ ಮಾಸ್ತರಿಕೆಯ ಕೋಪದ ಠೀವಿ. ಚಾಟಿಯೇಟಿನ ಬಿರುಸುಬೀಸು. ಕೋಪದ ಒಳಗೆ ಮಡುಗಟ್ಟಿದ ಅನುಕಂಪದ ಒಸರು. ಒಂದು ಕೈಯಲ್ಲಿ ಬೆತ್ತ. ಇನ್ನೊಂದು ಕೈಯಲ್ಲಿ ಮುಲಾಮು ಹಿಡಿದ ತೆರ. ದೊಡ್ಡವರ ಸಣ್ಣತನವನ್ನು ಸಣ್ಣವರ 'ದೊಡ್ಡತನ'ವನ್ನು ಏಕರೀತಿಯಲ್ಲಿ ಕಂಡು, ಕಂಡದ್ದನ್ನು ಕಂಡ ಹಾಗೆ ಹೇಳುವ ತಟಸ್ಥತೆಯ. ನಿರ್ಲಿಪ್ತತೆಯ ಅದಟು. ಒಂದೊಂದು ಸಂಗತಿಯನ್ನೂ ಕಲಾತ್ಮಕವಾಗಿ ಕಂಡರಿಸಿ ನಿಲ್ಲಿಸುವ ಶಿಲ್ಪಚಾತುರ್ಯ. ಅರ್ಥಶಾಸ್ತ್ರದಲ್ಲಿ ವೇದಾಂತ, ವೇದಾಂತದಲ್ಲಿ ಸಾಹಿತ್ಯ, ಸಾಹಿತ್ಯದಲ್ಲಿ ನೀತಿಶಾಸ್ತ್ರ, ನೀತಿಶಾಸ್ತ್ರದಲ್ಲಿ ರಾಜಕೀಯ, ಹಳತಿನಲ್ಲಿ ಹೊಸತು, ಹೊಸತಿನಲ್ಲಿ ಹಳತು ಎಲ್ಲವನ್ನೂ ಹಿತಮಿತವಾಗಿ ಹದವಾಗಿ ಬೆರೆಸಿ ಚೌಚೌ ತಿನಿಸುವ ನಳಪಾಕ ಪಾಂಡಿತ್ಯ...

ಹೌದು. ನಾನು ಹರಿದಾಸ ಭಟ್ಟರ ಬಗ್ಗೆ ಹೇಳುತ್ತಿಲ್ಲ. ಲೋಕಾಭಿರಾಮದ ಬಗ್ಗೆ ಹೇಳುತ್ತಿದ್ದೇನೆ. 'ಲೋಕಾಭಿರಾಮ' ಏನು ಹೌದು; ಏನಲ್ಲ? ಅದು ಎಲ್ಲವೂ ಹೌದು, ಕುಮಾರವ್ಯಾಸ ಹೇಳಿದಂತೆ : 'ಅರಸುಗಳಿಗಿದು ವೀರ...'

ಅದು ಕನ್ನಡದ ಬಳಕೆಯ ಅರ್ಥದಲ್ಲಿ 'ಲೋಕಾಭಿರಾಮ'ವಾಗಿ ಶುರುವಾದದ್ದು ಸಂಸ್ಕೃತದ ಅರ್ಥದಲ್ಲೂ 'ಲೋಕಾಭಿರಾಮ'ವಾಗಿ ಬೆಳೆಯಿತು. ಲೋಕಾಭಿರಾಮದ ಮೂಲಕ ಭಟ್ಟರು ಲೋಕವನ್ನೆಲ್ಲ ಸುತ್ತಾಡಿದರು. ನಮ್ಮನ್ನೂ ಸುತ್ತಾಡಿಸಿದರು. ಭೂತ-ಭವಿಷ್ಯತ್ತಿನ ಕಿಂಡಿ ತೆರೆದು ತಾನು ವರ್ತಮಾನದಲ್ಲೇ ನಿಂತರು. ನಮಗೆ ಕನಸು ಕಾಣಿಸುತ್ತ ತಾವು ಎಚ್ಚರವಾಗಿ ನಿಂತರು. ಕುಶಿಯವರು ಉದಯವಾಣಿಯ ಓದುಗರಿಗೆ ವಾರವಾರವೂ ತನ್ನ ಈ ಕಾಲಮ್ಮಿನ ಮೂಲಕ ಕುಶಿ ನೀಡಿದರು.

ಲೋಕಾಭಿರಾಮದ ಜನನವಾದದ್ದು 18 ವರ್ಷಗಳ ಹಿಂದೆ. 1970ರಲ್ಲಿ. ಆಗಿನ್ನೂ 'ಉದಯವಾಣಿ'ಯ ಪ್ರಾರಂಭದ ದಿನಗಳು. ಕರಾವಳಿಯ ಚೈತನ್ಯವನ್ನು ರಾಜಧಾನಿಗೆ ಮುಟ್ಟಿಸಿದ ಈ ದಿನಪತ್ರಿಕೆ ಆಗಿನ್ನೂ ಮೂರು ತಿಂಗಳ ಶಿಶು. ಕುಶಿಯವರ ಕಾಲಮ್ಮಿನಿಂದ ಉದಯವಾಣಿಯೂ ಜನಪ್ರಿಯವಾಯಿತು; ಉದಯವಾಣಿಯಿಂದ ಕುಶಿಯವರ ಲೋಕಾಭಿರಾಮವೂ ಜನಪ್ರಿಯವಾಯಿತು. ಉದಯವಾಣಿಯ ಈ ಅಂಕಣದಿಂದ ಕುಶಿಯವರು ಕನ್ನಡದ ಒಬ್ಬ ಶ್ರೇಷ್ಠ ಅಂಕಣಕಾರರಾಗಿ ಮೂಡಿಬಂದರು. ಉದಯವಾಣಿಯ ಬಳಗದವನಾಗಿ ನಾನೂ ಈ ಹೆಮ್ಮೆಯಲ್ಲಿ ಪಾಲುಗೊಂಡಿದ್ದೇನೆ.

ಸಂಸ್ಕೃತದಲ್ಲಿ ಒಂದು ಮಾತಿದೆ : "ವಕ್ರೋಕ್ತಿಃ ಕಾವ್ಯ ಜೀವಿತಮ್". ಬದುಕಿನ ನಡೆಯಲ್ಲಿ ವಕ್ರತೆ ಗುಣವಲ್ಲ; ಆದರೆ ಬದುಕಿನ ಪ್ರತಿಬಿಂಬವಾದ ಸಾಹಿತ್ಯದಲ್ಲಿ ವಕ್ರತೆ ಒಂದು ದೊಡ್ಡ ಗುಣ. ಹೆಬ್ಬುಕಟ್ಟಿಗೆಯಂತೆ ನೇರ ನಡೆಯ ಬಾರದು; ಬಳ್ಳಿಯಂತೆ ಬಳುಕುತ್ತ ನಡೆಯಬೇಕು. ಹೆಣ್ಣಿನ ನಡೆಯ ವಕ್ರತೆಯಂತೆ ಸಾಹಿತ್ಯದ ನಡೆಯಲ್ಲೂ ವಕ್ರತೆ ಒಂದು ಆಪ್ಯಾಯಮಾನವಾದ ಗುಣ. ಸಾಹಿತ್ಯ ಯಾವುದನ್ನೂ ನೇರವಾಗಿ ಹೇಳುವುದಿಲ್ಲ. ನೇರವಾಗಿ ಹೇಳಿದರೆ ಅದು ಸಾಹಿತ್ಯವಾಗುವುದಿಲ್ಲ. ಅದು ಹೇಳಬೇಕಾದ್ದನ್ನು ನೇರವಾಗಿ ಹೇಳದೆ ಇನ್ನಾವುದನ್ನೋ ನಮ್ಮ ಮುಂದೆ ಬಿಚ್ಚಿಡುತ್ತ ಹೇಳಬೇಕಾದ್ದನ್ನು ನಾವೇ ಊಹಿಸುವಂತೆ ಮಾಡಿ ತಾನು ದೂರ ಸರಿದು ಬಿಡುತ್ತದೆ. ಲೋಕಾಭಿರಾಮ

ದಲ್ಲಿ ಈ ಬಗೆಯ ಅಪೂರ್ವ ವಾಚೋಯುಕ್ತಿಯನ್ನು ನಾವು ಧಾರಾಳವಾಗಿ ಕಾಣುತ್ತೇವೆ. ಈ ಗುಣವೆ ಲೋಕಾಭಿರಾಮದ ಯಶಸ್ಸಿನ ಗುಟ್ಟು.

ಈ ವಕ್ರತೆಯ ಜತೆಗೆ ನವಿರಾದ ಹಾಸ್ಯ ಬೆರತು ಬಿಟ್ಟರೆ ಚಿನ್ನಕ್ಕೆ ಕಂಪಿಟ್ಟಂತೆ. ಕುಶಿಯವರ ಮಾತಾದರೂ ಸರಿಯೆ; ಬರವಣಿಗೆಯಾದರೂ ಸರಿಯೆ. ಅವರು ಕಟುವಾದ ಸತ್ಯವನ್ನು – ಅಪ್ರಿಯವಾದ ಸತ್ಯವನ್ನು ಕೂಡ – ನಮಗೆ ಪ್ರಿಯವಾಗುವಂತೆ ನವಿರಾದ ಹಾಸ್ಯದ ಲೇಪ ಬಳಿದು ನಮ್ಮ ಮುಂದಿರಿಸಿ ಕಚಗುಳಿಯಿಡುತ್ತಾರೆ. ರಾಷ್ಟ್ರೀಕರಣಕ್ಕೆ ಅವರು 'ಧೃತರಾಷ್ಟ್ರೀಕರಣ' ಎಂದು ನಾಮಕರಣ ಮಾಡಿದಾಗ ಈ ಅಪೂರ್ವ ಸಂಯೋಜನೆಯ ಹಾಸ್ಯ ಪ್ರಜ್ಞೆಗೆ, ಜತೆಗೆಯೆ ಅದು ತೆರೆದುಕೊಳ್ಳುವ ಅರ್ಥ ವಿಸ್ತಾರಕ್ಕೆ ತಲೆದೂಗದೇ ಇರುವುದು ಸಾಧ್ಯವುಂಟೆ?

ಕನ್ನಡದಲ್ಲಿ ಇಂಥ ಬಗೆಯ ಬರವಣಿಗೆ ತುಂಬ ವಿರಳವಾಗುತ್ತಿದೆ. ಕುಶಿಯವರೇ ಹೇಳುವಂತೆ ನಮ್ಮ ಇತಿಹಾಸ ಪ್ರಜ್ಞೆಗೆ ಎಲ್ಲೋ ತುಕ್ಕು ಹಿಡಿದಂತಿದೆ. ಪಾ.ವೆಂ. ಆಚಾರ್ಯರಂಥ ಬೆರಳೆಣಿಕೆಯ ಮಂದಿ ಮಾತ್ರವೆ ಕನ್ನಡದಲ್ಲಿ ಇಂಥ ಬರವಣಿಗೆಯನ್ನು ಸಮರ್ಥವಾಗಿ ಬೆಳೆಸಿದವರು. ಕುಶಿಯವರು ಇಂಥ ಅಪೂರ್ವಶೈಲಿಯ ಬರಹಗಾರರ ಅಗ್ರಪಂಕ್ತಿಯಲ್ಲಿದ್ದಾರೆ. ಆದರಿಂದಲೇ ಅವರ 'ಲೋಕಾಭಿರಾಮ' ಬರಿಯ ಅಂಕಣವಾಗಿ ಆಯಾ ವಾರ ಓದಿ ಮರೆತು ಬಿಡುವ ಸರಕಾಗದೆ ಕನ್ನಡ ಸಾಹಿತ್ಯವನ್ನು ಬಹುಕಾಲ ಶ್ರೀಮಂತಗೊಳಿಸುವ ಸಂಪುಟವಾಗಿ ಹೊರಬರುವುದು ಸಾಧ್ಯವಾಯಿತು. ಇದು ಅತಿಶಯೋಕ್ತಿಯಲ್ಲ; ಸ್ವಭಾವೋಕ್ತಿ.

* * * *

ಡಾ॥ ಹಾ.ಮಾ. ನಾಯಕರು ಈ 'ಲೋಕಾಭಿರಾಮ'ದ ಅಂಕಣ ಪ್ರಾರಂಭವಾದ ತರುಣದಲ್ಲಿ ತಾವೂ ಒಂದು ಅಂಕಣದಲ್ಲಿ ಹೀಗೆ ಬರೆದಿದ್ದರು: "ಅವರ (ಹರಿದಾಸ ಭಟ್ಟರ) ಹಾಗೆ ಶಾಸ್ತ್ರ ಸಾಹಿತ್ಯಗಳನ್ನು ಬಲ್ಲವರು ಹೆಚ್ಚು ಜನ ದೊರೆಯಲಾರರು. ಪೂರ್ವಕವಿ ವ್ಯಾಸಂಗ, ಅರ್ವಾಚೀನ ಸಾಹಿತಿ ಸಂಗಗಳೇನು ಸಾಮಾನ್ಯ ಸಂಗತಿಗಳೆ? ಇತಿಹಾಸ, ರಾಜಕೀಯ, ಅರ್ಥವಿಚಾರಗಳನ್ನು ಸಾಕಷ್ಟು ಮುಖ್ಯ ಅಧ್ಯಯನ ಮಾಡಿದವರು ಇದ್ದರೂ ಬರೆಯುವವರೆಷ್ಟು ಮಂದಿ? ಆಳವಾದ ಬಾವಿಗಳಿಗೇನೂ ಬರವಿಲ್ಲ; ಕೊರತೆಯಿರುವುದು ನೀರೆತ್ತುವ ಬಿಂದಿಗೆ-ತಂಬಿಗೆಗಳಿಗೆ".

ಇನ್ನೊಬ್ಬ ಪ್ರಸಿದ್ಧ ಅಂಕಣಕಾರರಾಗಿದ್ದ ವಿ. ಎಂ. ಇನಾಂದಾರ್ ಲೋಕಾಭಿರಾಮದ ಎರಡನೆಯ ಸಂಪುಟದ ಮುನ್ನುಡಿಯಲ್ಲಿ ಈ ಬರವಣಿಗೆಯ ವೈಶಿಷ್ಟ್ಯ-ಗರಿಮೆಗಳನ್ನು ತುಂಬ ಸುಂದರವಾಗಿ ಸಂಗ್ರಹಿಸಿದ್ದಾರೆ: "... ಮನಸ್ಸು ಮಿಡಿದಂತೆ ಅವರ ಮಾತು ದುಡಿಯುತ್ತದೆ, ಇಷ್ಟು ಸಹಜವಾಗಿ, ಅಪ್ರಯತ್ನವಾಗಿ ವ್ಯಂಗ್ಯವನ್ನು ರೂಢಿಸಿಕೊಂಡು ಬರೆಯುವುದು ಅಪರೂಪ, ನೋಯಿಸದೆ ನಗಿಸಿ, ನಗಿಸಿಯೂ ಯೋಚನೆಗೀಡು ಮಾಡಿ ತನ್ನ ಆಲೋಚನೆಯ ಕ್ರಮವನ್ನು ಸೂಚಿಸಿ ಮುನ್ನಡೆಯಬಲ್ಲ ಬರವಣಿಗೆಯ ರೀತಿ ಒಂದು ಸಹಜ ಸಿದ್ಧಿ ಎಂದೇ ಹೇಳಬೇಕು..."

ಮೂರನೆಯ ಸಂಪುಟಕ್ಕೆ ಮುನ್ನುಡಿ ಬರೆದ ಶ್ರೀ ಜಿ. ಟಿ. ನಾರಾಯಣ ರಾಯರೂ ಇದೇ ಮಾತನ್ನು ಹೇಳುತ್ತಾರೆ: "... ಇವರು ಯಾವುದೇ ಸಮಕಾಲೀನ ಕಟುಸತ್ಯವನ್ನೂ ಗ್ರಹಿಸಿ ದಿವ್ಯ ನಿರಪೇಕ್ಷತೆಯ ಆದರೆ ಪೂರ್ಣ ಕಾಳಜಿಯ ನಿಲುವಿನಿಂದ ಬರೆಯಬಲ್ಲರು. ಇವರ ಗಲಗು ನೇರ ನಾಟಿದವ ಕೂಡ ಅದರಿಂದ ಸುಧಾರಿತನಾಗಿ ಕುಶಿಯವರ ಬಗ್ಗೆ ಗೌರವ ತಾಳಿಯಾನೇ ವಿನಾ ದ್ವೇಷ ತಳೆಯಲಾರ. ಭಾಷೆಯ ಮೇಲೆ ಹರಿದಾಸ ಭಟ್ಟರಿಗೆ ಇರುವ ಪ್ರಭುತ್ವ ಅಸಾಧಾರಣವಾದದ್ದು. ಕನ್ನಡ ಗದ್ಯವನ್ನು ಇವರಷ್ಟು ಸುಂದರವಾಗಿ ಕ್ರಿಯಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಂಡಿರುವವರು ಬಲು ವಿರಳ..."

ಯಾರೂ ಭಟ್ಟರನ್ನು ಬರಿದೇ ಹೊಗಳಲಿಲ್ಲ. ನಿಜವಾಗಿ ಇದ್ದ ಸಂಗತಿಯನ್ನಷ್ಟೇ ಹೇಳಿದ್ದಾರೆ.

ಭಟ್ಟರ ತಿಳಿಹಾಸ್ಯದ ಮಾತಿನ ಮೊನಚಿಗೆ ಅವರ ಬರವಣಿಗೆಯಿಂದಲೇ ಉದಾಹರಣೆಗಳನ್ನು ಆಯದೆ ನಾನು ಎಷ್ಟು ವಿಶೇಷಣಗಳಿಂದ ಅದನ್ನು ಬಣ್ಣಿಸಿದರೂ ಅದು 'ನಿಜವಾದ ಸನ್ಯಾಸಿ'ಯ ಮುಂದೆ ಹೆಣ್ಣನ್ನು ವರ್ಣಿಸಿದಂತೆ ಆಗಿ ಬಿಡಬಹುದು ಎನ್ನುವ ಗುಮಾನಿ ನನಗೆ ಇದ್ದೇ ಇದೆ. ಅದಕ್ಕಾಗಿ ಅವರದೇ ಕೆಲವು ಮಾತುಗಳನ್ನು ನಿಮ್ಮ ಮುಂದಿಡುವುದು ಅಗತ್ಯ.

* *

ದಿ॥ ಗೋವಿಂದ ಪೈಯವರು ಕಣ್ಮರೆಯಾದ ಸಂದರ್ಭದಲ್ಲಿ ಅವರ ನೆನಪಿಗಾಗಿ ನಾನೊಂದು ಪದ್ಯ ಬರೆದೆ. ಅದರ ಕೊನೆಯ ಸಾಲುಗಳು ಹೀಗಿವೆ:

ಬೆಳ್ಳಿ ಮೀಸೆಯ ಮಗು
ಮಗುವಿನಂಥದೇ ನಗು
ಇನ್ನಿಲ್ಲ

ಇಲ್ಲ, ಮಂಜೇಶ್ವರದಲ್ಲಿ
ಕನ್ನಡಿಗರಿಗಿನ್ನು ಕೆಲಸವಿಲ್ಲ.

ನನ್ನ ದುರ್ದೈವದಿಂದ ಹರಿದಾಸ ಭಟ್ಟರಿಗೂ ಈ ಪದ್ಯ ಪ್ರಿಯವಾಗಿ ಬಿಟ್ಟಿತು. ಈ ಕವನದ ಭಾಗ್ಯ ದೊಡ್ಡದು. ಅದು ಭಟ್ಟರ ಲೋಕಾಭಿರಾಮವೊಂದಕ್ಕೆ ಶೀರ್ಷಿಕೆಯನ್ನೊದಗಿಸಿತು. "ಮಂಜೇಶ್ವರದಲ್ಲಿ ಕನ್ನಡಿಗರಿಗಿನ್ನು ಕೆಲಸವಿಲ್ಲವೇ?" ಎಂಬ ಅಂಕಣದಲ್ಲಿ ಅವರ ಮಾತಿನ ಮೋಡಿ ಹೀಗೆ ಹರಿಯುತ್ತದೆ:

"ಡಿವಿಂ. ಪೈ ಅವರ ಜೀವನ ಪರ್ಯಂತದ ಸಾಧನೆಗೆ ಇನ್ನೊಂದು ಕವಿ ಹೃದಯ ಕರಗಿ ತಲೆಬಾಗಿ ಶ್ರದ್ಧೆಯನ್ನು ತೋಡಿಕೊಂಡ ಹೃದಯಂಗಮವಾದ ಈ ಕಾವ್ಯದ ಕೊನೆಯ ಸಾಲನ್ನು ಅಖಿಲ ಕನ್ನಡಿಗರು ಅಕ್ಷರಶಃ ಪಾಲಿಸಿಬಿಟ್ಟರು. ಬೆಳ್ಳಿ ಮೀಸೆಯ ದೊಡ್ಡ ಮಗುವಿನ ಆಡುಂಬೊಲ – ಮಾಡುಂಬೊಲವಾದ ಕವಿಯ ಮನೆಯನ್ನು ಹತ್ತೇ ಹತ್ತು ವರ್ಷಗಳಲ್ಲಿ ಪಾಳುದೇಗುಲವಾಗಿ ಮಾಡಿದರು." (ಸಂ.3 ಪು.27)

* * *

ಭಟ್ಟರು ಕಟ್ಟಾ ಆಸ್ತಿಕ ಅಲ್ಲದಿರಬಹುದು. ಅವರು ಕಟ್ಟಾ ನಾಸ್ತಿಕರೂ ಅಲ್ಲ. ಅವರನ್ನು 'ಅನಾಸ್ತಿಕ' ಎನ್ನಬಹುದೇನೋ. ಆಗ ನಾಸ್ತಿಕರಿಗೆ ಆಸ್ತಿಕರಿಗೆ ಇಬ್ಬರಿಗೂ ಕುಟುಕುವರು ಕುಟುಕು ನೀಡಬಹುದು. [ಬೇಕಿದ್ದರೆ ಅವರನ್ನು ಅನ್ನಾಸ್ತಿಕ ಎನ್ನಿ; ಅಥವಾ ಎಗ್-ನಾಸ್ತಿಕ ಎನ್ನಿ] ಆಸ್ತಿಕ್ಯದ ಮೇಲೆ ಅವರ ತಕರಾರು ಇರದಿದ್ದರೂ ಸ್ವಯಂಘೋಷಿತ ಆಸ್ತಿಕರ ಮೇಲೆ ಅವರ ತಕರಾರು ಉಂಟು. ಋಷಿ-ಮುನಿಗಳ ಬಗೆಗೆ ಅವರ ತಕರಾರು ಇರದಿದ್ದರೂ ಶ್ರೀಮಂತ ಋಷ್ಯಾಶ್ರಮಗಳ ಬಗೆಗೆ ಅವರ ತಕರಾರು ಉಂಟು. [ಅವರ ಅಂಕಣವನ್ನು ಓದಿದ ಒಂದಿಬ್ಬರು ಮಠಾಧಿಪತಿಗಳು ಅವರನ್ನು ವಾಕ್ಯಾರ್ಥಕ್ಕೆ ಕರೆದದುಂಟು!] ಅದರಿಂದಲೆ ಆಸ್ತಿಕರನ್ನು, ಆಸ್ತಿಕರು ಗುತ್ತಿಗೆ ಪಡೆದ ದೇವರನ್ನು, ಇಂಥ ದೇವರನ್ನು ಪರಿಚಯಿಸುವ ನಮ್ಮ ಗುರುಗಳನ್ನು ಭಟ್ಟರು ಲೇವಡಿ ಮಾಡಬಲ್ಲರು.

"ಪ್ರಸಿದ್ಧ ಆಂಗ್ಲ ನಾಟಕಕಾರ ಬರ್ನಾರ್ಡ್ ಶಾ 'ದೇವರ ಶೋಧಕ್ಕೆ ಹೊರಟ ಕರಿಯ ಹುಡುಗಿ' ಎಂಬೊಂದು ಕಥೆಯನ್ನು ಹೆಣೆದಿದ್ದರು: ಇಷ್ಟು ವರ್ಷ ತರುವಾಯ ಈ ಕಥೆ ವಾಸ್ತವಲೋಕಕ್ಕಿಳಿದ ಸುದ್ದಿ ಬೆಂಗಳೂರಿನಿಂದ ನಮಗೆ ಸಿಕ್ಕಿದೆ: 23 ವರ್ಷ ಪ್ರಾಯಪ್ರಬುದ್ಧ ಅಧ್ಯಾಪಿಕೆಯೊಬ್ಬಳು ಗುರುಸೇವೆ ಮಾಡಿ ಮಾಡುತ್ತ, ದೇವರ ಶೋಧಕ್ಕಾಗಿ ಹೊರಟು (ಇದುವರೆಗೆ) ಅಂತರ್ಧಾನಳಾಗಿ ಬಿಟ್ಟಳಂತೆ. ಆಧ್ಯಾತ್ಮಿಕಕ್ಕೆ ಜೋತು ಬಿದ್ದಿರುವ ಈ ಜಂಬೂದ್ವೀಪದಲ್ಲಿಯೂ ದೇವರ ಶೋಧಕ್ಕಾಗಿ ಹೊರಟ ಭಕ್ತಭಕ್ತೆಯರನ್ನು ನಂಬದಿರುವ ಜನರಿದ್ದಾರೆ – ಪ್ರಸ್ತುತ ಘಟನೆಯಲ್ಲಿ ಹುಡುಗಿಯ ತಂದೆ, ತಾಯಿ ಮತ್ತು ನ್ಯಾಯಪಾಲಕರಾದ ಪೋಲೀಸರು ಇವರಿಬ್ಬರೂ ನಂಬಿಯಣ್ಣಗಳಲ್ಲ". [ಸಂ.1 ಪು. 218]

"ವಿದೇಶಿಯರಿಗಾಗಿ – ಬಿಳಿ ತೊಗಲಿನ ನಾಸ್ತಿಕ ಶಿರೋಮಣಿಗಳ ಉದ್ಧಾರಕ್ಕೆಂದೇ – ಮುದ್ದಾಂ ಜನ್ಮವೆತ್ತಿರುವ ಸಿದ್ಧಪುರುಷರಿದ್ದಾರೆ. ವಿದೇಶೀಯರನ್ನು ಅವರಿದ್ದಲ್ಲಿಗೇ ಹೋಗಿ ದೇವರ ಶೋಧಕ್ಕೆ ಒಲಿಸುವ ಸಲುವಾಗಿ ಸಂತತ್ವವನ್ನು ಸ್ವಂತ ಸಂಪಾದನೆ ಮಾಡಿ ನ್ಯೂಯಾರ್ಕ್, ಚಿಕಾಗೋ ಅಂಥ ಪಾಪಕೂಪಗಳನ್ನು ಸಂದರ್ಶಿಸುವ ಸಾಧಕರಿದ್ದಾರೆ. ಈ ಶತಮಾನದ ಮೊದಲ ಭಾಗದಿಂದಲೇ ಅಮೆರಿಕದ ಕ್ಯಾಲಿಫೋರ್ನಿಯದಲ್ಲಿ ನೆಲಸಿ, ಶ್ರೀಮಂತ ಋಷ್ಯಾಶ್ರಮಗಳನ್ನು ನಿರ್ಮಾಣ ಮಾಡಿ ಯೋಗಾಭ್ಯಾಸ ಮಾಡಿಸುವ ಭಾರತೀಯ ಕೇಂದ್ರ ಕಟ್ಟಿದವರಿದ್ದಾರೆ. ಹೇಳಿ ಕೇಳಿ ನಾನೊಬ್ಬ ನಾಸ್ತಿಕ ಅರ್ಥಶಾಸ್ತ್ರಿಯಾದ್ದರಿಂದ ನನಗೆ ಈ ಕಟ್ಟ ಕೊನೆಯ ವರ್ಗದ ಗುರುಗಳ ಮೇಲೆ ತುಂಬಾ ಅಭಿಮಾನ. ಏಕೆಂದರೆ ಇವರಿಂದಾಗಿ ನಮ್ಮ ನಿರ್ಯಾತ ವ್ಯಾಪಾರದ ಕಾರ್ಮುಗಿಲಲ್ಲಿ ಈ ಕೆಟ್ಟ ದಿವಸಗಳಲ್ಲಿಯೂ ಬೆಳ್ಳಿಯಂಚೊಂದು ಹೊಳೆಯುತ್ತದೆ. ಅಮೇರಿಕೀಯ, ಯುರೋಪೀಯ ಅಸ್ಥ ಮಹನೀಯರನ್ನೂ ಮಹಿಳೆಯರನ್ನೂ ತಮ್ಮ ಸಾಧನೆಯಿಂದಲೂ, ಪ್ರವಚನಗಳಿಂದಲೂ ಆಕರ್ಷಿಸಿ ಅವರ ನಾಸ್ತಿಕ್ಯವನ್ನು ಭಗವದ್‌ಭಕ್ತಿಯನ್ನಾಗಿಯೂ ಡಾಲರ್ ಬ್ಯಾಲನ್ಸನ್ನು ರೂಪಾಯಿ ಸೇವಿಂಗ್ಸ್ ಬ್ಯಾಂಕಾಗಿಯೂ ಪರಿವರ್ತಿಸಬಲ್ಲ ಇವರ ಮಾಂತ್ರಿಕ ಶಕ್ತಿಯನ್ನು ನಮ್ಮ ವಿದೇಶಿ ವ್ಯಾಪಾರ ಸಚಿವರ ಗಮನಕ್ಕೆ ಯಾರಾದರೂ ತರಬೇಕು. ನೂತನ ಜಂಬೋ ವಿಮಾನದಲ್ಲಿ ಸ್ಥಳ ಖಾಲಿ ಇರುವಾಗಲೆಲ್ಲಿ – ಇನ್ನು ಹತ್ತು ವರ್ಷಗಳವರೆಗೆ ಇಂಥವರನ್ನು ಧರ್ಮಾರ್ಥವಾಗಿ ನಮ್ಮ ಯೋಗಧರ್ಮ ಸಾಧನಾಪ್ರಚಾರಕ್ಕೆಂದು ಆರಾರು ತಿಂಗಳು ಅಮೇರಿಕದಲ್ಲಿಯೋ ಅಥವಾ ಜಿನೀವಾ, ಪ್ಯಾರಿಸ್‌ಗಳಲ್ಲೋ ಇಳಿಸಿಬಿಡಬೇಕು..." (ಪು. 219)

"ಅಮೇರಿಕೀ ಹಿಪ್ಪಿಹಿಪ್ಪಿಯರು ಮುಂಬಯಿ ದಿಲ್ಲಿಯಂಥ ನಗರಗಳಲ್ಲಿ ತಲೆದೋರಿಸಿಕೊಂಡು, ತುಳಸೀಮಣಿ ಮಾಲೆಯನ್ನು ಧರಿಸಿ, ನಾಮಹಚ್ಚಿ, ತಾಳ ಹಾಕಿ ನರ್ತಿಸುತ್ತ 'ಸೀನ್ಯಾಕೋ ನಿನ್ನ ಹಂಗ್ಯಾಕೋ' ಎಂದು ಹಾಡಿದರೆಂದರೆ ನಮ್ಮ ವಯಸ್ಸಿನ ತರಳರೂ ಮರುಳಾಗಿ ಶಾಲೆ ಕಾಲೇಜುಗಳನ್ನು ಭಜನೆ ಮಾಡುತ್ತ ಪ್ರವೇಶಿಸುವ ಸಂಭವವುಂಟು. ಅಮೇರಿಕನ್ ಹರಿದಾಸ ಸಂಘದವರು ತಾಳದ ಬದಲು ಜಾಸ್‌ಗಾನದ ಚಿಟಿಕೆ-ಬಾಂಜೋ ಅಂಥ ವಾದ್ಯ ವಿಶೇಷಗಳನ್ನು ಬಳಸಿದರಂತೂ ನಮ್ಮ ಹುಡುಗರು ಮರುಳಾಗುವುದು ಖಂಡಿತ. ದಿಲ್ಲಿಯ ಬೀದಿಗಳಲ್ಲಿ

ಮಾರುದ್ದ ಗಡ್ಡ ಬೆಳೆಸಿಕೊಂಡು ಅವಧೂತಮಾರ್ಗಾನುಸಾರಿಗಳಾದ ಶ್ರೀಮಂತ ವಿರಾಗಿಗಳನ್ನು ಕಂಡ ಮೇಲೆ ಅನುಕರಣ ಪ್ರಿಯವಾದ ಈ ದೇಶ ಹಿಪ್ಪಿತನದ ದಾಖಲೆಗಳನ್ನು ವೇದೋಪನಿಷತ್ತುಗಳಲ್ಲಿ ಸಂಶೋಧನೆ ಮಾಡಲು ಹೊರಟೀತು. ಕೊನೆಯ ಹಿಪ್ಪಿ ಭಾರತೀಯನೇ ಎಂದು ನನ್ನ ವಾದ: ಏಕೆಂದರೆ ಅಮೇರಿಕದ ಬುದ್ಧಿವಂತ ತರುಣರ ಮನಸ್ಸು ಪಾದರಸದಂತೆ, ಯಾವುದರಲ್ಲಿಯೂ ಬಹಳ ಕಾಲ ನಿಲ್ಲುವಂಥದಲ್ಲ; ವಾರದಿಂದ ವಾರಕ್ಕೆ, ವರ್ಷೇ, ವರ್ಷೇ, ಎರಡು ಮೂರು ವರ್ಷಗಳಿಗೊಮ್ಮೆ ಫ್ಯಾಷನ್ನು ಬದಲಾಗುತ್ತದೆ. ನಮ್ಮಲ್ಲಿ ಹಾಗಲ್ಲ: ಪರಿವರ್ತನೆಗಳು ಇಲ್ಲಿ ಯುಗಾಂತರಗಳ ಹರವಿನಲ್ಲಿ ನಡೆಯಬೇಕು. ದೇವರು ಹತ್ತವತಾರ ತಾಳಬೇಕು..."

(ಪು. 220)

"ನಾವು ಡಿಗ್ರಿಯನ್ನು ಹಾಕಿಕೊಂಡ ಹಾಗೆ ಹೆಸರಿನ ಆಚೆಗೆ, ಪದ್ಮಶ್ರೀಯನ್ನು ಅಂಟಿಸಿಕೊಂಡರೆ ಆಗದೆ? ನಮ್ಮ ಹುಡುಗರು ಡಿಗ್ರಿಗಾಗಿ ಪಟ್ಟ ಕಷ್ಟ ಹೆಚ್ಚೋ? ಹಠಾತ್ತನೆ ಲಾಟರಿಯಂತೆ ಸಿಗುವ ಈ ಪದ್ಮಗಳು, ರತ್ನಗಳು, ಭೂಷಣಗಳು ಹೆಚ್ಚೋ? ಬೆವರಿಳಿಸಿ, ನಿದ್ದೆ ಬಿಟ್ಟು ಸಂಪಾದಿಸಿದ ಡಿಗ್ರಿಯನ್ನು ನಾವು ಎಲ್ಲಿಡಬೇಕೋ ಅಲ್ಲಿಟ್ಟಿದ್ದೇವೆ. ಮೊದಲು ನಾವು, ಆ ಮೇಲೆ ನಮ್ಮ ಡಿಗ್ರಿ. ಈ ಬಿರುದುಗಳಾದರೋ – ಅವು ಮೊದಲು, ಆ ಮೇಲೆ ನಾವು ನೀವು. ಇದೆಂಥ ವಿಪರ್ಯಾಸ!"

[ಸಂ. 2 ಪು. 226]

"ಭಾರತದಲ್ಲಿ ಸರ್ವಸಮಾನತೆಯನ್ನು ತರುವುದು – ಎತ್ತ ತಿರುಗಿದರೂ – ಕಷ್ಟ. ಎರಡನೆ ವರ್ಗ ಅಳಿಸಿ, ಬಿರುದು ಕಿತ್ತು ಬಿಸಾಡಿ. ಇನ್ನೊಂದೇನೋ ಆ ಜಾಗದಲ್ಲಿ ಹುಟ್ಟಿ ಬೆಳೆಯುತ್ತದೆ. ಮನುಷ್ಯ ಜಾತಿ ಒಂದು ನಿಜ. ಆದರೆ ಗಂಡು ಬೇರೆ, ಹೆಣ್ಣು ಬೇರೆ. ಅಂದರೆ ಎರಡೇ ಜಾತಿಯೇ? ಛೇ, ಕೇಳಿ ನೋಡಿ. ಒಂದರಂತೆ ಒಂದಿಲ್ಲ".

(ಪು. 227)

ಇವು ಈ ಸಂಪುಟಗಳಿಂದ ಆಯ್ದ ಶ್ರೇಷ್ಠ ಉದ್ಧರಣೆಗಳೇನೂ ಅಲ್ಲ. ನಿರುದ್ದೇಶದಿಂದ ಪುಟ ತಿರುವಿದಾಗ ಸಿಕ್ಕುವ ಉದ್ಧರಣೆಗಳು. ಇಲ್ಲಿಯ ಆಯುವ ಪ್ರಶ್ನೆಯೇ ಇಲ್ಲ. ಯಾವ ಪುಟ ತೆರೆದರೂ ನಿಮಗೆ ಇಂಥದೇ ಮಾತಿನ ಮೋಡಿ ದೊರಕುತ್ತದೆ. ಭಟ್ಟರು ತಮ್ಮ ಲೇಖನದಲ್ಲಿ ವಿಡಂಬನೆಯನ್ನು ಪ್ರಯಾಸಪಟ್ಟು ತೂರುವುದಿಲ್ಲ. ವಿಡಂಬನೆ ಲೇಖನದ ಅಂತರ್ವಾಹಿನಿಯಾಗಿರುತ್ತದೆ.

ಅವರು ಹೊಸ ಅರ್ಥದ ಸಂವಹನೆಗಾಗಿ ಹೊಸ ಶಬ್ದಗಳನ್ನು ಸಂಯೋಜಿಸುವ ಬಗೆಯನ್ನು ಈ ಉದ್ಧರಣೆಗಳಲ್ಲಿ ಕಾಣಬಹುದು. ಬೇಕೆಂದೇ ಕೆಲವೊಮ್ಮೆ ಅವರು ಸ್ವಸಂಯೋಜಿತ 'ಅಪಶಬ್ದ'ಗಳನ್ನು ಪ್ರಯೋಗಿಸುತ್ತಾರೆ. ಅದರಿಂದ ಒಂದು ಹೊಸ ಅರ್ಥದ ಆಯಾಮದತ್ತ ನಮ್ಮನ್ನು ಕೊಂಡೊಯ್ಯುತ್ತಾರೆ. ಆಗ ಅವರ ಶಬ್ದಗಳಿಗೆ ಅವರದೇ ಆದ ಒಂದು ವ್ಯಾಕರಣ ನಿರ್ಮಾಣಗೊಳ್ಳುತ್ತದೆ. 'ಹಿಪ್ಪ-ಹಿಪ್ಪಿಯರು' ಇಂಥ ಪ್ರಯೋಗಗಳಲ್ಲಿ ಈ ಚೆಲುವನ್ನು ಕಾಣಬಹುದು. 'ನಿರಂಕುಶಾಃ ಕವಯಃ' ಎಂದು ಪ್ರಾಚೀನರು ಹೇಳಿದ್ದು ಎಷ್ಟು ಅರ್ಥಪೂರ್ಣ. ಅಂಕೆಯಿಲ್ಲದೆಯೇ ಅಂಕಣದ ಅಂಕಗಣಿತವನ್ನು ನಿರ್ವಹಿಸಬಲ್ಲವರಿಗೆ ಅಂಕುಶದ ಅಗತ್ಯವಿಲ್ಲ. ಅಗತ್ಯವಿದ್ದಲ್ಲಿ ಇಂಥ ಅಂಕಣಗಳು ಸೃಷ್ಟಿಯಾಗುತ್ತಲೇ ಇರಲಿಲ್ಲ.

ಹಿಂದಿನ ಕಾಲದಲ್ಲಿ ಒಬ್ಬ ಗ್ರಂಥಕಾರನ ಹೆಚ್ಚು ಖ್ಯಾತವಾದ ಕೃತಿಯ ಹೆಸರಿನಿಂದಲೇ ಆತನನ್ನು ಕರೆಯುವುದು ರೂಢಿಯಿತ್ತು : ಯೋಗದೀಪಿಕಾಚಾರ್ಯ, ಚಂದ್ರಿಕಾಚಾರ್ಯ, ಪರಿಮಳಾಚಾರ್ಯ ಇತ್ಯಾದಿ. ಹಾಗೆಯೇ ನನಗೆ ಪರಿದಾಸ ಭಟ್ಟರನ್ನು 'ಲೋಕಾಭಿರಾಮ ಭಟ್ಟರು' ಎಂದು ಹೆಸರಿಸಿ ಕರೆದುಬಿಡಬೇಕೆಂಬ ಆಸೆಯುಂಟು. ಆದರೆ ಅವರಿಗಿಂತ ವಯಸ್ಸಿನಲ್ಲಿ ಕಿರಿಯನಾದ ನಾನು ಅವರಿಗೆ ನಾಮಕರಣ ಮಾಡುವ ಸಾಹಸ ಮಾಡಲಾರೆ.

೨೬. ಕು.ಶಿ. ಹರಿದಾಸ ಭಟ್ಟರ "ಅರ್ಥಶಾಸ್ತ್ರ" ಮತ್ತು "ಏಶಿಯದ ಸಂಪತ್ತು"

— ನಿ. ಶ್ರೀಶ ಬಲ್ಲಾಳ

ಬಹುಮುಖ ಪ್ರತಿಭೆಯ ಪ್ರೊ. ಕು. ಶಿ. ಹರಿದಾಸ ಭಟ್ಟರು ವಿಶೇಷವಾಗಿ ಕಲಿತ ಹಾಗೂ ಕಲಿಸಿದ ಒಂದು ಶಾಸ್ತ್ರವೆಂದರೆ ಅರ್ಥಶಾಸ್ತ್ರ. 1946–49ರ ಅವಧಿಯಲ್ಲಿ ಅವರು ಮದ್ರಾಸು ಕ್ರಿಶ್ಚನ್ ಕಾಲೇಜಿನಲ್ಲಿ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ವ್ಯಾಸಂಗ ನಡೆಸಿ, ಪ್ರಥಮ ಶ್ರೇಣಿಯಲ್ಲಿ ವಿಶೇಷ ಸ್ಥಾನದೊಂದಿಗೆ ಉತ್ತೀರ್ಣರಾಗಿ, ಸ್ನಾತಕೋತ್ತರ ಪದವಿಯನ್ನು ಗಳಿಸಿದರು. 1963ರಲ್ಲಿ ಇಟಲಿಯಲ್ಲಿ ನೆಲೆಸಿದ್ದು, ಆರ್ಥಿಕ ಬೆಳವಣಿಗೆಯ ಕುರಿತು ವಿಶೇಷ ಅಧ್ಯಯನ ನಡೆಸಿದ್ದರು. ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಮೂರು ದಶಕಗಳ ಕಾಲ ಅರ್ಥಶಾಸ್ತ್ರದ ಪ್ರಾಚಾರ್ಯರಾಗಿ, ಆ ಶಾಸ್ತ್ರದ ಹಿನ್ನೆಲೆಯಲ್ಲಿ ಬರೆದ ಹಲವು ಗ್ರಂಥಗಳ ಮೂಲಕ, ನೂರಾರು ಲೇಖನಗಳ ಮೂಲಕ, ಕನ್ನಡ ಭಾಷೆಯ ವೈಚಾರಿಕ ಸಾಹಿತ್ಯವನ್ನು ಸಂಪನ್ನಗೊಳಿಸಿದ್ದಾರೆ.

ಶಾಸ್ತ್ರೀಯ ವಿಷಯಗಳನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲ್ಪಟ್ಟ ಗ್ರಂಥಗಳು ನಮ್ಮ ದೇಶದಲ್ಲಿ ಸಾಕಷ್ಟು ಇಲ್ಲ. ಆಧುನಿಕ ಅರ್ಥಶಾಸ್ತ್ರದ ಕ್ಲಿಷ್ಟ ವಿಷಯಗಳನ್ನು ಕನ್ನಡದಂಥ ಪ್ರಾದೇಶಿಕ ಭಾಷೆಯಲ್ಲಿ ಭಟ್ಟಿ ಇಳಿಸುವ ಲೇಖಕರು ತಮ್ಮ ಶಾಸ್ತ್ರದಲ್ಲಿ ಮಾತ್ರವಲ್ಲ, ಕನ್ನಡದಲ್ಲೂ ಸಾಕಷ್ಟು ಪರಿಣತಿ ಪಡೆದಿರಬೇಕು; ಓದುವವರ ಬಗೆಗೂ ಪ್ರಾಯೋಗಿಕ ಅನುಭವವುಳ್ಳವರಾಗಿರಬೇಕು. ಹರಿದಾಸ ಭಟ್ಟರು ಕಾಲೇಜಿನ ಮೆಟ್ಟಲು ಹತ್ತುವ ಮೊದಲೇ ಈ ರೀತಿಯ ಅರ್ಹತೆಗಳನ್ನು ಗಳಿಸಿದ್ದರು. ಹೈಸ್ಕೂಲು ವಿದ್ಯಾಭ್ಯಾಸದ ಬಳಿಕ ಶಾಲಾಮಾಸ್ತರರಾಗಿ ಕನ್ನಡ, ಹಿಂದೀ, ಇಂಗ್ಲೀಷ್ ಸಾಹಿತ್ಯಗಳ ಅಭ್ಯಾಸಿಯಾಗಿ ಮೇಲ್ಮಟ್ಟದ ಬರಹಗಾರರಾಗಿ, ತನ್ನ ಬದುಕನ್ನು ನಾಡ-ನುಡಿಯ ಕಾಯಕಕ್ಕೆ ಬೇಕಾಗುವಂತೆ ರೂಪಿಸಿಕೊಂಡಿದ್ದರು. ಅರ್ಥಶಾಸ್ತ್ರದಂಥ ಮಾನವಿಕ ಶಾಸ್ತ್ರದ ಅಧ್ಯಯನಕ್ಕೆ ಸಂಸ್ಕೃತಿ-ಸಾಹಿತ್ಯಗಳ ಅಭ್ಯಾಸ ಹೊಸ ಆಯಾಮವನ್ನು ನೀಡುತ್ತದೆ. ಈ ರೀತಿಯ ಪ್ರಬುದ್ಧ ಅಧ್ಯಯನದ ಕುರುಹುಗಳು ಹರಿದಾಸ ಭಟ್ಟರ ಬರವಣಿಗೆಯಲ್ಲಿ ದಟ್ಟವಾಗಿ ಹರಡಿಕೊಂಡಿದೆ. ಅವರ ಮಾದರಿಯಲ್ಲಿ ಶಾಸ್ತ್ರೀಯ ವಿಷಯಗಳನ್ನು ಹಲವು ಆಕರಗಳಿಂದ ಸಂಗ್ರಹಿಸಿ, ಬಹುಮುಖ ವಿಶ್ಲೇಷಣೆಯೊಂದಿಗೆ, ಸಮತೂಕದ ನಿರ್ಣಯಗಳನ್ನೊಳಗೊಂಡು, ಚುಟುಕಾಗಿ, ನವುರಾದ ಹಾಸ್ಯ ಬೆರೆಸಿ, ತಿಳಿಗನ್ನಡದಲ್ಲಿ ವಿವರಿಸುವವರು ವಿರಳ.

ಅರ್ಥಶಾಸ್ತ್ರ

ಹರಿದಾಸ ಭಟ್ಟರು 1950ರಲ್ಲಿ ಬರೆದು, 1952ರಲ್ಲಿ ಪ್ರಕಟಿಸಿದ "ಅರ್ಥಶಾಸ್ತ್ರ" ಎಂಬ ಗ್ರಂಥ ಆ ಶಾಸ್ತ್ರದ ಮೂಲತತ್ವಗಳನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಚುಟುಕಾಗಿ ವಿವರಿಸುವ ಒಂದು ಕೈಪಿಡಿ. ಮದ್ರಾಸು ವಿಶ್ವವಿದ್ಯಾನಿಲಯದ ಒಂದು ಗ್ರಂಥ ಯೋಜನೆಯಲ್ಲಿ ಸ್ಪರ್ಧಿಸಿ ಪಾರಿತೋಷಕ ಪಡೆದ ಈ ಪುಸ್ತಕ ಅರ್ಥಶಾಸ್ತ್ರದ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳ ರಚನೆಗೆ ಹೊಸ ಚಾಲನೆ ನೀಡಿತು. ಪ್ರಾಜ್ಞ ಬಿ. ಸೀತಾರಾಮಯ್ಯನವರ "ಹಣಪ್ರಪಂಚ"ವನ್ನು ಬಿಟ್ಟರೆ, ಇಂಥ ಅರ್ಥಶಾಸ್ತ್ರ ಗ್ರಂಥಗಳು ಕನ್ನಡದಲ್ಲಿ ಅವರೆಗೆ ಪ್ರಕಟವಾಗಿರಲಿಲ್ಲ.

ಸ್ನಾತಕಪೂರ್ವ ತರಗತಿಗಳಲ್ಲಿ ಅರ್ಥಶಾಸ್ತ್ರವನ್ನು ಕಲಿಸುವಾಗ ವಿದ್ಯಾರ್ಥಿಗಳಿಗೆ ಆ ಶಾಸ್ತ್ರದ ಸ್ಥೂಲ ಚಿತ್ರವನ್ನು ಸರಳವಾಗಿ, ಸಂಕ್ಷೇಪವಾಗಿ, ವಿದ್ಯಾರ್ಥಿಗಳ ಪರಿಸರ-ಪರಂಪರೆಗಳಿಗನುಸಾರವಾಗಿ ಮನಗಾಣಿಸುವುದು ಪ್ರಧಾನ ಉದ್ದೇಶವಾಗಿರಬೇಕು. ಇತ್ತೀಚೆಗೆ ಅರ್ಥಶಾಸ್ತ್ರ ಸಂಕೀರ್ಣವಾದ ಗಣಿತಮಯ ಪರಿಕಲ್ಪನೆಗಳ ವ್ಯೂಹದಲ್ಲಿ ಶಾಖೋಪಶಾಖೆಯಾಗಿ ಬೆಳೆಯುತ್ತಿದೆ. ಬೆಳವಣಿಗೆಯ ಸಂಭ್ರಮದಲ್ಲಿ ವಿದ್ಯಾರ್ಥಿಗಳ ಅಳವಿಗೆ ಮೀರಿದ ವಿಷಯಗಳನ್ನು ಸ್ನಾತಕಪೂರ್ವ ಪಾಠಪಟ್ಟಿಗಳಿಗೆ ತೂರುವುದುಂಟು. ಇಂಥ ಸನ್ನಿವೇಶದಲ್ಲಿ ಇಂಗ್ಲೀಷ್ ಭಾಷೆಯನ್ನೇ ಸಾಕಷ್ಟು ಅರಿಯದ ವಿದ್ಯಾರ್ಥಿ "ಹೊಲಬುತಪ್ಪಿದ ಹುಲ್ಲೆ ಬೇಡನ ಬಲೆಗೆ ಬಿದ್ದಂತೆ" ತರಗತಿಯಲ್ಲಿ

ಚಡಪಡಿಸುತ್ತಾನೆ. ಅರ್ಥಶಾಸ್ತ್ರದ ಒಟ್ಟಂದದ ಚಿತ್ರವನ್ನು ಸುಲಭವಾಗಿ ತಿಳಿಯಬೇಕೆನ್ನುವ ವಿದ್ಯಾರ್ಥಿಗಳು ಹರಿದಾಸ ಭಟ್ಟರು ಬರೆದ "ಅರ್ಥಶಾಸ್ತ್ರ"ವನ್ನು ಅವಶ್ಯವಾಗಿ ಓದಬೇಕು.

ಅನುಭೋಗ, ಬೇಡಿಕೆ, ಉತ್ಪಾದನೆ, ಉತ್ಪಾದನೆಯ ಅಂಗಗಳು. ಮೌಲ್ಯ-ಧಾರಣೆಗಳ ನಿರ್ಧಾರ. ಗೇಣಿ ಮತ್ತು ಬಾಡಿಗೆ, ಕೂಲಿ ಅಥವಾ ವೇತನ, ಬಂಡವಾಳ, ಬಡ್ಡಿ, ಲಾಭಾಂಶ, ನಿರುದ್ಯೋಗ ಸಮಸ್ಯೆ, ಹಣಕಾಸು ಮತ್ತು ಬ್ಯಾಂಕಿಂಗ್ ವ್ಯವಸ್ಥೆ, ಅಂತಾರಾಷ್ಟ್ರೀಯ ವ್ಯಾಪಾರ, ಸಾರ್ವಜನಿಕ ಹಣಕಾಸು, ಆರ್ಥಿಕ ಬೆಳವಣಿಗೆ, ಸಮಾಜವಾದಿ ಅರ್ಥಮಂಡಲ, ಆರ್ಥಿಕ ಯೋಜನೆ – ಇವು ಇಂದಿನ ಆರ್ಥಿಕ ಜೀವನದ ಮುಖ್ಯ ಅಂಶಗಳು. ಹರಿದಾಸ ಭಟ್ಟರ ಗ್ರಂಥ ಈ ಎಲ್ಲ ಅಂಶಗಳ ಮೂಲಸೂತ್ರಗಳನ್ನೂ, ತಾತ್ವಿಕ ವಿಶ್ಲೇಷಣೆಗಳನ್ನೂ ಕರ್ನಾಟಕದ ಜನಸಾಮಾನ್ಯಕ್ಕೆ ಅರ್ಥವಾಗುವ ಶೈಲಿಯಲ್ಲಿ, ಹಿತಮಿತವಾಗಿ ವಿವರಿಸುತ್ತದೆ. ಆರ್ಥಿಕ ವಿಶ್ಲೇಷಣೆಯಲ್ಲಿ ವಿವಿಧ ಸಿದ್ಧಾಂತಗಳ, ಸಮೀಕರಣಗಳ, ರೇಖಾಚಿತ್ರಗಳ ತೊಡಕನ್ನು ನೀಗಿಸುವುದು ಸುಲಭವಲ್ಲ. ಅವುಗಳನ್ನು ಅತಿಯಾಗಿ ವಿಸ್ತರಿಸಿ, ಓದುವವರನ್ನು ಕಂಗೆಡಿಸುವ ಗ್ರಂಥಗಳು ಹೇರಳವಾಗಿವೆ. ಹರಿದಾಸ ಭಟ್ಟರ ವಿವರಣೆ ಯಾವ ವಿಶಿಷ್ಟ ಸಿದ್ಧಾಂತಕ್ಕೂ ಅಂಟಿಕೊಳ್ಳುವುದಿಲ್ಲ. ಆರ್ಥಿಕ ಪ್ರಪಂಚದ ವಸ್ತುಸ್ಥಿತಿಯ ಸರಳ ನಿರೂಪಣೆಗೆ ಎಷ್ಟು ಬೇಕೋ ಅಷ್ಟೇ ಪ್ರಮಾಣದಲ್ಲಿ ಸಿದ್ಧಾಂತಗಳನ್ನೂ ರೇಖಾಚಿತ್ರಗಳನ್ನೂ ಬಳಸಿಕೊಂಡಿದ್ದಾರೆ. ಕನ್ನಡಿಗರ – ಹೆಚ್ಚಾಗಿ ದಕ್ಷಿಣ ಕನ್ನಡದ ಜನರ – ದಿನಬಳಕೆಯ ಕನ್ನಡದ ಮಾತುಗಳನ್ನು ಬಳಸಿ, ಕ್ಲಿಷ್ಟ ವಿಷಯಗಳನ್ನು ಮನೋರಂಜಕವಾಗುವಂತೆ ಬೋಧಿಸುವ ಜಾಣ್ಮೆ ಗ್ರಂಥದುದ್ದಕ್ಕೂ ಪ್ರಕಟವಾಗುತ್ತದೆ.

ರಿಕಾರ್ಡೋರವರ ಗೇಣಿ ಸಿದ್ಧಾಂತ, ಬ್ಯಾಂಕುಗಳು ಕ್ರೆಡಿಟ್ ಸೃಷ್ಟಿಸುವ ಕ್ರಮ, ಹಣದ ಪರಿಮಾಣ ಮೀಮಾಂಸೆ, ಅಂತಾರಾಷ್ಟ್ರೀಯ ವ್ಯಾಪಾರದ ಹೋಲಿಕೆ ವೆಚ್ಚದ ಸೂತ್ರ, ಟಾರಿಫ್‌ಗಾವಲು ಮತ್ತು ಮುಕ್ತ ವ್ಯಾಪಾರದ ತುಲನಾತ್ಮಕ ವಿಮರ್ಶೆ, ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳು, ಕರಭಾರದ ವಿತರಣೆ, ಮಾರ್ಕ್ಸ್‌ರವರ ಮಿಗುತೆ ಮೌಲ್ಯ ಸಿದ್ಧಾಂತ – ಮುಂತಾದ ಶಾಸ್ತ್ರೀಯ ವಿಚಾರಗಳನ್ನು ಈ ಗ್ರಂಥದಲ್ಲಿ ವಿವರಿಸಿದಷ್ಟು ಸರಳವಾಗಿ, ಚುಟುಕಾಗಿ, ಚುರುಕಾಗಿ, ನಿರೂಪಿಸುವ ಗ್ರಂಥಗಳು ಹೆಚ್ಚಾಗಿ ಇಲ್ಲ. ಸುಮಾರು 300 ಪುಟಗಳ ಪರಿಮಿತ ವ್ಯಾಪ್ತಿಯಲ್ಲಿ ಪ್ರಸಕ್ತ ವಿಷಯಗಳ ಎಲ್ಲ ಸೂಕ್ಷ್ಮ ಆಯಾಮಗಳನ್ನು ಪರಿಶೀಲಿಸಿ, ಅರ್ಥಶಾಸ್ತ್ರದ ಬಗ್ಗೆ ಒಂದು ಸಾಕಲ್ಯ ದೃಷ್ಟಿಯನ್ನು ಮೂಡಿಸುವ ಪ್ರಯತ್ನವನ್ನು ಈ ಗ್ರಂಥ ಯಶಸ್ವಿಯಾಗಿ ಪೂರೈಸಿದೆ.

ಅರ್ಥಶಾಸ್ತ್ರದ ಕನ್ನಡ ಪಠ್ಯಪುಸ್ತಕಗಳನ್ನು ಬಳಸುವ ಹಲವು ಪಾರಿಭಾಷಿಕ ಶಬ್ದಗಳನ್ನು ಪ್ರಾಯಶಃ ಹರಿದಾಸ ಭಟ್ಟರೇ ಮೊತ್ತಮೊದಲಾಗಿ ಚಲಾವಣೆಗೆ ತಂದರು. 'ಪರಿಸರದ ಉಪಯುಕ್ತತೆ', 'ಸಂಚಾಲಕ', 'ತಟಸ್ಥ ಮೌಲ್ಯ', 'ಮೇಲಾಟ', 'ಪ್ರಾಮೀಣ್ಯ', – ಮುಂತಾದ ಅವರ ಪದಪ್ರಯೋಗಗಳು ಬಳಕೆಯಲ್ಲಿ ನಿಲ್ಲದೆ ಕ್ರಮೇಣ ಹೊಸ ಶಬ್ದಗಳಿಗೆ ಪ್ರೇರಣೆ ನೀಡಿವೆ. ಈ ಗ್ರಂಥದ ಕೊನೆಯ ಭಾಗದ ಒಂದು ಅಧ್ಯಾಯ "ಸಮಾಜವಾದಿ ಅರ್ಥಮಂಡಲ"ದ ನಿರೂಪಣೆಗೆ ಮೀಸಲಾಗಿದೆ. ಸಮಾಜವಾದದ ಆರ್ಥಿಕ ಪರಿಕಲ್ಪನೆಗಳು ಎಷ್ಟು ವಿಚಾರ ಪೂರಕವಾಗಿವೆ. ಭಾರತದಂಥ ಬಡದೇಶಗಳಿಗೆ ಯೋಜನಾತ್ಮಕ ಆರ್ಥಿಕತೆ ಎಷ್ಟು ಅವಶ್ಯಕವಾಗಿದೆ ಎಂಬುದನ್ನು ಹರಿದಾಸ ಭಟ್ಟರು ಈ ಅಧ್ಯಾಯದಲ್ಲಿ ಮನಗಾಣಿಸಿದ್ದಾರೆ.

ಏಶಿಯಾದ ಸಂಪತ್ತು

ವಿಶ್ವಸಂಸ್ಥೆಯವರೂ ಇಂಟರ್‌ನ್ಯಾಶನಲ್ ಲೇಬರ್ ಸಂಸ್ಥೆಯವರೂ ಪ್ರಕಟಿಸುತ್ತಿದ್ದ ಅನೇಕ ವರದಿಗಳ ಆಧಾರದಿಂದ ವಿಶೇಷವಾಗಿ ಆಗ್ನೇಯ ಮತ್ತು ದಕ್ಷಿಣ ಏಷ್ಯಾದ ಬಡ ರಾಷ್ಟ್ರಗಳಲ್ಲಿನ ಆರ್ಥಿಕ ಸ್ಥಿತಿಗತಿಗಳನ್ನು ವಿವರಿಸುವ ಗ್ರಂಥ "ಏಶಿಯದ ಸಂಪತ್ತು". ಪ್ರೊ॥ ಕು.ಶಿ. ಹರಿದಾಸ ಭಟ್ಟರು ಒಂದು ತಲೆಮಾರಿನಷ್ಟು ಹಿಂದೆ – 1954ರಲ್ಲಿ ಬರೆದು ಪ್ರಕಟಿಸಿದ ಈ ಗ್ರಂಥ ಇಂದಿನ ತಲೆಮಾರಿಗೂ ಅನ್ವಯಿಸುವಂತಿದೆ.

ರಶ್ಯಾದ ಸಮಾಜವಾದದ ಬಗ್ಗೆ ಹೇಗೋ, ಹಾಗೆ ಏಶಿಯದ ಬಡರಾಷ್ಟ್ರಗಳ ಬಗೆಗೂ ಪಾಶ್ಚಾತ್ಯ ಲೇಖಕರು ತಮ್ಮ ದೃಷ್ಟಿಕೋನದಿಂದ ಬರೆದ ಗ್ರಂಥಗಳು ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟವಾಗಿವೆ, ಪ್ರಕಟವಾಗುತ್ತಿವೆ. ಆದರೆ ಏಶಿಯದ ಜನತೆ ತಮ್ಮ ಬಗೆಗೆ ತಾವಾಗಿ, ತಮ್ಮ ಭಾಷೆಯಲ್ಲೇ ಸ್ವಂತ ಬುದ್ಧಿಯನ್ನು ಬಳಸಿ ಬರೆದ ಗ್ರಂಥಗಳು ವಿರಳ. ಈ ವಿಚಾರವನ್ನು ಹರಿದಾಸ ಭಟ್ಟರು ಗ್ರಂಥದ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದಾರೆ. ಅವರ ಪುಸ್ತಕ ಕನ್ನಡಿಗರ ಮಟ್ಟಿಗಾದರೂ ಮೇಲೆ ಹೇಳಿದ ಕೊರತೆಯನ್ನು ನೀಗಿಸುವ ಒಂದು ಪುಟ್ಟ ಪ್ರಯೋಗ. ಪುಸ್ತಕದ ಗಾತ್ರ 142 ಪುಟಗಳು.

ಇಂಡಿಯಾ, ಪಾಕಿಸ್ತಾನ, ನೇಪಾಳ, ಬರ್ಮಾ, ಚೀನಾ, ಥಾಯ್‌ಲೆಂಡ್, ವಿಯೆಟ್‌ನಾಮ್, ಮಲಯಾ, ಇಂಡೋನೇಶಿಯ, ಫಿಲಿಪೀನ್ಸ್, ಶ್ರೀಲಂಕಾ – ಈ ರಾಷ್ಟ್ರಗಳನ್ನು ವಿಶ್ವಸಂಸ್ಥೆ 'ಇಕಾಫ್' ದೇಶಗಳೆಂದು ಕರೆದಿದೆ. ಇಕಾಫ್ ದೇಶಗಳು, ಸೋವಿಯಟ್ ಏಶಿಯದ ಗಣರಾಜ್ಯಗಳು, ಮತ್ತು ಜಪಾನ್ – ಏಶಿಯದ ಇಷ್ಟು ದೇಶಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಕೆಲವು ವಿಶಿಷ್ಟ ಆರ್ಥಿಕ ಸಮಸ್ಯೆಗಳ ವಿಶ್ಲೇಷಣೆ ಹಾಗೂ ಪರಿಹಾರ

ಬಡತನದ ಸ್ವರೂಪವನ್ನು ಹರಿದಾಸ ಭಟ್ಟರು ಈ ಗ್ರಂಥದಲ್ಲಿ ಕೈಗೆತ್ತಿಕೊಂಡಿದ್ದಾರೆ. ಈ ದೇಶಗಳಿಗೆ ಸರ್ವಸಾಧಾರಣವಾದ ಒಂದು ಭೌಗೋಳಿಕ - ಐತಿಹಾಸಿಕ-ಸಾಂಸ್ಕೃತಿಕ ಹಿನ್ನೆಲೆ ಇದೆ. ಇವುಗಳ ಶೇಕಡ 4 ರಷ್ಟು ಭಾಗಗಳಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ವಸಾಹತುಗಳಿಗೆ ತುತ್ತಾಗದೆ ಉಳಿದವುಗಳು. ಈ ಶತಮಾನದಲ್ಲಿ ರಾಜಕೀಯ ದಾಸ್ಯದಿಂದ ಬಿಡುಗಡೆಯಾಗಿದ್ದರೂ, ಆರ್ಥಿಕ ಹಾಗೂ ಸಾಮಾಜಿಕ ಜೀವನದಲ್ಲಿ ಸ್ವಂತ ಶಕ್ತಿಗಳನ್ನು ಕಂಡುಕೊಳ್ಳದೆ ಪಾಶ್ಚಾತ್ಯರನ್ನು ಅನುಕರಿಸುವ ಕುರುಡುಬುದ್ಧಿ ಇನ್ನೂ ಹೋಗಿಲ್ಲ. ರಾಜಕೀಯ ದೃಷ್ಟಿಯಿಂದ ಸ್ವತಂತ್ರವಾದ ಈ ದೇಶಗಳು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳು ಹಲವಾರು. ಕಡುಬಡತನ, ಹೆಚ್ಚಿನ ಜನಸಂಖ್ಯೆ, ನಿರುದ್ಯೋಗ, ರೋಗ ಚಿಕಿತ್ಸೆ, ಶಿಕ್ಷಣ ಮುಂತಾದ ಸಾಮಾಜಿಕ ಸೇವೆಗಳ ಹಿನ್ನಡೆ, ಅಲ್ಪೋತ್ಪನ್ನ, ಸಾಂಪ್ರದಾಯಿಕ ವೃತ್ತಿಗಳ ದುರವಸ್ಥೆ, ಕೃಷಿ ಮತ್ತು ಪಶುಸಂಗೋಪನೆಯ ಉಪೇಕ್ಷೆ, ಸಂಪತ್ತಿನ ಸಮರ್ಪಕ ವಿತರಣೆಗೆ ಕಾನೂನುಗಳು ಒಡ್ಡುವ ತೊಡಕುಗಳು, ವಿದೇಶಿ ಬಂಡವಾಳ ಹಾಗೂ ಉತ್ಪಾದನಾ ತಂತ್ರಗಳ ಇತಿಮಿತಿಗಳು – ಇವೇ ಮುಂತಾದ ಆರ್ಥಿಕ ಸಮಸ್ಯೆಗಳನ್ನು ಹರಿದಾಸ ಭಟ್ಟರು ಅಂಕೆ ಸಂಖ್ಯೆಗಳ ದಾಖಲೆಗಳನ್ನಿತ್ತು ವಿಶ್ಲೇಷಿಸಿದ್ದಾರೆ; ಸೂಕ್ತ ಪರಿಹಾರ ಕ್ರಮಗಳನ್ನೂ ಸೂಚಿಸಿದ್ದಾರೆ.

"ಏಶಿಯದ ಸಂಪತ್ತು" ಒದಗಿಸುವ ಅಂಕಿಸಂಖ್ಯೆಗಳ ದಾಖಲೆಗಳು ಈ ಕಾಲಕ್ಕೆ ಅಪ್ರಸ್ತುತ ಎಂಬುದು ಸ್ವಯಂವೇದ್ಯ. ಸಮಸ್ಯೆಗಳ ವಿಶ್ಲೇಷಣೆಯ ಕುರಿತು, ಪರಿಹಾರ ಕ್ರಮಗಳ ಕುರಿತು, ಭಿನ್ನಾಭಿಪ್ರಾಯಗಳು ಮೂಡಿ ಬರಬಹುದು. ಆದರೆ, ಗ್ರಂಥದ "ಮೊದಲೆರಡು ಮಾತು" ಬರೆದಿರುವ ಶ್ರೀ ಪಿ. ಸೀತಾರಾಮಯ್ಯನವರು ಸೂಚಿಸಿರುವಂತೆ, ಏಶಿಯದ ಆರ್ಥಿಕ ಪರಿಸ್ಥಿತಿಯ ಕುರಿತು "ಹರಿದಾಸ ಭಟ್ಟರು ಕಾಣಿಸುವ ನೋಟ ಎಲ್ಲರ ಗಮನಕ್ಕೂ ಬರಬೇಕು".

ಪರಿಸ್ಥಿತಿಯ ಸಮಗ್ರ ಚಿತ್ರದೊಂದಿಗೆ, ಹರಿದಾಸ ಭಟ್ಟರ ಬರವಣಿಗೆಯಲ್ಲಿ ಅಲ್ಲಲ್ಲಿ ಮಿಂಚುವ ಒಳನೋಟಗಳನ್ನೂ ಪ್ರತ್ಯೇಕವಾಗಿ ಗಮನಿಸಬೇಕು. "ಏಶಿಯದ ಕೃಷೀವಲ ದೇಶಗಳಲ್ಲಿ ಕೃಷಿ ಉತ್ಪನ್ನವು ವೃದ್ಧಿಯಾಗದೆ ಜನರ ವರಮಾನವು ಏರುವಂತಿಲ್ಲ (ಪುಟ 82): ಏಶಿಯದ ದೇಶಗಳು ಕೃಷೀವಲ ದೇಶಗಳಾಗಿ ಇನ್ನೂ ಬಹುಕಾಲ ಉಳಿಯುತ್ತವೆ (ಪುಟ 84): ನಮ್ಮ ಹಣಕಾಸಿನ ಮಾರ್ಕೆಟು ಮುಂಬಯಿ, ಶಾಂಘಾಯ್, ಜಕರ್ತ ಮೊದಲಾದ ನಗರಗಳಲ್ಲಿ ಕೇಂದ್ರೀಕೃತವಾಗಿರುವುದರ ಬದಲು ವಿಕೇಂದ್ರೀಕರಣದ ಹಾದಿಯಾಗಿ ಹಳ್ಳಿಗಳನ್ನು ಮುಟ್ಟಬೇಕು. (ಪುಟ 87): ಔದ್ಯೋಗೀಕರಣದಲ್ಲಿ ಹೆಚ್ಚಾಗಿ ಕೂಲಿಕಾರರನ್ನು ಉಪಯೋಗಿಸುವ ಉದ್ಯಮಗಳನ್ನು ಮೊದಲಾಗಿ ಸ್ಥಾಪಿಸಬೇಕು (ಪುಟ 89): ಮನುಷ್ಯರ ಮೇಲೂ ಬಂಡವಾಳದ ವಿನಿಯೋಗವಾಗಬೇಕು (ಪುಟ 98): ಜಿಡುಕಿನ ಮಹಾಯಂತ್ರಗಳ ಭವ್ಯತೆಗೆ ನಾವು ಮರುಳಾಗಬಾರದು (ಪುಟ 107): ಐರೋಪ್ಯ ರಶಿಯದಲ್ಲಿ ನಡೆದ ವಿಪ್ಲವಕ್ಕಿಂತಲೂ ಸೋವಿಯಟ್ ಏಶಿಯದ ಗಣರಾಜ್ಯಗಳ ಪರಿವರ್ತನೆ ಮತ್ತು ಪ್ರಗತಿಗಳು ಅದ್ಭುತವಾಗಿವೆ (ಪುಟ 108): ಮೊತ್ತಮೊದಲು ಅಕ್ಷರ ಪ್ರಸಾರವು ಬೇಗನೆ ಹರಡುವಂತೆ ನಾವು ನೋಡಿಕೊಳ್ಳಬೇಕು: ತಿಳಿವಳಿಕೆ ಇರದ ಜನರ ಸರಕಾರವು ಪ್ರಜಾಪ್ರಭುತ್ವವಾದರೂ ಸಮಾಜವಾದಿಯಾದರೂ ಅದರಿಂದ ರಾಷ್ಟ್ರಕ್ಕೆ ಸುಖವಿಲ್ಲ: ಜನರ ಜೀವನ ಮಟ್ಟವನ್ನು ಎತ್ತರಿಸುವ ಕಾಲದಲ್ಲೇ ಅವರ ಸಂಸ್ಕೃತಿಯ ಮಟ್ಟವೂ ಮೇಲ್ಮೊಗವಾಗಿ ಹರಿಯಬೇಕಾದ ಪರಿಸ್ಥಿತಿಯು ಏಶಿಯದ ಎಲ್ಲ ದೇಶಗಳಲ್ಲಿಯೂ ಇದೆ (ಪುಟ 141)" – ಈ ಪರಿಯ ಮನನೀಯ ಒಳನೋಟಗಳು ಗ್ರಂಥದುದ್ದಕ್ಕೂ ಹರಡಿಕೊಂಡಿವೆ.

ನೋಬೆಲ್ ಪಾರಿತೋಷಕ ವಿಜೇತ ಗುನ್ನಾರ್ ಮಿರ್ಡಾಲ್ ಎಂಬ ಸ್ವೀಡನ್ನಿನ ಅರ್ಥಶಾಸ್ತ್ರಜ್ಞರು ಏಶಿಯದ ರಾಷ್ಟ್ರಗಳ ಬಡತನಕ್ಕೆ ಸಂಬಂಧಿಸಿ ಒಂದು ಸ್ವತಂತ್ರ ವಿಚಾರ ಸರಣಿಯ ಆರ್ಥಿಕ ಸಂಶೋಧನೆಯನ್ನು ನಡೆಸಿದ್ದಾರೆ. ಅದರ ಫಲಿತಾಂಶ ಅವರು 1968 ಮತ್ತು 1970ರಲ್ಲಿ ಪ್ರಕಟಿಸಿದ 'ಏಶಿಯನ್ ಡ್ರಾಮಾ' ಮತ್ತು 'ಚೇಲೇಂಜ್ ಆಫ್ ವರ್ಲ್ಡ್ ಪವರ್ಟಿ' ಎಂಬ ಎರಡು ಪ್ರಸಿದ್ಧ ಗ್ರಂಥಗಳು. "ಬಡತನವು ಎಲ್ಲಿದ್ದರೂ ಸರಿಯೇ ಸಾರ್ವತ್ರಿಕ ಅಭ್ಯುದಯಕ್ಕೆ ಅದರಿಂದ ಅಪಾಯವೇ' (Poverty anywhere is a danger to prosperity everywhere ಎಂಬ ಹೇಳಿಕೆಯನ್ನು ಇಂಟರ್‌ನೇಶನಲ್ ಲೇಬರ್ ಸಂಸ್ಥೆ (ಐ.ಎಲ್.ಒ) ನಾಲ್ಕು ದಶಕಗಳಷ್ಟು ಹಿಂದೆಯೇ ಘೋಷಿಸಿತ್ತು. ಹರಿದಾಸ ಭಟ್ಟರು ಆ ಹೇಳಿಕೆಯನ್ನು ತಮ್ಮ ಗ್ರಂಥಗಳಲ್ಲಿ ಅಲ್ಲಲ್ಲಿ ಪ್ರಸ್ತಾಪಿಸಿದ್ದಾರೆ. ಮಿರ್ಡಾಲ್ ಅವರ ಗ್ರಂಥಗಳೂ ಅದೇ ಹೇಳಿಕೆಯನ್ನು ಸಮಾಜ ಶಾಸ್ತ್ರೀಯ ವಿಶ್ಲೇಷಣೆಯ ತಳಹದಿಯಲ್ಲಿ ಪುಷ್ಟೀಕರಿಸುತ್ತವೆ. ಏಶಿಯದ ಆರ್ಥಿಕ ಸಮಸ್ಯೆಗಳ ಬಗ್ಗೆ ಇತರರು ಗಮನಿಸದ ಕೆಲವು ಅಂಶಗಳನ್ನು ಮಿರ್ಡಾಲರು ಗುರುತಿಸಿದ್ದಾರೆ. ಏಶಿಯದ ಆರ್ಥಿಕ ಬೆಳವಣಿಗೆಯನ್ನು ಅಲ್ಲಿನ ರಾಷ್ಟ್ರಗಳ ಸಮಗ್ರ ಸಾಮಾಜಿಕ ಸಾಂಸ್ಕೃತಿಕ ಮುನ್ನಡೆಯ ಅಂಗವಾಗಿ ಸಾಧಿಸಬೇಕು ಎಂಬ ಅಂಶವನ್ನು ಮಿರ್ಡಾಲರು ನಿಸ್ಸಂದಿಗ್ಧವಾಗಿ ಮನಗಾಣಿಸಿದ್ದಾರೆ. ಹರಿದಾಸ ಭಟ್ಟರ "ಏಶಿಯದ ಸಂಪತ್ತು" ಕೂಡಾ ಇದೇ ಅಂಶವನ್ನು ಪ್ರಸ್ತಾಪಿಸಿ ಕೊನೆಗೊಳ್ಳುತ್ತದೆ. ಅವರ ಪುಸ್ತಕದ ಹಿನ್ನುಡಿಯ ಕೊನೆಯ ವಾಕ್ಯ ಇಂತಿದೆ: "ಜನರ ಜೀವನ ಮಟ್ಟವನ್ನು ಎತ್ತರಿಸುವ ಕಾಲ

ದಲ್ಲೇ ಅವರ ಸಂಸ್ಕೃತಿಯ ಮಟ್ಟವೂ ಮೇಲ್ಮೊಗವಾಗಿ ಹರಿಯ ಬೇಕಾದ ಪರಿಸ್ಥಿತಿಯು ಏಶಿಯದ ಎಲ್ಲ ದೇಶಗಳಲ್ಲಿಯೂ ಇದೆ" (ಪುಟ 141).

ಏಶಿಯದ ರಾಷ್ಟ್ರಗಳ ಸಂಸ್ಕೃತಿಯ ಮಟ್ಟ ಮೇಲ್ಮೊಗವಾಗಿ ಹರಿಯುವ ಪರಿಸ್ಥಿತಿ ಯಾಕೆ ನಿರ್ಮಾಣವಾಗುತ್ತಿಲ್ಲ ಎಂಬುದೂ ವಿಚಾರಣೀಯ ಅಂಶ. ಏಶಿಯದ ರಾಷ್ಟ್ರಗಳು ಪಾಶ್ಚಾತ್ಯ ವಸಾಹತು ಗಿರಿಯಿಂದ ವಿಮೋಚನೆಗೊಳ್ಳುತ್ತಿದ್ದ ಕಾಲಘಟ್ಟದಲ್ಲಿ ಹರಿದಾಸ ಭಟ್ಟರ "ಏಶಿಯದ ಸಂಪತ್ತು" ಪ್ರಕಟಗೊಂಡಿತು. ರಾಜಕೀಯ ಸ್ವಾಯತ್ತತೆಯ ಪರಿಣಾಮವಾಗಿ ಸಮಾನ ಸಾಂಸ್ಕೃತಿಕ – ಭೌಗೋಲಿಕ ಹಿನ್ನೆಲೆಯುಳ್ಳ ಈ ದೇಶಗಳು ಪರಸ್ಪರ ಸಹಕಾರ ಸಂಬಂಧಗಳನ್ನು ಹೆಚ್ಚಿಸಿಕೊಂಡು ತಮ್ಮ ಬಡತನವನ್ನು ಬೇಗನೆ ನಿವಾರಿಸಿಕೊಳ್ಳಬಹುದೆಂಬ ಭರವಸೆ ರಾಷ್ಟ್ರನಾಯಕರಲ್ಲಿ ಮೂಡಿತ್ತು. 1947ರಲ್ಲಿ ನವದೆಹಲಿಯಲ್ಲಿ ಆ ಕಾಲದ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ್ ನೆಹರೂ ಅವರ ಹಿರಿತನದಲ್ಲಿ ಸಮಾವೇಶಗೊಂಡ ಏಶಿಯ ರಾಷ್ಟ್ರಗಳ ಸಮ್ಮೇಳನದಲ್ಲಿ ರಾಷ್ಟ್ರ ಪ್ರತಿನಿಧಿಗಳು ಇಂಥ ಆಶಾದಾಯಕ ಭಾವನೆಗಳನ್ನೇ ಪ್ರಕಟಿಸಿದ್ದರು. ಆದರೆ ಸ್ವಾತಂತ್ರ್ಯ ನಂತರದ ಏಶಿಯದ ದೇಶಗಳ ನಾಲ್ಕು ದಶಕಗಳ ಇತಿಹಾಸ ಅಷ್ಟು ಆಶಾದಾಯಕವಾಗಿಲ್ಲ. ಅಭಿವೃದ್ಧಿ ರಾಷ್ಟ್ರಗಳ ಹಾಗೂ ಏಶಿಯದ ಬಡದೇಶಗಳ ನಡುವಣ ಅಸಮಾನತೆಯ ಕಂದರ ಇನ್ನಷ್ಟು ಬೆಳೆಯುತ್ತಿದೆ. ಅಸಮಾನತೆಗೆ ಕಾರಣವಾಗಿರುವ ಬಡ–ಶ್ರೀಮಂತ ರಾಷ್ಟ್ರಗಳ ನಡುವಣ ವಿಷಮ ವ್ಯಾಪಾರ ಸಂಬಂಧಗಳನ್ನು ಮಿರ್ಡಾಲರು ತನ್ನದೇ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ನಾಲ್ಕು ದಶಕಗಳ ಅವಧಿಯಲ್ಲಿ ಈ ದೇಶಗಳು ತಕ್ಕಮಟ್ಟಿನ ಆರ್ಥಿಕ (ರಾಷ್ಟ್ರೀಯ ವರಮಾನದ ಲೆಕ್ಕಾಚಾರದ) ಪ್ರಗತಿಯನ್ನು ಸಾಧಿಸಿದ್ದರೂ, ಅವುಗಳ ಆರ್ಥಿಕ – ರಾಜಕೀಯ – ಸಾಂಸ್ಕೃತಿಕ ಸಂಬಂಧಗಳಲ್ಲಿ ಪರಸ್ಪರ ಸ್ನೇಹ ಸಹಕಾರಗಳ ಒಡಂಬಡಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಕೈಗೂಡುತ್ತಿಲ್ಲ. ಬಲಿಷ್ಠ, ಶ್ರೀಮಂತ ರಾಷ್ಟ್ರಗಳು ಒಡ್ಡುವ ಆಮಿಷಗಳಿಗೆ ಮನಸೋತು, ನೆರೆಹೊರೆಯ ಸೋದರರನ್ನು ಹೀಯಾಳಿಸುವ ಅಥವಾ ಅವರೊಡನೆ ಜಗಳವಾಡುವ ಕುರುಡು ಬುದ್ಧಿ ಇನ್ನೂ ತೊಲಗಿಲ್ಲ. ಸಂಪತ್ತಿನ ವೃದ್ಧಿಯ ಜತೆಗೆ ಪರಸ್ಪರ ಯುದ್ಧ ಭೀತಿಯೂ, ಭಯೋತ್ಪಾದಕರ ಹಿಂಸಾಕಾಂಡಗಳೂ, ರಕ್ಷಣಾ ಖಾತೆಯ ಅನುತ್ಪಾದಕ ವೆಚ್ಚಗಳ ಹಣಭಾರವೂ, ಪರಿಸರ ಮಾಲಿನ್ಯವೂ ಹೆಚ್ಚುತ್ತಿವೆ.

ಒಟ್ಟಿನಲ್ಲಿ ಏಶಿಯದ ಬಡ ರಾಷ್ಟ್ರಗಳು ಪಾಶ್ಚಾತ್ಯ ಬಲಿಷ್ಠ ರಾಷ್ಟ್ರಗಳ ಹಸ್ತಕ್ಷೇಪಕ್ಕೆ ತುತ್ತಾಗಿದೆ. ತಮಗೆ ಇತಿಹಾಸದಿಂದ ಬಳುವಳಿಯಾಗಿ ಬಂದಿರುವ ಸಹಜ ಸೋದರ ಸಂಬಂಧಗಳನ್ನು ಇನ್ನಷ್ಟು ರೂಢಿಸಿಕೊಳ್ಳಬೇಕು. ತಮ್ಮೊಳಗಿನ ವೈರ ಮತ್ತು ಕಲಹಗಳನ್ನು ತಡೆಗಟ್ಟುವ ಶಾಂತಿ ಒಪ್ಪಂದಗಳನ್ನೂ, ವ್ಯಾಪಾರ ಸಂಬಂಧಗಳನ್ನೂ ಸಾಂಸ್ಕೃತಿಕ ಸಂಪರ್ಕಗಳನ್ನೂ ಇನ್ನಷ್ಟು ಹೆಚ್ಚಾಗಿ ಅಳವಡಿಸಿಕೊಳ್ಳಬೇಕು. 1987 ಅಕ್ಟೋಬರ್ 2 ರಂದು ನವದೆಹಲಿಯಲ್ಲಿ ಸಮಾವೇಶಗೊಂಡ ಏಶಿಯ ರಾಷ್ಟ್ರಗಳ ಸಮ್ಮೇಳನ– ಇದರಲ್ಲಿ 35 ರಾಷ್ಟ್ರಗಳು ಪಾಲುಗೊಂಡಿದ್ದವು– ಮೇಲಿನ ಮಾತನ್ನೇ ಅನುಮೋದಿಸಿತ್ತು.

ಈ ದೇಶಗಳ ಶಿಕ್ಷಣ ಪದ್ಧತಿಯಲ್ಲಿ, ಸಮೂಹ ಮಾಧ್ಯಮಗಳ ಬಳಕೆಯಲ್ಲಿ, ಆಡಳಿತದ ವಿಧಿವಿಧಾನಗಳಲ್ಲಿ, ಕೌಟುಂಬಿಕ ರೀತಿನೀತಿಗಳಲ್ಲಿ, ಸುಧಾರಣೆಯ ಪರಿಕಲ್ಪನೆಗಳಲ್ಲಿ, ಧಾರ್ಮಿಕ ಸಂಘಟನೆಯಲ್ಲಿ, ಪ್ರಾದೇಶಿಕ ಭಾಷೆಗಳ ಹಾಗೂ ಜಾನಪದ ಸಂಸ್ಕೃತಿಗಳ ನಿರ್ವಹಣೆಯಲ್ಲಿ ಅತಿರೇಕವಾಗಿ ಆದರೂ ಬಹಳ ಸೂಕ್ಷ್ಮವಾಗಿ – ಸೇರಿಕೊಂಡಿರುವ ಪರಕೀಯ ಪ್ರಭಾವಗಳೇ ಏಶಿಯದ ದೇಶಗಳ ಸಾಂಸ್ಕೃತಿಕ ಕಲಹಗಳಿಗೆ ಕಾರಣವಾಗಿ, ಪರಸ್ಪರ ಸ್ನೇಹ ಸಂಬಂಧಗಳ ವರ್ಧನೆಗೆ ಆತಂಕ ಒಡ್ಡುತ್ತಿರಬಹುದೇ? ಈ ನಿಟ್ಟಿನಲ್ಲೂ ಶೋಧನೆ, ಬೋಧನೆ, ಅವಶ್ಯವಾಗಿವೆ. ಈ ಸಂದರ್ಭದಲ್ಲಿ ನಮ್ಮ ಕಣ್ಣು ತೆರೆಯಿಸ ಬಹುದಾದ ಒಂದು ವಿದೇಶಿ ಪ್ರಭಾವ ಭಾರತದ ಶಾಲಾ ಕಾಲೇಜುಗಳಲ್ಲೇ ಅಡಗಿರುವುದನ್ನು ಬೊಟ್ಟಿಟ್ಟು ತೋರಿಸಬಹುದು. ಭಾರತದ ಶಿಕ್ಷಣ ಪದ್ಧತಿಗೆ ಒಂದು ಹೊಸ ರಾಷ್ಟ್ರೀಯ ತಿರುವು ನೀಡುವ ಪ್ರಯತ್ನ ಸ್ವಾಮಿ ವಿವೇಕಾನಂದರ ಕಾಲದಲ್ಲೇ ತೊಡಗಿದೆ. ಬಾಲಗಂಗಾಧರ ತಿಲಕ್, ಅರವಿಂದ ಘೋಷ್, ಮಹಾತ್ಮಾಗಾಂಧಿ, ರವೀಂದ್ರನಾಥ ಟಾಗೋರ್ ಮುಂತಾದ ಆಧುನಿಕ ಭಾರತದ ನಾಯಕರು ಈ ಮಹಾಪ್ರಯತ್ನದಲ್ಲಿ ಪಾಲುಗೊಂಡರು. ಅವರ ಪ್ರಯತ್ನಗಳಿಗೆ ನಮ್ಮ ವಿಶ್ವವಿದ್ಯಾಲಯಗಳು ಸ್ಪಂದಿಸಿದ್ದು ಬಹಳ ಕಡಿಮೆ. ಇಂದಿಗೂ ಭಾರತದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ರಾಷ್ಟ್ರ ಜೀವನದ ಬಗ್ಗೆ, ಏಶಿಯದ ಬಡ ದೇಶಗಳ ವಿಶಿಷ್ಟ ಸಮಸ್ಯೆಗಳ ಬಗ್ಗೆ, ಭಾರತದ ಹಾಗೂ ಏಶಿಯದ ಭಾಷೆಗಳ ಕುರಿತು ಕಲಿಯುವ ವಿಷಯಗಳ ಗಾತ್ರ ಏನೇನೂ ಸಾಲದು. ತಕ್ಷಶಿಲಾ, ನಾಲಂದ, ವಿಕ್ರಮಶಿಲಾ – ಮುಂತಾದ ಪ್ರಾಚೀನ ಭಾರತದ ವಿಶ್ವವಿದ್ಯಾಲಯಗಳಲ್ಲಿ ಏಶಿಯದ ಹಲವು ರಾಷ್ಟ್ರಗಳ ವಿದ್ಯಾರ್ಥಿಗಳು ಏಕ ಸಂಸ್ಕೃತಿಯ ಹರಿಕಾರರಾಗಿ ಪರಸ್ಪರ ಸ್ನೇಹದಿಂದ ವಿದ್ಯಾಭ್ಯಾಸ ಮಾಡುತ್ತಿದ್ದರಂತೆ. ಆ ರೀತಿಯ ಸೋದರ ಸ್ನೇಹ ಏಶಿಯದ ಯುವಜನಾಂಗದಲ್ಲಿ ಇನ್ನೊಮ್ಮೆ ಚಿಗುರಿ ಹೆಮ್ಮರವಾಗಿ ಬೆಳೆದಾಗ, ಹರಿದಾಸ ಭಟ್ಟರು ಸೂಚಿಸಿರುವಂತೆ ಏಶಿಯದ ಜನರ "ಸಂಸ್ಕೃತಿಯ ಮಟ್ಟವೂ ಮೇಲ್ಮೊಗವಾಗಿ ಹರಿಯುವ ಪರಿಸ್ಥಿತಿ" ನೆಲೆಗೊಂಡೀತು.

ಕಳೆದ ಎರಡು ದಶಕಗಳಲ್ಲಿ ಪ್ರೊ. ಹರಿದಾಸ ಭಟ್ಟರು ಅನೇಕ ಪಾಶ್ಚಾತ್ಯ – ಪೌರ್ವಾತ್ಯ ದೇಶಗಳಲ್ಲಿ

ಜಾನಪದ ಕಲೆ ಸಂಸ್ಕೃತಿಗಳ ಪರಿಚಾರರಾಗಿ ಸಂದರು. ತಮ್ಮ ಧೀರ್ಘಕಾಲದ ಅನೇಕ ಸಮಸ್ಯೆಗಳ ಕುರಿತು ಪುಸ್ತಕ ಅನುಭವಗಳನ್ನು ಮೈಗೂಡಿಸಿಕೊಂಡಿದ್ದಾರೆ. ಆ ಮಹಾಶಯರು ಬಿಸ್ತರದಲ್ಲಿ ಅವರು "ಬುಡಕಟ್ಟಿನ ಸಂಪತ್ತಿನ" ಬಗ್ಗೆ ಇನ್ನೊಂದು ಪುಸ್ತಕವನ್ನು ಬರೆದು ಪ್ರಕಟಿಸುವಂತಾಗಲಿ: ಆ ಪುಸ್ತಕದಲ್ಲಿ ಮರೆಯಾದ ಸಂಸ್ಕೃತಿಯ ಬಗೆಗೂ ಪರಿಹಾಸ ಭಟ್ಟರು ಕಾಣಿಸುವ ನೋಟಗಳು. ಹೊಳೆಯುವ ಒಳನೋಟಗಳು ಕರ್ನಾಟಕದ ಯುವಜನಾಂಗದ ಲಕ್ಷ್ಯವನ್ನು ಸೆಳೆಯುವಂತಿರಲಿ; ಅಂತೆಯೇ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಆ ಪುಸ್ತಕ ಪಠ್ಯವಾಗಿಯೋ ಉಪಪಠ್ಯವಾಗಿಯೋ ಮನ್ನಿಸಲ್ಪಡಲಿ ಎಂದು ಹಾರೈಸೋಣ.

೨೭. ಕಟ್ಟಿಂಗೇರಿ ಕೃಷ್ಣ ಹೆಬ್ಬಾರ - ಕಲೆ ಮತ್ತು ಬದುಕು

— ಪಾದೇಕಲ್ಲು ವಿಷ್ಣು ಭಟ್ಟ

ಕಲೆ ಮತ್ತು ಕಲಾವಿದರ ಜೀವನಗಳ ಬಗೆಗೆ ಕನ್ನಡದಲ್ಲಿ ಬಂದ ಪುಸ್ತಕಗಳ ಸಂಖ್ಯೆ ಕಡಿಮೆ. ಬಹುಶಃ "ಕಟ್ಟಿಂಗೇರಿ ಕೃಷ್ಣ ಹೆಬ್ಬಾರ – ಕಲೆ ಮತ್ತು ಬದುಕು" ಕನ್ನಡದಲ್ಲಿ ಒಂದು ಅನನ್ಯ ಕೃತಿ. ಒಬ್ಬ ಕಲಾವಿದನ ಸಾಮಾಜಿಕ ಜೀವನ ಮತ್ತು ಕಲೆಯ ಬದುಕಿನ ವಿವರವಾದ ದಾಖಲೆ; ಕಲಾಕೃತಿಗಳ ಪರಿಚಯ, ವಿಮರ್ಶೆ ಎಲ್ಲವೂ ಒಟ್ಟಾದ ಕೃತಿಯಿದು. ಅಂತರಾಷ್ಟ್ರೀಯ ಖ್ಯಾತಿಯ ಭಾರತೀಯ ಕಲಾವಿದನೊಬ್ಬನ ಬೆಳವಣಿಗೆ ಮತ್ತು ಸಾಧನೆ ಸಿದ್ಧಿಗಳ ಪರಿಚಯದೊಂದಿಗೆ ಭಾರತದ ಆಧುನಿಕ ಕಲೆ ಪಡಕೊಂಡ ರೂಪಗಳು, ಬೆಳೆದ ಹಂತಗಳು – ಇವನ್ನೂ ದಾಖಲಿಸುವ ಒಂದು ಪ್ರಯತ್ನವಾಗಿ ಈ ಪುಸ್ತಕವನ್ನು ಗಮನಿಸಬೇಕಾಗುತ್ತದೆ.

ಕಲಾವಿದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರರ ಬಗೆಗೆ ಈಗಾಗಲೇ ಕೆಲವು ಲೇಖನಗಳು, ಕೆಲವು ಚಿಕ್ಕ ಪುಸ್ತಕಗಳು ಬಂದಿವೆ. (ಹೆಬ್ಬಾರರನ್ನು ಕುರಿತ ಪ್ರಕಟಣೆಗಳ ವಿವರಗಳು ಪುಸ್ತಕದ ಅನುಬಂಧದಲ್ಲಿ ಸೇರ್ಪಡೆಗೊಂಡಿವೆ.) ಅಖಿಲ ಕರ್ನಾಟಕದ ವಿದ್ಯಾರ್ಥಿಗಳೆಲ್ಲ ಓದಬೇಕಾದ ಪಠ್ಯ ಗ್ರಂಥವೊಂದರಲ್ಲಿ, ಅವರ ಕಲೆ ಮತ್ತು ಜೀವನದ ಬಗೆಗಿನ ಪುಟ್ಟದೊಂದು ಲೇಖನ ಸೇರ್ಪಡೆಯಾಗಿದೆ. (ನೋಡಿ – ಸಾಹಿತ್ಯ ಸಮುಕ್ಷಮ – ಪ್ರಥಮ ಪಿ.ಯು.ಸಿ. ಪಠ್ಯ ಪುಸ್ತಕ 1987 – 88.) ಆದರೂ ಕಲಾವಿದ ಹೆಬ್ಬಾರರ ಬಗೆಗೆ ಹೆಚ್ಚಿನ ವಿಷಯ ತಿಳಿದುಕೊಳ್ಳಬೇಕೆಂದವರಿಗೆ ಆಧಾರ ಸಾಮಗ್ರಿಯ ಕೊರತೆ ಇದ್ದೇ ಇತ್ತು. ಪ್ರೊ. ಕು. ಶಿ. ಹರಿದಾಸ ಭಟ್ಟರ ಈ ಕೃತಿ ಆ ಕೊರತೆಯನ್ನು ನೀಗಿಸುವುದು ಮಾತ್ರವಲ್ಲ, ಇಂತಹ ಕಲಾವಿದರ ಬಗ್ಗೆ, ಲೇಖಕ ಸಾಹಿತಿ ವಿದ್ವಾಂಸರ ಜೀವನ ಸಾಧನೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕೆಂಬ ಆಸೆಯನ್ನು ಹುಟ್ಟಿಸುತ್ತದೆ.

"ಕರ್ನಾಟಕದ ಕರಾವಳಿಯ ಕಟ್ಟಿಂಗೇರಿಯಂಥ ಅನಾಮಿಕ ಹಳ್ಳಿಯಲ್ಲಿ ಹುಟ್ಟಿದ ಹುಡುಗನೊಬ್ಬ ಭಾರತದ ಸರ್ವೋಚ್ಚ ಕಲಾವಿದನಾಗಿ ಅರಳಿದ್ದನ್ನು, ಬೆಳೆದದ್ದನ್ನು ಹಂತ ಹಂತವಾಗಿ ನಿರೂಪಿಸುವುದು. ಜೀವನದ ಕಷ್ಟ ಕಾರ್ಪಣ್ಯಗಳ ನಡುವೆಯೂ ವಿಚಲಿತನಾಗದೆ ಸಂಕಲ್ಪ ಶುದ್ಧಿಯಿಂದಲೂ ಸ್ವಯಾರ್ಜಿತವಾಗಿಯೂ ಆತ ಕಲಾಶಿಖರವನ್ನು ಮುಟ್ಟಿದ ಪರಿಯನ್ನು ದಾಖಲಿಸುವುದು ನನ್ನ ಕರ್ತವ್ಯ" ಎಂದು ನಿಶ್ಚಯಿಸಿ ಈ ಕೃತಿಯನ್ನು ಬರೆಯತೊಡಗಿದವರು ಪ್ರೊ. ಕು. ಶಿ. ಹರಿದಾಸ ಭಟ್ಟರು. 'ಭಾರತೀಯ ಕಲಾರಂಗದ ಶ್ರೀಮಂತಿಕೆಗೆ ಹೆಬ್ಬಾರರ ಕೊಡುಗೆ ಏನೆಂಬುದನ್ನು ಕನ್ನಡಿಗ ಬಾಂಧವರ ಮನಃಪಟಲದಲ್ಲಿ ಸ್ಥಿರೀಕರಿಸುವಲ್ಲಿ, ಈ ವೃತ್ತಾಂತ ಒಂದಿಷ್ಟು ನೆರವು ನೀಡ' ಬೇಕೆಂಬುದೇ ಲೇಖಕರ ಉದ್ದೇಶ. ಉದ್ದೇಶ ಈ ಕೃತಿಯಲ್ಲಿ ಸಫಲವಾಗಿದೆ.

ಜೀವನ ಚರಿತ್ರೆಯನ್ನು ಬರೆಸಿಕೊಳ್ಳುವ ಯೋಗ್ಯತೆ ಸಾಮಾನ್ಯ ಜನರಿಗಿಂತ ವಿಶೇಷ ಪ್ರತಿಭೆಯುಳ್ಳ, ವಿಶೇಷ ಕಾರ್ಯಗಳನ್ನು ಮಾಡಿದ ವ್ಯಕ್ತಿಗಳಿಗಿರುತ್ತದೆ. ಅವರ ಜೀವನ ಸಾಧನೆಗಳ ಬಗೆಗೆ ಜನತೆ ಕುತೂಹಲ ತಾಳುತ್ತದೆ. ಅವರ ಜೀವನ ಯಾತ್ರೆ ಹೇಗೆ ಸಾಗಿತ್ತು ತಾನು ಅವರಿಂದ ಏನನ್ನು ತಿಳಿದುಕೊಳ್ಳಬಹುದೆಂಬುದನ್ನೂ ತಿಳಿಯಲು ಜನತೆ ಬಯಸುತ್ತದೆ. ಉತ್ತಮ ಜೀವನ ಚರಿತ್ರಕಾರ ತಾನು ವರ್ಣಿಸಲಿರುವ ವಿಶಿಷ್ಟ ವ್ಯಕ್ತಿಯ ಎಲ್ಲ ಮುಖಗಳನ್ನು ಕುಂದಿಲ್ಲದೆ ವರ್ಣಿಸಬೇಕಾಗುತ್ತದೆ. ನಿರ್ವಿಕಾರ ಚಿತ್ತನಾಗಿ ನಿರ್ಲಿಪ್ತನಾಗಿ, ಬೇಕಾದರೆ ನಿಷ್ಠುರನಾಗಿ ಚಿತ್ರಿಸಬೇಕಾಗುತ್ತದೆ. ಆದರೆ ಆತನ ಬಗೆಗಿನ ಗೌರವಾದರಗಳೇ ಆತನನ್ನೂ ಆ ರೀತಿಯ ಬರವಣಿಗೆಗೆ ಪ್ರೇರೇಪಿಸುತ್ತದೆ. ಮತ್ತು ಬರವಣಿಗೆಯನ್ನು ಮುಂದುವರಿಸುತ್ತದೆ. ಆದುದರಿಂದ ಜೀವನ ಚಿತ್ರಣ ಕೊಡುವವನಿಗೆ ಆತನ ಪರಿಚಯವಷ್ಟಿದ್ದರೆ ಮಾತ್ರ ಸಾಲದು; ಜೀವನದಲ್ಲಿ ಆತನ ದೃಷ್ಟಿ ಧೋರಣೆಗಳ ಬಗೆಗೆ, ಸಮಸ್ಯೆಗಳೆದುರಾದ ಸಂದರ್ಭದಲ್ಲಿ ಆತ ಹೇಗೆ ಹೇಗೆ ವರ್ತಿಸಬಹುದೆಂಬುದರ ಬಗ್ಗೆ, ಆತನ ಕಾರ್ಯವ್ಯಾಪ್ತಿಯ ಬಗ್ಗೆ, ಅದರಲ್ಲಿ ಆತನ ಉದ್ದೇಶ, ಸಾಫಲ್ಯ ವೈಫಲ್ಯಗಳ ಬಗ್ಗೆ, ಆತನ ಬಂಧುಗಳು ಮಿತ್ರರು. ಇತರರು ಆತನ ಬಗೆಗಿಟ್ಟುಕೊಂಡ ಪ್ರೀತಿ, ಗೌರವ, ದ್ವೇಷ, ಈರ್ಷ್ಯಾಭಾವಾದಿಗಳ ಬಗ್ಗೆ – ಆತನಿಗೆ ಪೂರ್ಣ ಜ್ಞಾನವಿರಬೇಕಾದುದಲ್ಲದೆ, ಆತನ ಕೃತಿಗಳ ಬಗೆಗೆ ಮೂರನೆಯವನಾಗಿ ನಿರ್ಲಿಪ್ತ ಭಾವದಿಂದ ವಿಮರ್ಶಿಸುವ ಮಾನಸಿಕ ಸ್ಥಿರತೆಯೂ ಬೇಕಾಗುತ್ತದೆ.

ಪ್ರೊ. ಕು. ಶಿ. ಹರಿದಾಸ ಭಟ್ಟರಿಗೂ ಕಲಾವಿದ ಕೆ. ಕೆ. ಹೆಬ್ಬಾರರಿಗೂ ಸುಮಾರು ನಾಲ್ಕು ದಶಕಗಳ ಪರಿಚಯ. ಇಬ್ಬರೂ ಮೂಲತಃ ಉಡುಪಿಯವರೇ ಆದರೂ ಹರಿದಾಸ ಭಟ್ಟರ ಬಾಲ್ಯ ಕಾಲದಲ್ಲೇ ಹೆಬ್ಬಾರರು

ಮುಂಬಯಿಗೆ ಹೋಗಿ ನೆಲಸಲಾಗಿತ್ತು. 1950ರಲ್ಲಿ ಕೊಡಪ್ಪಾರಿನ ನಾಗಮಂಗಲದಲ್ಲಿ ಸ್ಕೆಚ್ ಪುಸ್ತಕದಲ್ಲಿ ಚಿತ್ರ ಬರೆದುಕೊಳ್ಳುತ್ತಿದ್ದ ಹೆಬ್ಬಾರರನ್ನು ಅವರಿಗೆ ಪರಿಚಯವಾಗುವ ಹೊತ್ತಿಗಾಗಲೇ ಅವರೊಬ್ಬ ಪ್ರಸಿದ್ಧ ಕಲಾವಿದರಾಗಿ ರೂಪುಗೊಂಡಿದ್ದರು. ಹಲವಾರು ಸ್ಪರ್ಧೆಗಳಲ್ಲಿ ಪದಕ ಗಳಿಸಿದ್ದಲ್ಲದೆ ಪೂರ್ಣ ಕಲಾವಿದನಾಗಿ ತಮ್ಮ ಕೃತಿಗಳ ಏಕಾಂಗ ಪ್ರದರ್ಶನವನ್ನೂ ನಡೆಸಿದ್ದರು. (1945. ಮುಂಬಯಿಯಲ್ಲಿ ಪ್ರಥಮ ಏಕಾಂಗ ಪ್ರದರ್ಶನ.) 1948ರಲ್ಲೇ ಮುಂಬಯಿಯ ನಲಂದಾ ಪಬ್ಲಿಕೇಶನ್ಸ್‌ನವರು ಅವರ ಚಿತ್ರ ಕಲೆಯ ಕುರಿತು ಗ್ರಂಥವೊಂದನ್ನು ಹೊರತಂದರು. ಡಾ. ಶಿವರಾಮ ಕಾರಂತರಿಗೂ ಹೆಬ್ಬಾರರಿಗೂ ತುಂಬಾ ಆತ್ಮೀಯತೆ. ಕಾರಂತರ "ಹಲ ಬಗೆಯ ಕಬ್ಬಗಳಲ್ಲಿ" ಹರಿದಾಸ ಭಟ್ಟರೂ ತೊಡಗಿಸಿಕೊಂಡ ವೇಳೆ ಹೆಬ್ಬಾರರ ಸಂಪರ್ಕ ಹೆಚ್ಚುತ್ತಲೇ ಹೋಯಿತು. ಆತ್ಮೀಯತೆ ಬೆಳೆಯುತ್ತಲೇ ಹೋಯಿತು. ಹೆಬ್ಬಾರರು ಹರಿದಾಸ ಭಟ್ಟರಿಗೊಬ್ಬ "ಹಿರಿಯ" ಮಿತ್ರರಾದರು. ಹರಿದಾಸ ಭಟ್ಟರು ಹೆಬ್ಬಾರರನ್ನು 'ಹಿರಿಯ'ನಾಗಿಯೇ ಕಂಡರೂ, ಆತ್ಮೀಯತೆ ಇದ್ದರೂ ಆ ಹಿರಿತನದ ಅಂತರವನ್ನು ಇಟ್ಟುಕೊಂಡೇ ಪೂರ್ತಿ ಪುಸ್ತಕವನ್ನು ರಚಿಸಿದುದೂ ಪುಸ್ತಕವನ್ನೋದಿದಾಗ ತಿಳಿಯದಿರದು.

ಒಟ್ಟು ಹದಿಮೂರು ಭಾಗಗಳಲ್ಲಿ ಹರಡಿರುವ ಕೃತಿ ಹೆಬ್ಬಾರರ ಬದುಕಿನ ಸಮಗ್ರ ಕಾರ್ಯಗಳ ಒಟ್ಟು ನೋಟವನ್ನು ಕೊಡುತ್ತದೆ. ಪುಸ್ತಕದ ವಿಭಾಗಗಳು ಹೀಗಿವೆ: (1) ಬಾಲ್ಯದ ದಿನಗಳು. (2) ಭಾಗ್ಯದ ಬಾಗಿಲಲ್ಲಿ (3) ಜೆ. ಜೆ. ಕಲಾಶಾಲೆ ಅಧ್ಯಯನ ಅಧ್ಯಾಪನ (4) ಮುಗಿಯದ ಹೋರಾಟ (5) ಪ್ರಥಮ ವಿದೇಶ ಯಾತ್ರೆ– ಅಧ್ಯಯನ ಮತ್ತು ಪ್ರದರ್ಶನ (6) ಅಕಾಡೆಮಿ ಜೂಲಿಯನ್‌ನಲ್ಲಿ ಶಿಕ್ಷಣ (7) ಸೋಲು ಗೆಲುವಿನ ತೂಗುಯ್ಯಾಲೆ 8) ಸೋವಿಯತ್ ದಿನಚರಿ (9) ಏಕಾಂಗ ಪ್ರದರ್ಶನಗಳು (10) ತುಂಬಿ ಹರಿದ ಕಲಾವಾಹಿನಿ (11) ಕಲೆಯ ಸಂಘಟನೆಯಲ್ಲಿ (12) ಪತ್ರಗಳು ಮೂಡಿಸುವ ಚಿತ್ರ (13) ಕಲೆಯ ಆಚಾರ್ಯ ಪುರುಷ (ಹದಿನಾಲ್ಕನೆಯ ಭಾಗ ಅನುಬಂಧಗಳು). ನಿರೂಪಣೆಯಲ್ಲಿ ಕಾಲಾನುಕ್ರಮದೊಡನೆ ವಿಷಯಾನುಕ್ರಮವನ್ನು ಅನುಸರಿಸಿದ್ದು ಈ ವಿಭಾಗಗಳ ಶೀರ್ಷಿಕೆಗಳನ್ನು ನೋಡಿದಾಗಲೇ ಸ್ಪಷ್ಟವಾಗುತ್ತದೆ. ಇನ್ನಷ್ಟು ನಿಖರವಾಗಿ ಹೇಳುವುದಾದರೆ (1) ಬಾಲ್ಯದ ದಿನಗಳು (2) ಭಾಗ್ಯದ ಬಾಗಿಲಲ್ಲಿ – ಎಂಬ ಎರಡು ವಿಭಾಗಗಳು (ಒಟ್ಟು ಪುಟ 27) ಮಾತ್ರ ಹೆಬ್ಬಾರರ ಜೀವನಕ್ಕೆ ಮೀಸಲಾದ ಭಾಗಗಳು. ಉಳಿದೆಲ್ಲವೂ ಕಲಾಜೀವನಕ್ಕೆ ಮೀಸಲಾದವು ಎನ್ನಬಹುದು. ಹೆಬ್ಬಾರರ ವೈಯಕ್ತಿಕ ಜೀವನ ಕಲಾ ಜೀವನಗಳನ್ನು ಬೇರೆ ಬೇರಾಗಿಸಲು ಸಾಧ್ಯವಿಲ್ಲೆಂದಾಗ ಹೀಗಾಗುವುದು ಸಹಜವೇ ಸರಿ. ಆದರೂ ಮೊದಲನೆಯ ಭಾಗದಲ್ಲಿ ಹೆಬ್ಬಾರರ ಹಿರಿಯರು, ಆ ಕಾಲದ ಜೀವನ ಕ್ರಮ. ಹೆಬ್ಬಾರರ ಬಾಲ್ಯದ ಚಿತ್ರಕಲಾಸಕ್ತಿ, ಊರಿನಲ್ಲಿ ದೊರೆತ ಪ್ರೋತ್ಸಾಹ, ಶಾಲೆಗಳಲ್ಲಿ ಮಾಡಿದ ಅಧ್ಯಾಪಕ ವೃತ್ತಿ, ಹೈಸ್ಕೂಲ್ ಶಿಕ್ಷಣ, ಮೈಸೂರಿನ ಶಿಕ್ಷಣ, ಮುಂಬಯಿಗೆ ಪಯಣ – ಇವೆಲ್ಲವುಗಳನ್ನೂ 12 ಪುಟಗಳಲ್ಲಿ ಅತಿ ಸಂಗ್ರಹವಾಗಿ, ಆದರೂ ಬಹಳ ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಎರಡನೆಯ ಭಾಗದಲ್ಲಿ ಅವರ ಮುಂಬಯಿಯ ಸಾಂಸಾರಿಕ ಜೀವನದ ಚಿತ್ರಣ ಸ್ವಸಂಪೂರ್ಣವಾಗಿ ಮೂಡಿಬಂದಿದೆ.

ಮುಂದಿನ ಒಂದೊಂದು ವಿಭಾಗದಲ್ಲಿ ಹೆಬ್ಬಾರರ ಸಾಧನೆಯ ಹಂತ ಹಂತಗಳನ್ನು ಗುರುತಿಸಿಕೊಂಡು ಹೋಗಲಾಗಿದೆ. ಅವರ ಕಲೆಯ ಬದುಕಿಗೊಂದು ನಿಶ್ಚಿತ ಗತಿಯನ್ನು ತೋರಿಸಿ ಕೊಟ್ಟುದು ಮುಂಬಯಿಯ ಜೆ. ಜೆ. ಕಲಾಶಾಲೆ. ಅಲ್ಲಿಯ ವಿದ್ಯಾರ್ಥಿಯಾಗಿ ಪ್ರಿನ್ಸಿಪಾಲ್ ಜೆರಾರ್ಡ್ ಅವರೊಂದಿಗೆ ಕೆಲಸ ಮಾಡುತ್ತಿದ್ದಾಗ ಅವರ ನಿಜವಾದ ಪ್ರತಿಭೆ ಅರಳತೊಡಗಿತು. ಜೆರಾರ್ಡರು ಹೆಬ್ಬಾರರಲ್ಲಿ ಬೆಳೆಯುತ್ತಿರುವ ಕಲಾವಿದನನ್ನು ಕಂಡರು, ಪ್ರೋತ್ಸಾಹಿಸಿದರು. ಅವರ ಬಗೆಗೆ ಆಶಾ ಭಾವನೆ ತಾಳಿದರು. ಅವರ ಆಶಾಭಾವನೆ ಸುಳ್ಳಾಗಲಿಲ್ಲ. ಪರೀಕ್ಷೆಗಳನ್ನು ಒಳ್ಳೆಯ ರೀತಿಯಲ್ಲಿ ಪೂರೈಸಿದ ಹೆಬ್ಬಾರರಿಗೆ ಜೆರಾರ್ಡರೇ ಅಧ್ಯಾಪನದ ಅವಕಾಶವನ್ನೂ ಒದಗಿಸಿಕೊಟ್ಟರು. ಭಾರತದ ಐತಿಹಾಸಿಕ ಸ್ಥಳಗಳ ಯಾತ್ರೆ, ಕೇರಳದ ಯಾತ್ರೆ ಹೆಬ್ಬಾರರ ಕಲಾ ಜೀವನಕ್ಕೆ ಹೊಸ ಹುರುಪನ್ನು ಒದಗಿಸಿ ಕೊಟ್ಟವು.

1950ರ ಮೊದಲ ವಿದೇಶ ಪ್ರವಾಸ ಹೆಬ್ಬಾರರ ಅನುಭವ ಶ್ರೀಮಂತಿಕೆ ಹೆಚ್ಚಿಸಿತು. ಭಾರತ ಸರಕಾರ ಕೊಟ್ಟ ರೂ. 2500ದ ವಿಶೇಷ ಪುರಸ್ಕಾರವನ್ನು ಪಡೆದವರೇ ಹೆಬ್ಬಾರರು ವಿದೇಶ ಪ್ರಯಾಣ ಮಾಡಿದರು. ಯುರೋಪಿನ ಹಲವಾರು ಪ್ರಸಿದ್ಧ ಚಿತ್ರಕಾರರ ಚಿತ್ರಗಳನ್ನು ಅಧ್ಯಯನ ಮಾಡಿದರು. ಅಂಥಾ ಚಿತ್ರಗಳ ಬಗೆಗೆ ತಮ್ಮ ದಿನಚರಿಯಲ್ಲಿ ತಮಗನ್ನಿಸಿದ್ದನ್ನು ಬರೆದಿಟ್ಟರು. ಪ್ರೊ. ಹರಿದಾಸ ಭಟ್ಟರು ಇಂತಹ ಸಂದರ್ಭಗಳಲ್ಲೆಲ್ಲ ಅವರ ದಿನಚರಿಯ ಪುಟಗಳಿಂದಲೇ ಹಕ್ಕ ಅನುವಾದಿಸಿಕೊಟ್ಟಿರುವುದರಿಂದ ಹೆಬ್ಬಾರರು ಮಾಡಿದ ಇತರ ಕಲಾವಿದರ ಚಿತ್ರಗಳ ವಿಮರ್ಶೆಯು ಹೆಬ್ಬಾರರ ಮಾತುಗಳಲ್ಲಿಯೇ ನಮಗೆ ಸಿಕ್ಕುವಂತಾಗಿದೆ. ಪುಟ್ಟ ಪುಟ್ಟ ಟಿಪ್ಪಣಿಗಳಲ್ಲಿ ಹೆಬ್ಬಾರರು ಸಾರಭೂತವಾಗಿ ಅಂಥಾ ಚಿತ್ರಗಳ ಸೋಲು ಗೆಲುವುಗಳ ವಿಮರ್ಶೆ ನಡೆಸಿದ್ದಾರೆ. ವಿದೇಶ ಯಾತ್ರೆಯಿಂದ ತಾವು ಕಲಿತಂತೆಯೇ ತಮ್ಮ ಚಿತ್ರಗಳ ಪ್ರದರ್ಶನಗಳ ಮೂಲಕ ಯುರೋಪಿನ ಹಲವು

ಚಿತ್ರ ಕಲಾವಿದರನ್ನು ತಮ್ಮ ಕಡೆಗೆ ಸೆಳೆಯಲು ಹೆಬ್ಬಾರರಿಗೆ ಸಾಧ್ಯವಾಯಿತು. ಪ್ಯಾರಿಸಿನ ಅಕಾಡೆಮಿ ಜೂಲಿಯನ್‌ನಲ್ಲಿ ಆರು ತಿಂಗಳ ಶಿಕ್ಷಣವನ್ನು ಮುಗಿಸಿ ಹೆಬ್ಬಾರರು ಮರಳಿದರು.

1953ರಲ್ಲಿ ಭಾರತೀಯ ಕಲಾವಿದರ ನಿಯೋಗದಲ್ಲಿ ಹೆಬ್ಬಾರರು ರಷ್ಯಾ ದೇಶದ ಪ್ರವಾಸ ಕೈಗೊಂಡರು. ರಷ್ಯಾ ದೇಶದ ಅವರ ಎಲ್ಲಾ ಅನುಭವಗಳನ್ನು ಅವರ ಮಾತುಗಳಲ್ಲೇ ಕೊಡಲಾಗಿರುವುದು ಈ ಭಾಗದ ವಿಶೇಷ. ಇಲ್ಲಿಯ ಎಲ್ಲಾ ಮಾತುಗಳನ್ನು ದಿನಾಂಕ ಸಹಿತ ಹೆಬ್ಬಾರರ ಇಂಗ್ಲೀಷ್ ದಿನಚರಿಯ ಪುಟಗಳಿಂದ ಕನ್ನಡಕ್ಕೆ ಅನುವಾದಿಸಿ ಕೊಡಲಾಗಿದೆ. ಅಲ್ಲಲ್ಲಿ ಹೀಗೆ ದಿನಚರಿಯಿಂದ ಅನುವಾದಿಸಿ ಕೊಟ್ಟಿರುವುದರಿಂದ ಪುಸ್ತಕಕ್ಕೆ ಒಂದು ರೀತಿಯ 'ಸ್ವಜೀವನ ಚಿತ್ರಣ' (ಆಟೋ ಬಯೋಗ್ರಫಿ)ದ ಸ್ವರೂಪವು ಪ್ರಾಪ್ತಿಸಿದೆ.

ಸ್ವದೇಶದಲ್ಲೂ ವಿದೇಶಗಳಲ್ಲೂ ಹೆಬ್ಬಾರರ ಅನೇಕ ಏಕಾಂಗ ಪ್ರದರ್ಶನಗಳು ನಡೆದವು. ಇಂತಹ ಪ್ರದರ್ಶನಗಳ ಸಂಘಟನೆಯಲ್ಲಿ ಹೆಬ್ಬಾರರ ಜೊತೆಗೆ ಅವರ ದೇಶ ವಿದೇಶಗಳ ಮಿತ್ರರು ಸಹಕರಿಸಿದ್ದರು. ಇಂತಹ ಪ್ರದರ್ಶನಗಳಿಗೆ ಬಂದ ವಿಮರ್ಶೆಗಳನ್ನು ಸಂದರ್ಭಕ್ಕೆ ತಕ್ಕ ಹಾಗೆ ಉದ್ಧರಿಸಿರುವುದರಿಂದ ಈ ಪ್ರದರ್ಶನ ವಿಚಾರಗಳು ಬರಿಯ ವರದಿಯಾಗಿಲ್ಲ. ಅವರ ಬೆಳವಣಿಗೆಯ, ಕೀರ್ತಿ ಶಿಖರಕ್ಕೇರುವ ಯಶೋಗಾಥೆಯ ವಿವರಗಳಾಗಿ ಕಂಡು ಬರುತ್ತವೆ. 'ತುಂಬಿ ಹರಿದ ಕಲಾವಾಹಿನಿ' ಎಂಬ ವಿಭಾಗದಲ್ಲಿ 1954ರಿಂದ 1982 – 83ರ ವರೆಗೆ ಹೆಬ್ಬಾರರ ಕಾರ್ಯಗಳ ಒಂದು ಸಂಕ್ಷಿಪ್ತ ಇಣುಕು ನೋಟವಿದೆ. ಒಂದೊಂದು ವರ್ಷವೂ ಅವರ ಕಾರ್ಯ ಸಾಧನೆಗಳ ವಿವರವೇನೆಂಬುದನ್ನು ನಿರೂಪಿಸಲಾಗಿದೆ. ಇಡಿಯ ಪುಸ್ತಕದಲ್ಲಿ ಈ ಭಾಗವೇ ಸ್ವಲ್ಪಮಟ್ಟಿಗೆ ವರದಿಯ ಸ್ವರೂಪವನ್ನು ಪಡೆದದ್ದಾದರೂ ಇವರ ಬಹ್ವಂಶ ದಿನಚರಿಗಳ ಆಧಾರದಿಂದ ಬರೆದಂತಿರುವುದರಿಂದ ಹೆಬ್ಬಾರರ ಕಲಾಜೀವನದ ಅನೇಕ ಅಧಿಕೃತ ಮಾಹಿತಿಗಳು ಇಲ್ಲೇ ಸಿಕ್ಕುತ್ತವೆ. ಈ ಭಾಗದಲ್ಲಿ 1987ರವರೆಗಿನ ಅವರ ಚಟುವಟಿಕೆಗಳನ್ನಾದರೂ ಸೇರಿಸಬೇಕಿತ್ತು. ಪ್ರೊ. ಹರಿದಾಸ ಭಟ್ಟರು 1986ರಲ್ಲೇ ಈ ಬರವಣಿಗೆಯ ರೂಪು ರೇಖೆಗಳನ್ನು ಹಾಕಿಕೊಂಡಿದ್ದು ಎರಡು ವರ್ಷಗಳ ಅನಂತರ ಇದನ್ನೆಲ್ಲ ಬರೆದಿದ್ದರೂ ಈ ಭಾಗದಲ್ಲಿ 1987ರ ವರೆಗಿನ ಅವರ ಚಟುವಟಿಕೆಗಳನ್ನು ವರ್ಷವಾರು ನಿರೂಪಿಸಿದ್ದಲ್ಲಿ ಹೆಚ್ಚಿನ ಪೂರ್ಣತೆ ಬರುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. 'ಕಲೆಯ ಸಂಘಟನೆಯಲ್ಲಿ' ಎಂಬುದು ಹೆಬ್ಬಾರರು 1980ರಲ್ಲಿ ಕೇಂದ್ರ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾದ ಮೇಲೆ ಅವರು ಮಾಡಿದ ಕಾರ್ಯಗಳ ವಿವರ.

ದೇಶ ವಿದೇಶಗಳ ಮಿತ್ರರು ಹೆಬ್ಬಾರರಿಗೆ ಬರೆದ ಪತ್ರಗಳು – ನೂರಾರಿರಬಹುದು. ಇವುಗಳಲ್ಲಿ ಕೆಲವನ್ನು ಮಾತ್ರ 'ಪತ್ರಗಳಲ್ಲಿ ಮೂಡುವ ಚಿತ್ರ' ಎಂಬ ಭಾಗದಲ್ಲಿ ಕೊಡಲಾಗಿದೆ. ಇಲ್ಲಿ ಕೇವಲ 26 ಪತ್ರಗಳನ್ನು ಆಯ್ದು ಕೊಡಲಾಗಿದೆ. 'ಕಲೆಯ ಆಚಾರ್ಯ ಪುರುಷ' ಎಂಬ ಭಾಗದಲ್ಲಿ ಹೆಬ್ಬಾರರ ಮುಖ್ಯ ಸಾಧನೆಗಳ ವಿಮರ್ಶಾತ್ಮಕ ಅವಲೋಕನವಿದೆ. ಅನುಬಂಧಗಳಲ್ಲಿ 1948ರಲ್ಲಿ ಪ್ರಕಟವಾದ 'ಕೆ. ಕೆ. ಹೆಬ್ಬಾರ – ರೇಖಾ ಚಿತ್ರಗಳು, ವರ್ಣಚಿತ್ರಗಳು' ಕೃತಿಗೆ ಕಲಾವಿಮರ್ಶಕ ಜಿ. ವೆಂಕಟಾಚಲಮ್ ಬರೆದ ಮುನ್ನುಡಿ, ಕಲಾಶಿಕ್ಷಣದ ಬಗೆಗಿನ ಹೆಬ್ಬಾರರ ಪ್ರಬಂಧ 'ಹಾಡುವ ರೇಖೆಗೆ' ಮುಲ್ಕ್‌ರಾಜ್ ಆನಂದರು ಬರೆದ ಮುನ್ನುಡಿ ಮತ್ತು ಹೆಬ್ಬಾರರ ಅನಿಸಿಕೆ. ಪ್ರಸಾರಾಂಗದಲ್ಲಿ ಹೆಬ್ಬಾರರು ನೀಡಿದ ಎರಡು ಉಪನ್ಯಾಸಗಳು. 'ಕಲಾವಿದನ ಶೋಧ' ಕೃತಿಗೆ ವಿ. ಆರ್. ಅಂಬೇಡ್ಕರ್ ಬರೆದ ಮುನ್ನುಡಿ ಮತ್ತು ಹೆಬ್ಬಾರರ ಸಂಕ್ಷಿಪ್ತ ಆತ್ಮಶೋಧ – ಇವು ಸೇರಿವೆ. ಹೆಬ್ಬಾರರನ್ನು ತಿಳಿದು ಕೊಳ್ಳಲು, ಅವರ ಕಲೆಯನ್ನು ಅರ್ಥ ಮಾಡಿಕೊಳ್ಳಲು ಬಹಳ ಸಹಾಯಕವಾಗುವ ಪೂರಕ ಸಾಮಗ್ರಿಗಳಿವು. ಇವನ್ನು ಅನುಬಂಧದಲ್ಲಿ ಒದಗಿಸಿ ಕೊಟ್ಟುದರಿಂದ ಪುಸ್ತಕದ ಪ್ರಯೋಜನ ತುಂಬ ಹೆಚ್ಚಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಹೆಬ್ಬಾರರ 'ಆತ್ಮಶೋಧ'ದಲ್ಲಿ ಅವರು ಅವರ ಬದುಕನ್ನೂ ಕಲೆಯನ್ನೂ ಸಿಂಹಾವಲೋಕನ ಮಾಡಿರುವುದು ಬಹಳ ಸರಳವಾಗಿಯೂ ಸೊಗಸಾಗಿಯೂ ಮೂಡಿ ಬಂದಿದೆ. ಈ ಭಾಗವನ್ನು ಪುಸ್ತಕದ ಮುನ್ನುಡಿಯ ಭಾಗದಲ್ಲಿ ಅಳವಡಿಸಿದ್ದಾಗಿರುತ್ತಿದ್ದರೆ ಹೆಬ್ಬಾರರ ಸರಿಯಾದ ಪರಿಚಯದೊಡನೆ ಪುಸ್ತಕವನ್ನು ಪ್ರವೇಶಿಸಿದಂತಾಗುತ್ತಿತ್ತು. ಪ್ರೊ. ಹರಿದಾಸ ಭಟ್ಟರ ಇಡೀ ಬರವಣಿಗೆಯೇ ಇಲ್ಲಿ ಸಾರಭೂತವಾಗಿ ನಿರೂಪಿತವಾದಂತಿದೆ. ಇಲ್ಲಿ ಹೆಬ್ಬಾರರು ಸ್ವಜೀವನ ಚಿತ್ರಣದಲ್ಲಿ ಹೇಳಿದ ಮಾತುಗಳಿಗೇ ವ್ಯಾಖ್ಯಾನ ರೂಪವಾಗಿ ಇಡಿಯ ಕೃತಿ ಬಂದಂತಿದೆ ಮತ್ತು ಇಡಿಯ ಪುಸ್ತಕದಲ್ಲೆಲ್ಲೂ ಆ ಅಭಿಪ್ರಾಯಗಳಿಗೆ ವಿರೋಧ ತರುವಂತಹ ಅಭಿಪ್ರಾಯಗಳು ನಿರೂಪಿತವಾಗಿಲ್ಲ. ಹೆಬ್ಬಾರರು ತಮ್ಮನ್ನು ತಾವು ತಿಳಿದುಕೊಂಡ ರೀತಿಯಲ್ಲಿಯೇ ಹರಿದಾಸ ಭಟ್ಟರು ಹೆಬ್ಬಾರರನ್ನು ತಿಳಿದಿದ್ದಾರೆಂದೂ ನಾವಿಲ್ಲಿ ತಿಳಿಯ ಬಹುದಾಗಿದೆ.

ಚಿತ್ರಕಲೆಯ ಹೆಚ್ಚಿನ ಪರಿಭಾಷೆಗಳನ್ನು ಅಲ್ಲಿ ಬೇರೆ ಬೇರೆ ಕಾಲಗಳಲ್ಲಿ ಮೂಡಿಬಂದ ನಾನಾ ಇಸಂಗಳ ವಿವರಗಳನ್ನಾಗಲಿ ಕೊಡದೆ, ಯಾವ 'ಇಸಂ' ಪ್ರಭಾವಕ್ಕೂ ಒಳಗಾಗದೆ ಭಾರತೀಯ ಪರಂಪರೆಯ ಗಟ್ಟಿ ಬೇರಿನೊಂದಿಗೆ ಬಾಲ್ಯದಲ್ಲಿ ಕಂಡ ಹಳ್ಳಿಯ ಜೀವನದ, ಅಲ್ಲಿಯ ಕುಣಿತ ಮತ್ತು ಜನಪದ ಸೊಗಸುಗಳ ಅನುಭವಗಳನ್ನು ಆಧಾರವಾಗಿಟ್ಟುಕೊಂಡು ಪಾಶ್ಚಾತ್ಯ ಕಲಾ ಸಂಪ್ರದಾಯಗಳು ಮತ್ತು ಧೋರಣೆಗಳನ್ನು ತಲಸ್ಪರ್ಶಿ

ಯಾಗಿ ಅಧ್ಯಯನ ಮಾಡಿ, ಅವುಗಳ ಪ್ರಭಾವಕ್ಕೆ ಕೊಚ್ಚಿ ಹೋಗದೆ ತಮ್ಮದೇ ಸ್ವತಂತ್ರ ಮಾರ್ಗವನ್ನು ನಿರ್ಮಾಣ ಮಾಡಿದ ಸಾಮರ್ಥ್ಯದ, ಪ್ರತಿಭೆಯ ನಿರೂಪಣೆಗೆ ಹೆಚ್ಚಿನ ಗಮನವನ್ನು ಕೊಟ್ಟು, ಸಾಮಾನ್ಯ ಓದುಗನೊಬ್ಬನಿಗೂ ಇದರ ಅಂತರಾರ್ಥ ತಿಳಿಯಬೇಕೆಂಬುದನ್ನು ಮರೆಯದೆ ಬರೆದ ಕೃತಿಯಾಗಿದೆ. ಆದರೆ ಇದನ್ನು ಓದಿದ ಮೇಲೆ, ಇಲ್ಲಿಯ ಚಿತ್ರಗಳನ್ನು ನೋಡಿದ ಮೇಲೆ ಓದುಗನಿಗೆ ಚಿತ್ರಕಲೆಯ ಮೂಲಭೂತ ಪರಿಚಯವೊಂದು ಸಮಗ್ರವಾಗಿ ಆಗದೆ ಇರುವುದಿಲ್ಲ.

ಪುಸ್ತಕದಲ್ಲಿ ಬಳಸಲಾದ ಚಿತ್ರಗಳ ಬಗೆಗೆ ಎತ್ತಿ ಹೇಳಬೇಕು. ಚಿತ್ರಗಳು ಯಾವ ಪುಸ್ತಕಕ್ಕೂ ಶೋಭೆಯನ್ನು ತರಬಲ್ಲವುಗಳು. ಅಂತಹದರಲ್ಲಿ ಚಿತ್ರ ಕಲಾವಿದನೊಬ್ಬನ ಜೀವನ ಕಾರ್ಯಗಳ ವಿವರಣೆಯಲ್ಲಿ ಚಿತ್ರಗಳ ಮಹತ್ವವೆಷ್ಟೆಂದು ಹೇಳಲಸಾಧ್ಯ. ಪುಸ್ತಕದ ಪ್ರತಿ ವಿಭಾಗವೂ ಹೆಬ್ಬಾರರ ರೇಖಾಚಿತ್ರಗಳಿಂದ ಅಲಂಕೃತವಾಗಿದೆ. ತೀರ ಸರಳವೆಂಬಂತೆ ಮೇಲುನೋಟಕ್ಕೆ ಕಾಣುವ ಕೆಲವೇ ಕೆಲವು ರೇಖೆಗಳಿಂದ ಮಹತ್ತ್ವ ಪರಿಣಾಮವನ್ನು ಸಾಧಿಸಬಲ್ಲ 'ಹೆಬ್ಬಾರ ಶೈಲಿ' ಈ ರೇಖಾ ಚಿತ್ರಗಳಲ್ಲೆಲ್ಲ ಒಡಮೂಡಿರುವುದನ್ನು ಕಾಣಬಹುದು. ಒಟ್ಟು ಆರು ವರ್ಣಚಿತ್ರಗಳಿವೆ. (ಇವುಗಳಲ್ಲಿ ಎರಡು ವರ್ಣಚಿತ್ರಗಳ ಬಗ್ಗೆ ಮಾತ್ರ – ಮೋಲಿ ವಿಂಟ್ಯಾವರ್ ಮತ್ತು ಸ್ವರ್ಗ ಮರ್ತ್ಯ – ಇವುಗಳ ಬಗ್ಗೆ ಮಾತ್ರ ಪುಸ್ತಕದಲ್ಲಿ ವಿವರಗಳು ಬಂದಿವೆ. ಉಳಿದಂತೆ ಹೆಬ್ಬಾರರ ಪ್ರಸಿದ್ಧ ಚಿತ್ರಗಳೆಂದು ಪುಸ್ತಕದಲ್ಲಿ ಉಲ್ಲೇಖಿಸಲಾದ ಚಿತ್ರಗಳೂ ಇಲ್ಲಿ ಸೇರ್ಪಡೆಗೊಂಡಿದ್ದಲ್ಲಿ ಇನ್ನೂ ಚೆನ್ನಾಗಿರುತ್ತಿತ್ತು. ಆದರೆ ಅವರ ಎಲ್ಲಾ ಚಿತ್ರಗಳನ್ನೂ ಈ ಪುಸ್ತಕದಲ್ಲಿ ಸೇರಿಸುವುದು ಜೀವನ ಚರಿತ್ರೆಕಾರನ ಕೆಲಸವಲ್ಲವಲ್ಲ. ಅಲ್ಲದೆ ಹೆಬ್ಬಾರರ ಚಿತ್ರಗಳ ಎರಡು ಮೂರು ಪುಸ್ತಕಗಳು ಮುದ್ರಿತವಾಗಿ ಹೊರಬಂದಿವೆಯಷ್ಟೆ.) 65 ಕಪ್ಪು ಬಿಳುಪು ಚಿತ್ರಗಳಲ್ಲಿ 16 ಚಿತ್ರಗಳು ಹೆಬ್ಬಾರರ ರಚನೆಗಳ ಕಪ್ಪು ಬಿಳುಪು ಚಿತ್ರಗಳು. ಆರು ರೇಖಾ ಚಿತ್ರಗಳು. ಉಳಿದವೆಲ್ಲ ಹೆಬ್ಬಾರರ ಜೀವನದ ವಿವಿಧ ಘಟನೆಗಳಿಗೆ ಬೇರೆ ಬೇರೆ ಕಾಲಗಳಿಗೆ ಸಂಬಂಧಿಸಿದ ಅಪೂರ್ವವಾದ ಭಾವಚಿತ್ರಗಳು. ಅವರ ದಿನಚರಿ, ಅವರ ಜನ್ಮಕುಂಡಲಿ, ಅವರಿಗೆ ದೊರೆತ ಪ್ರಮಾಣ ಪತ್ರಗಳು ಇವನ್ನೂ ಪ್ರಕಟಿಸಿದ್ದು ತುಂಬ ಪ್ರಯೋಜನಕರವೆಂಬುದರಲ್ಲಿ ಸಂದೇಹವಿಲ್ಲ. ಅವರ ವೈಯಕ್ತಿಕ ಮತ್ತು ಕಲಾಜೀವನಕ್ಕೆ ಸಂಬಂಧಿಸಿ, ಪುಸ್ತಕದಲ್ಲಿ ಲೇಖನ ರೂಪದಲ್ಲಿ ಹೇಳಲಾಗದುದನ್ನೆಲ್ಲಾ ಭಾವಚಿತ್ರಗಳು ಹೇಳುತ್ತವೆ. ಪುಸ್ತಕದ ಪ್ರತಿಯೊಂದು ವಿಭಾಗದ ಮೊದಲಿಗೂ ಹೆಬ್ಬಾರರು ರಚಿಸಿದ ಒಂದೊಂದು ರೇಖಾಚಿತ್ರವಿದೆ. ಅತಿ ಕಡಿಮೆ ರೇಖೆಗಳಿಂದ ಅತಿ ಪರಿಣಾಮಕಾರಿಯಾಗಿ ಚಿತ್ರಿಸುವ ಕಲೆ ಬಹುಶಃ ಹೆಬ್ಬಾರರಿಗೆ ಸಿದ್ಧಿಸಿದಂತೆ ಇತರರಿಗೆ ಸಿದ್ಧಿಸಿರಲಿಕ್ಕಿಲ್ಲ. ಅದನ್ನು ಅರಿತುಕೊಳ್ಳಲು ಈ ರೇಖಾಚಿತ್ರಗಳು ಒಳ್ಳೆಯ ಉದಾಹರಣೆಗಳಾಗಿವೆ. ಇವಲ್ಲದೆ ಐದು ರೇಖಾಚಿತ್ರಗಳು ಇತರ ಚಿತ್ರಗಳೊಂದಿಗೂ ಸೇರ್ಪಡೆಗೊಂಡಿವೆ. (ಯಕ್ಷಗಾನ ಎಂಬ ಚಿತ್ರವನ್ನು ಮಾತ್ರ ಎರಡು ಕಡೆಗಳಲ್ಲಿ ಬಳಸಿಕೊಳ್ಳಲಾಗಿದೆ. ರೇಖಾಚಿತ್ರಗಳೊಂದಿಗೆ ಕೊಟ್ಟ ಅದೇ ಚಿತ್ರವು 'ಸೋವಿಯತ್ ರಷ್ಯಾ ದಿನಚರಿಯ' ಮೊದಲಿಗೂ ಬಂದಿದೆ. ಎರಡು ಕಡೆಗಳಲ್ಲಿ ಒಂದೇ ಚಿತ್ರವನ್ನು ಹಾಕುವುದರ ಬದಲು ಒಂದೆಡೆಯಲ್ಲಿ ಬೇರೊಂದು ಚಿತ್ರವನ್ನು ಹಾಕಬಹುದಿತ್ತು. 'ಭಾಗ್ಯದ ಬಾಗಿಲಲ್ಲಿ' ಎಂಬ ವಿಭಾಗದ ಮೊದಲಿಗೆ ಬಂದಿರುವ ಚಿತ್ರವು 'ಗೋಸ್ವಾಮಿ ತುಲಸೀದಾಸ ಲಗ್ನ' ಮಾಲಿಕೆಯ ಚಿತ್ರವಾಗಿದ್ದು ಇದರ ಪೂರ್ಣರೂಪವು ಇತರ ರೇಖಾಚಿತ್ರಗಳೊಂದಿಗೆ ಕೊಡಲ್ಪಟ್ಟಿದೆ.) ರೇಖಾಚಿತ್ರಗಳನ್ನು ಈ ರೀತಿಯಲ್ಲಿ ಬಳಸಿಕೊಂಡುದರಿಂದ ಪುಸ್ತಕದ ವಿನ್ಯಾಸಕ್ಕೆ ಒಂದು ಹೊಸತನ ಬಂದುದಲ್ಲದೆ ಆಕರ್ಷಣೆಯೂ ಆಗಿದೆ. (ಹೆಬ್ಬಾರರು ತಮ್ಮ ವರ್ಣ ಚಿತ್ರಗಳಿಗೆಲ್ಲ ಇಂಗ್ಲೀಷ್‌ನಲ್ಲಿ ಶೀರ್ಷಿಕೆಗಳನ್ನಿತ್ತಿದ್ದಾರೆ. ಈ ಗ್ರಂಥದಲ್ಲಿ ಕೊಟ್ಟ ಚಿತ್ರಗಳೆಲ್ಲ ಅವುಗಳ ಕನ್ನಡ ಅನುವಾದ ರೂಪಗಳನ್ನು ಕೊಡಲಾಗಿದೆ. ಅಂತಹ ಸಂದರ್ಭಗಳಲ್ಲೆಲ್ಲ ಏಕರೂಪತೆಗಳನ್ನು ಕಾಯ್ದು ಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಉದಾ – 'ಸನ್ನಿ ಸೌತ್' ಎಂಬ ಚಿತ್ರವನ್ನು ಆ ಚಿತ್ರದ ಕೆಳಗೆ 'ಜ್ವಲಂತ ದಕ್ಷಿಣ' ಎಂದು ಹೆಸರಿಸಲಾಗಿದ್ದರೆ 'ಬಿಸಿಲಿನ ತೆಂಕಣ' ಎಂದು ಪು. 183ರಲ್ಲಿ ಹೇಳಲಾಗಿದೆ. 'ಬೆಳಗುವ ದಕ್ಷಿಣ' ಎಂದು ಪು. 200ರಲ್ಲಿ ಹೇಳಲಾಗಿದೆ. ಹೀಗೆ ಒಂದೇ ಚಿತ್ರದ ಹೆಸರನ್ನು ಮೂರು ಕಡೆಯಲ್ಲಿ ಮೂರು ರೀತಿಯಲ್ಲಿ ಅನುವಾದಿಸಲಾಗಿದೆ.) ಹೆಬ್ಬಾರರೇ ಬರೆದ ಸ್ವಮುಖ ಚಿತ್ರವನ್ನೂ ಅಳವಡಿಸಿಕೊಂಡಿರುವುದರಿಂದ ಪುಸ್ತಕದ ಶೋಭೆ ಹೆಚ್ಚಿದೆ.

ಪುಸ್ತಕದ ಅನುಬಂಧಗಳು ಪುಸ್ತಕದ ಬೆಲೆಯನ್ನು ಹೆಚ್ಚಿಸಿವೆ. ವೆಂಕಟಾಚಲಂ ಮತ್ತು ಅಂಬೇಡ್ಕರ್ ಅವರ ಲೇಖನಗಳು ಮತ್ತು ಸ್ವತಃ ಹೆಬ್ಬಾರರ ಉಪನ್ಯಾಸ (ಜೊತೆಗೆ ಅನೇಕ ಪತ್ರಗಳು) ಹೆಬ್ಬಾರರ ಕಲೆಯನ್ನು ಅರ್ಥೈಸಿಕೊಳ್ಳಲು ಓದುಗನನ್ನು ಸರಿಯಾಗಿ ತರಬೇತುಗೊಳಿಸುವಂತಿದೆ.

ಕನ್ನಡದಲ್ಲಿ ಇದೊಂದು ಅಪೂರ್ವ ಕೃತಿಯೆಂಬುದರಲ್ಲಿ ಸಂಶಯವಿಲ್ಲ. ಆದರೆ ಇದೊಂದು ಅಸಂಪೂರ್ಣ ಕೃತಿಯೂ ಹೌದು. ಒಬ್ಬ ಸೃಷ್ಟಿಶೀಲ ಕಲಾವಿದನ ಬಗ್ಗೆ ಎಲ್ಲವೂ ಹೇಳಿ ಮುಗಿಯಿತೆಂದಾಗುವುದು ಅಸಾಧ್ಯವೇ ಸರಿ. ಇದು ಕಲಾವಿದನ ಬದುಕಿನ ಕಥೆ. ಕಲಾವಿದನ ಕಲೆಯ ಕಥೆ; ತನ್ನ ಅಳವಿಗೆ ಎಷ್ಟು ಸಾಧ್ಯವೋ ಅಷ್ಟನ್ನು ಹಿಡಿದಿಟ್ಟಿದ್ದಾರೆ. ಈ ವಿಷಯವನ್ನು ಮಾನ್ಯ ಲೇಖಕರೇ ಬಿಡುಗಡೆಯ ಸಮಾರಂಭದಂದು ಹೇಳಿ ಕೊಂಡಿದ್ದಾರೆ.

ತನಗೆ ಬರವಣಿಗೆಯ ಸಂದರ್ಭದಲ್ಲಿ ಯಾವುದು ಮುಖ್ಯವೆಂದು ಕಂಡಿದೆಯೋ ಅದನ್ನು ಮಾತ್ರ ಆರಿಸಿಕೊಂಡಿದ್ದಾರೆ. ಮತ್ತು ಕೇಳಬೇಕೆಂದು ಯೋಚಿಸಿದ್ದೆಲ್ಲವನ್ನೂ ಹೇಳಲಾಗಿಲ್ಲವೆಂದೂ ಹೇಳಿಕೊಂಡಿದ್ದಾರೆ. ಇದನ್ನು ಬರೆದುದು ಅಮೇರಿಕದಲ್ಲಿ. (ಅಂತಾರಾಷ್ಟ್ರೀಯ ಖ್ಯಾತಿಯ ಭಾರತೀಯ ಕಲಾವಿದ ಕೆ. ಕೆ. ಹೆಬ್ಬಾರರ ಜೀವನ ಕಲೆಗಳ ಬಗ್ಗೆ ಅಮೇರಿಕದಲ್ಲಿ ಕನ್ನಡ ಭಾಷೆಯಲ್ಲಿ ಕೃತಿ 'ರಚಿತ'ವಾಯಿತೆಂದು ಧಾರಾಳವಾಗಿ ಹೇಳಬಹುದು.) ಒಮ್ಮೆ ಮೂಲವನ್ನು ಬರೆದು ಮತ್ತೆ ಓದಿ ತಿದ್ದಿ ಪುನಃ ಬರೆದು ಮತ್ತೆ ಮತ್ತೆ ಸಂಸ್ಕರಿಸಿದ ಕೃತಿಯಿದಲ್ಲ. ಬರವಣಿಗೆಯ ಓಘ ಸೆಳೆದಂತೆ ಬರೆದುಕೊಂಡು ಹೋದ ಕೃತಿ. ಆದುದರಿಂದಲೇ ಎಲ್ಲ ವಿಭಾಗಗಳ ಬರವಣಿಗೆ ಒಂದೇ ರೀತಿಯಲ್ಲಿರದೆ ಅಲ್ಪ ಸ್ವಲ್ಪ ವ್ಯತ್ಯಾಸವುಂಟಾಯಿತೆಂದು ಹೇಳಲೂಬಹುದಾಗಿದೆ.

ಪ್ರೊ. ಕು. ಶಿ. ಹರಿದಾಸ ಭಟ್ಟರ ಬರವಣಿಗೆಯ ಶೈಲಿ 'ಅತೀ ಗಂಭೀರ'ವಲ್ಲ. ಸ್ವಲ್ಪಮಟ್ಟಿಗೆ ಲಘು. ಗಂಭೀರ ವಿಷಯಗಳನ್ನೇ ಆದರೂ ಅವರು ಗಾಂಭೀರ್ಯದ ಕಾರಣಕ್ಕಾಗಿಯೇ ಜನರಿಂದ ದೂರ ನಿಲ್ಲುವಂತೆ ಬರೆಯಲಾರರು; ಇದು ಗಂಭೀರವೆಂಬ ಕಲ್ಪನೆ ಬರದಂತೆ ಲಘು ಧಾಟಿಯಲ್ಲೇ ಹೇಳಿದರೂ ವಿಷಯವನ್ನು ಹಗುರಗೊಳಿಸದೆ ಹೇಳುವ ಸಾಮರ್ಥ್ಯ ಅವರಲ್ಲಿದೆ. ಅವರ 'ಲೋಕಾಭಿರಾಮ'ದ ಬರವಣಿಗೆಗಳು ಜನರಿಗೆ ಇಷ್ಟವಾಗುವುದು ಬಹುಶಃ ಇದೇ ಕಾರಣಕ್ಕಾಗಿ. 'ಕಟ್ಟಿಂಗೇರಿ ಕೃಷ್ಣ ಹೆಬ್ಬಾರ' ಕೃತಿಯಲ್ಲಿ ಎಲ್ಲೂ ವಿಷಯವನ್ನು ಲಘುಗೊಳಿಸಲು ಪ್ರಯತ್ನಿಸಲಾಗಿಲ್ಲ. ವಿಷಯದ ಗಾಂಭೀರ್ಯಕ್ಕೆ ಸರಿಯಾದ ಭಾಷಾ ಶೈಲಿಯನ್ನು ಆಯ್ದುಕೊಳ್ಳಲಾಗಿದೆ. ಅಷ್ಟು 'ಲೋಕಾಭಿರಾಮ'ದ ಬರವಣಿಗೆಗಳೂ 'ಜಗದಗಲ' ಮಾಡಿದ ಪ್ರವಾಸಾನುಭವಗಳ ವರ್ಣನೆಯನ್ನು ಮಾಡಿದ ಅನುಭವವೂ ಈ ಬರವಣಿಗೆಯ ಹಿನ್ನೆಲೆಯಲ್ಲಿದೆಯೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಜೀವನ ಚರಿತ್ರಕಾರರಿಗಿರಬೇಕಾದ ಸಂಯಮ ಇಲ್ಲಿಯ ಬರವಣಿಗೆಯಲ್ಲಿ ಖಚಿತವಾಗಿ ಗೋಚರಿಸುತ್ತದೆ. ಹೆಬ್ಬಾರರನ್ನು ಬರಿದೆ ಹೊಗಳಬೇಕೆನ್ನುವ ಇರಾದೆಯಿಂದ ಎಲ್ಲೂ ಬರವಣಿಗೆ ಮುಂದುವರಿಯುವುದಿಲ್ಲವೆಂಬುದನ್ನು ಎತ್ತಿ ಹೇಳಬೇಕಾಗಿದೆ. ಹೆಬ್ಬಾರರಂತಹ ಸೃಷ್ಟಿಶೀಲ ಕಲಾವಿದರ ಪ್ರತಿಭೆಯನ್ನು ಇನ್ನಷ್ಟು ಜನ ನಿರೀಕ್ಷಿಸಲಿ. ಕೃತಿಗಳನ್ನು ಸ್ವಂತ ದೃಷ್ಟಿಯಿಂದ ಶುದ್ಧ ಮನಸ್ಸಿನಿಂದ ವಿಮರ್ಶಿಸಲಿ – ಎಂಬ ಸಹೃದಯಾರೋಗ್ಯಶಾಲಿಯಾದ ಧೋರಣೆಯಿಂದ ಇಲ್ಲಿಯ ಬರವಣಿಗೆ ನಿಷ್ಕೃಷ್ಟತೆಯನ್ನು ಪಡೆದಿದೆಯೆನ್ನಬಹುದು. ಹೆಬ್ಬಾರರ ಬದುಕಿನ ಸ್ವಾರಸ್ಯ, ವಿಚಿತ್ರ ಗತಿಯ ಸೊಗಸನ್ನು ಅರ್ಥೈಸಿಕೊಂಡು ನಿರೂಪಿಸಿದ್ದರಿಂದ ಅವು ಓದುಗನ ಮನಸ್ಸನ್ನು ಮುಟ್ಟುತ್ತವೆ.

"ಕನ್ನಡದಲ್ಲಾಗಲಿ ಬೇರೆ ಯಾವ ಭಾಷೆಯಲ್ಲಾಗಲಿ ಹೆಬ್ಬಾರರ ಕಲೆ ಮತ್ತು ಬದುಕಿನ ಬಗ್ಗೆ ಇಷ್ಟು ಸುಂದರವಾದ ಇಷ್ಟು ಸಮಗ್ರವಾದ ಪುಸ್ತಕ ಬೇರೆಯಿಲ್ಲ. ಆಧುನಿಕ ಭಾರತೀಯ ಕಲೆಯ ಬಗ್ಗೆ ಪ್ರವೇಶ ಮಾಡುವವರಿಗೆ ಕೂಡಾ ಇದೊಂದು ಒಳ್ಳೆಯ ಪುಸ್ತಕವಾಗಬಲ್ಲುದು. ಹೆಬ್ಬಾರರ ಕಲಾವಂತಿಗೆಯನ್ನು ಜಗತ್ತಿನ ಬೇರೆ ಬೇರೆ ಕಲಾವಿದರು ಬೇರೆ ಬೇರೆ ಕೋನಗಳಿಂದ ನೋಡಿದ ಚಿತ್ರಣವನ್ನೂ ಈ ಪುಸ್ತಕದಲ್ಲಿ ಕಾಣಬಹುದಾದ್ದರಿಂದ ಇದನ್ನೊಂದು ಸಮಗ್ರ ಪುಸ್ತಕ ಎನ್ನಬಹುದು" ಎಂಬುದು ಈ ಪುಸ್ತಕದ ಬಗ್ಗೆ 'ತರಂಗ' ಪತ್ರಿಕೆಯ ಸಂಪಾದಕ ಶ್ರೀ ಸಂತೋಷ ಕುಮಾರ ಗುಲ್ವಾಡಿಯವರ ಅಭಿಪ್ರಾಯ.

"ಇದನ್ನು ಕೇವಲ ಬಯೋಗ್ರಫಿ ಎಂದು ಹೇಳುವ ಹಾಗಿಲ್ಲ. ಅಷ್ಟೇ ಆಗಿದ್ದರೆ ಇದೊಂದು ಪ್ರಮುಖ ಗ್ರಂಥವೆನ್ನಿಸುತ್ತಿರಲಿಲ್ಲ. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಸಮಕಾಲೀನ ಚಿತ್ರಕಲೆಯನ್ನು ಆಸ್ವಾದನೆ ಮಾಡುವುದಕ್ಕೆ ಸಾಧ್ಯವಾಗುವಂತಹ ಒಂದು ಕಿಂಡಿಯನ್ನು ಶ್ರೀ ಹರಿದಾಸ ಭಟ್ಟರು ಒದಗಿಸಿಕೊಟ್ಟಿದ್ದಾರೆ. ಈ ಕಾರಣಕ್ಕಾಗಿ ಈ ಪುಸ್ತಕ ನಮಗೆ ಮಹತ್ವದ್ದಾಗುತ್ತದೆ. ಕಲೆಯನ್ನು ನೋಡಿ ಸಂತೋಷ ಪಡುವ ಕೆಲಸವನ್ನು ಮೊದಲಾಗಿ ಮಾಡಲು ಈ ಪುಸ್ತಕ ಬಹಳಷ್ಟು ಸಹಕಾರಿಯಾಗಿದೆ" ಎಂದು 'ತುಷಾರ' ಸಂಪಾದಕ, ಕಲಾವಿಮರ್ಶಕ ಶ್ರೀ ಈಶ್ವರಯ್ಯ ಅವರು ಈ ಪುಸ್ತಕದ ಬಗೆಗೆ ಹೇಳಿದ ಮಾತು. (ಎರಡೂ ಅಭಿಪ್ರಾಯಗಳು ಪುಸ್ತಕ ಬಿಡುಗಡೆಯ ದಿನವಾದ ತಾ. 15 – 6 – 88ರ ಭಾಷಣಗಳಿಂದ ಉದ್ಧರಿಸಿದಂತಹವು.)

ಈ ಪುಸ್ತಕ ಕನ್ನಡಿಗರಿಗೆ ಮಾತ್ರ ದೊರಕಿದರೆ ಸಾಲದು. ಭಾರತದ ಇತರ ಭಾಷೆಗಳಿಗೂ ಇಂಗ್ಲೀಷಿಗೂ ಅನುವಾದಗೊಳ್ಳಬೇಕು. ಕನ್ನಡಕ್ಕಂತೂ ಈ ಕೃತಿಯಿಂದಾಗಿ ಹೊಸತೊಂದು ಗರಿಮೆ ಉಂಟಾಗಿರುವುದು ಖಚಿತ. ಮುಂದೆ ಬರಬಹುದಾದ ಇಂತಹ ಕೃತಿಗಳಿಗೆ ಇದೊಂದು ಮಾರ್ಗದರ್ಶಕ ಕೃತಿಯಾಗಿ ನಿಲ್ಲುವಂತಿದೆಯೆಂಬುದರಲ್ಲೂ ಸಂದೇಹವಿರಲಾರದು.

———

ರತ್ನ ೪

ಸಾಧನೆ - ಸಿದ್ಧಿ

೧. ಪ್ರೊ. ಕು. ಶಿ. ಹರಿದಾಸ್ ಭಟ್

— ಪ್ರೊ. ಎಸ್. ಕೆ. ಶ್ರೀಪತಿ ಆಚಾರ್ಯ

ಮನೆತನ : ಉಡುಪಿಯು ಬ್ರಾಹ್ಮಣ ವರ್ಗದ ಒಂದು ಪಂಗಡ ಅಂದರೆ ಶಿವಳ್ಳಿ ಬ್ರಾಹ್ಮಣ ಪಂಗಡಕ್ಕೆ ಇಂದಿಗೆ ತವರೂರು. ಈ ಪಟ್ಟಣದ ಈಶಾನ್ಯದ ಭಾಗ ಕುಂಜಿಬೆಟ್ಟು. ಅದರಲ್ಲಿ ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬ ಶ್ರೀ ಶಿವ ಗೋಪಾಲ ಭಟ್ಟರದು. "ಶಿವ" ಎಂಬುದು ಇವರ ಮನೆತನಕ್ಕೆ ಬಂದ ಹೆಸರು. ಶ್ರೀ ಹರಿದಾಸ ಭಟ್ಟರು ಶ್ರೀ ಶಿವ ಗೋಪಾಲ ಭಟ್ಟರ ದ್ವಿತೀಯ ಪುತ್ರ. ಒಂದು ಗಂಡು ಮತ್ತೊಂದು ಹೆಣ್ಣು ಮಗುವಿನ ನಂತರ ಶ್ರೀ ಭಟ್ಟರ ಜನನ. ಹಿರಿಯ ಸಹೋದರ ಮದುವೆಯಾಗಿ ಸ್ವಲ್ಪ ಕಾಲದ ನಂತರ ಕಾಲವಾದರು. ಇವರಿಗೆ ಕಿರಿಯ ಸಹೋದರಿ ಜನಿಸಿದರು. ಮನೆಯಲ್ಲಿ ಜೀವನ ನೆಮ್ಮದಿಯಾಗಿ ಸಾಗುತ್ತಿತ್ತು. ಜೀವನೋದ್ಯಮಕ್ಕಾಗಿ ಶ್ರೀ ಶಿವ ಗೋಪಾಲ ಭಟ್ಟರು ತನ್ನ ತಮ್ಮ ಶಿವ ಅನಂತ ಭಟ್ಟರೊಂದಿಗೆ ಹುಬ್ಬಳ್ಳಿಗೆ ಹೋಗಿ ಅಲ್ಲಿ ಹೋಟೆಲ್ ವ್ಯವಸಾಯವನ್ನು ಕೈಗೊಂಡರು. ಅಲ್ಲಿನ ವ್ಯವಹಾರ ಚೆನ್ನಾಗಿ ಸಾಗುತ್ತಿತ್ತು. ಗದುಗಿನಲ್ಲಿ ಅದರ ಶಾಖೆಯೊಂದು ಜನಿಸಿತು. ಕಾಲಕ್ರಮೇಣ ಹುಬ್ಬಳ್ಳಿಯ ವ್ಯವಸಾಯವನ್ನು ಕೈಬಿಟ್ಟು ಗದುಗಿನಲ್ಲಿಯೇ ಇವರ ವ್ಯವಸಾಯ ಪ್ರಬಲವಾಯಿತು. ಕೆಲಕಾಲಾನಂತರ ಶ್ರೀ ಶಿವ ಗೋಪಾಲ ಭಟ್ಟರು ಅನಾರೋಗ್ಯದ ನಿಮಿತ್ತ ವ್ಯವಹಾರದ ಭಾರವನ್ನು ತಮ್ಮನ ಮೇಲಿಟ್ಟು ತಾನು ಮರಳಿ ಮನೆಗೆ ಬಂದು ನೆಲೆಸಿದರು.

ಶ್ರೀ ಭಟ್ಟರು ಆಶ್ಲೇಷಾ ನಕ್ಷತ್ರದಲ್ಲಿ ಜನಿಸಿದವರಾದುದರಿಂದ ಚಂಚಲವಾದ ಅವರ ಕಾರ್ಯಕಲಾಪಗಳಿಗೆ ಒಂದು ರೀತಿಯಲ್ಲಿ ನಿಲುಗಡೆಯನ್ನು ತಂದವರು ಅವರ ಕೈಹಿಡಿದ ಧರ್ಮಪತ್ನಿ ಶ್ರೀಮತಿ ಸುಮತಿಯವರು.

ಅವರದು ಸಾಕು ಸಂಸಾರವೂ ಅಲ್ಲ. ಬೇಕು ಸಂಸಾರವೂ ಅಲ್ಲ. ಮೂರು ಗಂಡು ಎರಡು ಹೆಣ್ಣು ಮಕ್ಕಳನ್ನು ಪಡೆದ ಸುಖೀ ಸಂಸಾರ.

ಮೊದಲ ಮಗ ಜಯದೇವ ತಮ್ಮ ಹಿರಿಯರ ಛಾಪನ್ನು ಹಿಡಿದು ಹೋಟೆಲ್ ಉದ್ಯಮದಲ್ಲಿ ಪಳಗಿದವನು. ಹೆಂಡತಿ ಸರಸ್ವತಿ. ಮಗ ಆದಿತ್ಯ. ಎರಡನೆಯವನು ಅವರ ಚಿಕ್ಕಪ್ಪನವರ ನಾಮಧೇಯವನ್ನು ಹೊತ್ತು ಬ್ಯಾಂಕ್ ಉದ್ಯಮದಲ್ಲಿ ಉನ್ನತ ಮಟ್ಟಕ್ಕೆ ಬಂದವನು, ರೇವತಿ ಹೆಂಡತಿ. ಮೂರನೆಯವನು ಹರ್ಷವರ್ಧನ. ಉನ್ನತ ಶಿಕ್ಷಣವನ್ನು ಪಡೆದು ಫೋಟೋಗ್ರಾಫಿಯಲ್ಲಿ ಇಟಲಿ ದೇಶದಲ್ಲಿ ತರಬೇತು ಪಡೆದವನಾಗಿರುತ್ತಾನೆ.

ಪ್ರಥಮ ಪುತ್ರಿ ಸುಜಾತ ಇಂಜಿನಿಯರರ (ಪ್ರತಾಪ) ಪತ್ನಿಯಾಗಿ ಮುಂಬಯಿಯಲ್ಲಿ ನೆಲೆನಿಂತರೆ ದ್ವಿತೀಯಳು ಆಶಾ ಇಂಜಿನಿಯರರ (ಅಶೋಕ) ಕೈಹಿಡಿದು ಅಮೇರಿಕಾದಲ್ಲಿ ವಾಸಿಸುತ್ತಿದ್ದಾಳೆ.

ತನ್ನ ಚಿಕ್ಕತಂದೆಯವರು ನಿಸ್ಸಂತಾನರಾಗಿ ಕೀರ್ತಿಶೇಷರಾದಾಗ ಅವರ ಕಾರ್ಯಭಾರವನ್ನು ಅವಿರತವಾಗಿ ವಹಿಸಿಕೊಂಡು ಮಗನಂತೆ ಎಲ್ಲವನ್ನೂ ಎಲ್ಲರೂ ಸೈಗುಟ್ಟುವಂತೆ ನಿರ್ವಹಿಸಿಕೊಂಡು ಬಂದವರವರು.

ಹಿರಿಯಣ್ಣನ ಧರ್ಮಪತ್ನಿ ನಿಸ್ಸಂತಾನವಾದಾಗ ಅವರಿಗೆ ಸಕಲ ವಿಧವಾದ ಸಹಾಯ ಸಹಕಾರಗಳನ್ನಿತ್ತು ಸಲಹಿದರು.

ನಮ್ಮ ಕರ್ನಾಟಕ ಸರಕಾರವು ಹೆಣ್ಣು ಮಕ್ಕಳಿಗೆ ಸಮಪಾಲು ಎಂಬ ಕಾನೂನನ್ನು ತರುವ ಮುಂಚೆಯೇ ತನ್ನ ಪಾಲಿಗೆ ಬಂದ ಸ್ಥಿರಾಸ್ತಿಯಲ್ಲಿ ಅಕ್ಕ, ತಂಗಿಯರಿಬ್ಬರಿಗೆ ಹಿರಿಯರ ಮನೆ, ಕಿರಿಯ ತಂದೆಯವರ ಮನೆಯನ್ನು ಅವರಿಗಿತ್ತು ಇತರರಿಗೆ ಮಾರ್ಗದರ್ಶನ ಮಾಡಿರುತ್ತಾರೆ.

ಅದಲ್ಲದೆ ತನ್ನನ್ನು ಆಶ್ರಯಿಸಿ, ನಂಬಿಕೊಂಡು ಬಂದವರಿಗೆ ತನ್ನಿಂದ ಕೈಮೀರಿದ ಸಹಾಯ ಸಹಕಾರಗಳನ್ನೀಯುತ್ತಾ ಬಂದಿದ್ದಾರೆ.

ವಿದ್ಯಾಭ್ಯಾಸ: ಉಡುಪಿಯ ಬಡಗಬೆಟ್ಟು ಪರಿಸರಕ್ಕೆಲ್ಲ ಕಡಿಯಾಳಿ ಪ್ರಾಥಮಿಕ ಶಾಲೆ ಮಕ್ಕಳ ವಿದ್ಯಾಭ್ಯಾಸಕ್ಕೆ ಅತ್ಯಂತ ಪ್ರಸಿದ್ಧವಾದುದು. ಆ ಶಾಲೆಯಲ್ಲಿ ಅಕ್ಷರಾಭ್ಯಾಸದಿಂದ ತೊಡಗಿ ಎಂಟನೆಯ ಇಯತ್ತೆಯವರೆಗೆ ವಿದ್ಯಾಭ್ಯಾಸ ಮಾಡುವ ವೇಳೆ ಪ್ರತಿಯೊಂದು ತರಗತಿಯಲ್ಲಿಯೂ ಪ್ರಪ್ರಥಮರಾಗಿ ಉತ್ತೀರ್ಣತೆ

ಯನ್ನು ಬಾಳಿನ ಭವಿಷ್ಯವನ್ನು ಎಳವೆಯಲ್ಲಿಯೇ ತೋರಿಸುತ್ತಿದ್ದರು. ಸಾಹಿತ್ಯ ಚಟುವಟಿಕೆಗಳಲ್ಲಿ, ನಾಟಕ ಮಾಡುವುದರಲ್ಲಿ ಅವರದು ಎತ್ತಿದ ಕೈ. 8ನೆಯ ತರಗತಿಯಲ್ಲಿರುವಾಗಲೇ ತಾವೇ ನೇತೃತ್ವ ವಹಿಸಿ ಆಡಿದ ನಾಟಕವದು ಇಂದಿಗೂ ಕಣ್ಣಿಗೆ ಪ್ರತ್ಯಕ್ಷವಾಗುವಂತಿದೆ. ಈ ಕೌಮಾರಾವಸ್ಥೆಯಲ್ಲಿಯೇ ಕನ್ನಡದ ಮೇಲಿನ ಅಭಿಮಾನದ ಚಿಗುರು ಅವರ ಹೃದಯದಾಳದಲ್ಲಿ ಮೂಡಿ ಬಂತು. ಸಮಯ ಸಿಕ್ಕಾಗ ಕನ್ನಡ ಪಂಡಿತ ರಾಮಚಂದ್ರ ಉಪಾಧ್ಯಾಯರ ಬಳಿಯಲ್ಲಿ ಜೈಮಿನಿ ಭಾರತ, ರಾಮಾಶ್ವಮೇಧ ಮುಂತಾದ ಹಳಗನ್ನಡ ಗ್ರಂಥಗಳ ಪಾಠಪ್ರವಚನ ನಡೆದಿತ್ತು.

ಉಡುಪಿ ಬೋರ್ಡ್‌ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣದ ಕಾಲದಲ್ಲಿಯೂ ಪ್ರತಿಯೊಂದು ತರಗತಿಯಲ್ಲಿ ಪ್ರಥಮತಃ ಉತ್ತೀರ್ಣರಾದರವರು. ಪ್ರೌಢ ವಿದ್ಯಾಭ್ಯಾಸದ ನಂತರ ಉನ್ನತ ಶಿಕ್ಷಣಕ್ಕೆ ಮಂಗಳೂರಿಗೆ ಹೋಗಬೇಕಾದ ಕಾಲವದು. ಭಟ್ಟರು ಅದಕ್ಕೂ ಸಿದ್ಧರಾದರು. ಆದರೆ ಮನೆಯ ವಾತಾವರಣ ಸ್ವಲ್ಪ ಕಲುಷಿತಗೊಂಡುದಾಗಿ ಅವರ ಮುಂದಿನ ವಿದ್ಯಾಭ್ಯಾಸ ಎಡವಿದಂತಾಯಿತು. ಶಿಕ್ಷಣ ತರಬೇತಿಯನ್ನು ಮಂಗಳೂರಲ್ಲೇ ಪಡೆಯುವಂತಾಯಿತು. ಆ ಸಮಯದಲ್ಲಿ ಅವರ ಕನ್ನಡ ಪ್ರೇಮ ಮತ್ತೆ ಚಿಗುರೊಡೆಯಿತು. ಕನ್ನಡ ಸಾಹಿತ್ಯ ಪರಿಷತ್ತಿನ 'ಕಾವ' ಮತ್ತು 'ಜಾಣ' ಪರೀಕ್ಷೆಯನ್ನು ಪಾಸು ಮಾಡಿದರು. ಆ ಸಮಯದಲ್ಲಿ ಕಡೆಂಗೋಡ್ಲು, ಮುಳಿಯ, ಸೇಡಿಯಾಪು, ಮುಂತಾದ ಕವಿಗಳ ಗಾಢವಾದ ಪರಿಚಯವುಂಟಾಯಿತು.

ಶಿಕ್ಷಕ ತರಬೇತಿಯ ನಂತರ ಉಡುಪಿಗೆ ಮರಳಿದ ಶ್ರೀ ಭಟ್ಟರು ತಾವು ಕಲಿತ ಕಡಿಯಾಳಿ ಶಾಲೆಯಲ್ಲಿ ಕಲಿಸುವಿಕೆಯ ಕಾರ್ಯವನ್ನು ಕೈಕೊಂಡು ಕೆಲಕಾಲಾನಂತರ ಕ್ರಿಶ್ಚಿಯನ್ ಹೈಸ್ಕೂಲಿನ ಶಿಕ್ಷಕರ ನೇಮಕಾತಿ ಪಡೆದರು. ಈತನ್ಮಧ್ಯೆ ಹಿಂದಿ ಭಾಷೆಯನ್ನು ಕಲಿತು ರಾಷ್ಟ್ರಭಾಷಾ ವಿಶಾರದ ಪರೀಕ್ಷೆಯಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆಯಾದರು. ಅಲ್ಲದೆ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿದ್ವಾನ್ ಬಿ. ಪರೀಕ್ಷೆಯಲ್ಲಿ ಸರ್ವಪ್ರಥಮರಾಗಿ ಉತ್ತೀರ್ಣರಾಗಿ ಮದ್ರಾಸ್ ವಿ.ವಿ. ನಿಲಯದ ಸುವರ್ಣ ಪದಕವನ್ನು ಪಡೆದರು. ಇವರು ಪರೀಕ್ಷಾ ಪತ್ರದಲ್ಲಿ ಶಾಕುಂತಲ ನಾಟಕದ ಕುರಿತಾದ ಉತ್ತರಪತ್ರವನ್ನು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಬಹಳವಾಗಿ ಮೆಚ್ಚಿ ಕನ್ನಡ ಎಂ. ಎ. ತರಗತಿಯ ವಿದ್ಯಾರ್ಥಿಗಳಿಗೆ ಇದನ್ನು ಮಾದರಿ ಪತ್ರವಾಗಿ ಪ್ರದರ್ಶನ ಫಲಕ (ನೋಟೀಸ್ ಬೋರ್ಡ್) ದಲ್ಲಿ ಹಚ್ಚಿದ್ದರಂತೆ. ಅವರ ಕಲಿಕೆಯ ದಾಹ ಮತ್ತಷ್ಟು ಹೆಚ್ಚಿತು. ಆಂಗ್ಲ ವಿದ್ಯಾಭ್ಯಾಸದಲ್ಲಿ ಬಿರುಕುಂಟಾದಾಗ ನೊಂದ ಅವರ ಮನಸ್ಸು ಮತ್ತಷ್ಟು ಕೆರಳಿ ಸ್ನಾತಕೋತ್ತರ ಪದವಿಯನ್ನು ಗಳಿಸಿಯೇ ತೀರಬೇಕೆಂಬ ಛಲ ಅವರಲ್ಲುಂಟಾಯಿತು. ವೈಯಕ್ತಿಕವಾಗಿ ತನ್ನ ವಿದ್ಯಾಭ್ಯಾಸವನ್ನು ಮುಂದರಿಸಿ ಇಂಟರ್ ಮೀಡಿಯೇಟ್ ಪರೀಕ್ಷೆಗೆ ಕೂತು, ಉತ್ತಮ ರೀತಿಯಲ್ಲಿ ತೇರ್ಗಡೆಯಾದರು. ಈ ಸಮಯದಲ್ಲಿ ಮನೆಯ ಕಲುಷಿತ ವಾತಾವರಣ ತೊಲಗಿ ಹೋಗಿತ್ತು. ಅದುವೇ ಮುಂದಕ್ಕೆ ಭಟ್ಟರ ಕಲಿಕೆಗೆ ಇಂಬುಕೊಟ್ಟಿತು. ಅವರ ಚಿಕ್ಕಪ್ಪ ಶ್ರೀ ಶಿವ ಅನಂತ ಭಟ್ಟರು ಮುಂದಿನ ಸ್ನಾತಕೋತ್ತರ ಶಿಕ್ಷಣ ಪಡೆಯಲು ತನ್ನೆಲ್ಲ ಸಹಾಯ ಸಹಕಾರವನ್ನಿತ್ತರು. ಮದ್ರಾಸ್‌ನಲ್ಲೇ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆಯಲು ಕ್ರಿಶ್ಚಿಯನ್ ಕಾಲೇಜಿನಲ್ಲಿ ಸೇರ್ಪಡೆಯಾದರು. ಅಲ್ಲಿನ ವಿದ್ಯಾರ್ಥಿನಿಲಯದ ಬಿಷಪ್ ಹೇಬರ್ ಹಾಲ್‌ನಲ್ಲಿ ಆವಾಸ ದೊರೆಯಿತು. ಅಲ್ಲಿದ್ದಾಗಲೇ ವಿದೇಶಗಳ ಅನೇಕ ಕಡೆ ರಾಯಭಾರಿಯಾಗಿದ್ದ ದಿವಂ. ಶ್ರೀ ಬಾಗಲೋಡಿ ದೇವರಾಯರು ಉಡುಪಿ ನಗರಸಭಾಧ್ಯಕ್ಷ ಮತ್ತು ಎಂ. ಪಿ. ಗಳಾಗಿದ್ದ ದಿವಂ. ಶ್ರೀ ರಂಗನಾಥ ಶೆಣೈ, ಪ್ರಸಿದ್ಧ ನ್ಯಾಯವಾದಿ ನ್ಯಾಯಾಧಿಕಾರಿಯಾಗಿದ್ದ ಕನ್ನಡದ ಬರಹಗಾರ ಶ್ರೀ ಸೇವ ನಮಿರಾಜ ಮಲ್ಲ ಮುಂತಾದವರ ಸಹವಾಸ ದೊರೆತು ಅವರೊಂದಿಗೆ ತಾನೂ ಕನ್ನಡ ಸಂಘವನ್ನು ಕಟ್ಟಿದುದಲ್ಲದೆ ಕನ್ನಡ ಲೇಖಕ ಪ್ರಪಂಚಕ್ಕೂ ಕಾಲಿರಿಸಿದರು.

ಅವರ ವೃತ್ತಿ ವ್ಯವಸಾಯ : ಶ್ರೀ ಹರಿದಾಸ ಭಟ್ಟರು ಮದ್ರಾಸ್‌ನಲ್ಲಿ ಉತ್ತಮ ರೀತಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಅರ್ಥಶಾಸ್ತ್ರದಲ್ಲಿ ಪಡೆದು ಹುಟ್ಟೂರಿಗೆ ಮರಳಿ ಬಂದರು,

ಡಾ. ಮಾಧವ ಪೈಗಳ ನೇತೃತ್ವದಲ್ಲಿ ನಡೆಯುತ್ತಿದ್ದ ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಉಚ್ಚ ಶಿಕ್ಷಣಕ್ಕಾಗಿ ಜನಿಸಿದ ಚೊಚ್ಚಲ ಕೂಸು ಎಂ. ಜಿ. ಎಂ. ಕಾಲೇಜ್. ಇದು ಹುಟ್ಟಿದ ಮರು ವರ್ಷದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ಸೇರ್ಪಡೆಯಾದರು. ಮುಂದಕ್ಕೆ ಅರ್ಥಶಾಸ್ತ್ರ ಪ್ರಾಧ್ಯಾಪಕರಾಗಿ ವಿಭಾಗೀಯ ಪ್ರಧಾನರಾದರು. ಶ್ರೀ ಹೆಮ್ಮಾಡಿ ಸುಂದರರಾಯರು ಪ್ರಾಂಶುಪಾಲರಾಗಿ ಈ ಕಾಲೇಜನ್ನು ತನ್ನ ಹೆಸರು ಮತ್ತೂ ರೂಪಕ್ಕೆ ಅನ್ವರ್ಥವಾಗುವಂತೆ ಸರ್ವಾಂಗ ಸುಂದರವನ್ನಾಗಿ ಬೆಳೆಸಿಕೊಂಡು ಬಂದಾಗ ಅವರ ಬಲಗೈಯಾಗಿ ನಿಂತ ಸವ್ಯಸಾಚಿ ಶ್ರೀ ಭಟ್ಟರು ಇದರ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದಿದ್ದಾರೆ.

ಈ ಕಾಲೇಜಿನ ಗ್ರಂಥಾಲಯದ ಬೆಳವಣಿಗೆಯ ಮಹತ್ತರ ಕಾರ್ಯದಲ್ಲಿ ಇವರ ಪಾತ್ರ ಬಹಳ ದೊಡ್ಡದು. ಅನೇಕ ಮಹನೀಯರ ಅಮೂಲ್ಯ ಗ್ರಂಥಗಳ ಕೊಡುಗೆಗೆ ಪ್ರಯತ್ನಿಸಿದವರಿವರು. ಕಾರ್ಕಳದವರಾದ ಲಂಡನ್ನಿನಲ್ಲಿ ಪ್ರಸಿದ್ಧ ವೈದ್ಯರಾಗಿದ್ದ ಡಾ. ಸೋಮನಾಥ ಭಟ್ಟರ 2000ಕ್ಕೂ ಮಿಕ್ಕಿದ ಅಪೂರ್ವ ಗ್ರಂಥಗಳ ತವನಿಧಿಯನ್ನು ಕೈವಶ ಮಾಡುವಲ್ಲಿ ಶ್ರೀ ಭಟ್ಟರ ಪಾತ್ರ ಬಹಳ ಹಿರಿದು.

ಅನಂತರ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ಕಾಲಾಧೀನರಾದಾಗ ಅವರ ಪುಸ್ತಕಾಲಯದ ಅನಾಥ ಸಂಗ್ರಹ ಇವರ ಕಣ್ಣಿಗೆ ಬಿತ್ತು. ಇದನ್ನು ಕರಗತವನ್ನಾಗಿ ಮಾಡಲು ಇವರು ಬಿಟ್ಟ ಶ್ರಮ ಪಟ್ಟ ಕಷ್ಟ ಅಪಾರವಾದುದು. ದಿವಂ. ಮಂ. ಗೋವಿಂದ ಪೈಗಳ ನಿಕಟ ಸಂಬಂಧಿ ತುಕಾರಾಮ ಪೈಗಳನ್ನು ಸಂಧಿಸಿ ಮಾತು ಕತೆ ನಡೆಸಿದರು. ಇವರ ಮನವೊಲಿಸಿ ಈ ಸಂಗ್ರಹವನ್ನು ಪಡೆವಲ್ಲಿ ಮೈಸೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಪ್ರೊ. ದೇ.ಜ.ಗೌ. ತನ್ನ ಸಹಕಾರವಿತ್ತವರಾಗಿದ್ದಾರೆ. ಕೆಲವು ಶರ್ತಗಳ ಮೇಲೆ ಇಲ್ಲಿಗೆ ರವಾನಿಸಿದ ಈ ಪುಸ್ತಕಗಳ ಸಂಗ್ರಹ ಐದುಸಾವಿರ ಲೆಕ್ಕಕ್ಕೇರಿತ್ತು. ಸುಮಾರು ಇಪ್ಪತ್ತೇಳಕ್ಕೂ ಮಿಕ್ಕಿದ ಭಾಷೆಗಳ ಪುಸ್ತಕಗಳ ಈ ಸಂಗ್ರಹಕ್ಕೆ ಬೇರೆಯೇ ಆದ ಭವ್ಯ ಭವನವನ್ನು ನಿರ್ಮಿಸಿದುದಲ್ಲದೆ ಆ ಕವಿಯ ಹೆಸರಿನಲ್ಲಿ 'ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ'ದ ನಿರ್ಮಾಣ ಮಾಡಿ ಸಂಶೋಧಕರಾಗಿ ಬರುವವರಿಗೆ ವಸತಿ ಮುಂತಾದ ಸಕಲ ಸೌಕರ್ಯಗಳನ್ನೂ ಒದಗಿಸಿಕೊಟ್ಟು ಶ್ರೀ ಗೋವಿಂದ ಪೈಗಳ ಹೆಸರನ್ನು ಅಜರಾಮರನ್ನಾಗಿಸುವಲ್ಲಿ ಸಾಧನೆಗೈದ ಶ್ರೀ ಹರಿದಾಸ ಭಟ್ಟರ ಕೀರ್ತಿಯೂ ಮುಂದೆ ಎಂದೆಂದಿಗೂ ಸ್ಥಿರವಾಗಿ ನಿಲ್ಲುತ್ತದೆ.

ಇದರೊಂದಿಗೆ ಒಂದು ವಸ್ತು ಸಂಗ್ರಹಾಲಯವೂ ನಿರ್ಮಾಣವಾಗಿ ಇವೆರಡೂ ಪದಪೂರ್ವ ಕಾಲೇಜು ಹಿಂದೆ ಮಾಡಿರದಂಥ ಉದ್ಯಮವನ್ನುಂಟು ಮಾಡಿದ ಹೆಮ್ಮೆ ಕು. ಶಿ. ಯವರದು.

ಈ ಕಾಲೇಜಿನಲ್ಲಿ ಸಾಹಿತ್ಯೋತ್ಸವದ ಸತ್ಸಂಪ್ರದಾಯದ ಮೂಲಕರ್ತರಿವರು. ಇಲ್ಲಿನ ಅರ್ವಾಚೀನ ಕವಿಗಳಲ್ಲಿ ಮೊದಲಿಗನಾದ ಕವಿ ಮುದ್ದಣನ ಹೆಸರಿನಲ್ಲಿ ನಡೆಯುವ ಈ ಉತ್ಸವ ಇತರರಿಗೆ ಮೇಲ್ಪಂಕ್ತಿಯಾಗಿಯೇ ಮೆರೆದಿದೆ.

ಇಂತಹ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವ ಕಾಲಗಳಲ್ಲಿ ಪರವೂರಿಂದ ಬರುವ ಅತಿಥಿಗಳಿಗೆ ಶ್ರೀ ಭಟ್ಟರ ಮನೆಯೇ ವಿಶ್ರಾಮಧಾಮ. ಅತಿಥಿಗೃಹ. ಅವರ ಧರ್ಮಪತ್ನಿ ಶ್ರೀಮತಿ ಸುಮತಿಯವರೇ ಅನ್ನಪೂರ್ಣೆಯಾಗಿ ಈ ದಂಪತಿಗಳು ಬಂದ ಅತಿಥಿಗಳನ್ನು ಸಂಭಾವಿಸುತ್ತಿದ್ದು ಅವರೆಲ್ಲರ ಮನಸ್ಸಿನಲ್ಲಿ ಎಂದೆಂದಿಗೂ ಅಚ್ಚಳಿಯದೆ ಉಳಿಯುವ ಆದರ ಗೌರವಗಳಿಗೆ ನೆಲೆಯುಂಟು ಮಾಡುತ್ತಿದ್ದುದುಂಟು.

ಕನ್ನಡ ಆಧುನಿಕ ಸಾಹಿತ್ಯದ ಪ್ರವರ್ತಕ ಕವಿ ಶ್ರೀ ಮುದ್ದಣನ ಹುಟ್ಟೂರಾದ ಉಡುಪಿಯಲ್ಲಿ ಅವನ ಶತಮಾನೋತ್ಸವವನ್ನು ಆಚರಿಸುವಲ್ಲಿ ಮುಂಚೂಣಿಯಲ್ಲಿ ನಿಂತವರು ಅವರು. ಈ ಉತ್ಸವವನ್ನು ಅದ್ದೂರಿಯಾಗಿ ನೆರವೇರಿಸಿದುದಲ್ಲದೆ ಕವಿ ನೆಲೆಸಿದ್ದ ಮನೆಯ ಮುಂಭಾಗದಲ್ಲಿ ನೆನಪಿನ ಕುರುಹಾಗಿ ಬಿಳಿಶಿಲೆಯಲ್ಲಿ ಫಲಕವನ್ನು ನೆಲೆಗೊಳಿಸಿ ಉಡುಪಿ ಪಟ್ಟಣದ ಆ ಪ್ರಧಾನ ಮಾರ್ಗಕ್ಕೆ 'ಕವಿ ಮುದ್ದಣ ಮಾರ್ಗ' ಎಂಬ ಹೆಸರನ್ನು ಇರಿಸಿದವರು ಅವರು.

ದಿವಂ. ಕಡೆಕಾರು ರಾಜಗೋಪಾಲಕೃಷ್ಣ ರಾಯರು ಕರ್ನಾಟಕ ಸಂಘವನ್ನಿಲ್ಲಿ ಸ್ಥಾಪಿಸಿ ದಸರಾ ಸಾಹಿತ್ಯೋತ್ಸವಾದಿಗಳನ್ನು ನಡೆಸಿ ಇಲ್ಲಿನ ಜನರಿಗೆ ಸಾಹಿತ್ಯಾಭಿರುಚಿಯನ್ನು ಮಾಡಿದ್ದರು. ಅವರ ಕಾಲಾನಂತರ ಈ ಸಂಘವನ್ನು ನಡೆಸಿಕೊಂಡು ಹೋಗುವ ಜವಾಬ್ದಾರಿ ಇವರದಾಯಿತು. ತನ್ನ ಪಾಲಿಗೆ ಬಂದ ಈ ಕಾರ್ಯಭಾರವನ್ನು ಕೈಗೆತ್ತಿಕೊಂಡು ಅನೇಕ ಸಮಾರಂಭಗಳನ್ನು ನಡೆಸಿಕೊಂಡು ಬಂದು ಇಂದಿಗೂ ಆ ಸಂಘವು ಜೀವಂತವಾಗಿ ಉಸಿರಾಡುತ್ತಿದೆ ಎನ್ನುವಂತೆ ಆಗಾಗ ಅದಕ್ಕೆ ಉಸಿರು ತುಂಬುತ್ತಿದ್ದಾರೆ.

ಪ್ರಿನ್ಸಿಪಾಲರಾಗಿ: ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು ಸ್ಥಾಪನೆಯಾಗಿ 15 ವರ್ಷಗಳ ಮೇಲೆ (1949 – 1964) ಪ್ರೊ. ಎಚ್. ಸುಂದರ ರಾಯರು ಪ್ರಿನ್ಸಿಪಾಲ್ ಹುದ್ದೆಯಿಂದ ನಿವೃತ್ತರಾದರು. ಆಮೇಲೆ ಹದಿನೈದು ವರ್ಷಗಳ ಕಾಲ ಪ್ರೊ. ಹರಿದಾಸ ಭಟ್ಟರು ಈ ಸ್ಥಾನವನ್ನಲಂಕರಿಸಿದುದು ಅಭಿನಂದನೀಯವಾಗಿದೆ. ಪ್ರಿನ್ಸಿಪಾಲರಾಗಿ ಅವರ ಆಡಳಿತ ಕಾಲೇಜಿನ ಇತಿಹಾಸದಲ್ಲಿ ಒಂದು ಸುವರ್ಣಯುಗವೆಂದು ಹೇಳಬೇಕೆ?

ಎಂ. ಜಿ. ಎಂ. ಕಾಲೇಜು ಇವರ ಮುಂದಾಳ್ತನದಲ್ಲಿ ಅಭಿವೃದ್ಧಿಯ ಒಂದೊಂದೇ ಸೋಪಾನವನ್ನೇರುತ್ತಾ ಹೋಗಿತ್ತು. ಪಶ್ಚಿಮದಿಂದ ಪೂರ್ವಕ್ಕೆ ಸುಮಾರು ಒಂದು ಕಿಲೋಮೀಟರು ಸಗ್ರಿ ಗುಡ್ಡದಲ್ಲಿ ಎಲ್ಲೂ ಕಟ್ಟೋಣವಿಲ್ಲದ ತೆರ ಜಾಗವೇ ಇಲ್ಲದಂತೆ ಮೂರು ಅಧ್ಯಯನ ಭವನಗಳು, ಎರಡು ಹಾಸ್ಟೆಲ್ಲುಗಳು, ಮೂರು ಸಭಾಗೃಹಗಳು (ರವೀಂದ್ರ ಮಂಟಪ, ಮುದ್ದಣ ಮಂಟಪ, ಪ್ರಿಯದರ್ಶಿನಿ), ಮೂರು ಗ್ರಂಥಾಲಯ ಸನ್ನಿವೇಶಗಳು, ಇಪ್ಪತ್ತಕ್ಕೂ ಮಿಕ್ಕಿದ ಪ್ರಾಧ್ಯಾಪಕರ ನಿವಾಸ (ಗುರುಕುಲ)ಗಳು, ಎರಡು ಆಟದ ಬಯಲುಗಳು, ಗೀತಾಂಜಲಿ ಮುಂತಾದ ಅತಿಥಿ ಗೃಹ ನಿರ್ಮಾಣ, ಇವೆಲ್ಲ ಹೊರವಲಯದ ಪರಿಷ್ಕಾರಗಳಾದರೆ ಕಾಲೇಜಿನ ಅಂತರ್ವಲಯದಲ್ಲಿ ಪ್ರತಿಯೊಂದು ವಿಭಾಗಕ್ಕೆ ವಿಭಾಗೀಯ ಕೋಣೆಗಳು ಮತ್ತು ಅವರ ವಿಷಯಕ್ಕೆ ಸಂಬಂಧಪಟ್ಟ ಸಹಾಯ ಗ್ರಂಥಗಳ ಭಂಡಾರ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ವಿರಾಮದ ವೇಳೆಯನ್ನು ಕಳೆಯಲು 'ಪಾರ್ವತೀ ಸದನ'ವೆಂಬ ವಿಶ್ರಾಂತಿ ಧಾಮ, ಅದರಲ್ಲಿ ಇಂಗ್ಲೀಷ್ ಮತ್ತು ಕನ್ನಡ ಪತ್ರಿಕೆಗಳು. ಅಗ್ಗದ ದರದಲ್ಲಿ

ದೂರದಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಭೋಜನ ವ್ಯವಸ್ಥೆ ಇತ್ಯಾದಿಗಳ ಸೌಕರ್ಯ ಮತ್ತು ಸೌಲಭ್ಯ ಇವರ ಕಾಲದಲ್ಲಿ ಲಭ್ಯವಾದವುಗಳು.

ಗ್ರಂಥಾಲಯಕ್ಕೆ ಪ್ರತಿವರ್ಷವೂ ಆಯಾಯ ವಿಭಾಗಕ್ಕೆ ವಿಭಾಗದ ಮುಖ್ಯಸ್ಥರ ಸಲಹೆಯಂತೆ ಆಧಾರ ಗ್ರಂಥ. (ರೆಫರೆನ್ಸ್ ಬುಕ್) ಗಳ ಸೇರಿಕೆ ಮಾತ್ರವಲ್ಲದೆ ಡಾ. ಕಾರಂತರು ಪುತ್ತೂರಿನಿಂದ ಸಾಲಿಗ್ರಾಮಕ್ಕೆ ಮರಳುವ ವೇಳೆ ತಮ್ಮ ಲೈಬ್ರರಿಯ ಸುಮಾರು ಒಂದು ಸಾವಿರ ಸಂಪುಟಗಳನ್ನು ಗ್ರಂಥಾಲಯಕ್ಕೆ ದಾನ ಮಾಡಿದುದನ್ನು 'ಶಿವರಾಮ ಕಾರಂತ ಸಂಗ್ರಹ' ಎಂಬುದಾಗಿ ಪ್ರತ್ಯೇಕವಾಗಿ ಇರಿಸಲಾಗಿದೆ.

ಇವರ ಅಧಿಕಾರವಧಿಯಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಮಾನ್ಯ ಸ್ಥಾನವನ್ನು ಕಲ್ಪಿಸಲಾಗಿತ್ತು.

ಪದವಿ ತರಗತಿ (ಬಿ. ಎ.) ಯಲ್ಲಿ ಪ್ರಧಾನ ವಿಷಯ (ಮೇಜರ್ ಕನ್ನಡ)ವನ್ನಾಗಿ ಕನ್ನಡಕ್ಕೆ ಸ್ಥಾನ ಕಲ್ಪಿಸಿದುದು ಮಾತ್ರವಲ್ಲದೆ ಕನ್ನಡದಲ್ಲಿ ಡಿಪ್ಲೋಮಾ ತರಗತಿಯನ್ನು ತೆರೆಯಲಾಗಿತ್ತು.

'ನವೋದಯ ಪುಸ್ತಕ ಮಾಲೆ' ಎಂಬ ಹೆಸರಿನಿಂದ ಅನೇಕ ಕೃತಿಕಾರರು. ಕಲಾವಿದರು ಮತ್ತು ಪ್ರಮುಖ ವಿಷಯಗಳ ಅಗ್ಗದ ದರದಲ್ಲಿ ಕಿರು ಹೊತ್ತಿಗೆಗಳನ್ನು ಪ್ರಕಟಪಡಿಸಿದುದುಂಟು.

ಅಂತೂ ಪ್ರೊ. ಕು. ಶಿ. ಹರಿದಾಸ ಭಟ್ಟರ ಕಾಲೇಜಿನ ಆಳಿಕೆಯಲ್ಲಿ ಮಹತ್ತಮ ಬೆಳವಣಿಗೆಗಳಾಗಿದು "ಇದೊಂದು ಪ್ರಚ್ಛನ್ನ ವಿಶ್ವ ವಿದ್ಯಾಲಯವೇ ಆಗಿರುತ್ತದೆ" ಎಂದು ಬಲ್ಲವರ ಮಾತಿನಲ್ಲಿ ತಿರುಳಿಲ್ಲದಿಲ್ಲವೆಂಬಂತಿತ್ತು.

ಪೈಗಳೊಡನೆ ಸಂಪರ್ಕ: ಎಂ. ಜಿ. ಎಂ. ಕಾಲೇಜು ಸ್ಥಾಪನೆ ಡಾ. ಪೈಗಳ ವಿದ್ಯಾಕ್ಷೇತ್ರದಲ್ಲಿ ಬಹಳ ಮಹತ್ವದ ಹೆಜ್ಜೆ. ಇದು ಪ್ರಾರಂಭವಾದ ಮರುವರ್ಷ ಶ್ರೀ ಹರಿದಾಸ ಭಟ್ಟರು ಉಪನ್ಯಾಸಕ ಹುದ್ದೆಗೆ ಅರ್ಜಿ ಸಲ್ಲಿಸಿದರು. ಅವರು ಕಮ್ಯುನಿಸಂ ತತ್ವಕ್ಕೆ ಒಲಿದವರು. ಅವರ ನಿಯುಕ್ತಿಯ ಬಗ್ಗೆ ಜಾಗ್ರತೆಯಿರಲಿ ಎಂದು ಯಾರೋ ಪೈಗಳ ಕಿವಿಯೂದಿದ್ದರಂತೆ. ಅದೇ ಅವರನ್ನು ಕೆಲಸಕ್ಕೆ ನೇಮಿಸಿಕೊಂಡಾಗ ಹೇಳಿದ್ದರಂತೆ. 'ಒಂದು ವರುಷವಾದರೂ ಇರುತ್ತೀಯಲ್ಲ' ಎಂದು. ಆದರೆ ಮತ್ತೆ ಭಟ್ಟರ ಕರ್ತೃತ್ವಶಕ್ತಿಯ ಅರಿವು ಡಾ. ಪೈಗಳಿಗೆ ಸಂಪೂರ್ಣ ಮನದಟ್ಟಾಗಿತ್ತು. ಅಂದಿನಿಂದ ಮಣಿಪಾಲದ ಪೈ ಬಂಧುಗಳು ಅವರ ಮೇಲೆ ಪ್ರೀತಿಯ ಮಳೆಗರೆದಿದ್ದಾರೆ. ಅವರನ್ನು ಕುಟುಂಬದ ಸದಸ್ಯನೇನೋ ಎಂಬಂತೆ ನಡೆಸಿಕೊಟ್ಟಿದ್ದಾರೆ. ಆದರೆ ತನ್ನ ನಿಕಟವರ್ತಿತನ ಒಂದು ಆತಂಕವೋ ಅಧಿಕಪ್ರಸಂಗವೋ ಆಗಬಾರದೆಂದು ಭಟ್ಟರು ಸತತ ಪ್ರಯತ್ನ ಪಟ್ಟಿದ್ದಾರೆ. ಅವರು ಕಾಲೇಜು ಪ್ರಿನ್ಸಿಪಾಲರಾದಾಗ ಕಾಲೇಜಿಗೆ ಏನು ಬೇಕಾದರೂ ಮಾಡಲು ಕೂಡಲೆ ಸಮ್ಮತಿಸುತ್ತಿದ್ದರು ಡಾ. ಪೈಗಳು. ಭಟ್ಟರು ಹೇಳಿದ್ದಕ್ಕೆ ಪೈಗಳ ಆತಂಕವಿಲ್ಲ. ಆದರೆ ಹರಿದಾಸ ಭಟ್ಟರಿಗೆ ಡಾ. ಪೈಗಳ ಮುಂದಕ್ಕೆ ಯಾವುದೇ ವಿಷಯವನ್ನು ಮಂಡಿಸಲಿಕ್ಕೆ ಸಂಕೋಚ. ಭಯ. ಪೈಬಂಧುಗಳಿಗೆ ಗೊತ್ತು ಹರಿದಾಸ ಭಟ್ಟರು ಯಾವುದೇ ಕಾರ್ಯಗಳನ್ನೂ ಹಿಂದುಮುಂದಾಲೋಚನೆಯಿಲ್ಲದೆ ಕೈಗೊಳ್ಳುವುದಿಲ್ಲ. ಅಲ್ಲದೆ ಕೈಗೆತ್ತಿಕೊಂಡ ಕಾರ್ಯವನ್ನು ಸಫಲವನ್ನಾಗಿ ಮತ್ತು ಸಾರ್ಥಕವನ್ನಾಗಿ ಮಾಡದೆ ಬಿಡುವುದಿಲ್ಲ. ಆದುದರಿಂದ ಡಾ. ಪೈಗಳಾಗಲಿ ಶ್ರೀ ಟಿ.ಎ.ಪೈಗಳಾಗಲಿ ಅವರು ಕಾಲೇಜಿಗಾಗಿ ಹೇಳಿದ್ದನ್ನು ಕೇಳಿದಾಗಲೇ ಕೊಟ್ಟಿದ್ದಾರೆ. ಅವರು ಕೊಟ್ಟದ್ದನ್ನು ಇವರು ಜನಮೆಚ್ಚುವಂತೆ ಕೈಗೂಡಿಸಿಕೊಂಡಿದ್ದಾರೆ.

ಕಾಲೇಜಿನ ವಿಷಯಕ್ಕೆ ಮಾತ್ರವಲ್ಲ ಇತರ ವಿಷಯಗಳಿಗೂ ಭಟ್ಟರು ಹೇಳಿದ್ದಕ್ಕೆ ಪೈಗಳ ಸೈ. ಸಹಿಯೂ ಕೂಡಾ. ಆದುದರಿಂದ 1960ನೇ ಇಸವಿಯಲ್ಲಿ ಶ್ರೀ ಅ. ನ. ಕೃಷ್ಣರಾಯರು ಅಧ್ಯಕ್ಷರಾದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಿಂದ ನೆರವೇರಿಸಿ ಮೆಚ್ಚುಗೆ ಪಡೆದಿದ್ದಾರೆ. ಈ ಸಮ್ಮೇಳನದಲ್ಲಿ ಭಾಗಿಗಳಾಗಿದ್ದ ಶ್ರೀ ಬೀಚಿಯವರು ಕು. ಶಿ.ಯವರು ಎಲ್ಲವೂ ಎಲ್ಲರಿಗೂ ಬಿಟ್ಟಿಯಾಗಿತ್ತು ಎಂದು ಸರಸವಾಡಿದ್ದರು.

ಕಾಲೇಜಿನಲ್ಲಿ ಸಾಹಿತ್ಯೋತ್ಸವ. ಸಾಂಸ್ಕೃತಿಕೋತ್ಸವ. ವಾರ್ಷಿಕೋತ್ಸವಗಳಲ್ಲದೆ ಡಾ. ಕಾರಂತರಿಗೆ ಅಭಿನಂದನದ ಕಾರಂತ ಉತ್ಸವ (1969) ಕಾಲೇಜಿನ ಬೆಳ್ಳಿ ಹಬ್ಬ (1974) ಇವೆಲ್ಲಕ್ಕೂ ಧಾರಾಳವಾದ ಖರ್ಚುವೆಚ್ಚಗಳಿಗೆ ಹರಿದಾಸ ಭಟ್ಟರ ಉತ್ಸಾಹಕ್ಕೆ ಪೈಗಳ ಪ್ರೋತ್ಸಾಹವೇ ಪೋಷಕವಾಗಿತ್ತು.

ಶ್ರೀ ಟಿ. ಎ. ಪೈಗಳು ಕಾಲೇಜಿನ ನೇತೃತ್ವ ವಹಿಸಿದ 12 ವರ್ಷಗಳ ಕಾಲವೂ ಅಷ್ಟೆ ಹರಿದಾಸ ಭಟ್ಟರ ಮೇಲಣ ಅಭಿಮಾನದಿಂದ ಅವರು ಕೇಳಿದೆಲ್ಲದಕ್ಕೂ ಅಸ್ತು ಅಂದರೆ ಹೊರತು ನಾಸ್ತಿ ಅನ್ನಲಿಲ್ಲ.

ಶ್ರೀ ಪೈಗಳು ಒಂದೊಮ್ಮೆ ಹರಿದಾಸ ಭಟ್ಟರೊಡನೆ ಬ್ಯಾಂಕ್ ಸೇರುವುದಾದರೆ ಸೇರಿ ಬಿಡಿ. ಉತ್ತಮ ಹುದ್ದೆ ಕೊಡಿಸುವೆ. ಇಲ್ಲಿ ನಿಮಗೇನು ಕಾದಿರಿಸಿದ್ದಿದೆ ಎಂದಾಗ ಅವರು ಕೊಟ್ಟ ಉತ್ತರವಿಷ್ಟೆ. ಇದು ಹಣದ ಪ್ರಶ್ನೆಯಲ್ಲ. ಶಿಕ್ಷಕ ವೃತ್ತಿಗೆ ನನ್ನನ್ನು ನಾನು ಅರ್ಪಿಸಿಕೊಂಡಿದ್ದೇನೆ. ಆಗ ಪೈಗಳು ದೇಶದಲ್ಲಿ ಇಂಥ ಜನರಿರುವ ತನಕ ಅದಕ್ಕೆ ಗಂಡಾಂತರವಿಲ್ಲವೆಂದು ಮನಬಿಚ್ಚಿ ಹೇಳಿದುದುಂಟು. ಶ್ರೀಮಾನ್ ಭಟ್ಟರು ಇನ್ನೂ ಇಂಥ ಮೌಲ್ಯಗಳನ್ನು ನೆಚ್ಚಿಕೊಂಡವರೇ ಆಗಿರುತ್ತಾರೆ.

ಅವರ ಪ್ರಾಧ್ಯಾಪಕ ವೃತ್ತಿ ಮತ್ತು ಪ್ರಿನ್ಸಿಪಾಲರಾಗಿ: ಪ್ರಾಥಮಿಕ ಶಾಲೆಯಿರಲಿ, ಮಾಧ್ಯಮಿಕ ಶಾಲೆಯಿರಲಿ ಕೊನೆಗೆ ಪ್ರಾಧ್ಯಾಪಕತನವಿರಲಿ. ಶ್ರೀ ಹರಿದಾಸ ಭಟ್ಟರು; ಶಿಕ್ಷಕ ವೃತ್ತಿಯನ್ನು ಮನಸಾರೆ ಒಪ್ಪಿದವರು. ಅವರು ಮನಸ್ಸು ಮಾಡಿದ್ದರೆ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಪ್ರಾಚಾರ್ಯರಾಗಿಯೋ. ಶ್ರೀ ಟಿ. ಎ. ಪೈ. ಹೇಳುತ್ತಿದ್ದಂತೆ, "ನಿಮ್ಮಂಥವರು ಬ್ಯಾಂಕಿನಲ್ಲಿರಬೇಕಿತ್ತು, ಲಂಡನ್‌ಗೆ ಕಳಿಸುತ್ತೇನೆ ಅಲ್ಲಿನ ಬ್ಯಾಂಕ್ ಮಾಹಿತಿ ಪಡೆದುಕೊಂಡು ಬನ್ನಿ" ಎಂದಾಗ ಅದಕ್ಕೆ ಮನತೆತ್ತಿದ್ದರೆ ಬ್ಯಾಂಕ್‌ನಲ್ಲಿ ಕೈತುಂಬ ಪಗಾರ ಸಿಗುವ ಉನ್ನತಾಧಿಕಾರಿಯಾಗಿಯೋ ಮೆರೆದಾಡಬಹುದಿತ್ತು. ಆದರೆ ಶ್ರೀ ಭಟ್ಟರು ಹುಟ್ಟೂರನ್ನೇ ತನ್ನ ಕಾರ್ಯ ಕ್ಷೇತ್ರವಾಗಿಸಿಕೊಂಡು ತನ್ನ ಪಾಲಿಗೆ ಬಂದ ಕಾಯಕವನ್ನು ಪರಿಶುದ್ಧವಾಗಿರಿಸಿ ಜೀವನದುದ್ದಕ್ಕೂ ಸಾಗಿ ಬಂದಿದ್ದಾರೆ.

1964ರಲ್ಲಿ ಪ್ರೊ. ಸುಂದರ ರಾಯರು ಪ್ರಿನ್ಸಿಪಾಲತನದಿಂದ ನಿವೃತ್ತರಾದಾಗ ಶ್ರೀ ಭಟ್ಟರು ಪ್ರಾಧ್ಯಾಪಕರಾಗಿ ದುಡಿದು ಮಾಡಿದ ಕರ್ತವ್ಯವನ್ನು ಮೆಚ್ಚಿ ಪೈಬಂಧುಗಳು ಇವರನ್ನು ಪ್ರಿನ್ಸಿಪಾಲರನ್ನಾಗಿ ಸಂತೋಷದಿಂದ ಆರಿಸಿ ಸಂಸ್ಥೆಯನ್ನೇ ಇವರ ವಶಕೊಟ್ಟಿರುತ್ತಾರೆ. ಹರಿದಾಸ ಭಟ್ಟರು ಅಧಿಕಾರಕ್ಕೆ ಜಗ್ಗಿದವರಲ್ಲ. ಎಂದೆಂದು ದುಡ್ಡಿಗೆ ಬೆಲೆ ಕೊಟ್ಟವರಲ್ಲ. ಈ ಪ್ರಿನ್ಸಿಪಾಲಗಿರಿಯನ್ನು ವಿಧಿವಶನಾಗಿ ಹೊತ್ತಿದ್ದಾರೆ. ಸಹೋದ್ಯೋಗಿಗಳೊಂದಿಗೆ ಸ್ನೇಹ ಹಸ್ತವನ್ನು ಚಾಚಿ ಎಲ್ಲರನ್ನೂ ತನ್ನವರನ್ನಾಗಿ ಮಾಡಿಕೊಂಡು ಇತರ ಪ್ರಿನ್ಸಿಪಾಲರುಗಳಿಗೆ ಮಾದರಿಯಾಗಿದ್ದರು. ಅವರ ಒಡೆತನದಲ್ಲಿ ಕಾಲೇಜು ಅಭಿವೃದ್ಧಿ ಪಥದಲ್ಲಿ ಬಹಳ ಮುಂದೆ ಸಾಗಿತ್ತು. ಇಲ್ಲಿನ ಶಿಕ್ಷಣ ಮಟ್ಟ ಎತ್ತರವಾಗಿತ್ತು. ಶೇಕಡವಾರು ಫಲಿತಾಂಶ ಅತ್ಯುತ್ತಮವಾಗಿತ್ತಲ್ಲದೆ ರ್‍ಯಾಂಕ್‌ಗಳ ಸಂಖ್ಯೆಯೂ ಅಧಿಕಗೊಂಡಿತ್ತು. ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಉತ್ಸವಗಳ ಏರ್ಪಾಡಲ್ಲದೆ ತುಳುನಾಡಿನ ಜಾನಪದ ಕಲೆಗಳ ಯಕ್ಷಗಾನ ಕೇಂದ್ರದ ಸ್ಥಾಪನೆಯಾದುದಲ್ಲದೆ ಜರ್ಮನ್ ಡಿಪ್ಲೋಮಾ ತರಗತಿಗಳು ಪ್ರಾರಂಭವಾದುದು ಇವರ ಕಾಲದಲ್ಲಿಯೇ.

ಅಂತೂ ಇವರ ಕಾಲದಲ್ಲಿ ಎಂ. ಜಿ. ಎಂ. ಕಾಲೇಜಿನ ಪರಿಸರವನ್ನು ಹೊಕ್ಕಾಗ ನಾವು ಯಾವುದೋ ಒಂದು ಮಿನಿ ವಿಶ್ವವಿದ್ಯಾಲಯವನ್ನು ಹೊಕ್ಕಂತೆ ಭಾಸವಾಗುತ್ತಿತ್ತು.

ಇತರ ಚಟುವಟಿಕೆಗಳು: ತನ್ನ ಜೀವನದಲ್ಲಿ ಹೊಸತನವನ್ನು ಅರಸುವುದು ಭಟ್ಟರ ಹವ್ಯಾಸ, ಹಿಡಿದ ಕೆಲಸವನ್ನು ಎಡೆಬಿಡದೆ ಸಾಗಿಸಿಕೊಂಡು ಹೋದಾಗ ಅವರು ಎಡವಿಬೀಳಲಿಲ್ಲ, ತೊಡಕ ಹಾಕಿ ಕೊಂಡಿದ್ದಿಲ್ಲ. ಯಾವ ಕೆಲಸವೇ ಆಗಲಿ ತನ್ನಿಂದ ಹಣ ತನ್ನದೇ ಎಷ್ಟೇ ಖರ್ಚಾಗಲೀ ಅದನ್ನು ಹತ್ತು ಜನ ಮೆಚ್ಚುವಂತೆ ಪೂರ್ತಿಗೊಳಿಸುವುದೆಂಬುದು ಅವರ ಜಾಯಮಾನ.

ಯಕ್ಷಗಾನ ಕಲಾಕೇಂದ್ರ ಸ್ಥಾಪನೆಯಲ್ಲಿ ಡಾ. ಕಾರಂತರೊಂದಿಗೆ ಹಗಲಿಗೆ ಹಗಲು ಕೊಟ್ಟು ಅವಿರತ ಪರಿಶ್ರಮದಿಂದ ದುಡಿದು ನಮ್ಮ ನಾಡಿನ ನಶಿಸಿಹೋಗುವಂತಿರುವ ಈ ಕಲೆಗೊಂದು ಪುನರ್ಜನ್ಮವನ್ನಿತ್ತು ಈ ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಇದರ ನೂತನ ಪ್ರಯೋಗಗಳನ್ನು ಪ್ರದರ್ಶಿಸಿ ಇಟಲಿ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಜಪಾನ್ ಮುಂತಾದ ವಿದೇಶೀಯರು ಈ ಜಾನಪದ ಕಲೆಯ ಗೊತ್ತುಗುರಿಯನ್ನರಿಯಲು ಈ ಕೇಂದ್ರಕ್ಕೆ ಬರುವಂತೆ ಮಾಡಿದುದರಲ್ಲಿ ಇವರ ದುಡಿಮೆ ಪಾಲು ಅತೀ ಹೆಚ್ಚಿನದು.

ಉಡುಪಿಯಲ್ಲಿ ನಡೆಯುವ ಯಾವುದೇ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಒಂದೋ ತಾನು ಸ್ವತಃ ಭಾಗವಹಿಸಿ ಇಲ್ಲವೆ ತನ್ನ ಸಲಹೆ ಸಹಕಾರಗಳನ್ನಿತ್ತು ಅವನ್ನು ಸರ್ವಾಂಗ ಸುಂದರವನ್ನಾಗಿ ಮಾಡಿಸಿ ಉಡುಪಿ ಜನಪ್ರಿಯ ವ್ಯಕ್ತಿಯಾಗಿ ತನ್ನ ಬಾಳನ್ನು ಹಸನು ಗೊಳಿಸಿದವರು.

ಆದುದರಿಂದ ಇವರ ನಿವೃತ್ತಿಯ ಸಂದರ್ಭದಲ್ಲಿ ಉಡುಪಿ ನಾಗರಿಕರು ವಿಕ್ಟೋರಿಯಾ ಕ್ಲಬ್ ಆವರಣದಲ್ಲಿ ಸಂಭ್ರಮದ ಸಮಾರಂಭವನ್ನು ಏರ್ಪಡಿಸಿ ಇವರನ್ನು ಸನ್ಮಾನಿಸಿದರು.

ವಿದೇಶ ಪ್ರವಾಸ: ಹರಿದಾಸ ಭಟ್ಟರು ಪ್ರವಾಸ ಪ್ರಿಯರು. ಇಂದಿನ ಇಳಿವಯಸ್ಸಿನಲ್ಲಿಯೂ ಪ್ರವಾಸದ ಹವ್ಯಾಸ ಅವರನ್ನು ಬಿಟ್ಟಿಲ್ಲ. ಇಟಲಿಯಲ್ಲಿ ಆರು ತಿಂಗಳ ಕೋರ್ಸ್‌ಗಾಗಿ ಹೋದುದೇ ಅವರ ಮೊದಲ ವಿದೇಶ ಪ್ರವಾಸ. ಅನಂತರ ಯಕ್ಷಗಾನ ಪ್ರಸಾರಕ್ಕಾಗಿ ಹಾಂಗ್‌ಕಾಂಗ್, ಇಂಗ್ಲೆಂಡ್, ಯುಗೋಸ್ಲಾವಿಯಾ. ಬಲ್ಗಾರಿಯಾ, ಫಿನ್ಲೆಂಡ್, ಹೊಲೆಂಡ್, ಬ್ಯಾಂಗ್‌ಕಾಕ್, ಹಂಗೇರಿ, ಇಟಲಿ, ಜಪಾನ್, ರಷ್ಯಾ. ಮುಂತಾದೆಡೆಗಳಿಗೆ ಪ್ರವಾಸ ಹೋದುದಲ್ಲದೆ ಸಪತ್ನೀಕರಾಗಿ ಇಂಗ್ಲೆಂಡ್, ಅಮೇರಿಕಾ, ಕೆನಡಾ ಮುಂತಾದೆಡೆಗಳಿಗೆ ಪ್ರವಾಸ ಹೋಗಿದ್ದಾರೆ. ಅವರ ಪ್ರವಾಸದ ಕುರಿತಾಗಿ ಅವರ ನಿಕಟ ಸಂಬಂಧಿ ಡಾ. ರಮೇಶ್ ಹೀಗೆ ಹೇಳಿದ್ದುಂಟು. ಅಂದರೆ ಒಂದು ಕಡೆ ಪ್ರವಾಸ ಮಾಡುತ್ತಿರುವಾಗ ಪಕ್ಕನೆ ಮತ್ತೊಂದೆಡೆ ಪ್ರವಾಸಕ್ಕಾಗಿ ಮನಸ್ಸು ಮಾಡುವುದುಂಟು. ಹೀಗೆ ಹೋಗುತ್ತಿರುವಾಗ ಹಲವು ಸಾಮಾನು ಸರಂಜಾಮುಗಳನ್ನು ಮರೆತು ಹೋಗುವುದುಂಟು. ಒಂದು ಕಡೆ ಚಪ್ಪಲಿ ಬಿಟ್ಟು ಬಂದರಾದರೆ ಮತ್ತೊಂದು ಕಡೆ ರಿಸ್ಟ್‌ವಾಚ್ ಕಾಣೆಯಾಗುತ್ತದೆ. ಹೀಗೆ ಪೆನ್ನು ವಾಚು ಚಪ್ಪಲಿ ಮುಂತಾದುವುಗಳನ್ನು ಬಿಟ್ಟು ಬಂದುದೆಷ್ಟೋ.

ಸಾಧನೆ ಸಿದ್ಧಿಗಳು: ಹಿಡಿದ ಕಾರ್ಯವನ್ನು ಬಿಡದೆ ಕೊನೆಗಾಣಿಸಬೇಕೆಂಬ ಛಲವೇ ಅವರ ಕಾರ್ಯ ಸಿದ್ಧಿಯ ತಿರುಳು. ಪ್ರಾಧ್ಯಾಪಕರಾಗಿದ್ದಾಗಲೀ, ಪ್ರಿನ್ಸಿಪಾಲರಾಗಿದ್ದಾಗಲೀ ಅನೇಕ ಸಾಧನೆಗಳನ್ನು ಕೈಗೊಂಡಿದ್ದಾರೆ. ಆದರ ಸಿದ್ಧಿಯನ್ನು ಕಂಡಿದ್ದಾರೆ.

ರಾಷ್ಟ್ರಕವಿ ಶ್ರೀ ಎಂ. ಗೋವಿಂದ ಪೈಗಳ ಸಂಶೋಧನಾ ಕೇಂದ್ರದಲ್ಲಿ ತುಳು ನಿಘಂಟಿನ ಯೋಜನೆಯನ್ನು ಕೈಗೊಂಡು ಅದಕ್ಕಾಗಿ ಪ್ರಾಂತ ಸರಕಾರದ ಸಹಕಾರವನ್ನು ಪಡೆದಿದ್ದಾರೆ. ವಿದೇಶದಲ್ಲಿದ್ದ ಡಾ. ಪದ್ಮನಾಭ ಉಪಾಧ್ಯಾಯರನ್ನು ಅವರ ಪತ್ನಿ ಡಾ. ಸುಶೀಲಾ ಉಪಾಧ್ಯಾಯರನ್ನು ಕರೆತರಿಸಿ ಅವರ ಮೂಲಕ ಈ ಯೋಜನೆಯ ಕಾರ್ಯಗಳನ್ನು ಮುಂದರಿಸಿಕೊಂಡು ಹೋಗುತ್ತಿದ್ದಾರೆ.

ಫೋರ್ಡ್ ಫೌಂಡೇಶನ್‌ನ ಸಹಕಾರದೊಂದಿಗೆ ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕಾರ್ಯ ಕೈಗೆತ್ತಿಕೊಂಡು ಆ ಕುರಿತಾಗಿ ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಪ್ರಚಲಿತವಾಗಿರುವ ಜಾನಪದ ಕಲಾ ಪ್ರಕಾರಗಳನ್ನು ಕಲೆ ಹಾಕುವುದಲ್ಲದೆ ಭಾರತದ ಇತರ ನಾಡಿನ ಕಲೆಗಳ ಪರಿಚಯಕ್ಕಾಗಿ ವಿಚಾರಗೋಷ್ಠಿ, ಪ್ರದರ್ಶನ ಮುಂತಾದ ಕಾರ್ಯಗಳನ್ನು ನಡೆಸುತ್ತಿದ್ದಾರೆ.

ಮೈಸೂರು ವಿಶ್ವವಿದ್ಯಾಲಯಕ್ಕೆ ಎಂ. ಜಿ. ಎಂ. ಸೇರ್ಪಡೆಯಾಗಿದ್ದಾಗ ಹರಿದಾಸ ಭಟ್ಟರು ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿದ್ದರು. ಅಲ್ಲಿನ ಸಭೆಗಳಲ್ಲಿ ಧಾರಾಳವಾಗಿ ನಿರ್ದಾಕ್ಷಿಣ್ಯವಾಗಿ ತಮ್ಮ ಬೇಡಿಕೆಗಳ ಬಗ್ಗೆ ಮಾತಾಡುತ್ತಿದ್ದರು. ಕುವೆಂಪು, ನಿಕ್ಕಮ್, ಶ್ರೀಮಾಲಿ, ದೇಜಗೌ – ಈ ನಾಲ್ವರು ಉಪಕುಲಪತಿಗಳು ಅಧ್ಯಕ್ಷತೆ ನಡೆಸಿದ ಸಭೆಗಳಲ್ಲಿ ನಿರಾತಂಕವಾಗಿ ತನ್ನ ವಾದವನ್ನು ಮಂಡಿಸಿದುದುಂಟು.

ಶ್ರೀ ಹರಿದಾಸ ಭಟ್ಟರು ಸಮಯ ದೊರೆತಾಗ ಲೇಖನ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಕತೆ, ಕಾದಂಬರಿಗಳಿಗಿಂತ ಹೆಚ್ಚಾಗಿ ಅವರಿಗೆ ವಿಮರ್ಶಾಲೋಕವೇ ಹೆಚ್ಚು ಪ್ರಿಯವಾದುದಾಗಿದೆ. ಪ್ರೊ. ಯು. ಎಲ್. ಆಚಾರ್ಯರೊಂದಿಗೆ 'ಅವ್ಯಕ್ತ ಮಾನವ' ಎಂಬ ಗ್ರಂಥವನ್ನು ಬರೆದಿದ್ದಾರೆ. ತಮ್ಮ ವಿದೇಶೀ ಪ್ರವಾಸದ ಕುರಿತಾಗಿ ಬರೆದಿದ್ದಾರೆ. ಕರಾವಳಿ ಕರ್ನಾಟಕದ ದೈನಿಕ ಪತ್ರಿಕೆ 'ಉದಯವಾಣಿ'ಯಲ್ಲಿ ಅವರ 'ಲೋಕಾಭಿರಾಮ' ಬಹಳ ಜನಪ್ರಿಯವಾಗಿದೆ. ಕಾಲಕಾಲಕ್ಕೆ ಉದ್ಭವಿಸುತ್ತಿರುವ ಸಮಸ್ಯೆ, ವ್ಯಕ್ತಿ ವಿಷಯಗಳನ್ನು ಕೈಗೆತ್ತಿಕೊಂಡು ನಿರ್ದಾಕ್ಷಿಣ್ಯವಾಗಿ ಬರೆಯುವ ಬರಹ ನಿಜವಾಗಿಯೂ ಲೋಕಾಭಿರಾಮವೇ ಆಗಿದೆ ಎನ್ನುವುದರಲ್ಲಿ ಸಂಶಯ ವಿಲ್ಲ.

ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಮತ್ತು ತುಳು ನಿಘಂಟು ಯೋಜನೆ

— ಡಾ. ಯು. ಪಿ. ಉಪಾಧ್ಯಾಯ

ಎಂ.ಜಿ.ಎಂ. ಕಾಲೇಜಿನ ಸುತ್ತ ಹಮ್ಮಿಕೊಂಡಿರುವ ಸಂಶೋಧನ ಸಂಸ್ಥೆ, ಜಾನಪದ ದಾಖಲಾತಿ, ಅಧ್ಯಯನ ಹಾಗೂ ಪ್ರಸರಣ ಕೇಂದ್ರ, ಯಕ್ಷಗಾನ ತರಬೇತಿ ಶಾಲೆ ಮುಂತಾದ ಹಲವಾರು ಅಂಗ ಸಂಸ್ಥೆಗಳು ಸ್ಥಾಪನೆಯಾದದ್ದು 'ಆಕಸ್ಮಿಕ'ಎನ್ನುತ್ತಾರೆ ಪ್ರೊ. ಕು. ಶಿ. ಹರಿದಾಸ ಭಟ್ಟರು. ಒಂದು ಸ್ನಾತಕ ಪೂರ್ವ ಕಲಾ ಶಾಲೆಯಲ್ಲಿ ಸಾಮಾನ್ಯವಾಗಿ ಹೆಸರು ಕೂಡ ಕೇಳದ ಇಂತಹ ಕಾರ್ಯಕ್ರಮಗಳು ಇಷ್ಟು ಸುವ್ಯವಸ್ಥಿತ ರೂಪದಲ್ಲಿ ನಡೆದುಕೊಂಡು ಬಂದು ಅಂತಾರಾಷ್ಟ್ರೀಯ ಖ್ಯಾತಿ ಗಳಿಸುವುದು ಒಂದು ರೀತಿಯಿಂದ ಆಶ್ಚರ್ಯಕರವಾದ ವಿಷಯವೇ. ಈ ದೃಷ್ಟಿಯಿಂದ ಇಲ್ಲಿ ಈ ಕಾರ್ಯಕ್ರಮಗಳು ರೂಪು ತಳೆದದ್ದು ಒಂದು 'ಆಕಸ್ಮಿಕ' ಎನ್ನಬಹುದೋ ಏನೋ. ಆದರೆ ಈ 'ಆಕಸ್ಮಿಕ'ಗಳು ಆಕಾಶದಿಂದ ಉದುರಿದುವಲ್ಲ. ಉಡುಪಿಯನ್ನು ಒಂದು ಉಚ್ಚ ಮಟ್ಟದ ಜ್ಞಾನಗಂಗೋತ್ರಿಯಾಗಿಯೂ, ಸಾಹಿತ್ಯ ಚಿಲುಮೆಯಾಗಿಯೂ, ಸಂಗೀತ ಜನಪದ ಕಲಾ ವಾಹಿನಿಯಾಗಿಯೂ ಮಾಡಬೇಕೆಂಬ ಹರಿದಾಸ ಭಟ್ಟರ ಕರ್ತೃತ್ವ ಶಕ್ತಿಯ, ಸತತ ಚಿಂತನೆ ಯೋಜನೆಗಳ ಹಾಗೂ ಅವಿರತ ಶ್ರಮ ಪ್ರಯತ್ನಗಳ ಫಲ.

'ಯೋಜಕಸ್ತತ್ರ ಸುಲಭಃ' ಆದಾಗ ಅನುಕೂಲತೆಗಳು ಕೂಡಿ ಬರುತ್ತವೆ. ಆಕಸ್ಮಿಕಗಳು ಆಗಿಹೋಗುತ್ತವೆ. ಇಲ್ಲವಾದರೆ ಕಡಲ ತೀರದ ಈ ಮೂಲೆಗೆ ದೂರದ ಬೆಂಗಳೂರಿನಿಂದಲೋ ದಿಲ್ಲಿಯಿಂದಲೋ ಅಮೇರಿಕದಿಂದಲೋ ಧನಬಲ, ಜನಬಲ, ಸರಕಾರ ಬಲ, ಪಂಡಿತ ಬಲ ಕೂಡಿಬಂದೀತೇ? ಪಾಶ್ಚಾತ್ಯ ವಿದ್ವಾಂಸರ ಕೈಯಲ್ಲಿರುವ ಭಾರತದ ಭೂಪಟದಲ್ಲಿ ಉಡುಪಿಗೆ ಸ್ಥಾನ ಸಿಕ್ಕೀತೇ? 'ನಿನ್ನ ನಾಮ ಬಲವೊಂದಿದ್ದರೆ...' ಎಂದು ದಾಸರು ಹೇಳಿದ ರೀತಿಯಲ್ಲಿ 'ನಿನ್ನ ನಿಷ್ಠೆಯ ಬಲವೊಂದಿದ್ದರೆ...' ಎನ್ನುವ ಮಾತು ಹರಿದಾಸ ಭಟ್ಟರಿಗೆ ಅನ್ವಯಿಸುತ್ತದೆ. ಈ ನಿಷ್ಠೆ ಅವರ ಗಾಯತ್ರಿ ಮಂತ್ರ. ಕೆಲಸ ಮಾಡಲಿಕ್ಕೆ ಸರಿಯಾದ ಅನುಚರರು, ಸಹಚರರು, ಸಿಕ್ಕಿದರೆ ಎಂ.ಜಿ.ಎಂ. ಕಾಲೇಜಿನ ಸುತ್ತ ಇನ್ನೂ ಕೆಲವು ಆಕಸ್ಮಿಕಗಳು ನಡೆಯಬಹುದು ಅವರ ನಿಷ್ಠೆಯಿಂದ, ಅವಿರತ ಶ್ರಮದಿಂದ.

ಕನ್ನಡದ ರಾಷ್ಟ್ರಕವಿಗಳೂ, ವರಕವಿಗಳೂ ಅಸದೃಶ ಸಂಶೋಧಕರೂ ಆದ ಗೋವಿಂದ ಪೈಯವರು ನಿಧನರಾದಾಗ ಅವರಲ್ಲಿದ್ದ ಐದಾರು ಸಾವಿರ ಅಮೂಲ್ಯ ಪುಸ್ತಕಗಳ ಭಂಡಾರ ತಬ್ಬಲಿಯಾಯಿತು. ಸುಮಾರು ಮೂವತ್ತಾರಕ್ಕೂ ಹೆಚ್ಚಿನ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಈ ಖಜಾನೆಯನ್ನು ಸರಿಯಾಗಿ ನೋಡಿಕೊಳ್ಳುವವರಿಲ್ಲದಿದ್ದರೆ ಎರಡು ಮೂರು ವರ್ಷಗಳೊಳಗೆ ಅವು ಗೆದ್ದಲು ಹುಳುಗಳ ಆಹಾರವಾಗಿ ಕಾಲನ ಗರ್ಭದೊಳಗೆ ಸೇರಿಹೋಗುತ್ತಿತ್ತು. ಮುಂದಿನ ಪೀಳಿಗೆಯ ಸಂಶೋಧಕರ ಪಾಲಿಗೆ ಆ ಅಮೂಲ್ಯ ಪುಸ್ತಕಗಳ ನಿಧಿ ದೊರಕದಂತಾಗಬಹುದಾಗಿತ್ತು. ಎಂ.ಜಿ.ಎಂ. ಕಾಲೇಜಿನ ಮೊದಲ ಪ್ರಾಂಶುಪಾಲರಾಗಿದ್ದ ಪ್ರೊ. ಸುಂದರ ರಾಯರೂ, ಆಗಿನ ಪ್ರಾಂಶುಪಾಲರಾಗಿದ್ದ ಪ್ರೊ. ಹರಿದಾಸ ಭಟ್ಟರೂ ಸಾಹಿತ್ಯ ಪ್ರೇಮಿಗಳಾಗಿದ್ದುದರಿಂದ ಅಲ್ಲಿನ ಗ್ರಂಥಾಲಯ ಆಗಲೇ ಅರ್ಧ ಲಕ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಗ್ರಂಥಗಳಿಂದ ತುಂಬಿತ್ತು. ಗೋವಿಂದ ಪೈಯವರ ಸಂಗ್ರಹವನ್ನೂ ಇಲ್ಲಿಗೆ ಬರಮಾಡಿಕೊಂಡರೆ ಈ ಕಾಲೇಜಿನ ಜ್ಞಾನ ಗಂಗೆ ಇನ್ನೂ ತುಂಬಿ ತುಳುಕಬಹುದೆಂದು ಹರಿದಾಸ ಭಟ್ಟರ ಸೂಕ್ಷ್ಮಮತಿಗೆ ಹೊಳೆದು ಕೂಡಲೇ ಕಾರ್ಯಪ್ರವೃತ್ತರಾದರು. ಪೈ ಅವರ ಉತ್ತರಾಧಿಕಾರಿಗಳ ಮನವೊಲಿಸುವ ಕಾರ್ಯದಲ್ಲಿ ಆಗಿನ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಪ್ರೊ. ಜವರೇಗೌಡರೂ ಮಂಗಳೂರಿನ ಶಿಕ್ಷಣತಜ್ಞರಾದ ಸೂರ್ಯನಾರಾಯಣ ಅಡಿಗರೂ ಇತರ ಮಹನೀಯರೂ ಹರಿದಾಸ ಭಟ್ಟರಿಗೆ ನೆರವಾದರು. ಪುಸ್ತಕಗಳು ಬಂದು ಸೇರಿದ್ದು 'ಆಕಸ್ಮಿಕ'ವೆಂದು ಹರಿದಾಸ ಭಟ್ಟರು ಹೇಳಿದರೂ ಅದಕ್ಕಾಗಿ ಅವರು ಪಟ್ಟ ಕಷ್ಟಗಳನ್ನು ನಾನು ಕೇಳಿದ್ದೇನೆ. ಇತ್ತೀಚೆಗೆ ಮಂಜೇಶ್ವರದ ಕೆಲವು ಗಣ್ಯರು ಅಲ್ಲಿನ ಸಂಗ್ರಹವನ್ನು ಹರಿದಾಸ ಭಟ್ಟರು ಎತ್ತಿಕೊಂಡು ಹೋದರು ಎಂದು ಗೋಳಾಡುವುದನ್ನೂ ತಮಗೆ ವಾಪಾಸ್ ಕೊಡಬೇಕೆಂದು ಮಾತಾಡಿಕೊಳ್ಳುವುದನ್ನೂ ಕೇಳಿದ್ದೇನೆ. ಆದರೆ ಭಟ್ಟರು ಅವುಗಳನ್ನು ತೆಗೆದುಕೊಂಡು

ಹೋಗಿ ಸುರಕ್ಷಿತವಾಗಿ ಇಡದಿದ್ದರೆ ಇಂದು ಆ ಪುಸ್ತಕಗಳನ್ನು ಪಡೆಯುವುದಿರಲಿ, ನೋಡಲಿಕ್ಕೆ ಕೂಡಾ ಸಿಗುತ್ತಿರಲಿಲ್ಲ. ಈ ಆಧುನಿಕ ನಾಗರಿಕರಿಗೆ, ಸತ್ಕುಲಪ್ರಸೂತೆಯಾದ ವಧು ಅನುರೂಪ ವರನನ್ನು ಪಡೆದು ಗೃಹಿಣಿಯಾಗಿ, ಗೃಹಲಕ್ಷ್ಮಿಯಾಗಿ ಮೆರೆಯುವಂತೆ ಆ ಸರಸ್ವತಿ ಉಡುಪಿಯಲ್ಲಿ ಕಂಗೊಳಿಸುತ್ತಿದ್ದಾಳೆ. ಜ್ಞಾನಪಿಪಾಸುಗಳಾದ ಸಂಶೋಧಕರಿಗೆ ಆತಿಥ್ಯ ನೀಡುತ್ತಾಳೆ. ಆಹ್ವಾನಿಸುತ್ತಿದ್ದಾಳೆ.

ಪುಸ್ತಕಗಳನ್ನು ಸಂಗ್ರಹಿಸಿದ, ಸಂಪಾದಿಸಿದ ಪ್ರೊ. ಭಟ್ಟರು ಎಂ. ಜಿ.ಎಂ. ಗ್ರಂಥಾಲಯದಲ್ಲಿ ಅವುಗಳನ್ನು ಕೂಡಿಹಾಕಿ ಕೈತೊಳೆದು ಕುಳಿತುಕೊಳ್ಳಲಿಲ್ಲ. ಆ ಮಹಾನ್ ಕವಿಯ ನೆನಪನ್ನು ಚಿರಸ್ಥಾಯಿಯಾಗಿ ಮಾಡಬೇಕೆಂಬ ಹಂಬಲದಿಂದ ಯೋಚಿಸತೊಡಗಿದರು. ಕಾರ್ಯಪ್ರವೃತ್ತರಾದರು.

1965ನೇ ಇಸವಿ ದಸಂಬರ ಹದಿನೇಳರಂದು ದಿವಂಗತ ಗೋವಿಂದ ಪೈಯವರ ಉತ್ತರಾಧಿಕಾರಿಗಳಾದ ಶ್ರೀಯುತರುಗಳಾದ ಅನಂತ ಪೈ, ತುಕಾರಾಮ ಪೈ, ಕೇಶವ ಪೈ ಹಾಗೂ ವೆಂಕಟೇಶ ಪೈ ಇವರುಗಳು ಗ್ರಂಥಗಳನ್ನು ಹಸ್ತಾಂತರ ಮಾಡಿದಾಗಲೇ ಶ್ರೀ ಜಿ.ಪಿ. ರಾಜರತ್ನಂ ಅವರ ಅಮೃತಹಸ್ತದಿಂದ ಸಂಶೋಧನ ಕೇಂದ್ರದ ಉದ್ಘಾಟನೆಯೂ ನಡೆಯಿತು. ಮರುದಿನ ಖ್ಯಾತ ವಿದ್ವಾಂಸರುಗಳಾದ ವಿ.ಎಂ. ಇನಾಂದಾರ ಹಾಗೂ ಜಿ.ಪಿ. ರಾಜರತ್ನಂ ಅವರುಗಳು ಗೋವಿಂದ ಪೈ ಸ್ಮಾರಕ ಉಪನ್ಯಾಸ ನೀಡಿ ಇಲ್ಲಿನ ವಿಚಾರಗೋಷ್ಠಿ, ಉಪನ್ಯಾಸ ಮಾಲಿಕೆ, ಸಂಶೋಧನೆ ಮುಂತಾದ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಅಂದು ಚಿಗುರಿದ ಈ ಗಿಡ ಇಂದು ಹೆಮ್ಮರವಾಗಿ ಬೆಳೆಯುತ್ತಿದೆ.

ಸುಮಾರು ಹತ್ತು ವರ್ಷಗಳ ಕಾಲ ಈ ಕೇಂದ್ರ ಸಂಶೋಧಕರ ಪರಾಮರ್ಶನ ಗ್ರಂಥಾಲಯವಾಗಿ ಸೇವೆ ಸಲ್ಲಿಸುತ್ತಿತ್ತು. ಆ ಸಂದರ್ಭದಲ್ಲಿ ವಿದ್ವಾಂಸರುಗಳಿಂದ ಭಾಷಣ, ವಿಚಾರಗೋಷ್ಠಿ, ಪುಸ್ತಕ ಪ್ರಕಾಶನ ಮುಂತಾದ ಕಾರ್ಯಗಳು ಸಂಪನ್ನವಾಗಿ ವಿಶ್ವವಿದ್ಯಾಲಯ ಹಾಗೂ ವಿದ್ವಾಂಸರುಗಳ ಗಮನ ಸೆಳೆಯಿತು. ಪ್ರೊ. ಹರಿದಾಸ ಭಟ್ಟರು ತುಳುನಾಡಿನ ಇತಿಹಾಸ, ಸಂಸ್ಕೃತಿ, ದೇವಾಲಯಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಮುಂತಾದವುಗಳ ತಜ್ಞರಾದ ಡಾ. ಪಿ. ಗುರುರಾಜ ಭಟ್ಟರ ಸಹಕಾರದಿಂದ ಅನೇಕ ಪ್ರಾಚೀನ ಶಿಲಾಶಾಸನ, ವಿಗ್ರಹಗಳು ಶಿಲೆ, ಲೋಹ, ಮರ ಮುಂತಾದವುಗಳಿಂದ ಮಾಡಿದ ಮೂರ್ತಿಗಳು, ಹಸ್ತಪ್ರತಿಗಳು ಮುಂತಾದವುಗಳ ಸಂಗ್ರಹ ಮಾಡಿ ಪ್ರಾಚ್ಯ ವಸ್ತುಸಂಗ್ರಹಾಲಯವೂ ಮೂಡಿಬರುವಂತೆ ಮಾಡಿದರು. ಇದನ್ನು ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು 1972ರ ಜನವರಿ 17ರಂದು ಉದ್ಘಾಟಿಸಿದರು. ಡಾ. ಟಿ. ಎಂ. ಎ. ಪೈಯವರ ಅಭಿನಂದನ ಸಮಾರಂಭದಲ್ಲಿ ಸಂಗ್ರಹಿಸಿದ ನಿಧಿಯಿಂದ ಒಂದು ಪ್ರಾಚಾರ್ಯ ಹುದ್ದೆಯ ನಿರ್ಮಾಣವೂ ಆಯಿತು. ಒಂದು ಪ್ರತ್ಯೇಕ ಕಟ್ಟಡವನ್ನು ಕಟ್ಟಿ ಸುಸಜ್ಜಿತ ಕಪಾಟುಗಳಲ್ಲಿ ಗೋವಿಂದ ಪೈಯವರ ಗ್ರಂಥ ಭಂಡಾರವನ್ನು ಓರಣವಾಗಿಡಿಸಿ, ಸಂಶೋಧಕರಿಗೆ ಅನುವು ಮಾಡಿಕೊಡಲಾಯಿತು. ಸಂದರ್ಶಕ ಹಾಗೂ ಸಂಶೋಧಕರಿಗಾಗಿ ವಿದ್ವಾಂಸರಿಗಾಗಿ ಅತಿಥಿಗೃಹವೇ ಮೊದಲಾದ ಸೌಕರ್ಯಗಳೂ ಏರ್ಪಟ್ಟವು.

ರಾಷ್ಟ್ರಮಟ್ಟದ ವಿಚಾರಗೋಷ್ಠಿಗಳು, ಪ್ರಕಟಣೆಗಳು ಹಾಗೂ ಪರಾಮರ್ಶನ ಗ್ರಂಥಾಲಯ ಇವುಗಳಿಂದಾಗಿ ಈ ಕೇಂದ್ರ ಉಚ್ಚಮಟ್ಟದ ಸಂಶೋಧನ ಪೀಠವಾಗಬಹುದೆಂದು ಮನಗಂಡು ಮೈಸೂರು ವಿಶ್ವವಿದ್ಯಾನಿಲಯ ಇದನ್ನು ಪಿಹೆಚ್.ಡಿ. ಮಟ್ಟದ ತರಬೇತಿಗೆ ಅವಕಾಶ ಕಲ್ಪಿಸುವ ಕೇಂದ್ರವನ್ನಾಗಿ ಮಾನ್ಯತೆ ನೀಡಬಹುದೆಂದು ಯೋಚಿಸಿ ಆಯೋಗವೊಂದನ್ನು ರಚಿಸಿ ಕಳುಹಿಸಿತು. ಆ ಆಯೋಗ ಈ ಕೇಂದ್ರವನ್ನು ಕರಾವಳಿ ಪ್ರದೇಶದ ಭಾಷೆ, ಸಂಸ್ಕೃತಿ, ಸಾಹಿತ್ಯ, ಜನಪದ, ಇತಿಹಾಸ, ಯಕ್ಷಗಾನ ಮುಂತಾದ ವಿಷಯಗಳ ಅಧ್ಯಯನಕ್ಕೆ ಕೇಂದ್ರವೆಂದು ಅಂಗೀಕರಿಸಬಹುದೆಂದು ಶಿಫಾರಸು ಮಾಡಿತು. ಆ ಶಿಫಾರಸಿಗನುಸಾರವಾಗಿ ಮೈಸೂರು ವಿಶ್ವವಿದ್ಯಾನಿಲಯ 11 – 4 – 1975ರಲ್ಲಿ ಈ ಸಂಸ್ಥೆಯನ್ನು ಸಂಶೋಧನ ಕೇಂದ್ರವೆಂದು ಪರಿಗಣಿಸಿ ಮಾನ್ಯತೆ ನೀಡಿತು. 30 – 5 – 1976ರಂದು ಅಂದಿನ ಉಪಕುಲಪತಿಗಳಾದ ಶ್ರೀ ಡಿ. ವಿ. ಅರಸ್ ಅವರು ಹೊಸತಾಗಿ ಕಟ್ಟಿಸಿದ ರಾಷ್ಟ್ರಕವಿ ಭವನವನ್ನು ಉದ್ಘಾಟಿಸಿದರು.

ಗೋವಿಂದ ಪೈ ಪ್ರಾಚ್ಯವಸ್ತು ಸಂಗ್ರಹಾಲಯವು ಕರ್ನಾಟಕ ಸರಕಾರದ ಪುರಾತತ್ತ ಶಾಸ್ತ್ರ ವಿಭಾಗದಲ್ಲಿ ನೊಂದಾಯಿಸಲ್ಪಟ್ಟ ರಾಜ್ಯದ ನಾಲ್ಕು ಖಾಸಗಿ ಸಂಗ್ರಹಾಲಯಗಳಲ್ಲಿ ಒಂದಾಗಿದೆ. ಈ ಸಂಗ್ರಹದಲ್ಲಿನ ಮುಖ್ಯ ಕಲಾಕೃತಿಗಳ ಹಾಗೂ ಮೂರ್ತಿ ಶಿಲ್ಪಗಳ ಪರಿಚಯಾತ್ಮಕ ವಿವರಣೆ, ವಿಶ್ಲೇಷಣೆ ಹಾಗೂ ಚಿತ್ರಗಳುಳ್ಳ ಒಂದು ಪರಿಚಯ ಪುಸ್ತಕವೂ ಪ್ರಕಟವಾಗಿದ್ದು ಮೂರ್ತಿ ಶಿಲ್ಪದ ಬಗ್ಗೆ ಸಂಶೋಧನೆ ಮಾಡುವವರಿಗೆ ಒಂದು ಅಮೂಲ್ಯ ಗ್ರಂಥವಾಗಿದೆ.

ಪ್ರಾರಂಭದಲ್ಲಿ ಮದರಾಸು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಚಾರ್ಯರಾದ ಪ್ರೊ. ಎಂ. ಮರಿಯಪ್ಪ ಭಟ್ಟರೂ, ಯಕ್ಷಗಾನ ವಿದ್ವಾಂಸರೂ ಖ್ಯಾತ ಲೇಖಕರೂ ಆದ ಡಾ. ಕೆ.ಶಿವರಾಮ ಕಾರಂತರೂ, ತುಳುನಾಡಿನ ಪ್ರಸಿದ್ಧ ಸಂಶೋಧಕ ವಿದ್ವಾಂಸರಾದ ಡಾ. ಪಿ. ಗುರುರಾಜ ಭಟ್ಟರೂ ಮಾರ್ಗದರ್ಶಕ ಪ್ರಾಚಾರ್ಯ

ರಾಗಿ ಕಾರ್ಯ ನಿರ್ವಹಿಸಿದರು. ಆರು ಜನ ಸಂಶೋಧಕರು ಪಿಹೆಚ್. ಡಿ. ಪದವಿಗಾಗಿ ಕೇಂದ್ರದಲ್ಲಿ ಸಂಶೋಧನೆ ನಡೆಸಲು ಹೆಸರು ನೊಂದಾಯಿಸಿಕೊಂಡರು. ಅವರುಗಳಲ್ಲಿ ಡಾ. ಪಿ. ರಾಮ ಭಟ್ (ಕನ್ನಡ ವ್ಯಾಕರಣಗಳ ತೌಲನಿಕ ಅಧ್ಯಯನ), ಡಾ. ಕೆ. ರಘುಪತಿ ಭಟ್ (ತುಳುನಾಡಿನ ಸ್ಥಳನಾಮಗಳು), ಡಾ. ಬಿ. ವಸಂತ ಶೆಟ್ಟಿ (ಬಾರಕೂರಿನ ಇತಿಹಾಸ) ಹಾಗೂ ಡಾ. ಶ್ರೀ ಕೃಷ್ಣ ಭಟ್ (ಕನ್ನಡ ವ್ಯಾಕರಣಗಳ ಮೇಲೆ ಸಂಸ್ಕೃತ ವ್ಯಾಕರಣಗಳ ಪ್ರಭಾವ) ಈ ನಾಲ್ವರು ತಮ್ಮ ಮಹಾಪ್ರಬಂಧಗಳಿಗಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಡಿಗ್ರಿಯನ್ನು ಪಡೆದರು.

ಪ್ರೊ. ಮರಿಯಪ್ಪ ಭಟ್ ಹಾಗೂ ಡಾ. ಗುರುರಾಜ್ ಭಟ್ ಇವರುಗಳ ನಿಧನಾನಂತರ ಕೇಂದ್ರದಲ್ಲಿ ತುಳು ನಿಘಂಟು ಯೋಜನೆ ಪ್ರಾರಂಭವಾದ ಮೇಲೆ ನಿಘಂಟು ರಚನೆಗಾಗಿ ನೇಮಕಗೊಂಡ ಡಾ.ಯು.ಪಿ. ಉಪಾಧ್ಯಾಯ ಹಾಗೂ ಡಾ. ಶ್ರೀಮತಿ ಸುಶೀಲಾ ಪಿ. ಉಪಾಧ್ಯಾಯ ಇವರುಗಳು ಕೇಂದ್ರದ ಸಂಶೋಧನ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ಅವರುಗಳ ಮಾರ್ಗದರ್ಶನದಲ್ಲಿ ಏಳು ಜನ ಸಂಶೋಧಕರು ಪಿಹೆಚ್. ಡಿ. ಪದವಿಗಾಗಿ ಹೆಸರು ನೊಂದಾಯಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಹೊಸ್ಕೆರೆ ಎಸ್. ಶಿವಸ್ವಾಮಿ (ಪದವಿಪೂರ್ವ ತರಗತಿಗಳಲ್ಲಿ ಕನ್ನಡ ಭಾಷೆಯ ಕಲಿಕೆ – ನ್ಯೂನತೆಗಳು ಮತ್ತು ಪರಿಹಾರ ಸೂತ್ರಗಳು), ಡಿ. ಆರ್. ಪಾಂಡುರಂಗ (ದಕ್ಷಿಣ ಕನ್ನಡದ ಪಛೈರರು – ಒಂದು ಸಾಂಸ್ಕೃತಿಕ ಅಧ್ಯಯನ), ಎ.ವಿ. ನಾವಡ (ತುಳು ಪಾಡ್ದನಗಳ ಭಾಷಾವೈಜ್ಞಾನಿಕ ಅಧ್ಯಯನ), ಕೆ. ಪದ್ಮನಾಭ (ತುಳುವಿನ ಉಪಭಾಷೆಗಳ ತೌಲನಿಕ ಅಧ್ಯಯನ), ಶ್ರೀಮತಿ ತುಳಸೀ ದೇವಿ (ಕೊಡವ ಜಾನಪದ ಬಿಂಬಿಸುವ ಸಮಾಜ), ವೆಂಕಟರಾಜ ಪುಣಿಂಚತ್ತಾಯ (ತುಳು ಭಾಗವತೊ ಗ್ರಂಥದ ಭಾಷಾ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಅಧ್ಯಯನ). ಗಣರಾಜ್ ಕುಂಬಳೆ (ನಿರಂಜನ– ಒಂದು ಸಮಗ್ರ ಅಧ್ಯಯನ) ಇವು ಸಂಶೋಧಕರ ಹೆಸರುಗಳು ಮತ್ತು ಅವರುಗಳು ಕೈಗೊಂಡ ಸಂಶೋಧನ ವಿಷಯಗಳು.

ಕೇಂದ್ರದಲ್ಲಿ ಸಂಪನ್ನವಾದ ರಾಷ್ಟ್ರಮಟ್ಟದ ವಿಚಾರಗೋಷ್ಠಿಗಳೂ ಸ್ಮಾರಕೋಪನ್ಯಾಸಗಳೂ, ಕಲಾ ಮಹೋತ್ಸವಗಳೂ, ಕಮ್ಮಟಗಳೂ ತುಳು ದಿನಾಚರಣೆಗಳೂ ಸಾಕಷ್ಟು ಪ್ರಸಿದ್ಧಿ ಪಡೆದಿವೆ.

ರಾಷ್ಟ್ರಮಟ್ಟದ ವಿಚಾರಗೋಷ್ಠಿಗಳು ಹಾಗೂ ಉತ್ಸವಗಳು

ಮಾರ್ಚ್ 25–27, 1977	:	ಅಖಿಲ ಭಾರತ ಶಿಲಾಶಾಸನ ಸಂಘದ ಮೂರನೆಯ ವಾರ್ಷಿಕ ಸಮ್ಮೇಳನ, ವಿಚಾರಗೋಷ್ಠಿ (ಶಿಲಾಶಾಸನ ಸಂಘದ ಸಹಭಾಗಿತ್ವದಲ್ಲಿ)
ಮೇ 19–21, 1979	:	ಪ್ರಸಿದ್ಧಿ ಪಡೆಯದ ಭಾಷೆಗಳು: ತುಳು ಮತ್ತು ಇತರ ಭಾಷೆಗಳು. ವಿಚಾರ ಗೋಷ್ಠಿ (ದ್ರಾವಿಡ ಭಾಷೆಗಳ ಅಂತಾರಾಷ್ಟ್ರೀಯ ಸಂಸ್ಥೆ, ತಿರುವನಂತಪುರ, ಇದರ ಸಹಭಾಗಿತ್ವದಲ್ಲಿ)
ನವಂಬರ 9–11, 1979	:	ಅಖಿಲ ಭಾರತ ಸ್ಥಳನಾಮ ಸಂಘದ ಪ್ರಥಮ ಅಧಿವೇಶನ (ಸ್ಥಳನಾಮ ಸಂಘದ ಸಹಭಾಗಿತ್ವದಲ್ಲಿ)
ಜನವರಿ 8–18, 1982	:	ರಾಷ್ಟ್ರೀಯ ಯಕ್ಷಗಾನ ಮಹೋತ್ಸವ, ಕಮ್ಮಟ ಹಾಗೂ ವಿಚಾರಗೋಷ್ಠಿ (ದೆಹಲಿಯ ರಾಷ್ಟ್ರೀಯ ನಾಟಕಶಾಲೆಯ ಸಹಭಾಗಿತ್ವದಲ್ಲಿ)
ಮಾರ್ಚ್ 28–29, 1984	:	ಪಂಡಿತ ಕವಿ ಮತ್ತು ಆತನ ರಸಿಕರು. ರಾಷ್ಟ್ರಮಟ್ಟದ ವಿಚಾರಗೋಷ್ಠಿ (ಕೇಂದ್ರ ಸಾಹಿತ್ಯ ಎಕಾಡೆಮಿ, ದೆಹಲಿ ಇದರ ಸಹಭಾಗಿತ್ವದಲ್ಲಿ)
ಅಕ್ಟೋಬರ 12, 1985	:	ಕಾಲೇವಾಲ ಮಹೋತ್ಸವ ಮತ್ತು ತುಳು – ಫಿನ್ನಿಷ್ ಜನಪದ ಕಾವ್ಯಗಳ ಬಗ್ಗೆ ವಿಚಾರಗೋಷ್ಠಿ. ಕಾಲೇವಾಲ ತುಳು ಪಾಡ್ದನರೂಪದ ನೃತ್ಯರೂಪಕದ ಪ್ರದರ್ಶನ (ಫಿನ್‌ಲ್ಯಾಂಡಿನ ನಾರ್ಡಿಕ್ ಜಾನಪದ ಸಂಶೋಧನ ಸಂಸ್ಥೆಯ ಸಹಭಾಗಿತ್ವದಲ್ಲಿ)
ಫೆಬ್ರವರಿ 22–26, 1986	:	ಆರಾಧನಾ ರಂಗಕಲೆಗಳ ಬಗ್ಗೆ ರಾಷ್ಟ್ರಮಟ್ಟದ ವಿಚಾರ ಸಂಕಿರಣ. ಆರು ಮಂದಿ ವಿದೇಶೀ ವಿದ್ವಾಂಸರೂ, ಐವತ್ತಕ್ಕೂ ಮಿಕ್ಕಿ ಭಾರತೀಯ ವಿದ್ವಾಂಸರೂ ಭಾಗವಹಿಸಿದ ಬೃಹತ್ ಗೋಷ್ಠಿ. ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಸಹಭಾಗಿತ್ವದಲ್ಲಿ)

ಅಕಾಡೆಮಿಯ ಬೆಳ್ಳಿಹಬ್ಬದ ಉಪನ್ಯಾಸಗಳು

1980 : ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ 'ಸಂಸ್ಕೃತ ಭಾಷೆಗೆ ತುಳುವಿನ ಕಾಣಿಕೆಗಳು'

29–4–1981 : ಡಾ. ಕೆ. ವಿ. ರಮೇಶ್, ಭಾರತ ಸರಕಾರದ ಶಿಲಾಶಾಸನ ವಿಭಾಗದ ಮುಖ್ಯಸ್ಥರು 'ತುಳುವ ಇತಿಹಾಸದಲ್ಲಿ ಗಮನಿಸಬೇಕಾದ ಭೌಗೋಲಿಕ ಅಂಶಗಳು'

23–3–1982 : ಡಾ. ಎಸ್. ಆರ್. ರಾವ್, ಭಾರತ ಸರಕಾರದ ಪ್ರಾಚ್ಯ ಸಂಶೋಧನ ಇಲಾಖೆಯ ಮುಖ್ಯಸ್ಥರು, 'ಸಿಂಧೂ ಕಣಿವೆಯ ಸಂಸ್ಕೃತಿ ಮತ್ತು ಬರಹ'

28–5–1984 : ಡಾ. ಜಾನ್ ಆಲ್‌ಫನ್ಸೋ ಕಾರ್ಕಳ, ನ್ಯೂಯಾರ್ಕ್ ಸ್ಟೇಟ್ ವಿಶ್ವವಿದ್ಯಾನಿಲಯದ ತೌಲನಿಕ ಸಾಹಿತ್ಯ ವಿಭಾಗದ ಪ್ರಾಚಾರ್ಯರು, 'ಲಿಪಿಯಿಲ್ಲದ ಸಾಹಿತ್ಯಗಳು'

20–4–1985 : ಡಾ. ಜವಾಹರಲಾಲ ಹಂಡೂ, ಜಾನಪದ ವಿಭಾಗದ ಮುಖ್ಯಸ್ಥರು ಭಾರತೀಯ ಭಾಷಾ ಸಂಸ್ಥಾನ, ಮೈಸೂರು 'ದಕ್ಷಿಣ ಭಾರತದ ಜನಪದ ಪರಂಪರೆ'

ತುಳು ದಿನಾಚರಣೆಯ ವಿಚಾರಗೋಷ್ಠಿಗಳ ವಿಷಯಗಳು

2–10–1980 — 'ಭಾಷಾ ಸಾಮರಸ್ಯ'
2–10–1981 — 'ಸ್ವಾತಂತ್ರ್ಯಪೂರ್ವ ತುಳುಸಾಹಿತ್ಯ'
2–10–1982 — 'ತುಳುವಿನ ಉಪಭಾಷೆಗಳು'
2–10–1983 — 'ಜನಪದ ಸಾಹಿತ್ಯ ಬಿಂಬಿಸುವ ತುಳುಸಮಾಜ'
2–10–1984 — 'ಕರಾವಳಿ ಕರ್ನಾಟಕದ ಜನಪದ ರಂಗಕಲೆಗಳು'
2–10–1985 — 'ತುಳು–ಫಿನ್ನಿಷ್ ಜನಪದ ಕಾವ್ಯಗಳು'
2–10–1986 — 'ತುಳುನಾಡಿನ ಜನಸಮುದಾಯಗಳ ಸಾಂಸ್ಕೃತಿಕ ಅಧ್ಯಯನ'

ಸಂಶೋಧನ ಕಮ್ಮಟಗಳು

26–11–1979 ರಿಂದ 1–12–1979 : ತುಳು ಕ್ಷೇತ್ರಕಾರ್ಯದ ಸಹಾಯಕರಿಗಾಗಿ ಎಚ್. ಎಸ್. ಬಿಳಿಗಿರಿ, ಡಾ. ಎ. ಎಸ್. ಆಚಾರ್ಯ ಅವರ ಮಾರ್ಗದರ್ಶನದಲ್ಲಿ ಧ್ವನಿವಿಜ್ಞಾನ ಹಾಗೂ ಕ್ಷೇತ್ರಕಾರ್ಯದ ಬಗ್ಗೆ ಕಮ್ಮಟ.

13–8–1980 ರಿಂದ 15–8–1980 : ಕ್ಷೇತ್ರಕಾರ್ಯ ಸಹಾಯಕರಿಗಾಗಿ ಡಾ. ಬಿ.ಸಿ. ಬಾಲಕೃಷ್ಣನ್, ಡಾ.ಯು. ಪಿ. ಉಪಾಧ್ಯಾಯ, ಡಾ. (ಶ್ರೀಮತಿ) ಸುಶೀಲಾ ಉಪಾಧ್ಯಾಯ ಡಾ. ಎ.ಎಸ್. ಆಚಾರ್ಯ ಇವರುಗಳಿಂದ ಆಕೃತಿ ವಿಜ್ಞಾನ ಹಾಗೂ ಕ್ಷೇತ್ರಕಾರ್ಯ ಸಿದ್ಧಾಂತಗಳ ಬಗ್ಗೆ ಕಮ್ಮಟ.

ಈ ಎಲ್ಲ ವಿಚಾರ ಸಂಕಿರಣಗಳೂ ಉತ್ಸವಗಳೂ ಅತ್ಯಂತ ವೈಭವದಿಂದ ನಡೆಯುತ್ತಿದ್ದುವು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹರಿದಾಸ ಭಟ್ಟರು 'ಕಾರಂತ ಅಭಿನಂದನೋತ್ಸವ', 'ಸಾಹಿತ್ಯ ಸಮ್ಮೇಳನ' 'ಮುದ್ದಣ ಜಯಂತಿ', 'ಕನಕದಾಸ – ವಾದಿರಾಜ ಆರಾಧನೋತ್ಸವ' ಮುಂತಾದ ಕಾರ್ಯಕ್ರಮಗಳನ್ನು ನಡೆಸಿದಾಗ ಹಾಕಿಕೊಟ್ಟ ಪರಂಪರೆಯ ಜಾಡಿನಲ್ಲಿಯೇ ಸಂಶೋಧನ ಕೇಂದ್ರದ ಕಾರ್ಯಕ್ರಮಗಳೂ ನಡೆಯುತ್ತವೆ. ಯಕ್ಷಗಾನ ಮಹೋತ್ಸವದ ಹತ್ತು ದಿನಗಳಲ್ಲಿ ಯಕ್ಷಗಾನದ ಪ್ರಭೇದಗಳನ್ನು ಮಾತ್ರವಲ್ಲದೆ ತಮಿಳು ನಾಡಿನ ತೆರುಕ್ಕೂತ್ತು, ಕೇರಳದ 'ಓಟ್ಟಂತುಳ್ಳಲ್' ಮೈಸೂರು ಕಡೆಯ ದೊಡ್ಡಾಟ, ದಕ್ಷಿಣ ಕನ್ನಡದ ಬೊಂಬೆಯಾಟ, ಸಂಸ್ಕೃತ ಯಕ್ಷಗಾನ ಮುಂತಾದವುಗಳಲ್ಲದೆ ಜನಪದ ಮತ್ತು ಆಧುನಿಕ ಸಂಪ್ರದಾಯದ ಜೋಡಣೆಯಿಂದ ರೂಪುಗೊಂಡ ಪ್ರಾಯೋಗಿಕ ನಾಟಕಗಳಾದ ಕೇರಳದ ಮಧ್ಯಮ ವ್ಯಾಯೋಗ ಹಾಗೂ ನೀನಾಸಂ ಬಳಗದ ಮೇಘದೂತಗಳೂ ಪ್ರದರ್ಶಿಸಲ್ಪಟ್ಟಿದ್ದುವು. ಉಡುಪಿಯ ಕಲಾಭಿಮಾನಿಗಳಿಗೆ ರಸದೌತಣವನ್ನಿತ್ತ

ದ್ದವು. ಆರಾಧನಾ ರಂಗಕಲೆಗಳ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿಯೂ ದಕ್ಷಿಣ ಕನ್ನಡದ ಕೋಲ, ನಾಗ ಮಂಡಲ, ಢಕ್ಕೆಬಲಿಗಳಲ್ಲದೆ ಕೇರಳದ ತೆಯ್ಯಂ ಹಾಗೂ ಪಡಯಣಿ, ಕರ್ನಾಟಕದ ಗೊಂದಲಿಗರಾಟ, ಜೋಗೀ ರಾಟ, ಪುರವಂತಿಕೆ ಮೊದಲಾದ ಪ್ರಕಾರಗಳೂ ಪ್ರದರ್ಶಿಸಲ್ಪಟ್ಟಿದ್ದವು. ಜಾನಪದ ಅಧ್ಯಯನ ಕೇಂದ್ರದ ಕಮ್ಮಟ ರಂಗೋತ್ಸವಗಳೂ ಅತ್ಯಂತ ವೈಭವದಿಂದ ಜರಗುತ್ತಿವೆ. ಅಚ್ಚುಕಟ್ಟುತನ, ಸಮಯಪ್ರಜ್ಞೆ, ಆತಿಥ್ಯ ಇವು ಗಳಿಗೆ ಹರಿದಾಸ ಭಟ್ಟರ ಕಾರ್ಯಕ್ರಮಗಳು ರಾಜ್ಯದಲ್ಲಿಯೇ ಪ್ರಸಿದ್ಧವಾಗಿವೆ.

ಸಂಶೋಧನ ಕೇಂದ್ರ ಕನ್ನಡದಲ್ಲಿಯೂ ಇಂಗ್ಲೀಷ್‌ನಲ್ಲಿಯೂ ತುಳುವಿನಲ್ಲಿಯೂ ಹಲವಾರು ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಮುಖ್ಯವಾದ ಕೆಲವು ಗ್ರಂಥಗಳನ್ನು ಇಲ್ಲಿ ಹೆಸರಿಸಬಹುದು. ತುಳು ಹಾಗೂ ದ್ರಾವಿಡ ಭಾಷೆಗಳ ಸಾಹಿತ್ಯ ಹಾಗೂ ಸಂಸ್ಕೃತಿ, ಕನ್ನಡ ಸಾಹಿತ್ಯ, ಯಕ್ಷಗಾನ, ಜಾನಪದ ಕಲೆಗಳು, ಪ್ರಾದೇಶಿಕ ಇತಿಹಾಸ ಮುಂತಾದ ವಿಷಯಗಳ ಮೇಲೆ ಗಮನಾರ್ಹವಾದ ಕೃತಿಗಳನ್ನು ಈ ಕೇಂದ್ರ ಪ್ರಕಟಿಸಿದೆ. ಡಾ. ಕೆ. ವಿ. ರಮೇಶ್ ಅವರ 'ತುಳುನಾಡಿನ ಇತಿಹಾಸ', ವಿ. ಎಂ. ಇನಾಂದಾರರ 'ಶಿವರಾಮ ಕಾರಂತ ಬದುಕು ಬರಹ' ಪ್ರೊ. ಹರಿದಾಸ ಭಟ್ಟರು ಸಂಪಾದಿಸಿದ 'ಸಮಗ್ರ ಯಕ್ಷಗಾನ ಪರಂಪರೆ ಮತ್ತು ಪ್ರಯೋಗ' ಡಾ. ಶ್ರೀನಿವಾಸ ಹಾವನೂರ ಹಾಗೂ ಮ. ವಿ. ನಾಯಕ ಅವರ 'ಗೋವಿಂದ ಪೈ ವಾಙ್ಮಯ ದರ್ಶನ', ಎಂ. ರಾಜ ಗೋಪಾಲ ಆಚಾರ್ಯ ಅವರ 'ಯಕ್ಷಗಾನ ಸಂಗೀತ', ನೀಲಾವರ ರಾಮಕೃಷ್ಣಯ್ಯ ಅವರ 'ಯಕ್ಷಗಾನ ಪಾಠಗಳು', ಎಸ್. ಶಂಕರನಾರಾಯಣ ಭಟ್ಟ ಅವರ 'ಗೋವಿಂದ ಪೈ ಛಂದೋಗತಿ', ಡಾ. ಕೆ. ವಿ. ರಮೇಶ್ ಅವರ 'ತುಳುನಾಡಿನ ಶಾಸನಗಳು', ಕು. ಶಿ. ಹರಿದಾಸ ಭಟ್ಟರ 'ಕಾರಂತ ಪ್ರಪಂಚ', ಎ. ಶೀನಪ್ಪ ಹೆಗ್ಗಡೆ ಅವರ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ' ಮರುಮುದ್ರಣ, ಕು. ಶಿ. ಹರಿದಾಸ ಭಟ್ಟರು ಸಂಪಾದಿಸಿದ 'ಸ್ವಾತಂತ್ರ್ಯ ಪೂರ್ವ ತುಳುಸಾಹಿತ್ಯ', ಎ. ವಿ. ನಾವಡ ಅವರ 'ಗೋವಿಂದ ಪೈ ಪದಕೋಶ', ಡಾ. ಶಿವರಾಮ ಕಾರಂತರು ಸಂಪಾದಿಸಿದ 'ಐರೋಡಿ ಶಿವರಾಮಯ್ಯ: ಬದುಕು ಬರಹ', ಸೇಡಿಯಾಪು ಕೃಷ್ಣ ಭಟ್ಟರ 'ಛಂದೋಗತಿ', ಅಮೃತ ಸೋಮೇಶ್ವರರು ಅನುವಾದಿಸಿದ 'ಕಾಲೆವಾಲ' ಮುಂತಾದ ಕನ್ನಡ ಪುಸ್ತಕಗಳನ್ನೂ Havyaka English Dictionary by M. M. Bhat, Dravidian and Negro African U. P. Upadhayaya & Susheela, P. Upadhyaya, Govindapai Memorial Museum by HR Raghunatha Bhat ಮುಂತಾದ ಇಂಗ್ಲೀಷ್ ಭಾಷೆಯ ಪುಸ್ತಕಗಳನ್ನೂ ಇಲ್ಲಿ ಉಲ್ಲೇಖಿಸಬಹುದು. ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರವೂ ಹತ್ತಾರು ಪುಸ್ತಕಗಳನ್ನು ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಲ್ಲಿ ಪ್ರಕಟಿಸಿದೆ.

1980ರಿಂದ ಸಂಶೋಧನ ಕೇಂದ್ರ ಪ್ರೊ. ಹರಿದಾಸ ಭಟ್ಟರ ಸಂಪಾದಕತ್ವದಲ್ಲಿ 'ತುಳುವ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತಿದೆ. ತುಳುಭಾಷೆ, ಸಂಸ್ಕೃತಿ ಇತಿಹಾಸಕ್ಕೆ ಸಂಬಂಧಿಸಿದ ಲೇಖನಗಳನ್ನು, ಕೇಂದ್ರದ ಚಟುವಟಿಕೆಗಳ ವರದಿಗಳನ್ನು ಪ್ರಕಟಿಸುತ್ತಿರುವ ಈ ಪತ್ರಿಕೆಯ ಹದಿನೆಂಟು ಸಂಚಿಕೆಗಳು ಈ ತನಕ ಪ್ರಕಟವಾಗಿವೆ.

ಇಂತಹ ಕಾರ್ಯಕ್ರಮಗಳಿಂದ ದೇಶ ವಿದೇಶಗಳ ಪಂಡಿತರ ಗಮನ ಇತ್ತಕಡೆ ಹರಿದುದರಲ್ಲಿ ಆಶ್ಚರ್ಯವಿಲ್ಲ. ಅಮೆರಿಕ, ಯುರೋಪ್, ಬ್ರಿಟನ್, ಜಪಾನ್, ಆಸ್ಟ್ರೇಲಿಯಾ ಮುಂತಾದ ಕಡೆಗಳಿಂದಲೂ ವಿದ್ವಾಂಸರುಗಳು ಬಂದು ಇಲ್ಲಿದ್ದು ಈ ಕೇಂದ್ರದಿಂದ ಪ್ರಯೋಜನ ಪಡೆದಿದ್ದಾರೆ. ಕೆಲಿಫೋರ್ನಿಯಾದ ಡಾ. ಪೀಟರ್ ಜೆ. ಕ್ಲಾಸ್, ಚಿಕಾಗೋದ ಡಾ. ಎಡ್ವಿನೋ ಜಿರೋ, ಇಟೆಲಿಯ ಪ್ರೊ. ಫೆರುಚ್ಚೋ ಮರೋತ್ತಿ ಹಾಗೂ ಶ್ರೀಮತಿ ಸೆರಾಬೆಲ್ಲ, ನೈದರ್‌ಲ್ಯಾಂಡಿನ ಡಾ. ಗೋವಿಂದನ್ ಕುಟ್ಟಿ, ಜರ್ಮನಿಯ ಡಾ. ಲುಡ್ವಿಗ್ ಪೆಶ್, ಹಾಗೂ ಹೈಡ್ರುನ್ ಬ್ರೂಕನರ್, ಬ್ರಿಟನ್ನಿನ ಡಾ. ಆಲನ್ ಶೆಪರ್ಡ್, ಡಾ. ಸಾಮ್‌ಕಿಪ್ಲೋಮ್ಕ. ಆಸ್ಟ್ರೇಲಿಯಾದ ಡಾ. ಡೇವಿಡ್ ಜಾರ್ಜ್, ಸ್ವಿಜರ್‌ಲ್ಯಾಂಡಿನ ವಾಲ್ಟರ್ ಪಾಪ್, ಫಿನ್‌ಲ್ಯಾಂಡಿನ ಡಾ. ಲಾರಿ ಹಾಂಕೋ, ಮುಂತಾದ ಹಲವಾರು ವಿದೇಶಿ ವಿದ್ವಾಂಸರುಗಳು ಈ ಕೇಂದ್ರದ ಆಶ್ರಯದಲ್ಲಿ ತಮ್ಮ ಸಂಶೋಧನೆಗಳನ್ನು ನಡೆಸಲಿಕ್ಕೆ ಬಂದಿದ್ದಾರೆ.

ತುಳು ನಿಘಂಟು ಯೋಜನೆ

ಎಂ. ಜಿ. ಎಂ. ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ 1979ರಲ್ಲಿ ನಿವೃತ್ತರಾದ ಮೇಲೆ ಪ್ರೊ. ಹರಿದಾಸ ಭಟ್ಟರಿಗೆ ಈ ಸಂಶೋಧನ ಕೇಂದ್ರವನ್ನು ಒಂದು ಸುಸಜ್ಜಿತ, ಸತತ ಕ್ರಿಯಾಶೀಲ ಸಂಸ್ಥೆಯನ್ನಾಗಿ ಬೆಳೆಸಲು ಅವಕಾಶಗಳು ಸಿಕ್ಕಿದವು. ಸದಾ ಕಾರ್ಯಪ್ರವೃತ್ತರಾದ ಪ್ರೊ. ಭಟ್ಟರ ಶಬ್ದ ಕೋಶದಲ್ಲಿ ನಿವೃತ್ತಿ ಎಂಬ ಶಬ್ದವೇ ಇಲ್ಲ. ಹೀಗಾಗಿ ಒಂದು ಕಡೆಯ ನಿವೃತ್ತಿ ಇನ್ನೊಂದೆಡೆಗೆ ಪ್ರವೃತ್ತಿಯಾಯಿತು. ಪ್ರಾದೇಶಿಕ ಅಧ್ಯಯನ ಕೇಂದ್ರವಾದ ಈ ಸಂಸ್ಥೆಯಲ್ಲಿ ಪ್ರಾದೇಶಿಕ ಭಾಷೆ, ಸಂಸ್ಕೃತಿ, ಜನಪದದ ಅಧ್ಯಯನ ನಡೆಯ ಬೇಕಾದ

ಸಂದರ್ಭದಲ್ಲಿ ತುಳು ಭಾಷೆಗೆ ಒಂದು ಸರ್ವ ಸಂಗ್ರಾಹಕವಾದ ನಿಘಂಟು ಮೊದಲು ಆಗಬೇಕು ಎಂದು ಮನಗಂಡರು. ಆಗ ಭಾರತದ ಸರಕಾರದಿಂದ ನಿಯೋಜಿತರಾಗಿ ಆಫ್ರಿಕದ ಡಾಕರ್ ವಿಶ್ವವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿದ್ದ ಡಾ. ಯು. ಪಿ. ಉಪಾಧ್ಯಾಯರನ್ನು ಸಂಪರ್ಕಿಸಿ, ತುಳು ನಿಘಂಟಿನ ನಿರ್ಮಾಣಕ್ಕಾಗಿ ಬೃಹತ್ ಯೋಜನೆಯೊಂದನ್ನು ರೂಪಿಸಿಕೊಂಡರು.

ತುಳುಭಾಷೆ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ ಸಮೃದ್ಧವಾದ ಹಾಗೂ ವಿಕಸಿತವಾದ ಭಾಷೆಯೆಂದೂ, ಅದಕ್ಕೆ ಎರಡು ಸಾವಿರಕ್ಕೂ ಹೆಚ್ಚಿನ ವರ್ಷಗಳ ಆಡುಮಾತಿನ ಇತಿಹಾಸವಿದೆಯೆಂದೂ ಪ್ರಪಂಚದ ಪ್ರಸಿದ್ಧ ಭಾಷಾ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಯಾವುದೋ ರಾಜಕೀಯ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಇದರಲ್ಲಿ ಹಿಂದಿನ ಶತಮಾನಗಳಲ್ಲಿ ಲಿಖಿತ ಸಾಹಿತ್ಯ ವಿಪುಲವಾಗಿ ಬೆಳೆದು ಬರದಿದ್ದರೂ ಲಿಖಿತ ಸಾಹಿತ್ಯದ ಸೃಷ್ಟಿಯೇ ಆಗಲಿಲ್ಲ ಎಂದು ಹೇಳಲಿಕ್ಕಾಗುವುದಿಲ್ಲ. ಈಗ ತಾನೇ ಮಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟವಾದ 'ತುಳುಭಾಗವತೊ' ಎಂಬ ಮಹಾಕಾವ್ಯ ಹದಿನೇಳನೆಯ ಶತಮಾನದಲ್ಲಿ ರಚಿತವಾದ ಒಂದು ಮೇರುಕೃತಿ. ಇನ್ನೂ ಎರಡು ಗ್ರಂಥಗಳ ತಾಡವಾಲೆ ಪ್ರತಿಗಳು ಇತ್ತೀಚೆಗೆ ದೊರಕಿವೆ. ಭಾಷೆ ವಿಕಸಿತವಾಗಿದ್ದು, ಅದನ್ನಾಡುವವರೂ ಸುಸಂಸ್ಕೃತ ಜನಾಂಗಕ್ಕೆ ಸೇರಿದವರಾಗಿದ್ದೂ ಅದರಲ್ಲಿ ಶಿಷ್ಟ ಸಂಪ್ರದಾಯದ ಲಿಖಿತ ಸಾಹಿತ್ಯ ಹಿಂದಿನ ಶತಮಾನಗಳಲ್ಲಿ ಹೆಚ್ಚಾಗಿ ಬೆಳೆದು ಬಾರದಿರುವುದಕ್ಕೆ ರಾಜಾಶ್ರಯದ ಅಭಾವವೇ ಕಾರಣವಾಗಿರಬೇಕು. ಆದರೆ ಇದರಿಂದಾಗಿ ತುಳುವರ ಸೃಜನಶೀಲತೆಗೆ ಧಕ್ಕೆಯುಂಟಾಗಲಿಲ್ಲ. ಬಾಯ್ದೆರೆಯ ಮೂಲಕ ಹರಿದು ಬಂದ ಜನಪದ ಸಾಹಿತ್ಯ ಸಮೃದ್ಧವಾಗಿ ಬೆಳೆದು ಬಂದಿದೆ. ತುಳುನಾಡಿನ ಜನಜೀವನದ ವಿವಿಧ ಮುಖಗಳನ್ನು, ಧಾರ್ಮಿಕ ಹಾಗೂ ಸಾಮಾಜಿಕ ಪರಂಪರೆಯ ವಿವಿಧ ಚಿತ್ರಗಳನ್ನು ಪ್ರತಿಬಿಂಬಿಸುವಲ್ಲಿ ಈ ಪಾಡ್ದನ ರೂಪದ ಜನಪದ ಸಾಹಿತ್ಯ ಸಫಲವಾಗಿದೆ. ತುಳುನಾಡಿನ ಜನತೆಯ ವಿವಿಧ ವೃತ್ತಿ ಕಸುಬುಗಳು, ಹಬ್ಬ ಹರಿದಿನಗಳು, ಧಾರ್ಮಿಕ ಆಚರಣೆಗಳು, ಸಂಗೀತ ಕಲೆಗಳು, ಆಟ ವಿನೋದಗಳು ಮುಂತಾದವುಗಳಿಗೆ ಸಂಬಂಧಿಸಿದ ಶಬ್ದ ಸಂಪತ್ತು ಬೆಳೆದು ಬಂದು ತುಳುಭಾಷೆಯ ಶಬ್ದ ಭಂಡಾರ ಸಮೃದ್ಧವಾಗಿದೆ. ಇತ್ತೀಚೆಗೆ ಐದಾರು ದಶಕಗಳಲ್ಲಿ ಲಿಖಿತ ಸಾಹಿತ್ಯವೂ ಬೆಳೆಯುತ್ತಿದೆ. ಮೂಲ ದ್ರಾವಿಡ ಭಾಷೆಯ ಅನೇಕ ಲಕ್ಷಣಗಳನ್ನು ಉಳಿಸಿಕೊಂಡು ಬಂದುದರಿಂದ ಈ ಭಾಷೆಯ ವಿಶ್ಲೇಷಣೆ ದ್ರಾವಿಡಭಾಷೆಗಳ ತೌಲನಿಕ ಅಧ್ಯಯನ ಹಾಗೂ ಮೂಲರೂಪದ ಪುನರ್ನಿರ್ಮಾಣಕ್ಕೆ ಅಮೂಲ್ಯ ಕಾಣಿಕೆಗಳನ್ನು ಕೊಡಬಲ್ಲುದು ಎಂದು ಭಾಷಾವಿಜ್ಞಾನಿಗಳು ಹೇಳುತ್ತಿದ್ದಾರೆ.

ನಾಗಮಂಡಲ – ಭೂತಾರಾಧನೆ ಮುಂತಾದ ಧಾರ್ಮಿಕ ಆಚರಣೆಗಳು, ಯಕ್ಷಗಾನ, ತಾಳಮದ್ದಳೆ ಮುಂತಾದ ರಂಗಪ್ರಭೇದಗಳು, ಆಟಿಕಳಂಜಿ, ಮಾದಿರ ಮುಂತಾದ ಜನಪದ ಕುಣಿತಗಳು, ಪಾಡ್ದನ, ಓಬೇಲೆ ಹಾಡು, ಕವಿತೆ ಮುಂತಾದ ಗೇಯಸಂಪ್ರದಾಯಗಳು, ಕಂಬಳ, ಕೋಳಿ ಅಂಕ ಮುಂತಾದ ಜನಪದ ವಿನೋದಗಳು, ಪಲ್ಲೆ ಪತ್ತುನಿ, ಪೊಕ್ಕು ಗೊಬ್ಬು, ಕಲ್ಲಾಟ ಮುಂತಾದ ಆಟಕ್ರೀಡೆಗಳು, ಅಳಿಯ ಸಂತಾನಕಟ್ಟು ಮುಂತಾದ ಸಾಮಾಜಿಕ ಸಂಸ್ಥೆಗಳು, ವಿಶಿಷ್ಟ ಬೇಸಾಯ, ಮೀನುಗಾರಿಕೆ, ಬೇಟೆ ಇತ್ಯಾದಿಗಳ ಸಂಪ್ರದಾಯಗಳು – ಹೀಗೆ ಹತ್ತು ಹಲವಾರು ವೈಶಿಷ್ಟ್ಯಗಳಿಂದ ಕೂಡಿದ ತುಳು ಸಂಸ್ಕೃತಿಯ ಸತ್ವ ಈ ಭಾಷೆಯಲ್ಲಿ ಹಾಗೂ ಅದರಲ್ಲಿನ ಜನಪದ ಸಾಹಿತ್ಯದಲ್ಲಿ ಅಡಕವಾಗಿದೆ. ಕರಾವಳಿ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದರೂ ಈ ಜನಾಂಗ ಅಖಿಲ ಕರ್ನಾಟಕ ಸಂಸ್ಕೃತಿಗೂ, ಭಾರತೀಯ ಸಂಸ್ಕೃತಿಯ ಸಮಗ್ರತೆಗೂ ತನ್ನದೇ ಆದ ವಿಶಿಷ್ಟ ಕಾಣಿಕೆಗಳನ್ನು ಕೊಟ್ಟಿರುವುದರಿಂದ ಅದು ಅಧ್ಯಯನ ಯೋಗ್ಯವಾಗಿದೆ.

ತುಳುನಾಡಿನ ಜನತೆ ಈಗ ತಾನೆ ಎಚ್ಚೆತ್ತು ತನ್ನ ಭಾಷೆ ಹಾಗೂ ಸಂಸ್ಕೃತಿಗಳ ಗತವೈಭವವನ್ನು ನೆನೆಸುತ್ತಾ ಅದರ ಪುನರುಜ್ಜೀವನಕ್ಕಾಗಿ ಪ್ರಯತ್ನಿಸತೊಡಗಿದೆ. ತುಳುವಿನಲ್ಲಿ ಶಿಷ್ಟಸಾಹಿತ್ಯದ ರಚನೆ, ಸಾಮೂಹಿಕ ಸಂಪರ್ಕ ಮಾಧ್ಯಮಗಳಲ್ಲಿ ತುಳುವಿನ ಬಳಕೆ, ವಿದ್ಯಾಕ್ಷೇತ್ರದಲ್ಲಿ ಅದಕ್ಕೆ ಸ್ಥಾನಮಾನ: ಪ್ರಾಚೀನ ಕಲೆ, ವಿನೋದ, ಆಚರಣೆ ಮುಂತಾದವುಗಳ ದಾಖಲೆ, ಪ್ರಚಾರ, ಪ್ರೋತ್ಸಾಹ ಹಾಗೂ ಅವುಗಳ ಬಗ್ಗೆ ಸಂಶೋಧನೆ ಮುಂತಾದವುಗಳ ಕಡೆ ಜನತೆಯ ಗಮನ ಸೆಳೆದಿದೆ. ತುಳುವಿನ ಈ ಪುನರುಜ್ಜೀವನದ ಸಂದರ್ಭದಲ್ಲಿ ಸಂಸ್ಕೃತಿಯ ಪರಿಚಯ ಹಾಗೂ ಅಧ್ಯಯನ – ಸಂಶೋಧನೆಗಳಿಗೆ ಆಕರ ಗ್ರಂಥವಾಗಬಲ್ಲಂತಹ ಒಂದು ಸರ್ವಸಂಗ್ರಾಹಕ ನಿಘಂಟಿನ ಅವಶ್ಯಕತೆಯಿದೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಜಗತ್ತಿನ ಪ್ರಮುಖ ಸಾಹಿತ್ಯಿಕ ಭಾಷೆಗಳಲ್ಲಿ ಪ್ರಕಟವಾದ ನಿಘಂಟುಗಳೆಲ್ಲ ಸಾಹಿತ್ಯ ಕೃತಿಗಳನ್ನು ಆಯ್ದುಕೊಂಡು ಅವುಗಳಿಂದ ಪದ ಶೇಖರಣೆ ಮಾಡಿ ರಚಿಸಿದವುಗಳು. ಹೀಗೆ ಶೇಖರಣೆ ಮಾಡಿದ ಪದರಾಶಿಗೆ ಪೂರಕವಾಗಿ ಮಾತ್ರ ಕೆಲವೊಮ್ಮೆ ಆಡುನುಡಿಯಿಂದ ಕೆಲವು ಮಾಹಿತಿಗಳನ್ನು ಸಂಗ್ರಹಿಸಿದ್ದು ಅಲ್ಲಲ್ಲಿ ಕಂಡು ಬರುತ್ತದೆ. ಸಾಹಿತ್ಯ ಭಂಡಾರದ ರಚನೆಯಾಗದ ಆಡುಭಾಷೆಗಳಿಗಾಗಿ ಪ್ರಕಟವಾದ ನಿಘಂಟುಗಳೆಂದರೆ ಭಾಷಾ ಶಾಸ್ತ್ರಜ್ಞರು ತಮ್ಮ ಭಾಷಾ ವೈಜ್ಞಾನಿಕ ವಿಶ್ಲೇಷಣೆಗಾಗಿ ಸಂಗ್ರಹಿಸಿದ ಪದಗಳ ಪಟ್ಟಿ ಅಥವಾ ಕ್ರೈಸ್ತ ಮಿಶನರಿಗಳು ಹಾಗೂ ಕೆಲವು ಸಾಮಾಜಿಕ ಶೈಕ್ಷಣಿಕ ಸಂಸ್ಥೆಗಳು ರಚಿಸಿದ ಚಿಕ್ಕಪುಟ್ಟ ಪದಕೋಶಗಳು. ಇವು ಅಂಥಾ

ಆಡುಭಾಷೆಗಳಲ್ಲಿ ನಿತ್ಯಜೀವನದಲ್ಲಿ ಉಪಯೋಗಿಸುವ ಆಧಾರಭೂತ ಶಬ್ದಾವಳಿ (ಬೇಸಿಕ್ ವೊಕಾಬ್ಯುಲರಿ)ಗಳಿಗೆ ಮಾತ್ರ ಸೀಮಿತವಾಗಿದ್ದು ಆ ಭಾಷೆಯನ್ನಾಡುವ ಜನಾಂಗ ತಮ್ಮ ವಿವಿಧ ವೃತ್ತಿ ಕಸುಬುಗಳ ಸಂದರ್ಭದಲ್ಲಿಯಾಗಲಿ, ಸಾಮಾಜಿಕ ಧಾರ್ಮಿಕ ಆಚರಣೆಗಳಲ್ಲಿಯಾಗಲಿ, ಕಲಾ ವಿನೋದಾತ್ಮಕ ಸನ್ನಿವೇಶಗಳಲ್ಲಿಯಾಗಲಿ ಉಪಯೋಗಿಸುವ ಸಮಗ್ರ ಶಬ್ದ ಸಂಪತ್ತನ್ನು ಸಂಪೂರ್ಣವಾಗಿ ಸೆರೆಹಿಡಿದು ವಿಶ್ಲೇಷಿಸುವ ಪ್ರಯತ್ನ ಮಾಡಲಿಲ್ಲ.

ತುಳು ಭಾಷೆಗೂ ಕ್ರೈಸ್ತ ಮಿಶನರಿಗಳು ನೂರು ವರ್ಷಗಳ ಹಿಂದೆಯೇ ನಿಘಂಟನ್ನು ರಚಿಸಿದ್ದರು. ಆ ಕಾಲದ ಸೀಮಿತ ಅನುಕೂಲತೆಗಳ ಆಧಾರದಿಂದ ತುಳುಭಾಷೆಯ 19.000 ಶಬ್ದಗಳನ್ನು ಕಲೆಹಾಕಿ ಆಂಗ್ಲಭಾಷೆಯಲ್ಲಿ ಅರ್ಥ ವಿಶ್ಲೇಷಣೆ ಮಾಡಿ 1886ರಲ್ಲಿ ರೆವರೆಂಡ್ ಎ ಮ್ಯಾನರ್ ಅವರು ತುಳು–ಇಂಗ್ಲಿಷ್ ಶಬ್ದಕೋಶವೊಂದನ್ನು ಪ್ರಕಟಿಸಿದರು. ನಿಷ್ಠಾವಂತ ಜರ್ಮನ್ ಮಿಶನರಿಗಳ ಭಾಷಾಪ್ರೇಮಕ್ಕೆ ಇದೊಂದು ಜ್ವಲಂತ ಉದಾಹರಣೆ. ಭಾಷಾ ವೈಜ್ಞಾನಿಕ ಸಂಶೋಧನ ಕ್ರಮಗಳು ರೂಪುಗೊಳ್ಳುವುದಕ್ಕಿಂತ ಮುಂಚೆಯೇ ಇಂತಹ ಒಂದು ಉತ್ತಮ ಶಬ್ದಕೋಶದ ರಚನೆ ಮಾಡಿದ್ದು ಒಂದು ಮಹತ್ಸಾಧನೆಯೇ ಸರಿ. ಆದರೆ ತುಳು ಭಾಷೆಯ ನವಜಾಗೃತಿಯ ಕಾಲದಲ್ಲಿ ನಮಗೆ ಆ ಶಬ್ದಕೋಶಕ್ಕಿಂತಲೂ ಹೆಚ್ಚು ಸಂಪೂರ್ಣವಾದ, ವಿಸ್ತಾರವಾದ ಹಾಗೂ ಸರ್ವ ಸಂಗ್ರಾಹಕವಾದ ನಿಘಂಟಿನ ಆವಶ್ಯಕತೆಯಿದೆ. ಕಳೆದ ಶತಮಾನದಲ್ಲಿ ರಚಿಸಿದ ಆ ಶಬ್ದಕೋಶದಲ್ಲಿ ಉಪಭಾಷೆಗಳಲ್ಲಿ ಕಂಡುಬರುವ ತುಳು ಪದಗಳ ರೂಪಭೇದಗಳಾಗಲಿ, ಪರ್ಯಾಯ ಪದಗಳಾಗಲಿ, ಕನ್ನಡದಲ್ಲಿ ಅರ್ಥ ವಿಶ್ಲೇಷಣೆಯಾಗಲಿ ಇತರ ದ್ರಾವಿಡ ಜ್ಞಾತಿಪದಗಳಾಗಲಿ, ಅರ್ಥನಿರೂಪಣೆಗೆ ಸಹಾಯಕವಾಗುವ ಗಾದೆಗಳಾಗಲಿ ಉಲ್ಲೇಖಿಸಲ್ಪಟ್ಟಿಲ್ಲ. ಸಮಾಸಪದಗಳೂ ಸಾಧಿತ ಪದಗಳೂ ಕೆಲವೆಡೆ ಕಂಡುಬಂದರೂ ಅವು ಸಾಕಷ್ಟು ಸಂಖ್ಯೆಯಲ್ಲಿಲ್ಲ. ವಿವಿಧ ವೃತ್ತಿ ಕಸುಬುಗಳು, ಹಬ್ಬಹರಿದಿನಗಳು, ಸಾಮಾಜಿಕ ಧಾರ್ಮಿಕ ಆಚರಣೆಗಳು, ಕಲಾವಿನೋದಗಳು ಮುಂತಾದವುಗಳಿಗೆ ಸಂಬಂಧಿಸಿದ ತಾಂತ್ರಿಕ ಪದಗಳು ಅದರಲ್ಲಿಲ್ಲ. ಮದರಾಸು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಾದ ಪ್ರೊ. ಎಂ. ಮರಿಯಪ್ಪ ಭಟ್ಟ ಮತ್ತು ಡಾ. ಶಂಕರ ಕೆದಿಲಾಯ ಅವರುಗಳು ಮ್ಯಾನರ್ ಪ್ರಕಟಿಸಿದ ಪದಕೋಶದಿಂದ ಈಗ ಪ್ರಚಾರದಲ್ಲಿಲ್ಲದ ವಿಷ್ಟೋ ಸಂಸ್ಕೃತ ಪದಗಳನ್ನು ತೆಗೆದುಹಾಕಿ ಅದನ್ನು ಸರಳೀಕರಿಸಿ ಪುತ್ತೂರು ಪ್ರದೇಶದಲ್ಲಿ ಸಂಪಾದಕರು ಕಂಡು ಕೇಳಿದ ಕೆಲವು ಶಬ್ದಗಳನ್ನೂ ಸೇರಿಸಿ ಒಟ್ಟು 8000 ಪದಗಳ ಒಂದು ಕಿರು ಕೋಶವನ್ನು ಪ್ರಕಟಿಸಿದರು. ಆದರೆ ತುಳುವಿನ ಆಡುನುಡಿಗಳ ಬಗ್ಗೆ ಜಿಲ್ಲೆಯಾದ್ಯಂತ ಸರ್ವೇಕ್ಷಣೆ ನಡೆಸಿ ತುಳುವಿನ ಅಪಾರ ಶಬ್ದಸಂಪತ್ತಿನ ಸಂಗ್ರಹ ಮಾಡುವ ಅವಕಾಶ ಹಾಗೂ ಸೌಲಭ್ಯ ಅವರಿಗೆ ದೊರೆಯಲಿಲ್ಲ.

ಮೇಲೆ ಸೂಚಿಸಿದ ಎಲ್ಲ ಅಂಶಗಳನ್ನೊಳಗೊಂಡು ತುಳು ಭಾಷೆ. ಸಂಸ್ಕೃತಿ ಹಾಗೂ ಜಾನಪದದ ಸಮಗ್ರ ಮಾಹಿತಿಗಳನ್ನೊಳಗೊಂಡ ಸಂಸ್ಕೃತಿಕೋಶವಾಗಬಲ್ಲ ಒಂದು ಸಮಗ್ರ ನಿಘಂಟನ್ನು ರಚಿಸುವುದೇ ಈ ಯೋಜನೆಯ ಉದ್ದೇಶ. ಈ ವಿವಿಧೋದ್ದೇಶ ಯೋಜನೆಗಾಗಿ ತುಳುನಾಡಿನ ವಿವಿಧ ಪ್ರದೇಶಗಳಿಂದ ಹಾಗೂ ವಿವಿಧ ಸಾಮಾಜಿಕ ವರ್ಗದವರಿಂದ ನಿತ್ಯಜೀವನದಲ್ಲಿ ಬಳಕೆಯಲ್ಲಿರುವ ಆಧಾರಭೂತ ಶಬ್ದಾವಳಿ (ಬೇಸಿಕ್ ವೊಕಾಬ್ಯುಲರಿ)ಯ ಮಾತುಗಳನ್ನೂ, ಬೇಸಾಯ, ಮೀನುಗಾರಿಕೆ, ಬೇಟೆ, ಕುಶಲಕೈಗಾರಿಕೆ, ವೃತ್ತಿಕಸುಬುಗಳ ಸನ್ನಿವೇಶಗಳಲ್ಲಿ ಉಪಯೋಗಿಸುವ ತಾಂತ್ರಿಕ ಪದಗಳನ್ನೂ, ಸಾಮಾಜಿಕ ಧಾರ್ಮಿಕ ಆಚರಣೆಗಳಲ್ಲಿ ಬಳಸುವ ಸಾಂಸ್ಕೃತಿಕ ಪದಗಳನ್ನೂ, ಭೂತಾರಾಧನೆ, ಕೋಲ, ಕಂಬಳ, ಕೋಳಿ ಅಂಕವೇ ಮೊದಲಾದ ಧಾರ್ಮಿಕ ಹಾಗೂ ವಿನೋದಾತ್ಮಕ ಸನ್ನಿವೇಶಗಳಲ್ಲಿ ಕೇಳಿ ಬರುವ ವಿಶಿಷ್ಟ ಶಬ್ದಸಂಪತ್ತನ್ನೂ ಆಯಾ ಪರಿಸರದಲ್ಲಿಯೇ ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿ ಪ್ರತಿಯೊಂದು ಪದಕ್ಕೂ ಬೇರೆ ಬೇರೆ ಪ್ರದೇಶ ಹಾಗೂ ಬೇರೆ ಬೇರೆ ವರ್ಗದವರಲ್ಲಿ ಬಳಕೆಯಲ್ಲಿರುವ ರೂಪಭೇದ, ಧ್ವನಿಭೇದಗಳನ್ನೂ ಗುರುತಿಸಿ ಅವುಗಳನ್ನು ಕನ್ನಡ ಲಿಪಿಯಲ್ಲಿಯೂ ರೋಮನ್ ಲಿಪಿಯಲ್ಲಿಯೂ ಉಲ್ಲೇಖಿಸಿ ಅರ್ಥಭೇದಗಳನ್ನೂ ಅವುಗಳಿಂದ ಸಾಧಿತವಾದ ಸಮಾಸಪದಗಳನ್ನೂ ನುಡಿಗಟ್ಟುಗಳನ್ನೂ ನಮೂದಿಸಿ ಅವುಗಳಿಗೆ ಸಂಬಂಧಿಸಿದ ಗಾದೆಗಳನ್ನೂ ಬರೆದು ತಮಿಳು, ಮಲಯಾಳ, ಕನ್ನಡ ಮುಂತಾದ ಸೋದರಭಾಷೆಗಳಲ್ಲಿ ಕಂಡುಬರುವ ಅವುಗಳ ಜ್ಞಾತಿಪದಗಳನ್ನೂ ಕೊಡುವುದು ಈ ಬೃಹತ್ ಯೋಜನೆಯ ಉದ್ದೇಶ. ಭಾರತದ ಇನ್ನಾವ ಭಾಷೆಗಳಿಗೂ ಸರ್ವೇಕ್ಷಣೆ ಹಾಗೂ ಕ್ಷೇತ್ರಕಾರ್ಯಗಳ ಆಧಾರದ ಮೇಲೆ ನಿಘಂಟಿನ ರಚನೆಯಾಗಲಿಲ್ಲ ಎಂಬುದು ವಿದ್ವಾಂಸರಿಗೆ ತಿಳಿದ ವಿಚಾರ. ಹೀಗಾಗಿ ಈ ಪ್ರಯತ್ನ ಇತರ ಭಾಷೆಗಳ ಸಂಶೋಧಕರಿಗೆ ಹಾಗೂ ನಿಘಂಟುಕಾರರಿಗೆ ಮಾರ್ಗದರ್ಶಕವಾಗಬಹುದು.

ಇಂತಹ ನಿಘಂಟು ಸಾಮಾನ್ಯ ಜನತೆಗೆ ತುಳುವಿನ ಶಬ್ದಭಂಡಾರದ ವ್ಯಾಪ್ತಿಯನ್ನೂ ಅವುಗಳ ಪ್ರಯೋಗದ ರೀತಿಯನ್ನೂ ತಿಳಿಯಪಡಿಸುವುದಲ್ಲದೆ ಸಂಶೋಧಕರಿಗೆ ಪದಗಳ ಉಪಭಾಷಾ ವೈಶಿಷ್ಟ್ಯಗಳನ್ನೂ ಜ್ಞಾತಿಪದಗಳನ್ನೂ ತಿಳಿಯಪಡಿಸಿ ತುಳು ಭಾಷೆಯ ವಿಶ್ಲೇಷಣೆ ಹಾಗೂ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನಕ್ಕೆ ಸಹಾಯ ಮಾಡಬಹುದು. ತುಳುಭಾಷೆ ಸಂಪರ್ಕ ಮಾಧ್ಯಮಗಳಲ್ಲಿ ಹಾಗೂ ಸಾಹಿತ್ಯ ರಚನೆಯಲ್ಲಿ ಬಳಕೆಯಾಗುತ್ತಿರುವ ಈ ಸಂದರ್ಭದಲ್ಲಿ ವಿವಿಧ ಪ್ರದೇಶಗಳ ಹಾಗೂ ಸಾಮಾಜಿಕ ವರ್ಗದವರ ಆಡುನುಡಿಗಳಲ್ಲಿ ಬಳಕೆಯಲ್ಲಿರುವ

ಶಬ್ದಗಳ ಪರಿಶೀಲನೆಯಿಂದ ತುಳುಭಾಷೆಗೊಂದು ಶಿಷ್ಟರೂಪವನ್ನು ಕಲ್ಪಿಸಿಕೊಳ್ಳುವ ಕಾರ್ಯದಲ್ಲಿಯೂ ಇಂತಹ ನಿಘಂಟಿನ ಪಾತ್ರ ಬಹಳ ಮಹತ್ವದ್ದಾಗಿರುವುದು. ಸಾಮಾಜಿಕ ಧಾರ್ಮಿಕ ಹಾಗೂ ಕಲಾತ್ಮಕ ಸನ್ನಿವೇಶದಲ್ಲಿ ಬಳಕೆಯಾಗುವ ಪದಗಳಿಗೆ ಕೊಡುವ ವಿವರಣೆಗಳಿಂದ ಮಾನವಶಾಸ್ತ್ರದ ಜಿಜ್ಞಾಸುಗಳಿಗೆ ತುಳು ಸಮಾಜದ ಹಾಗೂ ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಅರಿಯುವುದರಲ್ಲಿ ಸಹಕಾರ ನೀಡಬಹುದು.

ಪ್ರೊ|| ಹರಿದಾಸ ಭಟ್ಟರು ಹೇಳುವ ಆಕಸ್ಮಿಕ ಇಲ್ಲಿಯೂ ನಡೆಯಿತು. ತುಳು ಭಾಷೆ ಹಾಗೂ ಸಂಸ್ಕೃತಿಗೆ ಸ್ಪಂದಿಸುವ ಸಹೃದಯ ಶ್ರೀ ಸುಬ್ಬಯ್ಯ ಶೆಟ್ಟಿಯವರು ರಾಜ್ಯದ ವಿದ್ಯಾಮಂತ್ರಿಗಳಾಗಿದ್ದ ಸಮಯವಾದುದರಿಂದ ಈ ಯೋಜನೆಗೆ ಅತಿ ಶೀಘ್ರದಲ್ಲಿಯೇ ಮಂಜೂರಾತಿ ಹಾಗೂ ಅನುದಾನ ದೊರೆಯಿತು. ಗಾಂಧೀಜಯಂತಿಯ ಪುಣ್ಯದಿನವಾದ 2–10–1979ರಂದು ಆಗಿನ ಮಾನ್ಯ ವಿದ್ಯಾಮಂತ್ರಿಗಳಾಗಿದ್ದ ಸುಬ್ಬಯ್ಯ ಶೆಟ್ಟರು ನಿಘಂಟು ಯೋಜನೆಯ ಉದ್ಘಾಟನೆ ಮಾಡಿದರು. ಧರ್ಮಸ್ಥಳ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಂಪನ್ನವಾದ ಉದ್ಘಾಟನಾ ಸಭೆಯಲ್ಲಿ ಶ್ರೀ ಆರೂರು ರಾಮಮೋಹನರಾಯರು ಸ್ವಾಗತ ಭಾಷಣ ಮಾಡಿದರು. ಪ್ರೊ|| ಭಟ್ಟರು ತಾವು ಕೈಗೊಂಡ ಯೋಜನೆಯ ರೂಪುರೇಷೆಗಳನ್ನು ವಿವರಿಸಿ ತಮ್ಮ ಬಹುದಿನದ ಕನಸು ನನಸಾದುದಕ್ಕೆ ಕಾರಣರಾದವರನ್ನು ಕೃತಜ್ಞತೆಯಿಂದ ಸ್ಮರಿಸಿದರು. ಸಚಿವ ಸುಬ್ಬಯ್ಯ ಶೆಟ್ಟಿಯವರು ಲೆಕ್ಕಣಿಕೆ ಹಿಡಿದು ತುಳು ನಿಘಂಟುವಿನ ಆದಿಪದಗಳನ್ನು ಬರೆದು ಎಂದೋ ಆಗಬೇಕಾಗಿದ್ದ ಈ ಕೆಲಸ ಈಗಲಾದರೂ ಪ್ರಾರಂಭವಾದುದಕ್ಕೆ ಹರ್ಷ ವ್ಯಕ್ತಪಡಿಸಿದರು. ಶ್ರೀ ಸೂರ್ಯನಾರಾಯಣ ಅಡಿಗ. ಪ್ರೊ|| ಜವರೇಗೌಡ. ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ, ಶ್ರೀ ಸೇಡಿಯಾಪು ಕೃಷ್ಣಭಟ್ಟ ಇವರುಗಳ ಶುಭಾಶಯ ಹಾಗೂ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಗಡೆಯವರ ಸಹಕಾರದ ಭರವಸೆಯಿಂದ ಪ್ರಾರಂಭವಾದ ಈ ನಿಘಂಟು ರಚನಾಕಾರ್ಯ ಈ ಪ್ರದೇಶದ ಒಂದು ಬೃಹತ್ ಪಂಡಿತಕಾರ್ಯವಾಗಿ ಮುಂದುವರಿಯುತ್ತಿದೆ.

ಪ್ರೊ|| ಭಟ್ಟರು ಪ್ರಾಂಶುಪಾಲ ಹುದ್ದೆಯಿಂದ ನಿವೃತ್ತರಾಗುವ ಮೊದಲೇ ಸಂಶೋಧನ ಕಾರ್ಯಗಳಿಗಾಗಿ 'ನಲಂದ' ಎಂಬ ಮತ್ತೊಂದು ಕಟ್ಟಡವನ್ನು ಕಟ್ಟಿಸಿದರು. ದಿನಾಂಕ 14–8–1980ರಂದು ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಆ ಕಟ್ಟಡವನ್ನು ಉದ್ಘಾಟನೆ ಮಾಡಿದರು. ಅದರ ಒಂದು ಮಹಡಿಯಲ್ಲಿ ತುಳು ನಿಘಂಟು ಯೋಜನೆಯ ಕಾರ್ಯ ನಡೆಯುತ್ತಿದೆ. ಇನ್ನೊಂದು ಮಹಡಿ ಪ್ರಾಚ್ಯವಸ್ತುಸಂಗ್ರಹಾಲಯವಾಗಿದೆ.

ಪ್ರಧಾನ ಸಂಪಾದಕರಾಗಿ ಡಾ|| ಯು.ಪಿ. ಉಪಾಧ್ಯಾಯರೂ. ಸಲಹಾ ಮಂಡಳಿಯ ಸದಸ್ಯರುಗಳಾಗಿ ಪ್ರೊ|| ದೇ. ಜವರೇಗೌಡ, ಶ್ರೀ ಸೇಡಿಯಾಪು ಕೃಷ್ಣ ಭಟ್ಟ. ಶ್ರೀ ಕಯ್ಯಾರ ಕಿಞ್ಞಣ್ಣ ರೈ. ಶ್ರೀ ಏರ್ಯ ಲಕ್ಷ್ಮೀ-ನಾರಾಯಣ ಆಳ್ವ. ಡಾ|| ಬಿ.ಎ. ವಿವೇಕ ರೈ, ಶ್ರೀ ಅಮೃತ ಸೋಮೇಶ್ವರ. ಡಾ|| ಪಿ.ಎಸ್. ಆಚಾರ್ಯ. ಶ್ರೀ ವೆಂಕಟರಾಜ ಪುಣಿಂಚಿತ್ತಾಯ, ಡಾ|| ರಾಮಕೃಷ್ಣ ಶೆಟ್ಟಿ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರು ಇವರುಗಳು ಸಹಕರಿಸುತ್ತಿದ್ದಾರೆ. ಪ್ರೊ|| ಹರಿದಾಸ ಭಟ್ಟರು ಸಲಹಾ ಸಮಿತಿಯ ಅಧ್ಯಕ್ಷರಾಗಿಯೂ. ಯೋಜನೆಯ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಂಪಾದಕರಿಗೆ ಸಹಾಯಕರಾಗಿ ಡಾ|| ಶ್ರೀಮತಿ ಸುಶೀಲಾ ಪಿ. ಉಪಾಧ್ಯಾಯ, ಶ್ರೀ ಕೆ. ಪದ್ಮನಾಭ, ಶ್ರೀ ಪಿ. ವಿಷ್ಣುಭಟ್ಟ. ಶ್ರೀ ಅಶೋಕ ಆಳ್ವ, ಶ್ರೀ ಕೇಶವ ಎಚ್. ಇವರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಕೆಲವು ಕಾಲ ಶ್ರೀ ಎ. ವಿ. ನಾವಡ, ಶ್ರೀ ಕೆ. ವಿಶ್ವನಾಥ ರೈ. ಶ್ರೀ ಜೀವರಾಜ ಶೆಟ್ಟಿ, ಶ್ರೀ ಎ. ಶ್ರೀನಾಥ. ಡಾ|| ಹರಿಕೃಷ್ಣ ಭರಣ್ಯ ಇವರುಗಳೂ ಯೋಜನೆಯಲ್ಲಿ ಸೇವೆ ಸಲ್ಲಿಸಿದ್ದರು. ಶ್ರೀ ಕೆದಂಬಾಡಿ ಜತ್ತಪ್ಪ ರೈ, ಶ್ರೀ ಪಾ.ವೆಂ. ಆಚಾರ್ಯ, ಶ್ರೀ ದೂಮಪ್ಪ ಮಾಸ್ತರ್. ಶ್ರೀ ಪಾಲ್ತಾಡಿ ರಾಮಕೃಷ್ಣ ಆಚಾರ್, ಶ್ರೀ ಅನಂತರಾಂ ಬಂಗಾಡಿ. ಶ್ರೀ ಮಂದಾರ ಕೇಶವ ಭಟ್, ಶ್ರೀ ವಾಮನ ನಂದಾವರ. ಶ್ರೀ ಕೆ. ಚಿನ್ನಪ್ಪ ಗೌಡ ಮುಂತಾದ ವಿದ್ವಾಂಸರುಗಳೂ ಸಲಹೆಗಾರರಾಗಿ ಸಹಕರಿಸುತ್ತಿದ್ದಾರೆ. ಮೊದಲ ಒಂದು ವರ್ಷದಲ್ಲಿ ಸಂಶೋಧಕರ ನೇಮಕ, ತರಬೇತಿ ಕಮ್ಮಟ, ಪ್ರಾಯೋಗಿಕ ಸರ್ವೇಕ್ಷಣೆ ಹಾಗೂ ಉಪಭಾಷಾ ಕ್ಷೇತ್ರಗಳ ನಿರ್ಧಾರ, ಮಾದರಿ ಸಂಚಿಕೆಯ ಪ್ರಕಟಣೆ, ಧ್ಯೇಯ ಧೋರಣೆ ಹಾಗೂ ಕಾರ್ಯವಿಧಾನಗಳ ನಿರ್ಧಾರ ಮುಂತಾದ ಪ್ರಾರಂಭಿಕ ಕಾರ್ಯಗಳು ನಡೆದವು.

ಮುಂದಿನ ನಾಲ್ಕು ವರ್ಷಗಳಲ್ಲಿ ತುಳುನಾಡಿನ ನಲವತ್ತು ಹಳ್ಳಿಗಳಲ್ಲಿ ವಿಸ್ತೃತವಾದ ಕ್ಷೇತ್ರಕಾರ್ಯ ಕೈಗೊಂಡು ವಿವಿಧ ಸಾಮಾಜಿಕ ವರ್ಗದ ಜನರ ಬಾಯ್ದೆರೆಯಿಂದ ಅವರುಗಳ ನಿತ್ಯಜೀವನದಲ್ಲಿ ಪ್ರಯೋಗವಾಗುವ. ವೃತ್ತಿ ಕಸುಬುಗಳ ಕಾರ್ಯಕ್ಷೇತ್ರದಲ್ಲಿ ಬಳಸುವ. ಕಲೆ ವಿನೋದಗಳ ಸಂದರ್ಭದಲ್ಲಿ ಕೇಳಿ ಬರುವ. ಸಾಮಾಜಿಕ ಧಾರ್ಮಿಕ ಆಚರಣೆಗಳಲ್ಲಿ ಉಪಯೋಗಿಸುವ ಪದಗಳನ್ನೂ. ಮಾಹಿತಿಗಳನ್ನೂ ಸಂಗ್ರಹಿಸಲಾಯಿತು. ತುಳುವಿನ ಅಪಾರವಾದ ಜನಪದ ಸಾಹಿತ್ಯದಿಂದ ಮುನ್ನೂರು ಗಂಟೆಗಳಷ್ಟು ಪಾಡ್ದನಗಳನ್ನು ಕ್ಯಾಸೆಟ್ ಟೇಪುಗಳಲ್ಲಿ ಸಂಗ್ರಹಿಸಿ ಅದರ ಲಿಪೀಕರಣ ಮಾಡಿ ವಿಶಿಷ್ಟ ಶಬ್ದಗಳನ್ನೂ ಪ್ರಯೋಗಗಳನ್ನೂ ಸಂಗ್ರಹಿಸಲಾಯಿತು. ಇತ್ತೀಚೆಗಿನ ಒಂದು ಶತಮಾನದಲ್ಲಿ ಮೂಡಿಬಂದ ಸಾಹಿತ್ಯ ಕೃತಿಗಳಿಂದಲೂ ಹದಿನೇಳನೆಯ ಶತಮಾನದಲ್ಲಿ ಬರೆದ 'ಶ್ರೀ ಭಾಗವತೊ' ಎನ್ನುವ ಶಿಷ್ಟ ಸಂಪ್ರದಾಯದ ಸಾಹಿತ್ಯ ಕೃತಿಯಿಂದಲೂ ಪದಗಳನ್ನು ಸಂಗ್ರಹಿಸಲಾಯಿತು.

ಗಾದೆ, ಒಗಟು, ನುಡಿಗಟ್ಟುಗಳ ಶೇಖರಣೆಯೂ ನಡೆದು ಒಟ್ಟು 50.000 ಪದಗಳ ಶೇಖರಣೆಯಾಗಿದೆ. ಈ ಎಲ್ಲ ಕಾರ್ಯಗಳೂ ಅತ್ಯಂತ ವೈಜ್ಞಾನಿಕವಾಗಿ ನಡೆದು ಪ್ರತಿಯೊಂದು ಹಂತದಲ್ಲಿಯೂ ಸಲಹಾಮಂಡಳಿ ಯೋಜನೆಯ ಕಾರ್ಯಕಲಾಪಗಳನ್ನು ವಿಮರ್ಶಿಸಿ ಸಲಹೆ ಸೂಚನೆಗಳನ್ನು ಕೊಡುತ್ತ ಬಂದಿದೆ.

ಮುಂದಿನ ಒಂದು ವರ್ಷದಲ್ಲಿ ಪ್ರಾಯೋಗಿಕವಾಗಿ ಶರೀರದ ಅಂಗಾಂಗಗಳು, ಮನೆ ಮತ್ತು ಮನೆಯ ಉಪಕರಣಗಳು, ರೋಗರುಜಿನಗಳು, ವೃಕ್ಷಸಂಪತ್ತು ಮುಂತಾದವುಗಳಿಗೆ ಸಂಬಂಧಿಸಿದ 2860 ಪದಗಳಿಗೆ ಅರ್ಥ ನಿರ್ಣಯ ಮಾಡಿ ಕರಡುಪ್ರತಿ ತಯಾರಿಸಲಾಯಿತು. ಪದಗಳನ್ನು ಕನ್ನಡ ಹಾಗೂ ರೋಮನ್ ಲಿಪಿಗಳಲ್ಲಿ ಬರೆದು ಉಪಭಾಷಾ ವ್ಯತ್ಯಾಸಗಳನ್ನು ಉಲ್ಲೇಖಿಸಿ ವ್ಯುತ್ಪತ್ತಿ, ವ್ಯಾಕರಣ ವಿಶ್ಲೇಷಣೆ ಮಾಡಿ, ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅರ್ಥಗಳನ್ನು ಕೊಟ್ಟು ದ್ರಾವಿಡ ಮೂಲದ ಪದವಾದರೆ ಇತರ ದ್ರಾವಿಡ ಭಾಷೆಗಳಲ್ಲಿ ಕಂಡುಬರುವ ಜ್ಞಾತಿ ಪದಗಳನ್ನೂ, ಸಂಸ್ಕೃತ, ಅರಾಬಿಕ್, ಪರ್ಶಿಯನ್, ಪೋರ್ಚುಗೀಸ್ ಮೂಲದ ಪದಗಳಿಗೆ ಅವುಗಳ ಮೂಲವನ್ನೂ ಸೂಚಿಸಿ, ಪದಗಳಿಗೆ ಸಂಬಂಧಿಸಿದ ಗಾದೆ, ನುಡಿಗಟ್ಟುಗಳನ್ನೂ ಜನಪದ ಸಾಹಿತ್ಯ ಹಾಗೂ ಲಿಖಿತ ಸಾಹಿತ್ಯದಿಂದ ಉಲ್ಲೇಖಗಳನ್ನೂ ಕೊಟ್ಟು ಅದೇ ಮೂಲಪದದಿಂದ ಸಾಧಿತವಾದ ನಿಷ್ಪನ್ನ ಪದ ಸಮಾಸಗಳನ್ನೂ ಪದಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನೂ ಕೊಡಲಾಯಿತು. ಸಲಹಾ ಸಮಿತಿ ಅದನ್ನು ವಿಮರ್ಶಿಸಿ ಅನುಮೋದಿಸಿತು.

ಎಂಭತ್ತು ಪುಟಗಳ ಮಾದರಿ ಸಂಚಿಕೆಯನ್ನೂ ನಿಘಂಟು ಯೋಜನೆ ನಡೆದು ಬಂದ ದಾರಿ ಎಂಬ ಪುಸ್ತಕವನ್ನು ಯೋಜನೆಯ ಮೊದಲ 5 ವರ್ಷಗಳ ಹಂತದ ಕೊನೆಯಲ್ಲಿ ಪ್ರಕಟಿಸಲಾಯಿತು. ಮಾದರಿ ಸಂಚಿಕೆಯನ್ನು ಪರಿಶೀಲಿಸಿದ ಕರ್ನಾಟಕದ, ಭಾರತದ ಇತರ ಪ್ರದೇಶಗಳ ಹಾಗೂ ವಿದೇಶಗಳ ವಿದ್ವಾಂಸರುಗಳು ಇಷ್ಟು ವ್ಯಾಪಕವಾಗಿ, ವೈಜ್ಞಾನಿಕವಾಗಿ ತಯಾರಿಸಿದ ನಿಘಂಟು ಅತಿ ವಿರಳವೆಂದೂ, ಭಾರತೀಯ ಭಾಷೆಗಳಲ್ಲಿನ ನಿಘಂಟು ರಚನೆಗೆ ಮಾರ್ಗದರ್ಶಕವಾಗಿದೆಯೆಂದೂ, ದ್ರಾವಿಡ ಭಾಷೆಗಳ ಸಂಶೋಧನೆಗೆ ಮಹತ್ತರ ಕೊಡುಗೆಯೆಂದೂ ಅಭಿಪ್ರಾಯಪಟ್ಟಿದ್ದಾರೆ.

ಇತರ ನಿಘಂಟುಗಳೆಲ್ಲ ಲಿಖಿತ ಸಾಹಿತ್ಯದ ಆಧಾರದ ಮೇಲೆ ಮಾತ್ರ ರಚಿತವಾಗಿದೆಯೆಂದೂ ಈ ನಿಘಂಟು ಲಿಖಿತ ಸಾಹಿತ್ಯ ಜನಪದ ಸಾಹಿತ್ಯ ಹಾಗೂ ಬಾಯ್ದೆರೆಯ ಪರಂಪರೆಯ ಮೂಲಕ ಹರಿದುಬಂದ ಆಡುನುಡಿಗಳ ಸಂಪತ್ತಿನಿಂದ ಅತಿ ಸಮೃದ್ಧವೂ ಸಂಪೂರ್ಣವೂ ಆಗಿದ್ದು ಈ ಭಾಗದ ಸಂಸ್ಕೃತಿಯ ಅಧ್ಯಯನಕ್ಕೆ ಆಕರ ಗ್ರಂಥವಾಗುತ್ತಿದೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ನಿಘಂಟಿನ ಎರಡನೆಯ ಹಂತ ಕರ್ನಾಟಕ ಸರಕಾರದ ಉದಾರವಾದ ಅನುದಾನದಿಂದ 1985ರಲ್ಲಿ ಪ್ರಾರಂಭವಾಗಿ ಪಟ್ಟಿಕೆಗಳನ್ನು ಅಕಾರಾದಿಯಾಗಿ ಜೋಡಿಸಿ ಮುದ್ರಣಕ್ಕನುಗುಣವಾದ ಕರಡುಪ್ರತಿ ತಯಾರಿಸುವ ಕಾರ್ಯ ಮುಂದುವರಿಯಬೇಕೆಂದು ತೀರ್ಮಾನಿಸಲಾಯಿತು. ಅದಕ್ಕನುಸಾರವಾಗಿ ಪಟ್ಟಿಕೆಗಳ ಜೋಡಣೆ, ಪ್ರಾಚೀನ ಸಾಹಿತ್ಯದಿಂದ ಉದ್ಧರಣೆಗಳ ಸಂಗ್ರಹ ಮುಂತಾದ ಕಾರ್ಯಗಳೊಂದಿಗೆ ಕರಡುಪ್ರತಿ ತಯಾರಿಕೆಯ ಕೆಲಸ ನಡೆಯುತ್ತಿದೆ. ಈ ತನಕ ನಾಲ್ಕುನೂರು ಪುಟಗಳಷ್ಟು ಕರಡುಪ್ರತಿಯಲ್ಲಿ 2383 ನಮೂದುಗಳ ಅರ್ಥ ವಿಶ್ಲೇಷಣೆ ನಡೆದು ಸಂಪಾದಕೀಯ ಸಲಹಾ ಮಂಡಳಿ ಅವುಗಳನ್ನು ಪರಾಮರ್ಶಿಸಿ ಮಂಜೂರು ಮಾಡಿದೆ.

ಒಟ್ಟು ನಿಘಂಟು ಗಾತ್ರದಲ್ಲಿ ಸುಮಾರು ಎರಡೂವರೆ ಸಾವಿರ ಪುಟಗಳಷ್ಟಾಗಬಹುದು ಎಂದು ಅಂದಾಜು ಮಾಡಲಾಗಿದೆ. ಸುಮಾರು 500–600 ಪುಟಗಳ ಮೊದಲ ಸಂಪುಟವನ್ನು 1987ರಲ್ಲಿ ಪ್ರಕಟಿಸಬೇಕೆಂದು ಸಂಪಾದಕ ವರ್ಗದವರು ಶ್ರಮಿಸುತ್ತಿದ್ದಾರೆ. ಸುಮಾರು 1990–91ರಲ್ಲಿ ನಿಘಂಟು ಸಂಪೂರ್ಣಗೊಳ್ಳಬಹುದೆಂಬ ನಿರೀಕ್ಷೆಯಿದೆ. ಸಂಪೂರ್ಣವಾದಾಗ ಅದು ಪ್ರೊ॥ ಹರಿದಾಸ ಭಟ್ಟರ ಶೈಕ್ಷಣಿಕ ಕ್ಷೇತ್ರದ ದುಡಿಮೆಯ ಅತಿ ಮಹತ್ತರವಾದ ಕೊಡುಗೆಯಾಗಲಿದೆ. ಡಾ॥ ಹಾ.ಮಾ. ನಾಯಕರು ಪ್ರಜಾಮತ ಪತ್ರಿಕೆಯಲ್ಲಿ ಬರೆದಂತೆ 'ಈ ನಿಘಂಟು ಪ್ರಕಟವಾದಾಗ ಜಗತ್ತಿನಾದ್ಯಂತ ಇರುವ ಭಾಷಾ ಆಸಕ್ತರಿಗೆಲ್ಲ ಒಂದು ಹೊಸ ಪ್ರಪಂಚದ ಬಾಗಿಲು ತೆರೆದಂತಾಗುತ್ತದೆ'. ಪ್ರೊ॥ ಎಂ.ಬಿ. ಎಮಿನೋ ಅವರು ಬರೆದಂತೆ ಅವರು ಮುಂದಿನ ಪೀಳಿಗೆಯ ಕೃತಜ್ಞತೆಗೆ ಪಾತ್ರರಾಗುತ್ತಾರೆ. ಪ್ರೊ॥ ಟಿ. ಬರೋ ಅವರ ಅಭಿಪ್ರಾಯದಂತೆ ಇದು ದ್ರಾವಿಡ ಭಾಷಾ ವಿಜ್ಞಾನಕ್ಕೆ ಅಮೂಲ್ಯ ಕೊಡುಗೆಯಾಗುತ್ತದೆ. ಡಾ॥ ಚಿದಾನಂದ ಮೂರ್ತಿಯವರು ಅಭಿಪ್ರಾಯಪಟ್ಟಂತೆ ಇದಕ್ಕೆ ಅಂತಾರಾಷ್ಟ್ರೀಯ ಮಾನ್ಯತೆ ದೊರಕುತ್ತದೆ.

ನಿಘಂಟು ಯೋಜನೆಗಾಗಿ ಜನಪದ ಸಾಹಿತ್ಯದಿಂದ ಪದಸಂಗ್ರಹ ಮಾಡುವ ಸಂದರ್ಭದಲ್ಲಿ ಸುಮಾರು 300 ಗಂಟೆಗಳಷ್ಟು ಕಾಲದ ಪಾಡ್ದನ ಕಾವ್ಯಗಳ ಧ್ವನಿಮುದ್ರಣವೂ ನಡೆದಿದೆ. ಇದು ಈ ಕೇಂದ್ರದ ಅಮೂಲ್ಯ ಸಂಗ್ರಹವಾಗಿದ್ದು ಮುಂದೆ ತುಳು ಜನಪದ ಸಾಹಿತ್ಯ ಹಾಗೂ ಸಂಸ್ಕೃತಿಯ ಅಧ್ಯಯನಕ್ಕೆ ಒಳ್ಳೆಯ ಆಕರವಾಗಲಿದೆ. ಸುಮಾರು 25.000 ಪಂಕ್ತಿಗಳಲ್ಲಿ ಕೆಲವು ಪಾಡ್ದನಗಳ ಲಿಪೀಕರಣವಾಗಿದ್ದು ಇನ್ನೂ ಮುಕ್ಕಾಲು ಭಾಗ ಪಾಡ್ದನಗಳ ಲಿಪೀಕರಣವಾಗಬೇಕಾಗಿದೆ. ನಿಘಂಟಿನ ಕೆಲಸ ಮುಗಿದ ಮೇಲೆ ಈ ಪಾಡ್ದನಗಳ ಲಿಪೀಕರಣ,

ವಿಶ್ಲೇಷಣೆ ಹಾಗೂ ಪ್ರಕಟಣೆಯ ಕಾರ್ಯ ನಡೆಯಬೇಕಾಗಿದೆ. ಮೊದಲು ಪ್ರಾಯೋಗಿಕವಾಗಿ 'ಪಾಡ್ದನಾವಳಿ' ಎಂಬ ಪುಸ್ತಕದಲ್ಲಿ ಆರಿಸಿದ ಪಾಡ್ದನ ಭಾಗಗಳನ್ನು ಅನುವಾದ ವಿವರಣೆಗಳ ಸಹಿತ ಹೊರತರಬೇಕೆಂದು ಯೋಜನೆಯಿದೆ.

ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಸ್ಥಾಪನೆಯಾದ ಮೇಲೆ ಸಿರಿಯ ಯೋಜನೆಯ ಕಾರ್ಯಕರ್ತರೂ ಜನಪದ ಅಧ್ಯಯನ ಕೇಂದ್ರದ ಕಾರ್ಯಕರ್ತರೂ ಒಟ್ಟಾಗಿ ಈ ದಿಶೆಯಲ್ಲಿ ಇನ್ನಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ.

ಸಿರಿವಂತಿಕೆಯ ಬದುಕಿನ ಹರಿಕಾರ

— ಎನ್. ತಿರುಮಲೇಶ್ವರ ಭಟ್ಟ

ಬದುಕಿನ ಸಿರಿವಂತಿಕೆಯು ಅರ್ಥಸಂಪನ್ನತೆಯನ್ನು ಆಶ್ರಯಿಸುವುದಾದರೂ ಹಣವು ಮಡುಗಟ್ಟಿದ್ದರಿಂದಲೇ ವ್ಯಕ್ತಿಯಾಗಲೀ, ಸಮಾಜವಾಗಲೀ ಸಂಪನ್ನವಾಗುವುದಿಲ್ಲ. ಆರ್ಥಿಕ ಸಂಪನ್ನತೆಯಿಂದ ದೈಹಿಕ, ಲೌಕಿಕ ವಾಂಛೆಗಳ ತೃಪ್ತಿಯಾಗುವುದೆಂದು ತಿಳಿದುಕೊಂಡರೂ ಅದರಿಂದ ಬದುಕಿನ ಸಿರಿವಂತಿಕೆ ಪ್ರಕಟವಾಗುವುದಿಲ್ಲ. ಮನುಷ್ಯನ ದೈಹಿಕ ಬೆಳವಣಿಗೆ ಆದರೆ ಸಾಲದು. ಅವನಲ್ಲಿ ಬುದ್ಧಿಯ ಬೆಳವಣಿಗೆ, ಹೃದಯವಂತಿಕೆಯ ವಿಕಾಸವಾಗುವುದು ಜೀವನವು ನಿಜವಾದ ಅರ್ಥದಲ್ಲಿ ಸಿರಿವಂತಿಕೆಯನ್ನು ಪಡೆಯುವ ಲಕ್ಷಣ. ಇಂದಿನ ದಿನಗಳಲ್ಲಿ ಶಿಕ್ಷಣವೆಂದರೆ ಉದ್ಯೋಗಕ್ಕಾಗಿ ಯುವಕರನ್ನು ತರಬೇತಿಗೊಳಿಸುವುದೆಂಬ ಸಂಕುಚಿತವಾದ ಪರಿಮಿತಿಯಲ್ಲಿ ನಾವು ಹೆಚ್ಚು ಹೆಚ್ಚಾಗಿ ವ್ಯವಹರಿಸುತ್ತಿರುವಲ್ಲಿ ಬದುಕನ್ನು ಶ್ರೀಮಂತಗೊಳಿಸುವಂತಹ ಶಿಕ್ಷಣವನ್ನು ಪಸರಿಸುವುದನ್ನೇ ತನ್ನ ಧ್ಯೇಯವಾಕ್ಯವನ್ನಾಗಿ ಸ್ವೀಕರಿಸಿ, ಅದಕ್ಕಾಗಿ ತನ್ನ ಜೀವನವನ್ನೇ ತೇಯುತ್ತಿರುವ ಧೀಮಂತಿಕೆಯ ವ್ಯಕ್ತಿ ಪ್ರೊ. ಕು. ಶಿ. ಹರಿದಾಸ ಭಟ್ಟರು. ತಾನು ಬೆಳೆದು ಬಂದ ಪರಿಸರದ ಋಣವನ್ನು ದ್ವಿ – ತ್ರಿಗುಣ ಕ್ರಮದಲ್ಲಿ ತೀರಿಸುತ್ತಿರುವ ಬಗೆ ಎಲ್ಲರ ಬೆಗೆಯನ್ನೂ ತುಂಬುವ ವಿಚಾರ. ಉಡುಪಿಯ ಮಹಾತ್ಮಾಗಾಂಧಿ ಸ್ಮಾರಕ ಕಾಲೇಜನ್ನು ಒಂದು ಪುಟ್ಟ ವಿಶ್ವವಿದ್ಯಾನಿಲಯದ ಹಂತಕ್ಕೆ ಏರಿಸಿದ ಕೀರ್ತಿಯಲ್ಲಿ ಅದರ ಸ್ಥಾಪಕ ಡಾ. ತೋನ್ಸೆ ಮಾಧವ ಪೈಗಳದ್ದು ಒಂದು ಪಾಲು. ಕಾಲೇಜಿನ ಭೌತಿಕ ಸಂಪನ್ನತೆಗೆ ಅಸ್ತಿವಾರ. ಸೌಧಗಳೆರಡನ್ನೂ ಒದಗಿಸಿದವರು ಅವರು. ಆದರೆ ಅದರ ಭೌತಿಕ ಸಂಪನ್ನತೆಗೆ ಸಂವಾದಿಯಾದ, ಅದಕ್ಕೂ ಮಿಗಿಲಾದ ಶೈಕ್ಷಣಿಕ ಶ್ರೀಮಂತಿಕೆಯನ್ನು ನೆಲೆಗೊಳಿಸಿದವರಲ್ಲಿ ಪ್ರೊ. ಹರಿದಾಸ ಭಟ್ಟರು ಅಗ್ರಗಣ್ಯರು. ಈ ಶೈಕ್ಷಣಿಕ ಶ್ರೀಮಂತಿಕೆಯ ಭದ್ರಬುನಾದಿಯನ್ನು ಕಾಲೇಜಿನ ಮೊದಲ ಪ್ರಿನ್ಸಿಪಾಲ್ ಪ್ರೊ. ಎಚ್. ಸುಂದರರಾಯರು ಆದಾಗಲೇ ನಿರ್ಮಿಸಿದ್ದರು. ಅದರ ಮೇಲೆ ಸೌಧ, ಗೋಪುರ, ಕಳಶಗಳನ್ನು ನಿರ್ಮಾಣ ಮಾಡಿದ 'ಕುಶಲ ಶಿಲ್ಪಿ' ಕು. ಶಿ. ಅವರು. ಅಲಂಕಾರಿಕವಾಗಿ ಅಷ್ಟೇ ಅಲ್ಲ ಅಕ್ಷರಶಃ ಇಲ್ಲಿನ ವಾಸ್ತು ಸಂಕೀರ್ಣದ ನಿರ್ಮಾಣ ಮಾಡಿದ ವಿಶ್ವಕರ್ಮ ಅವರು.

ಎಂ.ಜಿ.ಎಂ. ಕಾಲೇಜಿನಲ್ಲಿ ಭೌತಿಕ ಸವಲತ್ತುಗಳು ನಿರ್ಮಾಣಗೊಂಡ ಸುವರ್ಣಯುಗ ಕು.ಶಿ.ಯವರು ಪ್ರಿನ್ಸಿಪಾಲರಾಗಿದ್ದ ಹದಿನೈದು ವರ್ಷಗಳ ಅವಧಿ. ರವೀಂದ್ರ ಮಂಟಪ – ಕಲಾಮಂಟಪ – ಅನೇಕ ವೇಳೆ ಕಲ್ಯಾಣ ಮಂಟಪವೂ ಆಗಿದೆ – ಗೀತಾಂಜಲಿ, ಮುದ್ದಣ್ಣ ಮಂಟಪ – ಬಿ. ವಿ. ಕಾರಂತರ ನಾಟಕ ಕಲ್ಪನಾ ವಿಲಾಸಕ್ಕೆ ಅಡೊಂಯೋಲವಾದ ತಾಣ – ಪಾರ್ವತಿ ನಿಲಯ. ವಿಕ್ರಮಶಿಲಾ, ನಲಂದ, ಗುರುಕುಲ, ಆರೂರು ಲಕ್ಷ್ಮೀನಾರಾಯಣ ರಾಯರ ಕ್ರೀಡಾಂಗಣ – ಎಲ್ಲದರಲ್ಲೂ ಕು.ಶಿ.ಯವರ ಅಂಕಿತವಿದೆ. ಗ್ರಂಥಾಲಯದ ವಿಸ್ತರಣ, ವಿಜ್ಞಾನ ಪರಿಕರಗಳ ಕ್ರೋಢೀಕರಣ, ಧ್ವನಿಮುದ್ರಣ ವ್ಯವಸ್ಥೆ ಇತ್ಯಾದಿ ಭೌತಿಕ ಸವಲತ್ತುಗಳನ್ನೊದಗಿಸಿದ್ದುದಲ್ಲದೆ – ನಾಡಿನ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸತನದ ಉಸಿರನ್ನು ತುಂಬಿದವರು ಅವರು. ಬಿಸಿನೆಸ್ ಮೆನೇಜ್‌ಮೆಂಟ್‌ನಲ್ಲಿ ಹೊಸ ಸ್ನಾತಕ ತರಗತಿಯನ್ನು ಪ್ರಥಮವಾಗಿ ಜಿಲ್ಲೆಯಲ್ಲಿ ತೆಗೆದವರು ಅವರು. ವೃತ್ತಿಪರ ಶಿಕ್ಷಣವನ್ನು ಅಳವಡಿಸುವುದರಲ್ಲಿ ಮುಂಚೂಣಿಯಲ್ಲಿದ್ದವರು ಅವರು. ಸಂಗೀತವನ್ನು ಅಭ್ಯಾಸ ವಿಷಯವಾಗಿ ಅಳವಡಿಸಲು ಮುಂದಾದವರು ಅವರು. ಕನ್ನಡದಲ್ಲಷ್ಟೇ ಅಲ್ಲ ಜರ್ಮನ್, ರಷ್ಯನ್, ಫ್ರೆಂಚ್ ಮೂರು ಯೂರೋಪಿನ ಭಾಷೆಗಳಲ್ಲೂ ಡಿಪ್ಲೊಮಾ ತರಗತಿಗಳನ್ನು ನಡೆಸಲು ಮೈಸೂರು ವಿಶ್ವವಿದ್ಯಾನಿಲಯದ ಪರವಾನಿಗೆ ಪಡೆದವರು ಅವರು. ಅವರ ಕಲ್ಪನೆಯ ವೇಗದಲ್ಲಿ ಉಳಿದವರಿಗೆ ಹೆಜ್ಜೆ ಹಾಕಲು ಸಾಧ್ಯವಾಗಲಿಲ್ಲವಾಗಿ ಈ ಪ್ರಯೋಗಗಳಲ್ಲಿ ಕೆಲವಷ್ಟೇ ಇಂದೂ ಕಾರ್ಯಶೀಲವಾಗಿವೆ. ಇವರ ಜೊತೆಗೇನೇ ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ. ಯಕ್ಷಗಾನ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣ ಪ್ರಸಾರದ ಪರಿಧಿಯನ್ನು ಇನ್ನೂ ವಿಸ್ತರಿಸಿದವರು ಅವರು. ಗೋವಿಂದ ಪೈ ಅವರ ಗ್ರಂಥಾಲಯವನ್ನು ಕಾಲೇಜಿಗೆ ದಾನವಾಗಿ ಪಡೆದು ಅದರ ಸುತ್ತ ಸಂಶೋಧನ ಕೇಂದ್ರ, ಪ್ರಾಚ್ಯವಸ್ತು ಸಂಗ್ರಹಾಲಯಗಳನ್ನು ನಿರ್ಮಿಸಿ ಅಪೂರ್ವವಾದ ಅಧ್ಯಯನ ವಾತಾವರಣವನ್ನು ಸೃಷ್ಟಿಸಿದವರು ಅವರು.

ಈ ಸೌಧಗಳಲ್ಲಿ ನಿರಂತರವಾದ ಪಾಠಪ್ರವಚನಗಳು ನಡೆಯುವಂತೆ ನೋಡಿಕೊಂಡಿದ್ದಲ್ಲದೆ ಇಲ್ಲಿ ಉತ್ಸವ ರೂಪವಾದ ಹತ್ತಾರು ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ ಮೇಳ, ಗೋಷ್ಠಿಗಳನ್ನು ಏರ್ಪಡಿಸಿ ದೂರದೂರು

ಗಳಿಂದ ಮೇಳೈಸಿದ ವಿದೇಶೀಯ ವಿದ್ವಾಂಸರ ವಿದ್ವತ್ತಿನ ಪ್ರಭೆ ಇಲ್ಲಿನ ಜನಮಾನಸದಲ್ಲಿ ಸ್ಥಾಯಿಯಾಗುವಂತೆ ಮಾಡಿದವರು ಕು. ಶಿ. ಅವರು. ಕಾಲೇಜಿನ ಆವರಣದಲ್ಲಿ ಸದಾ ಯಾವುದಾದರೂ ಕ್ರಿಯಾಶೀಲತೆ ಪ್ರಕಟವಾಗುತ್ತಿರಬೇಕೆಂದು ಬಯಸುವವರು ಅವರು. ಯಾವುದೇ ಸಾಂಸ್ಕೃತಿಕ ಸಂಘಕ್ಕಾಗಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅವರ ಮುಕ್ತ ಹೃದಯದ ಸ್ವಾಗತ. ಕಾರಂತ ಸಪ್ತಾಹ ಕಾಲೇಜಿನ ಬೆಳ್ಳಿಹಬ್ಬದ ಉತ್ಸವ – ಜಾನಪದ ರಂಗಕಲೆಗಳ ಉತ್ಸವ, ಸಂಗೀತ ಉತ್ಸವ ಒಂದೇ ಎರಡೇ – ಊರ – ಪರವೂರ ಮಹನೀಯರು ಈ ನೆಲದಲ್ಲಿ ಸೇರಿ – ವಿಶ್ವಾಸ – ಸಂಭ್ರಮಗಳಿಂದ ನಲಿದು ಉಲಿದ ಸಂದರ್ಭಗಳೆಷ್ಟೋ. ಇಲ್ಲೆಲ್ಲ ಮನುಷ್ಯನ ಹೃದಯಕ್ಕೂ ಬುದ್ಧಿಗೂ ಅಗತ್ಯವಾದ ಪರಿಪಕ್ವತೆ ಒದಗುವುದು. ನಾಲ್ಕು ಗೋಡೆಗಳ ನಡುವೆಯಷ್ಟೇ ಶಿಕ್ಷಣ ಕಾರ್ಯಕ್ರಮ ಸಾರ್ಥಕತೆ ಪಡೆಯುವುದಿಲ್ಲ – ಜನರು ಹೃದಯವಂತಿಕೆಯಿಂದ ನೆರೆದು ನಡೆಸಿದ ಯಾವುದೇ ಕಾರ್ಯಕ್ರಮದಲ್ಲಿ ಯುವಜನರು ಕಲಿಯುವ ಅಂಶಗಳು ಅನೇಕವಿವೆ ಎಂಬುದನ್ನು ಅವರು ತೋರಿಸಿಕೊಟ್ಟರು.

ಕು. ಶಿ. ಯವರು ಪ್ರಿನ್ಸಿಪಾಲರಾಗಿ ನಿವೃತ್ತರಾದದ್ದೇನೋ ನಿಜ. ಆದರೆ ಮತ್ತಿನ ದಿನಗಳಲ್ಲಿ ಕಾಲೇಜಿನ ಸಂಸ್ಕೃತಿ ವಿಭಾಗವನ್ನು ಉತ್ತುಂಗ ಶಿಖರಕ್ಕೇರಿಸುವ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಅವರು ತಮ್ಮನ್ನು ಮತ್ತೆ ತೊಡಗಿಸಿಕೊಂಡು ಪ್ರವೃತ್ತಿಯ ರಾಜಮಾರ್ಗದಲ್ಲೇ ನಡೆದರು! ತುಳು ನಿಘಂಟು ಯೋಜನೆ. ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಅವರ ಕ್ರತುಶಕ್ತಿಗೆ ಆಡುಂಬೊಲವೂ ಆದುವು. ಸವಾಲೂ ಆದುವು. ಬೆರಳೆಣಿಕೆಯ ಸಿಬ್ಬಂದಿಗಳ ನೆರವಿನಿಂದ ರಾಷ್ಟ್ರೀಯ ಅಂತಾರಾಷ್ಟ್ರೀಯ ವಿದ್ವಾಂಸರ ಗಮನ ಸೆಳೆಯುತ್ತಿರುವ ಈ ಕೇಂದ್ರಗಳು ಖಾಯಂ ನೆಲೆಯಲ್ಲಿ ಸಂಪನ್ನವಾಗಬೇಕೆಂಬುದೇ ಅವರ ಈಗಿನ ಮನದಿಂಗಿತ. ಯಾವ ಬಾಹ್ಯ ಆಮಿಷಗಳೂ ಇಲ್ಲದೆ, ಸಂಸ್ಕೃತಿಪರವಾದ ಯಾವುದೇ ಕಾರ್ಯಕ್ರಮಗಳಲ್ಲಿ ಉಜ್ಜುಗಿಸಬೇಕೆಂಬ ಕರೆ ಬಂದಾಗ ಅದನ್ನು ಧೈರ್ಯದಿಂದ ಸ್ವೀಕರಿಸಿ ಕಾರ್ಯದಲ್ಲಿ ಮಾಡಿ ತೋರಿಸಿದವರು. ಕಾರ್ಯನೈಪುಣ್ಯ ಹರಿದಾಸ ಭಟ್ಟರ ವಿಶಿಷ್ಟ ಗುಣ. ಪಾದರಸದಂತೆ ಚುರುಕಾಗಿರುವ ಅವರ ಧೀಶಕ್ತಿ ಕ್ಷಣಕ್ಷಣವೂ ಹೊಸತನ್ನು ಅನ್ವೇಷಿಸುವ ತವಕ ಉಳ್ಳದ್ದು. ತನ್ನ ಸ್ಫೂರ್ತಿಯನ್ನು ಇತರರಿಗೂ ಆವಾಹಿಸುವ ಮಂತ್ರವಿದ್ಯೆ ಅವರಿಗೆ ಕರಗತವಾಗಿದೆ. ತನ್ನ ಅನುಚರರನ್ನು ಓರಗೆಯವರಂತೆ ನೋಡಿಕೊಳ್ಳುವ ಹೃದಯವಂತಿಕೆ ಅವರದ್ದು. ಹೊರನೋಟಕ್ಕೆ ವಜ್ರಾದಪಿ ಕಠೋರಾಣಿ. ಹತ್ತಿರದಿಂದ ಬಲ್ಲವರಿಗೆ 'ಮೃದೂನಿ ಕುಸುಮಾದಪಿ..' ತನ್ನ ಬಳಗದಲ್ಲಿ ಯಾರಿಗೆ ಯಾವ ಒಲವಿದೆಯೋ ಅದನ್ನು ಕ್ಷಿಪ್ರದಲ್ಲಿ ಗುರುತಿಸಿ. ಅದಕ್ಕೆ ಸಂವಾದಿಯಾದ ಜವಾಬುದಾರಿಯನ್ನು ಅವರಿಗೆ ಕೊಟ್ಟು ನಿಶ್ಚಿಂತರಾಗಿರುವುದು – ಮರೆಯುವುದಲ್ಲ – ಅವರ ಗುಣ. ಕೆಲಸ ವಹಿಸಿಕೊಟ್ಟ ಮೇಲೆ ಕಾಲಕಾಲಕ್ಕೆ ನಿರ್ದೇಶನ ನೀಡುತ್ತಾರೆ. ಕೆಲಸಕ್ಕೆ ಚಾಲನೆ ಕೊಡುತ್ತಾರೆ. ಕೆಲಸ ಮುಗಿದ ಮೇಲೆ. ಸಣ್ಣದಿರಲಿ ದೊಡ್ಡದಿರಲಿ ಮೆಚ್ಚುಗೆಯ ಮಾತು. ತಪ್ಪುಗಳನ್ನು ಕಡೆಗಣಿಸುವ ಉದಾರಗುಣ – ತನ್ನವರನ್ನು ತನ್ನ ಆಸೆಯ ಪೂರೈಕೆಗೆ ದುಡಿಸಿದೆನೆಂಬ ಅಳುಕು. ಆ ಬಗ್ಗೆ ಮುಜುಗರ – ದೊಡ್ಡ ಉತ್ಸವಗಳ ಬಳಿಕ ಅದನ್ನು ನೆನೆಸಿ ಅವರ ಕಣ್ಣಂಚಿನಲ್ಲಿ ನೀರು ತುಂಬಿದ್ದನ್ನು ನಾವು ಅನೇಕ ಸಲ ಕಂಡಿದ್ದೇವೆ. ಮನೆಯಲ್ಲಿ. ಸಂಚಾರದಲ್ಲಿ. ಆಫೀಸಿನಲ್ಲಿ ಸದಾ ಹಸನ್ಮುಖಿ. ಸರಸ ವಾಕ್ಯ ಸಲ್ಲಾಪ – ಚಿಂತನೆಯ ಪ್ರಖರತೆ – ಹರಿದಾಸ ಭಟ್ಟರೊಂದಿಗೆ ಮಾತಾಡುವುದೇ ನಮ್ಮನ್ನು ಹೊಸತೊಂದು ವಿಚಾರಶೀಲತೆಯಲ್ಲಿ ತೊಡಗಿಸಿಕೊಂಡಂತೆ.

ಎಂ.ಜಿ.ಎಂ. ಪುಟ್ಟ ವಿಶ್ವವಿದ್ಯಾನಿಲಯವಾದುದು ಇನ್ನೂ ಒಂದು ಅರ್ಥದಲ್ಲಿ. ಅವರ ಇತಿಹಾಸದಲ್ಲಿ ಪ್ರಕಟಗೊಂಡ ಗ್ರಂಥಗಳು ಅಸಂಖ್ಯ. ಸುಂದರರಾಯರ ಕಾಲದಲ್ಲಿ ತೊಡಗಿದ ಎಂಟಾಣೆ ಬೆಲೆಯ ಸಮ್ಮೋದಯ ಪುಸ್ತಕ ಮಾಲೆಯಿಂದ ತೊಡಗಿ ಮೊನ್ನಿನ ತುಳು ನಿಘಂಟಿನ ಮೊದಲ ಸಂಪುಟದ ವರೆಗಿನ ಪ್ರಕಟಣೆಗಳ ಬಾಹುಳ್ಯ. ವೈವಿಧ್ಯ, ವಿಚಾರ ಪರಿಪುಷ್ಟಿ ನೋಡಿದರೆ ಇದು ನಾಡಿಗೇ ವಿದ್ಯಾಲಯವಾಗಿರುವುದು ನಿಜ. ಕಾರಂತ ಪ್ರಪಂಚ. ಭಾಗ್ಯದ ಬಾಗಿಲು. ಒಲವೆ ನಮ್ಮ ಬದುಕು. ಮಾತೆಲ್ಲ ಜ್ಯೋತಿ. ಕಲಾವಿದ ಕೃಷ್ಣ ಹೆಬ್ಬಾರರು – ಈ ಸಂಸ್ಥೆಯು ಪ್ರಕಟಿಸಿದ ಗ್ರಂಥಗಳಲ್ಲಿ ಮಾಣಿಕ್ಯದಂತಿರುವುಗಳು. ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಸ್ಥಾಪನೆಯಾದ ಮೇಲೆ ಜಾನಪದದ ಕುರಿತ ಅನೇಕ ಕಿರು ಹೊತ್ತಗೆಗಳು ಪ್ರಕಟಗೊಂಡಿವೆ. ಜ್ಞಾನವನ್ನು ಕಾಲದ ಮಿತಿಯಲ್ಲೂ ಪಸರಿಸಿ ಸ್ಥಿರೀಕರಿಸುವ ಈ ಮಹಾಯಜ್ಞದ ಅಧ್ವರ್ಯು ಪ್ರೊ. ಕು. ಶಿ. ಹರಿದಾಸ ಭಟ್ಟರು.

ರಶ್ಮಿ ೫

ಪಾಣಾರಾಟ

ಒಂದು ಧಾರ್ಮಿಕ ಆಚರಣೆ

— ಎ. ವಿ. ನಾವಡ

ದಕ್ಷಿಣ ಕನ್ನಡ ಜಿಲ್ಲೆಯೆಂದರೆ ಥಟ್ಟನೆ ನೆನಪಿಗೆ ಬರುವುದು ಯಕ್ಷಗಾನ. ಇನ್ನೊಂದು ಅದರ ದಾಯಾದಿ ಕಲೆ ಭೂತಾರಾಧನೆ. ಜಿಲ್ಲೆಯ ತುಳು ಸಂಪ್ರದಾಯದ ಭೂತ ಪ್ರಪಂಚದ ಸ್ವರೂಪ. ವೈವಿಧ್ಯ. ಒಳನೋಟಗಳನ್ನು ಕುರಿತಂತೆ ವ್ಯಾಪಕ ಅಧ್ಯಯನ ಕಳೆದ ಶತಮಾನದ ಕೊನೆಯಿಂದ ತೊಡಗಿ ಇಂದಿಗೂ ಗಂಭೀರವಾಗಿ ಸಾಗುತ್ತಿದೆ.[1] ಆದರೆ ಜಿಲ್ಲೆಯ ಕನ್ನಡ ಮಾತನಾಡುವ ಕುಂದಾಪುರ ತಾಲೂಕಿನ ಭೂತಾರಾಧನೆಯ ಬಗೆಗೆ ವಿದ್ವಾಂಸರ ವಿಶೇಷ ಗಮನಹರಿದಂತೆ ಕಾಣಿಸುತ್ತಿಲ್ಲ. ಪ್ರಕೃತ ಲೇಖನದಲ್ಲಿ ನಾನು ದ.ಕನ್ನಡ ಜಿಲ್ಲೆಯ ಕನ್ನಡ ಮಾತನಾಡುವ – ಬ್ರಹ್ಮಾವರದಿಂದ ಬೈಂದೂರು ವರೆಗಿನ ಸುಮಾರು ನಲವತ್ತು ಕಿಲೋಮೀಟರ್ – ಹದಿನೈದು ಕಿಲೋಮೀಟರು ಉದ್ದ ಅಗಲಗಳ ಸೀಮಿತ ಪ್ರದೇಶದ ಭೂತಪ್ರಪಂಚದ ಆರಾಧನಾ ಪ್ರಕ್ರಿಯೆಯೊಂದರ ಸ್ಥೂಲಪರಿಚಯವನ್ನು ನೀಡಲು ಪ್ರಯತ್ನಿಸಿದ್ದೇನೆ.

ಭಾಷಿಕ ಭಿನ್ನತೆಯೊಂದೇ ಅಲ್ಲ. ದೈವಗಳ ಸ್ವರೂಪ. ಪರಿಕಲ್ಪನೆ. ಆರಾಧನಾ ಸಂಪ್ರದಾಯ. ವೇಷಭೂಷಣ. ಕುಣಿತ ನಡೆಸಿಕೊಡುವ ದೈವಮಾಧ್ಯಮನ ಜನಾಂಗ – ಹೀಗೆ ಹಲವು ನಿಟ್ಟುಗಳಲ್ಲಿ ತುಳುವ ಹಾಗೂ ಕನ್ನಡ ಸಂಪ್ರದಾಯದ ಭೂತ ಆರಾಧನೆಯಲ್ಲಿ ವ್ಯತ್ಯಾಸಗಳು ಗೆರೆಕೊರೆದಂತೆ ಸ್ಪಷ್ಟ. ಆದರೆ ಕೆಲವೊಂದು ವಿಧಿ ಆಚರಣೆಗಳಲ್ಲಿ ಮೇಲ್‌ಸೇರುವೆ ಹಾಗೂ ಸಾದೃಶ್ಯಗಳನ್ನೂ ಗುರುತಿಸಬಹುದಾಗಿದೆ.[2]

ಜಿಲ್ಲೆಯ ಬಡಗುಭಾಗದ ಕನ್ನಡ ಪ್ರದೇಶದ ಅಖಿಲ ಭಾರತೀಯ ದೇವತೆಗಳಿಂದ ಹೊರತಾದ ದೇಶೀಯ ದೈವಗಳಿಗೆ ಕೋಲ ಹಾಗೂ ಡಕ್ಕೆಬಲಿ[3] ಎಂಬ ಇಬ್ಬಗೆಯ ಉಪಚಾರ ಸಲ್ಲುತ್ತಿದೆ. ನಾನು ಗಮನಿಸಿದಂತೆ ಸ್ವಾಮಿ (ನಾಗನ ಒಂದು ಪ್ರಭೇದ?) ಇಲ್ಲಿನ ಪ್ರಧಾನ ದೈವ*. ನಂದಿ. ಹಾಯ್ಗುಳಿ. ಹುಲಿ ಮುಂತಾದವು ಕುಲಲಾಂಛನ ದೈವ (Tolemic spirit)ಗಳು. ಪಳಿಯಮ್ಮ. ಎಳಿಯಮ್ಮ. ಹಲವು ಮಕ್ಕಳ ತಾಯಿ. ಚಿಕ್ಕು. ಮಾಸ್ತಿ, ಉಮ್ಮಳ್ತಿ ಮುಂತಾದ ಮಾತೃದೇವತಾರಾಧನೆಯ ಸ್ವರೂಪದ ದೈವಗಳು. ಕ್ಷೇತ್ರಪಾಲನಿಗೂ ಆರಾಧನೆ ಸಲ್ಲುವುದುಂಟು. ಜೊತೆಗೆ ಪಂಜುರ್ಲಿ. ಕಲ್ಕುಡ್ಕ. ಬೊಬ್ಬರ್ಯಗಳಂತಹ ತುಳುನಾಡಿನ ಜನಪ್ರಿಯ ದೈವಗಳಿಗೂ ಇಲ್ಲಿ ಆರಾಧನೆ ಸಲ್ಲುತ್ತಾ ಬರುತ್ತಿದೆ.

ಜಿಲ್ಲೆಯ ಕನ್ನಡ ಪ್ರದೇಶದ ಆರ್ಯೇತರ ಮತಾಚಾರಗಳನ್ನು ನಡೆಸಿಕೊಡುವವರು ಪಾಣಾರರು[4] ಹಾಗೂ ವೈದ್ಯ[5]ರೆನ್ನುವ ಬ್ರಾಹ್ಮಣ ಮೂಲದವರು. ತುಳುನಾಡಿನ ಭೂತಮಾಧ್ಯಮ ಜನಾಂಗಗಳಲ್ಲಿ ಒಂದಾದ ನಲ್ಕೆಯವರೇ ಕನ್ನಡ ಪ್ರದೇಶದಲ್ಲಿ ಪಾಣಾರರೆಂದು ಪರಿಚಿತರಾಗಿದ್ದಾರೆ. ಉಡುಪಿಯ ಸುತ್ತುಮುತ್ತಲಿನ ಹಾವಂಜೆ. ಪೆರ್ಡೂರು. ಪುತ್ತಿಗೆ. ಹಿರಿಯಡ್ಕ. ಕಾಪು. ಉಚ್ಚಿಲ. ಎರ್ಮಾಳು. ಕುಂದಾಪುರ ಪರಿಸರದ ಸಿರಿಯಾರ. ನೇರಳಕಟ್ಟೆ. ವಂಡ್ಸೆ, ಅಂಪಾರುಗಳಲ್ಲಿ ಪಾಣಾರರ ನೆಲೆಗಳನ್ನು ಕಾಣಬಹುದು. ಕನ್ನಡ ಪ್ರದೇಶದ ಪಾಣಾರರು ತುಳು ಬಲ್ಲವರಾಗಿದ್ದರೂ ಅವರ ಸಾಮಾಜಿಕ. ಧಾರ್ಮಿಕ ವ್ಯವಹಾರಗಳ ಮಾಧ್ಯಮ ಕನ್ನಡ. ಹಾಗೆಂದು ತುಳುನಾಡಿನ ನಲ್ಕೆಯವರೊಂದಿಗೆ ಇರಿಸಿಕೊಂಡ ರಕ್ತಸಂಬಂಧದ ಫಲವಾಗಿ ಅವರು ತುಳುಬಲ್ಲರು.

ಸ್ವಾಮಿ ಮನೆಗಳಲ್ಲಿ. ಮನೆ ಚಾವಡಿಗಳಲ್ಲಿ. ಅಥವಾ ಗ್ರಾಮದ ಗುಡಿಗಳಲ್ಲಿ ವರ್ಷಕ್ಕೊಮ್ಮೆ ಕೋಲ. ಡಕ್ಕೆಬಲಿಗಳ ಆರಾಧನೆ ಜರಗುವುದಿದೆ. ಕನ್ನಡ ಪ್ರದೇಶಗಳಲ್ಲಿ ಪಾಣಾರ ಜನ ನಡೆಸುವ ಕೋಲ. ಡಕ್ಕೆಬಲಿಗಳ ಮತಾಚಾರ ಸಂಕೀರ್ಣವನ್ನು ಪಾಣಾರಾಟ[6]ವೆಂದು ಕರೆಯಲಾಗುತ್ತದೆ. ಕೆಲವು ಗುಡಿಗಳಲ್ಲಿ ಈ ಪಾಣಾರಾಟ ಏಳು ದಿನ ನಡೆಯುವುದುಂಟು. ಇಲ್ಲಿನ ಗುಡಿಗಳಲ್ಲಿ ಎಲ್ಲಿ ಪಾಣಾರ ಜನಾಂಗದವರು ಆಚರಣೆ ನಡೆಸಬೇಕು. ಎಲ್ಲಿ ವೈದ್ಯರು ನಡೆಸಬೇಕು ಎನ್ನುವುದಕ್ಕೆ ಖಚಿತವಾದ ನಿಯಮವೇನೂ ಇಲ್ಲ. ಆಚರಿಸಿಕೊಂಡು ಬರುವವರಲ್ಲಿ

* ಕುಂದಾಪುರ ಪರಿಸರದಲ್ಲಿ ಆರ್ಯೇತರ ಸಂಪ್ರದಾಯದ ಭೂತ (spirit)ಗಳಿಗೆ ದೈವ ಎನ್ನುವ ಪದ ಬಳಕೆಯಲ್ಲಿದೆ.

ಕೇವಲ 'ಸಮಾಜಕೊಂದು ಬಂದ ರೂಢಿ' ಎನ್ನುವುದೂ ಉಂಟು. ದೇವಿಯು ದೈವಗಳಿಗೆ ನಾವೇ ಉಪಚಾರ ನಡೆಸುತ್ತಿದ್ದವರೆಂದೂ. ಬ್ರಾಹ್ಮಣವೈದ್ಯರು ಮಾತ್ರ ಪ್ರವೇಶಿಸಿದರೆಂದೂ ಪಾಣರರ ಅಭಿಪ್ರಾಯ. ಕೆಲವು ಗ್ರಾಮದ ಗುಡಿಗಳಲ್ಲಿ ಕೋಲ. ಪಕ್ಕೆಬಲಿಯ ಜೊತೆಗೆ ಗೆಂಡ(ಕೆಂಡ) ಎಂಬ ಇನ್ನೊಂದು ಆಚರಣೆ ಜರಗುವುದೂ ಉಂಟು. ಈ ಆಚರಣೆ ನಡೆವ ಗುಡಿಗಳಲ್ಲಿ ಇದು ನಡೆದ ಬಳಿಕ ಪಕ್ಕೆಬಲಿ (ವೈದ್ಯರಿಂದ) ಜರಗುತ್ತದೆ. ವೈದ್ಯ ಜನಾಂಗದವರು ಈ ಆಚರಣೆಯನ್ನು ಪಕ್ಕೆಬಲಿ ಎಂದು ಕರೆಯುವುದಕ್ಕಿಂತ 'ಮಂಡಲ ಸೇವೆ' 'ಮಂಡಲ ಭೋಗ' ಎಂಬ ಹೆಸರಿಂದ ಕರೆಯಲು ಬಯಸುತ್ತಾರೆ.

ದ. ಕನ್ನಡ ಜಿಲ್ಲೆಯ ಕನ್ನಡ ಪ್ರದೇಶಗಳಲ್ಲಿನ ಪಾಣಾರಾಟದಲ್ಲಿ ಎರಡು ಸಮಾನಾಂತರ ಆಚರಣ ವಿಧಿಗಳನ್ನು ಗಮನಿಸಬಹುದು. ಒಂದು, ತುಳುಪ್ರದೇಶದ ಕೋಲ ಸಂಪ್ರದಾಯವನ್ನು ಹೋಲುವ ಆಚರಣೆ. ಇನ್ನೊಂದು, ನಾಗಮಂಡಲವನ್ನು ಹೋಲುವ ಸ್ಥಳೀಯ ದೈವಗಳಿಗೆ ಮಾತ್ರ ನಡೆಯುವ ಪಕ್ಕೆಬಲಿ ಎಂಬ ಆಚರಣೆ. ಭಾರತದಲ್ಲಿ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಗೂ ವಿಧಿ ಆಚರಣೆಗಳಿಗೂ ಬಹಳ ಕಾಲದಿಂದ ನಂಟು ಬೆಳೆದು ಬಂದಿರುವುದು ಎಲ್ಲರಿಗೂ ತಿಳಿದ ಸಂಗತಿ. ದೈವದ ಪಾತ್ರಿ ಆಚಾರಿ (ವಿಶ್ವಕರ್ಮ), ಬಂಟ (ನಾಡವ), ಅಥವಾ ಮೊಗವೀರ ಜಾತಿಯವನಾಗಿದ್ದರೆ ಮಾತ್ರ ಪಾಣ ಮಂಡಲ ಬರೆದು ಅರ್ಧನಾರಿ ವೇಷತೊಟ್ಟು ಮಂಡಲದ ಸುತ್ತ ಸುತ್ತಿ ಪಕ್ಕೆಬಲಿ ಆಚರಿಸುತ್ತಾನೆ. ಬಿಲ್ಲವ ಮುಂತಾದ ಇತರ ಜಾತಿಯ ಪಾತ್ರಿಯಾದರೆ 'ಹೂಗಳಿಕೆ'ಗಳನ್ನು ಹಾಡಿ ದೈವದ ಪಾತ್ರಿಯನ್ನು ನಿಂತಲ್ಲಿಯೇ ಕುಣಿಸುವುದು ಸಂಪ್ರದಾಯ. ಪಾತ್ರಿ ಮತ್ತು ದೈವ ಮಾಧ್ಯಮ ಪಾಣನ ಮಧ್ಯೆ ಬದಲಿನ ಕೋಲು ಕಟ್ಟುವ ಮೂಲಕ 'ಬೇರ್ಪಡಿಸುವಿಕೆ'ಯನ್ನು ಏರ್ಪಡಿಸಲಾಗುತ್ತದೆ.

ಆಚರಣೆ:

ಗ್ರಾಮದ ಗುಡಿಗಳಲ್ಲಿ ವಾರ್ಷಿಕ ಜಾತ್ರೆಯ ರೂಪದ ಪಾಣಾರಾಟ ಮೂರರಿಂದ 8 ದಿನಗಳವರೆಗೆ ನಡೆಯುತ್ತದೆ. ಮನೆಯ ದೈವಗಳಿಗೆ – ವಿಶೇಷವಾಗಿ ಸ್ವಾಮಿಗೆ ಸಲ್ಲಿಸುವ ವಾರ್ಷಿಕ ಆಚರಣೆ ಒಂದೇ ದಿನದಲ್ಲಿ ಕೊನೆಗೊಳ್ಳುವುದು.*

ಪಾಣಾರಾಟ ನಡೆಯುವುದು ರಾತ್ರಿ ಹೊತ್ತಿನಲ್ಲಿ. ಗರಡಿಗಳನ್ನುಳಿದು ತುಳುನಾಡಿನ ಭೂತಸ್ಥಾನಗಳಲ್ಲಿ ಭೂತಗಳ ಪ್ರತಿಮೆಗಳಿರುವುದಿಲ್ಲ. ದೈವದ ಮಂಚ, ಖಡ್ಗ, ಮುಖವಾಡಗಳೇ ದೈವದ ಸಂಕೇತಗಳು. ಆದರೆ ಕನ್ನಡ ಪ್ರದೇಶಗಳ ದೈವದ ಮನೆಗಳಲ್ಲಿ ವಿವಿಧ ಗಾತ್ರದ ಮರದ ದೈವದ ಪ್ರತಿಮೆಗಳಿರುತ್ತವೆ. ಇವುಗಳನ್ನು 'ದೈವದ ಉರು'ಗಳೆಂದು ಜನ ಕರೆಯುತ್ತಾರೆ.

ಪಾಣಾರಾಟದ ದಿನ ಸಂಜೆಯಾಗುತ್ತಲೇ ಗುಡಿಯ ಎದುರಿನ ಜಾಗವನ್ನು ಚೊಕ್ಕಗೊಳಿಸಿ ಅಲಂಕರಿಸಲಾಗುತ್ತದೆ. ಅರ್ಚಕ (ಅಪೂರ್ವವಾಗಿ ಕೆಲವೆಡೆ ಬ್ರಾಹ್ಮಣ ಅರ್ಚಕರಿರುವುದೂ ಉಂಟು) ದೈವದ ಉರುಗಳನ್ನು ಸೇವಂತಿಗೆ ಹಾಗೂ ಸಿಂಗಾರದ ಹೂಗಳಿಂದ ಅಲಂಕರಿಸಿ ಕಲಶವಿರಿಸಿ ಪೂಜೆಗೆ ಏರ್ಪಾಟು ಮಾಡುತ್ತಾನೆ. ಆಯಾ ದೈವಸ್ಥಾನಕ್ಕೆ ಪ್ರತ್ಯೇಕ ಪಾತ್ರಿ ಇರುವುದುಂಟು. ಇಲ್ಲದೆ ಹೋದಲ್ಲಿ ತಾತ್ಕಾಲಿಕವಾಗಿ ಬೇರೆಡೆಯಿಂದ 'ಮಾಧ್ಯಮ'ನಾಗಲು ಪಾತ್ರಿಯನ್ನು ಕರೆಸಿಕೊಳ್ಳಲಾಗುವುದು. ಗೆಜ್ಜೆ ಚಲ್ಲಣ ತೊಟ್ಟ ಪಾತ್ರಿ ದೈವದ 'ಉರು'ವಿನ ಇದಿರು ನಿಂತಿರುತ್ತಾನೆ. ಅರ್ಚಕನಿಂದ ಪೂಜೆ ಜರಗಿದೊಡನೆ ಆತ ಪಾತ್ರಿಗೆ ಸಿಂಗಾರದ ಹೂಕೊಟ್ಟು ತೀರ್ಥಬಟ್ಟಲನ್ನು ಕೈಗೆ ಎರೆಯುತ್ತಾನೆ. ಅಷ್ಟರಲ್ಲಿ ಪಾತ್ರಿ ದೈವ ಮೈದುಂಬಿ ಥರಥರ ನಡುಗುತ್ತಾನೆ. ಗುಡಿಯೊಳಗೆ ಈ ಕ್ರಿಯೆ ನಡೆವ ಹೊತ್ತಿಗೆ, ಹೊರಗೆ ಬಾಗಿಲ ಬಳಿ ಇಬ್ಬರು ಅಥವಾ ಹೆಚ್ಚು ಮಂದಿ ಪಾಣಾರ ಜನಾಂಗದ ಮಹಿಳೆಯರು ನಿಂತು ತೆಂಬರೆ ನುಡಿಸುತ್ತಾ ಪ್ರಾರ್ಥನಾರೂಪದ ತುಳು ಪಾಡ್ದನವನ್ನು ಹಾಡುತ್ತಾರೆ. ಈ ಕೆಲಸಕ್ಕೆ ಆ ಮಹಿಳೆಯರು ದೈವದ ಅರ್ಚಕ/ಮಡಿವಾಳರಿಂದ ಎಣ್ಣೆ ಹಾಗೂ ಪ್ರಸಾದ ರೂಪದಲ್ಲಿ ಹೂ ಪಡೆಯುತ್ತಾರೆ.

ದೈವದ ಮನೆಯೆದುರು ಯಕ್ಷಗಾನದ ರಂಗಸ್ಥಳದಂತೆ ನಾಲ್ಕು ಚೌಕದ ಒಂದಿಷ್ಟು ಜಾಗ ಬಿಟ್ಟು ಸುತ್ತಲೂ ಪ್ರೇಕ್ಷಕವರ್ಗ ಕುಳಿತಿರುತ್ತದೆ. ಒಂದು ಬದಿಯಲ್ಲಿ ಗುಡಿಯ ಆಡಳಿತ ಪ್ರಮುಖ ಹಾಗೂ ಅವನ ಸಹಚರರು ಕುಳಿತುಕೊಳ್ಳುತ್ತಾರೆ. ಇನ್ನೊಂದೆಡೆ ಮಹಿಳಾವರ್ಗ ಆಸೀನವಾಗಿರುತ್ತದೆ. ಆಯಾ ದೈವಸ್ಥಾನಕ್ಕೆ ಸಂಬಂಧಿಸಿದ ಪತ್ತಾರು ದೈವಗಳಿಗೆ ಕೋಲ ಸಂಪ್ರದಾಯದ ಉಪಚಾರ ಸಲ್ಲುತ್ತದೆ. ದೈವಸ್ಥಾನದೊಳಗಿಂದ ಪಾತ್ರಿ ಅಬ್ಬರದ ವಾದ್ಯದ ನುಡಿತದೊಂದಿಗೆ ಥರಥರ ನಡುಗುತ್ತಾ ಹೊರಬಂದು ನಿಂತಾಗ (ಕೆಲವೊಮ್ಮೆ ಕುಳಿತುಕೊಳ್ಳುವುದೂ ಇದೆ) ಚೌಕಿ (ವೇಷತೊಡುವ ಮನೆ)ಯಿಂದ ಅಲಂಕೃತ ದೈವಮಾಧ್ಯಮ (ಪಾಣ) ಬಂದು ಪಾತ್ರಿಯ ಎದುರು ಗುಡಿಯೊಳಗಿನ ದೈವಕ್ಕೆ ಕೈಮುಗಿದು ನಿಲ್ಲುತ್ತಾನೆ. ಸ್ವಾಮಿಗೆ ಮೊದಲು ಕೋಲವಾಗಿ ಮುಂದೆ ಆಯಾ ಗುಡಿಗಳಲ್ಲಿ ಆವಾಸವಾಗಿರುವ ಪತ್ತಾರು ದೈವಗಳಿಗೆ ಒಂದಾದ ಮೇಲೊಂದರಂತೆ ಕೋಲ

ಆಚರಣೆ ಜರಗುತ್ತದೆ. ದೈವ ಮಾಧ್ಯಮ ರಂಗಪ್ರವೇಶ ಮಾಡುವ ಮೊದಲು ಪಾತ್ರಿಯು ಪಕ್ಕದಲ್ಲಿ ಕುಳಿತಿರುವವರಲ್ಲಿ ಒಬ್ಬನು ಮುಂದೆ ಉಪಚಾರ ಕೈಗೊಳ್ಳುವ ದೈವ ಯಾವುದು ಎಂಬುದನ್ನು ಗಟ್ಟಿಯಾಗಿ ಪ್ರೇಕ್ಷಕರಿಗೆ ಕರೆದು ಹೇಳುತ್ತಾನೆ. ಕೈಮುಗಿದು ನಿಂತ ದೈವಮಾಧ್ಯಮನಿಗೆ ಪೂಜಾರಿ ತೀರ್ಥಜಲ ಚಿಮುಕಿಸಿ, ಕೈಗೆ ಹೂ ನೀರು ಕೊಟ್ಟಾಗ ದೈವಮಾಧ್ಯಮನಲ್ಲಿ ಆವೇಶ ಉಂಟಾಗುತ್ತದೆ. ಬೇರೆ ಬೇರೆ ದೈವಗಳ ಗುಣ ಸ್ವಭಾವಕ್ಕನುಸರಿಸಿ, ಆತ ಬೇರೆ ಬೇರೆ ಸ್ವರೂಪದ ವೇಷಭೂಷಣವನ್ನು ಧರಿಸುತ್ತಾನೆ. ನಿತ್ಯ ವ್ಯವಹಾರದಲ್ಲಿ ಕನ್ನಡ ಮಾತನಾಡುವ[7] ಪಾಣನಲ್ಲಿ ಪಂಜುರ್ಲಿ, ಬೊಬ್ಬರ್ಯ, ಕಲ್ಕುಡ್ಕ ಮುಂತಾದ ತುಳುನಾಡಿನ ದೈವಗಳು ಮೈದುಂಬಿದಾಗ ಆತ ತುಳುವಿನಲ್ಲಿ ಮಾತಿಗೆ ತೊಡಗುತ್ತಾನೆ. ಆಗ ಯಜಮಾನನು "ನಮ್ಗ್ ತುಳು ಬತ್ತಿಜ್ಜಿ. ಇದ್ ಬಡ್ ದೇಶ. ಕನ್ನಡದಂಗೇ ನೀನ್ ನಮ್ಗ್ ನುಡಿ ಕೊಡ್ಕ್" ಎಂದು ಬಿನ್ನವಿಸಿಕೊಳ್ಳುತ್ತಾನೆ. ಮುಂದೆ ದೈವಮಾಧ್ಯಮನ ಭಾಷಾಮಾಧ್ಯಮ ಕನ್ನಡಕ್ಕೆ ತಿರುಗುತ್ತದೆ.

ಕೆಲವು ನಿಮಿಷಗಳ ಕಾಲ ದೈವಮಾಧ್ಯಮ ಕುಣಿದು ಮುಂದೆ ಪೂಜಾರಿ ಇಲ್ಲವೆ ಪಾತ್ರಿಯ ಜತೆ ತನ್ನ ಹುಟ್ಟು, ಸಾಧನೆ ಹಾಗೂ ತನಗೆ ನೀಡಲಾದ ಉಪಚಾರದಿಂದಾದ ಸಂತೃಪ್ತಿಯನ್ನು ವ್ಯಕ್ತಪಡಿಸಿ (ಕಡ್ಕಟ್ಟ್ ನುಡಿತ) ದೈವಾವೇಶವನ್ನು ಕೊನೆಗೊಳಿಸುತ್ತಾನೆ. ಮಂಡಲ ಬರೆದು ಡಕ್ಕೆಬಲಿ ಸಂಪ್ರದಾಯ ಇಲ್ಲದ ಕಡೆ ಈ ಕೋಲದ ಸಂದರ್ಭದಲ್ಲೇ ಅರ್ಧನಾರಿ ವೇಷತೊಟ್ಟ ಪಾಣ ಡಕ್ಕೆಯ ನುಡಿತದೊಂದಿಗೆ ಅಮ್ಮದೈವದ ಹುಟ್ಟು, ಸಂಚಾರವನ್ನು ಕುರಿತ ಹೊಗಳಿಕೆಯನ್ನು ಹಾಡುತ್ತಾನೆ. ದರ್ಶನಪಾತ್ರಿ ದೈವಸ್ಥಾನದೊಳಗೆ ಹೋಗಿ ತನ್ನ ಮೈದುಂಬಿಕೊಂಡಿರುವ ದೈವವನ್ನು ವಿಸರ್ಜಿಸಿಕೊಳ್ಳುತ್ತಾನೆ. ಮುಂದೆ ಪುನಃ ವಾಲಗದ ಅಬ್ಬರದ ನಡುವೆ ಇನ್ನೊಂದು ದೈವವನ್ನು ಮೈದುಂಬಿಸಿಕೊಂಡು ಹೊರಬಂದು ಪಾಣದೈವ ಮಾಧ್ಯಮ ನಡೆಸುವ ಕೋಲಕ್ಕೆ ಸಿದ್ಧನಾಗುತ್ತಾನೆ. ಹೀಗೆ ಹತ್ತಾರು ಸ್ಥಳೀಯ ದೈವಗಳಿಗೆ ಒಂದೇ ರಾತ್ರೆ ಉಪಚಾರ ನಡೆಯುತ್ತದೆ. ಈ ಮಧ್ಯೆ ಹಳೆಯಮ್ಮನಂತಹ ಹೆಣ್ಣು ದೈವಗಳ ಕೋಲವಾದ ಬಳಿಕ ಆ ದೈವದ ಪ್ರತಿನಿಧಿಯೆಂದು ಭಾವಿಸಲಾದ ಪಾತ್ರಿಗೆ ನೂರಾರು ಹೆಂಗಸರು ಸೇವಂತಿಗೆ ಹೂವಿನ ಹಾರ ಹಾಕಿ ತಾವು ಪ್ರತಿಯಾಗಿ ಪ್ರಸಾದ ಪಡೆಯುತ್ತಾರೆ.

ಸುಮಾರು ಎರಡು ಮೂರು ಗಂಟೆಗಳ ಕಾಲಾವಧಿಯಲ್ಲಿ ಹತ್ತಾರು ದೈವಗಳಿಗೆ ಕೋಲದ ರೂಪದ ಉಪಚಾರ ನಡೆದ ಬಳಿಕ ಅದೇ ದೈವಗಳಿಗೆ ಡಕ್ಕೆಬಲಿ ರೂಪದ ಉಪಚಾರ ನಡೆಯುತ್ತದೆ. ಈ ಕೋಲ ಹಾಗೂ ಡಕ್ಕೆಬಲಿ ಆಚರಣೆಗಳ ಮಧ್ಯಭಾಗದಲ್ಲಿ ಈ ಧಾರ್ಮಿಕ ಆಚರಣೆಗಳಿಗೆ ಏನೇನೂ ಸಂಬಂಧವಿಲ್ಲದ ಹಾಸ್ಯ ಸನ್ನಿವೇಶವೊಂದು ಜರಗುತ್ತದೆ. ರಂಗಮಧ್ಯದಲ್ಲಿ ಬೈಹುಲ್ಲಿನ ರಾಶಿ ಹಾಕಿ ಅದರೊಳಗಿಂದ ಹಂದಿಯ ಮುಖವಾಡ ಧರಿಸಿದ ವ್ಯಕ್ತಿಯೊಬ್ಬ ಕಾಡುಹಂದಿಯಂತೆ ನಟಿಸುತ್ತಾ ಬೇಟೆಗಾರನೊಬ್ಬ ತನ್ನ ಸಹವರ್ತಿಯೊಂದಿಗೆ ಹಾಸ್ಯ ಮಿಶ್ರಿತ ಸನ್ನಿವೇಶವನ್ನು ಕಲ್ಪಿಸಿ ಹಂದಿಯ ಬೇಟೆಯನ್ನು ನಟಿಸುವ ಅಥವಾ ಇನ್ನಾವುದೇ ಕಲ್ಪಿತ ಸನ್ನಿವೇಶವನ್ನು ನಟಿಸಿ ತೋರಿಸಲಾಗುವುದು. ಬಹುಶಃ ಗಂಭೀರವಾಗಿ ಸಾಗುತ್ತಿದ್ದ ಕೋಲ ಆಚರಣೆಯ ಬಳಿಕ ನಡುರಾತ್ರೆಯ ಹೊತ್ತು ನಿದ್ದೆ ತೂಗುವವರನ್ನು ಎಚ್ಚರಗೊಳಿಸುವುದು ಹಾಗೂ ವಾತಾವರಣದ ಗಾಂಭೀರ್ಯವನ್ನು ಸಡಿಲುಗೊಳಿಸುವುದು ಈ ಸನ್ನಿವೇಶದ ಉದ್ದೇಶವೆಂದು ಪಾಣಾರ ಜನಾಂಗದ ಒಬ್ಬ ವ್ಯಕ್ತಿ ನನ್ನಲ್ಲಿ ಹೇಳಿದ್ದು ನನ್ನ ದಾಖಲೆಯಲ್ಲಿದೆ. ಇಲ್ಲಿನ ಜನ ಈ ಆಚರಣೆಗೆ ಯಾವುದೇ ಹೆಸರನ್ನು ನೀಡಿಲ್ಲವಾದರೂ ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಜಾತ್ರೆ ಹಗರಣವನ್ನು ಹೋಲುತ್ತದೆ. (ಚಿದಾನಂದಮೂರ್ತಿ 1983)

ಡಕ್ಕೆಬಲಿ:

ಇದು ಕನ್ನಡ ಪ್ರದೇಶದ ವಿಶಿಷ್ಟ ಆಚರಣೆ. ಡಕ್ಕೆ ಬಲಿಯೆಂದರೆ ನಾಗಮಂಡಲದ ಸಂಕ್ಷೇಪ ರೂಪ ಎಂದು ಅನೇಕರು ತಿಳಿದಿರುವುದುಂಟು (ಭಟ್ 1977 : 37) ಆದರೆ ವಾಸ್ತವಿಕವಾಗಿ ಸ್ವಾಮಿಯ ಗುಡಿಗಳಲ್ಲಿ ಅಥವಾ ಇನ್ನಿತರ ದೈವದ ಗುಡಿಗಳಲ್ಲಿ ಸ್ವಾಮಿ, ಹಾಯ್ಗುಳಿ, ಚಿಕ್ಕು, ಹಳೆಯಮ್ಮ, ಮುಂತಾದ ದೈವಗಳಿಗೆ ಡಕ್ಕೆ ನುಡಿಸಿ ಹೊಗಳಿಕೆ ಹಾಡಿ ಕುಣಿದು ಪಾಣರು ನಡೆಸುವ ಉಪಚಾರವೇ ಡಕ್ಕೆಬಲಿ. ಸ್ವಾಮಿ ಕನ್ನಡ ಪ್ರದೇಶದ ಅತ್ಯಂತ ಜನಪ್ರಿಯ ದೈವ. ಸ್ವಾಮಿ ಗುಡಿಗಳಿರುವಲ್ಲಿ ಬೃಹತ್ ಗಾತ್ರದ ಹುತ್ತ ಬೆಳೆದಿರುತ್ತದೆ. ಸ್ವಾಮಿಯ ಹೊಗಳಿಕೆಯ ಪದ್ಯವನ್ನು ಕಂಡರೆ ಹಾಗೂ ಅದರ ಕೊನೆಯಲ್ಲಿ "ಚಿತ್ತಾ ಸಂತೋಷದಲ್ಲಿ ತನ್ನ ಸ್ಥಾನದಲ್ಲಿ ಸ್ಥಿರವಾಗಿ ನಿಲ್ಲುವಂತಹಾ ಮುದ್ದು ಸ್ವಾಮಿ" ಎನ್ನುವುದನ್ನು ಕಂಡರೆ ಈ ಸ್ವಾಮಿ ಸುಬ್ರಹ್ಮಣ್ಯರೂಪದ ನಾಗನಲ್ಲದೆ ಬೇರೆ ಅಲ್ಲ. ಕೇರಳದಲ್ಲಿ ಸುಬ್ರಹ್ಮಣ್ಯನನ್ನು ಮುದ್ದು ಸ್ವಾಮಿ ಎನ್ನುವುದಿದೆಯಂತೆ (ಕೆದ್ಲಾಯ 1977). ನಾಗಾರಾಧನೆ ಕರಾವಳಿಯ ಆದಿಮ ಆರಾಧನೆಗಳಲ್ಲಿ ಒಂದು. ನಾಗಮಂಡಲ ಇಂದು ಒಂದು ಆರ್ಯವಿಧಿಯಾಗಿ ವೈದ್ಯ ಜನಾಂಗದವರಿಂದ (ಬ್ರಾಹ್ಮಣ) ನಡೆದು ಬರುತ್ತಿದ್ದರೂ ಅದರ ಮೂಲ ಸ್ವರೂಪವನ್ನು ಪಾಣರು ಸ್ವಾಮಿಗೆ ಇಂದು ನಡೆಸುತ್ತಿರುವ ಡಕ್ಕೆಬಲಿಯಲ್ಲಿ ಗುರುತಿಸಬಹುದು. ದೇಶೀಯ ದೈವಗಳಿಗೆ ವೈದ್ಯರು ನಡೆಸುವ ಡಕ್ಕೆ ಬಲಿಯ ಸ್ವರೂಪ ಹಾಗೂ ಆಶಯಗಳಲ್ಲಿ ಪಾಣರ ಆಚರಣೆಗಿಂತ ತೀರಾ ಭಿನ್ನವಾದುದೇನೂ ಇಲ್ಲ.

ನೃತ್ಯದ ಕುಣಿತಮುದ್ರೆಗಳಲ್ಲಿ ಕಾಣುವ ಸಮಾನಾಂತರ. ಭಾವವಿಸ್ತಾರ. ವೇಷಗಾರಿಕೆಯ ವೈವಿಧ್ಯಗಳನ್ನು ಪಾಣರ ಕುಣಿತಗಳಲ್ಲಿ ನಿರೀಕ್ಷಿಸುವಂತಿಲ್ಲ.

ಢಕ್ಕೆಬಲಿಯಲ್ಲಿ ಪಾಣರು ನಾಗ (ಪುರುಷಶಕ್ತಿ) ಬ್ರಹ್ಮ ಹಾಗೂ ಸ್ತ್ರೀಶಕ್ತಿ(ಗಾಯತ್ರಿ)ಯ ರೂಪಗಳನ್ನು ಪಂಚವರ್ಣದ ಹುಡಿಯಲ್ಲಿ ರೇಖಿಸುವರು. ಪಾಣರು ತೊಡುವ ಅರ್ಧನಾರೀ ವೇಷದ ಸ್ವರೂಪ ನಾಗಮಂಡಲದ ಅರ್ಧನಾರಿ ವೇಷವನ್ನು ಹೋಲುತ್ತದೆ. ಹಿಂದಿನ ಕಾಲದ ಚೌಕುಳಿ ಸೀರೆ ಹೊರಟು ಹೋಗಿ ಜರಿಸೀರೆ ಕಾಣಿಸಿಕೊಂಡಿದೆ. ಕಾಲಿಗೆ ಪಾಡಗ(ಗಗ್ಗರ). ಎದೆಗೆ ತೋಳಿಲ್ಲದ ರವಿಕೆ. ಕೊರಳಿಗೆ ಗುಂಡುಸರ. ಸೊಂಟಕ್ಕೆ ಬೆಳ್ಳಿಪಟ್ಟಿ. ಕೈಗೆ ಕಡಗ. ತಲೆಗೆ ಜರಿಪಟ್ಟಿ ಸುತ್ತಿದ ಪಕ್ಕೆಮುಂಡಾಸು, ತುದಿಗೆ ತುರಾಯಿ, ಕೈಯಲ್ಲಿ ಢಕ್ಕೆ – ಇದಿಷ್ಟು ಅರ್ಧನಾರಿಯ ವೇಷ. ತಲೆಗೆ ರುಮಾಲು ಸುತ್ತಿ ಇಬ್ಬರು ನಾಗರಿಕ ವೇಷದಲ್ಲಿದ್ದು ಒಬ್ಬನ ಕೈಯಲ್ಲಿ ಮರದ ಢಕ್ಕೆ ಅಥವಾ ತೆಂಬರೆ ಇರುತ್ತದೆ. ಇನ್ನೊಬ್ಬನಲ್ಲಿ ಕಂಚಿನ ತಾಳವಿರುತ್ತದೆ.

ದೈವಾವೇಶಗೊಂಡ ದರ್ಶನ ಪಾತ್ರಿ ದೈವಸ್ಥಾನದ ಯಜಮಾನ (ಕರ್ತೃ)ನ ಸೂಚನೆಯಂತೆ ತಾನು ಆವಾಹಿಸಿಕೊಂಡ ದೈವಕ್ಕೆ ಮಂತ್ರಘೋಷ ನೀಡಲು ಕೈಯಲ್ಲಿ ಸಿಂಗಾರದ ಎಳೆಗಳೊಂದಿಗೆ ಸಿದ್ಧನಾಗುತ್ತಾನೆ. ಆ ಪಾತ್ರಿ ಆ ಸಂದರ್ಭದಲ್ಲಿ ಯಾವ ದೈವದ ಪ್ರತಿನಿಧಿಯೋ ಆ ದೈವಕ್ಕೆ ಸಂಬಂಧಪಟ್ಟ ಹೊಗಳಿಕೆಯನ್ನು ಹಾಡುಗಾರ ಪಾಣ ಹಾಡತೊಡಗುತ್ತಾನೆ. ಜೊತೆಗೆ ಅರ್ಧನಾರಿ ವೇಷ ಪಾಣ ಢಕ್ಕೆ ನುಡಿಸುತ್ತಾ ಬಾಯಲ್ಲಿ ಅದೇ ಹಾಡನ್ನು ಪುನರಾವರ್ತಿಸುತ್ತಾ ತನ್ನೆದುರಿನ ಪಾತ್ರಿಯನ್ನು ಕುಣಿಸುತ್ತಾನೆ. ಪಾತ್ರಿ ತನ್ನಲ್ಲಿ ಮೈದುಂಬಿದ ದೈವದ ಗುಣಶೀಲವನ್ನು – ಹಳೆಯಮ್ಮನಾದರೆ ಮೈತುಂಬಾ ಬಟ್ಟೆ ಹೊದ್ದುಕೊಂಡು ಗೂನುಬೆನ್ನು ಮಾಡಿಕೊಂಡು. ಮರ್ಲ್‌ಚಿಕ್ಕಿಯ ಸಂದರ್ಭದಲ್ಲಿ ಹುಚ್ಚಿಯಂತೆ ವರ್ತಿಸುತ್ತಾ – ಅನುಕರಣೆ ಮಾಡುತ್ತಾ ಮಂಡಲಕ್ಕೆ ಪ್ರದಕ್ಷಿಣೆ ಬರುತ್ತಾನೆ. ಇಲ್ಲಿ ತುಳುವಿನ ಭೂತಾರಾಧನೆಗೆ ವೈರುಧ್ಯವಾಗಿ ಹಾಡು ಕ್ರಿಯಾತ್ಮಕವೆನಿಸುತ್ತದೆ. ಜೊತೆಗೆ ಹಾಡು. ಕುಣಿತ. ನಟನೆ, ವಾದ್ಯಮೇಳಗಳಿಂದಾಗಿ ಶೈಲೀಕೃತ ಸ್ವರೂಪವನ್ನು ಪಡೆದು ಆಚರಣಾತ್ಮಕ ರಂಗಭೂಮಿಯ ಸ್ವರೂಪವನ್ನು ಪಡೆಯುತ್ತದೆ.

'ಕೊಡ್ನೀರು' :

ಢಕ್ಕೆ ಬಲಿಯ ಕೊನೆಯಲ್ಲಿ ಕೊಡ್ನೀರು ಎನ್ನುವ ಒಂದು ವಿಧಿ ಆಚರಣೆ ನಡೆಯುತ್ತದೆ. ದೈವದ ಉರುವಿನ ಎದುರು ಇರಿಸಿದ ಕಲಶಗಳನ್ನು ಹೊತ್ತುಕೊಂಡು ಪಾಣಾರಾಟ ನಡೆಸಿದವರ ಮನೆಗೆ ಅಥವಾ ದೈವದ ಗುಡಿಯ ಯಜಮಾನನ ಮನೆಗೆ ಹೋಗುತ್ತಾರೆ. ಹೋಗುವಾಗ ಪಾಣಾರರ ಬಳಗ ಢಕ್ಕೆ, ತೆಂಬರೆ ನುಡಿಸುತ್ತಾ ದೈವಗಳ 'ಹುಟ್ಟುಕಟ್ಟು'ಗಳನ್ನು ಹಾಡುತ್ತಾ ಹೋಗುತ್ತಾರೆ. ಅಲ್ಲಿ ಮನೆಯ ಮಕ್ಕಳನ್ನು ಈ ನೀರಿನಿಂದ ಮೀಯಿಸಿ ತಾವು ಶುದ್ಧವಾದೆವೆಂದು ಭಾವಿಸುತ್ತಾರೆ.

'ಮಹಂಕಾಳಿ ಮುಡ'

ದಕ್ಷಿಣ ಕನ್ನಡದ ಪ್ರದೇಶದಲ್ಲಿ ಮಹಂಕಾಳಿಯನ್ನು ಮಾರಿದೇವತೆ (ಮಾರಿಯಮ್ಮ)ಯೆಂದೇ ತಿಳಿದು ಆರಾಧಿಸಲಾಗುತ್ತದೆ. ಕೋಲದ ಸಂದರ್ಭದಲ್ಲಿ ಮಹಂಕಾಳಿಯ ಹೆಣ್ಣು ರೂಪವನ್ನು 'ಹೊಗಳಿಕೆ'ಯ ರೂಪದಲ್ಲಿ ಉಪಚರಿಸಲಾಗುವುದು. ಕೆಲವೊಂದು ಗ್ರಾಮ ಗುಡಿಗಳಲ್ಲಿ ಪಾಣಾರಾಟದ ಕೊನೆಯ ದಿನ ಬೆಳಗಿನ ಜಾವದಲ್ಲಿ 'ಮಹಂಕಾಳಿಯ ಮುಡ ವರ್ಸುದು' ಎನ್ನುವ ವಿಧಿಯ ಮೂಲಕ ಊರಿನ ಅನಿಷ್ಟವನ್ನು ದೂರೀಕರಿಸುವ ಪ್ರಯತ್ನ ನಡೆಯುತ್ತದೆ. ಮಹಂಕಾಳಿಯ ಮುಡ ಸುಮಾರು ಮೂವತ್ತು ಅಡಿ ಎತ್ತರವಿರುತ್ತದೆ. ಬಿದಿರಿನ ಸಲಿಕೆಯಿಂದ ಕಟ್ಟಿದ ಅಟ್ಟಳಿಕೆಯ ತುದಿಯಲ್ಲಿ ಅಡಿಕೆ ಹಾಳೆಯಿಂದ ಮಾಡಿದ ಮಹಂಕಾಳಿಯ ಮುಖವಿರುತ್ತದೆ. ಕೆಂಪು ಬಣ್ಣದ ಬಟ್ಟೆ ಉಟ್ಟ ಪಾಣ ಬರೆದ ಮಂಡಲಕ್ಕೆ ಧೂಪ ದೀಪ ಬೆಳಗಿ ಕೋಳಿಯ ಹಾರ ನೀಡಿ. ರಕ್ತವನ್ನು ಪಾನಮಾಡಿ ಆವೇಶಪೂರ್ಣ ಉಗ್ರನರ್ತನ ಮಾಡುತ್ತಾ ಅಟ್ಟಳಿಕೆಯೊಳಗೆ ಸೇರಿಕೊಂಡು 'ಮುಡ'ವನ್ನು ಎತ್ತಿಕೊಂಡು ಮಂಡಲಕ್ಕೆ ಮೂರು ಬಾರಿ ಪ್ರದಕ್ಷಿಣೆ ಬರುತ್ತಾನೆ. ಉನ್ನತವಾದ ಆ ಆಕೃತಿಯನ್ನು ಆಧರಿಸಲು ಹಿಂದಿನಿಂದ ಹಲವರು ಸಹಕರಿಸಬೇಕಾಗುತ್ತದೆ. ಮಹಂಕಾಳಿಯ ಹಾಳೆಯ ರಚನೆಗೆ ಬೆಂಕಿಕೊಟ್ಟು ರಾಳದ ಪುಡಿಯನ್ನು ಎರಚಾಡುತ್ತಾ ಜನರ ಅರ್ಭಟದ ನಡುವೆ ಮಂಡಲಕ್ಕೆ ಪ್ರದಕ್ಷಿಣೆ ಬಂದು ನೆರೆದ ಜನ ಸಮೂಹದೊಂದಿಗೆ ಗ್ರಾಮದ ಗಡಿಯ ತನಕ ಹೋಗಿ ಅಲ್ಲಿ ಮುಡವನ್ನು ಇಳಿಸಿ ಬರುವುದು ಸಂಪ್ರದಾಯ.

ಗಂಭೀರವಾಗಿ ಸಾಗುವ ಆರಾಧನಾ ಸಂಪ್ರದಾಯದ ನಡುವೆ ಧಾರ್ಮಿಕ ಚೌಕಟ್ಟಿನೊಳಗೆ ಪ್ರೇಕ್ಷಕವರ್ಗದವರಿಗೆ ಮನರಂಜನೆಯ ಆಚರಣೆಗಳೂ ನಡೆಯುವುದುಂಟು. ಪಾಣಾರಾಟದ ಕೊನೆಯಲ್ಲಿ ಕೆಮ್ಮು. ಜ್ವರ. ಬೆನ್ನು ನೋವು ಮುಂತಾದ ಕಾಯಿಲೆ. ತಗಣೆ. ಇಲಿ. ಮಂಗ. ಹಂದಿ ಮುಂತಾದ ಪ್ರಾಣಿಗಳ ಉಪಟಳಗಳಿಗಾಗಿ ಕೆಮ್ಮಿನ ಕೋಲ. ಜ್ವರದ ಕೋಲ. ಹಂದಿಕೋಲ. ತಗಣೆಕೋಲ ಮುಂತಾದ ಹರಕೆಯ ರೂಪದ ಆಚರಣೆ

ಜರಗುತ್ತದೆ. ಇಲ್ಲಿ ಸದೃಶಕ್ರಿಯಾಮಾಟದ ತತ್ವವನ್ನು ಗುರುತಿಸಬಹುದಾಗಿದೆ. ಇದು ಒಂದು ಬಗೆಯ ಚಿತ್ರಕಾರಕ ಮಾಟ. ಸಾಮಾನ್ಯವಾಗಿ ಬಿಳಿಪಂಚೆ. ಮೇಲೊಂದು ಅಂಗಿ. ತಲೆಗೊಂದು ಮುಂಡಾಸು ತೊಟ್ಟ ಇಬ್ಬರು (ಪಾಣರು) ಜನಸಮುದಾಯದ ನಡುವೆ ರಂಗಕ್ಕೆ ಬಂದು ಮರದ ಬೆಂಚೊಂದರ ಮೇಲೆ ಕುಳಿತುಕೊಳ್ಳುತ್ತಾರೆ. ಇವರ ನಡುವೆ ಅವರ ಬಳಿದ ಹುಡುಗನೊಬ್ಬ ತಲೆಗೆ ಬಿಳಿಬಣ್ಣದ ಬಟ್ಟೆ ಮುಸುಕು ಹಾಕಿಕೊಂಡು ಕುಳಿತುಕೊಳ್ಳುತ್ತಾನೆ. ಮನೆಯಲ್ಲಿ ಜ್ವರ, ಕೆಮ್ಮು. ಅಥವಾ ಇನ್ನಾವುದೇ ಸಮಸ್ಯೆಯಿಂದ ನೊಂದ ಭಕ್ತನೊಬ್ಬ ಎದುರು ಬಂದು ತನಗೆ ಇಂತಹ ಕೋಲ (ಉದಾ : ಕೆಮ್ಮಿದ ಕೋಲ ಇತ್ಯಾದಿ) ಆಗಬೇಕೆಂದು ಹೇಳಿ ನಿರ್ದಿಷ್ಟ ಮೊತ್ತದ ಕಾಣಿಕೆಯನ್ನು ಕುಳಿತಿರುವ ಪಾಣನ ಕೈಯಲ್ಲಿ ಒಪ್ಪಿಸುತ್ತಾನೆ. ಕುಳಿತಿರುವವರಲ್ಲಿ ಒಬ್ಬ ಕಾಯಿಲೆಯುವನ/ಮನೆಯ ಯಜಮಾನನ ಹೆಸರನ್ನು ಕೇಳಿ ತಿಳಿದುಕೊಂಡು ನಡುವೆ ಕುಳಿತಿರುವ ಹುಡುಗನನ್ನು ಕರೆದು ಹೇಳುತ್ತಾನೆ. ಒಡನೆಯೇ ಆ ಹುಡುಗ ಕೋಲದ ಹೆಸರಿಗೆ ತಕ್ಕಂತೆ ಕೆಮ್ಮುವ ಅಥವಾ ಜ್ವರವಾದರೆ ಅದರ ಅನುಕರಣೆ ಮಾಡುತ್ತಾ ಮಾತಿಗೆ ತೊಡಗುತ್ತಾನೆ. ಕುಳಿತಿರುವವನಲ್ಲಿ ಒಬ್ಬ ಕೆಮ್ಮುವನ್ನು ಕುರಿತು ಅಥವಾ ಪ್ರಾಣಿಯ ಕಾಟದ ಪ್ರಸಂಗವಾದರೆ ಅದರ ಬಗೆಬಗೆಯ ಹಿಂಸೆಯನ್ನು ವರ್ಣಮಯ ಭಾಷೆಯಲ್ಲಿ ರಂಗಾಗಿ ವಿವರಿಸುತ್ತಾ ಹೋಗುತ್ತಾನೆ. ಆಗ ಮತ್ತೊಬ್ಬ ಸಮಸ್ಯೆ ಪರಿಹಾರವಾಗಬೇಕಾದರೆ ಏನು ಮಾಡಬೇಕೆಂದು ಕೇಳುತ್ತಾನೆ. ಆಗ "... ದರ್ಶನ ಪಾತ್ರಿಗಳ ಆಳ್ವಿ ಕಾಲಿಗ್ ಬೀಳ್ಳಿ. ಮೊಗುಗೆ. ಮೊಗುನ ಅಜ್ಜಿಗೆ ಗುಂಬ್ಳ್ ಕಾಯಿಯುಪ್ಪ್ ದೊಪ್ಪ್ ಮೆಣಸಿನ ಕಾಯಿ ತಿನ್ನಿ..." ಎಂದು ಎಲ್ಲರೂ ನಗುವಂತೆ ನುಡಿಯುತ್ತಾನೆ. ಆಗ ಮೊದಲನೆಯವನು "ಅದೆಲ್ಲಾ ಆಯ್ತ್ ಏನೂ ಗುಣ ಇಲ್ಲ್ ಅಂತ್ಹೇಳಿ ನಿನ್ ಪಾದಬುಡಕ್ಕ್ ಬಂದಿದ್ದಿ" ಎನ್ನುತ್ತಾನೆ. "ಹಂಗಾರೆ ಒಂದ್ ಕೆಮ್ಮಿನ ಕೋಲ ಮಾಡ್ಸ್ತೆ ಎಂದ್ ಹೇಳ್ಕಣಿ, ಗುಣೊ ಅಪ್ಪುದು ಕಂಡಿತೊ" ಎನ್ನುತ್ತಾನೆ. ಅವನು ಅದಕ್ಕೆ ಒಪ್ಪುತ್ತಾನೆ. ಬೆಂಚಿನಲ್ಲಿ ಕುಳಿತವನು "ಅವತ್ತಿನ ದಿನೊ ಹೇಳ್ಕಂಡ ಹರಕೆ ಈ ಹೊತ್ತಿಗ್ ಸಂದ್‌ತ್" ಎನ್ನುತ್ತಾ ಪ್ರಸಾದ ನೀಡುವಲ್ಲಿಗೆ ಜೊತೆಗೆ ಕಾಣಿಕೆ ವಿನಿಮಯದೊಂದಿಗೆ ಈ ಬಗೆಯ ಕೋಲ (ಕೆಮ್ಮು) ಪರಿಸಮಾಪ್ತಿಗೊಳ್ಳುತ್ತದೆ.

ತುಳು ಪ್ರದೇಶದಿಂದ ವಲಸೆ ಬಂದು ಕನ್ನಡದ ನೆಲದಲ್ಲಿ ಕೋಲ ರೂಪದ ಉಪಚಾರವನ್ನು ಕೈಗೊಳ್ಳುವ ದೈವಗಳೆಂದರೆ ಬೊಬ್ಬರ್ಯ, ಪಂಜುರ್ಲಿ, ಕಲ್ಕುಡ(ಕಲ್ಕುಡ್ಕ). ಈ ದೈವಗಳಿಗೆ ತುಳುನಾಡಿನಲ್ಲಿ ಸಲ್ಲುವ ಉಪಚಾರವನ್ನು ಹೋಲುವ ಆಚರಣೆ ಇಲ್ಲಿನ ಪಾಣರಿಂದ ನಡೆಯುವುದನ್ನು ಕಂಡರೆ ಸಂಸ್ಕೃತಿ ಪ್ರಸರಣಕ್ಕೆ ಒಳ್ಳೆಯ ದೃಷ್ಟಾಂತವಾದೀತು. ಇಂದಿನ ಕುಂದಾಪುರ ಪರಿಸರ ಕನ್ನಡ ಪ್ರದೇಶವಾದರೂ ಸಾಂಸ್ಕೃತಿಕವಾಗಿ ತುಳುನಾಡು ಎಂಬುದನ್ನು ಗಮನಿಸಬೇಕು. ತುಳುನಾಡು ತುಳುಭಾಷೆಯನ್ನು ಆಡುವ ಪ್ರದೇಶಕ್ಕಿಂತ ಬಹಳ ವಿಸ್ತಾರವಾದ ಪ್ರದೇಶ ಹಾಗೂ ಅದು ಒಂದು ಆಡಳಿತ ವಿಭಾಗ ಸೂಚಕ ಪದವೇ ಹೊರತು ಒಂದು ಭಾಷೆ ಪ್ರಚಲಿತವಿದ್ದ ಸೀಮಿತ ಪ್ರದೇಶವಾಗಿರಲಿಲ್ಲ ಎಂಬುದು ಸ್ಪಷ್ಟ (ವಸಂತಶೆಟ್ಟಿ 1987). ನಿತ್ಯ ವ್ಯವಹಾರದಲ್ಲಿ ಕನ್ನಡ ಮಾತನಾಡುವ ಪಾಣನಲ್ಲಿ ತುಳುನಾಡಿನ ಭೂತಮೈದುಂಬಿದೊಡನೆ ಆತ ತುಳುವಿನಲ್ಲೇ ಮಾತಿಗೆ ತೊಡಗುವುದು ಗಮನಿಸತಕ್ಕ ಅಂಶ. ಪಾಣಾರಾಟ ಆರಂಭವಾಗುವುದು ಪಾಣಾರ ಹೆಂಗಸರು ತೆಂಬರೆ ಬಡಿದು ತುಳು ಪಾಡ್ದನದ ನುಡಿತದೊಂದಿಗೆ. ಕಲ್ಕುಡ. ಬೊಬ್ಬರ್ಯ, ಪಂಜುರ್ಲಿ ದೈವಗಳಿಗೆ ಕೋಲದ ಸಂದರ್ಭದಲ್ಲಿ ಹೇಳುವ ಹೊಗಳಿಕೆ ತುಳು ಪಾಡ್ದನಗಳ ಕನ್ನಡ ರೂಪ ಹೊರತು ಬೇರೆ ಅಲ್ಲ (ನೋಡಿ ಅನುಬಂಧ)

ಹೊಗಳಿಕೆಗಳು :

ಪಾಣರು ಡಕ್ಕೆ ಬಲಿಯ ಸಂದರ್ಭದಲ್ಲಿ ಹಾಡುವ ಕನ್ನಡದ 'ಹೊಗಳಿಕೆ'ಗಳ ಬಗೆಗೆ ಅಧ್ಯಯನ ಆಗಬೇಕಾಗಿದೆ. ಹಳೆಯಮ್ಮ, ಬಾಲ್‌ಚಿಕ್ಕು, ಬಗ್ಗುಚಿಕ್ಕು, ಮರ್ಲ್‌ಚಿಕ್ಕು, ಮಾಂಕಾಳಿ ಕಾಪ್ರಿ ದೈವಗಳ ಹಾಡ್ಗತೆಗಳನ್ನು ಕಂಡರೆ ತುಳುನಾಡಿನ ಹಲವು ಭೂತಗಳಂತೆ ಅಸಹಜ ದುರ್ಘಟನೆಗಳಿಂದ ಜೀವತೆತ್ತು ದೈವಗಳಾದ ಹಾಗೆ ಇಲ್ಲಿಯೂ ಕಾಣಸುತ್ತದೆ. ದೈವಗಳ ಹಾಡ್ಗತೆಗಳನ್ನು ಪರಿಶೀಲಿಸಿದರೆ ಸುಬ್ರಹ್ಮಣ್ಯ, ಧರ್ಮಸ್ಥಳ, ಉಳಾಳ (ಉಳ್ಳಾಲ ಅಥವಾ ಬೆಳ್ಮಣ್ಣಿನ ಸಮೀಪದ ಪ್ರದೇಶ?) ಉರ್ಕಿತೋಟ ಮುಂತಾದ ತುಳುನಾಡಿನ ಪ್ರದೇಶಗಳಿಂದ ಕಥಾಕ್ರಿಯೆ ಪ್ರಸರಣಗೊಂಡಂತೆ ಕಾಣುತ್ತದೆ. ಅಬ್ಬಗದಾರಗೆಯರ ಚೆನ್ನೆಯಾಟ. ಅವರ ಆಂತರಿಕ ಕಲಹ. ಕೊನೆಯಲ್ಲಿ ಸಹೋದರಿಯರ ದುರ್ಮರಣದ ದುರಂತಕಥೆಯು ಮರ್ಲ್‌ಚಿಕ್ಕುವಿನ ಹೊಗಳಿಕೆಯಾಗಿ ಪಾಣರ ಬಾಯಲ್ಲಿ ಸಿಗುತ್ತದೆ. ಪಾಣರ ಹಾಡ್ಗತೆಗಳನ್ನೆಲ್ಲ ಸಂಗ್ರಹ ಮಾಡಿ ವಿಶ್ಲೇಷಿಸಿದರೆ ಇಂದು ಕುಂದಾಪುರ ಪರಿಸರ ಭಾಷಿಕವಾಗಿ ಸಾಂಸ್ಕೃತಿಕವಾಗಿ ತುಳುನಾಡಿನಿಂದ ಭಿನ್ನವಾಗಿ ತೋರುತ್ತಿದ್ದರೂ ಇತಿಹಾಸ ಕಾಲದಲ್ಲಿ ಒಂದೇ ಸಾಂಸ್ಕೃತಿಕ ಚೌಕಟ್ಟಿನೊಳಗೆ ಅಳವಟ್ಟಿತ್ತೆಂದು ಪುನಾರಚಿಸುವುದು ಸಾಧ್ಯವಾಗಬಹುದು.

ಮಾಂಕಾಳಿ ದೈವದ ಡಕ್ಕೆಬಲಿ ಸಂದರ್ಭದಲ್ಲಿ ಹಾಡುವ ಮಾಂಕಾಳಿಯ ಹೊಗಳಿಕೆ 'ಸಮಗಾರ ಗಂಡ. ಮಗ ಮಿಂಡ' ಕಥೆಯಿಂದೇ ಪ್ರಸಿದ್ಧವಾಗಿದ್ದು ಇದು ಮಾತೃಗಮನದ ನಿಷಿದ್ಧತೆಯನ್ನು ಸಾರುತ್ತದೆ. ಈ ಕಥೆಯ ಎಳೆಯನ್ನು ಕರ್ನಾಟಕದ ಎಲ್ಲೆಡೆಗಳಲ್ಲೂ (ಸೆಟವಿಯ ಹಾಡುಗಳು) ಗುರುತಿಸಬಹುದು. ಅದರೆ

ಹಾಡಿನಲ್ಲಿ ಬಳಕೆಯಾಗಿರುವ ಭಾಷೆ ಹಾಗೂ ಹಂಸರದ ನೆಲೆಯಲ್ಲಿ ಆರಾಧನಾ ಸಂಪ್ರದಾಯವೊಂದರ ಪ್ರಸರಣದ ಬಗೆಯನ್ನು ಗುರುತಿಸುವಲ್ಲಿ ಇದು ಸಹಕಾರಿಯಾಗಬಲ್ಲುದು.

ಕೊನೆಯ ಮಾತು :

ಪಾಣರು ನಡೆಸುವ ಪಾಣಾರಾಟ ಸ್ಥಳೀಯ ದೈವಗಳಿಗೆ ಸಂಬಂಧಿಸಿದ ಒಂದು ಆರಾಧನಾ ಪ್ರಕ್ರಿಯೆ. ಕೋಲ ಹಾಗೂ ಡಕ್ಕೆಬಲಿ ಎಂಬ ಎರಡು ಬಗೆಯ ಉಪಚಾರ ವಿಧಿಗಳು ಒಂದಾದಮೇಲೊಂದರಂತೆ ಇಲ್ಲಿ ಕ್ರಿಯೆಗೊಳ್ಳುತ್ತವೆ. ಈ ಆರಾಧನಾ ಕ್ರಿಯೆಯಲ್ಲಿ ಸ್ವಾಮಿಗೆ (ನಾಗ) ಮೊದಲ ಮನ್ನಣೆ. ಸ್ವಾಮಿ. ಕ್ಷೇತ್ರಪಾಲ. ಬ್ರಹ್ಮ. ನೆತ್ತರ್ ಹಾಯ್ಗುಳಿ. ಮುಹೂರು ಹಾಯ್ಗುಳಿ. ಕುಂಜಾಡಿ ಹಾಯ್ಗುಳಿ, ತಿರ್ಗನೆ ಹಾಯ್ಗುಳಿ. ನಂದಿ. ಚಿಕ್ಕು. ನೂರೊಂದು ಗಂಡಗಣಗಳು. ಪಂಜುರ್ಲಿ, ಕಲ್ಕುಡ್ಕ. ಬೊಬ್ಬರ್ಯ ಭೂತಗಳ ಆರಾಧನೆಯನ್ನು 'ಕೋಲ' ಎಂಬ ಹೆಸರು ಪ್ರತಿನಿಧಿಸಿದರೆ. ಮೇಲಿನವುಗಳಲ್ಲಿ ತುಳು ಸಂಪ್ರದಾಯದ ಪಂಜುರ್ಲಿ. ಬೊಬ್ಬರ್ಯ. ಕಲ್ಕುಡ್ಕನನ್ನು ಬಿಟ್ಟು ಉಳಿದವುಗಳಿಗೆ 'ಡಕ್ಕೆ ಬಲಿ' ಎಂಬ ಆರಾಧನೆ ಜರಗುತ್ತದೆ. ಈ ಆರಾಧನಾ ರಂಗಭೂಮಿಯೊಂದಿಗೆ ನಡುನಡುವೆ ಬರುವ ವಿಚಿತ್ರವೇಷ ಧರಿಸಿ. ಮೊಗವಾಡ ಕಟ್ಟಿಕೊಂಡ ಹಾಸ್ಯಗಾರ. ಬೇಟೆಗಾರ. ಹುಲಿವೇಷ. ಹಂದಿವೇಷ – ಇಲ್ಲಿನ ಅನುಕರಣ ಪ್ರಸಂಗಗಳು ಸಾಂಸ್ಕೃತಿಕ ರಂಗಭೂಮಿಗೆ ಸಂಕೇತವಾಗುತ್ತವೆ. ಜೊತೆಗೆ ಯಕ್ಷಗಾನದ ಸ್ತ್ರೀವೇಷವನ್ನು ಹತ್ತಿರದಿಂದ ಹೋಲುವ ಚಿಕ್ಕು ಹಳೆಯಮ್ಮ ದೈವದ ಪಾತ್ರಧಾರಿಯ ನೃತ್ಯ ಸಂಯೋಜನೆ. ಪಾಣಾರಾಟಕ್ಕೆ ಒಂದು ಸಂಕೀರ್ಣ ಸ್ವರೂಪವನ್ನು ತಂದಿದೆ. ಜೊತೆಗೆ ಯಜಮಾನನ 'ಶುದ್ಧೀಕರಣ'ಕ್ಕಾಗಿ ನಡೆಸುವ ಕೊಡ್ಡೀರು ವಿಧಿ. ಊರಿನ ಕ್ಷೇಮಕ್ಕೆ ನಡೆವ 'ಮಹಂಕಾಳಿ ಮುಡಿ ಏರ್ಸುದು (ಮಾರಿ ಓಡಿಸುವುದು) ಕುರಿ. ಕೋಳಿ. ಬಲಿ ಇತ್ಯಾದಿಗಳು ಆರಾಧನಾ ಕ್ರಿಯೆಯೊಂದರ ವಿವಿಧೋದ್ದೇಶವನ್ನು ವಿವರಿಸುವುದು. ಮಂಡಲ ಬರೆದು ಅದರ ಸುತ್ತ ದೈವಮಾಹಾತ್ಮ್ಯೆಯನ್ನು ಹಾಡುಹೇಳಿ (ಹೊಗಳಿಕೆ) ಡಕ್ಕೆ. ತಾಳ. ಜಾಗಟೆಗಳೊಂದಿಗೆ ಕುಣಿಸುವ ಬಗೆ ತುಳುವ ಭೂತಾರಾಧನೆಗಿಂತ ತೀರಾ ಭಿನ್ನ ವಿಧಾನ.

ಹೀಗೆ ಪಾಣಾರಾಟ ಕೋಲ ಹಾಗೂ ಡಕ್ಕೆಬಲಿ ಎಂಬ ಎರಡು ನೆಲೆಯಲ್ಲಿ ನಡೆಯುವ ಒಂದು ಆರಾಧನಾ ಪ್ರಕ್ರಿಯೆ.

ಟಿಪ್ಪಣಿ

1. ರೆ. ಬರ್ನೆಲ್. ರೆ. ಮ್ಯಾನರ್. ಅಮೃತ ಸೋಮೇಶ್ವರ. ಡಾ॥ ವಿವೇಕ ರೈ. ಡಾ॥ ಪೀಟರ್ ಜೆ. ಕ್ಲಾಸ್, ಡಾ॥ ಚಿನ್ನಪ್ಪ ಗೌಡ, ಡಾ॥ ಉಪಾಧ್ಯಾಯ ಮುಂತಾದವರು.

2. ಯಕ್ಷಗಾನದಲ್ಲಿ ಬಡಗು. ತೆಂಕು ಎಂಬ ಎರಡು ತಿಟ್ಟುಗಳನ್ನು ಗುರುತಿಸುವಂತೆ ಭೂತಾರಾಧನೆಯಲ್ಲೂ. ಎರಡು ಶೈಲಿ ಭೇದಗಳನ್ನು ಗುರುತಿಸಬಹುದು. ಕಲ್ಕುಡ್ಕ (ತು. ಕಲ್ಕುಡ). ಬೊಬ್ಬರ್ಯ. ಪಂಜುರ್ಲಿ ಮುಂತಾದ ತುಳುನಾಡಿನ ದೈವಗಳಿಗೆ ಕುಂದಾಪುರ ಪರಿಸರದಲ್ಲಿ ಕೋಲದ ಸಂದರ್ಭದಲ್ಲಿ ಪಾಣಾರರು ಕನ್ನಡದಲ್ಲಿ ಹೊಗಳಿಕೆ (ಪಾಡ್ದನವನ್ನು ಹೋಲುವ) ಹಾಡುವುದನ್ನು ಕೇಳಬಹುದು.

3. ಡಕ್ಕೆ ಬಲಿಯಲ್ಲಿನ 'ಬಲಿ' ಎಂಬ ಪದ ಹಿಂದೆ ರಕ್ತಾಹುತಿಯನ್ನು ನೀಡುತ್ತಿದ್ದುದನ್ನು ನೆನಪಿಸುತ್ತದೆ ಎಂಬುದಾಗಿ ಡಾ॥ ಶಿವರಾಮ ಕಾರಂತರು ಬರೆಯುತ್ತಾರೆ. (ನೋಡಿ : 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೃತ್ಯಕಲೆಯ ವಿಕಾಸ ಪು. 236–245. ಬಿಡಿ ಬರಹಗಳು. ಡಾ॥ ಕೆ. ಶಿವರಾಮ ಕಾರಂತ 1972). 'ಬಲಿ' ಎಂಬ ಪದಕ್ಕೆ ದ.ಕನ್ನಡದಲ್ಲಿ ಹರಕೆ. ಉಪಚಾರ. ವಿಧಿ ಆಚರಣೆ ಎಂಬ ಅರ್ಥವಿದ್ದು ಭೂತಬಲಿ. ಬೈಗಿನ ಬಲಿ. ಮಧ್ಯಾಹ್ನದ ಬಲಿ ಎಂಬ ರೀತಿಯಲ್ಲಿ ಬಳಕೆಯಾಗುತ್ತಿದೆ. ಹೀಗಾಗಿ ಡಕ್ಕೆ ಬಲಿ ಎಂದರೆ ಡಕ್ಕೆಯನ್ನು ನುಡಿಸಿ ಮಾಡುವ ವಿಧಿ ಆಚರಣೆ, ಉಪಚಾರ ಎಂದು ಅರ್ಥೈಸಿಕೊಳ್ಳಬಹುದು.

4. ಪಾಣಾರ ದ.ಕನ್ನಡ ಜಿಲ್ಲೆಯ ಭೂತ ಮಾಧ್ಯಮ ಜನಾಂಗಗಳಲ್ಲಿ ಒಂದು. ಪರವ. ಪಂಬದ. ನಲ್ಕೆ ಅಥವಾ ಪಾಣರು ಈ ಭೂತಮಾಧ್ಯಮ ಜನಾಂಗಗಳು. ಪಾಣರು (ಅಂದರೆ ನಲ್ಕೆ) ಪಿತೃ ವಂಶೀಯ ಕುಟುಂಬ ವ್ಯವಸ್ಥೆಗೆ ಒಳಗಾಗಿರುವುದು ಒಂದು ಗಮನಾರ್ಹ ಸಂಗತಿ. ತಾಳೆಗರಿಯ ಕೊಡೆ. ತೆಂಗಿನ ಸೋಗೆಯ ಟೊಪ್ಪಿಗೆಗಳ ನಿರ್ಮಾಣ (ತು. ಮುಟ್ಟಾಳೆ) ಇವರ ಉಪವೃತ್ತಿ. ಸಾಮಾನ್ಯವಾಗಿ ಕೃಷಿಕಾರ್ಮಿಕರು. ಕ್ರಿಸ್ತಶಕ ಒಂದನೆ ಶತಮಾನದ ಹಿಂದುಮುಂದಿನ ಸಂಗಮ್ ಸಾಹಿತ್ಯದಲ್ಲಿ ವೇಲನ್, ಪರಯನ್(ಹೋಲಿಸಿ : ತುಳುನಾಡಿನ ಪರವ), ತುಡಿಯಾರ್, ಮರವಾರ್ ಮುಂತಾದ ಪಂಗಡಗಳ (ಜಾತಿಗಳಲ್ಲಿ) ಉಲ್ಲೇಖ ಕಾಣಸಿಗುತ್ತಿದ್ದು ಅವುಗಳಲ್ಲಿ ಪಾಣರು ಒಂದು. ಈ ಪಾಣರನ್ನು ಆ ಸಾಹಿತ್ಯದಲ್ಲಿ ಅಲೆಮಾರಿ ವೃತ್ತಿಗಾಯಕರೆಂದು ಕರೆಯಲಾಗಿದ್ದು, ಅವರನ್ನು ಮೌಖಿಕ ಸಂಪ್ರದಾಯದ ಕಣಜಗಳೆಂದು ವರ್ಣಿಸಲಾಗಿದೆ. ಸಂಗಮ್ ಸಾಹಿತ್ಯದಲ್ಲಿ ಈ ಪಾಣ

ಪುರುಷರನ್ನು ಪಾಟುನಾರ್ (= ಹಾಡುವವನು), ಮಹಿಳೆಯನ್ನು ಪಾಟಿನಿ, ಪಾಟಿ ಎಂದೂ ಹೇಳಿದೆ. ಈ ಮಹಿಳೆಯರು ಪಾಣನ್ ಅವನ ಹಾಡಿಗೆ ಕ್ರಮಬದ್ಧವಾಗಿ ಹೆಜ್ಜೆ ಹಾಕುತ್ತಿದ್ದಳೆಂದೂ ವಿವರಿಸಿದೆ. ಸಮೃದ್ಧ ಜನಪದ ಗೀತ ಹಾಗೂ ಕುಣಿತಗಳನ್ನು ಉಳಿಸಿಕೊಂಡು ಬಂದ ಆದಿಮ ಬುಡಕಟ್ಟು ಜನಾಂಗ ಪಾಣ ಎಂಬುದಾಗಿ ವಿದ್ವಾಂಸರೊಬ್ಬರು ಬರೆಯುತ್ತಾರೆ. (K. A. Nilakanta Sastri, A History of South India (Oxford 1969 Pp. 136 - 137)

ಈ ಪಾಣ ಜನಾಂಗವನ್ನು ಉತ್ತರ ಮಲಬಾರ್ ಪ್ರದೇಶದಲ್ಲಿ ಮುಂದಿನ ಕಾಲಾವಧಿಯಲ್ಲಿ ಮಲಿಯನ್ ಎಂದು ಕರೆಯಲಾಯಿತಂತೆ. ದಕ್ಷಿಣ ಮಲಬಾರ್ ಪ್ರದೇಶದಲ್ಲಿ ಇಂದಿಗೂ ಅವರನ್ನು ಪಾಣರೆಂದೇ ಕರೆಯಲಾಗುತ್ತಿದೆ. ಅಲ್ಲಿ ಅವರು ತಮ್ಮ ಮೂಲ ಗಾಯಕ ವೃತ್ತಿಯನ್ನೇ ಉಳಿಸಿಕೊಂಡು ಬರುತ್ತಿದ್ದಾರೆ. ಉತ್ತರ ಮಲಬಾರ್‌ನಲ್ಲಿ ಈ ಪಾಣರು ಯಾನೆ ಮಲೆಯರು ಸ್ಥಳೀಯ ದೈವಾರಾಧನೆಯ ಸಂಪ್ರದಾಯ ತೆಯ್ಯಾಟದಲ್ಲಿ ಭಾಗಿಗಳಾಗಿದ್ದು ಚಾಮುಂಡಿ, ವಿಷ್ಣುಮೂರ್ತಿ, ಪೊಟ್ಟನ್ ಮುಂತಾದ ದೈವಗಳ ಮಾಧ್ಯಮವಾಗಿದ್ದಾರೆ. ಉತ್ತರ ಮಲಬಾರದ ಪಾಣರು (ಯಾನೆ ಮಲೆಯ) ಹಾಗೂ ಅಲ್ಲಿಗೆ ಒತ್ತಿನಲ್ಲಿರುವ ತುಳುನಾಡಿನ ಪಾಣರು ಅಥವಾ ನಲ್ಕೆಯವರ ವೃತ್ತಿ ಸಮಾನವಾಗಿರುವುದು ಗಮನಾರ್ಹ ಅಂಶ. ದ.ಕನ್ನಡದ ಮೂಲವಾಸಿಗಳು ಸಾಮಾನ್ಯವಾಗಿ ಮಾತೃವಂಶೀಯರಾಗಿದ್ದು ಅದಕ್ಕೆ ವ್ಯತಿರಿಕ್ತವಾಗಿ ಇಲ್ಲಿನ ಪಾಣರು ಅಥವಾ ನಲ್ಕೆಯವರು ಪಿತೃವಂಶೀಯರಾಗಿರುವುದು ಅವರು ಜಿಲ್ಲೆಗೆ ಹೊರಗಿಂದ ಬಂದಿರಬೇಕು ಎನ್ನುವ ಊಹೆಗೆ ಸಂಗಮ್ ಸಾಹಿತ್ಯದ ದಾಖಲೆ ಪೂರಕವಾಗಿದೆ. (ರಾಜನ್ 1986). (Rajan U: A note on Indigenous Priests and Singers as Reflected in the Tamil Sangam literature, unpublished article but read in National Seminar on the ritualistic folklore of coastal Karnataka Feb 22nd and - 26th 1986 at MGM College Udupi).

5. ನಾಗಮಂಡಲ ಹಾಗೂ ಡಕ್ಕೆ ಬಲಿಗಳನ್ನು ನಡೆಸಿಕೊಡುವ ಬ್ರಾಹ್ಮಣವರ್ಗಕ್ಕೆ ಸೇರಿದ ದೈವಮಾಧ್ಯಮ ಜನಾಂಗ ವೈದ್ಯರು. ಕುಂದಾಪುರ ತಾಲೂಕಿನ ಅಂಪಾರು, ಗೋಳಿಯಂಗಡಿ, ಉಡುಪಿ ತಾಲೂಕಿನ ದಬ್ಬಾಡಿ, ನಾಲ್ಕೂರು, ಸುರಾಲ್—ಈ ವೈದ್ಯರ ನೆಲೆ. ಈ ವೈದ್ಯರ ಬಳಗವನ್ನು ಡವರುಮೋಳದವರು ಅಥವಾ ಮೋಳದವರು ಎಂದು ಕರೆಯುತ್ತಾರೆ. ಮಾನವನ ಆದಿಮ ಸಮಾಜದಲ್ಲಿ ಔಷಧಿ ಕೊಡುವ ವೈದ್ಯ, ಮಂತ್ರವಾದಿ ಹಾಗೂ ಪೂಜಾರಿ ಒಬ್ಬನೇ ಆಗಿದ್ದನಷ್ಟೆ! ಈ ವೈದ್ಯ ಜನಾಂಗದವರಿಗೆ ನಾಟಿವೈದ್ಯ ಪರಂಪರೆಯ ಸಂಪತ್ತು. ಕಣ್ಣಿಗೆ ಬರುವ ಪರೆ, ಗರ್ಭಶೂಲೆ, ಚರ್ಮರೋಗ, ವಿಷಪ್ರಾಶನಗಳಿಗೆ ಈ ಕುಟುಂಬದವರು ಇಂದಿಗೂ ಔಷಧಿ ಕೊಡುತ್ತಾರೆ. ಹೀಗಾಗಿ ಈ ವೈದ್ಯ ಎನ್ನುವ ಪದ ಮೂಲತಃ ವೃತ್ತಿವಾಚಕವಾಗಿದ್ದಿರಬೇಕು.

6. ಧಾರ್ಮಿಕ ಮತಾಚಾರವೊಂದಕ್ಕೆ ಆಟ ಎಂದು ಕರೆಯುವುದನ್ನು ಪಾಣಾರಾಟ, ಜಾಲಾಟ ಮುಂತಾದ ಪದಗಳಲ್ಲಿ ಗಮನಿಸಬೇಕು. ಯಕ್ಷಗಾನ ರಂಗಸಂಪ್ರದಾಯವನ್ನು ಬಯಲಾಟ, ಆಟ ಎಂಬುದಾಗಿಯೇ ಕರೆಯುತ್ತಿರುವುದನ್ನು ಗಮನಿಸಿ ಭೂತಾರಾಧನೆ, ಢಕ್ಕೆ ಬಲಿ, ನಾಗಮಂಡಲಗಳಿಗೂ ಯಕ್ಷಗಾನಕ್ಕೂ ಮೂಲತಃ ನಂಟು ಇದ್ದಿರಬಹುದೇ ಎಂಬ ಸಂಶಯಕ್ಕೆ ಆಸ್ಪದ ಮಾಡಿಕೊಡುತ್ತದೆ.

7. ಕಾಲಿಗೆ ಗಗ್ಗರವಿಟ್ಟು, ಕೈಯಲ್ಲಿ ಖಡ್ಗ, ಚಮರಿ ಧರಿಸಿಕೊಂಡು ಅಣಿಯಿಂದ ಅಲಂಕೃತನಾದ ದೈವ ಮೈತುಂಬಿಕೊಂಡ ಪಾಣ ಸುತ್ತಲಿನವರಿಗೆಲ್ಲ ಅಪರಿಚಿತವಾದ ತುಳು ಭಾಷೆಯಲ್ಲಿ ಮಾತಿಗೆ ತೊಡಗುತ್ತಾನೆ.

"ಕರ್ತುನಲೆ. ಪರಮಾಗಣೆದ ಕರ್ತುನಲೆನ್ ನುಡ್ತ್ಯೆ. ಗುತ್ತು ಮಡಸ್ಥಾನದ ಬಾರಗರೆನ್ ನುಡ್ತ್ಯೆ: ದೇವೆರ್ ಭಟ್ರೆನ್ ನುಡ್ತ್ಯೆ, ಪಂಚ ಆಚಾರ್ರೆನ್ ನುಡ್ತ್ಯೆ. ದೇವೆರೆ ಮೋಲ ಸೇರಿಗಾರ್ರೆನ್ ನುಡ್ತ್ಯೆ. ಯೇಳಿ ರಾಜ್ಯದ ಪದ್ನಾಜಿ ಪಟ್ನದ ಮರಕಾಲೆರೆನ್ ನುಡ್ತ್ಯೆ. ಅಜ್ಜತ್ತಾಜಿ ಗರಡಿ ನಾರ ಬೀರು ಪೂಜಾರಿನ್ ನುಡ್ತ್ಯೆ. ಇನಿತೊಟ್ಟು ದಿನೊಟು ಕೊರ್ಪುನ ಸಿರಿಭೋಗ ಮಲ್ತಿನ ದೊಂಪೊಡು. ಬರೆಯ ದುಂಡಲೊಡು ದೀಪುನ ಸುತ್ತಿಗೆಡ್. ಪತ್ತಿನ ಪೂಜಮಂಗಲಾರತಿದ್ ದಾನೆ ಯೆಚ್ಚಕಡಮೆ ಉಂಡಾಂಡ್ ಕೇಂಡೆ".

ಆಗ ಯಜಮಾನ "ಇದ್, ಬಡಗ್‌ದೇಸ. ನೀನು ಕನ್ನಡದಲ್ಲೇ ನಮಗೆ ನುಡಿ ಕೊಡಬೇಕು."

ಉಲ್ಲೇಖನಗಳು

ಭಟ್, ಗುರುರಾಜ ಪಿ. (ಡಾ)
1977 'ತುಳುನಾಡಿನ ನಾಗಮಂಡಲ'
ಐಬಿಎಚ್ ಪ್ರಕಾಶನ, ಬೆಂಗಳೂರು

ಕೆದ್ಲಾಯ ಸುಬ್ರಹ್ಮಣ್ಯ ಕೆ.
1977 ಪಾಣಾರಾಟ: ಕುಂದದರ್ಶನ ಪುಟ 41–48
ಭಂಡಾರ್ಕಾರ್ಸ್ ಕಾಲೇಜ್, ಕುಂದಾಪುರ

ಚಿದಾನಂದ ಮೂರ್ತಿ
1983 'ಪಗರಣ'

ನಾವಡ ಎ.ವಿ.
1986 ವೈದ್ಯರ ಹಾಡುಗಳು
ಕರ್ನಾಟಕ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ–2

ಶೆಟ್ಟಿ, ವಸಂತ ((ಡಾ)
1987 'ತುಳುಭಾಷೆ ಮತ್ತು ತುಳುನಾಡು'
ಮುಂಗಾರು ದೈನಿಕ, ಮಂಗಳೂರು – 12

ಅನುಬಂಧ – ೧

ಬಬ್ಬರ್ಯನ ಹೊಗಳಿಕೆ:

ಬಬ್ಬರ್ಯರೇ ನಿಮ್ಮ ನಿಜವೇನೆಂದು
ಏಳು ಜನ ಅಣ್ಣತಮ್ಮರು ಹುಟ್ಟುತೇನೆಂದೆ
ತಂದೆ ಹತ್ರನೇ ಮಕ್ಕಳು ಹೇಳುತೇನೆಂದೇ
ಬರವು – ಸರವು ನಾವು ಕಲಿಲೇ ಬೇಕು
ಆ ಮಾತನ್ನೇ ತಂದೆ ಕೇಳಿಸಿಕೊಂಡು
ಬರ ಮಠವ ನಿಮಗೆ ಕಟ್ಟುತೇನೆಂದೆ
ಐಗಳನೇ ಕರದುಕೊಂಡು ಹೊಯಿಗೆ ಮೂರ್ತವ ಮಾಡುತ್ತೇನೆಂದೆ
ಕೈಯ ಅಕ್ಷರ ಬಾಯಿಗೆ ಬರುತ್ತೇನೆಂದೆ
ಬಾಯಿ ಅಕ್ಷರ ಕೈಗೆ ಸಿಗುತೇನೆಂದೆ
ಹೊಯಿಗಿ ಬರವ ನೀವು ಕಲಿತ ಮೇಲೆ
ಹಲಗಿ ಬರವ ಮೂರ್ತ ಮಾಡುತೇನಂದೆ
ಹಲಗಿ ಬರವ ನೀವು ಕಲಿತ ಮೇಲೆ
ವಾಲೀ ಬರವ ಮೂರ್ತ ಮಾಡುತ್ತೇನಂದೆ
ಬರಸರವ ಸುದ್ದ ಕಲಿತ ಮೇಲೇ
ತಂದೇ ಹತ್ರನೇ ಮಕ್ಕಳು ಹೇಳುತೇನಂದೆ
ಯಾಪಾರಾ ಸಾಪಾರಾ ಮಾಡಲೇ ಬೇಕೇ
ಏಳು ಜನ ಅಣ್ಣತಮ್ಮರು ಇರುವಾಗಳಿಕೆ
ಏಳಂಗಡಿನೆ ನೀವು ಕಟ್ಟುತೇನಂದೆ
ರಾಗಿ ನವಣಿಯ ಯಾಪಾರಾ ನೀವು ಮಾಡುತೇನಂದೆ
ಜವಳಿ ಜಟ್ಟಿಯ ಯಾಪಾರ ಮಾಡುತೇನಂದೆ
ಹಾರಿ ಹತ್ತಿಯ ಯಾಪಾರ ಮಾಡುತೇನಂದೆ
ಯಾಪಾರ ಸಾಪಾರ ನಡೆವಾಗಳಿಕೆ
ಹಣವಂತರು ನೀವು ಆದ ಮೇಲೆ
ಪರಬಂದ್ರದ ಯಾಪಾರ ಮಾಡಲೇ ಬೇಕು
ಹಡಗುಗಳ ಅಣ್ಣ ಹೂಡಲೇ ಬೇಕು
ಹಡಗಿಗಾಗುವ ಮರವ ತರಲೇ ಬೇಕು
ಹಡಗಿಗಾಗುವ ಮರ ಇಲ್ಲಾನಂದೆ
ಆಲೋಚನೆ ನೀವು ಮಾಡುವಾಗಳಿಕೆ

ಗಂಗೆ ಗೌರಿ ಎಂಬ ಮರವಾದರೆ ಕಣಜಾರಲ್ಲೆ ಇರುವುದೆಂದೆ
ಯೇಳು ಜನ ಮೊಗೇರರ ನೀ ಕರುದುಕೊಂಡೆ
ತುಳುನಾಡ ಆಚಾರಿನ ಕರುದುಕೊಂಡೆ
ಯೇಳು ಜನ ಅಣ್ಣತಮ್ಮರು ಹೊರಟಾರಲ್ಲ
ಕಣಜಾರಲ್ಲೆ ಹೋಗಿ ನಿಲ್ಲುತ್ತೇನಂದೆ
ಮರ ಅರ್ಸೀ ಮರ ಮೂರ್ತ ಮಾಡುವಾಗಳಿಕೆ
ತುಳುನಾಡ ಆಚಾರಿ ಇರುವಾಗಳಿಕೆ
ಮರಕ್ಕಾದರೆ ಮಚ್ಚು ಬಿಡುತೇನಂದೆ
ತೆಂಕರಾಜ್ಯಕ್ಕೆ ಮರಬೀಳುತೇನಂದೆ
ಏಳು ಜನ ಅಣ್ಣತಮ್ಮರು ಹೇಳುತೇನಂದೆ
ತಲೆತುಂಡು ಕಾಂತೇಸ್ವರದ ದೇವರಿಗಂದೆ
ಬುಡತುಂಡು ಕೋಟೇಸ್ವರದ ತೇರಿಗಂದೆ
ಯೇಳು ಜನ ಮೊಗೇರರು ಇರುವಾಗಳಿಕೆ
ಕಡಲ ಬದಿಗೆ ಮರ ಎಳೆದಾರಲ್ಲ
ತುಳುನಾಡ ಆಚಾರಿ ಇರುವಾಗಳಿಕೆ
ಹಡಗುಗಳ ನೀ ಹೂಡುತ್ತೇನಂದೆ
ಹಡಗಿಗಾಗುವ ಹಾರ ಕೊಡುತ್ತೇನಂದೆ
ಕೋಳಿಯನ್ನ ಕುರಿಯನ್ನ ಕಡಿದಾರಲ್ಲ
ಸಮುದ್ರಕ್ಕಾಗಿ ಹಡಗು ಮಾಡುವಾಗಳಿಕೆ
ಜೀನಸ್ ವಗೈರಿ ಹಡಗಿಗೆ ತುಂಬುತ್ತೇನಂದೆ
ಯೇಳು ಜನ ಅಣ್ಣತಮ್ಮರ್ರು ಹತ್ತುತೇನಂದೆ
ಪರಬಂದರಕ್ಕೆ ಹಡಗು ಬಿಡುತ್ತೇನಂದೆ
ಗೂವ (ಗೋವ) ಕುಚ್ಚಿಗೆ (ಕೊಚ್ಚಿ) ಹಡಗು ಬಿಡುವಾಗ್ಳಿಕೆ
ಸುಳಿನೀರಲ್ಲೆ ಹಡಗು ಇರುವಾಗಳಿಕೆ
ಗಾಳಿ ತುಪಾನಿಗೆ ಹಡಗು ಸಿಗುತ್ತನಂದೆ
ಹಡಗು ಒಡೆದು ನೀವು ಮಾಯವಾದವರೆ
ಉದಿಯವರದಲ್ಲೆ ಅಣ್ಣ ಉದಿಯಾದನೆ
ಕಾಪು ಕಟ್ಟುಪಾಡಿ ದಾಟಿಕೊಂಡೆ
ಹೊನ್ನಾವರಕ್ಕೆ ಹೋದಿ ನೀನು ಹರಿ ಬಬ್ಬರ್‍ಯನೇ
ಕಾಸನಅಡಿಯಲ್ಲೆ ನೀನು ಆದಿ ಕಿರಿ ಬಬ್ಬರ್‍ಯನೆ
ಮಾರಸ್ವಾಮಿಯಲ್ಲೆ ಬಂದು ನಿಲ್ಲುತ್ತೇನಂದೆ
ಅರವತ್ತಾರು ಗರಡಿ ಪಡೆದುಕೊಂಡೆ
ನೂರೊಂದು ತುಂಡು ಸ್ಥಳವ ಪಡೆದುಕೊಂಡೆ
ಬಾಗಲ ಬಂಟನೆಂದೆ ಅನ್ಸಿಕೊಂಡೆ
ಗಡಿಗಡಿಯಲ್ಲೆ ಬಂದು ನಿಲ್ಲುತ್ತೇನಂದೆ
ಗಡಿ ಬಬ್ಬರ್‍ಯನೆಂದೆ ಅನ್ಸಿಕೊಂಡೆ
ನೀನು ಈ ಸ್ಥಳದಲ್ಲಿ ಬಂದು ನಿಲ್ಲುತ್ತೇನಂದೆ
ಈ ಸ್ಥಳದಲ್ಲೆ ಸ್ಥಿರವಾಗಿ ನಿಲ್ಲುವಂತ ಬಬ್ಬರ್‍ಯನೇ.

ಅನುಬಂಧ ೨

ಮರ್ಲ್ಲಿ ಚಿಕ್ಕುವಿನ ಹೊಗಳಿಕೆ:

ಅಕ್ಕ ತಂಗಿಯರು ನೀವು ನಿಜವೇನಂದೆ
ಆ ಮರಳಮ್ಮನೆ ನೀವು ಇರುವಾಗ್ಳಿಗೆ
ಬೆಳ್ಳಿ ಮೂಡಿತು ಬೆಳಗಿನ ಜಾವ
ಆ ಶಿರಮುಡಿಯ ಬಾಚಿ ಕಟ್ಟಿದಳಮ್ಮ
ಆ ಅಕ್ಕತಂಗಿಯರೆ ಮಾತನಾಡುತ್ತೇನಂದೆ
ಮಲ್ಲು ಮಲ್ಲಿಗೆ ಹೂವ ಮುಡಿದಾಳಮ್ಮ
ಕಣ್ಣಿಗಾಗಿ ಕಪ್ಪ ಇಡುವಾಳಮ್ಮ
ಹಣೆಗೆ ಬೊಟ್ಟು ಅವಳು ಇಡುತ್ತೇನಂದೆ
ಲಾವಂಗದ ಚಿನ್ನ ತೊಡುವಾಳಮ್ಮ
ದೇವಾಂಗದ ಶಾಲೆ ಸಿರಿದುಟ್ಟವ್ಳೆ.
ಆ ಅಕ್ಕತಂಗಿಯವ್ರೆ ಮಾತನಾಡುತೇನಂದೆ
ಚೆನ್ನೆಯಾಟವ ನಾವು ಆಡಲಬೇಕೆ
ತಾಯಿಯಾದರೆ ಮನೆಯಲ್ಲಿಲ್ಲವೇನಂದೆ
ಚೆನ್ನೆಮಣೆಯ ನಮಗೆ ಇಲ್ಲದೇನಂದೆ
ಆ ಹಾಲಂಚಿ ನೀವು ಮಾಡುವಾಗ್ಳಿಗೆ
ಭಿಕ್ಷಕಾಗಿ ಜೋಯಿಸ್ರು ಬರುತೇನಂದೆ
ಆ ಮೂರು ಮಾತನೆ ನೀನು ಹೇಳುತೇನಂದೆ
ಭಿಕ್ಷವ ನಿಮಗೆ ಕೊಡಲೇಬೇಕಾದರೆ
ನಿಮಗೊಂದು ಸಾಮುಕ್ಷಿ ಹೇಳಲೇಬೇಕೆ
ಚೆನ್ನೆಮಣೆಯ ನಮಗೆ ಇಲ್ಲದೇನಂದೆ
ಯಾವ ಸ್ಥಳದಲ್ಲೆ ಸ್ವಾಮಿ ಇರುವಾದಂದೆ
ಆ ಮೂರು ಮಾತನೆ ನೀನು ಹೇಳಲೆಬೇಕೆ
ಆ ಹಾಲಂಚನೆ ಜೋಯಿಸ್ರು ಇಡುತೇನಂದೆ
ಆ ತೆಂಕಣ ಅರಿಯಲ್ಲೆ ಇರುವಾದಂದೆ
ಆ ಕಂಚಿನ ಕಲುಬಿಲ್ಲೆ ಇರುವಾದಂದೆ
ಸಾಮುಕ್ಷನೆ ಜೋಯಿಸ್ರು ಹೇಳುವಾಗ್ಳಿಗೆ
ಭಿಕ್ಷವ ಜೋಯಿಸ್ರಿಗೆ ಕೊಡುವಾಗ್ಳಿಗೆ
ಅಕ್ಕತಂಗಿಯವ್ರೆ ಕೂಡಿ ನಡೆದರಮ್ಮ
ತೆಂಕಣ ಅರಿಯಗಾಗಿ ಹೋಗುತೇನಂದೆ
ಕಂಚಿನ ಕಲಬಿನ ಬೀಗ ಮುರಿತೇನಂದೆ
ಆ ಬೆಳ್ಳಿಚೆನ್ನೆಮಣೆಯು ತೆಗೆದುಕೊಂಡೆ
ಕವುಡಿಗಿ ಹರಳನ್ನ ಹಿಡಿದುಕೊಂಡೆ
ಆ ಬಣ್ಣದ ಚಾವಡಿಗೆ ಬರುವರಲ್ಲ
ಅಕ್ಕ ತಂಗಿಯವ್ರೆ ಮಾತನಾಡುತೇನಂದೆ
ಆ ನಾವೊಂದು ಆರತಿಯ ಮಾಡಲೆಬೇಕೆ
ಆ ಚೆನ್ನೆಯಾಟವೆ ಮೂರ್ತ ಮಾಡುತೇನಂದೆ
ಗೇಲ್ ಮೈಯಲ್ಲೆ ನಮ್ಮ ಮರುಳಮ್ಮನೆ ಕೂರುತೇನಂದೆ
ಸೋಲು ಮೈಯಲ್ಲಿ ಅಕ್ಕ ಕೂರುತೇನಂದೆ
ಹತ್ತೆಂಟಾದರೆ ಆಟ ಆಡುವಾಗ್ಳಿಗೆ
ಆ ಮರುಳಮ್ಮನೆ ಆಟ ಗೆಲುತೇನಂದೆ
ಮಾಸಿಟ್ಟಾದರೆ ಅಕ್ಕನಿಗೆ ಬರುತೇನಂದೆ

ಅಕ್ಕತಂಗಿಯವ್ರು ಜಗಳ ಮಾಡುತೇನಂದೆ
ಬಹುಸಿಟ್ಟಾದರೆ ಅಕ್ಕನಿಗೆ ಬರುವಾಗ್ಳೀಗೆ
ಆ ಚೆನ್ನೆಮಣೆಯನೆ ಒಯಿದು ಕಸಿದಳಕ್ಕ
ಆ ಮರಳಿಯ ತಲೆಯ ಮೇಲೆ ಹೊಡೆವಾಗ್ಳಿಗೆ
ತಲೆಒಡೆದು ಮರಳಿ ಬಿಡುತೇನಂದೆ
ಆ ಭೂಮಿಗಾಗಿ ಮರಳಿ ಬೀಳುತಾಗಳಂದೆ
ರಕ್ತಗಳೆ ಹರಿದು ಹೋಗುವಾಗ್ಳಿಗೆ
ಅಕ್ಕನಾದರೆ ನಿಂತು ನೋಡುವಾಗ್ಳಿಗೆ
ಆ ಮಾ ದುಃಖ ಅಕ್ಕ ಬಿಡುತೇನಂದೆ
ಆ ಬಂಗಾರದ ತಂಗಿ ಮಹಾ ಒಳ್ಳೆಯವ್ಳೆ
ಆ ತಂಗಿ ಸತ್ತು (ನಾ) ಇದ್ದು ಫಲವೇನಂದೆ
ಆ ಮರುಳಮ್ಮನ ಬಾಚಿ ಚಂಚಿಕೊಂಡೆ
ಉರ್ಕಿತೋಟದ ಬಾಮಿಗೆ ನಡೆದಳಕ್ಕ
ಆ ಬಾಮಿಗೆ ಬೀಳುತೇನಂದೆ
ಆ ಮನಿಗಾದರೆ ತಾಯಿ ಬರುವಾಗಳವ್ಮು
ಮಗಳು ಮರಳೀನ ತಾಯಿ ಕರಿತೇನಂದೆ
ಆ ನನ್ನ ಮಕ್ಕಳು ಮನೆಯಲ್ಲಿ ಇಲ್ಲದೇನಂದೆ
ಬಣ್ಣದ ಚಾವಡಿಲಿ ನೋಡುವಾಗ್ಳೀಗೆ
ಚೆನ್ನೆಮಣೆಯ ಕೌಚಿ ಬೀಳುತೇನಂದೆ
ರಕ್ತಗಳೆ ಹರಿದು ಹೋಗುತೇನಂದೆ
ಆ ಮಹಾ ದುಃಖವ ತಾಯಿ ಬಿಡುತೇನಂದೆ
ಆ ಉರ್ಕಿತೋಟದ ಬಾಮಿಗೆ ಹೋಗುವಳವ್ಮು
ಬಾಮಿಯಲ್ಲೆ ನಿಂತು ನೋಡುವಳವ್ಮು
ಆ ಅಕ್ಕತಂಗಿಯವ್ರು ಬಾಮಿಗೆ ಬೀಳುತೇನಂದೆ
ಆ ಮಾದುಃಖವ ತಾಯಿ ಬಿಡುತೇನಂದೆ
ಊರ ಜನರೇ ಓಡಿ ಬರುತಾರಂದೆ
ಸಮಾಧಾನವೆ ತಾಯಿಗೆ ಹೇಳುವಾಗ್ಳೀಗೆ
ಆ ಪತಿವ್ರತೆಯ ನಾನು ನಿಜವಾದರೆ
ಆ ಕಂತಿದ ಹೆಣಗಳು ಬಳಿಯಬೇಕೆ
ತನ್ನ ಮುದ್ರುದುಂಗುರವ ಆ ತಾಯಿ ಕಳಚಿಕೊಂಡಳೆ
ಆ ಬಾಮಿಗಾಗಿ ಉಂಗ್ರು ಬಿಡುವಾಗ್ಳೀಗೆ
ಆ ಕಂತಿದ ಜೋಡು ಹೆಣಗಳು ಬಳಿತೇನಂದೆ
ಆ ಬಾಮಿಯಿಂದ ನಿಮ್ನ ನೆಗಿದರಲ್ಲ
ಜೋಡು ಹೆಣಗಳು ನಿಜವೇನಂದೆ
ಉಳಹಾಲದ ಮಲಗದ್ದೆಗೆ ತರುತೇನಂದೆ
ಆ ಗಂಧದ ಚೆಕ್ಕೆಯಲ್ಲಿ ಸುಡುವಾಗ್ಳೀಗೆ
ಆ ಪತಿವ್ರತೆ ಮರುಳಮ್ಮನ ನಿಜವೇನಂದೆ
ಜೈನ ಕುಲದ ಹೆಣ್ಣು ನೀನು ನಿಜವೇನಂದೆ
ಮೈ ಸುದ್ದಾನೆ ಮರಳಿ ಮುಗಿಸಿಕೊಂಡೆ
ಧರ್ಮಸ್ಥಳದಲ್ಲೆ ಹೋಗಿ ನಿಲುತೇನಂದೆ
ಆ ಮಂಜುನಾಥನಿಗೆ ವಂದ್ನಿ ಮಾಡುತೇನಂದೆ
ವರವ ಕೊಡೊ ದೇವ್ರು ವರವ ಕೊಡು
ಆ ಬಡರಾಜ್ಯಕ್ಕೆ ನಾನು ಹೋಗುತೇನಂದೆ
ಕಪ್ಪಕಾಣಿಕೇನ ನಾ ಸೆಳಿತೇನಂದೆ

ಆ ಮಂಜುನಾಥನ ವರವ ಪಡೆದಳಮ್ಮ
ಒಂದನೆ ತಳವ ನೀನು ಪಡಿತೇನಂದೆ
ಯಾವ ತಳವೆ ನಿನಗೆ ನಿಜವೇನಂದೆ
ಆ ಹಾಲಾಡಿಯಲ್ಲಿ ಬಂದು ನಿಲುತೇನಂದೆ
ಆ ಜೈನಸ್ಥಳದಲ್ಲಿ ಸ್ಥಳ ಪಡೆದುಕೊಂಡೆ
ನೂರೊಂದು [ಭಕ್ತ] ಮಕ್ಕಳ ಪಡೆದುಕೊಂಡೆ
ಜಾತ್ರೆಯ ಅಮ್ಮ ನೀನು ನಡೆಸಿಕೊಟ್ಟೆ
ನೂರೊಂದು ಮಕ್ಕಳ ಕರೆಸಿಕೊಂಡೆ

ಬಂಧುಗಳೊಡನೆ ಸಂದರ್ಶನ

1) ಇಂದಿರಾ (ಅಕ್ಕ)
2) ಸುಬ್ರಾಯ ಭಟ್ಟ (ತಂಗಿ ಜಯಂತಿಯ ಪತಿ)
3) ಜಯಂತಿ (ತಂಗಿ)
4) ಸುಮತಿ (ಪತ್ನಿ)

— ಎನ್. ಟಿ. ಭಟ್ ಮತ್ತು ಎಚ್. ಕೆ. ಭಟ್

ಹರಿದಾಸ ಭಟ್ಟರ ತಂದೆಯ ಹೆಸರು ಗೋಪಾಲ ಭಟ್ಟ. ಒಬ್ಬ ಚಿಕ್ಕತಂದೆಯವರ ಹೆಸರು ಅನಂತ ಭಟ್ಟ. ಮತ್ತೊಬ್ಬ ಚಿಕ್ಕತಂದೆಯವರ ಹೆಸರು ಶ್ರೀನಿವಾಸ ಭಟ್ಟ. ಅನಂತ ಭಟ್ಟರ ತಮ್ಮ. ಇಬ್ಬರೂ ಹೋಟೆಲು ಉದ್ಯೋಗ ಮಾಡಿದವರು. ಮೊದಲು ಮಾಡಿದ್ದು ಗದಗದಲ್ಲಿ. ಸುಮಾರು ಐವತ್ತು ಅರವತ್ತು ವರ್ಷಗಳ ಕಾಲ ಅವರು ಈ ಉದ್ಯೋಗ ಮಾಡಿರಬೇಕು. ಹರಿದಾಸ ಭಟ್ಟರ ತಂಗಿಯ ಗಂಡ ಸುಬ್ರಾಯ ಭಟ್ಟರೂ ಸುಮಾರು 50ವರ್ಷ ಕೆಲಸ ಮಾಡಿದ್ದಾರೆ. ಅವರು ತಮ್ಮ 30 ವರ್ಷ ಪ್ರಾಯದಲ್ಲಿ (ಈಗ ಅವರಿಗೆ 75 ವರ್ಷ ಪ್ರಾಯ) ಗದಗಿಗೆ ಹೋದಾಗ ಆಗಲೇ ಅನಂತ–ಶ್ರೀನಿವಾಸ ಭಟ್ಟರು ಹೋಟೆಲ್ ಉದ್ಯಮದಲ್ಲಿ ಹೆಸರು ವಾಸಿಯಾಗಿದ್ದರು.

ಹರಿದಾಸ ಭಟ್ಟರ ಹೆಸರಿನಲ್ಲಿ ಶಿವಹರಿದಾಸ ಭಟ್ಟ ಎಂದಿದೆ. ಮೂಲದಲ್ಲಿ ಇವರ ಹಿರಿಯರು ಕೋಟದ ಸಮೀಪದ ಸೀಲಾವರದಲ್ಲಿದ್ದರು. ಸ್ಮಾರ್ತರಾಗಿದ್ದಿರಬೇಕು. ಉಡುಪಿಗೆ ಬಂದ ಮೇಲೆ ವೈಷ್ಣವ ಸಂಪ್ರದಾಯವನ್ನು ಸ್ವೀಕರಿಸಿರಬೇಕು. ಹಿಂದಿನ ಹಿರಿಯರು ಕೃಷಿಯೋ ಇತರ ಉದ್ಯೋಗ ಏನು ಮಾಡುತ್ತಿದ್ದರೋ ಗೊತ್ತಿಲ್ಲ. ಉಡುಪಿಗೆ ಬಂದ ಗೋಪಾಲ ಭಟ್ಟರು ಕೃಷ್ಣದೇವರ ಮಠದ ಕೈಂಕರ್ಯ ಮಾಡುತ್ತಿದ್ದರು. ಉಡುಪಿಯಲ್ಲಿ ಕೆಲಸಮಯ ಅಣ್ಣತಮ್ಮಂದಿರು ಜೊತೆಗಿದ್ದರು. ಮೊದಲು ಅಣ್ಣ ಗೋಪಾಲ ಭಟ್ಟರು ಹುಬ್ಬಳ್ಳಿಗೆ ಹೋಗಿ ಹೋಟೆಲು ತೆರೆದರು. ತಮ್ಮನನ್ನು ಕರೆದರು. ಕೆಲಸಮಯ ಹುಬ್ಬಳ್ಳಿಯಲ್ಲಿ ಅಣ್ಣನೊಂದಿಗಿದ್ದ ಅನಂತಭಟ್ಟರು ಆಮೇಲೆ ಗದುಗಿನಲ್ಲಿ ಸ್ವಂತ ಹೋಟೆಲು ತೆರೆದರು. ಹುಬ್ಬಳ್ಳಿಯಲ್ಲಿ ಗೋಪಾಲ ಭಟ್ಟರ ದೊಡ್ಡ ಮಗ ಗೋವಿಂದ ಭಟ್ಟರು ಹೋಟೆಲಿನ ವ್ಯವಹಾರದಲ್ಲಿ ತಂದೆಗೆ ಸಹಾಯ ಮಾಡುತ್ತಿದ್ದರು. ಗೋವಿಂದ ಭಟ್ಟರು ಆಕಸ್ಮಾತ್ತಾಗಿ ತೀರಿಕೊಂಡೊಡನೆ ವ್ಯವಹಾರಕ್ಕೆ ತಿಲಾಂಜಲಿ ಕೊಟ್ಟು ಗೋಪಾಲ ಭಟ್ಟರು ಉಡುಪಿಗೆ ಮರಳಿದರು. ಹೋಟೆಲನ್ನು ಸಂಬಂಧಿಕರಿಗೆ ಒಪ್ಪಿಸಿದರು. ಉಡುಪಿಗೆ ಮರಳಿದ ಗೋಪಾಲ ಭಟ್ಟರು ಆಮೇಲೆ ಹುಬ್ಬಳ್ಳಿಗೆ ಕಾಲಿಡಲಿಲ್ಲ. ಉಡುಪಿಯಲ್ಲಿ ಸ್ವಂತ ಜಾಗ ತೆಗೆದುಕೊಂಡು ಮನೆಕಟ್ಟಿಸಿ ಸ್ವತಃ ಪಾಪಿ ತೋಡಿದ್ದರಂತೆ. ಗೋಪಾಲ ಭಟ್ಟರಿಗೆ ಹಿರಿಯ ಮಗ ಗೋವಿಂದ ಭಟ್ಟರು. ಮತ್ತಿನವರು ಹರಿದಾಸ ಭಟ್ಟರು. ತಮ್ಮನೊಬ್ಬ ಮೂರು ದಿನಗಳ ಶಿಶುವಾಗಿದ್ದಾಗ ತೀರಿಕೊಂಡಿದ್ದನಂತೆ. ಹರಿದಾಸ ಭಟ್ಟರಿಗೆ ಅಕ್ಕ ಒಬ್ಬರು ಇಂದಿರಾ – ಮನೆಯಲ್ಲಿ ಅಪ್ಪಿ. ತಂಗಿ ಜಯಂತಿ – ಮುದ್ದಿನ ಹೆಸರು ಅಕ್ಕ. ಇಂದಿರಾರಿಗೆ ಎರಡೋ ಮೂರೋ ಕ್ಲಾಸುಗಳ ವಿದ್ಯಾಭ್ಯಾಸ ಅಷ್ಟೇ. ಹುಡುಗಿ 13 ವರ್ಷದಲ್ಲಿ ದೊಡ್ಡದಾದ ಮೇಲೆ ತಂದೆಯವರು ಶಾಲೆಗೆ ಕಳಿಸಲಿಲ್ಲ. 13 ವರ್ಷ ಕಳೆಯುವಷ್ಟರಲ್ಲಿ ಅವರಿಗೆ ಮದುವೆಯಾಯಿತು. ತಂಗಿ 5ನೆ ತರಗತಿವರೆಗೆ ಓದಿದ್ದಾರೆ. ಅವರಿಗೂ 13 ವರ್ಷ ಪ್ರಾಯದಲ್ಲಿ ಮದುವೆಯಾಯಿತು. ಗೋಪಾಲ ಭಟ್ಟರ ಹೆಂಡತಿ, ಈ ಮಕ್ಕಳ ತಾಯಿ ಶಾಲೆಗೆ ಹೋದದ್ದಿಲ್ಲ. ಅಕ್ಷರಾಭ್ಯಾಸ? 'ಏನೂ ಕೇಳ್ಬೇಡಿ'. ತಾಯಿಗೆ ಸದಾ ಮನೆಕೆಲಸ. ಮಕ್ಕಳಿಗೆ ಅಡಿಗೆ ಮಾಡಿ ಹಾಕುವುದು. ಸಂಜೆಗೆ ದಿನಾ ಭಂಡಾರಿ ಓಣಿಯಲ್ಲಿದ್ದ ತಾಯಿ ಮನೆಗೆ ಭೇಟಿ. ಮನೆಯಲ್ಲಿ ಆಗಾಗ ಹಬ್ಬಗಳು. ಮನೆಯಲ್ಲಿ ಗೋಪಾಲ ಭಟ್ಟರ ತಂಗಿ – ಸುಬ್ರಾಯ ಭಟ್ಟರ ತಾಯಿ – ಜೊತೆಗಿದ್ದರು. ಅವರು 18 ವರ್ಷದವರಾಗಿದ್ದಾಗ ಗಂಡ ತೀರಿಹೋಗಿದ್ದರು. ರಾಜಮ್ಮ ಎಂದವರ ಹೆಸರು. ಗಂಡ ತೀರಿಕೊಂಡಾಗ ಆಕೆ 8 ತಿಂಗಳ ಬಸುರಿ, ಮಗು ಮುಂದೆ ಸುಬ್ರಾಯ ಭಟ್ಟರಾದರು. ಗಂಡ ತೀರಿಕೊಂಡ ಮೇಲೆ ಅಣ್ಣನ ಆಶ್ರಯ ಪಡೆದರು. ಹರಿದಾಸ ಭಟ್ಟರು, ಇಂದಿರಾ, ಜಯಂತಿ – ಇವರನ್ನೆಲ್ಲಾ ಪಾಲನೆ ಪೋಷಣೆ ಮಾಡಿದವರು

ಇದೇ ರಾಜಮ್ಮ. ತಾಯಿ ಹೆತ್ತದ್ದು – ಇವರು ಸಾಕಿದ್ದು. ಇವರಿಗೂ ಯಾವ ವಿದ್ಯಾಭ್ಯಾಸವೂ ಇಲ್ಲ. ಈ ಕುಟುಂಬದಲ್ಲಿ ವಿದ್ಯೆಯ ಪ್ರವೇಶ ಆದದ್ದು – ಹರಿದಾಸ ಭಟ್ಟರೊಂದಿಗೆ –

ಹರಿದಾಸ ಭಟ್ಟರು ಮೊದಲು ಹೋದದ್ದು ಕಡಿಯಾಳಿ ಶಾಲೆಗೆ – ಶಾಲೆಗೆ ಹೆಡ್ಮಾಸ್ಟರರು ನಾರಾಯಣ ಮಾಷ್ಟ್ರು. ಲಿಂಗಪ್ಪ ಮಾಷ್ಟ್ರು, ಶೇಶ ಮಾಷ್ಟ್ರು ಅವರ ಗುರುಗಳು. ಹಿಂದಿ ಕಲಿಸಿದವರು ರಾಮಚಂದ್ರ ಉಪಾಧ್ಯರು.

ಶಾಲೆಗೆ ಹೋಗುವ ಮೊದಲ ದಿನ ಹರಿದಾಸ ಭಟ್ಟರು ಶಾಲೆಗೆ ಹೋಗುವುದಿಲ್ಲ ಎಂದು ಅಣ್ಣನೊಡನೆ ತಕರಾರು ಹೂಡಿದ್ದರಂತೆ. ಅಣ್ಣ ಕೋಲು ಹಿಡಿದುಕೊಂಡು ಜೋರು ಮಾಡಿ ಶಾಲೆಗೆ ಬಿಟ್ಟಿದ್ದುಂಟು. ಅದು ಒಂದೇ ಬಾರಿ. ಆಮೇಲೆ ಶಾಲೆಗೆ ಹೋಗುವುದಿಲ್ಲ ಎಂದು ಹರಿದಾಸ ಭಟ್ಟರು ಇಂದಿನವರೆಗೂ ಹೇಳಿಲ್ಲ. ಇಂದಿರಮ್ಮನಿಗೆ ಈ ಘಟನೆ ಈಗಲೂ ಚೆನ್ನಾಗಿ ನೆನಪಿದೆ - ಹೆಬ್ಬಾಗಿಲಿನಲ್ಲಿ ಕೂತು ಶಾಲೆಗೆ ಹೋಗುವುದಿಲ್ಲ ಎಂದು ಹಟ ಮಾಡಿದ ಹರಿದಾಸ ಭಟ್ಟರದ್ದು, – 5ವರ್ಷ ಪ್ರಾಯದಲ್ಲಿ. ಅವರಿಗಿಂತ ಇಂದಿರಮ್ಮ ಒಂದೂವರೆ ವರ್ಷಕ್ಕೆ ದೊಡ್ಡವರು. ಮೊದಲ ಮಗ ಗೋವಿಂದ ಭಟ್ಟರ ಮೇಲೆ 13 ವರ್ಷ ತಾಯಿ ಬಸಿರಾಗಿರಲಿಲ್ಲ. ಇಂದಿರಮ್ಮ 13 ವರ್ಷ ಕಳೆದ ಮೇಲೆ ಹುಟ್ಟಿದ ಮಗು. ಆ ಮೇಲೆ ಒಂದುವರೆ ವರ್ಷದಲ್ಲಿ ಹರಿದಾಸ ಭಟ್ಟರು ಹುಟ್ಟಿದ್ದು, ಮನೆಯಲ್ಲಾಗ ತುಂಬ ಬಡತನ. ಆದರೆ ಮಕ್ಕಳೆಲ್ಲ ದೊಡ್ಡವಾದಾಗ – ತಂದೆಯವರು ಹೋಟೆಲು ಉದ್ಯಮದಲ್ಲಿ ಮೇಲೆ ಬಂದು ಕುಟುಂಬಕ್ಕೆ ತಕ್ಕಮಟ್ಟಿನ ಅನುಕೂಲ ಆಗಿತ್ತು. ತಂದೆ – ಚಿಕ್ಕತಂದೆಯರಿಂದಾಗಿ ಆಮೇಲೆ ಮಕ್ಕಳು ಬಡತನ ಅನುಭವಿಸಿದ್ದಿಲ್ಲ. ತಂದೆಯವರ ಕಾಲದಲ್ಲಿ ಬಡತನ ಇತ್ತು. ತಂದೆಯವರು ಹೋಟೆಲ್ ಬಿಟ್ಟರೂ, ಚಿಕ್ಕಪ್ಪ ಹೋಟೆಲ್ ಉದ್ಯಮ ಮುಂದುವರಿಸಿ ಸಂಸಾರವನ್ನು ಭರಿಸಿದರು. ತಂದೆ ವೈರಾಗ್ಯ ತಾಳಿ ಕೈಚೆಲ್ಲಿ ಕೂತ ಮೇಲೆ ಮಕ್ಕಳ ವಿದ್ಯಾಭ್ಯಾಸಕ್ಕಾಗಲೀ, ಇತರ ಬಗ್ಗಾಗಲೀ ಗಮನ ಹರಿಸಿದವರು ಚಿಕ್ಕಪ್ಪನೇ. ಚಿಕ್ಕಪ್ಪನಿಗೆ ವಿದ್ಯಾಭ್ಯಾಸ ಇರದಿದ್ದರೂ ವಿದ್ಯೆಯ ಮಹತ್ವದ ಅರಿವಿತ್ತು. ಅವರಿಗೆ ಸಂಗೀತದಲ್ಲಿ ಆಸಕ್ತಿ. ಪಿಟೀಲು ಚೆನ್ನಾಗಿ ಬಾರಿಸುತ್ತಿದ್ದರಂತೆ. ಆದರೆ ಅವರು ವಾಗ್ಮಿ ಅಲ್ಲ. ಪಿಟೀಲನ್ನು ಬೇಕಾದರೆ ಎಲ್ಲ ಬಿಚ್ಚಿ ರಿಪೇರಿ ಮಾಡಿ ಮೊದಲಿನಂತೆ ಜೋಡಿಸಲು ಬರುತ್ತಿತ್ತು ಅವರಿಗೆ. ಅಣ್ಣನಿಗೆ ಸೋಲು ಬಂದ ಮೇಲೆ, ಮಕ್ಕಳಿಲ್ಲದ ಈ ಚಿಕ್ಕಪ್ಪ ಅಣ್ಣನ ಮಕ್ಕಳನ್ನು ತಮ್ಮ ಮಕ್ಕಳೆಂಬ ಭಾವನೆಯಿಂದ ಬೆಳೆಸಿದರು. ಗೋಪಾಲ ಭಟ್ಟರ ವೈರಾಗ್ಯಕ್ಕೆ ಕಾರಣ ದೊಡ್ಡ ಮಗನ ಅಕಾಲ ಮೃತ್ಯು. ಅವರಿಗಾಮೇಲೆ ಆಸ್ತಿ, ಭೂಮಿ, ಒಂದೂ ಬೇಡ. ಪೆರಂಪಳ್ಳಿಯಲ್ಲಿ ನೂರು ಮುಡಿ ಅಕ್ಕಿ ಆಸ್ತಿ ಇತ್ತು ಅವರಿಗೆ. ಸಾಲ ಮಾಡಿ ಆಸ್ತಿ ತೆಗೊಂಡಿದ್ದರು. ಅಪಘಾತವಾದ ಮೇಲೆ ಸಾಲ ಬಾಕಿ ಉಳಿದು ಆಸ್ತಿ ಹೋಯಿತು.

ಮೇಲಿನ ಕುಂಜಿಬೆಟ್ಟಿನ ಮನೆ ತಂದೆಯವರು ಕಟ್ಟಿದ್ದು ಹರಿದಾಸ ಭಟ್ಟರಿಗಾಗಿ. ಮಗನಿಗೆ ಶಾಲೆಯಲ್ಲಿ ಕೆಲಸವಾದ ಮೇಲೆ ಕೆಲಸಕ್ಕೆ ಹೋಗಲು ಅನುಕೂಲವಾಗಲೆಂದು ಕಟ್ಟಿಸಿದ್ದು, ಮಗ ಹೆಚ್ಚು ಕಲಿತು ಪರವೂರಿಗೆ ಹೋಗಿ ಚಾಕರಿ ಮಾಡುವುದು ಬೇಡ. ಊರಲ್ಲಿ ಕಲಿತು ಕಡಿಯಾಳಿಯಲ್ಲಿ ಮಾಸ್ತರಿಕೆ ದೊರೆತಾಗ ಅದನ್ನಷ್ಟು ಮಾಡಿಕೊಂಡಿರಲಿ. ಹೊರಗೆ ಹೋಗುವುದು ಬೇಡ' ಎಂದು ತಂದೆಯವರ ತಾಕೀತು. ತುಂಬ ಕಲಿಸಿದರೆ 'ದೂರ ಹೋಗುವ ಅಪಾಯ – ಕಲಿವುದು ಸಾಕು'– ಎಂದು ಗೋಪಾಲ ಭಟ್ಟರ ನಿಲುವು. ಕಡಿಯಾಳಿ ಶಾಲೆಯಲ್ಲಿ ಪಾಸಾದ ಮೇಲೆ ಹರಿದಾಸ ಭಟ್ಟರು ಬೋರ್ಡ್ ಹೈಸ್ಕೂಲಿಗೆ ಸೇರಿದರು. ಅಲ್ಲಿ ಎಸ್.ಎಸ್.ಎಲ್.ಸಿ. ಮಾಡಿದ ಮೇಲೆ ಮಂಗಳೂರಿಗೆ ಟ್ರೈನಿಂಗ್‌ಗೆ ಹೋದರು. ತಂದೆಯವರೇ ಮಂಗಳೂರಿಗೆ ಹೋಗಿ ನಾಕು ದಿನ ಜೊತೆ ಗಿದ್ದು ವ್ಯವಸ್ಥೆ ಮಾಡಿ ಬಂದರು.

ಹರಿದಾಸ ಭಟ್ಟರು ಕಲಿಯುವುದರಲ್ಲಿ ಅತಿ ಚುರುಕು. ಶಾಲೆಗೆ ಸೇರಿದ್ದೇ ತಡ. ಅಲ್ಲಿಂದ ಇಲ್ಲಿಯವರೆಗೂ ಅವರು ಕಲಿತದ್ದೇ ಹೊರತು ಬೇರೆ ಇಲ್ಲ. ಜಗಳ, ತಂಟೆಗಳಲ್ಲಿ ಅವರಿಲ್ಲ. ಅವರ ಮೇಲೆ ಯಾವ ದೂರೂ ಬಂದದ್ದಿಲ್ಲ.

ಶಾಲೆಯಲ್ಲಿದ್ದಾಗ ಹರಿದಾಸರು ಹರಿಕಥೆ ಮಾಡಿದ್ದುಂಟು. ಆಗ ಶಾಲೆ ಈಗಿನ ಜನತಾ ಪ್ರೆಸ್ ಇರುವ ಜಾಗಕ್ಕೆ ಸಮೀಪ ಇತ್ತು. ಫುಟ್‌ಬಾಲ್‌ನಲ್ಲೂ ಹರಿದಾಸನಿಗೆ ವಿಶೇಷ ಆಸಕ್ತಿ. ಫುಟ್‌ಬಾಲ್ ಮೇಚ್‌ನಲ್ಲಿ ಕೈ ಮುರಿದುಕೊಂಡು ಬಂದ ಸಂದರ್ಭವೂ ಇತ್ತು. ತಾನು ಹೇಳಿದಂತೆ ಆಗಬೇಕೆಂಬ ಛಲ ಆಗಲೇ ಇತ್ತು. ಗಿಳಿ ಬೇಕೆಂದು ಸಾಕಿದ್ದರು ಚಿಕ್ಕಂದಿನಲ್ಲಿ. ಅವರಣ್ಣ ಪಂಜರವನ್ನು ತೊಳೆಯುತ್ತಿದ್ದಾಗ ಒಂದು ದಿನ ಗಿಳಿ ಹಾರಿ ಹೋಯಿತು. ಹಾರಿಹೋದ ಗಿಳಿಯನ್ನು ಹಿಡಿದುಕೊಡಿರೆಂದು ಅವರು ಹಟಹಿಡಿದಿದ್ದರು. ಅದು ಸಿಗಲೇ ಇಲ್ಲ. ಆಗ ಅವರಿಗೆ 6 – 7 ವರ್ಷ. ಶಾಲೆಗೆ ಹೋಗಲು ಸುರುಮಾಡಿದ್ದಷ್ಟೆ. ತಮ್ಮನಿಗೆ ಬೇಕೆಂದು ಹಕ್ಕಿಯನ್ನು ತಂದು ಕೊಟ್ಟವರು ಅಣ್ಣ. ಚಿಕ್ಕತಾಯಿಯೊಂದಿಗೆ ಉಡುಪಿಗೆ ದಿನಾ ಹೋಗುತ್ತಿದ್ದ ಹರಿದಾಸ ಭಟ್ಟರನ್ನು ಗಿಣಿ ಹಾರಿ ಹೋದುದಕ್ಕೆ ಕೂಗುವುದು ಬೇಡ. ಬೊಂಬೆ ತೆಗೆದುಕೊಡುತ್ತೇನೆ ಎಂದು ಸಂತೈಸಿದರಂತೆ. ಆದರೆ ಹೋಗುವಾಗ ಅವರಿಗೆ ಮರೆತುಹೋಯಿತು. ಬರುವಾಗ ಬಡಗುಪೇಟೆಯಲ್ಲಿ ಈಗ ರಾಮಪ್ಪ – ತಿಮ್ಮಪ್ಪನವರ ಅಂಗಡಿಯ ಹತ್ತಿರ ದೊಡ್ಡ ಅಂಗಡಿಯಲ್ಲಿ ತುಂಬಾ ಗೊಂಬೆ ಇತ್ತು. ಆ ಗೊಂಬೆಗಳನ್ನು ನೋಡಿ ಅಲ್ಲಿಯೇ

ಕೂತರು. ಗೊಂಬೆ ತೆಗೆಸಿಕೊಡುತ್ತೇನೆಂದು ಚಿಕ್ಕಮ್ಮ ಹೇಳಿದ್ದರಲ್ಲ, ಅಂತೂ ಗೊಂಬೆ ಬಂದಿತು. ಓದು ಬರಹದಲ್ಲೇ ಅವರ ಸರ್ವ ಆಸಕ್ತಿ.

ಎಂ.ಜಿ.ಎಂ.ನಲ್ಲಿ ಕೆಲಸ ಸಿಗುತ್ತದೆಂದು ಆದಮೇಲೆ ಕಾಲೇಜಿನಿಂದ ಊಟಕ್ಕೆ ಬರಲು ಅನುಕೂಲವಾಗುತ್ತದೆಂದು ಚಿಕ್ಕತಂದೆಯವರು ಹರಿದಾಸ ಭಟ್ಟರಿಗಾಗಿ ಈಗ ವಾಸವಾಗಿರುವ ಜಾಗ ತೆಗೆದುಕೊಂಡರು. ಇದ್ದ ಮನೆಯನ್ನು ಹೊಸತಾಗಿ ಕಟ್ಟಿಸಿದರು. ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕೆಲಸ ಆದಾಗ ಮಧ್ಯಾಹ್ನ ಕಲ್ಸಂಕದ ಮನೆಗೆ ಊಟಕ್ಕೆ ತಡವಾಗುತ್ತದೆಂದು ಉಡುಪಿಯಲ್ಲೊಂದು ಮನೆಮಾಡಿದ್ದರು ಚಿಕ್ಕ ತಂದೆ. ಸೋದೆ ಮಠದ ಓಣಿಯಲ್ಲಿ ಇದ್ದ ಮನೆ ಈಗಲೂ ಇದೆ. ಈಗ ಅದರಲ್ಲಿ ಒಬ್ಬ ಗಾಣಿಗರು ಇದ್ದಾರೆ. ಅಲ್ಲೇ ಮಧ್ಯಾಹ್ನ ಅಡಿಗೆ ಮಾಡಿ ಬಡಿಸಲಿಕ್ಕೆ ಹೋಗುತ್ತಿದ್ದವರು ಅವರ ಅತ್ತೆ, ರಾಜಕ್ಕ. ಸಾಯಂಕಾಲ ಕಲ್ಸಂಕದ ಮನೆಗೆ. ಕಲ್ಸಂಕದಲ್ಲಿ ಎರಡು ಮನೆ. ಒಂದರಲ್ಲಿ ಗೋಪಾಲ ಭಟ್ಟರ ಸಂಸಾರ. ಇನ್ನೊಂದರಲ್ಲಿ ಅನಂತ ಭಟ್ಟರು. ಅವರ ಹೆಂಡತಿ. ಮೊದಲು ಅನಂತ ಭಟ್ಟರಿದ್ದುದು ಸಣ್ಣ ಮನೆ. ಅಣ್ಣನಿಗೆ ಮಕ್ಕಳು, ಮರಿ ದೊಡ್ಡ ಮನೆ ಇರಲಿ, ತನಗೆ ಸಣ್ಣ ಮನೆ ಸಾಕೆಂದು ಈ ಮನೆ ಮಾಡಿದರು. ಆದರೆ ಹೋದ ಮೇಲೆ ಹಳೆಯ ಚಿಕ್ಕ ಮನೆಯನ್ನು ತೆಗೆದು ದೊಡ್ಡದನ್ನೇ ಕಟ್ಟಿಸಿದರು. ಅನಂತ ಭಟ್ಟರು ಗದುಗಿಗೆ ಆಗಾಗ ಹೋಗಿ ಬರುತ್ತಿದ್ದರು. ಅಲ್ಲಿ ಬಾಡಿಗೆ ಮನೆ.

ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಹರಿದಾಸ ಭಟ್ಟರು ಮಾಸ್ತರಾಗಿದ್ದುದು ಕೆಲವೇ ಸಮಯ. ಆ ಸಮಯದಲ್ಲಿ ಪ್ರೈವೇಟಾಗಿ ಇಂಟರ್ ಮೀಡಿಯೇಟ್ ಪರೀಕ್ಷೆ ಪಾಸು ಮಾಡಿದರು. ಇಡೀ ಪ್ರಾಂತದಲ್ಲಿ ಎರಡನೆಯವರಾಗಿ ಪಾಸಾದರು. ಆಗಲೇ ಕನ್ನಡ ವಿದ್ವಾನ್. ಹಿಂದಿ ವಿಶಾರದ ಪರೀಕ್ಷೆಗಳನ್ನು ಮಾಡಿದ್ದರು. ಮದ್ರಾಸಿಗೆ ಹೋಗಿ ಕಲಿಯಬೇಕೆಂದು ಮನಸ್ಸು ಮಾಡಿದಾಗ ತಂದೆಯವರು ಬೇಡವೆಂದರು. ಮಗ ದೂರ ಹೋಗಬಾರದೆಂಬುದೇ ಅವರ ಆಸೆ. ಚಿಕ್ಕ ತಂದೆಯೂ ಅಣ್ಣನಿಗೆ ವಿರುದ್ಧವಾಗಿ ಕಳಿಸಲು ಮೊದಲು ಒಪ್ಪಲಿಲ್ಲ. ಆಗ ಬಹುಶಃ ಚಿಕ್ಕತಂದೆಯವರಿಗೆ 'ಚೆಂದ ಮಾಡಿ' ಒಂದು ಕಾಗದ ಬರೆದರಂತೆ ಹರಿದಾಸ ಭಟ್ಟರು. ಅಲ್ಲದೆ ಪರಿಚಯದವರೆಲ್ಲ ಅನಂತ ಭಟ್ಟರನ್ನು ಹುಡುಗನನ್ನು ಕಲಿಯಲು ಕಳುಹಿಸುವಂತೆ ಒತ್ತಾಯಿಸಿದರು. ಇದರಿಂದಾಗಿ ಚಿಕ್ಕಪ್ಪ ಹರಿದಾಸರನ್ನು ಮದರಾಸಿಗೆ ಕಳಿಸಲು ಮುಂದಾದರು. ಮದರಾಸಿನಲ್ಲಿ ಮೂರು ವರ್ಷ.

ಹರಿದಾಸ ಭಟ್ಟರಿಗೆ ಮದುವೆ ಆದದ್ದು ಮದರಾಸಿನಿಂದ ಶಿಕ್ಷಣ ಮುಗಿಸಿ ಬಂದ ಮೇಲೆ. ಕಾಲೇಜಿನಲ್ಲಿ ಲೆಕ್ಚರರ್ ಆದ ಮೇಲೆ. ಬೀಗರ ಔತಣಕ್ಕೆ ಕಾಲೇಜಿನ ಗೆಳೆಯರೆಲ್ಲ ಬಂದಿದ್ದರು. ಮದುವೆ ಆದದ್ದು ಉಡುಪಿಗೆ ಸಮೀಪದ ಪುತ್ತೂರು ಎಂಬಲ್ಲಿ. ಕಲ್ಸಂಕದ ಮನೆಯಿಂದ ಅಲ್ಲಿಗೆ ವರನ ದಿಬ್ಬಣ. ಕಾಲ್ನಡಿಗೆಯಲ್ಲೇ ಹೋದದ್ದು. ಆನೆ ಸಹಿತ. ಬೀಗರ ಔತಣಕ್ಕೆ ಮರುದಿವಸ ಮನೆಯಲ್ಲಿ, ಹರಿಕಥೆ ಇತ್ತು – ಹಂಡೆ ಗುರುದಾಸರಿಂದ; ಭಾರಿ ಗೌಜಿ.

ಮದುವೆ ಆದದ್ದು ಮದರಾಸಿನಿಂದ ಸುಮತಿ ಎಂಬ ಹುಡುಗಿ. ಇದಕ್ಕೆಲ್ಲ ಮುಂದಾದದ್ದು ಹರಿದಾಸ ಭಟ್ಟರೇ. ಹಿರಿಯರು ಅದಕ್ಕೆ ಹೆಚ್ಚು ಪ್ರವೇಶ ಮಾಡಿರಲಿಲ್ಲ. ಪಾವಂಜೆ ಮಧ್ವಮುನಿರಾಯರು ಹುಡುಗಿಯವರ ಕಡೆಯಿಂದ ಜಾತಕ ತರಿಸಿ ಪರಿಚಯ ಮಾಡಿಕೊಟ್ಟಿರಬೇಕು. ಹಿರಿಯರು ಮದುವೆ ಮಾಡಿಕೋ ಎಂದು ಹೇಳುತ್ತಿದ್ದರು. ಹುಡುಗಿ ಹುಡುಕಿದ್ದೂ ಅವರೇ. ಯಾವ ಕೆಲಸಕ್ಕೂ ತಾನೇ, ಬೇರಾರೂ ಬೇಡ, ಹರಿದಾಸ ಭಟ್ಟರಿಗೆ. ಅವರೇ ಮದರಾಸಿಗೆ ಹೋಗಿ ಹುಡುಗಿ ನಿಶ್ಚಯ ಮಾಡಿ ಬಂದರು. ತಂದೆ ಹೋಗಿರಲಿಲ್ಲ. ಐ. ಪಿ. ಎಸ್. ಪರೀಕ್ಷೆಗೆ ತಯಾರು ಮಾಡುತ್ತಿದ್ದ ಹರಿದಾಸ ಭಟ್ಟರಿಗೆ ಇಂಟರ್‌ವ್ಯೂಗೆ ಆರ್ಡರ್ ಬಂತು – ಆಗ – ಟೈಫಾಯ್ಡ್ ಜ್ವರ ಬಂದದ್ದರಿಂದ ಹೋಗಲಾಗಲಿಲ್ಲ. ಜ್ವರ ತೀವ್ರವಾಗಿ ಬಂದಿತ್ತು. ಪ್ರಭಾಕರ ಪೈಗಳು ಬೇರೆ ಗೆಳೆಯರು ಆಗಾಗ ಬಂದು ನೋಡುತ್ತಿದ್ದರು. ಕೆ. ಕೆ. ಪೈಗಳು. ಪ್ರಭಾಕರ ಪೈಗಳು ನೆರೆಯವರು. ಪ್ರಭಾಕರ ಪೈಗಳೂ ಹರಿದಾಸ ಭಟ್ಟರೂ ಶಾಲೆಯಲ್ಲಿ ಸಮಕಾಲೀನರುಗೆಳೆಯರು. ಕುಮಾರ – ಇನ್ನೊಬ್ಬ ಗೆಳೆಯರು. ರಂಗನಾಥ ಶೆಣೈ ಇನ್ನೊಬ್ಬ ಆಪ್ತರು. ಮದರಾಸಿನಲ್ಲಿ ಅವರಿಬ್ಬರೂ ಜೊತೆಗೆ ಓದಿದವರು. ಮಲ್ಪೆಯ ಕೆದಿಲಾಯರೂ. ಮದರಾಸಿನಲ್ಲಿ ಅವರಿಗೆ ಗೆಳೆಯರಾಗಿದ್ದರು. ಅವರು ಆ ಮೇಲೆ ವಕೀಲರಾದರು.

ಹರಿದಾಸ ಭಟ್ಟರು ಕವನ ಬರೆಯುತ್ತಿದ್ದರು. ಹಾಡುತ್ತಿದ್ದರು. ನಾಟಕದಲ್ಲಿ ಪಾತ್ರವಹಿಸುತ್ತಿದ್ದರು ಸೋಮಿಯ ಸೌಭಾಗ್ಯ – ಕಾಲೇಜಿನಲ್ಲಿ ಆದ ನಾಟಕಗಳಲ್ಲಿ ಅಚ್ಚಳಿಯದ ನೆನಪು. ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಅನೇಕ ಸಾಹಿತಿಗಳನ್ನು ಉಡುಪಿಗೆ ಬರಿಸಿಕೊಂಡು ಅವರನ್ನು ಉಡುಪಿಯ ಜನರಿಗೆ ಪರಿಚಯ ಮಾಡಿಸಿಕೊಟ್ಟವರು ಅವರು. ಭಾರೀ ಕಾರ್ಯಕ್ರಮಗಳನ್ನು ರೂಪಿಸಿಕೊಂಡು – ಮನೆಯಲ್ಲಿ ಅತಿಥಿಗಳಿಗೆ ಆತಿಥ್ಯ ನೀಡಿ ಉಪಚರಿಸಿದರು. ಆಗ ಕಾಲೇಜಿನಲ್ಲಿ ಗೆಸ್ಟ್ ಹೌಸ್ ಇತ್ಯಾದಿ ಇರಲಿಲ್ಲ. ಹರಿದಾಸ ಭಟ್ಟರ ಮನೆಯೇ ಗೆಸ್ಟ್‌ಹೌಸ್. ಮೊದಲು ಕಾರ್ಯಕ್ರಮಗಳು ಕಲಾವೃಂದದ ವತಿಯಿಂದ ಉಡುಪಿಯಲ್ಲಿ ನಡೆಯುತ್ತಿದ್ದವು. ಆ ಮೇಲೆ ಕಾಲೇಜು ಅವರ ಕಾರ್ಯಕ್ಷೇತ್ರ ಆಯಿತು.

ಹರಿದಾಸ ಭಟ್ಟರ ಚಿಕ್ಕಪ್ಪನಿಗೆ ಕಾರುಗಳ ಖಯಾಲಿ ಬಹಳ. ಹಳೆಕಾರು ಕೊಳ್ಳುವುದು. ಅದನ್ನು ಹೊಸತು

ಮಾಡುವುದು ಕೊಡುವುದು. ಹಾಗೆಯೇ ಆಭರಣಗಳನ್ನು ಆಚಾರಿಗಳಿಂದ ಮಾಡಿಸಿ ಮಕ್ಕಳಿಗೆ ಕೊಡುತ್ತಿದ್ದರು. ಹಲವಾರು ತರದ ವ್ಯಾಪಾರ ಅವರದು. ಪತ್ನಿಯ ಪರೀಕ್ಷೆಯೂ ಅವರಿಗಿತ್ತು. ಅಣ್ಣನ ಮಕ್ಕಳ ಮೇಲೆ ತನ್ನ ಮಕ್ಕಳಿಗಿಂತ ಪ್ರೀತಿ ಅವರಲ್ಲಿ. ಹರಿದಾಸರೆಂದರೆ ಅಚ್ಚುಮೆಚ್ಚು. ಹರಿದಾಸ ಭಟ್ಟರು ಅಕ್ಕತಂಗಿಯರೊಂದಿಗೆ ಹೆಚ್ಚು ಸಲಿಗೆ ಇದ್ದವರಲ್ಲ. ಏಕೆಂದರೆ ಅವರ ಕಾರ್ಯಕ್ಷೇತ್ರ ಬೇರೆ. ಹೊರಗಿನ ಆಗು ಹೋಗುಗಳ ಬಗ್ಗೆ ಮನೆಯಲ್ಲಿ ಮಾತನಾಡುವುದು ಕಡಿಮೆ. ಹರಿದಾಸ ಭಟ್ಟರೊಂದಿಗೆ ಅಕ್ಕ – ತಂಗಿಗೆ ಹೆಚ್ಚು ಸಲಿಗೆ ಈಗಲೂ ಇಲ್ಲ. ಅವರು ಎದುರಿಗಿದ್ದರೆ ಅಕ್ಕ – ತಂಗಿ ಇಷ್ಟು ಸಲೀಸಾಗಿ ಮಾತಾಡಲಿಕ್ಕೆ ಸಾಧ್ಯವಿರಲಿಲ್ಲ. ಹಾಗೆಂದು ಅನ್ಯೋನ್ಯತೆಗೆ ಕಮ್ಮಿ ಇಲ್ಲ. ಅವರ ಚಿಕ್ಕಪ್ಪ ತಮಗೆಲ್ಲ ಇದ್ದಂತೆ ಈಗ ಸಂಸಾರವನ್ನು ರಕ್ಷಕನಾಗಿ ತೂಗಿಸಿಕೊಂಡು ಹೋಗುವವರು ಹರಿದಾಸ ಭಟ್ಟರು.

ಮನೆಯಲ್ಲಿ ಪೂಜೆ ಮಾಡುತ್ತಿದ್ದುದು ತಂದೆಯವರು. ಬೆಳಿಗ್ಗೆ ಜಪ ಮಾಡುತ್ತಿದ್ದರು ಹರಿದಾಸ ಭಟ್ಟರು. ತಂದೆ ಮಗನನ್ನು ಜೋರು ಮಾಡಿದ್ದಿಲ್ಲ. ಹೇಳಿದ್ದು ಹೊರಗೆ ಊರು ಬಿಟ್ಟು ಹೋಗ ಬೇಡ ಎಂದಷ್ಟೇ. ದೂರ ಹೋಗಬಾರದು. ಮನೆಗೆ ಬೇಗ ಬರಬೇಕು ಎಂದಷ್ಟೆ ತಾಕೀತು. ಹರಿದಾಸ ಭಟ್ಟರು ಮೊದಲು ವಿದೇಶಕ್ಕೆ ಹೋಗುತ್ತೇನೆಂದಾಗ ತಂದೆ 'ಗಾಳಿಗೆ ಊದಿ ಹಾರಲಿಕ್ಕೆ ಬಿಡುತ್ತಿ' ಎಂದರು. ಅಂದರೆ ತಾನು ಅವರು ಮರಳುವವರೆಗೆ ಉಳಿಯುವುದಿಲ್ಲ ಎಂಬ ಭಯವನ್ನು ಹೀಗೆ ವ್ಯಕ್ತಪಡಿಸಿದ್ದರು. ಆದರೆ ಅವರು ನಿಜವಾಗಿ ತೀರಿಕೊಂಡಿದ್ದು ಮಗನು ಮರಳಿ ಬಂದ ಮೇಲೆಯೇ. ಆಮೇಲೂ ಹಲಕಾಲ ಇದ್ದರು. ನಡುವೆ ಬೇರಷ್ಟೋ ಊರಿಗೆ ಹೋಗಿ ಬಂದರು ಹರಿದಾಸ ಭಟ್ಟರು. ಭಯ ಹಾಗೆ ಹೇಳಿಸಿತ್ತು ಅವರಿಂದ, ಹರಿದಾಸ ಭಟ್ಟರ ತಂದೆ ಮೊದಲು ತೀರಿಕೊಂಡರು. ಒಂದು ವರ್ಷ ಕಳೆದ ಮೇಲೆ ತಾಯಿ. ಇಟಲಿಗೆ ಹೋಗುವ ಮೊದಲು ಇಲ್ಲೊಂದು ಸನ್ಮಾನವಾಗಿತ್ತು. ಪೇಜತ್ತಾಯರು ಇದ್ದರು.

ಹರಿದಾಸ ಭಟ್ಟರಿಗೆ ಊಟ ಪರಿಷ್ಕಾರ, ರುಚಿಕಟ್ಟಾಗಿರಬೇಕು. ಎಲ್ಲಾ ಬಗೆಯ ತಿಂಡಿಯೂ ಇಷ್ಟವೇ. ಇಂಥದ್ದೇ ಆಗಬೇಕೆಂಬ ಹಟ ಇಲ್ಲ. ಚಿಕ್ಕತಾಯಿ ಮಾಡಿದ ಅಡುಗೆ ಎಂದರೆ ಅವರಿಗೆ ಪ್ರಿಯ. ಅಲ್ಲಿಂದ ಪದಾರ್ಥಗಳನ್ನು ತಮ್ಮ ಮನೆಗೆ ತರುವುದಿತ್ತು. ಕರಿದ ತಿಂಡಿ ಎಂದರೆ ಇಷ್ಟವೇ. ಹೆಚ್ಚಿನ ಅಡುಗೆ ಕೆಲಸ ಮಾಡುತ್ತಿದ್ದುದು ಅಮ್ಮನೇ. ಅಮ್ಮ ಕಾಯಿಲೆ ಬಿದ್ದ ಮೇಲೆ ಅಕ್ಕ ತಂಗಿಯರು ಪಾಕಶಾಲೆಗೆ ಹೋದದ್ದುಂಟು. ಹರಿದಾಸ ಭಟ್ಟರಿಗೆ ಮದುವೆ ಆಗುವವರೆಗೆ ಅವರೂ ಹುಡುಗನ ಬೇಕು – ಬೇಡಗಳನ್ನು ಗಮನಿಸಿದ್ದುಂಟು.

ಇಂದಿರಮ್ಮ ಕೊನೆಗೆ ಮಕ್ಕಳೊಂದಿಗೆ ಇಂದ್ರಾಳಿಯಲ್ಲಿ ವಾಸಿಸಿದ್ದುಂಟು. ಆ ಜಾಗ ಮನೆ ಕಟ್ಟಿಸಿಕೊಟ್ಟದು ಹರಿದಾಸ ಭಟ್ಟರೆ. ಇಂದಿರಮ್ಮನ ಮಕ್ಕಳ ವಿದ್ಯಾಭ್ಯಾಸಕ್ಕೆಲ್ಲ ಅನುಕೂಲವಾಗಲೆಂದು ಮಾವ ಹರಿದಾಸ ಭಟ್ಟರು ಈ ಕಾರ್ಯಕ್ಕೆಗೊಂಡರು. ದೊಡ್ಡ ಮಗ ಅಲ್ಲಿಂದಲೇ ಶಾಲೆಗೆ ಹೋದದ್ದು. ಅಲ್ಲಿದ್ದಾಗಲೇ ಕೆಲಸ ಸಿಕ್ಕಿದ್ದು. ಉಳಿದಮಕ್ಕಳು ಅಲ್ಲೇ ದೊಡ್ಡವರಾಗಿ ಅಭಿವೃದ್ಧಿಗೆ ಬಂದರು. ಇಂದಿರಮ್ಮನವರ ಪತಿಗೆ ಖಾಯಂ ಉದ್ಯೋಗವಿಲ್ಲದಿದ್ದುದರಿಂದ ಮಕ್ಕಳ ವಿದ್ಯಾಭ್ಯಾಸ. ಉದ್ಯೋಗ ಹುಡುಕುವುದರಲ್ಲಿ ವಿಶೇಷ ಆಸ್ಥೆ ವಹಿಸಿದವರು ಹರಿದಾಸ ಭಟ್ಟರು. ದೊಡ್ಡ ಮಗಳು (ಹರಿದಾಸ ಭಟ್ಟರ ಸೊಸೆ) ಇದೇ ಇಂದ್ರಾಳಿ ಮನೆಯಿಂದಲೇ ಮದುವೆಯಾಗಿಹೋದವಳು. ಇಂದಿರಮ್ಮ ಮಗನಿಗೆ ಮದುವೆಯಾದ ಮೇಲೆ ಗಂಡನ ಊರು ಬೈಲೂರಿಗೆ ಹೋಗಿ ಅಲ್ಲಿ ಕುಟುಂಬದಲ್ಲಿ ಪಾಲಾದ ಮೇಲೆ ಮರಳಿ ಹರಿದಾಸ ಭಟ್ಟರ ಚಿಕ್ಕಪ್ಪ – ಚಿಕ್ಕಮ್ಮ ಇದ್ದ ಮನೆಗೆ ಬಂದು ವಾಸಿಸುತ್ತಿದ್ದಾರೆ. ಚಿಕ್ಕಮ್ಮ ವಾಸಿಸಿದ್ದ ಮನೆ ಅವರು ಎರಡು ವರ್ಷಗಳ ಹಿಂದೆ ತೀರಿಕೊಂಡ ಮೇಲೆ ಖಾಲಿಯಾಗಿತ್ತು.

ಸ್ನೇಹಿತರಲ್ಲಿಗೆ ಹರಿದಾಸ ಭಟ್ಟರೇ ಹೆಚ್ಚಾಗಿ ಹೋಗುತ್ತಿದ್ದರು. ಕೆಲವೊಮ್ಮೆ ಮಕ್ಕಳೂ ಹರಿದಾಸ ಭಟ್ಟರ ಮನೆಗೆ ಬಂದು ಆಡುತ್ತಿದ್ದರು. ಬಾಲ್ ಆಡುತ್ತಿದ್ದುದ್ದುಂಟು. ಹಾಗೆ ಗದ್ದೆಯಲ್ಲಿ ಬಾಲ್ ಆಡುತ್ತಿದ್ದ ಸಂದರ್ಭ ಒಮ್ಮೆ ಬಿದ್ದು ತುಂಬ ಸಮಯ ಕೈ ನೋವು ಅನುಭವಿಸಿದ್ದಿದೆ. ಬೇರಾವ ತರದ ಚೇಷ್ಟೆಯೂ ಹರಿದಾಸ ಭಟ್ಟರಿಗಿರಲಿಲ್ಲ. – ಓದು ಬರಹ ಹೊರತು. ಪುಸ್ತಕ ಅಂದರೆ ಅವರಿಗೆ ಮುಗಿದು ಹೋಯಿತು. ಅದಕ್ಕಾಗಿ ಧಾರಾಳ ಖರ್ಚು. 'ಅವನೊಡನೆ ಇರುವುದೇ ಸರಸ್ವತಿ' ಎಂದು ತಂದೆ ಹೇಳುತ್ತಿದ್ದರು. ತಂದೆ ಪುಸ್ತಕಪೂಜೆ ಮಾಡುತ್ತಿದ್ದರು. ಮಗ ಪುಸ್ತಕ ಓದಿ ಪೂಜೆ ಮಾಡಿದರು. ಗದುಗಿನಿಂದ ಬರುವಾಗ ಸುಬ್ರಾಯ ಭಟ್ಟರು ಸಾಹಿತ್ಯದ ಪುಸ್ತಕಗಳನ್ನು ಹರಿದಾಸ ಭಟ್ಟರಿಗಾಗಿ ತರುವುದಿತ್ತು. ಆಗಲೇ ಒಂದು ಕವಾಟು ತುಂಬ ಪುಸ್ತಕಗಳಿತ್ತು. ಅದನ್ನೆಲ್ಲ ಆಮೇಲೆ ಕಡಿಯಾಳಿ ಶಾಲೆಗೆ ಕೊಟ್ಟರು. ಹರಿದಾಸ ಭಟ್ಟರು ಬಂಧುಗಳೂ, ಅಪ್ಪರೂ ಆಗಿದ್ದರು. ಅವರ ಅಣ್ಣ ರಾಮಕೃಷ್ಣ ಭಟ್ಟರಿಗೂ ಪುಸ್ತಕ ಪ್ರೇಮ ಬಹಳ. ಹರಿದಾಸ ಭಟ್ಟರಲ್ಲಿ ದಾಸ ಭಟ್ಟರು ಸಂಗೀತ ಹಾಡುತ್ತಿದ್ದರು. ತಬಲಾ ಬಾರಿಸುತ್ತಿದ್ದರು. ಹರಿದಾಸ ಭಟ್ಟರು ಸಂಗೀತ ಸ್ವತಃ ಕಲಿಯಲಿಲ್ಲ. ಆದರೆ ಕಲಿಯುವವರ ಗೆಳೆತನದಲ್ಲಿದ್ದರು. ತಮ್ಮ ಕವನಗಳನ್ನು ರಾಗವಾಗಿ ಓದುವ ಹವ್ಯಾಸ ಹರಿದಾಸ ಭಟ್ಟರಿಗಿತ್ತು.

ಹೊನ್ನಯ್ಯ ಶೆಟ್ಟರ ನವಯುಗದಲ್ಲಿ ಹರಿದಾಸ ಭಟ್ಟರ ಕಥೆ, ಲೇಖನಗಳು ಅಚ್ಚಾಗುತ್ತಿದ್ದವು. 'ಅವರು ಯುದ್ಧಕ್ಕೆ ಹೋಗಲಿಲ್ಲ' ಎಂಬ ಕಾದಂಬರಿ ಅದರಲ್ಲೇ ಪ್ರಕಟವಾಯಿತು. ಕಡಿಯಾಳಿ ಶಾಲೆಯಲ್ಲಿರುವಾಗ ಬರೆದ ಕಥೆ ಅದು – ಸ್ವಂತ ಕಥೆ. 'ಗಬನ್' ಎಂಬುದು ಹಿಂದಿಯಿಂದ ಅನುವಾದ ಮಾಡಿದ್ದು. ಕುಂಜಿಬೆಟ್ಟಿನ ಕಾರಿನ ಪ್ರಭು ಹರಿದಾಸ ಭಟ್ಟರ ಶಿಷ್ಯರಾಗಿದ್ದರಂತೆ.

ಮಾಧವ ಪೈಗಳಿಗೂ ಹರಿದಾಸ ಭಟ್ಟರಿಗೂ ಸಂಪರ್ಕವುಂಟಾದದ್ದು ಕಾಲೇಜು ಆದ ಮೇಲೆ.

ಜಯಂತಿ – ಹರಿದಾಸ ಭಟ್ಟರಿಗೆ ಸುಮಾರು ಹತ್ತು ವರ್ಷ ಸಣ್ಣವರು. ಹರಿದಾಸ ಭಟ್ಟರ ಬಾಲ್ಯದ ವಿಷಯ ಅವರಿಗೇನೂ ಗೊತ್ತಿಲ್ಲ. ಅವರ ಮಕ್ಕಳಿಗೆ – ವಿಠಲದಾಸ ಭಟ್ಟರಿಗೆ – ಕಾಲೇಜಿನಲ್ಲಿ ಉದ್ಯೋಗ ಕೊಡಿಸಿದವರು ಅಣ್ಣ. ತಂಗಿ – ಮಕ್ಕಳನ್ನು ಉಡುಪಿಯಲ್ಲಿ ನೋಡಿಕೊಂಡಿದ್ದೇ ಅವರು. ಸುಬ್ರಾಯ ಭಟ್ಟರು ಹೆಚ್ಚಾಗಿ ಗದಗಿನ ಹೋಟೆಲಿನ ಮೇಲ್ವಿಚಾರಣೆ ನೋಡಿಕೊಂಡಿದ್ದರು. ದೊಡ್ಡ ಸಂಸಾರದ ಹೊಣೆ ತೂಗಿಸಿಕೊಂಡು ಹೋದವರು ಹರಿದಾಸ ಭಟ್ಟರು. ಹರಿದಾಸ ಭಟ್ಟರ ಅಕ್ಕ ಮದುವೆಯಾಗಿ ಹೋದದ್ದು ದೊಡ್ಡ ಮನೆಗೆ. ಬಲ್ಲಾಳರ ಕುಟುಂಬ. ಗ್ರಹಚಾರವಶಾತ್ ಗಂಡನಿಗೆ ಸ್ಥಿರವಾದ ನೆಲೆಯಿರಲಿಲ್ಲ. ಅವಳ ಮಕ್ಕಳನ್ನು ದೊಡ್ಡದು ಮಾಡಿ ಸಂಸಾರವನ್ನು ಸರಿಯಾದ ದಾರಿಯಲ್ಲಿ ನಡೆಸಿದ್ದು ಸೋದರ ಮಾವ, ಹರಿದಾಸ ಭಟ್ಟರು.

ತಂದೆಯವರಿಗೆ ಚಿಂತೆ – ದೊಡ್ಡ ಮಗಳಿಗೆ ಮನೆ ಇಲ್ಲ. ಆ ಚಿಂತೆಯನ್ನು ನೀಗಿಸಿದವರು ಹರಿದಾಸ ಭಟ್ಟರು. ಅಳಿಯನಿಗೆ ಉದ್ಯೋಗವಾದೊಡನೆ ಅವನಿಗೆ ಲೋನು ಕೊಡಿಸಿ 3 ತಿಂಗಳಲ್ಲಿ ಮನೆ ಕಟ್ಟಿಸಿ ಅಕ್ಕನನ್ನು ಹೊಸಮನೆಗೆ ಹೋಗಿಸಿದ ಶ್ರೇಯಸ್ಸು ಅವರದು. ಈಗ ಅಕ್ಕ ಇರುವ ಮನೆ ಆಮೇಲೆ ಪ್ರಾಪ್ತಿಯಾಯಿತು. ಸೊಸೆಯ ಮದುವೆಗೂ ಬೇಕಾದ್ದು ಮಾಡಿದ್ದು – ಓಡಾಡಿದ್ದು – ಕಡಿಯಾಳಿಯಲ್ಲಿ ಆದದ್ದು ಮದುವೆ– ಹರಿದಾಸ ಭಟ್ಟರೇ.

ತಂದೆ ಗೋಪಾಲ ಭಟ್ಟರಿಗೆ ಮಕ್ಕಳು ಚಿಕ್ಕವರಾಗಿದ್ದಾಗಲೇ ಅಸ್ತಮಾ ಉಪದ್ರವ ಇತ್ತು. ಜಯಂತಿ ಹುಟ್ಟಿದ ಸಮಯದಲ್ಲಿ ಅವರಿಗೆ ಆಸ್ತಮಾ ಜೋರಾಗಿತ್ತು. ಹರಿದಾಸ ಭಟ್ಟರಿಗೆ ತೀರಾ ಇತ್ತೀಚೆಗೆ ತಂದೆಯವರ ಬಳುವಳಿ ಅಸ್ತಮಾ ಬಂತು. ಹರಿದಾಸ ಭಟ್ಟರು ಸಾಮಾನ್ಯವಾಗಿ ಕಾಯಿಲೆ ಬಿದ್ದವರಲ್ಲ. ಬಾಲ್ಯದಲ್ಲಿ ಬಂದ ಟ್ಯಾಫ್ಯಾಡ್ ಜ್ವರವಷ್ಟೆ. ಅಮ್ಮನಿಗೆ ಮೊದಲೇನೂ ಕಾಯಿಲೆ ಇರಲಿಲ್ಲ. ವೃದ್ಧಾಪ್ಯದಲ್ಲಿ ವಾತಬೇನೆ ಸುರುವಾಗಿ ಒಂಬತ್ತು ವರ್ಷಗಳ ಕಾಲ ಚಾಪೆ ಹಿಡಿಯಬೇಕಾಯಿತು. ತಂದೆ – ತಾಯಿ ಕೆಲಸಮಯ ಕುಂಜಿಬೆಟ್ಟಿನಲ್ಲಿ ಮಗ – ಸೊಸೆ ಒಂದಿಗೆ ಇದ್ದರೂ ಕೊನೆಗೆ ತಮ್ಮ ಮೊದಲಿನ ಮನೆಗೇ ಬಂದರು. ಮೊದಲು ಗೋಪಾಲ ಭಟ್ಟರು ಅವರ ಹಿಂದೆ ಅಮ್ಮನೂ – ತಂಗಿ,ಮಗಳೊಂದಿಗೆ ಇರಲು ತೊಡಗಿದರು. ತನ್ನ ಕಾಯಿಲೆಯೂ ಅವರನ್ನು ತಾನು ಇದ್ದ ಮನೆಗೇ ಬರುವಂತೆ ಪ್ರೇರೇಪಿಸಿತು ಎಂದು ಕಾಣುತ್ತದೆ.

ಕಾಲೇಜು ಆರಂಭಗೊಂಡ ಸಮಯದಲ್ಲಿ ಎಲ್ಲರೂ ಕುಂಜಿಬೆಟ್ಟಿನಲ್ಲಿ ಜತೆ ಸಂಸಾರ ನಡೆಸಿದ್ದರು. ಕಾಲೇಜಿನ ಕಟ್ಟಡ ಮೇಲೆ ಬರುತ್ತಿದ್ದಾಗ ದಿನಾ ಸಂಜೆ ಹರಿದಾಸ ಭಟ್ಟರು ತಾಯಿಯನ್ನು ಕರೆದು ಕೊಂಡು ಅದನ್ನು ತೋರಿಸಲು ಹೋಗುತ್ತಿದ್ದರು. ಅಮ್ಮನ ಮೇಲೆ ಹರಿದಾಸ ಭಟ್ಟರಿಗೆ ವಿಶೇಷ ಮಮತೆ. ಅಮ್ಮ ಬೇರೆ ವಾಸಿಸತೊಡಗಿದ ಮೇಲೂ ಆಗಾಗ ಅವರಲ್ಲಿಗೆ ಬಂದು ಚಾಪೆಯ ಬಳಿ ಕೂತು ಮಾತನಾಡಿಸದೆ ಹೋಗುವವರಲ್ಲ ಹರಿದಾಸ ಭಟ್ಟರು. ಕಾಯಿಲೆ ಒಂದು ತರದ ಮಾನಸಿಕವೇನೋ. ಕೈ ಮುಟ್ಟಿದರೆ ಏಳುತ್ತಿದ್ದರು. ಇಲ್ಲವಾದರೆ ಏಳಲಾರೆ ಎಂದು ಚಡಪಡಿಸುತ್ತಿದ್ದರು – ಒಂದು ಬಗೆಯ ಹೆದರಿಕೆ.

ಹರಿದಾಸ ಭಟ್ಟರು – ಕ್ರಿಶ್ಚಿಯನ್ ಹೈಸ್ಕೂಲಿಗೆ ಸೈಕಲು ಬಿಟ್ಟುಕೊಂಡು ಹೋಗುತ್ತಿದ್ದರು. ಪ್ರಿನ್ಸಿಪಾಲರಾದ ಮೇಲೆ ಒಂದಾರು ತಿಂಗಳು ಕಾರು ಕೊಂಡುಹೋದದ್ದೂ ಉಂಟು. – ಚಿಕ್ಕಪ್ಪನ ಮಾದರಿ. ಚಿಕ್ಕಪ್ಪ ಊರಿಗೆ ಬರುವಾಗ ಕಾರಿನಲ್ಲೇ ಬರುವುದು. ತಂದೆಯವರು ತೆಂಗಿನ ತೋಟಕ್ಕೆ ಏತದಿಂದ ನೀರು ಮೊಗೆದು ಹಾಕುತ್ತಿದ್ದರು. ಮನೆಮುಂದಿ ಹಗ್ಗ ಹಿಡಿದು ಜಗ್ಗುತ್ತಿದ್ದರು. ಹರಿದಾಸ ಭಟ್ಟರು ಈ ಕೆಲಸದಲ್ಲಿ ಭಾಗಿಯಾಗಿದ್ದಿಲ್ಲ. ದೈಹಿಕ ಶ್ರಮಕ್ಕೆ ಅವರು ಮನಮಾಡಿದ್ದಿಲ್ಲ. ಮಗ ಸಾಹಿತಿಗಳನ್ನು ಮನೆಗೆ ಕರೆತಂದು ಆತಿಥ್ಯ ಮಾಡುವುದಕ್ಕೆ ತಂದೆಗೆ ಆಕ್ಷೇಪವಿರಲಿಲ್ಲ. – ಬದಲು ಭಾರೀ ಸಂತೋಷ. 'ಮಗ ದೊಡ್ಡ ಜನ ಆದ' ಎಂದು ಬೀಗುತ್ತಿದ್ದರು. ಮಗನ ಸಾಹಸದ ಬಗ್ಗೆ ತಮ್ಮ ಬಳಿಗೆ ಬರುವ ವಾಸು ಎಂಬ ಮಿತ್ರರೊಂದಿಗೆ ಯಾವಾಗಲೂ ಹೇಳುತ್ತಿದ್ದರು ಗೋಪಾಲ ಭಟ್ಟರು. ಕುಪ್ಪಮ್ಮ ಎಂಬವರು ಈ ವಾಸುವಿನ ಅಮ್ಮ. ಕುಪ್ಪಮ್ಮ ಎಂದರೆ ಓದದೆ ಪಂಡಿತೆ, ಹರಿದಾಸ ಭಟ್ಟರು ಓದಿದ ಪಂಡಿತ ಎಂದು ಗೋಪಾಲ ಭಟ್ಟರು ಹೇಳುತ್ತಿದ್ದರಂತೆ. ಕುಪ್ಪಮ್ಮನಿಗೆ ಇಡೀ ಇಡೀ ಪುಸ್ತಕಗಳೇ ಬಾಯಿಗೆ ಬರುತ್ತಿದ್ದುವಂತೆ. ಅವರಿಗೆ ಓದು ಬರಹ ಬಾರದು. ಪದ್ಮ ಶ್ರೀನಿವಾಸ

ಕಲ್ಯಾಣವೋ ತುಳುಪದ್ಯಗಳೋ ಎಲ್ಲ ಮುಖಪಾಠ. ಮನೆಯವರು ಸುತ್ತ ಕೂತು ಅವರಿಂದ ಪದ್ಯ ಹೇಳಿಸುವುದು. ಹೇಗೆ ಕಲಿತರೋ ತಿಳಿಯದು. ಅವರು ಗೋಪಾಲ ಭಟ್ಟರ ಅಕ್ಕನ ಮಗಳು. ಅವರಿಗಿದ್ದುದು ಒಬ್ಬಳು ಅಕ್ಕ, ಒಬ್ಬಳು ತಂಗಿ. ಅಕ್ಕ ಕುಪ್ಪಮ್ಮನ ತಾಯಿ. ಹರಿದಾಸ ಭಟ್ಟರ ತಂದೆಯವರೂ ಒಳ್ಳೆ ಹಾಡುತ್ತಿದ್ದರು. ಮಠದಲ್ಲಿ ಸಂಕೀರ್ತನ ಮಾಡಲು ಬರುತ್ತಿತ್ತು ಅವರಿಗೆ. ಮೊಮ್ಮಕ್ಕಳಿಗೆ – ಕುಸುಮ, ಶೋಭಾ ಇವರಿಗೆಲ್ಲ ಹಾಡಲು ಹೇಳಿಕೊಡುತ್ತಿದ್ದರು. ಕುಸುಮ ಇಂದಿರಮ್ಮನ ಮಗಳು–ಸಾಹಿತ್ಯ, ಸಂಗೀತದಲ್ಲಿ ತುಂಬ ಪ್ರೀತಿ ಇರುವವಳು. ಹರಿದಾಸ ಭಟ್ಟರು ಅವಳನ್ನು ಎಲ್ಲ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗುವುದಿತ್ತು. ಕುಸುಮ ಅಂದರೆ ಅಚ್ಚುಮೆಚ್ಚು. ಮನೆಯಲ್ಲಿ ಮೊದಲ ಮಗುವೇ ಅವಳು. ಕುಸುಮನನ್ನು ಎಷ್ಟು ಎತ್ತಿ ಆಡಿಸಿದ್ದಾರೋ ಏನೋ. ಈಗ ಮಕ್ಕಳನ್ನು ಅಷ್ಟು ಆಡಿಸುವುದಿಲ್ಲ ಅವರು. ಕುಸುಮನನ್ನು ಕೆಳಗಿಡುತ್ತಿರಲ್ಲಿಲ್ಲ.

ಹರಿದಾಸ ಭಟ್ಟರಿಗೆ – ಸಾಕುಪ್ರಾಣಿಗಳು – ದನ, ನಾಯಿ, ಬೆಕ್ಕು ಎಲ್ಲ ಇಷ್ಟವೇ. ನಾಯಿಯೊಂದು ವಿದ್ಯುತ್ಸ್ಪರ್ಶವಾಗಿ ತೀರಿಕೊಂಡಿದ್ದರಿಂದ ತುಂಬ ನೊಂದುಕೊಂಡಿದ್ದರು ಅವರು. ಲಕ್ಷ್ಮೀನಾರಾಯಣಾಚಾರ್ಯ ಎಂಬ ಡಾನ್ಸ್ ಮಾಸ್ತರರೊಬ್ಬರು ಹರಿದಾಸ ಭಟ್ಟರು ಚಿಕ್ಕವರಿದ್ದಾಗ ಹಾಡಲು ಹೇಳಿಕೊಡುತ್ತಿದ್ದರು. ಅವರು ಕವನಗಳು ಹಾಡುವ ಧಾಟಿ ಇತ್ಯಾದಿ ಹೇಳುತ್ತಿದ್ದರು. ಮನೆಯಲ್ಲಿ ಸಹೋದ್ಯೋಗಿ ಎಚ್. ಕೆ. ರಾಮಚಂದ್ರ ಮೂರ್ತಿಗಳು ಬಂದಾಗ ಅವರಿಂದ ಗಮಕ ಮಾಡಿಸುತ್ತಿದ್ದರು. ಹರಿದಾಸ ಭಟ್ಟರು ಕೃಷ್ಣನ ಕೊಳಲಿನ ಕರೆಯನ್ನು ಹಾಡಿದ ಸಂದರ್ಭವನ್ನು ಸುಬ್ರಾಯ ಭಟ್ಟರು ನೆನಪಿಸಿಕೊಳ್ಳುತ್ತಾರೆ. ಜಿ. ಟಿ. ನಾರಾಯಣ ರಾಯರು ಹರಿದಾಸ ಭಟ್ಟರ ಕ್ಲಾಸುಮೇಟು. ಅವರು ಮನೆಗೆ ಬಂದರೆಂದರೆ ಸುಖಸಂಕಥಾ ವಿನೋದ. ಹರಿದಾಸ ಭಟ್ಟರಿಗೆ ಮದುವೆಯಾಗುವ ಮೊದಲೇ ಸಾಹಿತಿಗಳ ಆಶ್ರಯ ತಾಣವಾಗಿತ್ತು ಅವರ ಮನೆ. ಅಡುಗೆ ಮಾಡುತ್ತಿದ್ದವರು ಇಂದಿರಮ್ಮ. ಹರಿದಾಸ ಭಟ್ಟರ ಹೆಂಡತಿ ಹೆರಿಗೆಗೆ ಹೋಗಿದ್ದಾಗ ಜಯಂತಿಯೂ ಅಲ್ಲಿಗೆ ಹೋಗಿದ್ದುಂಟು. ಅಂಥ ಸಂದರ್ಭಗಳಲ್ಲಿ ಕಾರಂತರು, ಬೇಂದ್ರೆ ಅತಿಥಿಗಳಾಗಿದ್ದರು. 'ಅಕ್ಕ' ಅಂತ ತಂಗಿಯನ್ನು ಹರಿದಾಸ ಭಟ್ಟರು ಕರೆದುದಕ್ಕೆ ಬೇಂದ್ರೆಯವರು ತಮಾಷೆ ಮಾಡಿದ್ದರಂತೆ. 'ತಂಗಿ ಅಂತೀರಿ, ಅಕ್ಕಾಂತ ಕರೀತಿರಿ' ಎಂದಿದ್ದರಂತೆ.

ಹರಿದಾಸ ಭಟ್ಟರಿಗೆ ಯಾವ ಯಶಸ್ಸು ಸಿಕ್ಕಿದರೂ ಅಕ್ಕ ತಂಗಿಗೆ ಸಂತೋಷ. ಅವರನ್ನು ನೋಡಿದರೇನೇ ಸಂತೋಷ. ಅವರು ಮನೆಗೆ ಬಂದರೆಂದರೆ ಸಂಭ್ರಮ.

ಸುಮತಿ ಅಮ್ಮನವರೊಂದಿಗೆ ಸಂದರ್ಶನದ ಸಾರಾಂಶ:

ಸುಮತಿ ಎಂಬುದು ಅವರಿಗೆ ಬಾಲ್ಯದಿಂದಲೇ ಬಂದ ಹೆಸರು. ಅವರು ಹುಟ್ಟಿದ್ದು ಉಡುಪಿಯ ಸಮೀಪದ ಉದ್ಯಾವರದಲ್ಲಿ. ಅಮ್ಮ ಹೆರಿಗೆಗೆ ಅಲ್ಲಿಗೆ ಬಂದಿದ್ದರು. ತಂದೆಯವರು ಪಾವಂಜೆಯವರು. ಸಂಸ್ಕೃತ ಪಂಡಿತರಾಗಿದ್ದವರು. ಮದರಾಸು ಸರಕಾರಿ ನೌಕರಿಯಲ್ಲಿದ್ದು ಬೇರೆ ಬೇರೆ ಕಡೆ ವರ್ಗವಾಗುತ್ತಿದ್ದವರು – ಪಾಲ್ಘಾಟ್, ಕುಂಭಕೋಣಂ – ಹೀಗೆ ಕೇರಳ ತಮಿಳ್ನಾಡುಗಳಲ್ಲಿದ್ದರು. ಕೊನೆಗೆ ಮದ್ರಾಸಿಗೆ 1941ರಲ್ಲಿ ಬಂದು ಅಲ್ಲಿ ನೆಲೆಸಿದರು. ಸುಮತಿಯ ವಿದ್ಯಾಭ್ಯಾಸ ಆದದ್ದೆಲ್ಲ ಮದ್ರಾಸಿನಲ್ಲಿ. ಹುಟ್ಟಿದ ಮಗು ಮೊದಲು ಬೆಳೆದದ್ದು, ಪಾಲ್ಘಾಟಿನಲ್ಲಿ, ಪಾಲ್ಘಾಟಿನಲ್ಲಿರುವಾಗ ಸುಮತಿಗೆ ಸುಮಾರು 4 ವರ್ಷ. ಮದ್ರಾಸಿಗೆ ಬಂದಾಗ ಹುಡುಗಿಗೆ ಸುಮಾರು 8 ವರ್ಷ. 33ರಲ್ಲಿ ಸುಮತಿಯಮ್ಮನ ಜನನ. ಕುಂಭಕೋಣಂನಲ್ಲಿ ಮೊದಲು ಶಾಲೆಗೆ ಹೋಗುತ್ತಿದ್ದುದು. ಸುಮತಿಗೆ ಮೊದಲು ಕನ್ನಡವೇ ಬರುತ್ತಿರಲಿಲ್ಲ. ತಮಿಳಿನ ಬಳಕೆ ಹೆಚ್ಚು. ಕನ್ನಡವನ್ನು ಅಮ್ಮ ಕಲಿಸುತ್ತಿದ್ದರು ಸುಮತಿ – ರಮೇಶನಿಗೆ. ರಮೇಶ ತುಂಬ ಕಲಿತು ಬರೆಯಲು ತೊಡಗಿದರು. ಸುಮತಿ ಬರೆ ಓದಿದ್ದು ಮಾತ್ರ.

ಸುಮತಿಯ ತಂದೆ ಕೆ. ಎಲ್. ವಿ. ಶಾಸ್ತ್ರಿ. ತಾಯಿ ಕಮಲಾ. ಸುಮತಿಗೆ ಇಬ್ಬರು ಅಣ್ಣಂದಿರು. ಇಬ್ಬರು ತಮ್ಮಂದಿರು. ದೊಡ್ಡವರು ಲಕ್ಷ್ಮೀಧರ. ಎರಡನೇ ಅಣ್ಣ ರಾಜಗೋಪಾಲ. ದೊಡ್ಡ ತಮ್ಮ ರಮೇಶ, ಕಿರಿಯವರು ಪದ್ಮನಾಭರಾವ್. ಅಕ್ಕತಂಗಿಯಂದಿರಿಲ್ಲ. ಮಕ್ಕಳಲ್ಲಿ ಎಲ್ಲಕ್ಕಿಂತ ಹೆಚ್ಚು ವಿದ್ಯಾಭ್ಯಾಸ ಮಾಡಿದವರು ರಾಜಗೋಪಾಲ್ ಅಮೇರಿಕದಲ್ಲಿದ್ದಾರೆ. ಅವರೊಡನೆ ಸಂಪರ್ಕ ಕಡಿಮೆ. ಯುನಿವರ್ಸಿಟಿಯಲ್ಲಿ ಪ್ರೊಫೆಸರ್. ಬಯೋಕೆಮಿಸ್ಟ್ರಿಯಲ್ಲಿ ಎಂ.ಎಸ್.ಸಿ. ಮಾಡಿ ಪಿ. ಎಚ್‌ಡಿ. ಮಾಡಿ ಅಲ್ಲಿಗೆ ಹೋಗಿ ಅಲ್ಲಿ ಬೇರೆ ಡಾಕ್ಟರೇಟ್ ತೆಗೆದುಕೊಂಡಿದ್ದರು. ದೊಡ್ಡ ಅಣ್ಣ ಬಿ.ಎಸ್.ಸ್ಸಿ. ಮಾಡಿದ್ದಾರೆ. ಕಾನ್ಪುರದ ಐ.ಐ.ಟಿ.ಯಲ್ಲಿ ರೀಸರ್ಚ್ ಅಸಿಸ್ಟೆಂಟ್ ಆಗಿದ್ದಾರೆ. ರಮೇಶ ಮೈಸೂರಲ್ಲಿ. ಬಾಬು ಮದರಾಸಿನಲ್ಲಿ ಎಡ್ವೋಕೇಟ್. ಸುಮತಿ ಎಸ್. ಎಸ್. ಎಲ್. ಸಿ. ಓದಿದ್ದಾರೆ. ಮದುವೆಯಾಗುವಾಗ ಸುಮತಿಗೆ 20 ವರ್ಷ ಪ್ರಾಯ.

ಹರಿದಾಸ ಭಟ್ಟರಿಗೆ ಮದರಾಸಿನಲ್ಲಿದ್ದಾಗಲೇ ಹುಡುಗಿಯ ಪರಿಚಯವಾಗಿರಬೇಕೆಂದು ಸುಮತಿಯ ಮಾವನಿಗೆ ಗುಮಾನಿ. ವಸ್ತು ಸ್ಥಿತಿ, ಹಾಗಲ್ಲ. ಮಂದಾಕಿನಿ ಎಂಬ ಹಿಂದಿ ಲೆಕ್ಚರರ್ ಮದರಾಸಿನಲ್ಲಿದ್ದವರು

—ಪಾವಂಜೆಯವರು ಪರಿಚಯ ಮಾಡಿದ್ದರಿಂದ ಸಂಬಂಧ ಕುದುರಿದ್ದು. ಮಂದಾಕಿನಿ ಕೆ.ಎಲ್.ವಿ.ಶಾಸ್ತ್ರಿಗಳ ಸಂಬಂಧಿ. ಜಾತಕ ಎಲ್ಲ ನೋಡಿಯೇ ಸಂಬಂಧ ನಿಶ್ಚಯವಾದದ್ದು. ಸುಮತಿಯ ತಂದೆಗೆ ಜಾತಕದಲ್ಲಿ ತುಂಬ ವಿಶ್ವಾಸ. ಮದುವೆಯಾದೊಡನೆ ಉಡುಪಿಗೆ ಬಂದು ಇದೇ ಕುಂಜಿಬೆಟ್ಟಿನಲ್ಲಿ ಸಂಸಾರ ಸುರುಮಾಡಿದ್ದು. ಅತ್ತೆ ಮಾವ ಕೆಲಸಮಯ ಜೊತೆಗಿದ್ದರು. ಆ ಮೇಲೆ ತಮ್ಮ ಹಿಂದಿನ ಮನೆಗೆ ಮರಳಿದರು.

ಹರಿದಾಸ ಭಟ್ಟರು ಈಗ ಸೌಮ್ಯ ಆಗಿದ್ದಾರೆ. ಎಲ್ಲರಿಗೂ ಹರಿದಾಸ ಭಟ್ಟರೊಡನೆ ಮಾತಾಡಲು ಅಂಜಿಕೆ. ಸುಮತಿಗೂ ಹಾಗೆ. ಸಲಿಗೆಯಲ್ಲಿದ್ದವರು ಯಾರೂ ಇಲ್ಲ. ತಂದೆ–ಮಗನೊಂದಿಗೆ ಸಲಿಗೆ ಇಲ್ಲ. ಮಗನ ಅಭಿಪ್ರಾಯಕ್ಕೆ ತಂದೆಯ ಒಪ್ಪಿಗೆ ಇಲ್ಲ. ಒಬ್ಬನೇ ಮಗ ಊರಲ್ಲಿದ್ದು ಕಡಿಯಾಳಿಯಲ್ಲಿ ಮಾಸ್ತರರಾಗಿರಲಿ ಎಂದು ಅಂಬೋಣ.

ಸುಮತಿಯನ್ನು ಮದುವೆಯಾದಾಗ ಹರಿದಾಸ ಭಟ್ಟರಾಗಲೇ ಎಂ. ಜಿ. ಎಂ. ನಲ್ಲಿ ಲೆಕ್ಚರರಾಗಿದ್ದರು. ತಮ್ಮ ವಿವಾಹಪೂರ್ವದ ದಿನಗಳ ಕುರಿತು ಪತ್ನಿಗೆ ವಿವರ ನೀಡಿದ್ದುಂಟು. ಮೊದಲವರಿಗೆ 18 ರೂಪಾಯಿ ಸಂಬಳ ಇತ್ತಂತೆ ಕಡಿಯಾಳಿಯಲ್ಲಿ. ಎಲ್ಲಾದರೂ ಖರ್ಚಿನ ಬಗ್ಗೆ ಮಾತೆತ್ತಿದ್ದರೆ 'ನಾನಿನ್ನೂ ಕಡಿಯಾಳಿಯಲ್ಲಿ ಮಾಸ್ತರರಾಗಿರಬೇಕಿತ್ತು' ಎಂದು ತಮಾಷೆ ಮಾಡುತ್ತಿದ್ದರಂತೆ. ಲೆಕ್ಚರರಾಗಿದ್ದಾಗಲೂ ತುಂಬ ಕಡಿಮೆ ಸಂಬಳ ಆಗ. ಹರಿದಾಸ ಭಟ್ಟರಿಗೆ ಆಸೆ ಇಲ್ಲ. ತಮಗೆ ಬೇಕೆನಿಸಿದ್ದಕ್ಕೆಲ್ಲ ಧಾರಾಳ ಖರ್ಚು ಮಾಡುವವರೇ, ಹಿಂದೆ ಮುಂದೆ ನೋಡುವುದಿಲ್ಲ. ಮನೆಯ ವ್ಯವಹಾರದ ಬಗ್ಗೆ ಅವರು ಇದ್ದದ್ದೆ ಕಾಲೇಜಿನಲ್ಲಿ, ಮನೆಯ ವಿಚಾರ ಅವರಿಗೇನೂ ಗೊತ್ತಿರಲಿಲ್ಲ. ಈಗ ರಿಟೈರಾದ ಮೇಲೆ ಸ್ವಲ್ಪ ಪರವಾಗಿಲ್ಲ.

ಹರಿದಾಸ ಭಟ್ಟರಿಗೆ ಬೆಳಿಗ್ಗೆ ಬೇಗ 5 ಘಂಟೆಗೆ ಏಳಬೇಕು. ಈಗಲೂ ಏಳಲು ಅವಸರ. ಈಗ 6 ಗಂಟೆ ನಿದ್ದೆ ಸಾಕೆಂದು ತತ್ವ. ಎದ್ದೊಡನೆ ಕಾಫಿ ಆಗಬೇಕು. ಬರೆಯಲು ಕುಳಿತುಕೊಳ್ಳುವುದು ಹೆಚ್ಚಾಗಿ ಬೆಳಿಗ್ಗೆ, ರಾತ್ರಿ ಹೆಚ್ಚು ಓದು, ಕಾಲೇಜಿಗೆ ಹೋಗುವ ಮೊದಲು ಸ್ನಾನ. ಮಕ್ಕಳು ಮನೆಯಲ್ಲಿಲ್ಲದ್ದಿದ್ದರೆ ಮನೆಯಲ್ಲಿ ನಿತ್ಯ ಪೂಜೆ ಅವರದ್ದು. ಸಣ್ಣಗಿನ ಪೂಜೆ ಅಭಿಷೇಕ ಮಾಡಿ ಆರತಿ ಮಾಡಿದರಾಯಿತು. ಮಕ್ಕಳಿದ್ದರೆ ಪೂಜೆ ಮಾಡಲು ಅವರು ಹೋಗುವುದಿಲ್ಲ.

ನೆಂಟರಿಷ್ಟರು ಬಂದಾಗ ಅವರಿಗೆ ಬೇಕಾದ ವ್ಯವಸ್ಥೆ ಬಗ್ಗೆ ಜವಾಬುದಾರಿ ಸುಮತಿಯಮ್ಮನದ್ದೇ!

ಎಲ್ಲಾದರೂ ದೂರ, ವಿದೇಶಕ್ಕೆ ಇತ್ಯಾದಿ ಹೊರಡುವಾಗ 'ದೇವರಿಗೆ ದೀಪ ಇಡು, ನಮಸ್ಕಾರ ಮಾಡುತ್ತೇನೆ' ಎನ್ನುತ್ತಾರೆ.

ಊಟದ ಬಗ್ಗೆ ಅವರದು ತಕರಾರಿಲ್ಲ. ಅದಾಗದು, ಇದಾಗದು ಎಂದಿಲ್ಲ, ಊಟ ರುಚಿಯಾಗಿಲ್ಲವೆಂದಾಗಲಿ, ಕೆಟ್ಟಿದೆ ಎಂದಾಗಲಿ ಚಕಾರವೆತ್ತರು. ಊಟ ಮಾಡದಿದ್ದರೆ ಹಿಡಿಸಲಿಲ್ಲ ಎಂದು ಅರ್ಥ ಅಷ್ಟೆ. ಪೇಟೆಗೆ ಹೋದವರು ಮನಸ್ಸು ಬಂದಾಗ ತರಕಾರಿಯನ್ನೋ ಹಣ್ಣನ್ನೋ ತಂದು ತಮಗಿಷ್ಟವಾದ ಪದಾರ್ಥವನ್ನೋ, ತಿಂಡಿಯನ್ನೋ ಮಾಡೆಂದು ಪತ್ನಿಗೆ ಹೇಳುವುದುಂಟು.

ಮೊದಮೊದಲು ಪತ್ರೊಡೆ ಮುಂತಾದ ತಿಂಡಿಗಳಲ್ಲಿ ಇಷ್ಟ ಅವರಿಗೆ. ಇತ್ತೀಚೆಗೆ ಅಸ್ತಮಾ ಸುರುವಾದ ಮೇಲೆ ಆಹಾರದ ಕುರಿತು ಜಾಗ್ರತೆ ವಹಿಸುತ್ತಾರೆ. ಯಾವುದಕ್ಕೂ ಪುರುಸೊತ್ತು ಇಲ್ಲ, ಹೆಂಡತಿ ಏನು ಮಾಡಿದ್ದಾಳೆ, ತಾನು ಏನು ಉಣ್ಣುತ್ತೇನೆ ಎಂಬುದರ ಪರಿವೆಯೂ ಕೆಲವೊಮ್ಮೆ ಇರದು. 'ಒಂದೊಂದು ದಿವಸ ನನ್ನ ಮುಖವನ್ನೇ ನೋಡಿರುವುದಿಲ್ಲ ಅವರು. ಬಗ್ಗಿಕೊಂಡು ಊಟಮಾಡಿ ಆಯಿತು, ಎದ್ದು ಹೋಗಿ ಆಯಿತು.'

ಮಕ್ಕಳ ಬಗ್ಗೆ ಹೆಚ್ಚಿನ ಹೊಣೆ ಹೊತ್ತವರು ಪತ್ನಿಯೇ, ಮಕ್ಕಳು ದೊಡ್ಡವರಾದ ಮೇಲೆ ಅವರ ಬಗ್ಗೆ ಯೋಚಿಸಿದ್ದುಂಟು. ಹೆಣ್ಣು ಮಕ್ಕಳಿಗೆ ಮದುವೆಯಾದ ಮೇಲೆ ಹುಡುಗರೆಲ್ಲಾ ಒಂದು ಸ್ಥಿತಿಗೆ ಬಂದ ಮೇಲೆ ನೆಮ್ಮದಿಯಾಗಿದ್ದಾರೆ. ಆಫೀಸಿನಿಂದ ಮನೆಗೆ ಬಂದವರು ಮಕ್ಕಳನ್ನು ಮುದ್ದು ಮಾಡಿದ್ದು ಕಡಿಮೆ. ಸ್ವಲ್ಪ ಮಟ್ಟಿಗೆ ಆಶಿ (ಕೊನೆಯ ಮಗಳು ಆಶಾ) ಯನ್ನು ಆಡಿಸಿದ್ದುಂಟು. ಆಗಲೇ ಅವರಿಗೆ ಸ್ವಲ್ಪ ಹೆಚ್ಚು ಪುರುಸೊತ್ತು ಇತ್ತೋ ಏನೋ, ಆಮೇಲೆ ಮೊಮ್ಮಕ್ಕಳನ್ನು ಆಡಿಸಿದ್ದು, ಮಕ್ಕಳನ್ನು ಅಷ್ಟು ಹಚ್ಚಿಕೊಂಡಿದ್ದಿಲ್ಲ ಅವರು. ಮಕ್ಕಳಿಗೆ ಹುಷಾರಿಲ್ಲದಿದ್ದರೆ ಡಾಕ್ಟರರಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು. ಕುಟುಂಬದ ಡಾಕ್ಟರು ಮೋಹನದಾಸ ಪೈ. ಮೊದಲು ಸುಮತಿ ಮದುವೆಯಾಗಿ ಬಂದಾಗ ಸುಂದರರಾಮ ಪೈ ಕುಟುಂಬದ ವೈದ್ಯರು.

ಹರಿದಾಸ ಭಟ್ಟರಿಗೆ ಸಂಗೀತ, ಚಿತ್ರ ಇತ್ಯಾದಿ ಕಲೆಗಳಲ್ಲಿ ಸ್ವಂತ ಆಸಕ್ತಿ ಇರಲಿಲ್ಲ. ಸಂಗೀತಕ್ಕೆ ಅವರು ಮೊದಲು ಗಮನಹರಿಸಿದ್ದಿಲ್ಲ. ಈಗೀಗ ಅದನ್ನು ಇಷ್ಟಪಡಲು ತೊಡಗಿದ್ದಾರೆ.

ಸುಮತಿಗೂ ಸಂಗೀತ ವಿದ್ಯೆ ಗೊತ್ತಿಲ್ಲ. ಕಲಿಸಲು ಮಾಸ್ತರರನ್ನೆಲ್ಲ ಗೊತ್ತು ಮಾಡಿದ್ದರು. ಅದೇನೋ ಸರಿಯಾಗಲೇ ಇಲ್ಲ. ಸುಮತಿ ಚೆನ್ನಾಗಿ ಹಾಡುತ್ತಿದ್ದರಂತೆ. 'ಇವಳಿಗೆ ಹಾಡು ಕಲಿಸಿ' ಎಂದು ಒತ್ತಾಯಿಸಿದರಂತೆ ಎಲ್ಲರೂ. ಆದರೂ ಏನೋ ಕಲಿಯಲಿಕ್ಕಾಗಲಿಲ್ಲ. ಎಸ್.ಎಸ್.ಎಲ್.ಸಿ. ಮುಗಿದ ಮೇಲೆ ಹುಡುಗಿ

ಯರು ಕಲಿಯುವುದು ಆಗ ಹೆಚ್ಚು ರೂಢಿ ಇರಲಿಲ್ಲ. ಕಲಿಯುವ ಮನಸ್ಸಿದ್ದರೂ ತಾನಾಗಿ ಹೇಳಿದ್ದಿಲ್ಲ. ತಂದೆಯವರೊಂದಿಗೆ ಓರಗೆಯ ಹುಡುಗಿಯರು "ಇವಳಿಗೆ ಮುಂದೆ ಓದಿಸಿ" ಎಂದು ಹೇಳುತ್ತಿದ್ದರು.

ಮದ್ರಾಸಿನಲ್ಲಿ ಆಗ ಇದ್ದುದು ಬಾಡಿಗೆ ಮನೆ. ಈಗ ತಮ್ಮ ಬಾಬು ಸ್ವಂತ ಮನೆ ಮಾಡಿಕೊಂಡಿದ್ದಾನೆ. ರಮೇಶಗೂ ಮೈಸೂರಲ್ಲಿ ಸ್ವಂತ ಮನೆ ಇದೆ. ದೊಡ್ಡ ಅಣ್ಣ ಉಡುಪಿಯಲ್ಲಿ ಮನೆ ಕಟ್ಟಿಸಿದ್ದಾರೆ. ಅಮೇರಿಕದಲ್ಲಿರುವ ಅಣ್ಣ ಅಲ್ಲೇ ನೆಲೆಸಿದ್ದಾರೆ.

ಚಿಕ್ಕು (ಹರ್ಷ) ಎರಡು ತಿಂಗಳ ಮಗುವಿದ್ದಾಗ ಈ ಅಣ್ಣ ಉಡುಪಿಗೆ ಬಂದುದುಂಟು. ಅಮೇರಿಕಕ್ಕೆ ಹೋದ ಹರಿದಾಸ ಭಟ್ಟರು ಅವರನ್ನು ಕಂಡಿದ್ದಾರೆ. ಬಳಿಕ ಬಾಬು ಹೋಗಿದ್ದಾರೆ. ರಮೇಶ ಹೋಗಿದ್ದಾರೆ. ತಾನು ಮಾತ್ರವೇ ಅಲ್ಲಿಗೆ ಹೋಗಲಿಲ್ಲ. ಜೂನ್‌ನಲ್ಲಿ ಸುಮತಿ ಅಮ್ಮ ಅಮೇರಿಕಕ್ಕೆ ಹೋಗಬೇಕೆಂದು ಆಶಿ ಹೇಳಿದ್ದಾಳೆ. ಅಮ್ಮನ ಪ್ರಯಾಣದ ರೂಪರೇಷೆ ಈಗ ಸಿದ್ಧವಾಗುತ್ತಿದೆಯಂತೆ. ಆಶಿ ಸೆಪ್ಟಂಬರ ಕೊನೆಗೆ ಊರಿಗೆ ಬಂದವಳು ಜನವರಿಯಲ್ಲಿ ಪುನಃ ಹೋಗುತ್ತಾಳೆ, ದಶಂಬರ 12ಕ್ಕೆ ಬರುವ ಅಶೋಕರೊಂದಿಗೆ ಮರಳುತ್ತಾಳೆ.

ಹರಿದಾಸ ಭಟ್ಟರು ಬಟ್ಟೆ ಬರೆ ತಾವೇ ಹೊಲಿಸುವುದು. ಅವರೊಡನೆ ಅವರ ದಿರಿಸಿನ ಬಗ್ಗೆ ಧೈರ್ಯವಾಗಿ ಹೇಳುತ್ತಿದ್ದುದು ಧೋಬಿ ರಾಜು ಮಾತ್ರವೇ. "ಅಯ್ಯ ಎಂಥದಯ್ಯ ನಿಮ್ಮ ಅಂಗಿ ಷರಟು ಏನೂ ಲಾಯಕ್ಕಿಲ್ಲ" ಎಂದು ಒಮ್ಮೊಮ್ಮೆ ಅವನು ಹೇಳುತ್ತಿದ್ದ. ಉಳಿದವರಾರು ಹೇಳಿದರೂ "ನಾವು ಹೇಗಿದ್ದರೇನು?" ಎಂದು ತಾತ್ಸಾರದ ಉತ್ತರ ಕೊಡುತ್ತಾರೆ ಅವರು. ಖಾದಿಯಂತಹ ದಪ್ಪದ ಬಟ್ಟೆಗಳನ್ನೇ ಹರಿದಾಸ ಭಟ್ಟರು ಹೆಚ್ಚಾಗಿ ಹಾಕುವುದು. ಮೊನ್ನೆ ಜೈಲ್‌ಸಿಂಗ್ ಮಣಿಪಾಲಕ್ಕೆ ಬಂದಾಗ ಅವರನ್ನು ನೋಡಲು ಹೋಗುವಾಗ ಮೊದಲು ಹಾಕಿದ ಅಂಗಿಯನ್ನು ಚಿಕ್ಕು ತೆಗೆಸಿ ಬೇರೆ ಅಂಗಿ ಹಾಕುವಂತೆ ಹೇಳಿದನಂತೆ. ಅವನಿಗೀಗ ಸ್ವಲ್ಪ ಹೇಳುವ ಧೈರ್ಯ ಬಂದಿದೆ.

ಹರಿದಾಸ ಭಟ್ಟರು ಮನೆ ಖರ್ಚಿನ ಲೆಕ್ಕಾಚಾರ ಇಟ್ಟುಕೊಳ್ಳುವವರಲ್ಲ. ಡೈರಿ ಬರೆದಿಟ್ಟುಕೊಳ್ಳುವ ಕ್ರಮವೂ ಇಲ್ಲ. ತಿಂಗಳ ಮೊದಲಲ್ಲಿ ಮನೆ ಖರ್ಚಿಗಾಗಿ ಪತ್ನಿಗೆ ಸ್ವಲ್ಪ ಹಣ ಕೊಡುತ್ತಾರೆ. ಆ ಮೇಲೆ ತಿಂಗಳ ನಡುವೆ ಕೇಳಿದರೂ ಕೊಡುತ್ತಾರೆ. ಕೇಳಿದಷ್ಟು ಅಲ್ಲ. ಊರಿನಲ್ಲಿರುವಾಗ ಹೊರಗೆ ಹೋಗುವಾಗ ಎಲ್ಲಿಗೆ ಹೋಗುತ್ತೇವೆಂದು ಹೇಳುವ ಕ್ರಮ ಇಲ್ಲ. ದೂರ ಪ್ರಯಾಣ ಇದ್ದರೆ ಹೇಳುತ್ತಾರೆ. ಈಗೀಗ ಸುಮತಿ ಅಮ್ಮ "ಎಲ್ಲಿಗೆ ಹೋಗುತ್ತೀರಿ? ಫೋನು ಬಂದರೆ ಎಲ್ಲಿದ್ದಾರೆ ಎಂದು ಹೇಳಲಿ?" ಎಂದು ಧೈರ್ಯದಿಂದ ಕೇಳುವುದುಂಟು.

ಪ್ರಿನ್ಸಿಪಾಲರಾದ ಮೇಲೂ ಅವರು ತಮ್ಮ ಜೀವನಕ್ರಮವನ್ನು ಬದಲಿಸಿದವರಲ್ಲ. ತಮ್ಮ ಮನೆ "ಮಾಸ್ತರರ ಮನೆ"ಯಂತೆಯೇ ಇರಬೇಕು, ಯಾವ ಆಡಂಬರಕ್ಕೂ ಹೋಗಬಾರದು ಎಂಬುದೇ ಅವರ ನಿಲುವು. ಮುಂಚೆ ಎಲ್ಲ ಮನೆಗೆ ಬಂದು ಹೋಗುವ ಅತಿಥಿಗಳು ತುಂಬ. ಹರಿದಾಸ ಭಟ್ಟ ದಂಪತಿಗಳ ಮಕ್ಕಳು ಸಣ್ಣವರಿದ್ದರು. ಆಗ ಕಾಲೇಜಿನ ಪರಿಸರದಲ್ಲಿ ಗೆಸ್ಟ್‌ಹೌಸ್ ಇತ್ಯಾದಿ ಇರಲಿಲ್ಲ. ಎಲ್ಲರೂ ಮನೆಯಲ್ಲೇ ಬಂದು ಉಳಿದುಕೊಳ್ಳುತ್ತಿದ್ದುದಿತ್ತು. ಈಗ ಆ ರೀತಿಯ ಅತಿಥಿಗಳು ಕಡಿಮೆ.

ಬರುತ್ತಿದ್ದವರು ಸಾಹಿತಿಗಳು, ಎಲ್ಲರೂ ಹರಿದಾಸ ಭಟ್ಟರ ಮನೆಗೆ ಬಂದು ಆತಿಥ್ಯ ಸ್ವೀಕರಿಸಿದ್ದಾರೆ. ಬೇಂದ್ರೆಯವರು ಬಂದರೆ ಐದು ದಿನ ಇರುವುದು ಕ್ರಮ. ಹೆಬ್ಬಾರರು ಒಮ್ಮೊಮ್ಮೆ ಬರುವುದುಂಟು. ರುಕ್ಮಿಣಿ ಅರುಂಡೇಲ್, ಇನಾಂದಾರ್ ಮನೆಯಲ್ಲಿ ಉಳಿದುಕೊಂಡುದುಂಟು.

ಹರಿದಾಸ ಭಟ್ಟರು ಮನೆಯಲ್ಲಿ ಕನ್ನಡ ಮಾತನಾಡುವುದು. ಸುಮತಿ ಮನೆಗೆ ಬಂದಾಗ ಅವರಿಗೆ ತುಳು ಗೊತ್ತಿರಲ್ಲಿಲ್ಲ. ಅರ್ಥ ಆಗುತ್ತಿತ್ತು. ತಂದೆ ಮನೆಯಲ್ಲಿ ಅವರೆಲ್ಲ ಕನ್ನಡವೇ ಮಾತನಾಡುತ್ತಿದ್ದದ್ದು. ತಮಿಳೂ ಜೊತೆಗಿತ್ತು. ಈಗ ತುಳು ಗೊತ್ತಿದ್ದರೂ ಮನೆಯಲ್ಲಿ ಮಾತನಾಡುವ ಕ್ರಮ ಇಲ್ಲ. ಅಕ್ಕ ತಂಗಿಯರೊಂದಿಗೆ ತುಳುವಿನಲ್ಲೇ ಮಾತುಕತೆ.

ಹರಿದಾಸ ಭಟ್ಟರು ತಾವು ಬರೆಯುವ ಪುಸ್ತಕಗಳ ಬಗ್ಗೆ ಪತ್ನಿಗೆ ಹೇಳುತ್ತಿದ್ದುದುಂಟು. ಪ್ರಿಂಟಾದ ಪುಸ್ತಕಗಳನ್ನು ತೋರಿಸುತ್ತಲೂ ಇದ್ದರು.

ಒಮ್ಮೊಮ್ಮೆ ಕೋಪ ಬರುತ್ತಿದ್ದ ಸಂದರ್ಭಗಳೂ ಉಂಟು. ಆಗ ಗೊತ್ತು ಮನೆಮಂದಿಗೆ "ಏನೋ ಆಗಿದೆ" ಎಂದು. ಅದರ ಬಗ್ಗೆ ಮನೆಯಲ್ಲೇನೂ ಹೇಳರು. ಆದರೆ ಯಾವುದರಿಂದಲೂ ಅವರ ನಿತ್ಯದ ಪರಿಪಾಠಕ್ಕೆ ಧಕ್ಕೆ ಇಲ್ಲ. ನಿದ್ರೆಗೆ ಭಂಗ ಇಲ್ಲ. ಚಿಂತೆಯಿಂದ ಆರೋಗ್ಯ ಕೆಟ್ಟದ್ದಿಲ.

ಗದುಗಿನ ಹೋಟೆಲಿನ ಉದ್ಯೋಗವನ್ನು ಆಗಾಗ ಹೋಗಿ ಪರಿಶೀಲಿಸಿ ಬರುತ್ತಾರೆ. ಮಕ್ಕಳಿರುವಾಗ ಈಗ ಹೆಚ್ಚು ಸಲ ಹೋಗಿ ಬರುತ್ತಾರೆ..

ವಿದೇಶ ಪ್ರವಾಸದ ಸಂದರ್ಭದಲ್ಲಾದ ಅನುಭವಗಳನ್ನು ಮನೆಯಲ್ಲಿ ವಿಸ್ತರಿಸುವುದುಂಟು. ಪುಸ್ತಕದಲ್ಲಿ

ಬರೆದ ಘಟನೆಗಳ ಬಗ್ಗೆ ಎಲ್ಲ ಮೊದಲೇ ಹೇಳಿ ಆಗಿದೆ. ಗಂಟೆಕಟ್ಟಳೆ ಕುಳಿತುಕೊಂಡು ಅವರ ಮಾತು ಕೇಳ ಬಹುದು, ಅಷ್ಟು ಸ್ವಾರಸ್ಯವಾಗಿ ಹೇಳುತ್ತಾರೆ.

ಪತಿ – ಪತ್ನಿ ಅನೇಕ ಸಾರಿ ಜೊತೆಯಾಗಿ ಪ್ರಯಾಣ ಕೈಗೊಂಡದುಂಟು. ಮಕ್ಕಳು ಚಿಕ್ಕವರಿದ್ದಾಗ ತುಂಬ ಕಡೆ ಕರೆದುಕೊಂಡು ಹೋಗಿದ್ದಾರೆ. ಮೈಸೂರು, ಬೆಂಗಳೂರು, ಊಟಿ ಇತ್ಯಾದಿ.

ಹರಿದಾಸ ಭಟ್ಟರು ಒಮ್ಮೆ ಒಂದು ಆಸ್ಟೀನ್ ಕಾರು ತೆಗೆದುಕೊಂಡಿದ್ದರು. ಪ್ರಿನ್ಸಿಪಾಲರಾಗಿದ್ದಾಗ ಆಗ ಏನೋ ಜಾಗ ಮಾರಿದ್ದರಿಂದ ಇದ್ದ ದುಡ್ಡಿನಲ್ಲಿ ತೆಗೆದುಕೊಂಡರು ಅದನ್ನು. ಅದು ಸರಿಬರಲಿಲ್ಲವಾಗಿ ಮಾರಿ ಬಿಟ್ಟರು. ಹಳತು ಕಾರು. ಚಿಕ್ಕಂದಿನಲ್ಲಿ ಅವರು ಸೈಕಲ್ ಬಿಡುತ್ತಿದ್ದರು. ಮದುವೆಯಾದ ಹೊತ್ತಿನಲ್ಲಿ ಕಾಲೇಜಿಗೆ, ಮಣಿಪಾಲಕ್ಕೆ ಹೋಗುತ್ತಿದ್ದುದು ಸೈಕಲ್‌ನಲ್ಲಿ. ಒಮ್ಮೆ ಮಣಿಪಾಲದಿಂದ ಕೆಳಗೆ ಇಳಿಯುವಾಗ ಬ್ರೇಕ್ ಇಲ್ಲದೆ ವೇಗ ಮಿತಿ ಮೀರಿ ಮೀನು ಹೊರುವ ಹೆಂಗಸೊಬ್ಬಳನ್ನು ದೂಡಿಕೊಂಡು ಹೋದರಂತೆ. ಅಲ್ಲಿಂದ ಸೈಕಲ್ಲು ಸವಾರಿ ಬಿಟ್ಟುಬಿಟ್ಟರು. ಕಾರನ್ನೂ ಶೆಡ್ಡಿಗೆ ಕೊಂಡೊಯ್ಯುವಾಗ ಗೋಡೆ ಎಲ್ಲಾ ಪುಡಿಪುಡಿ. ಅವರೇ ಸ್ವತಃ ಡ್ರೈವ್ ಮಾಡುತ್ತಿದ್ದರು. ಕಾರು ತೆಗೆದುಕೊಂಡವರು ಡ್ರೈವಿಂಗ್ ಕಲಿತಿದ್ದರು.

ಹರಿದಾಸ ಭಟ್ಟರ ಸ್ನೇಹಿತರ ಬಳಗ ದೊಡ್ಡದು. ಮನೆಗೆ ಬರುತ್ತಿದ್ದ ಸ್ನೇಹಿತರಲ್ಲಿ ಮುಖ್ಯರು ಜಿ.ಟಿ. ನಾರಾಯಣ ರಾಯರು, ಬಾಗಲೋಡಿ ದೇವರಾಯರು.

ದೊಡ್ಡ ಮಗಳಿಗೆ ಮದುವೆಯಾದದ್ದು ಮನೆಯಲ್ಲಿ ಅತ್ಯಂತ ಸಂತೋಷದ ಹಬ್ಬ. ಹರಿದಾಸ ಭಟ್ಟರು ಮೊದಲು ವಿದೇಶಕ್ಕೆ ಹೋದಾಗ ಸುಮತಿ ಅಮ್ಮನೂ ತುಂಬ ಸಂತೋಷಪಟ್ಟಿದ್ದರು. ಪ್ರಶಸ್ತಿ ಸಿಕ್ಕಿದ್ದು – ಎಲ್ಲ ಸಂತೋಷದ ಸುದ್ದಿಗಳೇ.

ಹರಿದಾಸ ಭಟ್ಟರು ಹೆಚ್ಚು ಸಮಯ ಕಾಯಿಲೆ ಬಿದ್ದು ಮಲಗಿದ್ದು ಇಲ್ಲ. ಮದುವೆಯ ಮೊದಲು ಬಂದ ಟೈಫಾಯ್ಡ್ ಒಂದೇ ಅವರನ್ನು ಮಲಗಿಸಿದ ಕಾಯಿಲೆ. ಆಗ ಅದಕ್ಕೆ ವಿಶೇಷ ಮದ್ದಿರಲಿಲ್ಲ.

ಹರಿದಾಸ ಭಟ್ಟರು ಸುಮತಿ ಅಮ್ಮ ಜೊತೆ ವಾಕಿಂಗ್ ಹೋಗುತ್ತಿದ್ದರು. ಹರಿದಾಸ ಭಟ್ಟರದು ವೇಗದ ನಡಿಗೆ. ಮುಂಚೆ ಸುಮತಿ ಅಮ್ಮನೂ ವೇಗವಾಗಿಯೇ ನಡೆದು ಅವರ ಜೊತೆ ಬರುತ್ತಿದ್ದರು. ಈಗ ಅವರ ಜೊತೆಗೆ ನಡೆಯುವಾಗ ಅವರಷ್ಟು ಪ್ರಾಯವಾಗದವರಿಗೂ ಏದುಸಿರು ಬರುತ್ತದೆ. ಅವರ ನಡಿಗೆ ಅಷ್ಟು ಭರದ್ದು.

ಹರಿದಾಸ ಭಟ್ಟರಿಗೆ ಒಂದು ಕಾಲದಲ್ಲಿ ತಮ್ಮ ಮಕ್ಕಳ ಬಗ್ಗೆ ಕೊರಗು ಇದ್ದುದುಂಟು. ಈಗ ಬಿಟ್ಟಿದ್ದಾರೆ. ಕೊರಗಿ ಏನು ಪ್ರಯೋಜನ ಎಂದು ಸಂತೈಸಿಕೊಂಡಿದ್ದಾರೆ. ಮಕ್ಕಳು ದೊಡ್ಡವರಾದರಲ್ಲ. ಗಂಡು ಮಕ್ಕಳೆಲ್ಲ ಗುಣವಂತರೆಂಬ ಬಗ್ಗೆ ಅವರಿಗೆ ತುಂಬ ಸಮಾಧಾನ ಇದೆ. ಇದ್ದ ಕೊರಗೂ ಈ ಕಾರಣದಿಂದ ಈಗ ಮಾಯವಾಗಿದೆ.

ಪ್ರಭಾಕರ ಪೈಗಳು ಹರಿದಾಸ ಭಟ್ಟರ ಬಾಲ್ಯಸ್ನೇಹಿತ. ಭಟ್ಟರಿಗಿಂತ ಸ್ವಲ್ಪ ಸೀನಿಯರ್. ಅವರೂ ಮದರಾಸಿನಲ್ಲೇ ಕಲಿತವರು.

ಸಿಂಡಿಕೇಟ್ ಬ್ಯಾಂಕ್ ತನ್ನನ್ನು ಉದ್ಯೋಗಕ್ಕಾಗಿ ಕರೆದ ಕುರಿತು ಪತ್ನಿಗೆ ಹೇಳಿದ್ದರು. ಉಪಾಧ್ಯಾಯ ವೃತ್ತಿಯೇ ತನಗೆ ಒಳ್ಳೆಯದೆಂದು ಅಚಲವಾಗಿ ನಂಬಿ ಬೇಂಕಿನಲ್ಲಿದ್ದ ತಮ್ಮ ಭವಿಷ್ಯವನ್ನು ನಿರಾಕರಿಸಿದರು. ಅದರಿಂದೇನೂ ತನಗೆ ಬೇಸರಾಗಲಿಲ್ಲ.

ಸುಮತಿ ಅಮ್ಮನನ್ನು ನೋಡಲು ಮೊದಲೊಬ್ಬರು ಬಂದಿದ್ದರಂತೆ. ಹರಿದಾಸ ಭಟ್ಟರು ಹುಡುಗಿ ನೋಡಲು ಬಂದಿದ್ದಾಗ – ಹುಡುಗ – ಹುಡುಗಿ ನಡುವೆ ಮಾತುಕತೆ ಆದದ್ದಿಲ್ಲ. ಹುಡುಗಿ ಸ್ವಲ್ಪ ನಿಂತುಕೊಂಡು ಆ ಮೇಲೆ ಓಡಿಬಿಟ್ಟಳು. ಮದುವೆ ಆದದ್ದು ಉಡುಪಿಯ ಪುತ್ತೂರು ದೇವಸ್ಥಾನದಲ್ಲಿ, 1953 ಫೆಬ್ರವರಿ 16ಕ್ಕೆ.

ಸುಮತಿಯವರ ಅಭಿಪ್ರಾಯದಲ್ಲಿ ಹರಿದಾಸ ಭಟ್ಟರ ಚಿಕ್ಕಪ್ಪ ತುಂಬ ಒಳ್ಳೆಯವರು. ಹರಿದಾಸ ಭಟ್ಟರೆಂದರೆ ಪ್ರೀತಿ, ಅಭಿಮಾನ, ಕಪಟವಿಲ್ಲ. ತಂದೆಯವರಿಗೆ ಆಸ್ತಿಯನ್ನು ಜೋಪಾನವಿಟ್ಟು ಕೊಳ್ಳಲು ಆಗಲಿಲ್ಲ. ದುಡ್ಡಿನ ತಾಪತ್ರಯ ಇತ್ತು.

ಹರಿದಾಸ ಭಟ್ಟರ ಅಣ್ಣ ಒಬ್ಬರು ಇದ್ದರು. ಅವರು ತೀರಿ ಹೋದ ಮೇಲೆ ತಂದೆಯವರು ಜರ್ಝರಿತರಾಗಿದ್ದರು. ಏನೋ ಹೊಟ್ಟೆಯ ಕಾಯಿಲೆ, ಅಕಸ್ಮಾತ್ತಾಗಿ ಕಾಣಿಸಿಕೊಂಡದ್ದು. ಹರಿದಾಸ ಭಟ್ಟರಾಗ 12 ವರ್ಷದವರೋ ಏನೋ. ರಮಾದೇವಿ ಅವರ ಅಣ್ಣನ ಹೆಂಡತಿ. ರಮಾದೇವಿ ತಾಯಿಗೆ ಒಬ್ಬಳೇ ಮಗಳು. ಗಂಡನ ಮರಣಾನಂತರ ತಾಯಿಯೊಂದಿಗಿದ್ದರು. ವಿ.ಎಸ್. ಆಚಾರ್ಯರ ಮನೆ ಹತ್ತಿರ ಅವರ ಮನೆ. ಅವರಿಗೆ ವರ್ಷಕ್ಕೊಂದು 500 ರೂ. ಹರಿದಾಸ ಭಟ್ಟರು ಕೊಡುವುದುಂಟು.

ಹರಿದಾಸ ಭಟ್ಟರಿಗೆ ಚಿನ್ನಾಭರಣಗಳ ಗೊಡವೆ ಇಲ್ಲ. ಮದುವೆಯಾದ ಹೊಸತರಲ್ಲಿ ಹೆಂಡತಿಗೆ ಒಡವೆ ಮಾಡಿಸಿಕೊಟ್ಟದ್ದುಂಟು. ಆ ಮೇಲೆ ಬಿಟ್ಟುಬಿಟ್ಟರು. ಬೇಡ ಎಂತಲೇ ಹೇಳುವುದು.

ದುಡ್ಡನ್ನು ಉಳಿಸುವ ಅಭ್ಯಾಸವೇ ಇಲ್ಲ ಹರಿದಾಸ ಭಟ್ಟರಿಗೆ. ಈಗ ಸ್ವಲ್ಪ ಚಿಂತೆ ಮಾಡುತ್ತಿದ್ದಾರೆ. ಕೈಗೆ ಬಂದೊಡನೆ ಖರ್ಚು ಮಾಡುವ ಪ್ರವೃತ್ತಿ. ಮಕ್ಕಳಿಗೂ ಅದೇ ಅಭ್ಯಾಸ.

ಮನೆಗೆ ಬೇಕಾದ ಸಾಮಾನುಗಳನ್ನೆಲ್ಲಾ ಫ್ರಿಜ್, ಇತ್ಯಾದಿ ಅವರೇ ತೆಗೆಸಿಕೊಟ್ಟದ್ದು. ಮನೆಯಲ್ಲಿ ದನಕರು ಇದ್ದಾಗ ಅವುಗಳ ಬಗ್ಗೆ ನಿಗಾ ವಹಿಸುತ್ತಿದ್ದರು. ಆಶಿಗೆ ಮದುವೆ ಆದ ಮೇಲೆ ಮನೆಯಲ್ಲಿ ದನಗಳ ಸಾಕಣೆ ಇಲ್ಲ.

"ನಾವಾಗಿ ಏನೂ ಕೇಳಬಾರದು. ಕೇಳದಿದ್ದರೆ ಅವರಾಗಿ ತಂದುಕೊಡುತ್ತಾರೆ. ನಮಗೆಲ್ಲ ಅದೇ ಅಭ್ಯಾಸವಾಗಿ ಬಿಟ್ಟಿದೆ."

ನಾಯಿ ಬೆಕ್ಕುಗಳ ಮೇಲೂ ಅವರಿಗೆ ತುಂಬಾ ಮಮತೆ.

ತಂದೆ ತಾಯಿಗಳನ್ನು ಗೌರವದಿಂದ ನೋಡಿಕೊಂಡರು. ತಾಯಿಯಲ್ಲಿ ಪ್ರೀತಿ ಹೆಚ್ಚು. ತಂದೆ ಒಮ್ಮೊಮ್ಮೆ ಜೋರು ಮಾಡುವುದಿತ್ತು. ಚಿಕ್ಕಪ್ಪ ಹಾಗಲ್ಲ. ಇವರು ಮಾಡಿದ್ದು ಸರಿ ಎನ್ನುವವರು.

ಚಿಕ್ಕಪ್ಪನವರು ತೀರಿಕೊಂಡಾಗ ಹರಿದಾಸ ಭಟ್ಟರ ಮೊದಲ ಮಗ ಜಯದೇವ ಒಂದು ವರ್ಷದ ಮಗು. ಈಗ 30 – 31 ವರ್ಷ ಆಯಿತು. ಆಗ ಹರಿದಾಸ ಭಟ್ಟರು ಕಾಲೇಜಿನಲ್ಲಿ ಲೆಕ್ಚರರು. ಸುಮತಿ ಅಮ್ಮನ ತಂದೆ ತೀರಿಕೊಂಡಾಗ ಹರಿದಾಸ ಭಟ್ಟರು ಕಾಲೇಜಿನ ಪ್ರಿನ್ಸಿಪಾಲ ಹುದ್ದೆಯನ್ನು ವಹಿಸಿಕೊಳ್ಳುವ ಸಮಯ. ಸುಮತಿ ಆಗ ಮದ್ರಾಸಿನಲ್ಲಿದ್ದರು.

ಹರಿದಾಸ ಭಟ್ಟರು ನೆಂಟರಿಗೆ ಮಿತ್ರರಿಗೆ ಕಾಗದ ಪತ್ರ ತುಂಬ ಬರೆಯುತ್ತಾರೆ. ಮಗಳಂದಿರ ಅತ್ತೆ, ಮಾವಂದಿರಿಗೆ ಆಗಾಗ ಬರೆಯುತ್ತಾರೆ. ಹರಿದಾಸ ಭಟ್ಟರು ಮದುವೆ ಸಮಯದಲ್ಲಿ ಯಾವುದೇ ಶರ್ತಗಳನ್ನು ಹಾಕಿದ್ದಿಲ್ಲ.

ಹರಿದಾಸ ಭಟ್ಟರು ಹುಡುಗಿ ನೋಡಲು ಬಂದಾಗ ಜೊತೆಯಲ್ಲಿ ಪಾವಂಜೆ ಗುರುರಾಯರ ಮಗ ಮಧ್ವ ಮುನಿರಾಯರು ಬಂದಿದ್ದರು. ತಂದೆ ಹೇಳುತ್ತಿದ್ದರಂತೆ "ಊರಿನ ಹುಡುಗಿಯನ್ನೇ ಮಾಡಿಕೊ ಅಂದೆ, ಅವನು ಕೇಳಲಿಲ್ಲ." ಹರಿದಾಸ ಭಟ್ಟರು ತಮ್ಮ ಇಷ್ಟ ಪ್ರಕಾರ ಹುಡುಗಿಯ ಅನ್ವೇಷಣೆಗೆ ಹೊರಟದ್ದು – ತಂದೆಯ ಸೂಚನೆ ಮೇರೆಗೆ ಅಲ್ಲ.

ಹರಿದಾಸ ಭಟ್ಟರು ಮನೆಗೆ ಹೂ ಇತ್ಯಾದಿ ತರುವುದುಂಟು.

ಹರಿದಾಸ ಭಟ್ಟರು ಮೊದಲು ಅನೇಕ ನಾಟಕಗಳಲ್ಲಿ ಪಾತ್ರವಹಿಸಿದ್ದರು. ಎನ್.ಎಸ್. ಪ್ರಭು ಇದ್ದಾಗ ಇಂಗ್ಲಿಷ್ ನಾಟಕ. ಮದುವೆ ಆಗಿ ಬಂದಾಗ ಏನೋ ನಾಟಕ ಮಾಡಿಸಿದ್ದರು. ಬಿ.ವಿ. ಕಾರಂತರ ನಾಟಕಗಳಲ್ಲಿ ಭಾಗ ವಹಿಸಿದ್ದಾರೆ.

ಮಧ್ಯಾಹ್ನ ಊಟದ ಮೇಲೆ ಅರ್ಧಗಂಟೆ ನಿದ್ದೆ. ಕೆಲಸ ಇದ್ದರೆ ಅದೂ ಇಲ್ಲ.

ಶಿಸ್ತು ಬದ್ಧ ಜೀವನ ಎಂತಲ್ಲ. ಅವಸರ ಗಡಿಬಿಡಿ ಜಾಸ್ತಿ. ಹಾಗೆಂದು ನೆನಪಿನ ಶಕ್ತಿ ಪ್ರಖರ. ಬೇಡದ ವಿಚಾರ ಬೇಗ ಮರೆತು ಬಿಡುತ್ತಾರೆ.

ಒಮ್ಮೆ ಸಣ್ಣ ಮಕ್ಕಳನ್ನೆಲ್ಲ ಕರೆದು ಪಾರ್ಟಿ ಮಾಡಿದ್ದರು. ತಾನು ರಿಟ್ಯಾರ್ ಆದ ಮೇಲೆ ಮಕ್ಕಳಿಗೆಲ್ಲ ಗಿಫ್ಟ್ ಕೊಟ್ಟರು. ಹೊಸ ಮಾದರಿಯ ಪಾರ್ಟಿ ಅದು.

ರಮೇಶ ಹರಿದಾಸ ಭಟ್ಟರೊಂದಿಗೆ ಸಲಿಗೆಯಲ್ಲಿದ್ದಾನೆ.

ಪರವೂರಿಗೆ ಹೋಗಿದ್ದಾಗ ಮಿತ್ರರ ಮನೆಯಲ್ಲಿರುವುದು ಹೆಚ್ಚು. ಮೈಸೂರಲ್ಲಿ ಜಿ.ಟಿ., ರಮೇಶ ಇದ್ದಾರೆ. ಮುಂಬೈಯಲ್ಲಿ ಬಲ್ಲಾಳರಲ್ಲಿಗೆ. ಈಗ ಮಗಳ ಮನೆ ಇದೆ. ಬೆಂಗಳೂರಿನಲ್ಲಿರುವುದು ಹೋಟೆಲಿನಲ್ಲಿ. ಪ್ರಯಾಣಕ್ಕೆ ಹೋಗುವಾಗ ಲಗೇಜ್ ಅವರೇ ತಯಾರು ಮಾಡುತ್ತಾರೆ. ಪ್ರಯಾಣದಿಂದ ವಾಪಾಸು ಬರುವಾಗ ಎಲ್ಲರಿಗೂ ಒಂದೊಂದು ಗಿಫ್ಟ್ ತರುವುದು ಕ್ರಮ.

ಹೋದಲ್ಲೆಲ್ಲ ಹಣದ ಮರವೆಯಾಗಿ ಕಳೆದುಕೊಂಡದ್ದು ತುಂಬ ಕಡೆ. ದುಡ್ಡಿನ ಬಗ್ಗೆ ತುಂಬಾ ಅಲಕ್ಷ್ಯ. ಕಳೆದ ದುಡ್ಡಿನ ಬಗ್ಗೆ ಚಿಂತೆ ಮಾಡುವುದೂ ಇಲ್ಲ. ಇಲ್ಲಿಯೇ 100ರೂಪ್ಯಾ ಬಿದ್ದಿರುವುದುಂಟು. ಯಾರನ್ನೂ ನೋಯಿಸಿ ಮಾತನಾಡುವವರಲ್ಲ ಹರಿದಾಸ ಭಟ್ಟರು.

ಭಾಷೆಯನ್ನು ಸುಲಭದಲ್ಲಿ ಕಲಿಯುತ್ತಿದ್ದರು. ಹರ್ಷ ಇಟೆಲಿಯಿಂದ ಬಂದು ತಾನು ಕಲಿತ ಇಟೆಲಿ ಭಾಷೆಯ ಪುಸ್ತಕಗಳನ್ನು ಓದಿ ತೋರಿಸಿದಾಗ ತುಂಬ ಮೆಚ್ಚಿಕೊಂಡರು.

ಆಶಿ ಮದುವೆ ಆಗಿ ಒಂದು ತಿಂಗಳಲ್ಲಿ ಚಿಕ್ಕಮ್ಮ ತೀರಿಕೊಂಡರು, ಇತ್ತೀಚೆಗೆ 2 ವರ್ಷಗಳ ಹಿಂದೆ.

ರಶ್ಮಿ ೬

ವಿಶ್ವಮಾನವ

ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ

— ಡಾ ತೀ. ನಂ. ಶಂಕರ ನಾರಾಯಣ

— ೧ —

ಉಡುಪಿಯ ಎಂ. ಜಿ. ಎಂ. ಕಾಲೇಜಿಗೆ ಸೇರಿದ ಈ ಸಂಸ್ಥೆ ಒಂದು ಜಾನಪದ ದಾಖಲಾತಿ ಸಂಗ್ರಹಾಲಯ (Folklore Archives). ಕನ್ನಡ ಜಾನಪದ ಅಧ್ಯಯನದ ದೃಷ್ಟಿಯಿಂದ ಇದು ಒಂದು ವಿಶಿಷ್ಟವಾದ, ಅತ್ಯಂತ ಉಪಯುಕ್ತವಾದ ಸಂಸ್ಥೆ. ಕನ್ನಡ ಜಾನಪದ ಸಂಗ್ರಹ ಹಾಗೂ ಅಧ್ಯಯನ ಕ್ಷೇತ್ರಕ್ಕೆ ಇರುವ ಸುಮಾರು ಒಂದು ಶತಮಾನದ ಇತಿಹಾಸದಲ್ಲಿ, ಜಾನಪದ ಅಧ್ಯಯನ ಶೈಕ್ಷಣಿಕ ಸ್ಥಾನಮಾನಗಳನ್ನು ಪಡೆದುಕೊಂಡದ್ದು 25 ವರ್ಷಗಳಿಂದೀಚೆಗೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ. ಎ. ತರಗತಿಯಲ್ಲಿ ಜಾನಪದ ಅಧ್ಯಯನವನ್ನು ಅಳವಡಿಸಿದ್ದು, ಜಾನಪದ ವಸ್ತು ಸಂಗ್ರಹಾಲಯವನ್ನು ಆರಂಭಿಸಿದ್ದು, ಜಾನಪದ ಎಂ. ಎ. ಕೋರ್ಸ್ ಆರಂಭಿಸಿದ್ದು, ಜಾನಪದ ಸಂಗ್ರಹಗಳ ಪ್ರಕಟಣೆ. ಕಲಾಮೇಳಗಳು, ವಿಚಾರಗೋಷ್ಠಿಗಳು, ಮೊದಲಾದವು ಐತಿಹಾಸಿಕವಾಗಿ ಮಹತ್ವಪೂರ್ಣ ಘಟನೆಗಳು. ಮೈಸೂರು ವಿಶ್ವವಿದ್ಯಾನಿಲಯವನ್ನು ಅನುಸರಿಸಿ, ಉಳಿದ ವಿಶ್ವವಿದ್ಯಾನಿಲಯಗಳಲ್ಲಿಯೂ ಜಾನಪದ ಅಧ್ಯಯನ ನಡೆದಿದೆ. ಜಾನಪದ ಅಧ್ಯಯನದ ಈ ಅವಧಿಯಲ್ಲಿ ಪ್ರೊ॥ ದೇಜಗೌ ಅವರು ನೇತೃತ್ವ ವಹಿಸಿ. ಡಾ॥ ಹಾ. ಮಾ. ನಾಯಕ, ಡಾ॥ ಜೀ. ಶಂ. ಪರಮಶಿವಯ್ಯ ಮತ್ತು ಶ್ರೀ. ಪಿ. ಆರ್. ತಿಪ್ಪೇಸ್ವಾಮಿ ಅವರ ಸಹಕಾರದಿಂದ ಭಾರತದಲ್ಲಿಯೇ ಅತ್ಯುತ್ತಮವಾದ ಜಾನಪದ ವಸ್ತು ಸಂಗ್ರಹಾಲಯವನ್ನು ಬೆಳೆಸಿದ್ದು, ಹೆಮ್ಮೆ ಪಡಬಹುದಾದ ವಿಷಯ. ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ಜಾನಪದ ಪರಿಷತ್. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕರ್ನಾಟಕ ಜಾನಪದ ಟ್ರಸ್ಟ್ -ಈ ಸಂಸ್ಥೆಗಳು ಮಾಡಿರುವ ಕೆಲಸಗಳೂ ತುಂಬ ಉಪಯುಕ್ತವಾಗಿವೆ. ಇಷ್ಟಾಗಿಯೂ ಕರ್ನಾಟಕ ಜಾನಪದ ಅಧ್ಯಯನಕ್ಕೆ ಅತ್ಯಗತ್ಯವಾದ ದಾಖಲಾತಿ ಸಂಗ್ರಹಾಲಯ ಇಲ್ಲದಿದ್ದುದು ಒಂದು ಮುಖ್ಯವಾದ ಕೊರತೆಯಾಗಿತ್ತು. ಈ ಕೊರತೆಯನ್ನು ತುಂಬಿದ ವ್ಯಕ್ತಿ ಪ್ರೊ॥ ಕು. ಶಿ. ಹರಿದಾಸ ಭಟ್ಟರು, ಸಂಸ್ಥೆ ಎಂ. ಜಿ. ಎಂ. ಕಾಲೇಜು, ಉಡುಪಿ.

ಜಾನಪದ ದಾಖಲಾತಿ ಸಂಗ್ರಹಾಲಯ ಎಂದರೇನು ಎಂಬುದನ್ನು ನೋಡೋಣ: ಜಾನಪದ ಸಾಹಿತ್ಯವನ್ನು ಬರವಣಿಗೆಯ ಮೂಲಕ ಸಂಗ್ರಹಿಸುತ್ತೇವೆ. ಇವೆಲ್ಲವೂ ಅಚ್ಚಾಗುವುದು ಕಷ್ಟ. ಹಾಗಾದರೆ ಇವನ್ನು ಏನು ಮಾಡಬೇಕು? ಹಾಗೆಯೇ ಒಂದೇ ಜನಪದ ಕಥೆಯ ಹತ್ತಾರು, ನೂರಾರು ಪಾಠಗಳು ದೊರೆಯುತ್ತವೆ. ಇವುಗಳಲ್ಲಿ ಎಲ್ಲವೂ ಅಚ್ಚಾಗುವುದು ಕಷ್ಟ. ಆದರೆ ಅಧ್ಯಯನದ ದೃಷ್ಟಿಯಿಂದ ಇವು ಮುಖ್ಯ. ಹಾಗಾದರೆ ಇವು ಅಧ್ಯಯನಕ್ಕೆ ದೊರೆಯುವಂತೆ ಮಾಡುವುದು ಹೇಗೆ? ಇವು ದುರುಪಯೋಗವಾಗದಂತೆ, ಸಂಗ್ರಹಕಾರರಿಗೆ ಅನ್ಯಾಯವಾಗದಂತೆ ರಕ್ಷಿಸಿ, ಅಧ್ಯಯನ ಮಾಡುವವರಿಗೂ ಅನುಕೂಲವಾಗುವಂತೆ ಮಾಡುವುದು ಹೇಗೆ? ಬರವಣಿಗೆಯಲ್ಲಿ ಸಂಗ್ರಹಿಸುವುದಕ್ಕಿಂತ ಆಡಿಯೋ ಟೇಪುಗಳಲ್ಲಿ ಸಂಗ್ರಹಿಸಿದಾಗ ಅವು ಇನ್ನೂ ಉಪಯುಕ್ತವಾಗುತ್ತದೆ. ದೃಶ್ಯ ಮತ್ತು ಶ್ರವ್ಯ ಅಂಶಗಳೆರಡನ್ನೂ ಒಳಗೊಂಡ ವಿಡಿಯೋ ರೆಕಾರ್ಡಿಂಗ್ ಮತ್ತೂ ಉಪಯುಕ್ತವಾದುದು. ಒಂದು ದೃಶ್ಯವನ್ನೋ, ಘಟನೆಯನ್ನೋ, ಶಬ್ದದಲ್ಲಿ ವಿವರಿಸುವುದಕ್ಕಿಂತ ಒಂದು ಫೋಟೋ ಆ ಕಾರ್ಯವನ್ನು ಯಶಸ್ವಿಯಾಗಿ ಮಾಡಬಲ್ಲದು. ಈ ಫೋಟೋವನ್ನು ಸ್ಲೈಡ್ ಮಾಡಿದರೆ ಇನ್ನೂ ಉಪಯುಕ್ತವಾಗುತ್ತವೆ. ಹೀಗಾಗಿ ಬರವಣಿಗೆ. ಆಡಿಯೋ ರೆಕಾರ್ಡಿಂಗ್, ಫೋಟೋಗಳು, ವಿಡಿಯೋ ರೆಕಾರ್ಡಿಂಗ್, ಸ್ಲೈಡ್‌ಗಳು, ಡಾಕ್ಯುಮೆಂಟರಿ ಚಿತ್ರಗಳು ದಾಖಲಾತಿಯ ವಿವಿಧ ಬಗೆಗಳು. ಈ ಬಗೆಯ ಎಲ್ಲಾ ದಾಖಲೆಗಳನ್ನೂ ವೈಜ್ಞಾನಿಕವಾಗಿ ಸಂಗ್ರಹಿಸಿ, ಅಲ್ಲಿ ಸಂಗ್ರಹಗೊಂಡಿರುವ ಸಾಮಗ್ರಿಗೆ ಹಾಗೂ ನಿರೂಪಕರಿಗೆ ಅನ್ಯಾಯವಾಗದಂತೆ, ವ್ಯಾಪಾರಿ ದೃಷ್ಟಿಯ ಜನರಿಂದ ಶೋಷಣೆಯಾಗದಂತೆ ಕಾನೂನಿನ ರಕ್ಷಣೆಯನ್ನು ಒದಗಿಸುವ. ಅಧ್ಯಯನ ಮಾಡುವವರಿಗೆ ಅನುಕೂಲ ಮಾಡಿಕೊಡುವ ಸಂಸ್ಥೆಯನ್ನೇ ಜಾನಪದ ದಾಖಲಾತಿ ಸಂಗ್ರಹಾಲಯ ಅಥವಾ ಆರ್ಕೈವ್ ಎಂದು ಕರೆಯಲಾಗಿದೆ. ಈ ಬಗೆಯ ಆರ್ಕೈವ್‌ಗಳು ಜಾನಪದ ಅಧ್ಯಯನದಲ್ಲಿ ಅತ್ಯಂತ ಮುಖ್ಯವಾದ

ಪಾತ್ರವನ್ನು ವಹಿಸುತ್ತವೆ. ವಿಜ್ಞಾನಿಗೆ ಪ್ರಯೋಗಾಲಯಗಳು ಎಷ್ಟು ಮುಖ್ಯವೋ ಜಾನಪದ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಆರ್ಕೈವ್‌ಗಳು ಅಷ್ಟೇ ಮುಖ್ಯ; ಮ್ಯೂಸಿಯಂಗಳೂ ಅಷ್ಟೇ ಮುಖ್ಯ. ಹೀಗಾಗಿ ಮ್ಯೂಸಿಯಂ ಮತ್ತು ಆರ್ಕೈವ್ ಎರಡೂ ಕೂಡ ಜಾನಪದ ಅಧ್ಯಯನದಲ್ಲಿ ಅನಿವಾರ್ಯ. ಜಾನಪದ ವಿಜ್ಞಾನದ (Folkloristics) ಅಧ್ಯಯನ ವಿಭಾಗಗಳಿರುವ ಕಡೆಗಳಲ್ಲೆಲ್ಲಾ ಈ ಎರಡೂ ಸಂಸ್ಥೆಗಳಿರಬೇಕು. ಆದರೆ ಭಾರತದಲ್ಲಿ ಈ ಬಗ್ಗೆ ಹೆಚ್ಚು ಗಮನ ಕೊಟ್ಟಂತೆ ತೋರುವುದಿಲ್ಲ. ಮ್ಯೂಸಿಯಂನ ಮಹತ್ವವನ್ನು ಗುರುತಿಸಿದಂತೆ ಆರ್ಕೈವ್‌ಗಳ ಮಹತ್ವವನ್ನು ಗುರುತಿಸಿಲ್ಲ. ಆದರೆ ಪಾಶ್ಚಾತ್ಯ ದೇಶಗಳಲ್ಲಿ, ವಿಶೇಷವಾಗಿ ಯೂರೋಪಿನ ದೇಶಗಳಲ್ಲಿ ಹಾಗೂ ಅಮೆರಿಕಾದಲ್ಲಿ ಇದರ ಮಹತ್ವವನ್ನು ಒಂದು ಶತಮಾನಕ್ಕೂ ಮೊದಲೇ ಗುರುತಿಸಿ, ಕಾರ್ಯಪ್ರವೃತ್ತರಾಗಿದ್ದಾರೆ. ಇದರ ಪರಿಣಾಮವಾಗಿ ಈ ದೇಶಗಳಲ್ಲಿ ಅನೇಕ ಮ್ಯೂಸಿಯಂಗಳು, ಆರ್ಕೈವ್‌ಗಳು ರೂಪುಗೊಂಡಿವೆ. ವಿದ್ವಾಂಸರು, ಅಧ್ಯಾಪಕರು, ವಿದ್ಯಾರ್ಥಿಗಳು, ಸಾರ್ವಜನಿಕರು ಇದರ ಪ್ರಯೋಜನವನ್ನು ಪಡೆಯುತ್ತಾರೆ. ಜಾನಪದ ಸಂಗ್ರಹಕಾರರು ತಾವು ಸಂಗ್ರಹಿಸಿದ ಸಾಮಾಗ್ರಿಗಳನ್ನು (ಬರವಣಿಗೆ, ಆಡಿಯೋ ಟೇಪುಗಳು, ವಿಡಿಯೋ ಟೇಪುಗಳು, ಫೋಟೋಗಳು ಮತ್ತು ಸ್ಲೈಡ್‌ಗಳು) ಇಂತಹ ಸಂಸ್ಥೆಗಳಿಗೆ ಕೊಡುಗೆಯಾಗಿ ಕೊಡುವುದೂ ಉಂಟು. ಸರಕಾರ, ಖಾಸಗಿ ಸಂಸ್ಥೆಗಳು ಈ ಬಗೆಯ ಆರ್ಕೈವ್‌ಗಳನ್ನು ರೂಪಿಸಿ, ಬೆಳೆಸುತ್ತವೆ. ಉದಾಹರಣೆಗೆ ಯೂರೋಪಿನ ಉತ್ತರದ ತುದಿಯಲ್ಲಿರುವ ಫಿನ್ಲೆಂಡ್ ಜಾನಪದ ಅಧ್ಯಯನದಲ್ಲಿ ಜಗತ್ತಿನಲ್ಲೇ ಗಣ್ಯಸ್ಥಾನವನ್ನು ಪಡೆದಿದೆ. ಇಲ್ಲಿರುವ Finnish Literature Society ಯ Archives ನೂರೈವತ್ತು ವರ್ಷಗಳಷ್ಟು ಸುದೀರ್ಘವಾದ ಇತಿಹಾಸವನ್ನು ಹೊಂದಿದೆ. ಜಾನಪದದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಸಾವಿರಾರು ಐಟಂಗಳನ್ನು (Items) ಅಲ್ಲಿ ಸಂಗ್ರಹಿಸಲಾಗಿದೆ. ಇಷ್ಟು ದೊಡ್ಡದಲ್ಲದಿದ್ದರೂ ಅನೇಕ ಚಿಕ್ಕಪುಟ್ಟ ಆರ್ಕೈವ್‌ಗಳು ಫಿನ್ಲೆಂಡಿನಲ್ಲಿವೆ. ಇದು ಸಾಧ್ಯವಾದದ್ದು ಸರಕಾರದ ನೆರವಿನಿಂದ, ಜನರ ಸಹಕಾರದಿಂದ. ಯಾವ ಯಾವ ಆರ್ಕೈವ್‌ನಲ್ಲಿ ಯಾವ ಯಾವ ವಿಷಯಕ್ಕೆ ಸಂಬಂಧಿಸಿದ ಐಟಂಗಳಿವೆ, ಅಲ್ಲಿ ಏನೇನು ಮಾಹಿತಿ ದೊರೆಯುತ್ತದೆ ಎಂಬುದನ್ನೆಲ್ಲಾ ತಿಳಿಸುವ ಕೈಪಿಡಿಗಳೂ ದೊರೆಯುತ್ತವೆ. ಇದನ್ನೆಲ್ಲಾ ನೋಡಿಕೊಳ್ಳಲು ನಿರ್ದೇಶಕರು, ದಾಖಲಾತಿ ಮಾಡಲು ಜಾನಪದ ತಜ್ಞರು ಈ ಸಂಸ್ಥೆಗಳಲ್ಲಿರುತ್ತಾರೆ. ಲೈಬ್ರರಿಗಳನ್ನು ಉಪಯೋಗಿಸುವಂತೆಯೇ ಆರ್ಕೈವ್‌ಗಳನ್ನೂ ಜಾನಪದ ವಿದ್ವಾಂಸರು ಮತ್ತು ವಿದ್ಯಾರ್ಥಿಗಳೂ ಉಪಯೋಗಿಸುತ್ತಾರೆ. ಜನಸಾಮಾನ್ಯರೂ, ಕೂಡ ಈ ಆರ್ಕೈವ್‌ಗಳಿಗೆ ಭೇಟಿ ನೀಡಿ ಕುತೂಹಲದಿಂದ ಜಾನಪದ ಕ್ಷೇತ್ರದಲ್ಲಿ ತಮಗೆ ಅಗತ್ಯವಾದ ಮಾಹಿತಿಯನ್ನು ಪಡೆದು, ಜ್ಞಾನ ಸಂಪಾದನೆ ಮಾಡುತ್ತಾರೆ. ಇಂತಹ ಪರಂಪರೆ ಭಾರತದಲ್ಲಿ ಇರಲಿಲ್ಲ. ಇದನ್ನು ಗಮನಿಸಿದ ಅಮೆರಿಕಾ ಫೋರ್ಡ್ ಫೌಂಡೇಶನ್ ಭಾರತದ ವಿವಿಧ ರಾಜ್ಯಗಳಲ್ಲಿ ಇಂತಹ ಆರ್ಕೈವ್‌ಗಳನ್ನು ಆರಂಭಿಸುವ ಸಂಸ್ಥೆಗಳಿಗೆ ನೆರವು ನೀಡಿತು. ಮಧ್ಯಪ್ರದೇಶದಲ್ಲಿ ಭೂಪಾಲ್‌ನ ರಂಗ ಮಂಡಲ, ಕೇರಳದ ತ್ರಿಶೂರ್‌ನಲ್ಲಿರುವ Drama School, ಬೊಂಬಾಯಿಯ Indian National Theatre ಹಾಗೂ ಹೈದರಾಬಾದಿನ ನಾಟಕ ಅಕಾಡೆಮಿ – ಈ ನೆರವನ್ನು ಪಡೆದು ಕಾರ್ಯಾರಂಭ ಮಾಡಿದ್ದವು. ಕರ್ನಾಟಕದಲ್ಲಿ ಯಾವ ಸಂಸ್ಥೆ ಈ ಜವಾಬ್ದಾರಿಯನ್ನು ನಿರ್ವಹಿಸಬಲ್ಲದು ಎಂಬುದರ ಬಗ್ಗೆ ಆಲೋಚಿಸಿದ ಫೋರ್ಡ್ ಫೌಂಡೇಶನ್ ಉಡುಪಿಯ ಪ್ರಸಿದ್ಧವಾದ ಮಣಿಪಾಲ್ ಅಕಾಡೆಮಿಯ ಮೊದಲ ಪ್ರಥಮದರ್ಜೆ ಕಾಲೇಜು ಮತ್ತು ಮಾದರಿ ಕಾಲೇಜು ಎಂದು ಹೆಸರು ಗಳಿಸಿದ್ದ ಎಂ. ಜಿ. ಎಂ. ಕಾಲೇಜಿಗೆ ಈ ನೆರವು ನೀಡಿದ್ದು ಆಶ್ಚರ್ಯವೇನೂ ಅಲ್ಲ. ಈ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಪ್ರೊ॥ ಕು. ಶಿ. ಹರಿದಾಸ ಭಟ್ಟರು ಈ ಸಂಸ್ಥೆಯನ್ನು ಅಪೂರ್ವವಾದ ರೀತಿಯಲ್ಲಿ ಬೆಳೆಸಿದ್ದರು. ನಿವೃತ್ತರಾದ ನಂತರವೂ ಅವರು ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳಿಂದ ನಿವೃತ್ತರಾಗಲಿಲ್ಲ. ಅವರು ಬಹುಮುಖ ಪ್ರತಿಭೆಯ ವ್ಯಕ್ತಿ. ಶ್ರೇಷ್ಠ ಪ್ರಾಧ್ಯಾಪಕರಾಗಿ, ದಕ್ಷ ಪ್ರಿನ್ಸಿಪಾಲರಾಗಿ, ಅಂಕಣ ಬರಹಗಾರರಾಗಿ. ಒಳ್ಳೆಯ ಹೆಸರು ಸಂಪಾದಿಸಿದ್ದರು. ಅವರು ಓದಿದ್ದು, ಪಾಠಹೇಳಿದ್ದು ಅರ್ಥಶಾಸ್ತ್ರದಲ್ಲಿ. ಇಟಲಿಯಲ್ಲಿ ಅವರು ಆ ವಿಷಯದಲ್ಲಿ ವಿಶೇಷವಾದ ತರಬೇತಿಯನ್ನೂ ಪಡೆದಿದ್ದರು. ಸಾಹಿತ್ಯ, ಕಲೆ, ಜಾನಪದ ಅವರ ಆಸಕ್ತಿಯ ವಿಷಯಗಳು. ಪ್ರಿನ್ಸಿಪಾಲರಾಗಿ ನಿವೃತ್ತರಾದ ನಂತರ ಅವರು ಡಾ॥ ಟಿ. ಎಂ. ಎ. ಪೈ ಸ್ಮಾರಕ Area Studiesನ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಎಂ. ಜಿ. ಎಂ. ಕಾಲೇಜಿನ ಸಂಶೋಧನಾ ಸಂಸ್ಥೆಗಳಾದ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಯಕ್ಷಗಾನ ಕೇಂದ್ರಗಳ ನಿರ್ದೇಶಕರಾಗಿದ್ದರು. ಡಾ॥ ಶಿವರಾಮ ಕಾರಂತರ ಮಾರ್ಗದರ್ಶನದಲ್ಲಿ ಯಕ್ಷಗಾನ ಕೇಂದ್ರದಲ್ಲಿ ತಯಾರಾದ ಯಕ್ಷಗಾನ ತಂಡ ಹಾಂಕಾಂಗ್(1971). ಜಪಾನ್(1981). ಇಟಲಿ (1982), ಯುಗೋಸ್ಲಾವಿಯಾ, ಬಲ್ಗೇರಿಯಾ, ಇಂಗ್ಲೆಂಡ್, ರಷ್ಯಾ ಮತ್ತು ಹಂಗೇರಿ(1982) ದೇಶಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗಳನ್ನು ನೀಡಿ ಆ ದೇಶಗಳಲ್ಲಿ ವಿಶೇಷವಾದ ಮಹತ್ವ ಪಡೆಯಿತು. 1981ರಲ್ಲಿ ಜಪಾನಿನ ಸಾಂಪ್ರದಾಯಿಕ ಕಲೆಗಳ ಉತ್ಸವದಲ್ಲಿ Tokyo Dance Critics Anual Award ಪಡೆದದ್ದು ಬಹಳ ಮುಖ್ಯವಾದ ಸಾಧನೆ. ಡಾ॥ ಶಿವರಾಮ ಕಾರಂತರು ಪ್ರಯೋಗಾತ್ಮಕವಾಗಿ ಆರಂಭಿಸಿದ ಯಕ್ಷರಂಗ

ಕೂಡ ವಿಶೇಷ ಮನ್ನಣೆ ಪಡೆಯಿತು. ಎಂ. ಜಿ. ಎಂ. ಕಾಲೇಜು ತುಳುನಾಡಿನ ಭಾಷೆ, ಸಾಹಿತ್ಯ, ಇತಿಹಾಸ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ಗುರುತಿಸಿದ ಕರ್ನಾಟಕ ಸರಕಾರ ತುಳು ನಿಘಂಟು ಯೋಜನೆಯನ್ನು ಈ ಸಂಸ್ಥೆಗೆ ಕೊಟ್ಟಿತು. ಸಮರ್ಥ ಭಾಷಾ ವಿಜ್ಞಾನಿಗಳಾದ ಡಾ॥ ಯು. ವಿ. ಉಪಾಧ್ಯಾಯ ಮತ್ತು ಶ್ರೀಮತಿ ಡಾ॥ ಸುಶೀಲಾ ಉಪಾಧ್ಯಾಯ ಅವರು ಯಶಸ್ವಿಯಾಗಿ ಈ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಹೀಗೆ ಎಂ. ಜಿ. ಎಂ. ಕಾಲೇಜು ಪ್ರಾದೇಶಿಕ ಮಟ್ಟದಲ್ಲಿ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ್ದನ್ನು ಗುರುತಿಸಿದ ಫೋರ್ಡ್ ಫೌಂಡೇಶನ್ ಈ ಸಂಸ್ಥೆಗೆ ಕರ್ನಾಟಕದ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರವನ್ನು (Regional Resources Centre for Folk Performing Arts ಸಂಕ್ಷಿಪ್ತನಾಮ:RRC) ಆರಂಭ ಮಾಡಲು ಫೆಬ್ರುವರಿ 9, 1984ರಂದು 88,000 ಡಾಲರ್‌ಗಳ ನೆರವನ್ನು ನೀಡಲು ಮುಂದೆ ಬಂದಿತು. ಈ ಸವಾಲನ್ನು ಸ್ವೀಕರಿಸಿದ ಮಣಿಪಾಲ್ ಎಕಾಡಮಿ ಆಫ್ ಜನರಲ್ ಎಜುಕೇಶನ್ ಈ ಸಂಸ್ಥೆಗೆ ಅಗತ್ಯವಾದ ಕಟ್ಟಡ ಮೊದಲಾದ ನೆರವು ನೀಡಿತು. ಈ ಎರಡು ಸಂಸ್ಥೆಗಳ ನೆರವಿನಿಂದ ಎಂ.ಜಿ.ಎಂ. ಕಾಲೇಜಿನ ಒಂದು ಅಂಗವಾಗಿ ಪ್ರೊ॥ ಕು. ಶಿ. ಹರಿದಾಸ ಭಟ್ಟರ ನಿರ್ದೇಶಕತ್ವದಲ್ಲಿ ಈ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯ ಉದ್ದೇಶ ಕರ್ನಾಟಕದ 19 ಜಿಲ್ಲೆಗಳಲ್ಲಿರುವ ಜಾನಪದ ರಂಗಕಲೆಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಆಡಿಯೋ. ವಿಡಿಯೋ ಟೇಪ್‌ಗಳು, ಫೋಟೋಗಳು, ಮತ್ತು ಸ್ಲೈಡುಗಳ ಮೂಲಕ ದಾಖಲು ಮಾಡಿ, ವರ್ಗೀಕರಿಸಿ ವಿದ್ವಾಂಸರ, ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಶೈಕ್ಷಣಿಕ, ಸಂಶೋಧನಾತ್ಮಕ ಉದ್ದೇಶಗಳಿಗಾಗಿ ಒದಗಿಸುವುದು. ಎಂ. ಜಿ. ಎಂ. ಕಾಲೇಜ್ ಟ್ರಸ್ಟ್ ನೇಮಕ ಮಾಡಿರುವ ಇದರ ಕಾರ್ಯಕಾರಿ ಸಮಿತಿಯಲ್ಲಿ ಪ್ರೊ॥ ಕು. ಶಿ. ಹರಿದಾಸ ಭಟ್ಟರು ಅಧ್ಯಕ್ಷರು. ಶ್ರೀ. ಕೆ. ವಿ. ಸುಬ್ಬಣ್ಣ, ಶ್ರೀಮತಿ ಡಾ॥ ಸುಶೀಲಾ ಉಪಾಧ್ಯಾಯ, ಪ್ರೊ॥ ಕೆ. ಕೆ. ಈಶ್ವರನ್, ಪ್ರೊ॥ ಕೆ. ರಾಮದಾಸ್ ಅವರಿದ್ದಾರೆ. ಪ್ರೊ॥ ದೇ. ಜವರೇಗೌಡ, ಪ್ರೊ॥ ಜೀ. ಶಂ. ಪರಮಶಿವಯ್ಯ, ಶ್ರೀ. ಮುದೇನೂರು ಸಂಗಣ್ಣ, ಶ್ರೀ. ಶ್ರೀನಿವಾಸ ಉಡುಪ, ಪ್ರೊ॥ ಎಸ್. ಎಂ. ವೃಷಭೇಂದ್ರಸ್ವಾಮಿ, ಡಾ॥ ಚಂದ್ರಶೇಖರ ಕಂಬಾರ, ಡಾ॥ ಬಸವರಾಜ ಮಲಶೆಟ್ಟಿ, ಡಾ॥ ನಿಂಗಣ್ಣ ಸಣ್ಣಕ್ಕಿ, ಶ್ರೀ. ಗೊ. ರೂ. ಚನ್ನಬಸಪ್ಪ ಮತ್ತು ಶ್ರೀ. ಪರ್ಯ ಲಕ್ಷ್ಮೀನಾರಾಯಣ ಆಳ್ವ ಈ ಸಂಸ್ಥೆಯ ಸಲಹೆಗಾರರು. RRCಯಲ್ಲಿ ಪ್ರೊ॥ ಕು. ಶಿ. ಹರಿದಾಸ ಭಟ್ಟರು ನಿರ್ದೇಶಕರಾಗಿದ್ದಾರೆ. ಶ್ರೀ. ಎಚ್. ಕೃಷ್ಣ ಭಟ್ಟರು ಸಹಾಯಕ ನಿರ್ದೇಶಕರಾಗಿದ್ದಾರೆ. ಶ್ರೀ. ಎಂ. ಶಂಕರ್ (ನಿವೃತ್ತ ಡೈರೆಕ್ಟರ್. ಆಕಾಶವಾಣಿ)ಅವರು 1983-84ರಲ್ಲಿ, ಶ್ರೀ. ವೆಂ. ಮು. ಜೋಶಿ (ನಿವೃತ್ತ ಜಂಟಿ ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ) ಅವರು 1984-85ರಲ್ಲಿ ಪ್ರಾಜೆಕ್ಟ್ ಡೈರೆಕ್ಟರ್‌ಗಳಾಗಿದ್ದರು. ಪ್ರೊ॥ ರಾಮದಾಸ್ ಅವರು ಮೊದಲ ವರ್ಷದಲ್ಲಿ ವಿಡಿಯೋ ದಾಖಲು ಕಾರ್ಯವನ್ನು ನಿರ್ವಹಿಸಿದರು. ಶ್ರೀ. ಎಸ್. ಎ. ಕೃಷ್ಣಯ್ಯ ಸಂಸ್ಥೆಯ ಆರಂಭದಿಂದಲೂ ರಿಸರ್ಚ್ ಆಫೀಸರ್ ಆಗಿದ್ದಾರೆ. ಸ್ವತಃ ಜಾನಪದದಲ್ಲಿ ಎಂ. ಎ. ಮಾಡಿ, ಪಿಎಚ್‌ಡಿಗಾಗಿ ಸಂಶೋಧನೆ ಮಾಡುತ್ತಿರುವ ಅವರು ದಾಖಲಾತಿ ಕಾರ್ಯದಲ್ಲಿ ನಿರತರಾಗಿದ್ದಾರೆ. ಫಿನ್ಲೆಂಡಿನಲ್ಲಿ ನಾಲ್ಕು ವಾರಗಳ ಕಾಲವಿದ್ದು, ಅಲ್ಲಿನ Finnish Literature Society ಮತ್ತು Nordic Institute of Folkloreನಲ್ಲಿ ಅಭ್ಯಾಸಮಾಡಿ, RCCಯ Index Cardಗಳನ್ನು ಸಿದ್ಧಪಡಿಸಿದ್ದಾರೆ. ಶ್ರೀ. ಕೆ. ಎಸ್. ಹರ್ಷವರ್ಧನ್ RRCಯ ವಿಡಿಯೋ ಟೆಕ್ನೀಷಿಯನ್. ಇವರು ರೋಂ ವಿಶ್ವವಿದ್ಯಾನಿಲಯದಲ್ಲಿ ಆರು ತಿಂಗಳ ಕಾಲವಿದ್ದು ವಿಡಿಯೋ ತಂತ್ರಜ್ಞಾನದಲ್ಲಿ ತರಬೇತಿ ಪಡೆದಿದ್ದಾರೆ. ಶ್ರೀ. ರತ್ನಾಕರ ಪೈ ಅವರು ಹಣಕಾಸು, ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಮ್ಯಾನೇಜರ್ ಆಗಿದ್ದಾರೆ. ಎಂ. ಜಿ. ಎಂ. ಕಾಲೇಜು ಟ್ರಸ್ಟಿನಲ್ಲಿ ಶ್ರೀ. ಕೆ. ಕೆ. ಪೈ(ಅಧ್ಯಕ್ಷರು), ಪ್ರೊ॥ ಕೆ. ರಾಮ ಭಟ್, ಡಾ॥ ಎ. ಕೃಷ್ಣ ರಾವ್, ಶ್ರೀಟಿ. ಮೋಹನ್‌ದಾಸ ಪೈ, ಶ್ರೀ. ಟಿ. ರಮೇಶ್ ಯು. ಪೈ, ಪ್ರೊ॥ಕು. ಶಿ. ಹರಿದಾಸ ಭಟ್, ಡಾ॥ ಕೆ. ಮೋಹನದಾಸ ಪೈ (ಸದಸ್ಯರು) ಅವರಿದ್ದಾರೆ. ಈ ಟ್ರಸ್ಟಿನ ಉಸ್ತುವಾರಿಯಲ್ಲಿ ಎಂ. ಜಿ. ಎಂ. ಕಾಲೇಜು ಕ್ಯಾಂಪಸ್ಸಿನಲ್ಲಿ RRCಯ ಕಾರ್ಯ ಚಟುವಟಿಕೆಗಳು ನಡೆಯುತ್ತವೆ.

— ೨ —

ಪ್ರೊ॥ ಕು. ಶಿ. ಹರಿದಾಸ ಭಟ್ಟರು ಈ ಸಂಸ್ಥೆಯ ಗೌರವ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಬೊಂಬಾಯಿನ Indian National Theatreನ ಶ್ರೀ. ದಾಮು ಝವೇರಿ ಅವರೊಡನೆ ಮುಂದೆ ಮಾಡಬೇಕಾದ ಕಾರ್ಯಕ್ರಮಗಳ ಬಗ್ಗೆ ವಿಚಾರ ಮಾಡಿದರು. ಆ ವೇಳೆಗಾಗಲೇ ಫೋರ್ಡ್ ಫೌಂಡೇಶನ್ ನೆರವು ನೀಡಿದ್ದ ಸಂಸ್ಥೆಗಳ ಕಾರ್ಯಕ್ರಮಗಳನ್ನು ಗಮನಿಸಿದರು. ಜಾನಪದ ದಾಖಲಾತಿ ಸಂಗ್ರಹಾಲಯಕ್ಕೆ ಅಗತ್ಯವಾದ ಟೇಪ್ ರೆಕಾರ್ಡರ್‌ಗಳು, ರೆಕಾರ್ಡಿಂಗ್ ಟೇಪುಗಳು, ವಿಡಿಯೋ ಕ್ಯಾಮೆರಾ, ವಿಸಿಆರ್, ಎಡಿಟಿಂಗ್ ಯಂತ್ರ, ವಿಡಿಯೋ ಟೇಪುಗಳು, ಸ್ಲೈಡುಗಳು, ಸ್ಲೈಡ್ ಪ್ರೊಜೆಕ್ಟರ್, ವಿಡಿಯೋ ಮಾನಿಟರ್ ಮೊದಲಾದ

ಉಪಕರಣಗಳನ್ನು ವಿದೇಶದಿಂದ ತರಿಸಿ, ಹವಾನಿಯಂತ್ರಿತ ಕೋಣೆಯಲ್ಲಿ ಅವನ್ನೆಲ್ಲಾ ವ್ಯವಸ್ಥಿತವಾಗಿ ಸಜ್ಜು ಗೊಳಿಸಲು ಸುಮಾರು ಒಂದು ವರ್ಷವೇ ಬೇಕಾಯಿತು. ಆದರೆ ಈ ನಡುವೆ ಶ್ರೀ. ಎಸ್. ಎ. ಕೃಷ್ಣಯ್ಯ ಸಂಸ್ಥೆಯ ಪರಿಯಿಂದ ಕರ್ನಾಟಕದ ವಿವಿಧ ಭಾಗಗಳಲ್ಲಿ ಕ್ಷೇತ್ರ ಕಾರ್ಯವನ್ನು ಮಾಡುತ್ತಿದ್ದರು. ಶ್ರೀ. ಶಂಕರ್ ಅವರು ಪ್ರಾಜೆಕ್ಟ್ ಡೈರೆಕ್ಟರ್ ಆಗಿದ್ದ ಒಂದು ವರ್ಷದ ಕಾಲಾವಧಿಯಲ್ಲಿ ಗೋಕಾಕ ಮತ್ತು ತಾಳಗುಪ್ಪದಲ್ಲಿ RRC ನಡೆಸಿದ ಕಮ್ಮಟಗಳನ್ನು ನಿರ್ದೇಶಿಸಿದರು. ಉತ್ತರ ಕರ್ನಾಟಕದ 'ಸಣ್ಣಾಟ'ದ ಬಗ್ಗೆ ಒಂದು ಉಪಯುಕ್ತವಾದ ಪುಸ್ತಕವನ್ನು ಬರೆದರು. ಈ ಪುಸ್ತಕ RRCಯಿಂದ ಪ್ರಕಟವಾಗಿದೆ. RRCಯ ಪ್ರಾಜೆಕ್ಟನ್ನು "Project Rangasthala" ಎಂದು ಹೆಸರಿಸಲಾಯಿತು. ಈ ಪ್ರಾಜೆಕ್ಟಿನ ಕಾರ್ಯಚಟುವಟಿಕೆಗಳು ಎರಡು ರೀತಿಯ ವಾಗಿದ್ದವು: ಸ್ಥಳೀಯ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಿ RRCಯೇ ಕಮ್ಮಟಗಳನ್ನು, ವಿಚಾರ ಗೋಷ್ಠಿಗಳನ್ನೂ, ಕಲಾಮೇಳಗಳನ್ನೂ, ಏರ್ಪಡಿಸಿ, ಅವುಗಳ ದಾಖಲಾತಿ ಮಾಡುವುದು. ಇದು ಒಂದು ಕ್ರಮ. ಕರ್ನಾಟಕದ ಯಾವುದೇ ಭಾಗದಲ್ಲಾದರೂ ವಿಚಾರಗೋಷ್ಠಿಗಳನ್ನು ಕಲಾಮೇಳಗಳನ್ನೂ, ಕಮ್ಮಟಗಳನ್ನೂ ವಿಶ್ವವಿದ್ಯಾನಿಲಯ ವೋ, ಜಾನಪದ ಎಕಾಡಮಿಯೋ ಅಥವಾ ಇನ್ನಾವುದಾದರೂ ಸಂಸ್ಥೆ ಏರ್ಪಡಿಸಿದಾಗ ಶ್ರೀ. ಎಸ್.ಎ. ಕೃಷ್ಣಯ್ಯ ಹಾಗೂ ಶ್ರೀ. ಹರ್ಷವರ್ಧನ್ ದಾಖಲಾತಿಯ ಕಾರ್ಯವನ್ನು ಮಾಡುವುದು. ಇದು ಇನ್ನೊಂದು ಕ್ರಮ. ಕೆಲವರು ವಿದ್ವಾಂಸರಿಗೆ ನಿರ್ದಿಷ್ಟವಾದ ಯೋಜನೆಗಳಿಗೆ ಆರ್ಥಿಕ ನೆರವು ನೀಡಿ. ಆ ಬಗ್ಗೆ ಪುಸ್ತಕ ಸಿದ್ಧ ವಾದ ನಂತರ ಅದನ್ನು ಪ್ರಕಟಿಸುವುದು. ಇದು ಮತ್ತೊಂದು ಕ್ರಮ. ಶ್ರೀ. ಎ. ವಿ. ನಾವಡ ಅವರ 'ವೈದ್ಯರ ಹಾಡುಗಳು, ಡಾ॥ ಬಸವರಾಜ ಮಲಶೆಟ್ಟಿ ಅವರ 'ಉತ್ತರ ಕರ್ನಾಟಕದ ಜನಪದ ವಾದ್ಯಗಳು' ಪ್ರಕಟವಾ ದದ್ದು ಹೀಗೆ. ಹೀಗೆ ವಿವಿಧ ಕ್ರಮಗಳಿಂದ RRCಯಲ್ಲಿ ದಾಖಲಾತಿಯ ಕಾರ್ಯ ನಡೆಯಿತು. ಶ್ರೀ. ವೆಂ. ಮು. ಜೋಷಿಯವರು ಪ್ರಾಜೆಕ್ಟ್ ಡೈರೆಕ್ಟರ್ ಆಗಿದ್ದ ಕಾಲಾವಧಿಯಲ್ಲಿ ಅಂಬರಜೀರಹಳ್ಳಿ ಮತ್ತು ಗದಗ್‌ನಲ್ಲಿ ನಡೆದ ಕಮ್ಮಟಗಳನ್ನು ಅವರು ನಿರ್ದೇಶಿಸಿದರು. ಅನಂತರದಲ್ಲಿ ಶ್ರೀ. ಎಸ್. ಎ. ಕೃಷ್ಣಯ್ಯ ಅವರು ಪ್ರೊ॥ ಕು. ಶಿ. ಹರಿದಾಸಭಟ್ಟರ ಮಾರ್ಗದರ್ಶನದಲ್ಲಿ, ಶ್ರೀ. ಕೆ. ಎಸ್. ಹರ್ಷವರ್ಧನ್ ಅವರೊಡನೆ ಹಗಲು ರಾತ್ರಿ ದುಡಿದು RRCಯ ದಾಖಲಾತಿ ಕಾರ್ಯವನ್ನು ನಿರ್ವಹಿಸಿದ್ದಾರೆ; ದಾಖಲಾತಿಯ ನಂತರದ ಎಡಿಟಿಂಗ್ ಮತ್ತು ವರ್ಗೀಕರಣ ಕಾರ್ಯಗಳನ್ನು ದಕ್ಷತೆಯಿಂದ ಮಾಡಿದ್ದಾರೆ.

ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಕರಾವಳಿ ಕರ್ನಾಟಕದ ಬಹುತೇಕ ಜನಪದ ರಂಗಕಲೆ ಗಳನ್ನೂ, ಹಬ್ಬ ಜಾತ್ರೆಗಳನ್ನೂ, ವಿವಿಧ ಸಂಪ್ರದಾಯಗಳನ್ನೂ RRCಯಲ್ಲಿ ದಾಖಲು ಮಾಡಲಾಗಿದೆ. ಯಕ್ಷ ಗಾನದ ತೆಂಕುತಿಟ್ಟು ಮತ್ತು ಬಡಗುತಿಟ್ಟುಗಳ ಪ್ರದರ್ಶನಗಳನ್ನು ಆಡಿಯೋ, ವಿಡಿಯೋ ಮೂಲಕ ದಾಖಲು ಮಾಡಿರುವಂತೆಯೇ ಅಂಬಲಪಾಡಿ ಮತ್ತು ಕಟೀಲು ಈ ಪ್ರದೇಶಗಳಲ್ಲಿ ಯಕ್ಷಗಾನದ ಸಂಗೀತ ಮತ್ತು ನೃತ್ಯದ ಬಗ್ಗೆ ಕಮ್ಮಟಗಳನ್ನು ಏರ್ಪಡಿಸಿ, ಈ ಬಗ್ಗೆ ಆಳವಾದ ಸಂಶೋಧನೆ ಮಾಡಲಾಗಿದೆ. ಇದರ ಅಧ್ಯಯನದ ವಿವರಗಳನ್ನು ಕುರಿತು ಪ್ರೊ॥ ರಾಜಗೋಪಾಲಾಚಾರ್ಯರು ಬರೆದ 'ರಂಗ ಪ್ರಸಂಗ' ಎಂಬ ಕೃತಿಯನ್ನು RRC ಪ್ರಕಟಿಸಿದೆ. ಈ ಕೃತಿಯಲ್ಲಿ ಹಾಗೂ RRCಯ ವಾರ್ಷಿಕ ವರದಿ "Rangasthala - II"ರಲ್ಲಿ ಈ ಸಂಬಂಧವಾದ ವಿದ್ವತ್‌ಪೂರ್ಣ ಚರ್ಚೆಗಳನ್ನೂ, ಸಂಶೋಧನಾ ವಿವರಗಳನ್ನೂ ಆಸಕ್ತರು ನೋಡಬಹುದು. ಶ್ರೀ. ಶ್ರೀನಿವಾಸ ಉಡುಪ ಮತ್ತು ಶ್ರೀ. ಎಂ. ಮಹಾಬಲ ಭಟ್ ಈ ಕಮ್ಮಟಗಳನ್ನು ನಿರ್ದೇಶಿಸಿದರು. ಉಭಯ ತಿಟ್ಟುಗಳ ವಿದ್ವಾಂಸರೆಲ್ಲಾ ಈ ಕಮ್ಮಟಗಳಲ್ಲಿ ಭಾಗವಹಿಸಿದ್ದರು. ಅಂಬಲಪಾಡಿಯ ಕಮ್ಮಟದಲ್ಲಿ ಮದರಾಸಿನ ಪ್ರಸಿದ್ಧ ಸಂಗೀತ ಶಾಸ್ತ್ರಜ್ಞರಾದ ಡಾ॥ ಎಸ್. ರಾಮನಾಥನ್ ಹಾಗೂ ಖೈರಾಘರ್ ಸಂಗೀತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ॥ ಎಂ. ಆರ್. ಗೌತಮ್ ಪ್ರಮುಖ ವಿದ್ವಾಂಸರಾಗಿದ್ದರು.

RRCಯಲ್ಲಿ ಈ ವರೆಗೆ ದಕ್ಷಿಣ ಕರ್ನಾಟಕದ ಮೂಡಲಪಾಯ, ಬೀಸುಕಂಸಾಳೆ, ಸೂತ್ರದ ಬೊಂಬೆ ಯಾಟ, ತೊಗಲು ಗೊಂಬೆಯಾಟ, ಗಣೆ ಸಂಪ್ರದಾಯ, ಕಿನ್ನರಿ ಜೋಗಿಗಳ ಸಂಪ್ರದಾಯ, ಸೋಮನ ಕುಣಿತ, ಮೊದಲಾದ ಬಹುಮಟ್ಟಿನ ರಂಗ ಕಲೆಗಳನ್ನೂ, ಸಂಪ್ರದಾಯಗಳನ್ನೂ ದಾಖಲು ಮಾಡಲಾಗಿದೆ. ಉತ್ತರ ಕರ್ನಾಟಕದಲ್ಲಿ ದೊಡ್ಡಾಟ, ಸಣ್ಣಾಟ, ದಾಸರಾಟ, ರಾಧಾನಾಟ, ಕಿನ್ನರಿ ಜೋಗಿಗಳ ಸಂಪ್ರದಾಯ, ಗೊಂದಲಿಗರ ಆಟ, ವೇಷಗಾರರ ಸಂಪ್ರದಾಯ ಮೊದಲಾದ ಬಹುಪಾಲು ಜನಪದ ರಂಗಕಲೆಗಳನ್ನು ದಾಖಲು ಮಾಡಲಾಗಿದೆ. ಹಾಗೆಯೇ ಕೊಡಗಿನ ಹುತ್ತರಿ ನೃತ್ಯ, ಉಮ್ಮತ್ತಾಟ ಮೊದಲಾದ ಕಲಾ ಪ್ರಕಾರಗಳನ್ನು ದಾಖಲು ಮಾಡಲಾಗಿದೆ. ಕರಾವಳಿ ಕರ್ನಾಟಕದಲ್ಲಿ ತೆಂಕುತಿಟ್ಟು-ಬಡಗುತಿಟ್ಟು ಯಕ್ಷಗಾನ. ತಾಳ ಮದ್ದಳೆ, ಭೂತಾರಾಧನೆ. ನಾಗಾರಾಧನೆ ಮೊದಲಾದ ಅನೇಕ ಕಲೆಗಳನ್ನು ದಾಖಲು ಮಾಡಲಾಗಿದೆ. ಯಕ್ಷಗಾನದ ಎಲ್ಲ ಬಗೆಗಳನ್ನು – ಅಂದರೆ ವೃತ್ತಿಪರ ಯಕ್ಷಗಾನ, ಹವ್ಯಾಸಿ ಯಕ್ಷಗಾನ. ಯಕ್ಷರಂಗ. ಮಕ್ಕಳ ಯಕ್ಷಗಾನ-ದಾಖಲು ಮಾಡಲಾಗಿದೆ. ಹಿರಿಯಡ್ಕ ಗೋಪಾಲ ರಾಯರ ನಿರ್ದೇಶನದಲ್ಲಿ 1988ರ ನವೆಂಬರ್ 12, 13ರಂದು ಯಕ್ಷಗಾನದ ಹಾಡುಗಳನ್ನು

ವಿಡಿಯೋದಲ್ಲಿ ಚಿತ್ರೀಕರಿಸಲಾಗಿದೆ. ಮದ್ದಲೆಗೆ ಸಂಬಂಧಿಸಿದಂತೆಯೂ ಸಂಶೋಧನೆ ನಡೆಸಲಾಗಿದೆ. ಉತ್ತರ ಕರ್ನಾಟಕದ ದೊಡ್ಡಾಟಗಳ ಬಗ್ಗೆ ಡಾ॥ ಬಸವರಾಜ ಮಲಶೆಟ್ಟಿ ಅವರು ಅನೇಕ ವರ್ಷಗಳಿಂದ ಸಂಶೋಧನೆ ನಡೆಸಿದ್ದಾರೆ. RRCಗದಗ್, ನಂದಿಹಳ್ಳಿ, ಹೊಸಪೇಟೆಗಳಲ್ಲಿ ನಡೆಸಿದ ಕಮ್ಮಟಗಳಲ್ಲಿ, ವಿಚಾರ ಗೋಷ್ಠಿಗಳಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದಾರೆ. ದೊಡ್ಡಾಟದ ಸಂಭಾಷಣೆ, ಉಡುಗೆತೊಡುಗೆ, ನೃತ್ಯ ಹಾಗೂ ಸಂಗೀತದಲ್ಲಿ ಪರಂಪರೆಗೆ ಹೆಚ್ಚು ಕುಂದು ಬರದಂತೆ, ಕೆಲವು ಪರಿಷ್ಕಾರಗಳನ್ನು ಮಾಡಿ, "ಗಿರಿಜಾ ಕಲ್ಯಾಣ" ಎಂಬ ದೊಡ್ಡಾಟದ ಪಠ್ಯ ತಯಾರಿಸಿ, ರಂಗದ ಮೇಲೆ ಅಭಿನಯಿಸಿದ್ದಾರೆ. ಸಾಮಾನ್ಯವಾಗಿ ಪರಂಪರಾನುಗತವಾದ ದೊಡ್ಡಾಟಗಳು ರಾತ್ರಿ ಪೂರ್ತಿ ನಡೆಯುತ್ತವೆ. ಆದರೆ ಮಲಶೆಟ್ಟಿ ಅವರ ಪ್ರಯೋಗ ಕೇವಲ ಎರಡು ಗಂಟೆಗಳ ವ್ಯಾಪ್ತಿಯದು. ಸೃಜನಶೀಲವಾದ ಇವರ ಈ ಪ್ರಯೋಗ, ಡಾ॥ ಶಿವರಾಮ ಕಾರಂತರ ಪ್ರಯೋಗವಾದ ಯಕ್ಷರಂಗವನ್ನು ನೆನಪಿಗೆ ತರುತ್ತದೆ.

RRC ಈ ವರೆಗೆ ಕನ್ನಡ ಜಾನಪದಕ್ಕೆ ಸಂಬಂಧಿಸಿದ 14 ಪುಸ್ತಕಗಳನ್ನು ಪ್ರಕಟಿಸಿದೆ. ಡಾ॥ ಯು. ಪಿ. ಉಪಾಧ್ಯಾಯ ಮತ್ತು ಶ್ರೀಮತಿ ಡಾ॥ ಸುಶೀಲಾ ಉಪಾಧ್ಯಾಯ ಅವರ "Bhuta worship: Aspects of A Ritualistic Theartre", ಶ್ರೀ ಎಂ. ಶಂಕರ್ ಅವರ "Sannata: Minor Folk Plays of Northern Karnataka", ಡಾ॥ ಯು. ಪಿ. ಉಪಾಧ್ಯಾಯ ಅವರು ಸಂಪಾದಿಸಿರುವ "Folk Epics of Tulunadu", ಶ್ರೀ. ಎಸ್. ಎ. ಕೃಷ್ಣಯ್ಯ ಅವರ "Karnataka Puppetry" – ಈ ಇಂಗ್ಲಿಷ್ ಕೃತಿಗಳು ಪ್ರಕಟವಾಗಿವೆ. ಶ್ರೀ. ಮುದೇನೂರು ಸಂಗಣ್ಣನವರು ಸಂಪಾದಿಸಿರುವ "ಚಿತ್ರಪಟ ರಾಮಾಯಣ", ಶ್ರೀ. ಕೋಟ ಶ್ರೀನಿವಾಸ ನಾಯಕರ "ನಿನ್ನೆಯ ಮನ್ನೆಯರು", ಶ್ರೀ. ಎ. ವಿ. ನಾವಡ ಅವರು ಸಂಪಾದಿಸಿದ "ವೈದ್ಯರ ಹಾಡುಗಳು", ಡಾ॥ ಡಿ. ಕೆ. ರಾಜೇಂದ್ರ ಅವರ "ಕರಪಾಲ ಮೇಳ", ಪ್ರೊ॥ ಎಂ. ರಾಜಗೋಪಾಲಾಚಾರ್ಯರ "ರಂಗ ಪ್ರಸಂಗ", ಶ್ರೀ. ನೀಲಾವರ ರಾಮಕೃಷ್ಣಯ್ಯನವರು ಬರೆದಿರುವ "ಯಕ್ಷಗಾನ ಸ್ವಬೋಧಿನಿ", ಡಾ॥ ಬಸವರಾಜ ಮಲಶೆಟ್ಟಿ ಅವರ "ಉತ್ತರ ಕರ್ನಾಟಕದ ಜನಪದ ವಾದ್ಯಗಳು", ಪ್ರೊ॥ ಕು. ಶಿ. ಹರಿದಾಸ ಭಟ್ಟರ "ಕೆ. ಕೆ. ಹೆಬ್ಬಾರ: ಕಲೆ ಮತ್ತು ಬದುಕು", ಡಾ॥ ಸುಶೀಲಾ ಉಪಾಧ್ಯಾಯ ಅವರ "ಜನಪದ ಆರಾಧನೆ ಮತ್ತು ರಂಗಕಲೆ", ಡಾ॥ ತೀ. ನಂ. ಶಂಕರನಾರಾಯಣ ಅವರ "ಕೊಂಡ ಹಾಯುವ ಸಂಪ್ರದಾಯ" – ಇವು ಈ ವರೆಗೆ ಪ್ರಕಟವಾಗಿರುವ ಪುಸ್ತಕಗಳು. ಇನ್ನೂ ಕೆಲವು ಕೃತಿಗಳು ಪ್ರಕಟವಾಗಬೇಕಾಗಿವೆ. ಪುಸ್ತಕಗಳಲ್ಲದೆRRCಯ ಕಾರ್ಯಚಟುವಟಿಕೆಗಳ ವರದಿ ರೂಪವಾದ "Rangastala I, II, III, IV(4 ಸಂಚಿಕೆಗಳು) ಪ್ರಕಟವಾಗಿವೆ. RRC ಮತ್ತು ಯಕ್ಷಗಾನ ಕೇಂದ್ರದ ಕಾರ್ಯ ಚಟುವಟಿಕೆಗಳನ್ನು ತಿಳಿಸುವ 'Prasanga' ಅನಿಯತಕಾಲಿಕದ 17 ಸಂಚಿಕೆಗಳು ಈವರೆಗೆ ಪ್ರಕಟವಾಗಿವೆ. ಇವುಗಳನ್ನೆಲ್ಲಾ ಓದಿದರೆ RRCಯ ಕಾರ್ಯ ಚಟುವಟಿಕೆಗಳ ಹಾಗೂ ಸಾಧನೆಗಳ ಪರಿಚಯವಾಗುತ್ತದೆ. 'Rangastala' ವನ್ನು ಪ್ರೊ॥ ಕು. ಶಿ. ಹರಿದಾಸ ಭಟ್ಟರೂ, 'Prasanga'ವನ್ನು ಶ್ರೀ. ಎನ್. ಟಿ. ಭಟ್ ಅವರೂ ಸಂಪಾದಿಸುತ್ತಾರೆ. ಪ್ರಾಜೆಕ್ಟ್ ವರದಿಗಳನ್ನು ಎಷ್ಟು ಅಚ್ಚುಕಟ್ಟಾಗಿ ಕೊಡಬಹುದು ಎಂಬುದನ್ನು ಇವುಗಳಲ್ಲಿ ಗುರುತಿಸಬಹುದು. 'Rangastala'ದ ನಾಲ್ಕೂ ಸಂಚಿಕೆಗಳು ತುಂಬ ಸೊಗಸಾಗಿ ಅಚ್ಚಾಗಿದ್ದು, ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿವೆ; ಮುಂದೆ ಈ ಬಗೆಯ ಕೆಲಸ ಮಾಡುವವರಿಗೆ ಮಾರ್ಗದರ್ಶಕವಾಗಿವೆ.

— ೩ —

RRCಗೆ ಹೊಸ ಆಯಾಮ ಬಂದದ್ದು ಪ್ರೊ॥ ಕು. ಶಿ. ಹರಿದಾಸ ಭಟ್ಟರು 1984ರಲ್ಲಿ ಫಿನ್ಲೆಂಡಿಗೆ ಭೇಟಿ ನೀಡಿದ್ದರಿಂದ. ನ್ಯೂಯಾರ್ಕ್ ಸ್ಟೇಟ್ ವಿಶ್ವವಿದ್ಯಾನಿಲಯದಲ್ಲಿ ತೌಲನಿಕ ಸಾಹಿತ್ಯದ ಪ್ರಾಧ್ಯಾಪಕರಾಗಿರುವ ಪ್ರೊ॥ ಜಾನ್ ಆಲ್ಫೋನ್ಸೋ ಕಾರ್ಕಳ ಅವರು ಪ್ರೊ॥ ಕು. ಶಿ. ಅವರ ಸ್ನೇಹಿತರು. ಫಿನ್ಲೆಂಡ್ ದೇಶದಲ್ಲಿ ಜಾನಪದ ಕ್ಷೇತ್ರದಲ್ಲಿ ನಡೆಯುತ್ತಿದ್ದ ಕಾರ್ಯ ಚಟುವಟಿಕೆಗಳ ಬಗ್ಗೆ ಅವರು ಕು. ಶಿ. ಅವರಿಗೆ ಆಗಾಗ ಹೇಳುತ್ತಲೇ ಇದ್ದರು. ಈ ದೇಶದ ಜಾನಪದ ಕಾರ್ಯಚಟುವಟಿಕೆಗಳ ಪರಿಚಯ ಮಾಡಿಕೊಳ್ಳುವುದು ಮೌಖಿಕ ಸಂಪ್ರದಾಯವೇ ಪ್ರಧಾನವಾಗಿರುವ ತುಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡುತ್ತಿರುವ ಕು. ಶಿ. ಅವರಿಗೆ ಉಪಯುಕ್ತವಾಗುವುದೆಂದು ಸೂಚಿಸಿದರು. ಇದು ಮುಖ್ಯವಾದ ವಿಷಯವಾದುದರಿಂದ ಪ್ರೊ॥ ಕಾರ್ಕಳ ಅವರು ಮಣಿಪಾಲ್ ಎಕಾಡಮಿಯ ಕಾರ್ಯದರ್ಶಿ ಟಿ. ರಮೇಶ್ ಯು. ಪೈ ಅವರಿಗೆ ಬರೆದ ಪತ್ರವನ್ನು(ತಾ.5.1.1984) ಇಲ್ಲಿ ಕೊಡಲಾಗಿದೆ.

"1835ರಲ್ಲಿ ಮೊದಲ ಬಾರಿಗೆ ಪ್ರಕಟಗೊಂಡ ಫಿನ್ ಮಹಾಕಾವ್ಯ ಕಲೇವಾಲದ 150ನೆಯ ಪ್ರಕಟನಾ ವರ್ಷದ ಆಚರಣೆ 1985ರಲ್ಲಿ ನಡೆಯಲಿದೆ. ಅನೇಕ ಸೆಮಿನಾರ್, ಸಮ್ಮೇಳನಗಳು, ಪ್ರದರ್ಶನಗಳು

ಮುಂತಾದವನ್ನು ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಪ್ರಚಾರ ಮಾಡಲು ಫಿನ್ಲೆಂಡ್ ಉದ್ದೇಶಿಸಿದೆ. ಈ ಮಹಾಕಾವ್ಯವನ್ನು ಇಷ್ಟು ಭಾಷೆಗಳಲ್ಲಿ ಅನುವಾದಿಸಲೂ ಅವರು ನಿಶ್ಚಯಿಸಿದ್ದಾರೆ. ಈ ನಡುವೆ ಮಾಸ್ಕೋದಲ್ಲಿ ಕಲೇವಾಲ ವರ್ಷಾಚರಣೆಯ ಪ್ರಸ್ತಾಪವನ್ನು ಸೋವಿಯತ್ ಯೂನಿಯನ್ ಮತ್ತು ಅದರ ಅಂಗ ರಾಜ್ಯವಾದ ಕರೇಜಿಯನ್ ಗಣರಾಜ್ಯಗಳು ಮಾಡಿದ್ದನ್ನು ನೋಡಿ ಫಿನ್ಲೆಂಡಿಗೆ ಆಶ್ಚರ್ಯವಾಯಿತು. ಆದ್ದರಿಂದ ಕಲೇವಾಲ ಯಾರಿಗೆ ಸೇರಿದ್ದು ಎಂಬ ಪ್ರಶ್ನೆ ಇದಿರು ಬಂದಿದೆ. ಇದೊಂದು ರಾಜಕೀಯ ಬಣ್ಣ ತಳೆದು ಫಿನ್ಲೆಂಡನ್ನು ಕಾಡುತ್ತಿದೆ. ಯಾವುದೇ ಮಹಾಕಾವ್ಯ ಅದನ್ನು ಮನ್ನಿಸುವ ಜನರದ್ದೇ ಹೊರತು ರಾಷ್ಟ್ರದ್ದಲ್ಲವೆಂದು ನಾನು ವಾದ ಹೂಡಿದ್ದರಿಂದ ಫಿನ್ನರು ಸಂತುಷ್ಟರಾದರು. ನಾನು ಈ ವಾದ ಮಂಡಿಸಿದ ಸಮ್ಮೇಳನದಲ್ಲಿ ಇದು ಪತ್ರಕರ್ತರ ಕಣ್ಸೆಳೆವ ವಿಷಯವೆನಿಸಿತು. ಹೀಗಾಗಿ 1985ರ ಸೆಮಿನಾರಿಗೂ ನನ್ನನ್ನು ಕರೆದಿದ್ದಾರೆ. ಹೆಲ್ಸಿಂಕಿಯಲ್ಲಿ ಕಲೇವಾಲ ಸಂಘದ ಜನರ ಹತ್ತಿರ ಮಾತನಾಡುವಾಗ ಅವರು ತಮ್ಮ ಕಾವ್ಯ ಹಿಂದಿ, ಬಂಗಾಳಿ ಮತ್ತು ಇನ್ನೊಂದು ಯಾವುದೋ ಭಾಷೆಗೆ ತರ್ಜುಮೆಯಾಗುವುದೆಂದು ಹೇಳಿದರು. ಇದೇ ಸಂದರ್ಭದಲ್ಲಿ ಅವರು ತಮ್ಮ ಕಲೇವಾಲ ಸಂಗ್ರಹದ ಅನ್ವೇಷಣೆಯ ಬಗ್ಗೆ ಇಷ್ಟವುಳ್ಳ ವಿದ್ವಾಂಸರನ್ನು ತಮ್ಮ ದೇಶಕ್ಕೆ ಕರೆಸಿಕೊಳ್ಳುವ ಸಾಧ್ಯತೆ ಇದೆ. ನಿಮ್ಮ ಸಂಶೋಧನಾ ಕೇಂದ್ರದ ಪ್ರೊ॥ ಹರಿದಾಸ ಭಟ್ಟರು ಇಲ್ಲಿ ಬಂದು ತಾವು ಮಾಡುತ್ತಿರುವ ತುಳು ಸಂಶೋಧನೆಗೆ ಬೇಕಾದ ಅನುಭವ ಪಡೆಯಲು ಇದು ಒಳ್ಳೆಯ ಅವಕಾಶವೆನಿಸೀತು...... ಪ್ರತಿ ಬೇಸಗೆಯ ಋತುವಿನಲ್ಲೂ ಅಲ್ಲೊಂದು ದೊಡ್ಡ ಕಲಾ ಮಹೋತ್ಸವ ನಡೆಯುತ್ತದೆ. ಅದಕ್ಕೆ ಏಷಿಯೂದ ನಾಟಕಗಳು ಬರುತ್ತವೆ. ನಿಮ್ಮ ಯಕ್ಷಗಾನಕ್ಕೂ ಅಲ್ಲಿ ಛಾನ್ಸ್ ಸಿಗಬಹುದು. ಜಾನಪದ ಶಾಸ್ತ್ರ ಭಾಗದಲ್ಲಿ ನೀವು ವ್ಯವಹಾರ ಮಾಡಬೇಕೆಂದರೆ ನೀವು ತುರ್ಕು ವಿಶ್ವವಿದ್ಯಾನಿಲಯದಲ್ಲಿರುವ ನಾರ್ಡಿಕ್ ಜಾನಪದ ನಿರ್ದೇಶಕ ಪ್ರೊ॥ ಲೋರಿ ಹಾಂಕೋ ಅವರಿಗೆ ಬರೆದು ವಿಚಾರಿಸ ಬಹುದು. (ಕು.ಶಿ. ಹರಿದಾಸ ಭಟ್ಟರು, ರಂಗಾಯನ ಪು.76-77).

"ಕಾರ್ಕಳರು ಹೇಳಿದಂತೆ ಬರೆದೆ, ವಿಚಾರಿಸಿದೆ; ಆಮಂತ್ರಣ ಕೊಟ್ಟರು, ಹೋದೆ" ಎಂದು ಹೇಳುವ ಕು. ಶಿ. ಅಷ್ಟಕ್ಕೇ ಸುಮ್ಮನಾಗಲಿಲ್ಲ. ಅಲ್ಲಿ ಫಿನ್ನಿಷ್ ಲಿಟರೇಚರ್ ಸೊಸೈಟಿ, ನಾರ್ಡಿಕ್ ಇನ್‌ಸ್ಟಿಟ್ಯೂಟ್ ಆಫ್ ಫೋಕ್ ಲೋರ್, ಹೆಲ್ಸಿಂಕಿ ವಿಶ್ವವಿದ್ಯಾನಿಲಯದ ಜಾನಪದ ಅಧ್ಯಯನ - ವಿಭಾಗ ಇವೆಲ್ಲವನ್ನು ಮೂರು ದಿನಗಳ ಅಲ್ಪ ಕಾಲಾವಧಿಯಲ್ಲಿ ನೋಡಿದರು. ಪ್ರೊ॥ ಲೋರಿ ಹಾಂಕೋ ಅವರೊಡನೆ ಮಾತು ಕಥೆ ನಡೆಸಿದರು. ಪ್ರೊ॥ ಲೋರಿ ಹಾಂಕೋ ವಿಶ್ವವಿಖ್ಯಾತ ಜಾನಪದ ವಿದ್ವಾಂಸರು. ಯುನೆಸ್ಕೋಗೆ ಜಾನಪದ ಅಧ್ಯಯನ ಸಂಬಂಧವಾದ ವಿಷಯಗಳಿಗೆ ಸಲಹೆಗಾರರು. ಜಗತ್ತಿನಾದ್ಯಂತ ಜಾನಪದವನ್ನು ಬೌದ್ಧಿಕವಾದ ಆಸ್ತಿ ಎಂದು ಪರಿಗಣಿಸಿ, ಅದರ ರಕ್ಷಣೆಗಾಗಿ ಯುನೆಸ್ಕೋ ಮಾಡುತ್ತಿರುವ ನಿಯಮಾವಳಿಯನ್ನು ರೂಪಿಸಿದ ಶಿಲ್ಪಿ ಅವರು. ಫಿನ್ಲೆಂಡ್, ನಾರ್ವೆ, ಸ್ವೀಡನ್, ಡೆನ್‌ಮಾರ್ಕ್, ಐಸ್‌ಲೆಂಡ್ –ಈ ಐದು ಸಮಾನ ಸಂಸ್ಕೃತಿಯುಳ್ಳ-ನಾರ್ಡಿಕ್ ರಾಷ್ಟ್ರಗಳಲ್ಲಿ ಜಾನಪದ ಅಧ್ಯಯನವನ್ನು ಸಂಘಟಿಸಲು ಹುಟ್ಟಿಕೊಂಡ ಸಂಸ್ಥೆಯೇ ನಾರ್ಡಿಕ್ ಇನ್‌ಸ್ಟಿಟ್ಯೂಟ್ ಆಫ್ ಫೋಕ್ ಲೋರ್. (ಇದೇ ಮಾದರಿಯಲ್ಲಿಯೇ ದ್ರಾವಿಡ ಭಾಷೆಗಳ ಜಾನಪದ ಅಧ್ಯಯನದ ಸಂಘಟನೆಗಾಗಿ ಡ್ರವಿಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫೋಕ್ ಲೋರ್ ರೂಪುಗೊಳ್ಳಬೇಕಾದದ್ದು ಅಗತ್ಯ. ಈ ವಿಚಾರದಲ್ಲಿ ಫಿನ್ಲೆಂಡಿನ ವಿದ್ವಾಂಸರಿಂದ ನಾವು ಕಲಿಯ ಬೇಕಾದದ್ದು ಬಹಳ ಇದೆ.) ಕಲೇವಾಲ ಮಹಾಕಾವ್ಯದ 150ನೆಯ ವರ್ಷದ ಜಯಂತಿಯ ಸಂದರ್ಭದಲ್ಲಿ 1985ರ ಅಕ್ಟೋಬರ್‌ನಲ್ಲಿ "The Folk Epics of Tulunad And Finland" ಎಂಬ ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಡೆಸುವುದಾಗಿಯೂ, ಅದಕ್ಕೆ ಪ್ರೊ॥ ಲೋರಿ ಹಾಂಕೋ ಅತಿಥಿಯಾಗಿ ಉಡುಪಿಗೆ ಬರಬೇಕೆಂದೂ ಕು. ಶಿ. ಅವರು ಆಹ್ವಾನಿಸಿದರು; ಫಿನ್ಲೆಂಡಿನಿಂದ ಹಿಂತಿರುಗಿದ ಮೇಲೆ ಇದನ್ನು ಕಾರ್ಯರೂಪಕ್ಕೆ ತಂದರು. ವಿಚಾರ ಸಂಕಿರಣ ಅಕ್ಟೋಬರ್ 12, 1985ರಂದು ನಡೆಯಿತು. ಈ ವಿಚಾರ ಸಂಕಿರಣದಲ್ಲಿ ಡಾ॥ ಜವಾಹರ್‌ಲಾಲ್ ಹಂಡೂ ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ॥ ಲೋರಿ ಹಾಂಕೋ, ಡಾ॥ ಕೆ. ವಿ. ರಮೇಶ್, ಡಾ॥ ಬಿ. ಎ. ವಿವೇಕ ರೈ, ಡಾ॥ ಬಿ. ದಾಮೋದರ ರಾವ್, ಶ್ರೀಮತಿ ಲೀಲಾಭಟ್, ಡಾ॥ ಸುಶೀಲಾ ಉಪಾಧ್ಯಾಯ ಅವರು ಪ್ರಬಂಧಗಳನ್ನು ಮಂಡಿಸಿದರು. ತುಳುನಾಡಿನ ಪಾಡ್ದನಗಳಿಗೆ ಹಾಗೂ ಕಲೇವಾಲ ಮಹಾಕಾವ್ಯ ಇವುಗಳಿಗಿರುವ ಸಾಮ್ಯ ಮತ್ತು ವ್ಯತ್ಯಾಸಗಳ ಚರ್ಚೆ ನಡೆಯಿತು. ಕಲೇವಾಲದ 150ನೆಯ ವಾರ್ಷಿಕ ಜಯಂತಿಯ ನೆನಪಿಗಾಗಿ ಶ್ರೀ. ಅಮೃತ ಸೋಮೇಶ್ವರ ಅವರು ತುಳು ಭಾಷೆಗೆ ಅನುವಾದ ಮಾಡಿದ ಕಲೇವಾಲದ ಲೆಮ್ಮಿನ್ ಕೈನೆನ್ ಅಧ್ಯಾಯವನ್ನು (11ರಿಂದ 15 ಅಧ್ಯಾಯಗಳು) ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು. ಅದನ್ನೇ ನೃತ್ಯನಾಟಕ ರೂಪದಲ್ಲಿ ರಂಗದ ಮೇಲೆ ಅಭಿನಯಿಸಲಾಯಿತು. ಡಾ॥ ಸುಶೀಲಾ ಉಪಾಧ್ಯಾಯ ಅವರು ಇದನ್ನು ನಿರ್ದೇಶಿಸಿದರು. ಈ ಎಲ್ಲ ಪ್ರಯತ್ನಗಳಿಂದಾಗಿ ಕು. ಶಿ. ಅವರು ಲೋರಿ ಹಾಂಕೋ ಅವರು ಕರ್ನಾಟಕ ಫಿನ್ಲೆಂಡ್ ನಡುವೆ ಹೆಚ್ಚಿನ ಸಹಕಾರಕ್ಕೆ ಕಾರಣರಾದರು.

ಈ ವಿಚಾರ ಸಂಕಿರಣದ ನಂತರ The Ritualistic Theatre of Coastal Karnataka ಎಂಬ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಫೆಬ್ರವರಿ 22-26, 1986ರಂದು ನಡೆಯಿತು. ಇದರಲ್ಲಿ ಭಾರತದ ವಿವಿಧ ಭಾಗಗಳ 75 ಜನ, ವಿದೇಶಗಳ 12 ಜನ ಭಾಗವಹಿಸಿದ್ದರು. ಈ ವಿಚಾರ ಸಂಕಿರಣದಲ್ಲಿ 27 ಸಂಪ್ರಬಂಧಗಳನ್ನು ಮಂಡಿಸಲಾಯಿತು. 1983ರಿಂದ 1986ರ ವರೆಗೆ ಮೂರು ವರ್ಷಗಳ ವರೆಗೆ ಫೋರ್ಡ್ ಫೌಂಡೇಶನ್ ನೀಡಿದ್ದ ಧನಸಹಾಯದಲ್ಲಿ ನಡೆದ ಕೊನೆಯ ಕಾರ್ಯಕ್ರಮ ಇದು. ಇದರ ಸಂಪ್ರಬಂಧಗಳನ್ನು RRC ಅಚ್ಚು ಮಾಡಿದರೆ ಸಂಶೋಧಕರಿಗೆ ತುಂಬ ಉಪಯೋಗವಾಗುತ್ತದೆ.

ಪ್ರೊ॥ ಲೋರಿ ಹಾಂಕೋ ಅವರ ಸಹಕಾರದಿಂದ ಪ್ರೊ॥ ಕು.ಶಿ. ಹರಿದಾಸ ಭಟ್ಟರು ನಿರ್ವಹಿಸಿದ ಫಿನ್ನಿಷ್-ಇಂಡಿಯಾ ದಾಖಲಾತಿ ಯೋಜನೆ RRCಯ ಸಾಧನೆ ಎಂದೇ ಹೇಳಬೇಕು. ಪ್ರೊ॥ ಲೋರಿ ಹಾಂಕೋ ಚೈನಾ ಮತ್ತು ಬಾಂಗ್ಲಾ ದೇಶದಲ್ಲಿ ಈ ಬಗೆಯ ದಾಖಲಾತಿ ಯೋಜನೆಗಳನ್ನು ಕಾರ್ಯಗತ ಗೊಳಿಸಿದ್ದರು. ಭಾರತದಲ್ಲಿ ಇಂತಹದೇ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಅವರು ಯೋಚಿಸಿದಾಗ ಅವರಿಗೆ ನೆನಪಾದದ್ದೂ, ಪ್ರೊ॥ ಕು. ಶಿ. ಹರಿದಾಸ ಭಟ್ಟರು ಮತ್ತು ಉಡುಪಿಯ RRC. 1989ರ ಫೆಬ್ರವರಿ 12ರಿಂದ ಮಾರ್ಚ್ 1ರ ವರೆಗೆ 18 ದಿನಗಳ ಕಾಲ ನಡೆದ ಈ ಯೋಜನೆಯಲ್ಲಿ ನಡೆದ ಕೆಲಸ ಅಪಾರ. ಫಿನ್ಲೆಂಡಿನ ಕಡೆಯಿಂದ ಪ್ರೊ॥ ಲೋರಿ ಹಾಂಕೋ ಅವರ ನಾಯಕತ್ವದಲ್ಲಿ ಬರ್ಗೆನ್ ವಿಶ್ವವಿದ್ಯಾನಿಲಯದ ಜಾನಪದ ಪ್ರಾಧ್ಯಾಪಕಿ ಪ್ರೊ॥ ಬೆಂಟೆ ಆಳ್ವೆರ್, ಹೆಲ್ಸಿಂಕಿ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರೂ, ವೇದ ವಿದ್ವಾಂಸರೂ ಆದ ಪ್ರೊ॥ ಆಸ್ಕೋ ಪಾರ್ಪೋಲಾ ಅವರುಗಳೊಡನೆ ಆರಿಲ್ಡ್ ಸ್ಕ್ಯಾಮ್‌ವ್ಯಾಗ್, ಸಕಾರಿ ರಿಮ್ಮಿನೆನ್, ಮರಿಯಾ ರಾಯಮಾಕಿ, ಲಾಸ್ಸಿ ರಾಯಮಾಕಿ, ಲಾರಿ ಹಾರ್ವಿಲಾತ್ತಿ, ಮಾರ್ತಿ ಯುನ್ನನಾಹೊ ಅವರು ಈ ಯೋಜನೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಕಡೆಯಿಂದ ಪ್ರೊ॥ ಕು. ಶಿ. ಹರಿದಾಸ ಭಟ್ಟರ ನೇತೃತ್ವದಲ್ಲಿ ಡಾ॥ ಬಿ. ಎ. ವಿವೇಕ ರೈ, ಅಮೃತ ಸೋಮೇಶ್ವರ, ಡಾ॥ ಯು. ಪಿ. ಉಪಾಧ್ಯಾಯ ಮತ್ತು ಡಾ॥ ಸುಶೀಲಾ ಉಪಾಧ್ಯಾಯ, ಪ್ರೊ॥ ಲೀಲಾ ಭಟ್, ಡಾ॥ ಚಿನ್ನಪ್ಪ ಗೌಡ, ಶ್ರೀ. ಎಸ್. ಎ. ಕೃಷ್ಣಯ್ಯ ಅವರುಗಳು ಭಾಗವಹಿಸಿದ್ದ ಪ್ರಮುಖ ವ್ಯಕ್ತಿಗಳು. ಇವರಲ್ಲದೆ ಈ ಯೋಜನೆಯಲ್ಲಿ ಕ್ಷೇತ್ರ ಕಾರ್ಯದಲ್ಲಿ ತರಬೇತಿ ಪಡೆಯಲು ಕೆಲವರನ್ನು ಆಯ್ಕೆ ಮಾಡಲಾಗಿತ್ತು. ಅವರ ಹೆಸರುಗಳು ಈ ರೀತಿ ಇವೆ: ಶ್ರೀಗಳಾದ ಮಹಲಿಂಗೇಶ್ವರ ಭಟ್, ಯದುಪತಿ, ಅನಂತರಾಮ ಬಂಗಾಡಿ, ಅಶೋಕ ಆಳ್ವ, ತೋನ್ಸೆ ಕೃಷ್ಣ ಭಟ್, ಮಳಲಿ ವಸಂತ ಕುಮಾರ್, ಡಾ॥ ಸೈಯದ್ ಜಮೀರುಲ್ಲಾ ಷರೀಫ್, ಪಲತಾಡಿ ರಾಮಕೃಷ್ಣ ಆಚಾರ್, ಶ್ರೀಕಾಂತ ಸಿದ್ದಾಪುರ, ವಾಸುದೇವ ಭಟ್ಟ ಮತ್ತು ಕುಮಾರಿ ವಾರಿಜ. ಪ್ರೊ॥ ರಾಮದಾಸ್ ಮತ್ತು ಶ್ರೀ. ಕೆ. ಎಸ್. ಹರ್ಷವರ್ಧನ್ ವಿಡಿಯೋ ಚಿತ್ರೀಕರಣ ಮಾಡಿದರು. ಫಿನ್ಲೆಂಡಿನ ತುರ್ಕು, ಹೆಲ್ಸಿಂಕ್ ವಿಶ್ವವಿದ್ಯಾನಿಲಯಗಳು. ನಾರ್ವೆಯ ಬರ್ಗೆನ್ ವಿಶ್ವವಿದ್ಯಾನಿಲಯ, ಮಣಿಪಾಲದ ಅಕೆಡಮಿ, ಉಡುಪಿಯ RRC, ತುಳು ನಿಘಂಟು ಯೋಜನೆ, ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ. ವೀರೇಂದ್ರ ಹೆಗಡೆ ಅವರ ಸಹಕಾರದಿಂದ ಈ ಯೋಜನೆ ಯಶಸ್ವಿಯಾಗಿ ನಡೆಯಲು ಸಾಧ್ಯವಾಯಿತು. ಶ್ರೀ. ಎಸ್. ಎ. ಕೃಷ್ಣಯ್ಯ, ಡಾ॥ ಚಿನ್ನಪ್ಪ ಗೌಡ ಅವರು ವಿಶೇಷ ಶ್ರಮವಹಿಸಿ, ಕ್ಷೇತ್ರಕಾರ್ಯ ಮಾಡಬೇಕಾದ ಪ್ರದೇಶಗಳ ಸ್ಥಿತಿಗತಿಗಳನ್ನು ಅಭ್ಯಾಸ ಮಾಡಿ, ಸೂಕ್ತವಾದ ಪೂರ್ವಭಾವಿ ವ್ಯವಸ್ಥೆಯನ್ನು ಮಾಡಿದ್ದರು. ಈ ಯೋಜನೆಯ ವಿವರಗಳನ್ನು ಶ್ರೀ. ಶರತ್ ಕಲ್ಕೋಡ್ ಅವರು 'ತರಂಗ' ಪತ್ರಿಕೆಯಲ್ಲಿ ಅಚ್ಚುಕಟ್ಟಾಗಿ ವರದಿ ಮಾಡಿದ್ದಾರೆ. ಅದರ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ: "ತುರ್ಕು, ಹೆಲ್ಸಿಂಕಿ, ಬಾರ್ಗೆನ್ ಗ್ರೂಪ್" – ಇವು ಸಂಶೋಧನಾ ತಂಡದ ಮೂರು ವಿಭಾಗಗಳು. ಪ್ರತಿ ತಂಡದಲ್ಲಿಯೂ ಎಂಟು, ಒಂಬತ್ತು ಜನರ ಒಂದೊಂದು ಗುಂಪು. ಹಗಲಿರುಳೆನ್ನು ಲೆಕ್ಕಿಸದೇ ಮೂರೂ ತಂಡಗಳು ಜಾನಪದ ಅನ್ವೇಷಣೆಯ ಕಾರ್ಯದಲ್ಲಿ ಮಗ್ನವಾಗಿದ್ದವು. ಧರ್ಮಸ್ಥಳದ ಗೋಪುರ ಕೋಲದಿಂದ ದಾಖಲಾತಿಯ ಕಾರ್ಯ ಆರಂಭ. ಕೊಡಮಣಿತಾಯ, ಮೈಸಂದಾಯ, ಪಂಜುರ್ಲಿ ಕೋಲ(ಉರುಂಬಿ ತೋಟ), ಕೊಡಮಂತಾಯ(ಬೆಳಾಲು), ಉಳ್ಳಾಲ್ತಿ ಕೋಲ(ಅನಂತಾಡಿ), ಸಿರಿ ಜಾತ್ರೆಯ ವಿವಿಧ ಆಚರಣೆ (ಉರುಂಬಿತೋಟ), ಮಾರಿಗುಡಿಯ ಕಾರ್ಯಕ್ರಮಗಳು(ಉಜಿರೆ) – ಇವುಗಳ ವಿಸ್ತೃತವಾದ ಅಧ್ಯಯನ, ಸಂದರ್ಶನ ಹಾಗೂ ದಾಖಲಾತಿ ನಡೆಯಿತು. ರಾತ್ರಿ ಇಡೀ ನಡೆಯುವ ಗೋಂದೋಲು ಕಾರ್ಯಕ್ರಮ ಸಂಶೋಧಕರ ತಂಡಕ್ಕೆ ದಕ್ಕಿದ್ದು ಬಳ್ಳಮಂಜ ಎಂಬ ಹಳ್ಳಿಯಲ್ಲಿ. ಪುದುವೆಟ್ಟಿನ ಜನಾರ್ದನ ದೇವಸ್ಥಾನ, ಬೆಳಾಲಿನ ಮಹಲಿಂಗೇಶ್ವರ ದೇವಸ್ಥಾನ, ಅಲ್ಲಿ ನಡೆಯುತ್ತಿದ್ದ ಜಾತ್ರೆ ಸಮಯದ ಧಾರ್ಮಿಕ ಆಚರಣೆಗಳು, ನಡ ಗ್ರಾಮದಲ್ಲಿನ ಸೂರ್ಯದಲ್ಲಿನ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಣ್ಣಿನಿಂದ ಮಾಡಿ ಒಪ್ಪಿಸುವ ಹರಕೆಗಳು, ಅಳದಂಗಡಿ, ಪೆರ್ಮಣೆ, ಧರ್ಮಸ್ಥಳಗಳಲ್ಲಿನ ಜೈನ ಬಸದಿ, ಅಲ್ಲಿನ ವಾಸ್ತುಶಿಲ್ಪ ಹಾಗೂ ಆರಾಧನಾ ಕ್ರಮಗಳನ್ನು ಚಿತ್ರೀಕರಿಸಿಕೊಳ್ಳಲಾಯಿತು".

"ಜಾನಪದ ಕುಣಿತಗಳು ಸಂಶೋಧಕರ ಗಮನ ಸೆಳೆಯದೇ ಇರಲಿಲ್ಲ. ಆಟಿಕಳೆಂಜ, ಕರಂಗೋಲು, ದುಡಿ ಕುಣಿತಗಳು ಪೆರ್ಲದಲ್ಲೂ, ಗುಮಟೆ ಕುಣಿತ ಮಾಜಾರು ಮತ್ತು ಬಗ್ಗಮುಂಜದಲ್ಲೂ, ದುಡಿ ಕುಣಿತ, ದಪ್ಪು ಕುಣಿತ ಮತ್ತು ಪುರುಷರ ಕುಣಿತ ಮೀಯಾರಿನಲ್ಲೂ, ಪಿಲಿಪಂಜಿ ಕುಣಿತ ಮಟ್ಪಾರಿನಲ್ಲೂ, ಕೋಲಾಟ ಮತ್ತು ಮರಕಾಲ ಕುಣಿತಗಳ ವೈಭವ ಬಳಂಜದ ಕಾಪ್ಪಾಪು. ಬಾಂಜಾದಲ್ಲೂ ಸಂಶೋಧಕರಿಗೆ ಲಭ್ಯವಾದವು. ತಿಮರೋಡಿ ಉಜಿರೆಯ ಕಂಬಳ, ಕೆಸರುಗದ್ದೆಯ ಓಟ, ಮೀಯಾರಿನ ಕೋಳಿ ಅಂಕ, ಪುದುವೆಟ್ಟಿನ ಜುಮಾದಿ, ಕುಟ್ಟಿದೊಣ್ಣೆ, ಕಲ್ಲಾಟ, ಪೊಕ್ಕು, ಬುಗುರಿ, ಚನ್ನೆಮಣೆ ಮುಂತಾದ ತುಳುನಾಡಿನ ವಿಶಿಷ್ಟ ಆಟಗಳನ್ನು ಸಂಶೋಧಕರು ದಾಖಲಿಸಿಕೊಂಡರು. ನಡಗ್ರಾಮದ ನಡ, ಸೂರ್ಯಗುತ್ತಿನ ಮನೆ, ಅಳದಂಗಡಿಯ ಪ್ರಾಚೀನ ಅರಮನೆ, ಇವುಗಳಲ್ಲಿನ ಕೆತ್ತನೆ ವಿನ್ಯಾಸ, ನಡಾವಳಿಗಳು, ಭೂತಗಳ ಹಳೆಯ ಆಭರಣಗಳು, ತುಳುನಾಡಿನ ಕುಶಲ ಕಲೆಗಳ ಪಳೆಯುಳಿಕೆಗಳನ್ನು ವಿಡಿಯೋದಲ್ಲಿ ಸೆರೆ ಹಿಡಿಯಲಾಯಿತು".

"ನೆಲ್ಲಿಪದವು, ತಿಮರೋಡಿಯ ಕೊರಗರು, ಬಂಜಾರ ಮಲೆಯ ಮಲೆ ಕುಡಿಯರು, ಲ್ಯಾಲಗ್ರಾಮದ ಕುಲಾಲರು, ನೇಕಾರಪೇಟೆಯ ನೇಕಾರರು ಮುಂತಾದವರ ಬದುಕಿನ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲಾಯಿತು. ನಾರಾವಿ ಸಮೀಪದ ಕೊಕ್ರಾಡಿಯಲ್ಲಿ ಜರುಗಿದ ಕೃಷಿಮೇಳದಲ್ಲಿ ಕೊರಂಬು, ಮುಟ್ಟಾಳೆ, ಚಾಪೆ, ಮಂತು, ನೊಗ, ಮಡಲ್, ಅಕ್ಕಿ ಮುಡಿ ಮುಂತಾದವುಗಳ ರಚನಾ ವಿಧಾನಗಳನ್ನು ದಾಖಲಿಸಿಕೊಳ್ಳಲಾಯಿತು. ಅಲ್ಲದೆ ಧರ್ಮಸ್ಥಳದ ಕೆಲವು ಧಾರ್ಮಿಕ ಆಚರಣೆಗಳನ್ನೂ ಸಹ ಅಧ್ಯಯನದ ಸಲುವಾಗಿ ಚಿತ್ರಿಸಿಕೊಳ್ಳಲಾಗಿದೆ. ಕರ್ನಾಟಕದ ಕರಾವಳಿಯ ವಿಶಿಷ್ಟ ಜನಪದ ಕಲೆಯಾದ ಯಕ್ಷಗಾನವನ್ನು ಧರ್ಮಸ್ಥಳದಲ್ಲಿ ಚಿತ್ರೀಕರಿಸಿಕೊಳ್ಳಲಾಯಿತು(ಪ್ರಸಂಗ: ವಿದ್ಯುನ್ಮತಿ ಕಲ್ಯಾಣ). ಧರ್ಮಸ್ಥಳದಲ್ಲಿ ನಡೆದ ಕಮ್ಮಟದ ಬಗ್ಗೆ ಧರ್ಮಾಧಿಕಾರಿ ವೀರೇಂದ್ರ ಹೆಗಡೆಯವರು ವಹಿಸಿದ್ದ ಆಸಕ್ತಿ ಅಪಾರ. ಅಲ್ಲದೆ ಹರ್ಷೇಂದ್ರ ಹೆಗಡೆ, ಎಸ್. ಪ್ರಭಾಕರ್, ಕೃಷ್ಣ ಕೊಥಾಯ, ಡಾ॥ ಕೆ. ಗಂಗಾಧರ ಶೇಖ, ರಾಮಕೃಷ್ಣ ಉಡುಪ, ಶಿಶುಪಾಲ ತೋರಿದ ಆಸಕ್ತಿ ಉಲ್ಲೇಖನೀಯ (ಶರತ್ ಕಲ್ಕೋಡ್, "ಫಿನ್ನಿಷ್-ಇಂಡಿಯನ್ ಭಾರತದ ಜಾನಪದಕ್ಕೊಂದು ಹೊಸ ಆಯಾಮ", 'ತರಂಗ' ವಾರಪತ್ರಿಕೆ, ಮೇ 7, 1989).

ಈ ಯೋಜನೆಯ ಮುಖ್ಯ ಕಾರಣಕರ್ತರಾದ ಪ್ರೊ॥ ಕು. ಶಿ. ಹರಿದಾಸ ಭಟ್ಟರು ಈ ಬಗ್ಗೆ ಹೀಗೆ ಹೇಳಿದ್ದಾರೆ "ಲೋರಿ ಹಾಂಕೋ ದೃಷ್ಟಿಯಲ್ಲಿ ಇದೊಂದು ಮಾದರಿ ಯೋಜನೆ. ಅರ್ಥಾತ್ ಇನ್ನು ಮುಂದೆ ಯುನೆಸ್ಕೋದ ಜಾನಪದ ವಿಭಾಗ ಎಲ್ಲಾದರೂ ಅನ್ವೇಷಣೆ ಮಾಡುವುದಿದ್ದರೆ ಉಡುಪಿ-ಧರ್ಮಸ್ಥಳ ಕಮ್ಮಟದ ರೂಪುರೇಷೆಗಳನ್ನೇ ಅದರಲ್ಲಿ ಅಳವಡಿಸಿಕೊಳ್ಳುತ್ತದೆ. ಎಂತಲೇ ಜಾನಪದ ಜೀವನದ ಅಧ್ಯಯನವೆಂಬ ಸಿಟ್ಟಿನಲ್ಲಿ ಹೋಂಕೋ ಪ್ರಸ್ತುತ ಯೋಜನೆಯನ್ನು ಬಹಳ ಜತನದಿಂದ ರೂಪಿಸಿದ್ದರು. ಸ್ಥಳ ಮತ್ತು ವಸ್ತು ವಿಷಯಗಳ ಆಯ್ಕೆ ನಮ್ಮದು. ಅದರ ಅನ್ವೇಷಣೆಯ ವಿಧಾನ ನಾರ್ಡಿಕ್ ಸಂಸ್ಥೆಗೆ ಸೇರಿತ್ತು. ಕಂಪ್ಯೂಟರ್‌ನಲ್ಲಿ ಮಾಹಿತಿ ಸಿಗಲು ಅನುಕೂಲವಾಗುವಂತಹ ಒಂದು 'ಕೋಲ್ಯಾರ್ಡ್'ನ್ನು(ಸಂಗ್ರಹದ ಸ್ಥೂಲ ಮಾಹಿತಿ ಕೊಡುವ ಪಟ್ಟಿಕೆ) ಹೋಂಕೋ ಹೊಸದಾಗಿ ರಚಿಸಿ ಸಹವಿದ್ವಾಂಸರಿಗೂ ವಿದ್ಯಾರ್ಥಿಗಳಾಗಿ ನಮ್ಮಲ್ಲಿ ಬಂದ 12 ಮಂದಿಗೂ ಕಲಿಸಿಕೊಟ್ಟಿದ್ದರು......... ಇಂತಹ ನಿರಂತರ ದುಡಿಮೆಯ ಫಲ: ವಿಡಿಯೋ ಟೇಪ್ 76 ತಾಸು; ಧ್ವನಿ ಮುದ್ರಣ ಟೇಪ್ 120 ತಾಸು; ಫೋಟೋಗ್ರಾಫ್ ಸಂಖ್ಯೆ 5500; ಭೇಟಿಯ ಟಿಪ್ಪಣಿಗಳ ಸಂಖ್ಯೆ ಏಷ್ಟೋ. ಎಲ್ಲವನ್ನೂ ನಾರ್ಡಿಕ್ ಜಾನಪದ ಸಂಸ್ಥೆಯಲ್ಲಿ ಸುರಕ್ಷಿತವಾಗಿಡಲಾಗುವುದು. ಸಕಾಲದಲ್ಲಿ ಕಂಪ್ಯೂಟರ್‌ನಲ್ಲಿ ಸೇರಿಸಲಾಗುವುದು. ಒಂದು ಪ್ರತಿಯನ್ನು ಉಡುಪಿಯ ಕೇಂದ್ರದಲ್ಲೂ ಇಟ್ಟಿರುತ್ತದೆ. ಬೃಹತ್ ರಾಷ್ಟ್ರ ಅಮೇರಿಕಾದ ಫೋರ್ಡ್ ಪ್ರತಿಷ್ಠಾನದ ನೆರವಿನಿಂದ ನಮ್ಮ ಜಾನಪದ ಕೇಂದ್ರದ ಕೆಲಸ ಕಾರ್ಯಗಳು ಐದು ವರ್ಷಗಳ ಹಿಂದೆ ಆರಂಭಗೊಂಡಿದ್ದು ಇದೀಗ ಜಗತ್ತಿನ ಅತಿ ಪುಟ್ಟ ರಾಷ್ಟ್ರ ಫಿನ್ಲೆಂಡಿನ ಜಾನಪದ ಉದ್ಯಾನದಲ್ಲಿ ಹೂಬಿಟ್ಟು ಸುಗಂಧ ಬೀರುವುದು ಒಂದು ಅರ್ಥಪೂರ್ಣ ಸಿದ್ಧಿಯಂತೆ ಕಾಣುತ್ತದೆ. ಮೌಖಿಕ ಸಂಪ್ರದಾಯದಲ್ಲಿರುವ ತುಳು ಸಂಸ್ಕೃತಿ ಬಾಯ್ದೆರೆ ಸಾಹಿತ್ಯದಲ್ಲಿ ತೃಪ್ತಿಪಟ್ಟು ಸಂಸ್ಕೃತಿಗೆ ಹಾರ್ದಿಕ ಸ್ಪಂದನ ತೋರಿಸಿದ್ದರಿಂದ (ಉದಾ: ಕಲೇವಾಲ ಉತ್ಸವ); ಉತ್ತರ ಧ್ರುವ ಪ್ರದೇಶಗಳ ಸಮೀಪದಲ್ಲಿರುವ ಫಿನ್ಲೆಂಡಿನ ಕಡೆಯಿಂದ ಚುಂಬಕ ಗಾಳಿಯೊಂದು ಲಾರಿ ಹಾಂಕೋ ಅಂತಹ ಘನಪಾರಿಯ ಮೂಲಕ ತುಳುನಾಡಿನ ಮೇಲೆ ಬೀಸಿದ್ದರಿಂದ – ಇಂತಹ ಒಂದು ಮಹತ್ವದ ಜಾನಪದ ಸೇವೆ ಉಡುಪಿಯ ಕೇಂದ್ರದಿಂದ ಸಾಂಗವಾಯಿತೆಂದು ಹೇಳಲು ಅಡ್ಡಿಯಿಲ್ಲ"(ಕು. ಶಿ. ಹರಿದಾಸ ಭಟ್ಟ, 'ತರಂಗ' ವಾರ ಪತ್ರಿಕೆ, ಮೇ 7, 1989). ಈ ಯೋಜನೆಯಿಂದಾಗಿ RRCಗೆ ಅತಿ ಕಡಿಮೆ ಕಾಲಾವಧಿಯಲ್ಲಿ, ಅತಿ ಕಡಮೆ ಖರ್ಚಿನಲ್ಲಿ ವಿಶೇಷವಾದ ಲಾಭವಾಗಿದೆ; ಅಂತಾರಾಷ್ಟ್ರೀಯ ಖ್ಯಾತಿ ಲಭ್ಯವಾಗಿದೆ ಎಂದು ಹೇಳಬಹುದು.

— ೪ —

ಆಗಸ್ಟ್ 83ರಿಂದ ಮೇ 1989ರ ವರೆಗಿನ ಕಾಲಾವಧಿಯಲ್ಲಿ RRCಯ ದಾಖಲಾತಿಯ ವಿವರಗಳು ಈ ರೀತಿ ಇವೆ:

	ಜನಪದ ಪ್ರಕಾರಗಳು/ ರೂಪಗಳು	ಆಡಿಯೋ (ಗಂಟೆಗಳು)	ವಿಡಿಯೋ (ಗಂಟೆಗಳು)	ಕಲರ್ ಸ್ಲೈಡುಗಳು	ಕಪ್ಪು ಬಿಳುಪು ನೆಗೆಟೀವ್‌ಗಳು	ಕಲರ್ ನೆಗೆಟೀವ್‌ಗಳು
1.	ಆರಾಧನಾ ಪ್ರಕಾರಗಳು	168	47	309	549	207
2.	ನಿರೂಪಕರೊಡನೆ ಸಂದರ್ಶನ	26	16	96	155	91
3.	ಕಥನಾತ್ಮಕ ಪ್ರದರ್ಶನ ಕಲೆಗಳು	48	5	36	15	—
4.	ಸಣ್ಣಾಟ	49	18	—	19	—
5.	ಸೂತ್ರದ ಬೊಂಬೆ ಮತ್ತು ತೊಗಲುಬೊಂಬೆಯ ಆಟಗಳು	57	21	92	260	116
6.	ದೊಡ್ಡಾಟ, ಮೂಡಲಪಾಯ ಯಕ್ಷಗಾನ	46	31	73	268	65
7.	ದೈವಾವೇಶ	50	4	97	214	28
8.	ಯಕ್ಷಗಾನ	117	40	91	300	71
9.	ಜನಪದ ಜೀವನ	41	13	41	200	—
10.	ಜನಪದ ನೃತ್ಯ	90	12	50	61	37
11.	ಜನಪದ ಗೀತೆಗಳು	100	—	—	—	—
12.	ಪಾಡ್ದನಗಳು	50	—	—	75	—
13.	ರಾಜ್ಯದ ಹೊರಗೆ ಮಾಡಿದ ದಾಖಲಾತಿ (ಕೇರಳ, ಗೋವಾ, ಮಹಾರಾಷ್ಟ್ರ, ರಾಜಸ್ಥಾನ, ಡೆಲ್ಲಿ)	35	7	100	100	10
14.	ಚರ್ಚೆಗಳು, ಜನಪದ ಭಾಷೆ ಮತ್ತು ರಂಗದ ರೂಪಗಳು	87	23	906	50	20
15.	ಇಂಡೋ-ಫಿನ್ನಿಷ್ ಪ್ರಾಜೆಕ್ಟ್ ನಲ್ಲಿ ಮಾಡಿದ ದಾಖಲಾತಿ	120	200	2000	2000	1000
16.	ಅಂತಾರಾಷ್ಟ್ರೀಯ ಜಾನಪದ ವಿಜ್ಞಾನ ಕಮ್ಮಟಗಳು ಮತ್ತು ಪೀಟರ್‌ಕ್ಲಾಸ್ ಅವರ ಸಂಗ್ರಹ	150	—	—	—	—
	ಒಟ್ಟು ದಾಖಲಾತಿ ಸಂಗ್ರಹ—	1234	437	3891	2266	1645

ಕರ್ನಾಟಕದಲ್ಲಿ ವೈವಿಧ್ಯಮಯವಾದ ಜನಪದ ಪ್ರದರ್ಶನಾತ್ಮಕ ಕಲೆಗಳಿವೆ. ಆದರೆ ಇವುಗಳಿಗೆ ಕರ್ನಾಟಕದ ಹೊರಗೆ ಪ್ರಚಾರ ಕಡಿಮೆ. ದೆಹಲಿಯಲ್ಲಿ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮುಂತಾದ ಕಾರ್ಯಕ್ರಮಗಳಲ್ಲಿ ಅಲ್ಲೊಂದು ಇಲ್ಲೊಂದು ಅವಕಾಶ ದೊರೆಯುತ್ತಿತ್ತು. ಆದರೆ ಭಾರತದಿಂದ ಹೊರಗೆ ಈ ಕಲಾ ತಂಡಗಳು ಹೋದದ್ದೇ ಇಲ್ಲ. ಯಕ್ಷಗಾನ ಮಾತ್ರವೇ ಹೊರದೇಶಗಳಿಗೆ ಹೋಗಿ, ಅಲ್ಲಿನ ಜನರ ಮೆಚ್ಚುಗೆ ಗಳಿಸಿತ್ತು. 1984-85ರ ಕಾಲಾವಧಿಯಲ್ಲಿ ಅಮೆರಿಕಾ ಮತ್ತು ಫ್ರಾನ್ಸ್‌ನಲ್ಲಿ ನಡೆದ ಭಾರತ ಉತ್ಸವಗಳಲ್ಲಿ

ಭಾರತದ ಜನಪದ ಕಲೆಗಳಿಗೆ ಮಹತ್ವ ದೊರೆಯಿತು. ಆದರೆ ಕರ್ನಾಟಕದ ಜನಪದ ಕಲಾತಂಡಗಳಿಗೆ ಈ ಉತ್ಸವಗಳಲ್ಲಿ ಅವಕಾಶ ದೊರಕಲಿಲ್ಲ. RRCಯ ಕಾರ್ಯ ಚಟುವಟಿಕೆಗಳನ್ನು ಗಮನಿಸಿದ ದೆಹಲಿಯ Indian Council for Cultural Relations (ICCR) ಸಂಸ್ಥೆ ವಿದೇಶಗಳಲ್ಲಿ ಭಾರತ ಸರಕಾರ ನಡೆಸುವ ಉತ್ಸವಗಳಲ್ಲಿ ಭಾಗವಹಿಸಲು ಬೇಕಾಗುವ ಕಲಾವಿದರನ್ನು, ಕಲಾ ತಂಡಗಳನ್ನು ಆಯ್ಕೆ ಮಾಡುವ ಸಮಿತಿಯ ಸದಸ್ಯರನ್ನಾಗಿ ಕು. ಶಿ. ಅವರನ್ನು ನೇಮಿಸಿತು. ಇದಲ್ಲದೆ ದೆಹಲಿಯ Republic Day Folk Festival Committeeಯ ಸದಸ್ಯರನ್ನಾಗಿ ಕು. ಶಿ. ಅವರನ್ನು ನೇಮಕಮಾಡಲಾಯಿತು. ಇದರಿಂದ ಕರ್ನಾಟಕದ ಕೆಲವರಾದರೂ ಕಲಾವಿದರು, ಕಲಾತಂಡಗಳು ದೆಹಲಿಗೆ ವಿದೇಶಗಳಿಗೆ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸಲು ಅನುಕೂಲವಾಯಿತು. ಇದು ಕರ್ನಾಟಕದ ಜನಪದ ಕಲೆಗಳಿಗೆ ದೊರೆತ ಗೌರವವಾಗಿದೆ. RRC ವಿಡಿಯೋದಲ್ಲಿ ದಾಖಲು ಮಾಡಿದ್ದ ಕರ್ನಾಟಕದ ಜನಪದ ಕಲೆಗಳನ್ನು ಅಭ್ಯಾಸ ಮಾಡಿದ ICCR ಸಮಿತಿ ಅವುಗಳಲ್ಲಿ ಎರಡು ತಂಡಗಳನ್ನು ವಿದೇಶಗಳಿಗೆ ಕಳಿಸಲು ನಿರ್ಧಾರ ಮಾಡಿತು. ಇವುಗಳಲ್ಲಿ ಮೊದಲನೆಯದು ಪ್ರೊ॥ ಕು. ಶಿ. ಹರಿದಾಸ ಭಟ್ಟರ ನೇತೃತ್ವದಲ್ಲಿ ರಷ್ಯಾದಲ್ಲಿ ಎರಡುವರೆ ತಿಂಗಳ ಕಾಲ ಪ್ರವಾಸ ಮಾಡಿ. ರಷ್ಯಾದ ಎಂಟು ಪ್ರಮುಖ ನಗರಗಳಲ್ಲಿ (ಮಾಸ್ಕೋ, ಲೆನಿನ್‌ಗ್ರಾಡ್, ವಿಬೋರ್ಗ್, ಆರ್ಕೇಂಜಲ್, ಮರ್ಮಾನ್ಸ್ಕ್, ಸೋಕೋವ್, ನೊವ್ರೋಗ್ರಾಡ್, ಮತ್ತು ತಾಷ್ಕೆಂಟ್) ಅನೇಕ ಪ್ರದರ್ಶನಗಳನ್ನು ನೀಡಿದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಣ್ಣೂರಿನ ಡೊಳ್ಳು ಮೇಳದ ತಂಡ ರಷ್ಯನ್ನರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀ. ಬಸವರಾಜ ನೆಲ್ಲೀಸರ ಅವರು ಈ ತಂಡದ ಪ್ರಮುಖ ಕಲಾವಿದರಾಗಿದ್ದರು: ಶ್ರೀಗಳಾದ ಭರಮಪ್ಪ, ತಾಕಪ್ಪ, ನಾಗಪ್ಪ, ಗಣಪತಿ ಗಾಮಪ್ಪ, ತೋಕಪ್ಪ, ಲಕ್ಷ್ಮಪ್ಪ, ಚೌಡಪ್ಪ, ಈರಪ್ಪ, ಘಟ್ಟದ ಚನ್ನಪ್ಪ, ಮಂಜಪ್ಪ, ಬಸಪ್ಪ, ಹಾಲಪ್ಪ, ಪುಟ್ಟಪ್ಪ, ಹುಚ್ಚಪ್ಪ, ಶೇಷಗಿರಿ, ಹುಚರಾಯಪ್ಪ, ಹುಚ್ಚಪ್ಪ, ದೇವರಾಜ್, ನಿಂಗಪ್ಪ, ಟೀಕಪ್ಪ. ಇದೇ ಕಾಲಾವಧಿಯಲ್ಲಿ ಶ್ರೀ. ಎಸ್. ಎ. ಕೃಷ್ಣಯ್ಯ ಅವರ ನಾಯಕತ್ವದಲ್ಲಿ ಬೆಂಗಳೂರಿನ ಕಂಸಾಳೆ ಮಾದಪ್ಪನವರ ತಂಡ 1987ರ ಆಗಸ್ಟ್ 21, 22, 23ರಂದು ಸ್ಟಾಕ್‌ಹೋಮ್‌ನಲ್ಲಿ ನಡೆದ ಸ್ವೀಡನ್ನಿನ ಉತ್ಸವದಲ್ಲಿ ಭಾಗವಹಿಸಿ, ಉತ್ತಮ ಪ್ರದರ್ಶನ ನೀಡಿದರು. ಶ್ರೀ. ಎಸ್.ಎ. ಕೃಷ್ಣಯ್ಯ, ಕಂಸಾಳೆ ಮರಿಸಿದ್ದಯ್ಯ, ಎಂ. ಮಹದೇವ, ಎಸ್. ಮಹದೇವ, ಉದಯ ಕುಮಾರ್ ಈ ತಂಡದಲ್ಲಿದ್ದ ಆರು ಮಂದಿ ಕಲಾವಿದರು. ಬಳ್ಳಾರಿ ಜಿಲ್ಲೆಯ ಎಡ್ರಾಮನ ಹಳ್ಳಿಯ ದೊಡ್ಡಭರಮಪ್ಪನವರ ತೊಗಲು ಗೊಂಬೆಯಾಟದ ಮಹತ್ವವನ್ನು 1983ರಲ್ಲಿ RRC ಹಗರಿಬೊಮ್ಮನ ಹಳ್ಳಿಯಲ್ಲಿ ನಡೆಸಿದ ಕಮ್ಮಟದಲ್ಲಿ ಗುರುತಿಸಿತ್ತು; 1984-85ರ ಕಾಲಾವಧಿಯಲ್ಲಿ RRC ಇವರ ಪ್ರದರ್ಶನಗಳ ವಿಡಿಯೋ ಚಿತ್ರೀಕರಣ ಮಾಡಿಕೊಂಡಿತು. ಇದರ ಪರಿಣಾಮವಾಗಿ 1986ರಲ್ಲಿ ಪಶ್ಚಿಮ ಜರ್ಮನಿಯಲ್ಲಿ ನಡೆದ International Puppet Festivalನಲ್ಲಿ ಭಾಗವಹಿಸಲು ಈ ತಂಡಕ್ಕೆ ಆಹ್ವಾನ ಕೊಡಲಾಯಿತು. ದೊಡ್ಡ ಭರಮಪ್ಪನವರ ಕುಟುಂಬದ ಕಲಾತಂಡದೊಡನೆ ಶ್ರೀ. ಕೆ. ವಿರೂಪಾಕ್ಷ ಗೌಡ ಮತ್ತು ಶ್ರೀ. ಜಿ. ವಿ. ಪೆಂಡಕೂರ್ ಅವರು ಭಾಗವಹಿಸಿದ್ದರು. ಭಾರತದಿಂದ ಕರ್ನಾಟಕದ ಈ ತಂಡ ಮತ್ತು ತಮಿಳುನಾಡಿನ ತಂಡ ಭಾಗವಹಿಸಿದ್ದವು. ರಾಣೆಬೆನ್ನೂರು ತಾಲ್ಲೂಕಿನ ಅಂತರವಳ್ಳಿಯ ಹನುಮನಗೌಡ ಜೀವನಗೌಡ ಇವರ ಸೂತ್ರದ ಬೊಂಬೆಯಾಟದ ತಂಡ ಜೆಕೋಸ್ಲೋವಾಕಿಯಾ ದೇಶಕ್ಕೆ ಭೇಟಿ ನೀಡಿ 24.4.89ರಿಂದ ಒಂದು ವಾರ ಕಾಲ ಪ್ರದರ್ಶನಗಳನ್ನು ನೀಡಿತು. ಈ ತಂಡದ ನಾಯಕರಾದ ಶ್ರೀ. ಮುದೇನೂರು ಸಂಗಣ್ಣನವರು ತಂಡದೊಡನೆ ಹೋಗಲು ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಈ ತಂಡದಲ್ಲಿ ವಿ.ಹೆಚ್. ಜೀವನ ಗೌಡರ್, ಆರ್. ಎಚ್. ಜೀವನ ಗೌಡರ್ ರಾಮನಗೌಡ, ಕೃಷ್ಣೇಗೌಡ, ದೇಶಿ ಪಿ.ಎ. ಜಮಾಲ್ ಸಾಬ್ ಪಿಂಜರ, ಜಾವೇದ್ ಮಲ್ಲಿಕಾರ್ಜುನ್, ಗಿರಿಗೌಡರ್, ಗುಡ್ಡಪ್ಪ, ಶ್ರೀಮತಿಯರಾದ ನಾಗರತ್ನಮ್ಮ, ಭಾಗ್ಯಮ್ಮ, ಗಂಗೂಬಾಯಿ, ಮುಖಾಬಾಯಿ ಅವರುಗಳು ಭಾಗವಹಿಸಿದ ಕಲಾವಿದರು. ಡಾ॥ ಜೀ. ಶಂ. ಪರಮಶಿವಯ್ಯನವರ ನೇತೃತ್ವದಲ್ಲಿ ಮೈಸೂರಿನ ಕಂಸಾಳೆ ಮಹಾದೇವಯ್ಯನವರ ತಂಡ ಟ್ಯುನಿಸ್, ಸೈಪ್ರಸ್, ಮಾಲ್ಟಾ ಮತ್ತು ಟರ್ಕಿ ದೇಶಗಳಲ್ಲಿ ಇಪ್ಪತ್ತೊಂದು ಪ್ರದರ್ಶನಗಳನ್ನು ನೀಡಿದರು. ಶ್ರೀ ಎಸ್. ಎ. ಕೃಷ್ಣಯ್ಯ ಈ ತಂಡದ ಕೋರಿಯೋಗ್ರಾಫರ್ ಮತ್ತು ಕಲಾವಿದರಾಗಿದ್ದರು.

ಈ ಐದು ಕಲಾತಂಡಗಳು ತಾವು ಪ್ರದರ್ಶನ ನೀಡಿದ ದೇಶಗಳಲ್ಲೆಲ್ಲಾ ಸೊಗಸಾದ ಪ್ರದರ್ಶನಗಳನ್ನು ನೀಡಿ, ಆ ದೇಶದ ಜನಸಾಮಾನ್ಯರ, ವಿದ್ವಾಂಸರ ಮೆಚ್ಚುಗೆ ಪಡೆದಿವೆ. ಕರ್ನಾಟಕದ ಪ್ರದರ್ಶನಾತ್ಮಕ ಜನಪದ ಕಲೆಗಳಿಗೆ ಮತ್ತು ಕಲಾವಿದರಿಗೆ ವಿದೇಶಗಳಿಗೆ ಹೋಗಿ ಪ್ರದರ್ಶನ ನೀಡುವ, ಆ ಮೂಲಕ ಕರ್ನಾಟಕದ ಜನಪದ ಕಲಾ ಸಂಪತ್ತನ್ನು ಪರಿಚಯಿಸುವ ಅವಕಾಶ ಮೊದಲು ದೊರೆತಿರಲಿಲ್ಲ. ಎಷ್ಟೋ ಜನ ಕಲಾವಿದರು ತಮ್ಮ ತಾಲ್ಲೂಕು, ಜಿಲ್ಲೆಗಳನ್ನೂ, ರಾಜ್ಯವನ್ನೂ ಬಿಟ್ಟು ಹೊರಗೆ ಹೋಗಿರಲಿಲ್ಲ. RRCಯ ಪ್ರಯತ್ನಗಳಿಂದಾಗಿ ಇದು ಸಾಧ್ಯವಾಯಿತು. ಈ ದೃಷ್ಟಿಯಿಂದ ಕೂಡ RRCಯ ಸಾಧನೆ ಗಮನಾರ್ಹವಾದುದು.

— ೫ —

1988-89ರ ಕಾಲಾವಧಿಯಲ್ಲಿ ಫೋರ್ಡ್ ಫೌಂಡೇಶನ್ ಹೈದರಾಬಾದ್‌ನ ತೆಲುಗು ವಿಶ್ವವಿದ್ಯಾನಿಲಯದ ಮೂಲಕ ನೆರವಿನಿಂದ ನಡೆಸಿದ ನಾಲ್ಕು ಅಂತಾರಾಷ್ಟ್ರೀಯ ಜಾನಪದ ವಿಜ್ಞಾನ ಕಮ್ಮಟಗಳು RRCಯ ಮಹತ್ವಾಕಾಂಕ್ಷೆಯ ಪ್ರಯತ್ನ. ಇದು ಸಾಧ್ಯವಾದದ್ದು ಪ್ರೊ॥ ಪೀಟರ್ ಕ್ಲಾಸ್ ಮತ್ತು ಪ್ರೊ॥ ಕು. ಶಿ. ಹರಿದಾಸ ಭಟ್ಟರ ಸತತವಾದ ಪ್ರಯತ್ನದಿಂದ. ಇದರ ಹಿನ್ನೆಲೆ ಈ ರೀತಿ ಇದೆ: ಪ್ರೊ॥ ಪೀಟರ್‌ಕ್ಲಾಸ್ ಅವರು ಕರ್ನಾಟಕ ದೊಡನೆ(ಅದರಲ್ಲಿಯೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆ) ಕಳೆದ ಎರಡು ದಶಕಗಳಿಂದಲೂ ಸಂಪರ್ಕ ಇಟ್ಟು ಕೊಂಡಿದ್ದಾರೆ. ಅವರು ಅಮೆರಿಕನ್ ಪ್ರಜೆಯಾಗಿದ್ದು, ವಿದ್ಯಾಭ್ಯಾಸ ಮಾಡಿದ್ದು, ಈಗ ಪ್ರಾಧ್ಯಾಪಕರಾಗಿರುವುದು ಅಮೆರಿಕದಲ್ಲಿಯಾದರೂ ಅವರ ಸಂಶೋಧನಾ ಕ್ಷೇತ್ರ ಒಟ್ಟಾರೆ ಭಾರತ, ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕ. ಅವರು ಕನ್ನಡ ಮತ್ತು ತೆಲುಗನ್ನು ಅಭ್ಯಾಸ ಮಾಡಿದ್ದಾರೆ. ಇವರಂತೆಯೇ ಡಾ॥ ಸ್ಟುಯರ್ಟ್ ಬ್ಲ್ಯಾಕ್ ಬರ್ನ್, ಪ್ರೊ॥ ಬ್ರೆಂಡಾಬೆಕ್ ಅವರೂ ಕೂಡ ಅಮೆರಿಕಾದ ಶಿಕಾಗೋ ವಿಶ್ವವಿದ್ಯಾನಿಲಯದ ದಕ್ಷಿಣ ಏಷ್ಯಾ ವಿಭಾಗದಲ್ಲಿ ಭಾಷಾ ವಿಜ್ಞಾನ ಪ್ರಾಧ್ಯಾಪಕರಾಗಿರುವ ಪ್ರೊ॥ ಎ. ಕೆ. ರಾಮಾನುಜನ್ ಅವರಿಂದ ಪ್ರೇರಣೆ ಪಡೆದು ತಮಿಳುನಾಡಿನಲ್ಲಿ ಸಂಶೋಧನೆ ಮಾಡುತ್ತಿದ್ದಾರೆ. ಪ್ರೊ॥ ಅಲೆನ್ ಡಂಡೆಸ್ ಮತ್ತು ಪ್ರೊ॥ ಎ. ಕೆ. ರಾಮಾನುಜನ್ ಅವರ ಸಲಹೆಗಳನ್ನು ಪಡೆದು. 1979ರಲ್ಲಿ ಭಾರತದ ಜಾನಪದದ ಬಗ್ಗೆ ಅಮೆರಿಕಾದ ಬರ್ಕ್ಲೆ ವಿಶ್ವವಿದ್ಯಾನಿಲಯದಲ್ಲಿ ವಿಚಾರಗೋಷ್ಠಿಯೊಂದನ್ನು, ಅನಂತರ ಮೈಸೂರಿನಲ್ಲಿ ಕೇಂದ್ರೀಯ ಭಾಷಾ ಸಂಸ್ಥಾನ ದಲ್ಲಿ ಒಂದು ವಿಚಾರಗೋಷ್ಠಿಯನ್ನು ಇವರು ನಡೆಸಿದರು. ಇದರಿಂದಾಗಿ ಡಾ॥ ಬ್ಲ್ಯಾಕ್ ಬರ್ನ್ ಮತ್ತು ಡಾ॥ ಎ. ಕೆ. ರಾಮಾನುಜನ್ ಸಂಪಾದಿಸಿರುವ Another Harmony ಎಂಬ ಗ್ರಂಥವೂ, ಪ್ರೊ॥ ಪೀಟರ್ ಜೆ.ಕ್ಲಾಸ್ ಅವರು ಡಾ॥ ಡಿ. ಪಿ. ಪಟ್ಟ ನಾಯಕ್ ಮತ್ತು ಡಾ॥ ಜವಾಹರ್‌ಲಾಲ್ ಹಂಡೂ ಅವರೊಡನೆ ಸಂಪಾದಿಸಿರುವ Indian Folklore, Vol I ಮತ್ತು Vol II ಎಂಬ ಗ್ರಂಥಗಳೂ ಪ್ರಕಟವಾದುವು. ಈ ಮೂಲಕ ಅಮೇರಿಕನ್ ಮತ್ತು ಭಾರತೀಯ ಜಾನಪದ ವಿದ್ವಾಂಸರು ಪರಸ್ಪರ ಸಹಕಾರದಿಂದ ಸಂಶೋಧನೆಗಳನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುವುದೆಂದು ಭಾವಿಸಿದ್ದರು. ಆದರೆ ಮೈಸೂರಿನಲ್ಲಿ ನಡೆದ ವಿಚಾರ ಸಂಕಿರಣ ಕೇವಲ ಮೂರು ದಿನಗಳ ಕಾಲಾವಧಿಯಾಗಿದ್ದು, ಭಾರತದ ಮತ್ತು ಅಮೆರಿಕಾದ ಜಾನಪದ ವಿದ್ವಾಂಸರ ನಡುವೆ ಹೆಚ್ಚಿನ ಸಹಕಾರ ಸಾಧ್ಯವಾಗಲಿಲ್ಲ. ಸಂಪರ್ಕವೂ ಸಾಧ್ಯವಾಗಲಿಲ್ಲ. 1986ರಲ್ಲಿ ಪ್ರೊ॥ ಪೀಟರ್ ಕ್ಲಾಸ್(ಮಾನವ ವಿಜ್ಞಾನ ಪ್ರಾಧ್ಯಾಪಕರು, ಕ್ಯಾಲಿಫೋರ್ನಿಯಾ ಸ್ಟೇಟ್ ವಿಶ್ವವಿದ್ಯಾನಿಲಯ, ಹೇವರ್ಡ್) ಮತ್ತು ಪ್ರೊ॥ ವಿ. ನಾರಾಯಣ ರಾವ್(ತೆಲುಗು ಪ್ರಾಧ್ಯಾಪಕರು. ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯ. ಅಮೆರಿಕಾ) ಅವರು ಹೈದರಾಬಾದಿನ ತೆಲುಗು ವಿಶ್ವವಿದ್ಯಾನಿಲಯದಲ್ಲಿ ಒಂದು ತಿಂಗಳ ಕಾಲ ದಕ್ಷಿಣ ಭಾರತದ ಯುವ ಜಾನಪದ ವಿದ್ವಾಂಸರಿಗಾಗಿ ಜಾನಪದ ವಿಜ್ಞಾನದ ಕಮ್ಮಟವನ್ನು ನಡೆಸಿದರು. ಕರ್ನಾಟಕದಲ್ಲಿ ಮತ್ತು ಆಂಧ್ರದಲ್ಲಿ ನಾಲ್ಕು ನಾಲ್ಕು ಕಮ್ಮಟಗಳನ್ನು 1989-90ರ ಕಾಲಾವಧಿಯಲ್ಲಿ ನಡೆಸಲು ಇವರಿಬ್ಬರೂ ಫೋರ್ಡ್ ಫೌಂಡೇ ಶನ್ ನೆರವನ್ನು ಪಡೆಯಲು ಉಡುಪಿಯ RRC ಮತ್ತು ಹೈದರಬಾದಿನ ತೆಲುಗು ವಿಶ್ವವಿದ್ಯಾನಿಲಯಗಳಿಗೆ ನೆರವಾದರು. ಫೋರ್ಡ್ ಫೌಂಡೇಶನ್ ನೆರವು ನೀಡಲು ಒಪ್ಪಿಗೆ ನೀಡಿದ್ದರಿಂದ ಈ ಕಮ್ಮಟಗಳು ನಡೆಯಲು ಸಾಧ್ಯವಾಯಿತು. ಈ ಕಮ್ಮಟಗಳಲ್ಲಿ ಭಾಗವಹಿಸಲು ಕರ್ನಾಟಕದಿಂದ ಮತ್ತು ಆಂಧ್ರದಿಂದ ಯುವ ಜಾನಪದ ವಿದ್ವಾಂಸರನ್ನು ಆಯ್ಕೆ ಮಾಡಲಾಯಿತು. ಈ ಕಮ್ಮಟಗಳಲ್ಲಿ ಉಪನ್ಯಾಸಗಳನ್ನು ಮಾಡಲು ಅಮೆರಿಕನ್ ಜಾನಪದ ವಿದ್ವಾಂಸರನ್ನೂ, ಕರ್ನಾಟಕದ ಜಾನಪದ ವಿದ್ವಾಂಸರನ್ನೂ ಆಹ್ವಾನಿಸಲಾಯಿತು. ಈ ಕಮ್ಮಟಗಳ ರೂಪುರೇಷೆಗಳನ್ನು ನಿರ್ಧರಿಸಿದವರು ಪ್ರೊ॥ ಪೀಟರ್ ಕ್ಲಾಸ್ ಮತ್ತು ಪ್ರೊ॥ ವಿ. ನಾರಾಯಣ ರಾವ್. ಅಂತಾ ರಾಷ್ಟ್ರೀಯ ಜಾನಪದ ವಿಜ್ಞಾನ (International Folkloristics) ಕ್ಷೇತ್ರದಲ್ಲಿ ನಡೆದಿರುವ ಕೆಲಸಕಾರ್ಯಗಳನ್ನೂ, ತತ್ವಗಳನ್ನೂ, ವಿಧಾನಗಳನ್ನೂ ಯುವ ಜಾನಪದ ವಿದ್ವಾಂಸರಿಗೆ ತಿಳಿಸುವುದು. ಹಾಗೂ ಆ ಮೂಲಕ ಅವರು ಪ್ರಾದೇಶಿಕ, ರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುವಂತೆಯೇ ಅಂತಾರಾಷ್ಟ್ರೀಯ ಜಾನಪದ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡಲು ಸಿದ್ಧಗೊಳಿಸುವುದು, ಪ್ರೇರಣೆ ಹಾಗೂ ಪ್ರೋತ್ಸಾಹ ನೀಡುವುದು ಈ ಕಮ್ಮಟಗಳ ಉದ್ದೇಶವಾಗಿತ್ತು. ಕರ್ನಾಟಕದಿಂದ ಈ ಜಾನಪದ ವಿದ್ವಾಂಸರನ್ನು ಆಯ್ಕೆ ಮಾಡಲಾಯಿತು: ಶ್ರೀ. ಪಾದೇಕಲ್ಲು ವಿಷ್ಣು ಭಟ್ಟ, ಡಾ॥ ಪಿ. ಶಿ. ರಾಮಚಂದ್ರೇ ಗೌಡ, ಶ್ರೀ. ಜಿ. ವಿ. ದಾಸೇಗೌಡ, ಡಾ॥ ಪಿ. ಕೆ. ಖಂಡೋಬ, ಡಾ॥ ವೀರಣ್ಣ ದಂಡೆ, ಶ್ರೀ. ಕೃಷ್ಣಮೂರ್ತಿ ಹನೂರು. ಡಾ॥ ಕೆ. ಚಿನ್ನಪ್ಪಗೌಡ, ಶ್ರೀ. ಬಿ. ಶಿವರಾಮ ಶೆಟ್ಟಿ, ಡಾ॥ ಪುರುಷೋತ್ತಮ ಬಿಳಿಮಲೆ, ಶ್ರೀ. ಬಸವರಾಜ ನೆಲ್ಲೀಸರ, ಡಾ॥ ತೀ. ನಂ. ಶಂಕರನಾರಾಯಣ. ಶ್ರೀ. ಎ. ವಿ. ನಾವಡ, ಶ್ರೀ. ವಾಮನ ನಂದಾವರ, ಶ್ರೀ. ಟಿ. ಗೋವಿಂದರಾಜು, ಶ್ರೀ. ಅಭಯ ಕುಮಾರ್.

ಶ್ರೀ. ಎಸ್. ಎ. ಕೃಷ್ಣಯ್ಯ, ಡಾ॥ ಕೆ. ಆರ್. ಸಂಧ್ಯಾರೆಡ್ಡಿ, ಡಾ॥ ಮಂದಾಕಿನಿ ಪುರೋಹಿತ್, ಶ್ರೀಮತಿ. ಎ. ಸಿ. ಲಲಿತ, ಶ್ರೀ. ವೆಂಕಟೇಶ ಜೋಯಿಸ್, ಶ್ರೀ. ಸಿ. ಬಿ. ಪಟ್ಟನಾಯಕ್.

ಮೊದಲನೆಯ ಕಮ್ಮಟ 1988ರ ಏಪ್ರಿಲ್ 18ರಿಂದ ಮೇ 13ರ ವರೆಗೆ ಉಡುಪಿಯ RRCಯಲ್ಲಿ ನಡೆಯಿತು. ಪ್ರೊ॥ಪೀಟರ್ ಜೆ.ಕ್ಲಾಸ್ ಮತ್ತು ಡಾ॥ ಫ್ರಾಂಕ್ ಕೊರೋಮ್(ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯ) ಅವರು ಅಂತಾರಾಷ್ಟ್ರೀಯ ಜಾನಪದ ವಿಜ್ಞಾನದ ಮೂಲತತ್ವಗಳನ್ನೂ, ಸಿದ್ಧಾಂತಗಳನ್ನೂ, ವಿಧಾನಗಳನ್ನೂ ಭಾರತೀಯ ಜಾನಪದದ ಸೂಕ್ತವಾದ ಉದಾಹರಣೆಗಳೊಡನೆ ವಿವರಿಸಿದರು. ವಿಕಾಸವಾದ(Evolutionism), ಐತಿಹಾಸಿಕ-ಭೌಗೋಳಿಕ ಕ್ರಮ(Historic-Geographic Method),ಮನೋವಿಶ್ಲೇಷಣಾತ್ಮಕ ಸಿದ್ಧಾಂತ, (Psycho - Analytical Theory), ಸಂರಚನಾ ವಿಧಾನ (Structuralism) ಹಾಗೂ ಪ್ರದರ್ಶನ ಸಿದ್ಧಾಂತ(Perfomance Theory) – ಇವುಗಳ ಬಗ್ಗೆ ವಿವರಗಳನ್ನು ನೀಡಿದರು. ಡಾ॥ ಬಿ. ಎ. ವಿವೇಕ ರೈ ಅವರು ಈ ಉಪನ್ಯಾಸಗಳನ್ನು ಕನ್ನಡದಲ್ಲಿ. ಕರ್ನಾಟಕ ಜಾನಪದದ ಹಿನ್ನೆಲೆಯಲ್ಲಿ ವಿವರಿಸಿದರು. ಕನ್ನಡ ಜಾನಪದ ಅಧ್ಯಯನ ಈ ಎಲ್ಲಾ ತತ್ವಗಳನ್ನೂ, ಸಿದ್ಧಾಂತಗಳನ್ನೂ ವಿಧಾನಗಳನ್ನೂ, ಅಳವಡಿಸಿಕೊಂಡು ಅಧ್ಯಯನ ಮಾಡು ವಂತೆ ಪ್ರೇರೇಪಿಸುವುದು ಈ ಕಮ್ಮಟದ ಉದ್ದೇಶವಾಗಿತ್ತು. ಕ್ಷೇತ್ರಕಾರ್ಯ ಮಾಡಲು ಅಗತ್ಯವಾದ ಧನಸಹಾಯ ನೀಡುವ ಸಂಸ್ಥೆಗಳಿಗೆ Grant Proposal ಸಿದ್ಧ ಪಡಿಸುವ ರೀತಿ ನೀತಿಗಳನ್ನು ಈ ಕಮ್ಮಟದಲ್ಲಿ ತಿಳಿಸಿಕೊಡ ಲಾಯಿತು. ಅಂತಾರಾಷ್ಟ್ರೀಯ ವಿದ್ವತ್ ಪತ್ರಿಕೆಗಳಲ್ಲಿ ಪ್ರಕಟಿಸಲು ಅರ್ಹವಾಗುವ ಮಟ್ಟದ ಸಂಪ್ರಬಂಧ ಗಳನ್ನು (Research Papers) ಹೇಗೆ ಬರೆಯಬೇಕು ಎಂಬುದನ್ನು ಅದಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸಲಾಯಿತು. ಕಮ್ಮಟದ ಅಭ್ಯರ್ಥಿಗಳು ದ. ಕ. ಜಿಲ್ಲೆಯ 'ಸಿರಿ' ಜಾತ್ರೆಯ ಬಗ್ಗೆ ಕ್ಷೇತ್ರಕಾರ್ಯ ಮಾಡಿ. ತಮ್ಮ ಸಂಪ್ರಬಂಧಗಳನ್ನು ಮಂಡಿಸಿದರು; ಪ್ರೊ॥ ಪೀಟರ್ ಕ್ಲಾಸ್, ಡಾ॥ ಕೊರೋಮ್ ಮತ್ತು ಡಾ॥ ಬಿ. ಎ. ವಿವೇಕ ರೈ ಈ ಬಗ್ಗೆ ಮಾರ್ಗದರ್ಶನ ನೀಡಿದರು. ಈ ಕಮ್ಮಟದಲ್ಲಿ ಕನ್ನಡ ಜಾನಪದ ವಿದ್ವಾಂಸರಿಂದ ಉಪನ್ಯಾಸ ಗಳನ್ನು ಏರ್ಪಡಿಸಲಾಗಿತ್ತು. ಡಾ॥ ವೃಷಭೇಂದ್ರ ಸ್ವಾಮಿ ಅವರು "The Scope of Kannada Folk-lore", ಡಾ॥ ಎಂ. ಚಿದಾನಂದ ಮೂರ್ತಿ ಅವರು "A Study of Total Solar Eclipse", ಡಾ॥ ಜೀ. ಶಂ. ಪರಮಶಿವಯ್ಯನವರು "Forms of Folk Poetry and Narrative", ಮತ್ತು "Karnataka Folktales", ಪ್ರೊ॥ ಅಮೃತ ಸೋಮೇಶ್ವರ ಅವರು "Fieldwork Expe-riences", ಡಾ॥ ಜವಹರ್‌ಲಾಲ್ ಹಂಡೂ ಅವರು "Folkloristic Theories and the problem of the Meaning", "Structuralism and Psychoanalysis in Folk lore" – ಈ ವಿಷಯಗಳ ಬಗ್ಗೆ ಉಪನ್ಯಾಸ ಮಾಡಿದರು. ಈ ಉಪನ್ಯಾಸಗಳು ಮತ್ತು ಈ ಸಂಬಂಧ ವಾದ ಚರ್ಚೆಗಳು ಉಪಯುಕ್ತವಾಗಿದ್ದವು. ಅಮೆರಿಕಾದ ವಿದ್ವಾಂಸರ ಮತ್ತು ಕರ್ನಾಟಕದ ವಿದ್ವಾಂಸರ ಉಪ ನ್ಯಾಸಗಳು ಪರಸ್ಪರ ಪೂರಕವಾಗಿದ್ದವು. ಅಂತಾರಾಷ್ಟ್ರೀಯ ಜಾನಪದ ವಿಜ್ಞಾನದ ಅಧ್ಯಯನದ ಮಹತ್ವ ವನ್ನು ಮನದಟ್ಟು ಮಾಡಿಕೊಡಲಾಯಿತು.

ಎರಡನೆಯ ಕಮ್ಮಟ ಮೈಸೂರಿನಲ್ಲಿ 1988ರ ಜುಲೈ 18ರಿಂದ ಆಗಸ್ಟ್ 6ರವರೆಗೆ ನಡೆಯಿತು. ಮೊದಲ ಕಮ್ಮಟದಲ್ಲಿ ಜಾನಪದ ವಿಜ್ಞಾನದ ಸ್ಥೂಲವಾದ ಪರಿಚಯ ಮಾಡಲಾಗಿತ್ತು. ಈ ಕಮ್ಮಟದಲ್ಲಿ ಜನಪದ ಕಥೆ ಮತ್ತು ಗಾದೆಗಳ ಬಗ್ಗೆ ವಿವರವಾದ, ಆಳವಾದ, ವಿಸ್ತಾರವಾದ ಅಧ್ಯಯನವನ್ನು ಮಾಡಲಾಯಿತು. ಮೊದಲನೆಯ ಕಮ್ಮಟದಲ್ಲಿ ಪ್ರತಿಪಾದಿಸಿದ್ದ ತತ್ವಗಳನ್ನೂ ವಿಧಾನಗಳನ್ನೂ ಈ ಕಮ್ಮಟದಲ್ಲಿ ವಿಶ್ಲೇಷಣೆಗಾಗಿ ಬಳಸಿಕೊಳ್ಳಲಾಯಿತು. ಪ್ರೊ॥ ಆಲನ್ ಡಂಡೆಸ್ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಜಾನಪದ ವಿಜ್ಞಾನದ ಪ್ರಾಧ್ಯಾಪಕರಾಗಿದ್ದಾರೆ. ಆಧುನಿಕ ಜಾನಪದದ (Modern Folklore) ಕಲ್ಪನೆಯನ್ನು ಮೊದಲಬಾರಿಗೆ ಕೊಟ್ಟವರು ಇವರು. ಜನಪದ(Folk) ಎಂದರೆ ಗ್ರಾಮೀಣ ಜನ ಮಾತ್ರವಲ್ಲ. ಆದಿವಾಸಿಗಳು, ನಗರವಾಸಿಗಳು ಇವರೆಲ್ಲರೂ ಜನಪದರೇ. ಭಾಷೆ, ಜನಾಂಗ, ಜಾತಿ, ಬುಡಕಟ್ಟು, ವಯಸ್ಸು, ವೃತ್ತಿ ಇವುಗಳಲ್ಲಿ ಯಾವುದಾದರೂ ಒಂದು ಅಂಶ ಸಮಾನವಾಗಿರುವ ಗುಂಪು ಜನಪದವಾಗುತ್ತದೆ. ಇವರು ಏನೆಲ್ಲಾ ಸೃಷ್ಟಿ ಸುತ್ತಾರೋ ಅದೆಲ್ಲಾ ಜಾನಪದ (Folklore) ಆಗುತ್ತದೆ. ಜಾನಪದ ಯಾವುದೋ ಕಾಲದಲ್ಲಿ ಸೃಷ್ಟಿಯಾಗಿ, ಈಗ ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತದೆ ಎಂಬುದಕ್ಕಿಂತ, ಪುನಃ ಸೃಷ್ಟಿಯಾಗುತ್ತಿದೆ, ಇದು ನಿರಂತರವಾಗಿ ಮುಂದುವರಿಯುತ್ತಿದೆ ಎಂದು ಡಂಡೆಸ್ ಪ್ರತಿಪಾದಿಸಿದ್ದು ಬಹಳ ಮುಖ್ಯವಾದ ವಿಷಯ. ಅಮೆರಿಕನ್ ಆಧುನಿಕ ಜಾನಪದದ ಸೂಕ್ತವಾದ ಉದಾಹರಣೆಗಳೊಡನೆ ಅವರು ಈ ವಿಚಾರಗಳನ್ನು ಮನ ದಟ್ಟು ಮಾಡಿಕೊಟ್ಟರು. ಕಮ್ಮಟದಲ್ಲಿ ಭಾಗವಹಿಸಿದ್ದ ನಾವೆಲ್ಲರೂ ಅವರ ಬರವಣಿಗೆಗಳನ್ನು ಓದಿದ್ದೆವು. ಆದರೆ ಅವರ ಉಪನ್ಯಾಸಗಳನ್ನು ಕೇಳುವ, ಅವರೊಡನೆ ಚರ್ಚೆ ಮಾಡುವ ಅವಕಾಶ ದೊರೆತಿರಲಿಲ್ಲ. ಇಪ್ಪತ್ತು

ದಿನಗಳ ಕಾಲ ಡಂಡೆಸ್ ಅವರು ಮಾಡಿದ ಉಪನ್ಯಾಸಗಳಿಂದ ನಾವು Modern Folklore Psychoanalytical Theory, ಜನಪದ ಕಥೆ ಮತ್ತು ಗಾದೆಗಳ ಬಗೆ ಅನೇಕ ಉಪಯುಕ್ತವಾದ ವಿಷಯಗಳನ್ನು ತಿಳಿಯಲು ಸಾಧ್ಯವಾಯಿತು. ಡಂಡೆಸ್ ತುಂಬ ಉತ್ಸಾಹಿ ಪ್ರಾಧ್ಯಾಪಕರು. ಉತ್ತಮ ವಾಗ್ಮಿ, ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಬಲ್ಲ ಮಾರ್ಗದರ್ಶಕರು. ಡಾ॥ ಎ. ಕೆ. ರಾಮಾನುಜನ್ ಅವರು ಕನ್ನಡ ಸಾಹಿತಿ ಹಾಗೂ ಭಾಷಾ ವಿಜ್ಞಾನದಲ್ಲಿ ದೊಡ್ಡ ವಿದ್ವಾಂಸರು. ಕಳೆದ ಎರಡು ದಶಕಗಳಿಗೂ ಹೆಚ್ಚಿನ ಕಾಲದಿಂದ ಅವರು ಅಮೆರಿಕಾದ ಶಿಕಾಗೋ ವಿಶ್ವವಿದ್ಯಾನಿಲಯದ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗ (South Asian Studies)ದಲ್ಲಿ ಭಾಷಾ ವಿಜ್ಞಾನದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಕಳೆದ ಕೆಲವಾರು ವರ್ಷಗಳಿಂದ ಅವರು ಭಾರತದ ಜಾನಪದದ ಬಗ್ಗೆ ವಿಶೇಷವಾಗಿ ಅಭ್ಯಾಸ ಮಾಡುತ್ತಿದ್ದಾರೆ. ಜನಪದ ಕಥೆಗಳ ಬಗ್ಗೆ ಅವರು ಮಾಡಿರುವ ಕೆಲಸ ಮೌಲಿಕವಾದುದು. ತರ್ಕಬದ್ಧವಾಗಿ ವಿಚಾರಗಳ ಮಂಡನೆ, ವೈಚಾರಿಕವಾದ ವಿಶ್ಲೇಷಣೆ, ಇವರ ಉಪನ್ಯಾಸಗಳಲ್ಲಿ ಎದ್ದು ಕಾಣುತ್ತಿದ್ದ ಅಂಶಗಳು. ಇವರು ಸಂರಚನಾ ವಿಧಾನ (Structuralism)ದ ಬಗ್ಗೆ ವಿವರವಾಗಿ ಪ್ರತಿಪಾದನೆ ಮಾಡಿದರು. Psychoanalysis ಮತ್ತು Structuralism ಇವೆರಡನ್ನೂ ಸೂಕ್ತವಾಗಿ ಬಳಸಿಕೊಂಡು ಹೇಗೆ ಸಂಶೋಧನೆ ಮಾಡಬಹುದು ಎಂಬುದನ್ನು ಈಡಿಪಸ್ ಕಥೆಯ ಭಾರತೀಯ ಭಿನ್ನರೂಪಗಳನ್ನು ಉದಾಹರಣೆಯಾಗಿಟ್ಟುಕೊಂಡು ವಿಶ್ಲೇಷಿಸಿದರು. ಡಂಡೆಸ್ ಮತ್ತು ರಾಮಾನುಜನ್ ಇಬ್ಬರೂ ಜಾನಪದ ಅಧ್ಯಯನದಲ್ಲಿ ಸಂದರ್ಭ ಸಿದ್ಧಾಂತದ (Contextual Theory) ಮಹತ್ವವನ್ನು ಸ್ಪಷ್ಟಪಡಿಸಿದರು. ಡಾ॥ ಡಂಡೆಸ್ ಅವರು ಉಪನ್ಯಾಸಗಳಲ್ಲಿ ಪ್ರಸ್ತಾಪಿಸಿದ ತತ್ವಗಳನ್ನೂ, ವಿಧಾನಗಳನ್ನೂ, ಕನ್ನಡ ಜಾನಪದಕ್ಕೆ ಅನ್ವಯಿಸಿ ಸಂಶೋಧನೆ ಮಾಡುವ ಬಗೆಯನ್ನೂ, ಅಂತಾರಾಷ್ಟ್ರೀಯ ಜಾನಪದ ವಿಜ್ಞಾನದ ಈ ಕಮ್ಮಟದಲ್ಲಿ ಇಂಗ್ಲಿಷಿನಲ್ಲಿ ವ್ಯವಹರಿಸಬೇಕಾದ ಅಗತ್ಯವನ್ನೂ ಸ್ಪಷ್ಟಪಡಿಸಿದರು. ಅಚ್ಚುಕಟ್ಟಾಗಿ ಕನ್ನಡ ಜಾನಪದದಲ್ಲಿ ಸಂಶೋಧನೆ ನಡೆದು, ಕನ್ನಡ ಜನಪದ ಸಾಹಿತ್ಯದ ಆಶಯ ಸೂಚಿ (Motif Index) ಮತ್ತು ಜನಪದ ಕಥೆಗಳ ವರ್ಗಸೂಚಿ(Type Index) ತಯಾರಾಗಬೇಕಾದ ಅಗತ್ಯವನ್ನು ಸ್ಪಷ್ಟಪಡಿಸಿದರು. ಡಾ॥ ಸ್ಟೂಯರ್ಟ್ ಬ್ಲ್ಯಾಕ್ ಬರ್ನ್ ಪ್ರದರ್ಶನ ಸಿದ್ಧಾಂತದ (Performance Theory) ಮೂಲ ತತ್ವಗಳನ್ನು ಪರಿಚಯ ಮಾಡಿಕೊಟ್ಟರು. ಇವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ. ಪಡೆದು, ಪ್ರೊ॥ ಆಲನ್ ಡಂಡೆಸ್ ಅವರ ಮಾರ್ಗದರ್ಶನದಲ್ಲಿ ಜಾನಪದ ವಿಜ್ಞಾನವನ್ನು ಅಭ್ಯಾಸ ಮಾಡಿರುವ ವಿದ್ವಾಂಸರು. ತಮಿಳುನಾಡಿನ ವಿಲ್ ಪಾಟ್ಟು (ಬಿಲ್ಲಿನ ಹಾಡು) ಸಂಪ್ರದಾಯದ ಬಗ್ಗೆ ಒಳ್ಳೆಯ ಸಂಶೋಧನಾತ್ಮಕ ಗ್ರಂಥವನ್ನು ಪ್ರಕಟಿಸಿದ್ದಾರೆ. ಇವರ ವಿದ್ವತ್ತಿನ ಪೂರ್ಣ ಪರಿಚಯ ನಮಗಾದದ್ದು ಮೂರನೆಯ ಕಮ್ಮಟದಲ್ಲಿ. ಮೈಸೂರಿನ ಕಮ್ಮಟವನ್ನೂ ಪ್ರೊ॥ ದೇ. ಜವರೇಗೌಡರು ಉದ್ಘಾಟಿಸಿದರು. ಕನ್ನಡ ಜಾನಪದ ಅಧ್ಯಯನಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಡುವುದರಲ್ಲಿ ನೇತೃತ್ವ ವಹಿಸಿದ ಇವರು ಕನ್ನಡ ಜಾನಪದದ ಕ್ಷೇತ್ರದಲ್ಲಿ ನಡೆದಿರುವ ಸಂಗ್ರಹ, ಸಂಶೋಧನೆಗಳ ಮಹತ್ವವನ್ನು ತಿಳಿಸಿದರು. ಕನ್ನಡ ಜಾನಪದದ ಅಧ್ಯಯನದಿಂದ ಪಾಶ್ಚಾತ್ಯ ವಿದ್ವಾಂಸರು ಕಲಿಯಬಹುದಾದ ವಿಷಯಗಳ ಕಡೆಗೆ ಗಮನ ಸೆಳೆದರು. ಕನ್ನಡದ ಜಾನಪದ ವಿದ್ವಾಂಸರು ಅಂತಾರಾಷ್ಟ್ರೀಯ ಜಾನಪದ ಅಧ್ಯಯನದಲ್ಲಿ ಮಹತ್ವಪೂರ್ಣವಾದ ಕೆಲಸ ಮಾಡಲೆಂದು ಹಾರೈಸಿದರು. ಪ್ರೊ॥ ಎಂ. ಚಿದಾನಂದ ಮೂರ್ತಿ ಅವರು "Antique Lore", ಪ್ರೊ॥ ವಿ. ನಾರಾಯಣರಾವ್ ಅವರು "Indian Epics", ಡಾ॥ ಜವಾಹರ್‌ಲಾಲ್ ಹಂಡೂ ಅವರು "The concept of Universals in Folkloristics" ಮತ್ತು ಡಾ॥ ಜೀ. ಶಂ. ಪರಮಶಿವಯ್ಯನವರು "Professional Folksongs" ಎಂಬ ವಿಷಯವಾಗಿ ಉಪನ್ಯಾಸಗಳನ್ನು ಮಾಡಿದರು. ಈ ಎಲ್ಲ ಉಪನ್ಯಾಸಗಳಂತೆಯೇ ಈ ಸಂಬಂಧವಾಗಿ ನಡೆದ ಚರ್ಚೆಗಳೂ ತುಂಬ ಉಪಯುಕ್ತವಾಗಿದ್ದವು. ಕಮ್ಮಟದಲ್ಲಿ ಮಾತ್ರವಲ್ಲದೆ CIIL ಮತ್ತು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಮೆರಿಕನ್ ವಿದ್ವಾಂಸರು ಉಪನ್ಯಾಸಗಳನ್ನು ಮಾಡಿದರು. ಪ್ರೊ॥ ಡಂಡೆಸ್ ಅವರು CIILನಲ್ಲಿ "“Semiotics And Folklore" ಮತ್ತು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "Folklore In the Modern" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ಈ ಉಪನ್ಯಾಸಗಳಲ್ಲಿ ಜಾನಪದ ಅಧ್ಯಯನದ ಅಂತರಶಿಸ್ತಿನ ಸ್ವರೂಪ, ಅಂತಾರಾಷ್ಟ್ರೀಯ ಸ್ವರೂಪ, ಆಧುನಿಕ ಜಾನಪದದ ಮಹತ್ವ – ಈ ವಿಷಯಗಳನ್ನು ವಿದ್ವತ್‌ಪೂರ್ಣವಾಗಿಯೂ, ಸ್ವಾರಸ್ಯಕರವಾಗಿಯೂ ವಿವರಿಸಿದರು. ಪ್ರೊ॥ ಎ. ಕೆ. ರಾಮಾನುಜನ್ ಅವರು "“Three Hundred Ramayanas", ಡಾ॥ ಸ್ಟೂಯರ್ಟ್ ಬ್ಲಾಕ್ ಬರ್ನ್ ಅವರು "Performance Studies and oral Epics" ಮತ್ತು ಪ್ರೊ॥ ಪೀಟರ್ ಜೆ ಕ್ಲಾಸ್ ಅವರು "Systematic Reasearch on Tulu Ballads" – ಈ ವಿಷಯಗಳ ಬಗ್ಗೆ ವಿದ್ವತ್‌ಪೂರ್ಣವಾದ ಉಪನ್ಯಾಸಗಳನ್ನು ಮಾಡಿದರು. ಇವುಗಳಿಂದ ಅನೇಕ ವಿಷಯಗಳನ್ನು ಕಲಿಯಲು

ಸಾಧ್ಯವಾಯಿತು. ಈ ಕಮ್ಮಟದಲ್ಲಿಯೂ ಅಭ್ಯರ್ಥಿಗಳು ಸಂಶೋಧನ ಪ್ರಬಂಧಗಳನ್ನು ಬರೆದರು. ಡಾ॥ ಎ.ಕೆ. ರಾಮಾನುಜನ್ ಮತ್ತು ಪ್ರೊ॥ ಪೀಟರ್ ಕ್ಲಾಸ್ ಅವರು ಇವುಗಳಲ್ಲಿ ಸೂಕ್ತ ಸಲಹೆಗಳನ್ನೂ ನೀಡಿದ್ದಾರೆ.

ಮೊದಲನೆಯ ಮತ್ತು ಎರಡನೆಯ ಕಮ್ಮಟಗಳಲ್ಲಿ ಜಾನಪದ ವಿಜ್ಞಾನಕ್ಕೆ ಸಂಬಂಧಿಸಿದ ತಾತ್ವಿಕ ಅಂಶಗಳನ್ನು ಅಭ್ಯಾಸ ಮಾಡಲಾಯಿತು. ಮೂರು ಮತ್ತು ನಾಲ್ಕನೆ ಕಮ್ಮಟಗಳಲ್ಲಿ ಈ ತತ್ವಗಳನ್ನು ಉಪಯೋಗಿಸಿಕೊಂಡು ಕ್ಷೇತ್ರಕಾರ್ಯ(Fieldwork) ಮತ್ತು ದಾಖಲಾತಿಯ(Documentation) ಬಗ್ಗೆ ತರಬೇತಿ ನೀಡಲಾಯಿತು. ಕೊನೆಯ ಕಮ್ಮಟಗಳು practical classes ಎಂದು ಹೇಳಬಹುದು. ಮೊದಲ ಎರಡು ಕಮ್ಮಟಗಳಲ್ಲಿ ಕರ್ನಾಟಕದ ಅಭ್ಯರ್ಥಿಗಳು ಮಾತ್ರ ಭಾಗವಹಿಸಿದ್ದರು. ಮೂರನೆಯ ಕಮ್ಮಟದಲ್ಲಿ ಮತ್ತು ನಾಲ್ಕನೆಯಕಮ್ಮಟಗಳಲ್ಲಿ ಹೊಸಪ್ರಯೋಗ ಮಾಡಲಾಯಿತು. ಹೈದರಾಬಾದಿನ ಮತ್ತು ಕರ್ನಾಟಕದ ಮಹಿಳಾ ಅಭ್ಯರ್ಥಿಗಳು ಡಿಸೆಂಬರ್ 26, 1988ರಿಂದ ಜನವರಿ 13, 1989ರ ವರೆಗೆ ಹೈದರಾಬಾದಿನಲ್ಲಿ ನಡೆದ ಕಮ್ಮಟದಲ್ಲಿ ಭಾಗವಹಿಸಿದ್ದರು. ಮಹಿಳೆಯರು ಮಾತ್ರವೇ ಭಾಗವಹಿಸಿದ್ದ ಈ ಕಮ್ಮಟದಲ್ಲಿ ಹೈದರಾಬಾದ್ ನಗರದ ಮುಸ್ಲಿಂ ಮಹಿಳೆಯರ ಜಾನಪದದ ಬಗ್ಗೆ ಅಭ್ಯಾಸ ಮಾಡಲಾಯಿತು. "Women and Folklore" ಈ ಕಮ್ಮಟದ ಮುಖ್ಯ ವಿಷಯ. ಇದಕ್ಕೆ ಸಂಬಂಧಿಸಿದ ತಾತ್ವಿಕ ವಿಷಯಗಳಲ್ಲಿಯೂ, ಕ್ಷೇತ್ರಕಾರ್ಯದಲ್ಲಿಯೂ ವಿಶೇಷವಾದ ತರಬೇತಿ ನೀಡಲಾಯಿತು. ಮಹಿಳಾ ದೃಷ್ಟಿಕೋನದಿಂದ ಜಾನಪದವನ್ನು ಅಭ್ಯಾಸ ಮಾಡುವ Feminist Method ಮತ್ತು Theory ಬಗ್ಗೆ ವಿವರವಾದ ತಿಳುವಳಿಕೆ ನೀಡಲಾಯಿತು. ಈ ಕಮ್ಮಟದಲ್ಲಿ ಡಾ॥ ಜಾಯ್ಸ್ ಫ್ಲೂಕಿಗರ್(University of Wisconsin, Madison) ಮತ್ತು ಡಾ॥ ಮಾರ್ಗರೆಟ್ ಮಿಲ್ಸ್(University of Pensylvania) ಅವರು ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಈ ಕಮ್ಮಟದಲ್ಲಿ ಕರ್ನಾಟಕದ ಡಾ॥ ಕೆ. ಆರ್. ಸಂಧ್ಯಾರೆಡ್ಡಿ, ಶ್ರೀಮತಿ. ಎ. ಸಿ. ಲಲಿತ, ಡಾ॥ ಮಂದಾಕಿನಿ ಪುರೋಹಿತ್ ಅವರು, ಆಂಧ್ರದ ಕುಮಾರಿ. ಕೀರ್ತನಾ ತಂಗವೇಲು, ಡಾ॥ ಕಾತ್ಯಾಯಿನಿ, ಡಾ॥ ದಾ. ಮಾ. ಪದ್ಮಾವತಿ, ಶ್ರೀಮತಿ. ಡಿ. ಪದ್ಮಾವತಿ, ಶ್ರೀಮತಿ ರೆಡ್ಡಿ ಶ್ಯಾಮಲಾ, ಶ್ರೀಮತಿ ಕೆ.ವಿ. ಎಸ್. ಎಲ್. ನರಸಮಾಂಬ, ಶ್ರೀಮತಿ. ಎ. ಜಯಪ್ರಭಾ ಅವರು ಭಾಗವಹಿಸಿದ್ದರು. ಈ ಕಮ್ಮಟದಲ್ಲಿ ಸಿದ್ಧಪಡಿಸಿದ ಸಂಪ್ರಬಂಧಗಳನ್ನು ಹೈದರಾಬಾದ್ ವಿಶ್ವವಿದ್ಯಾನಿಲಯದ ಮಾನವ ವಿಜ್ಞಾನ ವಿಭಾಗದಲ್ಲಿ ಮಂಡಿಸಲಾಯಿತು. "Modern Folkloristic Theory and Field Methods" ಎಂಬ ವಿಷಯದ ಬಗ್ಗೆ ಅಭ್ಯರ್ಥಿಗಳು ಸಾಮೂಹಿಕವಾಗಿ ವಿಚಾರ ನಡೆಸಿದರು. ಈ ಕಮ್ಮಟದ ಬಗ್ಗೆ ಪೀಟರ್ ಕ್ಲಾಸ್ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: "The workshop was an international "first" in many regards, being the first of its kind to develop field Methodologies for performance studies, in urban settings, amongst minority communities, encouraging women Folklorists in carrying out active Field work projects and focussing on women's Folklore". (RANGASTHALA —4 ಪು. 10)

ಕೆಳಗೆ ಸೂಚಿಸಿರುವ ಆಂಧ್ರದ ಮತ್ತು ಕರ್ನಾಟಕದ ಪುರುಷ ಅಭ್ಯರ್ಥಿಗಳು ಮಾರ್ಚಿ 5ರಿಂದ 21ರ ವರೆಗೆ ಧಾರವಾಡದಲ್ಲಿ ನಡೆದ ಕಮ್ಮಟದಲ್ಲಿ ಭಾಗವಹಿಸಿದ್ದರು: ಕರ್ನಾಟಕದ ಶ್ರೀ. ಎ. ವಿ. ನಾವಡ, ಶ್ರೀ ಎಸ್. ಎ. ಕೃಷ್ಣಯ್ಯ, ಡಾ॥ ಪುರುಷೋತ್ತಮ ಬಿಳಿಮಲೆ, ಡಾ॥ ಚಿನ್ನಪ್ಪ ಗೌಡ, ಶ್ರೀ. ಶಿವರಾಮ ಶೆಟ್ಟಿ. ಶ್ರೀ. ಅಭಯ ಕುಮಾರ್, ಶ್ರೀ. ಟಿ. ಗೋವಿಂದರಾಜು, ಶ್ರೀ. ನೆಲ್ಲೀಸರ ಬಸವರಾಜ್, ಡಾ॥ ತೀ. ನಂ. ಶಂಕರ ನಾರಾಯಣ, ಶ್ರೀ. ವಾಮನ ನಂದಾವರ ಅವರು, ಆಂಧ್ರದ ಡಾ॥ ಬಿ. ಕೃಷ್ಣರೆಡ್ಡಿ, ಡಾ॥ ಸಿ. ಕೃಷ್ಣಾರೆಡ್ಡಿ. ಡಾ॥ ಧಾಮಯ್ಯ, ಶ್ರೀ. ಅತ್ಮೂಕುಂಡಿ ಆನಂದ್, ಡಾ॥ ವೆಂಕಟೇಶ್ವರಲು, ಡಾ॥ ಸಿ. ಅಪ್ಪರಾವ್, ಶ್ರೀ. ಪಿ. ಸುಬ್ಬಾಚಾರಿ. ಶ್ರೀ. ವೈ. ಪಾಂಡುರಂಗ, ಅವರು, ತಮಿಳುನಾಡಿನ ಡಾ॥ ಮುತ್ತು ಕುಮಾರಸ್ವಾಮಿ, ಮಣಿಪುರದ ಶ್ರೀ. ಪ್ರೇಮಚಂದ್ ಮತ್ತು ಕೇರಳದ ಶ್ರೀ. ಎ. ಕೆ. ನಂಬಿಯಾರ್. ಈ ಕಮ್ಮಟದಲ್ಲಿ Performance Theory Fieldwork Methodologyಯ ಬಗ್ಗೆ ವಿವರವಾದ ಅಧ್ಯಯನ ಮಾಡಲಾಯಿತು. ತರಗತಿಗಳಲ್ಲಿ ಉಪನ್ಯಾಸ, ಚರ್ಚೆ, ಪ್ರಬಂಧ ಮಂಡನೆ ನಡೆದವು. ಆದರೆ ಹೆಚ್ಚಿನ ಭಾಗವನ್ನು ಕ್ಷೇತ್ರಕಾರ್ಯ ಮಾಡಲು ಮೀಸಲಾಗಿಡಲಾಗಿತ್ತು. ಅಭ್ಯರ್ಥಿಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಿ ಕೆಳಕಂಡ ವಿಷಯಗಳಲ್ಲಿ ಒಂದೊಂದರ ಬಗ್ಗೆ ಕ್ಷೇತ್ರಕಾರ್ಯ ಮಾಡಲು ನಿಯೋಜಿಸಲಾಯಿತು. ಪ್ರೊ॥ ಪೀಟರ್ ಕ್ಲಾಸ್ ಅವರು ಜೀವನ ಚಕ್ರಕ್ಕೆ ಸಂಬಂಧಿಸಿದ ಆಚರಣೆಗಳನ್ನು (Life cycle ceremonies) ಅಭ್ಯಾಸಮಾಡುವ ತಂಡದ, ಡಾ॥ ಸ್ಟೂಯರ್ಟ್ ಬ್ಲಾಕ್ ಬರ್ನ್ ಅವರು ಸಾರ್ವಜನಿಕ ಪ್ರದರ್ಶನಗಳನ್ನು ((public performances) ಮತ್ತು ಡಾ॥ ಫ್ರಾಂಕ್ ಕೊರೋಮ್ ಅವರು ಮಕ್ಕಳ ಆಟಗಳನ್ನೂ (children's games)

ಅಭ್ಯಾಸ ಮಾಡುವ ತಂಡದ ಮಾರ್ಗದರ್ಶಕರಾಗಿದ್ದರು. ಮಾರ್ಗದರ್ಶಕರೊಡನೆ ಅಭ್ಯರ್ಥಿಗಳು ಉತ್ಸಾಹದಿಂದ ಕ್ಷೇತ್ರಕಾರ್ಯ ಮಾಡಿದರು. ಕ್ಷೇತ್ರಕಾರ್ಯದಲ್ಲಿ ಸಂದರ್ಶನ ಮಾಡುವ ವಿಧಾನ, ಕ್ಷೇತ್ರಕಾರ್ಯ ಟಿಪ್ಪಣಿಗಳು(Fieldnotes) ಮತ್ತು ಕ್ಷೇತ್ರಕಾರ್ಯದ ಅನಿಸಿಕೆಗಳನ್ನು (Field Journals) ಬರೆಯುವ ವಿಧಾನ, ಟೇಪ್‌ರೆಕಾರ್ಡರ್, ಫೋಟೋಗ್ರಾಫಿಕ್ ಕ್ಯಾಮರಾ, ವಿಡಿಯೋ ಕ್ಯಾಮರಾ ಇವುಗಳನ್ನು ಹೇಗೆ ಉಪಯೋಗಿಸಬೇಕು ಎಂಬುದರ ಬಗ್ಗೆ ತಿಳಿಸಲಾಯಿತು. ಕ್ಷೇತ್ರಕಾರ್ಯ ಮಾಡುವವರ ವೈಯಕ್ತಿಕ ರಾಗದ್ವೇಷಗಳು ಹಾಗೂ ದೃಷ್ಟಿಕೋನಗಳು ಕ್ಷೇತ್ರಕಾರ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಮಾರ್ಗದರ್ಶಕರು ವಿವರಿಸಿದರು. ಉಪನ್ಯಾಸಗಳಲ್ಲಿ ಮತ್ತು ಚರ್ಚೆಗಳಲ್ಲಿ (performance theory,) Reflectivity In Ethnography, Ethic in Fieldwork, Writing Styles In ethnographic and Folkloristic articles, ಮತ್ತು Cataloguing collections for Archival preservation and Future research) – ಈ ವಿಷಯಗಳ, ಬಗ್ಗೆ ವಿವರವಾಗಿ ಅಧ್ಯಯನ ಮಾಡಲಾಯಿತು. ಸಹಜ ಸಂದರ್ಭದಲ್ಲಿ (Natural context) ಕ್ಷೇತ್ರಕಾರ್ಯ ಮಾಡಲಾಯಿತು. ಪೂರ್ವಸಿದ್ಧತೆಗಳನ್ನು ಮಾಡದೆಯೇ ನೇರವಾಗಿ ಕ್ಷೇತ್ರಕಾರ್ಯಕ್ಕೆ ಹೋಗಬೇಕಾಗಿತ್ತು. ಹೀಗಾಗಿ ಧಾರವಾಡದಲ್ಲಿ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ಯಾವ ಯಾವ ಹಬ್ಬಗಳು. ಜಾತ್ರೆಗಳು, ರಾಜಕೀಯ ಭಾಷಣಗಳು, ಮದುವೆಗಳು, ಮಕ್ಕಳ ಆಟಗಳು ನಡೆಯುತ್ತವೆ ಎಂಬುದನ್ನು ಹಿಂದಿನ ದಿನ ನಾವೇ ತಿಳಿದುಕೊಂಡು ಬರಬೇಕಾಗಿತ್ತು. ಯಾರ ಗುರುತು ಪರಿಚಯವಿಲ್ಲದಿದ್ದರೂ ನಾವೇ ಜನರನ್ನು ನೇರವಾಗಿ ಭೇಟಿಮಾಡಿ, ಜಾನಪದ ಸಂಗ್ರಹ ಮಾಡಬೇಕಾಗಿತ್ತು. ಇಲ್ಲಿ ನಾವು ಅನುಸರಿಸಿದ ವಿಧಾನ ಧರ್ಮಸ್ಥಳದಲ್ಲಿ ನಡೆದ ಫಿನ್ನಿಷ್-ಇಂಡಿಯಾ ಪ್ರಾಜೆಕ್ಟಿಗಿಂತ ಭಿನ್ನವಾಗಿತ್ತು. ಈ ಕಮ್ಮಟದಲ್ಲಿ ಭಾಗವಹಿಸಿದ ನಾವು ಈ ಮೊದಲು ಕ್ಷೇತ್ರಕಾರ್ಯ ಮಾಡಿದ್ದೆವು. ಆದರೆ ಇಲ್ಲಿ ನಾವು ಮಾಡಿದ ಕ್ಷೇತ್ರಕಾರ್ಯ ನಾನು ಹಿಂದೆ ಮಾಡುತ್ತಿದ್ದ ಕ್ಷೇತ್ರಕಾರ್ಯಕ್ಕಿಂತ ಭಿನ್ನವಾಗಿತ್ತು. ಇಲ್ಲಿ ನಾವು performance theory ಯ ಹಿನ್ನಲೆಯಲ್ಲಿ ಕ್ಷೇತ್ರಕಾರ್ಯ ಮಾಡಿದ್ದುದು ಈ ಕಮ್ಮಟದ ವೈಶಿಷ್ಟ್ಯವಾಗಿತ್ತು.

ಉಡುಪಿಯಲ್ಲಿ 1989ರ ಮೇ 26ರಿಂದ ಜೂನ್ 10ರ ವರೆಗೆ ನಡೆದ ನಾಲ್ಕನೆಯ ಕಮ್ಮಟ ತುಂಬ ವಿಶಿಷ್ಟವಾಗಿತ್ತು. ಮೊದಲ ಮೂರು ಕಮ್ಮಟಗಳಲ್ಲಿ ಜಾನಪದಕ್ಕೆ ಸಂಬಂಧಿಸಿದ ತತ್ವಗಳು, ವಿಧಾನಗಳು, ಸಿದ್ಧಾಂತಗಳು, ಕ್ಷೇತ್ರಕಾರ್ಯ ಇವುಗಳಲ್ಲಿ ತರಬೇತಿ ನೀಡಲಾಯಿತು. ಈ ಕಮ್ಮಟದಲ್ಲಿ ದೊಡ್ಡ ಪ್ರಮಾಣದ ಸಾರ್ವಜನಿಕ ಪ್ರದರ್ಶನಗಳನ್ನು ವಿಡಿಯೋ, ಆಡಿಯೋ, ಫೀಲ್ಡ್ ನೋಟ್ಸ್, ಫೋಟೋಗ್ರಫಿ ಈ ರೀತಿಯ ಎಲ್ಲ ವಿಧಾನಗಳ ಮೂಲಕ ದಾಖಲು ಮಾಡಲು ಸಾಧ್ಯ ಎಂಬುದನ್ನು ಕಲಿಸಲಾಯಿತು. ಮೊದಲ ಎರಡು ಕಮ್ಮಟಗಳಲ್ಲಿ ಆಂಧ್ರದ ಮತ್ತು ಕರ್ನಾಟಕದ ಅಭ್ಯರ್ಥಿಗಳು ಪ್ರತ್ಯೇಕವಾದ ಕಮ್ಮಟಗಳಲ್ಲಿ ಭಾಗವಹಿಸಿದರು. ಮೂರನೆಯ ಕಮ್ಮಟದಲ್ಲಿ ಕರ್ನಾಟಕದ ಮತ್ತು ಆಂಧ್ರದ ಮಹಿಳೆಯರು ಜೊತೆಯಾಗಿ ಹೈದರಾಬಾದ್ ಕಮ್ಮಟದಲ್ಲಿಯೂ, ಕರ್ನಾಟಕದ ಮತ್ತು ಆಂಧ್ರದ ಪುರುಷ ಅಭ್ಯರ್ಥಿಗಳು ಧಾರವಾಡದಲ್ಲಿಯೂ ಜೊತೆಯಾಗಿ ಕೆಲಸ ಮಾಡಿದರು. ನಾಲ್ಕನೆಯ ಕಮ್ಮಟದಲ್ಲಿ ಹೈದರಾಬಾದ್ ಮತ್ತು ಧಾರವಾಡದ ಕಮ್ಮಟಗಳಲ್ಲಿ ಭಾಗವಹಿಸಿದ್ದ ಎಲ್ಲಾ ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳೂ ಒಟ್ಟಾರೆ ಈ ಕಮ್ಮಟದಲ್ಲಿ ಭಾಗವಹಿಸಿ, ಆಂಧ್ರದ ಮತ್ತು ಕರ್ನಾಟಕದ ಜಾನಪದ ಅಧ್ಯಯನದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾದದ್ದು ಬಹಳ ಮುಖ್ಯವಾದ ಸಂಗತಿ. ಈ ವಿಚಾರ ಸಂಕಿರಣದಲ್ಲಿ ನಾಟಕ, ದಾಖಲಾತಿ ಸಂಗ್ರಹ, ಚಲಚಿತ್ರ ನಿರ್ದೇಶನ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಪರಿಣತರಾದ ವಿದ್ವಾಂಸರು ಉಪನ್ಯಾಸಗಳನ್ನು ನೀಡಿ, ಚರ್ಚೆಗಳಲ್ಲಿ ಭಾಗವಹಿಸಿ, ನಾವು ಕ್ಷೇತ್ರಕಾರ್ಯ ಮಾಡುವಾಗ ನಮ್ಮೊಡನೇ ಇದ್ದು, ನಮಗೆ ಮಾರ್ಗದರ್ಶನ ಮಾಡಿ, ಕ್ಷೇತ್ರಕಾರ್ಯದ ನಂತರ ಆರ್ಕೈವ್‌ನಲ್ಲಿ ವಿಡಿಯೋ ಆಡಿಯೋ ಸಾಮಗ್ರಿಯನ್ನು ಸಂಪಾದಿಸುವಾಗಲೂ ಮಾರ್ಗದರ್ಶನ ನೀಡಿದರು. ಇದರಿಂದಾಗಿ ಇಂತಹ ವಿದ್ವಾಂಸರೊಡನೆ ಕೆಲಸ ಮಾಡಿ, ತರಗತಿಗಳ ಉಪನ್ಯಾಸಗಳಲ್ಲಿ, ಕ್ಷೇತ್ರದಲ್ಲಿ ಹಾಗೂ ಆರ್ಕೈವ್‌ನಲ್ಲಿ ಅವರ ಜ್ಞಾನ ಮತ್ತು ಅನುಭವದ ಪ್ರಯೋಜನ ಪಡೆಯಲು ಸಾಧ್ಯವಾಯಿತು. ಶ್ರೀ. ಬಿ. ವಿ. ಕಾರಂತ ಅವರು ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದಲ್ಲಿಯೂ ನಾಟಕ ಮತ್ತು ಚಲನಚಿತ್ರ ನಿರ್ದೇಶನದಲ್ಲಿ ವಿಶೇಷವಾದ ಸಾಧನೆಗಳನ್ನು ಮಾಡಿದ್ದಾರೆ. ಡಾ॥ ಚಂದ್ರಶೇಖರ ಕಂಬಾರರೂ, ಶ್ರೀ. ಕೆ. ವಿ. ಸುಬ್ಬಣ್ಣನವರೂ ಸಾಹಿತ್ಯ, ನಾಟಕ ಮತ್ತು ಚಲನಚಿತ್ರ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆ ಮಹತ್ವಪೂರ್ಣವಾದುದು. ವಸ್ತುನಿಷ್ಠವಾದ ದಾಖಲಾತಿ (objective Documentation) ಸಾಧ್ಯವಿಲ್ಲ; ನಾವು ಎಷ್ಟೇ ಪ್ರಯತ್ನಿಸಿದರೂ ದಾಖಲಾತಿಯಲ್ಲಿ ವೈಯಕ್ತಿಕ ದೃಷ್ಟಿಕೋನದ ಪ್ರಭಾವಗಳಿದ್ದೇ ಇರುತ್ತದೆ. ಈ ಬಗೆಯ ಸಾಧ್ಯತೆ ಇರುವುದರಿಂದ ದಾಖಲಾತಿ ಕಾರ್ಯ ಮಾಡುವುದು ಅಗತ್ಯವೆ ಎಂದು

ಪ್ರಶ್ನಿಸಿ ಕೆ. ವಿ. ಸುಬ್ಬಣ್ಣ ಅಭ್ಯರ್ಥಿಗಳಿಗೆ ಒಂದು ರೀತಿಯ ಶಾಕ್ ಕೊಟ್ಟದ್ದು ನಮ್ಮೆಲ್ಲರ ಕಣ್ಣು ತೆರೆಸಿತು. ಡಾ॥ ಚಂದ್ರಶೇಖರ ಕಂಬಾರರು ತಾಳಮದ್ದಳೆಯ ಬಗ್ಗೆ ತಮ್ಮ ಸಂಶೋಧನೆಯ ಬಗ್ಗೆ ಉಪನ್ಯಾಸ ಮಾಡಿದರು. ಒಂದು ಕಲಾಪ್ರಕಾರವಾಗಿ ತಾಳಮದ್ದಳೆಯ ವೈಶಿಷ್ಟ್ಯಗಳನ್ನು ವಿವರಿಸಿದರು. ತಾಳಮದ್ದಳೆಯ ಕಲಾವಿದ ಪ್ರತಿಯೊಂದು ಪ್ರದರ್ಶನದಲ್ಲಿಯೂ ಸದ್ಯ ಸ್ಫೂರ್ತಿಯಿಂದಲೇ ಕೆಲವು ವಿಷಯಗಳನ್ನು ಕಂಡುಕೊಳ್ಳುತ್ತಾನೆ ಎಂದು ಹೇಳಿದರು. ಶ್ರೀ. ಬಿ. ವಿ. ಕಾರಂತರು ತಮ್ಮ ಮೂಲಕ್ಷೇತ್ರ ನಾಟಕವೆಂದೂ. ಆಕಸ್ಮಿಕವಾಗಿ ಸಿನೆಮಾ ಕ್ಷೇತ್ರಕ್ಕೆ ಬಂದದ್ದನ್ನೂ ತಿಳಿಸಿ, ಜನಪದ ಸಂಗೀತ ನಾಟಕಗಳ ಪ್ರದರ್ಶನದ ನಿರ್ದೇಶನದಲ್ಲಿ ಹೇಗೆ ನೆರವಾಗಿದೆ ಎಂಬುದನ್ನು ವಿವರಿಸಿದರು. ಈ ಮೂವರೂ ಸಾಧ್ಯವಾದ ಮಟ್ಟಿಗೆ ಅಭ್ಯರ್ಥಿಗಳು ಮಾಡುತ್ತಿದ್ದ ದಾಖಲಾತಿ ಕಾರ್ಯದಲ್ಲಿ ನೆರವು ನೀಡಿದರು. ಪ್ರೊ॥ ಫಿಲಿಪ್ ಜ್ಸರೀಲಿ ಅಮೆರಿಕಾದ ವಿಸ್ಕಾನ್ಸಿನ್ ವಿಶ್ವವಿದ್ಯಾನಿಲಯದಲ್ಲಿ ನಾಟಕ ಮತ್ತು ಜಾನಪದ ವಿಜ್ಞಾನವನ್ನು ಬೋಧಿಸುತ್ತಾರೆ. ಕೇರಳದಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿ ಕಥಕ್ಕಳಿಯ ಬಗ್ಗೆ ಒಂದು ಬೃಹತ್ ಗ್ರಂಥವನ್ನು ಬರೆದಿದ್ದಾರೆ. ಕಾಲರಿಪಾಯಟ್ ಎಂಬ ಕಲೆಯ ಬಗ್ಗೆ ಅಭ್ಯಾಸ ಮುಂದುವರಿಸಿ. ಗ್ರಂಥವೊಂದನ್ನು ಬರೆಯುತ್ತಿದ್ದಾರೆ. ಡಾ॥ ಬ್ರೆಂಡಾಬೆಕ್ ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಮಾನವವಿಜ್ಞಾನದ ಪ್ರಾಧ್ಯಾಪಕರಾಗಿದ್ದರು. ಈಗ ಆ ಕೆಲಸವನ್ನು ಬಿಟ್ಟು ತಮ್ಮ ಪತಿ ಶ್ರೀ. ಎರಿಕ್ ಹ್ಯಾರಿಸ್ ಅವರೊಡನೆ ವಾಣಿಜ್ಯ ವಿಡಿಯೋ ಕಾರ್ಯಕ್ರಮದಲ್ಲಿ ತೊಡಗಿದ್ದಾರೆ. ಎರಿಕ್ ಹ್ಯಾರಿಸ್ ಕೆನಡಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನಲ್ಲಿ ಅಧಿಕಾರಿಯಾಗಿದ್ದಾರೆ. ಅವರೂ ಈ ಕಮ್ಮಟದಲ್ಲಿ ವಿಡಿಯೋ ತಂತ್ರಜ್ಞಾನದ ಬಗ್ಗೆ ಉಪನ್ಯಾಸ ಮಾಡುವುದು ಮಾತ್ರವಲ್ಲದೆ, ಅಭ್ಯರ್ಥಿಗಳ ಒಂದು ಗುಂಪಿನ ದಾಖಲಾತಿ ಮತ್ತು ಸಂಪಾದನಾ ಕಾರ್ಯದಲ್ಲಿ ಮಾರ್ಗದರ್ಶನ ಮಾಡಿದರು. ಪ್ರೊ॥ ಬ್ರೆಂಡಾ ಬೆಕ್ ಅವರು ತಮಿಳು ನಾಡಿನ ಕೊಂಗುನಾಡು ಪ್ರದೇಶದಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿ, "The Three Twins" ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ.(ಕಮ್ಮಟದ ಎಲ್ಲ ಅಭ್ಯರ್ಥಿಗಳಿಗೂ ತಮ್ಮ ಈ ಪುಸ್ತಕದ ಒಂದೊಂದು ಪ್ರತಿಯನ್ನು ಕೊಡುಗೆಯಾಗಿ ನೀಡಿದರು. ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳಿಗೂ ಒಂದೊಂದು ಪ್ರತಿಯನ್ನು ಕೊಡುಗೆಯಾಗಿ ನೀಡಿದರು). ದೆಹಲಿಯ American Institute of Indian Studiesನ ಆರ್ಕೈವ್ಸ ಮುಖ್ಯಸ್ಥೆ ಡಾ॥ ಶುಭಾ ಚೌಧುರಿ ಅವರು ಆರ್ಕೈವ್ ಮತ್ತು ದಾಖಲಾತಿ ಕಾರ್ಯದ ಜಾಗತಿಕ ಇತಿಹಾಸ, ತಮ್ಮ ಸಂಸ್ಥೆಯಲ್ಲಿ ಮಾಡಿರುವ ದಾಖಲಾತಿಯ ಕ್ರಮ, ದಾಖಲಾತಿಯ ವಿಧಾನಗಳು ಮೊದಲಾದ ಅನೇಕ ವಿಷಯಗಳ ಬಗ್ಗೆ ಉಪನ್ಯಾಸ ಮಾಡಿದರು; ಚರ್ಚೆಗಳಲ್ಲಿ ಭಾಗವಹಿಸಿದರು. ಆರ್ಕೈವ್‌ಗಳಲ್ಲಿ ಕಂಪ್ಯೂಟರ್ ಹೇಗೆ ಬಳಸಿ ಕೊಳ್ಳಬಹುದೆಂಬುದನ್ನು ತಿಳಿಸಿ, ತರಬೇತಿ ನೀಡಿದರು.

ಅಭ್ಯರ್ಥಿಗಳನ್ನು ನಾಲ್ಕು ಗುಂಪುಗಳಾಗಿ ವರ್ಗೀಕರಿಸಲಾಯಿತು. ಪ್ರೊ॥ ಫಿಲಿಪ್ ಝರೀಲಿ ಅವರ ನೇತೃತ್ವದಲ್ಲಿ ಒಂದು ಗುಂಪು ಮಲ್ಪೆಯ ಮೀನುಗಾರರ ಜೀವನದ ಬಗ್ಗೆ, ಶ್ರೀ. ಎರಿಕ್ ಹ್ಯಾರಿಸ್ ಅವರ ನೇತೃತ್ವದಲ್ಲಿ ಎರಡನೆಯ ಗುಂಪು ಉಡುಪಿಯ ಶ್ರೀಕೃಷ್ಣ ದೇವಾಲಯದ ಸುತ್ತಮುತ್ತ ನಡೆಯುವ ಚಟುವಟಿಕೆಗಳ ಬಗ್ಗೆ. ಪ್ರೊ॥ ಕಂಬಾರ, ಶ್ರೀಕಾಂತ, ಶ್ರೀ. ಸುಬ್ಬಣ್ಣ, ಅವರ ನೇತೃತ್ವದಲ್ಲಿ ಮೂರನೆಯ ಗುಂಪು. ಕಾಜಾರ ಗುತ್ತಿನ ಜನಜೀವನದ ಬಗ್ಗೆ, ಪ್ರೊ॥ ಬ್ರೆಂಡಾಬೆಕ್ ಅವರ ನೇತೃತ್ವದಲ್ಲಿ ‘ನಾಲ್ಕನೆಯ ಗುಂಪು ಉಡುಪಿಯ ಹತ್ತಿರದ ಸಗ್ರಿಗ್ರಾಮದ ಜುಮಾದಿ ಭೂತದ ಮನೆಮಟ್ಟದ ಕೋಲದ ಬಗ್ಗೆ ದಾಖಲಾತಿ ಕಾರ್ಯ ಮಾಡಿದವು. ವಿಡಿಯೋ. ಆಡಿಯೋ. ಫೀಲ್ಡ್‌ನೋಟ್ಸ್, ಇತ್ಯಾದಿ ಎಲ್ಲ ಬಗೆಯ ದಾಖಲಾತಿ ಮಾಡಿ, ಅದನ್ನು ಆರ್ಕೈವ್‌ನಲ್ಲಿ Edit ಮಾಡಿ. ಸಾಕ್ಷ್ಯ ಚಿತ್ರಗಳನ್ನು ಮಾಡಲಾಯಿತು. ನಾಲ್ಕು ಗುಂಪುಗಳೂ ತಾವು ಸಿದ್ಧಪಡಿಸಿದ ಸಾಕ್ಷ್ಯ ಚಿತ್ರಗಳ ನೆರವು ಪಡೆದು, ಒಂದೊಂದು ಗಂಟೆಯ Multi - media presentation ಮಾಡಬೇಕಾಯಿತು. ಈ ಬಗ್ಗೆ ಚರ್ಚೆ ನಡೆಯಿತು. ಈ ಎಲ್ಲ ತರಬೇತಿಯ ಕಾರಣದಿಂದಾಗಿ ಅಭ್ಯರ್ಥಿಗಳು. ವಿಡಿಯೋ. ಕ್ಯಾಮೆರಾಗಳನ್ನು ಉಪಯೋಗಿಸುವ ರೀತಿಯನ್ನೂ. ಆರ್ಕೈವ್‌ನಲ್ಲಿ ವಿಡಿಯೋ. ಆಡಿಯೋ ಸಾಮಾಗ್ರಿಯನ್ನು Edit ಮಾಡುವುದನ್ನು ಕಲಿಯಲು ಅವಕಾಶ ದೊರೆಯಿತು.

ಈ ನಾಲ್ಕು ಕಮ್ಮಟಗಳಲ್ಲಿ ಅಭ್ಯರ್ಥಿಗಳಿಗೆ ಹಾಗೂ ಪ್ರಾಧ್ಯಾಪಕ ವರ್ಗದವರಿಗೆ ಮಾಡಿದ್ದ ಊಟ. ವಸತಿ, ಪ್ರಯಾಣ ವ್ಯವಸ್ಥೆ ತುಂಬ ಚೆನ್ನಾಗಿತ್ತು. ಪ್ರವಾಸಗಳು, ಭೋಜನ ಕೂಟಗಳೂ ಸ್ವಾರಸ್ಯಕರವಾಗಿದ್ದವು. ಕೊನೆಯಲ್ಲಿ ಹೈದರಾಬಾದಿನಲ್ಲಿ ಆಂಧ್ರ ವಿಶ್ವವಿದ್ಯಾನಿಲಯದಲ್ಲಿ ಸರ್ಟಿಫಿಕೇಟ್‌ಗಳನ್ನು ಕೊಡಲಾಯಿತು. ಉಡುಪಿಯಲ್ಲಿ ನಡೆದ ಕೊನೆಯ ಸಮಾರಂಭ ತುಂಬ ಹೃದಯಸ್ಪರ್ಶಿಯಾಗಿತ್ತು. ಕಾರ್ಯಕ್ರಮಗಳು ಕಾಲ ಕಾಲಕ್ಕೆ ಸಮರ್ಪಕವಾಗಿ ನಡೆದವು.

ಈ ಕಮ್ಮಟಗಳಲ್ಲಿ ಏನು ಕೊರತೆಯಿತ್ತು ಎಂಬುವರ ಬಗ್ಗೆಯೂ ವಿಚಾರ ಮಾಡುವುದು ಅಗತ್ಯ. ಪ್ರೊ॥ ಪೀಟರ್ ಕ್ಲಾಸ್ ಮತ್ತು ಪ್ರೊ॥ ಫಿಲಿಪ್ ಜ್ಸರೀಲಿ ಈ ಬಗ್ಗೆ ಬರೆದಿದ್ದಾರೆ. ಅನ್ವಯಿಕ ಜಾನಪದದ

(Applied Folklore) ಬಗ್ಗೆ ಒಂದು ಕಮ್ಮಟದ ಅಗತ್ಯವಿತ್ತು. ಕೊನೆಯ ಕಮ್ಮಟದಲ್ಲಿ ಒಂದೊಂದು ಗುಂಪಿನಲ್ಲಿ ಮೂರು ಅಥವಾ ನಾಲ್ಕು ಜನರು ಸಾಕಾಗಿತ್ತು. ಇಂತಹ ಗುಂಪುಗಳ ಸಂಖ್ಯೆಯನ್ನು ಹೆಚ್ಚಿಸ ಬಹುದಾಗಿತ್ತು. ಈ ಬಗೆಯ ಕೊರತೆಗಳನ್ನು 1990-91ರ ಸಾಲಿನಲ್ಲಿ ಫೋರ್ಡ್ ಫೌಂಡೇಶನ್ ನೆರವಿನಿಂದ ತಮಿಳುನಾಡಿನ ಪಾಲಯಂಕೋಟೆಯಲ್ಲಿರುವ ಕ್ರಿಶ್ಚಿಯನ್ ಕಾಲೇಜಿನವರು ನಡೆಸುವ ಅಂತಾರಾಷ್ಟ್ರೀಯ ಜಾನಪದ ಕಮ್ಮಟದಲ್ಲಿ ತುಂಬಬಹುದು. ಉಡುಪಿಯ RRCಕಮ್ಮಟಗಳಲ್ಲಿ ಭಾಗವಹಿಸಿದವರು ಭಾರತೀಯ ಮತ್ತು ಅಮೆರಿಕನ್ ಜಾನಪದ ವಿದ್ವಾಂಸರು. ಇದರಲ್ಲಿ ಯೂರೋಪಿನ ಪ್ರಸಿದ್ಧರಾದ ಕೆಲವರಾದರೂ ವಿದ್ವಾಂಸರು ಇರಬೇಕಾಗಿತ್ತು. ಇದು ಒಂದು ರೀತಿಯಲ್ಲಿ ಅಂತಾರಾಷ್ಟ್ರೀಯ ಜಾನಪದವನ್ನು ಕುರಿತ ಕಮ್ಮಟಗಳು ಎಂಬುದು ನಿಜ. ಏಕೆಂದರೆ ಇವುಗಳಲ್ಲಿ ಪ್ರಾದೇಶಿಕ, ರಾಷ್ಟ್ರೀಯ ಮಟ್ಟಗಳನ್ನು ಮೀರಿದ ಅಂತಾರಾಷ್ಟ್ರೀಯ ಜಾನಪದ ವಿಜ್ಞಾನವಿದೆ. ಇದು ಪ್ರತ್ಯೇಕವಾದ ಅಭ್ಯಾಸದ ವಿಷಯ. ಯಾವುದೋ ಒಂದು ಭಾಷೆಗೆ, ಸಾಹಿತ್ಯಕ್ಕೆ, ಸಂಸ್ಕೃತಿಗೆ ಸೀಮಿತವಾದದ್ದಲ್ಲ. ವಿಶ್ವವ್ಯಾಪಕವಾದದ್ದು. ಎಂಬುದು ಅಭ್ಯರ್ಥಿಗಳಿಗೆ ಮನವರಿಕೆಯಾಯಿತು. ಆದರೆ ಪ್ರಾಧ್ಯಾಪಕ ವರ್ಗದವರು ಅಮೆರಿಕಾ ಮತ್ತು ಇಂಡಿಯಾದವರು ಆದ್ದರಿಂದ 'ಇಂಡೋ-ಅಮೆರಿಕನ್ ಕಮ್ಮಟಗಳು' ಎಂಬ ಅಭಿಪ್ರಾಯ ಬಂದರೆ ಆಶ್ಚರ್ಯವಿಲ್ಲ. ಫೋರ್ಡ್ ಫೌಂಡೇಶನ್ ಹೈದರಾಬಾದಿನಲ್ಲಿ ಒಂದು, ತಮಿಳುನಾಡಿನ ಪಾಲಯಂ ಕೋಟೈನಲ್ಲಿರುವ ಕ್ರಿಶ್ಚಿಯನ್ ಕಾಲೇಜಿನಲ್ಲಿ ಒಂದು RRC ಸ್ಥಾಪಿಸಲು ನೆರವು ನೀಡಲಿದೆ. ಕೇರಳ ತ್ರಿಶೂರ್‌ನಲ್ಲಿ ಡ್ರಾಮಾ ಸ್ಕೂಲಿಗೆ ಈಗಾಗಲೇ ನೆರವು ನೀಡಿದೆ. ಈ ಸಂಸ್ಥೆಯ ಶ್ರೀ. ಎ. ಕೆ. ನಂಬಿಯಾರ್, ಪಾಲಯಂ ಕೋಟೆಯ ಕ್ರಿಶ್ಚಿಯನ್ ಕಾಲೇಜಿನ ಜಾನಪದ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ॥ ಮುತ್ತು ಕುಮಾರಸ್ವಾಮಿ, ಮಣಿಪುರದ ಶ್ರೀ. ಪ್ರೇಮಚಂದ್ ಕರ್ನಾಟಕ ಮತ್ತು ಆಂಧ್ರದ ಅಭ್ಯರ್ಥಿಗಳೊಡನೆ ಈ ಕಮ್ಮಟಗಳಲ್ಲಿ ಭಾಗವಹಿಸಿದ್ದರು. ಫೋರ್ಡ್ ಫೌಂಡೇಶನ್‌ನವರು ಮಣಿಪುರದಲ್ಲಿ ಒಂದು ತಿಂಗಳ ಅವಧಿಯ ಜಾನಪದ ಕಮ್ಮಟ ನಡೆಸಲು ನೆರವು ನೀಡಿದ್ದಾರೆ. ಕಾಲಕ್ರಮೇಣ ಉತ್ತರ ಭಾರತದಲ್ಲಿಯೂ ಒಂದು ಅಂತಾರಾಷ್ಟ್ರೀಯ ಜಾನಪದ ವಿಜ್ಞಾನ ಕಮ್ಮಟ ನಡೆಸಲು ಹಾಗೂ RRC ಆರಂಭಿಸಲು ನೆರವುನೀಡುವ ನಿರೀಕ್ಷೆಯಿದೆ. ಫೋರ್ಡ್ ಫೌಂಡೇಶನ್ ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದ ಎಲ್ಲಾ ಕಡೆಗಳಲ್ಲಿಯೂ ಜಾನಪದದ ಅಧ್ಯಯನ ವಿಜ್ಞಾನವಾಗಿ ಬೆಳವಣಿಗೆ ಹೊಂದಲು ಅಗತ್ಯವಾದ ನೆರವು ನೀಡಬೇಕೆಂಬ ಉದ್ದೇಶ ಹೊಂದಿದ್ದಾರೆ. 1950ರ ಅವಧಿಯಲ್ಲಿ ಅಮೆರಿಕಾದ ರಾಕ್‌ಫೆಲ್ಲರ್ ಫೌಂಡೇಶನ್ ಭಾರತದಲ್ಲಿ ಭಾಷಾವಿಜ್ಞಾನ (Linguistics)ವನ್ನು ಬೆಳೆಸಲು ನೆರವು ನೀಡಿತು. ಪರಿಣಾಮವಾಗಿ ಭಾರತದಲ್ಲಿ ಭಾಷಾವಿಜ್ಞಾನ ಚೆನ್ನಾಗಿ ಬೆಳವಣಿಗೆ ಹೊಂದಿದೆ. ಭಾರತದ ಭಾಷಾವಿಜ್ಞಾನಿಗಳು ಜಗತ್ತಿನ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಮುಖ್ಯವಾದ ಸ್ಥಾನ ಗಳಿಸಿದ್ದಾರೆ. ಇದೇ ರೀತಿಯಲ್ಲಿಯೇ ಇನ್ನು ಎರಡು ಮೂರು ದಶಕಗಳಲ್ಲಿ ಭಾರತದಲ್ಲಿ ಜಾನಪದ ವಿಜ್ಞಾನ ಆ ಮಟ್ಟವನ್ನು ಮುಟ್ಟಬಹುದು. ಭಾರತೀಯ ಜಾನಪದ ವಿದ್ವಾಂಸರು ಜಗತ್ತಿನ ಜಾನಪದದಲ್ಲಿ ಮುಖ್ಯವಾದ ಸ್ಥಾನ ಗಳಿಸುತ್ತಾರೆ ಎಂಬ ನಿರೀಕ್ಷೆಯೊಂದಿಗೆ ಈ ನೆರವು ನೀಡಿದ್ದಾರೆ. ಉಡುಪಿಯ RRC ಮತ್ತು ಹೈದರಾಬಾದ್ ಹಾಗೂ ಪಾಲಯಂಕೋಟೆ RRC ಗಳಿಗೆ ಅಂತಾರಾಷ್ಟ್ರೀಯ ಜಾನಪದ ವಿಜ್ಞಾನದ ಅಧ್ಯಯನಕ್ಕೆ ಅತ್ಯಗತ್ಯವಾಗಿ ಬೇಕಾಗುವ ಪುಸ್ತಕಗಳು ಮತ್ತು ಜರ್ನಲ್‌ಗಳನ್ನು ಕೊಳ್ಳಲು ಒಂದೊಂದು ಕೇಂದ್ರಕ್ಕೂ 25.000 ಡಾಲರ್‌ಗಳ ನೆರವು ನೀಡಲಿದೆ. ಇದರಿಂದ ತುಂಬ ಅನುಕೂಲವಾಗುತ್ತದೆ.

ಈ ಅಂತಾರಾಷ್ಟ್ರೀಯ ಜಾನಪದ ವಿಜ್ಞಾನ ಕಮ್ಮಟಗಳಿಂದ ನಾವು ಕಲಿತದ್ದೇನು ಎಂಬುದರ ಬಗ್ಗೆ ನನ್ನ ಕೆಲವು ಅನಿಸಿಕೆಗಳು ಈ ರೀತಿ ಇವೆ:

1. ಜಾನಪದ ಎಂದರೆ ಗ್ರಾಮೀಣ ಸಮಾಜಗಳಿಗೆ ಮಾತ್ರ ಸೀಮಿತವಾದದ್ದು ಎಂಬ ಅಭಿಪ್ರಾಯವನ್ನು ಬಿಟ್ಟು, ಅದರಲ್ಲಿ ಆದಿವಾಸ ಜಾನಪದ, ಆಧುನಿಕ ಜಾನಪದಗಳೂ ಸೇರುತ್ತವೆ ಎಂಬುದು ಮನವರಿಕೆಯಾದದ್ದು. ಇದು ನಮಗೆ ಮೊದಲು ಬೌದ್ಧಿಕವಾಗಿ ತಿಳಿದಿತ್ತು. ಆದರೆ ಅನುಭವಕ್ಕೆ ಬಂದಿರಲಿಲ್ಲ; ಮನವರಿಕೆಯಾಗಿರಲಿಲ್ಲ. ಈ ಕಮ್ಮಟಗಳಲ್ಲಿ ಆಧುನಿಕ ಜಾನಪದದ ಬಗ್ಗೆ ಕೆಲವರು ಪ್ರಬಂಧಗಳನ್ನು ಬರೆದರು. ಮುಂದೆ ಕೆಲವರಾದರೂ ಈ ಬಗ್ಗೆ ಕೆಲಸ ಮಾಡಬಹುದು.

2. ನಾವು ಮೊದಲು ಕ್ಷೇತ್ರಕಾರ್ಯವನ್ನು ಮಾಡುತ್ತಿದ್ದುದು ನಿಜ. ಆದರೆ ಈ ಕಮ್ಮಟಗಳಲ್ಲಿ Performance Theoryಯ ತಿಳುವಳಿಕೆಯನ್ನು ಮಾಡಿದ್ದರಿಂದ ನಾವು ಮಾಡಬಹುದಾದ ಮುಂದಿನ ಕ್ಷೇತ್ರಕಾರ್ಯಗಳಿಗೆ ಹೊಸ ಆಯಾಮ ತರಲು ಸಾಧ್ಯವಾಗುತ್ತದೆ.

3. ಅಭ್ಯರ್ಥಿಗಳಲ್ಲಿ ಹಲವರು ಜಾನಪದ ವಿಜ್ಞಾನದಲ್ಲಿ ಬೋಧಕರೂ ಆಗಿದ್ದೆವು; ಸಂಶೋಧನೆ ಮಾಡುತ್ತಿರುವವರೂ ಕೆಲವರಿದ್ದರು. ಜಾನಪದ ವಿಜ್ಞಾನದ ಬಗ್ಗೆ ಕೆಲವು ವಿಷಯಗಳನ್ನು ನಾವು ತಿಳಿದಿದ್ದೆವು.

ಆದರೆ ಈ ಕಮ್ಮಟಗಳಲ್ಲಿ ನಮ್ಮ ತಿಳುವಳಿಕೆ ಹೆಚ್ಚಾಯಿತು. ನಾವು ಈ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಜ್ಞಾನ ಸಂಪಾದಿಸಲು ಅಗತ್ಯವಾದ ತರಬೇತಿ ದೊರೆತಿದೆ. ಇನ್ನೂ ಮುಂದೆ ನಾವು ಕೆಲಸ ಮಾಡಬೇಕಷ್ಟೆ.

4. ಅಮೆರಿಕನ್ ಜಾನಪದ ವಿದ್ವಾಂಸರ ಬಗ್ಗೆ ಪುಸ್ತಕಗಳಲ್ಲಿ ಲೇಖನಗಳಲ್ಲಿ ಓದಿ ತಿಳಿದಿದ್ದೆವು ಅಷ್ಟೆ. ಆದರೆ ಈ ವ್ಯಕ್ತಿಗಳೊಡನೆ ವಿಚಾರ ಮಾಡುವ, ಕ್ಷೇತ್ರಕಾರ್ಯ ಮಾಡುವ ಹಾಗೂ ಇವರ ಉಪನ್ಯಾಸಗಳನ್ನು ಕೇಳುವ ಅವಕಾಶ ನಮಗೆ ದೊರೆತದ್ದು, ಅಂತಾರಾಷ್ಟ್ರೀಯ ಸಂಘ ಸಂಸ್ಥೆಗಳೊಡನೆ, ವಿದ್ವಾಂಸರೊಡನೆ ಸಂಪರ್ಕ ದೊರೆತದ್ದು ತುಂಬ ಉಪಯುಕ್ತವಾಗಿದೆ.

5. ಕರ್ನಾಟಕದಲ್ಲಿ ಈ ವರೆಗೆ ಸಾಕಷ್ಟು ಸಂಗ್ರಹ, ಅಧ್ಯಯನ ನಡೆದು, ಭಾರತದಲ್ಲಿ ಈ ಕ್ಷೇತ್ರದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಕನ್ನಡ ಅಧ್ಯಯನದಿಂದ ಜಾನಪದ ಅಧ್ಯಯನಕ್ಕೆ ಹೊಸ ಆಯಾಮ ಬಂದಿದೆ. ಆದರೆ ಜಾನಪದ ವಿಜ್ಞಾನವನ್ನು ಪ್ರತ್ಯೇಕವಾದ ವಿಜ್ಞಾನವೆಂದು ಪರಿಗಣಿಸಿ, ಸಂಶೋಧನೆ ನಡೆದಿಲ್ಲ; ಈ ಕಾರ್ಯ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಡೆಯಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಮ್ಯೂಸಿಯಂಗಳನ್ನು ಬೆಳೆಸಿದಂತೆಯೇ ಆರ್ಕೈವ್‌ಗಳನ್ನೂ ಬೆಳೆಸಬೇಕಾದುದು ಜಾನಪದ ಅಧ್ಯಯನದ ದೃಷ್ಟಿಯಿಂದ ಅಗತ್ಯ. ಉಡುಪಿಯ RRCಯ ಮಹತ್ವ ಚೆನ್ನಾಗಿ ಮನದಟ್ಟಾದುದ್ದು ಈ ಕಮ್ಮಟಗಳ ಕಾರಣದಿಂದ. ಇದರ ಪ್ರಯೋಜನವನ್ನು ನಾವು ಹೆಚ್ಚು ಹೆಚ್ಚು ಪಡೆಯುವುದು ಅಗತ್ಯ.

6. ಕಮ್ಮಟದಲ್ಲಿ ಭಾಗವಹಿಸಿದವರೆಲ್ಲರೂ ಅಂತಾರಾಷ್ಟ್ರೀಯ ಜಾನಪದ ವಿಜ್ಞಾನದಲ್ಲಿ ಹೆಚ್ಚಾಗಿ ಸಂಶೋಧನೆ ಮಾಡಲು ಸಾಧ್ಯವಾಗದಿರಬಹುದು. ಆದರೆ ಕನ್ನಡ, ತೆಲುಗು ಮೊದಲಾದ ಭಾಷೆಗಳಲ್ಲಿ ಕೆಲಸ ಮಾಡುವ ನಾವು ಪ್ರಾದೇಶಿಕ ಭಾಷೆಗಳಲ್ಲಿಯೇ ಅಂತಾರಾಷ್ಟ್ರೀಯ ಗುಣಮಟ್ಟದ ಸಂಪ್ರಬಂಧಗಳನ್ನು ರಚಿಸಬಹುದು. ಅದನ್ನು ಇಂಗ್ಲಿಷಿಗೆ ಅನುವಾದ ಮಾಡಿಸಬಹುದು. ನಮ್ಮ ಪ್ರಾದೇಶಿಕ ಭಾಷೆಗಳಲ್ಲಿರುವ ಜಾನಪದ ಸಾಮಗ್ರಿ ಇಂಗ್ಲಿಷಿಗೆ ಅನುವಾದವಾಗಬೇಕಾದುದು ಅಗತ್ಯ.

7. ದಕ್ಷಿಣ ಭಾರತದ ಜಾನಪದ ವಿದ್ವಾಂಸರು ಒಂದು ಅಸೋಸಿಯೇಷನ್ ಮಾಡಿಕೊಂಡು ಕೆಲಸ ಮಾಡಬಹುದು. ಈ ಕಮ್ಮಟದ ನೇರ ಪರಿಣಾಮವೆಂದರೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜಾನಪದ ವಿಜ್ಞಾನದಲ್ಲಿ ಎಂ. ಫಿಲ್. ತರಗತಿಗಳನ್ನು ಆರಂಭಿಸಿದ್ದು; ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ಎಂ. ಎ. ಪಠ್ಯಕ್ರಮದಲ್ಲಿ ವಿಶೇಷವಾಗಿ ಅಭ್ಯಾಸಮಾಡುತ್ತಿದ್ದ ಜಾನಪದ ವಿಜ್ಞಾನಕ್ಕೆ ಮೊದಲಿನ ಮೂರು ಪತ್ರಿಕೆಗಳ ಜೊತೆಗೆ, ನಾಲ್ಕನೆಯ ಪತ್ರಿಕೆಯನ್ನು ಸೇರಿಸಿದ್ದು; ಹಾಗೆಯೇ ಯು. ಜಿ. ಸಿ. ನೆರವಿನಿಂದ ಜಾನಪದ ಮ್ಯೂಸಿಯಂ ಮತ್ತು ಆರ್ಕೈವ್ ಆರಂಭಿಸಲು ಪ್ರಯತ್ನ ನಡೆದಿರುವುದು. ಕಮ್ಮಟಗಳಲ್ಲಿ ಭಾಗವಹಿಸಿದ್ದ ಕೆಲವರಾದರೂ ಹೊಸ ದೃಷ್ಟಿಕೋನದಿಂದ ಲೇಖನಗಳನ್ನು ಬರೆಯಲು ಆರಂಭಿಸಿದ್ದಾರೆ.

8. ಪ್ರೊ॥ ಪೀಟರ್ ಕ್ಲಾಸ್ ಮತ್ತು ಪ್ರೊ॥ ವಿವೇಕ ರೈ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ Karnataka Folklore Newsletter ಈ ಕಮ್ಮಟಗಳ ಪ್ರೇರಣೆಯಿಂದಲೇ ರೂಪುಗೊಂಡು, ಈ ಕಮ್ಮಟದ ಅಭ್ಯರ್ಥಿಗಳ ಸಹಕಾರದಿಂದ ನಡೆಯುತ್ತಿದೆ. ಈ ಪತ್ರಿಕೆ ಕರ್ನಾಟಕದ ಹಾಗೂ ಭಾರತದ ಜಾನಪದ ವಿಜ್ಞಾನದ ಕಾರ್ಯಚಟುವಟಿಕೆಗಳನ್ನು ಜಗತ್ತಿನಾದ್ಯಂತ ಪರಿಚಯ ಮಾಡಿಕೊಡುತ್ತದೆ. ಹಾಗೆಯೇ ಜಗತ್ತಿನ ವಿವಿಧ ದೇಶಗಳಲ್ಲಿ ಈ ಕ್ಷೇತ್ರದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನೂ ನಮಗೆ ತಿಳಿಸುತ್ತದೆ. ಈ ಪತ್ರಿಕೆ ಯಶಸ್ವಿಯಾಗಿ ಮುಂದುವರಿಯಬೇಕು. ಪಾಲಯಂ ಕೋಟೆಯ ಕ್ರಿಶ್ಚಿಯನ್ ಕಾಲೇಜಿನವರು ಇಂಗ್ಲಿಷಿನಲ್ಲಿ ಜಾನಪದ ವಿಜ್ಞಾನದ Journal ತರಲಿದ್ದಾರೆ. ಇದಕ್ಕೆ ನಾವು ನಮ್ಮ ಇಂಗ್ಲಿಷ್ ಲೇಖನಗಳನ್ನು ಕೊಡಬಹುದು. ಇಷ್ಟೆಲ್ಲಾ ಪ್ರಯೋಜನಗಳೂ ಈ ಕಮ್ಮಟಗಳಿಂದ ಆಗಿವೆ ಎಂದು ನನಗನ್ನಿಸುತ್ತದೆ.

— ೬ —

ಉಡುಪಿಯ RRCಯ ಮಹತ್ವವನ್ನು ಅನೇಕ ದೇಶೀಯ ವಿದ್ವಾಂಸರೂ, ವಿದೇಶೀಯ ವಿದ್ವಾಂಸರೂ ಗುರುತಿಸಿದ್ದಾರೆ. ಇದು ಭಾರತದ ಅತ್ಯುತ್ತಮವಾದ Folklore archives ಎಂಬುದು ಈಗಾಗಲೇ ಪ್ರಸಿದ್ಧವಾಗಿರುವ ವಿಷಯವಾಗಿದೆ. ಈ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಎಲ್ಲರ ಅಭಿಪ್ರಾಯಗಳನ್ನೂ ಇಲ್ಲಿ ಕೊಡಲು ಸಾಧ್ಯವಾಗದಿರುವುದರಿಂದ ಪ್ರಾತಿನಿಧಿಕವಾದ ಕೆಲವನ್ನು ಮಾತ್ರ ಕೊಟ್ಟಿದ್ದೇನೆ:

ಡಾ। ದೇ. ಜವರೇಗೌಡ: "The work done at this centre opens a window to the infinite variety and complexity, amazing vibrancy and brilliance

of the Folkworld. The committed Researches of this centre will surely attract Folklore Scholars from all over the world to benefit from their archives".

ಡಾ। ಜಿ. ಎಸ್. ಶಿವರುದ್ರಪ್ಪ: "Achivements of the RRC at Udupi strike wonder. I am sure under Prof. Bhat's leadership the centre will shape Indian Folklore into a modern scientific discipline".

ಡಾ॥ ಜಿ. ಶಂ. ಪರಮಶಿವಯ್ಯ "I have no doubt that RRC will develop into a great centre of Folk Arts Research in our country."

ಪ್ರೊ॥ ಲೌರಿ ಹಾಂಕೋ: "I think this is an excellent case of Audio-Visual Documentation may be well ahead of my institute in Turku and certainly well ahead of Folklore Archives in Helsinki because they still live in the Audio age. Going over to Video is very important. Now we have the super VHs. I think this will be a real breakthrough for good quality which can be preserved for times to come. So in your orientation to important forms like Yakshagana, Bhutaradhana and number of other things, I think it is bascially sound. The next step of course will be critical: That is how do you work for the recycling of the material so that both the Academic community in various parts of the world and then obvious use in cultural exchanges".

ಪ್ರೊ। ಆಲನ್ ಡಂಡೆಸ್: "This is a magnificent place, a marvellous institution and this centre is doing unique work, not only for this region but for the whole India. The Tulu Project is a magnificent project in its own way. The audio-visual materials here are splendid and I hope they do not stop; they must continue; they must make this material available for India and all the world. These audio visual tapes could be shown on Television everywhere in the world".

ಪ್ರೊ॥ ಪೀಟರ್ ಜೆ ಕ್ಲಾಸ್: "This is perhaps the finest example in all of India, may perhaps one of the finest in the world. You can see here what modern Folklore Archives should be. It is really an ideal centre which Prof. Bhat is building with this colleagues. I have enormous respect and admiration for Prof. Haridas Bhat. He has tremendous vision, tremendous energy, tremendous wisdom and has set a clear model for everyone else in developing RRC and it has grown into something of envy of any researcher coming to India. And I feel I am in an extremely privileged position. All my western colleagues would love to be able to come to India and do Research, not only restricting one's contacts with the Folk but having a whole set of colleagues to work with, with the same interests and same concerns· The team work that can be done is absolutely wonderful. It is just fantastic. No other Folklorist or Anthropologist working in any other part of India has this tremendous resource.

And one has to mention S.A. Krishnaiah and his tremendous energy and efforts with which he has developed the contents of the RRC. Haridasa Bhat provided the oppurtunity, the vision. the guidance and so forth but S.A. Krishnaiah has turned out that to what we find today".

ಪ್ರೊ|| ಪ್ರೊವಾಚೆಕ್: "The Archives you are developing will become one of the treasure houses of Karnataka. I hope that your work can set a shining example and other areas of India will be able to follow your example".

ಪೀಟರ್ ಬ್ರೂಕ್: "The centre has marvellous possibilities and judging by the beautiful work that its collaborators have already achived, I am sure it is haa very valuable future".

ಬಿ. ವಿ. ಕಾರಂತ: "Fantastic collection. Very useful coverage. These materials are useful for authentic comparative study of rituals. Really I wish to be a part of the activities here".

ಎಂ. ವಿ. ಕಾಮತ್: "The work done by the team of researchers is unique, dedicated and splendid. meritorius and never to be forgotten. I am glad to be here to see what has been done. My best wishes to the entire Staff".

ಡಾ. ರಾಜಾರಾಮಣ್ಣ: "I was most excited seeing the rural ritual forms which constitute the backbone for a future art. The care with which this is being studied and understood deserves our admiration".

ಈ ಅಭಿಪ್ರಾಯಗಳನ್ನು ಗಮನಿಸಿದಾಗ RRCಯ ಮಹತ್ವ ಹಾಗೂ ಅದನ್ನು ಬೆಳೆಸುವುದರಲ್ಲಿ ಪ್ರೊ|| ಕು.ಶಿ ಹರಿದಾಸ ಭಟ್ಟರು ವಹಿಸಿರುವ ಪ್ರಮುಖ ಪಾತ್ರ ಸ್ಪಷ್ಟವಾಗುತ್ತದೆ. ಈ ಸಂಸ್ಥೆಗೆ ನೆರವು ನೀಡಿದ್ದು Ford Foundation. ಈ ಸಂಸ್ಥೆಯ ಪ್ರತಿನಿಧಿ RRCಯ ಬಗ್ಗೆ ಹೇಳುವ ಮಾತುಗಳಿಂದ ಈ ಲೇಖನವನ್ನು ಮುಗಿಸಬಹುದು:

"RRC is remarkable in everyway - its documentation is of the highest calibre, its cataloguing is systematic...... but most importantly, all the work which is done here is good because the people who work on the project are remarkable. Their caring and their commitment is what makes RRC special".

ವಿಲಾಸಿ ಅವರು ಹೇಳುವ ಮಾತು ನಿಜ. ಸಂಸ್ಥೆಗಳನ್ನು ರೂಪಿಸುವವರು ಕೊನೆಗೂ ವ್ಯಕ್ತಿಗಳೇ. RRCಗೆ ಸಂಬಂಧಿಸಿದ ಎಲ್ಲರಲ್ಲೂ ಪ್ರಾಮಾಣಿಕತೆ. ಶ್ರದ್ಧೆ. ಕರ್ತವ್ಯ ನಿಷ್ಠೆ ಕಂಡು ಬರುತ್ತದೆ. ಇದಕ್ಕೆಲ್ಲಾ ಮುಖ್ಯ ಕಾರಣರಾದ ವ್ಯಕ್ತಿ ಪ್ರೊ|| ಕು. ಶಿ. ಹರಿದಾಸ ಭಟ್ಟರು. ಅವರ ನೇತೃತ್ವದಲ್ಲಿ RRCಇನ್ನೂ ಹೆಚ್ಚಿನ ಸಾಧನೆಗಳನ್ನು ಮಾಡುವಂತಾಗಲಿ ಎಂದು ಆಶಿಸುತ್ತೇನೆ. *

ಕುಶಿಯಂಥವರು ಕುಶಿಯೊಬ್ಬರೆ

—ಡಾ. ನಿ. ಮುರಾರಿ ಬಲ್ಲಾಳ

ನಾನು ಕುಶಿಯವರ ವಿದ್ಯಾರ್ಥಿ ಅಲ್ಲ. ಆದರೆ ನಾನು ವಿದ್ಯಾರ್ಥಿ ಆಗಿದ್ದಾಗಲೇ ನನಗೆ ಕುಶಿಯವರನ್ನು ಬಹಳ ಹತ್ತಿರದಿಂದ ಪರಿಚಯ ಮಾಡಿಕೊಳ್ಳುವ ಸಂದರ್ಭ ಬಂದಿತ್ತು. 1973ರಲ್ಲಿ ನಾನು ಮೈಸೂರಲ್ಲಿ ಓದುತ್ತಿದ್ದಾಗ, ಮಣಿಪಾಲದಲ್ಲಿ ಡಾ॥ ಟಿ.ಎಂ.ಪೈಯವರ ವಿಚಾರಧಾರೆಯಾದ 'ತೆರಿಗೆ ರಹಿತ ಸಮಾಜ'ದ ಮೇಲೆ ರಾಜ್ಯಮಟ್ಟದ ವಿಚಾರಗೋಷ್ಠಿಯೊಂದು ನಡೆದಿತ್ತು. ಅಂತಾರಾಷ್ಟ್ರೀಯ ಖ್ಯಾತಿಯ ಡಾ॥ ಬ್ರಹ್ಮಾನಂದರಂತಹ ಆರ್ಥಿಕತಜ್ಞರು ಆ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದ್ದರು. ಆ ವಿಚಾರ ಗೋಷ್ಠಿಯ 'ನಡಾವಳಿ ಸಂಗ್ರಾಹಕ'(rapporteur) ಕೆಲಸವನ್ನು ಕುಶಿಯವರು ನನಗೆ ವಹಿಸಿದ್ದರು. ಸೆಮಿನಾರ್ ಚೆನ್ನಾಗಿಯೇ ನಡೆಯಿತು. ಆ ಸೆಮಿನಾರಿನ ನಡಾವಳಿಯನ್ನು ಹೇಗಾದರೂ ಬರೆದರೆ ಆಯಿತು ಅಂತ ಸ್ವಲ್ಪ ಉದಾಸೀನ ಮಾಡಿದ್ದೆ. ಎರಡೇ ದಿನಗಳಲ್ಲಿ ಕುಶಿಯವರಿಂದ ಫೋನು ಕರೆ. 'ಯಾವಾಗ ಕೊಡುತ್ತೀರಿ' ಅಂತ ಕೇಳಿದರು. ಅವರ ಮಾತಿನಲ್ಲಿ ಪಸೆಯೇ ಇರಲಿಲ್ಲ. ಉತ್ತರಿಸಲು ನನ್ನ ನಾಲಗೆಯಲ್ಲೂ ಪಸೆಯಿಲ್ಲದಾಯಿತು. ಎರಡು ದಿನಗಳಲ್ಲಿ ಮುಗಿಸುವೆನೆಂದು ಉತ್ತರಿಸಿ ಜಾರಿಕೊಂಡೆ. ಮೂರನೇ ದಿನ ಮತ್ತೆ ಫೋನು ಕರೆ. 'ಇದು ಕೆಲಸ ಮಾಡುವ ಲಕ್ಷಣವಲ್ಲ' ಅಂತ ಬೈಗಳು ಬೇರೆ. ಈ ಮಾತು ಕೇಳಿ ಬಹಳ ಬೇಜಾರಾಯಿತು. ಒತ್ತಟ್ಟಿಗೆ ಕೂತು ಎರಡೇ ದಿನಗಳಲ್ಲಿ ಬರೆದು ಮುಗಿಸಿದೆ. ನಾನು ಬರೆದು ಕೊಟ್ಟದ್ದನ್ನು ಎರಡೇ ದಿವಸಗಳಲ್ಲಿ, ಪುಸ್ತಕ ರೂಪದಲ್ಲಿ ಅಚ್ಚು ಹಾಕಿಸಿ ನನಗೊಂದು ಪ್ರತಿ ನೀಡಿ ಅವರು ನನ್ನ ಬೆನ್ನು ತಟ್ಟಿದರು. ಇದು ಕುಶಿಯವರ ಕಾರ್ಯವೈಖರಿ.

ಅಂದಿನಿಂದ ಇಂದಿನವರೆಗೆ ಹೆಜ್ಜೆಹೆಜ್ಜೆಗೂ ನನ್ನ ಎಲ್ಲಾ ಚಟುವಟಿಕೆಗಳಲ್ಲೂ ನನ್ನನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದಾರೆ. ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ಯಾವುದೇ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಪ್ರಬಂಧ ಅಥವಾ ಲೇಖನ ಅವರ ಗಮನಕ್ಕೆ ಬಂದ ತಕ್ಷಣ ಅದನ್ನು ಪ್ರತಿ ತೆಗೆದು ನನಗೆ ಕಳಿಸಿ ಕೊಟ್ಟಾರು. ಉಡುಪಿಯಿಂದ ಮಣಿಪಾಲಕ್ಕೆ ಬಂದಾಗಲೆಲ್ಲ ನಾನು ಉದ್ಯೋಗದಲ್ಲಿರುವ ಬ್ಯಾಂಕು ಕಛೇರಿಗೆ ಬಂದು. ಎರಡನೇ ಮಾಳಿಗೆಯಲ್ಲಿರುವ ನನಗೆ ಕೆಳಗಿನಿಂದಲೇ ಹೇಳಿ ಕಳಿಸಿಯಾರು. ನನ್ನ ಜತೆ ಕೆಲಸವೇ ಇರಬೇಕೆಂತ್ತಿಲ್ಲ. ನನ್ನ ಜತೆ ಸ್ವಲ್ಪ ಕೂತು ಹರಟೆಹೊಡೆದು ನನ್ನ ಚಟುವಟಿಕೆಗಳ ಬಗ್ಗೆ ಆಸಕ್ತಿಯಿಂದ ಕೇಳುವುದು ಅವರಿಗೊಂದು ಖುಷಿ. ತನ್ನ ಯೋಜನೆಗಳನ್ನೆಲ್ಲ ನನ್ನೊಡನೆ ಸುಮ್ಮನೆ ಕೂತು ಚರ್ಚಿಸಿಯಾರು. ನನ್ನ ಗೆಳೆಯರಾದ ವಿಜಯನಾಥ ಶೆಣೈ. ಬೊಳುವಾರರ ಜತೆ ಕೂಡಿ ಕಾಫಿ ಕುಡಿದು ಹೋದಾರು.

ಸಭೆ - ಸಮ್ಮೇಳನ- ವಿಚಾರಗೋಷ್ಠಿ - ಸಾಂಸ್ಕೃತಿಕ ಉತ್ಸವ - ಅಂತಾರಾಷ್ಟ್ರೀಯ ಕಾರ್ಯಾಗಾರಗಳನ್ನು ಯೋಜಿಸುವಲ್ಲಿ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಬೆಳೆಸಿಕೊಂಡವರು ಕುಶಿ. ಅವರು ನಡೆಸುವ ಎಲ್ಲವೂ ಅಚ್ಚುಕಟ್ಟು, ಎಲ್ಲವೂ ಸುಂದರ. ನಾವು ಗೆಳೆಯರೆಲ್ಲ ಸೇರಿ ಒಮ್ಮೆ ನಾಟಕ ಮತ್ತು ರಂಗಕೃತಿಯ ಬಗ್ಗೆ ರಾಜ್ಯ ಮಟ್ಟದ ವಿಚಾರಗೋಷ್ಠಿಯನ್ನು ಇಟ್ಟುಕೊಂಡಿದ್ದೆವು. ನಮ್ಮ ಗೋಷ್ಠಿಯ ಸಕಲಸಿದ್ಧತೆಗಳಲ್ಲಿ ಮಾರ್ಗದರ್ಶಕರಾಗಿ ನಿಂತು. ನಮ್ಮನ್ನೆಲ್ಲ ಪ್ರೋತ್ಸಾಹಿಸಿ. ನಾವು ಕರೆದ ಲಂಕೇಶ್-ಕಾರ್ನಾಡ್-ಕುರ್ತಕೋಟಿ-ಜಿ.ಬಿ.ಜೋಶಿ ಮೊದಲಾದ ಅತಿರಥ-ಮಹಾರಥರನ್ನು ಬರುವಂತೆ ಮಾಡಿದ್ದು ಹರಿದಾಸ ಭಟ್ಟರು. ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ನೆಹರೂ ವಿಚಾರಗೋಷ್ಠಿಯಲ್ಲಿ ನಾವು ಅವರನ್ನೇ ಮುಂದಿಟ್ಟಿದ್ದೆವು. ಗೋಷ್ಠಿಯ ರೂಪರೇಖೆಗಳ ಬಗ್ಗೆ ಚರ್ಚೆ ನಡೆಯುವಾಗ, ತರುಣರು ಅತೀ ಉತ್ಸಾಹದಿಂದ ಗಗನದಲ್ಲೇ ವಿಹರಿಸುತ್ತಿದ್ದರೆ, ಕುಶಿಯವರು ತನ್ನ ಶ್ರೀಮಂತ ಅನುಭವದಿಂದ ನಮ್ಮನ್ನು ಎಚ್ಚರಿಸುತ್ತಾ ನಮ್ಮ ಕಾಲನ್ನು ನೆಲಕ್ಕೆ ಅಂಟಿಸಿಯಾರು. ಎಲ್ಲೂ ನಮ್ಮ ಉತ್ಸಾಹ ಕುಗ್ಗದಂತೆ, ಆದರೂ ನಾವು ತೀರ ಹುಚ್ಚು ಉತ್ಸಾಹದಲ್ಲೇ ತಲ್ಲೀನರಾಗದಂತೆ ಎಚ್ಚರಿಸುತ್ತಾ ನಮ್ಮನ್ನು ಸಂಭಾಳಿಸಿಕೊಂಡು ಹೋಗುವ ಅವರ ಜಾಣ್ಮೆ, ಕುಶಿಯವರಿಂದ ಮಾತ್ರ ಕಲಿಯುಂಥದ್ದು.

ಸ್ವತಃ ಸಾಹಿತಿಯಾದ ಕುಶಿ, ಕಳೆದ 30 ವರುಷಗಳಲ್ಲಿ. ಸಾಹಿತ್ಯ-ಸಂಗೀತ-ಕಲೆ-ನಾಟಕ ಮುಂತಾದ ವಿವಿಧ ಪ್ರಾಕಾರಗಳಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ವಿದ್ವಾಂಸರನ್ನು ಉಡುಪಿಯಂಥ ಪುಟ್ಟ ಊರಿಗೆ ಕರೆಸುತ್ತಾ. ಉಡುಪಿಯ ಜನಕ್ಕೆ ಸಾಂಸ್ಕೃತಿಕ ಚಟುವಟಿಕೆಗಳ ಮೃಷ್ಟಾನ್ನ ಭೋಜನ ಉಣಬಡಿಸಿದವರು. ಉಡುಪಿಯ ಹೆಸರನ್ನು ಭಾರತದ ಸಾಂಸ್ಕೃತಿಕ ಭೂಪಟದಲ್ಲಿ ಚಿರಸ್ಥಾಯಿಯಾಗಿ ಮಾಡಿದವರು. ಅದಕ್ಕಾಗಿಯೇ ಊರ-

ಪರವ್ಹಾರ ವಿದ್ವಾಂಸರು. ಉಡುಪಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಸಾಂಸ್ಕೃತಿಕ ಮುಖ್ಯ ಪಟ್ಟಣ ಅಂತ ಕರೆದರು.

ಸುಪ್ರಸಿದ್ಧ ನಾಟಕಕಾರರನ್ನು ಪ್ರತಿ ವರುಷವೂ ಕರೆಸಿ, ಅವರಿಂದ ನಾಟಕಗಳನ್ನು ಆಡಿಸಿ, ಉಡುಪಿಯ ಪ್ರೇಕ್ಷಕರ ನೋಡುವ ಕಣ್ಣುಗಳನ್ನು ಶ್ರೀಮಂತಗೊಳಿಸಿದವರು ಕುಶಿ. ಉಡುಪಿಯ ಸಾಮಾನ್ಯ ಪ್ರೇಕ್ಷಕರು ಕೂಡ ನಾಟಕದ ಬಗ್ಗೆ ಎಂಥ ಸಹೃದಯತೆ ಬೆಳೆಸಿಕೊಂಡಿದ್ದಾರೆಂದರೆ. "ಅವರು ಈ ನಾಟಕ ಚೆನ್ನಾಗಿಲ್ಲ ಅಂತ ಅಂದರೆ ಅದು ನಿಜಕ್ಕೂ ಒಳ್ಳೆಯ ನಾಟಕ ಅಲ್ಲ ಅಂತ ತೀರ್ಮಾನ ಮಾಡಿಬಿಡಬಹುದು" ಅಂತ ನನ್ನ ಒಬ್ಬ ಬೆಂಗಳೂರು ಗೆಳೆಯ ಅಂದದ್ದುಂಟು.

ಕುಶಿಯಂಥ ವಿಶಿಷ್ಟ ವ್ಯಕ್ತಿಯನ್ನು ಪಡೆದ ಉಡುಪಿ ನಿಜಕ್ಕೂ ಪುಣ್ಯಶಾಲಿ. ಈ ಸಣ್ಣ ಊರಲ್ಲಿ ಕೂತೇ ನಾವು ವಿವಿಧ ಮಜಲುಗಳಲ್ಲಿ ಪ್ರಸಿದ್ಧರಾದ ಜನರನ್ನು ಕೇಳುವ. ನೋಡುವ. ಅನುಭವಿಸುವ ಯೋಗವನ್ನು ನಮಗೆ ಒದಗಿಸಿ. ನಮ್ಮ ನೋಡುವ ಕಣ್ಣನ್ನು ಕೇಳುವ ಕಿವಿಯನ್ನು ನಮ್ಮ ಸಮಸ್ತ ವಿಚಾರಧಾರೆಯನ್ನು ಶ್ರೀಮಂತಗೊಳಿಸಿದ ಕುಶಿಯಂಥವರು ಕುಶಿಯೊಬ್ಬರೇ.

—○—

'ವಿಶ್ವಮಾನವ'

— ಬಿ. ಆರ್. ನಾಗೇಶ್

ಇಂಥ ಸನ್ಮಾನ ಸಮಾರಂಭಗಳಲ್ಲಿ ನಡೆಯುವ ಕಾರ್ಯಗಳು ಎರಡು: ಒಂದು – ವ್ಯಕ್ತಿಯೊಬ್ಬನಿಗೆ ಸನ್ಮಾನ; ಎರಡನೆಯದಾಗಿ ಉಳಿದವರ ಆತ್ಮಶೋಧ. ನಾನಿಲ್ಲಿ ಮಾತನಾಡಲು ಒಪ್ಪಿಕೊಂಡು ಬಂದಿರುವುದು ಒಂದನೆಯದರ ಕುರಿತಾಗಿ ನನಗೆ ತಿಳಿದಷ್ಟನ್ನು ಹೇಳಲು ಹಾಗೂ ಎರಡನೆಯದರ ಕುರಿತಾಗಿ ನನ್ನಂಥವರೆಲ್ಲರ ಅಸಹಾಯಕತೆಯನ್ನು ವ್ಯಕ್ತಪಡಿಸಲು. ಸನ್ಮಾನಿತರಾಗುವ ಶ್ರೀ ಕುಶಿಯವರಿಗಿಂತ ನಾವು ಅಸಹಾಯಕರು. ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ. ಸನ್ಮಾನಿತರಿಂದ ನಾವು ಸಾಕಷ್ಟು ಅಸಮರ್ಥರು. ನಮ್ಮ ಅಸಹಾಯಕತೆ, ಅಸಮರ್ಥತೆ – ಶ್ರೀ ಕುಶಿಯವರ ಸನ್ಮಾನದ ನಕಾರಾತ್ಮಕ ರೂಪ ತಾಳಬೇಕೆಂದೇನಿಲ್ಲ – ಕಾರಣ ನಮ್ಮ ಮುಂದೆ ಇನ್ನೂ ಸಂದರ್ಭಗಳಿವೆ, ಆಹ್ವಾನಗಳಿವೆ. ಅವರಾದರೋ ಒಂದು ಹಂತ ತಲುಪಿದವರಾಗಿದ್ದಾರೆ. ಆದರೆ, ಹಂತ ತಲುಪಿದ್ದೇನೆ, ವಿಶ್ವಮಾನವ ಪ್ರಶಸ್ತಿ ತನಗೆ ಬಂದುದೇ ತನ್ನ ಕಾರ್ಯಾಚರಣೆಯ ಕೊನೆಯ ಮಜಲಾಗುತ್ತದೆಂದು ಶ್ರೀ ಕುಶಿಯವರು ಎಂದೆಂದೂ ಭಾವಿಸಲು ಸಾಧ್ಯವಿಲ್ಲ. ಕಾರಣ ಅವರ ಕ್ರಿಯಾಶೀಲತೆಗೆ, ಶಕ್ತಿ ಸಾಮರ್ಥ್ಯಗಳಿಗೆ ಅದು ಒಗ್ಗದ ವಿಚಾರ. ಶ್ರೀ ಕುಶಿಯವರ ಕಾರ್ಯವ್ಯಾಪ್ತಿ ಎಂಥವರನ್ನಾದರೂ ಬೆರಗುಗೊಳಿಸುವಂಥದ್ದು. ಅವರು ಬರೆದ ಒಂದು ಪುಸ್ತಕಕ್ಕೆ ಪ್ರಶಸ್ತಿ ದೊರೆಯಿತೆಂದು ತಿಳಿಯಬಲ್ಲಷ್ಟು ನೀರಸ ಮನಸ್ಸಿನವನು ನಾನಲ್ಲ. ಅವರ ಇದುತನಕದ ಜೀವನದ ಒಟ್ಟು ಸಾಧನೆಗೆ ಸರಿಸಮಾನವಾಗಿ ತೂಗಬಲ್ಲ ಪ್ರಶಸ್ತಿಯಾಗಿ ಇದು ಬಂದಿದೆ ಎಂದು ನನ್ನ ಅನಿಸಿಕೆ. ಇವೆಲ್ಲಕ್ಕೂ ಕಾರಣವಾಗಿ ಅವರಿಗೆ ಸಿಕ್ಕಿದ ಪ್ರೋತ್ಸಾಹ, ಹಲಬಗೆಯಿಂದ ಒದಗಿ ಬಂದ ಸ್ನೇಹಸಹಾಯ – ಇವು ನಮ್ಮೆಲ್ಲರ ಪಾಲಿಗೂ ಸಿಗಬಲ್ಲವು ಎಂದು ತಿಳಿಯುವಷ್ಟು ಅಜ್ಞಾನಿ ನಾನಲ್ಲ.

ಮಣಿಪಾಲದ ಪೈಬಂಧುಗಳು ಈ ಜಿಲ್ಲೆಯಲ್ಲಿ ಮೌನಕ್ರಾಂತಿಯನ್ನು ಮಾಡಿದ ಸೀಮಾಪೂಜನರು. ಈ ಕ್ರಾಂತಿ ಬಹುಶಃ ವಿದ್ಯಾಕ್ಷೇತ್ರದಲ್ಲಿ ಹಾಗೂ ಆರ್ಥಿಕರಂಗದಲ್ಲಾದಷ್ಟು ಸ್ಪಷ್ಟವಾಗಿ ಉಳಿದ ಸಾಮಾಜಿಕ ಸ್ತರಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಇದಕ್ಕೆ ಕಾರಣ ಪೈಬಂಧುಗಳಿಗೆ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಶ್ವಾಸ ಇರಲಿಲ್ಲವೆಂದಲ್ಲ. ಬಹುಶಃ ಆರ್ಥಿಕ. ವಿದ್ಯಾಕ್ಷೇತ್ರದ ಕೆಲಸವೂ ಹುಟ್ಟಿದ ಪರಿಣಾಮವಾಗಿ, ಸಾಂಸ್ಕೃತಿಕ ಕ್ಷೇತ್ರದ ಕಡೆಗೆ ಕೊಡಬಹುದಾದ ಗಮನವನ್ನು ಅವರು ಕೊಡದೆ ಹೋಗಿರಬಹುದು. ಈ ಒಂದು ಊನವನ್ನು ಪೈಬಂಧುಗಳು ಬಹಳ ಸಮರ್ಪಕವಾಗಿ ತಿದ್ದಿಕೊಂಡದ್ದು ಶ್ರೀ ಕುಶಿಯವರನ್ನು ಎಂ.ಜಿ.ಎಂ.ನ ಪ್ರಾಂಶುಪಾಲರಾಗಿ ನೇಮಕ ಮಾಡಿಕೊಂಡಾದ ಬಳಿಕವೇ.

ಶ್ರೀ ಕುಶಿಯವರು ಪ್ರಾಂಶುಪಾಲರಾಗುವ ಮೊದಲು, ಈ ಜಿಲ್ಲೆಯ ಸಾಂಸ್ಕೃತಿಕ ಕೇಂದ್ರ ಮಂಗಳೂರಾಗಿತ್ತು. ಸಾಂಸ್ಕೃತಿಕ ಕೇಂದ್ರ ಮಂಗಳೂರಾಗಿದ್ದರೂ, ಸ್ಮರಣೀಯ ಕಾರ್ಯಕ್ರಮಗಳೇನೂ ಅಲ್ಲಿ ಜರಗುತ್ತಿರಲಿಲ್ಲ. ಹಾಗಾಗಿ ಶ್ರೀ ಕುಶಿಯವರು ಎಂ.ಜಿ.ಎಂ. ಪ್ರಾಂಶುಪಾಲರಾದೊಡನೆಯೇ ಉಡುಪಿ ಸಾಂಸ್ಕೃತಿಕ ಕೇಂದ್ರವಾಗಿ ಒತ್ತು ಪಡೆಯುವಂತಾಯಿತು. ಇದರೆಡೆಯಲ್ಲಿ ಮಣಿಪಾಲದ ಪೈಬಂಧುಗಳಿಗೂ, ಸಾಂಸ್ಕೃತಿಕವಾಗಿ ತೊಡಗಿಸಬೇಕಾದ ಹಲವಾರು ಕಾರ್ಯಕ್ರಮಗಳನ್ನು ಶ್ರೀ ಕುಶಿಯವರ ಮೂಲಕವೇ ನೆರವೇರಿಸುವಂತಾಯಿತು. ಇದೆಲ್ಲದರ ಒಟ್ಟರ್ಥ ಇಷ್ಟು: ಈ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದಲ್ಲಿ ಶ್ರೀ ಕುಶಿಯವರು ಎಂ.ಜಿ.ಎಂ.ನ ಪ್ರಾಂಶುಪಾಲರಾದದ್ದು ಒಂದು ಮುಖ್ಯ ಘಟನೆ.

ಜಿಲ್ಲೆಯಲ್ಲಿ ಅದುತನಕ ಜಡವಾಗಿ ಬಿದ್ದಿದ್ದ ಅಥವಾ ಅಲ್ಲಲ್ಲಿ ಕಣ್ತೆರೆದು ನೋಡಿ, ಏನನ್ನೋ ಕನವರಿಸಿ ತಿರುಗೊಮ್ಮೆ ನಿದ್ದೆ ತೂಗಲು ಸಿದ್ಧಗೊಳ್ಳುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ಒಮ್ಮಿಂದೊಮ್ಮೆ ಎಚ್ಚರದ ಸ್ಥಿತಿ ಬಂದದ್ದು ಶ್ರೀ ಕುಶಿಯವರಿಂದಲೇ. ಸಂಗೀತ, ನಾಟಕ, ಜಾನಪದ, ಚಿತ್ರಕಲೆ, ನೃತ್ಯ – ಹೀಗೆ ಮನುಷ್ಯನ ಸೂಕ್ಷ್ಮ ಮನಸ್ಸಿಗೆ ಬೇಕಾಗಬಲ್ಲ ಎಲ್ಲವನ್ನೂ ವಿವಿಧ ವೈವಿಧ್ಯಗಳ ಮೂಲಕ ಜನರಿಗೆ ತಲುಪಿಸಲು ಅವರು

---

* 26–8–89ರಂದು ಉದಯವಾಣಿ ಬಳಗದವರು ಕು.ಶಿ.ಯವರಿಗೆ "ವಿಶ್ವಮಾನವ" ಪ್ರಶಸ್ತಿ ಘೋಷಣೆಗೊಂಡದ್ದಕ್ಕಾಗಿ ಅವರಿಗಾಗಿ ನಡೆದ ಅಭಿನಂದನ ಸಮಾರಂಭದಲ್ಲಿ ಮಂಡಿಸಿದ ಪ್ರಬಂಧ.

ಮತ್ತು ಪ್ರಯತ್ನ ಅತ್ಯಗತ್ಯ. ಹಾಗಾಗಿ ಅವರನ್ನು ಜಿಲ್ಲೆಯ ಸಾಂಸ್ಕೃತಿಕ ಪುನರುತ್ಥಾನದ ಮೂಲಪುರುಷ ಎಂದು ಗುರುತಿಸಿಕೊಂಡರೆ ಅದೇನೂ ಉತ್ಪ್ರೇಕ್ಷೆಯಾಗಲಾರದು.

ಸಾಂಸ್ಕೃತಿಕ ಕಾರ್ಯಕ್ರಮಗಳೆಂದರೆ ಉತ್ಪತ್ತಿಗಿಂತ ವೆಚ್ಚವೇ ಹೆಚ್ಚು ಎಂದು ವ್ಯಾಖ್ಯಾನ. ಶ್ರೀ ಕುಶಿಯವರಲ್ಲಿ ಯೋಜನೆಗಳಿದ್ದವು. ಯೋಜನೆಗಳಿದ್ದವು – ಇದಕ್ಕೆ ತೂಕವಾಗಿ ಮುಂದೆ ಬಂದ ಪ್ರಬಂಧಗಳಿಗೆ ಆರ್ಥಿಕ ಸಹಾಯ ನೀಡಬಲ್ಲ ಚೈತನ್ಯವಿತ್ತು. ಇದರಿಂದಾಗಿ ಒಂದು ರೀತಿಯ ಸುಸಜ್ಜಿತ ಸಮತೋಲ ವಾತಾವರಣವನ್ನು ವಿದ್ಯಾವಂತ ಸಮಾಜದಲ್ಲಿ ನಿರ್ಮಾಣ ಮಾಡಬಲ್ಲ ಶಕ್ತಿ ಉಡುಪಿಯಿಂದಲೇ ತೊಡಗಿದಂತಾಯಿತು – ಈ ಎಲ್ಲಾ ಕೂಡು ಕೂಟಗಳ ಪರಿಣಾಮವಾಗಿ ಹುಟ್ಟಿಕೊಂಡಂತಾಯಿತು.

ಶ್ರೀ ಕುಶಿಯವರಂಥ ಪ್ರಾಜ್ಞರಿಗೆ, ಯೋಜನಾಬದ್ಧವಾಗಿ ಕೆಲಸ ಮಾಡಬಲ್ಲವರಿಗೆ, ಅತೀ ಅಗತ್ಯವಾಗಿ ಬೇಕಾಗಿದ್ದ ಒಂದು ಸಾಧನವೆಂದರೆ ಸಮರ್ಥವಾದ, ಉತ್ಪ್ರೇಕ್ಷೆ ಇಲ್ಲದ ಪ್ರಚಾರ. ಇಂಥ ಪ್ರಚಾರ ಉದಯವಾಣಿಯ ಮೂಲಕ ಅವರಿಗೆ ದೊರೆಯಿತು. ಇಂಥ ಪ್ರಚಾರದಿಂದ ಶ್ರೀ ಕುಶಿಯವರ ಕಾರ್ಯಸಿದ್ಧಿಯ ಬಗ್ಗೆ ಸಮಾಜಕ್ಕೆ ಸ್ಪಷ್ಟ ಚಿತ್ರ ಲಭಿಸುವುದರೊಂದಿಗೆ, ಪತ್ರಿಕೆಗೆ ಒಂದು ಬಗೆಯ ಸಾಂಸ್ಕೃತಿಕ ಬಣ್ಣವೂ ಬಂದಂತಾಯಿತು – ಎಂಬುದನ್ನು ಯಾರೂ ಮರೆಯುವಂತಿಲ್ಲ.

ಇದೇ ಸಂದರ್ಭದಲ್ಲಿ ಶ್ರೀ ಕುಶಿಯವರು ಉದಯವಾಣಿಯ ಲೋಕಾಭಿರಾಮ ಅಂಕಣದಲ್ಲಿ ಸಾಧಿಸಿದ ಅಂಶವನ್ನು ಗುರುತಿಸಿಕೊಳ್ಳುವುದು ಒಳ್ಳೆಯದು.

ಶ್ರೀ ಕುಶಿಯವರ ಭಾಷೆ ನಿಜವಾಗಿಯೂ ರೂಪಕಶಕ್ತಿ ಉಳ್ಳದ್ದು. ಅವರ ವ್ಯಂಗ್ಯ, ಕಟಕಿ, ಹಾಸ್ಯ ಶಬ್ದದಾಟಗಳು – ಕನ್ನಡದ ಇಂದಿನ ಯಾವ ಲೇಖಕರಲ್ಲಿಯೂ ಕಂಡು ಬರದ ಗುಣಗಳು. ಆದರೆ ಇಲ್ಲಿಯೂ ಶ್ರೀ ಕುಶಿಯವರು ಜಾಗ್ರತೆವಹಿಸುತ್ತಾರೆ. ಆರ್ಥಿಕ ವಿಚಾರಗಳ ಕುರಿತಾದ, ಪ್ರದರ್ಶನ ಕಲೆಗಳ ಕುರಿತಾದ, ಸಾಮಾನ್ಯ ಜನಜೀವನದ ಕುರಿತಾದ, ಪುಸ್ತಕಗಳ ಕುರಿತಾದ ಲೇಖನಗಳು ವಿಚಾರಪೂರ್ಣ ಆಗಿರುತ್ತವೆ. ಇಂಥ ಬರಹಗಳಲ್ಲಿ ಕಟಕಿ–ವ್ಯಂಗ್ಯದ ಹಾಸ್ಯ ಇರುವುದಿಲ್ಲ. ಆದರೆ ಸಾಮಾಜಿಕ ಸ್ವಾಸ್ಥ್ಯದ ಕುರಿತಾಗಿ ಅವರು ಲೋಕಾಭಿರಾಮದಲ್ಲಿ ಬರೆಯುವ ಬರಹಗಳೆಲ್ಲವೂ ಅತಿತೀಕ್ಷ್ಣದ ವ್ಯಂಗ್ಯ, ಕಟಕಿ, ಬುದ್ಧಿಚಾತುರ್ಯಗಳಿಂದ ಕೂಡಿರುತ್ತವೆ. ಇಂಥ ವ್ಯಂಗ್ಯದ ಹಿಂದಿರುವ ಕಾವು, ಸೂಕ್ಷ್ಮವಾದ ವಿಚಾರವುಳ್ಳ ಎಂಥ ವಿದ್ವಾಂಸರನ್ನಾದರೂ ಬೆರಗುಗೊಳಿಸುವಂಥದ್ದಾಗಿರುತ್ತದೆ. ಇವರು ಶಬ್ದಗಳೊಡನೆ ಆಡುವ ಕಸರತ್ತಿಗೆ ಅವರಿಗೆ ತಿಳಿದಿರುವ ಇತರ ಭಾಷೆಗಳ ಜ್ಞಾನವೂ ಅನನ್ಯವಾದ ಪೂರ್ಣಶಕ್ತಿಯಾಗಿ ಬರುವುದು ಎಲ್ಲರಿಗೂ ತಿಳಿದ ವಿಚಾರ.

ಜನಸಾಮಾನ್ಯರನ್ನು ಹೊಡೆದೆಬ್ಬಿಸುವುದು ಇಂದಿನ ಯಾಂತ್ರಿಕ ಯುಗದಲ್ಲಿ, ಸಂವೇದನಾ ಶಕ್ತಿ ಕಳಕೊಂಡ ಈ ಯುಗದಲ್ಲಿ ಸಾಧ್ಯವಿಲ್ಲದ ಮಾತು. ಯಾರಾದರೂ ತನಗಿಂತ ಬುದ್ಧಿವಂತನೆಂದು ಗುರುತಿಸಿಕೊಳ್ಳಲು ಯಾರೂ ಸಿದ್ಧರಿಲ್ಲ ಈಗ. ಸಮಾಜದ ಸ್ಥಿತಿಗತಿಯೂ ಇದಕ್ಕೆ ಕಾರಣವಾಗಿರಬಹುದು; ಅಥವಾ ಬಿಬ್ಬಿನಲ್ಲಿರುವ ಔನ್ನತ್ಯ ಗುಣಗಳ ಅರ್ಥಮಾಡಿಕೊಳ್ಳಬಲ್ಲ ಶಕ್ತಿ ಉಳಿದವರಲ್ಲಿ ಇಲ್ಲದೆ ಇರಬಹುದು. ಅಂದರೆ ಶ್ರೀಯವರು ಚಿತ್ರಿಸಿದ ಸಮಾಜ ಸುಧಾರಣೆ ಆದೀತು, ತಾನು ಮಾಡಿದ ತಪ್ಪುಗಳ ಕಡೆಗೆ ಸಮಾಜದ ಗಮನ ಹರಿದೀತು – ಎಂದು ವಿಶ್ವಾಸಪೂರ್ವಕವಾಗಿ ಹೇಳಬರುವಂತಿಲ್ಲವಾದರೂ, ಇಂಥ ತಪ್ಪೊಂದು ಸಮಾಜದಲ್ಲಿ ನಡೆಯುತ್ತದೆ ಎಂದು ಅವರು ಉಳಿದವರಿಗೆ ಬೊಟ್ಟು ಮಾಡಿ ತೋರಿಕೊಡಬಲ್ಲಷ್ಟು ಶಕ್ತಿಪೂರ್ಣ ಬರಹವನ್ನು ಲೋಕಾಭಿರಾಮದಲ್ಲಿ ಪ್ರಕಟಿಸುತ್ತಾರೆ.

ಶ್ರೀ ಕೆ.ಕೆ. ಹೆಬ್ಬಾರರ ಜೀವನದ ಚರಿತ್ರೆಗೆ ಸಂಬಂಧಿಸಿದಂತೆ ಈ ಸನ್ಮಾನ ಅವರಿಗೆ ಸಂದಿದೆ ಎಂದು ನಮಗೆಲ್ಲರಿಗೂ ಗೊತ್ತು. ಆ ಜೀವನ ಚರಿತ್ರೆಯ ಬರವಣಿಗೆಯ ಇತಿಮಿತಿಯ ಬಗ್ಗೆ, ಅಲ್ಲಿ ಉಪಯೋಗಿಸಿದ ಭಾಷೆಯ ಬಗ್ಗೆ, ಆ ಬರವಣಿಗೆ ಸಾಧಿಸಿಕೊಂಡ ವಿಚಾರಗಳ ಬಗೆಗೆ, ನಾನಿಲ್ಲಿ ಏನನ್ನೂ ಹೇಳಬಯಸುವುದಿಲ್ಲ. ಆದರೆ ಇದಕ್ಕಿಂತ ಹಿಂದೆಯೂ, ಶ್ರೀ ಕುಶಿಯವರು ಶ್ರೀ ಕೆ.ಕೆ. ಹೆಬ್ಬಾರರನ್ನು ಅರ್ಥಪೂರ್ಣವಾಗಿ ಕನ್ನಡಿಗರ ಎದುರಿಗೆ ತಂದು ನಿಲ್ಲಿಸಿದ ಸಂದರ್ಭ ಇದೆ. ಅದೇ ಡಾ॥ ದ.ರಾ. ಬೇಂದ್ರೆಯವರ "ಒಲವೆ ನಮ್ಮ ಬದುಕು" ಕವನ ಸಂಕಲನದಲ್ಲಿ ಶ್ರೀ ಕೆ.ಕೆ. ಹೆಬ್ಬಾರರ ರೇಖಾಚಿತ್ರಗಳನ್ನು ಅಳವಡಿಸಿಕೊಂಡಾಗ ಬಹಳ ಸುಂದರವಾಗಿ ಸೌಂದರ್ಯಾನುಭವವನ್ನೆ ಮೂಲದಲ್ಲಿರಿಸಿಕೊಂಡು ಪ್ರಕಟಗೊಂಡ ಕೃತಿ ಇದು. ವರಕವಿ ಬೇಂದ್ರೆಯವರ ಕವನಗಳೊಡನೆ ಶ್ರೀ ಕೆ.ಕೆ. ಹೆಬ್ಬಾರರ ರೇಖಾಚಿತ್ರಗಳು ಹೇಗೆ ಭಾವನಾತ್ಮಕವಾಗಿ ಕೂಡಿಕೊಳ್ಳುತ್ತವೆ. ಹೇಗೆ ಆ ರೇಖೆಗಳು ಬೇಂದ್ರೆಯವರ ಕವನದಲ್ಲಿರುವ ನವುರಾದ ಲಯದ ಸೊಗಸನ್ನು ಮೈಗೂಡಿಸಿಕೊಂಡಿವೆ – ಇದನ್ನು ವಿವರಿಸಿ ಹೇಳುವಂತಿಲ್ಲ; ಅನುಭವಿಸಿಯೇ ತೀರಬೇಕು. ನನ್ನ ಮಟ್ಟಿಗೆ ಶ್ರೀ ಕೆ.ಕೆ. ಹೆಬ್ಬಾರರ ಜೀವನವೃತ್ತಕ್ಕಿಂತ ಹೆಚ್ಚಿನ ಸೌಂದರ್ಯಾನುಭೂತಿಯನ್ನು ಬೇಂದ್ರೆ, ಹೆಬ್ಬಾರರ ಅನ್ಯೋನ್ಯ ಭಾವಸ್ಫುರಣಗಳ ಅಭಿವ್ಯಕ್ತಿಯಲ್ಲಿ ಕಾಣಬಹುದು. ಇಂಥ ಒಂದು ಯೋಜನೆ, ಅದರ ಹಿಂದಿರುವ ವಿಶಿಷ್ಟ ಗ್ರಹೀತ ಮನೋಸ್ಥಿತಿ – ಶ್ರೀ ಕು.ಶಿ. ಯವರಿಗೆ ಮಾತ್ರ ಸಾಧ್ಯ.

ಡಾ. ಕಾರಂತರು ಯಕ್ಷರಂಗದಲ್ಲಿ ಮಾಡಿದ ಕೆಲಸ ಟೀಕೆ ಟಿಪ್ಪಣಿಗೆ ಒಳಗಾದರೂ, ದೃಶ್ಯಾತ್ಮಕವಾಗಿ ಆದರಣೀಯವೇ. ಆದರೆ ಇಂಥ ಒಂದು ಕಲಾ ಚಟುವಟಿಕೆಯನ್ನು ಪ್ರಪಂಚದ ಹಲವು ದೇಶಗಳಿಗೆ ಪರಿಚಯ ಮಾಡಿಕೊಟ್ಟ ಭಾಗ್ಯದ ಬಹುಪಾಲು ಶ್ರೀ ಕುಶಿಯವರಿಗೆ ಸಲ್ಲಬೇಕೆಂಬುದೂ ನಿರ್ವಿವಾದ. ಈ ತಂಡವನ್ನು ಬೇರೆ ಬೇರೆ ದೇಶಗಳಿಗೆ ಕೊಂಡೊಯ್ಯುವುದು, ಕರೆದೊಯ್ಯುವ ಮೊದಲಿನ ಕೆಲಸಗಳು – ಇದೆಲ್ಲಾ ದುಸ್ತರ ಗಾತ್ರಗಳದ್ದಾಗಿರಬೇಕು. ಕನ್ನಡನಾಡಿನ ಈ ಕಲೆಯಲ್ಲಿ ವಿದೇಶಿಯರಿಗೆ ಆಸಕ್ತಿ ಹುಟ್ಟುವಂತೆ ಮಾಡಿದ ಮೂಲಪುರುಷ ಡಾ॥ ಕಾರಂತರಾದರೂ ವಿದೇಶಿಯರಲ್ಲಿ ಹಾಗೆ ಬೆಳೆದು ಬಂದ ಆಸಕ್ತಿಗೆ ನೀರೆರೆದು ಪೋಷಿಸಿದ ಕರ್ತವ್ಯ ಭಾಗ ಶ್ರೀ ಕುಶಿಯವರದೇ ಆಗಿತ್ತು. ಈಗ ಬರಿಯ ಔದಾರ್ಯದಿಂದ ಶ್ರೀ ಕುಶಿಯವರು ತನ್ನಿಂದೇನೂ ಆ ಕ್ಷೇತ್ರಕ್ಕೆ ಸೇವೆ ಸಂದಿಲ್ಲ ಎಂದು ಹೇಳಬಹುದಾದರೂ, ಅವರ ಕೆಲಸವನ್ನು ಗುರುತಿಸಿದವರು ಇರುವ ತನಕ ಅವರಿತ್ತಿರುವ ಸೇವೆಗೆ ಯಾವ ಕೊರತೆಯೂ ಬರಲಾರದು.

ಶ್ರೀ ಕುಶಿಯವರ ಇನ್ನೊಂದು ವಿಶಿಷ್ಟ ಗುಣವನ್ನು ಹೇಳಬಯಸುತ್ತೇನೆ. ಜನಪದದಂಥ ಕಲೆಯನ್ನೂ, ಬೂರ್ಜ್ವಾ ಕಲೆಯಾದ ಪೈಂಟಿಂಗನ್ನು ಒಟ್ಟೊಟ್ಟಾಗಿ ತನ್ನೆಡೆಗೆ ತೂಗಿ ನೋಡಿ ಇಟ್ಟುಕೊಂಡದ್ದು. ಕೋಲ ಕಟ್ಟುವ ನಲ್ಕೆಯವರೆಲ್ಲಿ – ಅಂತಾರಾಷ್ಟ್ರೀಯ ಖ್ಯಾತಿಯ ಕೆ. ಕೆ. ಹೆಬ್ಬಾರರೆಲ್ಲಿ? ಅವರಿಬ್ಬರಿಗೂ ಶ್ರೀ ಕುಶಿಯವರಲ್ಲಿ ಸ್ಥಾನವಿದೆ. ದುಡ್ಡಿಲ್ಲದ ಕಲೆಗೆ ಯಾವ ಸ್ಥಾನ ಇದೆಯೋ, ದುಡ್ಡಿನದೇ ಆದರೆ ಕಲೆಗೂ ಸ್ಥಾನವಿದೆ. ಇಂಥ ವಿರೋಧಾಭಾಸಗಳಿಂದ ಕೂಡಿದ ಕಲಾಪ್ರಕಾರಗಳನ್ನು ಅವರು ತನ್ನಲ್ಲಿ ಶ್ರದ್ಧೆ ಅಭಿಮಾನ ಪೂರಕವಾಗಿ ಇರಿಸಿಕೊಂಡದ್ದೆ ಅವರನ್ನು ಈ ಪ್ರಶಸ್ತಿಗೆ ಅರ್ಹರನ್ನಾಗಿ ಮಾಡಿರಬೇಕು.

ಇದಕ್ಕೆ ಒತ್ತಾಗಿಯೇ ಇನ್ನೊಂದು ಘಟನೆಯೂ ನೆನಪಿಗೆ ಬರುತ್ತದೆ. ಅದು ಶ್ರೀ ಕೆ.ಕೆ. ಹೆಬ್ಬಾರರ ಏಕವ್ಯಕ್ತಿ ಚಿತ್ರಪ್ರದರ್ಶನ. ಈ ಕಲಾ ಪರಿಭ್ರಮದ ಹಿನ್ನೆಲೆಯಲ್ಲಿಯೂ ಶ್ರೀ ಕುಶಿಯವರೇ ಇದ್ದರೆಂಬುದು ಸರ್ವವೇದ್ಯ. ಶ್ರೀ ಬಿ.ವಿ. ಕಾರಂತರನ್ನು ಜಿಲ್ಲೆಗೆ ಪರಿಚಯ ಮಾಡಿಕೊಟ್ಟವರೂ ಅವರೇ – ಇದರಿಂದಾಗಿ ಜಿಲ್ಲೆಯಲ್ಲಿ ಹೊಸ ಬಗೆಯ ನಾಟಕ ಚಳವಳಿಗೆ ನಾಂದಿ ಹಾಡಿದವರೂ ಅವರೇ. ಈ ಬಗೆಯ ಪರಿಚಯದಿಂದ ಜಿಲ್ಲೆಯ ನಾಟಕರಂಗಕ್ಕೆ ಏನು ಪ್ರಯೋಜನವಾಗಿದೆ -ಎಂಬುದು ಬೇರೆ ಸಂದರ್ಭದಲ್ಲಿ ತಿಳಿಸಬೇಕಾದ ವಿಷಯವಾದರೂ, ಹೊಸತನವನ್ನು ತೋರಿಸಿಕೊಟ್ಟಂಥ ಔದಾರ್ಯ ಇವರಲ್ಲಿ ಇತ್ತೆಂಬುದಕ್ಕೆ ಎರಡು ಮಾತಿಲ್ಲ. ಹಾಗೆಯೇ ದಕ್ಷಿಣ ಭಾರತದ ಬೇರೆ ಬೇರೆ ಭಾಷೆಗಳ ಸುಪ್ರಸಿದ್ಧ ರಂಗಪ್ರಯೋಗಗಳನ್ನು ಉಡುಪಿಯವರು ನೋಡುವ ಭಾಗ್ಯ ಪಡೆದದ್ದು ಶ್ರೀ ಕುಶಿಯವರಿಂದಲೇ. ಮಧ್ಯಮ ವ್ಯಾಯೋಗದಂಥ ಅದ್ಭುತದೃಶ್ಯ ಪ್ರಪಂಚ ಸೃಷ್ಟಿಯನ್ನು ನಾವೆಲ್ಲಾ ನೋಡಲು, ಚೆಸ್‌ವಿಟ್ಸ್‌ನಂಥ ಪ್ರಖ್ಯಾತ ಜಗತ್ತಿನ ದಿಗ್ದರ್ಶಕನ ದಿಗ್ದರ್ಶನದ ಅಭಿರುಚಿಯನ್ನು ನಮಗೆಲ್ಲಾ ಒಡಿಸಿದವರು ಅವರೇ. ಫಿನ್‌ಲೇಂಡಿನ ಜಾನಪದ ಕಥೆಯನ್ನು ನಮ್ಮ ಜಾನಪದ ಸತ್ವದೊಂದಿಗೆ ಹೊಂದಿಸಿ ಪ್ರಯೋಗ ಮಾಡಿದವರೂ ಇವರೇ. ಡಾ॥ ಪೈಯವರ ಎಂಭತ್ತನೆಯ ಹುಟ್ಟುಹಬ್ಬದಂದು ಆಯೋಜಿಸಿದ ವಿಶಾಲ ವಸ್ತು ಪ್ರದರ್ಶನದ ಬೆನ್ನೆಲುಬಾಗಿ ನಿಂತವರೂ ಇವರೇ. ವರ್ಷ ವರ್ಷ ಜರಗುವ ವಾದಿರಾಜ–ಕನಕದಾಸ ಸಂಗೀತೋತ್ಸವದ ಆಚರಣೆಯ ಮೂಲಕ ಸಂಗೀತಾಸಕ್ತರು ಉಡುಪಿ ಬಿಟ್ಟು ಹೋಗದಂತೆ ನೋಡಿಕೊಂಡವರೂ ಇವರೇ. ಇವರಂತೆ ಇವರ ಶಿಷ್ಯರೊಬ್ಬರೂ ಕೆಲಸ ಮಾಡುತ್ತಿದ್ದಾರೆ. ಆದರೆ ಶಿಷ್ಯರು ಮಾಡುವ ಕೆಲಸದ ವಿಧಿ ವಿಧಾನಗಳು ಬೇರೆ. ಪರಿಣಾಮ ಒಂದೇ : ಜಿಲ್ಲೆಯ ಜನರ ಮನಸ್ಸಿನಲ್ಲಿ ಸಾಂಸ್ಕೃತಿಕ ರಂಗ ಎಂದೆಂದೂ ಬಣ್ಣ ಕಳೆದುಕೊಳ್ಳದಂತೆ ಇರುವಂತೆ ಮಾಡಿದ್ದು.

ಇವರು ಇದ್ದು ನಡೆಯುವ ಯಾವ ಕಾರ್ಯಕ್ರಮವೇ ಇರಲಿ – ಇವರ ಮುಂದಾಳುತನದಲ್ಲಿ ಘಟಿಸುವ ಯಾವ ಸಂಭಾವ್ಯಗಳೇ ಇರಲಿ – ಆ ಕಾರ್ಯಕ್ರಮಗಳಲ್ಲಿ ಎದ್ದು ಕಾಣಿಸುವ ಅಂಶವೆಂದರೆ ಅಚ್ಚುಕಟ್ಟುತನ. ಎಲ್ಲವೂ ಎಷ್ಟು ಬೇಕೋ ಅಷ್ಟೇ. ಕಾರ್ಯಕ್ರಮ ಪ್ರಾರಂಭಿಸುವಾಗಲೂ ಹಾಗೆಯೇ ಕ್ಲಪ್ತತೆ ಕೆಲಸ ಮಾಡುತ್ತದೆ. ಇವರನ್ನು ಹಿಂಬಾಲಿಸುವವರು, ಇವರೆಂದಂತೆ ದುಡಿಯುವ ನೂರಾರು ಮಂದಿ ಇದ್ದರೂ, ಅವರಿಂದೆಲ್ಲ ಕೆಲಸವನ್ನು ಮಾಡಿಸಿಕೊಳ್ಳಬಲ್ಲ, ಅದೂ ತನ್ನ ರುಚಿಗೆ ತಕ್ಕಂತೆ ಮಾಡಿಸಿಕೊಳ್ಳಬಲ್ಲ ಜಾಣ್ಮೆ ಶ್ರೀ ಕುಶಿಯವರಲ್ಲಿ ಇದ್ದಷ್ಟು ಇನ್ನು ಯಾರಲ್ಲೂ ಸದ್ಯದಲ್ಲಿ ಕಾಣುವಂತಿಲ್ಲ. ಬಹುದೊಡ್ಡ ಕಾರ್ಯಕ್ರಮ ಜರಗುವಾಗಲೂ, ಅದೇ ಅಚ್ಚುಕಟ್ಟುತನದ ಸೂತ್ರ ಅಲ್ಲಿರುತ್ತದೆ.

ವಿಶ್ವಮಾನವ ಪುರಸ್ಕಾರಕ್ಕೆ ಇನ್ನೊಂದು ಕಾರಣಕ್ಕಾಗಿಯೂ ಇವರು ಅರ್ಹರು : ವಿಶ್ವದ ಹಲವು ದೇಶಗಳನ್ನು ಸುತ್ತಿ ಬಂದಿದ್ದಾರೆ. ಅಲ್ಲಿನ ಅನುಭವಗಳನ್ನು ಕಣ್ಣಿಗೆ ಕಾಣಿಸುವಂತೆ ಚಿತ್ರಿಸಿದ್ದಾರೆ. ಬಿಡಿ ಬರಹಗಳಲ್ಲಿ, ಪುಸ್ತಕಗಳಲ್ಲಿ.

ಎಲ್ಲಕ್ಕೂ ಮೇಲಾಗಿ ನಾನು ಅವರಲ್ಲಿ ಕಾಣುವ ಒಂದು ಗುಣವಿಶೇಷವೆಂದರೆ ಅವರ ಸಾಮಾಜಿಕ ಪ್ರಜ್ಞೆ. ಅವರು ಎಲ್ಲೆಲ್ಲೂ ಇದ್ದಾರೆ, ಎಲ್ಲರೊಳಗೂ ಇದ್ದಾರೆ – ಎಲ್ಲರೂ ಅವರ ಕುರಿತು ಮಾತನಾಡುತ್ತಾರೆ. ಕಾಳಜಿ ತೋರುತ್ತಾರೆ. ಇವರೂ ಪ್ರೀತಿ ವಿಶ್ವಾಸವನ್ನು ಬೇರೆಯವರೊಂದಿಗೆ ಹಂಚಿಕೊಳ್ಳುತ್ತಾರೆ. ಆದರೆ ಎಲ್ಲಿಯೂ

ತನ್ನನ್ನು ತಾನು ಗುರುತಿಸಿಕೊಳ್ಳಲಾರದೆ ಸೋತ ವ್ಯಕ್ತಿ ಇವರಲ್ಲ. ತನ್ನ ಇತಿಮಿತಿಯ ಮೇರೆಯನ್ನು ಮೀರಿದವರಲ್ಲ ಅಥವಾ ತನ್ನನ್ನು ತಾನು ತಪ್ಪಾಗಿ ಗುರುತಿಸಿಕೊಂಡವರೂ ಅಲ್ಲ. ಇವರ ಪ್ರತಿಯೊಂದು ಕೆಲಸದ ಹಿಂದೆಯೂ ಅದಮ್ಯ ಶಕ್ತಿ ಇದ್ದರೂ ವಿವೇಚನೆ ಇದೆ, ವಿಮರ್ಶೆ ಇದೆ. ತನಗೆ ಸಪ್ಪರಾಗದೆ ಇರುವವರನ್ನು ದೂರವಿಡುವ ಕ್ರಮ, ಪ್ರಸಿದ್ಧಿ ಹೊಂದಿರುವ ಕಲಾವಿದರನ್ನು ಅವಗಣನೆಗೆ ಗುರಿಯಾಗಿಸುವ ರೀತಿ ಇವುಗಳನ್ನು ಇವರು ಒಂದು ಕಲೆಯಾಗಿಯೇ ಮಾಡಿಕೊಂಡಿರುತ್ತಾರೆಂಬುದು ಹಲವರಿಗೆ ಗೊತ್ತಿರುವ ವಿಚಾರ.

ಇಂಥ ವ್ಯಕ್ತಿಗೆ ವಿಶ್ವಮಾನವ ಪ್ರಶಸ್ತಿ ದೊರಕಿದ್ದು ಅವರ ಸರಳ ವ್ಯಕ್ತಿತ್ವಕ್ಕೆ ಅನುಗುಣವಾಗಿಯೇ ಇದೆ. ಅವರ ಇನ್ನೊಂದು ಮುಖದ ಕುರಿತಾಗಿ ಎರಡು ಮಾತುಗಳು : ವೈಯಕ್ತಿಕವಾಗಿ ನನಗೆ ಎರಡು ಸಂದರ್ಭಗಳಲ್ಲಿ ಅವರ ಸಹವಾಸದಲ್ಲಿ ಮನಸ್ಸು ಕದಡಿದ ಅನುಭವವಾಗಿತ್ತು. ಒಂದು : ಕುವೆಂಪುರವರ 'ಜಲಗಾರ' ನಾಟಕ ತಯಾರಿಗಾಗಿ ನಾನು ರಂಗಸಜ್ಜಿಕೆ ಸಿದ್ಧಗೊಳಿಸುತ್ತಿರುವಾಗ, ಅಲ್ಲಿಗೆ ಬಂದ ಶ್ರೀ ಕುಶಿಯವರು, ರಂಗಸಜ್ಜಿಕೆಯನ್ನು ಕಂಡು "ಓ ಇದು ಬಿ.ವಿ. ಕಾರಂತರ ಹಾಗಿದೆ." ಅಂದದ್ದು. ಇಂದಿಗೂ ಆ ಮಾತನ್ನು ಜೀರ್ಣಮಾಡಿಕೊಳ್ಳಬಲ್ಲ ಶಕ್ತಿಯಾಗಲೀ ಔದಾರ್ಯವಾಗಲೀ ನನ್ನಲ್ಲಿ ಬಂದಿಲ್ಲ. ಎರಡನೆಯದಾಗಿ ಒಂದು ವಾರ್ಷಿಕೋತ್ಸವದ ಸಮಯ ನಾನು ಕಾಪುವಿನ ಜನರ ನಾಟಕಾಭಿರುಚಿಯ ಮೇಲೆ ನಡೆಸಿದ್ದ ಒಂದು ಸಮೀಕ್ಷೆಯನ್ನು, ಅದರ ಫಲಿತಾಂಶವನ್ನು ಅವರು ಗೇಲಿ ಮಾಡಿದ್ದು. ಆದರೆ ಇದೇ ಕುಶಿಯವರು "ಸುದರ್ಶನ" ಗ್ರಂಥದಲ್ಲಿ ಪ್ರಕಟಣೆಗೊಂಡಿದ್ದ ನನ್ನ ಲೇಖನವೊಂದನ್ನು ಬಹಳಷ್ಟು ಮೆಚ್ಚಿ – ಹೊಗಳಿ ಲೋಕಾಭಿರಾಮದಲ್ಲಿ ಬರೆದಿದ್ದರು. ಅವರ ಮೆಚ್ಚುವಿಕೆ, ಮೆಚ್ಚದಿರುವಿಕೆಗಳ ನಡುವೆ ಯಾವ ಸೂಕ್ಷ್ಮ ತಂತು ಇದೆಯೋ ನನಗೆ ತಿಳಿಯದು.

ಬಹುಶಃ ಈ ಬಗೆಯ ವಿಶ್ವಮಾನವ ಒಂದು ವಿಶಿಷ್ಟ ಬಗೆಯ ಕ್ರಿಯಾತ್ಮಕ ಶಕ್ತಿಯನ್ನೊಳಗೊಂಡಿರಬೇಕಾಗುತ್ತದೆ. ಟೀಕಾಕಾರರೂ ಆಗಿರಬೇಕಾಗುತ್ತದೆ – ಹಾಗೆಯೇ ಈ ಎಲ್ಲಾ ಗುಣಗಳ ಮಿಶ್ರಣದ ರೂಪವಾಗಿ ನಿಗೂಢನಾಗಿಯೂ ಉಳಿಯಬೇಕಾಗುತ್ತದೆ.

ಪ್ರದರ್ಶನ ಕಲೆಗಳ ಕುರಿತಾಗಿ ಅವರು ಮಾಡಿದ ದುಡಿಮೆಗೆ ಇನ್ನೂ ಹೆಚ್ಚಿನ ಪ್ರಶಸ್ತಿ ಸಿಗಲೆಂದು ಹಾರೈಸುತ್ತೇನೆ.

A Few Sidelights

— **Prof. Therese Joseph**

WHEN Prof. K. S. Haridasa Bhat succeeded Prof. H. Sunder Rao as Principal of M.G.M. College there started a new era of constructive activity in all spheres. He not only continued in the foot steps of his illustrious predecessor but blazed a trail of his own in a liberal education for the students of this semi-urban college. He was so involved in his new role as Principal that he identified himself completely with the College. He now found a vast and fertile field for the cultivation of his natural ambitions and a wide channel for the flow of his inexhaustible energies: M.G.M. College must be a unique educational institution, its teachers should be fired with zeal in the discharge of their duties, and its students should make a name for themselves when they leave the portals of their Alma Mater. These were some of his cherished ideas. And he realized them to a very large extent.

Seated in the chair of authority, Prof. Bhat could at times be autocratic. He could brook no direct contradictions. Perhaps he felt that the slow democratic way of functioning would not produce the maximum of results in the minimum of time. He kept every staff member on his toes. There was no room for laxity especially on the part of the heads of departments in the various faculties. To tone up the discipline, he insisted that the teacher be present in the College premises from atleast 10 A.M. to 4-30 P.M. (with of course the usual lunch break) to make themselves available to the students. He did not hesitate to chastise the teachers in the privacy of his chamber, he never let them down in the presence of the students. He always stood by the teachers, which I think is an admirable and necessary characteristic in the head of any institution. He knew the secret of extracting the best out of his colleagues, sometimes by timely compliments, at times by necessary reprimands. He liked to assign important duties to the teachers, give them responsibilities in the multitudinous co-curricular and extra-curricular activities that have been a constant feature of M.G.M. College life. Thus he built up a band of highly organized teachers who knew exactly what their duties were

in a given situation. It was this infra-structure that made possible the great literary and cultural festivals which drew both eminent and ordinary people not only from the whole district, not only from the state, but even from many parts of India and foreign countries. The citizens of Udupi have been especially lucky in being in the vortex of these activities. M.G.M. College under Prof. Bhat has been instrumental in lending new dimensions to their intellectual and aesthetic experiences.

Prof. Bhat's administration of the College was carved out in the grand style. Generous by nature and lavish in expenditure, he let the benefits of these personal traits trickle down to those who worked with him, under him and around him. Prof. Bhat never stinted time and energy to take advantage of every government scheme which offered financial or other help for the betterment of the institution. He often rushed up to the capitals of the State and Central Governments, to the offices of educational commissions to hasten the grants — be it for the laboratories, the staff quarters or the teachers' salaries, the Yakshagana Kendra, the Govind Pai Research Centre, the Library, the Play-ground or whatever. He had the art of effective persuasion, forceful speech and satirical innuendo.

Any scheme or activity that would benefit the students or promote academic excellence never failed to get support and encouragement. The teachers had only to suggest a seminar, a symposium, a workshop or lectures by eminent scholars, Prof. Bhat never grudged the necessary monetary or organizational help. When the government abolished the post of tutors, M.G.M. was the only College in South Kanara and may be even in the whole of Mysore University where a tutor in English was on the pay roll of the Management during all the years of Prof. Bhat's Principalship.

Multifaceted and many splendoured, Prof. Bhat is also a complex character. During College Council meetings, I used to observe Prof. Bhat's approach. It was sometimes difficult to know what was in his mind. Sometimes he would speak in favour of something which I felt he disliked. At other times he would criticize something which I felt he really appreciated. I used to get the feeling that he was trying to look at both sides of the matter by making the council a sounding board for a proper appraisal of the subject under discussion.

Again, though Prof. Bhat can be harsh and stern, he is capable of being emotionally moved to tears even in public. On the occasion of the Silver Jubilee Celebrations of the College he almost broke down on the dais when he referred to the kindness of the Management, especially of Dr. T.M.A. Pai who had given him total support and freedom in running the affairs of the College. When the students of the Ladies' Hostel organized a send off at the time of his retirement, he was so moved by the words and tokens of appreciation that he had to pause several times in the course of his speech, to regain control of himself.

Religious and communal narrow mindedness or linguistic fanaticism has no place in Prof. Bhat's mental make-up. His learned and humorous articles in the *Udayavani* bear testimony to his vast range of thought and experience and the wide horizons of his mind. He has shown this broad mindedness nearer home too. Though he hails from an orthodox Brahmin family, he played host to a Nambiar bridegroom's wedding party which left his house for the neighbouring Kalyana Mantapa. The groom's party had come from Kerala. On a similar occasion, the Dutch bridegroom who had come from Europe stayed at Prof. Bhat's place before he left for the Kalyana Mantap to marry his Indian bride who was a friend of Prof. Bhat's daughter. Later when Prof. Bhat stayed at their house in Holland, he referred to the girl as his third daughter, in one of his articles.

His wife and children too have imbibed these qualities of open mindedness, hospitality and helpfulness. Just to give an example: for a number of years, during Navarathri, the wives and children of the Staff Members were invited to his house to see the display of dolls and thereafter to be treated to coffee and snacks. Indians, Europeans, Americans — of whatever religious belief or political creed have all been extended the warmest hospitality. The contacts he thus built up are phenomenal and have stood him in good stead in the furtherance of his plans and achievements.

Maximisation of Human Welfare

— **Prof. K. Ramadas**

Prof. K. S. Haridasa Bhat took over the reins of the Mahatma Gandhi Memorial College on 1st January, 1964 from his predecessor the late Prof. H. Sunder Rao, who had nurtured this great Institution in its infancy and had built up certain traditions born out of his scholarly wisdom and sense of devotion. Prof. Bhat took off from this sound foundation and led the institution to the heights of its glory during his fifteen years of service as the Principal of the College. Under his dynamic leadership the College recorded an allround growth transforming itself from a centre of learning into a multi-faced educational complex and also a centre for the study and propagation of the culture of the region. The establishment of the Yakshagana Kendra and the Rashtrakavi Govind Pai Research Centre in the campus bear testimony to the vision, creativity, innovative approach, imagination and artistic sense of Professor Bhat. It was during his regime that the College earned state wide reputation as one of the very few prestigious institutions in Karnataka.

Prof. Bhat has always been an able administrator — a good manager in the true sense, fully adept in administrative skills. In the area of academic management Prof. Bhat used to be always on the look out for innovative techniques. In spite of constraints laid down by the University and Government agencies, he did whatever possible to bring about academic excellence and introduced new courses like certificate and diploma courses in German, Vocational education courses and facilities for post graduate research. These are fully supported by well-equipped laboratories and a well stocked library which he built or developed by drawing resources from funding agencies. He inspired his staff to strive for the maintenance of high academic standards. The consistently excellent results of the College speak out for this aspect.

In the matter of human resources management, considering the fact that a College administrator has to manage a large number of persons — the teachers, the non-teaching staff

and a large body of students — he did exceedingly well, exercising restraint at the right moment and tact when necessary. Rightly being aware that the goal of administration of an educational institution is maximisation of human welfare and that a humanistic approach is essential in solving problems he managed to keep the campus clear of crisis, and provided the student community with ample opportunities to mobilize and divert their energies into the right channels. He succeeded in motivating a large majority of his staff to identify themselves with the college and its mission so much so that inter-personnel conflicts and groupism among the teachers were totally absent in the college during his tenure. He achieved this by creating a framework of adequate communication with the teachers and non-teachers by frequently meeting them as a body or in smaller groups or, whenever possible, individually too. For him rules and regulations were only parameters of operation of the system within the ambit of which he was always prepared to be flexible without prejudicing the interests of the institution. He was neither autocratic nor egoistic in his administrative techniques but always involved his colleagues in decision making. To effect this he even created auxiliary offices like those of the Vice-Principal and Estate Manager to bring about decentralisation of authority to a judicious extent for effective management of the institution. He seldom questioned the discretion and decisions of these subordinate officers as long as the decisions and actions were right and taken in good faith in the interests of the institution. He organized teacher development programmes like workshops, seminars etc. as often as possible. He roused the enthusiasm of the staff for hard work, showered praises when they performed well and earned their love, respect and unstinted loyalty and cooperation.

As a teacher with more than thirty years of experience Prof. Bhat was adept at gauging the student mind and managed them with a sense of understanding and compassion but at the same time keeping them fully under control. As a consequence student agitations were few and far between in his regime and Principal - Student relationships were all through cordial. Being endowed with the unusual qualities of being a speaker, writer and thinker in addition to being an administrator he built up very good public relations and could enlist the cooperation and involvement of the community in the growth of the college.

In the matter of financial resources for the institution he

would always be alert to the allocations of the funding agencies like the UGC and the Government for developmental projects and would exploit them for the benefit of the college to the possible extent. The Vikram Shila, Geethanjali and Nalanda buildings are the outcome of this initiative and alertness of Prof. Bhat. His unfailing source, if not the last resort, for financing most of his projects was his mentor, the late Dr. T.M. A. Pai, the then Registrar of the Academy of General Education, Manipal. Great and generous - hearted man as he was Dr. Pai would unhesitatingly loosen the purse strings, for, apart from bestowing absolute confidence and goodwill on Prof. Bhat, he had known that each time Prof. Bhat asks for money it would be for translating a dream into reality and the College would take another progressive step in its service to the community.

Thus it was all through a smooth and pleasant sailing for Prof. Haridasa Bhat, for he retired from the services with a sense of satisfaction that he could fully realise his goals, that he was responsible for the all-round growth of the institution which he headed for fifteen years. His resourcefulness, drive, his skill at organisation, his self confidence and his multi-faceted personality rank him as one of the very few successful educator-administrators of our education system. No wonder that, at one time recently, enlightened people of the region fondly hoped and desired that he would be nominated as the Vice-Chancellor of the Mangalore University.

ಅನುಬಂಧ — 1

ಪ್ರೊ. ಕು. ಶಿ. ಹರಿದಾಸ ಭಟ್ಟರ ಬರಹಗಳು

(ಅ) ಸ್ವಂತ ಕೃತಿಗಳು – ಕನ್ನಡದಲ್ಲಿ ಮತ್ತು ತುಳುವಿನಲ್ಲಿ ಬರಹಗಳು

ಯುಗವಾಣಿ (ಕವನ ಸಂಗ್ರಹ)	1949
ಪುಸ್ತಕ ಪುರಾಣ (ಪ್ರಬಂಧಗಳು)	1950
ಪ್ರಜಾತಂತ್ರದ ಹೆದ್ದಾರಿ	1950
ಅರ್ಥಶಾಸ್ತ್ರ	1952
ಅವರು ಯುದ್ಧಕ್ಕೆ ಹೋಗಲಿಲ್ಲ (ಸಣ್ಣ ಕತೆ)	
ಕಾಲವು ಬದಲಾಗಿದೆ (ಕಾದಂಬರಿ)	
ಏಶಿಯಾದ ಸಂಪತ್ತು	1954
ಬದುಕುವ ದಾರಿ	1956
ಮನೆಯ ಹೊರಗಿನ ಮಹಾಜೀವಿಗಳು	1958
ಇತಾಲಿಯಾ ನಾನು ಕಂಡಂತೆ	1971
ಕನ್ನಡ ಕಟ್ಟಿದವರು	1972
ಯಕ್ಷಗಾನದಲ್ಲಿ ಔಚಿತ್ಯಪ್ರಜ್ಞೆ	1972
ಲೋಕಾಭಿರಾಮ – 3 ಸಂಪುಟಗಳು	1971, 1974, 1977
ರಾಷ್ಟ್ರಕವಿ ಗೋವಿಂದ ಪೈ (ಐ. ಬಿ. ಎಚ್. ಪ್ರಕಾಶನ)	1974
ಬರಿಯ ಭಾವಗೀತ (ಎಂ. ಜಿ. ಎಂ. ವಿದಾಯಭಾಷಣ)	1979
ಡಾ। ಟಿ. ಎಂ. ಎ. ಪೈ (ಐ. ಬಿ. ಎಚ್. ಪ್ರಕಾಶನ)	1981
ಜಗದಗಲ	1981
ತುಳುತೊ ಬುಳೆ, ನಿಲೆ	1983
ಒಮ್ಮೆ ರಶಿಯಾ, ಇನ್ನೊಮ್ಮೆ ಇತಾಲಿಯಾ	1983
ರಂಗಾಯನ	1987

(ಆ) ಕನ್ನಡಕ್ಕೆ ಅನುವಾದಿತ ಕೃತಿಗಳು

ಘಂಟಮಾರಾ (ಸಿಲೋನ್)	1950
ಅವ್ಯಕ್ತ ಮಾನವ (ಪ್ರೊ। ಯು. ಎಲ್. ಆಚಾರ್ಯರು, ಸಹಲೇಖಕರು)	1953
ನಡುಹಗಲಲ್ಲಿ ಕಗ್ಗತ್ತಲೆ (ಆರ್ಥರ್ ಕೋಸ್ಲರ್)	1956
ಸ್ವಾತಂತ್ರ್ಯ ಮತ್ತು ಸಂಸ್ಕೃತಿ (ಟಾಲ್ಸ್ಟಾಯಿ)	1957
ಅಮೇರಿಕದ ಆರು ಕತೆಗಳು	1959
ರಾಮನಾಥ	
ಕಡಲಿನ ಸಂಪತ್ತು	

(ಇ) English

A Text-book of Special Economics	1955
Development Planning in India — Retrospect and Prospect	1963
Growth of Free Institutions — A case for Autonomy	1972
Junior Colleges — Why ?	

(ಈ) ಸಂಪಾದಿತ ಕೃತಿಗಳು

Silver Jubilee of Udupi Municipality	1961
ಕಾರಂತ ಅರುವತ್ತು	1962
ಗೋವಿಂದ ಪೈ ಅವರ ಪತ್ರಗಳು	1964
ದಾಸಪ್ರಭೆ	1965
ಕನಕಪ್ರಭೆ	
Wealth of a Nation — (on M. G. M. College)	1968
ಅಭಿವ್ಯಕ್ತಿ (ಗೋಪಾಲಕೃಷ್ಣ ಅಡಿಗರ ಸಂಮಾನ ಸಂಸ್ಮರಣೆ)	1968
ANJALI (on the occasion of Mahatma Gandhiji's centenary)	1969
KNOWLEDGE IS POWER	1968
(on the occasion of 70th birthday of Dr. T.M.A. Pai)	
ಕಾರಂತ ಪ್ರಪಂಚ	1969
ಅಭಿನಂದನ	1969
ಮಾತೆಲ್ಲ ಜ್ಯೋತಿ (ದ. ರಾ. ಬೇಂದ್ರೆ ಉಪನ್ಯಾಸಗಳು)	1972
ಗ್ರಂಥೋತ್ಸವ ಸವಿ ಸಂಚಿಕೆ	1972
ಸಗರಿ (ಎಂ. ಜಿ. ಎಂ. ಬೆಳ್ಳಿಹಬ್ಬ ಸ್ಮರಣಸಂಚಿಕೆ)	1974
ವರ್ತಮಾನ ಕಾಲದ ನಾಲ್ವರು ಮಹನೀಯರು	
ಪುಸ್ತಕ ಪುರಾಣ – ಪ್ರಬಂಧಗಳು	
ಭಾಗ್ಯದ ಬಾಗಿಲು (ಎಂ. ಜಿ. ಎಂ. ಬೆಳ್ಳಿಹಬ್ಬದ ಸ್ಮರಣ ಸಂಚಿಕೆ)	1974
Taxless Society	1973
ಸತ್–ತ್ಯ ಮತ್ತು ಸತ್ಯ (ಶಂ. ಬಾ. ಜೋಶಿ)	1975
ಇನ್ನಿಲ್ಲದ ಸುಂದರರಾಯರು	1975
ಸ್ವಾತಂತ್ರ್ಯಪೂರ್ವ ತುಳು ಸಾಹಿತ್ಯ	1982
Souvenir of Third Annual Conference of Epigraphical Society of India	1977
ಒಲವೆ ನಮ್ಮ ಬದುಕು (ದ. ರಾ. ಬೇಂದ್ರೆಯವರ ಪ್ರೇಮ ಗೀತೆಗಳು)	1977
ಕುವೆಂಪು, ಬೇಂದ್ರೆ, ಕಾರಂತ	1979
ತುಳು ನಿಘಂಟು ನಡೆದುಬಂದ ದಾರಿ	1983
ODDOLAGA	1981
ಪರಿವ್ರಾಜಕ (ಶ್ರೀ ವಿಶ್ವೇಶ ತೀರ್ಥರ ಬಗ್ಗೆ)	1981
The Holy Kshetra Dharmasthala	1982
ಶಿಕ್ಷಣ ಮತ್ತು ಜೀವನದ ಅರ್ಥ	
ಎಂ. ಜಿ. ಎಂ. ಕಾಲೇಜ್ ವಾರ್ಷಿಕ ಸಂಚಿಕೆ – ಪ್ರಸಂಗ – ತುಳುವ	ಇತ್ಯಾದಿ ನಿಯತಕಾಲಿಕ ಸಂಚಿಕೆಗಳು

(ಉ) ಜೀವನ ಚರಿತ್ರೆ

ಕಲಾವಿದ ಕಟ್ಟಿಂಗೇರಿ ಕೃಷ್ಣ ಹೆಬ್ಬಾರ – ಕಲೆ ಮತ್ತು ಬದುಕು	1988

(ಊ) ಪ್ರಕಾಶನ

1. ನವೋದಯ ಪ್ರಕಾಶನ, ಎಂ. ಜಿ. ಎಂ. ಕಾಲೇಜು, ಉಡುಪಿ
2. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಪ್ರಕಾಶನಗಳು
3. ಕರ್ನಾಟಕ ಜಾನಪದ ರಂಗಕಲೆಗಳ ಪ್ರಕಾಶನ

ಲೋಕಾಭಿರಾಮ:

ಸಂಪುಟ 1. ಪ್ರಥಮ ಮುದ್ರಣ: 1971
ಪ್ರಕಾಶಕರು : ಗೀತಾ ಬುಕ್ ಹೌಸ್, ಮೈಸೂರು

ಸ್ವಗತ 9; ಕಾಮರೂಪಿ ಪರಮಹಂಸ 12; ಮಂಗಳೂರು 'ಪೆಂಕು' ಪಾಂಬೂರಿಗೆ ಬಂದದ್ದು 15; ತುಳುಕೂಟಕ್ಕೊಂದು ಸವಾಲು 24; ಜೀವಾರಾಧನೆ 28; ಕಾರ್ಯಪ್ಪ ಉವಾಚ 31; ನವ್ಯರ ತಕರಾರು 34; ಪಿಯುಸಿ ದುರಂತ 39; ಕನ್ನಡಿಗರ ಉತ್ಸವ ಮಂದಿರ 42; 'ಯೋಗಕ್ಷೇಮ'ದ ಪೈ 45; ಚರ್ಚೆಗೆ ಸಿಗದ ವಿಷಯ 49; ಬ್ಯಾಂಕುಗಳ 'ಧೃತ' ರಾಷ್ಟ್ರೀಕರಣ 52: 'ಸಂಸ್ಕಾರ'ದ ಸಂಸ್ಕಾರ 56; ಸರ್ 'ಪೆಂಗ್ವಿನ್' 58; ಶಿಕ್ಷಣ ವರ್ಷದ ಯೋಜನೆ 62; ಸುವರ್ಣ ಮಾಧ್ಯಮ 66: ಇಂದಿನ ಪ್ರಾತಃ ಸ್ಮರಣೀಯರು 69; ತೆರಳಿದ ಹುರುಳಿಯವರು 73; ಅಮ್ಮಾ ಬಾವುಟ ಬೇಕು 77; ನಾಟಕ ಮತ್ತು ಸೃಷ್ಟಿಕ್ರಿಯೆ 80; ಎಲ್ಲಿರುವೆ ತಂದೆ ಬಾರೊ 83; ಗ್ರಂಥಾಲಯ: ಶಿಕ್ಷಣದ ಕೇಂದ್ರ ಬಿಂದು 86; ನಾಟಕಗಳ ದಿಶಾಂತರ 90; ಮಹನೀಯರಿಗೆ ಸಂಮಾನ 94; 'ಇಳಿದು ಬಾ ತಾಯಿ' 98; ಇಲ್ಲಿ ಕಾಯಕವೆ ಕೈಲಾಸ 102; ಉದಯವಾಗಲಿ(ಲ್ಲ) ಕನ್ನಡ ನಾಡು 106; ನಮ್ಮ ರಜಾ ಗುಣ 110; ಅಕ್ಷರ ಹೊಸ ಕಾವ್ಯ: ವಿಮರ್ಶೆಯ ವಿಮರ್ಶೆ 114; ಮಧ್ಯಮ ವರ್ಗದ ನಾಯಕತ್ವ 117; 'ಅ-ಸಂಸ್ಕೃತ' ಭಾರತ 121; 'ಶೃಂಗಾರ' 125; ಪ್ರತಿಭೆಯ ಪ್ರೋಷಣೆ 129; ಸೇವಾ ಚಕ್ರ ಪ್ರವರ್ತನ 133; ಸಾಹಿತ್ಯ ಸಿಂಹಾಸನದಲ್ಲಿ ಕನ್ನಡ ಗದ್ಯ 137; ಮಿಂಚು ಹುಳಗಳು 141; ಚಪ್ಪಾಳೆಗಾರಿಕೆ 145; ಗಿಳಿಯು ಪಂಜರದೊಳಿಲ್ಲ 149; ಅತಿ 'ಸರ್ವತ್ರ ವರ್ಜಯೇತ್' 153; ಗ್ರಂಥಸಂತೆ 157; ಲಕ್ಷ ಲಕ್ಷ ಜನರ ಯಕ್ಷ ಪ್ರಶ್ನೆ 161: ಶ್ರೀಕೃಷ್ಣನಿಲ್ಲದ ಭಾರತ ಸಂಗ್ರಾಮ 165; 'ಕಾದಿರುವಳು ಶಬರಿ' 169; ದ್ರೌಪದಿಯ ಸುಭದ್ರ ಸರಕಾರ 173; ಸರ್ವಜೀವವಿಮೆ 177; ಕನ್ನಡದ ಕೆಲಸ 181; ಇಂಗ್ಲೀಷಿನ ಕೆಲಸ 184; ಮಾರ್ಥಾ ಮತ್ತು ಯಕ್ಷಗಾನ 188; ಉಡುಪಿಯ ಮೌನಕ್ರಾಂತಿ 192; ನಿಶಾಚರಗಳು 196; ಪಂಚತಾರಾ ಪ್ರವಾಸೋದ್ಯಮ 201: ರಾಜ್ಯಪಾಲರು, ಶಿಶುಪಾಲರು 206; ಹೋರಿ ಸತ್‌ಹೋಯ್ತು 210; ಜ್ಞಾನಗಂಗೋತ್ರಿ 214; ದೇವರ ಯೋಧ 218; ಕಿಟ್ಟೆಲ್ ಋಣ 221; ಜಾನಪದ ಕಲಿಯ ವಿದ್ಯಾರ್ಥಿ 225; 'ನಿಂತ ನೀರಿನ ವಾಸ ಸುತ್ತಲೆಲ್ಲ' 229; ಅಗಲದ ಅನಕ್ಯ 233; ಕಾರಣಪುರುಷ ಕೇನ್ಸ್ 237.

ಲೋಕಾಭಿರಾಮ:

ಸಂಪುಟ 2. ದ್ವಿತೀಯ ಮುದ್ರಣ 1973
ಪ್ರಕಾಶಕರು : ಗೀತಾ ಬುಕ್ ಹೌಸ್, ಮೈಸೂರು

ಸೊಕ್ಕು ಹಿಡಿದ ಉಕ್ಕು 1; ಅರ್ಧ ಬೆಲೆ 5: ಅ-ಪತ್ರಿಕಾದಿವಸ 11; ಮೈಸೂರುನಾಮ್ಯ 15; ಸಂದ ಜೀವನದ ರೀತಿ 20; ಥಳಥಳಿಸುವ ದಸರಾ 24; ಕೌತುಕ 29; ಬಲಂ ಬಲಂ ರಟ್ಟೇ ಬಲಂ 34; ಗುರು ವೀರಭದ್ರ 39; ಸಕ್ಯೋಟು ಸನ್ಮಾನ 44; ಆಂಧ್ರದಲ್ಲಿ ಮೂರು ದಿನ 49; ಸತ್ಯಸ್ಯ ಸತ್ಯ 54: ನಾಮಕರಣ ಪ್ರಸಂಗ 60; ಸೇವಾಭಾವ 64; ಮತ್ತೆ ಮಲ್ಪೆ, ಮರವಂತೆ 68; ವಿದ್ವಾನ್ ಸರ್ವತ್ರ 0 ತೇ 72; ಪದ್ಮಭೂಷಣ ಮತ್ತು ಮುದ್ರಣಶ್ರೀ 76; ಪರಂಪರೆ ಮತ್ತು ಪ್ರಯೋಗ 82: ಒಂದು ಹಿರಿಯ ಚೇತನ 88; ಕೆಲಸಕ್ಕೆ ಬಾರದ ದೇವರು - 1 92: ಕೆಲಸಕ್ಕೆ ಬಾರದ ದೇವರು - 2 97: ಕೆಲಸಕ್ಕೆ ಬಾರದ ದೇವರು - 3 103: ಭಾರತೀಯ ಸಾಹಿತ್ಯಕ್ಕೆ ಯಾರೆಂದು ಕೇಳಿದ್ದೀರಿ 107: ಕಹಿಯಾದ ಸಕ್ಕರೆ 113: ಪಂಡಿತ ಪೀಳಿಗೆ 118: ಕೇರಳ ವಿಜಯಂ 123; ಅಳಿಲು ಆನೆ - ಅ, ಆ 128; ಅಡಿಗರ ವಿಚಾರಪಥ 132; ಎಲ್ಲರಿಗೂ ಬೇಕು - ಒಂದು ವಿಪಿಸಲಿಯು 138; ಮುಖ್ಯೋಪಾಧ್ಯಾಯ 142; ಹೆಚ್ಚು ದಯೆಯ ಸೇವೆ 150; ಅನ್ನದೇವರು ಮಾತ್ರ ಇನ್ನೂ ಬರಲಿಲ್ಲ 155; ಸೋಬಾನೆ ನಾಗೇಗೌಡರು 160; ಜಯಹೇ ಕರ್ನಾಟಕ ಮಾತೇ? 167: ಕಸದಿಂದ ರಸ 171; ಮಕ್ಕಳಿವರೇ ನಮ್ಮ ಮಕ್ಕಳಿವರೇ - ನಮ್ಮ ಮೂವತ್ತ ಎಂಟು ಕೋಟಿ? 177; ಕಾಯಂ ನಿರ್ಮೂಲನ 182: ಅಚ್ಛೋದ ಸರಸ್ಸು 186; ಸಂತೆಯಲ್ಲಿ ಸತ್ಯದ ಸಾಕಿವೆ 190; ಉಪಾಧ್ಯಾಯರ ದಿನ 194: ಹಸಿರಿನ ಹಸಿವೆ 198; ಜರ್ಮನ್ ಹೊಸ ಕಾವ್ಯ 202: ಅಪರಾಧಿ ನಾನಲ್ಲ 207: ವಿದುರನೀತಿ 213; ಶಿಕ್ಷಣ ಹಿಡಿಯಬೇಕಾದ ದಾರಿ 218; ಬಿರುದು 223; ಎಲ್ಲರಿಗೂ ಬೇಕಾದ ಪುಸ್ತಕ 233; ಪತ್ರಿಕಾ - ಮೇವು 238; ಇನ್ನಿಲ್ಲದ 'ಲೈಫ್' 242; ಪುಸ್ತಕ - ಹಬ್ಬ - ಬಂಜೆಗಬ್ಬ 247; ಕ್ರಿಕೆಟ್ ಸಂಪತ್ತು 251; ಹಿಂಸಾವತಾರ 256; ಆನೆಗೆ ಜ್ವರ 260; ಚೀಲ ತುಂಬದ ಬಜೆಟ್ 265; ಗೊಮ್ಮಟಯಾತ್ರೆ 269 : ಗಿರಾಕಿಗಳ ತೃಪ್ತಿಯೆ...? 273: ನಾಯಕರಿಲ್ಲದ ಸ್ಥಳ 279; ನೀರು ನಡೆಸುವ ಕಾರು 283.

ಲೋಕಾಭಿರಾಮ:

ಸಂಪುಟ 3. ತೃತೀಯ ಮುದ್ರಣ 1977
ಪ್ರಕಾಶಕರು: ಗೀತಾ ಬುಕ್ ಹೌಸ್, ಮೈಸೂರು

ಭಾರತೀಪುರದ ವಿಫಲ ಕ್ರಾಂತಿ 9; ಸಿಗಡಿ ಯಾಕೆ ಒಣಗಲಿಲ್ಲ? 14; ದೇವರು ರಜೆ ಮಾಡಿದಾಗ 18; ವಿದೇಹ ಪ್ರಯಾಣ 21; ಮಂಜೇಶ್ವರದಲ್ಲಿ 'ಕನ್ನಡಿಗರಿಗಿನ್ನು ಕೆಲಸವಿಲ್ಲವೆ?' 26; ಸಲಿದಾತುರತೆಯುದಕೆ 31; ವಿಮರ್ಶೆಯ ಪೂರ್ವಾಪರ 37; ಜಾತಿ ವಿನಾಶ ಸಮ್ಮೇಳನ 41; ನಿವೃತ್ತಿ ಬಾಂಬು 46; ಇತಿಹಾಸಾಸ್ಪದ 50; 'ಕೃಷ್ಣಮೂರ್ತಿ' ಕಣ್ಣ ಮುಂದೆನಿಂತಿದಂತಿದೆ 55; ಪತ್ರಿಕಾಧರ್ಮ – ಅಂದರೆ ಇದು; 60; ಹೊಸ ಅಲೆ; ಹೊಸ ತಲೆ 65; ಭಾಷೆಗಿಂತ ಬದುಕು ದೊಡ್ಡದು 70; ಅಶಾಂತ ಭಾರತ 74; ಬೆಲೆ ಮತ್ತು ಬೇಲಿ 78, ಗೋರ್ಕಲ್ಲ ಮೇಲೆ 82; ಕಾರಂತರ 'ಮರಳಿ ಮಣ್ಣಿಗೆ' 87; 'ತದ್ದೂರೇ, ತದಂತಿಕೇ' 91; ಕಲಾವಿದರಿಗಿಲ್ಲದ ಕರ್ನಾಟಕ ಭವನ 96; ಉದ್ಯೋಗ ಯಾರಿಗೆ ಬೇಕು? 100; ಬಾಳುವ ಬ್ರಾಹ್ಮಣ 105; ಊರಿಗೆ ಬಂದ ಹೊಸ ಪುರೋಹಿತರು 109; ಬುದ್ಧಿ ಭಾವ ಸಂಗಮ 114; ರಾಷ್ಟ್ರಮಟ್ಟದ ವೇತನ ಮತ್ತು ವರಮಾನ ನೀತಿ 118; ಹಾವನೂರರ 'ಹೊಸಗನ್ನಡ ಅರುಣೋದಯ' 122; ಕಲ್ಲಿಗೆರಡು ಹಣ್ಣು 128; ದೇವರಿಗೂ ದುಷ್ಕಾಲ 133; ಮುಂದೇನು? 137; 'ಅಮೇರಿಕದಲ್ಲೆ ಸತ್ಯಮೇವ ಜಯತೇ' 141; 'ನಿನಗೆ ನೀನೇ ಗೆಳೆಯ, ನಿನಗೆ ನೀನೇ' 145; ಕೆಸರುಗಟ್ಟಿದ ಶಿಕ್ಷಣ 149; ಒಂದು ಕಲ್ಪನಾ ವಿಲಾಸ 153; 'ದಲಿತ' ಯಾರು? 158; ಚೀನದ ಕ್ರಾಂತಿ ಮತ್ತು ಮರುಕ್ರಾಂತಿ 162; ಚೀನದ ಮರುಕ್ರಾಂತಿಯ ಪಾಠ 166; ಶಿಕ್ಷಣದಲ್ಲಿ ಕ್ರಾಂತಿ ಬಂತೋ ಕ್ರಾಂತಿ 171; ಜ್ಞಾನಪೀಠಸ್ಥ ಕವಿ ಬೇಂದ್ರೆ 175; ಮೂಷಿಕ ಸ್ವಾತಂತ್ರ್ಯ 179; 'ವರ್ಧಮಾನ'ಕ್ಕೆ ಬಹುಮಾನ 183; ಪರಿಸರ ನೈರ್ಮಲ್ಯ 188; ಸಾ ವಿದ್ಯಾ ಯಾ ವಿಮುಕ್ತಯೇ 192; ವರ್ಜೀರೇ-ಅಜಂ 197; ಡಾ. ಗುರುರಾಜ ಭಟ್ಟರ 'ಅಧ್ಯಯನ' 201; ಆಡುಭಾಷೆಗೆ ಸಾಹಿತ್ಯಪೀಠ 205; ಬಾಗಿಲನು ತೆರೆದು ಒಳಗೆ ಬಾ ಯಾತ್ರಿಕನೆ 209; ಒಂದು ಕ್ರಾಂತಿಕಾರಿ ಸೂಚನೆ 213; ಅನಾರೋಗ್ಯ ವಿ. ವಿ. ನಿಲಯ 217; ಎಲ್ಲಿರುವೆ ಕಳ್ಳ ಬಾರೋ 222; ಬಾಡಿಗೆ ತಲೆ 227; ಲಕ್ಷ್ಮಣರೇಖೆ 232; ಅಪರಾಧಿ ನಾನಲ್ಲ: ಅಪರಾಧವೆನಗಿಲ್ಲ 236; ಬಾಲಾಜಿ ಬ್ಯಾಂಕ್? 240; ಶಿಸ್ತಿನ ಸಾಕಾರಮೂರ್ತಿ 245; ಸಂಗೀತ ಕಲಿಸುವ ಪಾಠ 249; ಯಾರಿವನು? 253; ಕೊಟ್ಟ ದೇವರು? 258; ವಿಜ್ಞಾನ ಸಾಹಿತ್ಯ ವಿನೋದ 262; ನಮೋ ಎಂಬೆ ಲೋಕ ಗುರುವಿಂಗೆ 266; 'ಪಿಗ್ಮಿ' ಬ್ಯಾಂಕ್ 271; 'ದುಡಿ' 276; ನಾಯಿ, ಕುರಿ 280; ಇಡ್ಲಿ - ದೋಸೆ ಸಂಶೋಧನ 285; ಬರಿಗೈ ರೋಗಿ-ಬರಿಮೈ ವೈದ್ಯ 290; 'ಕಣ್ಣು ಕಾಣದ ಗಾವಿಲರು' 295; 'ಏತಕೆ ಮಲಗಿಹೆ ಕಂದನೆ?' 301; ಆದದ್ದೆಲ್ಲಾ ಒಳಿತೇ? 307; ಗುದ್ದೇ ಮದ್ದು 312; ಪವಾಡಪುರುಷರು ಯಾರು? 316; ಆನೆಗೆ ಗಂಟೆ ಬೇಕೆ? 322; ಬರಡು ಸೃಷ್ಟಿ 326; ಅಳುವ ಮಗು 331; ಶೀಲವೇ ಮೂಲ 336; ಮಾಡು ಸಿಕ್ಕದಲ್ಲಾ 340; ಎಣ್ಣೆ ಹೊಯ್ಯಮ್ಮ ದೀಪಕ್ಕೆ 345; ವಿಜ್ಞಾನ ಮತ್ತು ನಂಬಿಕೆ 350; ಮರುಭೂಮಿಯಲ್ಲಿ ಕೊಳಲು 355; ಭಯಪ್ರದ ಉದ್ಘಾಟನೆ 359; ಎಲ್ಲರೂ ಕತ್ತೆಗಳಾಗೋಣ 364; ಹಲವು ಮಕ್ಕಳ ತಂದೆ 368.

ಅನುಬಂಧ — 2


ಬರೆಹಗಾರರ ಬಳಗ

ಪ್ರೊ. ದೇಜಗೌ	ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿಗಳು, ವಿಶ್ವಚೇತನ, ಕಲಾನಿಲಯ, ಕಾಳಿದಾಸ ರೋಡ್, ಜಯಲಕ್ಷ್ಮೀಪುರಂ, ಮೈಸೂರು – 570 012
ಶ್ರೀಪತಿ ತಂತ್ರಿ	ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲರು. ಮೂಲತಃ ಕುಂದಾಪುರ ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಸಮಾಜ ಶಾಸ್ತ್ರದ ರೀಡರ್, ಅಂಬಲಪಾಡಿ, ಉಡುಪಿ – 576 103
ಕೆ. ವಿ. ಸುಬ್ಬಣ್ಣ	ನೀನಾಸಂ, ಹೆಗ್ಗೋಡು, ಸಾಗರ ತಾಲೂಕು – 577 417
ಪಾ. ವೆಂ.	'ಕರ್ಮವೀರ', 'ಕಸ್ತೂರಿ' ಪತ್ರಿಕೆಗಳ ಮಾಜಿ ಸಂಪಾದಕರು, 82, ಕೆಎಚ್‌ಬಿ ಕಾಲೊನಿ, ವಿಶ್ವೇಶಪುರ, ಹುಬ್ಬಳ್ಳಿ – 580 032
ಕೆ. ಹರಿದಾಸ ಭಟ್ಟ	ರೀಡರ್, ಎಂ. ಜಿ. ಎಂ. ಕಾಲೇಜಿನ ಭೌತಶಾಸ್ತ್ರ ವಿಭಾಗ, ಉಡುಪಿ – 576 102
ಡಾ. ತಾಳ್ತಜೆ ವಸಂತಕುಮಾರ್	ಪ್ರಾಧ್ಯಾಪಕರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾನಿಲಯ, ವಿದ್ಯಾನಗರಿ, ಮುಂಬಯಿ – 400 098
ಪ್ರೊ. ಎಂ. ರಾಜಗೋಪಾಲಾಚಾರ್ಯ	ಪೂರ್ಣಪ್ರಜ್ಞ ಕಾಲೇಜಿನ ನಿವೃತ್ತ ಕನ್ನಡ ಪ್ರಾಧ್ಯಾಪಕರು, ಸಂಪಾದಕರು: 'ಸುಗುಣಮಾಲಾ' ಮಾಸಿಕ, ಪುತ್ತಿಗೆ ಮಠ, ಉಡುಪಿ – 576 101
ಡಾ. ಸೀ. ಹೊಸಬೆಟ್ಟು	ಪ್ರಾಂಶುಪಾಲರು, ಗೋವಿಂದದಾಸ ಕಾಲೇಜು, ಸುರತ್ಕಲ್ – 574 158
ಟಿ. ಕೆ. ಇಂದುಬಾಯಿ	ಹರಿದಾಸ ಸಾಹಿತ್ಯ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570 006
ಅಕ್ಕಮಹಾದೇವಿ	ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು – 570 006
ವೆಂಕಟರಾಜ ಪುಣಿಂಚಿತ್ತಾಯ	ತುಳು – ಸಂಸ್ಕೃತ ವಿದ್ವಾಂಸರು – ಸಂಶೋಧಕರು, ಅಧ್ಯಾಪಕರು, ಸ್ವಾಮೀಜಿಯವರ ಪ್ರೌಢಶಾಲೆ, ಎಡನೀರು, ಕಾಸರಗೋಡು – 670 541
ಅಮೃತ ಸೋಮೇಶ್ವರ	ತುಳು ಜಾನಪದ ಸಂಶೋಧಕರು, ಕನ್ನಡ ರೀಡರ್, ವಿವೇಕಾನಂದ ಕಾಲೇಜು, ಪುತ್ತೂರು – 574 203
ಜಿ. ರಾಜಶೇಖರ್	ಜೀವವಿಮಾ ನಿಗಮ, ಡಿವಿಜನಲ್ ಕಛೇರಿ, ಉಡುಪಿ – 576 101

ಕೃಷ್ಣವೇಣಿ	ಎಪಿಗ್ರಾಫಿಯಾ ಕರ್ನಾಟಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570 006
ಎಚ್. ಎಂ. ನಾಗರಾಜರಾವ್	ಎಪಿಗ್ರಾಫಿಯಾ ಕರ್ನಾಟಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570 006
ಬಿ. ಶ್ಯಾಮಸುಂದರ	ವಿಶ್ವಕೋಶ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570 006
ಡಾ. ಉಪ್ಪಂಗಳ ರಾಮ ಭಟ್ಟ	ಕನ್ನಡ ರೀಡರ್, ಎಂ. ಜಿ. ಎಂ. ಕಾಲೇಜು, ಉಡುಪಿ – 576 102
ಜಿ. ಎಸ್. ಭಟ್ಟ	ಉಪ ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – 570 006
ಎನ್. ಎಸ್. ಶಾರದಾಪ್ರಸಾದ್	ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು – 570 006
ಟಿ. ಎನ್. ನಾಗರತ್ನ (ಡಾ.)	ಸಂಪಾದನ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು – 570 006
ನಿ. ಶ್ರೀಶ ಬಲ್ಲಾಳ	ಅರ್ಥಶಾಸ್ತ್ರದ ಪ್ರಾಧ್ಯಾಪಕರು, ಎಂ. ಜಿ. ಎಂ. ಕಾಲೇಜು, ಉಡುಪಿ – 576 102
ಪಾದೇಕಲ್ಲು ವಿಷ್ಣು ಭಟ್ಟ	ಕನ್ನಡ ಉಪನ್ಯಾಸಕರು, ಪ್ರಥಮ ದರ್ಜೆ ಕಾಲೇಜು, ಹೆಬ್ರಿ 576-112
ಪ್ರೊ. ಎಸ್. ಕೆ. ಶ್ರೀಪತಿ ಆಚಾರ್ಯ	ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕುಂಜಿಬೆಟ್ಟು, ಉಡುಪಿ – 576 102
ಡಾ. ಯು. ಪಿ. ಉಪಾಧ್ಯಾಯ	ತುಳು ನಿಘಂಟು ಯೋಜನೆಯ ಪ್ರಧಾನ ಸಂಪಾದಕರು ಹಾಗೂ ಎಂ. ಜಿ. ಎಂ. ಕಾಲೇಜಿನ ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರು; ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ – 576 102
ಎನ್. ತಿರುಮಲೇಶ್ವರ ಭಟ್ಟ	ಇಂಗ್ಲಿಷ್ ರೀಡರ್, ಎಂ. ಜಿ. ಎಂ. ಕಾಲೇಜು, ಉಡುಪಿ – 576 102
ಎ. ವಿ. ನಾವಡ	ಕನ್ನಡ ರೀಡರ್, ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ – 576 201
ಎಚ್. ಕೆ. ಭಟ್	ಸಂಸ್ಕೃತ ರೀಡರ್, ಎಂ. ಜಿ. ಎಂ. ಕಾಲೇಜು, ಉಡುಪಿ – 576 102
ವಕ್ವಾಡಿ ಶ್ರೀನಿವಾಸ ಭಟ್	ನಿವೃತ್ತ ಕನ್ನಡ ಪ್ರಾಧ್ಯಾಪಕರು, ಕೆ. ಆರ್. ಕೆ. ಭಟ್ ಕಂಪೌಂಡ್, ಉಡುಪಿ – 576 102
ಸೀತಾರಾಂ ಜಾಗೀರದಾರ (ಡಾ.)	ಪ್ರಾಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ, ಮೈಸೂರು – 570 006

ಆರ್. ರಾಮಕೃಷ್ಣ (ಡಾ.)	14, 2ನೇ ಹಂತ, ಮಾದರಿ ಮನೆ, ವಿಶ್ವೇಶ್ವರ ನಗರ, ಮೈಸೂರು – 570 008
ಬನ್ನಂಜೆ ಗೋವಿಂದಾಚಾರ್ಯ	ಈಶಾವಾಸ್ಯಂ, ಅಂಬಲಪಾಡಿ, ಉಡುಪಿ – 576 103
ಎಂ. ಎಸ್. ಸುಮಿತ್ರ	1096, ದೇವಪಾರ್ಥಿವ ರಸ್ತೆ, ಚಾಮರಾಜಪುರ, ಮೈಸೂರು – 570 004
ಚಂದ್ರಮತಿ ಸೋಂದಾ	ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು – 570 006
ಡಾ. ರಾಮಕೃಷ್ಣ ಜೋಶಿ	ಕನ್ನಡ ಅಧ್ಯಾಪಕ, ಸಂತ ಫಿಲೋಮಿನಾ ಪ್ರೌಢ ಶಾಲೆ, ಎನ್. ಆರ್. ಮೊಹಲ್ಲಾ, ಮೈಸೂರು – 570 007
ಡಾ. ತೀ. ನಂ. ಶಂಕರ ನಾರಾಯಣ	ಕನ್ನಡ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾನಿಲಯ, ಬಿ. ಆರ್. ಪ್ರಾಜೆಕ್ಟ್, ಶಿವಮೊಗ್ಗ 577 – 115
ಡಾ. ನಿ. ಮುರಾರಿ ಬಲ್ಲಾಳ	ಮಾನಸ, ಅಂಬಲಪಾಡಿ, ಉಡುಪಿ 576 103
ಪ್ರೊ. ಕೆ. ರಾಮದಾಸ	ನಿವೃತ್ತ ಪ್ರಾಂಶುಪಾಲರು, ಎಂ.ಜಿ.ಎಂ. ಕಾಲೇಜು ಉಡುಪಿ,– 571 102
ಪ್ರೊ. ಥೆರೆಸಾ ಜೋಸೆಫ್	ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು, ಚಂಪಕಾ, ಕುಂಜಿಬೆಟ್ಟು, ಉಡುಪಿ – 577 102
ಪ್ರೊ. ಬಿ. ಆರ್. ನಾಗೇಶ್	"ರುಕ್ಮಾ" ಅಜ್ಜರಕಾಡು, ಉಡುಪಿ – 576 101


Resources Centre
Folk Performing Arts
ದಾಸಪ್ರಭೆ
ಕು.ಶಿ.ಹರಿದಾಸಭಟ್ಟ
OWLEDGE IS POWER
ಕಾರಂತ ಅರುವತ್ತು
ರಾಷ್ಟ್ರಕವಿ
ಗೋವಿಂದ ಪೈ
ಡಾ. ಟಿ. ಎಂ. ಎ. ಪೈ





ಕು. ಶಿ. ಹರಿದಾಸ ಭಟ್ಟ: 1924ರಲ್ಲಿ ಉಡುಪಿಯಲ್ಲಿ ಜನಿಸಿದ ಕು. ಶಿ. ಹರಿದಾಸ ಭಟ್ಟರು 1949ರಲ್ಲಿ ಮದರಾಸು ಕ್ರಿಶ್ಚನ್ ಕಾಲೇಜಿನಲ್ಲಿ ಎಂ.ಎ. ಪದವಿ ಗಳಿಸಿ ಆಗ ತಾನೇ ಉಡುಪಿಯಲ್ಲಿ ಸ್ಥಾಪಿತವಾದ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕರಾದರು. 30 ವರ್ಷಗಳ ಸುದೀರ್ಘ ಸೇವಾವಧಿಯಲ್ಲಿ ಆ ಕಾಲೇಜನ್ನು ಕರ್ನಾಟಕದ ಶಿಕ್ಷಣ, ಸಂಸ್ಕೃತಿ, ಸಾಹಿತ್ಯಗಳ ಒಂದು ಶ್ರೇಷ್ಠ ಕೇಂದ್ರವಾಗುವಂತೆ ಪರಿಶ್ರಮಿಸಿ 1979ರಲ್ಲಿ ಪ್ರಿನ್ಸಿಪಾಲಗಿರಿಯಿಂದ ನಿವೃತ್ತರಾದ ಬಳಿಕ ಅಲ್ಲಿಯೇ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ತುಳು ನಿಘಂಟು ಯೋಜನೆ, ಯಕ್ಷಗಾನ ಕೇಂದ್ರ ಹಾಗೂ ಜಾನಪದ ರಂಗಕಲೆಗಳ ಪ್ರಾದೇಶಿಕ ಅಧ್ಯಯನ ಕೇಂದ್ರಗಳನ್ನು ಕಟ್ಟಿ ಬೆಳೆಸುವ ಕೆಲಸದಲ್ಲಿ ಮಗ್ನರಾಗಿದ್ದಾರೆ. 1982ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1985ರಲ್ಲಿ ಶಿಕ್ಷಣ ಕ್ಷೇತ್ರದ ಸೇವೆಗಾಗಿ ರಾಜ್ಯ ಸರಕಾರ ಪ್ರಶಸ್ತಿ, 1986ರಲ್ಲಿ ಫಿನ್ಲೆಂಡ್ ಸರಕಾರದ ಜಾನಪದ ಕಾರ್ಯ ಪ್ರಶಸ್ತಿ, 1989ರಲ್ಲಿ ಶ್ರೇಷ್ಠ ಜೀವನ ಚರಿತ್ರೆ ಬರವಣಿಗೆಗಾಗಿ "ವಿಶ್ವಮಾನವ" ಪ್ರಶಸ್ತಿಗಳನ್ನು ಗಳಿಸಿರುವ ಪ್ರೊ. ಭಟ್ಟರು ಕನ್ನಡದಲ್ಲಿ 30ಕ್ಕೂ ಹೆಚ್ಚು ಗದ್ಯಗ್ರಂಥಗಳನ್ನೂ ಅನುವಾದಗಳನ್ನೂ ರಚಿಸಿದ್ದಾರೆ. 'ಉದಯವಾಣಿ' ಪತ್ರಿಕೆಯಲ್ಲಿ 'ಲೋಕಾಭಿರಾಮ'ವೆಂಬ ಜನಪ್ರಿಯ ಅಂಕಣ ಬರೆಯುತ್ತಿರುವ ಕು. ಶಿ., ಪ್ರವಾಸ ಸಾಹಿತ್ಯ ರಚನೆಯಲ್ಲಿಯೂ ಎತ್ತಿದ ಕೈಯೆನಿಸಿದ್ದಾರೆ. ಇಂಗ್ಲೆಂಡ್, ಅಮೆರಿಕ, ರಶಿಯಾ, ಇತಲಿ, ಯುಗೊಸ್ಲಾವಿಯಾ, ಬಲ್ಗೇರಿಯಾ, ಹಂಗೇರಿ, ಜಪಾನ್, ಫಿನ್ಲೆಂಡ್, ಸ್ವಿಝರ್ಲೆಂಡ್, ಹಾಂಕಾಂಗ್‌ಗಳ ಸಂಚಾರದ ಸ್ವಾರಸ್ಯವನ್ನು ತಮ್ಮ ನಾಲ್ಕು ಪ್ರವಾಸ ಕೃತಿಗಳ ಮೂಲಕ ಕನ್ನಡಿಗರಿಗೆ ಉಣಬಡಿಸಿದ್ದಾರೆ. ಇತಾಲಿಯ ನೇಪಲ್ಸ್‌ನಲ್ಲಿ ಆರ್ಥಿಕ ಅಭಿವೃದ್ಧಿ ಶಾಸ್ತ್ರವನ್ನು ಅಧ್ಯಯನ (1962-63) ಮಾಡಿರುವ ಭಟ್ಟರು ಕೆಲಕಾಲ ರೋಮ್ ವಿಶ್ವವಿದ್ಯಾನಿಲಯದಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿದ್ದರಲ್ಲದೆ (1984) ಜಾಗತಿಕ ಆಹಾರ ಸಮ್ಮೇಳನದಲ್ಲಿ (1963) ಪ್ರತಿನಿಧಿಯಾಗಿಯೂ ಭಾಗವಹಿಸಿದ್ದಾರೆ. ಅರ್ಥಶಾಸ್ತ್ರ, ಘಂಟಮಾರಾ, ಅವ್ಯಕ್ತ ಮಾನವ, ನಡುಹಗಲಿನ ಕಗ್ಗತ್ತಲೆ, ಲೋಕಾಭಿರಾಮ (ಮೂರು ಸಂಪುಟಗಳು) ಇತಾಲಿಯ ನಾನು ಕಂಡಂತೆ, ಜಗದಗಲ, ಒಮ್ಮೆ ರಶಿಯಾ ಇನ್ನೊಮ್ಮೆ ಇತಾಲಿಯ, ರಂಗಾಯನ, ಕಟ್ಟಿಂಗೇರಿ ಕೃಷ್ಣ ಹಬ್ಬರ — ಕಲೆ ಮತ್ತು ಬದುಕು ಭಟ್ಟರ ಮುಖ್ಯ ಸಾಹಿತ್ಯ ಕೃತಿಗಳು.